ಸಂಗೀತ ಸರಸಿ

ಪ್ರಕಾಶ ಬುರ್ಡೆ ಅವರ ಸಂಗೀತಯಾನ

ಸಂಪಾದಕರು
ಡಾ. ಜ್ಯೋತ್ಸ್ನಾ ಕಾಮತ್
ಡಾ. ಸುಷಮಾ ಆರೂರ್

ಪ್ರಕಾಶ ಜಿ. ಬುರ್ಡೆ (1938–2016)

ತಂದೆ ಗಣೇಶ ವಿಶ್ವೇಶ್ವರ ಬುರ್ಡೆ ಮತ್ತು ಶಾರದಾಬಾಯಿ ಅವರ ಮೂರನೇ ಸಂತಾನ. ಎರಡು ಹೆಣ್ಣುಮಕ್ಕಳ ನಂತರ (ಉಷಾ ಮತ್ತು ಜ್ಯೋತ್ಸ್ನಾ) 24 ನವೆಂಬರ್ 1938ರಲ್ಲಿ ಗದಗಿನಲ್ಲಿ (ಧಾರವಾಡ ಜಿಲ್ಲೆ) ಜನನ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕುಮಟಾ, ಗೋಕರ್ಣ, ಕಾರವಾರ ಮತ್ತು ಹುಬ್ಬಳ್ಳಿಯಲ್ಲಿ.

ಕಾಲೇಜು ಶಿಕ್ಷಣ ಕುಮಟಾದ ಕೆನರಾ ಕಾಲೇಜು ಹಾಗೂ ಧಾರವಾಡಗಳಲ್ಲಿ

ಹವ್ಯಾಸಗಳು: ವಿದ್ಯಾರ್ಥಿ ದಿಸೆಯಲ್ಲಿ ಎನ್.ಸಿ.ಸಿ., ಶಟಲ್ ಕಾಕ್, ಈಜು, ನಾಟಕಗಳಲ್ಲಿ ಅಭಿನಯ. ಸಂಗೀತ ಕಚೇರಿಗಳನ್ನು ಆಲಿಸುವುದು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಿಕೆ. ಕಂಪನಿ ನಾಟಕಗಳನ್ನು ನೋಡುವುದು, ಸಾಹಿತ್ಯಾಭಿರುಚಿ, ಕನ್ನಡ, ಇಂಗ್ಲಿಷ್, ಮರಾಠಿ ಓದು, ಮೂಲ ಶರಶ್ಚಂದ್ರರ ಬಂಗಾಲಿಯಿಂದ ಕನ್ನಡಕ್ಕೆ 'ವಾತ್ಸಲ್ಯ' ಕಾದಂಬರಿ ಅನುವಾದ, ಮಾನವನ ಅವತಾರ, ಮಕ್ಕಳಿಗಾಗಿ ವಿಜ್ಞಾನ ಪುಸ್ತಕ.

ವೃತ್ತಿ: ಪಿಂಪ್ರಿಯ ಹಿಂದುಸ್ಥಾನ್ ಆಂಟಿಬಯೊಟಿಕ್ಸ್‌ನಲ್ಲಿ ವೃತ್ತಿಯ ಪ್ರಾರಂಭ. ಬಳಿಕ ಗ್ಲಾಕ್ಸೋ ಔಷಧ ಕಂಪನಿಯಲ್ಲಿ ಸೇರಿ, ಪ್ರತಿನಿಧಿಯಾಗಿ ಕ್ರಮೇಣ ಪದೋನ್ನತಿ ನ್ಯಾಶನಲ್ ಸೇಲ್ಸ ಮ್ಯಾನೇಜರ್ ಎಂದು ಭೋಪಾಲ್, ನಾಗಪೂರ್, ಮುಂಬಯಿ, ಪುಣೆ ಮುಂತಾದ ಶಹರಗಳಿಗೆ ವರ್ಗಾವಣೆ, ಅವಧಿಪೂರ್ವ ನಿವೃತ್ತಿ 1992.

ಸಂಸಾರ: ಅಂಜನಿ ಬಳವಳ್ಳಿಂಯುವರೊಂದಿಗೆ 27 ಮೇ 1964 ಮುಂಬಯಿಯಲ್ಲಿ ವಿವಾಹ. ಮಗ ಶುಭಾಂಗ, ಮಗಳು ಅಪರ್ಣಾ. ಸೊಸೆ ಪ್ರೀತಿ ಮತ್ತು ಮೊಮ್ಮಕ್ಕಳು ಅಮೇಯ, ಗೌರಿ, ಮಕ್ಕಳು ಮೊಮ್ಮಕ್ಕಳಿಗೆ ಸಂಗೀತದಲ್ಲಿ ಅಭಿರುಚಿ.

ಸಾಧನೆಗಳು: ಸಂಗೀತ ವಿಮರ್ಶಕರೆಂದು (1984ರಿಂದ) ಟೈಮ್ಸ್ ಆಫ್ ಇಂಡಿಯಾ ಮತ್ತು ಇಕೊನೊಮಿಕ್ ಟೈಮ್ಸ್‌ನಲ್ಲಿ ಸೇವೆ. ಕರ್ನಾಟಕ ಸಂಘದ ಸಾಂಸ್ಕೃತಿಕ ವೇದಿಕೆ, 'ಕಲಾಭಾರತಿಯ ಸ್ಥಾಪನೆಗಳಲ್ಲಿ ಪ್ರಮುಖ ಪಾತ್ರ. ಸಂಗೀತ–ನಾಟಕ–ನೃತ್ಯ ಕಾರ್‍ಯಕ್ರಮಗಳ ಸಂಘಟಕರು. (ಸುಮಾರು 1056 ಕಾರ್‍ಯಕ್ರಮಗಳ ಆಯೋಜನೆ) ಆಕಾಶವಾಣಿ ಮತ್ತು ದೂರದರ್ಶನ್ ಮುಂಬಯಿ, ಶಾಸ್ತ್ರೀಯ ಮತ್ತು ಲಘು ಸಂಗಿತದ ಹಾಡುಗಾರರ ಅಡಿಶನ್ ಮತ್ತು ಗ್ರೇಡೇಶನ್ ಕಮಿಟಿಯ ಪ್ರಮುಖ ಸದಸ್ಯರು. ಕೆನರಾ ಸಾರಸ್ವತ ಅಸೋಸಿಯೇಶನ್ನಿನ ಸಂಗೀತ ಸಮ್ಮೇಳನಗಳ ಸಂಯೋಜಕರು. ದೃಕ್–ಶ್ರಾವ್ಯ ಕಾರ್‍ಯಕ್ರಮಗಳ ಸಂಘಟಕರಾಗಿ ಎರಡು ದಶಕಗಳ ಸೇವೆ.

ಭಖಿಲ, ಆದಿತ್ಯ ಬಿರ್ಲಾ ಪ್ರತಿಷ್ಠಾನದ ಅಖಿಲ ಭಾರತ ಪ್ರಶಸ್ತಿಗಳ ನಿರ್ಣಾಯಕ ಸಮಿತಿಯ ಸದಸ್ಯರಾಗಿ ಎರಡು ದಶಕಗಳ ಸೇವೆ.

ಪ್ರಶಸ್ತಿಗಳು

ಮ್ಯೂಸಿಕ್ ಫೋರಮ್ ಅವಾರ್ಡ್ –ಮುಂಬಯಿ

ಸಂಗೀತ ಕ್ಷೇತ್ರಕ್ಕೆ ಅನುಪಮ ಸೇವೆ ಸಲ್ಲಿಸಿದ್ದಕ್ಕೆ ಗೌರವ ಪುರಸ್ಕಾರ – ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ ಮತ್ತು ಕರ್ನಾಟಕ ಸಂಘದಿಂದ –2008 ಜನವರಿ 6.

ಮುಂಬಯಿ ಕನ್ನಡಿಗರ ಮಹತ್ವದ ಸಾಧನಾ ಪುರಸ್ಕಾರ –ಕನ್ನಡ ವಿಭಾಗ, ಮುಂಬಯಿ ವಿ.ವಿ. ಮುಂಬಯಿ –2002 ಏಪ್ರಿಲ್ 7.

ಸಾಧನಾ ಶಿಖರ ಗೌರವ ಪ್ರಶಸ್ತಿ –2003 –ಸಂಗೀತ ಕ್ಷೇತ್ರದಲ್ಲಿನ ಅನುಪಮ ಸಾಧನೆಗಾಗಿ.

10ನೇ ಅಖಿಲ ಭಾರತ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮ್ಮೇಳನ –ಡೆಲ್ಲಿ ಕನ್ನಡಿಗ ಮಾಸಪತ್ರಿಕೆ ಹೊಸ ಡೆಲ್ಲಿ 2006 ಡಿಸೆಂಬರ್ 23 ಸಂಗೀತ ವಿಮರ್ಶೆ ಕ್ಷೇತ್ರದಲ್ಲಿನ ಸಾಧನೆಗಾಗಿ.

ಕರ್ನಾಟಕ ಸರಕಾರ, ಕರ್ನಾಟಕ ನಾಟಕ ಅಕಾಡೆಮಿ, (ಕನ್ನಡ ಮತ್ತು ಸಂಸ್ಕೃತಿ ಇಲಾಖೆ) ಬೆಂಗಳೂರು ಏಪ್ರಿಲ್ 2015 ಪುರಸ್ಕಾರ.

ಆದಿತ್ಯ ವಿಕ್ರಮ ಪುರಸ್ಕಾರ

ಸ್ವರಾಂಕಿತ ಪ್ರಶಸ್ತಿ 2016 ಜನವರಿ 30

ಪ್ರಗತಿ ಪುಸ್ತಕ ಮಾಲೆ–167

ಸಂಗೀತ ಸರಸಿ

(ಪ್ರಕಾಶ್ ಬುರ್ಡೆ: ವ್ಯಕ್ತಿ ಮತ್ತವರ ಬರೆಹಗಳು)

ಸಂಪಾದಕರು

ಡಾ. ಜ್ಯೋತ್ಸ್ನಾ ಕೃಷ್ಣಾನಂದ ಕಾಮತ್

ಡಾ. ಸುಷಮಾ ಅಶೋಕ್ ಆರೂರ್

ಪ್ರಗತಿ ಗ್ರಾಫಿಕ್ಸ್–ಬೆಂಗಳೂರು

SANGEETA SARASI :Compiled and Edited by Dr. Jyotsna Krishnanda Kamat, Sushama Ashok Aaroor. # Shashikiran Apartment, 18th Cross, Malleswara, Bangalore-03

Publisher: **M. Byregowda** for **Pragati Graphics**, Bangalore # 119, 3rd cross, 8th main, Hampinagara (RPC Layout), Bengaluru-104.

Ph: 080-2340 9512. email: byregowda.m1@gmail.com

ISBN :	978-93-81441-81-4
First Impression:	2016
Pages:	xxiv+548
Price:	Rs. 400/-
paper :	NS Maplitho 80 GSM
size :	1/8 Demy
©	ಸಂಪಾದಕರು
ಮೊದಲ ಆವೃತ್ತಿ:	2016
ಕಾಗದ:	ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ
ಬೆಲೆ:	**ರೂ. 400/-**
ಪುಟಗಳು:	xxiv+548
ಸೈಜ್:	**1/8 ಡೆಮಿ**
ಪ್ರತಿಗಳು:	**1000**
ರಕ್ಷಾಪುಟ ವಿನ್ಯಾಸ:	**ಅಜಿತ್ ಕೌಂಡಿನ್ಯ ಶಿಡ್ಲಘಟ್ಟ**
ಪ್ರಕಾಶಕರು:	ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್-ಬೆಂಗಳೂರು ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ, ಬೆಂಗಳೂರು-104 ದೂರವಾಣಿ: 080-23409512
ಮುದ್ರಣ:	ಪ್ರಗತಿ ಗ್ರಾಫಿಕ್ಸ್ ಹಂಪಿನಗರ, ಬೆಂಗಳೂರು

ಅರ್ಪಣೆ

ಸಂಗೀತ ಸರಸಿಯ

ಸಾಹಿತ್ಯ-ಸಂಗೀತಗಳ ರಸಗ್ರಹಣ ಶಕ್ತಿಗೆ ಕಾರಣರಾದ

ನಮ್ಮ ತಂದೆ

ಗಣೇಶರಾಯರು ಹಾಗೂ ತಾಯಿ **ಶಾರದಾಬಾಯಿ**

ಇವರ ಪುಣ್ಯಸ್ಮೃತಿಗೆ

ಜ್ಯೋತ್ಸ್ನಾ-ಸುಷಮಾ

ಪ್ರಸ್ತಾವನೆ

2016ನೇ ವರ್ಷ ಪ್ರಾರಂಭವಾಗಿತ್ತು. ಎಂದಿನಂತೆ ಹೊಸವರ್ಷದ ಶುಭಾರಂಭದಲ್ಲಿ ಒಳಿತನ್ನು ಹಾರೈಸುತ್ತಾ ನನ್ನ ಒಡಹುಟ್ಟಿದ ಕಿರಿಯ ಸೋದರ ಪ್ರಕಾಶ ಫೋನಿಸಿ ಯೋಗಕ್ಷೇಮವನ್ನು ವಿಚಾರಿಸಿಕೊಂಡಿದ್ದ. ಅವನ ಆರೋಗ್ಯ ಚೆನ್ನಾಗಿರಲಿಲ್ಲ. ಚಿಕ್ಕಂದಿನಿಂದಲೇ ರೂಢಿಸಿಕೊಂಡಿದ್ದ ಸಿಗರೇಟ್ ಸೇವನೆ ಬಲಿತು, ಶ್ವಾಸರೋಗ (cardiac asthma) ಕಾಣಿಸಿಕೊಂಡಾಗ ಅದನ್ನು ತ್ಯಜಿಸಿದ್ದ. ಇತ್ತೀಚೆಗೆ prostate ಕಾಯಿಲೆಯೆಂದು ನರಳಿ ಔಷಧೋಪಚಾರದಿಂದ ಸ್ವಲ್ಪ ಗುಣವನ್ನು ಕಂಡಿದ್ದ, ಅಥವಾ, ನಾವೆಲ್ಲರೂ ಹಾಗೆಂದು ಭಾವಿಸಿದ್ದೆವು. 4.1.2006ರಂದು ಆತನ ಆರೋಗ್ಯ ವಿಚಾರಿಸಲು ಫೋನಿಸಿದಾಗ ಅತ್ತಿಗೆ ಅಂಜನಿ ಫೋನ್ ಎತ್ತಿಕೊಂಡು "ಆತನ ಉಬ್ಬಸದ ತೊಂದರೆಗಾಗಿ ಮನೆಯ ಪಕ್ಕದ ಭಾಟಿಯಾ ಆಸ್ಪತ್ರೆಗೆ ಮಗಳು, ಅಪರ್ಣಾ ಅವನನ್ನು ಕರೆದುಕೊಂಡು ಹೋಗಿದ್ದಾಳೆ, ಬರುತ್ತಾರೆ, ಬಂದೊಡನೆ ನೀನು ಫೋನಿಸಿದ ವಿಚಾರ ಹೇಳುತ್ತೇನೆ. ಅವರೇ ನಿನಗೆ ಫೋನು ಮಾಡುತ್ತಾರೆ" ಎಂದು ಹೇಳಿದಳು. ಮಧ್ಯಾಹ್ನವಾಗಿತ್ತು. ಆತನ ಫೋನಿಗಾಗಿ ಕಾದೆ.

ಸಂಜೆ ದಾಟಿತು. ತಂಗಿ ಸುಷಮಾ ತನ್ನಿಬ್ಬರು ಮಕ್ಕಳೊಂದಿಗೆ ಶಶಿಕಿರಣದ ನನ್ನ ಮನೆಗೆ ಬಂದಳು. ಬಾಗಿಲು ತೆಗೆದೊಡನೆ ತಬ್ಬಿಕೊಂಡು "ದಾದಾ (ಪ್ರಕಾಶ) ಹೋಗಿಬಿಟ್ಟ!" ಎಂದು ಬಿಕ್ಕಿದಳು. ಆತನ ಉಬ್ಬಸ ಕಾಯಿಲೆಗೆ ಆಗಾಗ ಆಕ್ಸಿಜನ್ ಸಿಲಿಂಡರ್ ಬಳಸುತ್ತಿದ್ದ ವಿಚಾರ ಗೊತ್ತಿದ್ದರೂ, ಮುನ್ನಾ ದಿನ, ಅಮೇರಿಕೆಯಿಂದ ಬಂದಿದ್ದ ಮಾವಶಿಮಗನೊಂದಿಗೆ ಚೆನ್ನಾಗಿ ಊಟಮಾಡಿ, ಎಂದಿನಂತೆ ತಮಾಷೆಯಿಂದ ಮಾತನಾಡಿದ ವಿಚಾರ ಆತನೇ ಹೇಳಿದ್ದು, ಅಂದೇ ಎಲ್ಲರಿಗೆ ಫೋನುಮಾಡಿದ್ದು, ಮಧ್ಯಾಹ್ನದ ಅತ್ತಿಗೆಯ ಮಾತು, ಎಲ್ಲವೂ ಸುಳ್ಳೆನಿಸಿದ್ದು, ಕೆಲ ದಿನಗಳಿಂದ ಆತನನ್ನು ಕಾಡುತ್ತಿದ್ದ ಕಿಬ್ಬೊಟ್ಟೆಯ ತೀವ್ರ ನೋವಿನ ಕುರಿತು ನಮಗಾರಿಗೂ ಅರಿವು ಇಲ್ಲದ್ದರಿಂದ. ಆಸ್ಪತ್ರೆಯಿಂದ ಹಿಂದಿರುಗಿದ ಬಳಿಕ ಸುಧಾರಿಸಿಕೊಂಡ ಆತ, ಒಮ್ಮಿಂದೊಮ್ಮೆ ಬಳಿಯಲ್ಲೇ ಕುಳಿತ ಮಗಳ ಭುಜದ ಮೇಲೆ ವಾಲಿದ್ದು, ಆತನ ಡಾಕ್ಟರ್ ನಾದಿನಿ ಮತ್ತು ಪತ್ನಿ ನೋಡುನೋಡುತ್ತಿದ್ದಂತೆ ಅಸುನೀಗಿದ್ದು, ಪ್ರತ್ಯಕ್ಷ ಕಂಡವರಿಗೂ ನಂಬದಂತಾಗಿ ಆತನ ಸಹನೆಯ ಪರಕಾಷ್ಠೆ ಆಗಿತ್ತು.

ಬಿಕ್ಕುತ್ತಲೇ ಸುಷಮಾ, ಮಧ್ಯರಾತ್ರಿಯ ವಿಮಾನದಿಂದ ಮುಂಬೈಗೆ ಹೊರಟಿರುವುದಾಗಿ ಹೇಳಿದಳು. ಕಣ್ಣ ಪೊರೆಯ ಶಸ್ತ್ರಕ್ರಿಯೆಯ ಚೇತರಿಕೆಯಲ್ಲಿದ್ದ

ನಾನು ಹೋಗುವಂತಿರಲಿಲ್ಲ. ಹಾಗೆಯೇ ಕುಸಿದ ನನಗೆ, ಆತ ಹುಟ್ಟಿದಾಗಿನಿಂದ ವರ್ಷಗಟ್ಟಲೆ ಕಳೆದ ಜಗಳಾಟದ, ನೋವು, ನಲಿವುಗಳ ಸಂದರ್ಭಗಳೆಲ್ಲಾ ನೆನಪಾಗತೊಡಗಿದವು.

*****

ಪ್ರಕಾಶ ಹುಟ್ಟಿದ (24.11.1938) ಆ ದಿನಗಳು ಮಸುಕಾಗಿ ನೆನಪಿವೆ. ಮನೆತುಂಬ ಜನ. ಇಬ್ಬರು ಅಜ್ಜಂದಿರು, ಇಬ್ಬರು ಅಜ್ಜಿಯರು, ಸೋದರಮಾವ, ಇಬ್ಬರು ಚಿಕ್ಕಪ್ಪಂದಿರು, ಮಕ್ಕಳು, ಇತ್ಯಾದಿ ಗದಗ ಊರಿನ ಆ ಬಾಡಿಗೆ ಮನೆಯಲ್ಲಿ ಸಂಭ್ರಮಕ್ಕೆ ಕಾರಣವಾಗಿತ್ತು. ನಾವಿಬ್ಬರು ಹೆಣ್ಣುಮಕ್ಕಳ ನಂತರ ಹುಟ್ಟಿದ ಗಂಡುಮಗುವಿನ ಜನನ. ಬರಾಬರಿ 9 ಪೌಂಡು ತೂಕದ ಮಗುವನ್ನು ಕೃಶಕಾಯದ ಪುಟ್ಟ ದೇಹದ ನಮ್ಮ ಆಯಿ (ತಾಯಿ), ಎಷ್ಟು ಕಷ್ಟಪಟ್ಟು ಹೆತ್ತಳೆಂದು ಮನೆಯಲ್ಲಿ ಹಿರಿಯರು ಕೌತುಕಪಡುತ್ತಿದ್ದರು. ನಂತರ ನಾಮಕರಣದ ಸಂಭ್ರಮ. ಅಪರೂಪದ ಹೆಸರುಗಳನ್ನು ಆರಿಸುವುದರಲ್ಲಿ ನಿಸ್ಸೀಮರಾಗಿದ್ದ ತಂದೆ-ತಾಯಿ ಪ್ರಕೃತಿ ಪೂಜಕರು. ನಮ್ಮಕ್ಕ ಉಷಾ ಆದರೆ, ನಾನು ಜ್ಯೋತ್ಸ್ನಾ, ಈ ಗಂಡುಮಗುವನ್ನು ಪ್ರಕಾಶನೆಂದು ಕರೆದರು. ಈಗ ತೀರ ಸಾಮಾನ್ಯವಾದ ಆ ಹೆಸರುಗಳೆಲ್ಲ ಅಷ್ಟು ಹಿಂದೆ ಅಪರೂಪದ್ದೆನಿಸಿದ್ದವು.

ಮುದ್ದಿನಿಂದ ನಮ್ಮನ್ನು ಬೆಳೆಸಿದ ತಂದೆತಾಯಿಗಳು, ಲೌಕಿಕರಲ್ಲಿ ಅಪರೂಪದವರಾಗಿದ್ದರು ಎಂದು ಅರಿವಾದದ್ದು ಎಷ್ಟೋ ವರ್ಷಗಳ ಬಳಿಕ, ತಾಯಿಯನ್ನು 1943ರಲ್ಲಿ ಟೈಫಾಯ್ಡ್ ಜ್ವರದಲ್ಲಿ ಕಳೆದುಕೊಂಡ ಬಳಿಕವೇ! ಆಗ ಪ್ರಕಾಶ ನಾಲ್ಕು ವರ್ಷದವ. ನಾನು, ಉಷಾ ಏಳು ಮತ್ತು ಹತ್ತು ವರ್ಷದವರು. ಕೇವಲ ಐದನೇ ಕ್ಲಾಸು ಮರಾಠಿಯಲ್ಲಿ ಓದಿದ್ದ ಆಯಿ ಶಾರದಾಬಾಯಿ, ಮರಾಠಿ, ಕನ್ನಡ, ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದರು. ಮರಾಠಿ, ಇಂಗ್ಲಿಷ್ ಮ್ಯಾಗಝೀನ್‌ಗಳು ಮನೆಗೆ ಬರುತ್ತಿದ್ದವು. ಎಂಬ್ರಾಯ್ಡರಿ, ಟೈಲರಿಂಗ್, ಹೆಣಿಗೆ, ಅಡಿಗೆ, ಬ್ಯಾಡ್ಮಿಂಟನ್, ಈಜುಗಳಲ್ಲಿ ಪಳಗಿದ್ದರು. ಜೊತೆಗೆ ಸಂಗೀತದಲ್ಲಿ ವಿಶೇಷ ಪ್ರೀತಿಯಿತ್ತು. ಹಾರ್ಮೋನಿಯಮ್ ನುಡಿಸುತ್ತಿದ್ದರು. ಮರಾಠಿ ಅಭಂಗಗಳು, ಕನ್ನಡ ಹಾಡು, ಚಲಚ್ಚಿತ್ರ ಗೀತೆಗಳನ್ನೆಲ್ಲಾ ಹಾಡುತ್ತಾ ನಮಗೂ ಸಾಭಿನಯ ಹಾಡಲು ಕಲಿಸಿದ್ದರು. ಪ್ರಕಾಶನು ಹೊಟ್ಟೆಯಲ್ಲಿದ್ದಾಗಲೇ ಗದಗಿನ ಸರಕಾರಿ ಆಸ್ಪತ್ರೆಯ ಡಾಕ್ಟರ್ ಮುಲ್ಕಿಯವರ ಇಬ್ಬರು ಅವಿವಾಹಿತ ಹೆಣ್ಣುಮಕ್ಕಳೊಂದಿಗೆ ಗದುಗಿನ ಪಂಚಾಕ್ಷರಿ ಗವಾಯಿಗಳ ಆಶ್ರಮಕ್ಕೆ ಹೋಗಿಬಂದು ಕೆಲಕಾಲ ಸಂಗೀತ ಕಲಿತಿದ್ದರಂತೆ! ಅದು ಅಲ್ಪ ಕಾಲದ್ದೇ ಇದ್ದರೂ, ಅದರ ಹಿಂದೆ ಇದ್ದ ತಂದೆಯವರ ಪ್ರೋತ್ಸಾಹ, ಆಯಿಯವರ ಉತ್ಸಾಹ ಮತ್ತು ಅಂದಿನಸಾಮಾಜಿಕ ವಾತಾವರಣ, ನೆನಪಿಸಿಕೊಂಡಾಗ ಅಚ್ಚರಿಪಡುವಂತಾಗುತ್ತದೆ.

ಪ್ರಕಾಶನ ಸಂಗೀತ ಪ್ರೀತಿಯ ಬಗ್ಗೆ ನಮ್ಮ ಬಾಬಾ (ತಂದೆ) ನಂತರದ ವರ್ಷಗಳಲ್ಲಿ ಹೇಳಿದ್ದು ನೆನಪಾಗುತ್ತದೆ. ತಾಯಿಯವರು ತೊಟ್ಟಿಲು ತೂಗುತ್ತಾ ಇಷ್ಟದ ಹಾಡುಗಳನ್ನು ಹಾಡಿದಾಗಲೇ ಶಿಶುವಾಗಿದ್ದ ಆತನು ಮಲಗುತ್ತಿದ್ದನಂತೆ. ಆಗಾಗ ಕೈಕಾಲು ಬೆರಳು ಕುಣಿಸಿ ಸಾಥ್ ಬೇರೆ! ಆಯಿ, ಬೇಕೆಂದೇ ಕೆಲಬಾರಿ ಬೇಸುರ್ ಹಾಡಿದಾಗ ಮುಖ

ಕಿವುಚಿ ಕೈಕಾಲು ಬಡಿದು ಪ್ರತಿಭಟಿಸುತ್ತಿದ್ದುದು, ತಂದೆ ತಾಯಿಗಳಿಗೆ ಮೋಜಿನ ವಿಷಯವಾಗಿತ್ತಂತೆ!

ಅಂಚೆ-ತಂತಿ ಇಲಾಖೆಯ ಸೇವೆಯಲ್ಲಿದ್ದ ನಮ್ಮ ತಂದೆಯವರಿಗೆ ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳ ಚಿಕ್ಕ ಊರುಗಳಿಗೆ ಮೂರು ವರ್ಷಗಳಿಗೊಮ್ಮೆ ವರ್ಗವಾಗುತ್ತಿತ್ತು. ಗದಗ, ಹಿರೇಕೆರೂರು, ಧಾರವಾಡ, ಹುಬ್ಬಳ್ಳಿ, ಕುಮಟಾ (1 ವರ್ಷ)ದ ಬಳಿಕ ಗೋಕರ್ಣಕ್ಕೆ ಬಂದೆವು. ಇಲ್ಲಿ ಪ್ರಕಾಶನ ಸಂಗೀತ-ನಾಟಕಗಳ ಕುರಿತ ಜನ್ಮಜಾತ ಪ್ರೀತಿಗೆ ಅವಕಾಶ ಸಿಕ್ಕಿತು. ತನ್ನ ಪ್ರಾಥಮಿಕ ಸ್ಕೂಲಿನ ಆಟೋಟಗಳಲ್ಲಿ (ಅಗಲೇ ಲೇಝಿಮ್, ಕೋಲಾಟ, ಲಾಠಿ ಆಟಗಳೆಲ್ಲ ಸಾಮಾನ್ಯವಾಗಿದ್ದವು-ಹಾಡುಗಳೊಂದಿಗೆ) ಅಷ್ಟೆ ಅಲ್ಲ, ನಮ್ಮ ಹೈಸ್ಕೂಲಿನ ಸಮೂಹಗೀತೆ, ನೃತ್ಯ-ನಾಟಕಗಳಲ್ಲೂ ಉತ್ಸಾಹದ ಶ್ರೋತೃವಾಗಿಯೋ, ವಾಲಂಟಿಯರ್ ಆಗಿಯೋ ಭಾಗವಹಿಸುತ್ತಿದ್ದ! ವಿದ್ಯುತ್ತು ಇಲ್ಲದ ದಿನಗಳಲ್ಲಿ, ರೇಡಿಯೋ ಕೂಡ ತಲುಪದ ಗೋಕರ್ಣದಲ್ಲಿ ಸಂಗೀತ ಶ್ರವಣವೆಂಬುದು ಒಂದೆರಡು ಚಾ ಅಂಗಡಿಗಳಲ್ಲಿ ಕೇಳಿಬರುತ್ತಿದ್ದ ಗ್ರಾಮೊಫೋನ್ ರಿಕಾರ್ಡ್ ಸಂಗೀತ ಮಾತ್ರ. ಊರಲ್ಲಿ, ಶಿವರಾತ್ರಿಯ ಸಂದರ್ಭದಲ್ಲಿ ಬರುತ್ತಿದ್ದ ಸಿನೆಮಾ, ನಾಟಕ ಕಂಪನಗಳ ಸುತ್ತ ಠಳಾಯಿಸುತ್ತಿದ್ದ ಪ್ರಕಾಶ, ಅಲ್ಲಿಯ 'ದಶಾವತಾರ' (ಯಕ್ಷಗಾನ) ಕಾರ್ಯಕ್ರಮಗಳಿಗೂ ಹೋಗುತ್ತಿದ್ದ.

ಕೇರಿಯ ಹುಡುಗರನ್ನು ಕಟ್ಟಿಕೊಂಡು ನಾಟಕವಾಡುವುದು ಅದರಲ್ಲಿಯೂ ಬೆಳವಡಿ ಮಲ್ಲಮ್ಮ, ಕಿತ್ತೂರ ಚೆನ್ನಮ್ಮನಂತಹ ಸ್ತ್ರೀ ಪಾತ್ರಗಳನ್ನು ಆತ ಮಾಡಿದ್ದು, ಶಿವರಾಮ ಕಾರಂತರ 'ನಾರದ ಗರ್ವಭಂಗ' ನಾಟಕದಲ್ಲಿ ಮೇಷ್ಟ್ರು ಸೇರಿಸಿದ ಎಲ್ಲಾ ಹಾಡುಗಳನ್ನೂ ಹಾಡುತ್ತಿದ್ದುದು, ನಮಗೆ ಮನೆಯಲ್ಲಿ ರಂಜನೆಯ ಸಂದರ್ಭಗಳಾಗಿದ್ದವು. ಆ ಚಿಕ್ಕ ವಯಸ್ಸಿನಲ್ಲಿಯೇ ಆತನ ಸಂಗೀತದ ಸೆಳೆತದ ಬಗ್ಗೆ ಅರಿತುಕೊಳ್ಳುವ ಜಾಣ್ಮೆ ನಮಗಾರಿಗೂ ಇರಲಿಲ್ಲ. ರಮೇಶ ನಾಡಕರ್ಣಿ, ದೇವೇಂದ್ರ ಮುರ್ಡೇಶ್ವರರಂತಹ ಸಂಗೀತಗಾರರ ಹಿಂದೆ ಓಡಾಡಿ, ಗಾಯಕಿಯ ಪಹೇಲುಗಳನ್ನು ಅರಿಯಲು ಆತ ಯತ್ನಿಸುತ್ತಿದ್ದ ವಿಚಾರಗಳನ್ನು ಇಲ್ಲಿಯ ಪ್ರಬಂಧಗಳಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಿಸಿದ್ದಾನೆ.

ಕಾರವಾರದ ವರ್ಷಗಳಲ್ಲಿ ಮರಾಠಿ ಹಾಡು, ನಾಟಕಗಳ ಸಾಮೀಪ್ಯ ಪ್ರಕಾಶನಿಗೆ ಒದಗಿತು. ಆದರೆ ಬಾಬಾರ ಧಾರವಾಡದ ವರ್ಗಾವರ್ಗಿಯಲ್ಲಿಯೇ ಆತನ ಸಂಗೀತಪ್ರೀತಿಗೆ ಹೆಚ್ಚು ಅವಕಾಶ ಸಿಕ್ಕಿತು. ಪರೀಕ್ಷೆಯಲ್ಲಿ ರ‍್ಯಾಂಕನ್ನು ಗಳಿಸಲು ಬೇಕಾದ ಓದಿನ ಶ್ರಮ ಆತನಿಂದ ಆಗದು ಎಂಬ ವಿಚಾರ ಅದಾಗಲೇ ತಿಳಿದಿತ್ತು. ಆತನ ಪ್ರೀತಿಯ ಸಂಗೀತಾಭಿನಯದ ವಿಷಯಗಳೆಲ್ಲಾ ಅಭ್ಯಾಸಕ್ರಮದಲ್ಲಿ ಅಳವಡಿಕೆಯಾಗಲು ದಶಕಗಳೇ ದಾಟಿದವು. ಒಲವಿನ ವಿಷಯಗಳಲ್ಲಿ ಸಕ್ರಮವಾದ ತರಬೇತಿ, ಸೀಮಿತ ಆದಾಯದ ಕುಟುಂಬಗಳಲ್ಲಿ ಸಾಧ್ಯವಿರಲಿಲ್ಲ.

ಆದರೆ, ಈ ಕಿಶೋರಾವಸ್ಥೆಯಲ್ಲಿಯೇ ಅವನ ಎರಡು ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾದವು. ಶರಚ್ಚಂದ್ರರ ಕಾದಂಬರಿಯ ('ಬಿಂದೋಕಾ ಲಲ್ಲಾ'-ಹಿಂದಿಯಿಂದ) ಕನ್ನಡ ಅನುವಾದ 'ವಾತ್ಸಲ್ಯ', ಮತ್ತು 'ಮಾನವನ ಅವತಾರ' (From Amoeba to Man) ಎಂಬ ವಿಜ್ಞಾನದ ಪುಸ್ತಕ - ಹೀಗೆ ಎರಡು ಪುಸ್ತಕಗಳನ್ನು ಮಕ್ಕಳಿಗಾಗಿ

ಕುಮಟಾದ 'ಸುಲಭ ಪ್ರಕಾಶನ' ಹೊರತಂದಿತ್ತು. ಬಳಿಕದ ಐದು-ಆರು ದಶಕಗಳ ಕಾಲ ಆತ, ಕರ್ನಾಟಕದ ಹೊರಗೇ ವಾಸ್ತವ್ಯ ಹೂಡಬೇಕಾಗಿ ಬಂದರೂ, ಕನ್ನಡ ಸಾಹಿತ್ಯ ಜಗತ್ತಿನ ಸಂಪರ್ಕ ಇಟ್ಟುಕೊಂಡಿದ್ದ. ಧಾರವಾಡ-ಬೆಂಗಳೂರಿಗೆ ಬಂದಾಗೊಮ್ಮೆ ಸಾಧ್ಯವಿದ್ದಷ್ಟು ಕನ್ನಡ ಪುಸ್ತಕಗಳನ್ನು ಕೊಂಡು ಒಯ್ಯುತ್ತಿದ್ದ. ಮುಂಬೈಯ ದೀರ್ಘವಾಸದಲ್ಲಿ ಕನ್ನಡ ಭಾಷೆ-ಸಾಹಿತ್ಯಗಳ ಸಂಪರ್ಕ ಹೊಂದಿದ್ದನಾದರೂ, ಕನ್ನಡದಲ್ಲಿ ಬರೆಯುವುದನ್ನು ಬಿಟ್ಟೇ ಬಿಟ್ಟಿದ್ದ. ಆದರೆ ಹಿಂದುಸ್ತಾನಿ ಸಂಗೀತ ಶ್ರವಣ, ಚಿಂತನ-ಮಂಥನಗಳನ್ನು ರೂಢಿಸಿಕೊಳ್ಳುತ್ತಲೇ ನಡೆದ.

ಬಿ.ಎಸ್‌ಸಿ. ಬಳಿಕದ ಮುಂಬೈಯ ನೌಕರಿ ಶೋಧದ ದಿನಗಳಲ್ಲಿ ಆತನ ಸಂಗೀತ ಪ್ರೀತಿಗೆ ಅವಕಾಶ ಸಿಕ್ಕಿತು. ನಮ್ಮ ಸೋದರಮಾವ ಮೋಹನ ನಾಡಕರ್ಣಿ ಟೈಮ್ಸ್ ಆಫ್ ಇಂಡಿಯಾದ ಸಂಗೀತ ವಿಮರ್ಶಕರಾಗಿದ್ದರು. ಹೀಗಾಗಿ ಮಹಾನಗರದ ಒಳ್ಳೊಳ್ಳೆಯ ಕಚೇರಿಗಳಿಗೆಲ್ಲ ಅವರಿಗೆ ಬರುತ್ತಿದ್ದ ಆಮಂತ್ರಣಗಳಲ್ಲಿ ಪ್ರಕಾಶನು ಪಾಲ್ಗೊಳ್ಳಲಾರಂಭಿಸಿದ. ಸಂಗೀತ ಕೇಳುತ್ತಲೇ ಆ ಕುರಿತು ತಿಳಿದುಕೊಳ್ಳುತ್ತಾ ಹೋದ. ಅತಿ ಕಡಿಮೆ ಅವಧಿಯ ಗುಲಾಂ ರಸೂಲ್ ಅವರ ಬಳಿಯ ತಬಲಾ ಕಲಿಕೆ ಮತ್ತು ಕೊಂಚ ಮೊದಲಿನ ಧಾರವಾಡದ ಕಾಲೇಜು ದಿನಗಳಲ್ಲಿ ಪಂಡಿತ ಪಂಚಾಕ್ಷರಿ ಮತ್ತಿಗಟ್ಟಿ ಅವರ ಬಳಿ ಕಲಿತ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಮೊದಲ ಕೆಲಪಾಠಗಳನ್ನು ಬಿಟ್ಟರೆ, ಆತನಿಗೆ ಸಂಗೀತವನ್ನು ಕ್ರಮಬದ್ಧವಾಗಿ ಕಲಿಯಲು ಅವಕಾಶ ಸಿಗಲೇ ಇಲ್ಲ. ಕೇವಲ ಕೇಳಿ ಕೇಳಿಯೇ ಸಂಗೀತಶಾಸ್ತ್ರದಲ್ಲಿ ನೈಪುಣ್ಯ ಪಡೆದ ಆತನನ್ನು ಸ್ನೇಹಿತ, ಸಾಹಿತಿ, ಡಾ. ಕೆ. ಚಂದ್ರಮೌಳಿ ಅವರು 'ಶ್ರವಣಕುಮಾರ'ನೆಂದು ಕರೆದಿದ್ದಾರೆ!

ಮೋಹನ ನಾಡಕರ್ಣಿ ಅವರಿಗೆ ಉತ್ತಮ ಸಂಗೀತ ಕಾರ್ಯಕ್ರಮಗಳ ಎಲ್ಲಾ ಆಮಂತ್ರಣಗಳಿಗೆ ಹೋಗಲಾಗದೇ ಕೆಲವು ಸಲ ಪ್ರಕಾಶನನ್ನೇ ಕಳಿಸುವ ಸಂದರ್ಭ ಬರುತ್ತಿತ್ತು. ಟೈಮ್ಸ್ ಪತ್ರಿಕೆಯ ಚೌಕಟ್ಟಿಗೆ ಹೊಂದುವಂತೆ ಇಂಗ್ಲಿಷಿನಲ್ಲಿ ಬರೆದ ಈತನ ವರದಿಗಳು ಮೊದಲಲ್ಲೇ ಪ್ರಕಟವಾಗಲಾರಂಭಿಸಿದವು. ಕ್ರಮೇಣ ಆ ಪತ್ರಿಕೆಯ ಆಯ್ದ ವಿಮರ್ಶಕರಲ್ಲಿ ಅವನೂ ಒಬ್ಬನಾದ.

ಅವನ ಔಷಧ ಕಂಪನಿಯ ನೌಕರಿಯಿಂದಾಗಿ ಉತ್ತರ ಭಾರತದ ಅನೇಕ ನಗರಗಳಲ್ಲಿ ಕೆಲಸಮಾಡುವ ಸಂದರ್ಭ ಒದಗಿತ್ತು. ಅಲ್ಲೂ ಬಿಡದೇ ಸಾಧ್ಯವಿದ್ದ ಸಂಗೀತ ಕಚೇರಿಗಳನ್ನೆಲ್ಲಾ ಕೇಳಿದ, ಸಂಗೀತ ವಿದ್ವಾಂಸರನ್ನು ಭೇಟಿಮಾಡಿದ, ಅವರ ಘರಾಣೆಗಳ ವೈಶಿಷ್ಟ್ಯಗಳನ್ನು ಗುರುತುಹಾಕಿಕೊಂಡ. ಅದೆಷ್ಟೋ ವರ್ಷಗಳ ಬಳಿಕ ಅವನ್ನು ಕುರಿತು ನೆನಪಿನಿಂದ ಬರೆದ ಲೇಖಗಳು ಈ ಸಂಕಲನದಲ್ಲಿವೆ. ಸ್ವಭಾವತಃ ಮರೆಗುಳಿಯಾಗಿದ್ದ ಆತ ಹಣ, ಬೆಲೆಯುಳ್ಳ ಸಾಮಾನು, ಬಟ್ಟೆಬರೆ, ಕಾಗದ ಪತ್ರಗಳನ್ನು ಕಳೆದುಕೊಂಡದ್ದಕ್ಕೆ ಲೆಕ್ಕವಿಲ್ಲ! ಆದರೆ ಕೇಳಿದ ಅಸಂಖ್ಯ ಕಚೇರಿಗಳ ಮಟ್ಟ, ಗಾಯಕರ ವೈಶಿಷ್ಟ್ಯ, ಎರವಲು ಪಡೆದ, ಕದ್ದ, ಋಣಿಯಾಗಿದ್ದ ಸಂಗೀತದ ಚಿಕ್ಕಪುಟ್ಟ ವಿಚಾರಗಳನ್ನೂ ದಶಕಗಳಗಟ್ಟಲೆ ನೆನಪಿಟ್ಟುಕೊಂಡ ಪರಿ ವಿಸ್ಮಯಕಾರಿ!

*****

ಪ್ರಕಾಶನ ಅಂತ್ಯಕ್ರಿಯೆಗೆಂದು ಮುಂಬೈಗೆ ಹೋಗಿದ್ದ ಸುಷಮಾ ಹಿಂದಿರುಗಿದಳು. ಬರುವಾಗ, ಪ್ರಕಾಶನ ಕೋಣೆಯಲ್ಲಿದ್ದ ಸಂಗೀತ ಮತ್ತು ಸಂಗೀತಕಾರರನ್ನು ಕುರಿತು ಇದ್ದ ಮಾಹಿತಿಯ ದಪ್ಪ ಫೈಲುಗಳ 3 ಚೀಲಗಳನ್ನು ಹೊತ್ತುಕೊಂಡೇ ಬಂದಳು. ಇಂಗ್ಲಿಷ್, ಮರಾಠಿ, ಕನ್ನಡ ಭಾಷೆಗಳಲ್ಲಿ ಆ ಲೇಖಗಳು ಇದ್ದವು. ಪ್ರಕಾಶನ ಆಕಸ್ಮಿಕ ನಿಧನ ಕೇಳಿದೊಡನೆ ವರದಿಗಾರರು, ಸಂಗೀತಗಾರರು, ವಿಮರ್ಶಕರು, ಕಲಾಕಾರರು, ಮಹಾನಗರದಲ್ಲಿ ಹರಡಿಹೋಗಿದ್ದ ಕುಟುಂಬದವರೆಲ್ಲಾ ದೊಡ್ಡ ಸಂಖ್ಯೆಯಲ್ಲಿ ಬಂದು ಅಂತ್ಯದರ್ಶನ ಪಡೆದರಂತೆ. ನಿಧನದ ಹೊತ್ತಿಗೆ ಮುಂಬೈ (ಮಾಟುಂಗಾ) ಕರ್ನಾಟಕ ಸಂಘದ ಅಧ್ಯಕ್ಷನಾಗಿದ್ದ ಅವನ ಸಾಕಷ್ಟು ಪರಿಚಿತರೂ ಬಂದಿದ್ದರಂತೆ.

ಹಿಂದಿನ ಮುಂಬೈ ಪ್ರಾಂತದ ಭಾಗವಾಗಿದ್ದ ಕಾರವಾರ ಜಿಲ್ಲೆಯ ಸಾರಸ್ವತರು ನೌಕರಿಗಳ ಶೋಧದಲ್ಲಿ ಹೋದವರು, ದೊಡ್ಡ ಸಂಖ್ಯೆಯಲ್ಲಿ ಆ ಮಹಾನಗರದಲ್ಲಿ ನೆಲೆಸಿದ್ದರು. 100 ವರ್ಷಗಳ ಹಿಂದೆಯೇ ರೂಪತಾಳಿದ ಅವರ ಕೆನರಾ ಸಾರಸ್ವತ ಅಸೋಸಿಯೇಷನ್ ಮತ್ತು ಅದರ ಅದೇ ಹೆಸರಿನ ಮುಖಪತ್ರಿಕೆಗೆ ಪ್ರಕಾಶ ನಿಯಮಿತವಾಗಿ ಬರೆಯುತ್ತಿದ್ದನಲ್ಲದೇ, ಶತಾಬ್ಧಿ ಸಂದರ್ಭದಲ್ಲಿ 30 ವಿವಿಧ ಬಗೆಯ ಸಂಗೀತಾಧಾರಿತ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಶ್ರಮಿಸಿದ್ದ. ಅನೇಕ ಹಿರಿಯ ಕಲಾವಿದರನ್ನು ಪತ್ತೆಹಚ್ಚಿ ವೇದಿಕೆಗೆ ಕರೆತಂದು, ವಿಸ್ಮೃತಿಗೆ ಸೇರಿಹೋಗಬಹುದಾಗಿದ್ದವರನ್ನು ಈಗಿನವರಿಗೆ ಪರಿಚಯಿಸಿದ್ದ. ಹೀಗಾಗಿ ಆ ಸಂಸ್ಥೆಯವರು ಋಣಭಾರದ ಅವನ ಸ್ಮೃತಿಗೆ 25.3.2016ರಂದು ಸಂಗೀತಾಂಜಲಿಯೊಂದನ್ನು ಏರ್ಪಡಿಸಿದ್ದರು. 'ಸ್ವರ್ ಪ್ರಕಾಶ್' ಎಂದು ಕರೆಯಲ್ಪಟ್ಟ ಆ ಕಾರ್ಯಕ್ರಮದಲ್ಲಿ ಪ್ರಖ್ಯಾತರಾದ ಮೂವರು ಸಂಗೀತಗಾರರ ಕಚೇರಿಗಳೊಂದಿಗೆ ಉಪಸ್ಥಿತರಿದ್ದ ಪ್ರಸಿದ್ಧರಲ್ಲಿ, ಆತ್ಮೀಯರಲ್ಲಿ, ಇಂಗ್ಲಿಷ್, ಮರಾಠಿ ಲೇಖಕರ, ಪತ್ರಕರ್ತರ, ಭಾಷಣಗಳೂ ಇದ್ದವು. ಸಂಗೀತದ ಬಗ್ಗೆ ಎಷ್ಟೆಲ್ಲ ತಿಳಿದುಕೊಂಡಿದ್ದ ಸೋದರನ ಈ ಕೌಶಲ್ಯದ ಬಗ್ಗೆ ನಮಗೆ ಏನೂ ಗೊತ್ತಿರಲಿಲ್ಲವಲ್ಲ ಎಂದು ನಾನು, ಸುಷಮಾ ಸಂಕಟಪಟ್ಟೆವು. ಅಲ್ಲಿಂದ ಬೆಂಗಳೂರಿಗೆ ಹಿಂದಿರುಗಿದೊಡನೆ, ತುಂಬ ಹಿಂದೆಯೇ ವಲಸೆ ಹೋದರೂ, ಕರ್ನಾಟಕದ, ಕನ್ನಡದ ಪ್ರೀತಿ-ಅಭಿಮಾನಗಳನ್ನು ಇನ್ನಿಲ್ಲದಂತೆ ಹೊತ್ತು ಬಾಳಿದ ಅಪರೂಪದ ನಾದಲೋಲ ವ್ಯಕ್ತಿಯನ್ನು ಕನ್ನಡಿಗರಿಗೆ ಪರಿಚಯಿಸುವ ಯತ್ನವೊಂದನ್ನು ಕೈಕೊಳ್ಳಲೇಬೇಕು, ಅದೂ, ಅವನ ಭಾಷೆ, ಶೈಲಿಗಳಲ್ಲಿಯೇ ಎಂದು ನಿರ್ಧರಿಸಿದೆವು.

ಈ ಕೆಲಸ ಸುಲಭವಾಗಿರಲಿಲ್ಲ. ಪ್ರಕಾಶನಿಗಿದ್ದ ಇಂಗ್ಲಿಷ್-ಮರಾಠಿ ಭಾಷೆಗಳ ಪ್ರಭುತ್ವ ಕನ್ನಡದಲ್ಲಿರಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ತಾರುಣ್ಯದಿಂದ ಅವನು ಕನ್ನಡದಲ್ಲಿ ಬರೆಯಲು ಪ್ರಯತ್ನಿಸಲಿಲ್ಲ. ಮುಂಬೈಯ ವಾಸ್ತವ್ಯದಲ್ಲಿ ಕೆಲ ಸ್ನೇಹಿತರು, ಆತ್ಮೀಯರು ಅವನ ಬೆನ್ನುಹತ್ತಿ ಕನ್ನಡದಲ್ಲಿ ಬರೆಸಿದರು. ಆತನಿಗೆ ಹಿಂದುಸ್ತಾನಿ ಸಂಗೀತದಲ್ಲಿದ್ದ ಅಗಾಧ ಶ್ರವಣ-ಪರಿಶ್ರಮವನ್ನು ಗಮನಿಸಿದ ಸಾಹಿತಿ ಡಾ. ವ್ಯಾಸರಾವ್ ನಂಜೂರರು ಸಂಗೀತವನ್ನು ಕುರಿತು ಕನ್ನಡದಲ್ಲಿಯೇ ಬರೆಯಲು ಪ್ರೋತ್ಸಾಹಿಸಿದ್ದು, ತಾವು ಸಂಪಾದಿಸುತ್ತಿದ್ದ 'ಗೋಕುಲವಾಣಿ'ಯಲ್ಲಿ ಆತನ ಲೇಖನಗಳನ್ನು ಪ್ರಕಟಿಸಿದ್ದು,

ಅವನ ಕನ್ನಡದ ಬರವಣಿಗೆಯನ್ನು ವಿಶೇಷವಾಗಿ ಬೆಳೆಸಿತು. ಅವನಲ್ಲಿ ತಾನು ಕನ್ನಡದಲ್ಲಿಯೂ ಬರೆಯಬಹುದು; ಬರೆದದ್ದು ಪ್ರಕಟವಾಗುತ್ತದೆ ಎಂಬ ನಂಬಿಕೆ ದೃಢವಾಗುತ್ತಾ ಬಂದಂತೆ, ಆತ ಕನ್ನಡದಲ್ಲಿ ಹೆಚ್ಚುಹೆಚ್ಚು ಬರೆಯಲಾರಂಭಿಸಿದ. ಕರ್ನಾಟಕ ಸಂಘದ ಸಂಪರ್ಕ ವ್ಯಾಸರಾಯ ಬಲ್ಲಾಳ, ಸದಾನಂದ ಸುವರ್ಣ, ಕೆ. ಚಂದ್ರಮೌಳಿ, ಶ್ರೀನಿವಾಸ ಜೋಕಟ್ಟೆ, ಡಾ. ಬಿ.ಎ. ಸನದಿ, ಮೊದಲಾದವರ ಎಡೆಬಿಡದ ಸಂಪರ್ಕವನ್ನು ಬೆಳೆಸಿಕೊಂಡ. ಕರ್ನಾಟಕ ಸಂಘದ ಉಪಾಧ್ಯಕ್ಷನಾಗಿ, ಕೊನೆಗೆ ಅಧ್ಯಕ್ಷನೂ ಆಗಿ, 'ಕಲಾಭಾರತಿ'ಯಂತಹ ಸಾಂಸ್ಕೃತಿಕ ವೇದಿಕೆಯ ನಿರ್ಮಾಣದಲ್ಲಿ ಪಾಲ್ಗೊಂಡ.* ತನ್ನ ಪ್ರೀತಿಯ ಸಂಗೀತದ ಪ್ರಚಾರಕ್ಕೆ ಹಲಬಗೆಯ ಹೊಸ ಆಯಾಮಗಳನ್ನು ಒದಗಿಸಿದ. ಜೊತೆಗೆ ಸಂಘದ ಮುಖವಾಣಿ 'ಸ್ನೇಹ-ಸಂಬಂಧ', ಕಾಲನಿರ್ಣಯ ಕ್ಯಾಲೆಂಡರ್, 'ರಾಗ ಧನಶ್ರೀ'ಗಳಂತಹ ಪತ್ರಿಕೆಗಳಿಗೆ ಚಿಕ್ಕಚಿಕ್ಕ ಲೇಖಗಳನ್ನು ಬರೆದ.

ಇಂಗ್ಲಿಷ್ ಭಾಷೆಯಲ್ಲಿ ಮೊದಲಿನಂದ ಬರೆಯುತ್ತಿದ್ದು ಮಹಾನಗರದ ಸಂಗೀತ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದುದರಿಂದ, ಆದಿತ್ಯ ವಿಕ್ರಮ್ ಬಿರ್ಲಾ ಸಂಸ್ಥೆ, ಆಕಾಶವಾಣಿ, ದೂರದರ್ಶನಗಳ ಆಡಿಶನ್ ಸಮಿತಿ, ಮ್ಯೂಝಿಕ್ ಫೋರಮ್, ಸಬರ್ಬನ್ ಮ್ಯೂಝಿಕಲ್ ಸೊಸೈಟಿ ಆಫ್ ಇಂಡಿಯನ್ ರಿಕಾರ್ಡ್ ಕಲೆಕ್ಟರ್ಸ್ ಮುಂತಾದವುಗಳ ಜೊತೆ ಇನ್ನಿತರ ಸಂಗೀತ-ಪೋಷಕ ಸಂಸ್ಥೆಗಳ ಸದಸ್ಯನಾಗಿ ಕೆಲಸಮಾಡಿದ. ಪುಣೆ ವಿಶ್ವವಿದ್ಯಾಲಯವು ಡಾ. ಎಸ್.ಎಲ್. ಭೈರಪ್ಪನವರ ಕಾದಂಬರಿಗಳ, ಮುಖ್ಯವಾಗಿ 'ಮಂದ್ರ'ವನ್ನು ಕುರಿತು-ಅದೂ ಮರಾಠಿಯಲ್ಲಿ-ಮಾತನಾಡಲು ಆಮಂತ್ರಿಸಿದ್ದನ್ನು ನಮೂದಿಸಬೇಕಾಗಿದೆ. ಅದೆಷ್ಟೋ ಸಂಗೀತ ಕಾರ್ಯಕ್ರಮಗಳಲ್ಲಿ, ಪ್ರಶಸ್ತಿಗಳಿಗೆ ನಿರ್ಣಾಯಕರಲ್ಲಿ ಒಬ್ಬನಾಗಿ ಕೆಲಸಮಾಡಿದರೂ ಆತ ಎಂದೂ ಸ್ವಂತ ಪ್ರಚಾರಕ್ಕೆ ಹವಣಿಸಲಿಲ್ಲ. ಹೀಗಾಗಿ, ಆ ಕುರಿತ ಮಾಹಿತಿ ನಮಗೆ ಲಭ್ಯವಾಗಲಿಲ್ಲ.

ಪ್ರಕಾಶನು ಜೀವಿತಾವಕಾಶದ ಕೇವಲ ಹತ್ತು-ಹದಿನೈದು ವರ್ಷಗಳ ಕಾಲಾವಧಿಯಲ್ಲಿ ಬರೆದಿರಬಹುದಾದ ಕನ್ನಡ ಲೇಖಗಳು ಇಲ್ಲಿವೆ. ಸಂಗೀತ ವಿಶ್ಲೇಷಣೆಯ ಹತ್ತಾರು ಆಯಾಮಗಳೊಂದಿಗೆ ಕೆಲ ಸಂಗೀತಗಾರರ ವೈಶಿಷ್ಟ್ಯಗಳು, ಅವರೊಂದಿಗೆ ಹೊಂದಿಕೊಂಡಿದ್ದ ಕಥೆ-ಕಥಾನಕಗಳು, ಹಿಂದಿನವರನ್ನು ಕುರಿತ ಸ್ವಾರಸ್ಯಕರ ಘಟನೆಗಳನ್ನೆಲ್ಲಾ ಪ್ರಕಾಶನು ಬಣ್ಣಿಸಿದ್ದಾನೆ. ಕೆಲವು ಪ್ರಸಂಗಗಳಂತೂ ಯಾವುದೇ ಕಾದಂಬರಿ, ಚಲನಚಿತ್ರ, ಟಿ.ವಿ. ಧಾರಾವಾಹಿಗಳಿಗೆ ಉತ್ತಮ ವಸ್ತುವಾಗಬಲ್ಲವು. ಚಾಕುವಿನ ಇರಿತದಿಂದಾದ 56 ಗಾಯಗಳ ಗುರುತುಗಳನ್ನು ಮುಖದಲ್ಲಿ ಹೊಂದಿದ್ದ ಅಪೂರ್ವ ಗಾಯಕಿ 'ಛಪ್ಪನ್ ಛೂರಿ' ಜಾನಕಿ, ಕೋಟ್ಯಾಧೀಶಳಾಗಿ ಮೆರೆದು ಕೊನೆಯಲ್ಲಿ, ತಾನೇ ಸ್ಥಾಪಿಸಿದ ಹೆಸರುವಾಸಿ ಹೊಟೆಲ್ಲಿನ ಬಾಲ್ಕನಿಯ ಮೂಲೆಯ ಮಂಚದ ಮೇಲೆ ಕೊನೆಯುಸಿರು ಎಳೆದ ಸುಂದ್ರಾಬಾಯಿ ಜಾಧವ್, ಆರನೆಯ ವಯಸ್ಸಿನಿಂದಲೇ ಶಾಸ್ತ್ರೀಯ ಸಂಗೀತ ಕಚೇರಿಯಲ್ಲಿ ಪಾಲುಗೊಂಡು ಅತ್ಯದ್ಭುತ ಬಾಲಪ್ರತಿಭೆಯನ್ನು ಮೆರೆದು, ಅದೃಷ್ಟವಶಾತ್ ಶ್ರೇಷ್ಠ ಗುರುವಿನಡಿ ಉತ್ತಮ ಸಂಗೀತ ಮಾರ್ಗದರ್ಶನ

---

* ಕರ್ನಾಟಕದ ನುರಿತ ಕಲಾವಿದರೊಂದಿಗೆ ಉದಯೋನ್ಮುಖರನ್ನೂ ವೇದಿಕೆಗೆ ಬರಮಾಸಿಕೊಂಡ

ಪಡೆಯುವಂತಾಗಿ, ಕ್ಷಯರೋಗದಿಂದ ಪೀಡಿತನಾಗಿ, ಒಂದು ಪುಪ್ಪುಸವನ್ನು ಕಳೆದುಕೊಂಡರೂ ಅದ್ಭುತವಾದ "ಗಾಯಕನಷ್ಟೇ ಅಲ್ಲ, ನಾಯಕನೂ ಆದ" ಎಂಬ ಶಹಭಾಸ್‌ಗಿರಿಯನ್ನು ಪಂಡಿತ ಭೀಮಸೇನ ಜೋಶಿಯವರಿಂದ ಪಡೆದ ಕುಮಾರ ಗಂಧರ್ವ-ಇವರುಗಳ ಯಶೋಗಾಥೆಗಳುಇಲ್ಲಿವೆ. ಒಂದೇ ಘರಾಣಾ, ಒಬ್ಬರೇ ಶ್ರೇಷ್ಠ ಗುರು, ಒಂದೇ ಪ್ರದೇಶ, ಭಾಷೆ, ಸಂಸ್ಕೃತಿಯನ್ನು ಹೊಂದಿದ್ದ ಇಬ್ಬರು ಮಹಾನ್ ಗಾಯಕಿಯರಲ್ಲಿ ಓರ್ವರ ಈರ್ಷೆ, ಅಸೂಯೆ, ಪೈಪೋಟಿ, ಅಹಂಕಾರದ ಅತಿ ಕಠಿಣ ಮಾದರಿಯೆನಿಸುವ ಸಂಗೀತಲೋಕದ ವೈಚಿತ್ರ್ಯವನ್ನು ಇಲ್ಲಿ ಕಾಣುತ್ತೇವೆ. ಅಸಾಧ್ಯ ನೋವಿನಿಂದ ಮುಲುಗುತ್ತ ಅರ್ಧ ಪ್ರಜ್ಞಾವಸ್ಥೆಯಲ್ಲಿ ನಾದಲೀನರಾಗಿ 18 ಗಂಟೆಗಳ ಕಾಲ ಹಾಡುತ್ತಾ ಐಸಿಯುನ ಸಿಬ್ಬಂದಿ, ಹಾಗೂ ಬಳಿಯಲ್ಲಿ ಕಾಯುತ್ತಿದ್ದ ಮಕ್ಕಳನ್ನೆಲ್ಲಾ ವಿಸ್ಮಯಾತೀತ ಪ್ರಪಂಚಕ್ಕೆ ಕರೆದೊಯ್ದ ರಸಋಷಿ ಮನ್ಸೂರರ ಸ್ವಾರಸ್ಯದ ಚಿತ್ರವೊಂದಿದೆ. ಪ್ರಯಾಗದಲ್ಲಿ ಕಾರ್ತಿಕ ಏಕಾದಶಿಯಂದು ನಸುಕಿನ ಮರಗಟ್ಟುವ ಚಳಿಯಲ್ಲಿ ಗಂಗೆಯಲ್ಲಿ ಮುಳುಗಿ ಸಾರ್ಥಕತೆಯನ್ನು ಪಡೆಯಲು ಹೊರಟ ಮುಸ್ಲಿಮ್ ಗಾನಮಹರ್ಷಿಯ ಕಿರುನೋಟವೊಂದು ಕಾಣುತ್ತದೆ. ತಾನಸೇನನ ಕಾಲದಿಂದಲೂ ಪ್ರಚಲಿತವಿದ್ದ ಧ್ರುಪದ್ ಧಮಾರ್ (ಧ್ರುವಪದ) ಗಾಯಕಿಯ ಮೂಲ ರೂಪ, ಅದೂ ಸಂಸ್ಕೃತ 'ಚೀಜ್'ಗಳಲ್ಲಿ ಇವತ್ತಿಗೂ ಪಾಕಿಸ್ತಾನೀ ಗಾಯಕರ ಹಾಡುಗಾರಿಕೆಯಲ್ಲಿ ಉಳಿದುಕೊಂಡಿದೆ! ಎಂಬ ಅಂಶ ಭಾರತದ ಸಂಗೀತಪ್ರೇಮಿಗಳಿಗೆ ಖುಷಿ ಕೊಡದೇ?

ಈ ಸಂಕಲನಕ್ಕೆ ಏಕಸೂತ್ರತೆ ತರುವುದು ಬಿಗಿಯಾದ ಕೆಲಸವಾಗಿ ಪರಿಣಮಿಸಿತು. ಬೇರೆ ಬೇರೆ ಪತ್ರಿಕೆಗಳಿಗೆ ಅವುಗಳ ಆವಶ್ಯಕತೆಗನುಸಾರವಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖಗಳಿದ್ದವು. ಹಾಡುಗಾರಿಕೆಯ ಪ್ರಕಾರಗಳನ್ನು ವಿಶ್ಲೇಷಿಸಿದವು, ಘರಾಣೆಗಳ ಕುರಿತಾದವು, ರಾಗ-ಪ್ರಕಾರಗಳನ್ನು ತೋರಿಸಿಕೊಟ್ಟವುಗಳು, ಇನ್ನೂ ಕೆಲವು, ಸಂಗೀತ ಪ್ರಪಂಚವನ್ನು ಬೆಳಗಿದ ಗಾಯಕ, ಗಾಯಕಿಯರ ಕುರಿತಾಗಿವೆ. ಶ್ರೇಷ್ಠಗಾಯಕರೊಂದಿಗೆ ಕಳೆದ ಆತ್ಮೀಯ ಕ್ಷಣಗಳನ್ನು ಕೆಲವು ರೂಪಿಸುತ್ತವೆ. ಹಲವೊಂದು ಶ್ರಮವಹಿಸಿ, ಮಾಹಿತಿ ಸಂಗ್ರಹಿಸಿ ಬರೆದವುಗಳಾಗಿವೆ. ಶತಮಾನಗಳ ಕಾಲ ಹಿಂದುಸ್ತಾನ ಸಂಗೀತ-ನೃತ್ಯ ಪ್ರಪಂಚವನ್ನು ರಂಗುಗೊಳಿಸಿದ ನಾಯಕಸಾನಿಯರ ಕೊಡುಗೆಯನ್ನು ಪ್ರಕಾಶನು ತೋರಿಸಿಕೊಟ್ಟ ಬಗೆ, ಸಂಶೋಧಕರಿಗಷ್ಟೆ ಅಲ್ಲದೆ ಸಾಮಾನ್ಯ ಓದುಗರಿಗೂ ಆಸಕ್ತಿಕರವಾಗಿದೆ. ಮಾನವೀಯತೆಯಿಂದ ಕೂಡಿದ ಗುರು-ಶಿಷ್ಯರ ಸಂಬಂಧದ, ಸಂಗೀತ-ಸ್ನೇಹದ ದೃಷ್ಟಾಂತಗಳೂ ರಂಜಿಸುತ್ತವೆ. ಮರತೇಹೋದ ಸಂಗೀತಕಾರರನ್ನು ಕುರಿತ ಲೇಖಗಳು ಕೆಲವಿವೆ.

ಓದುಬರಹದ ಹಿನ್ನೆಲೆಯಿಲ್ಲದ ಗ್ರಾಮೀಣ ಗರತಿಯರ ಸಾಂಪ್ರದಾಯಿಕ ಹಾಡುಗಳು ಹಿಂದೀ ಬೆಲ್ಟ್ (Hindi belt) ಎಂದು ಕರೆಸಿಕೊಳ್ಳುವ ವಿಂಧ್ಯದಾಚೆಯ ಪ್ರದೇಶದಲ್ಲಿ ಹಿಂದಿಯ ಉಪಭಾಷೆಗಳೆನಿಸಿಕೊಳ್ಳಬಹುದಾದ ಬ್ರಜ್, ಅವಧಿ, ಭೋಜ್‌ಪುರಿ, ಮೈಥಿಲಿ, ಮಾಳವಿಗಳಲ್ಲಿ ಹೇರಳವಾಗಿವೆ. ವಿವಿಧ ಜನಾಂಗಗಳಲ್ಲಿ ಕೌಟುಂಬಿಕ ವಿವಾಹವೊಂದು ಅತಿ ಮಹತ್ವದ ಸಂದರ್ಭವಾಗಿದ್ದು ಹೆಣ್ಣುಮಕ್ಕಳು ಒಂದೆಡೆ ಸೇರಿ, ಢೋಲಕ್ ಬಾರಿಸುತ್ತ ರಾತ್ರಿಯಿಡೀ ಮದುವೆಯ ಹಾಡುಗಳನ್ನು ಹಾಡುತ್ತ ಖುಷಿಪಡುವುದು ಸಾಮಾನ್ಯವಾಗಿತ್ತು. 'ರಾತ್‌ಜಗಾ' (ಇರುಳು ಎಚ್ಚತ್ತಿತ್ತು) ಎಂದು ಕರೆಯಲ್ಪಡುವ ಈ

ಸಾಂಪ್ರದಾಯಿಕ (ಪಾರಂಪರಿಕ) ಹಾಡುಗಳ ಅಂಶಗಳನ್ನು ಠುಮರಿ, ಗಜರಾ ಮತ್ತಿತರ ಜನಪ್ರಿಯ ಮತ್ತು ಉಪಶಾಸ್ತ್ರೀಯ ಹಾಡುಗಾರಿಕೆಯಲ್ಲಿ ನಂತರದ ಜನಪ್ರಿಯ ಸಂಗೀತಗಾತಿಯರು ಸೇರಿಕೊಂಡರು, ಎಂಬ ಸ್ವಾರಸ್ಯಕಾರಿ ಮಾಹಿತಿಯತ್ತ ಪ್ರಕಾಶನು ಗಮನಸೆಳೆದಿದ್ದಾನೆ.

ಅದರಂತೆ ಕೋಠಿಗಾಯಕಿಯರ ಅಥವಾ ನಾಯಕಸಾನಿಯರೆಂದೂ ಕರೆಯಲ್ಪಡುವ ವಂಶಕ್ಕೆ ಸೇರಿದ ಮಹಿಳೆಯರ ಕೊಡುಗೆ ಭಾರತೀಯ ಸಂಗೀತಕ್ಕೆ, ಉತ್ತರ–ದಕ್ಷಿಣಾದಿ ಎರಡೂ ಪ್ರಕಾರಗಳಲ್ಲಿ ಹಿರಿದಾಗಿದೆ ಎಂಬ ಮಹತ್ವದ ವಿಷಯದತ್ತ ಜನರ ಗಮನಹರಿದಿಲ್ಲ. ಇಲ್ಲಿ ಹಿಂದುಸ್ತಾನಿ ಪ್ರಕಾರದಲ್ಲಿ ಇಂಥವರ ಪರಿಚಯವನ್ನು ಕೊಡಲಾಗಿದೆ. ಅವರ ಹಿರಿಮೆಯನ್ನು ಗುರುತಿಸಿದ ಅಧ್ಯಾಯಕ್ಕೆ 'ಸಂಗೀತ ಸಾಮ್ರಾಜ್ಞಿಯರು' ಎಂದು ಹೆಸರಿಡಲಾಗಿದೆ. ಇದಲ್ಲದೇ ಮೇರೆಯರಿಯದ ಸಂಗೀತ ಪ್ರಪಂಚದಲ್ಲಿ ತಮ್ಮದೇ ಆದ ಛಾಪನ್ನು ಉಳಿಸಿಹೋದವರನ್ನು ಪ್ರಕಾಶನು ಮರೆತಿಲ್ಲ. ಆತನ ಮಿತ್ರ ಸಂಗೋರಾಮ್ ಈ ವಿಷಯವನ್ನು ಕುರಿತೇ ಪಿಎಚ್‌ಡಿ ಮಾಡಲು ಆತನಗೆ ಸೂಚಿಸಿದ್ದರಂತೆ!

ಹಳೇ ಧ್ವನಿಮುದ್ರಿಕೆಗಳಲ್ಲಿ ಆತನು ತಾಳಿದ ಆಸಕ್ತಿಯಿಂದ ವಿಸ್ಮೃತಿಗೆ ಸೇರಿಹೋಗಬಹುದಾದಂತಹ ಹಲವಾರು ಅಪರೂಪದ ಗಾಯಕ–ವಾದಕರ ಪರಿಚಯ ನಮಗೆ ಆಗುವಂತಾಗಿದೆ. ಡಾ. ಸುರೇಶ್ ಚಾಂದವಣಕರರು ಕೈಕೊಂಡ ಈ ಪ್ರಯತ್ನದಲ್ಲಿ ಭಾಗಿಯಾಗಿ ತುಂಬ ಹಳೆಯ ಧ್ವನಿಮುದ್ರಿಕೆಗಳನ್ನು ಹುಡುಕುವಲ್ಲಿ ಅವರಿಗೆ ಸಹಾಯಮಾಡಿದ. ಕರ್ನಾಟಕ ಗಾಯಕಿಯಲ್ಲಿಯೂ ಇಂಥ ಮುದ್ರಿಕೆಗಳಿಗಾಗಿ ಯತ್ನಿಸಿದನಾದರೂ ಸಫಲತೆ ಸಿಗಲಿಲ್ಲ.

ಸಂಗೀತಪ್ರೇಮಕ್ಕೆ ಮೇರೆಗಳಿಲ್ಲ. ಪ್ರಕಾಶನು ಕೇಳಿ ಆನಂದಿಸುತ್ತಿದ್ದ ಮತ್ತು ಸಾಧ್ಯವಿದ್ದಾಗ ಆ ಕುರಿತು ಚರ್ಚಿಸುತ್ತಿದ್ದ ಬಗೆಯಿಂದ ಇದು ವ್ಯಕ್ತವಾಗುತ್ತದೆ. ಹಿಂದುಸ್ತಾನಿ, ಕರ್ನಾಟಕ, ಸಾಂಪ್ರದಾಯಿಕ, ಜಾನಪದ, ಪಾಶ್ಚಾತ್ಯ, ಆಫ್ರಿಕನ್, ಕೆಲ ಬುಡಕಟ್ಟುಗಳ ಜನಾಂಗಗಳ ಸಂಗೀತದ ಧ್ವನಿಮುದ್ರಿಕೆಗಳನ್ನೂ ಸಂಗ್ರಹಿಸಿದ್ದ. ಕರ್ನಾಟಕ ಸಂಗೀತದಲ್ಲಿ ಸೇರಿಕೊಂಡ ಸುರಟಿ (ಸೂರತ್ ಪ್ರದೇಶದ್ದು), ಹುಸೇನಿ, ಅರಬೀ, ಸೌರಾಷ್ಟ್ರ ಹೆಸರುಗಳೇ ಬೇರೆ ಬೇರೆ ಪ್ರದೇಶಗಳ ಸಂಗೀತದ ಪ್ರಭಾವವನ್ನು ಸೂಚಿಸಿದ್ದನ್ನು, ಕಲ್ಯಾಣಿ ರಾಗ ಪೂರ್ವ, ಉತ್ತರ ಹಾಗೂ ದಕ್ಷಿಣ ಪ್ರದೇಶಗಳಲ್ಲಿ ಪಡೆದ ರೂಪಾಂತರವನ್ನು ಗಮನಿಸಿದ್ದಾನೆ. 'ಭಾರತೀಯ ಸಂಗೀತದ ಏಕಾತ್ಮಕತೆ'ಯಲ್ಲಿ ಸಾಮಾನ್ಯ ಅಂಶಗಳನ್ನು ಚರ್ಚಿಸುತ್ತಾ, "ತಮ್ಮನ್ನು ಭಾರತೀಯರು ಎಂದು ಕರೆಸಿಕೊಳ್ಳುವವರು, ಗಂಗಾ–ಕಾವೇರಿಗಳೆಂಬ ಉತ್ತರ–ದಕ್ಷಿಣದ ಸಂಗೀತ ನದಿಗಳೆರಡರಲ್ಲೂ ಒಂದೊಂದು ಮುಳುಗು ಹಾಕಿ ಸಂಗೀತೈಕ್ಯದ ವಿಮೋಚನೆಯನ್ನು ಅರಸಬೇಕು" ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾನೆ.

ಪ್ರಕಾಶನನ್ನು ಸಮೀಪದಿಂದ ಬಲ್ಲವರಿಗೆ ಅವನನ್ನು ಕುರಿತು ಕೆಲ ಸಾಲುಗಳನ್ನು ಬರೆಯಲು ವಿನಂತಿಸಿದೆ. ಬರೆದುಕೊಟ್ಟ ಎಲ್ಲರನ್ನೂ ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಸುವಿಖ್ಯಾತ ಲೇಖಕರಾಗಿದ್ದಂತೆ ಅತ್ಯಪರೂಪದ ಸಂಗೀತಪ್ರೇಮಿಯೂ

ಆಗಿರುವ ಡಾ. ಎಸ್.ಎಲ್. ಭೈರಪ್ಪನವರಿಗೆ ಪ್ರಕಾಶನ ನಿಧನದ ವಾರ್ತೆಯನ್ನು ತಿಳಿಸಿದಾಗ ಹೆಚ್ಚಿನ ವ್ಯಸನವನ್ನು ವ್ಯಕ್ತಪಡಿಸಿದ್ದಲ್ಲದೇ, ದೀರ್ಘಾಯುಷ್ಯದ ಶಾಪವನ್ನು ಕುರಿತ ಪ್ಲೇಟೋನ ಉದ್ಗಾರವನ್ನು (ಕಿರಿಯ ವಯಸ್ಸಿನವರನ್ನು ಕಣ್ಣೆದುರೇ ಕಳೆದುಕೊಂಡಾಗಿನ ನೋವನ್ನು) ಉದ್ಧರಿಸಿದರು. ಕೆಲ ಕಾಲದ ಬಳಿಕ ಪ್ರಕಾಶನ ಕುರಿತು ಒಂದೆರಡು ನೆನಪುಗಳನ್ನು ಬರೆದುಕೊಡಲು ವಿನಂತಿಸಿಕೊಂಡಾಗ ಕಾದಂಬರಿ ಬರೆಹದಲ್ಲಿ ಮಗ್ನರಾಗಿದ್ದರೂ, ನಾಲ್ಕಾರು ದಿನಗಳಲ್ಲಿಯೇ ಅವರ ಲೇಖ ಕೊರಿಯರ್ ಮೂಲಕ ನನ್ನ ಕೈಸೇರಿತು. ಡಾ. ವ್ಯಾಸರಾವ್ ನಿಂಜೂರರು ಸಹೃದಯಿ ಸ್ನೇಹಿತನನ್ನು ಮನಮುಟ್ಟುವಂತೆ ನೆನಪಿಸಿಕೊಂಡಿದ್ದಾರೆ. ಪ್ರಕಾಶನಿಗೆ ಕನ್ನಡದಲ್ಲಿ ಬರೆಯುವಂತೆ ಮತ್ತೆ ಮತ್ತೆ ಪ್ರಚೋದಿಸಿ ಯಶಸ್ವಿಯಾದ ಮೊದಲಿಗರು ಅವರು, ಎನ್ನುವುದನ್ನು ಮರೆಯುವಂತಿಲ್ಲ. ಡಾ. ರಹಮತ್ ತರಿಕೆರೆ ಅವರು ಪ್ರಕಾಶನು ಕಣ್ಮರೆಯಾದ ಕ್ಷಣವೇ ತಮ್ಮ ಸಂಶೋಧನೆಗೆ ಆತನಿಂದ ಒದಗಿದ ನೆರವನ್ನು ನೆನೆದು 'ಪ್ರಜಾವಾಣಿ'ಗೆ ಒಂದು ಲೇಖವನ್ನು ಬರೆದರು. ಅದನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಬರಹಗಾತಿ, ಮಿತ್ರಾ ವೆಂಕಟ್‌ರಾಜ್ ಅವರ ಪತಿ ಸಾಹಿತ್ಯ-ಸಂಸ್ಕೃತಿ ಪ್ರೇಮಿ ವೆಂಕಟ್‌ರಾಜ್ ಅವರು ಸಹೃದಯ ಸ್ಮೃತಿಯನ್ನು ಕೊಡಮಾಡಿದ್ದಾರೆ. ಖ್ಯಾತ ಸಾಹಿತಿ ಡಾ. ಸುನೀತಾ ಶೆಟ್ಟಿ ಪ್ರಕಾಶನ ಸಾಹಿತ್ಯ ಹಾಗೂ ಸಂಶೋಧನಾ ಪ್ರೀತಿಯ ಜೊತೆಗೆ ಆತನೊಡನೆ ಆದ ಕೊನೆಯ ಭೇಟಿಯನ್ನು ಮನಕರಗುವಂತೆ ಮೂಡಿಸಿದ್ದಾರೆ. ಕೆ. ಚಂದ್ರಮೌಳಿ, ಡಾ. ಬಿ.ಎ. ಸನದಿ, ಶ್ರೀನಿವಾಸ ಜೋಕಟ್ಟೆಯವರು ಪ್ರಕಾಶನ ನಿರ್ವ್ಯಾಜ ಸ್ನೇಹವನ್ನು ನೆನಪಿಸಿಕೊಂಡಿದ್ದಾರೆ. ಇವರೆಲ್ಲರೂ ಮುಂಬೈಯ ಸಾಂಸ್ಕೃತಿಕ ಜೀವನದಲ್ಲಿ ಕರ್ನಾಟಕದ ಹಾಗೂ ಕನ್ನಡಿಗರ ಕೊಡುಗೆಯನ್ನು ಎತ್ತಿ ತೋರಿಸುವಲ್ಲಿ ಮುಂಚೂಣಿಯಲ್ಲಿದ್ದವರೆ! ಇವರಿಗೆಲ್ಲ ಚಿರಪರಿಚಿತವಾಗಿದ್ದ ಪ್ರಕಾಶನನ್ನು ಕುರಿತ ಕೆಲ ಸಾಲು ಬರೆಯಲು ವಿನಂತಿಸಿಕೊಂಡಾಗ ಬರೆದು ಉಪಕರಿಸಿದ್ದಾರೆ. ಅವರಿಗೆಲ್ಲ ಋಣಿಯಾಗಿದ್ದೇನೆ.

ನಿಕಟವಾದ ಕನ್ನಡೇತರ ಸಂಗೀತ ಸ್ನೇಹಿತರು ಆತನಿಗೆ ಹಲವರು ಇದ್ದರು. ಅವರಲ್ಲಿ ಕೆಲವರ ಮರಾಠಿ, ಕೊಂಕಣಿ ಮತ್ತು ಇಂಗ್ಲಿಷ್ ಲೇಖಗಳ ಅನುವಾದವನ್ನು ಇಲ್ಲಿ ಸೇರಿಸಲಾಗಿದೆ. 'ಲೋಕಸತ್ತಾ' ಮಹಾರಾಷ್ಟ್ರದ ಜನಪ್ರಿಯ ದೈನಿಕ. ಅದರ ಲೇಖನವೊಂದರಲ್ಲಿ ವಿಲಾಸ್ ಗೋಡಬೋಲೆ ಅವರು, ಮುಂಬೈ ದಾದರ್ ಪ್ರದೇಶದಲ್ಲಿ 1993ರ ಬಾಂಬ್ ದಾಳಿಯಲ್ಲಿ ಛಿದ್ರವಾದ ಸಾಂಸ್ಕೃತಿಕ ಸಾಮೂಹಿಕ ಜೀವನದ ಮುಖ್ಯಭಾಗವಾಗಿದ್ದ ಸಂಗೀತ ಸಭೆಗಳನ್ನು ಪುನಶ್ಚೇತನಗೊಳಿಸಿದವನು ಓರ್ವ ಕನ್ನಡ ಸದ್ಗೃಹಸ್ಥನೆಂದು ಪ್ರಕಾಶನನ್ನು ಮನದುಂಬಿ ಮರಾಠಿಯಲ್ಲಿ ಸ್ಮರಿಸಿಕೊಂಡಿದ್ದಾರೆ. ಪ್ರಕಾಶನ ಸಂಗೀತ ಪ್ರೇಮ, ಸಹಜ ವಿನೋದ, ಮುಂಬೈಯ ಹಲವಾರು ಸಂಸ್ಥೆಗಳ ಸ್ಥಾಪನೆ, ಸಂಘಟನೆ, ಚಟುವಟಿಕೆಗಳಿಗೆ ಕಾರಣವಾದ ಬಗೆಯನ್ನು ಸುಶ್ರೀ ಸುಮೇಧಾ ಮಾತ್ರೆ ರಾಯ್ಕರ, ಮುಂತಾದವರು ಜ್ಞಾಪಿಸಿಕೊಂಡಿದ್ದಾರೆ. ಆತ ಕರ್ನಾಟಕದ ಕಲಾವಿದರಬಗ್ಗೆ ವಿಶೇಷ ಅಕ್ಕರೆಯನ್ನು ತಾಳಿದ್ದ ಹಲವಾರು ದೃಷ್ಟಾಂತಗಳನ್ನು ಡಾ. ನಿಂಜೂರರು ಹೇಳಿರುವುದೇ ಅಲ್ಲದೆ, ಇಲ್ಲಿಯೂ ಕೆಲವನ್ನು ಉಲ್ಲೇಖಿಸಿದ್ದಾರೆ. ಆತನ ಸರಳ ಸ್ನೇಹ ಸ್ವಭಾವ, ಸಹಜ ವಿನೋದ, ಸುಲಭವಾಗಿ ಜನರೊಡನೆ ಬೆರೆತುಹೋಗುವ ಪ್ರವೃತ್ತಿಗಳಿಂದಾಗಿ ಪ್ರದೇಶ-ಭೇದವಿಲ್ಲದೇ ಸಂಗೀತ-ಪ್ರಿಯರೊಂದಿಗೆ ಬಲುಬೇಗ ಒಂದಾಗುತ್ತಿದ್ದ. ಆತನ ನೆನಪಿಗೆ ಆಯೋಜಿಸಲ್ಪಟ್ಟ 'ಸ್ವರ್-ಪ್ರಕಾಶ್'ದ ವರದಿಯನ್ನು

ಕೊಡಮಾಡಿದ ಟೈಮ್ಸ್ ಆಫ್ ಇಂಡಿಯಾ'ದ ವಿಠ್ಠಲ್ ನಾಡಕರ್ಣಿ, ಆತನ ಕೊನೆಯ ಒಂದು ಸಾಹಿತ್ಯ-ಸಂಗೀತದ ಕಳಕಳಿಯ ಪ್ರಸಂಗವನ್ನು ಉಲ್ಲೇಖಿಸಿದ್ದಾರೆ.

ಸಂಗೀತ ಪ್ರಪಂಚದ ಯಾವ 'ಕೋಟರಿ'ಗೂ ಸೇರಿಕೊಳ್ಳದೆ, ಆಯಾ ಘರಾಣಾದ ಉತ್ತಮಾಂಶಗಳನ್ನಷ್ಟೇ ಗ್ರಹಿಸಿ ಸಂಬಂಧಿತ ಹಾಡುಗಾರರ ವೈಶಿಷ್ಟ್ಯವನ್ನು ತಾನು □ಂಕರ್ ಮಾಡುತ್ತಿದ್ದ ಕಾರ್ಯಕ್ರಮಗಳಲ್ಲಿ ಪ್ರಕಾಶ ಎತ್ತಿ ತೋರಿಸುತ್ತಿದ್ದ. ಹೀಗಾಗಿ, 'ಬುರ್ಡೆ ಸಾಬ್' ತಮ್ಮ ಘರಾಣಾದ ಅಭಿಮಾನಿಯೆಂದು ಪ್ರತಿಯೊಬ್ಬ ಕಲಾವಿದರು ನಂಬುವುದು ಸಹಜವಾಗಿತ್ತು. 'ಕಲಾಭಾರತಿ' ಸ್ಥಾಪನೆಗೆ ಕಾರಣನಾದ ಬಳಿಕ ಪ್ರಾದೇಶಿಕ ಭೇದಭಾವವಿಲ್ಲದೇ ಉತ್ತಮ ಕಲಾಕಾರರೊಂದಿಗೆ, ನಿರ್ಲಕ್ಷಿತ, ಉದಯೋನ್ಮುಖರಿಗೂ ಅವಕಾಶಗಳನ್ನು ಮಾಡಿಕೊಟ್ಟ. 'ಎಂಥಾ ಗುಣಗ್ರಾಹಿ ಇದ್ದಾರೆ, ನಿಮ್ಮ ಸೋದರ!" ಎಂದು ಆಗ್ರಾ ಘರಾಣೆಯ ಸುಪ್ರಸಿದ್ಧ ಗುರು-ಗಾಯಕ ರಾಮರಾವ್ ನಾಯಕರು ನನ್ನ ಬಳಿ ಉದ್ಗರಿಸಿದ್ದುಂಟು.

ಪ್ರಕಾಶನು ಒಳ್ಳೆಯ ಸಂಘಟಕನಾಗಿದ್ದಂತೆ, ಯಾವುದೇ ಕಾರ್ಯ ನಿರ್ವಹಣೆಯ ಹಂತದಲ್ಲಿ ಎಂಥ ತೊಂದರೆ ಬಂದರೂ ಹಿಂಜರಿಯುತ್ತಿರಲಿಲ್ಲ. ಕೊನೆಯ ಗಳಿಗೆಯಲ್ಲಿ ತಾನೇ ಕಾರ್ಯಕ್ರಮವನ್ನು ಪ್ರಸ್ತುತಪಡಿಸಬೇಕಾಗಿ ಬಂದ ಸಂದರ್ಭದಲ್ಲಿಯೂ ಒಂದು ಚೂರು ಕಾಗದವನ್ನೂ ಎದುರಿಗೆ ಇಟ್ಟುಕೊಳ್ಳದೇ, ಹಾಡುಗಾರರನ್ನು ಪರಿಚಯಿಸುತ್ತಾ, ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ, ಅವರ ಹಾಡುಗಾರಿಕೆಯ ಉತ್ತಮಾಂಶಗಳನ್ನು ಎತ್ತಿ ಹಿಡಿಯುತ್ತಿದ್ದ, ಹಾಡುವವರನ್ನು ಮತ್ತು ಕೇಳುಗರನ್ನು ಕೂಡಿಯೇ ರಂಜಿಸುತ್ತಿದ್ದ.

ಸಂಗೀತವಿನ್ಯಾಸಗಳೇ ಮುಖ್ಯ ವಸ್ತುವಾಗಿದ್ದ ಈ ಕೃತಿಗೆ ಸಾಹಿತ್ಯ-ಸಂಗೀತಾಧ್ಯಯನಗಳ ಹಿನ್ನೆಲೆಯುಳ್ಳವರ ನೆರವಿನ ಅಗತ್ಯವಿತ್ತು. ನಾವಿಬ್ಬರೂ ಸೋದರಿಯರು (ಸುಷಮಾ ಮತ್ತು ನಾನು) ಇದರ ಕೊರತೆಯನ್ನು ಅನುಭವಿಸುತ್ತಿದ್ದಾಗ ನೆರವಿಗೆ ಬಂದವರು ಆತ್ಮೀಯರಾದ ಶ್ರೀ ವಿ. ಕೃಷ್ಣ ಅವರು. ಕರ್ನಾಟಕ ಸಾಹಿತ್ಯ ಪರಿಷತ್ತು ಹೊರತಂದಿರುವ ಕೃಷ್ಣ ಅವರ ಮೂರು ಸಂಪುಟಗಳ ಕನ್ನಡ-ಇಂಗ್ಲಿಷ್ ನಿಘಂಟು (2015) ಒಂದು ಅತ್ಯಾಧುನಿಕವಾದ ಮತ್ತು ಉತ್ತಮವಾದ ನಿಘಂಟಾಗಿದೆ ಮತ್ತು ಅವರ 35 ವರ್ಷಗಳ ಶ್ರಮದ ಪ್ರತೀಕವಾಗಿದೆ. ಅಲ್ಲದೆ, ಮುಖ್ಯವಾಗಿ ವಿದ್ವಾನ್ ಆರ್.ಆರ್. ಕೇಶವಮೂರ್ತಿಗಳ ಬಳಿಯ 7 ವರ್ಷಗಳ ಅವರ ಶಾಸ್ತ್ರೀಯ ಸಂಗೀತದ ತರಬೇತಿ ಮತ್ತು ಅಧ್ಯಯನಗಳ ಹಿನ್ನೆಲೆಯಿಂದಾಗಿ ಈ ಲೇಖನಗಳ ಅನೇಕ ಓರೆಕೋರೆಗಳನ್ನು ತಿದ್ದಲು ಆದ ಸಹಾಯ ಅಷ್ಟಿಷ್ಟಲ್ಲ. ಅವರ ಋಣಭಾರ ಹೆಚ್ಚಿನದು.

ದೂರದ ಪಂಜಾಬ್, ಉತ್ತರಪ್ರದೇಶ, ಬಂಗಾಲ ಮುಂತಾದ ಪ್ರದೇಶಗಳಿಂದ ಬಯಲಿಗೆ ಇಳಿಯುತ್ತ, ವಿಂಧ್ಯಪ್ರದೇಶವನ್ನು ದಾಟಿ, ಕರ್ನಾಟಕ ಸಂಗೀತ ಪ್ರಚಲಿತವಿದ್ದ ನಾಡುಗಳಲ್ಲಿ ಬಂದು ಬೇರುಬಿಟ್ಟ ಹಿಂದುಸ್ತಾನಿ ಸಂಗೀತದ ಘರಾನಾ(ಣೆ)ಗಳ ಕತೆ ರೋಚಕವಾಗಿದೆ. ನಕಾಶೆಯ ಮೂಲಕ ಈ ಔತ್ತರೇಯ ಸಂಗೀತದ ದಾಕ್ಷಿಣಾತ್ಯ ಪ್ರವಾಸದ ಮತ್ತು ಅದು ನೆಲೆನಿಂತ ನಿಲ್ದಾಣಗಳನ್ನು ತೋರಿಸಲಾಗಿದೆ.

ಕರ್ನಾಟಕದಿಂದ ದೂರವಿದ್ದರೂ, ಕನ್ನಡ ಸಾಹಿತ್ಯದೊಂದಿಗೆ ಸಂಗೀತವನ್ನೂ ಅಪಾರವಾಗಿ ಪ್ರೀತಿಸಿದ, ಹತ್ತು ಹಲವು ಬಗೆಯಲ್ಲಿ ಅದನ್ನು ಹಂಚಿಕೊಳ್ಳಲೆತ್ನಿಸಿದ ಕಲಾಪ್ರೇಮಿಯೋರ್ವನ ಸಂಗೀತವನ್ನು ಕುರಿತಾದ ವೈಯಕ್ತಿಕ ಅನಿಸಿಕೆಗಳಿಗೆ ಪ್ರಾಧಾನ್ಯವನ್ನು ನೀಡಿದ ಕೃತಿ ಇದಾಗಿದೆ. ಸಂಗೀತಾನುಭವವನ್ನು ಅದನ್ನು ಹಾಡದೇ, ನುಡಿಸದೆಯೂ ಇತರರೊಂದಿಗೆ ಹಂಚಿಕೊಳ್ಳಲು ಸಾಧ್ಯವೆಂಬುದನ್ನು ಪ್ರಕಾಶನು ಬದುಕಿನಲ್ಲಿ ತೋರಿಸಿಕೊಟ್ಟ. ಆ ಅನುಭವಗಳನ್ನು ಓದುಗರ ಮುಂದೆ ಇಡುತ್ತಿದ್ದೇವೆ.

ಪೂರ್ವಗ್ರಹಗಳಿಲ್ಲದ ನುರಿತ ಸಂಗೀತಜ್ಞರಿಗೆ ಮಾತ್ರ ಸಾಧ್ಯವಿರುವ ರಾಗಜ್ಞಾನ, ಗಾಯಕ-ವಾದಕರ ಕಲ್ಪನಾವಿಲಾಸ, ನಾದರಮ್ಯತೆ, ಕಠಿಣ ಇಲ್ಲವೆ ಸಾಮಾನ್ಯ ಇಲ್ಲವೇ ಎರವಲು ಸಾಧನೆಯ ಸೀಮಿತತೆ, ಹರಹುಗಳು, ಪಾಂಡಿತ್ಯ ಇಲ್ಲವೆ ಸ್ವಂತಿಕೆಯ ವಿವಿಧ ಹಂತಗಳನ್ನು ಥಟ್ಟನೆ ಗುರುತಿಸುವ ಜಾಣ್ಮೆಯನ್ನು ಪ್ರಕಾಶನು ದೀರ್ಘಕಾಲದ ಶ್ರವಣವೊಂದರಿಂದಲೇ ಸಾಧಿಸಿಕೊಂಡಿದ್ದ. ಆತನ ಸಂಗೀತಜ್ಞಾನದ ಹೊಳಹುಗಳು ಅಲ್ಲಲ್ಲಿ ಎದ್ದುಕಾಣುತ್ತವೆ. ಅವನ್ನೆಲ್ಲ ಸಮಾನ ಸಂಗೀತಾಸಕ್ತರರ ಜೊತೆಗೆ ಚರ್ಚಿಸುತ್ತಾ ತನ್ನದೇ ವಿಧದಲ್ಲಿ 'ಸಂಗೀತಶಾಸ್ತ್ರವಿನೋದಿ'ಯಾಗಿ ಕಾಲಕಳೆದ. ತನ್ನ ಅನುಭವಗಳನ್ನು ಶಬ್ದರೂಪದಲ್ಲಿ ಇಳಿಸುವತ್ತ ಆತ ಕೊಂಚ ಗಮನವನ್ನು ಹರಿಸಿದ್ದಿದ್ದರೆ, ಕನ್ನಡದ ಖ್ಯಾತ ಸಂಗೀತ ವಿಶ್ಲೇಷಕನಾಗುತ್ತಿದ್ದ, ಆದರೆ ಅದು ಸಾಧ್ಯವಾಗಲಿಲ್ಲವಲ್ಲ ಎಂಬ ಕೊರಗು ಕಾಡುತ್ತಿದೆ. ಕೊನೆಯ ವರ್ಷಗಳಲ್ಲಾದರೂ ಇತರರ ಆಗ್ರಹದಿಂದ ಬರೆಯುವಂತಾದನಲ್ಲ ಎಂಬುದನ್ನು ಗಮನಿಸಿ ಆತನ ಅಭಿಪ್ರಾಯಗಳೆಲ್ಲ ಅರ್ಥ ಆಗುವಂತೆ ಅವನ ಬರಹದಲ್ಲಿನ ಕನ್ನಡ ಭಾಷೆಯನ್ನು ತಿದ್ದುಪಡಿಮಾಡಿ, ವಿಷಯವನ್ನು ಹೊಂದಿಸಲು ಪ್ರಯತ್ನಿಸಲಾಗಿದೆ. ಸಂಗೀತ ಪ್ರಪಂಚದ, ಅದರಲ್ಲಿಯೂ ಹಿಂದುಸ್ತಾನಿ ಸಂಗೀತದ ಹತ್ತಾರು ಅಪರೂಪದ ಆಯಾಮಗಳನ್ನು ಪರಿಚಯಿಸುವ **'ಸಂಗೀತ-ಸರಸಿ'** ಕನ್ನಡದಲ್ಲಿ ವಿಶಿಷ್ಟ ಗ್ರಂಥವಾಗಬಹುದೆಂಬ ನಂಬಿಕೆಯಿದೆ.

2.10.2016

ಜ್ಯೋತ್ಸ್ನಾ ಕಾಮತ್
ಸುಷಮಾ ಆರೂರ್

ಪ್ರಕಾಶಕರ ಮಾತು

ಸಂಗೀತ ಸರಸಿ ಇದೊಂದು ವಿಶಿಷ್ಟ ಕೃತಿ. ಇತ್ತೀಚೆಗಷ್ಟೇ ನಮ್ಮನ್ನಗಲಿದ ಸಂಗೀತದ ಆರಾಧಕ, ಸಂಗೀತ ವಿಮರ್ಶಕ, ಅದ್ಭುತ ಸಂಘಟಕ ಮರಾಠಿಗರ ನಡುವೆ ನೆಲೆನಿಂತು ಕನ್ನಡದ ಕಂಪನ್ನು ಮಹಾರಾಷ್ಟ್ರದಾದ್ಯಂತ ಪ್ರಸರಿಸಿದ ಪ್ರಕಾಶ್ ಬುರ್ಡೆ ಅವರನ್ನು ಕುರಿತ ಆತ್ಮೀಯ ನುಡಿನಮನ ಈ ಕೃತಿಯಲ್ಲಿದೆ. ಆ ಮೂಲಕ ಪ್ರಕಾಶ್ ಬುರ್ಡೆಯವರಂತಹ ಮಹಾನ್ ಚೇತನದ ಜೀವನ ವಿವರಗಳು ತೆರೆದುಕೊಳ್ಳುತ್ತವೆ.

ಕನ್ನಡ, ಮರಾಠಿ, ಗುಜರಾತಿ, ಬೆಂಗಾಲಿ ಮುಂತಾದ ಭಾರತೀಯ ರಂಗಭೂಮಿ, ರಂಗಗೀತೆಗಳನ್ನು ಕುರಿತ ಬರೆಹದ ಮೂಲಕ ಬುರ್ಡೆ ಅವರ ರಂಗಾನುಭವದ ದರ್ಶನವಾಗುತ್ತದೆ. ಸಂಗೀತ ಸಾಮ್ರಾಜ್ಞಿಯರಾದ ಆಗ್ರೇವಾಲಿ ಜೋಹರಾಬಾಯಿ ಪುಣೆಯ ಸುಂದ್ರಾಬಾಯಿ ಜಾಧವ, 'ಛಪ್ಪನ್ ಚುರೀ ಜಾನಕೀಬಾಯಿ', ಜದ್ದನ್ ಬಾಯಿ, ಸುರಶ್ರೀ ದಶಸಹಸ್ರೇಷು, ರಸೂಲನಬಾಯಿ, ಮೊಗೂಬಾಯಿ ಕುರ್ಡಿಕರ, ಸಿದ್ಧೇಶ್ವರೀ ದೇವಿ, ಗೌಹರ ಮಾಮಾಜಿವಾಲಾ, "ಯಾದೇ ಬೇಗಮ್ ಅಖ್ತರಕೀ", ಸರದಾರ್ ಅಖ್ತರ್, ಅಂಜನೀಬಾಯಿ ಮಾಲಪೇಕರ ಕಂಠಶ್ರೀಯ ವಿವಿಧ ಮಜಲುಗಳ ವಿವರಗಳನ್ನು ಕಟ್ಟಿಕೊಟ್ಟಿದ್ದಾರೆ.

ಅಪರೂಪದಲ್ಲಿ ಅಪರೂಪವೆನಿಸುವ ಅನೇಕ ಧ್ವನಿಸುರುಳಿಗಳ ಬಗ್ಗೆ ಬುರ್ಡೆ ಬರೆಹಗಳು ಗಮನ ಸೆಳೆಯುತ್ತವೆ. ಸಂಗೀತ ಹಾಗೂ ಹಲವು ರಾಗಗಳ ಹುಟ್ಟು ಬೆಳವಣಿಗೆ, ಗಾಯಕ–ಗಾಯಕಿಯರ ಕುರಿತ ವಿಭಿನ್ನ ಬರೆಹಗಳು ಈ ಗ್ರಂಥದಲ್ಲಿ ಅಡಕಗೊಂಡಿವೆ. ಆ ಮೂಲಕ ಪ್ರಕಾಶ ಬುರ್ಡೆ ಅವರ ಸಂಗೀತದ ಜ್ಞಾನದ ವಿರಾಟ್ ದರ್ಶನವಾಗುತ್ತದೆ.

ಇದೆಲ್ಲವನ್ನೂ ಆಗುಮಾಡಿದವರು ಪ್ರಕಾಶ್ ಬುರ್ಡೆ ಅವರ ಸಹೋದರಿದ್ವಯರಾದ ಡಾ. ಜ್ಯಾತ್ಸ್ನಾ ಕೃಷ್ಣಾನಂದ ಕಾಮತ್ ಮತ್ತು ಡಾ. ಸುಷಮಾ ಅಶೋಕ್ ಅರೂರ್ ಅವರು. ಅತ್ಯಂತ ಜಾಗರೂಕತೆ, ಅಪಾರ ಶ್ರದ್ಧೆ, ಅಪರಿಮಿತ ತಾಳ್ಮೆಯಿಂದ ಪ್ರಕಾಶ್ ಬುರ್ಡೆ ಅವರಿಗೆ ಸಂಬಂಧಿಸಿದ, ಅವರ ಸಾಧನೆಯ ಎಲ್ಲ ದಾಖಲೆಗಳನ್ನು ಕಲೆಹಾಕಿ ಅದನ್ನು ಒಪ್ಪವಾಗಿ ಜೋಡಿಸಿಕೊಟ್ಟಿದ್ದಾರೆ. ಈ ಗ್ರಂಥ ಹೊರಬರುವಲ್ಲಿ ಯಾವತ್ತೂ ಎಲೆಮರೆಯ ಕಾಯಿಯಂತೆ ಇದ್ದು ಕನ್ನಡದ ಸಾಕ್ಷಿಪ್ರಜ್ಞೆಯಾಗಿರುವ, ಅನುವಾದಕರು, ನಿಘಂಟು ತಜ್ಞರೂ, ಇತಿಹಾಸ ಸಂಶೋಧಕರೂ, ಕನ್ನಡ ಸಾರಸ್ವತಲೋಕಕ್ಕೆ ಹಲವು ವಿಧದಲ್ಲಿ ಕೊಡುಗೆ ನೀಡುತ್ತಿರುವ ವಿ. ಕೃಷ್ಣ ಅವರ ಪ್ರಾಮಾಣಿಕವಾದ ಮತ್ತು ನಿರೀಕ್ಷೆಗಳಿಲ್ಲದ ಶ್ರಮ ಇಲ್ಲಿದೆ. ಅವರೆಲ್ಲರೂ ಕೂಡಿ ಪ್ರಕಾಶನದ ಹೊಣೆ ನನಗೆ ನೀಡಿದ್ದಕ್ಕೆ ನಾನು ಆಭಾರಿಯಾಗಿರುವೆ.

ಎಂ. ಬೈರೇಗೌಡ

ಪರಿವಿಡಿ

ಅಧ್ಯಾಯ 1– ನುಡಿನಮನ 1–60

1. ಪ್ರಕಾಶ್ ಬುರ್ಡೆ ಕೆಲವು ನೆನಪುಗಳು **–ಎಸ್.ಎಲ್. ಭೈರಪ್ಪ / 1**
2. ಸ್ವರದ ಮರೆಗೆ **–ರಹಮತ್ ತರೀಕೆರೆ / 5**
3. ಅಗಲಿದ ಆಪ್ತಮಿತ್ರ **–ಡಾ. ವ್ಯಾಸರಾವ್ ನಿಂಜೂರ್** / 9
4. ವೈಯಕ್ತಿಕ ನೆನಪುಗಳಲ್ಲಿ **–ವೆಂಕಟರಾಜ್ ರಾವ್ / 19**
5. ಕಲಾಪ್ರೇಮಿ **–ಕೆ. ಚಂದ್ರಮೌಳಿ** / 23
6. ಸ್ವರಯಾಜ್ಞಿಕ **–ವಿಲಾಸ ಗೋಡಬೋಲೆ / 28**
7. ಅಂತಃಕರಣಕ್ಕೆ ಇನ್ನೊಂದು ಹೆಸರು **–ಡಾ. ಸುನೀತಾ ಶೆಟ್ಟಿ / 33**
8. ಸ್ವರಪ್ರಕಾಶ್ – ಒಂದು ವರದಿ **–ವಿಠ್ಠಲ್ ಪಿ. ನಾಡಕರ್ಣಿ** / 37
9. ಕಣ್ಮರೆಯಾದರೂ ಹೃದಯಾಂತರಾಳದಲ್ಲಿ ನೆಲೆನಿಂತವರು **–ಸುಮೇಧಾ ರಾಯ್ಕರ್ ಮ್ಹಾತ್ರೆ** / 42
10. ಕನ್ನಡ ಮರಾಠಿ ಸಾಂಸ್ಕೃತಿಕ ಪ್ರತಿನಿಧಿ **–ಶ್ರೀನಿವಾಸ ಜೋಕಟ್ಟೆ / 45**
11. ಒಂದು ನುಡಿನಮನ **– ಆನಂದ ಪಿಳಗಾಂವಕರ** / 48
12 ನಿಮ್ಮಲ್ಲೇ ಇದ್ದು ಹೋಗ್ತೀನಿ **–ಬಿ.ಎ. ಸನದಿ / 50**
13. ಸೀಮಾತೀತ ಸಂಗೀತಯಾತ್ರಿಕ ದಾದಾ **–ಡಾ. ಸುಷಮಾ ಆರೂರ್** / 52
14. ಪೂರ್ವಸೂರಿಗಳೊಡನೆ ಸ್ವರಸಂಧಾನ **–ಡಾ ಸುರೇಶ ಚಾಂದವಣಕರ್** / 57

ಅಧ್ಯಾಯ 2– ರಂಗಭೂಮಿ – ರಂಗಗೀತೆಗಳು 61–95

1. ಕನ್ನಡ ವೃತ್ತಿರಂಗ ನಮನ / 61
2. ಮರಾಠಿ ನಾಟ್ಯ ಸಂಸ್ಕೃತಿ ಸೌಭದ್ರದವರೆಗೆ (1885) / 65
3. ಗುಜರಾತಿ ರಂಗಭೂಮಿಯ ಮಾಸ್ಟರ್. ಅಶ್ರಫ್‌ಖಾನ್ (1880–1961) / 69
4. ವಂಗ ರಂಗಗೀತೆಗಳು / 71
5. ಮುಂಬಯಿಯ ರಂಗಭೂಮಿ-ಜಮಶೇಡಜಿ ಫ್ರಾಮಜಿ ಮಾದನ್ (1857–1923) / 73

6. ಅಮೀರಬಾಯಿ ಕರ್ನಾಟಕಿ (1906–1965) / 74

7. ನಟಶೇಖರ ಗಾನಕಲಾಕೋವಿದ ಬಸವರಾಜ ಮನ್ಸೂರ / 80

8. ಗೋಹರಬಾಯಿ ಕರ್ನಾಟಕಿ (1910–1963) / 84

9. ಕನ್ನಡ ಮರಾಠಿ ರಂಗಗೀತೆಗಳ ಬಾದಶಾಹ–ಪಂ. ಶಿವಾನಂದ ಪಾಟೀಲ (1961–2011) / 89

10. ದತ್ತಾತ್ರೇಯ ಗರುಡ / 93

ಅಧ್ಯಾಯ 3– ಸಂಗೀತ ಸಾಮ್ರಾಜ್ಞಿಯರು 96 – 154

1. ಪ್ರಸ್ತಾವನೆ / 96

2. ಆಗ್ರೇವಾಲಿ ಜೋಹರಾಬಾಯಿ (1868–1913) / 99

3. ಪುಣೆಯ ಸುಂದ್ರಾಬಾಯಿ ಜಾಧವ **(ಕ್ರಿ.ಶ. ಅಂದಾಜು 1870– 1953) / 102**

4. ‘ಮೈನೇಮ್ ಈಸ್ ಜಾನಕೀಬಾಯಿ ಆಫ್ ಅಲಹಾಬಾದ್’ ಅಥವಾ ‘ಛಪ್ಪನ್ ಚೂರೀ ಜಾನಕೀಬಾಯಿ’(1880–1934) / 106

5. ಜದ್ದನ್ ಬಾಯಿ, ಸಿನೇಸ್ಟಾರ್ ನರ್ಗೀಸಳ ತಾಯಿ (1892–1949) / 110

6. ಸುರಶ್ರೀ ದಶಸಹಸ್ರೇಷು – ಕೇಸರಬಾಯಿ ಕೇರಕರ (1892–1977) / 113

7. ರಸೂಲನಬಾಯಿ (1902–1972) / 1119

8. ಮೊಗೂಬಾಯಿ ಕುರ್ಡಿಕರ (1904–2001) / 122

9. ಸಿದ್ಧೇಶ್ವರೀ ದೇವಿ (1907–1976) / 134

10. ಗೌಹರ ಮಾಮಾಜಿವಾಲಾ ಊರ್ಫ್ ಗ್ಲೋರಿಯಸ್ ಗೋಹರ್ (1910– 1984) / 138

11. “ಯಾದೇ ಬೇಗಮ್ ಅಖ್ತರಕೀ” (1914–1974) / 144

12. ಸರದಾರ್ ಅಖ್ತರ್ (1925–2004) / 148

13. ಅಂಜನೀಬಾಯಿ ಮಾಲಪೇಕರ –ಮುಂಬಯಿಯ ‘ವಸಂತಸೇನೆ’ (1883–1974) / 151

ಅಧ್ಯಾಯ 4– ಅಪರೂಪದ ಧ್ವನಿಮುದ್ರಿಕೆಗಳು 155–205

1. ಪ್ರಸ್ತಾವನೆ / 155

2. ಭೂಗಂಧರ್ವ ರಹಿಮತ್‌ಖಾನ ಹಡ್ಡು ಖಾನ (1860–1922) / 158

3. ಸಿತಾರರತ್ನ ರಹಮತ್‌ಖಾನ ಧಾರವಾಡಕರ್ (1863–1954) / 160

4. ಆಗ್ರೇವಾಲಿ ಮಲಕಾಜಾನ್ (1866–?) / 162

5. ನವಾಬರ ನವಾಬ 'ಪ್ಯಾರಾ ಸಾಹೇಬ್' (1870–1940) / 164
6. ಸಂಗೀತ ಪ್ರಚಾರಕ ಪಂ. ವಿಷ್ಣು ದಿಗಂಬರ ಪಲುಸ್ಕರ (1872–1931) / 166
7. ಮೌಜುದ್ದೀನ ಖಾನ್ (1875–1926) / 167
8. ಮೈ ನೇಮ್ ಈಸ್ ಗೋಹರಜಾನ ಆಫ್ ಕಲಕತ್ತಾ (1876–1930) / 170
9. ಗಾಯನಾಚಾರ್ಯ ರಾಮಕೃಷ್ಣ ನರಹರ ವಝೆ (1879–1945) / 172
10. ಸೂಫಿ ಪ್ರಣಾಲಿಯ ಗಾಯಕ ಇನಾಯತ್‌ಖಾನ್‌ಪಠಾಣ (1882–1927) / 174
11. ಬಹಿರೇ ಅಬ್ದುಲ್ ವಹೀದಖಾನ್ (1882–1948) / 176
12. ಸವಾಯಿ ಗಂಧರ್ವ (1886–1952) / 178
13. ಭೋಸಲೆ ಕುಲೋತ್ಪನ್ನ ಕೇಶವ (1890–1921) / 180
14. ಬಾಪೂರಾವ್ ಪೆಂಢಾರಕರ (1892–1937) / 182
15. ಸಂಗೀತ ಮಾರ್ತಂಡ ಓಂಕಾರನಾಥ್ ಠಾಕೂರ (1897–1967) / 184
16. ಪ್ರಿನ್ಸಿಪಾಲ್ ಬಾಪುರಾವ್ ಕೇತಕರ (1898–1954) / 186
17. 'ವ್ಯಾಸಪರ್ವ'ದ ಪ್ರೊ. ಶಂಕರರಾವ್ ವ್ಯಾಸ್(1898–1956) / 188
18. ಸಂಗೀತಕಳಾನಿಧಿ ಮಾಸ್ತರ್ ಕೃಷ್ಣರಾವ್ ಫುಲಂಬ್ರಿಕರ್ –(1898–1974) / 190
19. ಪಂ. ವಿನಾಯಕ ಬುವಾ ಪಟವರ್ಧನ (1898–1975) / 192
20. ಮಾಸ್ತರ್ ದೀನಾನಾಥ ಮಂಗೇಶ್ಕರ್ (1900–1942) / 194
21. ಪ್ರೊ. ನಾರಾಯಣ್ ರಾವ್ ವ್ಯಾಸ (1901–1984) / 196
22. ಪ್ರೊ. ಬಾಳಕೃಷ್ಣ ರಘುನಾಥ ದೇವಧರ್ (1901–90) / 198
23. ಸುರೇಶಬಾಬು ಮಾನೆ ಊರ್ಫ್ ಅಬ್ದುಲ್ ರೆಹಮಾನ್ (1902–1953) / 200
24. ಗಂಗೂಬಾಯಿ ಹಾನಗಲ್ 1913–2009 / 202
25. ಪಂ ಬಸವರಾಜ ರಾಜಗುರು (1920–1991) / 204

ಅಧ್ಯಾಯ 5– ರಾಗಗಳು 206 – 269

1. ಭೈರವದ ಪ್ರಕಾರಗಳು – 1 / 206
2. ಭೈರವದ ಪ್ರಕಾರಗಳು – 2 / 211
3. ರಾಗಗಳ ನೃಪತಿ, ಸ್ವರರಾಜ ಭೂಪ / 215

4. ರಾಗ ತೋಡಿ – 1 / 220
5. ರಾಗ ತೋಡಿ – 2 / 226
6. ಬಜೆ ಸರಗಮ್ ಯಹ್ ದೇಸ್ ರಾಗಮ್ / 231
7. ತಿನಕ ತಿನ ಧಾನಿ, ಈ ರಾಗ ಮುಲ್ತಾನಿ / 236
8. ಬಸಂತ್ ಕೀ ಬಹಾರ ಆಯೀ / 241
9. ಬಿಹಾಗ್‌ದ ವಿಹಂಗಮ ನೋಟ / 246
10. ಶ್ರೀರಾಗ; ಹಿಂದೆಯೂ ಶ್ರೀ ಮುಂದೆಯೂ ಶ್ರೀ / 250
11. ಪಹಾಡಿ – 'ಪರಬತಸೇ ನಿಕಲೀ' ಸಂಗೀತ / 255
12. ಖಾಸ್ ರಾಗ ಮತ್ತು ಆಮ್ ರಾಗಗಳು / 258
13. ಈ ಮನವೋ, ಆ ಮನವೋ ಅಥವಾ ಯಮನವೋ! / 262
14. ಯಮನ್ –ಸುಗಮ ಮತ್ತು ಚಲನಚಿತ್ರ ಸಂಗೀತದಲ್ಲಿ 2 / 266

ಅಧ್ಯಾಯ 6

ಸಂಗೀತವನ್ನು ಕುರಿತು 269 – 385

1. ತಾನಸೇನನಿಂದ ಭೀಮಸೇನನವರೆಗೆ ಉತ್ತರಾದಿ ಸಂಗೀತ ನಡೆದುಬಂದ ಹಾದಿ / 269
2. ಡಾ. ಭೈರಪ್ಪ ಹಾಗೂ ಅವರ 'ಮಂದ್ರ' / 283
3. ಆ ಅವಿಸ್ಮರಣೀಯ ಮೆಹಫಿಲಗಳು / 293
4. ಭಾರತೀಯ ಸಂಗೀತಕ್ಕೆ ಪಾಶ್ಚಿಮಾತ್ಯರ ಕೊಡುಗೆ / 300
5. ಭಾರತೀಯ ಸಂಗೀತದಲ್ಲಿಯ ಏಕಾತ್ಮತೆ / 304
6. ಹಿಂದುಸ್ಥಾನಿ ಸಂಗೀತದಲ್ಲಿಯ ಹೆಣ್ಣುಧ್ವನಿಯ ಪುರುಷಗಾಯಕರು / 309
7. ಹಿಂದುಸ್ತಾನಿ ಸಂಗೀತದಲ್ಲಿ ಗಝಲ್ ಪ್ರಕಾರ / 311
8. ಕಲಾಸಕ್ತ ಕಮಿಶನರ್ ಮಧುಕರ ವಾಮನದೇಸಾಯಿ (1918–1975) / 314
9. ಠುಮಕ, ಠುಮಕ ಚಲನೇವಾಲಿ ಠುಮರಿ / 318
10. ಸಂಗೀತ ಕ್ಷೇತ್ರದ ಹೊಸ ಹತ್ತು ಮೆಟ್ಟಿಲುಗಳು / 322
11. ಸಂಗೀತದೊಳಗಿನ ಹಾವಭಾವಗಳು / 327
12. ಸರಸ್ವತಿದೇವಿಯ ಮುಸಲ್ಮಾನ ಉಪಾಸಕರು / 331
13. ಸಂಗೀತೋಪಚಾರ / 335
14. 'ಸಿಂಗಿಂಗ್' ಸಿಂಗ್ ಬಂಧುಗಳ ವೃತ್ತಾಂತ / 337

15. ಸ್ವರ ಅಪಸ್ವರ / 344
16. ಇದು ಸಿತಾರವೋ ಇಂಡಿಯನ್ ಗಿಟಾರವೋ? / 349
17. ಹಿಂದೂಸ್ತಾನಿ ಸಂಗೀತ ಮತ್ತು ಸೂಫಿ ಪ್ರಣಾಲಿ / 351
18. ಹಿಂದುಸ್ತಾನಿ ಅಥವಾ ಉತ್ತರಾದಿ ಸಂಗೀತಕ್ಕೆ ಧಾರವಾಡ ಜಿಲ್ಲೆಯ ಕೊಡುಗೆ / 359
19. ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಪ್ರಚಾರ ಮತ್ತು ಪ್ರಸಾರದಲ್ಲಿ ಕರಾವಳಿಯ ಕೊಡುಗೆ / 367
20. ಕರ್ನಾಟಕದ ಹಿಂದುಸ್ತಾನಿ ಸಂಗೀತದ ವಾಗ್ಗೇಯಕಾರರು / 372
21. ಹಿಂದುಸ್ತಾನಿ ಖಯಾಲ್‌ದಲ್ಲಿಯ ಸಾಹಿತ್ಯ / 375
22. ಕಬೀರ, ಕುಮಾರ ಮತ್ತು ಕಲಾಭಾರತಿ / 381

ಅಧ್ಯಾಯ 7

ಗಾಯಕರು ಮತ್ತು ಗಾಯಕಿಯರು 385–510

1. ಉಸ್ತಾದ ಅಲ್ಲಾಉದ್ದಿನ ಖಾನ್ ಮತ್ತು ಮೈಹರ ಘರಾನಾ (1862–1972) / 385
2. ಪಂಚಾಕ್ಷರಿ ಗವಯಿಗಳು (1892–1944) / 389
3. ಲಕ್ಷ್ಮೀಬಾಯಿ ಜಾಧವ್–ಕೊಲ್ಹಾಪುರದ ರಾಜಗಾಯಕಿ (1878–1960) / 392
4. ಬಡೇ ಗುಲಾಮ್ ಅಲಿಖಾನ್ 1902–1968 / 396
5. ಪಂ. ಮಲ್ಲಿಕಾರ್ಜುನ ಮನ್ಸೂರ – ಹಿಂದುಸ್ಥಾನ ಸಂಗೀತದ 'ಷಡ್ಜ' (1910–1992) / 400
6. ಗಂಗೂಬಾಯಿ ಹಾನಗಲ್–ಮುಸ್ಸಂಜೆ ಇನ್ನೂ ಬಂದಿಲ್ಲ / 412
7. ಗಾನ ಸರಸ್ವತಿ ಗಂಗೂಬಾಯಿ 1913–2009 / 417
8. ಪಂಡಿತ ಫಿರೋಜ್ ದಸ್ತೂರ ಇವರ ಸ್ಮರಣೆ (1919–2008) / 422
9. ಸುಶೀಲಾರಾಣಿ ಪಟೇಲ್ (1918–2014) / 425
10. ಖಯಾಲಿನಲ್ಲಿ ನಾಟ್ಯ ಸಂಗೀತ–ಪಂ. ವಸಂತರಾವ ದೇಶಪಾಂಡೆ (1920–1983) / 427
11. ಭಾರತರತ್ನ ಪಂ. ಭೀಮಸೇನ ಜೋಶಿಯವರ ಭ್ರಮಣಗಾಥೆ (1922–2011) / 435
12. ಪಂಡಿತ ದೇವೇಂದ್ರ ಮುರ್ಡೇಶ್ವರ (1923–2011) / 442

13. ಪಂಡಿತ ಕುಮಾರ ಗಂಧರ್ವ (1924–1992) / 446
14. ಶೋಭಾಗುರ್ಟು ಊರ್ಫ್ ಭಾನುಮತಿ ಶಿರೋಡ್ಕರ (1925–2004) / 458
15. ಗಾನಕೋಕಿಲೆ ಮಾಣಿಕ್ ವರ್ಮಾ (1926–1994) / 462
16. ನಿರ್ಮಲಾದೇವಿ (1927–1996) / 468
17. ಏಕಮೇವಾದ್ವಿತೀಯೆ ಅನ್ನಪೂರ್ಣಾದೇವಿ (1927–....) / 471
18. 'ಭಾಗ್ಯದ ಲಕ್ಷ್ಮೀ'ಯ ಜಯವಂತಿ ಹಿರೇಬೆಟ್ (1927–...) / 476
19. ಪಂ. ಜಿತೇಂದ್ರ ಅಭಿಷೇಕಿ (1930–1998) / 480
20. ಪಂ. ವಸಂತ ಕನಕಾಪುರ್ ಇನ್ನು ಕೇವಲ ನೆನಪು ಮಾತ್ರ (1933–2013) / 490
21. ಡಾ. ರಾಜಶೇಖರ ಮನ್ಸೂರವರ 'ಕರ್ನಾಟಕೀ ಕಶೀದಾ' / 492
22. ಪಂ. ಭೀಮಸೇನ ಜೋಶಿ –ಹೈದರಾಬಾದಿನಲ್ಲಿ–1989ರ ಕಚೇರಿ / 495
23. ಇಂದುಬಾಲ (1899–1984) ಮತ್ತು ಅಂಗೂರಬಾಲಾ (1896–1984) / 503
24. ತಾರಾಬಾಯಿ ಮಾನೆ (1879–1946) / 506

ಅಧ್ಯಾಯ 8 510 – 534

1. ವಿಸ್ಮೃತಿಯಲ್ಲಿ ಅಡಗಿದ ಕಿರಾನಾ ಪರಂಪರೆಯ ಗಾಯಕರು / 510
2. ವಿಸ್ಮೃತಿಯಲ್ಲಿ ಅಡಗಿದ ಕಿರಾನಾ ಪರಂಪರೆಯ ಗಾಯಕರು / 514
3. ಅಬ್ದುಲ್ ಲತೀಫ್, ಅಬ್ದುಲ್ ಹಕ್–ಖಾನ್ ಬಂಧುಗಳು / 519

ಪರಿಶಿಷ್ಟ 523–548

1. ಕಲಾಭಾರತಿಯ ಸುತ್ತಮುತ್ತ / 523
2. ಮಾನವಂದನಾ / 526
3. ಹಿಂದೂಸ್ಥಾನಿ ಸಂಗೀತ ನಡೆದು ಬಂದ ದಾರಿ / 532
4. ಲೇಖಕರ ಪರಿಚಯ / 533
5. ಚಿತ್ರ ಸಂಪುಟ / 535

ಅಧ್ಯಾಯ 1

ನುಡಿನಮನ

1.1

ಪ್ರಕಾಶ್ ಬುರ್ಡೆ – ಕೆಲವು ನೆನಪುಗಳು

– ಎಸ್.ಎಲ್. ಭೈರಪ್ಪ

ಆತ್ಮೀಯರು ಪೂರ್ಣಾಯುಷ್ಯವನ್ನು ಪೂರೈಸಿ ಸತ್ತರೆ ಅವರ ಸಾವನ್ನು ಒಪ್ಪಿಕೊಳ್ಳಲು ಮನಸ್ಸಿಗೆ ಹೆಚ್ಚು ಕಷ್ಟವಾಗುವುದಿಲ್ಲ. ಅಕಾಲಮರಣಕ್ಕೊಳಗಾದ ಆತ್ಮೀಯರ ಸಾವು ನಮ್ಮನ್ನು ಅಸಹಾಯಕರನ್ನಾಗಿಸುತ್ತದೆ. ಅವರನ್ನು ನೆನಸಿಕೊಳ್ಳುವುದನ್ನು ಬಿಟ್ಟು ಬೇರೇನೂ ಮಾಡಲಾರದ ಅಸಹಾಯಕತೆಯಿಂದ ತೊಳಲುತ್ತೇನೆ. ಅವರನ್ನು ಜ್ಞಾಪಿಸಿಕೊಂಡು ನಾಲ್ಕು ಸಾಲು ಬರೆದುಕೊಂಡರೆ ಸ್ವಲ್ಪವಾದರೂ ಶಮನವಾದೀತು. ನನ್ನ ಪುಸ್ತಕ "ಸಂದರ್ಭ: ಸಂವಾದ"ದಲ್ಲಿ ಬರೆದ ಎರಡು ಪುಟಗಳನ್ನು ಇಲ್ಲಿ ನೆನಸಿಕೊಳ್ಳುತ್ತೇನೆ.

"ಪ್ರಕಾಶ್ ಬುರ್ಡೆ ಮೂಲತಃ ಧಾರವಾಡದವರು. ಆಕಾಶವಾಣಿಯ ನಮ್ಮ ಜ್ಯೋತ್ಸ್ನಾ ಕಾಮತರ ತಮ್ಮ. ಮುಂಬಯಿಯಲ್ಲಿ ನೌಕರಿಮಾಡಿ ನೆಲೆಸಿದ್ದರೂ ಅವರ ಕನ್ನಡ ಮತ್ತು ಕರ್ನಾಟಕದ ಪ್ರೀತಿ ಅಸಾಧಾರಣವಾದದ್ದು. ಮುಂಬಯಿಯ ಯಾವ ಕನ್ನಡ ಕಾರ್ಯಕ್ರಮಕ್ಕೂ ತಪ್ಪದೆ ಹಾಜರಾಗುತ್ತಾರೆ ಮತ್ತು ಅವರು ಇಂದಿಗೂ ಕನ್ನಡ ಪುಸ್ತಕಗಳನ್ನು ಓದುವವರು. ಮೇಲಾಗಿ ಸಂಗೀತವೆಂದರೆ ನಿಜವಾದ ನಶೆ ಇರುವವರು. ಮುಂಬಯಿಯ ಸಂಗೀತ ಜೀವನವನ್ನು ಕುರಿತು ಒಂದು ಪುಸ್ತಕ ಬರೆಯುವಷ್ಟು ಅನುಭವ ಉಳ್ಳವರು. ಸಂಗೀತದ ಸಭೆಗಳು, ಅವು ಆರಂಭವಾದ ವರ್ಷಗಳು, ಒಂದೊಂದರ ವೈಶಿಷ್ಟ್ಯ, ಯಾವ ಯಾವ ವರ್ಷ ಯಾವ ಯಾವ ದೊಡ್ಡ ಗಾಯಕರು ಎಲ್ಲೆಲ್ಲಿ ಹಾಡಿದರು ಅಥವಾ ನುಡಿಸಿದರು ಎಂಬ ವಿವರಗಳನ್ನು ಸಖತ್ ಬಲ್ಲವರು. ಬಹಳ ವರ್ಷ ಇಂಗ್ಲಿಷ್ ಪತ್ರಿಕೆಗಳಿಗೆ ಸಂಗೀತದ ವಿಮರ್ಶೆ ಬರೆಯುತ್ತಿದ್ದವರು. ಅವರು ಮತ್ತು ಓಂಕಾರ ಗುಲ್ವಾಡಿ ಇಬ್ಬರೂ ಕೂಡಿ ನನಗೆ ಮುಂಬಯಿ ಸಂಗೀತ ಜೀವನದ ಅಧಿಕೃತ ಪರಿಚಯ ಮಾಡಿಸುವ ಒಂದು ವಾರದ ಟೈಂಟೇಬಲ್ ಹಾಕಿದರು. ಗುಲ್ವಾಡಿಗೆ ಆಗಾಗ್ಗೆ ತಬಲಾವಾದನದ ಕಾರ್ಯಕ್ರಮವಿದ್ದು ಅವರಿಗೆ ಬರಲಾಗುತ್ತಿರಲಿಲ್ಲ.

ಆದರೆ ಬುರ್ಡೆಯವರು ಬೆಳಗಿನಿಂದ ರಾತ್ರಿಯವರೆಗೆ ಒಂದೇ ಸಮನೆ ನನ್ನ ಜೊತೆಗಿದ್ದು ಎಲ್ಲ ಕಡೆಗೂ ಕರೆದೊಯ್ದು ಇಂಥಿಂಥ ಕಡೆಯೇ ಸಂಗೀತ ಕಾರ್ಯಕ್ರಮ ಸಂಗೀತೋತ್ಸವ ನಡೆಯಿತು ಎಂದು ತೋರಿಸಿ ವಿವರಿಸಿದರು.

"ಸಂಗೀತಗಾರರಲ್ಲಿ ದಿನಕರ ಕಾಯ್ಕಿಣಿ ಮತ್ತು ಎಸ್.ಸಿ.ಆರ್. ಭಟ್ ಅವರನ್ನು ಭೇಟಿಮಾಡಿ ಅವರ ವೃತ್ತಿಯ ಅನುಭವವನ್ನು ಕುರಿತು ದೀರ್ಘವಾಗಿ ಸಂಭಾಷಣೆ ಮಾಡಿದೆ. ಭಟ್ ಲಕ್ನೋದ ಪ್ರಸಿದ್ಧ ಮಾರಿಸ್ ಕಾಲೇಜಿನಲ್ಲಿ ರತಂಜನ್‌ಕರ್ ಅವರ ಶಿಷ್ಯರಾಗಿ ಅನಂತರ ಅಲ್ಲಿಯೇ ಬಹಳ ವರ್ಷ ಸಂಗೀತ ಕಲಿಸಿದ ಗುರುಗಳು. ಈಗ ಸಯಾನ್‌ನಲ್ಲಿರುವ ವಲ್ಲಭ ಸಂಗೀತಾಲಯದಲ್ಲಿ ಗುರುಗಳಾಗಿದ್ದಾರೆ. ಇಂಥವರೊಡನೆ ಮಾತನಾಡುವಾಗ ನನಗೆ ಬೇಕಿದ್ದುದು ಅವರ ಅನುಭವದ ಭಾಗ. ಆದರೆ ಎಷ್ಟೋ ಕಡೆ ಈ ಮುಖವು ಅವರ ಅಥವಾ ಬೇರೊಬ್ಬರ ಖಾಸಗಿ ಜೀವನವನ್ನು ಕುರಿತ ಪ್ರಶ್ನೆಯಾಗಿಬಿಡುತ್ತಿತ್ತು. ಮೊದಲ ಸಲ ಭೇಟಿಯ ಪರಿಚಯದಲ್ಲಿ ಮಾತನ್ನು ಈ ದಿಕ್ಕಿಗೆ ಎಳೆಯುವುದು ಸೂಕ್ಷ್ಮವಾಗುತ್ತಿತ್ತು. ಹೀಗಾಗಿ ಇಂಥವರಿಂದ ನನಗೆ ಹೆಚ್ಚು ಮಾಹಿತಿ ದೊರಕುವುದಿಲ್ಲವೆನ್ನಿಸಿತು. ಒಂದು ದಿನ ನಾವು ಮೂವರೂ ಪನವೇಲಿನಲ್ಲಿ ಒಂದು ಸಂಗೀತ ಶಾಲೆಯನ್ನು ಆರಂಭಿಸಿದ್ದ ಧ್ರುಪದ್‌ದ ಫರೀರುದ್ದಿನ್ ಡಾಗರ್ ಅವರಲ್ಲಿ ಹೋದೆವು. ಧ್ರುಪದ್ ಶೈಲಿಯ ವೈಶಿಷ್ಟ್ಯಗಳನ್ನು ತಿಳಿಯಲು ಇದರಿಂದ ಹೆಚ್ಚು ಅನುಕೂಲವಾಯಿತು. ಮರುದಿನದಿಂದ ನಮ್ಮ ಭೇಟಿಗಳ ರೀತಿಯನ್ನು ಬದಲಿಸುವಂತೆ ನಾನು ಪ್ರಕಾಶ್ ಬುರ್ಡೆಯವರಿಗೆ ಸೂಚಿಸಿದೆ. ನನಗೆ ಬೇಕಾದುದು ಹರಟೆ ಗುಸುಗುಸುಗಪ್ಪಗಳಲ್ಲಿ ಹೊರಬರುವ ಸಂಗೀತ ಮತ್ತು ಸಂಗೀತಗಾರರಿಗೆ ಸಂಬಂಧಿಸಿದ ವಿಷಯಗಳು. ದೊಡ್ಡ ಗಾಯಕರೊಡನೆ ನಡೆಸುವ ಶ್ರೀಮದ್ಗಂಭೀರ ಕಲಾಮೀಮಾಂಸೆಯ ತತ್ತ್ವಗಳಲ್ಲ. ಇಂಥ ಗಪ್ಪಾಗಳಿಗೆ ಕೆಳಮಟ್ಟದ ಸಂಗೀತಗಾರರು, ಕಡಿಮೆ ಸಂಪಾದನೆಯ ತಬಲಾ ಮತ್ತು ಹಾರ್ಮೋನಿಯಂ ಸಾಥಿದಾರರು ಹೆಚ್ಚು ಉಪಯುಕ್ತರು. ಆದ್ದರಿಂದ ಅವರನ್ನು ಭೇಟಿಯಾಗೋಣ ಎಂಬ ನನ್ನ ಸಲಹೆಯನ್ನು ಬುರ್ಡೆಯವರು ಒಪ್ಪಿಕೊಂಡರು. ಇಂಥ ಹಲವರು ಅವರಿಗೂ ಗುಲ್ವಾಡಿಗೂ ಗೊತ್ತಿದ್ದರು. ನನ್ನ ಪರಿಚಯ ಹೇಳುವುದೇ ಬೇಡ. ಸುಮ್ಮನೆ ಈ ಕಡೆ ಬಂದಿದ್ದೆ, ನಿಮ್ಮನ್ನ ನೋಡಿ ಹೋಗೋಣ ಅಂತ ಇತ್ತ ತಿರುಗಿದೆವು, ಹೇಗಿದ್ದೀರಾ? ಎಂಬ ಕುಶಲ ಸಂಭಾಷಣೆ ಆರಂಭಿಸುವುದು. ಕೊಡುವ ಚಹಾ ಕುಡಿಯುವುದು, ಸಂಭಾಷಣೆಯನ್ನ ಗಪ್ಪಾದ ಕಡೆಗೆ, ಇತರ ಪ್ರಸಿದ್ಧ, ಅಪ್ರಸಿದ್ಧ ಸಂಗೀತಗಾರರ ಬಗೆಗೆ, ಅವರ ಗುಸುಗುಸುಗಳ ಕಡೆಗೆ ತಿರುಗಿಸುವುದು, ನಾನು ಸುಮ್ಮನೆ ಕೂತಿರುವುದು, ಸಂಭಾಷಣೆ ಹಿಂದಿ ಅಥವಾ ಮರಾಠಿ ಯಾವ ಭಾಷೆಯಲ್ಲಿ ನಡೆದರೂ ನನಗೆ ಅರ್ಥವಾಗುತ್ತದೆ ಎಂದು ಮಾತನಾಡಿಕೊಂಡು ಹೋದೆವು. ಹೀಗೆ ದಿನಕ್ಕೆ ಇಬ್ಬರು ಮೂವರಂತೆ ಮೂವರು ತಬಲಾಜಿಗಳು, ನಾಲ್ವರು ಹಾರ್ಮೋನಿಯಂ ಸಾಥಿದಾರರೊಡನೆ ತಲಾ ಎರಡು ಮೂರು ಗಂಟೆ ಕಳೆದೆವು. ನನಗೆ ಬೇಕಾದಷ್ಟು ವಿವರಣೆಗಳು ದೊರೆತವು. ಸಾಹಿತ್ಯ ಹುಟ್ಟುವುದು ಇಂಥ ಮಾತುಗಳಿಂದ, ಗಂಭೀರ ಶಾಸ್ತ್ರ ಅಥವಾ ಸಿದ್ಧಾಂತದ ಚರ್ಚೆಯಿಂದಲ್ಲ ಎಂಬ ನನ್ನ ನಂಬಿಕೆ ಮತ್ತೊಮ್ಮೆ ನಿಜವಾಯಿತು.

ಬುರ್ಡೆಯವರು ಒಬ್ಬ ಗಾಯಕರೊಡನೆ ಭೇಟಿ ಏರ್ಪಡಿಸಿದ್ದರು. 'ಒಳ್ಳೆಯ ಮಾತುಗಾರ, ಸಂಗೀತ ಪ್ರಪಂಚದ ಬೇಕಾದಷ್ಟು ರುಚಿರುಚಿ ಘಟನೆಗಳು ಗೊತ್ತಿರುವ ಮನುಷ್ಯ. ನಿಮಗೆ ತುಂಬ ಅನುಕೂಲವಾಗುತ್ತೆ' ಎಂದರು. ಆತ ಆ ಸಂಜೆ ಬಂದ. ಅರ್ಧ ತಾಸು ಮಾತು ನಡೆಯಿತು. ಆತನಿಗೆ ಮಾತಿನ ಲಹರಿ ಇರಲಿಲ್ಲ. ನನಗೆ ಬೇರೆ ಅಪಾಯಿಂಟ್‌ಮೆಂಟ್ ಇದೆ ಎಂದು ಹೇಳಿ ಹೋಗಿಬಿಟ್ಟ. ಅವನು ಹೋದ ನಂತರ ಬುರ್ಡೆಯವರಿಗೆ ಅರ್ಥವಾಯಿತು. ಅದು ಪಾನೀಯವಿಲ್ಲದಿದ್ದರೆ ಅವನ ಬುದ್ಧಿ ಜಡವಾಗುವ ಸಮಯ. ಅದಕ್ಕೆ ಅಪಾಯಿಂಟ್‌ಮೆಂಟ್ ಎಂಬ ನೆಪ ಹೇಳಿ ಹೋಗಿದ್ದಾನೆ. 'ನಾವೇ ಪಾನೀಯಕ್ಕೆ ವ್ಯವಸ್ಥೆ ಮಾಡೋಣ. ನಾಳೆ ಸಂಜೆ ಮತ್ತೆ ಕರೆಸಿ,' ನಾನು ಸೂಚಿಸಿದೆ. ಆ ದಿನ ನಾವು ಭೇಟಿಯಾದದ್ದು ಸಂಗೀತದ ಪಾಠ ನಡೆಸುವ ಒಂದು ಆಶ್ರಮ. ಅಲ್ಲಿ ಪಾನೀಯ ನಿಷಿದ್ಧ. ಆದ್ದರಿಂದ ಮರುಸಂಜೆ ಒಂದು ಬಾರಿನಲ್ಲಿ ಆತ ಮತ್ತು ನಾವು ಮೂವರು ಕುಳಿತೆವು. ನಾನಂತೂ ಕುಡಿಯುವವನಲ್ಲ. ಉಳಿದವರು ಅವನಿಗೆ ಕಂಪನಿ ಕೊಟ್ಟರು. ಆದರೆ ಸ್ಥಳಾಭಾವದ ಮುಂಬಯಿಯ ಬಾರ್ ಎಂದರೆ ಸಿಟಿ ಬಸ್ಸಿನಷ್ಟು ಕಿಷ್ಕಿಂಧ. ಎಷ್ಟು ಧ್ವನಿ ತಗ್ಗಿಸಿ ಮಾತನಾಡಿದರೂ ಹಿಂದು ಮುಂದಿನವರಿಗೆ ಅಕ್ಕಪಕ್ಕದವರಿಗೆ ಕೇಳಿಸುತ್ತಿತ್ತು. ಅವರ ಮಾತು ನಮಗೂ ಕೇಳಿಸುತ್ತಿತ್ತು. ಆತನನ್ನು ಲಹರಿಗೆ ತಂದು ನನಗೆ ಬೇಕಾದ ವಿಷಯವಾಗಿ ಮಾತನಾಡಿಸುವುದು ಹೇಗೆ? ಇಡೀ ಕಾರ್ಯಕ್ರಮವು ವ್ಯರ್ಥವಾಯಿತು. ಇದನ್ನು ಬೇಗ ಮುಗಿಸಬೇಕೆಂದು ನನಗೆ ಅನ್ನಿಸತೊಡಗಿತು. ಆದರೆ ಆತ ಮತ್ತೊಂದಕ್ಕೆ, ಇನ್ನೊಂದಕ್ಕೆ ಆರ್ಡರ್ ಮಾಡತೊಡಗಿದ. ಬಿಲ್ ತೆತ್ತ ಮೇಲೆ ಸರಿಯಾದ ಜಾಗ ಹುಡುಕಿ ನಾಳೆ ಸಂಜೆ ಇನ್ನೆಲ್ಲಾದರೂ ಏರ್ಪಡಿಸೋಣವೇ ಎಂದು ನಾನು ಬುರ್ಡೆಯವರಿಗೆ ಸೂಚಿಸಿದೆ. ಅವರು ನಿಮ್ಮದು ಸಾಹಿತ್ಯದ ಕೆಲಸ. ಸಂಜೆ ಒಂದು ಕೋಣೆ ಬಿಟ್ಟುಕೊಡಿ ಅಂತ ಕರ್ನಾಟಕ ಸಂಘವನ್ನು ಕೇಳಬಹುದು. ಆದರೆ ಅಲ್ಲಿ ಮದ್ಯದ ಸರಬರಾಜು ನಿಷಿದ್ಧ. ಕಾಫಿ ಚಹಾ ತಿನಿಸುಗಳಿಗೆ ಆಕ್ಷೇಪವಿಲ್ಲ" ಎಂದರು. 'ಬೆಳಿಗ್ಗೆಯೋ ಮಧ್ಯಾಹ್ನವೋ ಆತನನ್ನು ಭೇಟಿಮಾಡಿದರೆ ಹೇಗೆ" ಎಂದೆ. 'ಅವನಿಗೆ ಸಂಜೆ ಮಾತ್ರ ಬಿಡುವಾಗೂದು' ಎನ್ನುವಾಗ ಅವರೂ ಅಸಹಾಯಕರಾಗಿದ್ದರು.

ಪುಣೆ ವಿಶ್ವವಿದ್ಯಾಲಯವು ಅದುವರೆಗೆ ಮರಾಠಿಗೆ ಅನುವಾದವಾಗಿ ಪ್ರಕಟವಾಗಿದ್ದ ನನ್ನ ಕಾದಂಬರಿಗಳನ್ನು ಕುರಿತು ಎರಡು ದಿನದ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಮಹಾರಾಷ್ಟ್ರದ ಎಲ್ಲ ವಿಶ್ವವಿದ್ಯಾಲಯಗಳ ಮರಾಠಿ ಪ್ರಾಧ್ಯಾಪಕರು ಪುಣೆಯ ಎಲ್ಲ ಕಾಲೇಜುಗಳ ಮರಾಠಿ ಅಧ್ಯಾಪಕರು ಭಾಗವಹಿಸಿದ್ದರು. ಬುರ್ಡೆಯವರೂ ಬಂದಿದ್ದರು. ಆಗ 'ಮಂದ್ರ'ವು ಕನ್ನಡದಲ್ಲಿ ಪ್ರಕಟವಾಗಿತ್ತು. ಮರಾಠಿಯ ಅನುವಾದವಾಗಿರಲಿಲ್ಲ. ಬುರ್ಡೆಯವರು ಈ ಕಾದಂಬರಿಯನ್ನು ಕುರಿತು ಬಹಳ ಪರಿಣಾಮಕಾರಿಯಾಗಿ ಮರಾಠಿಯಲ್ಲಿ ಭಾಷಣ ಮಾಡಿದರು. ಮರಾಠಿ ಜನಗಳಿಗೆ ಸಾಹಿತ್ಯದಷ್ಟೇ ಶಾಸ್ತ್ರೀಯ ಸಂಗೀತದಲ್ಲೂ ಆಸಕ್ತಿ. 'ಮಂದ್ರ'ದ ವಸ್ತು ಮತ್ತು ವಿನ್ಯಾಸವನ್ನು ಕೇಳಿದ ಅವರು ಅದರ ಬಗೆಗೆ ಆಸಕ್ತರಾದರು. ಪತ್ರಿಕೆಯವರು ಬರೆದರು. ಹೀಗಾಗಿ 'ಮಂದ್ರ'ದ ಮರಾಠಿ ಅನುವಾದವು ಬಹುಬೇಗ ಪ್ರಕಟವಾಯಿತು.

'ನೀವು ಮುಂಬಯಿಗೆ ಬಂದಾಗಲೆಲ್ಲ ನಮ್ಮ ಮನೆಯಲ್ಲೇ ಉಳಿಯಬೇಕು ಎಂದು ಬುರ್ಡೆಯವರು ಒತ್ತಾಯಮಾಡಿದ್ದರು. ಅದು ಬಾಯಿಮಾತಿನದಲ್ಲ. ನಿಜವಾದ ವಿಶ್ವಾಸದಿಂದ ಮಾಡಿದ್ದು. ಒಮ್ಮೆ ಕರೆದೊಯ್ದು ಉಳಿಸಿಕೊಂಡೂ ಇದ್ದರು. ಕೇಂದ್ರ ಮುಂಬಯಿಯಲ್ಲಿದ್ದ ಅವರ ಮನೆಯಲ್ಲಿ ಒಂದು ದಿನ ಪೂರ್ತಿ ಇದ್ದೆ. ಒಂದೇ ಸಮನೆ ನಾವು ಮಾತನಾಡಿದೆವು. ಮರು ಬೆಳಗ್ಗೆ ಅವರ ಮಗ ನನ್ನನ್ನು ವಿಮಾನನಿಲ್ದಾಣಕ್ಕೆ ಕರೆದೊಯ್ದು ಬಿಟ್ಟ. ನನಗೆ ಆ ಮಧ್ಯಾಹ್ನದ ವೇಳೆಗೆ ಗಂಟಲು ಕೆರೆತ ಆರಂಭವಾಯಿತು. ಅನಂತರ ಕೆಮ್ಮು. ಅವರ ಮನೆ ಮೂಲ ಮುಂಬಯಿಯ ಕೇಂದ್ರದಲ್ಲಿ ಇತ್ತು. ನಗರದ ಆ ಇಡೀ ಭಾಗದಲ್ಲಿ ದಟ್ಟವಾದ ದೂಷಿತ ಹವೆ. ಅಲ್ಲಿಯೇ ವಾಸಿಸುವವರಿಗೆ ಅಭ್ಯಾಸವಾಗಿರುತ್ತದೆ. ಶರೀರವು ಗಂಟಲು ಕೆರೆತ ಕೆಮ್ಮು ಮೊದಲಾದವುಗಳಿಗೆ ಹೊಂದಿಕೊಂಡಿರುತ್ತದೆ. ನನ್ನಂತೆ ಒಂದು ದಿನ ಉಳಿಯುವವರಿಗೆ ಪ್ರತಿಕ್ರಿಯೆ ಶುರುವಾಗುತ್ತೆ ಎಂದು ಅರ್ಥಮಾಡಿಕೊಂಡೆ. ಬುರ್ಡೆಯವರು ಯಾವುದಾದರೂ ಸಣ್ಣ ಊರಿನಲ್ಲಿ ಅಥವಾ ಮುಂಬಯಿಯ ಹೊರ ವಿಸ್ತರಣದಲ್ಲಿ ವಾಸವಾಗಿದ್ದರೆ ಇನ್ನು ಹತ್ತಿಪ್ಪತ್ತು ವರ್ಷವಾದರೂ ಬದುಕುತ್ತಿದ್ದರು ಎಂಬ ವಿಷಾದ ನನ್ನಲ್ಲಿದೆ. ಆದರೆ ನಮ್ಮ ದೇಶದ ಕೋಟಿಕೋಟಿ ನಗರವಾಸಿಗಳಲ್ಲಿ ಬುರ್ಡೆಯವರೂ ಒಬ್ಬರಾಗಿದ್ದರು, ಎಂಬ ವಾಸ್ತವತೆಯ ಅರಿವೂ ಇದೆ.

*****

1.2

ಸ್ವರದ ಮರೆಗೆ ಪ್ರಕಾಶ್ ಬುರ್ಡೆ

ರಹಮತ್ ತರೀಕೆರೆ

ಮುಂಬಯಿನಲ್ಲಿ ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಯಂತಿದ್ದ ಪ್ರಕಾಶ್ ಜಿ. ಬುರ್ಡೆಯವರು, ಈಚೆಗೆ ಕಣ್ಮುಚ್ಚಿದರು (ನವೆಂಬರ್ 24, 1938 – ಜನವರಿ 4, 2016). ಮುಂಬೈ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಅವರು ಕರ್ನಾಟಕದ ಬಹಳ ಜನರಿಗೆ ಪರಿಚಿತರಲ್ಲ. ಆದರೆ, ಅವರನ್ನು ಬಲ್ಲವರಿಗೆ ಅವರ ಸಾವು, ಕರ್ನಾಟಕ–ಮಹಾರಾಷ್ಟ್ರಗಳ ಸಾಂಸ್ಕೃತಿಕ ಕೊಡುಕೊಳೆಯ ಕೋಶವೊಂದು ಹೋದಂತೆ ಭಾಸವಾಗುತ್ತಿದೆ.

ನಾನು ಶ್ರೀ ಬುರ್ಡೆಯವರನ್ನು ಭೇಟಿಯಾಗಿದ್ದು, 40ರ ದಶಕದ ಗಾಯಕಿ ನಟಿ ಅಮೀರ್‌ಬಾಯಿ ಕರ್ನಾಟಕಿಯವರ ಜೀವನಚರಿತ್ರೆಯನ್ನು ರಚಿಸುವ ಸಂದರ್ಭದಲ್ಲಿ. ಮುಂದೆ ನನ್ನ ಸಂಶೋಧನೆ ಮುಗಿವತನಕ ಬುರ್ಡೆಯವರು ಹಾದಿತೋರುಗರಾಗಿ ನಿಂತರು. ಬೆವರಿಳಿಸುವ ಧಗೆ ಹಾಗೂ ತಮ್ಮ ವಯಸ್ಸು–ಬೇನೆಗಳ ಪರಿವೆಯಿಲ್ಲದೆ, ಮುಂಬಯಿನ ಗಲ್ಲಿಗಲ್ಲಿಗಳಲ್ಲಿ ನನ್ನನ್ನು ಕರೆದುಕೊಂಡು ಓಡಾಡಿದರು. ಅಮೀರ್‌ಬಾಯಿ–ಗೋಹರ್‌ಬಾಯಿಯರನ್ನು ಬಲ್ಲ ಹಳೆಗಾಲದ ನಟನಟಿಯರನ್ನು ಹಾಗೂ ಸಂಗೀತಗಾರರನ್ನು ನಾನು ಭೇಟಿಯಾಗಿದ್ದು ಆಗಲೇ.

ಮೂಲತಃ ಕುಮಟಾ ಸೀಮೆಯವರಾದ ಬುರ್ಡೆಯವರು ಹುಟ್ಟಿದ್ದು ಗದಗದಲ್ಲಿ (1938). ಅವರ ತಂದೆ ಅಂಚೆ ಮಾಸ್ತರರಾಗಿದ್ದರು. ಬುರ್ಡೆ ಅವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕಲಿಯುವಾಗ ಗಿರೀಶ ಕಾರ್ನಾಡ ಮುಂತಾದವರು ಅವರ ಸಹಪಾಠಿಗಳು. ಬುರ್ಡೆಯವರಿಗೆ ಗದಗ–ಧಾರವಾಡದಲ್ಲಿ ಇರುವಾಗಲೇ ಸಂಗೀತದ ಸಹವಾಸ ಸಿಕ್ಕಿತ್ತು. ಅವರ ಅವ್ವ, ಪಂಚಾಕ್ಷರಿ ಗವಯಿಯವರ ಶಿಷ್ಯೆ. ಸ್ವತಃ ಬುರ್ಡೆಯವರು ಪಂಚಾಕ್ಷರಿ ಮತ್ತಿಗಟ್ಟಿಯವರಿಂದ ಸಂಗೀತವನ್ನೂ ಪುಣೆಯ ಉಸ್ತಾದ್ ಗುಲಾಂ ರಸೂಲ್ ಅವರಿಂದ ತಬಲವನ್ನೂ ಕಲಿತಿದ್ದರು.

ವಿಜ್ಞಾನ ಪದವಿ ಮುಗಿಸಿದ ಬಳಿಕ ಬುರ್ಡೆಯವರು ಔಷಧ ಕಂಪನಿಯಲ್ಲಿ ಕೆಲಸಕ್ಕೆ ಪುಣೆಗೂ ಬಳಿಕ ಮುಂಬೈಗೂ ವಲಸೆ ಹೋದರು. ಖಾಸಗಿ ಕಂಪನಿಯಲ್ಲಿ

ದೊಡ್ಡ ಹುದ್ದೆಯಲ್ಲಿದ್ದ ಅವರು ಚಿತ್ತಾಲರ 'ಶಿಕಾರಿ' ಕಾದಂಬರಿಯ ನಾಗಪ್ಪನಂತೆ, ಅಲ್ಲಿನ ಉಸಿರುಗಟ್ಟಿಸುವ ವಾತಾವರಣದಿಂದ ಚಡಪಡಿಸುತ್ತಿದ್ದರು. ಒಮ್ಮೆ ಸ್ವಯಂ ನಿವೃತ್ತಿ ಪಡೆದು, ತಮ್ಮ ಜೀವಕ್ಕೆ ಹತ್ತಿರವಾಗಿದ್ದ ಸಂಗೀತಕ್ಷೇತ್ರದ ಬರವಣಿಗೆಗೆ ಮರಳಿದರು. ಹೀಗೆ ಮರಳಲು ಅವರಿಗೆ ಪ್ರಸಿದ್ಧ ಸಂಗೀತ ಚರಿತ್ರೆಕಾರರೂ ಅವರ ಸೋದರ ಮಾವಂದಿರೂ ಆದ ಮೋಹನ್ ನಾಡಕರ್ಣಿಯವರ ಪ್ರೇರಣೆಯಿತ್ತು. ಬುರ್ಡೆಯವರು 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯಲ್ಲಿ ಬರೆಯುತ್ತಿದ್ದ ಸಂಗೀತವಿಮರ್ಶೆಗಳು ಮಹಾರಾಷ್ಟ್ರದಲ್ಲಿ ಜನಪ್ರಿಯವಾದವು. ಅವರು ಹಿಂದಿಯಿಂದ ಅನೇಕ ಸಂಗೀತಸಂಬಂಧಿ ಕೃತಿಗಳನ್ನು ಇಂಗ್ಲಿಷಿಗೆ ತರ್ಜುಮೆಗೈದರು. ಜೀವಮಾನವಿಡೀ ಆಕಾಶವಾಣಿ, ವಿಶ್ವವಿದ್ಯಾಲಯ ಹಾಗೂ ಇತರೆ ಕಲಾಸಂಸ್ಥೆಗಳಲ್ಲಿ ಸಂಗೀತತಜ್ಞರಾಗಿ ಸೇವೆ ಸಲ್ಲಿಸಿದರು. ಬಾಳಿನ ಕೊನೆಯ ವರ್ಷಗಳಲ್ಲಿ, ಕರ್ನಾಟಕ ಸಂಘದ 'ಕಲಾಭಾರತಿ' ಶಾಖೆಯ ಸಂಚಾಲಕರಾಗಿ, ಭಾರತದ ಶ್ರೇಷ್ಠ ಕಲಾವಿದರನ್ನು ಕರೆಯಿಸಿ ಮುಂಬಯಿ ಜನರಿಗೆ ಸಂಗೀತವನ್ನು ಕೇಳಿಸಿದರು. ಎಲ್ಲರೂ ಮರೆತಂತಿದ್ದ ಕನ್ನಡದ ಮೊದಲ ಘಟ್ಟದ ಭಾವಗೀತೆಗಳ ಗಾಯಕಿ ಜಯವಂತಿದೇವಿ ಹಿರೇಬೆಟ್ಟು ಅವರು ಅಜ್ಞಾತವಾಗಿ ಇನ್ನೂ ಬದುಕಿದ್ದಾರೆ ಎಂಬುದನ್ನು ಹುಡುಕಿ ತೋರಿಸಿದರು. ಕನ್ನಡದ ಕಲಾವಿದರ ಬಗ್ಗೆ ಬುರ್ಡೆ ವಿಶೇಷವಾದ ಮಮಕಾರವನ್ನು ಇರಿಸಿಕೊಂಡಿದ್ದರು. ಅದರಲ್ಲೂ ಹಿಂದುಸ್ತಾನಿ ಹಾಡುಗಾರರಾದ ವೆಂಕಟೇಶಕುಮಾರ್ ಅವರ ಪ್ರತಿಭೆಯ ಬಗ್ಗೆ ಧಾರವಾಡಿಗರಾಗಿ ಬೆಳೆದ ಅವರಿಗೆ ಬಹಳ ಹೆಮ್ಮೆಯಿತ್ತು.

ನಾನು ಬುರ್ಡೆ ಅವರ ಅಭಿಮಾನಿಯಾಗಿದ್ದು, ಅವರು ಗೋಹರ್ ಕರ್ನಾಟಕಿಯ ಮೇಲೆ ಬರೆದಿದ್ದ ಒಂದು ಲೇಖನದಿಂದ. ಮರಾಠಿ ವೃತ್ತಿರಂಗಭೂಮಿಯ ಕಣ್ಮಣಿಯಾಗಿ ಮೆರೆದಿದ್ದ ಬಾಲಗಂಧರ್ವರ ಜೀವನಸಂಗಾತಿ ಗೋಹರ್, ಮರಾಠಿಗರು ಕೈಬಿಟ್ಟಿದ್ದ ಗಂಧರ್ವರನ್ನು ಹೇಗೆ ಕೊನೆಗಾಲದಲ್ಲಿ ಸಲಹಿದರು; ಬದಲಿಗೆ ಗೋಹರ್ ಅವರ ಮೇಲೆ ಮರಾಠಿ ರಂಗಭೂಮಿಯ ಚರಿತ್ರಕಾರರು ಹೇಗೆ ನಿಷ್ಕಾರಣವಾಗಿ ನಂಜುಕಾರಿದರು ಎಂಬ ಬಗ್ಗೆ ಮನೋವೇಧಕ ವಿವರಗಳು ಆ ಲೇಖನದಲ್ಲಿದ್ದವು. 'ಕರ್ನಾಟಕ ಸಂಘ'ದಿಂದ ಹೊರಡುವ 'ಸ್ನೇಹ-ಸಂಬಂಧ' ಪತ್ರಿಕೆಯಲ್ಲಿ ಬುರ್ಡೆಯವರು ಬರೆಯುತ್ತಿದ್ದ ಲೇಖನಗಳಲ್ಲಿ ಅವರ ಸಂಗೀತಜ್ಞಾನ ಮಾತ್ರವಲ್ಲ, ರಸಿಕರಾಗಿ ಅವರು ಪಟ್ಟ ಆನಂದವೂ ಇರುತ್ತಿತ್ತು. ಮಹಾರಾಷ್ಟ್ರ-ಕರ್ನಾಟಕಗಳಿಗೆ ಸಮಾನವಾಗಿದ್ದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ನಂಟಿನ ಬಗ್ಗೆ ಬೇಂದ್ರೆ, ಶಂಬಾ ಜೋಶಿ, ರಾ.ಚಿಂ. ಢೇರೆ ಮುಂತಾದ ವಿದ್ವಾಂಸರು ಚರ್ಚಿಸಿರುವುದುಂಟು. ಆದರೆ ಎರಡೂ ನಾಡಿನ ಸಂಗೀತ-ರಂಗಭೂಮಿಯ ಅಂತರ್ ಸಂಬಂಧಗಳ ಬಗ್ಗೆ ತಿಳಿವಳಿಕೆಯಿದ್ದ ವಿದ್ವಾಂಸರೆಂದರೆ ಮೋಹನ್ ನಾಡಕರ್ಣಿ, ಪ್ರಹ್ಲಾದ ಮುದಗಲ್ಲ, ವಸಂತ ಕವಲಿ, ಪ್ರಕಾಶ ಬುರ್ಡೆ ಮುಂತಾದವರು. ಇವರೆಲ್ಲರಲ್ಲಿದ್ದ ಸಮಾನ ಅಂಶವೆಂದರೆ, ಎರಡು ಭಾಷಿಕ ಸಂಸ್ಕೃತಿಗಳ ನಡುವೆ ನಡೆದ ಕೊಡುಕೊಳೆಯ ಬಗೆಗಿನ ಅರಿವು ಹಾಗೂ ಕರ್ನಾಟಕದ ಬಗ್ಗೆ ಕೆಲವು ಮರಾಠಿಗರು ಹೊಂದಿದ್ದ ಪೂರ್ವಗ್ರಹದ ಬಗ್ಗೆ ಪ್ರತಿರೋಧ.

ನನಗೆ ಬುರ್ಡೆಯವರ ಬರೆಹದಲ್ಲಿದ್ದ 'ಕೊಂಕಣಿಗಂಧಿ ಕನ್ನಡ' ವಿಶೇಷವೆನಿಸುತ್ತಿತ್ತು. ಇಂತಹುದೇ ಸಂಕರಗನ್ನಡ ಕಾರ್ನಾಡರ 'ಆಡಾಡ್ತಾ ಆಯುಷ್ಯ'ದಲ್ಲಿಯೂ, ರಾಜೀವ್ ತಾರಾನಾಥರ ಉರ್ದುಗನ್ನಡದಲ್ಲಿಯೂ ಇವೆ. ಸಾರಸ್ವತ ಸಮಾಜದಿಂದ ಬಂದ ಇವರೆಲ್ಲರೂ ಹಲವು ಭಾಷಿಕ ಸಂಸ್ಕೃತಿಗಳ ಸಂಗದಿಂದ ಪಡೆದ ಅನುಭವವನ್ನು ಕನ್ನಡದಲ್ಲಿ ಅಭಿವ್ಯಕ್ತಿಸಿದವರು. ಕರ್ನಾಟಕದಲ್ಲಿ ಹುಟ್ಟಿ, ಇಂಗ್ಲಿಷ್‌ನಲ್ಲಿ ಕಲಿತು, ಮಹಾರಾಷ್ಟ್ರದಲ್ಲಿ ಬಾಳನ್ನು ಕಳೆದ ಕೊಂಕಣಿ ಮನೆಮಾತಿನ ಬುರ್ಡೆಯವರಿಗೆ, ಗುಜರಾತಿ–ಹಿಂದಿ–ಉರ್ದು ಮುಂತಾದ ಭಾಷೆಗಳು ಸಹಜವಾಗಿ ದಕ್ಕಿದ್ದವು. ಅವರ ಮನೆಯಲ್ಲಿ ಇರುವಾಗೊಮ್ಮೆ ಗಮನಿಸಿದೆ: ಅವರು ಗುಜರಾತಿ, ಮರಾಠಿ, ಕನ್ನಡ, ಹಿಂದಿ, ಕೊಂಕಣಿ, ಇಂಗ್ಲಿಷ್‌ಗಳಲ್ಲಿ ಬರುತ್ತಿದ್ದ ಗೆಳೆಯರ ಕರೆಗಳಿಗೆ, ಆಯಾ ನುಡಿಯಲ್ಲಿಯೇ ಜವಾಬಿಸುತ್ತಿದ್ದರು. ಮುಂಬಯಿ ಮಹಾನಗರ ಮತ್ತು ಅಲ್ಲಿನ ಕಲಾಲೋಕದ ಭಾಷಿಕ ಬಹುತ್ವದ ಅಪೂರ್ವ ಪ್ರತಿನಿಧಿಯಂತೆ ಅವರು, ಏಕಕಾಲದಲ್ಲಿ ಮರಾಠಿ–ಇಂಗ್ಲಿಷ್–ಕನ್ನಡ ಭಾಷಿಕ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು.

ಬುರ್ಡೆಯವರು ನನ್ನೊಡನೆ ಸಂಗೀತ ಲೋಕದ ದೊಡ್ಡ ತಾರೆಗಳಾದ ಭೀಮಸೇನ ಜೋಶಿ, ಪಂಡಿತ್ ರವಿಶಂಕರ್, ನೌಶಾದ್ ಮುಂತಾದವರ ಜೊತೆ ಒಡನಾಡಿದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ತಾವು ಕಂಡಿದ್ದ ಬಾಲಗಂಧರ್ವ ಹಾಗೂ ಗೋಹರ್ ಅವರ ಅಭಿನಯ ಮತ್ತು ಹಾಡಿಕೆಗಳ ಬಗ್ಗೆ ವಿವರಿಸುತ್ತಿದ್ದರು. ಗೋಹರ್ ಹಾಡಿದ 'ಅಗ ವೈಕುಂಠಿ ಚಾ ರಾಜಾ' ಮುಂತಾದ ಅಭಂಗ/ರಂಗಗೀತೆಗಳನ್ನು ಮೊದಲ ಬಾರಿಗೆ ನಾನು ಕೇಳಿದ್ದು ಅವರಲ್ಲೇ! ಬುರ್ಡೆಯವರೂ ಅವರ ಗೆಳೆಯ ಸುರೇಶ್ ಚಾಂದವಣ್ಕರರೂ ದೇಶದ ಮೂಲೆ ಮುಡುಕುಗಳಿಂದ ಸಂಗೀತ ಹಾಗೂ ಸಂಗೀತಗಾರರ ಮೇಲೆ ಸಂಶೋಧನೆ ಮಾಡಲು ಧಾವಿಸುತ್ತಿದ್ದವರಿಗೆ ನೆರವಿನ ನಿಧಿಯಂತಿದ್ದರು. 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್'ನ ಭೌತಸಾಸ್ತ್ರ ವಿಭಾಗದಲ್ಲಿ ಪ್ರೊಫೆಸರ್ ಆಗಿದ್ದ ಚಾಂದವಣ್ಕರ್, 'ರೆಕಾರ್ಡ್ ಕಲೆಕ್ಟರ್ಸ್ ಅಸೋಸಿಯೇಶನ್ ಆಫ್ ಇಂಡಿಯಾ'ದ ಕಾರ್ಯದರ್ಶಿಯಾಗಿದ್ದರು. ಬುರ್ಡೆಯವರ ಹಾಗೆಯೇ ಸಂಗೀತಲೋಕದ ಹುಚ್ಚು ಹತ್ತಿಸಿಕೊಂಡವರು. ಬಹಳ ಸಲ 'ಅತಿಕ್ರಮ ಪ್ರವೇಶ' ಮಾಡುವವರಿಂದಲೇ ತಿಳಿವಿನ ಕ್ಷೇತ್ರಗಳು ಹೊಸ ಆಯಾಮ ಪಡೆಯುತ್ತವೆಯೊ ಏನೊ!

"ಗೋಹರ್‌ಜಾನ್ ಕಲ್ಕತ್ತೆವಾಲಿ ಬಗ್ಗೆ ದೃಕ್–ಶ್ರಾವ್ಯ ಕಾರ್ಯಕ್ರಮಗಳು ಆಗಿವೆ. ನಿಮ್ಮ 'ಅಮೀರ್‌ಬಾಯಿ' ಪುಸ್ತಕ ಪ್ರಕಟವಾದ ಮೇಲೆ ಬೀಳಗಿ ಸಿಸ್ಟರ್ಸ್ ಮ್ಯಾಲೆ ಮುಂಬಯಿಯಲ್ಲಿ ಇಂತಹುದೇ ಕಾರ್ಯಕ್ರಮ ಮಾಡೋಣ. ಕರ್ನಾಟಕದ ಗೋಹರ್–ಅಮೀರ್ ಹಿಂದೆ ಬೀಳಬಾರದಲ್ಲ?" ಎಂದು ಬುರ್ಡೆಯವರು ನನಗೆ ಪತ್ರವನ್ನು ಬರೆದಿದ್ದರು. ಅದರಂತೆ ಗೋಹರ್ ಹಾಗೂ ಅಮೀರ್ ಕರ್ನಾಟಕಿ ಜನ್ಮ ಶತಮಾನೋತ್ಸವಗಳು ಬಂದಾಗ, ಮುಂಬಯಿ ಕರ್ನಾಟಕ ಸಂಘದಲ್ಲಿ ಅಪೂರ್ವವಾದ ಕಾರ್ಯಕ್ರಮಗಳನ್ನು ಚಾಂದವಣ್ಕರ್ ಜತೆಗೂಡಿ ನಡೆಸಿಕೊಟ್ಟರು.

ನಾನು, ಅಮೀರ್‌ಬಾಯಿ ಪುಸ್ತಕದ ಮರಾಠಿ ಆವೃತ್ತಿಯ ಬಿಡುಗಡೆಗೆಂದು ಹೋದಾಗ, ತಮಗೆ ಕಾರ್ಯಕ್ರಮಕ್ಕೆ ಬರಲು ಆಗುತ್ತಿಲ್ಲವೆಂದೂ, ಹಂಪಿಗೆ ತೆರಳುವ ಮುನ್ನ ಮನೆಗೆ ಬಂದುಹೋಗಬೇಕೆಂದೂ, ಪುಸ್ತಕದ ಅನುವಾದಕ ಪ್ರಶಾಂತ ಕುಲಕರ್ಣಿಯವರನ್ನು ಜತೆಗೆ ಕರೆತರಬೇಕೆಂದೂ ಬುರ್ಡೆಯವರು ಸುದ್ದಿ ಕಳಿಸಿದ್ದರು. ಅವರಿಗೆ ಉಬ್ಬಸ ಕಾಡುತ್ತಿತ್ತು. ಈಚೀಚೆಗೆ ಆಕ್ಸಿಜನ್ ಸಿಲಿಂಡರನ್ನು ಜತೆಯಲ್ಲಿಟ್ಟುಕೊಂಡೇ ಓಡಾಡುತ್ತಿದ್ದರು. ಪ್ರೊಸ್ಟೇಟ್ ಬೇನೆ ದೇಹವನ್ನು ಆವರಿಸುತ್ತಿತ್ತು. ತಾಡದೇವ್ ಏರಿಯಾದಲ್ಲಿರುವ 'ಭಾಗೀರಥಿ ಬಿಲ್ಡಿಂಗ್'ನ ಅವರ ಬಿಡಾರಕ್ಕೆ ನಾವು ಹೋದೆವು. ಅತ್ಯಂತ ಹಳೆಯ ಮತ್ತು ಸುಂದರ ಅಪಾರ್ಟ್‌ಮೆಂಟುಗಳಲ್ಲಿ ಒಂದಾದ ಆ ಕಟ್ಟಡ ಕಡಲ ಗಾಳಿಯನ್ನೂ ಮುಂಬಯಿನ ಮಳೆ, ಬಿಸಿಲನ್ನೂ ಶತಮಾನ ಕಾಲ ತಡೆದು ಜೀರ್ಣವಾಗಿತ್ತು. ದೈಹಿಕವಾಗಿ ಬಳಲಿದಂತಿದ್ದ ಬುರ್ಡೆಯವರು ಪುಸ್ತಕ ಕಂಡು ಖುಷಿಪಟ್ಟರು. ಕೈಯಾರೆ ಚಹಾಮಾಡಿಕೊಟ್ಟರು. ಭಾಗೀರಥಿ ಕಟ್ಟಡದ ಮೊದಲ ಮಹಡಿಯಲ್ಲಿ ನಿಂತು ಬೀಳ್ಕೊಡುತ್ತಾ ಅವರು ಕೈಬೀಸಿದ್ದೇ ನನ್ನ ಪಾಲಿಗೆ ಕೊನೆಯ ನೋಟವಾಯಿತು.

ನನಗೊಂದು ಸಣ್ಣ ಇರಾದೆಯಿತ್ತು. ಅವರ ಆತ್ಮಕಥೆಯನ್ನೂ ಒಳಗೊಳ್ಳುವ ಹಾಗೆ, ಅವರ ಅನುಭವದ ಭಾಗವಾಗಿರುವ ಮುಂಬಯಿನ ಸಾಂಸ್ಕೃತಿಕ ಲೋಕದ ವಿಶಿಷ್ಟ ನೆನಪುಗಳನ್ನು ದಾಖಲಿಸಬೇಕೆಂದು. ಅದು ನನಸಾಗಲಿಲ್ಲ. ಬುರ್ಡೆಯವರು ಕನ್ನಡದಲ್ಲಿ ಬರೆದ ನೂರಾರು ಲೇಖನಗಳು ಮುಂಬಯಿನ ಚಿಕ್ಕಪುಟ್ಟ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹಿಂದೂಸ್ತಾನೀ ಸಂಗೀತ ಬೆಳೆಸಿದ ತವಾಯಿಫ್ ಗಾಯಕಿಯರ ಬಗೆಗಿನ ಅವರ ಲೇಖನ ಸರಣಿಯಂತೂ ವಿಶಿಷ್ಟ. ಇವೆಲ್ಲ ಪ್ರಕಟಗೊಳ್ಳಬೇಕು. ಅವರ ಅಕ್ಕ, ಜ್ಯೋತ್ಸ್ನಾ ಕಾಮತರು ಇದನ್ನು ಮಾಡಲಿ ಎಂದು ಬಯಸುತ್ತೇನೆ. ಏಕೆಂದರೆ, ಆ ಬರಹಗಳಲ್ಲಿ ನಮ್ಮ ನಾಡಿನ ಕಲಾಪ್ರತಿಭೆಗಳು ಧರ್ಮ, ಜಾತಿ, ಪ್ರಾಂತ್ಯಗಳ ಸೀಮಿತ ಸೀಮೆಯನ್ನು ದಾಟಿ ಮಾಡಿದ ಅಪೂರ್ವ ಪ್ರಯೋಗಗಳ ಕಥನವಿದೆ.

*****

1.3

ಅಗಲಿದ ಆಪ್ತಮಿತ್ರ ಪ್ರಕಾಶ ಬುರ್ಡೆ

ಡಾ. ವ್ಯಾಸರಾವ್ ನಿಂಜೂರ್

ಪ್ರಕಾಶ ಬುರ್ಡೆಯವರನ್ನು ನಾನು ಮೊದಲು ನೋಡಿದ್ದು ನಮ್ಮ 'ಅಣುಶಕ್ತಿ ನಗರ ಕನ್ನಡ ಸಂಘ' ಏರ್ಪಡಿಸಿದ್ದ, ಅವರ ಸಹೋದರಿ ಡಾ. ಜ್ಯೋತ್ಸ್ನಾ ಕಾಮತರ ಭಾಷಣದ ಸಂದರ್ಭದಲ್ಲಿ. ಆಗ ಔಪಚಾರಿಕವಾಗಿ ನಕ್ಕು, ಅವರ ಕೈ ಕುಲುಕಿ ಪರಿಚಯ ಮಾಡಿಕೊಂಡಾಗ, ಮುಂದೊಂದು ದಿನ ಅವರು ನನ್ನ ಅಚ್ಚುಮೆಚ್ಚಿನ ಆಪ್ತಮಿತ್ರರಾಗುತ್ತಾರೆಂದೂ, ನಾನೂ ಅವರೂ ಜೊತೆಗೂಡಿ, ಮುಂಬಯಿ ಕರ್ನಾಟಕ ಸಂಘದ ಸಾಂಸ್ಕೃತಿಕ ವೇದಿಕೆ 'ಕಲಾಭಾರತಿ'ಯಲ್ಲಿ ದುಡಿಯುತ್ತೇವೆ ಎಂದೂ ನಾನು ಊಹಿಸಿರಲಿಲ್ಲ.

1993 ಜನವರಿಯಲ್ಲಿ ನಡೆದ ನರಮೇಧ, ಮುಂಬಯಿ ನಗರವನ್ನೆಲ್ಲಾ ಕಂಗೆಡಿಸಿತ್ತು. ಕರ್ನಾಟಕ ಸಂಘದ ಪದಾಧಿಕಾರಿಗಳೂ ಇದಕ್ಕೆ ಹೊರತಾಗಿರಲಿಲ್ಲ. ಆಗ ಸಂಘದ ಅಧ್ಯಕ್ಷರಾಗಿದ್ದ ಸದಾನಂದ ಎ. ಶೆಟ್ಟಿಯವರು ಹಿಂಸೆಯನ್ನು ಹಿಮ್ಮೆಟ್ಟಿಸಲು ಕರ್ನಾಟಕ ಸಂಘ ಏನಾದರೂ ವಿಧಾಯಕ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಈ ಪುಟ್ಟ ಸಮಿತಿಯಲ್ಲಿ ಶೆಟ್ಟರಲ್ಲದೆ, ವ್ಯಾಸರಾಯ ಬಲ್ಲಾಳರು, ಬಿ.ಎ. ಸನದಿಯವರು ಹಾಗೂ ನಾನು ಉಪಸ್ಥಿತರಿದ್ದು ಸುದೀರ್ಘ ಚರ್ಚೆಯ ಬಳಿಕ ಪ್ರತಿವಾರವೂ ಕರ್ನಾಟಕ ಸಂಘವು ಸಂಗೀತ, ನೃತ್ಯದಂತಹ ಕಲಾಕಾರ್ಯಕ್ರಮಗಳನ್ನು ಆಯೋಜಿಸಬೇಕೆಂದು ನಿರ್ಧರಿಸಿದೆವು. ಈ ಸಾಂಸ್ಕೃತಿಕ ವೇದಿಕೆಗೆ ಸನದಿಯವರು ಸೂಚಿಸಿದ 'ಕಲಾಭಾರತಿ' ಎನ್ನುವ ಹೆಸರನ್ನು ಎಲ್ಲರೂ ಇಷ್ಟಪಟ್ಟರು. ಹೀಗೆ ಆರಂಭವಾಯಿತು 'ಕಲಾಭಾರತಿ'.

ಕಲಾಭಾರತಿ ಕಾರ್ಯಕ್ರಮಗಳ ನಿರ್ವಹಣೆಗಾಗಿ ನಿಯೋಜಿಸಲ್ಪಟ್ಟ ನನಗೆ ಸಂಗೀತಜ್ಞಾನ ಅಷ್ಟಕ್ಕಷ್ಟೆ ಎನ್ನುವುದನ್ನು ಒಪ್ಪಿಕೊಳ್ಳಲು ನಾನು ನಾಚುವುದಿಲ್ಲ. ಆದರೆ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಪ್ರಸಿದ್ಧ ಹಾಡುಗಾರರು ಯಾರು ಯಾರು ಎಂಬ ಕನಿಷ್ಠ ಪರಿಜ್ಞಾನ ನನಗಿತ್ತು. ಸನದಿಯವರು ಆಕಾಶವಾಣಿಯಲ್ಲಿ ಉನ್ನತ ಹುದ್ದೆಯಲ್ಲಿದ್ದುದರಿಂದ, ಆಕಾಶವಾಣಿ ಕಲಾವಿದರು, ಅದರಲ್ಲಿಯೂ ಪ್ರಸಿದ್ಧರು ಯಾರು ಎನ್ನುವುದನ್ನು ನನಗೆ ಹೇಳಿ ನನ್ನ ಜವಾಬ್ದಾರಿಗೆ ತಾವೂ ಕೈಜೋಡಿಸಿದರು.

ಕಲಾಭಾರತಿಯ ಮೊಟ್ಟ ಮೊದಲ ಕಚೇರಿ ಹಿಂದೂಸ್ತಾನೀ ಸಂಗೀತ ಕ್ಷೇತ್ರದ ಖ್ಯಾತ ಗಾಯಕಿ ಶ್ರೀಮತಿ ಶ್ರುತಿ ಸಡೋಲಿಕರ್ ಅವರದಾಗಿತ್ತು. ನಾನು ಹಾಗೂ ಕರ್ನಾಟಕ ಸಂಘದಲ್ಲಿ ಆಗ ಮೇನೇಜರ್ ಆಗಿ ದುಡಿಯುತ್ತಿದ್ದ ಶ್ರೀ ಗಿಲ್ಬರ್ಟ್ ಅವರ ಮನೆಗೆ ಹೋಗಿ ಕಚೇರಿ ನೀಡುವಂತೆ ಅವರನ್ನು ಒಪ್ಪಿಸಿದೆವು. ಆಗಿನ ಅವರ ಕಚೇರಿಯ ಫೀಯನ್ನು ಕೊಡುವುದು ನಮ್ಮ ಅಳವಿಗೆ ಮೀರಿದ್ದಾಗಿತ್ತು. ಸಂಘದ ಉದ್ದೇಶವನ್ನು ತಿಳಿಸಿ 'ಕಲಾಭಾರತಿ'ಯ ಉದ್ಘಾಟನೆ ಅವರ ಕಚೇರಿಯಿಂದಲೇ ಆಗುತ್ತಿದೆ ಎಂದು ತಿಳಿಸಿದಾಗ ಅವರು ನಾವು ನೀಡಲೊಪ್ಪಿದ ಮೊತ್ತಕ್ಕೆ ಕಚೇರಿ ನಡೆಸಿಕೊಡಲು ಸಮ್ಮತಿಸಿದರು. ಅಂದು ಸಭಾಗೃಹ ಸಂಗೀತ ಪ್ರೇಮಿಗಳಿಂದ ತುಂಬಿ ತುಳುಕುತ್ತಿತ್ತು. ಶ್ರುತಿಯವರ ಕಚೇರಿಯೂ ಅದ್ಭುತವಾಗಿತ್ತು. ಕಚೇರಿಯ ಬಳಿಕ ನನ್ನನ್ನು ಭೇಟಿಮಾಡಿದ ಪ್ರಕಾಶ ಬುರ್ಡೆಯವರು ನಮ್ಮ ಪ್ರಯತ್ನವನ್ನು ಹೊಗಳಿ, ತಾವೂ ಕಲಾಭಾರತಿಯಲ್ಲಿ ಸಕ್ರಿಯವಾಗಿ ದುಡಿಯುತ್ತೇನೆ ಎಂದುದಲ್ಲದೆ ಹಲವಾರು ಹಾಡುಗಾರರ ಯಾದಿಯನ್ನೂ ನೀಡಿದರು.

ಬುರ್ಡೆಯವರು 'ಟೈಮ್ಸ್ ಆಫ್ ಇಂಡಿಯಾ', 'ಇಕಾನೊಮಿಕ್ ಟೈಮ್ಸ್' 'ಆಫ್ಟರ್‌ನೂನ್ ನ್ಯೂಸ್' ಇತ್ಯಾದಿ ಪತ್ರಿಕೆಗಳಿಗೆ ಬರೆಯುತ್ತಿದ್ದ ಸಂಗೀತ ಮತ್ತು ನಾಟಕಗಳ ವಿಮರ್ಶೆಗಳನ್ನು ನಾನು ಓದುತ್ತಿದ್ದೆ. ಅವರು ಸಂಗೀತವನ್ನು ಕುರಿತು ಬರೆಯುವಾಗ ಹಾಡುಗಾರ/ಹಾಡುಗಾರ್ತಿಯ ವೈಯಕ್ತಿಕತೆಯ ಬಗ್ಗೆ ಎಂದೂ ಗಮನ ಹರಿಸದೆ ಕಲಾವಿದರ ಮನೋಧರ್ಮ ಹಾಗೂ ಸಂಗೀತ ಪ್ರಸ್ತುತಿಯನ್ನು ಕುರಿತು ತುಂಬ ಆತ್ಮೀಯತೆಯಿಂದ ಬರೆಯುತ್ತಿದ್ದರು. ತಪ್ಪನ್ನು ತೋರಿಸುವಾಗಲೂ ಕಠಿನ ಶಬ್ದಗಳನ್ನು ಬಳಸುತ್ತಿರಲಿಲ್ಲ. ಜೊತೆಗೆ, ಯಾರನ್ನೂ ಹೊಗಳಿ ಅಟ್ಟಕ್ಕೇರಿಸುತ್ತಿರಲಿಲ್ಲ. ಅವರು ಮಾಡುತ್ತಿದ್ದ ನಾಟಕ ವಿಮರ್ಶೆಗಳು ಕೂಡಾ ನಿರ್ದೇಶಕರಿಗೆ ಹೊಸದಾರಿಯನ್ನು ಸೂಚಿಸುವಂತಹುದ್ದಾಗಿದ್ದವು.

ಬುರ್ಡೆ ಹಾಗೂ ಕರ್ನಾಟಕ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಚಾಲಕರಾಗಿದ್ದ ಕೆ. ಚಂದ್ರಮೌಳಿಯವರ ಜೊತೆಗೂಡಿ ನಾವು ಹಲವಾರು ಒಳ್ಳೆಯ ಕಾರ್ಯಕ್ರಮಗಳನ್ನು 'ಕಲಾಭಾರತಿ'ಯಲ್ಲಿ ಪ್ರಸ್ತುತಪಡಿಸಲು ಸಾಧ್ಯವಾಯಿತು. ಸ್ವಲ್ಪಕಾಲ ಕರ್ನಾಟಕ ಸಂಘದ ಡೈರೆಕ್ಟರ್ ಎಂದು ನಿಯುಕ್ತಗೊಂಡ ಬುರ್ಡೆಯವರಿಗೆ ಈ ಪೂರ್ಣಕಾಲೀನ ಉದ್ಯೋಗ ಹಿಡಿಸಲಿಲ್ಲ. ನಮ್ಮ ಜೊತೆ 'ಕಲಾಭಾರತಿ'ಯಲ್ಲಿ ಆನರರಿಯಾಗಿ ಕೆಲಸಮಾಡುವುದು ಅವರಿಗೆ ಹೆಚ್ಚು ತೃಪ್ತಿಯನ್ನು ಕೊಟ್ಟಿತ್ತು.

ಕಲಾಭಾರತಿಯ ಕಾರ್ಯಕ್ರಮ ಪ್ರತಿ ಭಾನುವಾರ ಕಟ್ಟುನಿಟ್ಟಾಗಿ 10 ಗಂಟೆಗೆ ಆರಂಭವಾಗಿ 12.30ಕ್ಕೆ ಮುಗಿಯುತ್ತಿತ್ತು. ಮುಖ್ಯ ಕಲಾವಿದರ, ಸಹ ಕಲಾವಿದರ ಪರಿಚಯ, ಅವರ ಸಂಗೀತವನ್ನು ಕುರಿತು ಕೆಲಮಾತುಗಳನ್ನು ಸಂಯೋಜಕನಾಗಿ ನಾನು ಸುಮಾರು ಒಂದು ವರ್ಷಕಾಲ ಮಾಡಿದೆ. ನಾನು ದೇವನಾರ್‌ನ ನನ್ನ ಮನೆಯಿಂದ ಸಂಘಕ್ಕೆ ತಲುಪುವುದು ತಡವಾದಲ್ಲಿ ಬುರ್ಡೆಯವರು ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ಕಲಾಭಾರತಿಯ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗುತ್ತಿದ್ದವರಲ್ಲಿ ಹೆಚ್ಚಿನವರು ಮರಾಠಿ ಮನೆಮಾತಿನವರು. ಬುರ್ಡೆಯವರು ಮರಾಠಿಯಲ್ಲಿಯೂ ಅಸ್ಖಲಿತವಾಗಿ ಮಾತನಾಡಬಲ್ಲವರೂ, ಸ್ವತಃ ಸಂಗೀತಗಾರರಲ್ಲದಿದ್ದರೂ ಸಂಗೀತದ

ಬಗ್ಗೆ ಅಪಾರ ಪಾಂಡಿತ್ಯವುಳ್ಳವರೂ ಆಗಿದ್ದುದರಿಂದ ಮುಂದೆ ಅವರೇ ಕಲಾಭಾರತಿಯ ಚಾರ್ಜ್ ವಹಿಸಿಕೊಳ್ಳಬೇಕೆಂದು ನಾನೂ ಚಂದ್ರಮೌಳಿಯವರೂ ಅವರನ್ನು ಒತ್ತಾಯಿಸಿ ಅವರ ಮನ ಒಲಿಸಿದೆವು.

ಮೊದಲ ವರ್ಷ ಕಾರ್ಯಕ್ರಮವನ್ನು ನೀಡಿದವರಲ್ಲಿ ಪ್ರಮುಖರೆಂದರೆ ಮೀನಾಕ್ಷಿ ಮುಖರ್ಜಿ, ಎಂ.ಎಸ್. ಕಾಮತ್, ಗೀತಾ ಜಾವಡೇಕರ್, ಸರಳಾಯ ಸಿಸ್ಟರ್ಸ್, ಎಂ.ಎಸ್. ಶೀಲಾ, ಆರತಿ ಅಂಕಲೀಕರ್, ಶಿವಾನಂದ ಪಾಟೀಲ್ ಹಾಗೂ ಬೆಂಡೀಬಝಾರ್ ಘರಾಣೆಯ ಕನ್ನಡಿಗ ರಮೇಶ್ ನಾಡಕರ್ಣಿಯವರ ಶಿಷ್ಯರು. ವಿಶೇಷವೆಂದರೆ ಇವರಲ್ಲಿ ಹೆಚ್ಚಿನವರು ಕನ್ನಡಿಗರು.

ಬುರ್ಡೆಯವರಿಗೆ ಅಶ್ವಿನಿ ಭಿಡೆ ದೇಶಪಾಂಡೆಯವರ ತಾಯಿ ಸರಳಾ ಭಿಡೆಯವರ ಪರಿಚಯವಿತ್ತು. ಅವರ ಮೂಲಕ ಕರ್ನಾಟಕ ಸಂಘ ಕೊಡುವ ಅಲ್ಪ ಮೊತ್ತಕ್ಕೆ ಅಶ್ವಿನಿಯ ಸಂಗೀತ ಕಚೇರಿಯನ್ನು ಕಲಾಭಾರತಿಯಲ್ಲಿ ಏರ್ಪಡಿಸಬೇಕೆನ್ನುವ ಯೋಜನೆಯನ್ನು ಹಾಕಿಕೊಂಡು ಅಶ್ವಿನಿಯನ್ನು ಒಪ್ಪಿಸಿದರು. ಅಶ್ವಿನಿಯಾದರೋ ಮಲ್ಲಿಕಾರ್ಜುನ ಮನ್ಸೂರರಿಂದಲೇ ಶಹಬ್ಬಾಸ್‌ಗಿರಿ ಪಡೆದ ಖ್ಯಾತ ಗಾಯಕಿ. ಈಕೆ ಕರ್ನಾಟಕ ಸಂಘಕ್ಕೆ ಬಂದವಳೆ ನನ್ನನ್ನು ಕಂಡು ನಮಿಸಿ ಬುರ್ಡೆಯವರಿಗೆ ನನ್ನ ಹಾಗೂ ಆಕೆಯ ಗುರು-ಶಿಷ್ಯೆ ಬಾಂಧವ್ಯವನ್ನು ತಿಳಿಯಪಡಿಸಿದಳು. ಅಶ್ವಿನಿ ಬಯೋಕೆಮಿಸ್ಟ್ರಿಯಲ್ಲಿ ತನ್ನ ಪಿಎಚ್‌ಡಿ ಅಧ್ಯಯನವನ್ನು ಭಾಭಾ ಪರಮಾಣು ಸಂಶೋಧನಾ ಕೇಂದ್ರದಲ್ಲಿ (ಬಿಎಆರ್‌ಸಿ) ಕೆಲಸ ಮಾಡುತ್ತಿದ್ದಾಗ ನನ್ನ ಲ್ಯಾಬೊರೇಟರಿಯ ಸೌಕರ್ಯಗಳನ್ನು ನನ್ನ ಪರವಾನಗಿಯೊಂದಿಗೆ ಬಳಸಿಕೊಳ್ಳುತ್ತಿದ್ದಳು. ನನ್ನ ಲ್ಯಾಬೊರೇಟರಿಯಾದರೋ ರಿಸರ್ಚ್‌ಗೆ ಬೇಕಾದ ಅತ್ಯಾಧುನಿಕ ಸಲಕರಣೆಗಳನ್ನು ಒಳಗೊಂಡು, ನಮ್ಮ ಬಯಾಲಜಿ ಡಿವಿಜನ್‌ನಲ್ಲಿಯೇ ಅತಿ ಸುಸಜ್ಜಿತ ಲ್ಯಾಬ್ ಎಂಬ ಹೆಸರನ್ನು ಮಾಡಿತ್ತು. ಅಶ್ವಿನಿ ನನ್ನನ್ನು ಆಗ ಸಂಬೋಧಿಸುತ್ತಿದ್ದ 'ಸರ್' ಎನ್ನುವ ಪದವನ್ನು ಡಾ. ಅಶ್ವಿನಿಯಾದ ಬಳಿಕವೂ ಬಿಟ್ಟಿರಲಿಲ್ಲ. ಮರಾಠಿಯಲ್ಲಿ ಬುರ್ಡೆಯವರ ಬಳಿ ಮಾತನಾಡುತ್ತಿದ್ದ ಅಶ್ವಿನಿ ನನ್ನನ್ನು ಪ್ರಶಂಸಿಸುತ್ತ 'ನನ್ನ ಸರ್ ಹಾಗೆಯೇ ನಾನೂ ಕೂಡಾ ಈಗ ಅರೆ ಕನ್ನಡಿಗಳು' ಎಂದಾಗ ನನಗೂ ಬುರ್ಡೆಯವರಿಗೂ ಆಶ್ಚರ್ಯವಾಯಿತು. ಅಶ್ವಿನಿಯೇ ಈ ಕುರಿತು ಸ್ಪಷ್ಟನೆ ನೀಡಿದಳು. ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಗಂಗಾಧರ ರಾವ್ ದೇಶಪಾಂಡೆಯವರ ಮರಿಮಗನೇ ಈಕೆಯ ಪತಿಯಂತೆ. ಆದರೆ, ಈ ಪೀಳಿಗೆಯ ದೇಶಪಾಂಡೆಗಳಿಗೆ ಕನ್ನಡ ಬರುತ್ತಿರಲಿಲ್ಲ. ಆದರೂ ಅಶ್ವಿನಿಗೆ ತನ್ನ ಕರ್ನಾಟಕದ ನಂಟಿನ ಬಗ್ಗೆ ಹೆಮ್ಮೆಯಿತ್ತು.

ಅಶ್ವಿನಿಯ ಸಂಗೀತ ಕಚೇರಿಯಾದ ಬಳಿಕ ಆಕೆ ಹಣ ತೆಗೆದುಕೊಳ್ಳಲು ನಿರಾಕರಿಸಿ ಕೇವಲ ಹಾರ್ಮೋನಿಯಂ ಮತ್ತು ತಬಲಾ ಸಾಥಿಗಳಿಗಾಗಿಯಷ್ಟೆ ಅಲ್ಪ ಮೊಬಲಗನ್ನು ಸ್ವೀಕರಿಸಿದಳು. ಇದೇ ಡಾ. ಅಶ್ವಿನಿ ಭಿಡೆ ದೇಶಪಾಂಡೆ ಬುರ್ಡೆಯವರ ಮೂಲಕ 25–30 ಸಾವಿರದ ದೇಣಿಗೆಯನ್ನು ಕರ್ನಾಟಕ ಸಂಘಕ್ಕೆ ನೀಡಿದ್ದುದನ್ನು, ಹಾಗೂ ಬುರ್ಡೆಯವರು ಇದಕ್ಕಾಗಿ ವಹಿಸಿದ ಮುತುವರ್ಜಿಯನ್ನೂ ಇಲ್ಲಿ ದಾಖಲಿಸಲೇ ಬೇಕು. ಮುಂದೆಯೂ ಅಶ್ವಿನಿ ಆಗಾಗ ತನ್ನ ತಾಯಿಯ ಸ್ಮರಣೆಯಲ್ಲಿ ದೊಡ್ಡ

ಮೊತ್ತದ ದೇಣಿಗೆಯನ್ನು ಕರ್ನಾಟಕ ಸಂಘಕ್ಕೆ ಕೊಡುತ್ತಿದ್ದುದಲ್ಲದೆ, ಈ ಕಾರ್ಯವನ್ನು ಈಗಲೂ ಮುಂದುವರಿಸುತ್ತಿದ್ದಾಳೆ.

ಕಲಾಭಾರತಿಯ ಕಾರ್ಯಕ್ರಮಗಳಿಂದ ಕರ್ನಾಟಕ ಸಂಘದ ವೆಚ್ಚ ಹೆಚ್ಚುತ್ತಿರುವುದು ಸರ್ವವಿದಿತವಾಗಿತ್ತು. ಹಾಗಾಗಿ ಆದಷ್ಟು ಧನಸಂಗ್ರಹ ಮಾಡುವ ತುರ್ತು ಇತ್ತು. ಈ ಧನ ಸಂಗ್ರಹಕ್ಕಾಗಿ ಅಪಾರ ಶ್ರಮವಹಿಸಿದವರು ಬುರ್ಡೆ ಹಾಗೂ ಚಂದ್ರಮೌಳಿಯವರು. ಚಂದ್ರಮೌಳಿಯವರು ಪ್ರತಿಷ್ಠಿತ ಕಂಪನಿಯೊಂದರ ವೈಸ್ ಪ್ರೆಸಿಡೆಂಟ್ ಆಗಿದ್ದರು. ಕನ್ನಡ, ಇಂಗ್ಲಿಷ್‌ಗಳಲ್ಲಿ ಬರೆದು ಖ್ಯಾತ ಸಾಹಿತಿ ಎನಿಸಿಕೊಂಡ ಇವರಿಗೆ ಕಾರ್ಪೊರೇಟ್ ವಲಯದಲ್ಲಿ ಒಳ್ಳೆಯ ಸಂಪರ್ಕವಿತ್ತು. ಚಂದ್ರಮೌಳಿಯವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ಪದವೀಧರರು. ಕಾಶಿಯ ಬಗ್ಗೆ ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಬೃಹತ್ ಗ್ರಂಥವನ್ನು ರಚಿಸಿದ್ದಾರೆ. ಅವರ ಸಂಪರ್ಕದ ಬೀಸು ಅಖಿಲ ಭಾರತ ಮಟ್ಟದ್ದಾದ್ದರಿಂದ ಕಲಾಭಾರತಿಗಾಗಿ ಸಾಕಷ್ಟು ದೇಣಿಗೆ ಸಂಗ್ರಹಿಸುವುದು ಅವರಿಗೆ ಸಾಧ್ಯವಾಯಿತು. ಜೊತೆಗೆ ಸಂಗೀತಪ್ರೇಮಿಯೂ ಆದ ಅವರು ಶಹನಾಯ್ ಮಾಂತ್ರಿಕ ಬಿಸ್ಮಿಲ್ಲಾ ಖಾನರ ಕಛೇರಿಯನ್ನೂ ಕಲಾಭಾರತಿ ವೇದಿಕೆಯಲ್ಲಿ ಏರ್ಪಡಿಸಿದರು. ಇದಲ್ಲದೆ, ಪಂ. ರವಿಶಂಕರರ ಶಿಷ್ಯ ಅನಿವಾಸೀ ಭಾರತೀಯ ಸುಧೀಂದ್ರ ಅವರ ಹೆಸರನ್ನೂ ಬುರ್ಡೆಯವರ ಗಮನಕ್ಕೆ ತಂದು ಅವರ ಸಿತಾರ್ ವಾದನವನ್ನೂ ಏರ್ಪಡಿಸಿದರು. ಬುರ್ಡೆ, ಚಂದ್ರಮೌಳಿ ಹಾಗೂ ನಾನು –ಹೀಗೆ ಒಂದು ಟೀಮ್ ಆಗಿ ಕೆಲಸ ಮಾಡುತ್ತಾ ಕರ್ನಾಟಕ ಸಂಗೀತದ ಖ್ಯಾತ ಕಲಾವಿದರಾದ ಅರುಣಾ ಸಾಯಿರಾಮ್, ನಾಗಮಣಿ ಶ್ರೀನಾಥ್, ಕಾಸರವಳ್ಳಿ ಸಿಸ್ಟರ್ಸ್, ಸುಕನ್ಯಾ ಪ್ರಭಾಕರ್ ಮುಂತಾದವರ ಕಚೇರಿಗಳನ್ನು ಕಲಾಭಾರತಿಯಲ್ಲಿ ಏರ್ಪಡಿಸಿದೆವು.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನಿಂದಲೂ ಹಲವಾರು ಕಾರ್ಯಕ್ರಮಗಳನ್ನು ಕಲಾಭಾರತಿಯಲ್ಲಿ ಸಾದರಪಡಿಸುವುದು ನಮಗೆ ಸಾಧ್ಯವಾಯಿತು. ಎಂ.ಎಸ್. ಶೀಲಾ, ಆರ್.ಕೆ. ಪದ್ಮನಾಭ, ಪಂ. ರಾಮರಾವ್ ನಾಯಕ್, ವಿನಾಯಕ ತೊರವಿ, ವೈಜಯಂತಿ ಕಾಶಿ(ನೃತ್ಯ), ಗಣಪತಿ ಭಟ್ ಹಾಸಂಗಿ, ಪರಮೇಶ್ವರನ್ ಮತ್ತು ಸುಭದ್ರಮ್ಮ (ನಾಟ್ಯ ಸಂಗೀತ) ಮೊದಲಾದ ಕಲಾವಿದರು ರಸಿಕರನ್ನು ರಂಜಿಸಿದರು.

ಬುರ್ಡೆಯವರು ಸ್ವತಃ ಗಾಯಕರಾಗಿರದಿದ್ದರೂ ಸಂಗೀತವನ್ನು ಕಲಿತು, ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತದಲ್ಲಿ ಅಪಾರ ಪರಿಜ್ಞಾನವನ್ನು ಹೊಂದಿದ್ದುದು ಹೆಚ್ಚಿನವರಿಗೆ ತಿಳಿದಿಲ್ಲ. ಅವರ ನಿಕಟ ಸಹವಾಸದಿಂದ ಶ್ರುತಿ, ತಾಳ, ರಾಗಗಳನ್ನು ಕುರಿತು ಅಲ್ಪಸ್ವಲ್ಪ ತಿಳಿವಳಿಕೆಯನ್ನು ನಾನು ಪಡೆದುಕೊಂಡಿದ್ದೇನೆ.

ಒಮ್ಮೆ ನಾನೂ, ಬುರ್ಡೆಯವರೂ ಖ್ಯಾತ ಗಾಯಕ ಹಾಗೂ ಭೀಮಸೇನ ಜೋಶಿಯವರ ಶಿಷ್ಯರಾದ ಮಾಧವ ಗುಡಿಯವರ ಗಾಯನವನ್ನು ಕೇಳಲು ಮೈಸೂರು ಅಸೋಸಿಯೇಷನ್‌ಗೆ ಹೋಗಿದ್ದೆವು. ಅದೇಕೋ ಅಂದು ಗುಡಿಯವರ ಕಚೇರಿ ಅಷ್ಟಾಗಿ ಕಳೆಗಟ್ಟಲಿಲ್ಲ. ಕಾರ್ಯಕ್ರಮ ಮುಗಿದ ಬಳಿಕ ಗುಡಿಯವರು ಸ್ವಲ್ಪ ಅಪರಾಧಿ ಪ್ರಜ್ಞೆಯಿಂದ ಬುರ್ಡೆಯವರನ್ನು 'ಕಾರ್ಯಕ್ರಮ ಹೇಗಾಯ್ತು ಸರ್' ಎಂದು ಕೇಳಿದರು. ಒಳ್ಳೆಯ

ಗಾಯಕರೂ, ಜೋಶಿಯವರ ಉತ್ತರಾಧಿಕಾರಿ ಎನಿಸಿದವರೂ ಆದ ಗುಡಿಯವರ ಅಂದಿನ ಹಾಡುಗಾರಿಕೆ ಪೀಚಲಾಗಿದ್ದುದದಕ್ಕೆ ಬುರ್ಡೆಯವರಿಗೆ ಸಿಟ್ಟು ಬಂದಿತ್ತು. ಅವರು ಒಂದೇ ಶಬ್ದದಲ್ಲಿ 'ಸಪ್ಪೆಯಾಗಿತ್ತು' ಎಂದರು. ಬಳಿಕ ತಾನು ತುಂಬ ಕಠಿಣನಾದೆನೆಂದೆನಿಸಿ 'ನಮಗೆ ನೆಗಡಿಯಾಗಿರಬೇಕು, ಅಲ್ಲವೆ' ಎನ್ನುತ್ತಾ ಗುಡಿಯವರ ಜೋಲುಮೋರೆಯನ್ನು ಕಂಡು ಅವರನ್ನು ಸಮಾಧಾನಪಡಿಸಿದರು.

ಬುರ್ಡೆಯವರು ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಖ್ಯಾತನಾಮರನ್ನೆಲ್ಲಾ ಬಲ್ಲವರಾಗಿದ್ದರು. ಅವರು ಕಲಾಭಾರತಿಗೆ ಕಾರ್ಯಕ್ರಮವನ್ನು ಕೊಡಬೇಕೆಂದು ಆಹ್ವಾನಿಸಿದರೆ ಕರ್ನಾಟಕ ಸಂಘ ಅಲ್ಪ ಮೊತ್ತದ ಸಂಭಾವನೆಯನ್ನು ನೀಡುತ್ತಿದ್ದರೂ, ಯಾರೂ ಒಲ್ಲೆ ಎನ್ನುತ್ತಿರಲಿಲ್ಲ. ಪಂ. ಯಶವಂತ ಬುವಾ ಜೋಷಿ, ಉಲ್ಲಾಸ ಕಶಾಲ್ಕರ್, ಜಯತೀರ್ಥ ಮೇವುಂಡಿ, ವಸುಂಧರಾ ಕೋಂಕಾಳಿ, ಸುಶೀಲಾರಾಣಿ ಪಟೇಲ್, ದೇವಕಿ ಪಂಡಿತ್, ರಾಜಶೇಖರ ಮನ್ಸೂರ್, ಫಿರೋಜ್ ದಸ್ತೂರ್ ಅವರಂತಹ ಹಾಡುಗಾರರು, ಶಂಕರ ಅಭ್ಯಂಕರ್, ಉಸ್ತಾದ್ ಹಾಲಿಂ ಜಾಫರ್ ಖಾನ್, ಭಾಲೇಖಾನ್, ಓಂಕಾರ ಗುಲ್ವಾಡಿ, ಅರವಿಂದ ಪಾರೇಖ್, ಸತೀಶ್ ವ್ಯಾಸ್ ಅವರಂತಹ ವಾದಕರು, ಕನಕ್ ರೇಳೆ, ಸುಚೇತಾ ಭಿಡೆ ಚಾಫೇಕರ್, ಸುರಭಿ ಮಹಾಪಾತ್ರರಂತಹ ನೃತ್ಯಪಟುಗಳು, ಕಲಾಭಾರತಿ ವೇದಿಕೆಯಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಪಂ. ರಾಮರಾವ್ ನಾಯಕರಂತೂ (ಅವರು ಕರ್ಮಠ ವೈದಿಕರು) ಏಕಾದಶಿಯಂದು ಉಪವಾಸ ವ್ರತದಲ್ಲೇ, ಒಂದು ತೊಟ್ಟು ನೀರನ್ನೂ ಸೇವಿಸದೆ ತುಂಬಿದ ಸಭೆಯ ಗಡಚಿಕ್ಕುವ ಚಪ್ಪಾಳೆಯೊಂದಿಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದಂತಹ ಅವಿಸ್ಮರಣೀಯ ಕಚೇರಿಯನ್ನು ನೀಡಿದ್ದಾರೆ.

ಕರ್ನಾಟಕ ಸಂಘದ ಬೇರೊಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸನದಿಯವರು ಮಾಲಾ ಬೀಳಗಿಯವರ ಸಂಗೀತ ಕಾರ್ಯಕ್ರಮ ಏರ್ಪಡಿಸಿದ್ದು, ಈಕೆ ಹಳೆಯ ಕಾಲದ ಹಿಂದಿ ಸಿನೆಮಾಗಳಲ್ಲಿ ಹಿನ್ನೆಲೆಗಾಯಕಿಯಾಗಿ ಮನೆಮಾತಾಗಿದ್ದ ಅಮೀರಬಾಯಿ ಕರ್ನಾಟಕಿಯ ಮೊಮ್ಮಗಳು ಎಂದು ಬುರ್ಡೆಯವರಿಗೆ ಆಕೆಯನ್ನು ಪರಿಚಯಿಸಿದ್ದರು. ಅಮೀರಬಾಯಿ ಕರ್ನಾಟಕಿಯ ಬಗ್ಗೆ ಮಾಹಿತಿಯನ್ನು ಕಲೆಹಾಕುತ್ತಿದ್ದ ಬುರ್ಡೆಯವರಿಗೆ ನಿಧಿ ದೊರೆತಂತಾಯಿತು. ಆಗ ಕರ್ನಾಟಕ ಸಂಘದ ಕಾರ್ಯಾಧ್ಯಕ್ಷನಾಗಿದ್ದ ನನಗೆ, ಮಾಲಾ ಬೀಳಗಿಯವರ ಕಚೇರಿಯೊಂದನ್ನು ಕಲಾಭಾರತಿಯಲ್ಲಿ ಏರ್ಪಡಿಸಿದರೆ ಹೇಗೆ ಎಂದು ಕೇಳಿದರು. ನಾನು ಸಮ್ಮತಿಸಿದೆ. ಮಾಲಾ ಬೀಳಗಿಯವರು ಬಿಜಾಪುರದಿಂದ ಬಂದು ಕಲಾಭಾರತಿಯಲ್ಲಿ ಹಾಡಿದ್ದಷ್ಟೇ ಅಲ್ಲ, ಅಮೀರಬಾಯಿಯ ಕುರಿತಾದ ಅನೇಕ ಮಾಹಿತಿಗಳನ್ನು ಬುರ್ಡೆಯವರಿಗೆ ಒದಗಿಸಿದರು. ಅಮೀರಬಾಯಿಯ ಬಗ್ಗೆ ತಾನು ಮಾಡಿದ ಸಂಶೋಧನೆ, ಕಲೆಹಾಕಿದ ಮಾಹಿತಿಗಳನ್ನೆಲ್ಲಾ ಡಾ. ರಹಮತ್ ತರೀಕೆರೆಯವರಿಗೆ ಬುರ್ಡೆಯವರು ನೀಡಿದರು. ಡಾ. ತರೀಕೆರೆಯವರು ತಮ್ಮ ಪ್ರಯತ್ನಗಳ ಜೊತೆಗೆ, ಬುರ್ಡೆಯವರಿಂದ ಪಡೆದ ಮಾಹಿತಿಗಳನ್ನೂ ಸೇರಿಸಿ ಅಮೀರಬಾಯಿ ಕರ್ನಾಟಕಿಯ ಮೇಲೆ ಪುಸ್ತಕವನ್ನು ಬರೆದುದು ಈಗ ಇತಿಹಾಸ.

ಬಾಲಗಂಧರ್ವರ ಕಡೆಗಾಲದಲ್ಲಿ ಅವರ ಆರೋಗ್ಯ ಹದಗೆಟ್ಟಿದ್ದಾಗ ಅವರ ಆರೈಕೆ ಮಾಡುತ್ತಿದ್ದ ಗೋಹರಬಾಯಿಯ ಕುರಿತು ಮರಾಠಿ ಮಾಧ್ಯಮಗಳಲ್ಲಿ, ಆಕೆ ಬಾಲಗಂಧರ್ವರ ಹೆಂಡತಿಯಲ್ಲ, ಇಟ್ಟುಕೊಂಡವಳು ಎನ್ನುವ ಅರ್ಥದ ಟೀಕೆಗಳು ಬಂದಾಗ ಸ್ವತಃ ಒಳ್ಳೆಯ ಹಾಡುಗಾರ್ತಿ ಎಂದು ಹೆಸರು ಮಾಡಿದ್ದ ಕನ್ನಡತಿ ಗೋಹರಬಾಯಿಯ ವೈವಾಹಿಕ ಸ್ಥಿತಿ ಕಾನೂನು ಬಾಹಿರವಾದುದಲ್ಲ, ಹಣದ ಮುಗ್ಗಟ್ಟು, ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಬಾಲಗಂಧರ್ವರಿಗೆ ಆಸರೆಯಾದವಳು ಈಕೆ ಎಂದು ಆಧಾರಸಮೇತವಾಗಿ ಬುರ್ಡೆಯವರು ಮರಾಠಿ ಪತ್ರಿಕೆಗಳಲ್ಲಿ ಬರೆದು ಟೀಕಾಕಾರರ ಬಾಯಿಮುಚ್ಚಿಸಿದ್ದರು.

ಕನ್ನಡದ ಖ್ಯಾತ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪನವರು ಸಂಗೀತ ಮತ್ತು ಸಂಗೀತಗಾರರ ಬಗ್ಗೆ ಕಾದಂಬರಿ ಬರೆಯಲು ಆಲೋಚಿಸಿದ್ದ ಸಮಯವದು. ವಿಸ್ತೃತವಾದ ಪೂರ್ವತಯಾರಿ ಹಾಗೂ ರಿಸರ್ಚ್ ಮಾಡದೆ ಬರೆಯುವ ಜಾಯಮಾನ ಅವರದಲ್ಲ. ಕೆಲವು ಉಸ್ತಾದ್‌ರು, ಪಂಡಿತರಂತಹ ಉತ್ತರಾದಿ ಸಂಗೀತ ಕ್ಷೇತ್ರದ ಗಾಯಕ–ವಾದಕರ ಸಂದರ್ಶನ ಮಾಡಬೇಕೆಂದು ನಿರ್ಧರಿಸಿದ ಅವರು ಮುಂಬಯಿಗೆ ಬಂದು ಬುರ್ಡೆಯವರನ್ನು ಸಂಪರ್ಕಿಸಿದರು. ಬುರ್ಡೆಯವರು ಭೈರಪ್ಪನವರನ್ನು ಹಲಕೆಲವು ಸಂಗೀತಗಾರರಲ್ಲಿಗೆ ಕರೆದುಕೊಂಡು ಹೋಗಿ ಅವರುಗಳ ಸಂದರ್ಶನದಲ್ಲಿ ದುಭಾಷಿಯಾಗಿ ಕೆಲಸಮಾಡಿದರು. ಓರ್ವ ಸುಪ್ರಸಿದ್ಧ ಸಿತಾರ್ ವಾದಕರು ಬಾರ್ ಒಂದರಲ್ಲಿ ಮಾತುಕತೆ ನಡೆಸಬಹುದು ಎಂದುಬಿಟ್ಟರು. ಆಗ ನಾನೂ ಇದ್ದೆ. ಮಾತುಂಗದ ಬಾರ್ ಒಂದರಲ್ಲಿ ನಾನು, ಬುರ್ಡೆ, ಭೈರಪ್ಪನವರು ಈ ಖ್ಯಾತ ಪಂಡಿತ್‌ಜೀಯನ್ನು ಭೇಟಿಮಾಡಿದೆವು. ಈ ಪಂಡಿತ್‌ಜೀ ನಮಗೆಲ್ಲ ವಿಸ್ಕಿ ವಿತರಿಸಿದರು. ಭೈರಪ್ಪನವರು 'ಟೀಟೋಟಲರ್' ಆದ್ದರಿಂದ ತಮ್ಮ ಪಾನೀಯವನ್ನು ನಯವಾಗಿ ನಿರಾಕರಿಸಿದರು. ಸಿತಾರ್‌ವಾದಕ ಪಂಡಿತ್‌ಜೀ ತನ್ನ ಸಂಗೀತ ಪ್ರಪಂಚದ ಅನುಭವಗಳನ್ನು ನಮ್ಮ ಮುಂದೆ ತೆರೆದಿಟ್ಟರು. ಅವರ ಮರಾಠಿ ಮಾತುಗಳನ್ನು ಬುರ್ಡೆಯವರು ಕನ್ನಡಿಸುತ್ತಿದ್ದರು. ಭೈರಪ್ಪನವರು ತಮ್ಮ ಮಂದ್ರ ಕಾದಂಬರಿಯಲ್ಲಿ ಬುರ್ಡೆಯವರ ನೆರವನ್ನು ಸ್ಮರಿಸಿದ್ದಾರೆ.

ಗಂಗೂಬಾಯಿ ಹಾನಗಲ್ಲರವರು ಬೇರೆ ಬೇರೆ ಸಂದರ್ಭಗಳಲ್ಲಿ ಕಲಾಭಾರತಿ ಯಲ್ಲಲ್ಲದಿದ್ದರೂ ಕರ್ನಾಟಕ ಸಂಘದಲ್ಲಿ ಮೂರು ನಾಲ್ಕು ಬಾರಿ ಅದ್ಭುತವಾಗಿ ಹಾಡಿದ್ದಾರೆ. ಒಂದು ಬಾರಿ ತುಂಬಿದ ಸಭೆಯಲ್ಲಿ ಅವರು 'ಮುಂಬಯಿ ನನ್ನ ತವರು ಮನೆ, ಏಕೆಂದರೆ ಇಲ್ಲಿ ನನ್ನ ತಮ್ಮ ಪ್ರಕಾಶ (ಬುರ್ಡೆ) ಇದ್ದಾನೆ. ಆತ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ' ಎಂದು ಬುರ್ಡೆಯವರ ಬಗ್ಗೆ ಹೃದಯತುಂಬಿ ಹೇಳಿದ್ದುಂಟು. ಗಂಗೂಬಾಯಿಯವರೊಂದಿಗೆ ಬುರ್ಡೆಯವರು ವ್ಯವಹರಿಸುತ್ತಿದ್ದ ರೀತಿಯೂ ತುಂಬ ಆತ್ಮೀಯವಾಗಿರುತ್ತಿತ್ತು. ಮುಂಬಯಿಯಲ್ಲಿ ಅವರ ವಸತಿ, ಅವರ ಬೇಕುಬೇಡಗಳನ್ನೆಲ್ಲ ಬುರ್ಡೆಯವರು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು.

ಕಲಾಭಾರತಿಯಲ್ಲಿ ಹಲವಾರು ವಿದೇಶೀ ಕಲಾವಿದರೂ ಪಾಲ್ಗೊಂಡಿದ್ದಾರೆ. ಕಲಾಭಾರತಿಯ ಖ್ಯಾತಿ ಬುರ್ಡೆಯವರಿಂದಾಗಿ ಅಂತಾರಾಷ್ಟ್ರೀಯ ವಲಯದಲ್ಲಿಯೂ ಹರಡಿದ್ದು ಸುಳ್ಳಲ್ಲ. ಒಮ್ಮೆ ಆಸ್ಟ್ರಿಯಾದ ಸೆಲ್ಲೋವಾದಕಿ, ಪಾಶ್ಚಾತ್ಯ ಸಂಗೀತದ

ಜೊತೆಗೆ ಕೆಲವು ಹಿಂದೂಸ್ತಾನಿ ರಾಗಗಳನ್ನು ಸೆಲ್ಲೋದಲ್ಲಿ ನುಡಿಸಿ ಕೇಳುಗರನ್ನು ಸ್ತಂಭೀಭೂತಗೊಳಿಸಿದಳು. ಇನ್ನೋರ್ವ ಅಮೆರಿಕನ್ ಗಾಯಕಿ, ಮಹಿಳೆಯರಿಗೆ ಸ್ವಲ್ಪ ಕಷ್ಟವೆನಿಸುವ ಧ್ರುಪದ್ ಶೈಲಿಯಲ್ಲಿ ಎರಡು ತಾಸು ಹಾಡಿ ಎಲ್ಲರ ಶಹಬ್ಬಾಸ್‌ಗಿರಿ ಪಡೆದಿದ್ದಾಳೆ. ಇಬ್ಬರು ಪಾಶ್ಚಾತ್ಯ ಮಹಿಳೆಯರು ಭರತನಾಟ್ಯ ಕಾರ್ಯಕ್ರಮ ನೀಡಿದ್ದಾರೆ. ದೇಶದಲ್ಲೇ ಅಪರೂಪವೆನಿಸಿದ 'ನಂಬಿಯಾರ್ ಕೂತ್ತು' ಎಂಬ ಕೇರಳದ ಕಾರ್ಯಕ್ರಮ ಕಲಾಭಾರತಿಯಲ್ಲಿ ಆಗಿದೆ. ಹದಿಮೂರು ತಬಲಾಗಳನ್ನಿಟ್ಟುಕೊಂಡು ತಬಲಾ ನುಡಿಸಿದ ವಿದೇಶೀಯನಲ್ಲದೆ ಹಲವಾರು ಅನಿವಾಸಿ ಭಾರತೀಯರು ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಶಂಭು ಹೆಗ್ಡೆಯವರ ಕಾಲಮಿತಿಯ ಯಕ್ಷಗಾನವೂ ಕಲಾಭಾರತಿಯಲ್ಲಾಗಿದೆ. ಕಲಾಭಾರತಿ ವೇದಿಕೆಯಲ್ಲಿ ಕಾಣಿಸಿಕೊಳ್ಳುವುದು ಕಲಾವಿದರಿಗೆ ಒಂದು ಪ್ರತಿಷ್ಠೆಯ ವಿಷಯವಾಗಿದ್ದುದರ ಹಿಂದೆ ಬುರ್ಡೆಯವರ ಪರಿಶ್ರಮವಿತ್ತು ಎಂದು ನಿಸ್ಸಂಶಯವಾಗಿ ಹೇಳಬಹುದು.

ಕಲಾಭಾರತಿ ಕಾರ್ಯಕ್ರಮಕ್ಕೆ ತಪ್ಪದೆ ಬರುತ್ತಿದ್ದ ಸಂಗೀತ ಪ್ರೇಮಿಗಳಲ್ಲದೆ ಪ್ರಸಿದ್ಧ ಗಾಯಕರು/ ವಾದಕರು/ ನೃತ್ಯಪಟುಗಳು/ರಂಗಕರ್ಮಿಗಳು, ಮೊದಲಾದವರು ಆಗಾಗ ಬರುತ್ತಿದ್ದರು. ಕಿಶೋರಿ ಅಮೋಣ್‌ಕರ್, ಪ್ರಭಾ ಅತ್ರೆ, ರಮೇಶ ನಾಡಕರ್ಣಿ, ಸುಲಭಾ ದೇಶಪಾಂಡೆ, ಯಶವಂತ ಬುವಾ ಜೋಷಿ, ರೋಹಿಣಿ ಹಟ್ಟಂಗಡಿಯವರಂತಹ ಕಲಾವಿದರು ಶಾಂತಾಗೋಖಲೆ, ನಂದೂ ಧ್ಯಾನೇಶ್ವರ (ಇವರ ಪತ್ನಿ ನೀಲಾ ಭಾಗವತ್ ಕಲಾಭಾರತಿಯಲ್ಲಿ ಕಾರ್ಯಕ್ರಮ ನೀಡಿದ್ದಲ್ಲದೆ ಸಾಧ್ಯವಾದಾಗಲೆಲ್ಲ ನಂದೂ ಅವರ ಜೊತೆಗಿರುತ್ತಿದ್ದರು), ಮೋಹನ ನಾಡಕರ್ಣಿ, ಧ್ಯಾನೇಶ್ವರ ನಾಡಕರ್ಣಿಯಂತಹ ಕಲಾವಿಮರ್ಶಕರು, ಎಂ.ವಿ. ಕಾಮತ್, ಸುಧೀಂದ್ರ ಕುಲಕರ್ಣಿ, ಎಚ್.ವೈ. ಶಾರದಾ ಪ್ರಸಾದರ ಸಹೋದರ (ಹೆಸರು ನೆನಪಿಲ್ಲ) ಮೊದಲಾದ ಪರ್ತಕರ್ತರು ಈ ಕೇಳುಗ/ ನೋಡುಗರಲ್ಲಿ ಸೇರಿದ್ದಾರೆ.

ಕಲಾಭಾರತಿಯ ಮೊದಲ ಕೆಲವರ್ಷಗಳಲ್ಲಿ ಬುರ್ಡೆಯವರ ಜೊತೆಗೆ ಚಂದ್ರಮೌಳಿ ಹಾಗೂ ನಾನು ಹೆಗಲುಕೊಟ್ಟು ದುಡಿಯುತ್ತಿದ್ದೆವು. ಚಂದ್ರಮೌಳಿಯವರು ಮುಂಬಯಿಯನ್ನು ಬಿಟ್ಟು ಬೆಂಗಳೂರಿನಲ್ಲಿ ತಳವೂರಿದ ಬಳಿಕ ಕಲಾಭಾರತಿಯ ಕಾರ್ಯಕ್ರಮಗಳೆಲ್ಲ ಬುರ್ಡೆಯವರ ನೇತೃತ್ವದಲ್ಲಿ ನಡೆಯುತ್ತಿದ್ದವು. ನಾನು ಅವರಿಗೆ ಬೆಂಬಲವಾಗಿ ನಿಂತಿದ್ದೆ. ಕೆಲ ವರ್ಷಗಳ ಬಳಿಕ ಕರ್ನಾಟಕ ಸಂಘಕ್ಕೆ ಪ್ರತಿ ಭಾನುವಾರ ಹೋಗಿ ಬರುವುದು ನನಗೆ ಕಷ್ಟಕರವೆನಿಸಿದ್ದರಿಂದ ಕಲಾಭಾರತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಾಗಲಿಲ್ಲ. ಆದರೂ ಬುರ್ಡೆಯವರು ಒಳ್ಳೆಯ ಕಾರ್ಯಕ್ರಮವಿದ್ದಾಗ ನೀವು ಬರಲೇ ಬೇಕು ಎಂದು ಫೋನಿನಲ್ಲಿ ಮಾತನಾಡಿ ಆಗ್ರಹಿಸುತ್ತಿದ್ದರು, ನಾನು ಹೋಗುತ್ತಿದ್ದೆ.

'ಕಲಾಭಾರತಿ'ಯ ಕಾರ್ಯಕ್ರಮಗಳು ಉಚಿತವಾದುದರಿಂದ, ಕರ್ನಾಟಕ ಸಂಘಕ್ಕೆ ಆರ್ಥಿಕವಾಗಿ ಒಂದು ಹೊರೆಯಾಗಬಾರದು ಎನ್ನುವ ದೃಷ್ಟಿಯಿಂದ ಬುರ್ಡೆಯವರು ಮತ್ತು ಚಂದ್ರಮೌಳಿಯವರು ಸಾಕಷ್ಟು ಧನ ಸಂಗ್ರಹ ಮಾಡಿದ್ದಲ್ಲದೆ ಅವರು ಸಂಗೀತವಲಯದಲ್ಲಿ ತಮಗಿರುವ ನಿಕಟ ಸಂಪರ್ಕವನ್ನು ಬಳಸಿಕೊಂಡು ಹಲವಾರು

ಪ್ರಾಯೋಜಕರನ್ನು ಕಲಾಭಾರತಿಯತ್ತ ಸೆಳೆಯುವಲ್ಲಿ ಯಶಸ್ವಿಯಾದರು. ಇದರಲ್ಲಿ ಪ್ರಮುಖರಾದವರು ಸಂಗೀತ ರಿಸರ್ಚ್ ಅಕಾಡೆಮಿ (ಅರವಿಂದ ಪಾರಿಖ್), ಪಂಡರಿನಾಥ ಕೊಲ್ಹಾಪುರೆ (ಸಿನಿಮಾ ತಾರೆ ಪದ್ಮಿನಿ ಕೊಲ್ಹಾಪುರೆಯ ತಂದೆ, ಗಾಯಕರು), ಅಶ್ವಿನಿ ಭಿಡೆ ದೇಶಪಾಂಡೆ ಹಾಗೂ ಇನ್ನೂ ಅನೇಕಾನೇಕ ಮಂದಿ. ಇದಲ್ಲದೆ ಶಿವಾನಂದ ಪಾಟೀಲ್-ಯೋಜನಾ ದಂಪತಿಗಳು, ಬಸವರಾಜ ರಾಜಗುರು ಅವರ ಪುಣ್ಯದಿನವನ್ನು ಸಂಗೀತ ಕಚೇರಿಯೊಂದಿಗೆ ಕಲಾಭಾರತಿಯಲ್ಲಿ ಪ್ರತಿವರ್ಷ ಆಚರಿಸಲು ಆರಂಭಿಸಿದುದರಿಂದ ಪ್ರೇರಿತರಾಗಿ ಇತರ ಸಂಗೀತ ಸಾಮ್ರಾಟರ ಹೆಸರಿನಲ್ಲಿ ಅವರವರ ಶಿಷ್ಯರು ಕಲಾಭಾರತಿಯಲ್ಲಿ ಕಾರ್ಯಕ್ರಮ ಪ್ರಾಯೋಜಿಸಲು ಮುಂದಾದರು. ಮಲ್ಲಿಕಾರ್ಜುನ ಮನ್ಸೂರ್, ಕೆ.ಜಿ. ಗಿಂಡೆ, ದಿನಕರ ಕಾಯ್ಕಿಣಿ, ಶರಶ್ಚಂದ್ರ ಆರೋಳ್ಕರ್ ಮುಂತಾದವರ ಹೆಸರಿನಲ್ಲಿ ಕಲಾಭಾರತಿಗೆ ಪ್ರಾಯೋಜಕತ್ವ ಪಡೆಯುವಲ್ಲಿ ಬುರ್ಡೆಯವರು ಯಶಸ್ವಿಯಾದರು.

ಬುರ್ಡೆಯವರ ಸಂಗೀತ ಪಾಂಡಿತ್ಯ, ಹಲವಾರು ಪ್ರತಿಷ್ಠಿತ ಅವಾರ್ಡ್‌ಗಳ ನಿರ್ಣಾಯಕ ಸಮಿತಿಗಳ ಪ್ರಮುಖ ಸದಸ್ಯನಾಗುವಂತೆ ಮಾಡಿತು. ಇಂತಹ ಸಮಿತಿಗಳಲ್ಲಿ ಬುರ್ಡೆಯವರ ನಿಷ್ಪಕ್ಷಪಾತವಾದ ಅಭಿಪ್ರಾಯಕ್ಕೆ ತುಂಬ ಬೆಲೆ ಇರುತ್ತಿತ್ತು.

***

ನನ್ನ ಕೆಲವೇ ಕೆಲವು ಆಪ್ತಮಿತ್ರರಲ್ಲಿ ಪ್ರಕಾಶ ಬುರ್ಡೆಯವರು ಒಬ್ಬರು ಎಂದು ನಾನು ಪರಿಗಣಿಸಿದ್ದೇನೆ. ಅವರ ನಿರ್ವ್ಯಾಜ ಅಂತಃಕರಣ, ಪರಕೀಯನಂತೆ ತನ್ನನ್ನೇ ಕಂಡು ಸ್ವವಿಮರ್ಶೆ ಮಾಡಿಕೊಳ್ಳುವ ಸಾಚಾತನ, ಯಾವ ಪರಿಸ್ಥಿತಿಯಲ್ಲಿಯೂ ತಮಗೆ ಸರಿ ಎನಿಸಿಕೊಳ್ಳದ ವಿಷಯದಲ್ಲಿ ರಾಜಿಮಾಡಿಕೊಳ್ಳದ ದಿಟ್ಟತನ, ತಮ್ಮ ಅಪಾರ ಪಾಂಡಿತ್ಯವನ್ನು ಎಂದೂ ತೋರಿಸಿಕೊಳ್ಳದ ಸರಳತೆ, ಅಪ್ಪಟ ಸ್ನೇಹಕ್ಕೆ ಮಾರುಹೋಗುವ ದೊಡ್ಡ ಗುಣ-ಇವೆಲ್ಲಾ ನನ್ನನ್ನು ಅವರತ್ತ ಆಕರ್ಷಿಸಿದ್ದುವು.

ಎರಡು ದಿನಗಳಿಗೊಮ್ಮೆಯಾದರೂ, ಒಂದೋ ಅವರು, ಇಲ್ಲವೇ ನಾನು ಫೋನಿನಲ್ಲಿ ಹರಟೆಹೊಡೆಯುವುದು ಸಾಮಾನ್ಯವಾಗಿತ್ತು. ಕಲಾಭಾರತಿ ಇಲ್ಲವೆ ಕರ್ನಾಟಕ ಸಂಘ ಅಥವಾ ಮುಂಬಯಿಯ ಇತರ ಸಂಘಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಕನಿಷ್ಠ ಎರಡು ವಾರಕ್ಕೊಮ್ಮೆಯಾದರೂ ನಮ್ಮ ಭೇಟಿಯಾಗುತ್ತಿತ್ತು. ಆಗ ನಮ್ಮಲ್ಲಿಯ ಮಾತುಕತೆ ಸಂಗೀತ, ಸಾಹಿತ್ಯಿಕ ಕ್ಷೇತ್ರಗಳತ್ತವೇ ಸುಳಿದಾಡುತ್ತಿದ್ದುದು ಮಾಮೂಲಾಗಿತ್ತು. ನಮ್ಮೀರ್ವರ ನಡುವೆ ಪುಸ್ತಕಗಳ ವಿನಿಮಯವೂ ನಡೆಯುತ್ತಿತ್ತು. ನನ್ನ ಒಡನಾಟದಿಂದ ಹಲವಾರು ಉತ್ತಮ ಕನ್ನಡ ಗ್ರಂಥಗಳನ್ನು ಓದುವುದು ತಮಗೆ ಸಾಧ್ಯವಾಯಿತು ಎಂದು ಅವರು ಹೇಳುತ್ತಿದ್ದುದಲ್ಲದೆ, ಹೊಸದಾಗಿ ಪ್ರಕಟವಾದ ಕನ್ನಡ ಕೃತಿಗಳನ್ನೂ ತರಿಸಿ ಅವರು ಓದಿದ ಬಳಿಕ ನನ್ನ ಓದಿಗಾಗಿ ಕೊಡುತ್ತಿದ್ದರು. ಭೈರಪ್ಪ, ಕಾರಂತರ ಬಳಿಕ ಅವರ ಮೆಚ್ಚಿನ ಲೇಖಕರೆಂದರೆ ಪೂರ್ಣಚಂದ್ರ ತೇಜಸ್ವಿಯವರಾಗಿದ್ದರು. ನನ್ನ ಬರಹಗಳಿಗೂ ಅವರು ನೀಡುತ್ತಿದ್ದ ಅಪಾರ ಪ್ರಶಂಸೆ, ನನಗೆ ಮುಜುಗರವನ್ನು ಉಂಟುಮಾಡುತ್ತಿದ್ದುದು ಸುಳ್ಳಲ್ಲ. ಈ ಸಂದರ್ಭಗಳನ್ನೆಲ್ಲ ಬಳಸಿಕೊಂಡು ಎಂದೋ ಅವರು ಮರೆತಿದ್ದ ಕನ್ನಡ

ಬರವಣಿಗೆಯನ್ನು ಮುಂದುವರಿಸಲು ನಾನು ಪ್ರೇರೇಪಿಸಿದ್ದಲ್ಲದೆ ಹಾಗೆ ಮಾಡುವಂತೆ ಪಟ್ಟುಹಿಡಿದು ಅವರಿಂದ ಮಾಡಿಸಿದೆ.

ಬುರ್ಡೆಯವರು ತನ್ನ ಧಾರವಾಡದ ವಾಸ್ತವ್ಯದ ಅವಧಿಯಲ್ಲಿ ಎರಡು ಕನ್ನಡ ಕೃತಿಗಳನ್ನು ಪ್ರಕಟಿಸಿದ್ದಿದೆ. ಆದರೂ ಅವರ ಮನೆಮಾತು ಕೊಂಕಣಿ ಹಾಗೂ ಮುಂಬಯಿಯಲ್ಲಿ ಅವರ ಮನೆಯಲ್ಲಿ ಹಾಗೂ ಹೊರಗೆ ಅವರು ಕನ್ನಡ ಮಾತನಾಡುತ್ತಿದ್ದಿಲ್ಲ. ಕಲಾಭಾರತಿ ಹಾಗೂ ಕರ್ನಾಟಕ ಸಂಘದ ಸಂಪರ್ಕದಿಂದ ಅವರು ತಮ್ಮ ಆಡುಕನ್ನಡವನ್ನು ಹರಿತಗೊಳಿಸಿಕೊಳ್ಳುವಂತಾಯಿತು. ಆದರೂ, ಕನ್ನಡದಲ್ಲಿ ಬರೆಯಲು ಸಂಕೋಚಪಡುತ್ತಿದ್ದರು. ನನಗಾದರೋ ಸಂಗೀತ ಹಾಗೂ ಸಂಗೀತಗಾರರ ಬಗೆಗೆ ಅವರಲ್ಲಿ ಹುದುಗಿರುವ ಮಾಹಿತಿಯನ್ನು ಕನ್ನಡದಲ್ಲಿ ಪ್ರಕಟಿಸಲೇಬೇಕೆನ್ನುವ ಹಟ.

ಮೊದಲು ಮೀನ ಮೇಷ ಮಾಡಿದರೂ ಬುರ್ಡೆಯವರು ಸಂಗೀತ ಪ್ರಪಂಚದ ಅವಿಸ್ಮರಣೀಯ ಘಟನೆಗಳನ್ನು ಕುರಿತು, ಮರೆತುಹೋದ ಧ್ವನಿಮುದ್ರಿಕೆಗಳನ್ನು ಕುರಿತು, ಕೆಲವು ಸಂಗೀತಗಾರರ ವಿಕ್ಷಿಪ್ತತೆಯನ್ನು ಕುರಿತು ಬರೆದು ನನಗೆ ತೋರಿಸುತ್ತಿದ್ದರು. ಇವುಗಳನ್ನು ನಾನು ಸ್ವಲ್ಪ ತಿದ್ದಿ ನಾನು ಸಂಪಾದಿಸುತ್ತಿದ್ದ 'ಗೋಕುಲವಾಣಿ' ಮಾಸಿಕ ಹಾಗೂ 'ಕಾಲನಿರ್ಣಯ' ಕ್ಯಾಲೆಂಡರಿನ ಮ್ಯಾಗಜೈನ್ ವಿಭಾಗದಲ್ಲಿ ಪ್ರಕಟಿಸಿದ್ದಲ್ಲದೆ, ಉಡುಪಿಯಲ್ಲಿ ಪ್ರಕಟವಾಗುವ ಸಂಗೀತಕ್ಕೇ ಮೀಸಲಾದ ಪತ್ರಿಕೆ 'ರಾಗಧನಶ್ರೀ'ಯಲ್ಲಿ ಪ್ರಕಟನೆಗಾಗಿ ಕಳಿಸುವಂತೆ ಬುರ್ಡೆಯವರಿಗೆ ವಿನಂತಿಸಿದೆ. 'ರಾಗಧನಶ್ರೀ'ಯ ಸಂಪಾದಕರೂ, ನಾಡಿನ ಶ್ರೇಷ್ಠ ಸಂಗೀತ ವಿಮರ್ಶಕರೂ ಆದ ಈಶ್ವರಯ್ಯನವರು ಬುರ್ಡೆಯವರ ಪಾಂಡಿತ್ಯವನ್ನು ಬಲ್ಲವರಾಗಿದ್ದರು. ಹೀಗಾಗಿ, ಬುರ್ಡೆಯವರು ಬರೆದ ಅನೇಕ ಮೌಲಿಕ ಬರೆಹಗಳು, ಚಿತ್ರ ಸಮೇತ 'ರಾಗಧನಶ್ರೀ'ಯಲ್ಲೂ ಪ್ರಕಟಗೊಂಡವು. 'ಗೋಕುಲವಾಣಿ'ಯಲ್ಲಿ ಅವರ ಬಿಡಿಲೇಖನಗಳಲ್ಲದೆ, 'ಹಿಂದೂಸ್ತಾನಿ ಸಂಗೀತದ ನಾಯಕಸಾನಿಯರು' ಎನ್ನುವ ತಲೆಬರೆಹದಲ್ಲಿ ಧಾರಾವಾಹಿಯಾಗಿ 23 ಲೇಖನಗಳೂ ಪ್ರಕಟಗೊಂಡಿವೆ. ಹೀಗೆ ಕನ್ನಡ ಲೇಖಕರೇ ಆಗಿದ್ದರೂ, ಹಲವಾರು ದಶಕಗಳ ಕಾಲ ಕನ್ನಡದಲ್ಲಿ ಬರೆಯದೇ ಉಳಿದ ಬುರ್ಡೆಯವರನ್ನು ಪುನಃ ಕನ್ನಡದಲ್ಲಿ ಬರೆಯುವಂತೆ ಪ್ರೇರೇಪಿಸಿದ ಹೆಮ್ಮೆ ನನ್ನದಾಗಿದೆ.

ಬುರ್ಡೆಯವರಿಂದ ಸಂಗೀತದ ಬಗ್ಗೆ ನನ್ನ ತಿಳಿವಳಿಕೆ ವಿಸ್ತೃತಗೊಂಡಿದ್ದನ್ನು ಇಲ್ಲಿ ನಾನು ನೆನೆಯಲೇಬೇಕು. ಬುರ್ಡೆಯವರು ಫೋನ್ ಮಾಡುವಾಗಲೂ ತಾವು ಇತ್ತೀಚೆಗೆ ಕೇಳಿದ ಅಪರೂಪದ ರಾಗಗಳ ಕುರಿತೋ, ಗ್ರಾಮಫೋನ್ ರೆಕಾರ್ಡ್ ಕಲೆಕ್ಟರ್ಸ್ ಅಸೋಸಿಯೇಶನ್ ಸಂಗ್ರಹದಲ್ಲಿರುವ, ಅಲಭ್ಯವಿರುವ ಮಹತ್ವದ ಹಾಡುಗಾರರ ಕುರಿತೋ ಚರ್ಚಿಸುತ್ತಿದ್ದಾಗ ಸಂಗೀತದ ಬಗ್ಗೆ ನಾವೆಷ್ಟು ಗಾಂಪ ಎಂದು ನಾಚಿಕೆಪಟ್ಟುಕೊಂಡಾಗ, 'ಮೊದಮೊದಲು ಎಲ್ಲರೂ ಹೀಗೇನೇ. ನಾನು ಕೂಡಾ' ಎಂದು ಬುರ್ಡೆಯವರು ನನಗೆ ಸಾಂತ್ವನ ನೀಡಿದ್ದಿದೆ.

ಬುರ್ಡೆಯವರ ಹಾಸ್ಯಪ್ರವೃತ್ತಿ ಬಹಳ ಜನಗಳಿಗೆ ತಿಳಿದಿಲ್ಲ. ಅವರನ್ನು ದೀರ್ಘಕಾಲ ಉಬ್ಬಸ ಪೀಡಿಸುತ್ತಿದ್ದುದರಿಂದ ಆಗಾಗ್ಗೆ ಅವರಿಗೆ ಆಮ್ಲಜನಕ ಬೇಕಾಗುತ್ತಿತ್ತು. ಮನೆಯಲ್ಲಿ ಆಮ್ಲಜನಕದ ಸಿಲಿಂಡರ್‌ನ ಕೊಳವೆಗೆ ಮೂಗು ಸಿಕ್ಕಿಸಿಕೊಂಡು ಗಂಟೆಗಟ್ಟಲೆ ಅವರು ಇರುತ್ತಿದ್ದರು. ಕೊಳವೆಯ ಪ್ಲಾಸ್ಟಿಕ್ ಮಾಸ್ಕ್ (ಫನೆಲ್‌ನಂತಿರುವುದು) ಅವರ ಇಡೀ ಮುಖವನ್ನು ಆವರಿಸಿಬಿಡುತ್ತಿತ್ತು. ಥಕ್ಕನೆ ನೋಡಿದಾಗ ಅಂತರಿಕ್ಷಯಾನಿಯಂತೆ ಕಾಣುವ ತಮ್ಮ ಫೋಟೋವನ್ನು ನನಗೆ ಮಿಂಚಂಚೆಯ ಮೂಲಕ ಕಳಿಸಿ "ಹೇಗಿದೆ, ಬುರ್ಡೆಯ ಹೊಸ ಅವತಾರ?" ಎಂದು ಕೇಳಿದ್ದರು. ನನಗೆ ನಗುವಿನೊಂದಿಗೆ ವಿಷಾದವೂ ಆಯಿತು.

ಬುರ್ಡೆಯವರನ್ನು ಪ್ರೊಸ್ಟೇಟ್‌ನ ಸಮಸ್ಯೆ ಕಾಡಲಾರಂಭಿಸಿದಾಗ ಅವರು ಪದೇ ಪದೇ ಬೇರೆ ಬೇರೆ ವೈದ್ಯಕೀಯ ತಪಾಸಣೆಗಾಗಿ ಆಸ್ಪತ್ರೆಯನ್ನು ಸಂದರ್ಶಿಸುತ್ತಿದ್ದರು. ಒಮ್ಮೆ ಅವರು ಟಾಯ್ಲೆಟ್‌ನಲ್ಲಿಯೇ ನನ್ನನ್ನು ನಗಿಸಿಬಿಟ್ಟಿದ್ದರು. ನಾವು ಈರ್ವರೂ ಮೂತ್ರವಿಸರ್ಜನೆ ಮಾಡುತ್ತಿದ್ದೆವು. ಆಗ ಬುರ್ಡೆಯವರು "ನಾನು ಇಂದ್ರನಾಗಿ ಬಿಟ್ಟಿದ್ದೇನೆ" ಎಂದರು. ನನಗೆ ಗೊಂದಲವಾಯಿತು. ಅವರೇ ಸ್ಪಷ್ಟೀಕರಣ ನೀಡಿದರು. "ಪ್ರೊಸ್ಟೇಟ್ ಬಾಧೆಗಾಗಿ ಚಿಕಿತ್ಸೆ ನಡೆಸುವ ವೈದ್ಯರು ತೊಡಕಿಲ್ಲದೆ ಮೂತ್ರ ಮಾಡಲಾಗುವಂತೆ ನನ್ನಲ್ಲಿ ಹಲವು ರಂಧ್ರಗಳನ್ನು ನಿರ್ಮಿಸಿಬಿಟ್ಟಿದ್ದಾರೆ. ಆದ್ದರಿಂದ ನಾನು ಇಂದ್ರನೇ ಅಲ್ಲವೇ?" ಎನ್ನುತ್ತ ನಗೆಯಾಡಿದರು. ತಾನು ಅನಾರೋಗ್ಯದಿಂದ ನರಳುತ್ತಿದ್ದರೂ ಅವರ ವಿನೋದ ಪ್ರಜ್ಞೆ ಮಾಸಿರಲಿಲ್ಲ. ಆಗ ನಾನು ಮನಸಾರೆ ನಕ್ಕರೂ, ಈಗ ಪಶ್ಚಾತ್ತಾಪ ನನ್ನನ್ನು ಕಾಡುತ್ತಿದೆ.

'ಕಲಾಭಾರತಿ' ಈಗಲೂ ಬುರ್ಡೆಯವರ ನೆನಪನ್ನು ಉಳಿಸಿಕೊಂಡು ಮುನ್ನಡೆಯುತ್ತಿದೆ. ಡಾ. ಸುಧೀಂದ್ರ ಭವಾನಿ ಅದರ ಸಾರಥ್ಯವನ್ನು ವಹಿಸಿಕೊಂಡಿದ್ದಾರೆ.

*****

1.4

ವೈಯುಕ್ತಿಕ ನೆನಪುಗಳಲ್ಲಿ ಪ್ರಕಾಶ ಬುರ್ಡೆ

ವೆಂಕಟರಾಜ್ ರಾವ್

ಕೆಲವೊಬ್ಬರ ಪರಿಚಯವಾಗಿ, ಸ್ವಲ್ಪ ಹೊತ್ತು ಅವರೊಡನೆ ಮಾತಾಡುತ್ತಲೇ, ಹೊಸವಿಚಾರಗಳು ಹೊರಬಂದು, ಹೊಸ ಆಲೋಚನೆಗಳಿಗೆ ಪ್ರಚೋದನೆ ದೊರಕಿ, ನಮ್ಮ ಮಾನಸಿಕ ಸಂಪತ್ತು ಹೇಗೇ ವೃದ್ಧಿಯಾಯಿತು ಎಂಬಂಥಾ ಅನುಭವವಾಗುತ್ತದೆ. ಬುರ್ಡೆಯವರು ಅಂಥಾ ವ್ಯಕ್ತಿಯಾಗಿದ್ದರು. ಅವರಿಗೆ ನಾನು ಹೇಳಿಕೊಳ್ಳುವಷ್ಟು ಹತ್ತಿರದವನಾಗಿರಲಿಲ್ಲ. ಆದರೆ ಅವರ ಸುಸಂಸ್ಕೃತ ಸಜ್ಜನತೆ, ತೆರೆದಿಟ್ಟ ಮನಸ್ಸು, ಮತ್ತು ವೈಚಾರಿಕತೆಯ ಹುಮ್ಮಸ್ಸು, ಇವೆಲ್ಲದರಿಂದಾಗಿ ಅವರೊಡನೆ ಮುಖಾಮುಖಿಯಾಗಿ ಇಲ್ಲವೇ ಫೋನ್‌ನಲ್ಲಿ ಒಮ್ಮೊಮ್ಮೆ ಮಾತುಕತೆ ನಡೆಸುವುದು ನನಗೆ ಉಲ್ಲಾಸಕರವಾದ ಅನಭವವನ್ನಾಗಿರುತ್ತಿತ್ತು. ಹಾಗಾಗಿ ಬುರ್ಡೆಯವರೊಡನೆ ದೂರದಲ್ಲೇ ಇದ್ದರೂ, ಒಂದು ರೀತಿಯ ಆತ್ಮೀಯತೆ ಬೆಳೆದು ಬಂದಿತ್ತು.

ಹೀಗಿರುವಾಗ, ಇಷ್ಟು ಆಕಸ್ಮಿಕವಾಗಿ ಬುರ್ಡೆಯವರ ಬಗ್ಗೆ ಭೂತಕಾಲದಲ್ಲಿ ಬರೆಯುವ ಪರಿಸ್ಥಿತಿ ಒದಗಿ ಬಂದದ್ದು ತುಂಬಾ ನೋವಿನ ಅನುಭವವಾಗಿದೆ. ಈ ಸಂದರ್ಭದಲ್ಲಿ, ಕರೆಯದೆ ಬಂದಿಳಿದ ಬುರ್ಡೆಯವರ ಕೆಲವು ನೆನಪುಗಳಷ್ಟೆ ಇಲ್ಲಿಯ ವಿಷಯ.

ಬುರ್ಡೆಯವರು ತಮಗೆ ಸಂತೋಷಕೊಟ್ಟ ಸಾಂಸ್ಕೃತಿಕ ಅನುಭವಗಳು ಬೇರೆಯವರಿಗೂ ದೊರೆಯಲಿ ಎಂದು ಹಂಬಲಿಸುವ ಉದಾತ್ತತೆಯನ್ನು ಯಾವಾಗಲೂ ತೋರಿದವರು. ಈ ಹಂಬಲವೇ ಅವರನ್ನು ಕರ್ನಾಟಕ ಸಂಘದ ಕಲಾಭಾರತಿಯ ನಿರ್ವಹಣೆಯ ಹೊಣೆಯನ್ನು ಹೊರುವುದಕ್ಕೆ ಪ್ರೇರಿಪಿಸಿರಬೇಕು. ಸಂಗೀತದ ಬಗೆಗಿದ್ದ ಅವರ ಜ್ಞಾನದೊಂದಿಗೆ, ಸಂಗೀತಕಾರರೊಂದಿಗೆ ಮತ್ತು ಸಾಂಸ್ಕೃತಿಕ ಜಗತ್ತಿನ ಹಲವೊಂದು ಪ್ರಮುಖ ವ್ಯಕ್ತಿಗಳೊಂದಿಗೆ ಅವರಿಗಿದ್ದ ನಿಕಟ ಸಂಬಂಧಗಳ ಜಾಲವು ಈ ಹೊಣೆಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಲು ಸಹಾಯಕವಾಗಿದ್ದಿರಬೇಕು.

ಅಂತೂ, ರಸಿಕ ಜನರಿಗೆ ವಿವಿಧ ರೀತಿಯ ಸಂಗೀತ ಪರಂಪರೆಗಳ ಅಮೂಲ್ಯ ಅನುಭವವನ್ನು ದೊರಿಕಿಸುವುದರಲ್ಲಿ ಬುರ್ಡೆಯುವರು ಹಿರಿಯ ಪಾತ್ರವನ್ನು ಯಾವಾಗಲೂ ವಹಿಸಿದ್ದರು.

ಇಷ್ಟು ದೊಡ್ಡ ರೀತಿಯಲ್ಲಿ, ಅವಿರತವಾಗಿ ಅವರು ಕೆಲಸ ಮಾಡುತ್ತಿದ್ದರೂ, ಆ ಮಧ್ಯೆ, ತಮ್ಮ ಪರಿಚಯದ ಹಲವಾರು ಮಂದಿಗೆ ಆಗಾಗ್ಯೆ ಫೋನ್ ಮಾಡಿ ಬರಲಿರುವ ಉತ್ತಮ ಸಾಂಸ್ಕೃತಿಕ– ಮುಖ್ಯತಃ ಸಂಗೀತ – ಕಾರ್ಯಕ್ರಮಗಳ ಬಗ್ಗೆ ಮುನ್ಸೂಚನೆ ಕೊಡುವ ಪರಿಪಾಠವನ್ನು ಅವರು ಇಟ್ಟುಕೊಂಡಿದ್ದರು. ಹೀಗೆ ನಮಗೂ ಅವರು ಆಗೊಮ್ಮೆ ಈಗೊಮ್ಮೆ ಫೋನಿನಲ್ಲಿ ಕಲಾಭಾರತಿಯ ಇಲ್ಲವೆ, ಮುಂಬಯಿಯ ಇತರ ಸಂಸ್ಥೆಗಳಲ್ಲಿ ನಡೆಯಲಿರುವ ಉತ್ತಮ ಕಾರ್ಯಕ್ರಮಗಳನ್ನು ಶಿಫಾರಸು ಮಾಡುವುದಿತ್ತು. ಹಲವು ಬಾರಿ ಅವರು ಹೀಗೆ ವಿಶೇಷವಾಗಿ ಸೂಚಿಸಿದ ಕಲಾಭಾರತಿಯ ಕಾರ್ಯಕ್ರಮಗಳಿಗೆ ನಮಗೆ ಹೋಗಲಾಗದಿದ್ದರೂ, ಅದನ್ನು ಗಣನೆಗೆ ತಾರದೆ, ವಿಶೇಷ ಕಾರ್ಯಕ್ರಮಗಳ ಮುನ್ಸೂಚನೆ ಕೊಡುವ ಪದ್ಧತಿಯನ್ನು ಬಿಡದಿರುವ ದೊಡ್ಡಮನಸ್ಸು ಅವರದಾಗಿತ್ತು.

ಒಮ್ಮೆ ಇದ್ದಕ್ಕಿದ್ದಂತೆ ನಮಗೆ ರಾಜಭವನದಿಂದ ಗಂಗೂಬಾಯಿ ಹಾನಗಲ್ ಅವರಿಗೆ ಸತ್ಕಾರ ಮಾಡುವ ಸಮಾರಂಭಕ್ಕೆ ಆಮಂತ್ರಣ ಬಂದಿತ್ತು. ಯಾವುದೇ ರಾಜಕೀಯ, ಆರ್ಥಿಕ ಅಥವಾ ಸಾಂಸ್ಕೃತಿಕ ಅಧಿಕಾರೀ ವಲಯಗಳಲ್ಲಿ ನಮ್ಮ ನೆರಳೂ ಬೀಳದಿರುವಂಥಾದ್ದರಲ್ಲಿ, ಈ ಆಮಂತ್ರಣ ಹೇಗೆ ಬಂತೆಂಬುದು ಒಂದು ನಿಗೂಢ ಪ್ರಶ್ನೆಯಾಯಿತು. ತಪ್ಪಿಯೂ ಬಂದಿರಬಹುದೆಂಬ ಊಹೆಗೂ ಎಡೆಮಾಡಕೊಡಲಾಯ್ತು. ಕಡೆಯಲ್ಲಿ,ಇದು ನಮ್ಮ ಬುರ್ಡೆಯವರ ಕೈವಾಡವೆಂದು ಸಮಾರಂಭಕ್ಕೆ ಹೋದ ಮೇಲಷ್ಟೆ ತಿಳಿದು ಬಂತು. 'ಅವರಲ್ಲದೆ ಮತ್ತಾರು ಆಗಲು ಸಾಧ್ಯ?' ಎಂಬ ತಿಳುವಳಿಕೆ ಆ ಮೇಲೆ ಹುಟ್ಟಿದ್ದು!

ಒಂದೆರಡು ತಿಂಗಳ ಹಿಂದೆ, 'ದಿ ಸ್ಟೋರಿ ಆಫ್ ಎ ಸಾಂಗ್' ಎಂಬ ನಾಟಕವನ್ನು ನೋಡಿದಾಗ ಬುರ್ಡೆಯವರ ನೆನಪಾಗಿತ್ತು. ಈ ನಾಟಕವು ಉತ್ತರ ಭಾರತೀಯ ಸಂಗೀತ ಪರಂಪರೆಗಳಿಗೆ ಸಂಬಂಧಪಟ್ಟ ಕೆಲವು ಚಾರಿತ್ರಿಕ ಘಟನೆಗಳನ್ನು ಆಧಾರಿಸಿ ಕಟ್ಟಿದ ದೃಶ್ಯಗಳನ್ನು ಜೋಡಿಸಿ ಮಾಡಿದ್ದಾಗಿತ್ತು. ಉತ್ತಮ ಸಂಗೀತ, ಹಾಡುಗಾರಿಕೆ, ನಟನೆ, ಸಂಯೋಜನೆ ಇವೆಲ್ಲವನ್ನೂ ಕೂಡಿದ ಈ ರಮ್ಯ, ರಂಜಕ ನಾಟಕ ಬುರ್ಡೆಯವರನ್ನು ಥಟ್ಟನೆ ನೆನಪಿಗೆ ತಂದಿತ್ತು. ಮರುದಿನವೇ ಅವರೊಡನೆ ಈ ನಾಟಕದ ಬಗ್ಗೆ ಮಾತಾಡಿದ್ದೆ. ಅವರ ಪರಿಚಯದವರೇ ಆದ ಶಾನುಭಾಗರು ಸಂಯೋಜಿಸಿದ ಈ ನಾಟಕವನ್ನು ತಾವೂ ನೋಡಬೇಕಿತ್ತು, ಆದರೆ ತಮ್ಮ ಅನಾರೋಗ್ಯದಿಂದಾಗಿ ಅದು ಸಂಭವವಲ್ಲವೆಂದು ಅವರೆಂದಾಗ ನನಗೆ ಬೇಸರವೆನಿಸಿತ್ತು. ಆಗಲೇ ಅವರು, ಈಚೆಗೆ ಪ್ರದರ್ಶನಕ್ಕೆ ಬಂದ, ಮುಂಚಿನ ಸಂಗೀತ ನಾಟಕವೊಂದನ್ನು ಆಧರಿಸಿ ಮಾಡಿದ ಮರಾಠಿ ಚಿತ್ರದ ಶಿಫಾರಸು ಮಾಡಿದ್ದರು. ಈಗ ಅದನ್ನು ನೋಡಿ ಸಂತೋಷಪಟ್ಟು ಅವರಿಗೆ ಧನ್ಯವಾದ ಹೇಳಬೇಕೆಂದಿರುವಾಗಲೇ ಅವರು ಇಲ್ಲವಾಗಿದ್ದಾರೆ. ಹೀಗೆ ಕಡೆಯ ತನಕವೂ ಅವರಿಗೆ ಕಲಾಪ್ರಪಂಚದಲ್ಲಿದ್ದ ಆಸಕ್ತಿ ಒಂದಿಷ್ಟೂ ಆರಿದ್ದಿಲ್ಲ.

ಬುರ್ಡೆಯವರ ನಮ್ರತೆ ಆಶ್ಚರ್ಯ ಬರಿಸುವ ಹಾಗಿತ್ತು. ಅವರು ಸಂಗೀತದ ಬಗ್ಗೆ ತಮಗಿದ್ದ ಅಪಾರ ಜ್ಞಾನ ಮತ್ತು ಅನುಭವವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಉದ್ದೇಶದಿಂದ ಲೇಖನಗಳನ್ನು ಬರೆಯುತ್ತಿದ್ದರು. ತವಾಯಿಫ್ ಪದ್ಧತಿಯ

ಹಲವಾರು ಹೆಸರಾಂತ ಮಹಿಳೆಯರು ಮತ್ತು ಸಂಗೀತಕ್ಕೆ ಅವರ ಕೊಡುಗೆಯ ಬಗ್ಗೆ ಕನ್ನಡದಲ್ಲಿ ಕೆಲವು ಲೇಖನಗಳನ್ನು ಬರೆಯತೊಡಗಿದ್ದರು. ಇತ್ತಿಚೆಗೆ ಈ ಲೇಖನ ಮಾಲೆಯಲ್ಲಿ ಬಂದಿದ್ದ ನಟಿ ನರ್ಗಿಸ್‌ಳ ಪೂರ್ವಜೆಯಾದ ಒಬ್ಬ ತವಾಯಿಫ್‌ಳ ಚರಿತ್ರೆ ಬಹಳ ಸ್ವಾರಸ್ಯಕರವಾಗಿತ್ತು. ಈ ಲೇಖನಗಳನ್ನು ಅವರು ಮುಂದುವರಿಸಿ, ಆ ಮೇಲೆ ಆ ಲೇಖನಗಳನ್ನು ಒಟ್ಟುಗೂಡಿಸಿದ್ದರೆ, ತವಾಯಿಫ್‌ಗಳ ಮತ್ತು ಅವರ ಪದ್ಧತಿಯ ಬಗ್ಗೆ ಒಂದು ಮಹತ್ವದ ಪುಸ್ತಕವನ್ನು ಹೊರತರಬಹುದಿತ್ತು. ಆದರೆ, ಹಲವಾರು ಭಾಷೆಗಳಲ್ಲಿ ಅವರು ವ್ಯವಹರಿಸುವ ಕಾರಣವೋ ಏನೋ, ಅವರ ಕನ್ನಡ ಭಾಷೆಯ ಶಬ್ದ ಜೋಡಣೆಯಲ್ಲಿ ಸ್ವಲ್ಪ ಹಿಂದುಮುಂದಾಗುತ್ತಿದ್ದು, ಇದರಿಂದಾಗಿ ಓದುಗರಿಗೆ ಸ್ವಲ್ಪ ತಾಕಲಾಟವಾಗುವ ಪರಿಸ್ಥಿತಿಯಿತ್ತು. ತಮ್ಮ ಕನ್ನಡ ಲೇಖನಗಳ ಈ ಕುಂದಿನಿಂದಾಗಿ ಅವುಗಳ ಮಹತ್ವಕ್ಕೆ ಧಕ್ಕೆಬರುವ ವಿಚಾರವು ಎಲ್ಲರಿಗಿಂತ ಮುಂದಾಗಿ ಬುರ್ಡೆಯವರಿಗೇ ಗೊತ್ತಿತ್ತು. ಸ್ವಲ್ಪವೇ ತಿದ್ದುಪಡಿಯಲ್ಲಿ ಈ ಕೊರತೆಯನ್ನು ಹೋಗಲಾಡಿಸಬಹುದಿತ್ತಾದರೂ, ಅದಕ್ಕೆ ಬೇಕಾದ ಸಮಯವನ್ನು ವ್ಯಯಿಸುವವರಾಗಲೀ, ಮುತುವರ್ಜಿಯನ್ನು ವಹಿಸುವವರಾಗಲೀ ಸದಾ ಬ್ಯುಸಿಯಾಗಿರುವ ಈ ಮುಂಬಯಿಯಲ್ಲಿ ಸಿಗಲಿಲ್ಲ. ಅಷ್ಟಲ್ಲದೆ, ಅವರ ಆರೋಗ್ಯವೂ ಕೆಲವು ಸಮಯದಿಂದ ಚೆನ್ನಾಗಿರಲಿಲ್ಲ.

ಇವೆಲ್ಲ ಕಾರಣಗಳಿಂದ ಇರಬಹುದು, ಇತ್ತೀಚೆಗೆ ನನ್ನೊಡನೆ ಮಾತನಾಡುವಾಗ '-ನಾನು ಈ ಲೇಖನಗಳನ್ನು ಬರೆಯುವುದನ್ನು ಮುಂದುವರಿಸಬೇಕೆ? ನಿಮಗೇನು ಅನ್ನಿಸುತ್ತದೆ?' ಎಂದು ಕೇಳಿದ್ದರು. ಈ ವಿಷಯದಲ್ಲಿ ತೀರ್ಪುಗಾರನಾಗುವ ನನ್ನ ಅರ್ಹತೆಯ ಬಗ್ಗೆ ತೀರಾ ಸಂಶಯತಾಳಿದ ನನಗೆ ಮಾತ್ರ ಈ ಪ್ರಶ್ನೆ ನಮ್ರತೆಯ ಪರಮಾವಧಿ ಎಂದು ಅನಿಸಿತು. ಮಾತ್ರವಲ್ಲದೆ ಅತ್ಯಂತ ಖೇದವೆನ್ನಿಸಿತು. 'ನೀವು ಅಗತ್ಯ ಬರೆಯಲೇ ಬೇಕು, ನೀವು ಬರೆದದ್ದು ನಮ್ಮ ದೇಶದ ನಶಿಸಿಹೋದ ಸಾಂಸ್ಕೃತಿಕ ಪರಂಪರೆಯೊಂದರ ಅಮೂಲ್ಯ ದಾಖಲೆಯಾಗಬಹುದು' ಎಂಬ ಪ್ರೋತ್ಸಾಹದ ಮಾತುಗಳಿಂದ ನಮ್ಮ ಸಂಭಾಷಣೆ ಮುಗಿದಿತ್ತು.

ಬುರ್ಡೆಯವರು ಸಂಗೀತ ಕಾರ್ಯಕ್ರಮಗಳ ವಿಮರ್ಶೆ, ಹಾಗೆಯೇ ಭಾರತೀಯ ಸಂಗೀತದ ವಿವಿಧ ಪ್ರಾಕಾರಗಳ ವಿಶ್ಲೇಷಣೆ ಮತ್ತು ಕೆಲವೊಮ್ಮೆ ತುಲನಾತ್ಮಕವಾದ ಒಳನೋಟಗಳನ್ನು ಒದಗಿಸುವ ಲೇಖನಗಳನ್ನು ಬರೆಯುತ್ತಿದ್ದರು. ಕೆಲವು ದಿನಗಳ ಕೆಳಗೆ ಉತ್ತರಾದಿ (ಹಿಂದುಸ್ತಾನಿ) ಮತ್ತು ದಕ್ಷಿಣಾದಿ ಸಂಗೀತ ಪರಂಪರೆಗಳ ಹಾಗೂ ಅವುಗಳ ಅನುಯಾಯಿಗಳ ಅತಿರೇಕ ಶ್ರದ್ಧೆಯ ಬಗ್ಗೆ ಹಿಂದೆ ಅವರು ಬರೆದ ಇಂಗ್ಲಿಷ್ ಲೇಖನವೊಂದನ್ನು ನನಗೆ ಇ-ಮೈಲ್ ಮುಖಾಂತರ ಕಳಿಸಿದ್ದರು.

ನೋಡ ಹೋದರೆ, ಸಂಗೀತದ ಬಗ್ಗೆ ವಿಶ್ಲೇಷಣೆ ಮಾಡುವುದಾಗಲೀ, ಹಾಡಿದುದರ ವಿಮರ್ಶೆ ಮಾಡುವುದಾಗಲೀ ಸುಲಭವಲ್ಲ. ಸಂಗೀತಕ್ಕೆ ಶಾಸ್ತ್ರವಿದೆ, ನಿರ್ಮಿತಿ ಇದೆ; ಅದರೆ ಅದರ ಪ್ರಭಾವ ಬೀಳುವುದು ಮನದಾಳದ ಅಸ್ಪಷ್ಟ ನೆಲೆಗಳ ಮೇಲೆ ಮತ್ತು ಅದಕ್ಕೆ ಆ ನೆಲೆಗಳಲ್ಲಿ ದೊರಕುವ ಪ್ರತಿಕ್ರಿಯೆ ಶಬ್ದಾತೀತ. ಸಂಗೀತದ ಪರಿಣಾಮವು ವಿವಿಧತರಹದ್ದಾಗಿರುತ್ತದೆ - ಕೆಲವೊಮ್ಮೆ ನಮ್ಮ ನೆನಪುಗಳನ್ನು ಮತ್ತು ನಮ್ಮಲ್ಲೇ

ಅಡಕವಾಗಿರುವ ಲಯಬದ್ಧವಾದ, ಅನಾದಿಯ ನಾದ-ನಿನಾದಗಳನ್ನು ಪ್ರಚೋದಿಸಿದರೆ, ಕೆಲವೊಮ್ಮೆ ನಮ್ಮ ಮನಸ್ಸಿನ ಹಾಳೆಯ ಮೇಲೆ ಬಣ್ಣಬಣ್ಣದ ಚಿತ್ತಾರಗಳನ್ನು ಮೂಡಿಸುವ ಭ್ರಮೆಯನ್ನು ಉಂಟುಮಾಡುತ್ತದೆ. ಅಂತೂ, ಶ್ರೋತೃಗಳ ಮೇಲೆ ಸಂಗೀತವು ಮಾಡುವ ಪರಿಣಾಮವು ತೀರಾ ಭಾವನಾತ್ಮಕವಾಗಿದ್ದು, ಅದನ್ನು ವರ್ಣಿಸಿ, ಅಳೆದು, ವಿಶ್ಲೇಷಿಸುವುದಕ್ಕೆ ಒಬ್ಬ ಕವಿಯ ಮನಸ್ಸು ಮತ್ತು ಕಾವ್ಯದ ಭಾಷೆ ಬೇಕು. ಇದನ್ನು ಗಮನಕ್ಕೆ ತಂದು ಕೊಂಡರೆ, ಸಂಗೀತದ ವಿಮರ್ಶೆಕಾರರಾಗಿ ಬುರ್ಡೆಯವರು ಗಳಿಸಿದ ಯಶಸ್ಸಿನ ಮಹತ್ವದ ಅರಿವಾಗುತ್ತದೆ.

ಅಂತೂ, ಏನು ಹೇಳಬೇಕೆಂದರೆ, ಸಂಗೀತ ಮೇಲೆ ಪ್ರೀತಿಯಿದ್ದರೂ, ಯಾವುದೇ ಸಂಗೀತಶಾಸ್ತ್ರದ 'ಗಂಧ-ಗಾಳಿ'ಯೂ ಇಲ್ಲದ ನನಗೂ ಬುರ್ಡೆಯವರ, ಮೇಲೆ ಹೇಳಿದ, ಸ್ವಾರಸ್ಯಕರವಾದ ವಿಮರ್ಶಾ ಲೇಖನವು ಹಿಡಿಸಿತು. ಬುರ್ಡೆಯವರಿಗೆ ಅವರ ಲೇಖನದ ಬಗ್ಗೆ ಇ-ಮೈಲ್ ಮಾಡಿ ತಿಳಿಸಿದ್ದೂ ಆಯಿತು, ಮತ್ತು ಅವರು ನನ್ನ ಪಾಮರ-ಪ್ರತಿಕ್ರಿಯೆಗಳಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಅದಕ್ಕೆ ಸಲ್ಲದ ಮನ್ನಣೆ ಕೊಟ್ಟದ್ದೂ ಆಯಿತು.

ಸಂಗೀತಕಾರರಿಗೆ ಬುರ್ಡೆಯವರು ಸದಾ ಕೊಡುತ್ತಿದ್ದ ಪ್ರೋತ್ಸಾಹ ಗೊತ್ತಿದ್ದದ್ದೇ. ಆದರೆ ಒಬ್ಬರ ಲೇಖನ ಇಲ್ಲವೇ ಪುಸ್ತಕವನ್ನು ಓದಿ ಅವರು ಸಂತೋಷಪಟ್ಟಿದ್ದರೆ, ಆ ಲೇಖಕ ಇಲ್ಲವೆ ಲೇಖಕಿಗೆ ಫೋನ್ ಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸುವುದೂ ಬುರ್ಡೆಯವರ ಸಜ್ಜನಿಕೆಯ ಒಂದು ಮುಖವಾಗಿತ್ತು. ನನಗೆ ತಿಳಿದಂತೆ, ಮುಂಬಯಿಯ 'ಸೃಜನಾ' ಬಳಗದ ' ' ಪುಸ್ತಕವನ್ನು ಓದಿ ಮೆಚ್ಚಿದ ಬುರ್ಡೆಯವರು ಅದರಲ್ಲಿ ತಮ್ಮ ಲೇಖನವನ್ನು ಪ್ರಕಟಿಸಿದ ಎಲ್ಲಾ ಲೇಖಕಿಯರಿಗೆ, ಮೆಚ್ಚುಗೆಯ ಪತ್ರವನ್ನು ಬರೆದಿದ್ದರಂತೆ. ಹಾಗೆಯೇ, ನಾನು ಅಪರೂಪಕ್ಕೆ ಬರೆಯುವ ಲೇಖನಗಳನ್ನು ಅವರು ಓದಿಕೊಂಡಾಗಲೆಲ್ಲಾ ಬುರ್ಡೆಯವರು ಫೋನಿನ ಮುಖಾಂತರ ತನ್ನ ಪ್ರತಿಕ್ರಿಯೆಯನ್ನು ತಿಳಿಸದೆ ಇದ್ದುದಿಲ್ಲ. ಈ ರೀತಿಯಲ್ಲಿ ಒಂದು ಬರಹದಿಂದ ಅಥವಾ ಹಾಡುಗಾರಿಕೆಯಿಂದ ತನಗುಂಟಾದ ಸಂತೋಷಕ್ಕೆ ಯಾರು ಕಾರಣರೋ ಅವರಲ್ಲಿ ಅದನ್ನು ಒಪ್ಪಿಕೊಳ್ಳುವುದಲ್ಲದೆ, ಅವರಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಪ್ರೋತ್ಸಾಹಿಸುವ ಮನಸ್ಸುಗಳು ಬಹಳಷ್ಟು ಕಡಿಮೆ.

ಬುರ್ಡೆಯವರ ನಿರ್ಗಮನದಿಂದ ಸಜ್ಜನಿಕೆ, ನಮ್ರತೆ, ವಿದ್ವತ್ತು, ಕಲೋಪಾಸನೆ, ಹೀಗೆ ಹಲವಾರು ಉತ್ತಮ ಗುಣಗಳನ್ನು ಮೈಗೂಡಿಸಿಕೊಂಡ ಒಬ್ಬ ಅಪರೂಪದ ವ್ಯಕ್ತಿಯನ್ನು ಕಳಕೊಂಡದ್ದಾಗಿದೆ. ಅಷ್ಟಲ್ಲದೆ, ಕನ್ನಡದ ಮಾತ್ರವಲ್ಲ, ಮುಂಬಯಿಯ ಸಾರಸ್ವತರಂಗಕ್ಕೂ ದೊಡ್ಡ ನಷ್ಟವಾಗಿದೆ.

*****

1.5

ಕಲಾಪ್ರೇಮಿ ಪ್ರಕಾಶ ಬುರ್ಡೆ

ಕೆ. ಚಂದ್ರಮೌಳಿ, ಬೆಂಗಳೂರು

ಕರ್ನಾಟಕ ಸಂಘ, ಮುಂಬಯಿಯಲ್ಲಿ ಕನ್ನಡ ನಾಡಿನ ಸಂಸ್ಕೃತಿಯನ್ನು ಎತ್ತಿಹಿಡಿಯುವ-ಪ್ರತಿಬಿಂಬಿಸುವ ಒಂದು ಮುಖ್ಯ ಕೇಂದ್ರವಾಗಿ ಬೆಳೆದು ಅನೇಕ ದಶಕಗಳಿಂದ ಸೇವೆ ಸಲ್ಲಿಸುತ್ತಾ ಬಂದಿದೆ. ಈ ಕೇಂದ್ರದ ಕಾರ್ಯಕಾರಿ ಸಮಿತಿಗಳಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಿದ್ದ ಹನ್ನೆರಡು ವರ್ಷಗಳಲ್ಲಿ (1984–1996) ಶ್ರೀಗಳಾದ ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ, ಬಿ. ಎ. ಸನದಿ, ವ್ಯಾಸರಾವ್ ನಿಂಜೂರ, ಜೀವಿ. ಕುಲಕರ್ಣಿ, ಜಿ.ಡಿ ಜೋಶಿ, ಶ್ರೀಮತಿಯವರಾದ ಸುನೀತ ಶೆಟ್ಟಿ, ಮಿತ್ರಾ ವೆಂಕಟರಾಜ್ ಮುಂತಾದ ಸಾಹಿತಿಗಳ ನಿಕಟ ಪರಿಚಯವಾಗಿತ್ತು; ನಾಟಕದಲ್ಲಿ ಪರಿಣತರಾಗಿದ್ದ ಶ್ರೀಪತಿ ಬಲ್ಲಾಳ ಮತ್ತು ಅವರ ಪತ್ನಿ ಶ್ರೀಮತಿ ಕಿಶೋರಿ ಬಲ್ಲಾಳ ಇವರುಗಳ ಜೊತೆ ಕೆಲವು ನಾಟಕದಲ್ಲಿ ಪಾತ್ರವಹಿಸುವ ಅವಕಾಶ ನನಗೆ ಸಿಕ್ಕಿತ್ತು. ಆ ಘಟ್ಟದಲ್ಲಿ ಸಂಘದ ಕಾರ್ಯಕ್ರಮಗಳಲ್ಲಿನ ವೈವಿಧ್ಯ ದಿನೇ ದಿನೇ ಹೆಚ್ಚುತ್ತಲೂ ಹಾಗು ಆಡಳಿತ-ವ್ಯವಹಾರಗಳಲ್ಲಿ ದಕ್ಷತೆ ಉತ್ತಮವಾಗುತ್ತಲೂ ಇತ್ತು. ಕಾರ್ಯಕ್ರಮಗಳಲ್ಲಿ ಸಾಹಿತ್ಯ ಸಮಾರೋಹಗಳು, ನಾಟಕೋತ್ಸವ, ಹಬ್ಬ-ಉತ್ಸವಗಳು, ಆಧ್ಯಾತ್ಮಿಕ ಪ್ರವಚನಗಳು, ನೃತ್ಯ, ವಿವಿಧ ಕಲಾತ್ಮಕ ಹಾಗೂ ಮನರಂಜನೆಯ ಕಾರ್ಯಕ್ರಮಗಳು ಮತ್ತು ಪ್ರಸಿದ್ಧ ತಂಡಗಳು ಆಡಿದ ಯಕ್ಷಗಾನ ಎಲ್ಲವೂ ಸೇರಿದ್ದವು. ಎಲ್ಲ ವರದಿಯನ್ನೂ ಸಂಕ್ಷಿಪ್ತವಾಗಿ ಸದಸ್ಯರಿಗೆ ತಿಳಿಸುವ 'ಸ್ನೇಹ ಸಂಬಂಧ' ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುವ ವಿಶೇಷ ಅವಕಾಶವೂ ನನಗೆ ಪ್ರಾಪ್ತವಾಗಿತ್ತು. ನಮ್ಮೆಲ್ಲರ ಜೊತೆಗೆ ಅನೇಕ ಉತ್ಸಾಹೀ ತರುಣರು ಮತ್ತು ಮಹಿಳೆಯರು ಸೇರಿದ್ದರು. ಎಲ್ಲ ವ್ಯವಹಾರಗಳನ್ನೂ ಅತ್ಯಂತ ಸಮರ್ಪಕವಾಗಿ ನಡೆಸಿಕೊಳ್ಳಲು ಮತ್ತು ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಲು ಅಧ್ಯಕ್ಷರಾದ ಶ್ರೀ ಸದಾನಂದ ಶೆಟ್ಟರು ಇದ್ದರು. ಕಾರ್ಯಕಾರೀ ಸಮಿತಿಯಲ್ಲಿ ಮೇಲೆ ಹೆಸರಿಸಿದವರ ಜೊತೆಗೆ ಸದಾ ಹಸನ್ಮುಖಿಗಳೂ, ಸ್ನೇಹಪರರೂ, ಹರಟೆಪ್ರಿಯರೂ, ಆಗಿದ್ದ ಶ್ರೀ ಪ್ರಕಾಶ ಬುರ್ಡೆ ಅವರ ಪಾತ್ರವೂ ಸಾಕಷ್ಟು ಇತ್ತೆಂದು ಹೇಳಲೆಂದೇ ಇಷ್ಟೆಲ್ಲಾ ಪೀಠಿಕೆ ಹೇಳಿದೆ.

ಇಷ್ಟೆಲ್ಲಾ ಇದ್ದರೂ, ಮೇಲೆ ಹೇಳಿದ ಕಾರ್ಯಕ್ರಮಗಳಲ್ಲಿ ಏನೋ ಕೊರತೆಯಿದೆ! ಎಂದು ನನಗೆ ಮತ್ತು ಪ್ರಕಾಶ್ ಅವರಿಗೆ ಅನಿಸಿತ್ತು; ಒಂದೆರಡು ಸಲ ನಮ್ಮ ಹರಟೆಗಳಲ್ಲಿ ಈ ಕೊರತೆಯ ಬಗ್ಗೆ ಮಾತನಾಡಿಕೊಂಡು ಸೂಕ್ತದಾರಿ ಕಾಣದೆ

ಸುಮ್ಮನಾಗಿದ್ದೂ ಉಂಟು. ಸ್ವಂತವಾದ ಒಳ್ಳೆಯ ಸಭಾಂಗಣ, ಉತ್ತಮ ಧ್ವನಿವರ್ಧಕ ಮತ್ತು ದೀಪಗಳ ವ್ಯವಸ್ಥೆ ಎಲ್ಲವೂ ಇರುವಾಗ ಕರ್ನಾಟಕ ಸಂಘದ ವತಿಯಿಂದ ಸಂಗೀತ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಕೊಡುವುದು ಸುಲಭದ ಮಾತಾಗಿತ್ತು. ಆದರೆ, ಇತರ ಸಂಗೀತ ಸಭೆ–ಸಂಸ್ಥೆಗಳು (ಬಾಡಿಗೆ ಕೊಟ್ಟು) ನಮ್ಮ ಸಭಾಂಗಣದಲ್ಲಿ ಏರ್ಪಡಿಸುವ ಸಂಗೀತ ಕಾರ್ಯಕ್ರಮ ಬಿಟ್ಟರೆ ನಮ್ಮದೇ ಆದ ಸಂಗೀತ ಕಛೇರಿಗಳು ಇಲ್ಲಿ ಅಪರೂಪವಾಗಿದ್ದವು. 1992ರ ಡಿಸೆಂಬರ್‌ನಲ್ಲಿ ಮುಂಬಯಿನಲ್ಲಿ ನಡೆದ ಬಾಂಬ್ ಸ್ಫೋಟದ ಕರಾಳ ಪ್ರಸಂಗದಿಂದಾಗಿ ಜನಮನದ ಶಾಂತಿ ಬಹಳಷ್ಟು ಕದಡಿಹಾಕಿತ್ತು–ಜಾತಿ, ಮತ, ಭಾಷೆ ಇತ್ಯಾದಿ ಕಾರಣಗಳ ನೆಪದಲ್ಲಿ ಸಮಾಜದಲ್ಲಿದ್ದ ಸಣ್ಣಬಿರುಕುಗಳು ಕಂದರಗಳಾಗುವ ಸೂಚನೆ ತೋರಿಬರುತ್ತಿತ್ತು. ಈ ಬಗ್ಗೆ ಆಗಾಗ ಚರ್ಚೆಗಳು ನಡೆದಾಗ ಎಲ್ಲರೂ ಅಸಹಾಯಕರಂತೆ ಲೊಚಗುಟ್ಟುತ್ತಿದ್ದರು. ಕರ್ನಾಟಕ ಸಂಘ ಮುಂಬಯಿನಲ್ಲಿ ಕನ್ನಡದ ಸಂಸ್ಕೃತಿ, ಕನ್ನಡತನದ ಬಗ್ಗೆ ಕೆಲಸ ಮಾಡುತ್ತಿರುವುದೇನೋ ಶ್ಲಾಘನೀಯ, ಆದರೆ ನಮ್ಮ ರಾಷ್ಟ್ರೀಯತೆಗೇ ಧಕ್ಕೆ ಬಂದಿರುವ ಈ ವಿಷಮ ಪರಿಸ್ಥಿತಿಯಲ್ಲಿ ಕನ್ನಡತನವನ್ನು ವಿಶಾಲಗೊಳಿಸುತ್ತಾ ಭಾರತೀಯತೆಯನ್ನು ಮೆರೆಯುವ ಕೆಲಸವನ್ನೂ ಮಾಡಬೇಕೆಂಬ ವಿಚಾರವನ್ನು ಶ್ರೀಗಳಾದ ವ್ಯಾಸರಾಯ ಬಲ್ಲಾಳ, ನಿಂಜೂರ್, ಸನದಿ ಮತ್ತೆ ಕೆಲವರು ವ್ಯಕ್ತಪಡಿಸಿದರು. ನಮ್ಮ ದೇಶದಲ್ಲಿ ವೈವಿಧ್ಯಗಳೇನೇ ಇರಲಿ ಅವುಗಳೆಲ್ಲವನ್ನು ಮೀರಿ ನಿಂತಿರುವುದು ಕೇವಲ ಕಲೆ ಒಂದೇ; ಕಲೆಗೆ ಜಾತಿ, ಮತ, ಭಾಷೆ ಇತ್ಯಾದಿಗಳ ಯಾವ ಭೇದಭಾವಗಳೂ ಇರುವುದಿಲ್ಲ. ಆದ್ದರಿಂದ ಕಲೆಯ ಮೂಲಕವೇ ನಾವು ಮುಂಬಯಿಯ ವಾತಾವರಣದಲ್ಲಿ ಭಾರತೀಯತೆಯ ಸುಗಂಧವನ್ನು ಬೀರಬಹುದು ಎಂಬ ಅಭಿಪ್ರಾಯ ಮೂಡಿಬಂದಿತು. ಈ ಯೋಚನೆಗಳ ಫಲವಾಗಿ ಹುಟ್ಟಿದುದೇ 'ಕಲಾಭಾರತಿ' ಎಂಬ ಹೊಸ ಯೋಜನೆ.

'ಕಲಾಭಾರತಿ' ಎಂಬ ಹೆಸರಲ್ಲಿ ಸಂಗೀತ ಕಾರ್ಯಕ್ರಮಗಳ ಹೊಸ ಯೋಜನೆಯಿಂದ ನಾವಂತೂ ಸಂತೋಷದಿಂದ ಉಬ್ಬಿಹೋದೆವು. ಯೋಜನೆ ವಿಶಿಷ್ಟವಾಗಿತ್ತು, 'ಕಲಾಭಾರತಿ' ಅಪರೂಪದ್ದಾಗಿರಬೇಕು, ಪ್ರಸಿದ್ಧ ಸಂಗಿತಕಾರರೇ ಅಲ್ಲದೆ ಉದಯೋನ್ಮುಖ ಕಲಾಕಾರರಿಗೆ ಹೆಚ್ಚು ಹೆಚ್ಚಾಗಿ ಅವಕಾಶ ಮಾಡಿಕೊಡಬೇಕು, ಪ್ರತಿ ಭಾನುವಾರವೂ ಅದೂ ಬೆಳಗ್ಗೆ ಕಾರ್ಯಕ್ರಮ ನಡೆಸಬೇಕು, ಶಾಸ್ತ್ರೀಯ (ಹಿಂದುಸ್ತಾನಿ ಮತ್ತು ಕರ್ನಾಟಕ) ಸಂಗೀತ ಇರಬೇಕು, ಇತ್ಯಾದಿ. ಒಮ್ಮೆ ಉದ್ಘಾಟನೆಯಾದ ಮೇಲೆ, ಕಲಾಭಾರತಿಯನ್ನು ಸುಸೂತ್ರವಾಗಿ ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ರಚಿಸಿದ ಸಮಿತಿಯಲ್ಲಿ ಶ್ರೀ ಪ್ರಕಾಶ ಬುರ್ಡೆ, ನಿಂಜೂರ್ ಮತ್ತು ನಾನು ಇದ್ದೆವು. ಕಲಾಕಾರರನ್ನು ಆರಿಸುವಲ್ಲಿ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಸನದಿಯವರ ಸಲಹೆಯೂ ಸಹಾಯಕವಾಗಿರುತ್ತಿತ್ತು. ಸಮಿತಿಯ ಕೆಲಸದಲ್ಲಿನ ಹಲವು ವರ್ಗಗಳಲ್ಲಿ ಬುರ್ಡೆಯವರಿಗೆ ಸಂಗೀತದಲ್ಲಿ ಇದ್ದ ಆಸಕ್ತಿ–ಒಲವು, ಹಿಂದುಸ್ತಾನಿ ಸಂಗೀತದ ಪರಿಚಯ, ಅವರು ಸಂಗೀತ ವಿಮರ್ಶಕರಾಗಿದ್ದುದು, ಮುಂಬಯಿಯ ಅನೇಕ ಸಂಗೀತ ಸಭೆಗಳ (ಮ್ಯೂಸಿಕ್ ಸರ್ಕಲ್ಸ್) ಕಡೆಯಿಂದ ಅವರಿಗೆ ಬರುತ್ತಿದ್ದ ಆಹ್ವಾನಗಳು, ಟೈಮ್ಸ್ ಆಫ್ ಇಂಡಿಯಾ, ಸುರ್ ಸಂಗಮ್ ಮುಂತಾದ ಕಡೆಯಿಂದ ಬರುತ್ತಿದ್ದ ಕರೆಗಳು, ಸಂಗೀತಗಾರರೊಡನೆ ಅವರ ಪರಿಚಯ–ಸಂಪರ್ಕ... ಇವೆಲ್ಲಾ ಕ್ರಮೇಣ ನಮಗೂ ತಿಳಿದುಬಂದವು. ಅವರು

ತಾವಾಗೇ ಏನೂ ಹೇಳಿಕೊಳ್ಳುತ್ತಿರಲಿಲ್ಲ, ನಾವಾಗಿಯೇ ಸೂಕ್ಷ್ಮ ತಿಳಿದು ಪ್ರಶ್ನೆಮಾಡಿದರೆ ಹರಟುತ್ತಿದ್ದರು. ಸಂಗೀತದ ಬಗ್ಗೆ ಅವರ ಪರಿಚಯ ಎಷ್ಟರ ಮಟ್ಟಿಗಿತ್ತು, ಸಂಗೀತಗಾರರ ಪರಿಚಯ ಎಷ್ಟು ನಿಕಟವಾಗಿತ್ತು ಎನ್ನುವುದನ್ನು ತಿಳಿಯಬೇಕಾದರೆ ಅವರು 'ಸ್ನೇಹ ಸಂಬಂಧ' (ಕರ್ನಾಟಕ ಸಂಘ), ಗೋಕುಲ, ಕಾಲನಿರ್ಣಯ ಮುಂತಾದೆಡೆ ಸರಳವಾಗಿ ಬರೆದಿರುವ ಅನೇಕ ಲೇಖನಗಳನ್ನು ಓದಬೇಕು. ಅವರ ಸಲಹೆಗಳ ಸಹಾಯದಿಂದ ನಮಗೆ ಕಲಾವಿದರನ್ನು ಆರಿಸುವ ಕಷ್ಟದ ಕೆಲಸ ಸುಲಭವಾಗಿತ್ತು. ಕಷ್ಟದ ಕೆಲಸ ಏಕೆಂದರೆ, ಕಲಾಭಾರತಿ ಶುರುವಾದ ಸ್ವಲ್ಪದರಲ್ಲೇ ಅಲ್ಲಿ ಕಾರ್ಯಕ್ರಮಕ್ಕೆ ಅವಕಾಶ ಕೇಳಿ ಅನೇಕ ಕಲಾವಿದರ ಪರಿಚಯ ಪತ್ರಗಳು ಒಂದು ದೊಡ್ಡ ಕಡತವೇ ಆಯಿತು. ಇದರ ಜೊತೆಗೆ ಎಷ್ಟೋ ಖ್ಯಾತಕಲಾವಿದರು ಸಹ ಫೋನ್ ಮೂಲಕ ಮಾತನಾಡಿ "ನಮ್ಮ ಹುಡುಗಂಗೆ ಹೇಗಾದರೂ ಮಾಡಿ ಒಂದು ಅವಕಾಶ ಮಾಡಿಕೊಡಿ" ಎಂದು ಗೋಗರೆದ ಅನುಭವವೂ ನನಗಾಗಿದೆ. ಈ ಒತ್ತಡಗಳಲ್ಲಿ ಯಾರನ್ನು ಆರಿಸಬೇಕು, ಯಾರನ್ನು ಬಿಡಬೇಕು ಎಂಬುದೇ ಸಮಸ್ಯೆಯಾಗುತ್ತಿತ್ತು. ಆಗೆಲ್ಲಾ ಬುರ್ಡೆಯವರ ಸಲಹೆಯೇ ಸೂಕ್ತವಾಗಿರುತ್ತಿತ್ತು. ಬೆಂಗಳೂರಿನಲ್ಲಿ ಹೆಸರು ಮಾಡಿದ್ದ ಶ್ರೀಮತಿ ನಾಗಮಣಿ ಶ್ರೀನಾಥ್, ಶ್ರೀಮತಿ ಎಮ್ ಎಸ್ ಶೀಲಾ ಮುಂತಾದವರನ್ನು ಮತ್ತು ಪಂಡಿತ್ ರವಿಶಂಕರರ ನೇರ ಶಿಷ್ಯ ಸುಧೀಂದ್ರ ಇವರ ಕಾರ್ಯಕ್ರಮವನ್ನು ನಡೆಸಲು ನಾನೂ ಸಲಹೆ ನೀಡಿದ್ದ ನೆನಪು. ಅಲ್ಲದೆ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯದಿಂದಲೂ ಕಲಾಕಾರರನ್ನು ಕರೆಸುತ್ತಿದ್ದೆವು.

ಹೀಗೆ 'ಕಲಾಭಾರತಿ' ಫೆಬ್ರವರಿ 1993ರಿಂದ ಇಂದಿನವರೆಗೂ ತಪ್ಪದೆ ಸಂಗೀತ ಕಾರ್ಯಕ್ರಮಗಳನ್ನು ನಡೆಸುತ್ತಲೇ ಬಂದಿದೆ. ಕ್ರಮೇಣ ಇದು ಕೇವಲ ಸಂಗೀತ ಕಾರ್ಯಕ್ರಮಕ್ಕೇ ಸೀಮಿತವಾಗದೆ, ಆಗಾಗ್ಗೆ ನೃತ್ಯ, ಕನ್ನಡ-ಮರಾಠೀ ನಾಟಕಗಳ ಪ್ರದರ್ಶನಕ್ಕೂ ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಕರ್ನಾಟಕ ಸಂಘ, ಮುಂಬಯಿಯಲ್ಲಿ ಕೇವಲ ಕನ್ನಡನಾಡು-ನುಡಿ-ಸಂಸ್ಕೃತಿಯ ಕೇಂದ್ರವಾಗಿ ಮಾತ್ರ ಉಳಿಯದೆ ಕನ್ನಡ-ಮರಾಠೀ ಸ್ನೇಹ-ಸೌಹಾರ್ದ ಕೇಂದ್ರವಾಗಿಯೂ, ಭಾರತೀಯ ಕಲಾ-ಸಂಸ್ಕೃತಿಯ ಕೇಂದ್ರವಾಗಿಯೂ ಸೇವೆ ಸಲ್ಲಿಸುತ್ತಿರುವುದು ಅತ್ಯಂತ ಶ್ಲಾಘನೀಯ. ವಿದೇಶಗಳಲ್ಲಿರುವ ಅನೇಕ ಕಲಾಕಾರರು ಮುಂಬಯಿಗೆ ಬಂದಾಗ ಅವರಿಗೂ ಇಲ್ಲಿ ಪ್ರೋತ್ಸಾಹ ಕೊಡಲಾಗಿದೆ. ಶ್ರೀ ಪ್ರಕಾಶ್ ಬುರ್ಡೆಯವರು ಕಲಾಭಾರತಿಯನ್ನು ಸತತವಾಗಿ ಪೋಷಿಸಿ, ಬೆಳೆಸುತ್ತಾ ಇದನ್ನು ಪ್ರಾಂತ್ಯ, ದೇಶದ ಇತಿಮಿತಿಯಿಂದ ಅಂತಾರಾಷ್ಟ್ರೀಯ ಮಟ್ಟಕ್ಕೂ ತೆಗೆದುಕೊಂಡು ಹೋದರು ಎಂದರೆ ಅತಿಶಯೋಕ್ತಿಯಲ್ಲ. ಇದರಲ್ಲಿ ಶ್ರೀ ನಿಂಜೂರ್, ನಾನು ಅಥವಾ ಇತರರ ಪಾತ್ರ ಏನಿತ್ತು-ಎಷ್ಟಿತ್ತು ಎಂಬ ವಿಚಾರ ಮುಖ್ಯವಲ್ಲ; ಎಲ್ಲರೂ ಒಟ್ಟಾಗಿ ಸೇರಿ ಸಂತೋಷದಿಂದ ಕೆಲಸ ಮಾಡುತ್ತಿದ್ದ ಕಾಲವದು.

ಇನ್ನೊಂದು ವೈಯಕ್ತಿಕ ಅನುಭವ. 1995ರಲ್ಲಿ ಕಾಶಿಯ ಬಗ್ಗೆ ನಾನು ಬರೆದಿದ್ದ "ಕಾಶೀ ದಿ ಸಿಟಿ ಲ್ಯೂಮಿನಸ್" ಎಂಬ ಇಂಗ್ಲಿಷ್ ಪುಸ್ತಕದ ಬಿಡುಗಡೆ ಆಗಬೇಕಿತ್ತು. ಪುಸ್ತಕ ಬಿಡುಗಡೆ ಎಂದರೆ ಯಾರಾದರೂ ಗಣ್ಯವ್ಯಕ್ತಿಯನ್ನು ಕರೆದು ಅವರಿಂದ ಬಿಡುಗಡೆ, ಒಂದಿಬ್ಬರ ಭಾಷಣ, ಲಘು ಉಪಹಾರ... ಅಷ್ಟೇ ತಾನೇ ಎಂದು ಸುಮ್ಮನೆ

ಇದ್ದೆ. ಪ್ರಕಾಶ್ ಬುರ್ಡೆ ಇದಕ್ಕೆ ಒಪ್ಪಲಿಲ್ಲ. ಕಾಶಿಯ ಪುಸ್ತಕ ಬಿಡುಗಡೆಯ ದಿನವನ್ನು "ಬನಾರಸ್ ದಿನ" ಎಂದು, ಬನಾರಸ್ ಸಂಸ್ಕೃತಿಯ ದಿನವಾಗಿ ಆಚರಿಸೋಣ ಎಂದರು. ಅಲ್ಲಿಂದ ನಮ್ಮಿಬ್ಬರ ಓಡಾಟ ಶುರುವಾಯಿತು. ಮುಂಬಯಿಯಲ್ಲಿದ್ದ ಬನಾರಸ್ ಮೂಲದ ಸಂಗೀತ ಗಾಯಕಿ ಶ್ರೀಮತಿ ಮೀನಾಕ್ಷಿ ಪಾಂಡೆಯವರ ಮನೆಗೆ ನನ್ನನ್ನೂ ಕರೆದುಕೊಂಡು ಹೋಗಿ, ಅವರು "ಬನಾರಸ್ ದಿನ"ದಂದು ಬನಾರಸ್‌ನ ಠುಮ್ರಿ, ಹೋರಿ, ಬಾರಾಮಾಸಾ ಹಾಡುವಂತೆ ಒಪ್ಪಿಸಿದರು. ಗುಜರಾತ್‌ನ ಬರೋಚ್‌ನಲ್ಲಿದ್ದ ಸಂಗೀತಪ್ರೇಮಿ ಶ್ರೀ ಎನ್. ಆರ್. ಮೆಹತಾ ಅವರನ್ನು ಸಂಪರ್ಕಿಸಿ ಅವರು ಬನಾರಸೀ ಉಪಶಾಸ್ತ್ರೀಯ ಗಾಯನದ ಬಗ್ಗೆ ಮಾತನಾಡಬೇಕೆಂದು ಕೇಳಿಕೊಂಡರು. ಉತ್ತರಪ್ರದೇಶದಿಂದ ಮುಂಬಯಿಗೆ ಬಂದು ನೆಲಸಿ, ಮಹಾರಾಷ್ಟ್ರದಲ್ಲಿ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಶ್ರೀ ತ್ರಿಪಾಠಿಯವರು ನನಗೆ ಪರಿಚಯವೆಂದು ತಿಳಿದು, ಅವರನ್ನು ಬಿಡುಗಡೆಗೆ ಕರೆಯಬೇಕೆಂದು ನನ್ನನ್ನು ಒತ್ತಾಯಿಸಿದರು. ಮಂತ್ರಾಲಯದಲ್ಲಿ (ಸೆಕ್ರೆಟೇರಿಯಟ್) ಉತ್ತರಪ್ರದೇಶ ಮೂಲದ ಒಬ್ಬ ಹಿರಿಯ ಅಧಿಕಾರಿಯನ್ನು ಕರೆದರು. 'ಬನಾರಸ್‌ನ ದಿನ' ಎಂಬ ಹೆಸರಿನ ಹೊಸ ಆಕರ್ಷಣೆಯಿಂದಾಗಿ ಸಭಾಂಗಣ ತುಂಬಿತ್ತು. ಕೊನೆಗೆ ಕಾಶೀ ಪುಸ್ತಕದ ಬಿಡುಗಡೆ ಬನಾರಸ್ ದಿನವಾಗಿ, ಒಂದು ಸಾಂಸ್ಕೃತಿಕೋತ್ಸವವಾಗಿ, ಅದ್ದೂರಿಯಾಗಿ ನಡೆಯಿತು. ಇದಕ್ಕಾಗಿ ನಾನು ನನ್ನ ಮಿತ್ರ ಬುರ್ಡೆಯವರಿಗೆ ಋಣಿಯಾಗಿದ್ದೇನೆ. ಹೀಗೆ ಯಾವುದೇ ಬರಡು ಸಂಗತಿಗೂ ಕಲಾ-ಸಂಸ್ಕೃತಿಯ ಮೆರಗು ಕೊಡುವ ದೃಷ್ಟಿ, ಕ್ರಿಯಾಶೀಲತೆ ಅವರಲ್ಲಿತ್ತು.

ಕಳೆದ ವರ್ಷ, ಬಹಳ ಸಮಯದ ನಂತರ, ಅವರು ನನ್ನೊಡನೆ ದೂರವಾಣಿಯಲ್ಲಿ ಮಾತನಾಡಿದಾಗ ನನಗೆ ಆಶ್ಚರ್ಯವೇ ಆಯಿತು. ಆಗ ನಾನು ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ, ಬನಾರಸ್‌ನಲ್ಲಿದ್ದೆ. 'ನಿಮ್ಮ ನೆನಪು ಬಹಳ ಬರುತ್ತಾ ಇತ್ತು, ನಾವಿಬ್ಬರೂ ಶ್ರೀಮತಿ ಮೀನಾಕ್ಷಿ ಪಾಂಡೆಯ ಮನೆಗೆ ಹೋಗಿದ್ದು, ಅವರ ಸಂಗೀತ, ಬನಾರಸ್ ದಿನದ ಆಚರಣೆ ಎಲ್ಲಾ ನೆನಪಾಯಿತು, ಅದಕ್ಕಾಗಿ ಇಂದು ನಿಮ್ಮೊಡನೆ ಮಾತನಾಡಲೇಬೇಕೆಂದು ಫೋನ್ ಮಾಡುತ್ತಿದ್ದೇನೆ; ಹಳೆಯ ಮಿತ್ರರೊಡನೆ ಹರಟುವುದರಲ್ಲಿ, ಹಳೆಯ ನೆನಪನ್ನು ಮೆಲುಕುಹಾಕುವುದರಲ್ಲಿ, 'ಭೂಲೇ ಬಿಸ್ರೇ ಗೀತ್' ಕೇಳುವುದರಲ್ಲಿ ಇರುವ ಖುಷಿ-ಮಸ್ತಿ ಬೇರೆ ಕಡೆ ಇಲ್ಲ. ಅದಕ್ಕೇ ನಿಮಗೆ ಫೋನ್ ಮಾಡುತ್ತಿದ್ದೇನೆ, ಮುಂಬಯಿಗೆ ಬನ್ನಿ' ಎಂದರು. ಸ್ವಲ್ಪ ಹರಟಿದ ನಂತರ, ಏನೋ ನೆನಪಾಗಿ, "ರ್‍ರೀ, ನಮ್ಮ ಪರಿಚಯದವರೊಬ್ಬರಿಗೆ ಮುಂಬಯಿನ ಮ್ಯೂಸಿಕ್ ಸರ್ಕಲ್‌ನಲ್ಲಿ, ಹಾಗೆಯೇ ಕಲಾಭಾರತಿಯಲ್ಲಿ ಒಂದುಕಡೆ ಕಾರ್ಯಕ್ರಮ ಕೊಡಿಸಿ" ಎಂದು ಕೇಳಿದೆ. "ಏನ್ರೀ, ಅವರು ನಿಮ್ಮ ಗರ್ಲ್‌ಫ್ರೆಂಡಾ?" ಎಂದು ನಗುತ್ತಾ ಹಾಸ್ಯ ಮಾಡಿದರು. ಆದಾದ ಮೇಲೆ ಬೆಂಗಳೂರಿಗೆ ಜನವರಿಯಲ್ಲಿ ಬಂದಾಗ ಮನೆಗೆ ಬಂದಿದ್ದ 'ಸ್ನೇಹ ಸಂಬಂಧ" ತೆಗೆದರೆ ಅದರಲ್ಲಿ "ಮೀನಾಕ್ಷಿ ಪಾಂಡೆ, ನೀವು ಎಲ್ಲಿರುವಿರಿ?" ಎಂಬ ಅವರ ಲೇಖನದಲ್ಲಿ ಮೀನಾಕ್ಷಿ ಪಾಂಡೆಯವರ ಮನೆಗೆ ಹೋಗಿದ್ದ ಪೂರ್ತಿ ಪ್ರಕರಣವನ್ನು ಬರೆದಿರುವುದು ಕಾಣಿಸಿತು. ಅದರಲ್ಲಿ ಹೆಚ್ಚಾಗಿ ನನ್ನ ಪುಸ್ತಕ ಬಿಡುಗಡೆಯ ಪ್ರಸಂಗ ಮತ್ತು ಕಲಾಭಾರತಿಗಾಗಿ ನಾನು ಮಾಡಿದ ಸೇವೆಯ ಬಗ್ಗೆಯೇ ಬರೆದಿದ್ದಾರೆ. 'ಕಲಾಭಾರತಿ' ಸ್ಥಿರ ಆರ್ಥಿಕ ಆಧಾರದಲ್ಲಿರಲು ನಾನು ಅನೇಕರಿಂದ ಚಂದಾಹಣ

ಸಂಗ್ರಹಿಸಿದ್ದನ್ನೂ ನೆನೆಪಿಸಿಕೊಂಡಿದ್ದಾರೆ- ಪ್ರಾಯಶಃ ಕರ್ನಾಟಕ ಸಂಘದ ಹಿಂದಿನ ಸಮಿತಿಯವರು ಎಂದೋ ಮರೆತುಹೋದ ವಿಳಯವನ್ನು (ಮರೆತುಹೋಗುವುದು ಸಹಜವೂ, ಸಾಮಾನ್ಯವೂ ಸರಿ) ಪ್ರಕಾಶ್, ನೆನಪಿಸಿಕೊಂಡು ಬರೆದಿರುವುದು ಅವರ ಹಿರಿತನ. ಅವರ ಲೇಖನವನ್ನು ಹಿಂದಿಯುಲ್ಲೂ ಬರೆದಿದ್ದರೆ ಪ್ರಾಂಯಶಃ ಮೀನಾಕ್ಷಿಯವರಿಂದ ಉತ್ತರ ಬರುವ ಸಂಭವ ಇರುತ್ತಿತ್ತು.

ಶ್ರೀ ಪ್ರಕಾಶ್ ಬುರ್ಡೆ ಯಾರ ಮೂಲಕ ಸಂಗೀತ ಕಲಿತರೆಂದು ನನಗೆ ಕುತೂಹಲವಾಗಿತ್ತು. ಶ್ರೀಗಳಾದ ಪಂಚಾಕ್ಷರಿ ಮತ್ತಿಗಟ್ಟಿ, ಗಿಂಡೆ ಮತ್ತು ಶ್ರೀ ದಿನಕರ್ ಕಾಯ್ಕಿಣಿಯವರಿಂದ ಸ್ವಲ್ಪಮಟ್ಟಿಗೆ ಕಲಿತಿರಬಹುದು; ಆದರೆ ಹೆಚ್ಚಿನ ಪರಿಚಯ-ಜ್ಞಾನ ಎಲ್ಲವೂ ಇತರ ವಿಮರ್ಶಕರೊಡನೆ ಮಾತು-ಚರ್ಚೆಯಿಂದ ಮತ್ತು ಅದಕ್ಕಿಂತಲೂ ಹೆಚ್ಚಾಗಿ ಸಂಗೀತ ಶ್ರವಣದಿಂದಲೇ ಎನ್ನಬೇಕು- ಹಾಗಾಗಿ ಇವರನ್ನು ಒಬ್ಬ 'ಶ್ರವಣಕುಮಾರ್' ಅನ್ನಬೇಕೇನೋ! ಕನ್ನಡ ಮತ್ತು ಮರಾಠೀ ಸಾಹಿತ್ಯದಲ್ಲೂ ಇವರು ಕೈ ಆಡಿಸಿದ್ದರು. ಮುಂಬಯಿಯ 'ಗೋಕುಲ' ಪತ್ರಿಕೆ, ಕರ್ನಾಟಕ ಸಂಘದ 'ಸ್ನೇಹ ಸಂಬಂಧ' ಮುಂತಾದ ಪತ್ರಿಕೆಗಳಲ್ಲಿ ಬರೆದಿರುವ ಲೇಖನಗಳಲ್ಲಿ ಸಂಗೀತಕಾರರೊಡನೆ ನಡೆದ ಅನೇಕ ರೋಚಕ ಪ್ರಸಂಗಗಳನ್ನು ಬರೆದಿದ್ದಾರೆ ಎಂದು ತಿಳಿದುಬರುತ್ತದೆ (ಓದಲು ನನಗೆ ಎಲ್ಲವೂ ಸಿಕ್ಕಿಲ್ಲ). ಕಲಾಕಾರರು ತಮ್ಮ ಸಂಗೀತದಿಂದ (ಅಥವಾ ರೆಕಾರ್ಡ್‌ನಿಂದ) ಸಭಿಕರನ್ನು ಮೋಹಗೊಳಿಸುವುದೇನೋ ಸರಿ; ಆದರೆ, ಅವರ ಅಪರೂಪದ್ದೇ ಆದರೂ ಕೆಲವು ರೋಚಕ ಪ್ರಸಂಗಗಳು, ಅನುಭವಗಳು ಅವರೊಡನೆ ನಶಿಸಿಹೋಗುವುದೇ ಹೆಚ್ಚು. ಅವನ್ನು ಹಿಡಿದಿಡುವ ಸಾಧನ ಒಂದೇ- ಪ್ರಸಂಗವನ್ನು ಕೇಳಿದವರು ಅದನ್ನು ಮರೆಯುವ ಮೊದಲೇ ಅದನ್ನು ಸಾಹಿತ್ಯರೂಪದಲ್ಲಿ ಭಟ್ಟಿ ಇಳಿಸುವುದು. ಈ ಉತ್ತಮ ಕಾರ್ಯವನ್ನು ಶ್ರೀ ಪ್ರಕಾಶ್ ಬುರ್ಡೆಯವರು ಮಾಡಿರುವುದು ಒಂದು ವಿಶೇಳ. ಬನಾರಸ್‌ನ ಸಂಗೀತಕಾರರ ಬಗ್ಗೆ ಅನೇಕ ಪ್ರಸಂಗಗಳು ಜನಜನಿತವಾಗುವಂತೆ ಹಲವು ಬರವಣಿಗೆಗಳಲ್ಲಿ ಹೊರಬಂದಿವೆ (ನನ್ನ ಕಾಶೀ ಪುಸ್ತಕದಲ್ಲೂ ಕೆಲವನ್ನು ನೋಡಬಹುದು). ಸಂಗ್ರಹಣದ ಈ ಕೆಲಸವನ್ನು ಬುರ್ಡೆಯವರು ಮಾಡಿರುವುದು ಶ್ಲಾಘನೀಯವೇ ಸರಿ.

ಶ್ರೀ ಪ್ರಕಾಶ್ ಬುರ್ಡೆ ಅವರಿಗೆ ಹರಟೆ ಒಂದು ಹವ್ಯಾಸ; ಸಿಟ್ಟು ಬರುತ್ತಿದ್ದುದು ಅಪ್ರಾಮಾಣಿಕ ನಡತೆ ಅಥವಾ ಮಾತುಕತೆಯಿಂದ ಮಾತ್ರ. ನೇರವಾದ ದಿಟ್ಟವಾದ ಅಭಿಪ್ರಾಯಗಳು, ಸರಿಯಾದದ್ದನ್ನು ನೇರವಾಗಿಯೇ ಹೇಳುವ ಸ್ವಭಾವ ಅವರದು. ಇಂತಹ ಒಬ್ಬ ಸರಳ, ಸೌಮ್ಯ, ಸಮಾಧಾನದ, ಪ್ರಸನ್ನವಾದ ವ್ಯಕ್ತಿ, ನಮ್ಮ ಸೇಹಿತರು ನಮ್ಮನ್ನು ಅಗಲಿರುವುದು ದುಃಖದಾಯಕವೇ ಸರಿ. ಅವರ ಲೇಖನಗಳೆಲ್ಲವನ್ನೂ ಒಟ್ಟಿಗೆ ಸೇರಿಸಿ ಹೊರತರುವ ಕೆಲಸದಿಂದ ಅವರಿಗೆ ಶಾಂತಿ ಸಿಗುವುದರಲ್ಲಿ ಸಂಶಯವೇ ಇಲ್ಲ. ಹಳೆಯ ಪಳಕೆಯ ನೆನಪುಗಳನ್ನು, ಬುರ್ಡೆಯವರೇ ಹೇಳಿದಂತೆ ಭೂಲೇ ಬಿಸ್ರೇ ಗೀತ-ಗಾಯನವನ್ನು, ಪದೇ ಪದೇ ಮುಂದಿನ ಪೀಳಿಗೆಯವರೂ ಕೇಳಲು ಅವಕಾಶ ಮಾಡಿಕೊಡುತ್ತಿರುವ ಅವರ ಪ್ರೀತಿಯ ಅಕ್ಕ-ತಂಗಿಯರಿಗೆ ನನ್ನ ಅಭಿನಂದನೆಗಳು.

*****

1.6

ಸ್ವರಯಾಜ್ಞಿಕ

ವಿಲಾಸ ಗೋಡಬೋಲೆ

ಇಸವಿ 1992ರ ಬಾಂಬ ಸ್ಫೋಟದಿಂದ ಇಡೀ ಮುಂಬಯಿ ಜರ್ಜರಿತವಾಗಿತ್ತು. ಆಗಿನ ಆ ವಾತಾವರಣವನ್ನು ಇವತ್ತೂ ಮರೆಯೋಣವೆಂದರೆ ಮರೆಯುವದು ಅಶಕ್ಯವಾಗಿದೆ. ನಾನು ವಾಸಿಸುವ ದಾದರಿನ ಭಾಗದಲ್ಲಿ ನಮ್ಮ ಮನೆಯ ಪಕ್ಕದಲ್ಲಿಯೇ ಬಾಂಬ್ ಸ್ಫೋಟವಾಗಿತ್ತು. ನಮ್ಮ ಅಕ್ಕಪಕ್ಕದಲ್ಲಿಯ ಅನೇಕರ ಮನೆಯ ಕಿಡಕಿಗಳ ಗಾಜುಗಳು ಒಡೆದು ಹೋಗಿದ್ದವು, ಮುಚ್ಚಿರುವ ಕಪಾಟುಗಳ ಬಾಗಿಲುಗಳು ಸಿಡಿದು ಹೊರ ಬಿದ್ದಿದ್ದವು. ಕೆಳಗಿನ ಅಂತಸ್ತಿನ ಮನೆಗಳಲ್ಲಿಯ ಫ್ಯಾನುಗಳು ನೆಲಕ್ಕೆ ಅಪ್ಪಳಿಸಿದ್ದವು. ಇದ್ದದ್ದು ಒಂದು ಕ್ಷಣದಲ್ಲಿ ಇಲ್ಲದಂತಾಗಿ ಬಿಟ್ಟಿತ್ತು. ಆಗ ಹಬ್ಬಿದ್ದ ಆ ನೀರವತೆ ಎಷ್ಟೋ ಸಲ ಶಾಶ್ವತವಾಗಿ ಉಳಿದುಬಿಡುತ್ತಿದೆಯೋ ಎಂದು ಅನಿಸುತ್ತಿತ್ತು. ಜನರು ರಾತ್ರಿ ಹೊತ್ತಿನಲ್ಲಿ ಹೊರಗೆ ಹೋಗುತ್ತಿರಲಿಲ್ಲ. ಸಿನೆಮಾ ಗೃಹಗಳು, ನಾಟಕ ಗೃಹಗಳು ಮುಚ್ಚಿ ಹೋಗಿದ್ದವು. ಎಲ್ಲ ಸ್ಥಳಗಳಲ್ಲಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಇನ್ನಿಲ್ಲದ ಹಾಗೇ ಆದವು. ಇಂಥಹ ಪರಿಸ್ಥಿತಿಯನ್ನು ಇನ್ನೇನು ಪ್ರತಿಯೊಬ್ಬ ಮುಂಬಯಿ ನಿವಾಸಿ ಖಾಯಮ್ಮಾಗಿ ಸಹಿಸಿಕೊಳ್ಳಬೇಕು ಎನ್ನುವಂತಿರುವಾಗ, ಓರ್ವ ವ್ಯಕ್ತಿ ಈ ಪರಿಸ್ಥಿತಿಗಳೊಂದಿಗೆ ಹೋರಾಡುವ ಕೆಚ್ಚನ್ನು ತೋರಿಸಿ, ಸಾಂಸ್ಕೃತಿಕ ಕಾರ್ಯಕ್ರಮದ ಚಳವಳಿಯನ್ನೇ ಪ್ರಾರಂಭಿಸಿದರು. ವಿಶೇಷವೆಂದರೆ ಈ ವ್ಯಕ್ತಿ ಮೂಲತಃ ಮಹಾರಾಷ್ಟ್ರದವರಲ್ಲ. ಪ್ರಕಾಶ ಬುರ್ಡೆ ಎಂಬ ಆತ ಓರ್ವ ಕನ್ನಡ ಸದ್ಗೃಹಸ್ಥ!

ಬುರ್ಡೆಯವರಿಗೆ ಈ ಕಲ್ಮಶವಾದ ವಾತಾವರಣ ಅಸಹನೀಯವಾಗಿತ್ತು. ಮತ್ತೊಮ್ಮೆ ಸಾಂಸ್ಕೃತಿಕ ಕಾರ್ಯಕ್ರಮ ಪ್ರಾರಂಭವಾಗಲೇಬೇಕೆಂಬ ಆಸೆ ಅವರಿಗೆ ಹೃದಯಾಂತರಾಳದಲ್ಲಿ ಹುಟ್ಟಿತ್ತು. ಅವರಿಗೆ ಕರ್ನಾಟಕ ಸಂಘದ ಸಂಪರ್ಕ ದೊರಕಿತು. ಅಲ್ಲಿಯ ಸದಸ್ಯರನ್ನು ಹಲವಾರು ಸಲ ಭೇಟಿ ಮಾಡಿದರು. ಸಮಾಜದ ದೃಷ್ಟಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ಪ್ರಾರಂಭಿಸುವದು ಎಷ್ಟು ಮಹತ್ತ್ವದ್ದಾಗಿದೆ ಎಂಬ ಮಾತನ್ನು ಅಲ್ಲಿಯ ಸದಸ್ಯರಿಗೆ ಮನದಟ್ಟು ಮಾಡುವ ಕೆಲಸ ಕೈಗೊಂಡರು. ಕರ್ನಾಟಕ ಸಂಘದವರೂ ಕೂಡ ಅವರ ಸೂಚನೆಯನ್ನು ಎತ್ತಿ ಹಿಡಿದು ಅವರ ಸಭಾಗೃಹಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಮತಿ ಕೊಟ್ಟರು.

ಬುರ್ಡೆಯವರು ನೌಕರಿಗೋಸ್ಕರ ಮುಂಬಯಿಗೆ ಬಂದವರು. ಅವರು ತಾವು ಎಲ್ಲಿ ಬಂದು ವಾಸಿಸುತ್ತೇವೆಯೋ ಅಲ್ಲಿಯವರಾಗುವ ಮನೋಭೂಮಿಕೆ ಹೊಂದಿದ್ದಂತಹವರು. ತಾವಿದ್ದ ಊರಿನ ಭಾಷೆಯನ್ನು ಓದುವದು, ಮಾತನಾಡುವದು ಅತ್ಯಾವಶ್ಯಕವೆಂದು ನಂಬಿದವರು. ಅಲ್ಲಿಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದಲ್ಲಿ ತಾವೂ ಒಂದಾಗಬೇಕು ಎಂಬುದು ಅವರ ಕಳಕಳಿಯ ಧೋರಣೆಯಾಗಿತ್ತು. ಈ ಕಾರಣದಿಂದಲೇ ಕರ್ನಾಟಕ ಸಂಘದ ಸಹಕಾರದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಮುಂದಾದರು. ಅವರಿಗೆ ಕರ್ನಾಟಕ ಸಂಘದವರು ನೀಡಿದ ಸಹಾಯವು ಅಷ್ಟೇ ಮಹತ್ವದ್ದು ಮತ್ತು ಕೌತುಕಾಸ್ಪದವಾಗಿರುವದು. ಎಷ್ಟೋ ಸಲ ಮುಂಬಯಿಗೆ ವಲಸೆ ಬಂದ ವಿವಿಧ ಸಮುದಾಯದವರು ತಮ್ಮದೇ ಕೋಶದಲ್ಲಿ ಇರಲು ಬಯಸುತ್ತಾರೆ. ಆದರೆ ಬುರ್ಡೆ ಅಥವಾ ಕರ್ನಾಟಕ ಸಂಘದವರು ಹಾಗೆ ಮಾಡಲಿಲ್ಲ. ಬುರ್ಡೆಯವರಿಗೆ ಸಂಗೀತದ ಮೇಲೆ ವಿಶೇಷ ಒಲವು. ಬಾಲ್ಯದಿಂದಲೇ ಸಂಗೀತದ ಸಂಸ್ಕಾರ ಅವರ ಮೇಲಾಗಿತ್ತು. ಅವರ ತಾಯಿ ಗಾನವಿಶಾರದ ಪಂಚಾಕ್ಷರಿ ಗವಯಿಗಳ ಶಿಷ್ಯರಾಗಿದ್ದರು. ಸ್ವತಃ ಬುರ್ಡೆಯವರು ಪಂಚಾಕ್ಷರಿ ಗವಯಿಗಳ ಹತ್ತಿರ ಕಲಿತವರು. ಮುಂದೆ ಪುಣೆಯಲ್ಲಿದ್ದಾಗ ಉಸ್ತಾದ್ ಗುಲಾಮ ರಸೂಲ್ ಅವರಲ್ಲಿ ತಬಲಾ ವಿದ್ಯೆಯನ್ನು ಕಲಿತರು. ಮುಂಬಯಿಯಲ್ಲಿ ವಾಸ್ತವ್ಯ ಮಾಡಿದ ಮೇಲೆ ಅವರು ನೌಕರಿಯನ್ನು ಸಂಭಾಳಿಸಿಕೊಂಡು ಸಂಗೀತದ ವಿಮರ್ಶಕರೆಂದೂ ಕೆಲಸ ನಿರ್ವಹಿಸಿದರು. ಅವರು ಭಾರತೀಯ ಸಂಗೀತದ ಮೇಲೆ ಇಂಗ್ಲಿಷಿನಲ್ಲಿ Principles of Hindustani Music, ಅಷ್ಟೇ ಅಲ್ಲ ಕನ್ನಡದಲ್ಲಿ ಎರಡು ಕೃತಿಗಳನ್ನೂ ಹೊರ ತಂದಿದ್ದರು. ಅವರು ಆಕಾಶವಾಣಿಯ ಮಂಡಳಿಯ ಸಭಾಸದರು ಕೂಡ ಆಗಿದ್ದರು.

ಅವರು ಕರ್ನಾಟಕ ಸಂಘದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಾರಂಭಿಸಲು 'ಕಲಾಭಾರತಿ'ಯನ್ನು ಸ್ಥಾಪಿಸಿದರು. ಸಂಗೀತದ ಕಾರ್ಯಕ್ರಮಗಳು ಸರ್ವೇಸಾಧಾರಣವಾಗಿ ಸಾಯಂಕಾಲ ಇಲ್ಲವೇ ರಾತ್ರಿಯ ಹೊತ್ತಿನಲ್ಲಿ ಆಗುತ್ತವೆ. ಆದರೆ ಆ ಕಾಲದಲ್ಲಿ ಸರಕಾರದ ನಿಯಮದಂತೆ ರಾತ್ರಿ 10ರ ನಂತರ ಕಾರ್ಯಕ್ರಮಗಳನ್ನು ಮುಂದುವರೆಸುವದು ಸಾಧ್ಯವಿರಲಿಲ್ಲ, ಹೀಗಾಗಿ ಪ್ರತಿ ರವಿವಾರ ಬೆಳಿಗ್ಗೆ ಸಂಗೀತದ ಕಾರ್ಯಕ್ರಮಗಳನ್ನು ಇಡುವುದೆಂದು ನಿರ್ಧರಿಸಿದರು. ಕರ್ನಾಟಕ ಸಂಘ ಕೂಡ ತಮ್ಮ ಸಭಾಗೃಹವನ್ನು ಈ ಕಾರ್ಯಕ್ರಮಗಳಿಗೆ ಶುಲ್ಕವಿಲ್ಲದೇ ಕೊಡುವ ಔದಾರ್ಯವನ್ನು ತೋರಿಸಿತು. ಈಗಂತೂ ಮುಂಜಾನೆಯ ಸಂಗೀತ ಕಾರ್ಯಕ್ರಮ ಕಾಲುದಾರಿಯಾಗದೇ ಒಂದು ಮಹಾಮಾರ್ಗವೇ ಆಗಿಬಿಟ್ಟಿದೆ. ಕರ್ನಾಟಕ ಸಂಘ ಮತ್ತು ಬೆಳಿಗ್ಗೆಯ ಸಂಗೀತದ ಮೆಹಫಿಲ್ಲು ಇವೆರಡು ಒಂದಾಗಿ ಬಿಟ್ಟಿವೆ.!

ಸಂಗೀತದ ಮೆಹಫಿಲ್ಲುಗಳ ಆಯೋಜನವನ್ನು ಬುರ್ಡೆಯವರು ಬಹಳ ವಿಚಾರಪೂರ್ವಕವಾಗಿಯೇ ಮಾಡಿದರು. ಸ್ವತಃ ಅವರು ಅನೇಕ ಮೆಹಫಿಲ್ಲುಗಳನ್ನು ಕೇಳಿದ ಕಾರಣ ಅವರು ಒಂದು ವಿಷಯವನ್ನು ಸ್ಪಷ್ಟವಾಗಿ ಅರಿತಿದ್ದರು. ಅದೇನೆಂದರೆ, ಈ ಕಾಲದಲ್ಲಿ ಭಾರತೀಯ ಸಂಗೀತವು ಕೆಲವೇ ಮತ್ತು ಹಿರಿಯ ಗಾಯಕ–ವಾದಕ ಮಂಡಳಿಯವರ ಸ್ವತ್ತಾಗಿದ್ದುದಷ್ಟೇ ಅಲ್ಲ ಬರೀ ವ್ಯಾವಹಾರಿಕ ರೂಪ ಪಡೆಯುತ್ತಲಿದೆ. ಈ ದೃಷ್ಟಿಕೋನವನ್ನಿಟ್ಟುಕೊಂಡು ಮಂಡಳಿಯವರು, ಸಂಗೀತವನ್ನು ಶ್ರೋತೃಗಳಿಂದ ಬರೀ ಚಪ್ಪಾಳೆ ಮತ್ತು ಹಣಗಳಿಸುವ ಸಾಧನವನ್ನಾಗಿ ಮಾಡಿಕೊಂಡಿದ್ದಾರೆ. ಕಲಾಕಾರರು ದುಡ್ಡು ಮಾಡಿಕೊಳ್ಳುವುದು ಅಪರಾಧವೇನಲ್ಲ. ಆದರೆ ನಾವು ನಮ್ಮ ಮುಂದಿನ ಪೀಳಿಗೆಯವರಿಗೂ

ಕೊಂಚ ಕೊಡುವುದಿರುತ್ತದೆ ಎಂಬ ಅರಿವು ಅವರಿಗೆ ಇರಬೇಕು. ಹೀಗಾಗಿ ಕಲಾಭಾರತಿಯವರು ಪ್ರತಿಷ್ಠಿತ ಮತ್ತು ಪ್ರತಿಭೆಯಿರುವ ನವೋದಯ ಗಾಯಕ–ವಾದಕರನ್ನು ಪ್ರೋತ್ಸಾಹಿಸಲು ಮುಂದಾಳುತನವನ್ನು ವಹಿಸಿಕೊಂಡರು. ಕಲಾಭಾರತಿಯ ಪರವಾಗಿ ಒಂದು ವ್ಯಾಸಪೀಠವನ್ನು ಉಪಲಬ್ಧ ಮಾಡಿಕೊಟ್ಟರು. ಭಾರತದ ಮೂಲೆಮೂಲೆಗಳಿಂದ ಕಲಾಕಾರರನ್ನು ಗುರುತಿಸಿ ಹುಡುಕಿ ತಂದರು. ಇಗಿನ ಕಾಲದಲ್ಲಿ ಭಾರತದಲ್ಲಿ ಎಷ್ಟೋ ಪ್ರತಿಭಾವಂತ ಕಲಾಕಾರರಿಗೆ ತಮ್ಮ ಪ್ರತಿಭೆ ತೋರಿಸುವ ಅವಕಾಶ ಸಿಗದ ಕಾರಣ ಅವರು ಶ್ರೋತೃಗಳನ್ನು ತಲಪುವದೇ ಅಸಾಧ್ಯವಾಗಿರುತ್ತದೆ. ಪ್ರಸಿದ್ಧಿಗೆ ಹೊರತಾದ ಅನೇಕ ಕಲಾವಿದರಿಗೆ ಕಲಾಭಾರತಿಯು ತನ್ನ ಮಮತೆಯ ಸಹಾಯಹಸ್ತವನ್ನು ನೀಡಿದೆ.

ನಾನು ನಾಗಪುರದಲ್ಲಿದ್ದಾಗ ಒಂದು ಸಲ ಉಸ್ತಾದ್ ಹುಸೇನ್ ಖಾನ ಸಾಹೇಬರ ಮೊಮ್ಮಗನ ಸಂಗೀತ ಕೇಳುವ ಯೋಗಾಯೋಗ ಲಭಿಸಿತ್ತು. ಈ ಕಾರ್ಯಕ್ರಮ ಒಬ್ಬ ಸಂಗೀತ ಶಿಕ್ಷಕರ ಸತ್ಕಾರ ಸಮಾರಂಭದ ನಿಮಿತ್ತ ಆಯೋಜಿಸಲಾಗಿತ್ತು. ಖಾನ ಸಾಹೇಬರ ಮೊಮ್ಮಗನ ಹಾಡುಗಾರಿಕೆ ವಯಸ್ಸಿಗೆ ತಕ್ಕಂತೆ ಚೆನ್ನಾಗಿಯೇ ಇದ್ದಿತ್ತು. ಆದರೆ, ಬಳಿಕದ ಕಾರ್ಯಕ್ರಮವು ಪ್ರಾರಂಭವಾಗಲು ತುಂಬ ತಡವಾಯಿತು, ಅಲ್ಲದೇ ನಾನು ಆ ಸಭಾಗೃಹದಿಂದ ಬಹಳ ದೂರ ವಾಸಿಸುತ್ತಿದ್ದೆ. ಹೀಗಾಗಿ ಆತನ ಗಾಯನ ಮುಗಿದೊಡನೆ ಹೊರಡಲು ನಿರ್ಧರಿಸಿದೆ. ನಿಜ ಹೇಳಬೇಕೆಂದರೆ, ಖಾನ ಸಾಹೇಬರ ಗಾಯನವು ಆ ನಂತರ ಬರಲಿತ್ತು. ಆದರೆ ನನ್ನ ಮನಸ್ಸು ಈ ಕಾರ್ಯಕ್ರಮಕ್ಕೆ ನಿಲ್ಲುವಂತೆ ಒತ್ತಾಯಿಸುತ್ತಿತ್ತು.

ಈ ಪಂಡಿತರ ಹಾಡುಗಾರಿಕೆ ಹೇಗಿರುತ್ತದೆ ಎಂದು ಅಲ್ಲಿದ್ದವರೊಬ್ಬರಿಗೆ ವಿಚಾರಿಸಿದಾಗ ಅವರೆಂದರು, 'ಪರವಾಯಿಲ್ಲ!' ಆದರೆ, ಮೆಟ್ಟಲಿಳಿದು ಬರುತ್ತಿದ್ದಂತೆ ಇಂತಹ ಸತ್ಕಾರಕ್ಕೆ ಪಾತ್ರರಾದ ವ್ಯಕ್ತಿಯಲ್ಲಿ ವಿಶೇಷವೇನಾದರೂ ಇದ್ದಿರಲೇ ಬೇಕು ಅನಿಸಿತು. ಹೀಗಾಗಿ ಮತ್ತೆ ಸಭಾಗೃಹಕ್ಕೆ ಮರಳಿದೆ. ಕಚೇರಿ ಚೆನ್ನಾಗಿ ಇರದಿದ್ದರೆ ಬೇಗನೆ ಎದ್ದು ಹೋಗಲು ಅನುಕೂಲವಾಗುವಂತೆ ದ್ವಾರದ ಬಳಿಯ ಕುರ್ಚಿಯಲ್ಲಿ ಕುಳಿತೆ. ಆದರೆ ಆ ಗಾಯಕ ಪ್ರಾರಂಭದ 'ಸಾ' ಹಚ್ಚಿದೊಡನೆ ನಾನು ಮಂತ್ರಮುಗ್ಧನಾಗಿ ಬಿಟ್ಟೆ . ಮೂಲೆಯ ಬಾಗಿಲ ಬಳಿಯ ಕುರ್ಚಿ ಬಿಟ್ಟು ಮೊದಲ ಸಾಲಿನ ಆಸನದಲ್ಲಿ ವಿರಾಜಮಾನನಾದೆ. ಹಾಡುಗಾರರ ಹೆಸರು ಪಂ. ಮನೋಹರ ಕಾಸ್ಲೀಕರ. ಕಾಸ್ಲೀಕರರು ಕೇದಾರ ರಾಗದಲ್ಲಿ , 'ಶೂರಾ ಮಿ ವಂದಿಲೆ' ಎಂಬ ನಾಟ್ಯ ಗೀತೆಯನ್ನು ಆ ಬಳಿಕ ಮಾಸ್ತರ ಕೃಷ್ಣರಾವ್ ಅವರ, 'ಚುನರಿಯಾ ಕರತ ಝುನಕಾರ'ವನ್ನು ಭೈರವಿಯಲ್ಲಿ ಹುರುಪಿನಿಂದ ಪ್ರಸ್ತುತಿಪಡಿಸಿದರು. ಈ ಕಚೇರಿ ನನ್ನನ್ನು ಮರುಳು ಮಾಡಿಬಿಟ್ಟಿತು.

ಈ ಖಾನದಾನಿ, ಪ್ರತಿಭಾವಂತ ಕಲಾಕಾರರ ಹೆಸರನ್ನು ನಾನು ಈ ತನಕ ಕೇಳಿಯೇ ಇಲ್ಲವಲ್ಲ! ಎಂದು ನನಗೆ ಬಹಳ ಆಶ್ಚರ್ಯವಾಯಿತು. ಅಲ್ಲದೇ ಖಾಯಂ ಇಂತಹ ಕಚೇರಿಗಳಲ್ಲಿ ಕಂಡು ಬರುವ ಆ ಗೃಹಸ್ಥನ ಬಾಯಿಂದ ಇವರ ಹಾಡುಗಾರಿಕೆಯ ಬಗ್ಗೆ ಕೇವಲ 'ಪರವಾಯಿಲ್ಲ' ಎಂಬ ಅನಿಸಿಕೆ ಬಂದಿದ್ದದ್ದು ನನಗೆ ಅರ್ಥವಾಗಲಿಲ್ಲ. 'ಘರಕೀ ಮುರಗಿ ದಾಲ್ ಬರಾಬರ್' ಎಂಬ ಉದ್ಗಾರ ನನಗೆ ನೆನಪಾಯಿತು.

ಕಾಸ್ಲೀಕರರ ಕಚೇರಿಯ ಬಗ್ಗೆ ಬುರ್ಡೆಯವರಿಗೆ ಯಾವಾಗ ಹೇಳುವೆನೋ ಎಂಬ ಆತುರ ನನ್ನದಾಯಿತು. ನಾನು ಮುಂಬಯಿಗೆ ಮರಳಿದ ನಂತರ ಕಾಸ್ಲೀಕರರ

ಹಾಡುಗಾರಿಕೆಯ ಕುರಿತಾದ ಅನುಭವವನ್ನು ಬುರ್ಡೆಯವರಿಗೆ ಹೇಳಿಕೊಂಡೆ. ಬುರ್ಡೆಯವರು ಅವರನ್ನು ಅಮರಾವತಿಯಿಂದ ಆಮಂತ್ರಿಸಿ ಕರ್ನಾಟಕ ಸಂಘದಲ್ಲಿ ಹಾಡುವ ಏರ್ಪಾಡು ಮಾಡಿದರು. ನಾನು ನನ್ನ ಸಂಗೀತ ಪ್ರಿಯ ಮಿತ್ರರಿಗೆಲ್ಲ ಈ ಕಚೇರಿಗೆ ಬರುವಂತೆ ಪ್ರತ್ಯೇಕ ಆಮಂತ್ರಣ ನೀಡಿದೆ.. ಅಂದಿನ ಕಚೇರಿಯ ಅನುಭವವು ನನ್ನದರಂತೆಯೇ ಅವರಿಗೂ ಆಗಿತ್ತು. "ಈ ರತ್ನವನ್ನು ಎಲ್ಲಿಂದ ಹುಡುಕಿ ತಂದಿರಿ"? ಇದೇ ಪ್ರಶ್ನೆಯನ್ನು ಪ್ರತಿಯೊಬ್ಬರೂ ಕೇಳುವವರೇ!

ಕರ್ನಾಟಕ ಸಂಘದಿಂದಲೇ ಮುಂದೆ ಬಂದು ಎಷ್ಟೋ ಕಲಾಕಾರರು ಹೆಸರು ಗಳಿಸಿದ್ದಾರೆ. ಅಲ್ಲದೇ ಮಹತ್ವದ ಮಾತೆಂದರೆ, ಈ ಕಲಾಕಾರರಿಗೆ ಕೂಡ ಕರ್ನಾಟಕ ಸಂಘದ ಕಾರ್ಯಕ್ರಮಗಳೆಂದರೆ ಅಪರಿಚಿತ ಸ್ಥಳಕ್ಕೆ ಬಂದಂತೆ ಅನಿಸುವದೇ ಇಲ್ಲ. ಇದಕ್ಕೆ ಕಾರಣ ಇಲ್ಲಿಯ ವಾತಾವರಣ ಕೌಟುಂಬಿಕವೆನಿಸುತ್ತದೆ. ಇಲ್ಲಿ ಬರುತ್ತಲೇ ಇರುವ ಕಾನಸೇನರು ಕೂಡ ಕಲಾಕಾರರನ್ನು ಮುಕ್ತವಾಗಿ ಪ್ರೋತ್ಸಾಹ ನೀಡುತ್ತಾರೆ.

ಸಂಗೀತ ಸಮೀಕ್ಷಕರಾದ ಅಮರೇಂದ್ರ ನಂದು ಧನೇಶ್ವರರ, 'ಖಯಾಲ್' ಎಂಬ ಸಂಸೆಯ ಸಹಯೋಗದೊಂದಿಗೆ ಕಲಾಭಾರತಿಯ ರೋಣು ಮಜುಮದಾರರ ಬಾನ್ಸುರಿ ವಾದನದ ಏರ್ಪಾಡು ಮಾಡಿದ್ದು ನೆನಪಿಗೆ ಬಂದಿತು. ರೋಣು ಅವರು ಕಾರ್ಯಕ್ರಮ ಪ್ರಾರಂಭಿಸಿದರು. ಹತ್ತು ನಿಮಿಷ ಕಳೆದಿರಬಹುದು, ರೋಣು ಅವರು ಮುಕ್ತ ಮನಸ್ಸಿನಿಂದ ನುಡಿಸುತ್ತಿಲ್ಲ ಎಂಬುದು ಧನೇಶ್ವರರ ಗಮನಕ್ಕೆ ಬಂದಿತು. ಬಹುಶಃ ರೋಣು ಅವರಿಗೆ ಎದುರು ಸಾಲಿನಲ್ಲಿ ಕುಳಿತ ಶ್ರೋತೃಗಳ ಸಂಗೀತಜ್ಞತೆ ಗಮನಕ್ಕೆ ಬಂದಿರಲಿಕ್ಕಿಲ್ಲ. ಧನೇಶ್ವರರು ಎದ್ದುನಿಂತು ರೋಣು ಅವರಿಗೆ ಹೇಳಿದರು, "ಇಲ್ಲಿ ಮುಕ್ತ ಮನಸ್ಸಿನಿಂದ ನುಡಿಸಪ್ಪ. ಇಲ್ಲಿ ನೆರೆದವರೆಲ್ಲ ರಸಿಕರೇ ಇದ್ದಾರೆ. ನಿಮಗೆ ಏನೇನು ನುಡಿಸಬೇಕೆಂದು ಮನಸ್ಸಿನಲ್ಲಿದೆಯೋ ಅದನ್ನೇ ನುಡಿಸಿರಿ." ಆ ಬಳಿಕ ರೋಣು ಅವರ ಬಾನ್ಸುರಿ ವಾದನ ಅಪೂರ್ವವಾಗಿತ್ತು. ಸ್ವತಃ ರೋಣು ಅವರ ಮನಸ್ಸು ತುಂಬಿ ಬಂದಿತ್ತು. ಇಲ್ಲಿ ಮನಃಪೂರ್ವಕ ನುಡಿಸಿದ ಸಂತೃಪ್ತಿ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು.

ಹಾಗೆಯೇ, ಹೋದ ವರ್ಷ ಏರ್ಪಟ್ಟ ವಸುಂಧರಾತಾಯಿ ಕೋಂಕಾಳಿಯವರ* ಕಚೇರಿಯ ನೆನಪಾಗುತ್ತದೆ. ಆ ವೇಳೆಗೆ ಸಭಾಗೃಹದ ವಾತಾನುಕೂಲ ಕೆಟ್ಟಿತ್ತು, ಆದರೆ ವಸುಂಧರಾತಾಯಿ ಎಷ್ಟು ತಲ್ಲಿನತೆಯಿಂದ ಹಾಡಿದರೆಂದರೆ ಅಲ್ಲಿ ನೆರೆದವರು ಯಾರೂ ಸೆಕೆಯಿಂದ ತಲ್ಲಣಿಸಿದಂತೆ ತೋರಲಿಲ್ಲ. ಅವರ ರಾಮಕಲಿ ಮತ್ತು ಹಿಂದೋಲ ರಾಗಗಳು ರಂಗೇರಿದ್ದವು. ಇಷ್ಟೇ ಅಲ್ಲ ನಡುನಡುವೆ ಅವರು ಶ್ರೋತೃಗಳ ಜೊತೆಗೆ ಸಂವಾದವನ್ನು ನಡೆಸಿದ್ದರು. ಕುಮಾರ ಗಂಧರ್ವರ ಹಲವು ನೆನಪುಗಳನ್ನು ಹೇಳಿಕೊಂಡರು. ಅವರ ಬಂದಿಶಗಳ ಹಿಂದಿನ ವಿಚಾರಧಾರೆಯನ್ನು ಬಿಡಿಸಿ ಪ್ರಸ್ತುತ ಪಡಿಸಿದರು. ಈ ಕಚೇರಿ ಒಂದು ಚೌಕಟ್ಟಿಗೆ ಒಳಪಟ್ಟಿರಲಿಲ್ಲ. ಕರ್ನಾಟಕ ಸಂಘದ ವೈಶಿಷ್ಟ್ಯವು ಇದೇ ಆಗಿದೆ. ಇಲ್ಲಿ ಗಾಯಕ-ವಾದಕ ಮತ್ತು ಶ್ರೋತೃಗಳ ನಡುವೆ ಒಂದು ರೀತಿಯ ಸಮರಸವೇರ್ಪಟ್ಟಿರುತ್ತದೆ.

ಸಂಗೀತದ ಮಟ್ಟಿಗೆ 'ಕಲಾಭಾರತಿಯು' ಅಸ್ಪೃಶ್ಯತೆಯನ್ನು ಪಾಲಿಸಿಯೇ ಇಲ್ಲ. ಸಂಗೀತದ ಕಾರ್ಯಕ್ರಮವೇರ್ಪಟ್ಟಾಗ ಕೇವಲ ಶಾಸ್ತ್ರೋಕ್ತ ಹಿಂದೂಸ್ತಾನಿ ಸಂಗೀತವೇ

ಪ್ರಧಾನವಾಗಿರಬೇಕೆಂಬ ಹಠವಿರಲಿಲ್ಲ. ಕೆಲವೊಮ್ಮೆ ನಾಟ್ಯಸಂಗೀತ, ಒಮ್ಮೊಮ್ಮೆ ಭಾವಗೀತೆಗಳು, ಇನ್ನೊಮ್ಮೆ, ನೃತ್ಯ, ಮಗದೊಮ್ಮೆ ಸಂಸ್ಕೃತ ನಾಟಕ, ಹಲವು ಬಾರಿ ಮರಾಠಿ ಮತ್ತು ಕನ್ನಡ ನಾಟಕಗಳ ವಿವಿಧ ಕಾರ್ಯಕ್ರಮಗಳನ್ನು ಕಲಾಭಾರತಿಯು ಹಮ್ಮಿಕೊಂಡಿದ್ದೂ ಉಂಟು.

ಪದ್ಮಾಕರ್ ಶಿವಾಲ್ಕರ್ ಇವರು ಕ್ರಿಕೆಟ್ ಪಟುವೆಂದು ಎಲ್ಲರಿಗೂ ಗೊತ್ತು. ಚೆಂಡಿನ ಸ್ಪಿನ್ ಜೊತೆಗೆ ಸಂಗೀತದ ಆಸಕ್ತಿಯನ್ನು ಅವರು ಬೆಳೆಸಿಕೊಂಡದ್ದು ತನ್ನ ಸಂಗೀತ ಪ್ರೇಮದ ಮತ್ತು 'ನನ್ನ ಜೀವನ ಗಾಥೆ'ಯ ಪ್ರಯೋಗವನ್ನೂ ಕಲಾಭಾರತಿಯ ಮುಖಾಂತರವೇ ಆತ ಬೆಳಕಿಗೆ ತಂದರು. ನೃತ್ಯ ಪ್ರಕಾರದಲ್ಲಿಯೂ ಇದೇ ಪ್ರಯೋಗ ಮಾಡಿದ್ದಿದೆ. ಇತ್ತೀಚಿಗೆ ಕ್ರಿಶ್ಚಿಯನ್ ಪಾದ್ರಿ ಮತ್ತು ಭರತನಾಟ್ಯ ಇವರಿಬ್ಬರ ಸಂಬಂಧ ಇದೆ ಎಂದು ಸಂದೇಹ ಬಂದಲ್ಲಿ ಕಲಾಭಾರತಿಯು ಬಾರಬೋಸಾ ಅವರ ಭರತ ನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಇದರಂತೆ ಕೇರಳ ರಾಜ್ಯದ ಮುಸ್ಲಿಮ ಕಲಾವಿದರಿಂದ ಕಥಕ್ಕಳಿ ಕೂಡ ನಡೆಯಿತು. ಹೀಗೆ ಕಲಾಭಾರತಿಯ ಮೂಲಕ ಹಲವು ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ಕೊಡಮಾಡುವ ಪರಂಪರೆ ಬೆಳೆದು ಬಂದಿದ್ದು ಇದೆ.

ಸಹಜವಾಗಿಯೇ ಎಷ್ಟೋ ಕಲಾಕಾರರು ತಾವಾಗಿಯೇ ಕಲಾಭಾರತಿಗೆ ಬರುತ್ತಾರೆ ಮತ್ತು ತಮ್ಮ ತಮ್ಮ ಕಲೆಯನ್ನು ಪ್ರದರ್ಶಿಸಲು ಇಚ್ಛಿಸುತ್ತಾರೆ. ಒಮ್ಮೆ ಚಂದ್ರಕಾಂತ ಲಿಮಯೆ ತಮ್ಮ ಗುರು ವಸಂತರಾವ ದೇಶಪಾಂಡೆಯವರ ಬಗ್ಗೆ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಅದರಂತೆ ಪದ್ಮಾ ತಳವಳಕರರು ತಮ್ಮ ಗುರು ನಿವೃತ್ತಿ ಬುವಾ ಸರನಾಯಕರ ಸ್ಮೃತಿದಿನದಂದು ಸಂಗೀತ ಕಚೇರಿ ಇಟ್ಟುಕೊಂಡಿದ್ದರು. ವೀಣಾ ಸಹಸ್ರಬುದ್ಧೆಯವರು ಕಾಶೀನಾಥ ಬೋಡಸ ಅವರ ಸ್ಮೃತಿಯನ್ನು ಹಸಿರಾಗಿಡಲು ಕಲಾಭಾರತಿಯನ್ನೇ ಅವಲಂಬಿಸಿದ್ದರು. ಅಶ್ವಿನಿ ಭಿಡೆ ದೇಶಪಾಂಡೆ ಕೂಡ ಸರಲಾ ಭಿಡೆಯುವರ ಸ್ಮೃತಿ ಕಾರ್ಯಕ್ರಮವನ್ನು ಕಲಾಭಾರತಿಯು ಮೂಲಕವೇ ಜೀವಂತವಾಗಿರಿಸುವ ಪ್ರಯತ್ನ ನಡೆಸಿದ್ದಾರೆ. ಇದರ ಹೊರತಾಗಿ, 'ಖಯಾಲ್' ಸಂಸ್ಥೆಯ ಅಮರೇಂದ್ರ ಧನೇಶ್ವರರು ಕಲಾಭಾರತಿ ಪ್ರವಾಹದಲ್ಲಿ ಒಂದಾಗಿ ಹೋಗಿದ್ದಾರೆ. ಈ ಚಮತ್ಕಾರಕ್ಕೆಲ್ಲ ಕಾರಣರು ಪ್ರಕಾಶ ಬುರ್ಡೆಯವರೇ! ಕಳೆದ 12 ವರ್ಷಗಳಿಂದ ಬುರ್ಡೆಯವರು ಪ್ರತಿ ರವಿವಾರ ಕಲಾಭಾರತಿಯ ವೇದಿಕೆಯನ್ನು ಒಬ್ಬರಲ್ಲ ಒಬ್ಬರು ಕಲಾಕಾರರಿಗೆ ಮೀಸಲಿಡುತ್ತ ಬಂದಿದ್ದಾರೆ. ಕೆಲವೊಮ್ಮೆ ಇವರ ಕಾರ್ಯನಿಷ್ಠೆ ಋಷಿಮುನಿಗಳ ಯಜ್ಞದ ಕ್ರಮವನ್ನು ನೆನಪಿಸುತ್ತದೆ. ಪ್ರಕಾಶ ಬುರ್ಡೆಯವರು ನೇಪಥ್ಯದಲ್ಲಿ ನಿಂತುಕೊಂಡೇ ಎಷ್ಟೊಂದು ಕಲಾಕಾರರನ್ನು ಬಂಗಾರವನ್ನಾಗಿ ಮಾರ್ಪಡಿಸಿದರು ಎಂಬುದಕ್ಕೆ ಲೆಕ್ಕವಿಲ್ಲ. ಆದರೆ ಇಂತಹ ಪಾರಸಮಣಿಗಳಿಗೆ ಯಾರೇ ಆಗಲಿ ಎಂದೇ ಆಗಲಿ ಗೌರವಿಸಿದ ದಾಖಲೆ ಇಲ್ಲ!

* ಕುಮಾರ ಗಂಧರ್ವರ ಪತ್ನಿ ವಸುಂಧರಾ ಶ್ರೀಖಂಡೆಯವರು

*****

1.7

ಪ್ರಕಾಶ ಬುರ್ಡೆ: ಅಂತಃಕರಣಕ್ಕೆ ಇನ್ನೊಂದು ಹೆಸರು

ಡಾ. ಸುನೀತಾ ಶೆಟ್ಟಿ

ಸಂಗೀತಜ್ಞ ಪ್ರಕಾಶ ಬುರ್ಡೆಯವರು ಮುಂಬಯಿ ಕರ್ನಾಟಕ ಸಂಘದ ಅಧ್ಯಕ್ಷರಾಗುವ ಮೊದಲು ಕೆಲವು ವರ್ಷಗಳ ಕಾಲ ಸಂಘದ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ದುಡಿದವರು. ಆದರಿಂದಲೇ ಸಂಘದ ನಿಕಟ ಸಂಬಂಧವಿದ್ದ ನನಗೆ ಅವರ ಪರಿಚಯವಾದುದು ಮಾತ್ರವಲ್ಲ ಅವರು ಓರ್ವ ಸಾಹಿತ್ಯಪ್ರೇಮಿಯೂ ಅಗಿದ್ದರೆಂಬ ವಿಷಯ ಮನದಟ್ಟಾಯಿತು. ಸಂಗೀತದ ಬಗ್ಗೆ ನಿಖರ ಜ್ಞಾನವಿದ್ದ ಅವರು ಮರಾಠಿ ನಾಟ್ಯ ಸಂಗೀತದ ಬಗ್ಗೆ ಅಧಿಕಾರವಾಣಿಯಿಂದ ಮಾತಾಡಬಲ್ಲವರೂ ಆಗಿದ್ದರು. 'ಮರಾಠಿ ಮತ್ತು ಕನ್ನಡ ರಂಗಭೂಮಿ'ಯ ಬಗೆಗಿನ ನನ್ನ ಲೇಖನವನ್ನೂ ಓದಿಕೊಂಡಿದ್ದ ಅವರು ನನಗೆ ಆಧಾರ ಗ್ರಂಥವೆನಿಸಿದ್ದ ಡಾ. ಪ್ರಲ್ಹಾದ ಮುದಗಲ್ಲರ ಅದೇ ಹೆಸರಿನ ಪುಸ್ತಕವನ್ನು ನನ್ನಿಂದ ಪಡೆದುಕೊಂಡು ಓದಿದರು. ಕನ್ನಡ ಹಾಗೂ ಮರಾಠಿ ರಂಗಭೂಮಿಯ ಕೊಡುಕೊಳ್ಳುವಿಕೆಯನ್ನು ಅವರು ತಮ್ಮ ಒಂದು ಭಾಷಣದಲ್ಲಿ ಸೊಗಸಾಗಿ ಅಷ್ಟೇ ಸರಳವಾಗಿ ಉದಾಹರಣೆ ಸಹಿತ ವಿವರಿಸಿದ್ದು ಈಗಲೂ ನನ್ನ ಮನಃಪಟಲದಲ್ಲಿದೆ.

ಪ್ರಕಾಶ ಬುರ್ಡೆಯವರು ಕೇವಲ ಸಂಗೀತವನ್ನಷ್ಟೇ ಗಣಿಸದೇ ಅದರೊಳಗಿನ ಸಾಹಿತ್ಯವನ್ನೂ ವಿವೇಚಿಸುವ ಸಾಹಸ ಮಾಡಿದ್ದಾರೆ. ನನಗೆ ಎಪ್ಪತ್ತೈದು ವರ್ಷ ತುಂಬಿದಾಗ ಮುಂಬಯಿಯ, 'ಸನ್ನಿಧಿ ಪ್ರಕಾಶನ'ವು, "ನಡೆದ ಹಾದಿಯ ಹೂಗಳು" ಎಂಬ ಬೃಹತ್ ಗ್ರಂಥವನ್ನು ಹೊರ ತಂದಿತು. ಅದು ಅಭಿನಂದನಾ ಗ್ರಂಥವೆನಿಸುವದು ನನಗೆ ಇಷ್ಟವಿಲ್ಲದ್ದರಿಂದ, ಅದನ್ನೊಂದು ಸಾಹಿತ್ಯಿಕ ಗ್ರಂಥವನ್ನಾಗಿ ತರುವ ನನ್ನ ಯೋಜನೆಯಂತೆ, ಅದರಲ್ಲಿ ಒಳ-ಹೊರನಾಡಿನ ಲೇಖಕರ ಸಾಹಿತ್ಯಿಕ ಲೇಖನಗಳು ಸೇರ್ಪಡೆಗೊಂಡುವು. ಸಾಹಿತ್ಯದ ಬಗ್ಗೆ ಅಪಾರ ಒಲವು ಇದ್ದ ಬುರ್ಡೆಯವರು ಈ ಗ್ರಂಥಕ್ಕಾಗಿ "ಹಿಂದುಸ್ತಾನಿ ಖಯಾಲ್ ಸಂಗೀತದಲ್ಲಿ ಸಾಹಿತ್ಯ" ಎಂಬ ಉತ್ತಮ ಲೇಖನವನ್ನು ಬರೆದರು. ಅದರಲ್ಲಿ, ಉತ್ತರಪ್ರದೇಶದ ಈ ಗಾಯನ ಪದ್ಧತಿ ಮಧ್ಯಪ್ರದೇಶದ ಮಾರ್ಗವಾಗಿ ಮಹಾರಾಷ್ಟ್ರ, ಕರ್ನಾಟಕಕ್ಕೆ ಬಂದ ವಿಷಯವನ್ನು ತಿಳಿಸಿ ಕೆಲವು ಹಾಡುಗಳು ಉತ್ತರಪ್ರದೇಶದ 'ಬೋಲಿ ಭಾಷೆ' (ಆಡು ಭಾಷೆ) ಯಲ್ಲಿ ಇರುವುದನ್ನು

ಗುರುತಿಸಿದ್ದಾರೆ. ಕರ್ನಾಟಕ ಸಂಗೀತದ ಜಾವಳಿ, ಮತ್ತು ಮಹಾರಾಷ್ಟ್ರದ ಲಾವಣಿಗಳಂತೆ ಇವು ಇರುವುದನ್ನು ಅವರು ವಿವೇಚಿಸಿದ್ದಾರೆ. ಇದರ ಮೂಲವನ್ನು, 'ದೇಸಿ'ಯಲ್ಲೇ ಹುಡುಕಿದ ಬುರ್ಡೇಯವರು ಸನಾತನ ಘರಾಣೆಯಲ್ಲಿ ಹುಟ್ಟಿ ಬೆಳೆದ ನಿರಕ್ಷರಿ, ಹಿಂದುಳಿದ ಮಹಿಳೆಯರು ಮದುವೆಯ ಮುನ್ನಾದಿನ ಹಾಡುವ, 'ರತಜಗಾ'ವೇ ಇದು ಎಂದು ತರ್ಕಿಸಿದ್ದಾರೆ. ಇಲ್ಲಿ ಆಡು ಭಾಷೆಗೇ ಮಹತ್ವವೆಂದು ಉದಾಹರಣೆ ಸಹಿತ ವಿವರಿಸಿದ್ದಾರೆ. ಸಂಗೀತದ ಗಂಧ ಗಾಳಿ ಇಲ್ಲದವರಿಗೂ ಈ ಲೇಖನ ಆಸಕ್ತಿ ಹುಟ್ಟಿಸುತ್ತದೆ. ಕೆಲವು, 'ಬಂದಿಶ್'-ಚೀಜ಼್ ಇವುಗಳನ್ನೂ ಕುಮಾರ ಗಂಧರ್ವರಿಗೆ ಹೊಂದಿಸಿ ಹೇಳಿದ್ದುಂಟು. ಹೀಗಿದ್ದರೂ ಹಿಂದುಸ್ತಾನಿ ಸಂಗೀತ ಕಚೇರಿಗಳಲ್ಲಿ ಸಾಹಿತ್ಯಕ್ಕೆ ಕಡಿಮೆ ದರ್ಜೆಯೇ ಎಂಬ ಕಟು ಸತ್ಯವನ್ನೂ ಅವರು ನುಡಿದಿದ್ದಾರೆ.

ಅವರ ಬರೆವಣಿಗೆಗಳೆಂದರೆ ಅವು ಅಂತಃಕರಣದ ನುಡಿಗಳು. ಯಾರನ್ನೂ ಟೀಕಿಸದ, ಯಾರ ಮನಸ್ಸನ್ನೂ ನೋಯಿಸದ, ಅಪ್ಪಟ ಸತ್ಯದ ಮಾತುಗಳು. ಬುರ್ಡೆಯವರ ಇನ್ನೊಂದು ಲೇಖನ, "ಭಾರತೀಯ ಸಂಗೀತದಲ್ಲಿಯ ಏಕಾತ್ಮಕತೆ" ಇದನ್ನವರು ಓದಲು ನನಗೆ ಕೊಟ್ಟಿದ್ದರು.

ಒಂದು ಬಾರಿ ಇದ್ದಕಿದ್ದಂತೆ, 'ಯು ಟ್ಯೂಬ್'ನಲ್ಲಿ ಪಾಕಿಸ್ತಾನದ ಗಾಯಕ ರಿಯಾಸುದ್ದೀನ , 'ಕವ್ವಾಲಿ' ಹಾಡುವದನ್ನು ಕೇಳಿ ತಾವು ಅಚ್ಚರಿಗೊಂಡೆವೆಂದು ಹೇಳುವ ಬುರ್ಡೆಯವರು ಈ 'ಕವ್ವಾಲಿ' ಸಂಸ್ಕೃತದಲ್ಲಿ ಇತ್ತು ಎನ್ನುತ್ತಾರೆ. ಮತ್ತು ಪಂ. ಮಲ್ಲಿಕಾರ್ಜುನ ಮನ್ಸೂರ್ ಹಾಡುವ ಧಾಟಿಯಲ್ಲೇ ಇತ್ತು. ಇದರ ಮೂಲ , 'ಗೀತ ಗೋವಿಂದ'ವೆಂದು ರಿಯಾಸುದ್ದೀನ ವಿವರಣೆ ನೀಡಿದಾಗ ಬುರ್ಡೆಯವರು ಅದರ ಮೂಲ ಶೋಧಿಸಲು ಹೊರಟದ್ದು ಈ ಲೇಖನದಲ್ಲಿದೆ.

ಒಡಿಸ್ಸಾ ರಾಜ್ಯದ ಜಯದೇವ ಕವಿಯ 'ಗೀತಗೋವಿಂದ'ದ ಅಪಭ್ರಂಶವೇ, 'ಕವ್ವಾಲಿ'ಯ ರೂಪ. ಇಲ್ಲಿ ಸಾಹಿತ್ಯದ, 'ಮೋಡ್-ತೋಡ್' ಅಕ್ಷಮ್ಯವೆನಿಸಿದರೂ ಇಂಪಾದ ಸಂಗೀತವು ಕಲ್ಪನಾ ವಿಲಾಸಿಯಾಗಿ ರಸಿಕರ ಮನ ತಣಿಸುವದನ್ನು ಬುರ್ಡೆಯವರು ಉಲ್ಲೇಖಿಸುತ್ತಾರೆ. ಕ್ರಮೇಣ, ಇದು ನಾಲ್ಕು ಸಾಲಿನ ಹಾಡುಗಳಾಗಿ ಪರಿವರ್ತನೆಗೊಂಡು, ಬೋಲಿ ಭಾಷೆಗೆ ಒಗ್ಗಿಕೊಂಡ 'ಧ್ರುಪದ್'ವಾಗಿಯಷ್ಟೇ ಉಳಿಯಿತು ಎನ್ನುವ ಬುರ್ಡೆಯವರು ಭೈರಪ್ಪನವರ 'ಸಾರ್ಥ' ಕಾದಂಬರಿಯನ್ನೂ ಉಲ್ಲೇಖಿಸುತ್ತಾರೆ. ಬೇರೆ ಬೇರೆ ಸಂಗೀತಕಾರರು ದನಿಗೂಡಿಸಿ ಹಾಡಿದ ಸ್ವರ ಸಮೂಹ 'ಮಿಲೆ ಸುರ್' ಭಾರತೀಯ ಸಂಗೀತದ ಏಕಾತ್ಮಕತೆ ಎಂದು ಹೇಳುತ್ತ ಭಾರತವರ್ಷವನ್ನು ಒಂದುಗೂಡಿಸಿದ ಎ.ಆರ್. ರಹಮಾನ್ ಇವರನ್ನು ಮರೆಯುವಂತಿಲ್ಲ, ಎಂದಿದ್ದಾರೆ.

ಇತ್ತೀಚಿಗೆ ಮುಂಬಯಿಯ ಒಂದು ಪತ್ರಿಕೆಯಲ್ಲಿ ಪ್ರಕಟಗೊಂಡ ಬುರ್ಡೆಯವರ ಲೇಖನ, ಹಿಂದುಸ್ತಾನಿ ಸಂಗೀತದಲ್ಲಿಯ ನಾಯಕಸಾನಿಯರು ಮಾಲಿಕೆಯಲ್ಲಿ, 'ಜದ್ದನಬಾಯಿ ಸಿನೇ ಸ್ಟಾರ್ ನರ್ಗೀಸಳ ತಾಯಿ' ಎಂಬ ಕೆಲವು ಹೊಸ ಸಂಗತಿಗಳನ್ನು ತಿಳಿಸಿಕೊಟ್ಟರು. 'ತವಾಯಫ್' (ಕೋಠಿಯ ಗಾಯಕಿಯ) ಸಂಸ್ಕಾರದ ಮನೆತನದಿಂದ ಬಂದಿರುವ ಜದ್ದನ್ ಬಾಯಿಯ ತಾಯಿ ದಲೀಪಜಾನ್ ಕಾಶ್ಮೀರದ ಬ್ರಾಹ್ಮಣ

ಕುಟುಂಬದಲ್ಲಿ ಜನಿಸಿದ್ದರೂ, ಬಾಲ್ಯದಲ್ಲಿಯೇ ಅಪಹೃತಳಾಗಿ ಮುಂದೆ, 'ತವಾಯಿಫ್' ಸಂಪ್ರದಾಯಕ್ಕೆ ಸೇರಿಕೊಂಡದ್ದು ಒಂದು ಕತೆಯಾದರೆ, ಮೋತಿಲಾಲ ನೆಹರೂ ಮತ್ತು ದಲೀಪಜಾನರ ಸಂಬಂಧ ಬೆಳೆದದ್ದು ಇನ್ನೊಂದು ಕತೆ. ಮೋತಿಲಾಲರ ಮರಣಾನಂತರ ಆಕೆ ವಿಧವೆಯಂತೆ ಜೀವನ ನಡೆಸುತ್ತಿದ್ದುದು, ಈಕೆಯ ಮಗಳು ಜದ್ದನಬಾಯಿ ಜವಾಹರ ನೆಹರೂರವರಿಗೆ ಪ್ರತಿ ವರ್ಷ ರಕ್ಷಾಬಂಧನ ಮಾಡುತ್ತಿದ್ದುದು ಮತ್ತೊಂದು ಸತ್ಯ ಕತೆ. ಇಷ್ಟು ಸೂಕ್ಷ್ಮ ವಿಚಾರಗಳನ್ನು ಬುರ್ಡೆಯವರು, "ನರ್ಗೀಸ್ ದತ್ತಳ ಜೀವನ ಚರಿತ್ರೆ" (ಇಂಗ್ಲಿಷಿನಲ್ಲಿ ಮೇಘನಾದ ದೇಸಾಯಿ ಹಾಗೂ ಈಶ್ವರಿ ದೇಸಾಯಿ ಬರೆದ ಗ್ರಂಥ) ಆಧಾರವಾಗಿಟ್ಟು ಬರೆದಿದ್ದಾರೆ.

ಜದ್ದನಬಾಯಿ ಚಲನಚಿತ್ರದಲ್ಲಿ ಭಾಗವಹಿಸಿದ ಉದಾಹರಣೆಗಳಿವೆ. ಈಕೆ ಹಾಡುಗಾರಿಕೆಯಲ್ಲೂ ಪ್ರಸಿದ್ಧಳಾಗಿದ್ದು ಅವಳ ಮುದ್ರಿತ ಸಿ.ಡಿ.ಗಳಿವೆ ಎಂದು ಬುರ್ಡೆಯವರು ಪತ್ತೆ ಹಚ್ಚಿದ್ದಾರೆ. ಜದ್ದನಬಾಯಿ ಮೂರು ಬಾರಿ ಮದುವೆ ಆಗಿದ್ದಳಂತೆ. ತವಾಯಿಫ್‌ತನ ಬಿಟ್ಟುಕೊಟ್ಟು ಸಿನೇಮಾ ರಂಗಕ್ಕೆ ಕಾಲಿಟ್ಟ ಸಾಹಸಿ ಮಹಿಳೆಯೆಂದೂ ಬುರ್ಡೆಯವರು ಅವಳನ್ನು ಬಣ್ಣಿಸುತ್ತಾರೆ.

ಹೀಗೆ, ಸತತವಾಗಿ ಸಂಗೀತ ಕ್ಷೇತ್ರವನ್ನೇ ಬದುಕಿನುದ್ದಕ್ಕೂ ಅಧ್ಯಯನದ ವಿಷಯವನ್ನಾಗಿ ಅಪ್ಪಿಕೊಂಡ ಬುರ್ಡೆಯವರು ಸಂಗೀತಜೀವಿಯೂ . ಹೌದು. ನನಗೆ ವಿಶೇಷವಾಗಿ ಕಂಡುದು ಸಂಗೀತದ ಜ್ಞಾನದೊಂದಿಗೆ ಬೆಸೆದುಕೊಂಡ ಅವರ ಸಾಹಿತ್ಯ ಪ್ರೇಮ. ಕನ್ನಡದ ಅನೇಕ ದಿಗ್ಗಜರ ಸಾಹಿತ್ಯವನ್ನು ಅವರು ಓದಿಕೊಂಡಿದ್ದರೆಂದು ಅವರು ನನ್ನೊಡನೆ ಚರ್ಚಿಸುವಾಗ ಅನುಭವಕ್ಕೆ ಬರುತ್ತಿತ್ತು. ಯಾವುದೇ ವಿಷಯುವಾದರೂ ಅದರ ಸಂಪೂರ್ಣ ಪರಿಜ್ಞಾನವಿಲ್ಲದೇ ಅವರೆಂದೂ ಮಾತಾಡುತ್ತಿರಲಿಲ್ಲ.

ಕೊನೆಯದಾಗಿ ಅವರ ಮಾನವೀಯತೆ, ಹೆಣ್ಣುಮಕ್ಕಳ ಬಗೆಗಿನ ಗೌರವ, ಅಂತಃಕರಣಕ್ಕೆ ಉದಾಹರಣೆಯೆಂದು ನಾನು ಒಂದು ಸನ್ನಿವೇಶವನ್ನು ಇಲ್ಲಿ ಹೇಳಲೇಬೇಕು-

ನಾವು ಮುಂಬಯಿಯ ಮೂವತ್ತುಮೂರು ಲೇಖಕಿಯರು, "ಹಚ್ಚಿಟ್ಟ ಹಣತೆಗಳು" ಎಂಬ 'ಅನುಭವ ಕಥನ' ಗ್ರಂಥವನ್ನು ಲೋಕಾರ್ಪಣೆಗೊಳಿಸುವ ಸಂಧರ್ಭದಲ್ಲಿ ಬುರ್ಡೆಯವರು ಅಧ್ಯಕ್ಷ ಸ್ಥಾನದಲ್ಲಿದ್ದು ಅದರ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿ, ಮುಂಬಯಿ ಲೇಖಕಿಯರು ಯಾರಿಗೂ ಕಡಿಮೆಯಿಲ್ಲ ಎಂದಿದ್ದರು. ಇತ್ತೀಚಿಗೆ ನನ್ನ ಆತ್ಮಕಥನ, "ಸಾವಿರದ ಬಿಸಿಲು-ಬೆಳದಿಂಗಳು" ಗ್ರಂಥಕ್ಕೆ ನೀಡಿದ ಪುಟ್ಟ ಸಂದೇಶದಲ್ಲಿ ಇದೇ ಹೆಸರನ್ನು ಉಲ್ಲೇಖಿಸಿ ಈ ಕಂಪ್ಯೂಟರ ಯುಗದಲ್ಲಿ ಸಾಹಿತ್ಯ ಹಚ್ಚಿಟ್ಟ ಹಣತೆಯಂತಿರಬೇಕು! ಎಂದು ಬರೆದಿದ್ದರು.

ನನ್ನ, "ಮೌನದ ಕಿಟಕಿಯೊಳಗೆ" ಕವನ ಸಂಗ್ರಹ ಬಿಡುಗಡೆ ಸಂದರ್ಭದಲ್ಲಿ ಅವರು ಅಧ್ಯಕ್ಷರಾಗಬೇಕೆಂದು ಕೇಳಿಕೊಂಡಿದ್ದೆ. ಅವರು ತಮ್ಮ ಅನಾರೋಗ್ಯವನ್ನು ಗಣಿಸದೇ ಸಂತೋಷದಿಂದಲೇ ಒಪ್ಪಿಕೊಂಡಿದ್ದರು. ಆದರೆ ಅಂದು ಕಾಯಿಲೆ ಉಲ್ಬಣಿಸಿ

ಅವರು ಭಾಗವಹಿಸುವದು ಸಾಧ್ಯವಾಗಲಿಲ್ಲ. ಆದರೂ ತನ್ನ ಮಗಳ ಜೊತೆಯಲ್ಲಿ ತೀವ್ರ ಉಬ್ಬಸದಿಂದ ನರಳುತ್ತ ಸಣ್ಣ ಆಕ್ಸಿಜನ್ ಸಿಲಿಂಡರ ನೊಂದಿಗೆ ಸಭಾಂಗಣಕ್ಕೆ ಬಂದು ನನ್ನನ್ನು ಕಂಡು ತೀರ ದಯನೀಯ ಸ್ಥಿತಿಯಲ್ಲಿ, "ನಾನು ಇಂದು ಭಾಗವಹಿಸುವದು ಸಾಧ್ಯವಿಲ್ಲ ಶೆಟ್ಟಿಯವರೇ" ಎಂದು ನುಡಿದಾಗ ನಾನು ಭೂಮಿಗಿಳಿದು ಹೋದೆ. ಮನೆಯಿಂದಲೇ ಒಂದು ಸಂದೇಶವನ್ನು ಕಳಿಸಬಹುದಿತ್ತು, ಇಲ್ಲಿವರೆಗೆ ಬರುವ ಕಷ್ಟವನ್ನು ಏಕೆ ವಹಿಸಿದರೋ ಎಂಬ ದುಖಃದಲ್ಲಿ ನನ್ನ ಬಾಯಿಂದ ಮಾತು ಹೊರಡಲಿಲ್ಲ. ಇದನ್ನು ಸೌಜನ್ಯವೆನ್ನಲೇ? ಅಂತಃಕರಣವೆನ್ನಲೇ? ಕರ್ತವ್ಯ ಪ್ರಜ್ಞೆಯೆನ್ನಲೇ? ಓರ್ವ ಮನುಷ್ಯನು ದೇವತೆಯಂತೆ ನಡೆದುಕೊಂಡ ರೀತಿಯಿದು! ಇಂಥವರೂ ಇದ್ದಾರೆಯೇ ಎಂಬ ಅಚ್ಚರಿ, ಈಗಲೂ ನನ್ನನ್ನು ಕಾಡುತ್ತಿರುತ್ತದೆ.

ಇದಿಷ್ಟು ನನ್ನ ನೆನಕೆಗಳೊಂದಿಗೆ ನಾನು ಅರ್ಪಿಸುವ ಭಾಷ್ಪಾಂಜಲಿ!

*****

1.8

ಸ್ವರಪ್ರಕಾಶ್ – ಒಂದು ವರದಿ

ವಿಠ್ಠಲ್ ಸಿ. ನಾಡಕರ್ಣಿ

[ಇತ್ತೀಚೆಗೆ ಅಗಲಿದ ಪ್ರಕಾಶ ಬುರ್ಡೆ ಅವರಿಗೆ 25.3.2016ರಂದು ಮುಂಬಯಿಯ ಗ್ರಾಂಟ್ ರೋಡ್‌ದಲ್ಲಿರುವ ಆನಂದಾಶ್ರಮ ಹಾಲ್‌ದಲ್ಲಿ ಸ್ಮರಣಾಂಜಲಿ ಕಾರ್ಯಕ್ರಮವು ಏರ್ಪಟ್ಟಿತ್ತು. ಅವರನ್ನು ನಿಕಟವಾಗಿ ಬಲ್ಲ ಹಲವರು ಶ್ರದ್ಧಾಂಜಲಿಯನ್ನು ಭಾವಪೂರ್ಣವಾಗಿ ಕೊಡಮಾಡಿದಂತೆ, ಮೂವರು ಪ್ರಸಿದ್ಧ ಸಂಗೀತಗಾರರು ಅಂದಿನ ತಮ್ಮ ಕಾರ್ಯಕ್ರಮವನ್ನು ಪ್ರಕಾಶನ ನೆನಪಿಗೆ ಮೀಸಲಿಟ್ಟಿರುವುದಾಗಿ ಘೋಷಿಸಿದರು. ವಿಠ್ಠಲ್ ನಾಡಕರ್ಣಿಯವರು ತಮ್ಮ ಕೆಲ ನೆನಪುಗಳೊಂದಿಗೆ ಅಂದಿನ ಸ್ಮರಣಾಂಜಲಿಯ ಸಂಕ್ಷಿಪ್ತ ವರದಿಯನ್ನು ಇಂಗ್ಲಿಷಿನಲ್ಲಿ ಕೊಡಮಾಡಿದ್ದಾರೆ.]

"ನಾನು ಕರ್ತವ್ಯನಿರತನಿರುವ ಪತ್ರಿಕೆಯ ಸಂಸ್ಥೆಯಲ್ಲಿಯೇ ಸುಮಾರು ನಾಲ್ಕು ದಶಕಗಳಿಂದ ಬಲ್ಲ ಪ್ರಕಾಶ ಬುರ್ಡೆ ನನ್ನ ಆಪ್ತಮಿತ್ರರಾಗಿದ್ದಂತೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳ ವಿಮರ್ಶಕರಾಗಿ ಅದೇ ಪತ್ರಿಕೆಗೆ ಬರೆಯುತ್ತಿದ್ದರು. ಜಾತಿ, ಪಂಗಡಾಭಿಮಾನಿ ಎಂಬ ಆರೋಪ ಬರುವ ಸಾಧ್ಯತೆಯಿದ್ದರೂ, ಪ್ರಕಾಶ ಬುರ್ಡೆ ಓರ್ವ ನಿಜವಾದ 'ಸಾರಸ್ವತ'ನಾಗಿದ್ದರೆಂದು ಧೈರ್ಯವಾಗಿ ಹೇಳಬಲ್ಲೆ. ಬೆಳ್ಳಿ ಚಮಚದ ಬದಲಾಗಿ ಬಾಯಲ್ಲಿ ಬೆಳ್ಳಿಯ ನಾಲಿಗೆಯನ್ನು ಪಡೆದಿದ್ದರು! ಅಲ್ಲಲ್ಲ! ಬೆಳ್ಳಿ ಕಿವಿಯನ್ನು ಅಥವಾ ಚಿನ್ನದ ಹೃದಯವನ್ನು ಹೊಂದಿದ್ದರು ಎಂಬುದು ಮರುಯೋಚನೆ ಮಾಡಿದಾಗ ಹೊಳೆಯುತ್ತದೆ.

ಆತ ಇಜವಾದ ಕಲಾಭಿಜ್ಞರಾಗಿದ್ದರು. ಆದರೆ, ಈ ಪರಿಣತಿಯೊಂದಿಗೇ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕೃಪಣತ್ವವಾಗಲಿ, ವಿಕೃತಿಯಾಗಲಿ, ಮೊಂಡುತನವಾಗಲಿ ಅವರಲ್ಲಿ ಇರಲಿಲ್ಲ. ಇವೆಲ್ಲ 'ಸೂಕ್ಷ್ಮಗ್ರಾಹಿಗಳ ಲಕ್ಷಣಗಳು' ತಾನೆ? ಪ್ರಕಾಶ್ ಮಾಮ ಇವನ್ನು ಮೀರಿ ನಿಂತಿದ್ದರು.

ಜೊತೆಗೆ ಅವರ ಸಾಧನೆ ಅದ್ಭುತವಾಗಿತ್ತು. ಅವರ ಸಂಗೀತ ವಿಶ್ಲೇಷಣೆಯಲ್ಲಿ ಹಲವಾರು ಪ್ರದರ್ಶನ ಕಲೆಗಳ ಸಂತುಲಿತ ನಿರೂಪಣೆಯಿರುತ್ತಿತ್ತು. ಜೊತೆಗೆ ಉದಯೋನ್ಮುಖ ಕಲಾಕಾರರಿಗೆ ವೇದಿಕೆ ನಿರ್ಮಿಸಿಕೊಡುವ ಔದಾರ್ಯವಿತ್ತು. ಬೇರೆ

ಬೇರೆ ಭಾಷೆಗಳಲ್ಲಿ ನಿರರ್ಗಳ ನಿರೂಪಣೆ ಮಾಡುವುದನ್ನು ರೂಢಿಸಿಕೊಂಡಿದ್ದರು. ಉತ್ತಮ ಅಭಿರುಚಿಯೊಂದಿಗೆ ವಿಶಾಲ ಮನೋಭಾವವೂ ಅವರದಾಗಿತ್ತು. ಈ ವೈಶಿಷ್ಟ್ಯಗಳೇ ಮಹಾನಗರಿ ಮುಂಬಯಿಯ ಸಾಂಸ್ಕೃತಿಕ ಕ್ಷೇತ್ರದ ಜೀವಾಳವಾಗಿವೆ. ಅವರ ಈ ವಿಶಿಷ್ಟ ಕೊಡುಗೆಯನ್ನು ಬಾಡಿಹೋಗಲು ಬಿಡಬಾರದು. ಇದನ್ನು ಉಳಿಸಿಕೊಂಡರೆ ಕ್ರೀಡಾಮನೋಭಾವದ, ಸರಸ್ವತಿಮಾತೆಯ ಪುತ್ರನೋರ್ವನ ಸ್ಮರಣೆಗೆ ತಲುಪಿಸಬಹುದಾದ ನಿಜವಾದ ಶ್ರದ್ಧಾಂಜಲಿಯಾಗುತ್ತದೆ.

ಪ್ರಕಾಶನನ್ನು ಉದಯ ಮಂಕಿಕರ್* ಅವರು 'ಚಲ್ತಾಬೋಲಾ' ವಿಶ್ವಕೋಶವೆಂದು ಕರೆದರು. ತುಂಬ ಜನ ಅವರನ್ನು ತಮ್ಮವರೆಂದು ಗುರುತಿಸಿಕೊಂಡಿದ್ದರು. ಭೀಮಸೇನ ಜೋಶಿ ಮತ್ತು ಅವರ ಗುರುಭಗಿನಿ ಗಂಗೂಬಾಯಿ ಹಾನಗಲ್ ಅಂಥವರಿಂದ ಹಿಡಿದು ಈಗಷ್ಟೆ ಕಣ್ಣು ಬಿಡುತ್ತಿರುವ ಯುವ ಕಲಾಕಾರರಿಗೆಲ್ಲ ಅವರು ಆತ್ಮೀಯರಾಗಿದ್ದರು.

ಪ್ರಕಾಶನ ಪ್ರತಿಭೆಯನ್ನು ಮೊದಲಿಗೆ ಗುರುತಿಸಿದವರು ತಾವು ಎಂದು ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಡಾ. ವ್ಯಾಸರಾವ್ ನಿಂಜೂರರು ನೆನಪಿಸಿಕೊಂಡರು. ಪ್ರಾರಂಭದಲ್ಲಿ ಸಂಗೀತಸಭೆಗಳ ಸಂಯೋಜನೆಗಳಲ್ಲಿ ಪಾಲ್ಗೊಳ್ಳಲು, ನಿರೂಪಕನೆಂದೋ, ಆ ಕಾರ್ಯಕ್ರಮದ ಅಧ್ಯಕ್ಷನೆಂದೋ ಕೆಲಸವನ್ನು ವಹಿಸಿದರಂತೆ. ಬರಬರುತ್ತ ಅವರ ಉಪಸ್ಥಿತಿ ಅತಿ ಅವಶ್ಯವಾಗುತ್ತ, ಸಂಸ್ಥೆಗೆ ಹಣಕೂಡಿಸುವುದರಿಂದ ಹಿಡಿದು ಕಲಾವಿದರನ್ನು ಹುಡುಕಿ ತರುವ ಕೆಲಸವನ್ನೂ ಆರಂಭಿಸಿದರು. ಅವರ ಕೆಲಸ ಎಷ್ಟೊಂದು ಪರಿಣಾಮಕಾರಿಯಾಯಿತೆಂದರೆ, ಒಂದು ಘಟ್ಟದಲ್ಲಿ ಅವರು ಸಂಘದ ಅಧ್ಯಕ್ಷರೆಂದು ಸರ್ವಾನುಮತದಿಂದ ಆಯ್ಕೆಯಾದರು. ಕನ್ನಡದಲ್ಲಿ ಬರೆಯುವಂತೆ ಆಗ್ರಹಿಸಿ, ಆತನ ಬೆನ್ನುಹತ್ತಿ ಬರೆಸಿದವರೇ ಡಾ. ನಿಂಜೂರರು. ತನ್ನ ಕನ್ನಡಕ್ಕೆ ತುಕ್ಕು ಹಿಡಿದು ದಶಕಗಳೇ ಕಳೆದಿವೆ ಎಂದು ಮೊದಲಿಗೆ ಬರೆಯಲು ಒಪ್ಪಿಕೊಳ್ಳದ ಪ್ರಕಾಶ ಆ ಬಳಿಕ 'ಗೋಕುಲವಾಣಿ', 'ರಾಗಧನಶ್ರೀ'ಗಳಿಗೆ, ಕರ್ನಾಟಕ ಸಂಘದ ಮುಖವಾಣಿ 'ಸ್ನೇಹ-ಸಂಬಂಧ'ಕ್ಕೆ, ಸಾಕಷ್ಟು ಬರೆದರು. ಆ ಬಳಿಕದ್ದೆಲ್ಲ ಇತಿಹಾಸ! ಎನ್ನುತ್ತಾರಲ್ಲಾ ಹಾಗೆ.

ಆಗಾಗ ಕವಿತೆಗಳನ್ನು, ಚುಟಕಗಳನ್ನು ಆತ ರಚಿಸಿದ್ದು ಉಂಟು. ತುಂಬ ಹಿಂದೆ ಎರಡು ಕೃತಿಗಳನ್ನೂ ಆತ ಕನ್ನಡದಲ್ಲಿ ತಂದಿದ್ದರು.

ಅವರ ಸೋದರಿ, ಜ್ಯೋತ್ಸ್ನಾ ಕಾಮತ್ ಹೇಳುವ ಹಾಗೆ ತನಗೆ ಪ್ರಕಾಶನ ಓದು ಮತ್ತು ಬರಹಗಳ ಆಳ-ಹರಹುಗಳ ಕಲ್ಪನೆ ಮೂಡಿದ್ದು ಆತ 'ಇಲ್ಲ'ವಾದ ಮೇಲೆಯೇ ಎಂದು ಉದ್ಗರಿಸಿದ್ದಾರೆ. "ಇದಕ್ಕೆ ಕಾರಣ, ವೃತ್ತಿನಿಮಿತ್ತ ಆತ ಬೇರೆ ಬೇರೆ ದೂರದ ಊರುಗಳಲ್ಲಿದ್ದ. ಬಾಲ್ಯದಿಂದ ಕಲಿತ ಕನ್ನಡ ಭಾಷೆಯ ಬಳಕೆಯನ್ನು ಮರೆತುಬಿಟ್ಟಿದ್ದ. ಆದರೆ ಸಂಗೀತ ಶ್ರವಣ-ಮನನಗಳು ಅಖಂಡವಾಗಿ ನಡೆದೇ ಇದ್ದವು. ಆತ ಮೂರು ದಶಕಗಳಲ್ಲಿ ಇಂಗ್ಲಿಷ್, ಕನ್ನಡ, ಮರಾಠಿಗಳಲ್ಲಿ ಬರೆದ ಸಾಮಗ್ರಿಯನ್ನೆಲ್ಲ ಒಟ್ಟುಮಾಡಿ ಓದಲು ಮೂರುತಿಂಗಳೇ ಹಿಡಿದವು!" ಎಂದು ಅವರು ಹೇಳಿದ್ದಾರೆ.

"ಆತನಿಗೆ ಸಂಗೀತ ಪ್ರಕಾರಗಳ ಆಳ ಪರಿಚಯವಿತ್ತು. ಸಂಶೋಧನಾತ್ಮಕ ಒಲವೂ ಇತ್ತು. ಒಂದೆರಡು ಉದಾಹರಣೆಗಳನ್ನು ಹೇಳುವುದಾದರೆ 'ರಾತ್ ಜಗಾ' ಎಂಬ ಕಾರ್ಯಕ್ರಮದಲ್ಲಿ ಮುಸ್ಲಿಮ್ ಸಮುದಾಯದಲ್ಲಿ ವಿವಾಹದ ಮುನ್ನಾರಾತ್ರಿಯಿಡೀ,

ಸಾಂಪ್ರದಾಯಿಕ ಹಾಡುಗಳನ್ನು ಹಾಡುತ್ತ, ಕಳೆಯುವ ರೂಢಿ ಇದೆ. ಅವನ್ನು ಹಾಡುತ್ತಿದ್ದ ನಾಯಕಸಾನಿಯರಲ್ಲಿ ಕೆಲವರು ತಾವು ಹಾಡುತ್ತಿದ್ದ ಶಿಷ್ಟ ಸಂಗೀತವೆಂದು ಎನಿಸಿಕೊಂಡ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಕಾರಗಳ ಭಾಗವಾಗಿ ಮಾರ್ಪಡಿಸಿಕೊಂಡರು, ಗ್ರೀಕರು epithalamiums* ಎಂದು ಕರೆಯುವ ಪ್ರಕಾರದಂತೆ!. ಅದರಂತೆ ಕುಮಾರಗಂಧರ್ವರು ಕ್ಷಯರೋಗದಿಂದ ಪೀಡಿತರಾಗಿ ಚೇತರಿಸಿಕೊಳ್ಳುತ್ತ ಮಧ್ಯಪ್ರದೇಶದಲ್ಲಿನ ಮಾಳವದ ದೇವಾಸದಲ್ಲಿ ನೆಲೆಸಿದ್ದರು. ದಿನವೂ ಪಕ್ಕದ ಹೊಲಗಳಲ್ಲಿ ಕೃಷಿಕಾರ್ಯದಲ್ಲಿ ತೊಡಗಿರುತ್ತಿದ್ದ ಹೆಂಗೆಳೆಯರು ಹಾಡುತ್ತಿದ್ದ ರಾಗ, ಜನಪದ ಹಾಡುಗಳ ಧಾಟಿಗಳನ್ನು ಕೇಳಿ ರೂಢಿಸಿಕೊಂಡು ತಮ್ಮದೇ ಶಾಸ್ತ್ರೀಯ ಸಂಗೀತದಲ್ಲಿ ಅಳವಡಿಸಿಕೊಂಡು ಹಾಡಲಾರಂಭಿಸಿದರು! ಹೀಗೆ ಭಾರತದ ಪ್ರಾದೇಶಿಕ ಮಣ್ಣಿನೊಂದಿಗೆ ಹಿಂದೊಮ್ಮೆ ಬೆರೆತುಹೋದ ಕೆಲವು ಧಾಟುಗಳನ್ನು ಗುರುತಿಸಿ ಅವಕ್ಕೆ ಜೀವತುಂಬಿದರು" ಎಂದು ಪ್ರಕಾಶ ಹೇಳುತ್ತಿದ್ದನೆಂಬುದನ್ನು ಜ್ಯೋತ್ಸ್ನಾ ನೆನಪಿಸಿಕೊಂಡರು.

ಸುಮೇಧಾ ರಾಯ್ಕರ್ ಮ್ಹಾತ್ರೆ ಅವರು 'ಸಂಗೀತ ಕಾರ್ಯಕ್ರಮಗಳ ಸಂಘಟಕರಾಗಿ ಪ್ರಕಾಶರು ದಕ್ಷತೆಯನ್ನು ಮೆರೆದಿದ್ದಾರೆ. ಇಂಥ ಯಾವುದೇ ಹೊಣೆಗಾರಿಕೆಯಲ್ಲಿ ಪಾಲ್ಗೊಳ್ಳಲು ಕೇಳಿದಾಗ ಆಗಿಂದಾಗ್ಗೆ ಸಹಾಯಹಸ್ತ ಚಾಚುತ್ತಿದ್ದ ಅವರು ಓರ್ವ ಸಭ್ಯ ಸ್ನೇಹಿತರೂ ಆಗಿದ್ದರು' ಎಂದು ಸ್ಮರಿಸಿದರು.

ಇತರ ಕಲೆಗಳು ಹಾಗೂ ಸಂಗೀತ ಜಗತ್ತನ್ನು ಕಾಯಂ ಆಗಿ ಕಾಡುತ್ತಿರುವ ಕ್ಲೀಕ್ಸ್ (cliques) ಹಾಗೂ ಕೊಟರಿಗಳಿಂದ (coterie) ಪ್ರಕಾಶ ಬುರ್ಡೆಯವರು ದೂರವಿದ್ದರು. ಸಂಗೀತವೆಂಬುದು, ಭಾಷೆ, ಮತ, ಪಂಥ ಮತ್ತು ವರ್ಗಗಳ ಅಂತರವನ್ನು ಮರೆಸಿ ಬೆಸೆಯುವ ಗಟ್ಟಿ ಮಾಧ್ಯಮವೆಂದು ನಂಬಿದ್ದರು. ಸಂಗೀತ ಜಗತ್ತಿನ ಒಳ-ಹೊರಗನ್ನು ಅರ್ಥೈಸಿಕೊಂಡಿದ್ದ ಅವರು ಸಂಘಟಕರಾಗಿ, ಪೋಷಕರಾಗಿ, ಮೊದಲ ಹೆಜ್ಜೆಯಿಡುವ ಸಾಮರ್ಥ್ಯವನ್ನು ಹೊಂದಿದ್ದರು. ಅವರು ಕೈಕೊಂಡು ಯಶಸ್ವಿಯಾಗುತ್ತಿದ್ದ ಕಾರ್ಯಕ್ರಮಗಳ ಸಂಘಟನೆ ಸುಲಭವಿರಲಿಲ್ಲ. ಆದರೆ ಆ ಬಗ್ಗೆ ಎಂದೂ ಅವರು ದೂರಿದವರಲ್ಲ. ಇಂಥ ಕೆಲಸಕ್ಕೆ ಸಹನೆ, ಸಮಯ ಮತ್ತು ಸ್ವೀಕೃತಿಗಳು (receptivity) ಬೇಕಾಗುತ್ತವೆಯಷ್ಟೆ?

"ಸಂಗೀತವಲ್ಲದೇ ಅವರಿಗೆ ನಾಟಕಾದಿ ಇತರ ಲಲಿತ ಕಲೆಗಳಲ್ಲಿಯೂ ಬಹಳ ಆಸಕ್ತಿಯಿತ್ತು. ಮುಂಬಯಿಯಲ್ಲಿ ನಡೆಯುತ್ತಿದ್ದ ತುಳು ನಾಟಕ ಪ್ರಯೋಗಗಳಿಗೆ ನನ್ನನ್ನು ಕರೆದೊಯ್ದು ಪರಿಚಯಿಸಿದರು. ನಗರದ ಮುನಿಸಿಪಲ್ ಸ್ಕೂಲುಗಳಲ್ಲಿ ನಡೆಯುತ್ತಿದ್ದ ಸಂಗೀತಪಾಠಗಳ ಬೋಧನೆಯುತ್ತಲೂ ಗಮನ ಸೆಳೆದರು. ಮುಂಬಯಿಯಲ್ಲಿ ನಡೆಯುತ್ತಿದ್ದ ಸೃಜನಾತ್ಮಕ ಚಟುವಟಿಕೆಗಳೆಲ್ಲವನ್ನೂ ಆಸ್ವಾದಿಸಲು ಅವಶ್ಯವಿರುವ bandwidth ಅವರಲ್ಲಿತ್ತು" ಎಂದರು ಸುಮೇಧಾ.

ಖ್ಯಾತ ಕ್ರಿಕೆಟ್ ಕೋಚ್ ವಿಲಾಸ್ ಗೋಡಬೋಲೆ ಅವರು ಪ್ರಕಾಶರನ್ನು ಪ್ರಶಂಸಿಸುತ್ತಾ, 1993ರ ಬಾಂಬ್ ಸ್ಫೋಟದಿಂದ ನಿಷ್ಕ್ರಿಯವಾಗಿದ್ದ ಮುಂಬೈಯ ಸಾಂಸ್ಕೃತಿಕ ಜೀವನಕ್ಕೆ ಪುನಶ್ಚೇತನ ನೀಡಲು ಒಬ್ಬಂಟಿಯಾಗಿ ಅವರು ಶ್ರಮಿಸಿದ

ಬಗೆಯನ್ನು ಹೀಗೆ ನೆನಪಿಸಿಕೊಂಡರು. "ಸಾಯಂಕಾಲವಾದೊಡನೆ ಜನ ಹೊರಬೀಳಲು ಹೆದರುತ್ತಿದ್ದರು. ಒಂದೆಡೆ ಸೇರಲು ಅನುಮಾನಿಸುತ್ತಿದ್ದರು. ಹೀಗಾಗಿ ಸಾಂಸ್ಕೃತಿಕ ಚಟುವಟಿಕೆಗಳೆಲ್ಲ ಕಣ್ಮರೆಯಾಗುವುದರಲ್ಲಿದ್ದವು. ಆ ಹೊತ್ತಿಗೆ, ನಿಜವಾದ ಮುಂಬಯಿಕರ್ ಎನ್ನಬಹುದಾಗಿದ್ದ, ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಇವರು, ಅಲ್ಲಿ ಕಾಣಿಸಿಕೊಂಡರು! ಕಲಾಭಾರತಿ ಎಂಬ ತಂಡವನ್ನು ಕಟ್ಟಿದರು. ಸಾಯಂಕಾಲ ಮತ್ತು ರಾತ್ರಿ ಹೊತ್ತಿನಲ್ಲಿ ಕರ್ಫ್ಯೂ ಹಾಗೂ ಅನಿಶ್ಚಿತ ವಾತಾವರಣಗಳು ಮುಂದುವರಿದಿದ್ದವಷ್ಟೆ? ಆತ ರವಿವಾರದ ಬೆಳಗಿನ ಸಮಯವನ್ನು ಮನರಂಜನೆಯ ಕಾರ್ಯಕ್ರಮಗಳಿಗಾಗಿ ಆರಿಸಿದರು. ಆ ಪದ್ಧತಿ ಇವತ್ತಿಗೂ ಅವ್ಯಾಹತವಾಗಿ, ಯಶಸ್ವಿಯಾಗಿ ಮುಂದುವರಿದಿದೆ."

ಇದರ ಜೊತೆಗೆ, ಈಗಾಗಲೇ ಸ್ಥಾಪಿತವಾಗಿದ್ದ ಮುಂಬಯಿಯ 'ಸಬರ್ಬನ್ ಮ್ಯೂಸಿಕ್ ಸರ್ಕಲ್'ದಂತಹ (ಸ್ಥಾಪನೆ 1936) ಸಂಸ್ಥೆಗೆ ಅವರು ಜೀವ ತುಂಬಿದರು. ದೀರ್ಘಾವಧಿಯ ಕಾಲ, ಸರ್ಕಲ್‌ದ ಕಾರ್ಯಕಲಾಪಗಳನ್ನು ನಿರ್ವಹಿಸಿದ ಶರದ್ ಕನವಳ್ಳಿ ಅವರು ನಿಧನಹೊಂದಿದರು. ಆ ಬಳಿಕ ಪ್ರಕಾಶ ಮಾಮ ಸಂಸ್ಥೆಗೆ ನೀಡಿದ ಹಾರ್ದಿಕ ಸಹಾಯವನ್ನು ಶ್ರೀಮತಿ ನಯಂಪಳ್ಳಿ ಅವರು ಕೃತಜ್ಞತಾಪೂರ್ವಕವಾಗಿ ನೆನೆದರು.

ಮುಂದುವರೆಯುತ್ತ, "ಕೇವಲ ಕಾನ್‌ಸೇನ್' (ಕಿವಿಯಿಂದ ಕೇಳುವುದಷ್ಟೇ!) ಆಗಿದ್ದ ನನ್ನನ್ನು ಪ್ರೋತ್ಸಾಹಿಸಿ, ಪ್ರಕಾಶ ಮಾಮಾ, ಸಂಸ್ಥೆಯ ಕಾರ್ಯದರ್ಶಿಯಾಗಲು ಬೆನ್ನುತಟ್ಟಿದರು. ನಿಷ್ಪಕ್ಷಪಾತದ ನಿಲುವು ತಳೆಯುವುದನ್ನು ಕ್ರಮವಾಗಿ ಕಲಿಸಿದರು. ಅವಶ್ಯಬಿದ್ದಾಗ ಚುಚ್ಚುಮಾತಿನ ಸಲಹೆಯನ್ನು ನೀಡಿದ್ದೂ ಇದೆ. ಕೇಳಿದಾಗೆಲ್ಲ ನೆರವು ನೀಡಿದರು. ಅನಾರೋಗ್ಯದಿಂದ ಮಲಗಿದ್ದಾಗಲೂ ಎದ್ದುಬಂದು ತಾಳ್ಮೆಯಿಂದ ಸಹಾಯವನ್ನು ಮಾಡಿದ್ದಾರೆ. ನಿಮ್ಮಿಂದ ಪಡೆದ ಸಹಾಯದ ಪ್ರಮಾಣವೋ ಹಿಮಾಲಯದಷ್ಟು! ಎಂದು ನಾನು ಅವರಿಗೆ ಹೇಳಿದ್ದುಂಟು" ಎಂದು ನಯಂಪಳ್ಳಿ ನೆನಪಿಸಿಕೊಂಡರು.

ಶತಾಬ್ಧಿ ಆಚರಿಸಿದ ಸಾರಸ್ವತ ಸಂಸ್ಥೆ 'ಕೆನರಾ ಸಾರಸ್ವತ ಅಸೋಸಿಯೇಶನ್'ದ ಹಿರಿಯ ಸದಸ್ಯರಾದ ಗುರುನಾಥ ಗೋಕರ್ಣ ಅವರು 1971ರಿಂದಲೂ ಈ ಸಂಸ್ಥೆ ಹೊರತರುತ್ತಿರುವ 'ಕೆನರಾಸಾರಸ್ವತ' ಮಾಸಪತ್ರಿಕೆಯೊಂದಿಗೆ ಪ್ರಕಾಶ ಬುರ್ಡೆ 1990ರಿಂದಲೂ ಹೊಂದಿದ್ದ ಗಾಢವಾದ ಸಂಬಂಧವನ್ನು ಸ್ಮರಿಸಿದರು. "ಇದು ಆತ ಮುಂಬಯಿಯಲ್ಲಿ ನೆಲೆಗೊಂಡ ಬಳಿಕ ಸಾಧ್ಯವಾಯಿತು.. ಅದಕ್ಕೂ ಮುನ್ನ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ Marketing Executive ಆಗಿ ಬೇರೆ ಬೇರೆ ನಗರಗಳಲ್ಲಿರುವ ಸಂದರ್ಭವಿತ್ತು. ನಿಧನದವರೆಗೂ ಆ ಸಂಬಂಧ ಬೆಳೆದು ಬಂದಿತು. ಈ ವರೆಗೆ ಹದಿನೈದು ಸಂಗೀತ ಸಮ್ಮೇಳನಗಳನ್ನು ನಮ್ಮ ಅಸೋಸಿಯೇಶನ್ ಸಲುವಾಗಿ ಸಂಘಟಿಸಿದ್ದಾರೆ. ರಸಿಕರೂ ಸಾಮಾನ್ಯರೂ ಕೂಡಿಯೇ ಆಸ್ವಾದಿಸಿದ ಯಶಸ್ವಿ ಕಾರ್ಯಕ್ರಮಗಳನ್ನು ಅವು ಹೊಂದಿದ್ದವು" ಎಂದರು.

'ಸ್ವರ್‌ಪ್ರಕಾಶ್'ದ ಮಧ್ಯಾಹ್ನದ ಕಾರ್ಯಕ್ರಮದಲ್ಲಿ ಪ್ರಕಾಶಮಾಮನಿಗೆ ಸಂಗೀತಶ್ರದ್ಧಾಂಜಲಿಯಿತ್ತು. ಸದ್ಯದ ಆಗ್ರಾ ಮನೆತನದ (ಘರಾಣಾ) ಸಾಮ್ರಾಟ್,

ಉಸ್ತಾದ್ ರಾಜಾಮಿಯಾ, ತನಗೆ ಪ್ರಕಾಶರಿತ್ತ ಎಣೆಯಿಲ್ಲದ ಪ್ರೋತ್ಸಾಹವನ್ನು ನೆನೆದರು. ಮೈಹರ್ ಮನೆತನದ ಮೇಸ್ಟ್ರೋ ಪಂಡಿತ ನಿತ್ಯಾನಂದ ಹಳದಿಪುರ ಬಾಂಸುರಿಯಿಂದ ರಂಜಿಸಿದರು. ಬಳಿಕದ ಗಾಯನ ಪಂಡಿತಾ ಅಶ್ವಿನಿ ಭಿಡೆ ದೇಶಪಾಂಡೆ ಅವರದಾಗಿತ್ತು. ಎಲ್ಲರೂ ಬುರ್ಡೆಕಾಕಾರ ಸಂಗೀತ ಕುರಿತಾದ ನಿರ್ವ್ಯಾಜ ಪ್ರೇಮವನ್ನು ಸ್ಮರಿಸಿಕೊಂಡರು.

ಕಣ್ಣುಮುಚ್ಚುವ ಕೆಲವೇ ದಿನ ಮೊದಲು ಪ್ರಕಾಶ ಮಾಮಾ ನನಗೆ ಫೋನಸಿದ್ದರು. ಆರ್. ಗೋಪಾಲಕೃಷ್ಣ ಅವರ Surreal Novel On Life and Death.. ನನ್ನ ಬಳಿ ಇದೆಯಾ? ಎಂದು ವಿಚಾರಿಸಿದ್ದರು. ಅದು ನನ್ನ ಬಳಿ ಇತ್ತು. ಎಂದಿನಂತೆ ಒಂದು ಗಂಟೆಗೂ ಮೀರಿ ನಮ್ಮ ಸಂಭಾಷಣೆ ನಡೆಯಿತು. ಅದೆಷ್ಟೋ ವಿಷಯಗಳು! ಹಂಸಕಿಂಕಿಣಿ ರಾಗದ ಬಗ್ಗೆ ಬಸವರಾಜ ರಾಜಗುರು ಅವರ ಮಮತೆಯನ್ನು ನೆನಪಿಸಿಕೊಂಡರು. ಪ್ರಕಾಶ್ ಮಾಮಾರ ಜೀವನೋಲ್ಲಾಸ, ಕುತೂಹಲ ಸ್ವಭಾವ, ನಿರ್ವಂಚನೆಯ ನಲುವು, ಅವರ ಮುಕ್ತ ನಗು ಮತ್ತು ಧ್ವನಿಗಳಲ್ಲಿ ಸ್ಫುಟವಾಗಿದ್ದವು. ಆಗ ಆತ ಕಾಯಿಲೆಯಿಂದ ಎಷ್ಟೊಂದು ನರಳುತ್ತಿದ್ದರು, ಎಂಬುದರ ಕಿಂಚಿತ್ ಕಲ್ಪನೆಯಿದ್ದಲ್ಲಿ, ಅವರು ಕೇಳಿದ ಪುಸ್ತಕದ ಕಲರ್ ಝೆರಾಕ್ಸ್ ಪ್ರತಿಯೊಂದನ್ನು ಮಷೀನಿನಿಂದಲೇ ಎತ್ತಿಕೊಂಡು ಅವರಿಗೆ ನೀಡಲು ದೌಡಾಯಿಸುತ್ತಿದ್ದೆ. ಅವರು ಕೊಂಚ ಗುಣಮುಖವಾಗಲಿ ಎಂದು ಕಾದೆ. ಆದರೆ ದುರ್ದೈವ! ಮರುದಿವನವೇ ಆತ 'ಇಲ್ಲ'ವಾದರು. ನಿಜವಾದ ಕರ್ಮಯೋಗಿಯಂತೆ, ನಾನು ಕಾಯಂ ಪರಿತಪಿಸುವಂತೆ ಮಾಡಿಬಿಟ್ಟರು. ನನಗಿರುವ ಅಲ್ಪ ಸಮಾಧಾನವೆಂದರೆ, ಅವರು ಕೇಳಿದ ನನ್ನ ಗುರುವಿನ ಗ್ರಂಥ ಬ್ಯಾಗ್‌ದಲ್ಲಿದೆ.... ನಿಮ್ಮ ಮನೆಯ ದಾರಿಯಲ್ಲಿದೆ.. ಎಂದು ಫೋನಸಿದ್ದೆ. ಅದೇ ದಿನ ಬೆಳಿಗ್ಗೆ. ಚಿಕ್ಕ ಮಗುವಿನಂತೆ ಕಿಲಕಿಲನೆ ನಕ್ಕು 'ತುಂಬ ಖುಷಿಯಾಯ್ತು, ಅದಕ್ಕಾಗಿ ಕಾಯುತ್ತಿದ್ದೇನೆ..!' ಎಂದು ಅವರು ಅಂದದ್ದು-ಇದು ಎಂದೆಂದಿಗೂ ಮರೆಯದ ಉದ್ಗಾರವಾಯ್ತು.!

* ಮರಾಠಿ, ಕೊಂಕಣಿ ನಾಟ್ಯ ಪಟು ಮತ್ತು ನಿರೂಪಕ

** ಪ್ರಾಚೀನ ಗ್ರೀಕರಲ್ಲಿ ಮದುಮಗಳನ್ನು ಮದುವೆ ಮಂಟಪಕ್ಕೆ ಕರೆದೊಯ್ಯುವಾಗ ಹಾಡುವ ಸಾಂಪ್ರದಾಯಿಕ ಗೀತೆಗಳು.

*****

1.9

ಕಣ್ಮರೆಯಾದರೂ ಹೃದಯಾಂತರಾಳದಲ್ಲಿ ನೆಲೆನಿಂತವರು (1938–2016)*

ಸುಮೇಧಾ ರಾಯ್ಕರ್ ಮ್ಹಾತ್ರೆ

'ಮಾನವತಾವಾದಿ, ವಿದ್ವಾಂಸ, ಏಕವ್ಯಕ್ತಿ ಡೈನಮೋ ಆಗಿ ಮುಂಬೈ ಮಹಾನಗರದ ಹಲವಾರು ಮೂಲೆಗಳಲ್ಲಿ ಪ್ರಕಾಶ ಗಣೇಶ ಬುರ್ಡೆ ಬೆಳಕು ಚೆಲ್ಲಿದ್ದಾರೆ.'

ಮುಂಬೈ ಕರ್ನಾಟಕ ಸಂಘದ ಸಮರಸ್ ಹಾಲ್‌ದಲ್ಲಿ ದಣಿವರಿಯದ 78 ವರ್ಷದ 'ಪ್ರಕಾಶ' ರೂಪದ ನಿರ್ದಿಷ್ಟವಾಗಿ ನಿರ್ಮಿತವಾಗಿದ್ದ ಚೈತನ್ಯದ ಚಿಲುಮೆಯೊಂದನ್ನು ಇನ್ನು ನಾವು ಕಳೆದುಕೊಂಡು ಬಿಟ್ಟಿದ್ದೇವೆ! ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ, ಖ್ಯಾತ ಸಂಗೀತ ವಿಮರ್ಶಕರಾಗಿದ್ದ ಪ್ರಕಾಶ ಇನ್ನಿಲ್ಲ. ಬಹುವಿಧ ಹಿನ್ನೆಲೆಯ ಸಂಗೀತ ಕಚೇರಿಗಳ ಸಂಘಟಕರಾಗಿ ದುಡಿಯುತ್ತಿದ್ದ ಕಾರ್ಯಕರ್ತರು ಇನ್ನಿಲ್ಲ. ಬೇಕು ಬೇಕಾದ ಸಾಂಸ್ಕೃತಿಕ ಮಾಹಿತಿಗೆಲ್ಲ ಕೂಡಲೇ ಮಾರ್ದನಿಯನ್ನೀಯುತ್ತಿದ್ದ ಪ್ರಕಾಶ ಇನ್ನಿಲ್ಲ! ಬುರ್ಡೆ ಅವರ ನಿಧನದಿಂದಾಗಿ ಮುಂಬೈ ನಗರಿಯು ಹಳೇ ಜಗತ್ತಿನ ಸಭ್ಯ ವಿದ್ವಾಂಸನೊಬ್ಬನನ್ನು ಕಳೆದುಕೊಂಡಿದೆ. ಅವರು ಪ್ರದರ್ಶನಕಲೆಗಳಲ್ಲಿ (Performing Arts) ಅತ್ಯಂತ ಆಸಕ್ತಿಯುಳ್ಳವರಾಗಿದ್ದರು. ಅವನ್ನೆಲ್ಲ ಪೋಷಿಸಿ ಬೆಳೆಸಲು ಅವಶ್ಯವಿದ್ದ ನಿರಂತರ ಪರಿಶ್ರಮ ಮತ್ತು ಸಮರ್ಪಣೆಯ ಭಾವ ಬುರ್ಡೆಯವರಲ್ಲಿದ್ದವು.

ವೃತ್ತಿಯಿಂದ ಔಷಧ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಬುರ್ಡೆ ಅವರು ಸಂಘಜೀವಿಯಾಗಿದ್ದರು. (gregarious). ಹಲವಾರು ಕಲೆಗಳಲ್ಲಿ ಎಣೆಯಿಲ್ಲದ ಆಸಕ್ತಿಯನ್ನು ಹೊಂದಿದ್ದರು. ತುಳುನಾಟಕದಿಂದ ಹಿಡಿದು ಶ್ರೀ ಕೃಷ್ಣ ಕಮೀಷನ್‌ದ ಪರಿಣಾಮ, ಬಿ.ಆರ್. ಭೋಪ್ರಾರವರೆಗೆ ವೈವಿಧ್ಯಮಯ ವಿಷಯಗಳನ್ನು ರಂಜಿತವಾಗಿ ಚರ್ಚಿಸುತ್ತಿದ್ದರು. ಸಂಗೀತ ವಿಮರ್ಶಕರಾಗಿದ್ದಂತೆ, ಅನೇಕ ಸಂಗೀತಾಲಯಗಳ ಪರಿಚಯವನ್ನು ಕೂಡ ಅವರು ಹೊಂದಿದ್ದರು. ಮಾಟುಂಗಾ ಕರ್ನಾಟಕ ಸಂಘದ ಕಲಾಭಾರತಿಯ ರವಿವಾರದ ಬೆಳಗಿನ ಸಂಗೀತ ಕಚೇರಿಗಳ ಸತತ ಸಂಘಟಕರಾಗಿ ಬಹುಪರಿಚಿತರು. ಜೊತೆಗೆ ಮೊಬೈಲ್ ಮುಂಬೈಕರ್ ಆಗಿದ್ದರು! ಅಂದರೆ, ಮುಂಬೈಯಲ್ಲಿ

ಹಲವೆಡೆಗಳಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉಪಸ್ಥಿತರಿರುತ್ತಿದ್ದರು. ಒಮ್ಮೆ ಡೇವಿಡ್ ಸಸೂನ್ ವಾಚನಾಲಯದ ಬೆಳಗಿನ ಸಂಗೀತ ಕಚೇರಿಯಲ್ಲಿ ಕಾಣಿಸಿಕೊಂಡರೆ, ಇನ್ನೊಮ್ಮೆ, ಆಕಾಶವಾಣಿಯಿಂದ ಆಯೋಜಿತ ರೇಡಿಯೋ ಟ್ಯಾಬ್ಲೋವನ್ನು (Radio Tableau) ಪ್ರಸ್ತುತಪಡಿಸಲು ಹಾಜರಾಗುತ್ತಿದ್ದರು. ಮತ್ತೊಮ್ಮೆ 'ಸುರ್‌ಸಿಂಗಾರ ಸಂಸದ್ ಸಂಸ್ಥೆ'ಯ 'ಕಲ್ ಕೆ ಕಲಾಕಾರ'ರನ್ನು (ಮುಂಬರಲಿರುವ ಕಲಾಕಾರರು) ಪರಿಚಯಿಸಲು ಮುಂದಾಗಿರುತ್ತಿದ್ದರು. ಮಗದೊಮ್ಮೆ ಡಾ. ಶಿವರಾಮ ಕಾರಂತರ ಕೃತಿಗಳ ಹಿನ್ನೋಟದ (Retrospective) ಸಾಹಿತ್ಯ ಸ್ಮರೋಣೋತ್ಸವದಲ್ಲಿ ಶುದ್ಧ ಕನ್ನಡದಲ್ಲಿ ಅಧ್ಯಕ್ಷೀಯ ಭಾಷಣವನ್ನು ಮಾಡುತ್ತಿದ್ದರು.

ಅವರು ರವೀಂದ್ರ ನಾಟ್ಯಮಂದಿರದಲ್ಲಿ ಮುಂದಿನ ಸಾಲಿನಲ್ಲಿ ಕುಳಿತು ಪಂಡಿತ್ ವೆಂಕಟೇಶ ಕುಮಾರರ ಗಾಯನವನ್ನು ಆಸ್ವಾದಿಸುತ್ತಿದ್ದರು; ದಾದರ-ಮಾಟುಂಗಾ ಸಂಸ್ಕೃತಿ ಕೇಂದ್ರದ ಚಟುವಟಿಕೆಗಳಲ್ಲಿ, ಮುಂಬೈ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಅಪರೂಪದ ಕಾರ್ಯಕ್ರಮಗಳ ಆಯ್ಕೆಯ ಸಮಿತಿಯ ಸದಸ್ಯರಾಗಿ ದುಡಿಯುತ್ತಿದ್ದರು.

ಅವರ ಆರೋಗ್ಯ ತೀರ ಹದಗೆಡುವತನಕವೂ ಅಂದರೆ ಕೊನೆಯ ಎರಡು ವರ್ಷಗಳವರೆಗೆ, ಡಾಕ್ಟರರು ಹಾಗೂ ಕುಟುಂಬದ ಸದಸ್ಯರು ನಿರ್ಬಂಧ ಹಾಕಿದ್ದನ್ನು ಬಿಟ್ಟರೆ, ಅವರನ್ನು ಭೇಟಿಮಾಡಿ ಸಂಗೀತಸಂಬಂಧಿತ ಯಾವುದೇ ಅಕ್ಯಾಡೆಮಿಕ್ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿತ್ತು, ಸೂಕ್ತ ಸಲಹೆಗಳನ್ನು ಪಡೆಯಬಹುದಾಗಿತ್ತು. ಅವರ ಹೆಚ್ಚಿನ ಔದಾರ್ಯ ಮತ್ತು ಉತ್ಸುಕತೆಗಳಿಂದ ಸಂಗೀತ ಪ್ರಪಂಚದ ವಿದ್ಯಾರ್ಥಿಗಳು, ಉದಯೋನ್ಮುಖ ಕಲಾಕಾರರು, ಪತ್ರಿಕಾಕರ್ತರು ಹಾಗೂ ಸಂಸ್ಕೃತಿಯ ಆಸಕ್ತರೆಲ್ಲ ಫೋನಿಸಿಯೋ, ಭೇಟಿಮಾಡಿಯೋ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದರು.

ಸಂಗೀತ ವಿಮರ್ಶಕರಾಗಿ, ಸಮರ್ಪಕವಾದ, ನಿರ್ಭಿಡೆಯ, ಆದರೆ ಎಲ್ಲರೂ ಒಪ್ಪಿಕೊಳ್ಳಬಹುದಾದ ರೀತಿಯಲ್ಲಿಯೇ ಬರೆಯುತ್ತಿದ್ದ ಅವರು ಉದಯೋನ್ಮುಖ ಕಲಾಕಾರರರ ಎದ್ದುಕಾಣುವ ಅಂಶಗಳನ್ನು ಗುರುತಿಸಲು ಮರೆಯುತ್ತಿರಲಿಲ್ಲ.

ಶಾಸ್ತ್ರೀಯ ಸಂಗೀತದಲ್ಲಿ ಬುರ್ಡೆ ಅವರ ಪ್ರೀತಿ, ಅವರ ತಾಯಿಯ ಬಳುವಳಿಯಾಗಿತ್ತು. ಅವರ ತಾಯಿಯವರು ಕೆಲಕಾಲ ಗದಗಿನಲ್ಲಿ ಪಂಚಾಕ್ಷರ ಗವಯಿಗಳ ಬಳಿ ಕಲಿತಿದ್ದರು. ಬುರ್ಡೆಯವರು ಪುಣೆಯಲ್ಲಿ ಗುಲಾಮ್ ರಸೂಲರ ಬಳಿ ತಬಲಾ ಕಲಿತರು. ಇಂಗ್ಲಿಷ್, ಕನ್ನಡ, ಮರಾಠಿ, ಕೊಂಕಣಿ, ಹಿಂದಿ, ಸಂಸ್ಕೃತಗಳನ್ನು ರೂಢಿಸಿಕೊಂಡಿದ್ದ ಅವರು ಕೊಂಚಮಟ್ಟಿಗೆ ಗುಜರಾಥಿಯನ್ನು ಕೂಡ ಬಲ್ಲವರಾಗಿದ್ದು ಠಿಂಟಥಿಂಟಣ ಎಂದೆನಸಿಕೊಂಡಿದ್ದರು. ಸಂಗೀತದ ವಿಚಾರಗಳು ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ತಿಳಿಯಾಗಿ ಇಂಗ್ಲಿಷ್, ಕನ್ನಡ, ಮರಾಠಿ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಅವರು ಹಿಂದಿಯಿಂದ ಇಂಗ್ಲಿಷಿಗೆ ತರ್ಜುಮೆ ಮಾಡಿದ ಹಿಂದೂಸ್ತಾನ ಸಂಗೀತದ ಮೂಲತತ್ತ್ವಗಳು (Basic Principles of Hindustani Music) ಈ ಮಾತನ್ನು ಪುಷ್ಟೀಕರಿಸುತ್ತದೆ.

ಅತ್ಯಲ್ಪ ಆರ್ಥಿಕ ಸಹಾಯದಿಂದ ಒಳ್ಳೆಯ ಕಲಾಕಾರರನ್ನು, ಪೋಷಕರನ್ನು, ಕಲಾಸಕ್ತರನ್ನು, ತಮ್ಮ ಹಸನ್ಮುಖಿ ವ್ಯಕ್ತಿತ್ವದಿಂದ, ಆತ್ಮೀಯವಾದ ಮುಗುಳ್ನಗೆ ಹಾಗೂ ಮೆಚ್ಚಿಗೆಯ ಮಾತುಗಾರಿಕೆಯಿಂದಲೇ ಬರಮಾಡಿಕೊಂಡು, ಮಿರಿಮಿಂಚುವ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದ ವಾತಾವರಣವನ್ನು ನಿರ್ಮಿಸುತ್ತಿದ್ದ ಅವರ ಸಾಮರ್ಥ್ಯ, ಮತ್ತೆ ಮತ್ತೆ ನೆನಪಿಸಿಕೊಳ್ಳುವ ವಿಚಾರವಾಗಿದೆ.

ಮುಂಬೈಯ ವಿಶ್ವಬಂಧುತ್ವ (cosmopolitan) ಭೂಮಿಕೆಯಲ್ಲಿ ಬುರ್ಡೆ ಅವರು 30 ವರ್ಷಗಳಿಗೂ ಮಿಕ್ಕಿ ಕನ್ನಡ–ಮರಾಠೀ ರಂಗಭೂಮಿಳ ಬೆಸುಗೆಯನ್ನು ಕಲಾಭಾರತಿಯ ಸಂಗೀತೋತ್ಸವಗಳಲ್ಲಿ ಸಂಘಟಿಸುತ್ತ ಬಂದದ್ದು ಅವಿಸ್ಮರಣೀಯವಾಗಿದೆ. ಅವರ ಬಹುಮುಖಿ ಆಸಕ್ತಿಯ ಪ್ರಯೋಗಗಳಲ್ಲಿ ಕರ್ನಾಟಕ–ಹಿಂದುಸ್ತಾನಿ ಸಂಗೀತದ ಕೂಡುಕಾರ್ಯಕ್ರಮಗಳು, ರಂಗ–ಸಂಗೀತ, ಏಕಾಂಕ ನಾಟಕಗಳು, ಯಕ್ಷಗಾನ ಮತ್ತು ಇತರ ಭಾಷೆಗಳ ನಾಟ್ಯಸಂಗೀತದ ಠಿಚಿಭಿಇಚಿಂಜ ಮಾದರಿಗಳೆಲ್ಲ ಅಡಕವಾಗಿವೆ.

ಬುರ್ಡೆ ಅವರು ಲ್ಯಾಪ್‌ಟಾಪ್ ಲೇಖಕರಾಗಿರಲಿಲ್ಲ. ಮಾನವನ ಜನ್ಮಜಾತ ಕುಶಲತೆಯಲ್ಲಿ ಹೆಚ್ಚಿನ ವಿಶ್ವಾಸವುಳ್ಳವರಾಗಿದ್ದ ಅವರು ಕರ್ನಾಟಕ ಸಂಘವು ಕನ್ನಡ–ಮರಾಠೀ ಭಾಷಾಪಾಠಗಳನ್ನು ವ್ಯವಸ್ಥಿತವಾಗಿ ನಡೆಸುವಂತೆ ನೋಡಿಕೊಂಡರು. ಭಾಷೆಯ ಕಲಿಕೆಯಿಂದ ಸಂಸ್ಕೃತಿಯ ವ್ಯಾಪ್ತಿ ಸರಳವಾಗಿ ಸಾಗುತ್ತದೆ ಎಂಬುದನ್ನು ತೋರಿಸಿಕೊಟ್ಟರು. ಒಮ್ಮೆ ತಮ್ಮ ಪಾಠಗಳಲ್ಲಿ ಗಡಿ ವಿವಾದವಾಗಲೀ, ನೀರಿನ ತಂಟೆ–ತಕರಾರುಗಳಾಗಲೀ ನುಸುಳುವುದಿಲ್ಲವೆಂದು ಅವರು ವಿನೋದಪೂರ್ಣವಾಗಿ ಹೇಳಿದ್ದರು.

ಸುಮೇಧಾ ರಾಯ್ಕರ್ ಮ್ಹಾತ್ರೆ ಅವರ ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ನ 'ದ ಮುಂಬೈ ಮಿರರ್‌ದಲ್ಲಿ 5.1.2016ರ ಸಂಚಿಕೆಯಲ್ಲಿ ಪ್ರಕಟಿತ ಇಂಗ್ಲಿಷ್ ಲೇಖದ ಸರಳಾನುವಾದ

*****

1.10

ಕನ್ನಡ ಮರಾಠಿ ಸಾಂಸ್ಕೃತಿಕ ಪ್ರತಿನಿಧಿ

ಶ್ರೀನಿವಾಸ ಜೋಕಟ್ಟೆ

ಟೈಮ್ಸ್ ಆಫ್ ಇಂಡಿಯಾ, ಇಕಾನಾಮಿಕ್ ಟೈಮ್ಸ್, ಆಫ್ಟರ್‌ನೂನ್ ಇತ್ಯಾದಿ ಇಂಗ್ಲಿಷ್ ಪತ್ರಿಕೆಗಳ ಸಹಿತ ಕನ್ನಡದಲ್ಲಿ ಅದರಲ್ಲೂ, ಮುಂಬೈಯ ಕನ್ನಡ ಪತ್ರಿಕೆಗಳಲ್ಲಿ ಬರೆಯುತ್ತಿದ್ದ, ಹಿಂದುಸ್ತಾನಿ ಸಂಗೀತ ಕ್ಷೇತ್ರದ ಪ್ರಸಿದ್ಧ ವಿಮರ್ಶಕ, ಕನ್ನಡಿಗ ಪ್ರಕಾಶ ಜಿ ಬುರ್ಡೆ 2016ರ ಹೊಸ ವರ್ಷದ ಮೊದಲ ವಾರದಲ್ಲಿಯೇ ನಮ್ಮನ್ನು ಅಗಲಿದರು. ಇವರು ಮುಂಬೈನ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಇವರು ಸಂಘಕ್ಕೆ ಬರುವದು ಅಪರೂಪವಾಗಿತ್ತು. ಆರೋಗ್ಯದ ಸಮಸ್ಯೆಯಿಂದಾಗಿ ಕಳೆದ 2015ರಲ್ಲಿ ಎಂಬತ್ತೊಂದನೇ (81) ವಾರ್ಷಿಕ ಮಹಾಸಭೆಯ ಸಮಯದಲ್ಲಿ ಅನಿರೀಕ್ಷಿತವಾಗಿ ಆರೋಗ್ಯ ಕೈ ಕೊಟ್ಟಿದ್ದರಿಂದ, ಸಂಘದ ಉಪಾಧ್ಯಕ್ಷನಾದ ನನಗೆ ಮೆಸೇಜ ಮಾಡಿ, 'ಇಂದಿನ ಮಹಾಸಭೆಯನ್ನು ನೀವೆ ಸುಧಾರಿಸಿ ಬಿಡಿ' ಎಂದಿದ್ದರಿಂದ, ಅಂದಿನ ಮಹಾಸಭೆಯ ಅಧ್ಯಕ್ಷತೆ ವಹಿಸುವ ಜವಾಬ್ದಾರಿ ನನ್ನದಾಗಿತ್ತು. ಕರ್ನಾಟಕ ಸಂಘದ ಮುಖವಾಣಿ , 'ಸ್ನೇಹ ಸಂಬಂಧ'ದಲ್ಲಿ ಅವರು ಬರೆಯುತ್ತಿದ್ದ , 'ನವಿಲುಗರಿ' ಅಂಕಣ ಲೇಖನದ ಮೂಲಕ, ಭಾರತದ ಪ್ರಖ್ಯಾತ ಹಿಂದುಸ್ತಾನಿ ಗಾಯಕರನ್ನೆಲ್ಲ ಪರಿಚಯಿಸಿದ್ದರು. ಹೆಚ್ಚಿನವರು ಬುರ್ಡೆಯವರ ನಿಕಟ ಸಂಬಂಧವಿರಿಸಿಕೊಂಡಿದ್ದರು. ಇವರ ಬಹುಮುಖ ಪ್ರತಿಭೆಗೆ ಸಾಕ್ಷಿ ಎಂದರೆ ನಿಧನದ ಮರುದಿನ, 'ಮುಂಬೈ ಮಿರರ್' ಇಂಗ್ಲಿಷ್ ದೈನಿಕದಲ್ಲಿ ಅರ್ಧ ಪುಟ ಬುರ್ಡೆಯವರ ಕುರಿತಂತೆ ಬರಹ ಬಂದಿರುವುದನ್ನು ಗಮನಿಸಬೇಕು.

ಟೈಮ್ಸ್ ಗ್ರೂಪ್‌ಗೆ ಸುಮಾರು ಒಂದು ದಶಕದ ಕಾಲ ಸಂಗೀತ, ರಂಗಭೂಮಿಯ ವಿಮರ್ಶೆಗಳನ್ನು ಬರೆಯುವ ಮೂಲಕ ದೇಶಾದ್ಯಂತ ಗಮನ ಸೆಳೆದಿದ್ದ ಪ್ರಕಾಶ ಬುರ್ಡೆಯವರಿಗೆ ಅನಂತರ, ಟೈಮ್ಸ್‌ನ ಸಂಪಾದಕರು ಬದಲಾದುದು, ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡುತ್ತಿದ್ದ ಆದ್ಯತೆಗಳು ನಿಂತುಹೋದದ್ದು, ಅರೆನಗ್ನ ಯುವತಿಯರ ಫೋಟೊ ಸುದ್ದಿಗಳು ಹೆಚ್ಚುತ್ತಿರುವದನ್ನು ಕಂಡು ಅದನ್ನು ಕುರಿತು 'ಸ್ನೇಹ ಸಂಬಂಧ'ದಲ್ಲಿ, 'ಬೋರಿ ಬಂದರಿನ ಮುದುಕಿ' ಎಂಬರ್ಥದಲ್ಲಿ ಒಂದು ಲೇಖನವನ್ನು ಬರೆದುಕೊಟ್ಟಿದ್ದರು.

ಮುಂಬೈನ ಕರ್ನಾಟಕ ಸಂಘವು ನೀಡುತ್ತಿದ್ದ ವರದರಾಜ ಆದ್ಯ ಪ್ರಶಸ್ತಿಯನ್ನು ತೊಂಬತ್ತರ ದಶಕದಲ್ಲಿ, ಪಂ. ಭೀಮಸೇನ ಜೋಶಿಯವರಿಗೆ ಘೋಷಿಸಲಾಗಿತ್ತು, ಆದರೆ ಪ್ರಶಸ್ತಿ ಪ್ರದಾನದ ಆ ವಾರದಲ್ಲಿ (ಯಾವಾಗಲೂ ಅದು ಫ಼ೆಬ್ರುವರಿ 25ಕ್ಕೆ ಫಿಕ್ಸ್ ಇರುತ್ತದೆ) ಪಂ.ಭೀಮಸೇನ ಜೋಶಿಯವರು ಅಪಘಾತಕ್ಕೀಡಾಗಿ ಪುಣೆಯ ಮನೆಯಲ್ಲೇ ವಿಶ್ರಾಂತಿ ಪಡೆಯಬೇಕಾಯಿತು. ಆವಾಗ ನಾವು ಕರ್ನಾಟಕ ಸಂಘದ ಪರವಾಗಿ ಮುಂಬೈಯಿಂದ ಪುಣೆಗೆ ತೆರಳಿ, ವರದರಾಜ ಆದ್ಯ ಪ್ರಶಸ್ತಿಯನ್ನು ಜೋಶಿಯವರ ಮನೆಯಲ್ಲೇ ಪ್ರದಾನಿಸಿದ್ದೆವು. ಇವೆಲ್ಲದರ ನೇತೃತ್ವವನ್ನು ಪ್ರಕಾಶ ಬುರ್ಡೆಯವರು ವಹಿಸಿದ್ದರು. ಬುರ್ಡೆಯವರ ಕಾರಣ ನನಗೂ ಭಾರತರತ್ನ ಪಂ. ಭೀಮಸೇನ ಜೋಶಿಯವರನ್ನು ಪುಣೆಯಲ್ಲಿ ಅವರ ಮನೆಯಲ್ಲೇ ಕಾಣುವ ಭಾಗ್ಯ ಲಭಿಸಿತ್ತು.

ಕರ್ನಾಟಕ ಸಂಘದ ಪತ್ರಿಕೆ, 'ಸ್ನೇಹ ಸಂಬಂಧ'ದ 25ರ ಬೆಳ್ಳಿ ಹಬ್ಬ ಸಂಭ್ರಮ 2010ರಲ್ಲಿ ಜರುಗಿತ್ತು. ಆವಾಗ ಪತ್ರಿಕೆಯ ಪರವಾಗಿ, 'ಒತ್ತಡಗಳ ನಡುವೆ ಪತ್ರಿಕೋದ್ಯಮ' ವಿಷಯದ ಮೇಲೆ ಸೆಮಿನಾರ್ ಇರಿಸಲಾಗಿತ್ತು. ಅಲ್ಲಿ ಪ್ರಕಾಶ ಬುರ್ಡೆಯವರು ನೀಡಿದ್ದ ಪ್ರತಿಕ್ರಿಯೆ ಹೀಗಿತ್ತು, "ಒಂದೆರಡು ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಸ್ತಂಭಲೇಖಕನೆಂದು ಕಳೆದ ಶತಮಾನದಲ್ಲಿ 1984ರಿಂದ 1995ರತನಕ ಉತ್ತರಾದಿ ಸಂಗೀತ ವಿಮರ್ಶೆ, ಕನ್ನಡ ನಾಟಕ, ಯಕ್ಷಗಾನದ ಬಗ್ಗೆ ಆಗಿಂದಾಗ ಲೇಖನ ಬರೆದಿರುವದರಿಂದ ನನ್ನ ಕೆಲವು ವಿಚಾರಗಳನ್ನು ಹೇಳುತ್ತಿದ್ದೇನೆ. ನಮ್ಮ 'ಸ್ನೇಹ ಸಂಬಂಧ' ಪತ್ರಿಕೆಯಲ್ಲಿ ಅನೇಕ ವರ್ಷಗಳಿಂದ ಕನ್ನಡದಲ್ಲಿಯ ನನ್ನ ಲೇಖನಗಳು ನನ್ನನ್ನು ನಿಮ್ಮೆದುರು ನಿಂತು ಮಾತನಾಡಲು ಪ್ರೇರೇಪಿಸಿದೆ." ಅಲ್ಲಿ ಅವರು ಜಾಹೀರಾತುದಾರರು ಹೇಗೆ ಪತ್ರಿಕೆಯೊಂದನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುತ್ತಾರೆ ಎಂಬ ಸಂಗತಿಯನ್ನು ಬಹಳ ಅರ್ಥಪೂರ್ಣವಾಗಿ ಬಿಚ್ಚಿಟ್ಟಿದ್ದರು. "20 ವರ್ಷ ಒಂದು ಬಹುರಾಷ್ಟ್ರೀಯ ಕಂಪನಿಯಲ್ಲಿ ಪ್ರತಿನಿಧಿ ಎಂದು ಕೆಲಸ ಪ್ರಾರಂಭಿಸಿ ರಾಷ್ಟ್ರೀಯ ಮಾರುಕಟ್ಟೆಯ ಮ್ಯಾನೆಜರ ಎಂದು ನಾನು ದುಡಿದುದರಿಂದ ಈ ಪತ್ರಿಕೋದ್ಯಮದಲ್ಲಿ ಜಾಹೀರಾತುದಾರರ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಒತ್ತಡಗಳ ಬಗ್ಗೆ ಮಾತನಾಡುವದಿದೆ" ಎಂದೇ ಅವರು ಆರಂಭಿಸಿದ್ದರು ತಮ್ಮ ಲೇಖನವನ್ನು. ಆವಾಗ ಇಡೀ ಜಾಹಿರಾತು ಉದ್ಯೋಗದಲ್ಲಿ, 'ಗಾಡ್' ಎಂದು ಖ್ಯಾತರಾದ ಅಲೇಕ್ ಪದಮಸಿ ಅವರ ಎರಡು ನಾಟಕಗಳ ವಿಮರ್ಶೆಯನ್ನು ಮುಂದಿಟ್ಟು, ಇಂಗ್ಲಿಷ್ ಪತ್ರಿಕೆಗಳಲ್ಲಿ ಬಂದ ಎರಡು ನಾಟಕಗಳ ನಿಕೃಷ್ಟ ದರ್ಜೆಯ ವಿಮರ್ಶೆಯಿಂದ ಅಲೇಕ ಪದಮಸಿ ನೊಂದಿದ್ದರೆಂದು ವಿಶ್ಲೇಷಿಸಿದ್ದರು.

ಬುರ್ಡೆಯವರ ನಿಧನದ ನಂತರ ನಮ್ಮ ಖ್ಯಾತ ಲೇಖಕರಾದ ರಹಮತ್ ತರಿಕೆರೆಯವರು ಫೋನ್ ಮಾಡಿ, ಬುರ್ಡೆಯವರ ಕುರಿತಂತೆ ಲೇಖನ ಬರೆಯುವದಾಗಿ ತಿಳಿಸಿದಾಗ, ಬೆಂಗಳೂರಿನಲ್ಲಿದ್ದ ನಾನು, 'ಕರ್ನಾಟಕ ಸಂಘಕ್ಕೆ ಕಾಲ್ ಮಾಡಿ, ಎಲ್ಲ ಮಾಹಿತಿ ದೊರೆಯಬಹುದು' ಎಂದಿದ್ದೆ. ಡಾ ರಹಮತ್ ತರಿಕೆರೆಯವರು ಪ್ರಜಾವಾಣಿಗೆ ಬರೆದ ಲೇಖನದ ಆರಂಭದಲ್ಲೇ, "ಮುಂಬೈನಲ್ಲಿ ಸಾಂಸ್ಕೃತಿಕ ಪ್ರತಿನಿಧಿಯಂತಿದ್ದ

ಪ್ರಕಾಶ ಜಿ. ಬುರ್ಡೆಯವರು ಕಣ್ಮುಚ್ಚಿದರು. ಮುಂಬೈ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಅವರು ಕರ್ನಾಟಕದ ಬಹಳ ಜನರಿಗೆ ಪರಿಚಿತರಲ್ಲ, ಆದರೆ ಅವರನ್ನು ಬಲ್ಲವರಿಗೆ ಅವರ ಸಾವಿನಿಂದ, ಕರ್ನಾಟಕ ಮಹಾರಾಷ್ಟ್ರಗಳ ಸಾಂಸ್ಕೃತಿಕ ಕೊಡುಕೊಳೆಯ ಕೋಶವೊಂದು ಕಳೆದುಹೋದಂತೆ ಭಾಸವಾಗುತ್ತದೆ." ಎಂದಿದ್ದರು.

ನಿಧನದ ಕೆಲವು ದಿನಗಳ ಮೊದಲಷ್ಟೇ ಅವರು ಫೋನ್ ಮಾಡಿ, "ಟೈಮ್ಸ್‌ಗೆ ಹಿಂದೆ ಬರೆದಿದ್ದ ಕೆಲವು ಇಂಗ್ಲಿಷ್ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದೇನೆ. ಸ್ನೇಹ ಸಂಬಂಧದಲ್ಲಿ ಹಾಕುವಿರಲ್ಲಾ?" ಎಂದಿದ್ದರು. ಕಳೆದ 2004ರಿಂದ ಈ ತನಕ ಸುಮಾರು ಒಂದು ದಶಕ ಕಾಲ, ಸ್ನೇಹ ಸಂಬಂಧದ ಸಂಪಾದಕನಾಗಿದ್ದ ನನಗೆ ಪ್ರಕಾಶ ಬುರ್ಡೆಯವರ ಅನೇಕ ಹಸ್ತಪ್ರತಿಗಳು ಸಿಕ್ಕಿವೆ. ಜನವರಿ ತಿಂಗಳಲ್ಲೂ (2016) ಅವರ ಲೇಖನವಿತ್ತು. ಆದರೆ ಅವರ ಅಕ್ಷರಗಳು ಉತ್ತರ ಕರ್ನಾಟಕದ ಶೈಲಿಯಲ್ಲಿರುತ್ತಿತ್ತು! (ಟೈಮ್ಸ್‌ನ್ನು ಅವರು ಟಾಯಿಮ್ಸ್ ಅನ್ನುತ್ತಿದ್ದರು, ಹೀಗೆ) ಮರಾಠಿ–ಇಂಗ್ಲಿಷ್–ಕನ್ನಡ ಈ ಮೂರು ಭಾಷೆಗಳಲ್ಲಿ ಅವರಿಗೆ ಉತ್ತಮ ಹಿಡಿತವಿತ್ತು.

ಬುರ್ಡೆಯವರ ಲೇಖನಗಳನ್ನು ಓದಿದವರಿಗೆ ಅವರ ವಿದ್ವತ್ತೆಯು ಅರ್ಥವಾಗುತ್ತದೆ. ಸಾಂಸ್ಕೃತಿಕ ಲೋಕದ ವಿಶಿಷ್ಟ ನೆನಪುಗಳನ್ನು ಅವರು ಬಹು ಸ್ವಾರಸ್ಯಕರವಾಗಿ ದಾಖಲಿಸುತ್ತಿದ್ದರು. ಅವರಿಗೆಂದೂ ಜಾತಿ–ಪ್ರಾಂತ ಮುಖ್ಯವಾಗಿರಲಿಲ್ಲ. ಕರ್ನಾಟಕ ಸಂಘದ 81ನೇ ವಾರ್ಷಿಕ ಮಹಾಸಭೆಗೆ ಗೈರು ಹಾಜರರಾಗಿದ್ದರೂ ವಾರ್ಷಿಕ ವರದಿಯಲ್ಲಿ ಬುರ್ಡೆಯವರ 'ಅಧ್ಯಕ್ಷರ ಮಾತು' ಪ್ರಕಟವಾಗಿವೆ. "ಆಲದ ಮರದಂತೆ ಕನ್ನಡ ಚಟುವಟಿಕೆಗಳು ಸಂಘದಲ್ಲಿ ವಿಸ್ತರಣೆಯಾಗುತ್ತಿದೆ. ಕಲೆಗಳ ಸಂವರ್ಧನೆಗಾಗಿ ಶ್ರಮಿಸುತ್ತಿರುವ ಸಂಘ ಮುಂಬೈ ಕನ್ನಡಿಗರ ಮನ ಗೆದ್ದಿದೆ. ಇದಕ್ಕೆಲ್ಲ ಸದಸ್ಯರ ಬೆಂಬಲ ಕಾರಣ" ಎಂದು ಹಿಂದಿನ ವರ್ಷ ಹೇಳಿದ್ದರು. ಮುಂಬೈ ಕರ್ನಾಟಕ ಸಂಘ 1993 ರಿಂದ ಹಮ್ಮಿಕೊಂಡು ಬಂದಿರುವ, 'ಕಲಾಭಾರತಿ' ದೇಶಾದ್ಯಂತ ಕೀರ್ತಿ ತರುವಲ್ಲಿ ಪ್ರಕಾಶ ಜಿ ಬುರ್ಡೆ ಅವರ ಪಾತ್ರ ಬಹು ಮಹತ್ವದ್ದು. ಇತ್ತೀಚೆಗೆ ಕರ್ನಾಟಕ ಸಂಘ ಮುಂಬೈ, ಅವರಿಗೆ ಶ್ರದ್ಧಾಂಜಲಿ ಸಭೆಯನ್ನು ಕರೆದಿತ್ತು. ಅಲ್ಲಿ ನಾಡಿನ ಖ್ಯಾತ ವಿಮರ್ಶಕರು ಸಂಗೀತ ದಿಗ್ಗಜರು ಬಂದು ಬುರ್ಡೆಯವರ ಬದುಕಿನ ಸಾಧನೆಗಳನ್ನು ಇನ್ನಷ್ಟು ಬಿಚ್ಚಿಟ್ಟಿದ್ದರು.

*****

1.11

ಪ್ರಕಾಶ ಬುರ್ಡೆ – ಒಂದು ನುಡಿನಮನ

ಆನಂದ ಪಿಳಗಾಂವಕರ

ನನ್ನ ಮಿತ್ರ ಪ್ರಕಾಶ ಬುರ್ಡೆ ಅವರೊಂದಿಗೆ ಪರಿಚಯವು ಯಾವಾಗ ಮತ್ತು ಹೇಗೆ ಆಯಿತು ಎಂದು ಹೇಳುವದು ಕಠಿಣವೇ. ಆದರೆ, ಪರಿಚಯವು ಗೆಳೆತನದಲ್ಲಿ ರೂಪಾಂತರವಾದುದು ತಿಳಿಯಲೇ ಇಲ್ಲ. ಕಳೆದ 30–35 ವರ್ಷಗಳಲ್ಲಿ ನಮ್ಮ ಸ್ನೇಹ ಬಂಧವು ಧೃಢವಾಗುತ್ತಲೇ ಬಂದುದಕ್ಕೆ ಸಂಗೀತವೇ ಕಾರಣವಾಗಿದೆ. ನಾನು ಗಾಯಕ ಮತ್ತು ನಟ ಮತ್ತು ಅವರು ರಸಿಕ ಸಮೀಕ್ಷಕರು. ಹೀಗಾಗಿ ವಿಚಾರ ವಿನಿಮಯ, ಪುಸ್ತಕಗಳ ಕೊಳುಕೊಡೆ, ಹಲವಾರು ಸಂಗೀತದ ಕಾರ್ಯಕ್ರಮಗಳಲ್ಲಿ ಇಬ್ಬರೂ ಉಪಸ್ಥಿತರಿರುವದು ಸಾಮಾನ್ಯವಾಗಿತ್ತು. ಮೊದಲಿಗೆ ಅವರು ಕರ್ನಾಟಕ ಸಂಘದ ಕಲಾವಿಭಾಗದ ಕಾರ್ಯದರ್ಶಿಗಳಾಗಿದ್ದರು ಮತ್ತು ಇತ್ತೀಚಿಗೆ ಅಧ್ಯಕ್ಷರೂ ಆಗಿದ್ದರು. ಅವರ ಕಾರ್ಯಕಿರ್ದಿಯಲ್ಲಿ ನಾನು ಸಾಕಷ್ಟು ಸಂಗೀತದ ಕಾರ್ಯಕ್ರಮಗಳನ್ನು ಕರ್ನಾಟಕ ಸಂಘದ ಮೂಲಕ ಕೊಡುವಂತಾಯಿತು. ಕಾರ್ಯಕ್ರಮ ಮುಗಿದೊಡನೆ ಪಕ್ಕದ ಗಂಗಾವಿಹಾರ ರೆಸ್ಟೋರಾಂಟನಲ್ಲಿ ಮಧಾಹ್ನದ ಊಟ ಖಚಿತವಿರುತ್ತಿತ್ತು. ಎಲ್ಲ ಬಗೆಯ ಕಲಾಕಾರರೊಂದಿಗೆ ಊಟ ಉಪಚಾರದಲ್ಲಿ ಭಾಗವಹಿಸಿ ಹರಟೆಯಲ್ಲಿ ಮಗ್ನರಾಗಿರುವದು ಅವರಿಗೆ ತುಂಬ ಇಷ್ಟವಾದ ವಿಚಾರವಾಗಿತ್ತು. ಒಮ್ಮೆ ಕಾರ್ಯಕ್ರಮ ಮುಗಿದೊಡನೆ ನಾವಿಬ್ಬರು ವಾಪಸ್ ಬಂದೆವು. ಆ ದಿನ ಮನೆಯಲ್ಲಿ ನಾನೊಬ್ಬನೇ ಇದ್ದೆ. ಇದು ಆವರಿಗೆ ತಿಳಿದೊಡನೆ ಮನೆಗೆ ಕರೆದೊಯ್ದು ಚಿಕನ್ ಊಟ ಹಾಕಿಸಿದ್ದು ನನಗೆ ಇನ್ನೂ ಚೆನ್ನಾಗಿ ನೆನಪಿದೆ.

ನಾನು ನಾಟ್ಯ ಸಂಗೀತವನ್ನು ಹಾಡುತ್ತಿದ್ದರೂ ನನಗೆ ಶಾಸ್ತ್ರೀಯ ಸಂಗೀತದ ತರಬೇತಿ ಸಿಕ್ಕಿದೆ, ಎಂಬುದು ಅವರಿಗೆ ಗೊತ್ತಿತ್ತು. ಪಂ. ಗೋವಿಂದರಾವ ಅಗ್ನಿ ಅವರ ಬಗ್ಗೆ ಬುರ್ಡೆಯವರಿಗೆ ಅತಿಶಯವಾದ ಆದರವಿತ್ತು. ಅವರ ನಿಧನದ ನಂತರ ಕರ್ನಾಟಕ ಸಂಘದಲ್ಲಿ ಪಂಡಿತಜೀಯವರ ಶ್ರದ್ಧಾಂಜಲಿಗೆ ದಿನಾಂಕವನ್ನು ಕೊಡಮಾಡಿದರು. ಇದಕ್ಕಾಗಿ ಪಂ. ಸಿ.ಆರ್. ವ್ಯಾಸರವರ ಚಿರಂಜೀವ ಸತೀಶ ವ್ಯಾಸರವರ ಪ್ರಾಯೋಜಕತ್ವವು ಕೂಡ ಸಿಕ್ಕಿತ್ತು. ಕಾರ್ಯಕ್ರಮ ಸೊಗಸಾಗಿ ಆಯಿತು. ಶಾಸ್ತ್ರೀಯ ಸಂಗೀತದ ಕ್ಷೇತ್ರದಲ್ಲಿ ನನ್ನ ಹೆಸರು ದಾಖಲಾಗಲು ಇಬ್ಬರು ವ್ಯಕ್ತಿಗಳು ಕಾರಣರಾಗಿದ್ದಾರೆ. ಒಬ್ಬರು ಚೇಂಬೂರಿನ ಖಡಕೆ ಸಾಹೇಬರು ಮತ್ತೊಬ್ಬರು ಪ್ರಕಾಶ್ ಬುರ್ಡೆಯವರು.

ಮೂಲ ಕರ್ನಾಟಕದವರಾಗಿ ಮಹಾರಾಷ್ಟ್ರದಲ್ಲಿ ನೆಲೆಗೊಂಡ ಪ್ರಕಾಶಜೀಯವರು ಕರ್ನಾಟಕ ಸಂಘ ಮತ್ತು ಮರಾಠಿ ರಸಿಕ ವೃಂದದ ನಡುವಿನ ಕೊಂಡಿಯಾಗಿದ್ದರು ಎಂದೆನಿಸುತ್ತದೆ. ಕನ್ನಡ ಮತ್ತು ಮರಾಠಿ ನಾಟ್ಯ ಸಂಗೀತದ ಕಾರ್ಯಕ್ರಮವೊಂದನ್ನು ರೂಪಿಸಬೇಕೆಂದು ಅವರ ಇಚ್ಛೆ ಇತ್ತು. 2–3 ವರ್ಷಗಳ ಮೊದಲು ಆ ಯೋಗವೂ ಕೂಡಿ ಬಂದಿತು. ಮೈಸೂರು ಅಸೋಸಿಯೇಶನ್ನಿನ ವತಿಯಿಂದ ಕರ್ನಾಟಕದಲ್ಲಿಯ ಹಿರಿಯ ರಂಗಕಲಾವಿದರ ಸನ್ಮಾನ ಕಾರ್ಯಕ್ರಮವು ಏರ್ಪಟ್ಟಿತ್ತು. ಆ ದಿನ ಮರಾಠಿ ರಂಗಭೂಮಿಗೆ ಕರ್ನಾಟಕದ ಕೊಡುಗೆಯ ಆಧಾರಿತ ಕಾರ್ಯಕ್ರಮವನ್ನು ನಿಗದಿಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕಾಗಿ ನಾನು ಸಾಕಷ್ಟು ಹಾಡುಗಳನ್ನು ಆರಿಸಿದ್ದೆ. ನನ್ನ ಈ ಕಾರ್ಯಕ್ರಮವು ವೈಶಿಷ್ಟ್ಯಪೂರ್ಣವಾಗಿದ್ದುದರಿಂದ ಅದನ್ನು ಕಾರ್ಯಕ್ರಮದ ಕೊನೆಯಲ್ಲಿ ಇಡಲಾಗಿತ್ತು. ಆದರೆ ಮೊದಲಿನ ಸತ್ಕಾರ ಮತ್ತು ಭಾಷಣಗಳು ಎಳೆಯುತ್ತ ಹೋದವು, ಹೀಗಾಗಿ ಕೇವಲ 45–50 ನಿಮಿಷದ ಸಮಯ ನನ್ನ ಪಾಲಿಗೆ ಉಳಿಯಿತು. ಇದರಿಂದ ಪ್ರಕಾಶ ಬುರ್ಡೆಯವರಿಗೆ ತುಂಬ ಬೇಸರವಾಯಿತು. ಸಂಪೂರ್ಣವಾಗಿ ಎರಡು ತಾಸಿನ ನನ್ನ ಕಾರ್ಯಕ್ರಮವನ್ನು ಅವರ ಇಚ್ಛೆಯಂತೆ ಆಯೋಜಿಸಲಾಗಿತ್ತು.

ಇತ್ತೀಚೆಗೆ ಬುರ್ಡೆಯವರು ಕರ್ನಾಟಕ ಸಂಘದಲ್ಲಿ ಬೆಳಗಿನ ಸಭಾಕಾರ್ಯಕ್ರಮವೊಂದನ್ನು ಸಂಯೋಜಿಸಿದ್ದರು. ನಾನು ಮತ್ತು ಬಕುಳ ಪಂಡಿತ ಹಾಡಿದೆವು. ನನಗನಿಸಿದಂತೆ ಬಹುಶಃ ಇದೇ ಅವರು ಕೇಳಿದ ಕೊನೆಯ ಕಾರ್ಯಕ್ರಮವಾಗಿರಲು ಸಾಕು. ಆ ಬಳಿಕ ಅವರ ಆರೋಗ್ಯ ಕೆಡುತ್ತ ಹೋಯಿತು. ಕಾರ್ಯಕ್ರಮಕ್ಕೆ ಹೋಗಲು ಅತ್ಯಂತ ಕಾತುರದಿಂದ ಕಾಯುತ್ತಿದ್ದರು, ಆದರೆ ಅವರ ದೇಹ ಸಹಕರಿಸುತ್ತಿರಲಿಲ್ಲ. ಹೋದ ವರ್ಷ ಡಿಸೆಂಬರ 31ರಂದು ಅವರಿಗೆ ನಾನು ಹೊಸ ವರ್ಷದ ಶುಭಾಶಯ ಕೋರಿದೆ, ಆಗ ಅವರು ಚೆನ್ನಾಗಿಯೇ ಮಾತನಾಡಿದರು. ಆ ಬಳಿಕ ನನಗೆ ಹೊರ ಊರಿಗೆ ಹೋಗುವ ಸಂದರ್ಭ ಬಂದಿತ್ತು, ಹಿಂದಿರುಗಿ ಬಂದಾಗ ಅವರ ನಿಧನದ ದುಃಖದ ಸಮಾಚಾರ ಸಿಕ್ಕಿತು. ಈಶ್ವರೇಚ್ಛೆ! ಅವರಿಗೆ ನನ್ನ ವಿನಮ್ರ ಶ್ರದ್ಧಾಂಜಲಿಗಳು.

*****

1.12

ನಿಮ್ಮಲ್ಲೇ ಇದ್ದು ಹೋಗ್ತೀನಿ

ಬಿ.ಎ. ಸನದಿ, ಕುಮಟಾ

ಒಲ್ಲದ ವರನ ಜೊತೆ ಮದುವೆಯಾಗಿ ಗಂಡನ ಮನೆಯ ಹೊಸತಿಲು ತುಳಿದಂತೆ ನಾನು ಅಹಮದಾಬಾದದಿಂದ ವರ್ಗವಾಗಿ ಮುಂಬೈ ಎಂಬ ಮಾಯಾನಗರಿಯನ್ನು ಪ್ರವೇಶಿಸಿದ್ದು 1972ರ ಅಕ್ಟೋಬರ್ ತಿಂಗಳಿನಲ್ಲಿ. ಮುಂಬೈ ವಿಷಯವಾಗಿ ಏನನ್ನೂ ಬರೆಯುವುದಾದರೂ, ನಾಟಕದ ನಾಂದಿಯ ಹಾಗೆ ನನ್ನ ಮುಂಬೈ ಮಹಾನಗರ ಪ್ರವೇಶದ, ಎದೆಯಲ್ಲಿ ಅದುಮಿಡಲಾಗದ ಈ ಮಾತು ಬಂದೇ ಬರುತ್ತದೆ. ಈಗಂತೂ ಇದೊಂದು ವ್ಯಕ್ತಿಗತ ದುರಂತ ನಾಟಕದ ನಾಂದಿಯೆಂದೇ ಭಾವಿಸಬಹುದು. ಆರಂಭದಲ್ಲಿ ಮುಂಬೈ ಮಹಾನಗರದ ಮಹಾಜನಜಾತ್ರೆಯೆಂದರೆ ನನಗೆ ಕಣ್ಣಿನ ಕೀಸರವೆನಿಸುತ್ತಿತ್ತು. ಅಲ್ಲಿಯ ಕನ್ನಡ ಪ್ರಪಂಚದ ಪರಿಚಯ ಬೆಳೆಯುತ್ತಾ ಹೋದಂತೆ ನನ್ನಲ್ಲಿ ಅದೇ ಜನಾರಣ್ಯದ ಬಗೆಗಿನ ಬೇಸರವೂ ಕರಗುತ್ತಾ ಹೋದದ್ದು ಇಲ್ಲಿಯ ದುರಂತ ನಾಟಕದ ಹಿನ್ನೆಲೆ.

ಅಂತಹ ಸಿಹಿ-ಕಹಿ ವಾತಾವರಣದಲ್ಲಿ ಕಳೆದ ಸುಮಾರು ಕಾಲು ಶತಮಾನದಿಂದಲೂ ನನ್ನ ಸ್ನೇಹವಲಯವನ್ನು ಸೇರಿ ಕರುಳಬಳ್ಳಿಯಂತೆ ಹೆಣೆದುಕೊಂಡಿದ್ದ ಆ ದುರಂತ ನಾಟಕದ ಪ್ರಮುಖ ಪಾತ್ರಧಾರಿಯ ಮಾತನ್ನೇ ಮೊದಲು ಆಲಿಸೋಣ: 'ಸನದಿಯವರು ನನಗೆ ಪರಿಚಯವಾದದ್ದು ಆಕಾಶವಾಣಿಯಲ್ಲಿದ್ದ ನನ್ನಕ್ಕ ಉಪನಿರ್ದೇಶಕರಾಗಿ ಮುಂಬಯಿಗೆ ವರ್ಗವಾಗಿ ಬಂದಾಗ-ಅದು 1987ರಲ್ಲಿ'.

'1959ರಲ್ಲಿಯೇ ಕರ್ನಾಟಕ ರಾಜ್ಯವನ್ನು ಬಿಟ್ಟು ಮುಂಬಯಿಗೆ ಬಂದು ಮುಂದೆ ನೌಕರಿಯ ನಿಮಿತ್ತವಾಗಿ ಭೋಪಾಲ್, ಜಬಲಪುರ್, ಪುಣೆ ಮತ್ತೆ ಮುಂಬಯಿಗೆ ಬಂದು ಇಲ್ಲಿ ನೆಲಸುವ ತನಕ ಕನ್ನಡದ ಓದು-ಬರಹವನ್ನು ಬಿಟ್ಟುಕೊಟ್ಟ ನನ್ನ ಪಾಲಿಗೆ ಅಲ್ಲಿಯ ತನಕ ಸನದಿಯವರು 'ಸಾನಾಡಿ'ಯಾಗಿಯೇ ಉಳಿದಿದ್ದರು. ನಾನು ಟೈಮ್ಸ್ ಪತ್ರಿಕೆಗಳಲ್ಲಿ ವಿಮರ್ಶೆ ಬರೆಯುವ ದಿನಗಳಲ್ಲಿ, ಆಗಾಗ ಕನ್ನಡ ನಾಟಕ ಅಥವಾ ಮತ್ತೇನೋ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಮರ್ಶಕನೆಂದು ಬರುತ್ತಿದ್ದ ಕಾಲ, ಅರ್ಥಾತ್ ಸ್ವಲ್ಪ ಕಾಲರ್ ಟೈಟ್ ಮಾಡಿಕೊಂಡು, ಕನ್ನಡದಲ್ಲಿ ಸಲೀಸಾಗಿ ಮಾತನಾಡುವ ಅಭ್ಯಾಸವನ್ನು ಕಳೆದುಕೊಂಡಿದ್ದ ನಾನು ಸ್ವಲ್ಪ ಶ್ರೇಷ್ಠತೆಯ ಮಿಶ್ರಭಾವದಿಂದ ಸಿಂಡರಿಸಿದ ಮೋರೆಯನ್ನು ಧರಿಸಿ ದೂರವಾಗಿ ಒಬ್ಬಂಟಿಗನಾಗಿಯೇ ಕುಳಿತು, ಕೇಳಿ ಹೋಗುತ್ತಿದ್ದ ಕಾಲ... ಸನದಿಯವರನ್ನು ದೂರದಿಂದ ವೀಕ್ಷಿಸುತ್ತಿದ್ದ

ಕಾಲ. ಮುಂದೆ ಓದುವ ಬರೆಯುವ ಹುಮ್ಮಸ್ಸನ್ನು ನನ್ನಲ್ಲಿ ತುಂಬಿಸಿದ್ದು ನಿಂಜೂರು ಹಾಗೂ ಸನದಿದ್ವಯರು ಎಂಬುದನ್ನು ಇಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ." ಹೀಗೆ, ನಮ್ಮ ಪರಸ್ಪರ ಸ್ವಲ್ಪ ವ್ಯಂಗ್ಯಮಿಶ್ರಿತ ಪರಿಚಯದ ಸ್ಮರಣೆಯ ಮಾತನ್ನು ಒಂದು ಲೇಖನದಲ್ಲಿ (ಸ್ನೇಹಸಂಬಂಧ, ವಿಶೇಷ ಸಂಚಿಕೆ, ಮಾರ್ಚ್, 2003) ನಮೂದಿಸಿದ್ದರು. ಈಗ ನಮ್ಮಿಂದ ಅಗಲಿಹೋಗಿರುವ ಸನ್ಮಿತ್ರ ಪ್ರಕಾಶ ಬುರ್ಡೆಯವರು.

ನಾನು ಮುಂಬೈಯಲ್ಲಿರುವವರೆಗೂ ಪ್ರಕಾಶ ಬುರ್ಡೆಯವರು ನನಗೆ ತೀರ ಹತ್ತಿರವಾಗಿ, ಸಾಹಿತ್ಯ-ಸಂಗೀತಗಳ ವಿಷಯದಲ್ಲಿ ಸಮಾನಧರ್ಮಿಯಾಗಿ ಉಳಿದರು. ನಮ್ಮಿಬ್ಬರ ನಡುವಿನ ಆ ಸಮಾನಧರ್ಮವೆಂಬುದು ವ್ಯಾಖ್ಯಾನಕ್ಕೆ ಸಿಲುಕದ ಒಂದು ಪರಿಕಲ್ಪನೆ. ಈ ಪರಿಕಲ್ಪನೆಯು ಮೇಲೆ ಉಲ್ಲೇಖಿಸಿದ ದುರಂತ ನಾಟಕದ ಮತ್ತೊಂದು ದೃಶ್ಯದಿಂದ ಒಂದಿಷ್ಟು ಸ್ಪಷ್ಟವಾಗಬಹುದೇನೋ! ನಮ್ಮ ಒಡನಾಟ ಇನ್ನೂ ಹೇಳಿಕೊಳ್ಳುವ ಹಂತಕ್ಕೆ ತಲುಪಿರದಿದ್ದ ಕಾಲದಲ್ಲಿ ನಡೆದದ್ದು ಆ ದೃಶ್ಯ-ಅದೇ ಲೇಖನದಲ್ಲಿ ನಮೂದಾದ ಅವರದೇ ಮಾತು: "ಕಲಾಭಾರತಿಯ ಅಡಿಗಲ್ಲು ಹಾಕುವ ಕಾಲ. ಅದು ಆಗಿನ ಸಂಘದ ಅಧ್ಯಕ್ಷರಾದ ಸದಾನಂದ ಶೆಟ್ಟರ ಕೊಡುಗೆ. ಅದಕ್ಕೆ ಮೂರ್ತಸ್ವರೂಪವನ್ನು ಕೊಟ್ಟದ್ದು ಸನದಿ, ಬಲ್ಲಾಳ ಮತ್ತು ವ್ಯಾಸರಾಯ ನಿಂಜೂರು ಅವರು. ಸನದಿಯವರು ಆಕಾಶವಾಣಿಯಲ್ಲಿ ಎರಡು ದಶಕಗಳಷ್ಟು ಕಾಲ ದುಡಿದದ್ದು ಸಾರ್ಥಕ ಎಂದು ನನಗೆನಿಸಿದ್ದು ಆಗಲೇ. ಸೂಜಿಗಲ್ಲಿನ ಸ್ವಭಾವದ ಸನದಿಯವರನ್ನು ತುಂಬಾ ಹತ್ತಿರದಿಂದ ನಾನು ವೀಕ್ಷಿಸಿದೆ. ಪ್ರತಿವಾರ ನಾವೆಲ್ಲ ಅಂದಿನ ಸಮಾಚಾರ ಕೇಂದ್ರದಲ್ಲಿ ಕುಳಿತು ಕಾರ್ಯಕ್ರಮ ನಿಶ್ಚಯಿಸುವ ಅನೇಕ ಮರೆಯಲಾರದ ಕ್ಷಣಗಳಿವೆ".

ಇದು ಎರಡನೆಯ ದೃಶ್ಯವಾದರೆ, ಇದರ ಮುಂದುವರಿಕೆಯಂತೆ ನಡೆದ ಮೂರನೆಯ ದೃಶ್ಯವನ್ನು ಅವರ ಮಾತುಗಳಲ್ಲಿಯೇ ಕೇಳಿ: "ಕರ್ನಾಟಕ ಸಂಘದ ವಜ್ರಮಹೋತ್ಸವದ ಸಮಯ. ಎರಡು ದಿನ ಮೊದಲು ಸನದಿಯವರಿಗೆ ಥೀಮ್‌ಸಾಂಗ್ ಕೊಡಿ ಅಂದಾಗ ಮಾರನೆಯ ದಿನವೇ ಅವರು

"ಒಂದೆ ಜನ, ಒಂದೆ ಮನ, ಒಂದೆ ಮನೆಯ ಅಂಗಳ
ಒಂದೆಂಬುವ ಭಾವದಲ್ಲಿ ಲೋಕಕೆಲ್ಲ ಮಂಗಳ" ಎಂದು ಪ್ರಾರಂಭಿಸಿ

"ನಾಕಬೇಡ, ನರಕ ಬೇಡ ಮನುಜ ಲೋಕ ಉಳಿಯಲಿ
ಸತ್ಯದಾಸೆ ಶಿವದ ಭಾಷೆ ಸುಂದರದೆಡೆ ಒಯ್ಯಲಿ,
ಐಕ್ಯಮಂತ್ರಪೀಠದಲ್ಲಿ ರಾರಾಜಿಸು ಭಾರತಿ,
ನಮ್ಮ ಕಲಾಭಾರತಿ, ವಿಶ್ವಕಲಾಭಾರತಿ"

ಎಂದು ಮುಕ್ತಾಯಗೊಳಿಸಿದಾಗ, ಇಪ್ಪತ್ತು ವರ್ಷಕಾಲ ಕನ್ನಡ ಬರೆಯುವ ಅಭ್ಯಾಸವನ್ನು ಬಿಟ್ಟುಕೊಟ್ಟ ನನ್ನ ಆಶ್ಚರ್ಯಕ್ಕೆ ಸೀಮೆಯೇ ಇರಲಿಲ್ಲ. ಕರ್ನಾಟಕ ಸಂಘದ ಹೆಮ್ಮೆಯ ಕಲಾವಿದ ಖ್ಯಾತ ಗಾಯಕ ಶಿವಾನಂದ ಪಾಟೀಲ ಅವರು ಧ್ವನಿಸಂಯೋಜನೆ ಮಾಡಿ, ಅವರದೇ ಹಾಡುಗಾರಿಕೆಯಲ್ಲಿ ಎಚ್‌ಎಂವಿಯ ಜಯಸ್ವಾಲರ ನೇತೃತ್ವದಲ್ಲಿ ಅಂದು ಸರಿರಾತ್ರಿಯ ಒಂದು ಗಂಟೆಗೆ ಧ್ವನಿಸುರುಳಿಯ ರೆಕಾರ್ಡಿಂಗ್ ಮುಗಿದಿತ್ತು!

*****

1.13

ಸೀಮಾತೀತ ಸಂಗೀತಯಾತ್ರಿಕ ದಾದಾ

ಸುಷಮಾ ಆರೂರ್

ನನ್ನ ದಾದಾ ಪ್ರಕಾಶ ಬುರ್ಡೆ 2016, ಹೊಸ ವರ್ಷದ 4ನೇ ತಾರೀಖಿಗೆ ತನ್ನ 78ನೆಯ ವಯಸ್ಸಿನಲ್ಲಿ ಸ್ವಲ್ಪಕಾಲದ ಅನಾರೋಗ್ಯದ ಕಾರಣ ನಮ್ಮನ್ನು ಅಗಲಿದನು. ಇಂಗ್ಲಿಷ್ ಮತ್ತು ಮರಾಠಿಯಲ್ಲಿ ಖ್ಯಾತ ಸಂಗೀತ ವಿಶ್ಲೇಷಕ ಮತ್ತು ವಿಮರ್ಶಕನೆಂದು ಹೆಸರು ಗಳಿಸಿದ್ದ. ಅವನ ಅಂತ್ಯಸಂಸ್ಕಾರಕ್ಕೆ ಮುಂಬಯಿಗೆ ಹೋದಾಗ ಅವನ ಬರಹಗಳ ಕಂತೆಗಳನ್ನು ದೊಡ್ಡ ಅಲ್ಮೈರಾದಿಂದ ಹೊರತೆಗೆದು ನೋಡಿದಾಗ ನಾನು ದಿಗ್ಭ್ರಾಂತಳಾದೆ. ಹಿಂದುಸ್ತಾನಿ ಸಂಗೀತದ ವಿಷಯದ ಮೇಲೆ ಮೂರು ಭಾಷೆಗಳಲ್ಲಿದ್ದ ವೈವಿಧ್ಯಮಯ ಲೇಖನಗಳು ಇದ್ದದ್ದು ಕನ್ನಡದಲ್ಲಿ! 'ಮುಂಬಯಿಕರ್' ಆಗಿದ್ದ ನನ್ನ ದಾದಾನ ಮನೆಯಲ್ಲಿ ಮತ್ತು ಮನೆಯ ಹೊರಗೆ, ಯಾರಿಗೂ ಕನ್ನಡದ ಗಂಧ-ಗಾಳಿಯೂ ಸೋಂಕೂ ಇಲ್ಲದಿದ್ದಾಗ, ಅವನು ಕನ್ನಡದ ಬರವಣಿಗೆ ಮತ್ತು ಪ್ರೇಮವನ್ನು ಕಾಯ್ದುಕೊಂಡು ಬಂದಿದ್ದುದನ್ನು ಕಂಡು ನನಗೆ ವಿಸ್ಮಯ ಆನಂದಗಳು ಒಮ್ಮೆಗೇ ಆದವು. ಆತನ ಪುಣ್ಯಸ್ಮೃತಿಗೆ ಅವನ ಬರಹಗಳನ್ನು ಬೆಳಕಿಗೆ ತರಬಹುದಲ್ಲ! ಎಂಬ ಯೋಚನೆ ನಾನಿದ್ದ ಪರಿಸ್ಥಿತಿಯಲ್ಲೂ ನನ್ನನ್ನು ತೀವ್ರವಾಗಿ ಕಾಡಿತು.

ದಾದಾ ಬರೆದ ಬಹಳಷ್ಟು ಲೇಖನಗಳು ಕರ್ನಾಟಕ ಸಂಘದ ಮುಖಪತ್ರಿಕೆಯಾದ 'ಸ್ನೇಹಸಂಬಂಧ'ದಲ್ಲಿ, ಡಾ. ನಿಂಜೂರರ ಕೃಪೆಯಿಂದ 'ಗೋಕುಲವಾಣಿ'ಯಲ್ಲಿ, ಅವರ ಪ್ರೋತ್ಸಾಹದ ಮೂಲಕವೇ ಉಡುಪಿಯ 'ರಾಗ ಧನಾಶ್ರೀ'ಯಲ್ಲಿ ಪ್ರಕಟವಾಗಿವೆ. ಇನ್ನೆಷ್ಟೋ ಹಸ್ತಲಿಖಿತ ಬರಹಗಳು ಮರಾಠಿಯಲ್ಲಿ ಮತ್ತು ಇಂಗ್ಲೀಷಿನಲ್ಲಿ ಕಂಡವು. ಅವನ ಎಲ್ಲ ಬರಹಗಳನ್ನು ಹೊತ್ತುಕೊಂಡು ಬೆಂಗಳೂರಿಗೆ ಬಂದು ನಮ್ಮಿಬ್ಬರ ಹಿರಿಯಕ್ಕ 'ತಾಯಿ'ಯ (ಡಾ. ಜ್ಯೋತ್ಸ್ನಾಕಾಮತ್) ಸಹಾಯ-ಮಾರ್ಗದರ್ಶನದಲ್ಲಿ, ಪ್ರತಿದಿನ ಒಂದೆರಡು ಲೇಖನಗಳನ್ನು ವಿಂಗಡಿಸಿ, ಓದಿ, ಚರ್ಚಿಸುತ್ತ ಮೂರು ತಿಂಗಳು ಸರಿದವು. ಇವೆಲ್ಲ ಓದುತ್ತಿರುವಾಗ ನಮ್ಮಿಬ್ಬರಿಗೂ ಒಂದೇ ಸಲ ಅನಿಸಿದ್ದು, ಈ ನಮ್ಮ ಸಹೋದರನನ್ನು ನಾವು ಸರಿಯಾಗಿ ಅರಿತೇ ಇರಲಿಲ್ಲವೇ? ಅತ್ಯಂತ ಆತ್ಮೀಯನಾಗಿದ್ದ ಆತ ಸಂಗೀತ ವಿದ್ವಾಂಸನಾಗಿ ಏಕೆ ನಮಗೆ ಅಪರಿಚಿತನಂತೆ ಭಾಸವಾಗುತ್ತಿದ್ದ? ಅವನ ಬರವಣಿಗೆಯಲ್ಲಿಯ ಪ್ರತಿಯೊಂದು ಘಟನೆ, ಆತ್ಮಚರಿತ್ರೆಯಲ್ಲಿಯ ಕೆಲ ತುಣುಕುಗಳನ್ನು ಕಂಡಾಗ ಈ ಬರಹಗಳಲ್ಲಿಯ ಅವನ ಚಹರೆ ಹೊಸತಾಗಿ ಕಾಣಿಸಿಕೊಳ್ಳುತ್ತಿತ್ತು. ಓದುತ್ತ ಹೋದಹಾಗೇ, ಡಾ. ಶಿವರಾಮ ಕಾರಂತರ, 'ಅಳಿದ ಮೇಲೆ' ಕಾದಂಬರಿಯ ನಾಯಕನಂತೆ ಹಂತಹಂತವಾಗಿ ಅವನ ಹೊಸ ಪರಿಚಯ

ಆಯಿತಲ್ಲ ಆತ ಅಳಿದ ಮೇಲೆ! ಹೌದು, ನಮಗೆ ಮುಂಚಿನಿಂದ ಅವರ ಸಂಗೀತದ ಗೀಳಿನ ಮಾಹಿತಿ ಇತ್ತು. ಆದರೆ ಅದು ಇಷ್ಟು ತೀವ್ರವಾಗಿ ಮತ್ತು ಇಷ್ಟು ಆಳವಾಗಿ ಹರಡಿತ್ತು ಎಂಬುದರ ಕಲ್ಪನೆಯೂ ನಮಗಿರಲಿಲ್ಲ. ಒಳ್ಳೆಯ ಸಂಗೀತ ಕೇಳಿ, ಭಾವನೆಯ ಹೊಳೆಯಲ್ಲಿ ಮುಳುಗಿ ಹೋದ ಆನಂದದ ಅನುಭವ, ಸಾಹಿತ್ಯದಲ್ಲಿಯ ಅಭಿರುಚಿ, ಮತ್ತು ಅವನ ಆ ತನ್ಮಯತೆ... ಇವೆಲ್ಲವನ್ನೂ ಅವನು ನಮೂದಿಸಿದ ಕ್ಷಣಗಳು ನಮಗೆ ಅಚ್ಚರಿಟುಮಾಡಿತು ಮತ್ತು ಮುದ ಕೊಟ್ಟಿತು.

ಈ ಎಲ್ಲ ಭಾವನೆಗಳನ್ನು ಅವನು ಬಾಲ್ಯದಿಂದ ಪೋಷಿಸುತ್ತ, ತಾರುಣ್ಯದಲ್ಲಿ ಬೆಳೆಸುತ್ತ, ಇಲ್ಲಿಯತನಕ ಸಂಗೀತದ ಆಲಾಪನೆಯಲ್ಲಿ ಮುಳಗುತ್ತ, ಈಜುತ್ತ ಭಾವಸಮಾಧಿಯಲ್ಲಿ ಆನಂದಿಸುತ್ತಿದ್ದ ನಮ್ಮ ಈ ಬಂಧು ಯಾವಾಗ ಬರೆಯಲು ಪ್ರಾರಂಭಿಸಿದನು, ಮತ್ತು ಇಷ್ಟೆಲ್ಲ ಯಾವಾಗ ಬರೆದಿಟ್ಟ ಎಂಬುದೇ ವಿಸ್ಮಯವಾಗಿತ್ತು. ಅವನದೇ ಭಾಷೆಯಲ್ಲಿ ಹೇಳುವದಾದರೆ, ಅವನ, 'ನೆನಪಿನ ಬುತ್ತಿಯಿಂದ' ಅದೇಷ್ಟೋ ಹಳೆಯ, ಆಗಿಹೋದ ಘಟನೆಗಳನ್ನು ಅವನು ಹೊರತಂದಿದ್ದಾನೆ.

ಎಳೆವಯಸ್ಸಿನಲ್ಲಿಯೇ ಅವನ ಸಂಗೀತ ಪ್ರವಾಸ ಆರಂಭವಾಗಿತ್ತು. ಸಿರ್ಸಿ ಊರು ಗಿರೀಶ ಕಾರ್ನಾಡರ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದಂತೆಯೇ ಗೋಕರ್ಣ ದಾದಾನ ಮೇಲೆ ಪ್ರಭಾವ ಬೀರಿದೆ. ಅವನೇ ಹೇಳಿದಂತೆ, ಶಿವರಾತ್ರಿಯ ಉತ್ಸವಕ್ಕೆ ಐತಿಹಾಸಿಕ ನಾಟಕಗಳು, ಸಂಗೀತ ನಾಟಕಗಳು, ಯಕ್ಷಗಾನ, ಊರಿಂದೂರಿಗೆ ಅಲೆದಾಡುವ ಕಂಪನಿ ನಾಟಕಗಳನ್ನು ನೋಡಿ, ಆನಂದಿಸಿ ಅನಂತರದ ಆಯುಷ್ಯದಲ್ಲಿ ಅವುಗಳನ್ನು ಮೆಲಕು ಹಾಕಿ ಬರೆಯುವ ರೂಢಿ ಮಾಡಿಕೊಂಡಿದ್ದನು*. ಕೆಲಸದ ನಿಮಿತ್ತದಿಂದ ಭಾರತದ ಉದ್ದಗಲಕ್ಕೆ ಹೋಗುತ್ತಿದ್ದ ಅವನು ಹೋದಲ್ಲೆಲ್ಲ ಅರಸಿಕೊಂಡು ಹೋಗಿ ಸಂಗೀತವನ್ನು ಕೇಳುತ್ತಿದ್ದ. ಹೈದರಾಬಾದಿನಲ್ಲಿ ಭೀಮಸೇನ ಜೋಶಿಯವರು, ದಿಲ್ಲಿಯಲ್ಲಿ ಮಲ್ಲಿಕಾರ್ಜುನ ಮನ್ಸೂರವರು... ಈ ಸಂಗೀತದ ಆಸಕ್ತಿ ಕೇವಲ ಕಚೇರಿಗಳನ್ನು ಕೇಳುವದಕ್ಕೆ ಸೀಮಿತವಾಗದೇ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಿಸಿದ ಎಲ್ಲ ಪುಸ್ತಕಗಳನ್ನು ತರಿಸಿ ಓದುವದು, ಚಿಂತನ, ಮನನ– ಜೀವನದ ಅವಿಭಾಜ್ಯ ಅಂಗಗಳಾಗಿ ಹೋಗಿತ್ತು.

ಅವನ ಬರಹಗಳನ್ನು ಓದಿದ ನಮಗೆ, ಸಂಗೀತವನ್ನು ಕೇಳುವಾಗಿನ ಅವನ ದೃಷ್ಟಿಕೋನ ಓರ್ವ ಜನಾಂಗಶಾಸ್ತ್ರಜ್ಞನ (ethnographer) ತರಹ ಇತ್ತು ಎಂಬುದು ಸ್ಪಷ್ಟವಾಗುತ್ತದೆ. ಜನಾಂಗೀಯಸಂಗೀತ ಶಾಸ್ತ್ರಜ್ಞನು (ethno musicologist) ಸಂಗೀತವನ್ನು ಸಾಂಸ್ಕೃತಿಕ ಅಧ್ಯಯನದ ಒಂದು ಭಾಗವೆಂದು ಪರಿಗಣಿಸುತ್ತಾನೆ. ಸಾಂಸ್ಕೃತಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿಯೇ ಸಂಗೀತದ ಹಲವಾರು ಆಯಾಮಗಳನ್ನು ಚರ್ಚಿಸುತ್ತಾನೆ. ಅದೇ ತರಹ ದಾದಾ ಕೂಡ ಜನಾಂಗ ವರ್ಣನೆಯ ಶಾಸ್ತ್ರೀಯ ಕ್ರಮವನ್ನು ಅನುಸರಿಸಿದ್ದುದು ಕಂಡುಬರುತ್ತದೆ. (methodology of ethnography) ತನ್ನ ಅಧ್ಯಯನದ ವಿಷಯ ಅವಲೋಕಿಸಿ, ಗಾಯಕ, ವಾದಕರನ್ನು ಭೇಟಿ ಮಾಡಿ, ಗುರುತು ಹಾಕಿಕೊಳ್ಳುತ್ತಿದ್ದ. ಅವರ ಮೇಲೆ ಬರೆದಿರುವ, ಇಲ್ಲವೇ ಅವರ ಬಗ್ಗೆ ತಿಳಿದಿರುವ ಜನರಿಂದ ಮಾಹಿತಿಯನ್ನು ಕಲೆ ಹಾಕಿ, ತನ್ನ ಸಂಶೋಧನ ವಿಧಾನಗಳನ್ನೇ ಉಪಯೋಗಿಸಿ, ದತ್ತಾಂಶವನ್ನು (data) ಶೇಖರಿಸುತ್ತಿದ್ದ ಎಂದು ಅವನ ಬರಹಗಳನ್ನು

ಓದುತ್ತ ಹೋದ ಹಾಗೆ ಖಚಿತವಾಗಹತ್ತಿತು. ಸಂಗೀತವನ್ನು ವ್ಯಾಪಕವಾಗಿ ತಿಳಿದುಕೊಂಡಿದ್ದ ಅವನು ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ಮಾಡಿರುವ ಅಧ್ಯಯನಗಳಲ್ಲಿ ಈ ಹೊಳಹುಗಳು ಪ್ರಕಟವಾಗಿವೆ. ಒಂದು ವಿಧದಲ್ಲಿ ಅವನೊಬ್ಬ ಜನಾಂಗೀಯ ಸಂಗೀತ ಶಾಸ್ತ್ರಜ್ಞನಾಗಿದ್ದ ಎಂಬುದು (ethno musicologist) ಸ್ಪಷ್ಟವಾಗುತ್ತದೆ. ಹೀಗೆ ತನಗೆ ಅರಿಯದಂತೆ ಅವನು ಸಂಗೀತದ ಪ್ರಕಾರಗಳ ಹಾಗೂ ಸಂಗೀತಗಾರರ ಜೀವಂತ ಇತಿಹಾಸವನ್ನೇ ದಾಖಲಿಸಿದ್ದಾನೆ. ಆ ಸಾಲಿನಲ್ಲಿಯೇ ಅವನ ಬರಹಗಳನ್ನು ಗ್ರಂಥರೂಪದಲ್ಲಿ ತರಬೇಕೆಂಬ ಹಂಬಲವು ದೃಢವಾಯಿತು.

ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ಶ್ರವಣದಿಂದ ಅವನು ಪ್ರತಿಯೊಬ್ಬ ಗಾಯಕರ, ಹಾಡುವ ಪದ್ಧತಿಯ, ಅವರ ಶೈಲಿಯ ಬಗ್ಗೆ ತಿಳಿದುಕೊಂಡಿದ್ದ ಮತ್ತು ಹಾಡುಗಾರಿಕೆಯಲ್ಲಿಯ ಸೂಕ್ಷ್ಮಗಳನ್ನು ಕಂಡು ಹಿಡಿಯುತ್ತಿದ್ದ. ಗ್ರಾಮೊಫೋನ ರೆಕಾರ್ಡುಗಳ ಸಂಗ್ರಹಾಲಯದಿಂದ ಅಪರೂಪದ ಮುದ್ರಿಕೆಗಳನ್ನು ಮತ್ತೆ ಮತ್ತೆ ಆಲಿಸಿ, ಮರೆತುಹೋದ ಮಹನೀಯರನ್ನು ಬೆಳಕಿಗೆ ತಂದ. ಗೌಹರ್ ಮಾಮಾಜಿವಾಲಾ ಊರ್ಫ ಗ್ಲೋರಿಯಸ ಗೋಹರ್ (1910–1985) ಎಂಬ ಅರ್ಮೇನಿಯನ್ ಮಹಿಳೆಯ ಜಾಡನ್ನು ಅವನು ಕಂಡುಹಿಡಿದು ಮಾತನಾಡಿಸಿದ ಕತೆ ಸಾಕಷ್ಟು ರೋಚಕವಾಗಿದೆ. ಅದೇ ತರಹ, ಶೋಭಾ ಗುರ್ಟು ಅವರ ತಾಯಿ ಮೇನಕಾಬಾಯಿ ಅವರನ್ನು ಅವರ ಮನೆಯಲ್ಲೇ ಕಂಡದ್ದನ್ನು ತನ್ನ ಬರಹದಲ್ಲಿ ವಿವರಿಸಿದ್ದಾನೆ. ಈ ನಾಯಕಸಾನಿಯರಿಂದಲೇ ಸಂಗೀತವು ಜೀವಂತವಾಗಿದ್ದೂ, ವಿಕಸಿತವೂ ಆಯಿತು. ಇಂತಹ ಅನೇಕ ಸಂಗೀತ ಪ್ರಕಾರಗಳನ್ನು ಬೆಳೆಸಿದ ಅನೇಕ ಮಹಿಳೆಯರ ಬಗ್ಗೆ ಮಾಹಿತಿ ಸಂಗ್ರಹಿಸಿ, ಇಲ್ಲವೇ ಸಂದರ್ಶಿಸಿ, ಅವರು ಪಟ್ಟ ಕಷ್ಟಕಾರ್ಪಣ್ಯಗಳ ಅನುಭಗಳನ್ನು ಕಲೆ ಹಾಕಿ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಅವರು ಇತ್ತ ಅಪೂರ್ವ ಕೊಡುಗೆಯನ್ನು ಜನರ ಎದುರಿಗೆ ತೆರೆದಿಡುವ ವಿಶೇಷ ಪ್ರಯತ್ನವನ್ನು ದಾದಾ ಆತ ಮಾಡಿದ್ದಾನೆ ಎಂದು ಹೆಮ್ಮೆಯಿಂದ ಹೇಳಬಹುದು.

ಅವನು ಬರಹಗಾರನಷ್ಟೇ ಆಗಿರಲಿಲ್ಲ, ಕಾರ್ಯಕ್ರಮಗಳ ಉತ್ತಮ ಸಂಯೋಜಕನೂ ಆಗಿದ್ದ. ಕರ್ನಾಟಕ ಸಂಘ ಮತ್ತು ಕೆನರಾ ಸಾರಸ್ವತ ಅಸೋಸಿಯೆಶನ್‌ದ ಪರವಾಗಿ ಮತ್ತು ಅವರ ಸಿಬ್ಬಂದಿಯ ಸಹಾಯದಿಂದ ಪ್ರತಿ ವರ್ಷ ಸಂಗೀತಸಮ್ಮೇಳನಗಳನ್ನು, ಮತ್ತು ವರ್ಷದಲ್ಲಿ ಎಂಟು–ಹತ್ತು ಸಂಗೀತ ದೃಕ್–ಶ್ರಾವ್ಯ (audio-visual) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದನು. ಕರ್ನಾಟಕದಿಂದ ವಲಸೆಹೋದ ಚಿತ್ರಾಪುರ ಸಾರಸ್ವತ ಸಮಾಜದವರು ಮುಂಬಯಿಯಲ್ಲಿ ಸ್ಥಾಪಿಸಿದ ಒಂದು ಸಾಂಸ್ಕೃತಿಕ ಸಮುದಾಯ, 'ಕೆನರಾ ಸಾರಸ್ವತ ಅಸೋಸಿಯೇಶನ್'ನ ಶತಮಾನೋತ್ಸವದ ನಿಮಿತ್ತ ಆಯೋಜಿಸಿದ ಸಂಗೀತ ಸಮ್ಮೇಳನದಲ್ಲಿ ಕರ್ನಾಟಕದ ತಮ್ಮ ಮೂಲ ಸ್ಥಾನವಾದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಸಂಗೀತದ ಇತಿಹಾಸವನ್ನು ಬೀಸುವಕಲ್ಲಿನ ಹಾಡುಗಳಿಂದ ಹಿಡಿದು, ಮದುವೆ, ಮುಂಜಿಗಳಲ್ಲಿ ಹಾಡುವ 'ಓವಿಗಳು' (ಪಾರಂಪಾರಿಕವಾಗಿ ಬಂದ ನಾಲ್ಕು ಸಾಲಿನ ಪದ್ಯಗಳು), ಹಬ್ಬಹರಿದಿನಗಳಲ್ಲಿಯ ಪದಗಳು, ಇಲ್ಲಿಯವರೆಗೂ ವಿವಿಧ ಸಂಪ್ರದಾಯಗಳ (ಘರಾಣೆಗಳ) ಗಾಯಕರು, ಹಾಗೂ ವಾದಕರಿಗೆ ಅಭಿವಂದಿಸುವ ಮತ್ತು ಅಭಿನಂದಿಸುವ. **'ಕಲಾಭಾರತಿಯ**

ಸುತ್ತಮುತ್ತ' ಎಂಬ ಸಂಗೀತ ಕಾರ್ಯಕ್ರಮವನ್ನು ದಾದಾ ಮೂರು ಸರಣಿಗಳಲ್ಲಿ (ಸುಗಮ ಸಂಗೀತಗಾರರ ಮೇಲೆ, ವಾದಕರ ಮೇಲೆ, ಶಾಸ್ತ್ರೀಯ ಸಂಗೀತಗಾರರ ಮೇಲೆ) ಸಂಯೋಜಿಸಿ ಯಶಸ್ವಿಯಾದನು. ಕರ್ನಾಟಕದಲ್ಲಿ 'ಕರ್ನಾಟಕಿ' ಪದ್ಧತಿಯ ಶಾಸ್ತ್ರೀಯ ಸಂಗೀತ ಭದ್ರವಾಗಿ ನೆಲೆಯೂರಿದ್ದರೂ ಕ್ರಮೇಣ ಹಿಂದುಸ್ತಾನಿ ಸಂಗೀತವು ಅಲ್ಲಿ ಹೇಗೆ ಹಾಸುಹೊಕ್ಕಾಗಿ ಬೆಳೆಯಿತು ಎಂಬ ಅವನ ಲೇಖ ಕುತೂಹಲ ಕೆರಳಿಸುವಂತಹದಾಗಿದೆ. ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಚಿತ್ರಾಪುರ ಮಠಾಧಿಪತಿಗಳು ತಮ್ಮ ಸಂಪ್ರದಾಯಗಳನ್ನು ಬದಿಗಿಟ್ಟು, ಮಠದಲ್ಲಿಯ ಪೂಜಾರಿಗಳನ್ನು, ಮುಸಲಮಾನ ಉಸ್ತಾದ್‌ರಿಂದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತರಬೇತಿ ಪಡೆಯಲು ಕಳಿಸಿದ 19 ನೇ ಶತಮಾನದಲ್ಲಿಯ ಕ್ರಾಂತಿಕಾರಿ ನಿಲುವು ಪ್ರಶಂಸಿಸುವಂತಹುದು. ಈ ಮಾತನ್ನು ಪ್ರಕಾಶಕ್ಕೆ ತಂದವನು ನನ್ನ ದಾದಾ ಪ್ರಕಾಶ ಬುರ್ಡೆ.

ಅದೇ ತರಹ ಇನ್ನೊಂದು ಕಾರ್ಯಕ್ರಮ 'ತಬಲಾದ ಠೇಕಾ'ದ (beat) ಮೇಲೆ ಇತ್ತು. ಇಲ್ಲಿ ಪರಿಕಲ್ಪನೆಯನ್ನು ಅದಲುಬದಲು ಮಾಡಿ ಪ್ರಸ್ತುತಿಸಿದ್ದರು. ತಬಲಾ ನುಡಿಸುವವರಿಗೆ ವೇದಿಕೆಯ ಮಧ್ಯ ಭಾಗದಲ್ಲಿ ಪ್ರಾಮುಖ್ಯವನ್ನು ಕೊಟ್ಟು, ಗಾಯಕರನ್ನು ಅಕ್ಕಪಕ್ಕದಲ್ಲಿ ಇರಿಸಿದ್ದರು. ಇದೊಂದು ಹೊಸ ಪ್ರಯೋಗವಾಗಿದ್ದುದರಿಂದ ಪ್ರೇಕ್ಷಕರಿಗೆ ಬಹಳ ಹಿಡಿಸಿತು. ಇನ್ನೊಂದು, 'ಆಥಿಟ್ಧಣುಜಿಮಿಭಿಜಿಣುಠಿ ಠಜಿ ಊಟಿಜಣಾಣಚಿಟು ಅಟಚಿಛುಭಿಜಿಟ ಒಣುಭಿ' ಎಂಬ ಕಾರ್ಯಕ್ರಮವನ್ನು ಜನರಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ಆಸಕ್ತಿ ಮತ್ತು ಕುತೂಹಲ ಹುಟ್ಟಿಸುವ ಸಲುವಾಗಿ ಸಂಯೋಜಿಸಿದ್ದ. ಸಾಮಾನ್ಯ ಜನರಿಗೆ ಶಾಸ್ತ್ರೀಯ ಸಂಗೀತವೆಂದರೆ ಒಂದು ಗೂಢ, ಕಲಿಯಲು ಕಷ್ಟ ಎಂಬ ಅಭಿಪ್ರಾಯವಿರುತ್ತದೆ. ಇನ್ನೂ ಕೆಲವರಿಗೆ ಶಾಸ್ತ್ರಿಯ ಸಂಗೀತವೆಂದರೆ ತಾತ್ಸಾರ. ಇಂಥವರಿಗೋಸ್ಕರ ಈ ಕಾರ್ಯಕ್ರಮವನ್ನು ಏರ್ಪಡಿಸಿ ಈ ಅಭಿಪ್ರಾಯವು ಸರಿಯಲ್ಲವೆಂದು ಮನಗಾಣಿಸಿದರು. ಪ್ರತಿಯೊಂದು ರಾಗದ ಹಾಡುಗಳನ್ನು ಬೇರೆ ಬೇರೆ ರೀತಿಯಲ್ಲಿ ಅಂದರೆ, ಸುಗಮಸಂಗೀತದಲ್ಲಿ, ಬಡಾ ಖಯಾಲಿನಲ್ಲಿ ಮತ್ತು ಚಲನಚಿತ್ರದ ಹಾಡುಗಳಲ್ಲಿ ಹಾಡಿಸಿ ಶಾಸ್ತ್ರೀಯ ಗಾಯನವನ್ನು ಸುಲಭ ಹಾಗೂ ಆಕರ್ಷಕ ಮಾಡಿ ಪ್ರೇಕ್ಷಕರನ್ನು ರಂಜಿಸ ಬಹುದು ಎಂದು ತೋರಿಸಿಕೊಟ್ಟ. ಇವೆಲ್ಲ ಅವನಲ್ಲಿದ್ದ ಪ್ರಯೋಗಶೀಲತೆ ಮತ್ತು ಸೃಜನಶೀಲತೆಗಳಿಗೆ ಕೆಲ ಉದಾಹರಣೆಗಳು.

ಬಹುಭಾಷಿಕನಾಗಿದ್ದದ್ದರಿಂದ, ದಾದಾ ಒಂದು ಪರಂಪರೆಯಿಂದ ಇನ್ನೊಂದರ ಬೇಲಿ ದಾಟಿ ಅದರಲ್ಲಿಯ ವೈವಿಧ್ಯವನ್ನು ಅಭ್ಯಸಿಸುತ್ತಿದ್ದ ಮತ್ತು ಬೇರೆ ಬೇರೆ ಗಾಯಕರ ಕಂಠ, ಶೈಲಿಗಳನ್ನು, ಅವರ ನಡುವಿದ್ದ ವ್ಯತ್ಯಾಸಗಳನ್ನು ಕಂಡು ಹಿಡಿಯುವ ನಿಪುಣತೆ ಅವನಲ್ಲಿ ಇತ್ತು. ಅವನೊಬ್ಬ ಯಾತ್ರಿಕನಂತೆ ಸಂಗೀತದ, ಭಾಷಾ ಅಧ್ಯಯನದ ಮತ್ತು ಸಾಹಿತ್ಯದ ಗಡಿಗಳನ್ನು ದಾಟಿ ಬೇರೆ ಬೇರೆ ಘರಾಣಾಗಳ ಸಂಗೀತದ ವೈಶಿಷ್ಟಗಳನ್ನು, ವಿಧಾನಗಳನ್ನು ಅರಿತು ಅವುಗಳಲ್ಲಿಯ ಸಾಮಾಜಿಕ ಪ್ರಕ್ರಿಯೆಯನ್ನು ಕಾಣಲು ಪ್ರಯತ್ನಿಸಿದ. ಸಂಗೀತಗಾರರ ಜೊತೆ ಅವರ ಭಾಷೆಯಲ್ಲಿಯೇ, ಹಿಂದಿ, ಉರ್ದು, ಮರಾಠಿ, ಕನ್ನಡದಲ್ಲಿ ಮಾತುಕತೆಯನ್ನು ನಡೆಸಿ ಅವರಿಂದ ಮಾಹಿತಿ

ಸಂಗ್ರಹಿಸಿ ಬರೆದ. ಅವನ ಲೇಖನಗಳು ಕೇವಲ ವಿವರಣೆ ಆಗದೇ ವೈಯಕ್ತಿಕ ಟಚ್‌ನೊಂದಿಗೆ, ಅವನ ಸಂವೇದನಶೀಲ ಸ್ವಭಾವದ ಪರಿಚಯವನ್ನು ಮಾಡುತ್ತವೆ. ಅವನ ಈ 'ಗಡಿ ದಾಟುವ' ಅನೌಪಚಾರಿಕ ಸಾಮರ್ಥ್ಯದಿಂದ, ತನಗೇ ಅರಿವಿಲ್ಲದಂತೆ ಒಬ್ಬ ವಿಶಿಷ್ಟ ಸಂಗೀತ ವಿಶ್ಲೇಷಕನಾಗಿ ಉಳಿದವರಿಗಿಂತ ಎತ್ತರದ ಸ್ಥಾನದಲ್ಲಿ ಸಹಜವಾಗಿಯೇ ಎದ್ದು ಕಾಣುತ್ತಾನೆ ನನ್ನ ದಾದಾ.

* ದಾದಾನಿಗೆ ಕನ್ನಡದಲ್ಲಿ ಬರೆಯಲು ಪ್ರೋತ್ಸಾಹಿಸಿದವರು ಡಾ. ನಿಂಜೂರರು ಮತ್ತು ಡಾ. ಸನದಿಯವರು

** ಮರೆತು ಹೋದ ಕಿರಾನಾ ಗಾಯಕರು, ಅಮೀರಬಾಯಿ ಕರ್ನಾಟಕಿ, ಜಯವಂತಿ ಹಿರೇಬೆಟ್ – ಈ ಲೇಖನಗಳನ್ನು ಓದಿ

*****

1.14

ಪೂರ್ವಸೂರಿಗಳೊಡನೆ ಸ್ವರ ಸಂಧಾನ

ಡಾ. ಸುರೇಶ ಚಾಂದವಣಕರ್

ಸುಮಾರು 1995–96ರಲ್ಲಿ ಎಂದು ತೋರುತ್ತದೆ, ಮುಂಬಯಿ ಮಹಾನಗರದಲ್ಲಿ ಆಗಾಗ ನಡೆಯುತ್ತಿದ್ದ 'ಮ್ಯುಸಿಕ ಫೋರಂ' ಸಭೆಯೊಂದರಲ್ಲಿ ಪ್ರಕಾಶ ಬುರ್ಡೆ ಅವರನ್ನು ಮೊದಲಬಾರಿಗೆ ಭೇಟಿ ಮಾಡಿದೆ. 'ಮ್ಯೂಸಿಕ್ ಫೋರಂ' ಸಂಗೀತ ಕಲಾವಿದರು, ವಿಮರ್ಶಕರು, ಸಂಘಟಕರು, ವಿದ್ವಜ್ಜನರು, ಸಂಗೀತ ರಸಗ್ರಾಹಕರನ್ನೆಲ್ಲ ಇಪ್ಪತ್ತೈದು ವರ್ಷಗಳಿಂದ ಸದಸ್ಯರನ್ನಾಗಿ ಹೊಂದಿದ ಸಂಸ್ಥೆಯಾಗಿದೆ. ಪ್ರಸಿದ್ಧ ಸಿತಾರ್‌ವಾದಕರಾಗಿರುವ ಪಂ. ಅರವಿಂದ ಪಾರೇಖರು ಅದನ್ನು ನಡೆಸುತ್ತಿದ್ದಾರೆ.

ಇದರ ಮಾಸಿಕ ಸಭೆಯಲ್ಲಿ ಅಂದು ಪ್ರಕಾಶರನ್ನು ಕಾಣುವಂತಾಯಿತು. ತುಂಬ ದಿನದ ಪರಿಚಿತರಂತೆ ಆತ ನನ್ನತ್ತ ನೋಡಿ ಮುಗುಳ್ನಕ್ಕರು. ಮೀಟಿಂಗ್ ಮುಗಿದ ಬಳಿಕ ನನ್ನ ಬಳಿ ಬಂದು, ನಾನು ಪ್ರಕಾಶ ಬುರ್ಡೆ. 1990 ರಲ್ಲಿ ಒಮ್ಮೆ ತಮ್ಮನ್ನು ಕಂಡಿದ್ದೆ. ಶ್ರೀ ನಾರಾಯಣ್ ಮುಲಾನಿಯವರು ಅಂದು ತುಂಬಾ ಹಳೆಯ ಪ್ರಭಾತ ಕಂಪನಿಯ ಸಿನೆ ಹಾಡುಗಳು 78 ಆರ್‌ಪಿಎಮ್ ಡಿಸ್ಕಗಳನ್ನು ತಮ್ಮ ಮನೆಯಲ್ಲಿ ಕೇಳಿಸಿದ್ದರು. ನಾನು ಅರವಿಂದ ಪಾರೇಖರ ಜೊತೆಗೆ ಬಂದಿದ್ದೆ. ಬಹುಶಃ ನಿಮಗೆ ನನ್ನ ಗುರುತು ಸಿಕ್ಕಿರಲಿಕ್ಕಿಲ್ಲ! ಆವತ್ತಿನಿಂದ ನಿಮ್ಮ 'ಸೊಸೈಟಿ ಆಫ್ ಇಂಡಿಯನ್ ರೆಕಾರ್ಡ್ ಕಲೆಕ್ಟರ್ಸ್' ಕುರಿತ ಲೇಖಗಳನ್ನು ಓದುತ್ತ ಬಂದಿದ್ದೇನೆ. ಜೊತೆಗೆ ಗಿರಗಾಂವದ ಸಾಹಿತ್ಯ ಮಂದಿರದಲ್ಲಿ ಏರ್ಪಡಿಸುತ್ತಿರುವ ಹಳೆಯ ಸಂಗೀತದ ಶ್ರವಣ ಸಭೆಗಳಿಗೂ ಹೋಗುತ್ತಿರುತ್ತೇನೆ .. ಇನ್ನು ಈ ಸಭೆಯಲ್ಲಿಯೂ ತಿಂಗಳಿಗೊಮ್ಮೆ ತಪ್ಪದೇ ಹಾಜರಾಗೋಣ. ನಿಮ್ಮ ಯಾವತ್ತೂ ಪ್ರಯತ್ನಗಳಿಗೆ ನನ್ನ ಹಾರ್ದಿಕ ಶುಭಾಶಯಗಳು. ನಿಮ್ಮಿಂದ ಸಹಾಯ ಬೇಕೆಂದಾಗ ಖಂಡಿತ ಸಂಪರ್ಕಿಸುತ್ತೇನೆ.' ಎಂದು ಹೇಳಿದರು. ಜೊತೆಗೆ ತಮ್ಮ ಕರ್ನಾಟಕ ಸಂಘದಲ್ಲಿ ಪ್ರತಿ ರವಿವಾರ ನಡೆಯುತ್ತಿದ್ದ ಸಂಗೀತ ಸಭೆಗಳಿಗೆ ಆಮಂತ್ರಣವಿತ್ತರು. ಕರ್ನಾಟಕ ಸಂಘದ ಈ ಸಭಾಗೃಹ ಪಶ್ಚಿಮ ರೈಲ್ವೆಯ ಮಾಟುಂಗಾ ರೈಲ್ವೆ ಸ್ಟೇಶನ್ ಬಳಿ ಇದೆ.

ವರ್ಷಗಳು ಕಳೆದಂತೆ ನಮ್ಮ ಸ್ನೇಹ ಗಾಢವಾಗುತ್ತ ನಡೆಯಿತು. ತನಗೆ ಬೇಕಿದ್ದ ಧ್ವನಿಮುದ್ರಿಕೆಗಳು ಅಥವಾ ಅವಕ್ಕೆ ಪೂರಕ ಮಾಹಿತಿ ಬೇಕಾದಾಗೆಲ್ಲ ಆತ ತಪ್ಪದೇ

ಫೋನಿಸುತ್ತಿದ್ದರು. ಎಷ್ಟೋ ಬಾರಿ ನನ್ನ ಖಾಸಗಿ ಸಂಗ್ರಹದೊಳಗಿನ ಹಳೆ ಗ್ರಾಮೊಫೋನ್ ರೆಕಾರ್ಡ್ಸ್ ಕೇಳಲೆಂದೇ ಗ್ರಾಂಟ್ ರೋಡಿನಿಂದ ಕೋಲಾಬಾದ ನನ್ನ ಮನೆಗೆ ಬರುತ್ತಿದ್ದರು.

ಒಮ್ಮೆ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರ ಮರಾಠಿ ಹಾಡುಗಳನ್ನು ಕೇಳಿಸಿದೆ. ಅವೆಲ್ಲ ಹಾಡುಗಳ ಸಂಗ್ರಹದ ಸಿಡಿಯನ್ನು ಮಾಡಿಸಿಕೊಡುವಂತೆ ವಿನಂತಿಸಿ ಶೀಘ್ರವೇ ನನಗೆ ಮಾಟುಂಗಾಕ್ಕೆ ಬರಲು ಆಮಂತ್ರಿಸಿದರು. ಗಂಗೂಬಾಯಿಯವರಿಗೆ ನನ್ನ ಪರಿಚಯ ಮಾಡಿಕೊಟ್ಟರು. ಅವರಿಗೆ ಆ ಸಿಡಿಯನ್ನು ಕೊಟ್ಟಿದುದಲ್ಲದೆ, ಅದರ ಸಂಗ್ರಹದ ಸಂಪೂರ್ಣ ಕ್ರೆಡಿಟ್ ನನಗೇ ತಲುಪಿಸಿದರು! ಗಂಗೂಬಾಯಿಯವರ ವಿಸ್ಮಯಾನಂದಗಳಿಗೆ ಪಾರವಿರಲಿಲ್ಲ. ತಮ್ಮ ಮಗಳು ಕೃಷ್ಣಾವರಿಗೆ ಆ ಮರಾಠಿ ಹಾಡುಗಳ ಹಿನ್ನೆಲೆಯ ರಂಜಕ ಘಟನೆಗಳನ್ನೆಲ್ಲ ವರ್ಣಿಸಿದರು. ಗಂಗೂಬಾಯಿಯವರ ತುಂಬು ಮನಸ್ಸಿನ ಸಿ.ಡಿ. ಕುರಿತ ಶ್ರಮದ ಮೆಚ್ಚಿಗೆಗೆ ಪ್ರಕಾಶರು ಪಟ್ಟ ಅತೀವ ಸಂತೋಷ ನೋಡುವಂತಿತ್ತು!

ಸುಮಾರು 2002ರ ಹೊತ್ತಿಗೆ ಮರಾಠಿ ದೈನಿಕ, ಮಹಾರಾಷ್ಟ್ರ ಟೈಮ್ಸ್‌ನಲ್ಲಿ ನಾನು ಸಾಪ್ತಾಹಿಕ ಕಾಲಂ ಒಂದನ್ನು ಬರೆಯಲಾರಂಭಿಸಿದೆ. ಭಾರತದಲ್ಲಿ ಗ್ರಾಮೊಫೋನ್ ಯುಗ ಪ್ರಾರಂಭವಾಗಿ ಸರಿಯಾಗಿ ನೂರು ವರ್ಷ ದಾಟಿದ ಸಂದರ್ಭ ಅದಾಗಿತ್ತು. "ಪೂರ್ವಸೂರಿಂಚೆ ಸುರ್"(ಪೂರ್ವಸೂರಿಗಳ ಸ್ವರಗಳು) ಎಂಬುದು ಅದರ ಶೀರ್ಷಿಕೆಯಾಗಿತ್ತು. 1930ರ 'ಗೌಹರ್ ಜಾನ್ ಆಫ್ ಕಲಕತ್ತಾ' ಅವರಿಂದ ಆರಂಭವಾದ ಈ ಮಾಲಿಕೆ ಕೇಸರಬಾಯಿ ಕೇರಕರ್(1953) ಅವರವರೆಗೆ ಚಾಚಿಕೊಂಡಿತ್ತು. ಉತ್ತರ ಭಾರತದ ಐವತ್ತು ಪ್ರಸಿದ್ಧ ಕಲಾವಿದರ ಹಾಡುಗಾರಿಕೆಯನ್ನು ಅದು ಒಳಗೊಂಡಿತ್ತು. ಪ್ರತಿ ಲೇಖ 800 ಶಬ್ದಗಳದ್ದು. ಇವನ್ನು ತಪ್ಪದೇ ಓದುತ್ತಿದ್ದ ಪ್ರಕಾಶರು ಆಗಾಗ ಫೋನಿಸಿ ನನ್ನ ಈ ಪುಟ್ಟ ಪ್ರಯತ್ನಕ್ಕೆ ತಮ್ಮ ಮೆಚ್ಚಿಗೆ ತಿಳಿಸುತ್ತಿದ್ದರು. ಇದೇ ರೀತಿಯಲ್ಲಿ ಕರ್ನಾಟಕ ಸಂಗೀತದ ಧ್ವನಿಮುದ್ರಿಕೆಗಳನ್ನು ಪತ್ತೆ ಹಚ್ಚಿ ಆ ಮೂಲಕ ಹಿಂದಿನ ಹೆಸರುವಾಸಿ ಕಲಾಕಾರರ ಪಾಂಡಿತ್ಯದ ಅಲ್ಪ ಪರಿಚಯ ನೀಡಲು ಅವರು ತುಂಬ ಪ್ರಯತ್ನಿಸಿದರು. ಆದರೆ ಅವರಿಗೆ ಸಹಾಯವಾಗುವಂತಹ ಧ್ವನಿ ಮುದ್ರಿಕೆಗಳು ಸಿಗಲಿಲ್ಲ. ಅಲ್ಲದೇ ಸ್ಥಳೀಯ ಪತ್ರಿಕೆಗಳೂ ಈ ವಿಷಯ ಪ್ರಕಟಿಸಲು ನಿರ್ಲಕ್ಷ್ಯ ತಾಳಿದವು. ಜೊತೆಗೆ ಪ್ರಕಾಶರು ನನ್ನ ಮರಾಠಿ ವಿಶ್ಲೇಷಣೆಯ ಕನ್ನಡ ಅನುವಾದವನ್ನು ಪ್ರಕಟಿಸಲೂ ಸಾಕಷ್ಟು ಯತ್ನಿಸಿದರು. ಅದೂ ಸಾಧ್ಯವಾಗಲಿಲ್ಲ. ಭಾರತದ ಸುಪ್ರಸಿದ್ಧ ಧ್ವನಿಮುದ್ರಿಕೆಗಳನ್ನು ಕುರಿತು ಅವರು ಬರೆದ ಎಷ್ಟೋ ಲೇಖಗಳು ಅಪ್ರಕಟಿತವಾಗಿಯೇ ಉಳಿದಿವೆ.

ಕೆಲಕಾಲದ ಬಳಿಕ ಕರ್ನಾಟಕ ಸಂಘದಲ್ಲಿ ಆಯ್ದ ಧ್ವನಿಮುದ್ರಿಕೆಗಳ ಶ್ರವಣ ಸಭೆಯನ್ನು ನನ್ನ ಮಾರ್ಗದರ್ಶದಲ್ಲಿ ಏರ್ಪಡಿಸಿದರು. ನನ್ನ ಮೊದಲ ಪ್ರಯತ್ನವೇ, 'ಪೂರ್ವಸುರಿಂಚೆ ಸುರ್' ಮಾಲಿಕೆಯ ತುಂಬ ಹಳೆಯ ಆದರೆ ಇಂಪು ಕಳೆದುಕೊಳ್ಳದ ಗ್ರಾಮೊಫೋನ್ ರೆಕಾರ್ಡುಗಳ ಕುರಿತಾಗಿತ್ತು. ಶ್ರೋತೃಗಳ ಅನಿರೀಕ್ಷಿತ ಮತ್ತು ಅಪಾರ ಮೆಚ್ಚಿಕೆಯನ್ನು ಈ ಪ್ರಾತ್ಯಕ್ಷಿಕೆ ಗಳಿಸಿತು. ಆ ಬಳಿಕದ ಇಂಥ ಕಾರ್ಯಕ್ರಮಗಳ ಅದು ನಾಂದಿಯಾಗಿಯೂ ಪರಿಣಮಿಸಿತು. ಗಂಗೂಬಾಯಿ, ಭೀಮಸೇನ್ ಜೋಶಿ, ರವಿಶಂಕರ್, ಬಾಲಗಂಧರ್ವ, ಬಿಜಾಪುರದ ಗೋಹರಾಬಾಯಿ, ಮತ್ತು ಮಲ್ಹಾರ ಉತ್ಸವದ ಕುರಿತ

ಕಾರ್ಯಕ್ರಮಗಳನ್ನು ಒಂದಾದ ಮೇಲೊಂದು ಕರ್ನಾಟಕ ಸಂಘದ, 'ಕಲಾಭರತಿ'ಯಲ್ಲಿ ಪ್ರಸ್ತುತಪಡಿಸಿದೆ.

ಕೆಲವೊಮ್ಮೆ ಇಂಥ ಸಂದರ್ಭಗಳಲ್ಲಿ ಕಲಾಭವನದ ಪಕ್ಕದ, 'ಗಂಗಾವಿಹಾರ್' ಉಡುಪಿ ರೆಸ್ಟೊರಾದಲ್ಲಿ ಇಡ್ಲಿ-ವಡೆ, ದೋಸಾಗಳೊಂದಿಗೆ ಬಿಸಿಬಿಸಿ ಕಾಫಿಯ ಸಮಾರಾಧನೆ ಪ್ರಕಾಶ ಮತ್ತು ಆತನ ಸಂಘದ ಕುಟುಂಬದ ಸದಸ್ಯರೊಂದಿಗೆ ನಡೆಯುತ್ತಿದ್ದ ನೆನಪು. ನನ್ನ ಪ್ರತಿ ಪ್ರಸ್ತುತೀಕರಣದಲ್ಲೂ ಬುರ್ಡೆಯವರು ನನ್ನನ್ನು ಪರಿಚಯಿಸುತ್ತ ಆಯಾ ಕಾರ್ಯಕ್ರಮದ ಹಿನ್ನೆಲೆ ನೀಡುತ್ತ ಅದರ ಹಿಂದಿನ ನನ್ನ ಸಂಶೋಧನಾ ಶ್ರಮವನ್ನು ಪ್ರಶಂಸಿಸಲು ಮರೆಯುತ್ತಿರಲಿಲ್ಲ!

2004ನೇ ವರ್ಷದಲ್ಲಿ ಕೇಸರಬಾಯಿ ಕೇರಕರ್ ಅವರ ವಿರಳ ಧ್ವನಿಮುದ್ರಿಕೆಗಳ ಪುನರ್ಮುದ್ರಣದ ಸಿ.ಡಿಯನ್ನು 1935ರ 'ಶ್ರುತಿ ಪ್ರಸಾರ' ಎಂಬ ಲೇಬಲ್ ಅಡಿಯಲ್ಲಿ ಬಿಡುಗಡೆ ಮಾಡಿದೆವು. ಅನೀಶ ಪ್ರಧಾನ್ ಮತ್ತು ಶುಭಾ ಮುದಗಲ್ ಅವರಂಥ ಖ್ಯಾತ ಕಲಾವಿದರು ಈ ಹಳೆಯ ರೆಕಾರ್ಡುಗಳ ವಿಸ್ತೃತ ಪುನರ್ ಮುದ್ರಣವನ್ನು ಕೈಕೊಂಡರು. ಪ್ರಕಾಶಬುರ್ಡೆಯವರು ಕರ್ನಾಟಕ ಸಂಘದ ಕಲಾಭಾರತಿಯ ವತಿಯಿಂದ ಇದರ ಬಿಡುಗಡೆಯನ್ನು ಡಿಸೆಂಬರ್ 2004ರಲ್ಲಿ ಏರ್ಪಡಿಸಿದ್ದರು. ಮುಂಬಯಿ ಮಹಾನಗರದ ಸಾಕಷ್ಟು ಸಂಗೀತ ವಿದ್ವಾಂಸರು ಮತ್ತು ಖ್ಯಾತ ಗಾಯಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಡಾ. ಅಶೋಕ ರಾನಡೆಯವರ ಕೀ ನೋಟ್ ಅಡ್ರೆಸ್ ಇತ್ತು. ಟ್ರ್ಯಾಕ್ ಶ್ರವಣದ ಬಳಿಕ ಪ್ರಶ್ನೋತ್ತರಗಳನ್ನು ಅಳವಡಿಸಲಾಯಿತು. ಸಿ.ಡಿಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಕಾರ್ಯಕ್ರಮಕ್ಕೆ ಬಂದಿದ್ದ ಕೇಸರಬಾಯಿಯವರ ಮರಿಮಗಳು ಹತ್ತು ಸಿಡಿಗಳನ್ನು ಕೊಂಡರಲ್ಲದೇ, ತನ್ನ ಮುತ್ತಜ್ಜಿ, ಈ ಪ್ರಕಾರದ ಅನನ್ಯ ಗಾಯಕಿಯಾಗಿದ್ದು ಸಂಗೀತ ಜಗತ್ತಿನ ದಂತಕತೆಯಾಗಿದ್ದ ಪರಿ ನನಗೆ ಗೊತ್ತೇ ಇರಲಿಲ್ಲ ಎಂದು ಉದ್ಗರಿಸಿದರು. ಕಲ್ಪನೆಗೆ ಮೀರಿದ ಈ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ಬುರ್ಡೆ ಅವರಿಗೆ ಹೆಚ್ಚಿನ ಉಲ್ಲಾಸವಿತ್ತು.

ಸುಮಾರು 2012ರಲ್ಲಿ ಸಾಹಿತಿ ಡಾ. ರಹಮತ್ ತರಿಕೆರೆ ಅವರ ಸಂಶೋಧನಾ ಯೋಜನೆಯೊಂದರಲ್ಲಿ ಪಾಲ್ಗೊಂಡು ಬುರ್ಡೆಯವರು ಖ್ಯಾತ ಅಭಿನೇತ್ರಿ ಹಾಗೂ ಹಿನ್ನೆಲೆ ಗಾಯಕಿಯಾಗಿದ್ದ ಅಮೀರಬಾಯಿ ಕರ್ನಾಟಕಿ ಅವರ ಬಗೆಗಿನ ಕನ್ನಡ ಕೃತಿಗಾಗಿ ಬಹಳಷ್ಟು ಅಲೆದರು. ಸಂಗೀತಗಾರರು, ಲೇಖಕರು, ವಾದಕ ಗಾಯಕರು, ಧ್ವನಿಮುದ್ರಿಕೆ ಸಂಗ್ರಹಕಾರರನ್ನೆಲ್ಲ ಭೇಟಿ ಮಾಡಿದರು. ಈ ಕುರಿತ ಗ್ರಂಥ ಕನ್ನಡ-ಮರಾಠಿ ಎರಡೂ ಭಾಷೆಗಳಲ್ಲಿ ಪ್ರಕಟವಾದಾಗ ಪ್ರಕಾಶ ಅವರ ಸಂತೋಷ ಅಪಾರವಾಗಿತ್ತು. ಈ ವಿಷಯದ ಮೇಲೆ ಕರ್ನಾಟಕ ಸಂಘದಲ್ಲಿ ವಿಶೇಷ ಕಾರ್ಯಕ್ರಮವೊಂದನ್ನು ಏರ್ಪಡಿಸಿದರು. ದೃಕ್-ಶ್ರವಣದ ಈ ಕಾರ್ಯಕ್ರಮವನ್ನು ಪ್ರಸ್ತುತಪಡಿಸಲು ನನ್ನನ್ನೇ ಆಮಂತ್ರಿಸಿದ್ದರು.

ಸದಾ ಹಸನ್ಮುಖಿಯಾಗಿರುತ್ತಿದ್ದ ಪ್ರಕಾಶರಲ್ಲಿ ಪುಟ್ಟ ಮಗುವಿನ ಕುತೂಹಲದ ಕಣ್ಣಿನ ಹೊಳಪು ಇತ್ತು. ಕಂಪ್ಯೂಟರ್ ತಂತ್ರವನ್ನು ಅವರು ಬಲುಬೇಗ ರೂಢಿಸಿಕೊಂಡರು

ಜಿ-ಮೇಲ್ ಅಕೌಂಟಿನಿಂದ ಆಗಾಗ ಸ್ನೇಹಿತರೊಂದಿಗೆ ಚ್ಯಾಟ್ ಮಾಡುತ್ತಿದ್ದರು. ಕರ್ನಾಟಕ ಸಂಘದ ಕಲಾಭಾರತಿ ರೂಪಗೊಂಡ ಬಗೆ ಮತ್ತು ಅದರ ಮೂಲಕ ಮುಂದುವರೆದು ಬಂದ ರವಿವಾರದ ಬೆಳಗಿನ ಸಂಗೀತ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬಂದಿದ್ದು ಪ್ರಕಾಶರು ಕಣ್ಮರೆಯಾದ ಬಳಿಕವೇ!

ನೋವಿನ ಪ್ರಸಂಗಗಳಾದ ಅಯೋಧ್ಯಾ ಘಟನೆಯ ನಂತರದ ಮುಂಬಯಿಯ ಬಾಂಬ್ ಸ್ಫೋಟದ ಹತ್ಯೆಗಳಿಂದಾಗಿ ಮುಂಬಯಿ ನಾಗರಿಕರಲ್ಲಿ ಕದಡಿದ ಶಾಂತಿ, ನೆಮ್ಮದಿ ಮತ್ತು ಬಾಂಧವ್ಯಗಳನ್ನು ಪುನಶ್ಚೇತನಗೊಳಿಸುವದು ಅತ್ಯವಶ್ಯವಾಗಿತ್ತು. ಸಂಗೀತ, ನೃತ್ಯ ನಾಟಕಗಳಂತಹ ಲಲಿತ ಕಲೆಗಳ ಪ್ರಯೋಗಗಳಿಂದ ಇದು ಸಾಧ್ಯವೆಂದು ನಂಬಿದ್ದ ಪ್ರಯೋಗಶೀಲರಲ್ಲಿ ಪಕ್ರಾಶ ಬುರ್ಡೆ ಮುಂಚೂಣಿಯಲ್ಲಿದ್ದರು. ಬಹಳಷ್ಟು ಖ್ಯಾತ ಮತ್ತು ಖ್ಯಾತಿಯನ್ನು ಕಾಣದ ಕಲಾವಿದರನ್ನು ಕಲಾಭಾರತಿಯ ವೇದಿಕೆಗೆ ಕರೆತಂದರು. ನನಗೆ ಈ ಸಮಾಚಾರ ಗೊತ್ತೇ ಇರಲಿಲ್ಲ. ಪ್ರಕಾಶ ಅವರ ಈ ಮಹತ್ತರ ಪ್ರಯೋಗದಲ್ಲಿ ಅಲ್ಪ ಪ್ರಮಾಣದಲ್ಲಿ ನನ್ನದೇ ಆದ ರೀತಿಯಲ್ಲಿ ಪಾಲ್ಗೊಳ್ಳುವಂತೆ ಸಾಧ್ಯವಾದದ್ದಕ್ಕೆ ಅಭಿಮಾನ ತಾಳುತ್ತೇನೆ. ಭಾರತೀಯ ಸಂಗೀತದ ಉಳಿವು ಮತ್ತು ಭವಿಷ್ಯದ ಕುರಿತು ಪ್ರಕಾಶರು ತಾಳಿದ್ದ ಹೆಚ್ಚಿನ ಭರವಸೆ ಫಲಪ್ರದವಾಗುತ್ತದೆಂಬ ಆಶಾವಾದವನ್ನು ಹೊಂದಿದ್ದೇನೆ.

*****

ಅಧ್ಯಾಯ 2

ರಂಗಗೀತೆಗಳು

2.1

ಕನ್ನಡ ವೃತ್ತಿರಂಗ ನಮನ

ನಾನು ಮೊಟ್ಟಮೊದಲು ನಾಡೋಜ ಬಾಳಪ್ಪಜ್ಜನನ್ನು ನೋಡಿದ್ದು ಸ್ತ್ರೀ ವೇಷದಲ್ಲಿ, 'ಜಾಗೀರದಾರ' ಎಂಬ ಸಾಮಾಜಿಕ ನಾಟಕದಲ್ಲಿ. 1952ರ ಶಿವರಾತ್ರಿಯ ಗೋಕರ್ಣ ಜಾತ್ರೆಗೆ ಅವರ, 'ಕಲಾವೈಭವ' ನಾಟಕಮಂಡಳಿ ಬಂದಿತ್ತು. ಗ್ಯಾಸ್ ಅಥವಾ ಪೆಟ್ರೋಮ್ಯಾಕ್ಸ್ ಲೈಟಿನಲ್ಲಿ, ಮೈಕ್ ಇರದಿದ್ದರೂ ಕೂಡ ಹಿಂದೆ ಚಾಪೆ ಸಿಟಿನಲ್ಲಿ ಕುಳಿತ, 'ವಾನರಸೇನೆ'ಗೆ ಅವರ ರಂಗಗೀತೆ, ಸಂಭಾಷಣೆ ಎಲ್ಲವೂ ಅಚ್ಚುಕಟ್ಟಾಗಿ ಕೇಳಿಸುತ್ತಿತ್ತು. ಮರಳಿ ಅವರ ನಾಟಕ ನೋಡಿದ್ದು 1957ರಲ್ಲಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದಾಗ.

ಈ ನೆನಪಿನ ಬುತ್ತಿ ಬಿಚ್ಚಿದ್ದು, 2009ರ ಏಪ್ರಿಲ್ 25ರಂದು ಮುಂಬಯಿಯ ಮೈಸೂರು ಅಸೋಸಿಯೇಶನ್ನಿನ ಸಭಾಗೃಹದಲ್ಲಿ. ವಯೋಮಾನದಿಂದಾಗಿ ಬಾಳಪ್ಪ ಏಣಗಿ ಬರದಿದ್ದರೂ (ಅವರಿಗೆ 96ರ ಹರೆಯ), ಇತರ ಶ್ರೇಷ್ಠ ವೃತ್ತಿರಂಗ ಭೂಮಿಯ ಒಳನಾಡು ಕನ್ನಡ ಕಲಾವಿದರ ಒಂದು ಅಪರೂಪದ ಮತ್ತು ಅಪೂರ್ವ ನಾಟ್ಯಕಲೆಯ ಪ್ರದರ್ಶನ ಮುಂಬಯಿಯಂತಹ ಹೊರನಾಡು ಕನ್ನಡಿಗರಿಗಾಗಿ ಕಪ್ಪಣ್ಣನವರ ಸಾರಥ್ಯದಲ್ಲಿ ಒದಗಿಸಿದ್ದಕ್ಕೆ ಮೈಸೂರು ಅಸೋಸಿಯೇಶನ್ನಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಕೊಡುವಂತಾಯಿತು.

ಹೊರನಾಡಿನ ಮುಂಬಯಿ ಕನ್ನಡಿಗರಿಗೆ ಈ ಮೊದಲು ಗಿರಗಾಂವದಲ್ಲಿ 1986ರಲ್ಲಿ 'ಕಾನಡಾ ವಿಠ್ಠಲ' ಪ್ರಯೋಗ ಏರ್ಪಡಿಸಲಾಗಿತ್ತು. ಅರುಣ ಆತಲ್ಯೆ ಇದರ ಸೂತ್ರಧಾರರಾಗಿದ್ದರು. ಕನ್ನಡ ಮತ್ತು ಮರಾಠಿ ವೃತ್ತಿರಂಗಭೂಮಿಯ ಆದ್ಯ ನಾಟಕಕಾರರಾದ, ವಿಷ್ಣುದಾಸ ಭಾವೆ ಮತ್ತು ಹಾಸ್ಯಗಾರರ, 'ಸೀತಾ ಸ್ವಯಂವರ' ನಾಟಕದ್ದೇ ವೇಷ ಭೂಷ ಹಾಕಿದ್ದರು. ಕನ್ನಡ ಹಾಗೂ ಮರಾಠಿ ನಾಟಕದ ನಾಂದಿಯ ಬಳಿಕದ ಬೆಳವಣಿಗೆಯಲ್ಲಿ ಮರಾಠಿ, ಕನ್ನಡ ನಾಟಕಗಳ ರಂಗಗೀತೆಗಳನ್ನು ಹಾಡಿದ್ದು ಒಂದು ಐತಿಹಾಸಿಕ ಘಟನೆಯಾಗಿತ್ತು. ಇದರಲ್ಲಿ ಪು.ಲ ದೇಶಪಾಂಡೆ (ಮರಾಠಿ), ಹೀರಾಬಾಯಿ ಬಡೋದೇಕರ್ (ಮರಾಠಿ) ಮಲ್ಲಿಕಾರ್ಜುನ ಮನ್ಸೂರ್ (ಕನ್ನಡ), ಸಂಗಮೇಶ್ವರ ಗುರವ (ಕನ್ನಡ) ಬಸವರಾಜ ರಾಜಗುರು ಮತ್ತು ಗಂಗೂಬಾಯಿ

ಹಾನಗಲ ವಿಶೇಷ ರೂಪದಲ್ಲಿ, 'ಸಂಶಯ ಕಲ್ಲೋಳ' ನಾಟಕದಲ್ಲಿಯ 'ಜಲಸಾ' ಕಾರ್ಯಕ್ರಮವನ್ನು ರೂಪಿಸಿದ್ದು ಇನ್ನೂ ನೆನಪಿನಲ್ಲಿ ಹಸಿಯಾಗಿ ಉಳಿದಿದೆ. ಬಿ. ಜಯಮ್ಮ ಹಾಡಿದ, 'ಸಂಶಯವೇಕೆ ಪೇಳು ಮನವೇ' ('ಸಂಶಯ ಕಾ ಮನಿ ಆಲಾ' ಇದು ಮರಾಠಿ ಮೂಲ) ಈಗಲೂ ನೆನಸಿಕೊಂಡರೆ ರೋಮಾಂಚನವಾಗುತ್ತದೆ.

6–7 ವರ್ಷಗಳ ಹಿಂದೆ, ಕನ್ನಡ ಕಲಾಕೇಂದ್ರದ ಪರವಾಗಿ, ಕನ್ನಡ ರಂಗಭೂಮಿಯ ಶ್ರೇಷ್ಠ ರಂಗಗೀತೆ ಹಾಡುವ ಪರಮಶಿವ, ಸುಭದ್ರಾ ಮನ್ಸೂರ ಮತ್ತು ಇನ್ನಿತರ ಕಲಾವಿದರನ್ನು ಆಮಂತ್ರಿಸಿ ಗೋಕುಲ ಕಲಾಭವನದಲ್ಲಿ ಹಾಡಿಸಿದ್ದೂ ಮತ್ತೊಂದು ಮರೆಯಲಾಗದ ಅನುಭವ. ಮಾರನೇ ದಿನವೇ ಮರಾಠಿ ರಂಗಗೀತೆಗಳ ಸಮಾರಾಧನೆ ಮಾಡಿಸಿ, ಮರಾಠಿ ವೃತ್ತಿ ರಂಗಭೂಮಿಯ ಕಲಾವಿದ ಭಾಲಚಂದ್ರ ಪೆಂಢಾರಕರ್ ಅವರನ್ನು ಸನ್ಮಾನಿಸಿದ್ದೂ ಮತ್ತೊಂದು ನೆನಪಿನ ಗಣಿಯ ಅಮೂಲ್ಯ ರತ್ನ.

ಇವೆಲ್ಲವುಗಳನ್ನು ಮೀರಿಸುವ ಕಾರ್ಯಕ್ರಮವೆಂದರೆ, ಕನ್ನಡ ನಾಟಕಗಳ ವೃತ್ತಿರಂಗ ಗೀತೆಗಳದ್ದು. 2009ರ ಏಪ್ರಿಲ್ 25ರಂದು ಮೈಸೂರು ಅಸೋಸಿಯೇಶನ್ನಿನ ಸಭಾಗೃಹದಲ್ಲಿ ನಡೆದ ಆರು ರಂಗಗೀತೆ ಹಾಗೂ ಕೆಲವು ವೃತ್ತಿನಾಟಕಗಳಲ್ಲಿಯ, ಆರು ನಾಟ್ಯದ ಪ್ರಾಸಂಗಿಕ ಅನುಭವಗಳು ಅಪೂರ್ವವಾಗಿದ್ದವು.

ವಿದ್ವಾನ ಪರಮಶಿವ, ಲಕ್ಷ್ಮಣದಾಸ, ಶ್ರೀಮತಿ ಶೋಭಾ ನಾಯುಡು, ಶಾಂತಾಬಾಯಿ, ರಮಾಬಾಯಿ ಹಾಗೂ ಬಳ್ಳಾರಿಯ ಚಿದಾನಂದ ಗವಯಿಗಳ ಪ್ರತ್ಯಕ್ಷ ರಂಗಗೀತೆಗಳ ಹಾಡುಗಾರಿಕೆ ಮತ್ತು ಪ್ರಸಂಗಗಳಿಗೆ ತಕ್ಕಂತೆ ಬೇಕಾದ ನಟನೆ ಇವೆಲ್ಲ ಎಷ್ಟು ರೋಚಕವಾಗಿತ್ತೆಂದರೆ ಇಡೀ ಸಭಾಗೃಹವೇ ಒಂದು ಥರದ ಉನ್ಮಾದಾವಸ್ಥೆಯಲ್ಲಿತ್ತು. ಸಭಾಗೃಹದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯೂ ಈ ರಸಾನ್ವೇಷಣೆಯ ಉದ್ವೇಗದಲ್ಲಿ ಕೊಚ್ಚಿ ಹೋಗಿದ್ದ. ಮಹಾಮನೆಯವರ ನಿವೇದನೆ ಮತ್ತು ಕಪ್ಪಣ್ಣನವರ ಹಾಸ್ಯಚಟಾಕಿಗಳು, ಸ್ವಲ್ಪ ಅತಿರೇಕವೆಂದೆನಿಸಿದವು. ಕುಮಾರ ಗಂಧರ್ವರ ಬಗೆಗಿನ ಮಾತುಗಳು ಅನುಚಿತ ಎನಿಸಿತು. ಇದರ ಬದಲಾಗಿ ಒಂದೆರಡು ರಂಗಗೀತೆಗಳನ್ನು ಹಾಡಬಹುದಾಗಿತ್ತೇನೋ ಎಂಬ ಅನಿಸಿಕೆ ಸಹಜವಾಗಿ ತೋಚಿದ್ದು. ಚೌಗುಲೆಯವರ ಹತ್ತು ಹನ್ನೆರಡು ನಿಮಿಷದ, 'ಕನ್ನಡ–ಮರಾಠಿ ನಾಟ್ಯಸಂಬಂಧ', ಖ್ಯಾತ ಹರಿಕಥೆಕಾರರಾದ ಗುರುರಾಜಲು ನಾಯಡು ಅವರ ಮಗಳು ಶೋಭಾ ಹಾಡಿದ, 'ಸಖಿ, ಏನೋ ಸಂತೊಷವಾಗಿದೆ' ಎಂಬ ಹಾಡಿನಿಂದ ಪ್ರಾರಂಭವಾದ ಈ ರಂಗಗೀತೆಗಳ ಕಾರ್ಯಕ್ರಮ ಉತ್ತರೋತ್ತರವಾಗಿ ಮಿಂಚಿನ ನಡೆಯಿಂದ ಸರಿದು ಕೊನೆಗೆ, ಮತ್ತೊಮ್ಮೆ ಪರಮಶಿವ ಅವರ ಮಂಗಳದಿಂದ ಮುಕ್ತಾಯವಾಯಿತು.

ಪ್ರತಿಯೊಂದು ವೃತ್ತಿನಾಟಕ ಪ್ರಾರಂಭವಾಗುವದೇ ತೆರೆಯ ಮರೆಯಿಂದ ಹಾಡುವ ನಾಂದಿಯಿಂದ. ಅದು ಇಲ್ಲದಿದ್ದರೂ ಡಾ. ಮಂಜುನಾಥ ಹಾಡಿದ, 'ಸ್ಮರಣೆ ಸಾಲದೇ' ಪ್ರಾರ್ಥನೆ ಮನತಟ್ಟುವಂತೆ ಇತ್ತು. ಗರುಡ ಸದಾಶಿವರಾಯರ, 'ಪಾಹಿ ಶಾಂತ ಭುವನೇಶ್ವರ' ಅಥವಾ, ಕಲಾವೈಭವದ, 'ನಾಟಕ ನಟಿಸುವ ನಟವರ' (ಜೈಜೈವಂತಿ ರಾಗದಲ್ಲಿನ ನಾಂದಿ), ಇರದಿದ್ದರೂ ಅವುಗಳ ಸ್ಮರಣೆಯನ್ನು ಮಂಜುನಾಥರು ಮಾಡಿಕೊಟ್ಟರು.

ಚಿದಾನಂದ ಗವಯಿ ಕಲಿತದ್ದೇ ಗದುಗಿನ ಪುಟ್ಟರಾಜ ಗವಯಿಗಳ ಸಂಗೀತದ ಗರಡಿಯಲ್ಲಿ! ಇವರದೂ ಕೂಡ ಒಂದು ವೃತ್ತಿ ನಾಟಕ ಸಂಸ್ಥೆ ಇತ್ತು. ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ಆಶ್ರಮದ ಸಲುವಾಗಿ ಹೆಣಗಿದ ಪುಣ್ಯಾತ್ಮರ ಶಿಷ್ಯ ಚಿದಾನಂದ. ಶಿವ ಭಕ್ತ ಮಾರ್ಕಂಡೇಯ ನಾಟಕದಲ್ಲಿಯ ನಾರದ ಹಾಡುವ ಯಮನ ರಾಗದಲ್ಲಿಯ 'ನುಡಿಸುವ ಕರುಣೆ ಘನಶ್ಯಾಮಾ' ಮನತಟ್ಟುವಂತಿತ್ತು. 'ರಕ್ತರಾತ್ರಿ' ನಾಟಕದಲ್ಲಿಯ ಶಕುನಿಯ ಸಂಭಾಷಣೆ ಆವೇಶಪೂರ್ಣವಾಗಿತ್ತು. ಶಕುನಿಯ ಪಾತ್ರಕ್ಕೆ ಉಚಿತವಾದ ಭಂಗಿಯ ಮಾತುಗಳು ಕುತೂಹಲವನ್ನು ಕೆರಳಿಸಿದವು. ಅಂತೆಯೇ ಲಕ್ಷ್ಮಣದಾಸ ಹಾಡಿದ ಸಂಪೂರ್ಣ ರಾಮಾಯಣ ದೊಳಗಿನ, 'ಭೂಸುತೆಯ ನೋಡು' ರಂಗಗೀತೆ ಅದ್ಭುತವಾಗಿತ್ತು. ಮತ್ತೊಮ್ಮೆ ಎರಡೇ ನಿಮಿಷಗಳಲ್ಲಿ ಅವರು ತೋರಿಸಿದ, 'ಯಮಧರ್ಮರಾಜ' ನಾವೆಲ್ಲ ಎಂದಿಗೂ ಕಾಣದ, ಕಾಣಲಾರದ ಯಮನ ವ್ಯಕ್ತಿತ್ವವನ್ನು ಮನಸ್ಸಿನಲ್ಲಿ ನಾಟಿಸಿ ನಿಲ್ಲಿಸಿತ್ತು.

ಶೋಭಾ ನಾಯಡು ಮತ್ತೊಮ್ಮೆ ನಮ್ಮೆದುರಿಗೆ ಬಂದು ತಮ್ಮ ತಂದೆಯವರ ಹರಿಕಥೆಯ ಒಂದು ಮಾದರಿಯನ್ನು ತೋರಿಸಿದರು. ಮೈಕ್ ಇಲ್ಲದ ಕಾಲದಲ್ಲಿ ಪ್ರತಿಯೊಬ್ಬ ನಟ ತಮ್ಮ ಶಾರೀರವನ್ನು ಜೋಪಾನವಾಗಿ ಇಟ್ಟುಕೊಂಡು ವಾಯ್ಸ್ ಕಲ್ಚರ್ ಮಾಡಿಕೊಂಡ ಪ್ರಾತ್ಯಕ್ಷಿಕೆ ಅವರ ಕಾರ್ಯಕ್ರಮದಲ್ಲಿತ್ತು.

ಆರ್. ಪರಮಶಿವ, ಮಂಡ್ಯದ ರಮಾಬಾಯಿ ಮತ್ತು ರಾಯಚೂರಿನ ಶಾಂತಾಬಾಯಿ ಇವರ ಹಾಡಿನಲ್ಲೂ ಹಾಗೂ ಸಂಭಾಷಣೆಯಲ್ಲೂ ಅಭಿನಯ ತುಂಬಿ ತುಳುಕುತ್ತಿತ್ತು. ಪರಮಶಿವರು ಹತ್ತು ನಿಮಿಷದಲ್ಲಿಯೇ ಕರ್ನಾಟಕ ಸಂಗೀತದ, ಲತಾಂಗಿ ರಾಗದಲ್ಲಿ ಕಟ್ಟಿದ, ತಿಲೋತ್ತಮೆ ಹಾಡಿದ, ವೈವಿಧ್ಯಪೂರ್ಣವಾದ ಕಂದ ಪದ್ಯವನ್ನು, 'ಮನದೊಳ್ಳ ರೂಪದ' ಹಾಡನ್ನು ಆವೇಶಪೂರ್ಣವಾಗಿ ಹಾಡಿದರು. ನಿಮಿಷಾರ್ಧದಲ್ಲಿಯೇ, ಪಾಶ್ಚಿಮಾತ್ಯ ಸಂಗೀತದ ಮೂಲತತ್ತ್ವವಿದ್ದ, ಉಲ್ಟಾ-ಫುಲ್ಟಾ(ತಲೆ ಕೆಳಗೆ ಕಾಲು ಮೇಲೆ) ಸೀತಾರಾಮನ ಹಾಡನ್ನೂ ಹಾಡಿದರು. ಮತ್ತೊಂದು ಮರಾಠಿ ತುಕಾರಾಮ ಚಲಚಿತ್ರದಲ್ಲಿಯ, ವಿಷ್ಣುಪಂತ ಪಾಗನೀಸ ಹಾಡಿದ, 'ಆಧಿ ಬೀಜ ಎಕಲೆ, ಬೀಜ ಅಂಕುರಲೇ, ರೋಫ ವಾಢಲೆ' ಈ ಹಾಡಿನ ಕನ್ನಡ ರೂಪಾಂತರವನ್ನು ಪರಿಣಾಮಕಾರಿಯಾಗಿ ಹಾಡಿದರು. ಹಿಂದುಸ್ತಾನಿ ರಾಗ 'ಜೀವನಪುರಿ'ಯಲ್ಲಿ ಕಟ್ಟಿದ, 'ರಾಮಾ ರವಿಚಂದ್ರ ಮಾ' ಬಹುಶಃ ಬಿ ಜಯಮ್ಮ ಹಾಡಿದ ಹಾಡನ್ನು ಬಹಳ ಚೆನ್ನಾಗಿ ಪ್ರಸ್ತುತಿಸಿದರು. ಪರಮಶಿವ ಇವರಿಗೆ ಸಾವಿರಕ್ಕೂ ಹೆಚ್ಚಿನ ಹಾಡುಗಳು ಕಂಠಪಾಠವಾಗಿವೆಯಂತೆ! 78 ವರ್ಷ ವಯಸ್ಸಿನ ಪರಮಶಿವ ನಿಜಕ್ಕೂ ಒಬ್ಬ ಅದ್ಭುತ ವ್ಯಕ್ತಿ. ವಿನಾಶದೆಡೆ, ಹೆಜ್ಜೆ ಹಾಕುತ್ತಿದ್ದ ಈ ರಂಗಗೀತೆಗಳ ಖಜಾಂಚಿ ಅವರು. ಯಾರಾದರೂ ಪುಣ್ಯಾತ್ಮರು ಅವರ ಹಾಡುಗಳನ್ನು ಮುಂದಿನ ಪೀಳಿಗೆಗಾಗಿ ಧ್ವನಿಮುದ್ರಣ ಮಾಡಿ ಇಡಬಹುದಾಗಿತ್ತಲ್ಲ ಎಂದೆನಿಸಿತು.

ಇನ್ನೂ ರಮಾಬಾಯಿಯವರ ಬಗ್ಗೆ ಬರೆಯಲು ಶಕ್ತಿ ಸಾಲುತ್ತಿಲ್ಲ. ಅವರು ವೇದಿಕೆಯ ಮೇಲೆ ಹಾಡುತ್ತ, 'ನೋಡಿದೆನಾ ರಾಮನಾ' ಈ 'ಮಾಲಕೌಂಸ' ರಾಗದಲ್ಲಿ ಹಾಡಿದ ಹಾಡು ಅಮೋಘವಾಗಿತ್ತು. ಅವರ ಅಭಿನಯ, ಕುಣಿತ ವೇದಿಕೆಯ ಮೇಲೆ

ನಡೆದಾಡುವ ಭಂಗಿ ಇವೆಲ್ಲ ಆಂಜನೇಯನನ್ನು ಕಣ್ಣಿನ ಮುಂದೆ ಕಟ್ಟಿದಂತೆ ಇತ್ತು. ಅಬ್ಬಾ, ಅದೆಂತಹ ಎನರ್ಜಿ! ಶಾಂತಾಬಾಯಿ, ಭಕ್ತ ಅಂಬರೀಷದಲ್ಲಿಯ, 'ಲೋಕ ಸುಖಾ ವ್ಯಾಕುಲ ಜೀವಾ' ಭಕ್ತಿಗೀತೆಯ ಒಂದು ಅತ್ಯುತ್ತಮ ಉದಾಹರಣೆಯಾಗಿದ್ದರೆ, ಹವ್ಯಾಸಿ ತಂಡದ ಮಿಶ್ರ ಶಿವರಂಜನಿ ರಾಗದಲ್ಲಿಯ ಜೋಗಿತಿ ಹಾಡುವ, 'ಇಲ್ಲಿ ಇಲ್ಲದ ಬಯಕೆ, ಹುಟ್ಟಿ ಬಂದೆ ಎಲ್ಲಮ್ಮಾ ನಿನ್ನ ಲಗ್ನಾ ಮಾಡಿ ಕೊಟ್ಟಾರಮ್ಮ ಜಮದಗ್ನಿಗ' ಕರುಣ ರಸದಲ್ಲಿ ತುಂಬಿ ತುಳುಕುತ್ತಿತ್ತು. ಶಾಂತಾ ರಾಯಚೂರ್ ಅವರಿಗೆ ಕಂದ ಪದ್ಯಕ್ಕೆ, ಹಿಮ್ಮೇಳ ಚಿದಾನಂದ ಗವಯಿಗಳು ಕೊಟ್ಟದ್ದು ಅವಿಸ್ಮರಣೀಯ.

ಡಾ. ಮಂಜುನಾಥ ಅವರ ಭಾವಪೂರ್ಣ ಮಾತುಗಳು ಪ್ರತಿಯೊಬ್ಬ ವೇದಿಕೆಯಲ್ಲಿದ್ದ ಚಿರತರುಣ ಕಲಾವಿದರನ್ನು ಉದ್ದೇಶಿಸಿ ನೀಡಿದ ಅರ್ಪಣೆ ಕೂಡ ಅಷ್ಟೆ ನಾವಿನ್ಯಪೂರ್ಣವಾಗಿತ್ತು.

ತಬಲಾ ನುಡಿಸಿದ ಶಿವಶಂಕರ, ಕ್ಲಾರಿಯನೆಟ್ ಮೇಲೆ ಲೋಕೇಶ ಕುಮಾರ, ಕ್ಯಾಸಿಯೋ ನಾಗೇಂದ್ರ ಪ್ರಸಾದ ಮತ್ತು ಎಲ್ಲರಿಗೂ ಎರಡು ತಾಸು ಹಾರ್ಮೋನಿಯಮ್ ನುಡಿಸಿದ ಪರಮಶಿವ ಇವರೆಲ್ಲರೂ ವೃತ್ತಿರಂಗಭೂಮಿಗೂ, 'ಟೀಮ ವರ್ಕ್' ಬೇಕೇ ಬೇಕಿತ್ತು ಎಂಬ ಮಾತನ್ನು ತೋರಿಸಿ ಈ 'ಬಣ್ಣದ ಬದುಕಿನ ಚಿನ್ನದ ದಿನಗಳ' ನೆನಪು ಮರೆಯದಂತೆ ತೋರಿಸಿದರು.

*****

2.2

ಮರಾಠಿ ನಾಟ್ಯ ಸಂಸ್ಕೃತಿ ಸೌಭದ್ರದವರೆಗೆ (1885)

19ನೆಯ ಶತಮಾನದಲ್ಲಿ ಹೊಸದಾಗಿ ಇಂಗ್ಲಿಷ್ ಕಲಿತ ಎರಡನೇ ಅಥವಾ ಮೂರನೇ ತಲೆಮಾರಿನ ಜನಸಾಮಾನ್ಯರು, 'ಮಹಾಜನ'ರಾಗಿದ್ದು, ಅವರದೇ ಪ್ರಭಾವ ವಿಶೇಷವಾಗಿ ಬಂಗಾಲ, ಮಹಾರಾಷ್ಟ್ರ, ಕರ್ನಾಟಕಗಳ ಸಾಂಸ್ಕೃತಿಕ ಆಗುಹೋಗುಗಳಲ್ಲಿ ಕಾಣಿಸುತ್ತದೆ. ಈ ಸಾಹಿತ್ಯ ಪ್ರಕಾರಗಳಲ್ಲಿಯ ನಾಟಕಗಳು ಕೂಡ ಇದಕ್ಕೆ ಹೊರತಲ್ಲ. ಶೇಕ್ಸಪಿಯರನ ನಾಟಕಗಳ ಪ್ರಭಾವ, ಇಲ್ಲಿಯ ಅಸಲ್ ಭಾರತೀಯ ನಾಟಕಗಳಾಗಿದ್ದ 'ಶಾಕುಂತಲ' ಅಥವಾ ಭಾಸನ ನಾಟಕಗಳಿಗಿಂತ ಹೆಚ್ಚಾಗಿತ್ತು. ಕಾರಣ ಇಷ್ಟೆ ಇಂಗ್ಲಿಷ್ ಭಾಷೆಯ ಮಹತ್ವ ಹೆಚ್ಚಿದಂತೆ ಹೊಸ, 'ಮಹಾಜನರು' ಎಂಬ ಜಾತಿ ಹುಟ್ಟಿಕೊಂಡು ಹೊಟ್ಟೆಬಟ್ಟೆಗಾಗಿ ಮುಂಬಯಿ, ಪುಣೆ ಶಹರಗಳಲ್ಲಿ ನೆಲೆಸಿದರಷ್ಟೇ ಅಲ್ಲ, ಅಲ್ಲಿಯೇ ತಮ್ಮ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣೀಭೂತರಾದರು. ಕರ್ನಾಟಕಕ್ಕೆ , 'ಗಂಡಭೇರುಂಡ'ದಂತೆಯೇ ಮಹಾರಾಜರ ಅಕ್ಕರೆಯ ಮೈಸೂರು ಮತ್ತು ಉತ್ತರ ಕರ್ನಾಟಕದ ನಾಲ್ಕೂ ಜಿಲ್ಲೆಗಳಲ್ಲಿಯೂ, ಮದ್ರಾಸು, ನಿಜಾಮನ ಸರಕಾರದಲ್ಲಿ ಕೂಡ ಕನ್ನಡಿಗರು ಹಂಚಿ ಹೋಗಿದ್ದರೂ ಈ ಪಕ್ಷಿಯ ಎರಡೂ ಮುಖಗಳು ಸರಿಯಾಗಿ ಆ ಕಾಲದಲ್ಲಿ ಕಾಣಿಸುತ್ತಿದ್ದವು! ಮಹಾರಾಜರ ಆಸ್ಥಾನದಲ್ಲಿ ಇಂಗ್ಲೀಷು ಬಲ್ಲವರಾದ ಮಹಾಜನರ ಪ್ರಾಬಲ್ಯ ನಾಟ್ಯ ಸಂಸ್ಕೃತಿಯ ಮೇಲೆ ಚೆನ್ನಾದ ಹೊದಿಕೆ ಹಾಕಿದ್ದರಿಂದ ಶೇಕ್ಸಪಿಯರನ ನಾಟಕಗಳ ಭಾಷಾಂತರ 19 ಮತ್ತು 20ನೇ ಶತಮಾನದ ಆದಿಯಲ್ಲಿ ಆದದ್ದು ಕನ್ನಡ ಭಾಷೆಯ ಅಭ್ಯಾಸಕರಿಗೆ ಚೆನ್ನಾಗಿ ಗೊತ್ತು. ನನಗೆ ಅತ್ಯಂತ ಆಶ್ಚರ್ಯವೆನಿಸುವದು, ಈ ಇಂಗ್ಲೀಷು ಭಾಷೆಯ ಒಟ್ಟು ಪರಿಣಾಮ ಕನ್ನಡ, ಬಂಗಾಲಿ, ಮರಾಠಿ ಭಾಷೆಗಳ ನಾಟ್ಯ ಸಂಸ್ಕೃತಿಯ ಮೇಲೆ ಏಕಕಾಲಕ್ಕೆ ಸಮಾನ ರೂಪದಿಂದ ಆಗಿದ್ದು ಅಥವಾ ಅನುಭವಿಸಿದ್ದು. ಇಂಗ್ಲಿಷು ಭಾಷೆಯಿಂದಲೇ ನಮ್ಮ 'ಮಹಾಜನರಿಗೆ' 'ಗೋರಾ ಸಾಹೇಬರ' ಕ್ರಿಕೆಟ್, ನಾಟಕ, ಆಪೇರಾ, ಇಂಗ್ಲಿಷ್ ಕಾವ್ಯವಾಚನ ಮುಂತಾದ ಹೊಸ ವಿಚಾರಗಳ ಪರಿಚಯವಾಯಿತು. ಆಗಿನ ಕಾಲದ ರಂಗ ಸಂಗತಿ ಕೂಡ ಆಳುವವರ ಪ್ರತಿಭೆಗೆ ಇಲ್ಲಿಯವರು ಕೊಟ್ಟ, 'ಸಲಾಂ' ಆಗಿತ್ತು. ಕಲಕತ್ತಾ ಪಟ್ಟಣವು ಬಿಹಾರ, ಉತ್ತರಪ್ರದೇಶದ ಜಮೀನುದಾರರ ವಂಶದ, ಇಂಗ್ಲಿಷು ಕಲಿತ 'ಮಹಾಜನ'ರು ವಲಸೆ ಹೋಗುವ ಶಹರವಾದರೆ, ಮುಂಬಯಿ, ಕಡಲತೀರದಲ್ಲಿ ಇದ್ದುದರಿಂದ ಅದು ಸಿಂಧ, ಕೊಂಕಣ, ಗೋವಾ, ಕೇರಳದ ತನಕ ಹಬ್ಬಿದ್ದ ಕೊಂಕಣ ಪಟ್ಟಿಯಲ್ಲಿ ನೆಲೆಸಿದವರ ತವರೂರಾಯಿತು! ಇಂಗ್ಲೀಷು ಜನ ತಮ್ಮ ನಾಟಕಗಳನ್ನು ಹವ್ಯಾಸಿ ಪ್ರಯೋಗವೆಂದು (amature) ಇಲ್ಲಿ ಆಡಿದರೇ, ನಮ್ಮ ಮಹಾಜನರು ಅವುಗಳನ್ನೇ ಭಾಷಾಂತರಿಸಿ ರಾಜಮಹಾರಾಜರ ಓಲಗಗಳಲ್ಲಿ ನಾಟಕಗಳನ್ನು ಆಡಲು ಪ್ರಾರಂಭಿಸಿದರು. "ಭಾಸೋ

ಹಾಸ: ಕವಿ ಕುಲಗುರು ಕಾಲಿದಾಸೋ ವಿಲಾಸ" ಎಂಬುದು ಕೇವಲ ಪುಸ್ತಕಗಳಲ್ಲಿಯೇ ಬಂಧಿತವಾಗಿತ್ತು.

ವಿಕ್ಟೋರಿಯಾ ಮಹಾರಾಣಿಯವರ ಕಾಲದಲ್ಲಿ ಹಿಂದುಸ್ತಾನದಲ್ಲಿ ಸ್ತ್ರಿ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರು. ಆಶ್ಚರ್ಯದ ಮಾತೆಂದರೆ ಮರಾಠಿ ನಾಟಕಗಳಲ್ಲಿ, ಕಲಾವಂತಿಣಿಯರು ಸ್ತ್ರೀಪಾತ್ರ ವಹಿಸುತ್ತಿದ್ದ ದಾಖಲೆ ಇದೆ. ಪೇಶ್ವೆ ಕಾಲದಲ್ಲಿ ರಘುನಾಥ ಮತ್ತು ಎರಡನೇ ಬಾಜೀರಾವ ಇವರು ವಿಲಾಸಿ ಪ್ರವೃತ್ತಿಯವರಾಗಿದ್ದು ಅಯೋಧ್ಯೆಯ ವಾಜಿದ್ ಅಲಿಯಂತೆ ನಾಟಕ ಮತ್ತು ಲಾವಣಿಯ ಶೌಕೀನರಾಗಿದ್ದರು. ಕ್ರಿ.ಶ. 1800 ರಿಂದ 1820ರ ತನಕ ಅಂದಿನ ನಾಟಕ ಮಂಡಳಿಗಳಲ್ಲಿ ಗೋವಾ ಪ್ರಾಂತದ ಸಾನಿಯರು ಸ್ತ್ರೀ ಪಾತ್ರಗಳನ್ನು ವಹಿಸಿದ್ದು ವಿಶೇಷ! ಕಲೆಯ ಆಶ್ರಯ ಮತ್ತು ದ್ರವ್ಯಲಾಭಕ್ಕಾಗಿ ಮುಂಬಯಿಗೆ ಬಂದ ಈ ಕಲಾವತಿಯರಿಗೆ 'ನಾಟಕ' ಎಂಬುದು ಹೊಸದಾದರೂ ಅದರಲ್ಲಿ ಸ್ತ್ರೀ ಪಾತ್ರಗಳನ್ನು ಅವರು ವಹಿಸಿದ್ದೂ, ಹೆಸರನ್ನು ಗಳಿಸಿದ್ದೂ, ಇಂಗ್ಲಿಷರ ಅನುಕರಣೆ ಮಾಡಿದ್ದೂ ಶ್ಲಾಘನೀಯ.

ಕ್ರಿ.ಶ. 1800ರಲ್ಲಿಯ ನಾಟಕಗಳು ಯಾವ ಪ್ರಕಾರದ್ದು ಇದ್ದಿರಬಹುದೆಂಬ ಕುತೂಹಲ ಮತ್ತು ಕೊರೆಯುವ ಪ್ರಶ್ನೆ ನನ್ನನ್ನು ಕಾಡುತ್ತಿತ್ತು. ಭೈರಪ್ಪನವರ ಸಾರ್ಥ ಓದಿದ ಮೇಲೆ 10 ನೇ ಶತಮಾನದ ಸಂಸ್ಕೃತ 'ಆಟ'ಗಳು ಕಣ್ಮುಂದೆ ಕಟ್ಟಿದವು. ಮುಂದೆ ಲೋಕನಾಟ್ಯ, ದಶಾವತಾರ, (ನಮ್ಮ ಯಕ್ಷಗಾನದಂತೆ, ಲಾವಣಿ, ಬತಾವಣಿ, ಕಲಗೀತುರಾ (ಒಂದು ಪ್ರಕಾರದ ನಾಟಕದ ಸವಾಲ್-ಜವಾಬ್) ಇವು ಕೆಲ ಕಾಲಕ್ಕೆ ಮುಂಬಯಿಯಲ್ಲಿ ಪ್ರದರ್ಶಿತವಾಗುತಿದ್ದವಂತೆ! ರೀಚಿ ಸ್ಟೂವರ್ಟ ಎಂಬ ಆಂಗ್ಲ ಗೃಹಸ್ಥನ ನಾಟಕ ಕಂಪನಿಯಲ್ಲಿ, ಆದಿ ಮರ್ಝ್‌ಬಾನ ಎಂಬ ಪಾರ್ಸಿ ನಾಟಕಕಾರನ ಅಜ್ಜ ಕೆಲಸಕ್ಕೆ ಇದ್ದನಂತೆ. ಈ ಮರ್ಝ್‌ಬಾನ್ ಮಹಾಶಯರು (1914-1987) ಕಪ್ಪು-ಬಿಳುಪು ತೆರೆಯ ದೂರದರ್ಶನ ಕಾಲದಲ್ಲಿ, 'ಆವೋ ಮೇರೆ ಸಾಥೆ' ಎಂಬ ತುಂಬಾ ಜನಪ್ರಿಯವಾದ ಕಾರ್ಯಕ್ರಮ ಮಾಡುತ್ತಿದ್ದರು ಎಂಬ ಮಾತು ನೆನಪಿನಲ್ಲಿ ಇಟ್ಟುಕೊಳ್ಳುವಂತಹುದು. ಇದು ವಿವಿಧ ನಾಟ್ಯ ಮತ್ತು ಜಾದು ಪ್ರಯೋಗಗಳನ್ನು ಅಳವಡಿಸಿಕೊಂಡ ಕಾರ್ಯಕ್ರಮವಾಗಿತ್ತು. ಇಂತಹ ಒಂದೂ ಸೂತ್ರವಿಲ್ಲದ ವಿವಿಧ ಕಾರ್ಯಕ್ರಮಗಳು ಅಂದು ಆಗುತ್ತಿರುವಾಗ ಮರಾಠಿ ನಾಟಕಗಳಿಗೆ ಒಂದು ಸುಸೂತ್ರತೆ ಕೊಟ್ಟ ಶ್ರೇಯಸ್ಸು 'ಘಟ್ಟ' ಏರಿದ ಹೊನ್ನಾವರದ, 'ಹಾಸ್ಯಗಾರ' ಕುಟುಂಬಕ್ಕೆ ಹೋಗುತ್ತದೆ! ಇದೇ ಯಕ್ಷಗಾನ ಬಯಲಾಟ ಮುಂದೆ ಅಂತಹದೇ ವೇಷಭೂಷಣಗಳೊಂದಿಗೆ ಸಾಂಗಲಿ ಆಸ್ಥಾನದಲ್ಲಿ ವಿಷ್ಣುದಾಸ ಭಾವೆಯವರು ಆಖ್ಯಾಯಿಕೆಗಳನ್ನು ಪ್ರಸ್ತುತಿಸಿದ್ದು ಅವುಗಳನ್ನು 1853ರಲ್ಲಿ ಮುಂಬಯಿಯ, 'ಪೀಲಾ ಹೌಸ'ದಲ್ಲಿ (ಪ್ಲೇ ಹೌಸದ ತದ್ಭವ) ಆಡುತ್ತಿದ್ದರು. ತಿಕೇಟು ಹಚ್ಚಿ ಆಟಗಳನ್ನಾಡಲು ಮುಂಬಯಿಯಲ್ಲಿ ಪ್ರಾರಂಭಿಸಿದರು. ಸಾಂಗಲಿ ಮಹಾರಾಜರ ಕೃಪಾಛತ್ರ ಇಲ್ಲದ್ದರಿಂದ ಭಾವೆಯವರಿಗೆ ಈ ನಾಟಕ ಮಂಡಳಿಯನ್ನೂ, ಗೊಂಬೆ ಆಟಗಳನ್ನೂ ನಿಭಾಯಿಸಬೇಕಾಗಿತ್ತು. ಆಗಿನ ಕಾಲದ ಮುಂಬಯಿಯ ಮಹಾಜನರಾದ ಭಾವುದಾಜಿ ಲಾಡ, ಜಗನ್ನಾಥ ಶಂಕರ ಶೇಠ, ಜಮಶೇಡಜಿ ಜೀಜಿಭಾಯ್, ಭಾವೂ ರಸೂಲ್ ಇವರ ಕೃಪಾದೃಷ್ಟಿ ಭಾವೆಯವರ ಮೇಲಾಯಿತು! ನಾನು ಇರುವ ಮುಂಬಯಿ ಭಾಗದಲ್ಲಿಯೇ ನಾವೆಲ್ಟಿ ಸಿನೇಮಾ

ಇದ್ದ ಜಾಗದಲ್ಲಿ ಮತ್ತು ಮಿನರ್ವಾ ಥೀಯೇಟರ್ ಇದ್ದಲ್ಲಿ ಈ ನಾಟಕ ಕಂಪನಿಗಳ ಪ್ರಯೋಗಗಳು ಆಗುತ್ತಿದ್ದವು. ಇವೆಲ್ಲ ಕರ್ನಾಟಕದ ಕೊಡುಗೆಗಳು. ಪ್ರಹ್ಲಾದ ಮುದಗಲರವರು ಬರೆದಂತೆ ಶೇಷಗಿರಿರಾವ್ ಚುರಮರಿ ಮತ್ತು ಮರಾಠಿ ನಾಟಕದ ಅಧ್ವರ್ಯು ಅಣ್ಣಾಸಾಹೇಬ ಕಿರ್ಲೋಸ್ಕರ ಇಬ್ಬರು ಗುರ್ಲ ಹೊಸೂರಿನವರಾಗಿದ್ದರು. ಶಾಕುಂತಲ ನಾಟಕವನ್ನು ಚುರಮರಿಯವರು ಮೊದಲು ಕನ್ನಡದಲ್ಲಿ ಬರೆದದ್ದು, ಅಣ್ಣಾಸಾಹೇಬರು ಅದನ್ನು ನಂತರ ಮರಾಠಿಗೆ ಅನುವಾದಿಸಿದರು. ಇದೇ ಸುಮಾರಿಗೆ, ಮೈಸೂರು ಆಸ್ಥಾನದ 'ಬಸವಪ್ಪ ಶಾಸ್ತ್ರಿಗಳು' ನಾಟಕಗಳನ್ನು ಬರೆದದ್ದುದನ್ನು ನಾವು ನೆನಪಿಸಿಕೊಳ್ಳಬಹುದು.

ಇದಕ್ಕಿಂತ ಮೊದಲು ಹಿಂದೆ ಹೇಳಿದಂತೆ ಶೇಕ್ಸಪಿಯರ್ ನಾಟಕಗಳ ದೇಶಿ ಗದ್ಯಪದ್ಯ ರೂಪಾಂತರಗಳು ಆಗುತ್ತಾ ಇತ್ತು. ಈ ನಾಟಕಗಳಿಗೆ ಮರಾಠಿ ಹೆಸರುಗಳನ್ನಿಟ್ಟು, ಭಾವೆಯವರ ಕಂಪನಿ, ಮತ್ತಿತರ 'ಕಂಟ್ರಿ' ನಾಟಕ ಮಂಡಳಿಗಳು ನಾಟಕಗಳನ್ನು ಆಡಲು ಪ್ರಾರಂಭಿಸಿದರು. 1861ರಲ್ಲಿ 70–80 ವರ್ಷಗಳ ಮೊದಲಿನ ಐತಿಹಾಸಿಕ ನಾಟಕ, 'ಥೋರಲೇ ಮಾಧವರಾವ್ ಪೇಶ್ವೆ' ನಾಟಕವನ್ನು ಈಚಲಕರಂಜಿಕರ ನಾಟಕ ಮಂಡಳಿ ಮಹಾರಾಷ್ಟ್ರದಲ್ಲಿ ಪ್ರದರ್ಶನಕ್ಕೆ ತಂದಿತು. ಇದು ಸಂಪೂರ್ಣ ಗದ್ಯ ನಾಟಕವಾಗಿದ್ದು ಒಂದೂ ಹಾಡಿಲ್ಲದ ನಾಟಕ. ಪುಣೆಯ ಆಗಿನ ಕಾಲದ 'ಚಿತ್ರ-ಚಕ್ಷು-ಚಮತ್ಕಾರಿಕ' ನಾಟಕ ಮಂಡಳಿಯ ಕೊಡುಗೆಯಾಗಿತ್ತು. 'ಸೈರಂಧ್ರಿ' ನಾಟಕ ಕೂಡ ಆಗಿನ ಕಾಲದ ಮತ್ತೊಂದು ಸಂಗೀತ ನಾಟಕ. ಈ ಚಮತ್ಕಾರ ಎಂಬ ಹೆಸರಿನ ಮಂಡಳಿ ಮುಂಬಯಿಯಲ್ಲಿ ಸೂಪರ್ ಸಿನೇಮಾ (ಗ್ರಾಂಟ್ ರೋಡ್) ಪಕ್ಕದ ಬಾದಶಹ ಥೀಯೇಟರಿನಲ್ಲಿ ಆಡುತ್ತಿದ್ದರು. ಇದರ ಜೊತೆಗೆ ಮತ್ತೊಂದು ಐತಿಹಾಸಿಕ ಪ್ರಹಸನ, 'ನಾರಾಯಣ ಪೇಶವೆ ಖೂನಾಚಾ ಫಾರ್ಸ್', 'ಬಾಸುಂದಿಚಾ ಫಾರ್ಸ್' ಇತ್ಯಾದಿ ನಾಟಕಗಳನ್ನು ಪ್ರದರ್ಶಿಸಿದರು. ಫಾರ್ಸ್ ಈ ಪ್ರಕಾರ ಆ ಕಾಲದಲ್ಲಿಯೂ ಇತ್ತು ಎಂಬುದಕ್ಕೆ ಇದು ಸಾಕ್ಷಿ.

ಶೇಕ್ಸಪಿಯರನ 'ಒಥೆಲ್ಲೋ', ನಾಟಕ ಬಳಿಕ, 'ಝುಂಜಾರ ರಾವ' ಎಂದು ಖ್ಯಾತಿ ಪಡೆಯಿತು. 'ಕಿಂಗ ಲಿಯರ್' ನಾಟಕದ ಕನ್ನಡ ಅನುವಾದ, 'ಅತಿಪೀಡ ಚರಿತ' ನಾಟಕವನ್ನು ರಂಗಭೂಮಿಯ ಮೇಲೆ ಪ್ರದರ್ಶಿಸಲಾಯಿತು. 1857ರಲ್ಲಿ ಪುಣೆಯ ಒಂದು ನಾಟಕ ಮಂಡಳಿಯು ಉತ್ತರದ ಪ್ರವಾಸಕ್ಕೆ ಹೋಗಿದ್ದ ಟಿಪ್ಪಣಿ, 'ಗೋಡಸೆ ಭಟ್ಟರ ಪ್ರವಾಸ' ಕಥನದಲ್ಲಿ ಓದಲು ಸಿಗುತ್ತದೆ. ಝಾಂಸೀ ಲಕ್ಷ್ಮೀಬಾಯಿಯ ಅಪ್ಪಣೆಯ ಮೇರೆಗೆ ಈ ಕಂಪನಿ 1857ರ ಜನವರಿಯಲ್ಲಿ ಒಂದು ತಿಂಗಳ ಕಾಲ ಗ್ವಾಲಿಯರ್ ಮತ್ತು ಝಾಂಸಿಯ ಆಶ್ರಯದಲ್ಲಿತ್ತು.

ಮುಂಬಯಿಯಲ್ಲಿಯ ಆ ಕಾಲದ ಉರ್ದು ನಾಟಕಗಳ ಪ್ರಭಾವ ಕೂಡ ಮರಾಠಿ ನಾಟಕಗಳ ಮೇಲಾಯಿತು. ಆಗಿನ ಕಾಲದ ಸಿನೇಮಾ ನಟ ಸೋಹರಾಬ ಮೋದಿ ಮತ್ತು ಪೃಥ್ವಿರಾಜ ಕಪೂರ್ ಇವರುಗಳು ಸಹ ತಮ್ಮ ತಮ್ಮ ನಾಟಕ ಕಂಪನಿಯನ್ನು ತೆರೆದಿದ್ದರು. ಕೊನೆಗೆ ಆಪೇರಾ ಹೌಸ್ ಮುಂದೆ 1955ರಲ್ಲಿ ನಾಟಕ ಕಂಪನಿ ನಡೆಸಲು ಗೇಟ್ ಕಲೆಕ್ಷನ್ ಸಲುವಾಗಿ, 'ಭವತಿ ಭಿಕ್ಷಾಂ ದೇಹೀ–ದದಾತು' ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದರೆಂದು ನನ್ನ ಮಾವ ಹೇಳುತ್ತಿದ್ದರು. ಸೋಹರಾಬ

ಮೋದಿಯವರ ಬಾಜಿರಾವ್-ಮಸ್ತಾನಿ (ಮೂಲ ಮರಾಠಿ: ನಾರಾಯಣ ಬಾಪೂಜಿ ಕಾನಿಟಕರ್) ತುಂಬ ಲೋಕಪ್ರಿಯವಾಗಿದ್ದರೆ, ಕಪೂರರ 'ದೀವಾರ್' ಅಷ್ಟೇ ಜನಪ್ರಿಯವಾಗಿತ್ತಂತೆ. ಈ ಉರ್ದು ನಾಟಕಗಳು ಹೆಚ್ಚಾಗಿ ಈಗಿನ ಕ್ಯಾಪಿಟಲ್ ಥಿಯೇಟರ್‌ನಲ್ಲಿ ಪ್ರದರ್ಶಿಸಲ್ಪಡುತ್ತಿದ್ದವು.

ಹಿಂದುಸ್ತಾನಿ ಸಂಗೀತವನ್ನು ದಕ್ಷಿಣಕ್ಕೆ ತಂದ ಭಗೀರಥ ಬಾಲಕೃಷ್ಣಬುವಾ ಇಚಲಕರಂಜಿಕರರ ಬಗ್ಗೆ ಸಾಕಷ್ಟು ಬರೆದಿದ್ದೇನೆ. ಅವರೂ ಕೂಡ ದೊಡ್ಡ ಮೀಸೆ ಹೊತ್ತು ಮರಾಠಿಯಲ್ಲಿ, 'ಇಂದ್ರಸಭಾ' ನಾಟಕದಲ್ಲಿ ಕೆಲಸ ಮಾಡುತ್ತಿದ್ದರು! ಇವರ ದೃಶ್ಯ, ರಂಗಭೂಮಿ ಎಲ್ಲ ಉರ್ದು ನಾಟಕಗಳಂತೆ ಇದ್ದು ಇವೆಲ್ಲ ಕಣ್ಣಿಗೆ ಅದ್ಭುತವಾಗಿ ಕಾಣಿಸುವಂತೆ, 'ಚಿತ್ತ ಚಕ್ಷು ವೇಧಕ'ವಾಗಿದ್ದವು. ಹಾಗೆಯೇ ಫಾರಸೀ ನಾಟಕಗಳು, ತ್ರೀಲೋಕೇತರ ಸೋಕರ ಬಾಪೂಜಿ ಅವರ ಮರಾಠಿ, 'ನಳ ದಮಯಂತಿ' ಇವೆಲ್ಲ ಆ ಕಾಲದ ಗದ್ಯ ಪದ್ಯಾತ್ಮಕ ನಾಟಕಗಳು. ಸಂಗೀತ ನಾಟಕಗಳ ಶಬ್ದ ಪ್ರಯೋಗಳಾದ 'ಸಾರ್ಥ, ನಾಟ್ಯ ಸಂಗೀತ, ರಂಗ ಸಂಗೀತ," ಈವೆಲ್ಲ ಅಣ್ಣಾ ಕಿರ್ಲೋಸ್ಕರರ ನಾಟಕ ಮಂಡಳಿಯ ಕೊಡುಗೆ ಆಗಿವೆ". ಅವರ ಶಾಕುಂತಲ ಮತ್ತು ಸೌಭದ್ರ (1885) ಪ್ರಯೋಗವನ್ನು ಈಗಲೂ ಕೂಡ ಎಡಿಟ್ ಮಾಡಿದ ರೂಪದಲ್ಲಿ ನಾವು ನೋಡಬಹುದು. ಈ ಸೌಭದ್ರದ ಮೂರನೆಯ ಅಂಕದಲ್ಲಿ ರುಕ್ಮಿಣಿ ಕೃಷ್ಣರ ವೈಶಂಪಾಯನದ ಪ್ರೇಮ ಪ್ರಸಂಗ, ಕಿರ್ಲೋಸ್ಕರರು ಅತ್ಯಂತ ಸುಂದರವಾಗಿ Romantic ಆಗಿ ಬರೆದಿದ್ದು ಅದರಲ್ಲಿಯ ಒಂದು ಹಾಡು, "ಪ್ರಿಯೇ ಪಹಾ, ರಾತ್ರೀಚಾ ಸಮಯ ಸರುನಿ ಯೇತ ಉಷಃ ಕಾಲಹಾ" (ಪ್ರಿಯೆ, ರಾತ್ರಿಯ ಸಮಯ ಜಾರಿ ಉಷ:ಕಾಲ ಸಮೀಪಿಸಿದೆ ನೋಡು) ಈ ಹಾಡು ಭೋಟಾ ಗಂಧರ್ವ ಹಾಡಿದ್ದು ಕೇಳಲು ನಾನು 7-8 ಬಾರಿ ಈ ನಾಟಕ ನೋಡಿದ್ದೇನೆ. ಖ್ಯಾತ ಹಾಡುಗಾರ ರಾಮ ಮರಾಠೆಯವರು ಈ ಪಾತ್ರ ಮಾಡುತ್ತಿದ್ದರು. ಅದನ್ನು ನಾನು ಏಕ ಚಿತ್ತದಿಂದ ವೀಕ್ಷಿಸಿದ್ದೇನೆ. ಆದರೆ ಗಮ್ಮತ್ತಿನ ಮಾತೆಂದರೆ, ಇದೇ ನಾಟಕದ ಇದೇ ಹಾಡು ಕನ್ನಡ ನಾಟಕ, 'ಚಂದ್ರಹಾಸ'ದಲ್ಲಿ ಇದೆ. (ಇದರಲ್ಲಿ ಮನ್ಸೂರ ಬಂಧುಗಳಾದ ಬಸವರಾಜ ಮತ್ತು ಮಲ್ಲಿಕಾರ್ಜುನರು ಪಾತ್ರ ವಹಿಸಿದ್ದರು) ಇದೇ ನಾಟಕದ ಕೊಂಕಣಿ ಅನುವಾದ, ಬೋಳಂತೂರ ಕೃಷ್ಣ ಪ್ರಭು ಮಾಡಿದ್ದು, ರಾಗ 'ಮೋಹನಮ್', ತಾಲ ದಾದರೊ, ಅಸ್ಸಲ್ ಕೊಂಕಣಿ ಹಾಡು, ಎಲ್ಲ ಕೊಂಕಣಿ-ಕನ್ನಡಿಗರಿಗೆ ಅಭಿಮಾನ ಖುಷಿ ತರುವಂತಹುದು. ಈ ಕೊಂಕಣಿ ಹಾಡು ಮರಾಠಿ ಸೌಭದ್ರದಲ್ಲಿ ಹೇಗೆ ಬಂತು ಎಂಬುದು ಒಂದು ಯಕ್ಷ ಪ್ರಶ್ನೆ. ಸಂಶೋಧಕರಿಗೆ ಬಿಟ್ಟುಕೊಟ್ಟದ್ದು.

ಅಣ್ಣಾಸಾಹೇಬ ಕಿರ್ಲೋಸ್ಕರರು ಗುಣಗ್ರಾಹಕರು. ಒಳ್ಳೆಯ ಸಂಗ್ರಾಹಕರು. ಪ್ರಹ್ಲಾದ ಮುದಗಲ್ ಅವರು ಹೇಳುವಂತೆ ಉಭಯಭಾಷಾವಿಶಾರದರು. ಕನ್ನಡದಲ್ಲಿಯೂ ಅವರು ಒಂದು ಪ್ರಹಸನ ಬರೆದಿದ್ದರಂತೆ. ಕೀರ್ತನಕಾರ ಪರಂಪರೆಯವರಾಗಿದ್ದರಿಂದ ಅವರು ಲಾವಣಿ, ದಿಂಡಿ ಮತ್ತು ಉರ್ದು ಠುಮ್ರಿಯ ಹಾಡುಗಳನ್ನು ತಮ್ಮ ನಾಟಕಗಳಲ್ಲಿ ಮೂಡಿಸಿದ್ದು, ಮರಾಠಿಯಲ್ಲಿ ಮುಂದೆ, 'ಗಂಧರ್ವ' ಪರಂಪರೆಗೆ ಕಾರಣೀಭೂತವಾಯಿತು.

*****

2.3

ಗುಜರಾತಿ ರಂಗಭೂಮಿಯ ಮಾಸ್ಟರ್ ಅಶ್ರಫ್‌ಖಾನ್ (1880 –1961)

1961 ರಲ್ಲಿ ವಿಧಿವಶರಾದ ಅಶ್ರಫ ಖಾನ್‌ರು, ಇನಾಯತ್ ಖಾನ್ ಪಠಾಣರಂತೆಯೇ ಕೊನೆಕೊನೆಗೆ ಆಧ್ಯಾತ್ಮದೆಡೆಗೆ ಹೆಜ್ಜೆಹಾಕಿ ಸೂಫಿ ಸಂತರಂತೆ ಫಕೀರರಾಗಿದ್ದರು. ಅನೇಕ ಗುಜರಾತಿ ನಾಟಕಗಳಲ್ಲಿ ನಾಯಕನ ಪಾತ್ರ ವಹಿಸಿ, ಗುಜರಾತಿ ಸಿನೆಮಾದಲ್ಲಿ ಕೂಡ 1940ರತನಕ ನಟಿಸುತ್ತಿದ್ದರು.

ಹುಟ್ಟಿದ ಊರು ಇಂದೂರ್. ಬಾಲ್ಯಾವಸ್ಥೆಯಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡ ಈ ಅನಾಥ ಬಾಲಕನನ್ನು, ಸಲಹಿದ್ದು ಅವರ ತಂದೆಯ ಹಿಂದು ಮಿತ್ರ ಬಾಬುರಾವ್. ಒಳ್ಳೆಯ ಶಾರೀರ ಪಡೆದ ಅಶ್ರಫ್ ಚಿಕ್ಕಂದಿನಲ್ಲಿಯೇ ಗುಜರಾತಿ ನಾಟಕ ಕಂಪನಿ ಸೇರಿಕೊಂಡ. ಉರ್ದು, ಫಾರ್ಸಿ, ಮತ್ತು ಗುಜರಾತಿ ನಾಟಕಗಳಲ್ಲಿ ನಟಿಸಿದ. ಮಾತೃಭಾಷೆ ಪುಶ್ತು, ಉರ್ದು ಆದರೆ ಗುಜರಾತಿಯನ್ನು ಕೂಡ ಅಷ್ಟೇ ಚೆನ್ನಾಗಿ ಬಲ್ಲ ಅಶ್ರಫ್ ಗುಜರಾತಿ ನಾಟಕಗಳಲ್ಲಿಯೇ ಹೆಸರು ಮಾಡಿದ. ಹಿಮ್ಮತ ಮೀರ್ ಅವರ ಸಹಾಯದಿಂದ ರಂಗಭೂಮಿಯನ್ನು 1894ರಲ್ಲಿ ಪ್ರವೇಶಿಸಿದ ಅಶ್ರಫ್‌ಖಾನ್‌ರು ಪೌರಾಣಿಕ ನಾಟಕಗಳಲ್ಲಿ ಪುರುಷ ಪಾತ್ರಗಳಲ್ಲಿಯೇ ಅಂದರೆ ನಾಯಕನ ಪಾತ್ರದಲ್ಲಿಯೇ ಉದಾಹರಣೆಗೆ 'ಪೃಥ್ವಿರಾಜ್', 'ಸಿರಾಜ್‌ಉದ್ದೌಲಾ', 'ಸಮುದ್ರಗುಪ್ತ' ಇತ್ಯಾದಿ ಪಾತ್ರಗಳಲ್ಲಿ ಹೆಸರು ಮಾಡಿದರು. ಹಾಡುಗಾರಿಕೆಯಲ್ಲೂ ಒಳ್ಳೆಯ ಪ್ರತಿಭೆ ಇದ್ದುದರಿಂದ ಇವರ ನಾಟಕಗಳಿಗೆ ಒಳ್ಳೆಯ ಹಣ ಸಿಗುತ್ತಿತ್ತು. 'ಕಲಂಕಿತ ಕೋಣ', 'ಸಂಸಾರಸಾಗರ' ಇಂತಹ ಕೆಲ ಸಾಮಾಜಿಕ ನಾಟಕಗಳು ಜನಪ್ರಿಯವಾದವು. ಇವುಗಳಲ್ಲಿಯ ಹಲವು ನಾಟಕದ ಹಾಡಿನ ಮುದ್ರಿತ ತಟ್ಟೆಗಳೂ ಪ್ರಸಿದ್ಧವಾಗಿದ್ದವು. 'ಮಾಲವತಿ ಮುಂಜ' ನಾಟಕದಲ್ಲಿಯ ಮುಂಜನ ಪಾತ್ರ ಅವರಿಗೆ ಬಹಳ ಕೀರ್ತಿಯನ್ನು ತಂದಿತು. ಆ ಕಾಲದಲ್ಲಿಯೇ ಈ ನಾಟಕದ 2500 ಪ್ರಯೋಗಗಳಾಗಿದ್ದವು. ಇದನ್ನೇ ಮುಂದೆ ಸೊಹರಾಬ ಮೋದಿಯವರು ಹಿಂದಿ ಮತ್ತು ಗುಜರಾತಿಯಲ್ಲಿ 'ಪೃಥ್ವಿ ವಲ್ಲಭ' ಎಂಬ ಸಿನೆಮಾ ಮಾಡಿದರು. ಅದರಲ್ಲಿ ದುರ್ಗಾ ಖೋಟೆ, ಸೊಹರಾಬ ಮೋದಿ ಮತ್ತು ಪೃಥ್ವಿರಾಜ ಕಪೂರ್ ಇವರು ಪಾತ್ರವಹಿಸಿದ್ದರು.

1960ರಲ್ಲಿ ರಾಷ್ಟ್ರಪತಿಯವರಿಂದ ಇವರಿಗೆ ಸತ್ಕಾರ ಮುಂಬಯಿಯಲ್ಲಿ ನಡೆಯಿತು. ಮಾರನೇ ವರ್ಷವೇ ಇವರು ತೀರಿಕೊಂಡರು. 'ಸೂಫಿ ಸಂತ'ರೆಂದು ಸಾಯುವ ಮೊದಲು ಪ್ರಸಿದ್ಧಿ ಪಡೆದಿದ್ದರಿಂದ ಇವರ 'ಕಬರ್' ಇದ್ದಲ್ಲಿ, ಅಂದರೆ, ಮುಂಬಯಿ-ಅಹಮದಾಬಾದ ಮುಖ್ಯಮಾರ್ಗದಲ್ಲಿ ದಾಲಲಿಮಡಿ ಎಂಬ ಊರಲ್ಲಿ ಪ್ರತಿ ವರ್ಷ ಉರುಸನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಹರಕೆ ಪೂರೈಸಲು ಇಲ್ಲಿ ಹಿಂದು-ಮುಸ್ಲಿಮ್ ಜನ ಧರ್ಮಗಳ ಭೇದಭಾವವಿಲ್ಲದೇ ಆಶೀರ್ವಾದ ಪಡೆಯಲು ಕಿಕ್ಕಿರಿದು ಬರುತ್ತಾರೆ.

ಹಾಡುಗಾರಿಕೆಯಲ್ಲಿ ಗುಜರಾತಿ ಭಾಷೆಯ ಗಝಲ್‌ಗಳನ್ನು ತಂದ ಶ್ರೇಯ ಅಶ್ರಫ್‌ಖಾನರಿಗೆ ಸಲ್ಲುತ್ತದೆ. ಭಾರತೀಯ ವಿದ್ಯಾಭವನದ ಸಂಸ್ಥಾಪಕರು ಹಾಗೂ ಕೇಂದ್ರದ ಮಂತ್ರಿಗಳೂ ಆಗಿದ್ದ ಕನ್ಹೈಯಾಲಾಲ ಮುನ್ಷಿಯವರ ಅನೇಕ ನಾಟಕಗಳಲ್ಲಿ ಇವರು ಮುಖ್ಯ ಪಾತ್ರ ವಹಿಸುತ್ತಿದ್ದರು. ಇವರ ಶಿಷ್ಯರಲ್ಲಿ ಬಟುಕಭಾಯಿ ದಿವಾನಜೀ ಎಂಬವರು ಮುಂದೆ ಮುಂಬಯಿಯಲ್ಲಿ ವಿಖ್ಯಾತರಾದರು. ದಕ್ಷಿಣ ಕನ್ನಡದ ಅಮ್ಮೆಂಬಳ ದಿನಕರರಾಯರೂ ಸಹ ಇವರ ಶಿಷ್ಯರು.

ಹಿಂದು ಮುಸಲಮಾನ ಧರ್ಮಗಳನ್ನು ಒಟ್ಟಿಗೆ ತರುವ ಕರ್ನಾಟಕದ ಶಿಶುನಾಳ ಶರೀಫರಂತೆ ಇವರೂ ಕೂಡ ಅನೇಕ ರಚನೆಗಳನ್ನು ರಚಿಸಿ ಹಾಡುತ್ತಿದ್ದರು. ಇವರ ಒಂದು ಜೋಗಿಯಾ ರಾಗದ ಹಾಡಿನ ಶಬ್ದಗಳು ಹಿಗಿವೆ. ರಚನೆ ಅವರದೇ.

ಉಠ ಜಾಗ ಮುಸಾಫರ್ ಭೋರ ಭಯಿ
ಅಬ ರೈನ ಕಹಾ
ಜೊ ಸೊವತ್ ಹೈ, ಜೊ ಸೊವತ್ ಹೈ

ವಹ ಖೊವತ್ ಹೈ
ಜೋ ಜಾಗತಹೈ, ವಹ ಪಾವತಹೈ

*****

2.4

ವಂಗ ರಂಗಗೀತೆಗಳು

ಕನ್ನಡ, ಮರಾಠಿ ಮತ್ತು ಬಂಗಾಲ ಪ್ರಾಂತಗಳ ರಂಗಭೂಮಿ ಕೇವಲ 150–165 ವರ್ಷಗಳ ಇತಿಹಾಸವನ್ನುಳ್ಳದ್ದು ಎಂದು ಹೇಳಬಹುದು. ಬಂಗಾಲದ ರಂಗಭೂಮಿಯಲ್ಲಿ ಅತ್ಯುತ್ತಮ ಕೆಲಸ ಮಾಡಿದವರೆಂದರೆ ಅಮರೇಂದ್ರನಾಥ ದತ್ (1876–1916). 'ಪ್ಲಾಸೀ ಯುದ್ಧ' ಎಂಬ ನಾಟಕದಲ್ಲಿ ಸಣ್ಣ ಪಾತ್ರ ಮಾಡಿದ ಈ ಜಮೀನದಾರನ ಮಗ ಮುಂದೆ ಕೇವಲ ನಾಲ್ಕು ವರ್ಷಗಳಲ್ಲಿ ತನ್ನದೇ ಆದ, 'ಕ್ಲಾಸಿಕ್ ಥಿಯೇಟರ್' ಎಂಬ ನಾಟಕ ಕಂಪನಿಯನ್ನು ಸ್ಥಾಪಿಸಿದ. ಆಗಿನ ಕೊಲಕತ್ತೆಯ ಮಹಾಜನರು ಈ ಕಂಪನಿಯ ಎಲ್ಲ ನಾಟಕಗಳಿಗೆ ಪ್ರೋತ್ಸಾಹವನ್ನು ನೀಡಿದರು. ಅದೇ ತಾನೇ ಥಾಮಸ್ ಎಡಿಸನ್ನನ ಫೋನೊಗ್ರಾಫ್ ಬಂದಿಳಿದಿತ್ತು. ಈತ ತನ್ನ ಕೆಲವು ನಾಟಕಗಳ ಸಂಭಾಷಣೆ–ಗೀತೆಗಳನ್ನು ಮುದ್ರಿಸಿ ಅವುಗಳನ್ನೇ ತನ್ನ ನಾಟಕಗಳ ರಿಹರ್ಸಲ್ಲುಗಳಿಗೆ ಉಪಯೋಗಿಸಲು ಪ್ರಾರಂಭಿಸಿದ. ಹೀರಾಲಾಲ ಮತ್ತು ಮೋತಿಲಾಲ ಸೇನ ಬಂಧುಗಳು' ಅದಾಗಲೇ ಕೆಮೆರಾ ಹೆಗಲ ಮೇಲೆ, ಸ್ಟಾಂಡ ಮೇಲೆ ಇಟ್ಟು 'ಸಿನೇಮಾ' ಎಂಬ ಹೊಸ ಮನೋರಂಜನೆಯ ತಂತ್ರವನ್ನು ಕಲಿತು ಪ್ರಯೋಗ ಮಾಡಲು ಪ್ರಾರಂಭಿಸಿದ್ದರು. ಅಮರೇಂದ್ರನ ಉತ್ಸಾಹ ಮಿತಿಮೀರಿ, ತಮ್ಮ ನಾಟಕಗಳ ಚಿತ್ರೀಕರಣ ಪ್ರಾರಂಭಿಸಿದ. ಸೇನ ಬಂಧುಗಳ ನೆರವಿನಿಂದ, 'ಅಲೀಬಾಬ', 'ಬುದ್ಧ', 'ಸೀತಾರಾಮ' ಇತ್ಯಾದಿ ನಾಟಕಗಳ ದೃಶ್ಯಗಳನ್ನು ಚಿತ್ರೀಕರಣ ಮಾಡಿ, ಅವುಗಳನ್ನೂ ಮೂಕಿ ಚಿತ್ರಗಳನ್ನಾಗಿ ಮಾರ್ಪಡಿಸಿ ತನ್ನ ಮಂಡಳಿಯ ಪರವಾಗಿ ಪ್ರದರ್ಶಿಸಿದ. ಹೀಗಾಗಿ 1902ರಲ್ಲಿ ಗ್ರಾಮೊಫೋನ್ ಮಾಡುವವರ ಲಕ್ಷ್ಯವೆಲ್ಲ ಕಲಕತ್ತಾದ ಈ ಅಮರೇಂದ್ರನೆಡೆಗೆ ಸರಿದಿತ್ತು. ಇದಕ್ಕೆ ಕಾರಣವೂ ಇದೆ. ಆ ಕಾಲದಲ್ಲಿನ 500 ಧ್ವನಿಮುದ್ರಿಕೆಗಳಲ್ಲಿ ಅರ್ಧಕ್ಕಿಂತ ಹೆಚ್ಚು ಧ್ವನಿಮುದ್ರಿಕೆಗಳು ಕ್ಲಾಸಿಕ್ ಥಿಯೇಟರ್ ಕಂಪನಿಗೆ ಸಂಬಂಧಿಸಿದ್ದವು. 'ಡೋಲೆ ಲೀಲಾ' ಎಂಬ ನಾಟಕದೊಳಗಿನ ಸೋಶಿಮುಖಿ ಮತ್ತು ಫಣಿಬಾಲಾ ಇವರು ಹಾಡಿದ ನಾಟಕಗಳ ಧ್ವನಿಮುದ್ರಣ 1902ರಲ್ಲಿ ಮಾಡಿದ ದಾಖಲೆ ಇದೆ. ಕ್ಲಾಸಿಕ್ ಥಿಯೇಟರ್ ಕಂಪನಿಯವರ ಬ್ಯಾಂಡ್ ಕೂಡ ಇತ್ತು. ಅವರದೇ 4–5 ಧ್ವನಿಮುದ್ರಿಕೆಗಳೂ ಮಾರುಕಟ್ಟೆಗೆ ಬಂದ ಉಲ್ಲೇಖವಿದೆ.

ಬಂಕಿಮಚಂದ್ರ ಚಟರ್ಜಿಯವರ 'ದೇವಿಚೌದುರಾಣಿ' ಕಾದಂಬರಿಯನ್ನು ನಾಟಕವನ್ನಾಗಿ ಮಾರ್ಪಡಿಸಿ ಅದರೊಳಗಿನ ಕೆಲವು ಹಾಡುಗಳನ್ನು ಧ್ವನಿಮುದ್ರಣ

ಮಾಡಿ, ಮಾರುಕಟ್ಟೆಗೆ ತಂದಿದ್ದರು. ಅಂತೆಯೇ 'ನಿರ್ಮಲಾ', 'ಹರಿರಾಜ' (ಹ್ಯಾಮಲೆಟ್), 'ಅಲಿಬಾಬಾ' ಇತ್ಯಾದಿ ನಾಟಕಗಳ ಹಾಡುಗಳ ತಟ್ಟೆಗಳನ್ನೂ ತಂದಿದ್ದರು. ಇವುಗಳ ಮಾರಾಟ ನೋಡಿ ತತ್ಪರತೆಯಿಂದ ಎಚ್‌ಎಮ್‌ವಿಯವರು ಕೂಡ ಅನೇಕ ರಂಗಗೀತೆಗಳನ್ನು ವಿವಿಧ ಕಲಾವಿದರಿಂದ ಹಾಡಿಸಿದರು. ಹಾಗಾಗಿ, ಆಗಿನ ಕಾಲದ ವಂಗ ರಂಗಭೂಮಿಯ ಕೆಲವು ಕಲಾವಿದರ ಧ್ವನಿ ಶಾಶ್ವತವಾಗಿ ಉಳಿಯುವಂತಾಗಿದೆ. ಕೆಲವು ಪಾರ್ಸಿ ಮತ್ತು ಆಂಗ್ಲೋ ಇಂಡಿಯನ್ ಮಹಿಳೆಯರೂ ಕೂಡ ಬಂಗಾಲಿ ಹಾಡುಗಳನ್ನು ಇದರಲ್ಲಿ ಹಾಡಿ ಅವುಗಳನ್ನು ಚಿರಸ್ಮರಣೀಯ ಮಾಡಿದ್ದಾರೆ. ಉದಾಹರಣೆಗೆ, ಮಿಸ್ಸ್ ಕೀಟನ್, ಮಿಸ್ಸ್ ದುಬಾಷಿ, ಮಿಸ್ಸ್ ಪೆಸ್ತನಜೀ, ಹೀರಾಲಾಲ ಚಟ್ಟೋಪಾಧ್ಯಾಯ, ಮಿಸ್ ಭುವನೇಶ್ವರಿ ಇತ್ಯಾದಿ. ಆಗಿನ ನಾಟಕಗಳ ಹೆಸರುಗಳ ಮೇಲೆ ಕಣ್ಣು ಹಾಯಿಸಿದರೆ ಅವುಗಳಲ್ಲಿ ಹೆಚ್ಚಿನವು ಪೌರಾಣಿಕ ನಾಟಕಗಳಿದ್ದರೂ ಕೆಲವು ಕನ್ನಡ ನಾಟಕಗಳಂತೆ 'ಗುಲೇಬಕಾವಲಿ', 'ಚಂದ್ರಹಾಸ' ಪ್ರಕಾರದ ನಾಟಕಗಳೂ ಇದ್ದವು. ತಮಾಷೆಗೆಂದು ರೆಕಾರ್ಡುಗಳ ಮೇಲೆ ಮುದ್ರಿತವಾದ ಕೆಲವು ನಾಟಕಗಳ ಹೆಸರುಗಳು ಹೀಗಿವೆ: ಖೂನೆ ನಾಹಕ, ಕಪೂರಚಂದ, ಅಬು-ಹಸನ್ ಇತ್ಯಾದಿ. ಇವುಗಳಲ್ಲಿ ಪ್ರಮುಖವಾಗಿ ವಾದ್ಯವೃಂದಗಳನ್ನು ಉಪಯೋಗಿಸಲಾಗಿದ್ದು, ಯಮನ್, ಸಿಂಧೂ ಖಮಾಜ್, ಬಹಾರ ಇತ್ಯಾದಿ ಶುದ್ಧ ರಾಗಗಳ ರಚನೆಗಳಿವೆ. ಅಮರೇಂದ್ರ ಕೇವಲ್ ಗಾಯಕ-ನಟ ಮಾತ್ರ ಆಗಿರಲಿಲ್ಲ. ಆತ ಒಬ್ಬ ನಾಟಕಕಾರ, ದಿಗ್ದರ್ಶಕ, ಕವಿ, ಪತ್ರಕರ್ತನೂ ಆಗಿದ್ದ. ಈತನ ಮಾಹಿತಿ ನಮಗೆ ದೊರಕಿದ್ದು ನದಿಯಾದದಲ್ಲಿದ್ದ ಎಸ್.ಆರ್. ಮೆಹತಾ ಎಂಬ ರೆಕಾರ್ಡು ಸಂಗ್ರಹಕಾರರಿಂದ.

*****

2.5

ಮುಂಬಯಿಯ ರಂಗಭೂಮಿ

ಜಮಶೇಡಜಿ ಫ್ರಾಮಜಿ ಮಾದನ್ (1857–1923)

ನಾಟಕಗಳ ಬಗ್ಗೆ ಓದುವವರು, ಬರೆಯುವವರು ಅಥವಾ ಸಂಶೋಧನೆ ಮಾಡುವವರು ಮುಂಬಯಿಯ ಪಾರ್ಸಿ ಮತ್ತು ಉರ್ದು ನಾಟಕಗಳಿಗೆ ಆದ್ಯತೆ ಕೊಡಬೇಕು. ಭಾರತದ ಮುಂಬಯಿ, ಕಲಕತ್ತೆ, ಮದ್ರಾಸ ಶಹರಗಳಲ್ಲಿ, ಆಂಗ್ಲ ಜನರ ವಾಸ್ತವ್ಯದಿಂದಾಗಿ 18ನೇ ಶತಮಾನದಲ್ಲಿಯೇ ಪಾಶ್ಚಿಮಾತ್ಯ ನಾಟಕಗಳ ನೆರಳು ಅದರಲ್ಲಿಯೂ ಶೆಕ್ಸ್‌ಪಿಯರನ ನಾಟಕಗಳ ಪ್ರಭಾವವಾದುದನ್ನು ಕಾಣಬಹುದು. ಭಾರತದ ರಂಗಭೂಮಿಯ ಇತಿಹಾಸದಲ್ಲಿ ಮುಂಬಯಿಯ ಪಾರ್ಸಿ ಧರ್ಮದ ಅನುಯಾಯಿಗಳ ಕೊಡುಗೆ ತುಂಬಾ ಮಹತ್ವದ್ದು. ಭಾರತೀಯ ಅಂದರೆ ಉತ್ತರಾದಿ ಸಂಗೀತದ ಮೊಟ್ಟಮೊದಲಿನ ಕೇಂದ್ರವೆಂದರೆ, 'ಪಾರ್ಸಿ ಗಾಯನ ಸಮಾಜ' ಎಂದು ಹೇಳಿದರೆ ಓದುಗರಿಗೆ ಆಶ್ಚರ್ಯವಾಗಬಹುದು. ಹಾಗೆಯೇ ಭಾರತದ ಮೊದಲ ವಾದ್ಯ ಸಂಗೀತ, ಉರ್ದು ಸಾಹಿತ್ಯ ಮತ್ತು ಚಿತ್ರಕಲೆಗಳು ಬೆಳಕು ಕಂಡಿದ್ದು ಪಾರ್ಸಿ ಸಮಾಜದಿಂದಲೇ ಎಂಬ ಅಂಶ ಗಮನಾರ್ಹವಾಗಿದೆ.

ಮುಂಬಯಿಯಿಂದ ಠಾಣೆಯವರೆಗೆ ರೈಲು ಓಡಲು(1853) ಪ್ರಾರಂಭವಾದಾಗ ನಾನು ಈಗ ವಾಸಿಸುವ ಗ್ರಾಂಟರೋಡ ವಿಭಾಗದಲ್ಲಿ ನಾಟಕಗೃಹಗಳ ನಿರ್ಮಿತಿ ಪ್ರಾರಂಭವಾಗಿತ್ತು. ವಿಟಿ ಸ್ಟೇಶನ್‌ದ ಮುಂದುಗಡೆ ಇದ್ದ 'ಕ್ಯಾಪಿಟಲ್' ಕೂಡ ಸುಮಾರು ಅದೇ ಕಾಲದ್ದು. ಫ್ರಾಮಜಿ ಕವಾಸಜಿ ಮತ್ತು ವ್ಹಿಟಿ ಸ್ಟೇಶನ್ನು ಕಟ್ಟಲು ಸ್ಥಳಕೊಟ್ಟ ಜಗನ್ನಾಥ ಶಂಕರಶೇಠ, ಡಾ. ಭಾವು ದಾಜಿ ಲಾಡ ಇಂತಹ ಪ್ರತಿಷ್ಠಿತ ನಾಗರಿಕರ ಬೆಂಬಲ ರಂಗಭೂಮಿಗೆ ಇದ್ದುದರಿಂದ 3–4 ರಂಗಮಂದಿರಗಳನ್ನು ಆ ಕಾಲದಲ್ಲಿ ಮುಂಬಯಿಯಲ್ಲಿ ಕಟ್ಟಲಾಗಿತ್ತು. ಇಲ್ಲಿಯೇ ಮರಾಠಿಯ ಮೊಟ್ಟಮೊದಲಿನ ನಾಟಕಕಾರ ವಿಷ್ಣುದಾಸ ಭಾವೆಯವರ ಕರ್ನಾಟಕದ ಯಕ್ಷಗಾನ ಹಿಮ್ಮೇಳದ ಆಧಾರವಿಟ್ಟುಕೊಂಡು, ಬರೆದು, ದಿಗ್ದರ್ಶಿಸಿದ 'ಸೀತಾಸ್ವಂಯಂವರ'ವನ್ನು 1853ರಲ್ಲಿ ಪ್ರದರ್ಶಿಸಲಾಯಿತು. ನಾಟಕಗಳ ಹೊರತಾಗಿ ಸಾಂಗಲಿಯಿಂದ ಬಂದು ಇವರು ಬೊಂಬೆ ಆಟಗಳನ್ನೂ ಪ್ರದರ್ಶಿಸುತ್ತಿದ್ದರು. ಅರ್ಥಾತ್, ಇವೆಲ್ಲ ಮರಾಠಿಯಲ್ಲಿದ್ದರೂ, ಗುಜರಾತಿ, ಇಂಗ್ಲಿಷು, ಸಂಸ್ಕೃತ, ಉರ್ದು ಈ ವಿವಿಧ ಭಾಷೆಗಳಲ್ಲಿಯೂ ನಾಟಕಗಳು ಆಡಲ್ಪಡುತ್ತಿದ್ದವು.

ಮುಂಬಯಿ ವಿದ್ಯಾಪೀಠದ ಪರವಾಗಿ ಎಲ್ಫಿನಸ್ಟನ್ ಕಾಲೇಜಿನ ವಿದ್ಯಾರ್ಥಿಗಳು, 'ಪಾರ್ಸಿ ಡ್ರಾಮೆಟಿಕ್ ಸೊಸೈಟಿ' ಸ್ಥಾಪಿಸಿ ಶೇಕ್ಸಪಿಯರರ ನಾಟಕಗಳ ಪ್ರದರ್ಶನ ಪ್ರಾರಂಭಿಸಿದರು. ಪ್ರಸ್ತುತ ಲೇಖನದ ನಾಯಕ, ಜಮಶೇಡಜಿ ಫ್ರಾಮಜಿ ಮಾದನ್ ಅವರು ಪಾರ್ಸಿ ಕುಟುಂಬದಲ್ಲಿ ಜನ್ಮ ತಾಳಿದ್ದು, ಇವರ ತಂದೆ ಆಗಿನ ಕಾಲದ 'ಬ್ಯಾಕ್ ಬೇ ರಿಕ್ಲೆಮೆಶನ್' ದ ಸಲುವಾಗಿ ಬ್ಯಾಂಕಿನಲ್ಲಿ ಹಣ ತೊಡಗಿಸಿ, ಬ್ಯಾಂಕು ಮುಳುಗಿಹೋಗಿದ್ದರಿಂದ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಬಾಲ್ಯಾವಸ್ಥೆ ಕಳೆಯಬೇಕಾಗಿ ಬಂದಿತು. ಎಲ್ಫಿನಸ್ಟನ್ ಥಿಯೇಟರಿನ ಪ್ರಾಪರ್ಟಿ ನೋಡಿಕೊಳ್ಳುವ ಕೆಲಸ ಇವರಿಗೆ ಸಿಕ್ಕಿತು. ಮುಂದೆ ಇದರಲ್ಲಿಯೇ ಅವಕಾಶ ದೊರೆತಂತೆ, ಪಾತ್ರಗಳಲ್ಲಿ ಅಭಿನಯವನ್ನೂ ಮಾಡಬೇಕಾದ ಪ್ರಸಂಗಗಳು ಒದಗಿದವು. 1882ನಲ್ಲಿ ಕರಾಚಿಗೆ ದ್ರವ್ಯಾರ್ಜನೆಗೆ ಹೋದ ಮಾದನ್, ನಾಟಕಗಳಲ್ಲಿಯೇ ಹಣಗಳಿಸಿ, ಮುಂದೆ ಕಲಕತ್ತೆಗೆ ಹೋಗಿ ಅಲ್ಲಿ ಮಿಲಿಟರಿ ಸಪ್ಲೈ ಮಾಡಿ, ಮತ್ತಷ್ಟು ಹಣ ಗಳಿಸಿ, ಅಲ್ಲಿಯ ಒಂದೆರಡು ನಾಟಕ ಥಿಯೇಟರ್‌ಗಳನ್ನೂ ಹಾಗೂ ಮುಂಬಯಿಯ ಕೊರಿಂಥಿಯನ್ ಥಿಯೇಟರ್‌ನ್ನು ಕೂಡ ಖರೀದಿ ಮಾಡಿದರು. ತಮ್ಮದೇ ಆದ ಒಂದು ಬ್ಯಾಂಡ್ ಕೂಡ ಸ್ಥಾಪಿಸಿ ನಾಟಕದ ಮೊದಲು ವೃಂದವಾದನದ ರೂಢಿಯನ್ನು ಇವರು ಪ್ರಾರಂಭಿಸಿದರು. 1901 ರಿಂದ 1904ರತನಕ ನಾಟಕದ ಪದ್ಯಗಳ ಹಾಗೂ ವೃಂದವಾದನದ ಧ್ವನಿಮುದ್ರಿಕೆಗಳನ್ನೂ ಇವರು ತಯಾರಿಸಿದರು! ಕೊರಿಂಥಿಯನ್ ಲೇಬಲ್ಲಿನ ಆ ಕಾಲದ ಅನೇಕ ನಾಯಕ-ನಾಯಕಿಯರ ಧ್ವನಿಗಳನ್ನೂ ಇವರು ಮುದ್ರಿಸಿ ಮಾರುಕಟ್ಟೆಗೆ ತಂದರು. ಇವರಲ್ಲಿ ಪಾರ್ಸಿ ನಟ-ನಟಿಯರ ರೆಕಾರ್ಡುಗಳೇ ಜಾಸ್ತಿ ಇದ್ದವು ಎಂದು ಬೇರೆ ಹೇಳಬೇಕಾಗಿಲ್ಲ. ವಂಗ ರಂಗಭೂಮಿಯ ಅಮರೇಂದ್ರ ದತ್ತರಂತೆ ಇವರು ಸಿನೇಮಾದತ್ತ ಹೊರಳಿದರೂ ಇವರ ಮಾದನ್ ಥಿಯೇಟರ್ ಕಲಕತ್ತಾ, ಬರ್ಮಾದಲ್ಲಿ ಮತ್ತು ವಿಶೇಷವಾಗಿ ರಂಗೂನದಲ್ಲಿ ತುಂಬಾ ಪ್ರಸಿದ್ಧಿಪಡೆದಿತ್ತು. 1923ರಲ್ಲಿ ಮಾದನರು ತೀರಿಕೊಂಡರೂ ಇವರ ಕುಟುಂಬದವರು ಇತ್ತೀಚಿನ ತನಕ ಮುಂಬಯಿಯ 'ಅಲ್ಫ್ರೇಡ್ ಥೀಯೇಟರ್'ದ ಮಾಲಕರಾಗಿ ಸಿನೇಮಾ ಮತ್ತು ಧ್ವನಿಮುದ್ರಣದ ಕೆಲಸ ನಡೆಸುತ್ತಿದ್ದರು.

*****

2.6

ಅಮೀರಬಾಯಿ ಕರ್ನಾಟಕಿ (1906–1965)

ನಾನು ಹತ್ತು ವರ್ಷದವನಿದ್ದಾಗ ಅಂಚೆ ಖಾತೆಯಲ್ಲಿದ್ದ ನಮ್ಮ ತಂದೆಯವರಿಗೆ ಗೋಕರ್ಣಕ್ಕೆ ವರ್ಗವಾಯಿತು. 'ತಾಯಿ ಇಲ್ಲದ ಮಕ್ಕಳು; ವ್ಯವಹಾರಜ್ಞಾನವಿಲ್ಲದ, ಸದಾ ಪುಸ್ತಕಗಳಲ್ಲೇ ಮುಳುಗಿದ್ದ ಮಗ' ಎಂದುಕೊಂಡು ನಮ್ಮ ಯೋಗಕ್ಷೇಮ ನೋಡಲು, ಮೋತಿಬಿಂದುವಿನಿಂದ ಎರಡೂ ಕಣ್ಣು ಮಂಜಾದ ನಮ್ಮಜ್ಜ ತನ್ನ ದೊಡ್ಡ ಊರುಗೋಲು ಮತ್ತು ತನಗಿಂತ ಉದ್ದವಾದ ಮುಂಡಾಸು ಸುತ್ತಿ ನಮ್ಮೊಂದಿಗೆ ಗೋಕರ್ಣಕ್ಕೆ ಬಂದಾಯಿತು. ಅದಾಗಲೇ ಅವರಿಗೆ ವರ್ಷ ಎಪ್ಪತ್ತು. ಮನೆಯಲ್ಲಿಯೇ ಪೋಸ್ಟ್ ಆಫೀಸು, ಅಥವಾ ಪೋಸ್ಟ್ ಆಫೀಸಿನಲ್ಲಿಯೇ ಮನೆ! ವಿದ್ಯುದ್ದೀಪಗಳಿಲ್ಲದ ಕಾಲ. ಊರಿಗೆ ಏಕೇ, ಇಡೀ ಹಿಂದುಸ್ತಾನಕ್ಕೆ ಮಹಾಶಿವರಾತ್ರಿ ದೊಡ್ಡ ಹಬ್ಬ. ಜಾತ್ರೆಗೆ ಇನ್ನೂ ಎರಡು ತಿಂಗಳು ಇದ್ದರೂ ಗೋಕರ್ಣ ಕ್ಷೇತ್ರದಲ್ಲಿ ಅದಾಗಲೇ ತುಂಬಾ ಸಡಗರ. ಊರಲ್ಲಿ ಒಂದು ಸರ್ಕಸ್ಸು. ಒಂದು ಟೂರಿಂಗ್ ಟಾಕೀಜು ಬರುತ್ತೆಂದು ತಮಟೆ ಹೊಡೆದಾಗಿತ್ತು. ಶಿವರಾತ್ರಿಯ 15 ದಿನ ಮೊದಲೇ ಮುರಲೀಧರ ದೇವಾಲಯದ ಎದುರಿನ ವಿಶಾಲ ಬೂರಲಗದ್ದೆಯಲ್ಲಿ ಒಂದು ಸರ್ಕಸ್ಸಿಗೆ, ಮತ್ತೊಂದು ಟಾಕೀಜಿಗೆ ಢೇರೆ ಹಾಕಲು ಬಯಲು ಅಗೆಯುವ ಮೊದಲೇ ಶಾಲೆ ಬಿಟ್ಟ ಕೂಡಲೇ ನಮ್ಮೆಲ್ಲರ ಢೇರೆ ಅಲ್ಲಿಯೇ! ದೀಪ ಹಚ್ಚುವ ಮೊದಲು ಮನೆ ಸೇರದ ನನ್ನನ್ನು ಹುಡುಕಲು ಅಜ್ಜ ಮತ್ತು ಹಿರಿಯಕ್ಕ ಅನೇಕ ಸಲ ಬೂರಲ ಗದ್ದೆಗೆ ಬಂದದ್ದಿದೆ! ಸರಿ, ತಾರಾಬಾಯಿ ಗ್ರಾಂಡ್ ಸರ್ಕಸ್ಸು ತನ್ನ ಬಿಡಾರದೊಂದಿಗೆ ಆನೆ ಕುದುರೆಗಳ ಸಹಿತ ಬೇರು ಬಿಟ್ಟಿತು. ಮತ್ತೊಂದರಲ್ಲಿ ಸಿನೇಮಾ ಅಂದರೆ, ಟಾಕೀಜು. ಟಾಕೀ "ರತನ".

ಪೋಲಿಸು, ಗ್ರಾಮ ಪಂಚಾಯತಿ ಮತ್ತು ಅಂಚೆ ಖಾತೆಯವರಿಗೆ ಕಾಂಪ್ಲಿಮೆಂಟರಿ ಪಾಸ್‌ಗಳು ಅಂದೂ ಇತ್ತು! ಇಂದೂ ಇದೆ! ಹೀಗಾಗಿ ಯಾರಿಗೂ ತಿಳಿಸದೇ ಭಗವಾನ, ಬಾಬುರಾವ್ ಪೈಲವಾನ್ ನಟಿಸಿದ ಸ್ಟಂಟ್ ಪಿಕ್ಚರ್‌ಗಳೂ 'ಮಾಯಾ ಮಚ್ಛೇಂದ್ರ', 'ಹರಿಶ್ಚಂದ್ರ' ಮತ್ತು 'ಕೀಲು ಗುರ್ರಂ' ಎಂಬ ತೆಲುಗು ಸಿನೆಮಾ ಹಾಗೂ 'ರತನ' ನೋಡಿದ ನೆನಪಿದೆ. ಅದರಲ್ಲಿಯ ಕೆಲವು ಹಾಡುಗಳು ತುಂಬಾ ಜನಪ್ರಿಯವಾಗಿದ್ದು, ಮನೆಯಲ್ಲಿ, "ಅಖಿಯಾಂ ಮಿಲಾಕೆ" ಮತ್ತು "ಮಿಲ್ಕೆ ಬಿಛಡ ಗಯೆ ಅಖಿಯಾಂ ಹಾಯ್ ರಾಮಾ" ಈ ಹಾಡು ನಾವೆಲ್ಲ ಮಕ್ಕಳು ಮೆಲುಕು ಹಾಕುತ್ತಿದ್ದ ನೆನಪು. ಇದರಲ್ಲಿಯ, "ಮಿಲಕೆ ಬಿಛಡ ಗಯೆ" ಹಾಡಿದ್ದು ನಮ್ಮ ಕರ್ನಾಟಕದ ಅಮೀರಬಾಯಿ ಎಂದು ಗೊತ್ತಾದದ್ದು ಹಲವಾರು ವರ್ಷಗಳ ನಂತರ.

ನನಗೆ ಅನಂತರ ಅಮೀರಬಾಯಿ ನೆನಪಾದದ್ದು ಕಾರವಾರದ ದಿನಗಳಲ್ಲಿ. ಆ ಕಾಲದಲ್ಲಿ ಅಂದರೆ ವಿವಿಧಭಾರತಿ ಹುಟ್ಟುವ ಮೊದಲು. ರೇಡಿಯೋ ಸಿಲೋನ್ ತುಂಬಾ ಜನಪ್ರಿಯವಾಗಿತ್ತು. ಬಿ.ವಿ. ಕೇಸಕರ ಆಕಾಶವಾಣಿಯ ಮಂತ್ರಿ ಯಾಗಿದ್ದುದರಿಂದ ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತ ಬಿಟ್ಟರೆ, ಸಿನೇಮಾದ ಹಾಡುಗಳಿಗೆ ನಿಷೇಧವಿತ್ತು. ಹೀಗಾಗಿ ರೇಡಿಯೋ ಸಿಲೋನ ಮುಂಜಾನೆಯಿಂದ ರಾತ್ರಿಯವರೆಗೆ ಸಿನೇಮಾ ಹಾಡುಗಳನ್ನೂ ಮತ್ತು ಮಕ್ಕಳಿಗೆ ಪ್ರಿಯವಾದ ಜಾಹಿರಾತುಗಳನ್ನೂ ಬಿತ್ತರಿಸುತ್ತಿದ್ದುದರಿಂದ ಅದಕ್ಕೆ ಇದ್ದ ಡಿಮಾಂಡು ಅದ್ಭುತವಾಗಿತ್ತು. ಮುಂಜಾನೆ 7.30ರಿಂದ 8ರತನಕ 'ಪುರಾನೆ ಗೀತ್'ದಲ್ಲಿ ಪಂಕಜ ಮಲಿಕ್, ಸೈಗಲ್; ರಾಜಕುಮಾರಿ, ನೂರಜಹಾನ್, ಮತ್ತು ಅಮೀರಬಾಯಿಯವರ ಹಾಡುಗಳನ್ನು ತಪ್ಪದೇ ಹಾಕುತ್ತಿದ್ದರು. ಅಂಚೆಯ ಮನೆಯಲ್ಲಿ ರೇಡಿಯೋ ಎಲ್ಲಿ ಬರಬೇಕು? ಸರಿ, ಮುಂಜಾನೆ ಶಾಲೆಗೆ ಹೋಗುವ ಮೊದಲು ಕಾರವಾರದಲ್ಲಿಯ ಬಾಳಿಗಾ ಅವರ ಹೋಟೆಲ್ಲು ಮುಂದೆ ನಿಂತು ಹಾಡುಗಳನ್ನು ಕೇಳಿ ಮುಂದೆ ಸಾಗುವ ಪರಿಪಾಠ. ಆಗ ಕೇಳಿದ ಹಲವು ಸಿನೇ ಗೀತಗಳ ಮುಖಡಾ (ಪದ್ಯದ ಮೊದಲ ಸಾಲುಗಳು) ಇನ್ನೂ ನೆನಪಿನಲ್ಲಿವೆ.

ಮುಂದೆ ಮುಂಬಯಿಯ ಕರ್ನಾಟಕ ಸಂಘದ ವಜ್ರಮಹೋತ್ಸವದ ವೇಳೆಗೆ ಗೌಹರಬಾಯಿ ಕರ್ನಾಟಕಿಯ ಮೊಮ್ಮಗಳಾದ ಮಾಲಾಬಾಯಿ ಬಿಳಗಿಯವರ ಪರಿಚಯವಾಯಿತು. ಇವರು ಬಾಗಲಕೋಟೆಯವರು. ಕರ್ನಾಟಕದಲ್ಲಿ ರೆಡಿಯೋ ಸ್ಟಾರ್ ಎಂದು ಹೆಸರು ಗಳಿಸಿದವರು. ಗೋಹರಬಾಯಿ, ಅಮೀರ ಬಾಯಿಯ ತಂಗಿ ಎಂದು ತಿಳಿದದ್ದು ಆಗಲೇ. ಗೋಹರಬಾಯಿಯ ಬಗ್ಗೆ ಮರಾಠಿಯಲ್ಲಿ ತುಂಬ ಓದಿದ್ದರಿಂದ ಅವರ ಬಗ್ಗೆ ಒಂದು ಲೇಖನ ಬರೆದು ಡಾ. ನಿಂಜೂರರಿಗೆ, 'ಕಾಲನಿರ್ಣಯ' ದ ದೀಪಾವಳಿಯ ಸಂಚಿಕೆಗೆ, 'ಗೌಹರಬಾಯಿ, ಗಂಧರ್ವ ಯುಗದ ದುರಂತ ನಾಯಕಿ'ಯನ್ನು ಬರೆದೆ. ಮುಂದೆ 'ಚರ್ಚೆಗೊಂದು ಚಾವಡಿಯ' ವೆಂಕಟಲಕ್ಷ್ಮಿಯವರು, ಅಮೀರಬಾಯಿಯವರ ಬಗ್ಗೆ ಅರಿವಿಲ್ಲದೇ, ಅವರ ಬಗ್ಗೆ ಕೇಳಿದಾಗ ನನಗೆ ತುಂಬಾ ಬೇಸರವಾಯಿತು. ಕರ್ನಾಟಕದ ಎಷ್ಟು ಜನ ಹಿಂದಿ ಚಲಚಿತ್ರದಲ್ಲಿ ಹೆಸರು ಮಾಡಿಲ್ಲ? ಗೊತ್ತಿದ್ದವರು ಕೆಲವರೇ. ಗುರುದತ್ತ ಪಡುಕೊಣೆ, ಗಿರೀಶ ಕಾರ್ನಾಡ್, ಪಂಢರಿಬಾಯಿ, ವಿ.ಕೆ ಮೂರ್ತಿ ಚಲನಚಿತ್ರ ಛಾಯಾಗ್ರಾಹಕ (Cinematographer), ಅಮೀರಬಾಯಿ ಕರ್ನಾಟಕಿ, ಮಲ್ಲಿಕಾರ್ಜುನ ಮತ್ತು ಬಸವರಾಜ ಮನ್ಸೂರರು ಹಿಂದಿ ಚಿತ್ರಗಳಿಗೆ ಸಂಗೀತ ದಿಗ್ದರ್ಶನ ಕೊಡುತ್ತಿದ್ದ ಕಾಲವೊಂದಿತ್ತು. ನಮಗೆ ಗೊತ್ತಿಲ್ಲದ ಇಂತಹರು ಅದೆಷ್ಟೋ! ಅಮೀರಬಾಯಿಯವರ ಬಗ್ಗೆ ಕನ್ನಡಿಗರಿಗೆ ಏನು ಗೊತ್ತು?

ಅಮೀರಬಾಯಿಯವರ ಪೂರ್ವಾಶ್ರಮ ಅಂದರೆ ಮುಂಬಯಿ ಸೇರುವ ಮೊದಲಿನ ವರ್ಷಗಳ ಮಾಹಿತಿಯನ್ನು ಸಂಗ್ರಹಿಸಲಾಗಲಿಲ್ಲ. ಮುಂಬಯಿಯ ರಾಷ್ಟ್ರೀಯ ಸಂಸ್ಥೆಯಲ್ಲಿಯೂ, ಹಿಂದಿ, ಇಂಗ್ಲಿಷು, ಫ್ರೆಂಚ್ ಸಿನೇಮಾಗಳ ಬಗ್ಗೆ ಪುಸ್ತಕಗಳಿದ್ದರೂ ಅಮೀರಬಾಯಿಯವರ ಬಗ್ಗೆ ಹೆಚ್ಚು ಮಾಹಿತಿ ಸಿಗಲಿಲ್ಲ. ಮುಂದೆ ಪುಣೆಗೆ ಹೋದಾಗ ಅಲ್ಲಿಯ ಸಂಸ್ಥೆಯ ಲೈಬ್ರರಿನಲ್ಲಿ ಕೆಲವು ಹಳೆಯ ಪತ್ರಿಕೆಗಳಲ್ಲಿಯ ಲೇಖನಗಳ

ಆಧಾರದ ಮೇಲೆ ಮತ್ತು ಮಾಣಿಕ ಪ್ರೇಮಚಂದ ಅವರು ಇಂಗ್ಲೀಷನಲ್ಲಿ, "Yesterday's Melodies" ಎಂಬ ಪುಸ್ತಕದಲ್ಲಿ ಅಮೀರಬಾಯಿಯವರ ಬಗ್ಗೆ ಬರೆದ ಲೇಖನದ ಆಧಾರದಿಂದ ಇದನ್ನು ಬರೆಯುತ್ತಿದ್ದೇನೆ. ವಾಮನ್‌ರಾವ್ ಮಾಸ್ತರರ ಕಂಪನಿಯಲ್ಲಿ ಸ್ತ್ರೀ ಪಾತ್ರ ಮಾಡುತ್ತಿದ್ದ ಅಮೀರಬಾಯಿ ಹಿಂದಿನ ಶತಮಾನದ ಮೂರನೇ ದಶಕದಲ್ಲಿ ಮುಂಬಯಿ ತಲುಪಿರಬೇಕು. ಮೂಕಿಗಳು ಟಾಕಿ ಆದಾಗ ಅಂದರೆ ಹಾಡುಗಾರಿಕೆ ಚಲನಚಿತ್ರಕ್ಕೆ ಒದಗಿದಾಗ, ಖುರ್ಶಿದ್, ನೂರಜಹಾನ್, ಸುರೈಯ್ಯಾರೊಂದಿಗೆ ಸ್ಫೂರದ್ರೂಪಿ ಎನಿಸಿಕೊಂಡ ಹಾಡುವ ನಾಯಕಿಯರಲ್ಲಿ ಅಮೀರಬಾಯಿ ಒಬ್ಬರಾಗಿದ್ದರು.

'ವಿಷ್ಣುಭಕ್ತಿ' (1939), ಅಮೀರಬಾಯಿಯವರ ಟಾಕಿಗಳಲ್ಲಿಯ ಮೊದಲನೆಯ ಚಿತ್ರಪಟ. ಬಳಿಕ, 'ಸರದಾರ' (1940), ದರ್ಶನ (1941), 'ಸ್ಟೇಶನ ಮಾಸ್ತರ್', (1942) ಬಿಡುಗಡೆಯಾದವು. ಇವೆಲ್ಲ 'ಬಿ' ಗ್ರೆಡ್ ಚಿತ್ರಪಟಗಳಾಗಿದ್ದರಿಂದ ಅವರ ಹೆಸರು ಕರ್ನಾಟಕದ ಮತ್ತೊಬ್ಬ ಚಿತ್ರಪಟ ಕಲಾವಿದ ಬಸವರಾಜ ಮನ್ಸೂರಂತೆಯೇ ಹಿಂದೆ ಉಳಿಯಿತು. 'ಕಿಸ್ಮತ್' ನಂತರವೇ ಅಮೀರಬಾಯಿಯವರ ಕಿಸ್ಮತ್ (ಭಾಗ್ಯ) (1942) ಝಗ್ಗೆಂದಿತು! ಸಂಗೀತ ದಿಗ್ದರ್ಶಕ ಅನಿಲ ಬಿಸ್ವಾಸರಿಗೆ ಅಮೀರಬಾಯಿಯವರ ಶಾರೀರ ಇಷ್ಟು ಸೇರಿತೆಂದರೆ, ಹಿರೋಇಯಿನ್ ಮುಮತಾಝ್ ಶಾಂತಿಗಿಂತ, ಅಮೀರಬಾಯಿಯವರಿಂದ ಟಾಪ್ ಹಾಡುಗಳನ್ನು ಹಾಡಿಸಿದರು. ಮುಂಬಯಿಯ ಸೂಪರ್ ಸಿನೇಮಾದಲ್ಲಿಯೇ 'ಕಿಸ್ಮತ್' 60 ವಾರಗಳಿಗೂ ಮಿಕ್ಕಿ ಪ್ರದರ್ಶಿಸಲಾಯಿತು. ಅಮೀರಬಾಯಿಯವರ ಹಾಡಿನ ರೆಕಾರ್ಡುಗಳಿಗೆ ತುಂಬಾ ಬೇಡಿಕೆ ಬಂದಿತ್ತು. 'ಧೀರೆ ಧೀರೆ ಆರೆ ಬಾದಲ, ಧೀರೆ ಆ ಮೇರಾ ಬುಲ್‌ಬುಲ್ ಸೋ ರಹಾ ಹೈ ಶೋರ್ ಗುಲ್ ನ ಮಚಾ'. ಈ ಹಾಡು ಒಂದು ಸುಂಟರಗಾಳಿಯನ್ನೇ ಎಬ್ಬಿಸಿತು! ಇದರ ಜೋಡಿಗೆ ಕಿಸ್ಮತ್‌ದೊಳಗಿನ ಮತ್ತೊಂದು ಖ್ಯಾತ ಹಾಡುಗಳೆಂದರೆ, 'ಘರ್ ಘರ್ ಮೆಂ ದಿವಾಲಿ ಹೈ, ಮೇರೆ ಘರಮೆಂ ಅಂಧೇರಾ' ಮಗದೊಂದು, 'ಅಬ ತೆರೆ ಸಿವಾ ಕೌನ್ ಮೇರಾ, ಕಿಸನ ಕನ್ಹೆಯಾ' ಹೀಗೆ. ಅಮೀರಬಾಯಿಯವರ ಹೆಸರು ಇಡೀ ಹಿಂದುಸ್ತಾನದಲ್ಲಿ ಮನೆ ಮಾತಾಯಿತು. ಚಲೇಜಾವ ಚಳುವಳಿಯಲ್ಲಿ ಪ್ರತಿಯೊಬ್ಬ ಸ್ವಯಂ ಸೇವಕ-ಸೇವಕಿಯರ ಬಾಯಲ್ಲಿ ಅವರು ಕೋರಸ್‌ನಲ್ಲಿ ಹಾಡಿದ, 'ದೂರ ಹಟೊ, ದೂರ ಹಟೊ ದುನಿಯಾವಾಲೊ ಹಿಂದೋಸತಾನ ಹಮಾರಾ ಹೈ' ಹಾಡಂತೂ ಅಜರಾಮರವಾಗಿದೆ. ಈಗಲೂ ಆಗಸ್ಟ 15ರಂದು ಮತ್ತು ಜನವರಿ 26ಕ್ಕೆ ಈ ಹಾಡನ್ನು ತಪ್ಪದೇ ದೂರದರ್ಶನದ ಚ್ಯಾನೆಲ್‌ಗಳು ಬಿತ್ತರಿಸುತ್ತವೆ.

1940ರಿಂದ, ಅಮೀರಬಾಯಿಯವರ ಸುವರ್ಣಯುಗ ಪ್ರಾರಂಭವಾಗಿತ್ತು. 'ರತನ' ಬಿಡುಗಡೆಯಾದ ಕೂಡಲೇ (1944) ನೌಷಾದ ಅಲಿಯವರ ಹೇಳಿಕೆಯಂತೆ, 'ಲೋಗ ತೋ ಅಮೀರಬಾಯಿಕೆ ಉಪರ್ ಫಿದಾ ಹೋಗಯೆ ಥೆ!"

ಕರ್ನಾಟಕ ಸಂಘದ ಪೋಷಕರಲ್ಲಿ ಒಬ್ಬರಾದ ಸುಶೀಲಾರಾಣಿ ತೊಂಬತ್-ಪಟೇಲರು ಅಮೀರಬಾಯಿಯವರಿಗಿಂತ ಮೊದಲು ಮುಂಬಯಿಗೆ ಬಂದು 'ದ್ರೌಪದಿ' ಸಿನೇಮಾದಲ್ಲಿ ದ್ರೌಪದಿಯ ಪಾತ್ರವನ್ನು ವಹಿಸಿದವರು. ಅವರ ರೂಪ ಮತ್ತು

ಸಂಗೀತಕ್ಕೆ ಮರುಳಾಗಿ ಈ ಚಿತ್ರಪಟದ ಪ್ರೊಡ್ಯುಸರ್ ಮತ್ತು 'ಫಿಲ್ಮ್ ಇಂಡಿಯಾ' ಪತ್ರಿಕೆಯ ಸಂಪಾದಕರಾದ ಬಾಬುರಾವ್ ಪಟೇಲ್ ಸುಶೀಲಾರಾಣಿಯವರನ್ನು ಮದುವೆಯಾದರು. ಅವರು 80ರ ಹೊಸ್ತಿಲ ದಾಟಿ ಆಗಲೇ 4-5 ವರ್ಷಗಳಾಗಿರಬೇಕು. ಒಮ್ಮೆ ಕರ್ನಾಟಕ ಸಂಘದಲ್ಲಿ ಭೇಟಿಯಾದಾಗ ಅವರಿಗೆ ದುಂಬಾಲು ಬಿದ್ದು ಅಮೀರಬಾಯಿಯವರ ಬಗ್ಗೆ ಕೇಳಿದೆ. ಹಾರಿಕೆಯ ಉತ್ತರ ಕೊಟ್ಟ ಅವರು ನನಗೆ ನೌಷಾದರ ಭೇಟಿ ಮಾಡಿಸಿದರು. ನನಗಂತೂ, 'ಸೋನೆಪೆ ಸುಹಾಗಾ'ದಂತಾಯಿತು! 'ರತನ'ದ ಸಂಗೀತ ದಿಗ್ದರ್ಶಕರೇ ನೌಷಾದ ಸಾಹೇಬರು. "ಮಾಷಾ ಅಲ್ಲಾ! ಕ್ಯಾ ಗಲಾ ಪಾಯಾ ಥಾ ಉನ್ಹೋಂನೆ!" ಸಾಹೇಬರು ತಮ್ಮ ಅಪ್ಪಟ ಉರ್ದುವಿನಲ್ಲಿ ಅಮೀರಬಾಯಿಯ ಕಂಠ ಸಂಗೀತದ ವರ್ಣನೆ ಪ್ರಾರಂಭಿಸಿದರು . "ಶಂಶಾದ ಬೇಗಮ್‌ರಂತೆ ಖುಲ್ಲಾ ಆವಾಜ್, ಆದರೆ ಅವರ ಶಾರೀರದಲ್ಲಿ ರಿಯಾಝು ಮಾಡಿದ್ದುದರಿಂದ ಒಂದು ಹೊಳಪಿನ ನುಣುಪು ಇತ್ತು. ಸ್ವರಗಳು ಅಕ್ಷರಶಃ ಮುತ್ತಿನಂತೆ ಜಾರುತ್ತಿದ್ದವು. ಶಂಶಾದರದು ಸ್ವಲ್ಪ ಕಂಚಿನ ಧ್ವನಿ. ಅಮೀರಬಾಯಿಯವರದು ನುಣ್ಣಗಿನದು, ಗೋಲಾಕಾರದ್ದು, ತಾರ ಸಪ್ತಕದ ಮಧ್ಯಮ ತನಕ ಸಲೀಸಾಗಿ ಹೋಗುವಂತಹುದು. ಗಂಟಲಿನಲ್ಲಿ ಚೆನ್ನಾದ 'ಫೀರತ್' (ಋಟಿ) ಇತ್ತು. ನಾವು ಪ್ರಾಕ್ಟೀಸಿಗೆ ಕುಳಿತಾಗ ಅವರಿಂದ ಭಜನೆಯನ್ನೋ, ಇಲ್ಲವೇ ಅವರ ಮಾತೃಭಾಷೆಯಲ್ಲಿಯ ಹಾಡನ್ನೋ ಹಾಡಿಸುತ್ತಿದ್ದೆವು. (ಅವರ ಮಾತೃಭಾಷೆ ಕನ್ನಡವೇ ಎಂದು ಕೇಳಿದಾಗ 90 ವರ್ಷದ ನೌಷಾದರು ಸರಿಯಾಗಿ ಹೌದು ಎಂದು ಹೇಳಲಿಲ್ಲ. ಮುಪ್ಪಿನ ಮರೆವು ಇರಬೇಕು. ಮತ್ತೊಮ್ಮೆ ಫೋನಿಸಿದಾಗ, 'ಸಾಹೇಬರಿಗೆ ಆರಾಮವಿಲ್ಲ ಎಂದು ತಿಳಿಯಿತು) ಅಂದರು.

ಗುಲಬರ್ಗಾದ ಎ. ರಾಜಮಣ್ಣರಲ್ಲಿ ಒಂದಾನೊಂದು ಕಾಲದಲ್ಲಿ ಅಮೀರಬಾಯಿ ಹಾಡಿದ 255 ಹಾಡುಗಳ ಸಂಪತ್ತು ಇತ್ತಂತೆ! ಅವರ ಸಂದರ್ಭವನ್ನೇ ಮಾಣಿಕ್ ಪ್ರೇಮಚಂದ ಕೊಡುತ್ತಾರೆ. ಇವೆಲ್ಲ 1941 ರಿಂದ 1964ರ ತನಕದ್ದು ಇರಬೇಕು. ಸಮಕಾಲೀನರಲ್ಲಿ, ನೂರಜಹಾನ್, ಸುರೈಯ್ಯಾ, ಗೀತಾದತ್ ಬಿಟ್ಟರೆ, ಈ ಲೆಕ್ಕ ಕಡಿಮೆ ಇದ್ದರೂ ಇವರ ಮಾಧುರ್ಯ ಕೊಂಚವೂ ಕಡಿಮೆ ಇರಲಿಲ್ಲ. ಅಮೀರಬಾಯಿ ಎಸ್.ಡಿ ಬರ್ಮನ್‌ರ 'ಶಿಕಾರಿ'ಯಲ್ಲಿ ಹಾಡಿದ್ದು ಇದೆ. (1948) 'ದೇವಕನ್ಯಾ'ದಲ್ಲಿ ಶಾಮಸುಂದರ ಅವರಿಂದ ಹಾಡಿಸಿದರೆ, ಸಿ. ರಾಮಚಂದ್ರ 'ಶೆಹನಾಯಿ' ಚಿತ್ರಪಟದಲ್ಲಿ (1947) ಅವರಿಂದ ಹಾಡಿಸಿದರು.

ಕೋಕಿಲ ಕಂಠದ ಸುಂದರಿ ಅಮೀರಬಾಯಿಯವರ ಹಾಡುಗಳಿಗೆ ಮೆರಗು ಕೊಟ್ಟವರಲ್ಲಿ, ಖೇಮಚಂದ ಪ್ರಕಾಶ್, ಎಸ್.ಡಿ ಬರ್ಮನ್, ಗುಲಾಮ್ ಅಹಮದ್ ಮತ್ತು ಹುಸ್ನ ಲಾಲ್ ಭಗತರಾಮ್ ಮುಂತಾದವರು ಇದ್ದರು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗಲಿಕ್ಕೂ, ಸಿನೇ ಸಂಗೀತದಲ್ಲಿ ಲತಾ ಎಂಬ ತೆಳ್ಳಗಿನ ಉದ್ದಕೂದಲಿನ ಪಾರ್ಶ್ವಗಾಯಕಿಯ ಉದಯವಾಗಿ ಭದ್ರವಾಗಿ ತಳ ಊರಲಿಕ್ಕೂ ಸರಿಯಾಯಿತು. ಕಿರಿಯ-ಹಿರಿಯ ಗಾಯಕ ನಟಿಯರು ಈ ಲತಾ ಸುಂಟರ ಗಾಳಿಯನ್ನು ತಡೆಯಲಾರದೇ ನಿಷ್ಪ್ರಭರಾದರು. ಇದರಲ್ಲಿ ಅಮೀರಬಾಯಿ ಕೂಡ ಸಿಕ್ಕಿಬಿದ್ದರು.

ಅಷ್ಟು ಹೊತ್ತಿಗೆ ಅವರ ಹಣದ ತಾಪತ್ರಯ ಕೂಡ ಹೆಚ್ಚಾಗಿ ತಮ್ಮ ಕಲೆಯ ಅವಮೂಲ್ಯವನ್ನು ತಾವೇ ಮಾಡಿಕೊಂಡರು. ಚಿಕ್ಕ-ಪುಟ್ಟ ಪಾತ್ರಗಳನ್ನು ವಹಿಸುವ ಮಹತ್ವದ ಕಾರಣವೆಂದರೆ, ಹಿಮಾಲಯ ಶೇಠ ಎಂಬ ಸಿನೆ ಕಲಾವಂತನನ್ನು ಮದುವೆಯಾಗಿ ಹೆಸರಿಗೆ ಮಾತ್ರಕ್ಕೆ , 'ಶೇಠಾಣಿ'ಯಾದರು. ಅವನಿಗೆ ಜೂಜಿನ ವ್ಯಸನ ಕೂಡ ಇತ್ತು. ಹೊಡೆದು ಬಡೆದು ಬೆದರಿಸಿ ಅಮೀರಬಾಯಿಯ ಸಂಪತ್ತನ್ನು ಕೆಲವೇ ತಿಂಗಳಗಳಲ್ಲಿ ಆತ ಹಾಳು ಮಾಡಿದ. ವಿವಾಹ ವಿಚ್ಛೇದನ ಕೂಡ ಕೊಡಲಿಲ್ಲ, ಒಬ್ಬನ ಮಧ್ಯಸ್ತಿಕೆಯಿಂದ, 'ಇರುವ ಮನೆ, ಕಾರು ಕೊಟ್ಟರೆ ಸ್ಟಾಂಪ್ ಪೇಪರಿಗೆ ರುಝು ಹಾಕುತ್ತೇನೆ' ಎಂದು ಬೆದರಿಸಿದ. ಅದಕ್ಕೂ ಅಮೀರಬಾಯಿ ಒಪ್ಪಿಕೊಂಡು ಮನೆಯನ್ನು ಖಾಲಿ ಮಾಡಿ, ತಂಗಿಯ ಮನೆಯ ಪಕ್ಕದಲ್ಲಿ (ಮಾಹಿಮ್-ಕಾಪಡ್ ಬಝಾರದಲ್ಲಿ) ಬಿಡಾರ ಹೂಡುವ ವ್ಯವಸ್ಥೆ ಮಾಡಿ, 'ಹೂಂ ಸರಿ ಸಹಿ ಹಾಕು' ಎಂದಾಗ ಆತ ಇವರ ಸಹಿ ಮಾಡಿಸಿ ಹೊರಗೆ ಹೋಗಿ ತನ್ನ ,'ಖೋಟಾ'(ಸುಳ್ಳು) ಸಹಿ ಸ್ಟ್ಯಾಂಪು ಪೇಪರ್ ತಂದು ಕೊಟ್ಟ. ಎರಡೇ ದಿನಗಳಲ್ಲಿ ಹಿಮಾಲಯ ವಾಪಸ್ಸು ಬಂದು ಹಣದ ಕಾಟ ಪ್ರಾರಂಭಿಸಿದ. ಅಮೀರಬಾಯಿಯವರನ್ನು ಹೊಡೆದು ಬಡಿದಾಗ ಮಾಹಿಮ್ ಸ್ಟೇಶನದಲ್ಲಿ ಕಂಪ್ಲೇಂಟು ಕೊಟ್ಟರೆ, ಪೋಲಿಸಿನವರೇ ಅಮೀರಬಾಯಿಯವರನ್ನು, 'ನಿಮ್ಮ ಸ್ಟಾಂಪ್ ಪೇಪರ್ ಕಾಯದೆಗೆ ಅನುಸರಿಸಿ ಇಲ್ಲ. ನಿಮ್ಮ ಪತಿಯ ಸಹಿಯನ್ನು ನೀವು ಫೋರ್ಜರಿ ಮಾಡಿದ್ದರಿಂದ ನಿಮ್ಮನ್ನೇ ಪೋಲಿಸು ಕೊಠಡಿಯಲ್ಲಿ ಹಾಕುತ್ತೇವೆ ಎಂದರಂತೆ. ಇಂತಹ ಪರಿಸ್ಥಿತಿಯಲ್ಲಿ, ಗೌಹರಬಾಯಿ ಗಂಧರ್ವ, ತನ್ನ ಮರಾಠಿ ವಕೀಲರಿಂದ ಒಬ್ಬ ಕಾಯದೆ ತಜ್ಞರನ್ನು ಕರೆಸಿ, ಅಮೀರಬಾಯಿಯವರ ವಿಚ್ಛೇದನ ಪತ್ರವನ್ನು 2-3 ದಿನಗಳಲ್ಲಿ ಸಿದ್ಧಪಡಿಸಿಕೊಟ್ಟರಂತೆ!

ಈ ಆಘಾತದಿಂದ ಅಮೀರಬಾಯಿಗೆ ಹೊರಬರಲು ತುಂಬ ಕಷ್ಟವಾಯಿತು. ಅವರ ಅದೃಷ್ಟಕ್ಕೆ ಅವರ ಸಹಾಯಕ್ಕೆ 'ಬದ್ರಿ ಕಾಂಚವಾಲಾ' ಎಂಬ ಗುಜರಾತಿ ಗೃಹಸ್ಥ ಮುಂದೆ ಬಂದು ಅಮೀರಬಾಯಿಯವರ ಕೈ ಹಿಡಿದರು. ಈ ಘಟನೆಯ ನಂತರವೂ, ಅಮೀರಬಾಯಿ ಕೆಲವು ಧ್ವನಿಮುದ್ರಿಕೆಗಳನ್ನು ಕೊಟ್ಟಿದ್ದೂ ಇದೆ. 'ಸುಬಹ ಕಾ ತಾರಾ' (1954), ಡಾರ್ಕಸ್ಟ್ರೀಟ್ (1961) ಮತ್ತು, 'ಜಾದೂ ಅಂಗೂರಿ' (1964) ಇವು ಪ್ರಮುಖವಾದವು.

ಹಿಂದಿನ ಸಲ ಬೆಂಗಳೂರಿಗೆ ಹೋದಾಗ ಅಮೀರಬಾಯಿ ಹಾಡಿದ ಎರಡು ಕನ್ನಡ ಹಾಡುಗಳ ಧ್ವನಿಮುದ್ರಿಕೆ ಸಿಕ್ಕವು. ಇದರರ್ಥ ಮುಂದೆ ಅವರು ನಿವೃತ್ತರಾಗಿ ಬಾಗಲಕೋಟೆಗೆ ಬಂದರೆ? ಬೆಂಗಳೂರು ಸೇರಿದರೆ? ಅಥವಾ ಎಚ್‌ಎಮ್‌ವಿಯವರು ಆರ್‌ಪಿಜಿ ಎಂಟರಪ್ರಾಯ್ಸ್ ಆದಾಗ ಹಿಂದಿನ ಮುದ್ರಿಕೆಗಳನ್ನು ಹೊಸತಾಗಿ ಧ್ವನಿ ಸುರುಳಿಯಾಗಿ ಮಾರ್ಪಡಿಸಿದರೇ? ಇವುಗಳಿಗೆ ಉತ್ತರ ಸಿಗುತ್ತಾ ಇಲ್ಲ.

---

* ಈಗ ಇದನ್ನೆ 'ಭೂಲೆ ಬಿಸರೆ ಗೀತ' ಎಂದು ಬಿತ್ತರಿಸುತ್ತಾರೆ,

*****

2.7

ನಟಶೇಖರ ಗಾನಕಲಾಕೋವಿದ ಬಸವರಾಜ ಮನ್ಸೂರ (ಸು. 1908 –1980)

ಸಾಧಾರಣ ಇಸವಿ 1919–20 ಇರಬೇಕು, ಹುಬ್ಬಳ್ಳಿಯ ಗಣೇಶ ಪೇಟೆ ನಾಟ್ಯಗೃಹದಲ್ಲಿ ಸವಣೂರ ವಾಮನರಾಯರ ನಾಟಕ ಮಂಡಳಿಯ ಕನ್ನಡ ಸಂಗೀತ ನಾಟಕ, "ಭಕ್ತ ಪ್ರಲ್ಹಾದ" ಅದ್ದೂರಿಯಾಗಿ ನಡೆದಿತ್ತು. ಅದೇ ಹೊತ್ತಿಗೆ ಮಲ್ಲಿಕಾರ್ಜುನ ಥಿಯೇಟರಿನಲ್ಲಿ ಅಂದಿನ ಉತ್ತರ ಕರ್ನಾಟಕದ 'ರಾಜ'ಭಾಷೆಯಾದ ಮರಾಠಿಯಲ್ಲಿಯ ಖ್ಯಾತ ನಟ ಬಾಲಗಂಧರ್ವರ, 'ಸಂಗೀತ ಸೌಭದ್ರ' ಪ್ರದರ್ಶಿಸಲಾಗಿತ್ತು. ಕೀರ್ತಿ ದೇವತೆ ಮತ್ತು ಧನದೇವತೆ ವಾಮನರಾಯರಿಗೂ ಬಾಲ ಗಂಧರ್ವರಿಗೂ ಪ್ರಸನ್ನರಾಗಿದ್ದರು. ಕಾರಣ, ಕನ್ನಡ ನಾಟಕದಲ್ಲಿ ವಾಮನರಾಯರು ಹಿರಣ್ಯಕಶಿಪುವಿನ ಪಾತ್ರ ಮತ್ತು 12–13 ವರ್ಷದ ಬಸವರಾಜರು ಪುಟ್ಟ ಪ್ರಹ್ಲಾದನ ಮುಖ್ಯ ಪಾತ್ರ ವಹಿಸಿದ್ದರು. ಭಕ್ತ ಪ್ರಹ್ಲಾದನ ಪಾತ್ರ ಎಷ್ಟು ಸೇರಿತೆಂದರೆ ನಾಟಕ ನೋಡಿದ ಬಾಲಗಂಧರ್ವರು ವಾಮನರಾಯರಿಗೆ ಬಸವರಾಜನೊಂದಿಗೆ ತಮ್ಮ ಕಂಪನಿ ಸೇರಲು ಆಗ್ರಹ ಮಾಡಿದರಂತೆ. "ನಮ್ಮ ಕಂಪನಿ ನಮ್ಮಿಬ್ಬರದಲ್ಲ; ನಮ್ಮ ಹಿಂದೆ ದೊಡ್ಡ ಸರ್ಕಸ್ ಇದೆ" ಎಂದು ವಾಮನರಾಯರು ಉತ್ತರಿಸಿದಾಗ ಬಾಲ ಗಂಧರ್ವರು ನಸುನಕ್ಕು, ನಿಟ್ಟಿಸುರು ಬಿಟ್ಟು, 'ಖರ ಆಹೆ' (ಹೌದು ಸತ್ಯ) ಎಂದರಂತೆ!

ಮಧುರ ಕಂಠದ ಬಸವರಾಜರು ವಾಮನರಾಯರ ಕಂಪನಿ ಸೇರಿದ್ದು, ಕನ್ನಡ ಸಂಗೀತ ನಾಟಕದ ಬಾಲಕಲಾವಿದನಾಗಿ ಹೆಸರು ಪಡೆದದ್ದು, ಮೂಲತಃ ಶಾಲೆಗೆ ಹೋಗಿ ಕಲಿಯುವ ತಲೆಶೂಲೆಯನ್ನು ತಪ್ಪಿಸಿಕೊಳ್ಳುವದಕ್ಕೆ! ಧಾರವಾಡದಿಂದ 8 ಕಿ.ಮಿ ದೂರದ ಮನ್ಸೂರ ಗ್ರಾಮದಲ್ಲಿ ಹುಟ್ಟಿದ ಬಸವರಾಜರು ಪಂಚಪಾಂಡವರಲ್ಲಿ ಧರ್ಮರಾಜರು, ಹಿರಿಯರು. ಇವರ ನಂತರ ಮಲ್ಲಿಕಾರ್ಜುನ, ಕಲ್ಲಪ್ಪ, ಲಿಂಗಪ್ಪ, ಮತ್ತು ಶಂಕರಪ್ಪ. ತಂದೆ ಭೀಮರಾಯಪ್ಪನವರಿಗೂ ಸಂಗೀತದ ಗೀಳು. ಒಂದಾನೊಂದು ಕಾಲದಲ್ಲಿ ಗ್ರಾಮದ ಪ್ರತಿಷ್ಠಿತರೆಂದು ಪರಿಗಣಿಸಲ್ಪಟ್ಟ ಮನ್ಸೂರ ಮನೆತನದ ಆರ್ಥಿಕ ಪರಿಸ್ಥಿತಿ ಅಷ್ಟಕ್ಕಷ್ಟೇ. ಆದರೆ ತಾಯಿಯ ತಂದೆ ಚೆನ್ನವೀರಪ್ಪನವರದು ಸಾಹುಕಾರ ಮನೆತನ. ಮುಂಬಯಿ ಕರ್ನಾಟಕದಲ್ಲಿ ಕನ್ನಡದಲ್ಲಿಯ ಮೊಟ್ಟಮೊದಲಿನ ಮುದ್ರಣಾಲಯವನ್ನು ಸ್ಥಾಪಿಸಿದ ಶ್ರೇಯ ಇವರದು. ಮಕ್ಕಳಿಲ್ಲದ ಮನೆ. ಹೀಗಾಗಿ, ಅಜ್ಜನ ಮನೆಯಲ್ಲಿ ಬಸವಣ್ಣ (ಬಸವರಾಜ) ಹಾಗೂ ಮಲ್ಲೇಶಿ (ಮಲ್ಲಿಕಾರ್ಜುನ)

ಸ್ವಚ್ಛಂದತೆಯಿಂದ ಉಡಾಳರಾಗಿ ಬೆಳೆದರು! ಮಲ್ಲಿಕಾರ್ಜುನರಿಗೆ ಮೊಟ್ಟ ಮೊದಲ ಗುರು ಎಂದರೆ ಅಣ್ಣ ಬಸವರಾಜರೇ. ಮುಂದೆ ಸರಿ ಸಮಯಕ್ಕೆ ಬಸವರಾಜರ ಮಾರ್ಗದರ್ಶನವಿರದಿದ್ದರೆ ಮಲ್ಲಿಕಾರ್ಜುನ ಮನ್ಸೂರರು ಮುಂದೆ ಸಂಗೀತದ ಮೇರು ಶಿಖರ ಮುಟ್ಟುವದು ದುಸ್ತರವಾಗುತ್ತಿತ್ತು ಎಂಬ ಮಾತು ಸುಳ್ಳಲ್ಲ. ಕನ್ನಡ ರಂಗ ಸಂಗೀತದಲ್ಲಿ ಒಂದು ರಸ ಕ್ರಾಂತಿಯನ್ನು ಸ್ಥಾಪಿಸಿದ ಶ್ರೇಯ 'ವಿಶ್ವಗುಣಾದರ್ಶ' ನಾಟಕ ಕಂಪನಿಯ ಮಾಲಕರಾದ ವಾಮನರಾವ ಮಾಸ್ತರರಿಗೆ ಸಿಕ್ಕರೂ ಉತ್ತರ ಕರ್ನಾಟಕದ ಧಾರವಾಡ ಬಿಜಾಪುರ ಭಾಗದಲ್ಲಿ ಕನ್ನಡ ಸಂಗೀತ ನಾಟಕದ ನೆಲೆ ಭದ್ರವಾಗಿ ಮೂಡಿಸಿದ್ದು ಬಸವರಾಜ ಮನ್ಸೂರರು ಎಂದು ನಿಸ್ಸಂದಿಗ್ಧವಾಗಿ ಹೇಳಬಹುದು. ಅಂದಿನ ಕಾಲದಲ್ಲಿ ನಾಟ್ಯ ನಕ್ಷತ್ರಗಳೆಂದು ಖ್ಯಾತಿ ಪಡೆದ ಗಂಗೂಬಾಯಿ ಗುಳೇದಗುಡ್ಡ, ಗರುಡ ಸದಾಶಿವರಾಯರು, ಶಿರಹಟ್ಟಿ ವೆಂಕೋಬರಾಯರು, ಮತ್ತು ಮಲ್ಲಿಕಾರ್ಜುನ ಮನ್ಸೂರರನ್ನು ನಾವು ಮರೆಯುವ ಹಾಗೆ ಇಲ್ಲ. ಕನ್ನಡ ರಂಗಭೂಮಿಯಿಂದ ಹಿಂದಿ ಚಲಚಿತ್ರದ ಮಾರ್ಗವಾಗಿ ಮರಾಠಿ ರಂಗಭೂಮಿ ಸೇರಿದ ಗೋಹರಬಾಯಿ ಕರ್ನಾಟಕಿ ಕೂಡ ಕನ್ನಡ ರಂಗಭೂಮಿಯಲ್ಲಿ ಅಳಿಲು ಸೇವೆ ಮಾಡಿದ್ದೂ ಇದೆ. ಭಕ್ತ ಪ್ರಹ್ಲಾದ ನಾಟಕದ ನಾಂದಿ, 'ವಾರಿನಿಧಿ ಶಯನಾ' ಹಿಂದೋಳ ರಾಗದಲ್ಲಿತ್ತು. ಪ್ರಾರಂಭದಿಂದ ನಾಟಕದ ಕೊನೆಯವರೆಗೂ ಬಸವರಾಜರ, ಪ್ರಹ್ಲಾದನ ಪಾತ್ರ ಜನಜಂಗುಳಿಗೆ ಅಚ್ಚುಮೆಚ್ಚಿನದಾಗಿತ್ತು. ಕೇಶವ ಭಟ್ಟರು ಹಿರಣ್ಯಕಶಿಪು ವೇಷದಲ್ಲಿ ಅತಿತಾರಸ್ವರದಲ್ಲಿ, "ನಿನ್ನ ಹೃದಯ ಭೇದಿಸುವೆ, ಖೂಳ, ನೀಚಾ, ಫಡಫಡ ನಿನ್ನಯ ವೈಕುಂಠ ಸುಡುವೆ ಈಗಾ, ಬೇಗಾ" ಎಂಬ ಸಂಗೀತಮಯ ವಾಕ್ಯ, ಇನ್ನೇನು ನರಸಿಂಹ ಕಂಭ ಒಡೆದು ಬರುವುದಕ್ಕೆ ಮೊದಲಿನ ತಂದೆಯ ರೌದ್ರಾವತಾರಕ್ಕೆ ನಡುಗದೇ, ಬೆದರದೇ ಪ್ರಹ್ಲಾದನ ಗೀತೆ, "ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ' ಬಹು ಸುಂದರವಾಗಿ ಬಸವರಾಜರು ಹಾಡುತ್ತಿದ್ದರು. ಸಾಧಾರಣ 1926ರ ತನಕ ಬಸವರಾಜರು ಈ ಪಾತ್ರಗಳನ್ನು ವಹಿಸಿ ಕೊನೆಗೆ ತಮ್ಮ ಮಲ್ಲಿಕಾರ್ಜುನರಿಗೆ ಈ ಪಾತ್ರಗಳನ್ನು ವಹಿಸಲು ಪ್ರೇರೇಪಿಸಿದ್ದುದು ಇದೆ.

ಮುಂದೆ, 'ವೀರ ಅಭಿಮನ್ಯು', 'ಸಂದೇಹ ಸಾಮ್ರಾಜ್ಯ', 'ಬಾಜಿರಾವ್ ಪೇಶ್ವೆ' ಮುಂತಾದ ನಾಟಕಗಳನ್ನು ಆಡಿ ವಿಶ್ವಗುಣಾದರ್ಶ ನಾಟಕ ಮಂಡಳಿಯ ಹೆಸರು ಅಜರಾಮರ ಮಾಡಿ, ಮನ್ಸೂರ್ ಬಂಧುದ್ವಯರು ಸವಣೂರ ಕಂಪನಿಗೆ ಸಲಾಮು ಹೊಡೆದು ಹೊಸದಾಗಿ ಸ್ಥಾಪಿಸಿದ ಗಂಗೂಬಾಯಿ ಗುಳೇದಗುಡ್ಡರ ಮಂಡಳಿ ಸೇರಿದರು. ಆದರೆ ಬಸವರಾಜರು ತಮ್ಮ ಮೊದಲಿನ ತಿಂಗಳ ಸಂಬಳವನ್ನು ತಮ್ಮ ಗುರು ವಾಮನರಾಯರಿಗೆ, 'ಗುರುದಕ್ಷಿಣೆ' ಎಂದು ಕಳಿಸಿಕೊಡಲು ಮರೆಯಲಿಲ್ಲ. ಇಲ್ಲಿ ಮನ್ಸೂರರೊಂದಿಗೆ ಹಿಂದುಸ್ತಾನಿ ಸಂಗೀತದಲ್ಲಿ ಪಂಡಿತರೆಂದು ಹೆಸರು ಮಾಡಿದ ಗುರುರಾವ ದೇಶಪಾಂಡೆಯವರೂ ಗುಳೇದಗುಡ್ಡ ಕಂಪನಿ ಸೇರಿಕೊಂಡಿದ್ದರು. ಮುಖ್ಯ ಪಾತ್ರ ಅವರದು. ಮುಂದೆ ಮನ್ಸೂರ ಬಂಧುಗಳು 'ವಾಣಿವಿಲಾಸ' ಕಂಪನಿಯನ್ನು ಸೇರಿ, ಅದನ್ನೂ ಉರ್ಜಿತಾವಸ್ಥೆಗೆ ಮುಟ್ಟಿಸಿದ ಕತೆ ಸ್ವಲ್ಪ ರಂಜಕವಾಗಿದೆ.

ಬಸವರಾಜರ ಮೊದಲ ಗುರು ರಬಕವಿಯ ಅಪ್ಪಯ್ಯ ಸ್ವಾಮಿ. ಅಜ್ಜನ ಮನೆಯಲ್ಲಿ ಗ್ರಾಮೊಫೋನು ರೆಕಾರ್ಡುಗಳನ್ನು ಕೇಳಿ ಕಂಠಪಾಠಮಾಡಿದ ಬಸವರಾಜರಿಗೆ ಎರಡು

ವರ್ಷ ಮನೆಯಲ್ಲಿಯೇ ಇದ್ದು ಸ್ವಾಮಿಗಳು ಸಂಗೀತ ಸಂಭಾಷಣೆ ಕಲಿಸಿದರು. ಮುಂದೆ ವಾಮನರಾಯರ ತರಬೇತಿ, 'ಸಾಲಿ ಕಲ್ತು ಶಾಣ್ಯಾ ಆಗು' ಎಂಬ ಬುದ್ಧಿವಾದ ನಿರಾಕರಿಸಿದ ಬಸವರಾಜರು ಕಿರಿ ತಮ್ಮನೊಂದಿಗೆ ಮರಳಿ ವಾಮನರಾವ ಮಾಸ್ತರರೆಡೆ ಹೋಗಿ 'ಬಾಜಿರಾವ ಪೇಶ್ವೆ' ನಾಟಕದಲ್ಲಿ ಸ್ತ್ರೀ ಪಾತ್ರ ವಹಿಸುತ್ತಿದ್ದ ಮಲ್ಲಿಕಾರ್ಜುನರನ್ನು ಅಥಣಿ ಕ್ಯಾಂಪಿನಲ್ಲಿ ಪಂ. ನೀಲಕಂಠ ಬುವಾ ಮಿರಜಕರ್‌ರಲ್ಲಿ ಮುಂದಿನ ಸಂಗೀತಾಭ್ಯಾಸಕ್ಕೆ ಸೇರಿಸಿದರು. ಇದರಿಂದ ಕಂಪನಿ ಬಿಡಬೇಕಾದ ಪ್ರಸಂಗ ಬಂದರೂ ಧೈರ್ಯಗುಂದದೇ ತಾವೂ ಕೂಡ ವಿದ್ಯಾರ್ಥಿಯಾಗಿ ಆರು ತಿಂಗಳು ಮೈಸೂರು ವಾಸುದೇವಾಚಾರ್ಯರ ಬಳಿ ಕರ್ನಾಟಕಿ ರಾಗಗಳನ್ನು ಕಲಿತು 'ವಾಣಿವಿಲಾಸ ಕಂಪನಿ' ಸೇರಿದರು. ಹೊಸ ನಾಟಕ, 'ಕಿತ್ತೂರು ರುದ್ರಮ್ಮ'ದ ಸಲುವಾಗಿ ಮರಳಿ ಮಲ್ಲಿಕಾರ್ಜುನರನ್ನು ಕರೆತಂದರು. (1932) ಬಸವರಾಜ ಮನ್ಸೂರ ಮಲ್ಲಸರ್ಜರಾದರೆ, ಗೋಹರಬಾಯಿ ರುದ್ರಮ್ಮ, ಮಲ್ಲಿಕಾರ್ಜುನ ದಿಲಾವರಖಾನರ ಪಾತ್ರ ವಹಿಸಿದ್ದರು. ನಾಟಕ ಅದ್ದೂರಿಯಾಗಿ ನಡೆಯಿತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ವಿಷಯದ ಮೇಲೆ ಬರೆದ, 'ವರ ಪ್ರದಾನ' ಕೂಡ ಯಶಸ್ವಿಯಾಯಿತು.

ಆದರೆ ಗೋಹರಬಾಯಿ ಇದೆಲ್ಲವನ್ನು ಬಿಟ್ಟು ಮುಂಬಯಿ ಸೇರಿದರು. ಕಂಪನಿ ಬೆಂಗಳೂರು ಕ್ಯಾಂಪಿನಲ್ಲಿ ಕುಸಿಯಿತು. ಮನ್ಸೂರ ಬಂಧುಗಳು ಕೂಡ ಮುಂಬಯಿ ಸೇರಿದರು. ಐದು ವರ್ಷ ಕಾಲ ವಾಣಿವಿಲಾಸ ಕಂಪನಿ ಕರ್ನಾಟಕದಲ್ಲಿ ಹೊಸಹೊಸ ವಿಷಯಗಳನ್ನು ಆಯ್ದು, ಭರ್ಜರಿ ರಂಗ ಸಜ್ಜಿಕೆಗಳಿಂದಲೂ, ಹೊಸ ಸಂಗೀತ ರಾಗಗಳನ್ನು ಅಳವಡಿಸಿಕೊಂಡು ರಂಗಭೂಮಿಯ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತಂದಿತ್ತು. ಕಂಪನಿಯ ಕತೆ ಮುಗಿದಾಗ ಅನಕೃ, "ಇಂದು ರಂಗಭೂಮಿಯ ಸುವರ್ಣಕಳಶ ಕಳಚಿಬಿತ್ತು" ಎಂದು ಉದ್ಗರಿಸಿದರು. ಹೊಸದಾಗಿ ಮುಂಬಯಿ ಸೇರಿದ ಬಂಧುಗಳು ನೌಕರಿಯ ಸಲುವಾಗಿ ಅಡ್ಡಾಡಿ ಕೊನೆಗೆ ಒಬ್ಬರು ಮಂಜೀಖಾನರ ಶಿಷ್ಯತ್ವ ಪಡೆದು ಸಂಗೀತಕ್ರಾಂತಿಯನ್ನು ಮಾಡುವುದರಲ್ಲಿದ್ದರೆ, ಹಿರಿಯಣ್ಣ ಹಿಂದಿ ಚಲನಚಿತ್ರದಲ್ಲಿ ಸಂಗೀತ ನಿರ್ದೇಶಕರೆಂದು ಹೆಸರು ಮಾಡಿದರು. 'ರತ್ನ ಮಂಜರಿ', 'ರಾಜತರಂಗ', 'ಜಾನೇ ಆಲಂ' ಇವೆಲ್ಲ ಬಸವರಾಜ ಮನ್ಸೂರರು ಸಂಗೀತ ಒದಗಿಸಿದ ಕೆಲ ಚಲನಚಿತ್ರಗಳ ಹೆಸರುಗಳು. ಈ ರೀತಿ ಬದುಕು ರಭಸದಿಂದ ನಡೆಯುತ್ತಿದ್ದಾಗಲೇ, 'ನಿಂತ ಕಾಲುಗಳ ಮೆಲೆ ಕಲ್ಲು ಹಾಕಿಕೊಂಡಂತೆ' ಬಸವರಾಜರು ಹಿಂದೆಮುಂದೆ ನೋಡದೇ ಮರಳಿ ಕನ್ನಡ ನಾಟಕಗಳ ಎಡೆ ಧಾವಿಸಿದರು. ಮದುವೆ ಮಾಡಿಕೊಂಡಿದ್ದರಿಂದ ಸಂಸಾರ ಬೇರೆ ಬೆಳೆಯುತ್ತಿತ್ತು. ಆದರೂ ಕೂಡ 1938ರಲ್ಲಿ ತಮ್ಮದೇ ಆದ 'ಕಲಾಪ್ರಕಾಶ' ನಾಟಕ ಮಂಡಳಿ ಸ್ಥಾಪಿಸಿದರು. ದೇವುಡು ನರಸಿಂಹ ಶಾಸ್ತ್ರಿಗಳ, 'ಉಷಾ ಸ್ವಯಂವರ' ಮುಂತಾದ ನಾಟಕಗಳನ್ನು ಆಡಿದರು. ಕೊನೆಗೆ ದಿಕ್ಕೆಟ್ಟು 1944ರಲ್ಲಿ ಸಾಲದ ಹೊರೆ ಹೊತ್ತು ಅರ್ಥಾರ್ಜನೆಗಾಗಿ ಕಚೇರಿ ಮಾಡಲು ಪ್ರಾರಂಭಿಸಿದರು.

50ನೆಯ ವಯಸ್ಸು ದಾಟಿದ ಮೇಲೆ, ಏನೂ ಕಲಿಯದ ಬಸವರಾಜರು ನಟ ಶ್ರೇಷ್ಠರಾದರೂ, ಗಾನಕಲಾವಿದರಾದರೂ, ಗಾಂಧರ್ವ ಮಹಾವಿದ್ಯಾಲಯದ ಪರೀಕ್ಷೆ

ಕಟ್ಟಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗಿ ರಾಣೆಬೆನ್ನೂರಿನಲ್ಲಿ ಸಂಗೀತ ಶಿಕ್ಷಕರೆಂದು ಹತ್ತು ವರ್ಷ ದುಡಿದರು! 'ಕಡ್ಲಿಮಟ್ಟಿ ಸ್ಟೇಶನ್‌ಮಾಸ್ತರ್' ನಾಟಕ ಅದ್ದೂರಿಯಾಗಿ ನಡೆಸುತ್ತಿದ್ದ ನಟಶ್ರೇಷ್ಠರಿಗೆ ನಾಲ್ಕು ಜೀವಗಳನ್ನು ಸಾಕಲು ಶಾಲೆಯಲ್ಲಿ ಸಂಗೀತ ಮಾಸ್ತರರಾಗಬೇಕಾಯಿತು! 'ವಿದ್ಯೆ ಇದ್ದರೆ ಸಾಲದು, ಸರ್ಟಿಫ್ಹಿಕೇಟ್ ಕೂಡ ಬೇಕು' ಎಂಬ ತಿಳುವಳಿಕೆ ಮೂಡಲು ಆಯುಷ್ಯದ ಐವತ್ತು ವರ್ಷಗಳು ಬೇಕಾದವು ಎಂದು ಬಸವರಾಜರು ತಮ್ಮ ಆತ್ಮಕಥೆಯಲ್ಲಿ ಒಂದೆಡೆ ಬರೆದಿಟ್ಟಿದ್ದಾರೆ.

ಹತ್ತು ವರ್ಷ ದುಡಿದರೆ ನಿವೃತ್ತಿವೇತನ ದೊರೆಯುತ್ತದೆಯೇ? 1960ರಲ್ಲಿ ರಾಜ್ಯಸರಕಾರದ ನಾಟಕ ಅಕಾಡೆಮಿಯು ರಂಗಭೂಮಿಯ ಸೇವೆಯನ್ನು ಪ್ರಶಂಸಿಸಿ ಪ್ರಶಸ್ತಿ ನೀಡಿತು. 1962ರಲ್ಲಿ ಮೈಸೂರು ಸರಕಾರದ (ಇಂದಿನ ಕರ್ನಾಟಕ ಸರಕಾರ) ಹಿಂದುಸ್ತಾನಿ ಸಂಗೀತ ಸಲಹೆಗಾರರಾಗಿ ಕೆಲಸ ನಿರ್ವಹಿಸಿದ್ದರು. ಆದರೆ, ಕೊನೆಗೆ ಬಸವರಾಜರ ಪಾಲಿಗೆ ಸಿಕ್ಕಿದ್ದು ಸಂಗೀತ ಅಕಾಡೆಮಿಯ ನಿವೃತ್ತಿ ವೇತನ ಅಷ್ಟೇ. ಪದ್ಮಶ್ರೀ, ಪದ್ಮಭೂಷಣರೆಂದು ಸಂಗೀತದ ಮೇರು ಪರ್ವತ ಏರುತ್ತಲೇ ಇದ್ದ ತಮ್ಮ ಮಲ್ಲಿಕಾರ್ಜುನರ ಸಾಥಿದಾರನಾಗಿ (ತಂಬೂರಿಯ ಸಾಥಿದಾರ) ಅಲ್ಲಲ್ಲಿ ರಂಗಗೀತೆಗಳ ಕಚೇರಿಗಳನ್ನು ನಡೆಸುತ್ತಿದ್ದ ಬಸವರಾಜರು 1980ರಲ್ಲಿ ಕೊನೆಯ ಉಸಿರನ್ನು ಎಳೆದರು.

*****

2.8

ಗೋಹರಬಾಯಿ ಕರ್ನಾಟಕಿ (1910–1963)

ನಿಮ್ಮಲ್ಲಿ ಅನೇಕರು ಡಾ. ರಹಮತ್ ತರೀಕೆರೆಯವರು ಅಮೀರಬಾಯಿ ಕರ್ನಾಟಕಿಯವರನ್ನು ಕುರಿತು ಬರೆದದ್ದನ್ನು ಓದಿರಬೇಕು. ಪುಸ್ತಕ ಓದಿದ ಮೇಲೆ ಅಮೀರಬಾಯಿಯ ಪ್ರತಿಭೆಯ ಬಗ್ಗೆ, ಚಿತ್ರರಂಗದಲ್ಲಿ ಮಹಾನ್ ಎತ್ತರಕ್ಕೆ ಬೆಳೆದ ಅವರ ವ್ಯಕ್ತಿತ್ವದ ಮೇಲೆ ಒಂದು ಪ್ರಭಾವಲಯ ಉತ್ಪನ್ನವಾಗುವ ಸಂಭವವಿದೆ. ಆ ಪ್ರಖರ ಬೆಳಕಿನೆದುರು ಅವರ ಮನೆಯಲ್ಲಿಯೇ ಹುಟ್ಟಿ ಬೆಳೆದ ಅಷ್ಟೇ ಪ್ರತಿಭಾವಂತ ಮತ್ತೊಬ್ಬ ಗಾಯಕಿಯನ್ನು ಮರೆಯುವ ಸಂಭವ ಜಾಸ್ತಿ. ನಾನೀಗ ಬರೆಯುತ್ತಿರುವದು ಗೋಹರಬಾಯಿ ಕರ್ನಾಟಕಿಯನ್ನು ಕುರಿತು*. ಸಾಧಾರಣ 20 ವರ್ಷಗಳ ಹಿಂದೆ ನಾನೇ ಗೋಹರ ಕರ್ನಾಟಕಿಯ ಬಗ್ಗೆ (ಕನ್ನಡ) 'ಕಾಲನಿರ್ಣಯ'ದ ಮೊದಲ ದೀಪಾವಳಿ ಸಂಚಿಕೆಗಾಗಿ ಬರೆದಿದ್ದೆ. ಆ ಲೇಖನಕ್ಕಾಗಿ ನಾನು ನಾಲ್ಕಾರು ಮರಾಠಿ ಪುಸ್ತಕಗಳನ್ನು ಓದಬೇಕಾಯಿತು. ಲೇಖನ ಬರೆಯುವಾಗ ಅಂತರ್ಜಾಲ ಅಷ್ಟೊಂದು ಪ್ರಬುದ್ಧವಾಗಿರಲಿಲ್ಲ. ಹೀಗಾಗಿ ಕಣ್ಣಿನ ಮುಂದೆ ಕಟ್ಟಿದ ಗೋಹರಳ ಚಿತ್ರ ದುರಂತನಾಯಕಿಯ ಬದಲು ಬಾಲಿವುಡ್ ಸಿನೇಮಾದ ಮಾಯಾವಿ, ಪುರುಷರನ್ನು ಮರಳುಮಾಡುವ ವಿಷಕನ್ಯೆಯಂತೆ ಕಾಣಿಸುತ್ತಿತ್ತು. ಆಕಾಶವಾಣಿಯಲ್ಲಿದ್ದ ಗಂಧರ್ವಪ್ರೇಮಿ ಸೀತಾಕಾಂತ ಲಾಡ್ ಬರೆದ ಪುಸ್ತಕದ ಹೆಸರೇ 'ಗೋಹರಬಾಯೀಚೆ ಮಾಯಾಜಾಲ'! ಮತ್ತೊಬ್ಬ ಗಂಧರ್ವಪ್ರೇಮಿ ಬಾಳ ಸಾಮಂತ 'ತೋ ರಾಜಹಂಸ ಏಕ', ಇನ್ನೂ ಕೆಲವು ದೀಪಾವಳಿ ಸಂಚಿಕೆಯ ಲೇಖಗಳು ಇವೆಲ್ಲ ಗಂಧರ್ವಪರವಾಗಿ ಬರೆದದ್ದು ಮತ್ತು ಗೋಹರಬಾಯಿ ವಿರುದ್ಧವಾಗಿ ಇದ್ದುದರಿಂದ ನನಗೆ 3–4 ಸಲ ಸಾಹಿತ್ಯ ಸಂಘ, ಗಿರಗಾಂವಿಗೆ ಹೋಗಬೇಕಾಯಿತು. ಸುದೈವದಿಂದ ಅಲ್ಲಿ ನನಗೆ ಪ್ರಲ್ಹಾದ ಕೇಶವ ಅತ್ರೆಯವರ 'ಮರಾಠಾ' ದಿನಪತ್ರಿಕೆಯ 2–3 ಸಂಪಾದಕೀಯಗಳೂ, ಕೆಲವು ಅವರದೇ ವಾರಪತ್ರಿಕೆ 'ನವಯುಗ'ದಲ್ಲಿ ಬರೆದ ಲೇಖಗಳು, ಗೋಹರ ಮತ್ತು ಬಾಲಗಂಧರ್ವ ತೀರಿಕೊಂಡಾಗ ಬರೆದುವು ಸಿಕ್ಕವು. ಮತ್ತೊಬ್ಬ ಮರಾಠಿ ನಾಟಕಕಾರ ಬಾಳ ಕೊಲ್ಹಟಕರರೂ ಬರೆದದ್ದು ಕೂಡ ಸಿಕ್ಕಿತು. ಇವೆಲ್ಲ ಗೋಹರಬಾಯಿಯ ನಿಜವಾದ ವ್ಯಕ್ತಿತ್ವವನ್ನು ಬಿಂಬಿಸಲು ಮಾಡಿದ ಪ್ರಯತ್ನ ಎಂದು ನನಗೆ ಅನ್ನಿಸಿತ್ತು. ರವೀಂದ್ರ ಪಿಂಗೆ ಎಂಬುವರೂ ಆಕಾಶವಾಣಿಯವರೇ, ನಿವೃತ್ತರಾದ

---

* ಗೋಹರ್ ಊರ್ಫ ಗೌರಮ್ಮ ಕರ್ನಾಟಕಿ:– 1910 ಜನ್ಮ ತಾರೀಕು. ಬೀಳಗಿ, ಬಿಜಾಪುರ ಜಿಲ್ಲೆ.

ಮೇಲೆ ಅಲ್ಲಲ್ಲಿ ಕಲಾ-ಕಾರ್ಯಕ್ರಮಗಳಲ್ಲಿ ಎಡಬಿಡದೆ ಕಾರ್ಯಕ್ರಮ ಕೇಳುವವರು. ಅವರೂ 'ಗೋಹರ-ದ್ವೇಷಿ' ಎಂದು ನಮ್ಮ ಮಾತು-ಕತೆಗಳ ನಂತರ ಸಾಬೀತು ಆಯ್ತು. ರವಿ (ರವೀಂದ್ರ ಪಿಂಗೆ) ಹೇಳಿದ್ದುಇಲ್ಲಿ ಇದೆ.

ರ.ಪಿ: ಗೋಹರ-ಗಂಧರ್ವ ಪ್ರಕರಣದ ಮೊದಲು ಗಂಧರ್ವ ಗೋಹರಳನ್ನು ಕೋರ್ಟಿಗೆ ಎಳೆದು ಕೇಸು ಹಾಕಿದ್ದು ಗೊತ್ತಾ ನಿಮಗೆ:

ನಾನು: ಇಲ್ಲವಲ್ಲ, ವಸಂತ ಶಾಂತಾರಾಮ ದೇಸಾಯಿ, ಬಾಳಸಾಮಂತ, ಮೋಹನ ನಾಡಕರ್ಣಿ, ಇವರ ಪುಸ್ತಕದಲ್ಲಿ ಈ ಸಂದರ್ಭವೇ ಇಲ್ಲವಲ್ಲ?

ರ.ಪಿ: ನೋಡಿ, ನಾನು ಹೇಳೋದು ಸಾಧಾರಣ 1934ರಲ್ಲಿ ಆದದ್ದು. ಅದಾಗಲೇ ಗೋಹರ್ ಬಿ ಗ್ರೇಡ್, ಸಿ ಗ್ರೇಡ್ ಹಿಂದಿ ಚಿತ್ರಪಟಗಳಲ್ಲಿಯ ಹೀರೋಯಿನ್! ಒಂದೆರಡು ಚಿತ್ರಪಟಗಳಿಗೆ ಸಂಗೀತ ಕೂಡ ಕೊಟ್ಟಿದ್ದಳು. 'ಗೋಲ ನಿಶಾನ'ದಲ್ಲಿಯ ಆಕೆ ಫಿಯರಲೆಸ್ ನಾದಿಯಾ ಹಾಗೆ ಸ್ಟಂಟ್ ಕೂಡ ಮಾಡಿದ್ದಾಳೆ. ಒಂಧು ಹಾಡನ್ನು ಬಾಲಗಂಧರ್ವರ ಸ್ಟೈಲಿನಲ್ಲಿ ಹಾಡಿದ್ದಾಳೆ. ನಿಮಗೆ ಗೊತ್ತಾ?, ಎರಡು ಮರಾಠಿ ಚಿತ್ರಗಳಲ್ಲಿಯೂ ಬಂದಿದ್ದಾಳೆ, 'ಶತಕರ್ತಾ ಶಿವಾಜಿ,' ಹಿಂದಿ 'ಕಾಲಾ ಪಹಾಡ' ಹೌದು, ಸೋಹನಿ ಮಹಿವಾಲದಲ್ಲಿ ಈಕೆಯ ಹೀರೋ ಕೃಷ್ಣರಾವ್ ಚೋಣಕರ ಅವನೇ, ಅಂವಾ, ಬಾಲಗಂಧರ್ವರ 'ಹೀರೋ' ಕೂಡಾ ಆಗಿದ್ದಾ! (ಗಂಧರ್ವರ ಸ್ತ್ರೀ ವೇಷದಲ್ಲಿ).

ನಾನು: ಬಾಲ ಗಂಧರ್ವರು ಏನೋ ಕೇಸ್ ಮಾಡಿದರಂತಲ್ಲ? ಅದರ ಬಗ್ಗೆ ಹೇಳಿ.

ರ.ಪಿ: ಗೋಹರ್ ಮತ್ತು ಅಮೀರಬಾಯಿ ಸಾಧಾರಣ ಒಂದೇ ಹೊತ್ತಿಗೆ ಕನ್ನಡ ಥಿಯೇಟರಿನಿಂದ ಹಿಂದಿ/ಉರ್ದು ಸಿನೆಮಾಕ್ಕೆ ಜಂಪ್ ಮಾಡಿದವರು. ಅಮೀರಬಾಯಿಗಿಂತ ಗೋಹರ್ ಸಂಗೀತದಲ್ಲಿ ಜಾಸ್ತಿ ಪರಿಶ್ರಮ ಮಾಡಿದವಳು. ಬಾಲಗಂಧರ್ವ ಗೋಹರಳ ಐಡಲ್! ಅವರ ಸಂಗೀತ, ನಮ್ಮ ಚಾಫೇಕರ್ ಇದ್ದಾನಲ್ಲ, ಛಾಫೇಕರ್ ನಾನಾ? ಅವನೊಂದಿಗೆ ಗೋಹರ್ ಇರುತ್ತಿದ್ದಳು. ಅವನೇ ಗೋಹರಗೆ 'ಕಾನ್ಹೋಪಾತ್ರಾ' ನಾಟಕದ ಹಾಡು ಕಲಿಸಿದ್ದ. ಈಕೆ ಪ್ರಾಕ್ಟೀಸು ಮಾಡಿ, ಮಾಡಿ 'ಗೋಲ ನಿಶಾನ' ಸಿನೇಮಾ ಹಾಡು ರಿಕಾರ್ಡು ಮಾಡೋ ಕಂಪನಿ ಜತೆ ಕಾಂಟ್ರಾಕ್ಟ ಮಾಡಿಕೊಂಡು 'ಅವಘಾಚಿ ಸಂಸಾರ' ಅದೇ ನಾಟಕದ ಮತ್ತೆರಡು ಹಾಡು ಹಾಡಿ ರಿಲೀಸ್ ಮಾಡಿದಳು. ಬಾಲಗಂಧರ್ವರ 'ಕಾನ್ಹೋಪಾತ್ರಾ' ನಾಟಕ ಜೋರಾಗಿ ಮುಂಬಯಿ, ಪುಣೆ, ಇಂದೋರ ಕಡೆ ಗಲ್ಲಾ ತುಂಬಿ ಹಣ ಕೊಡುತ್ತಿತ್ತು. ಸರಿ, ಗಂಧರ್ವರು ಹಾಡುಗಳ ರಾಯಲ್ಟಿ ಮೇಲೆ ಕೇಸ ಮಾಡಿದರು. ಗೋಹರಳ ವಕೀಲರು 'ಇವೆರಡು ಸಂತ ಕಾನ್ಹೋಪಾತ್ರಾರ ಹಾಡು-ಇದರ ಮ್ಯಾಲ ರಾಯಲ್ಟಿ ಹಕ್ಕು ಯಾರಿಗೂ ಇಲ್ಲ' ಎಂದು ವಾದಿಸಿದರು. ಎರಡೇ ಸಿಟ್ಟಿಂಗ್‌ನಲ್ಲಿ ಕೇಸು ಬಿದ್ದುಹೋಯ್ತು.

ನಾನು: ಮುಂದೆ ಏನಾಯಿತು?

ರ.ಪಿ: ವಸಂತ ಶಾಂತಾರಾಮ ದೇಸಾಯಿಯವರೇ ಕೇಸು ಮಾಡಲು ಹೇಳಿದ್ದು. ಅವರೇ 'ವಾಪಸ್‌ತಗೋ' ಎಂದು ಗಂಧರ್ವರಿಗೆ ಹೇಳಿದ್ದು. ಮುಂದೆ ಬಾಲಗಂಧರ್ವರೇ ಗೋಹರಬಾಯಿಯ ಮೋಹಪಾಶದಲ್ಲಿ ಸಿಕ್ಕಿಹಾಕಿಕೊಂಡು ವಿಲಿವಿಲಿ ಒದ್ದಾಡಿದರು.

ನನಗೆ ರವೀಂದ್ರ ಪಿಂಗೆಯವರಿಂದ ಸಿಕ್ಕ ಮಾಹಿತಿ ಇಷ್ಟೆ. ಆದರೆ ಒಂದು ಮಾತು ನಿಜವಾದುದು ಎಂದರೆ 'ಬಿ' ಗ್ರೇಡ್ ಹಿಂದಿ ಪಿಕ್ಚರುಗಳಿಂದ 'ಎ' ಗ್ರೇಡ್‌ಗೆ ಪ್ರೊಮೋಶನ್ ಸಿಗುವ ಮೊದಲೇ ಗೋಹರಬಾಯಿ ಕರ್ನಾಟಕಿ (ಬಿಜಾಪುರ) ಬಾಲಗಂಧರ್ವರ ಉಪಪತ್ನಿ ಆದಳು. ಮುಂದೆ 1937ರ ಸುಮಾರಿಗೆ ಪ್ರಾರಂಭವಾದ ಈ ಪ್ರಣಯ ಸಂಬಂಧ 1951ರಲ್ಲಿ ಮುಗಿದು, ಗಂಧರ್ವರ ಹೆಂಡತಿ ತೀರಿಕೊಂಡ ಮೇಲೆ ರಿಜಿಸ್ಟರ್ ವಿವಾಹದ ನಂತರ 'ಪತ್ನಿ' ಎಂದೆನಿಸಿಕೊಂಡಳು. ಅಂದರೆ ಮದುವೆಯಾದಾಗ ಗೋಹರಳಿಗೆ 40 ವರ್ಷ, ಮದುಮಗನಿಗೆ 63. ಗೋಹರ ಹೀಗೆ ತನ್ನ ಯೌವನದಲ್ಲಿಯೇ ತಾರಾಂಗಣ ಬಿಟ್ಟುಕೊಟ್ಟು ಗೆದ್ದಲು ಹಿಡಿದ ಗಂಧರ್ವ ಕಂಪನಿ ಸೇರಿ, ಮುದುಕ ಬಾಲಗಂಧರ್ವರ ಹೀರೋಯಿನ್ ಆಗಿ, ನಾಟಕಗಳಲ್ಲಿ ಕೆಲಸ ಮಾಡಿ, 'ನಿವೃತ್ತಿ' ಪಡೆದು ಕಂಪನಿಯ ಮ್ಯಾನೇಜರ್ ಆಗಿ, ಕಂಪನಿಯನ್ನೂ, ಮುದಿಕಾಲದಲ್ಲಿ ಗಂಧರ್ವರನ್ನೂ ಸಾಕಿ ಸಲಹಿದ ಮಹಾಪತ್ನಿ!

ಹುಟ್ಟು ನಟನಾದ, ಕಲೆಗಾಗಿಯೇ ಬದುಕಿ ಮರಾಠಿ ರಂಗಭೂಮಿಯ 'ನಟಸಾರ್ವಭೌಮ' ಎಂದು ಎನಿಸಿಕೊಂಡ ನಾರಾಯಣ ಶ್ರೀಪಾದ ರಾಜಹಂಸರಿಗೆ ನಾಟ್ಯ ಸರಸ್ವತಿ ಪ್ರಸನ್ನಳಾಗಿದ್ದಳು. ಸ್ತ್ರೀ ಪಾತ್ರಗಳಲ್ಲಿ ಹೆಸರು ಮಾಡಿದ, ನಮ್ಮ ಕನ್ನಡ ನಾಟಕಗಳ ಹೆಮ್ಮಿಗೆ ನೀಲಕಂಠಪ್ಪನಂತೆ 27 ವಿವಿಧ ಸ್ತ್ರೀ ಭೂಮಿಕೆಗಳನ್ನು ನಿರ್ವಹಿಸಿದ, ಗಂಧರ್ವರನ್ನು ಮರಾಠಿ ಪ್ರೇಕ್ಷಕರು ಅವರದೇ ಪುರುಷ ಭೂಮಿಕೆಗಳನ್ನು ಒಂದೇ ಏಟಿಗೆ ತಿರಸ್ಕರಿಸಿದರು. ಗಂಧರ್ವರಂತೆಯೇ ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಿದ್ದ ಗೋಹರಬಾಯಿಗೆ ಸಿಕ್ಕಿದ್ದು ನೆಗೆಟಿವ್ ಪ್ರತಿಕ್ರಿಯೆ. ಮರಳಿ ಮುದಿತನದಲ್ಲಿ ಗಂಧರ್ವರು ಸ್ತ್ರೀ ಪಾತ್ರ ಮಾಡಲು ಪ್ರಾರಂಭಿಸಿದ ಕೂಡಲೇ 'ಇನ್ನೂ ಗಂಧರ್ವ ಕಾಣಲು ಸಿಕ್ಕುವುದಿಲ್ಲ' ಎಂದು ಜನ ಕಿಕ್ಕಿರಿದು ಗಂಧರ್ವರ ನಾಟಕ ನೋಡಿದರು. ನಾಟಕ ಮಂಡಳಿಯ ಅರ್ಥವ್ಯವಸ್ಥೆ ಸುಧಾರಿಸಿತು. 'ಮುದುಕsಗs ದುಡಿಲಿಕ್ಕೆ ಹಚ್ಯಾಳ, ಈಕೀ ಮ್ಯಾನೇಜರ್ ಬಾಯಿ, ಮಜಾಮಾಡ್ತಾಳ' ಜನಸಾಮಾನ್ಯರು ಆಡಿಕೊಂಡರು. ಇದೇ ತಾತ್ಸಾರ ಗಂಧರ್ವಪ್ರೇಮಿಗಳಲ್ಲಿ ಗೋಹರ-ದ್ವೇಷದಲ್ಲಿ ರೂಪಾಂತರಿತವಾಯಿತು.

ಮೇರು ಕಲಾವಿದ ಬಾಲಗಂಧರ್ವರಿಗೆ ಬೇಕಾದಷ್ಟು ಹೊಗಳಿಕೆ, ಕೇಂದ್ರ ನಾಟಕ ಅಕಾಡೆಮಿಯ ಪುರಸ್ಕಾರ, ಪದ್ಮಶ್ರೀ ಗೌರವ, ಹಲವಾರು ಪತ್ರಿಕೆಗಳಲ್ಲಿ ಲೇಖಗಳು, ಬಾಲಗಂಧರ್ವರ ಮೇಲೆಯೇ 3-4 ಪುಸ್ತಕಗಳು ಇವೆ, ಅವರದೇ 75ನೇ ಹುಟ್ಟುಹಬ್ಬದ ದಿನಾಚರಣೆಗೆ ಅವರ ಪತ್ನಿಯಾದ ಗೋಹರಳಿಗೆ ವೇದಿಕೆಯ ಮೇಲೆ ಸ್ಥಾನವನ್ನು ಕೊಡದೇ, ತುಚ್ಛತೆಯಿಂದ ಅಲಕ್ಷಿಸಿದ್ದು, ಸ್ವತಃ ಬಾಲಗಂಧರ್ವರೇ ಅವಳನ್ನು ಕರೆಯದಿದ್ದಾಗ, ಗೋಹರ ಗಂಧರ್ವಳಿಗೆ ಏನು ಎನಿಸಿರಬೇಕು?

ಗೋಹರ, ಗಂಧರ್ವರ ಊಟ-ಉಪಚಾರ ನೋಡಿಕೊಂಡು, ಔಷಧ, ಗುಳಿಗೆ ಕೊಟ್ಟದ್ದು, ಅವರ ಕಂಪನಿಯಲ್ಲಿಯೇ ಒಂದು ಕಾಲದಲ್ಲಿ ನಟನಾಗಿದ್ದ ಖ್ಯಾತ

ಮರಾಠಿ ನಾಟಕಕಾರ, ನಟ, ಕವಿ ಬಾಳಕೊಲ್ಹಟಕರರು ತಾನು ಬರೆದ ನಾಟಕದ ಪುಸ್ತಕ 'ಪಾಹತೋ ಹೀ ದುರ್ವಾಂಚಿ ಜುಡಿ', ಮಾಹಿಮ್‌ದಲ್ಲಿ ಆಗ ವಾಸಿಸುತ್ತಿದ್ದ ಗಂಧರ್ವರಿಗೆ ಕೊಡಲು ಹೋದಾಗಿನ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಬರೆದಿಟ್ಟಿದ್ದಾರೆ.

'ಬಘಾ, ಕೋಣ ಆಲ್ಯೆತೇ. ಬಾಳs ಆಲಾsಯ್' ಎಂದು ಅತ್ಯಂತ ಪ್ರೀತಿಯಿಂದ, ಆಸಕ್ತಿಯಿಂದ 'ಬಾಳ'ನನ್ನು ಕುರ್ಚಿಯಲ್ಲಿ ಕೂಡಿಸಿ ಗಂಧರ್ವರಿಗೆ ಮದ್ದುಕೊಡಲು ಹೋದ ಬಗ್ಗೆ ಕೊಲ್ಹಟಕರ ಬರೆಯುತ್ತಾರೆ. 1950ರ ಸುಮಾರಿಗೆ ಅಹಮ್ಮದನಗರದಿಂದ ಪುಣೆಗೆ ಹೋಗುವಾಗ ತಮ್ಮ ಕಾರು ನಿಲ್ಲಿಸಿ, ಬಾಳನ ಕೈಯಲ್ಲಿ ಇನ್ನೂರು ರೂಪಾಯಿ ತುರುಕಿ, 'ಇಲ್ಲಿ ನಿನಗೇನೂ ಭವಿಷ್ಯವಿಲ್ಲ, ಕಂಪನಿ ಬಿಟ್ಟು ಬೇರೆ ಕಡೆ ಹೋಗು, ಭಗವಾನ ಭಲಾಕರೇ' ಎಂದು ಹರಸಿ ಕಳಿಸಿದ್ದನ್ನು ಕೊಲ್ಹಟಕರ ಜ್ಞಾಪಿಸಿಕೊಳ್ಳುತ್ತಾರೆ. 'ಗೋಹರಬಾಯಿಯಿಂದಲೇ ನಾನೊಬ್ಬ ಕಲಾವಿದನಾದೆ, ಲೇಖಕನಾದೆ'. ವ್ಯವಹಾರ ಕುಶಲತೆ ಇಲ್ಲದ ಗಂಧರ್ವರನ್ನು ವಾರ್ಧಕ್ಯದಲ್ಲಿ ಕಾಪಾಡಿದ್ದು ಗೋಹರ ಒಬ್ಬರೇ! ಕಂಪನಿ 1940ರಲ್ಲಿಯೇ ದಿವಾಳಿ ಆಗಿದ್ದರೂ, ಆಗಿನ ರಾಜ ಮಹಾರಾಜರಿಗೆ ಪತ್ರ ಬರೆದು 1954ರ ತನಕ ಕಂಪನಿಗೆ ರಾಜ ಮಾನ್ಯತೆಯನ್ನು ಪಡೆದು ನಡೆಸಿದ ಶ್ರೇಯ ಕೇವಲ ಗೋಹರಳದೇ.

ಅದೇನು ರಾಜಕೀಯ? ಗಂಧರ್ವರಿಗೆ ಆರ್ಥಿಕ ಸಹಾಯ ನೀಡಬೇಕು ಎಂದುಕೊಂಡು ಅಂದಿನ ಮುಂಬಯಿಯ ರಾಜಕೀಯ ನೇತಾರರು,ಪಿ.ಕೆ ಅತ್ರೇಯರಂತಹ ನಾಟಕಾರರು, ಮರಾಠಿ ನಾಟಕ ಪರಿಷತ್ತು ಕೂಡಿ ಹಣ ಒಟ್ಟು ಮಾಡಿ, ಧನಾದೇಶಕೊಡುವ ಪ್ರಸ್ತಾಪ 'ಗಂಧರ್ವರ ನಂತರ ಈ ಮೊತ್ತ ಅವರ ಹೆಂಡತಿ ಗೋಹರಬಾಯಿಗೆ ಸಿಗಬೇಕು' ಎಂಬುದು ವೃತ್ತಪತ್ರಿಕೆಗಳಲ್ಲಿ ಬಂದದ್ದೇ ತಡ, ಹಣ, ಒಟ್ಟಾಗುವ ಮೊದಲೇ ಗಾಳಿಯಲ್ಲಿ ಹಾರಿಹೋಯಿತು!

ಅರ್ಧಾಂಗವಾಯು ಹೊಡೆತದಿಂದ ಜರ್ಝರಿತರಾದ ಗಂಧರ್ವರನ್ನು ಆಕಾಶವಾಣಿ, ಇತರ ಸಂಘಸಂಸ್ಥೆಗಳು ಏರ್ಪಡಿಸಿದ ಕಚೇರಿಗಳು, ಗಣಪತಿ ಪೂಜೆಯ ಕಾರ್ಯಕಲಾಪಗಳಲ್ಲಿ ಅಕ್ಷರಶಃ ಅವರನ್ನು ಗೋಣಿಚೀಲದಲ್ಲಿ ಎತ್ತಿಕೊಂಡು ಹೋಗುವಂತಹ ವ್ಯವಸ್ಥೆಯನ್ನು ಗೋಹರಳೇ ಮಾಡಬೇಕಾಗುತ್ತಿತ್ತು. ಪ್ರತ್ಯೇಕವಾಗಿ ಗೋಹರಳಿಗೂ ಕರೆ ಬರುತ್ತಿತ್ತು. ಆದರೆ, ಇಬ್ಬರೂ ರೋಗಗ್ರಸ್ತರು. ಗೋಹರ ಸಕ್ಕರೆ ಬೇನೆಯಿಂದ ನರಳುತ್ತಿದ್ದರೆ, ಗಂಧರ್ವರಿಗೆ ಪಾರ್ಶ್ವವಾಯು, ದಮ್ಮು. ರಾತ್ರಿ, ಅಪರಾತ್ರಿ ಗೋಹರ್, ಗಂಧರ್ವರ ಸೇವೆ ಅನಿವಾರ್ಯತೆಯಿಂದ ಮಾಡುತ್ತಿದ್ದುದು ಬಾಳ ಕೊಲ್ಹಟಕರರು ನೆನಪಿಸಿಕೊಂಡಿದ್ದಾರೆ.

ಇಷ್ಟೆಲ್ಲ ದುಡಿದು, ಮಾನಸಿಕವಾಗಿ ದೈಹಿಕ ರೀತಿಯಲ್ಲಿ ಗಂಧರ್ವರಿಗೆ ಬೆಂಬಲ ನೀಡಿದರೂ ಗೋಹರಳಿಗೆ ಇದ್ದದ್ದು ನೈತಿಕ ಬಲವಷ್ಟೆ. ಆಸ್ತಮಾ ಬೇನೆ, ಡಯಾಬಿಟಿಸ್ ಬಲಿತು, ಗಂಧರ್ವರ 75ರ ಸಂಭ್ರಮ ಮುಗಿದ ಒಂದು ತಿಂಗಳಲ್ಲಿಯೇ ಗೋಹರ್ ತೀರಿಕೊಂಡಳು. ಮಾಹೀಮ್ ಕಬ್ರಸ್ಥಾನದಲ್ಲಿ ಅಂತ್ಯಸಂಸ್ಕಾರವಾಯಿತು. ಆಗ ಅವರಿಗೆ ಕೇವಲ 53 ವರ್ಷ ಅಷ್ಟೆ. ತಮ್ಮ 75ರ ಸಮಾರಂಭಕ್ಕೆಂದು ಹೋಗಿದ್ದ ಗಂಧರ್ವರು ಪುಣೆಯಿಂದ ಬಂದು ಮಾಹೀಮ್ ಕಬ್ರಸ್ಥಾನದಲ್ಲಿ 'ಹೆಂಗಸರಂತೆ' ಎದೆ ಬಡಿದುಕೊಂಡು ಅತ್ತದ್ದನ್ನು ಆಗ 85 ವರ್ಷ ದಾಟಿದ ಲಲಿತ ಕಲಾದರ್ಶ ಕಂಪನಿಯ ಮಾಲಕ ಭಾಲಚಂದ್ರ ಪೆಂಢಾರಕರರು ನೆನಪಿಸಿಕೊಳ್ಳುತ್ತಿದ್ದರು.

ಗೆಳೆಯ ವಿಕ್ರಾಂತ ಅಜಗಾಂವಕರ್ ಪ್ರತಿವರ್ಷ ಗೋಹರ್ 'ಬಾಬಾ' ತೀರಿಕೊಂಡ ದಿನ ಮಾಹೀಮ್ ಕಬ್ರಸ್ಥಾನಕ್ಕೆ ಹೋಗಿ ಕಣ್ಮುಚ್ಚಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಗೋಹರ್ ಬಾಬಾ ಎಂದು ಹೆಸರು ಇಟ್ಟಿದ್ದು ಬಾಲಗಂಧರ್ವರೇ। ಹೀಗೆ ಗಂಧರ್ವಯುಗದ ದುರಂತನಾಯಕ–ನಾಯಕಿಯರ ಕೊನೆಯಾಯಿತು.

ತಂದೆ: ಹುಸೇನ್ ಖಾನ್. ತಬಲಾ ಬಾರಿಸುವವರು, ಕನ್ನಡ ನಾಟಕ ಕಂಪನಿಗಳಲ್ಲಿ.

ಬಂಧುಬಳಗ: ಅಮೀರ್ ಬಾಯಿ, ಅಲ್ಲಮ್ಮಾ (ಅಹಲ್ಯಾ) ಬಡಿಮುನ್ನಿ, ಛೋಟಿ ಮುನ್ನಿ, ದಸ್ತಗೀರ (ತಮ್ಮ)

ವೃತ್ತಿ: ಕನ್ನಡ ನಾಟಕಗಳಲ್ಲಿ ಹಿರೋಯಿನ್, ವಾಣಿವಿಲಾಸ, ವಾಮನರಾವ್ ಮಾಸ್ತರರ ಕಂಪನಿ.

ಸಂಗೀತ ಶಿಕ್ಷಣ: ನೀಲಕಂಠ ಬುವಾ, ಪಂಚಾಕ್ಷರಿ ಹಾಗೂ ನಾಟ್ಯ ಸಂಗೀತ ಬಸವರಾಜ ಮನ್ಸೂರ ಮುಂತಾದವರಲ್ಲಿ.

ಹಿಂದಿ–ಮರಾಠಿ ಚಲನಚಿತ್ರಗಳು: ರಾಸ ವಿಲಾಸ(1932), ಕಾಲಾ ಪಹಾಡ (1932), ಸೋಹನಿ ಮಹಿವಾಲ (1933), ಕಾಳಾ ವಾಘ ಮತ್ತು ಶಕಕರ್ತಾ ಶಿವಾಜಿ (ಮರಾಠೀ), ಪ್ಯಾರ ಕೀ ಮಾರ್ (1935), ಬಾಂಸುರಿವಾಲಾ, ಗೋಲ ನಿಶಾನ್, ಗ್ರಾಡ್ಯುಯೇಟ್ (1936), ಕಾಲಾಭೂತ, ಚಾಬೂಕ ಸವಾರ (1937), ವಿಜಯ ಡಂಕಾ (1938), ಹವಾ ಖಟೋಲಾ ಮತ್ತು ಸ್ವದೇಶ ಸೇವಾ (1946), ಚಾಬೂಕ ಸ್ವಾರ ಮತ್ತು ಗೋಲ ನಿಶಾನ್ ಇವೆರಡರಲ್ಲಿ ಫಿಯರ್‌ಲೆಸ್ ನಾದಿಯಾಳಂತೆ ಸ್ಟಂಟ್ ರೋಲ್ ಹಾಡುಗಾರಿಕೆ ಅಪ್ರತಿಮ.

ರಿಕಾರ್ಡು: 100ಕ್ಕಿಂತ ಹೆಚ್ಚು ಹಾಡುಗಳು ರಿಕಾರ್ಡು ಆಗಿವೆ. ಅವಳು ಪಾತ್ರವಹಿಸಿದ ಚಲಚಿತ್ರಗಳು ಬಿ ಮತ್ತು ಸಿ ಗ್ರೇಡ್. ಹೀಗಾಗಿ ಕೇವಲ 15–18 ರಿಕಾರ್ಡುಗಳು ಉಪಲಬ್ಧವಿವೆ.

ವಿವಾಹ: 1951ರಲ್ಲಿ. ಮರಣ: 1964ರಲ್ಲಿ.

ವಿಶೇಷ ಟಿಪ್ಪಣಿ: ಗೋಹರ್ ಗಂಧರ್ವ ಹಾಗೂ ಬಾಲ ಗಂಧರ್ವರೊಂದಿಗೆ – ಇಬ್ಬರನ್ನೂ ನೋಡಿಕೊಳ್ಳಲು ಅವರ ಮಾಹಿಮ್ ಮನೆಯಲ್ಲಿ ಆಶಾ, ಆಶಾಬಿ, ಆಶಮ್ಮಾ ಎಂಬ ಹುಡುಗಿ ಇದ್ದಳು. ಬಾಳ ಕೊಲ್ಹಟಕರರು ಮಾಹೀಮ್ ಮನೆಯಲ್ಲಿ ನೋಡಿದಾಗ ಆಕೆಗೆ ಸಾಧಾರಣ 30–35 ವರ್ಷದ ಪ್ರಾಯ, ಒಂದೆರಡು ಪುಸ್ತಕಗಳಲ್ಲಿ ಆಶಮ್ಮಾ 'ಮುಂಬಯಿಗೆ ಬರುವ ಮೊದಲು ಆಶಮ್ಮಾ ಗೋಹರಳಿಗೆ 'ಹುಟ್ಟಿದ್ದು' ಎಂದು ಹೇಳಿರುವ ಸಂದರ್ಭಗಳಿವೆ. ಆಶಮ್ಮಾ ಗೋಹರ ಜೀವಿಸುವ ತನಕ ಮುಂಬೈನಲ್ಲಿದ್ದಳು. ಬಳಿಕ ಬೀಳಗಿಗೆ ಹೋಗಿರಬೇಕು.

*****

2.9

ಕನ್ನಡ ಮರಾಠಿ ರಂಗಗೀತೆಗಳ ಬಾದಶಾಹ ಪಂ. ಶಿವಾನಂದ ಪಾಟಿಲ (1961–2011)

ಐವತ್ತು ವರ್ಷಗಳ ಹಿಂದೆ ಬಾಳಪ್ಪ ಏಣಗಿಯವರ 'ಕಲಾವೈಭವ' ನಾಟಕ ಸಂಘದ ಕ್ಯಾಂಪಿನಲ್ಲಿ ಹುಟ್ಟಿದ ಶಿವಾನಂದನಿಗೆ ನಾಟಕಗಳ ಭಾಷೆ ಮತ್ತು ರಂಗಗೀತೆಗಳೇ ಬಾಲಾಮೃತ! ತಾಯಿ ಹೀರಾಬಾಯಿ ನಾಟಕಗಳಲ್ಲಿ ಮುಖ್ಯ ಸ್ತ್ರೀ ವೇಷಧಾರಿ, ಅಪ್ಪ ಶಂಕರ ಗೌಡರು ಹೀರೋ! ಜೊತೆಗೆ ಮಾಲಕರ ವೇಷ ಭೂಷ! ಹೀಗೆ ಪುಟ್ಟ ಶಿವಾನಂದ ನಾಲ್ಕೈದು ವರ್ಷದವನಾಗಿದ್ದಾಗ ನಾಟಕಗಳಲ್ಲಿ, 'ಪ್ರಹ್ಲಾದ', 'ಧ್ರುವ' ಇತ್ಯಾದಿ ಪಾತ್ರಗಳಲ್ಲಿ ನಟಿಸಿ ಗಾಯಕ ನಟನಾಗುವ ಸ್ವಪ್ನವನ್ನು ಕಾಣುತ್ತಿದ್ದನು. ಕಂಪನಿ ಬೀಡುಬಿಟ್ಟಲ್ಲಿ ಶಾಲೆ, ಇಲ್ಲದಿದ್ದರೆ ನಾಟಕ ಕಂಪನಿಯಲ್ಲಿ ಶಿಕ್ಷಣ. ಮುಂದೆ ಎಸ್.ಎಸ್.ಸಿ ತನಕ ಕಲಿತದ್ದು ಪಕ್ಕದಲ್ಲಿದ್ದ ಧಾರವಾಡದಲ್ಲಿ. ಹಾಗೆಯೇ ಪಂ. ಬಸವರಾಜ ರಾಜಗುರು ಮತ್ತು ಪಂ. ಚಂದ್ರಶೇಖರ ಪುರಾಣಿಕಮಠ ಇವರಲ್ಲಿ ಸಂಗೀತದ ಅಭ್ಯಾಸ ನಡೆಸಿದರು. ಜೊತೆಗೆ ಅತ್ಯಂತ ಸ್ನೇಹಪೂರ್ಣ ಮತ್ತು ಕೆಳೆತನದ ಸ್ವಭಾವವಿದ್ದುದರಿಂದ ಶ್ರೀಪತಿ ಪಾಡಿಗಾರ್, ನಾಗನಾಥ ಒಡೆಯರ, ಬಾಬುರಾವ್ ಮತ್ತು ಗಂಗೂಬಾಯಿ ಹಾನಗಲ್ ಅವರ ವಾತ್ಸಲ್ಯ ಮತ್ತು ಸಂಗೀತಸ್ನೇಹವನ್ನು ಕೂಡಾ ದೊರಕಿಸಿಕೊಂಡರು. ಗಂಗೂಬಾಯಿಯವರೇ ಈತನನ್ನು ಕುರಿತು, "ಬಾಂಬೆಗೆ ಹೋಗಪ್ಪಾ, ಇಲ್ಲೇ ಏನದ? ನೋಡು ಜೀವನದಾಗ ಉಠಾವ ಬೇಕಾದ್ರ (ಎತ್ತರಕ್ಕೆ ಏರಬೇಕಾದರೆ) ಬಾಂಬೆ ನೀರು ಕುಡಿಬೇಕು ನೋಡು" ಅಂದಿದ್ದರು. ಅದೇ ತಾನೆ ಎಸ್.ಎಸ್.ಸಿ ಮುಗಿಸಿದ್ದ ಶಿವಾನಂದ ಅದನ್ನೇ ಅಪ್ಪಣೆ ಎಂದು ತಿಳಿದು ಅವರಿಗೆ ವಂದಿಸಿ ತಾಯಿ ತಂದೆಯವರ ಆಶೀರ್ವಾದ ಪಡೆದು ಮುಂಬಯಿಗೆ ಬಂದರು.

ಮುಂಬಯಿಯ ಈರೋಸ್ ಚಿತ್ರಪಟಗೃಹದ ಪಕ್ಕದಲ್ಲಿಯ ಇರಾಣಿ ಹೊಟೆಲ್ಲಿನಲ್ಲಿ ಶಿವಾನಂದನ ಜೊತೆಗೆ ಕುಳಿತು, 'ಪಾನಿ ಕಮ್ ದೂಧ್ ಜ್ಯಾದಾ' ಮತ್ತು 'ಬ್ರೂನ್ ಮಸ್ಕಾ' ತಿನ್ನುತ್ತಿರುವಾಗ, ಇವೆಲ್ಲ ವಿವರಗಳು ಸಿಕ್ಕಿದ್ದು, ಇಂಗ್ಲಿಷ್ ಟೈಮ್ಸ್ ಪತ್ರಿಕೆಗೋಸ್ಕರ ಶಿವಾನಂದನ ಸಂದರ್ಶನ ಮಾಡಿದಾಗ. ಶಿವಾನಂದ ತನ್ನ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಅಲ್ಲಿಯೇ ಪಕ್ಕದ ಕಸ್ತೂರಿ ಬಿಲ್ಡಿಂಗಿನಲ್ಲಿ ಅವರು ವಾರಕ್ಕೆ ಮೂರು ದಿನ ಸಂಗೀತ ಕಲಿಸಲು ಬರುತ್ತಿದ್ದರು. ಕ್ಲಾಸ್ ಮುಗಿಸಿ ಆರಾಮವಾಗಿ ಹರಟೆ ಹೊಡೆಯುತ್ತ ಕುಳಿತ ನೆನಪು.

1991–92ರ ಮಾತಿರಬೇಕು. ಯೋಜನಾ(ಪತ್ನಿ) ಭಾಟ್ಯೆ ಇದ್ದಾಗಿನ ಮಾತು. 'ಪಾಟೀಲ' ಆದದ್ದು ಅವಳ ವಿವಾಹ ವಿಚ್ಛೇದನದ ನಂತರ 1994ರಲ್ಲಿ. ಆದರೆ ಇಬ್ಬರೂ ಮಧ್ಯ–ರೈಲ್ವೇಯ 'ಕಲ್ಚರ್ ಕೋಟಾ' ದಲ್ಲಿ ಕೆಲಸ ಮಾಡುತ್ತಿದ್ದರು. ಲೀವ್ ವಿಥ್ ಪೇ, ಲೀವ ವಿಥೌಟ ಪೇಗಳಲ್ಲಿಯೇ ತಮ್ಮ ನಾಟಕದ ಹಾಗೂ ಸಂಗೀತದ ಹುಚ್ಚನ್ನು ನಿಭಾಯಿಸಿ ಜೀವನ ಸಾಗಿಸುತ್ತಿದ್ದರು. ಆಕೆ ನಾಟಕಗಳಲ್ಲಿ ಸ್ತ್ರೀ ಭೂಮಿಕೆ, ಆತ ತನ್ನ ಸಂಗೀತ ಶಿಕ್ಷಣದೊಂದಿಗೆ (ಜಿತೇಂದ್ರ ಅಭಿಷೇಕಿ, ಕಾಣೆ ಬುವಾ ಸಾಂಗ್ಲಿ, ಯಶವಂತ ಬುವಾ ಜೋಶಿ) ನಾಟಗಳಲ್ಲಿಯೂ ಪಾತ್ರವಹಿಸುತ್ತಿದ್ದರು.

"ಶಿವಾನಂದ, ನೀವು ಒಂದು ಸಲ ಬಸವರಾಜ ರಾಜಗುರು ಮುಂಬಯಿಗೆ ಬಂದಾಗ ಭೇಟಿ ಮಾಡಬೇಕು ಅಂತ ಹೇಳಿದ್ರಲ್ಲ ಏನಾಯ್ತು?" ಎಂದು ಪ್ರಶ್ನಿಸಿದಾಗ, "ಬುರ್ಡೆ ಸಾಹೇಬ್ರೆ, ಅದು ಹೀಗಾಯ್ತು" ಎಂದು ತಾನು ಊರು ಬಿಟ್ಟು ಮುಂಬಯಿಗೆ ಬಂದಾಗ ಆಗಿನ ತನ್ನ ಕೂಳಿಲ್ಲದ ಅವಸ್ಥೆ, ಕೊನೆಗೆ ಯಾವದೋ ಬೀರ ಬಾರಿನಲ್ಲಿ ಮ್ಯಾನೇಜರ್ ಕೆಲಸ ಮಾಡುತ್ತಿದ್ದಾಗ ಬಸವರಾಜ ರಾಜಗುರು ತಮ್ಮ ಶಿಷ್ಯನನ್ನು ಹುಡುಕಿಕೊಂಡು ಬಂದ ಸಂದರ್ಭವನ್ನು ಶಿವಾನಂದರು ವರ್ಣಿಸಿದರು. ರಾಜಗುರು ಅವರ ಹೆಂಡತಿ, 'ಶಿವಾನಂದಗ ಬೇಸನ ಲಾಡು ಭಾಳ ಸೇರ್ತಾವ' ಎಂದು ಒಂದು ಡಬ್ಬಿ ತುಂಬಾ ಲಾಡು ಕೊಟ್ಟಿದ್ದರಂತೆ. ದಾದರ (ಪ)ದಲ್ಲಿಯ ಶ್ರೀ ಕೃಷ್ಣ ಬೋರ್ಡಿಂಗ ಮತ್ತು ಲಾಡ್ಜಿಂಗ ಅಂದರೆ ಧಾರವಾಡ ಕಡೆಯವರಿಗೆ ತವರುಮನೆ! ಅಲ್ಲೇ ಸಾಮಾನಿಟ್ಟು ಗುರುಗಳು (ರಾಜಗುರು) ಶಿಷ್ಯನನ್ನು ಹುಡುಕಿಕೊಂಡು ಅಲ್ಲಿ ಇಲ್ಲಿ ವಿಚಾರಿಸಿ ಲಾಡು ಡಬ್ಬಿ ಸಮೇತ ಬೀರ್ ಬಾರಿಗೆ ಎಂಟ್ರಿ ಮಾಡಿದರಂತೆ! ಅದೂ ರಾತ್ರಿಯ 9 ಗಂಟೆಗೆ. ಬಾರಿನಲ್ಲಿ ವ್ಯಾಪಾರ ಚೆನ್ನಾಗಿ ಇತ್ತು, ಹೀಗಾಗಿ ಮ್ಯಾನೇಜರ (ಶಿವಾನಂದ) ಬಳಿ ಕುಳಿತು ಅಂಗಡಿ ಬಂದ ಆದ ಮೇಲೆ ರೂಮಿಗೆ ಹೋಗಿ ತಾನು ತಂದ ಒಣ ಭಕ್ರಿ ಚಟ್ನಿ ಶಿಷ್ಯನಿಗೂ ತಿನಿಸಿ ಲಾಡು ಡಬ್ಬಿ ಕೊಟ್ಟು ತಬ್ಬಿಕೊಂಡರಂತೆ! ಈ ಮಾತನ್ನು ಹೇಳುವಾಗ ಶಿವಾನಂದರ ಕಣ್ಣು ತೇವವಾಗಿತ್ತು, ಕಿವಿ ಮೂಗು ಕೆಂಪಾಗಿತ್ತು.

ಮುಂದೆ ಶಿವಾನಂದ ಯೋಜನಾರ ಮದುವೆಯಾಯಿತು. ಯೋಜನಾ ಅವರು ಕ್ರಮೇಣ ರೈಲ್ವೆ ನೌಕರಿ ಬಿಟ್ಟುಕೊಟ್ಟು ಎಚ್.ಎಮ್.ವಿಯಲ್ಲಿ ಸೇರಿಕೊಂಡರು. ಜೀವನದಲ್ಲಿ ಒಂದು ಸ್ಥಿರತೆ ಬಂದಿತು. ನಾಟಕ, ಶೂಟಿಂಗ್ ಎಲ್ಲ ಶಿವಾನಂದರಿಗೆ ಬಿಟ್ಟುಕೊಟ್ಟು ಬಿಡುವಿನ ವೇಳೆಯಲ್ಲಿ ಪತಿಯಿಂದ ಸಂಗೀತ ಸಾಧನೆಯನ್ನೂ ಪ್ರಾರಂಭಿಸಿದರು. ಒಂದು ಕಾಲದಲ್ಲಿ ಅತ್ಯಂತ ಪ್ರಭಾವಿ ಹಿರೋಯಿನ್ ಎಂದು ಮೆರೆದ ಯೋಜನಾ, ಶಿವಾನಂದ ಪಾಟೀಲರ ಬಳಿ ಸಂಗೀತ ಕಲಿತು ಇಬ್ಬರೂ ಕಳೆದ 20 ವರ್ಷಗಳಲ್ಲಿ ಪ್ರತಿ ವರ್ಷ ಆಷಾಢ ಏಕಾದಶಿಯನ್ನು ವ್ರತಸ್ಥ ದಂಪತಿಗಳಂತೆ ಶಿವಾಜಿ ಮಂದಿರದಲ್ಲಿ, 'ಕಾನಡಾ ವಿಠ್ಠಲ'ನ ಕನ್ನಡ–ಮರಾಠಿ ಮತ್ತು ಹಿಂದಿ ಭಜನೆಗಳನ್ನು ಹಾಡಿ ಭಕ್ತರನ್ನೆಲ್ಲ ರಂಜಿಸುತ್ತಿದ್ದರು. ಅನೇಕ ಸಲ ಕರ್ನಾಟಕ ಸಂಘದಲ್ಲಿಯೂ ಗುರು ಬಸವರಾಜ ರಾಜಗುರು ಅವರ ನಿಧನದ ನಂತರ ಹತ್ತು ವರ್ಷ 'ಬಸವ ಸ್ಮೃತಿ'ಯನ್ನು ಆಯೋಜಿಸುತ್ತಿದ್ದರು.

1999ರ ಫೆಬ್ರುವರಿ 25ರಂದು ವಾರ್ಷಿಕ ವರದರಾಜ ಆದ್ಯ ಪ್ರಶಸ್ತಿಯ ಕಾರ್ಯಕ್ರಮವನ್ನು ಕರ್ನಾಟಕ ಸಂಘವು ಹಮ್ಮಿಕೊಂಡಿತ್ತು. ಪ್ರಶಸ್ತಿಯನ್ನು ಪಂ. ಭೀಮಸೇನ ಜೋಶಿಯವರಿಗೆ ಕೊಡುವದೆಂದು ತೀರ್ಮಾನವಾಗಿತ್ತು. ಪುಣೆಯಲ್ಲಿ ಕಾಲಿನ

ಆಪರೇಶನ್ ಆಗಿ ಚೇತರಿಸಿಕೊಳ್ಳುತ್ತಿದ್ದ ಜೋಶಿಯವರಿಗೆ ಅಲ್ಲಿಯೇ ಪ್ರಶಸ್ತಿಯನ್ನು ಕೊಡಮಾಡುವದೆಂಗು ನಿರ್ಧರಿಸಿ, ಶಿವಾನಂದ-ಯೋಜನಾ ಇವರಿಬ್ಬರ 'ಕನ್ನಡ, ಮರಾಠಿ ರಂಗಗೀತೆಗಳ ಗುಚ್ಛ'ವನ್ನು ಕರ್ನಾಟಕ ಸಂಘದ ಈ ಕಾರ್ಯಕ್ರಮದಲ್ಲಿ ಇಡುವ ನಿರ್ಧಾರವಾಯಿತು. ಆ ದಿನ ತಬಲಾ ನುಡಿಸಲು ಧನಂಜಯ ಪುರಾಣಿಕ ಮತ್ತು ಆರ್ಗನ್ ನುಡಿಸಲು ಆಲ್ಹಾದ ಹಾಟಕರ್ ಮತ್ತು ಶಿವಾನಂದರಿಗೆ ಸ್ವರಸಾಥ್ ಕೊಡಲು ವಿನಾಯಕ ಪ್ರಭು ಮತ್ತು ಯೋಜನಾರವರಿಗೆ ಪ್ರಾಜಕ್ತಾ ಮ್ಹಾಳಗಿ, ತಂಬೂರಿಯೊಂದಿಗೆ ಕುಳಿತಿದ್ದರು. ಕನ್ನಡ ಮರಾಠಿ ರಂಗಗೀತೆಗಳಿದ್ದುದರಿಂದ ಸಭಾಗೃಹ ಕಿಕ್ಕಿರಿದು ತುಂಬಿತ್ತು. ಗುರ್ಲಹೊಸೂರಿನ ಅಣ್ಣಾಸಾಹೇಬ ಕಿರ್ಲೋಸ್ಕರವರ ಮೊದಲನೇ ಕೃತಿ, 'ಶಾಕುಂತಲ'ದ ನಾಂದಿ 'ಪಂಚತುಂಡ ನರರುಂಡ ಮಾಳಧರ' ಈ ಅದ್ಭುತ ಸ್ತುತಿಯ (1880ರಲ್ಲಿ ಮೊದಲ ಪ್ರಯೋಗ) ಬಳಿಕ ಕನ್ನಡ ನಾಟಕದ ನಾಂದಿ, 'ಶುಭಕರ ಮಲ್ಲಿಕಾರ್ಜುನ' ಹಾಡಿ ಕನ್ನಡ ಮತ್ತು ಮರಾಠಿ ನಾಟಕಗಳ ಸಮಯೋಚಿತ ತಮ್ಮ ರಂಗಗೀತೆಗಳ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದರು. 'ಶುಭಕರ ಮಲ್ಲಿಕಾರ್ಜುನ' –ಇದು ಏಣಗಿ ಬಾಳಪ್ಪನವರ 'ಕಲಾವೈಭವ' ನಾಟಕ ಮಂಡಳಿಯ ನಾಂದಿ, ಶಿವಾನಂದ, ಈಗ ಎಲ್ಲರೂ ಮರೆತ ನಾಂದಿಯನ್ನು ತಮ್ಮ ಶಿಷ್ಯರಿಗೆ ಕಲಿಸಿ ವೇದಿಕೆಯ ಮೇಲೆ ಹಾಡಿಸಿದ್ದು ಈಗಲೂ ನೆನಪಿನಲ್ಲಿ ನಿಂತಿದೆ. ಬಹುಶಃ ಈ ಹಾಡು ನಾಂದಿಯೆಂದು ಕರ್ನಾಟಕದಲ್ಲಿಯೂ ನಾಮಾವಶೇಷವಾಗಿರಬೇಕು. ಕನ್ನಡ ಮತ್ತು ಮರಾಠಿ ನಾಂದಿಗಳ ನಂತರ ಶಿವಾನಂದ ಪಾಟಿಲರು ಒಂದಾನೊಂದು ಕಾಲದಲ್ಲಿ ಪ್ರಸಿದ್ಧಿಯ ಶಿಖರಕ್ಕೆ ಮುಟ್ಟಿದ್ದ ಎರಡು ಕನ್ನಡ ನಾಟಕಗಳಲ್ಲಿಯ ಅಂದರೆ, 'ಹೇಮರೆಡ್ಡಿ ಮಲ್ಲಮ್ಮ' ಮತ್ತು 'ಜಗಜ್ಯೋತಿ ಬಸವೇಶ್ವರ' ನಾಟಕಗಳ ಎರಡು ರಂಗಗೀತೆಗಳನ್ನು, ಒಂದಾದ ಮೇಲೆ ಇನ್ನೊಂದನ್ನು ಪ್ರಸ್ತುತಿಸಿದ್ದರು.

'ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿಯ ನಾಯಕ ಮಲ್ಲಿಕಾರ್ಜುನ, ಪಟದೀಪ ರಾಗದಲ್ಲಿ ಕಟ್ಟಿದ ಹಾಡು, 'ಅಹಾ ಮಮತೆ ಮಾತೆ' ಎಂಬುದು ಮಲ್ಲಮ್ಮ ಅನುಭವಿಸಿದ ಸಂಕಟ, ತಾಪತ್ರಯಗಳನ್ನು ಪ್ರೇಕ್ಷಕರಿಗೆ ವಿವರಿಸಿ ಹೇಳುತ್ತಾನೆ. ವೇದಿಕೆಯ ಮೇಲೆ ಮಲ್ಲಿಕಾರ್ಜುನ ಒಬ್ಬನೇ. ಬಹುಶಃ ದೃಶ್ಯ ಬದಲಾವಣೆಗಾಗಿ ಮಾಡಿದ ತಂತ್ರವಿರಬೇಕು. ಸುಮಾರು 10 ನಿಮಿಷದ ಹಾಡು ಇದು. ನಿಜ ನಾಟಕದಲ್ಲಿ, 'ವನ್ಸ್ ಮೋರ್' ಒಮ್ಮೆ ಸಿಕ್ಕರೂ ಸಾಕು! ಅಷ್ಟು ರುಚಿಕಟ್ಟಾದ ಹಾಡು. ಜಗಜ್ಯೋತಿ ಬಸವೇಶ್ವರದ ವೈಭವವು ಏಣಗಿ ಬಾಳಪ್ಪನವರಿಗೆ ತುಂಬಾ ಖ್ಯಾತಿಯನ್ನು ತಂದುಕೊಟ್ಟಿತ್ತು. ನಾಟಕ ಮಂಡಳಿಯ ಹೆಸರು, 'ಕಲಾ ವೈಭವ' ಸಾರ್ಥಕವಾಯಿತು.

2011ರ ಏಪ್ರಿಲ್ 24ರ ರವಿವಾರ ಮುಂಜಾನೆಯ ಲೋಕಸತ್ತಾದ ಮುಖಪುಟದಲ್ಲಿಯೇ ಶಿವಾನಂದರ ಫೊಟೊ ನೋಡಿ, 'ನಮ್ಮ ಶಿವಾನಂದರಿಗೆ ಮತ್ತೊಂದು ಸನ್ಮಾನ ಆಗಿರಬೇಕು' ಅಂದುಕೊಳ್ಳುತ್ತಿರುವಾಗ, 'ಅವರು ಕಣ್ಮರೆ' ಎಂದು ಓದಿ ತತ್ತರಿಸಿ ಖುರ್ಚಿಯಲ್ಲಿ ಕುಸಿದೆ. ಗಂಗೂಬಾಯಿಯವರ ಆಪ್ತರಲ್ಲಿ ಒಬ್ಬರೆಂದರೆ ಶಿವಾನಂದ ಮತ್ತು ಯೋಜನಾ ಪಾಟೀಲ. ಗಂಗೂಬಾಯಿಯವರು ಮುಂಬಯಿಗೆ ಬಂದಾಗಲೆಲ್ಲ ನಮ್ಮಲ್ಲಿ ಉಳಿದಾಗ ಪಾಟೀಲ ದಂಪತಿ ನಮ್ಮಲ್ಲಿ ಬರುತಿದ್ದುದರಿಂದ ನಮ್ಮ ಸಂಬಂಧ ಸ್ವಲ್ಪ ಕೌಟುಂಬಿಕವಾಗಿತ್ತು. ಶಿವಾನಂದ ಕೊನೆಯ ಉಸಿರು ಎಳೆದದ್ದು ಮುಂಬಯಿಯಲ್ಲಿಯೇ. 25-30 ದಿನಗಳ ಮೊದಲು ಹರ್ನಿಯಾದಿಂದ ಬಳಲುತ್ತಿದ್ದ ಶಿವಾನಂದರನ್ನು ಪುಣೆಯ ದೀನಾನಾಥ ಆಸ್ಪತ್ರೆಯಲ್ಲಿ ದಾಖಲಿಸಿದ್ದರು. ಲತಾ

ಮಂಗೇಶ್ಕರರವರ ಅತ್ಯಂತ ಕೃಪಾದೃಷ್ಟಿಯಲ್ಲಿದ್ದ ಶಿವಾನಂದರಿಗೆ ಈ ಆಸತ್ರೆಯಲ್ಲಿ ಒಳ್ಳೆಯ ಶುಶ್ರೂಷೆ ಸಿಕ್ಕಿತ್ತು. ಆಪರೇಶನ್ ಆಗಿ 4 ನೇ ದಿನವೇ ಇನಫ್ಷೆಕ್ಷನ್ ಆಗಿ ಒಂದೆರಡು ವಾರಗಳಲ್ಲಿ ಆರೋಗ್ಯ ಹದಗೆಟ್ಟು, ಒಂದೊಂದೆ ಅವಯವಗಳು ಕುಸಿಯಲು ಅವರನ್ನು ಮುಂಬಯಿಗೆ ತಂದರು. ಮೂರನೆಯ ದಿವಸವೇ ಅವರು ಅಸು ನೀಗಿದರು.

ಪಂ. ಶಿವಾನಂದ ಪಾಟಿಲರು ಒಬ್ಬ ಪ್ರತಿಭಾವಂತ ಗಾಯಕ. ಸಮಂಜಸ ವ್ಯಕ್ತಿತ್ವದ, ಕನ್ನಡ ಮರಾಠಿ ಭಾಷೆಗಳ ಸ್ನೇಹ ಸಂಬಂಧದ ಕುರುಹು! ಎಂದು ಕಳೆದ 25 ವರ್ಷಗಳಿಂದ ಮುಂಬಯಿಯ ಗಾಯನ ರಸಿಕರ ಪರಿಚಯವಿದ್ದ, ನಗು ಮುಖದ ತರುಣ ಇನ್ನಿಲ್ಲವಾದ. ವಿಷಾದದ ಮಾತೆಂದರೆ ಅವರು ತೀರಿಕೊಂಡ ಸುದ್ದಿ ಯಾವುದೇ ಕನ್ನಡ ಅಥವಾ ಇಂಗ್ಲಿಷ್ ಪತ್ರಿಕೆಗಳಲ್ಲಿ ಬಾರದೇ ಇದ್ದುದು. ಪಂ. ಭೀಮಸೇನ ಜೋಶಿಯವರಂತೆ ಕೊನೆಯ ತನಕವೂ ಕನ್ನಡದ ಸಂಬಂಧ ಇಟ್ಟುಕೊಂಡಿದ್ದ ಶಿವಾನಂದರನ್ನು ಎಲ್ಲರೂ ಮರೆತದ್ದು ಇನ್ನೂ ಹೆಚ್ಚಿನ ದುಃಖದ ವಿಷಯ.

2011ರ ಏಪ್ರಿಲ್ 23ರಂದು ಶಿವೈಕ್ಯರಾದ ಶಿವಾನಂದ ಪಾಟೀಲರ ಶ್ರದ್ಧಾಂಜಲಿಯ ಕಾರ್ಯಕ್ರಮವನ್ನು ಯೋಜನಾ ಪ್ರತಿಷ್ಠಾನದ ಪರವಾಗಿ ಮೇ 13ನೇ ತಾರೀಖಿನಂದು 'ಪು.ಲ ದೇಶಪಾಂಡೆ ಸಂಕುಲ'ದ 3ನೇ ಮಹಡಿಯ ಮಿನ ಥಿಯೇಟರನಲ್ಲಿ ಏರ್ಪಡಿಸಲಾಗಿತ್ತು. ವೇದಿಕೆಯ ಮೇಲೆ ಯೋಜನಾ, ಶಿವಾನಂದರು ಕಲಿಸಿದ, ರಾಗ ಪೂರಿಯಾ ಕಲ್ಯಾಣ್ ಹಾಡುತ್ತಿದ್ದರು. ವೇದಿಕೆಯ ಮೇಲೆ ಶಿವಾನಂದರ ಭಾವಚಿತ್ರ, ಶಿವಾನಂದರ ದೀರ್ಘಕಾಲದ ಗೆಳೆಯ ಓಂಕಾರ ಗುಲವಾಡಿ ತಬಲಾ ಬಾರಿಸುತ್ತಿದ್ದರು. ಹಾರ್ಮೋನಿಯಮ್ ಬಾರಿಸಲು ನಿರಂಜನ ಲೇಲೆ, ತಾನಪುರಾಗೆ ಪ್ರಕಾಶ ನಾಯಕ ಮತ್ತು ನಾಯಡು. ಅರ್ಧ ಗಂಟೆ 'ಪೂರಿಯಾ ಕಲ್ಯಾಣ' ಹಾಡಿ ಯೋಜನಾ ಬಳಿಕ ಶಿವಾನಂದರಿಗೆ ಅತ್ಯಂತ ಪ್ರಿಯವಾದ 'ಮೃಚ್ಛಕಟಿಕ' ಮರಾಠಿ ನಾಟಕದ ಹಾಡು ಕಾಲುಪೇಟಿಯ ಸಹಾಯದಿಂದ ಹಾಡಿದರು. ನಂತರ ಪಾಟಿಲರೇ ಸಂಗೀತಕೊಟ್ಟ 'ಮಧುಕೌಂಸ' ರಾಗದಲ್ಲಿಯ ವಿಠ್ಠಲನ ಹಾಡು ಹಾಡಿ ತನ್ನ ಶ್ರದ್ಧಾಂಜಲಿಯ ಕಾರ್ಯಕ್ರಮವನ್ನು ಮುಗಿಸಿದರು. ಬಾಳಸಂಗಾತಿ ಅಗಲಿಹೋದ ಕೇವಲ 20 ದಿನಗಳಲ್ಲಿಯೇ ಆತನ ಹೆಂಡತಿ ಹಾಡಿ ಸಂಗೀತಮಯ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದು ನನ್ನ 60 ವರ್ಷಗಳ ಕಚೇರಿಯನ್ನು ಕೇಳಿದ ನೆನಪುಗಳಲ್ಲಿ ಮೊದಲನೆಯದು. ಸಾಮಾಜಿಕ ರೀತಿಯಲ್ಲಿ ಲಿಂಗ ಭೇದಗಳನ್ನು ಹಿಂದೆ ಹಾಕಿ ಈಗಿನ ಸ್ತ್ರೀ ಮುಂದುವರಿದದ್ದನ್ನು ನೋಡಿ ಸಮಾಧಾನವಾಯಿತು. ಮದುವೆಯಾಗುವ ಮೊದಲು ಕೂಡ ನಾಟಕಗಳಲ್ಲಿ ಕೆಲಸ ಮಾಡುತ್ತಿದ್ದ ಯೋಜನಾ, ಮರಾಠಿ ರಂಗಭೂಮಿಯಲ್ಲಿ ಪಳಗಿದ ಹಾಡುವ ನಟಿ ಎಂದು ಹೆಸರು ಗಳಿಸಿದ್ದಳು. ಇಬ್ಬರದೂ ಸುಖಿ ಸಂಸಾರವಾಗಿತ್ತು. ಪತಿಯೇ ಗುರು ಕೂಡ. ತಾಯಿ ಸುಶೀಲಾ ಸಪ್ರೆಯಿಂದ ಮೊಟ್ಟಮೊದಲ ಸಂಗೀತ ಶಿಕ್ಷಣ. ನಂತರ ಜೈಪೂರ ಅತ್ರೋಳಿ ಪರಂಪರೆಯ ನಿವೃತ್ತಿ ಬುವಾ ಸರನಾಯಕರಲ್ಲಿ, ವಸಂತ ರಾಜೋಪಾಧ್ಯೆಯವರಲ್ಲಿ, ಹೀಗೆ ಯೋಜನಾ ಅವರು ಒಳ್ಳೆಯ ಸಂಗೀತ ಉಪಾಸನೆ ಮಾಡಿದ್ದು ಇದೆ.

ಕರ್ನಾಟಕ ಸರಕಾರ ಶಿವಾನಂದರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟು ಸನ್ಮಾನಿಸಿದೆ. ಕೃಷ್ಣಾ ಹಾನಗಲ್ ಮತ್ತು ದೀನಾನಾಥ ಪ್ರಶಸ್ತಿ ಕೂಡ ಅವರಿಗೆ ದೊರಕಿತ್ತು.

*****

2.10

ದತ್ತಾತ್ರೇಯ ಗರುಡ (??)

ಕರ್ನಾಟಕ ಸಂಘದವರೇ ಆದ ಡಾ. ಭರತಕುಮಾರ ಪೊಲಿಪು, ಕನ್ನಡ-ಮರಾಠಿ ನಾಟಕಗಳ ಸ್ಥಿತ್ಯಂತರಗಳ ಮೇಲೆ ಪಿಎಚ್.ಡಿ ಮಾಡುತ್ತಿದ್ದಾರೆ ಎಂದು ತಿಳಿದ ಕೂಡಲೇ ನನಗೆ ಎಲ್ಲಿಲ್ಲದ ಉತ್ಸಾಹ ಬಂದಿತು. ನಾನೇ ಅವರ ಸಲುವಾಗಿ ಶಾಂತಾ ಗೊಖಲೆ ಬರೆದ, ಪುಸ್ತಕ 'ಕಟಚಿಥಿತಿಡಿುಝಣ ಚಿಣ ಣುಜ ಅಜಟಣಡಿಜ: ಆಡಿಚಿಟಚಿ ಜಿಡಿಂಟ 1843 ಣಂ ಣುಜ ಕಡಿಜಿಜಟಣ ಕಲಕತ್ತೆಯಿಂದ ತರಿಸಿದೆ. ಅದು ಅವರಿಗೆ ಸಂದರ್ಭ ಗ್ರಂಥವೆಂದು ಉಪಯೋಗವಾಗಿರಬೇಕೆಂದುಕೊಂಡಿದ್ದೇನೆ.ಈ ಗ್ರಂಥದಿಂದ ನನಗೊಂದು ಕನ್ನಡ ವೃತ್ತಿನಾಟಕಗಳ ಬಗ್ಗೆ ಸರಣಿಯೊಂದನ್ನು, ಸ್ನೇಹ-ಸಂಬಂಧದಲ್ಲಿ ಪ್ರಾರಂಭಿಸುವ ಸ್ಫೂರ್ತಿ ಬಂದು ಅವುಗಳ ಮಾಹಿತಿ ಕಲೆ ಮಾಡಲು ಪ್ರಾರಂಭಿಸಿದೆ. ಬಳಿಕ ಅನಾರೋಗ್ಯದಿಂದ ಹಾಸಿಗೆ ಹಿಡಿಯಬೇಕಾಯಿತು, ಹೀಗಾಗಿ ನನ್ನ 'ಸರಣಿ' ಹುಟ್ಟುವ ಮೊದಲೇ ಅಸ್ತಂಗತವಾಯಿತು. ಬೆಂಗಳೂರಿಗೆ ಹೋದಾಗ (2008) ಮಲ್ಲೇಶ್ವರದಲ್ಲಿಯೇ ಇದ್ದ ಕಾರಣದಿಂದ, ಕೇವಲ ದತ್ತಾತ್ರೇಯ ಗರುಡರನ್ನು ಸಂದರ್ಶಿಸಿ ಕೆಲವು ಟಿಪ್ಪಣಿಗಳನ್ನು ಮಾಡಿಟ್ಟುಕೊಂಡಿದ್ದೆ. ಮೊನ್ನೆ ನನ್ನ ಪುಸ್ತಕದ ಕಪಾಟನ್ನು ಓರಣ ಮಾಡಿ ಇಡುವಾಗ ಟಿಪ್ಪಣಿಗಳ ಕಾಗದ ಸಿಕ್ಕಿತು. ಸರಿ ಪೆನ್ನು ಎತ್ತಿದೆ, ಬರೆಯಲು ಪ್ರಾರಂಭಿಸಿದೆ.

ಮಲ್ಲೇಶ್ವರದ 18 ನೇ ಕ್ರಾಸಿನಲ್ಲಿ ನನ್ನಕ್ಕ ಜ್ಯೋತ್ಸ್ನಾ ಕಾಮತರ ಮನೆ. ಬೆಂಗಳೂರಿಗೆ ಹೋದಾಗ ಇಳಿದುಕೊಳ್ಳುವದು ಅವರ ಮನೆಯಲ್ಲಿಯೇ. ಶ್ರೀ ದತ್ತಾತ್ರೇಯ ನಾಟಕ ಮಂಡಳಿಗೆ ಹುಟ್ಟು ಹಾಕಿದ ಗರುಡ ಸದಾಶಿವರಾಯರ ಮಗ ಪಂ. ದತ್ತಾತ್ರೇಯ ಗರುಡರು ಮಲ್ಲೇಶ್ವರದ 6ನೇ ಕ್ರಾಸಿನಲ್ಲಿಯೇ ಒಂದು ಪುಟ್ಟ ಸಂಗೀತ ಶಾಲೆಯನ್ನು ಮನೆಯಲ್ಲಿಯೇ ನಡೆಸಿಕೊಂಡು ಬಂದವರು. 95-96 ವಯಸ್ಸು ದಾಟಿದರೂ ಇನ್ನೂ ಚೆನ್ನಾಗಿ ತಬಲಾ ನುಡಿಸುತ್ತಾರೆ! ಎಂದು ಕೆನರಾ ಯುನಿಯನ್‌ಗೆ ಹೋದಾಗ ಮಾಹಿತಿ ಸಿಕ್ಕಿತು. (ಇದು ಹಿಂದುಸ್ತಾನಿ ಸಂಗೀತ ಕಚೇರಿಗಳ ತಾಣ) ಚರ್ಚಗೊಂದು ಚಾವಡಿಯ ಬಿ.ಎಸ್. ವೆಂಕಟಲಕ್ಷ್ಮೀ ನನ್ನನ್ನು ಭೆಟ್ಟಿ ಮಾಡಲು ಮಲ್ಲೇಶ್ವರಕ್ಕೆ ಬಂದಾಗ ನಾವಿಬ್ಬರೂ ಕೂಡಿ ದತ್ತಾತ್ರೇಯ ಗರುಡರನ್ನು ಸಂದರ್ಶಿಸಿದೆವು.

ನಾವಿಬ್ಬರೂ ಅವರನ್ನು ಕಾಣಲು ಹೋದಾಗ ಗರುಡರು ಶುಭ್ರವಸ್ತ್ರಾನ್ವಿತರಾಗಿ, ಗಾದಿಯೊಂದರ ಮೇಲೆ ಮಾತನಾಡಲು ಸಿದ್ಧರಾಗಿದ್ದಂತೆ ಉತ್ಸಾಹದಿಂದ ಕೂತಿದ್ದರು.

ಅವರ ಎದುರಿಗೆ ಅವರ ಶಿಷ್ಯೆ, ಸೌಮ್ಯ ಭಟ್ ಕೂಡ ಇದ್ದ ನೆನಪು. ಗರುಡರದು ಲಕ್ಷಣವಾದ ಮುಖ. ಇಳಿ ವಯಸ್ಸಾದರೂ ಒಂದು ತರಹದ ಎದ್ದುಕಾಣುವ ಶುಭ್ರತೆ. ಗರುಡರು ಮಾತನಾಡುತ್ತ ಹೋದರು, ನಾವು ಕೇಳುತ್ತ ಮೈಮರೆತೆವು!

ದತ್ತಾತ್ರೇಯ ಗರುಡರಿಂದ ಕನ್ನಡ ನಾಟಕಗಳ ಸುಮಾರು ಒಂದು ಶತಮಾನದ ಸಾಮಾಜಿಕ ಮತ್ತು ಐತಿಹಾಸಿಕ ಘಟನೆಗಳ ದಿಕ್ಸೂಚಿ ಸಿಕ್ಕಿತು. ಸ್ವಾತಂತ್ರ್ಯಪೂರ್ವ ಕರ್ನಾಟಕ, 'ಸದರ್ನ್ ಮರಾಠಾ ಕಂಟ್ರಿ' ಆಗಿದ್ದು ಹೈದ್ರಾಬಾದು-ಕರ್ನಾಟಕ, ಮದ್ರಾಸು-ಕರ್ನಾಟಕ, ಮೈಸೂರು-ಕರ್ನಾಟಕ ರಾಜ್ಯಗಳಲ್ಲಿ, ಅಲ್ಲಲ್ಲಿ ನಾಟಕಗಳನ್ನಾಡಿದ್ದ ಅವರ ಮಾಹಿತಿಗಳ ಮೂಟೆ ದೊಡ್ಡದು.

ಗದಗ ಗರುಡರ ಹುಟ್ಟೂರು. ತಂದೆ ಸದಾಶಿವರಾಯರು ಗದಗಿನಲ್ಲಿಯೇ ತಮ್ಮ ನಾಟ್ಯ ಸಂಸಾರ ಪ್ರಾರಂಭಿಸಿದ್ದು. ಅಧಿದೇವತೆ ಶ್ರೀ ದತ್ತಾತ್ರೇಯ. ಅವನ ಹೆಸರಿನಲ್ಲಿಯೇ, ಆರ್ಥಿಕ ಬಲವಿರದಿದ್ದರೂ, 1916ರಲ್ಲಿ ಕಂಪನಿಯನ್ನು ಹುಟ್ಟು ಹಾಕಿ ಮೊದಲು ಗದುಗಿನ ಆಸುಪಾಸಿನ ಹಳ್ಳಿಗಳಲ್ಲಿ ನಂತರ ಕ್ರಮೇಣ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಿಜಾಪುರ, ಹೈದ್ರಾಬಾದ-ಕರ್ನಾಟಕದ ಮೂಲೆಮೂಲೆಗಳಲ್ಲಿ ಸಂಚರಿಸಿದರು. ಸದಾಶಿವರಾಯರು ಸ್ವತಃ 50ಕ್ಕೂ ಮಿಕ್ಕಿ ನಾಟಕಗಳನ್ನು ಬರೆದರು. ಸಂಗೀತವನ್ನು ಒದಗಿಸಿದರು. ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದರೂ ಕೂಡ. ಗರುಡ ಕಂಪನಿಯ ಲೋಕಪ್ರಿಯ ನಾಟಕಗಳೆಂದರೆ, 'ಎಚ್ಚಮ ನಾಯಕ', 'ಶ್ರೀ ರಾಮಪಟ್ಟಾಭಿಷೇಕ', 'ಶ್ರೀ ಕೃಷ್ಣಲೀಲಾ', 'ವಿಷಮವಿವಾಹ', 'ಕಬೀರದಾಸ', 'ಶರಣ ಬಸವ', 'ಕೀಚಕ ವಧೆ' ಇತ್ಯಾದಿ. ಅವರ ಕಬೀರದಾಸ ಕೂಡ 1934-40ರಲ್ಲಿ ತುಂಬಾ ಜನಪ್ರಿಯವಾಗಿತ್ತಂತೆ. ಮನೋಹರ ಗ್ರಂಥಮಾಲೆಯ ರಮಾಕಾಂತ ಜೋಶಿ, ಗರುಡರ ಕೆಲವು ನಾಟಕಗಳನ್ನು ಡಾ. ಪ್ರಕಾಶ ಗರುಡರ (ಸದಾಶಿವರಾವ್ ಗರುಡರ ಮೊಮ್ಮಗ) ಸಹಾಯದಿಂದ ಪ್ರಕಟಿಸಿ, ಒಂದು ಐತಿಹಾಸಿಕ ಘಟನೆಯನ್ನು ಅಳಿಯದಂತೆ ನೋಡಿಕೊಂಡಿದ್ದನ್ನು ಇಲ್ಲಿ ನಾವು ಸ್ಮರಿಸಬೇಕು.

ಕಾಲು ಊನವಾಗಿದ್ದರೂ ಬಾಲ್ಯದಿಂದಲೇ ವೇದಿಕೆ ಹತ್ತಿದ್ದ ದತ್ತಾತ್ರೇಯ ಗರುಡರು ಸಂಗೀತದಲ್ಲಿ ಪ್ರಾವಿಣ್ಯಪಡೆದರು. ತಂದೆಯಿಂದ ಸಂಗೀತ ಕಲಿತರು. ತಬಲಾದಲ್ಲಿಯೂ ಪ್ರಾವಿಣ್ಯಗಳಿಸಿದರು. ಅಭಿನಯ ಸಾಧ್ಯವಾಗದಿದ್ದಾಗ, 'ಪಂಗುಂ ಲಂಘಯತೇ ಗಿರಿಂ' ಅನ್ನುವಂತೆ ನಾಟಕ ಗೃಹದ ಪಿಟ್ಟಿನಲ್ಲಿ ಕುಳಿತು ತಬಲಾ ಸಾಥ್ ಒದಗಿಸುತ್ತಿದ್ದರು. ಅವರು ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್, ಬೇಗಮ್ ಅಖ್ತರ, ರವಿಶಂಕರ, ಮತ್ತು ತಮಗೆ ಆಪ್ತರಾದ ರಾಮರಾವ್ ನಾಯಕ ಇವರಿಗೆಲ್ಲ ತಬಲಾ ಸಾಥ್ ಕೊಟ್ಟಿದ್ದಾರೆ. "ತಂದೆಯವರ ನಾಟಕ ಕಂಪನಿಯಲ್ಲಿ ಏನೇನೆಲ್ಲವನ್ನು ನಾನು ಮಾಡಿಲ್ಲ? ತಬಲಾ ಸಾಥ್, ಟಿಕೆಟ್ಟು ಮಾರಾಟ, ಹಳೆಯ ನಾಟಕಗಳ ತಾಲೀಮು, ಮತ್ತು ನಾಟಕಗಳಿಗೆ ಪ್ರಾಂಮ್ಟಿಂಗು ಕೂಡ. ಹೈದ್ರಾಬಾದ ಆಮೇಲೆ ಸಿಕಂದ್ರಾಬಾದದಲ್ಲಿ ಕೂಡ ಸಂಗೀತ ಶಾಲೆ ನಡೆಸುತ್ತಿದ್ದೆ. ಕೊನೆಗೆ ರಘುನಾಥರ ಹಾವಳಿಗೆ ಬೇಸತ್ತು ಬೆಂಗಳೂರಿಗೆ ಬರಬೇಕಾಯಿತು" ಎಂದು ಹೇಳಿದರು. "ಇಲ್ಲಿಯ (ಮಲ್ಲೇಶ್ವರದ) ಸಾಮಾನ್ಯ ಮನುಷ್ಯರೂ ಹಿಂದುಸ್ತಾನಿ ಸಂಗೀತದಲ್ಲಿ ರುಚಿ ಇಟ್ಟುಕೊಂಡವರು.

ಮಲ್ಲೇಶ್ವರದ ಸಾರಸ್ವತ ಸಮಾಜದವರು ಅಸಾಮಾನ್ಯ ರೀತಿಯಲ್ಲಿ ಸಹಾಯ ಮಾಡಿದ್ದುಂಟು. ಮಿನರ್ವ ಮಿಲ್ಲಿನಲ್ಲಿದ್ದ ಕಲ್ಲೆ ನಾರಾಯಣರಾಯರು ನನಗೆ ಮಿಲ್ ಕಾರ್ನರ್ ಪಕ್ಕದಲ್ಲಿಯೇ ಮನೆ ಕೊಡಿಸಿಕೊಟ್ಟರು. ಆಗಿನಿಂದ ಈ ತನಕ ನಾನು ನನ್ನ ಸಂಗೀತ ಕ್ಲಾಸು ನಡೆಸುತ್ತಾ ಇದ್ದೇನೆ."

" ಆಗಿನ ಕಾಲದ ನಟರ ಬಗ್ಗೆ ಸ್ವಲ್ಪ ಹೇಳಿ" ನಾನು ಕೇಳಿದೆ.

"ಹೆಮ್ಮಿಗೆ ನೀಲಕಂಠಪ್ಪ ಸ್ತ್ರೀ ಪಾತ್ರದಲ್ಲಿ ಅತ್ಯುತ್ತಮ ನಟರಾಗಿದ್ದರು. 'ವಿಷಮ ವಿವಾಹ'ದಲ್ಲಿ ಅವರನ್ನು ನೋಡಲಿಕ್ಕೆನೇ ಜನ ಮುತ್ತುತ್ತಿದ್ದರು. ನಮ್ಮ ತಂದೆ ಪ್ರತಿಯೊಂದು ನಾಟಕದಲ್ಲಿ ನಾಯಕನ ಗಂಭೀರ ಪಾತ್ರದಲ್ಲಿ ಶೋಭಿಸುತ್ತಿದ್ದರು. ಅವರ ಹಾಡುಗಾರಿಕೆ ಕೂಡ ಚೆನ್ನಾಗಿರುತ್ತಿತ್ತು. ಅನೇಕ ಹಿಂದುಸ್ತಾನಿ ರಾಗಗಳನ್ನು ಅವರು ರಂಗಗೀತೆಗಳಲ್ಲಿ ಅಳವಡಿಸಿಕೊಂಡಿದ್ದರು. 'ಎಚ್ಚೆಮನಾಯಕ' ನಾಟಕ ಅತ್ಯಂತ ಪ್ರಸಿದ್ಧವಾಗಿತ್ತು. ಶ್ರೀರಾಮಪಟ್ಟಾಭಿಷೇಕ, ಶ್ರೀಕೃಷ್ಣ ಲೀಲಾ, ಮಾಯಾಬಝಾರ್, ಪಾದುಕಾ, ಚೌತಿ ಚಂದ್ರ ಇವಕ್ಕೆಲ್ಲ ಆಕ್ಟಿಂಗ್, ಪ್ರಾಂಪ್ಟಿಗ್ ಮಾಡಿದೀನಿ. ತಬಲಾ ಸಾಥ್ ಕೊಟ್ಟದಿನಿ." 96 ವರ್ಷದ ದತ್ತಾತ್ರೇಯ ಗರುಡರು ಮಾತನಾಡುತ್ತಾ ಇದ್ದರು. ಅವರ ಶಿಷ್ಯರು ಅವರ ಸ್ವಾರಸ್ಯಕರ ಮಾತುಗಳನ್ನು ಆಲಿಸುತ್ತಿದ್ದರು. ಆ ಭಾನುವಾರ ನಮ್ಮ ಪಾಲಿಗೆ ಒಂದು ಮರೆಯಲಾಗದ ಅನುಭವವಾಗಿತ್ತು.

ದತ್ತಾತ್ರಯ ಗರುಡರ ತಂದೆ ಸದಾಶಿವರಾಯರು ಮುಂದೆ ವಾನಪ್ರಸ್ಥದಲ್ಲಿ ಋಷಿಗಳಂತೆ ವಾಸಿಸುತ್ತಿದ್ದರು. ಗದುಗಿನಲ್ಲಿ ಸ್ವಾಮಿ ಪ್ರಬೋಧಾನಂದರೆಂದು ತಮ್ಮ ಅಸ್ಖಲಿತ ವಾಣಿಯಲ್ಲಿ ಪ್ರವಚನ ಮಾಡುತ್ತಿದ್ದರಂತೆ. ಗದುಗಿನಲ್ಲಿ ಬಾಲ್ಯ ಕಳೆದ ದತ್ತಾತ್ರೇಯರ ಸಹಪಾಠಿ ಅಂದರೆ ಭೀಮಸೇನ ಜೋಶಿಯವರು. ಮುಂದೆ ಮನ್ಸೂರವರಿಗೂ, ರಾಜಗುರು ಅವರಿಗೂ ತಬಲಾ ಸಾಥ್ ನೀಡಿದ್ದುದನ್ನು ನೆನಪಿಸಿಕೊಂಡರು. ಅವರ ಮಗ ಗುರುಚರಣ ಒಳ್ಳೆಯ ತಬಲಾವಾದಕ. ಅಪ್ಪನ ಜೊತೆ ಕಲಿಸುತ್ತಿದ್ದ. ಮರಾಠಿ ಮನೆಮಾತಾದರೂ, ಅಪ್ಪಟ ಕನ್ನಡ ಮಾತನಾಡಿದ್ದನ್ನು ಈಗ ಕೇಳಿ ಬಹಳ ಖುಷಿಯಾಯಿತು. ಬಿ.ಎಸ್. ವೆಂಕಟಲಕ್ಷ್ಮೀಯವರೊಡನೆ ಈ ಅಪರೂಪದ ಕುಟುಂಬವನ್ನು ಸಂದರ್ಶಿಸಿದ್ದು ನನ್ನ ಪಾಲಿನ ಒಂದು ಅಪೂರ್ವ ಅನುಭವ. ಈಗ ಗರುಡರೂ ಇಲ್ಲ, ವೆಂಕಟಲಕ್ಷ್ಮೀ ಕೂಡ ಹಠಾತ್ತನೆ ತಮ್ಮ ಚಾವಡಿಗೆ ಬೀಗ ಹಾಕಿ 2010 ಜೂನ್ ತಿಂಗಳಲ್ಲಿ ಪರಲೋಕಕ್ಕೆ ಪ್ರವಾಸಗೈದರು. ಇರುವುದು ಕೇವಲ ನೆನಹುಗಳು.

*****

ಅಧ್ಯಾಯ 3

ಸಂಗೀತ ಸಾಮ್ರಾಜ್ಞಿಯರು

3.1

ಪ್ರಸ್ತಾವನೆ

ಕೆಲವು ವರ್ಷಗಳ ಹಿಂದೆ, ಉಡುಪಿಯಿಂದ ಪ್ರಕಟವಾಗುತ್ತಿದ್ದ ಸಂಗೀತಕ್ಕೆ ಮೀಸಲಾದ 'ರಾಗ ಧನಶ್ರೀ' ಎಂಬ ಮಾಸಪತ್ರಿಕೆಗೆ, ಅಪರೂಪದ ಧ್ವನಿಮುದ್ರಿಕೆಗಳು' ಎಂಬ ಲೇಖನಮಾಲೆ ಬರೆದಿದ್ದೆ. ಭಾರತೀಯ ಸಂಗೀತದ ಮೊಟ್ಟ ಮೊದಲ ಮುದ್ರಣ, 1902ನೇ ಇಸವಿಯ ನವೆಂಬರ್ 2ನೇ ತಾರೀಖು ಆದದ್ದು, ಅದೂ ಕಲಕತ್ತೆಯ ಆ ಕಾಲದ ದೊಡ್ಡ ಹೋಟೇಲಿನ ಎರಡು ವಿಶಾಲವಾದ ಹಾಲಿನಲ್ಲಿ (suite) ಸಮಾರಂಭ ಆಯೋಜಿಸಲಾಗಿತ್ತು. ಇದು ಹಿಂದುಸ್ತಾನಿ ಸಂಗೀತ ಇತಿಹಾಸದ ಒಂದು ದಾಖಲೆ. ಈ ಮುದ್ರಣಕ್ಕೆ ಗೋಹರಜಾನಳಿಗೆ ಮೂರು ಸಾವಿರ ರೂಪಾಯಿ ಧನಾದೇಶ ಆ ಕಾಲದಲ್ಲಿ ಕೊಡಲಾಗಿತ್ತು! ಈ ಗೋಹರಜಾನಳ ಬಗ್ಗೆ ಬರೆಯುವಾಗ ನನಗೆ ಹಿಂದುಸ್ತಾನಿ ಸಂಗೀತದಲ್ಲಿ ಹಾಡಿ, ಕುಣಿದು, ಸಾವಿರಾರು ಜನರಿಗೆ ಸಂತೋಷ ನೀಡಿದ ಈ ಪ್ರತಿಭಾಶಾಲಿ ಯುವತಿಯರ ಬಗ್ಗೆ, ಅವರ ಕೊಡುಗೆಯ ಬಗ್ಗೆ ಒಂದು ಲೇಖನಮಾಲೆ ಬರೆಯಬಹುದಲ್ಲ ಎಂದು ಅನಿಸಿದರೂ, ಈ ಐದು ವರ್ಷಗಳಲ್ಲಿ ಒಂದು ಸರಿಯಾದ, 'ಮೂಹೂರ್ತ' ಸಿಗದೇ ಲೇಖನ ಬರೆಯುವದನ್ನು ಮುಂದೆ ಹಾಕಬೇಕಾಯಿತು! ಮೊನ್ನೆ ಸೂಫಿ ಪಂಥ ಮತ್ತು ಹಿಂದುಸ್ತಾನಿ ಸಂಗೀತ ಈ ವಿಷಯದ ಮೇಲೆ ಬರೆಯುವಾಗ ಅದೇ ಮರೆತ ಕೊರೆತ ಮತ್ತೇ ಪ್ರಾರಂಭಿಸಿತು! ನಾಯಕಸಾನಿ, ಕೋರ್ಟೇಸನ್, ತವಾಯಫ್, ಡಾನ್ಸಿಂಗ್ ಗರ್ಲ್ಸ್, ಸಾನಿ, ಸೂಳೆ, ಇವೆಲ್ಲ ವಾರಾಂಗನೆಯರ ಅನೇಕ ಹೆಸರುಗಳು. ಕೆಲವರಿಗೆ ಗಣಿಕೆಯೆಂದು ಕರೆಯುವದುಂಟು. ವಸಂತಸೇನೆಯ ಕಾಲದಿಂದ ಖ್ಯಾತಿ ಪಡೆದ ಈ ಸಮಾಜ, ಭಾರತದಲ್ಲಿ ವಿವಿಧ ಕಾಲಖಂಡಗಳಲ್ಲಿ ಅತ್ಯುಚ್ಚ ಶ್ರೇಣಿಯಲ್ಲಿ ಇದ್ದದ್ದು, ವಿಶೇಷವಾಗಿ 64 ಕಲೆಗಳಲ್ಲಿ ಅಲ್ಲದಿದ್ದರೂ, ಒಂದು ಹತ್ತಿಪ್ಪತ್ತು ಕಲೆಗಳಲ್ಲಿ ಆದರೂ ಪ್ರಾವಿಣ್ಯ ಪಡೆದು, ರಾಜ ಮಹಾರಾಜರ ಕುಮಾರರಿಗಾಗಿ, ಆಸ್ಥಾನದಲ್ಲಿದ್ದವರ ಚಿರಂಜೀವರಿಗಾಗಿ ಒಂದು ತರಬೇತಿ ನೀಡುವ 'ಸಂಸ್ಥೆ' ಎಂದು ಹೆಸರು ಮಾಡಿದ್ದು ನಾವು ಕಾಣುತ್ತೇವೆ.

ಇದೇ ವಸಂತಸೇನೆ ಮುಂದೆ ಮೊಗಲರ ಕಾಲದಲ್ಲಿ, 'ತವಾಯಫ್' ಎಂದು 'ನಾಮಾಂತರ'ವಾದರೂ ವೃತ್ತಿಯನ್ನು ಬಿಟ್ಟುಕೊಡಲಿಲ್ಲ. ಹಾಡುಗಾರಿಕೆ, ವಿವಿಧ ವಾದ್ಯ ವಾದನ, ನೃತ್ಯ, ಓದು ಬರಹ, ಚಿತ್ರಕಲೆ, ಬಗೆಬಗೆಯ ಒಳಾಂಗಣ, ಹೊರಾಂಗಣ ಕ್ರೀಡೆಗಳು, ಆಟಗಳು ಮುಂತಾದ ಕಲೆಗಳಲ್ಲಿ ಪಾರಂಗತರಾಗಿ ಅವನ್ನೆಲ್ಲ ನವಾಬರ, ನವಾಬಜಾದರ ಮಕ್ಕಳಿಗೆ ಕಲಿಸಿ ಅವರನ್ನು ಸುಸಂಸ್ಕೃತ ಮನುಷ್ಯರನ್ನಾಗಿ ಮಾಡುವ ಭಾರ ಅವರ ಮೇಲಿತ್ತು! ಈ ಸಂಸ್ಕೃತಿ, ಲಖನೌ ನವಾಬ, ಖ್ಯಾತ ಸಂಗೀತಪ್ರಿಯ ವಾಜಿದಲಿಶಾಹನ ಆಳಿಕೆಯ ತನಕ ನಡೆದಿತ್ತು. ಖಿಲಜಿ ಮತ್ತು ಮೊಗಲ ಕಾಲದಲ್ಲಿ, 'ತವಾಯಫ್' ಸಂಸ್ಕೃತಿ ಉತ್ತರ ಹಿಂದುಸ್ಥಾನದಲ್ಲಿ ರೂಢಿಗೊಂಡು ಬ್ರಿಟಿಷರ ಆಗಮನದ ತನಕ ಅಂದರೆ, ಮೊದಲು ಕಲಕತ್ತೆ ರಾಜಧಾನಿ ಮಾಡಿಕೊಂಡು, ಬಳಿಕ ದೆಹಲಿಗೆ ಸ್ಥಿತ್ಯಂತರಿಸಿದ, ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿಯೇ ಈ ಸಂಸ್ಕೃತಿಯ ಇಳಿಗಾಲ ಪ್ರಾರಂಭವಾಯಿತು. 'ಕಂಪನಿ' ಸರಕಾರ ಭಾರತದಲ್ಲಿ ಬೇರು ಬಿಡುತ್ತಿದ್ದಾಗಲೇ, 45 ವರ್ಷದ ಒಬ್ಬ ಆಂಗ್ಲ ಸರದಾರ 14-15 ವರ್ಷದ ಬೇಗಮ್ ಸುಮ್ರು ಎಂಬ ತವಾಯಫ್ ಕನ್ಯೆಗೆ ಮರುಳಾಗಿ ಅವಳನ್ನು ಮದುವೆಯಾದದ್ದು, ಈ 'ತವಾಯಫ್' ಸಂಸ್ಕೃತಿಗೆ ಸ್ವಲ್ಪ ಸಾಮರ್ಥ್ಯ ನೀಡಿದ್ದು 1850 ರ ಸುಮಾರಿಗೆ.

1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಏನಕೇನ ಪ್ರಕಾರೇನ ಈ ನಾಯಕಸಾನಿಯರು ಉತ್ತರದಲ್ಲಿಯ ರಾಜ, ಮಹಾರಾಜ, ನವಾಬರಿಗೆ ಸಹಾಯ ಮಾಡುತ್ತಿದ್ದುದರಿಂದಲೋ ಏನೋ ಆಳುವವರ ವಕ್ರದೃಷ್ಟಿ ತವಾಯಫ಼ರ ಮೇಲೆ ಬಿದ್ದು ಅವರ ಅಳಿಗಾಲ ಪ್ರಾರಂಭವಾಯಿತು. ಜೊತೆಗೆ ಅದಾಗಲೇ ಪೌರ್ವಾತ್ಯರನ್ನು ಕಾಡು ಅಥವಾ ಅಸಂಸ್ಕೃತರೆಂದು ಪರಿಗಣಿಸಿ, ಮತಾಂತರಿಸಿ ಸಚ್ಚರಿತ್ರರನ್ನಾಗಿಸಿ, ಯೇಸುಕ್ರಿಸ್ತನ ಕೃಪೆಗೆ ಪಾತ್ರರನ್ನಾಗಿಸಲು ಕ್ರೈಸ್ತಮಿಶನರಿಗಳ ತಂಡಗಳು ಭಾರತಕ್ಕೆ ಬರಲಾರಂಭಿಸಿದವು. ಸ್ತ್ರೀ ಪುರುಷರ ವಿವಾಹ ಬಾಹ್ಯವಾದ, ಯಾವುದೇ ಸಾಂಸ್ಕೃತಿಕ ಕೂಟಗಳು ವಿಷಯಲಂಪಟತೆಯ ದ್ಯೋತಕವೆಂದು ಪರಿಗಣಿಸುವ ಕ್ರೈಸ್ತರ ನೈತಿಕ ನಿಷ್ಠುರತೆಯು (Puritanism), ಮೆಲ್ಲಮೆಲ್ಲಗೆ ಹರಡಲಾರಂಭಿಸಿದ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಜೊತೆಗೊಟ್ಟಿತು. ಸಂಗೀತ ನೃತ್ಯದಂತಹ ಲಲಿತಕಲೆಗಳಿಗೆ ಆಗರವಾಗಿದ್ದ ತವಾಯಫ್ ಕೋಠಿಗಳು ರಾಜಾಶ್ರಯ, ಲೋಕಾಶ್ರಯಗಳನ್ನೂ ಕಳೆದುಕೊಂಡು ಕ್ರಮೇಣ ವೇಶ್ಯಾವಾಟಿಕೆಯ ರೂಪ ಪಡೆದವು.

ವಸಂತಸೇನೆಯಂತಹ ಸುಸಂಸ್ಕೃತ, ಆಗರ್ಭ ಶ್ರೀಮಂತ ನಾಯಕಸಾನಿಯರ ಬಳಗದವರು ಸೂಳೆ, ಬೀದಿಬಸವಿ ಎಂದು ಎನಿಸಿಕೊಂಡರು! ಆದರೂ ದೆಹಲಿ, ಲಖನೌ, ಹೈದ್ರಾಬಾದ್, ಮುಂಬಯಿಯ 'ಪೀಲಾಹೌಸ್', ಕೆನೆಡಿ ಬ್ರಿಡ್ಜ್ ಭಾಗದಲ್ಲಿ 1960ರ ತನಕ, 'ಮುಜರಾ' ಮಾಡುವ, ತವಾಯಫ್ ಮನೆಗಳು ಗೌರವಾನ್ವಿತರಾಗಿ ಇದ್ದುದಕ್ಕೆ ಅನೇಕ ಪುರಾವೆಗಳಿವೆ. ನಾನೂ ಒಂದೆರಡು ಮುಜರಾ ನೋಡಿದ್ದೇನೆ! ಈ ಲೇಖನಮಾಲೆ 'ಕೋಠಿ' ಸಂಗೀತ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ನಾಯಕಸಾನಿಯರಿಗೆ, ಸಂಗೀತ ಸಾಮ್ರಾಜ್ಞಿಯರಿಗೆ ಮೀಸಲಾಗಿದೆ. ಪ್ರಮುಖವಾಗಿ ಉತ್ತರಭಾರತದ ನಾಯಕಸಾನಿಯವರ ಸಂಗೀತ-ನೃತ್ಯ ಕಲೆಯನ್ನು 'ಅಮೀರ್-

ಉಮರಾವ್' ಜನರಿಂದ ಹಿಡಿದು ಜನಸಾಮಾನ್ಯರಿಗೂ ಮುಟ್ಟಿಸುವ ಕಾರ್ಯ ಮಾಡಿದ್ದು, ಕಾಲಕಾಲಕ್ಕೆ ಧ್ವನಿಮುದ್ರಣ ಮಾಡಿ, ಠುಮರಿ, ದಾದರಾ, ಗಝಲ್, ಕವ್ವಾಲಿ ಮತ್ತು ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಬಗ್ಗೆ ಇದೆ. ಈ ಕೋಠಿಯಲ್ಲಿ ಸಂಗೀತ ಕಲಿಸುವ ಉಸ್ತಾದ್‌ರಿಗೆ ಮತ್ತು ಪಂಡಿತರಿಗೆ ಸಮಾಜದಲ್ಲಿ ಉಚ್ಚಸ್ಥಾನವಿತ್ತು. 'ಕೋಠಿವಾಲೆ ಗವಯಿ' ಎಂದು ಪರಿಚಯ ಮಾಡಿಕೊಡುವ ಕಾಲವೊಂದಿತ್ತು ಎಂಬುದು ಗಮನಾರ್ಹ!

*****

3.2

ಆಗ್ರೇವಾಲಿ ಜೋಹರಾಬಾಯಿ (1868–1913)

ಮುಂಬಯಿ ವಿದ್ಯಾಪೀಠದ ಸಂಗೀತ ವಿಭಾಗವು ಚರ್ಚಗೇಟ ಸ್ಟೇಶನ್‌ದ ಹತ್ತಿರ ಕ್ಲಬ್ ಹೌಸಿನಲ್ಲಿ ಇದೆ. ಇದರ ಮೊದಲ ಮುಖ್ಯಸ್ಥ ನನ್ನ ಸನ್ಮಿತ್ರ ಡಾ. ಅಶೋಕ ದ ರಾನಡೆ. ಇವರ ಸಾರಥ್ಯದಲ್ಲಿ ಸಂಗೀತ ವಿಭಾಗ ಭಾರತದಲ್ಲಿಯೇ ಮೊಟ್ಟ ಮೊದಲು ಪ್ರಾರಂಭವಾದದ್ದು ಮುಂಬಯಿಯಲ್ಲಿ. ರಾನಡೆಯವರು ವಿದ್ಯಾಲಯದ ಸಂಗೀತ ವಿಭಾಗದ ಪ್ರಾರಂಭದ ಹತ್ತು ವರ್ಷ ಅತ್ಯಂತ ನಿಪುಣತೆಯಿಂದ ತಮ್ಮ ಕಾರ್ಯಭಾರ ಚಲಾಯಿಸಿ ಅನೇಕ ಹೊಸ ಹೊಸ ವಿಷಯಗಳ ಅಧ್ಯಯನವನ್ನು ಪ್ರಾರಂಭಿಸಿದ್ದರು. ಅದರಲ್ಲಿ ಮೊದಲನೆಯದು ಅಂದರೆ 'ರಿಕಾರ್ಡುಗಳ ಸಲುವಾಗಿ ಧ್ವನಿಯ ಎಸೆತ'. ಇದರಲ್ಲಿ ಪಂ. ನಾರಾಯಣರಾವ್ ವ್ಯಾಸ ಪುರುಷಧ್ವನಿಗೆ ಉದಾಹರಣೆ ಎಂದೂ ಮತ್ತು ಜೋಹರಾ ಬಾಯಿ ಆಗ್ರೇವಾಲಿ ಇವಳದ್ದು ಸ್ತ್ರೀಧ್ವನಿಯದ್ದು ಎಂದೂ ಶ್ರವಣ ಸತ್ರದ ಪ್ರಾತ್ಯಕ್ಷಿಕೆಯಲ್ಲಿ ಹೇಳಿದ್ದು ಉಂಟು. ಅಂದರೆ ಪ್ರಾಯದ ಸಾಧಾರಣ 40ನೇ ವರ್ಷದಲ್ಲಿ ಮುದ್ರಣ ಮಾಡಿದ ಜೋಹರಾ ಈ ಕಲೆಯಲ್ಲಿ ನೈಪುಣ್ಯವನ್ನು ಹೇಗೆ ಸಾಧಿಸಿರಬೇಕು? ಎಂಬುದು ಯಕ್ಷಪ್ರಶ್ನೆ.

ರಿಕಾರ್ಡಿಂಗ್ ತಂತ್ರಜ್ಞಾನ, ಬಾಲ್ಯಾವಸ್ಥೆಯಲ್ಲಿದ್ದಾಗ ಗಾಯಕ–ಗಾಯಕಿಯರಿಗೆ ಒಂದು ದೊಡ್ಡ ಮೆಗಾಫೋನಿನಲ್ಲಿ ತಲೆ ಹಾಕಿ, ದೊಡ್ಡ ಧ್ವನಿಯಲ್ಲಿ ಕಿರುಚಿ, ಧ್ವನಿಮುದ್ರಣವನ್ನು ಮೇಣದ ಸಿಲಿಂಡರಗಳ ಮೇಲೆ ಮಾಡಬೇಕಾಗುತ್ತಿತ್ತು. ಹಳೆಯ ಎಚ್.ಎಮ್.ವಿಯವರ 78 ಆರ್‌ಪಿಎಮ್ ಸ್ಪೀಡಿನ ರಿಕಾರ್ಡುಗಳ ಮೇಲೆ ನೀವು ಒಂದು ನಾಯಿ ಮೆಗಾಫೋನಿನ ಬಳಿ ಕುಳಿತ ಚಿತ್ರವನ್ನು ನೋಡಿರಬಹುದು. ರಿಕಾರ್ಡಿಂಗ್ ಮೆಗಾಫೋನ್ ಇದೇ ತರಹದ್ದು. ಗೋಹರ, ಜಾನಕೀಬಾಯಿ, ಆಗ್ರೇವಾಲಿ ಮಲಕಾ ಇವರ ರಿಕಾರ್ಡಿಂಗ್ ಅಂದರೆ ಧ್ವನಿಮುದ್ರಣ ಇದೇ ರೀತಿಯಲ್ಲಿ ಮಾಡಲಾಗುತ್ತಿತ್ತು. ಧ್ವನಿಕ್ಷೇಪಕ ವ್ಯವಸ್ಥೆ ಇರದಿದ್ದರಿಂದ ನಾಟಕದ ಎಲ್ಲ ನಟ–ನಟಿಯರಿಗೆ, ಗಾಯಕ–ಗಾಯಕಿಯರಿಗೆ ಚಾಪೆಯ ಮೇಲೆ ಕುಳಿತವರಿಗೆ ಕೂಡ ಸರಿಯಾಗಿ ಕೇಳುವಂತೆ ಶಬ್ದಗಳನ್ನೂ, ಸ್ವರಗಳನ್ನೂ (ಗದ್ಯ–ಪದ್ಯ) ಅಕ್ಷರಶಃ ಎಸೆಯಬೇಕಾಗುತ್ತಿತ್ತು. ಇದೇ ರೀತಿ ಕೋಠಿಗಳಲ್ಲಿ, ಕಚೇರಿಗಳಲ್ಲಿ ಹಾಡಬೇಕಾಗುತ್ತಿತ್ತು. ಧ್ವನಿಮುದ್ರಣವನ್ನು ಕೂಡ ಇದೇ ರೀತಿಯಲ್ಲಿ ಮಾಡಬೇಕಾಗುತ್ತಿತ್ತು.

ಇಷ್ಟೆಲ್ಲ ಬರೆಯುವ ಕಾರಣ, ಪುರುಷ ಗಾಯಕರ ಮಾಡೆಲ್ ಎಂದು ಪಂ. ನಾರಾಯಣ ರಾವ್ ವ್ಯಾಸರ ಹೆಸರನ್ನು ಬರೆದರೂ ಅದರ ಮುದ್ರಣ ತಟ್ಟೆಗಳನ್ನು ಮಾಡುವಾಗ ತಂತ್ರಜ್ಞಾನದಲ್ಲಿ ಸಾಕಷ್ಟು ಸುಧಾರಣೆ ಆಗಿತ್ತು (1930–1935). ಆದರೆ ಗೋಹರ, ಮಲಕಾ, ಜಾನಕಿಯವರಂತೆಯೇ, ಜೋಹರಾಬಾಯಿಯ ಧ್ವನಿಮುದ್ರಣ ಪ್ರಾಥಮಿಕ ಹಂತದಲ್ಲಿಯೇ ಇದ್ದರೂ 1908ರಿಂದ 1911ರ ವರೆಗೆ ಹೊರತಂದ ತಟ್ಟೆಗಳನ್ನು ಆಲಿಸಿದರೆ ಅವಳ ಹಾಡುಗಾರಿಕೆಯ ಪರಿಪೂರ್ಣತೆಯ ಕಲ್ಪನೆ ಬರುತ್ತದೆ. ಅಂದರೆ ರಿಕಾರ್ಡಿಂಗ್ ಟೆಕ್ನಿಕ್‌ನಲ್ಲಿ ಕೂಡಾ ಆಕೆ ಪರಿಪೂರ್ಣತೆ ಸಾಧಿಸಿದ್ದಳು.

ಜೋಹರಾಬಾಯಿ 1913ರಲ್ಲಿಯೇ ತೀರಿಕೊಂಡಿದ್ದರಿಂದ, ಇವಳ ಒಂದೇ ಒಂದು ಚಿತ್ರ ಉಪಲಬ್ಧವಿದೆ. ಬಲಗೈಯಲ್ಲಿ ತಂಬೂರಿ ಮತ್ತು ಎಡತೊಡೆಯ ಮೇಲೆ ಬಹುಶಃ ಎರಡು ವರ್ಷ ವಯಸ್ಸಿನ ಮಗುವಿಗೆ ಜರಿಟೊಪ್ಪಿಹಾಕಿ ಎಡಕೈಯಿಂದ ಅವುಚಿ ಕುಳಿತು ತನ್ನ ಫೋಟೋ ತೆಗೆಸಿಕೊಂಡಿದ್ದಾಳೆ. ಚಿತ್ರ ಬಿಡಿ, ಇವಳ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಸಿಕ್ಕದ್ದು ಇಷ್ಟೆ! ಮರಾಠೀ ಭಾಷೆಯಲ್ಲಿ ಗೋವಿಂದರಾವ್ ಟೆಂಬೆ (ಇವರು ಮೊದಲ ಮರಾಠೀ ಚಿತ್ರಪಟ 'ಅಯೋಧ್ಯೆಚಾ ರಾಜಾ'ದಲ್ಲಿ ದುರ್ಗಾ ಖೋಟೆಯವರೊಂದಿಗೆ ನಟಿಸಿದ್ದಾರೆ) ಬರೆದ ಪುಸ್ತಕ 'ಮಾಝಾ ಸಂಗೀತಾಚಾ ವ್ಯಾಸಂಗ' ಹಾಗೂ ಖ್ಯಾತ ನಟಿ ಹಾಗೂ ಹಾಡುಗಾರ್ತಿ ಜ್ಯೋತ್ಸ್ನಾ ಭೋಳೆ ಇವರ ಪತಿ ಕೇಶವರಾವ್ ಭೋಳೆ ಬರೆದ ಕೆಲವು ವಾಕ್ಯಗಳು ಇದ್ದುದರಿಂದ ಈ ಲೇಖ ಬರೆಯುವ ಸಾಹಸ ಮಾಡಿದ್ದೇನೆ. ರಾಮಕೃಷ್ಣ ಬುವಾ ವಝೆ ಕೂಡ ಜೋಹರಾಬಾಯಿಯ ಮೆಹಫಿಲ್ಲುಗಳನ್ನು ಪ್ರತ್ಯಕ್ಷ ಕೇಳಿ ಬರೆದಿಟ್ಟಿದ್ದರಿಂದ ತುಂಬಾ ಸಹಾಯವಾಗಿದೆ.

ಜೋಹರಾಬಾಯಿ ಹುಟ್ಟಿದ್ದು 1868ರಲ್ಲಿ. ಇವಳ ಪ್ರಾಥಮಿಕ ಸಂಗೀತ ಶಿಕ್ಷಣವಾದದ್ದು ಅಹಮ್ಮದಖಾನ ಎಂಬ ಉಸ್ತಾದ್‌ನ ಬಳಿ. ಈತ ಆಗ್ರಾದವ, ಸಾರಂಗೀ ನವಾಜ ಎಂದೂ ಪ್ರಸಿದ್ಧಿ ಪಡೆದವ. ಹೀಗಾಗಿ ಆಗ್ರಾದಲ್ಲಿಯೇ ಹುಟ್ಟಿ ಬೆಳೆದವಳು ಎಂದುಕೊಂಡಿದ್ದೇವೆ. ಅತ್ರೋಲಿ ಇದು ಆಗ್ರಾ ಪಕ್ಕದಲ್ಲಿಯ ಊರು. ಊರಿನ ಖ್ಯಾತ 'ದರಸಪಿಯಾ' ಮೆಹಬೂಬ ಖಾನರ ಬಳಿ ಮುಂದಿನ ಶಿಕ್ಷಣವಾಯಿತು. ಜೋಹರಾ ನೃತ್ಯದಲ್ಲಿಯೂ ನೈಪುಣ್ಯವನ್ನು ಸಾಧಿಸಿದ್ದರಿಂದ ಆ ಕಾಲದ ರಾಜ, ಮಹಾರಾಜಾ, ನವಾಬರು ಅವಳ 'ಮುಜರಾ' ಮತ್ತು 'ಜಲಸಾ'ಗಳನ್ನು ಏರ್ಪಡಿಸುತ್ತಿದ್ದರಂತೆ. ಸ್ಥಾಯಿ ಹಾಗೂ ಅಂತರಾದಲ್ಲಿಯ ಆಕೆಯ 'ಪೇಶಕಶ್'(ಪ್ರಸ್ತುತಿ) ಅತುಲನೀಯವಾಗಿತ್ತು! ಎಂದು ವಝೆ ಬುವಾ ಬರೆದಿಟ್ಟಿದ್ದಾರೆ. ಒಬ್ಬ ಶ್ರೇಷ್ಠಗಾಯಕ ಮತ್ತೊಬ್ಬರ ಬಗ್ಗೆ ಹೀಗೆ ಬರೆಯುವುದು ವಿರಳ. ಅವಳ 'ದಾನೇದಾರ' (ಸೂಕ್ಷ್ಮ) ತಾನಗಳು ಅದ್ಭುತವಾಗಿದ್ದವಂತೆ. ಬಡೆ ಗುಲಾಮ ಅಲಿಖಾನ ಸಾಹೇಬರು ಮತ್ತು ಆಗ್ರಾ ಪರಂಪರೆಯ ಫೈಯಾಜಖಾನರು ಇವಳ ಧ್ವನಿಮುದ್ರಿಕೆಗಳನ್ನು ಆಲಿಸುತ್ತಿದ್ದರಂತೆ (ಪ್ರಾ. ಬಿ.ಆರ್. ದೇವಧರ್) ಇವಳು ಹಾಡುವ ರೀತಿ, ವೇಳೆ ಅಂದರೆ 3 ನಿಮಿಷದ ಹಾಡಿನಲ್ಲಿ ಖಯಾಲ್ ಬಹಳ ವ್ಯವಸ್ಥಿತವಾಗಿ ಪ್ರಸ್ತುತಿಪಡಿಸುವವರಲ್ಲಿ ಅಗ್ರಗಣ್ಯಳೆಂದು ಹೀರಾಬಾಯಿ ಬಡೋದೆಕರ್, ಅಬ್ದುಲ್ ಕರೀಂ ಖಾನರು ಇವಳನ್ನೇ ಅನುಸರಿಸುತ್ತಿದ್ದರು. ಉದಾಹರಣೆಗೆ ಇವಳ ಧ್ವನಿತಟ್ಟೆ, 'ಸೋಹನಿ' ರಾಗವನ್ನು ಕೇಳಿದ ಬಳಿಕ ಹೀರಾಬಾಯಿ

ಅಥವಾ ಅಬ್ದುಲ್ ಕರೀಂ ಖಾನರ ಗಾಯನ ಕೇಳಿದರೆ ನಾನು ಹೇಳಿದ್ದು ಸರಿ ಅನಿಸಬಹುದು.

ಜೋಹರಾಬಾಯಿಯ 60 ಹಾಡುಗಳನ್ನು ಮುದ್ರಿಸಿದ ಗ್ರಾಮೋಫೋನ ಕಂಪನಿ 1931ರ ವರೆಗೆ ಅಪರಿಮಿತ ಹಣ ಗಳಿಸಿತು. ಆಲಾಪ್, ಮುರಕಿ, ಖಟಕಾ, ಲಯಕಾರಿಯಲ್ಲಿಯ ಜಲದ್ ಗತಿಯ ತಾನಗಳು, ಸರಗಮ್ ಇತ್ಯಾದಿಗಳನ್ನು 3 ನಿಮಿಷಗಳಲ್ಲಿ ರಂಜಕತೆಯಿಂದ ಪ್ರಸ್ತುತಿಸಿದ್ದನ್ನು ನಾವು ಕೇಳಬಹುದು. ಇವಳ 'ಭೂಪಾಲಿ' ಹಾಗೂ 'ಸೋಹನಿ' ರಾಗಗಳು ಯು ಟ್ಯೂಬಿನಲ್ಲಿ ಇವೆ. ಸ್ವಲ್ಪ ಮರ್ದಾನಿ (ಗಂಗೂಬಾಯಿಯವರಂತೆ) ಕಂಠದ ಹಾಡುಗಾರಿಕೆ ಎಲ್.ಪಿ. ರಿಕಾರ್ಡು ಈಗಿನ ಕೇಳುಗರಿಗಾಗಿ ಆರ್‌ಪಿಜಿಯವರು 1994ರಲ್ಲಿ ಮಾರುಕಟ್ಟೆಯಲ್ಲಿ ತಂದರು. ಇವುಗಳಲ್ಲಿ ನಿಮಗೆ 18 ಹಾಡು/ರಾಗಗಳು ಸಿಗುತ್ತವೆ. 'ಅಲ್ಲಾ ಜಾನೆ, ಅಲ್ಲಾ ಜಾನೆ' (ತೋಡಿ), 'ಮಟಕಿ ರೇ ಮೋರಿ ಗೋರಸ' (ಜೌನಪುರಿ), 'ಪಿಯಾಕೆ ಮಿಲನ ಕಿ ಆಸ' (ಜೋಗಿಯಾ) ಇವುಗಳೆಲ್ಲ ಅದ್ಭುತವಾಗಿವೆ. 'ಗೌಡ ಸಾರಂಗ'ದಲ್ಲಿಯ ಠುಮರಿಯಂತೂ 'ತೇರಿ ಕಟೀಲಿ ನಿಗಾಹೋ ನೇಂ ಮಾರಾ' ಇದು ಅಕ್ಷರಶಃ ಗಾಯಗೊಳಿಸುತ್ತದೆ. ಇವಳ ಹಾಡುಗಳನ್ನು ಕೇಳಿ, 'ಜೋಹರಾ ಕ್ಯಾ ಚೀಸ್ ಥೀ' ಎಂಬ ಮಾತು ಮನದಟ್ಟಾಗಬಹುದು.

1913ರಲ್ಲಿಯೇ ಜೋಹರಬಾಯಿ ತನ್ನ ಬಹುಶಃ 45ನೇ ವರ್ಷದಲ್ಲಿಯೇ ತೀರಿಕೊಂಡಿದ್ದರಿಂದ ಈಕೆಗೆ ಗ್ರಾಮೋಫೋನ್ ಸೆಲೆಬ್ರಿಟಿಯಾದರೂ ಆ ಸನ್ಮಾನ ಅವಳ ಜೀವಮಾನದಲ್ಲಿ ಸಿಕ್ಕಿರಲಿಲ್ಲವೆಂದು ಕಾಣುತ್ತದೆ. ಅವಳ ಕೊನೆಯ ಧ್ವನಿಮುದ್ರಣ 1911ರಲ್ಲಿ ದಿಲ್ಲಿಯ ಹೋಟೆಲ್ ರೂಮಿನಲ್ಲಿ ಆಗಿತ್ತು. ಪ್ರತಿವರ್ಷ 2500 ರೂ ಬಿದಾಗಿ (ಗೌರವ ಧನ), ಹೋಗಿ ಬರುವ ಖರ್ಚು ಇತರ ಸಾಥಿದಾರರ (ಪಕ್ಕವಾದ್ಯದವರ) ಬಿದಾಗಿ, ಅವರ ಹೋಗಿ ಬರುವ ಖರ್ಚು ಹಾಗೂ ಮುದ್ರಣಕಾಲದಲ್ಲಿ ಎಲ್ಲರಿಗೂ ಉಚಿತ ವಸತಿ ಮತ್ತು ಭೋಜನ ವ್ಯವಸ್ಥೆಗಳನ್ನು ಗ್ರಾಮೊಫೋನ್ ಕಂಪನಿಯವರು ಮಾಡುತ್ತಿದ್ದರು. ಕಂಪನಿಯವರು ಜೋಹರಾ ಬಾಯಿಗೆ ಇತರ ರಿಕಾರ್ಡಿಂಗ್ ಕಂಪನಿಗಳಿಗೆ ಧ್ವನಿ ಎರವಲು ಕೊಡುವ ಪ್ರತಿಬಂಧವನ್ನು ವಿಧಿಸಿದ್ದರು. ಇವೆಲ್ಲ ಧ್ವನಿಮುದ್ರಣಗಳು ಕಂಪನಿಯ 1931ರ ಕ್ಯಾಟೆಲಾಗಿನಲ್ಲಿ ಬಂದ ಮೇಲೆ ಇವುಗಳ ಮಾರಾಟದ ಉಚ್ಚಾಂಕ 1932ರಲ್ಲಿ ಆಗಿತ್ತಂತೆ. ಹೀಗಿದೆ, ಜೋಹರಾಬಾಯಿಯ ಅಪೂರ್ಣ ಕತೆ–ಅವಳ ಒಂದೇ ಒಂದು ಚಿತ್ರದಂತೆ.

*****

3.3

ಸುಂದ್ರಾಬಾಯಿ ಜಾಧವ 'ಪುಣೆಕರೀಣ'
(ಕ್ರಿ.ಶ. ಅಂದಾಜು 1870–1953)

ಸುಂದ್ರಾಬಾಯಿ ಜಾಧವ ಇವಳ ಧ್ವನಿಮುದ್ರಿಕೆಯನ್ನು ನಾನು ಕೇಳಿದ್ದು 1996ರಲ್ಲಿ. ಆದರೆ ಆಕೆಯ, 'ಮಾಣೂಸ್' ಮರಾಠಿ ಚಿತ್ರದಲ್ಲಿಯ ಅಭಿನಯ ಹಾಗು ಹಾಡುಗಾರಿಕೆ ನೋಡಿದ್ದು, ಕೇಳಿದ್ದು, ಅನುಭವಿಸಿದ್ದು ಅದಕ್ಕೆ ಹತ್ತು ವರ್ಷ ಮೊದಲು. ಶಾಂತಾರಾಮ ವಣಕುದ್ರೆಯ 'ಪ್ರಭಾತ'ಕಂಪನಿಯ ಈ ಚಿತ್ರದಲ್ಲಿ. ಈಕೆ ಶಾಹು ಮೋಡಕ್‌ನ ತಾಯಿಯ ಭೂಮಿಕೆಯಲ್ಲಿ 'ಮನ ಪಾಪಿ ಭೂಲಾ' ಎಂಬ ಹಾಡು ತುಂಬ ಮನತಟ್ಟುವಂತೆ ಹಾಡಿದ್ದು ಇನ್ನೂ ನೆನೆಸಿಕೊಳ್ಳುತ್ತೇನೆ. ಈಕೆಯ ಶಿಷ್ಯೆ ಸುಶೀಲಾರಾಣಿ ತೊಂಬತ್ ಪಟೇಲ್ ಇವರು ದಕ್ಷಿಣ ಕನ್ನಡದವರಾಗಿದ್ದರೂ ಮುಂಬಯಿ ಪತ್ರಕರ್ತ ಹಾಗೂ ಸಿನೇಮಾ ಕ್ಷೇತ್ರದ ಬಾಬುರಾವ್ ಪಟೇಲರನ್ನು ಮದುವೆಯಾಗಿ ಎರಡು ಹಿಂದಿ ಸಿನೇಮಾದಲ್ಲಿ ನಟಿಸಿ, ಮುಂದೆ ಶಾಸ್ತ್ರೀಯ ಸಂಗೀತದಲ್ಲಿಯೂ ಪ್ರಾವಿಣ್ಯ ಪಡೆದವರು. 2014ರ ನವೆಂಬರ್‌ನ ತಮ್ಮ 96ನೆಯ ವಯಸ್ಸಿನಲ್ಲಿ ತೀರಿಕೊಂಡರು. ನಮ್ಮ ಆಮಂತ್ರಣ ಸ್ವೀಕರಿಸಿ ಸುಂದ್ರಾಬಾಯಿ ಜಾಧವರ ಒಂದೆರಡು ಹಾಡುಗಳನ್ನು ಕಲಾಭಾರತಿಯಲ್ಲಿ ಹಾಡಿ ದ್ರಕ್ ಶ್ರಾವ್ಯ ಕಾರ್ಯಕ್ರಮದಲ್ಲಿ ಪ್ರಸ್ತುತಿಸಿದ್ದೂ ಇದೆ!

ಸುಶೀಲಾರಾಣಿ ಬಾಬೂರಾವ ಪಟೇಲ ಇವರ ಮೃತ್ಯುವಿನ ನಂತರ, ಅವರ ಆಸ್ತಿಗಾಗಿ ಬಡೆದಾಟ ನಡೆದು, ಇಂಗ್ಲಿಷ–ಮರಾಠಿ ದಿನಪತ್ರಿಕೆಗಳ ಮುಖಪುಟದಲ್ಲಿ ಅವರು ಮಾಡಿದ ಟ್ರಸ್ಟ ಹಾಗೂ ಅವರ 'ಗಿರ್ನಾರ' ಬಂಗಲೆ ಬಳಿ ಸುಳಿಯುತ್ತಿದ್ದ ಆಪ್ತೇಷ್ಟರ ಕಲಹದಿಂದ ಅವರ ಶೋಕ ಸಭೆಗೆಂದು ಹೋದ ನಾವು ಪೋಲಿಸರ ಕಾವಲು ನೋಡಿ ಬೆದರಿ ಹಿಂದಕ್ಕೆ ಬರಬೇಕಾಯಿತು. 1980ರಿಂದ 2010ರ ತನಕ ಅವರ ಭವ್ಯವಾದ ಬಂಗಲೆಯಲ್ಲಿ ಗೋಕುಲಾಷ್ಟಮಿಯ ಸಂದರ್ಭದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿಯೂ ಅವರ, ದರ್ಬಾರ ಹಾಲಿನ ಪ್ರಶಸ್ತ ವಾತಾವರಣದಲ್ಲಿ ನಡೆದ ಸೆಮಿನಾರ್/ವರ್ಕಶಾಪ್‌ನಲ್ಲಿಯೂ ಭಾಗವಹಿಸಿದ ನನಗೆ ಪದೇ ಪದೇ ಅವರ ನೆನಪಾಗುವದು ಅತ್ಯಂತ ಸಹಜವಾದದ್ದು.

ಖ್ಯಾತ ಸಂಗೀತ ವಿಮರ್ಶಕ ಮೋಹನ ನಾಡಕರ್ಣಿಯವರ ಒಂದು ಅಚ್ಚುಮೆಚ್ಚಿನ ವಿಚಾರ ಸರಣಿ ಎಂದರೆ ವಿಂಧ್ಯಪ್ರದೇಶದ ಈಚೆಯವರಿಗೆ ಈ ಉತ್ತರಪ್ರದೇಶದ

ಉಪಶಾಸ್ತ್ರೀಯ ಸಂಗೀತ ದಕ್ಕುವದೇ ಇಲ್ಲ! ಕಾರಣ ಆಚೆಯವರ ಉಚ್ಚಾರ–ವಿಚಾರಗಳನ್ನು ಅರಿಯದೇ ಉರ್ದುಭಾಷೆಯ ಪ್ರಭುತ್ವವಿಲ್ಲದೇ ಅವರು ಹಾಡಿದ ಠುಮರಿ, ದಾದರಾ, ಚೈತಿ, ಕಜರಿ, ಝೂಲಾ ಇವನ್ನೆಲ್ಲ ಹೆಚ್ಚಿನ ಹಾಡುಗಾರ್ತಿಯರು ಕರ್ನಾಟಕ ಸಂಗೀತದ ನಾಟ್ಯಸಂಗೀತದ 'ಜಾವಳಿ', ಭಜನೆಯಂತೆ ಪ್ರಸ್ತುತಿಸುತ್ತಾರೆ. ಇದಕ್ಕೆ ಒಬ್ಬರೇ ಅಪವಾದ ಶೋಭಾ ಗುರ್ಟು!

ಮೋಹನ ನಾಡಕರ್ಣಿ ತಮ್ಮ ಒಂದು ಅಂಕಣದಲ್ಲಿ ಈ ಸಿದ್ಧಾಂತದ ಸಮರ್ಥನೆಗಾಗಿ ಉದಾಹರಣೆಗಳನ್ನೂ ಕೊಟ್ಟಿದ್ದಾರೆ. ಮುಂದೆ ಕುಮಾರ ಗಂಧರ್ವರ, 'ಮಲಾ ಉಮಜಲೆಲೆ ಬಾಲಗಂಧರ್ವ' ಎಂಬ ಕಾರ್ಯಕ್ರಮದ ವಿಮರ್ಶೆಯಲ್ಲಿಯೂ ಅವರ, 'ಕಾನಡಿ' ಉಚ್ಚಾರಗಳ ಮೇಲೆ ಬೊಟ್ಟು ಇಟ್ಟು ಸ್ವಲ್ಪ ಕಹಿಯಾಗಿಯೇ ಬರೆದದ್ದುಂಟು. ಈ ಐದು ದಶಕದಲ್ಲಿ ಆದದ್ದು ನೋಡಿದರೆ, ಅವರ ವಿಮರ್ಶೆಯಲ್ಲಿ ತಥ್ಯವಿದ್ದರೂ, ಇಲ್ಲಿಯ ಹಾಡುವವರ ಸಂಗೀತದಲ್ಲಿ ಇಲ್ಲಿಯ ಮಣ್ಣಿನ ಸುವಾಸನೆ ಬರುವದು ಸಹಜ ಎಂದು ನನ್ನ ಅನಿಸಿಕೆ.

ಗೋಹರಜಾನ್ ಎಂಬ ಉತ್ತರಪ್ರದೇಶದ ಗಾನ ಸುಂಟರಗಾಳಿಯ ಧ್ವನಿಮುದ್ರಿಕೆಗಳ ನಿನಾದದೊಂದಿಗೆ, ಬಾಲಗಂಧರ್ವ, ಸವಾಯಗಂಧರ್ವರ ಹಾಡುಗಾರಿಕೆಯ ಮೇಲೆ ಅವಳ ಪ್ರಭಾವ ಕಾಣಿಸುವದು ಸಹಜ. ಅವರ 'ಮರಾಠಿ ನಾಟ್ಯಸಂಗೀತ'ದಲ್ಲಿ ಠುಮರಿ, ದಾದರಾ, ಚೈತಿ, ಕಜರಿ, ಝೂಲಾ ಪ್ರಕಾರಗಳ ಮಿಶ್ರಣ ಕಾಣಿಸಿದರೆ, ಅದೊಂದು ಒಳ್ಳೆಯ ಲಕ್ಷಣವೇ! ಸಂಗೀತ ವಾತಾವರಣ ಪೋಷಣೆಗೆ ಬೇಕಾಗುವಂತಹದು. ಅಸ್ಸಲ್ ಮರಾಠಿ ಮಾತಿನ ಸುಂದ್ರಾಬಾಯಿಯವರ ಉಚ್ಚಾರ, ಪ್ರಸ್ತುತಿ, ಗೋಹರ, ಮಲಕಾ, ಜಾನಕೀಬಾಯಿಯವರನ್ನು ನಾಚಿಸುವಂತಹದಾಗಿತ್ತು ಎಂದು ನಾನು ಎದೆತಟ್ಟಿ ಹೇಳಬಲ್ಲೆ. ಇಷ್ಟೇ ಅಲ್ಲ , 1919ರಲ್ಲಿ ರಾಮ ಗಣೇಶ ಗಡಕರಿ ಅವರು ಬರೆದ . 'ಏಕಚ ಪ್ಯಾಲಾ' ನಾಟಕಕ್ಕೆ ಸುಂದ್ರಾಬಾಯಿ ಒಂದು ಉಚ್ಚಮಟ್ಟದ ಸಂಗೀತವನ್ನು ಕೊಟ್ಟರು. ಜೊತೆಗೆ ನಾಟ್ಯ ಸಂಗೀತಕ್ಕೆ ಮೋಹನ ನಾಡಕರ್ಣಿಯವರು ಎತ್ತಿದ ಆಕ್ಷೇಪವನ್ನು ಅಳಿಸಿ ಹಾಕಿದರು. ಉತ್ತರಪ್ರದೇಶದ ಉಪಶಾಸ್ತ್ರೀಯ ಸಂಗೀತಕ್ಕೂ ಒಂದು ತರಹದ ಸಂಮಿಶ್ರಣ, ನೀಡಿ ಅಜರಾಮರ ಮಾಡಿಟ್ಟಿದ್ದನ್ನು ಯಾರೂ ಅಲ್ಲಗಳೆಯಲಾರರು. ದುರ್ದೈವದ ವಿಷಯವೆಂದರೆ ನನಗೆ ಈ ವಿಚಾರ ಹೊಳೆದಾಗ ಅದರ ಕುರಿತು ವಿವರಣೆ ನೀಡಬಹುದಾಗಿದ್ದ ಮೋಹನ ನಾಡಕರ್ಣಿಯವರು ಅದಾಗಲೇ ನ್ಯೂಝಿಲಾಂಡ್‌ಗೆ ಸ್ಥಳಾಂತರಿಸಿದ್ದರು. ಅಲ್ಲಿಯೇ 2014ರಲ್ಲಿ ತೀರಿಕೊಂಡರು.

ಸಾಧಾರಣ 1870ರ ಸುಮಾರಿಗೆ ಹುಟ್ಟಿದ ಸುಂದ್ರಾಬಾಯಿಗೆ, 'ಏಕಚ ಪ್ಯಾಲಾ' ನಾಟಕದ ಸಂಗೀತ ದಿಗ್ದರ್ಶನ ಮಾಡುವಾಗ ಅವರಿಗೆ ನಡುವಯಸ್ಸು. ನನಗೆ ಸಿಕ್ಕ ಮಾಹಿತಿಯಂತೆ ಈ ನಾಟಕದ ಅಂದಾಜು 60 ಹಾಡುಗಳಲ್ಲಿ ಸುಂದ್ರಾಬಾಯಿ ಕೊಟ್ಟ ಮೂಲ ಹಿಂದಿ, ಬ್ರಿಜ್ ಭಾಷೆಗಳಲ್ಲಿಯ ಹಾಡುಗಳು ಸುಮಾರು 20 ಇರಬಹುದು. ಅವುಗಳಿಗೆ ಸೂಕ್ತ ಧಾಟಿ ಹಚ್ಚಿ ಬಾಲಗಂಧರ್ವರಿಂದ ಹಾಡಿಸಿದಳು. ಆಗ ಚಾಲ್ತಿಯಲ್ಲಿ ಇದ್ದ ಪದ್ಧತಿಯಂತೆ ರಾಮಲಾಲನ ಪಾತ್ರ ಮಾಡುತ್ತಿದ್ದ ಪಂಢರಪುರಕರ ಬುವಾ ತಮ್ಮ ಹಾಡುಗಳಿಗೆ ತಾವೇ ಧಾಟಿ ಹಚ್ಚಿದ್ದರು!

ಮುಂಬಯಿ ವಿ.ಟಿ ಸ್ಟೇಶನ್ (ಶಿವಾಜಿ ಟರ್ಮಿನಸ್) ಎದುರಿಗೆ ಇದ್ದ ನ್ಯೂ ಎಂಪೈರ್ ಥಿಯೇಟರಿನ ಪಕ್ಕದಲ್ಲಿ ದಾದಾಭಾಯಿ ನವರೋಜಿ ರಸ್ತೆಯಲ್ಲಿ ಎಂಪೈರ್ ಹೋಟೆಲಿತ್ತು. ಸುಂದ್ರಾಬಾಯಿ ಇಲ್ಲಿಯೇ ತನ್ನ ಕಚೇರಿಗಳನ್ನು ನಡೆಸಿ ತುಂಬ ಹಣ ಗಳಿಸಿದಳು. ಸುಶೀಲಾರಾಣಿ ಪಟೇಲ್ ಹೇಳಿದಂತೆ ಎಂಪೈರ್ ಹೋಟೇಲಿನ ಇಡೀ ಮೂರನೇ ಮಹಡಿ ಅವಳದೇ! ಸ್ವಂತ ಉಪಯೋಗಕ್ಕೆ ಎರಡು ಕಾರುಗಳು ಇದ್ದವು. ಆದರೆ ಅತ್ಯಂತ ಸರಳ ಸ್ವಭಾವದ ಮಹಿಳೆಯಾಗಿದ್ದಳು. 1942ರಲ್ಲಿ ಆಗರ್ಭ ಶ್ರೀಮಂತಿಕೆ ಅನುಭವಿಸಿದ ಸುಂದ್ರಾಬಾಯಿಗೆ 11 ವರ್ಷಗಳಲ್ಲಿಯೇ ಅದೇ ಹೋಟೇಲಿನ ಬಾಲ್ಕನಿಯಲ್ಲಿ ಒಂದು ಮಂಚದ ಮೇಲೆ ಮಲಗಲಿಕ್ಕೆ ಅನುಕೂಲ ಮಾಡಿಕೊಡಬೇಕಾಯಿತಂತೆ! ಆಕಾಶವಾಣಿಯ ಆಗಿನ ಡೈರೆಕ್ಟರ್ ಬುಖಾರಿ ಸಾಹೇಬರ ಕೃಪೆಯಿಂದ ಹಾಗೂ ಸುಶೀಲಾರಾಣಿ ಪಟೇಲರ ಗುರುದಕ್ಷಿಣೆಯಿಂದ ಕೊನೆಯ ದಿನಗಳಲ್ಲಿ ಸ್ವಲ್ಪವಾದರೂ ಆರ್ಥಿಕ ಸಹಾಯ ಸುಂದ್ರಾಬಾಯಿಗೆ ಸಿಕ್ಕಿತು. 1953ರಲ್ಲಿ ಜುಲೈ ತಿಂಗಳಲ್ಲಿ ಸುಂದ್ರಾಬಾಯಿ ಅದೇ ಹೊಟೇಲಿನ ಬಾಲ್ಕನಿಯಲ್ಲಿಯೇ ಕೊನೆಯ ಉಸಿರು ಎಳೆದಳು.

ಸುಶೀಲಾರಾಣಿ ಪಟೇಲರು ಕೊಟ್ಟ ಮಾಹಿತಿಯಂತೆ ಸುಂದ್ರಾಬಾಯಿಯ ಅಣ್ಣ ತಮ್ಮಂದಿರಿಂದ ತುಳುಕುತ್ತಿದ್ದ ಮನೆ ರಾಸ್ತಾಪೇಟನಲ್ಲಿತ್ತು. ಅಂತೆಯೇ ಅವರ ಧ್ವನಿಮುದ್ರಿಕೆಗಳಲ್ಲಿ 'ಪುಣೆಕರೀಣ'ಎಂಬ ವಿಶೇಷಣವಿದೆ. ಇದೇ ಊರಲ್ಲಿಯೇ ಗೋಂಧಳಿ ಸಮಾಜದ ದಾಭಾಡೆಯವರಿಂದ 'ಕಚ್ಚಾಗಾನಾ' ಅಂದರೆ, ಲಾವಣಿ, ಭಜನೆ ಇತ್ಯಾದಿ ಕಲಿತಳು. ಲಾವಣ್ಯ ಗೀತ ಎಂದರೆ ಲಾವಣಿ ಗೀತೆ ಎಂದು ಜಿ.ಎನ್ ಜೋಶಿಯವರು ಹೇಳಿದ್ದು. (ಇವರು ಗಂಗೂಬಾಯಿಯವರ ಜೊತೆ ಯುಗಲ ಗೀತೆ ಹಾಡಿದವರು). ಠಾಕೂರದಾಸ ಕಾನೋಜರಿಂದ ಶಾಸ್ತ್ರೋಕ್ತ ಸಂಗೀತ ಪ್ರಕಾರಗಳು ಮತ್ತು ಉಪಪ್ರಕಾರಗಳನ್ನು ಕಲಿತಳು. 'ರಾಧೆ ಕೃಷ್ಣ ಬೋಲ್ ಮುಖಸೆ' ಮೊಟ್ಟ ಮೊದಲು ಹಾಡಿದವರು ಸುಂದ್ರಾಬಾಯಿ. ನಂತರ ನಾರಾಯಣ ವ್ಯಾಸರಿಂದ ಹಿಡಿದು ಅನೇಕರು ಇದನ್ನು ಹಾಡಿ ಇವುಗಳ ಧ್ವನಿಮುದ್ರಣ ಮಾಡಿದ್ದಿದೆ.

ಗಿರಗಾಂವದ ಝೂವಬಾ ವಾಡಿಯ ಶೇಠ ಝೂವಬಾ, ಪಂ. ಭಾಸ್ಕರ ಬುವಾ ಬಖಲೆ ಮತ್ತಿತರ ಆಶ್ರಯದಲ್ಲಿ ಸುಂದ್ರಾಬಾಯಿ ಬೆಳೆದಳು. 100ಕ್ಕಿಂತ ಹೆಚ್ಚು ರೆಕಾರ್ಡುಗಳು ಇವಳ ಹೆಸರಲ್ಲಿವೆ. 1929ರ ಸುವರ್ಣ ಪದಕವನ್ನು ಇವಳಿಗೆ ಗ್ರಾಮೊಫೋನ ಕಂಪನಿಯಿಂದ ಕೊಡಲಾಗಿತ್ತು. 1920ರಿಂದ 1940ರ ತನಕದ ಎರಡು ದಶಕಗಳು ಸುಂದ್ರಾಬಾಯಿಯ ಸುವರ್ಣಯುಗ ಎಂದು ಹೇಳಬಹುದು. ಕೇವಲ ಮರಾಠಿ 2ನೇ ಇಯತ್ತೆ ಕಲಿತ ಸುಂದ್ರಾಬಾಯಿಗೆ ಅನೇಕ ಉದ್ಯಮಿಗಳು ತಲೆಕೆಡಿಸಿದರು. ಗ್ರಾಮೊಫೋನ್ ಕಂಪನಿ ಸ್ಥಾಪಿಸುವದರಿಂದ ಹಿಡಿದು, ಸಿನೇಮಾ ಮಾಡುವ ಕಂಪನಿಯವರೆಗೆ ಇವಳು ಕಷ್ಟಪಟ್ಟು ಒಟ್ಟು ಮಾಡಿದ್ದ ಅಸಲು ಬಡ್ಡಿ, ಚಕ್ರಬಡ್ಡಿಯ ಲೆಕ್ಕಾಚಾರದಲ್ಲಿ ತೊಡಗಿಸಿದ ಹಣವೆಲ್ಲ 1951ರ ವೇಳೆಗೆ ಕರಗಿಹೋಯಿತು.

26ಮಹಾರಾಷ್ಟ್ರದಲ್ಲಿ ಹುಟ್ಟಿ, ಕಲಕತ್ತಾ, ಬನಾರಸ್, ಅಲಹಾಬಾದ, ಗ್ವಾಲಿಯರ್, ಇಂದೂರ್‌ನಂತಹ ಹಿಂದಿ ಪ್ರದೇಶದಲ್ಲಿಯೂ ತನ್ನ ಅಸ್ಖಲಿತ ಉಚ್ಚಾರದಿಂದ,

ಸ್ವರಾಲಾಪನೆಯಿಂದ ಎದೆ ತುಂಬಿ ಹಾಡಿ, ರಸಿಕಜನರ ಮಾನ್ಯತೆಯನ್ನು 1940ರಲ್ಲಿಯೇ ಗಳಿಸಿದ ಸುಂದ್ರಾಬಾಯಿ ನಿಜಕ್ಕೂ ಧನ್ಯಳು. ಆದರೆ, ಇಷ್ಟೆಲ್ಲ ಪ್ರತಿಭೆಯಿದ್ದರೂ ಆಕೆಯ ಸಾವಿನ ನಂತರ ಒಬ್ಬ ಪುಣ್ಯಾತ್ಮನು ಮರಾಠಿ ಪತ್ರಿಕೆಗಳಲ್ಲಾಗಲೀ, ಇಂಗ್ಲಿಷು ಅಥವಾ ಧರ್ಮಯುಗದಂತಹ ವಾರಪತ್ರಿಕೆಯಾಗಲೀ ನೆನೆಸಿಕೊಳ್ಳದೇ ಇದ್ದದ್ದು ಅನ್ಯಾಯವಲ್ಲವೇ? ಅವರ ಚರಿತ್ರೆಯನ್ನಾದರೂ ಬರೆದಿಡಲು ಯಾರಾದರು ಮುಂದೆ ಬಂದಾರೆಯೆ?

*****

3.4

ಮೈನೇಮ್ ಈಸ್ ಜಾನಕೀಬಾಯಿ, ಅಲಹಾಬಾದ್ ಅಥವಾ 'ಛಪ್ಪನ್ ಚೂರೀ ಜಾನಕೀಬಾಯಿ'(1880–1934)

ಇದು ಸಾಧಾರಣ 135 ವರ್ಷಗಳ ಹಿಂದೆ ನಡೆದ ಸತ್ಯಕತೆ. ಉತ್ತರ ಪ್ರದೇಶದ ಪ್ರಯಾಗ ಅಥವಾ ಅಲಹಾಬಾದದಲ್ಲಿ ನಡೆದದ್ದು. ಹೋಳಿ ಹಬ್ಬದ ಮೊದಲನೇ ದಿನ ಪೈಲವಾನ ಶಿವಬಾಲಕರಾಮ್ ಬನಾರಸದಿಂದ ಅಲಹಾಬಾದಕ್ಕೆ ಕುಸ್ತಿ ಪಂದ್ಯದಲ್ಲಿ ಭಾಗವಹಿಸಲು ಬಂದಿದ್ದ. ರಾತ್ರಿ ಗಂಗಾತೀರದ ಪಕ್ಕದಲ್ಲಿಯೇ ಹಾಡು ಹೇಳುತ್ತಾ ನಡೆಯುತ್ತಿದ್ದಾಗ, ಯಾರೋ ನದಿಯಲ್ಲಿ ಜಿಗಿದ ಸಪ್ಪಳ ಕೇಳಿಸಿತು ಅವನಿಗೆ. ಕೂಡಲೇ ನದಿಗೆ ಜಿಗಿದ ಈ ಪೈಲವಾನ ಮೀನಿನಂತೆ ಈಜಿ, ಆತ್ಮಹತ್ಯೆಮಾಡಿಕೊಳ್ಳಲು ಬಂದವಳನ್ನು ಎತ್ತಿ ದಡದ ಮೇಲಿಟ್ಟು ಪ್ರಾಣ ಉಳಿಸಿದ. ಸೆರಗಿನಲ್ಲಿ ಕಟ್ಟಿಕೊಂಡ ಶಿಶು ಅದಾಗಲೇ ತೀರಿಕೊಂಡಿತ್ತು. ಅವಳ ಹೆಸರು ಲಕ್ಷ್ಮಿ. ಬ್ರಾಹ್ಮಣ ಕುಲಕ್ಕೆ ಸೇರಿದ ಕುಮಾರಿಮಾತೆ.

ಶಿವಬಾಲಕರಾಮ ಪೈಲವಾನ, ಆಹಿರಜಾತಿಗೆ ಸೇರಿದವ, ಅಂದರೆ ಯಾದವ, ನಮ್ಮ ಕಡೆಯ ಗವಳಿಗಳ ಹಾಗೆ. ಈತ ಬನಾರಸದಲ್ಲಿ ಹಾಲು ಹಾಗೂ ಮಿಠಾಯಿ ಅಂಗಡಿ ಇಟ್ಟುಕೊಂಡಿದ್ದ. ಹೆಂಡತಿ ಮಾನಕಿ, ಒಬ್ಬಳೇ ಮಗಳು ಜಾನಕೀ, ಸಾಧಾರಣ 8–9 ವರ್ಷದವಳು.

ತಾನು ಪ್ರಾಣ ಉಳಿಸಿದವಳನ್ನು ದಿಟ್ಟಿಸಿ ನೋಡಿದ ಶಿವಬಾಲಕರಾಮ್. ಲಕ್ಷ್ಮೀ ಲಕ್ಷಣವಂತೆ. ಎಚ್ಚರ ಬಂದ ಮೇಲೆ ಇಬ್ಬರೂ ಕೂಡಿ ಸತ್ತ ಶಿಶುವನ್ನು ಮಣ್ಣುಮಾಡಿದರು. ಶಿವಬಾಲಕ ಅನಂತರ ಅಲಹಾಬಾದದಲ್ಲಿಯೇ ಉಳಿದುಬಿಟ್ಟ. ಅತ್ತ ಅವನ ಹೆಂಡತಿ ಮಾನಕೀಗೆ ಧರ್ಮಸಂಕಟ. ಪ್ರಯಾಗಕ್ಕೆ ಹೋದವರು ಗಂಡನ ಸುದ್ದಿ ತಂದರು. ಕೇವಲ 70 ಮೈಲು ದೂರದ ಪ್ರವಾಸ ಮಾಡಿ ಮಾನಕಿ ಗಂಡನನ್ನೂ ಮತ್ತು 'ಅವಳನ್ನೂ' ತಂದು ಮನೆಯಲ್ಲಿ ಪ್ರತಿಷ್ಠಾಪನೆ ಮಾಡಿದಳು. ಅವಳಿಗೆ ಒಂದೆರಡು ವರ್ಷಗಳಲ್ಲಿಯೇ ಈ ಉತ್ತಮ ಕೆಲಸಕ್ಕೆ ಸಿಕ್ಕ ಪ್ರತಿಫಲವೆಂದರೆ ಲಕ್ಷ್ಮಿಯ ಮೊದಲ ಪ್ರಿಯಕರ (ಈತ ಸೈನಿಕನಾಗಿದ್ದ) ಮಾನಕಿಯ ಮಗಳು ಜಾನಕಿಯ ಮೇಲೆ ನಡೆಸಿದ ಪ್ರಾಣಾಂತಿಕ ಹಲ್ಲೆ. ಜಾನಕಿಯನ್ನು, ಲಕ್ಷ್ಮಿಯೆಂದು ತಪ್ಪು ತಿಳಿದು ಆತ ಶಿವಬಾಲಕರಾಮ ಇಲ್ಲದಿದ್ದಾಗ ಜಾನಕಿಯನ್ನು ಕಿಸೆಚಾಕುವಿನಿಂದ 56 ಸಲ, ತಿವಿದು ಗಾಯಗೊಳಿಸಿದ.

ಆಸ್ಪತ್ರೆಯಿಂದ ಮರಳಿದ ಕೆಲವೇ ದಿನಗಳಲ್ಲಿ ತಾಯಿ ಮಗಳನ್ನು, ಶಿವಬಾಲಕ ರಾಮ ಮತ್ತು ಲಕ್ಷ್ಮಿ ಮನೆಯಿಂದ ಹೊರದೂಡಿದರು.

ಅನಾಥರಾದ ಮಾನಕಿ ಮತ್ತು ಜಾನಕಿ ತಮ್ಮಲ್ಲಿದ್ದ ಬಂಗಾರದ ಆಭರಣಗಳನ್ನು ಮಾರಿ ಅಲಹಾಬಾದ್ ತಲುಪಿದರು. ಏನೂ ಇಲ್ಲದಿದ್ದರೂ ಗೆಳತಿ ಪಾರ್ವತಿಯ ಸಹಾಯದಿಂದ ಅಲಹಾಬಾದದ ಕೋಠಿ (ತವಾಯಫ಼ರ ಮನೆ) ಸೇರಿದರು. ಮಾನಕಿಗೆ ನೃತ್ಯ-ಸಂಗೀತದ ಆಕರ್ಷಣೆ ಇದ್ದರೂ ಪರಿಶ್ರಮ ಇರಲಿಲ್ಲ. ಅವಳ ಬಳಿಯಲ್ಲಿ ಇದ್ದುದು ಕೇವಲ ವ್ಯವಹಾರಜ್ಞಾನ, ಮಾಟವಾದ ಶರೀರ. ಆದರೆ ಮಗಳು ಜಾನಕಿಯ ಶಾರೀರ ಇಂಪಾಗಿತ್ತು. ಮೈತುಂಬ, ಮೋರೆ ತುಂಬ ಗಾಯದ ಕಲೆ. ಸಾಕಿ ಅಥವಾ ಕನೀಜ (ಕೋಠಿಯ ಕನಿಷ್ಠ) ಕೆಲಸವನ್ನು ತಾಯಿ ಮಾನಕಿ ಕೋಠಿಯಲ್ಲಿ ಮಾಡುತ್ತಿದ್ದಳು. ಕೋಠಿಗೆ 'ಮುಜರಾ' ಸಮಯಕ್ಕೆ ಬರುವ ಸಾರಂಗೀ ಉಸ್ತಾದ್‌ರನ್ನು ದುಂಬಾಲು ಬಿದ್ದು 'ಛಪ್ಪನ್ನ ಛೂರೀ ಜಾನಕಿ'ಗೆ ಸಂಗೀತ ಕಲಿಸಿದಳು. ಇವಳೇ, ಮುಂದೆ 'ಜಾನಕೀಬಾಯಿ ಅಲಹಾಬಾದ್' ಎಂದು ಉತ್ತರ ಭಾರತದಲ್ಲಿ ಪ್ರಖ್ಯಾತಳಾದಳು. ರೂಪ, ಲಾವಣ್ಯ, ಇರದಿದ್ದರೂ, ಮೈತುಂಬ, ಮೊಗದ ತುಂಬ ಗಾಯಗಳ ಕಲೆಗಳಿದ್ದರೂ, ಉತ್ತಮ ಕಲಾವಿದೆ ಎಂದು ಹೆಸರು ಮಾಡಿದಳು. ಗೋಹರಜಾನ ಕಲಕತ್ತಾವಾಲಿಯ ಸಮಕಾಲೀನಳಾದ ಈಕೆ ಚಕ್ರವರ್ತಿ ಪಂಚಮ ಜಾರ್ಜ ಅಲಹಾಬಾದಿಗೆ ಬಂದಾಗ ಗೋಹರಜಾನಳೊಂದಿಗೆ 'ಮುಬಾರಕ ಹೊ'ಕಚೇರಿ ನಡೆಸಿ ರಸಿಕರಿಂದ ಭಲೇ ಎನಿಸಿಕೊಂಡಳು.

ನಾನು ಬಹುರಾಷ್ಟ್ರೀಯ ಗ್ಲಾಕ್ಸೋ ಕಂಪನಿಯ ಪರವಾಗಿ ಮಧ್ಯಪ್ರದೇಶದ ರತಲಾಮ್ ಊರಲ್ಲಿಯ ಜಯಂತ್ ವಿಟಮಿನ್ಸ್ ಕಂಪನಿಯಲ್ಲಿ, ಅವರ ಹೊಸ ಅಗ್ರಿಮೆಂಟ್‌ನಂತೆ 1984ರಲ್ಲಿ ಸೇರಿಕೊಂಡೆ. 1970ರ ನಂತರ ಮುಂಬಯಿಯಲ್ಲಿಯೇ ಇದ್ದ ನನಗೆ ಮರಳಿ 'ಭಾರತ ಭ್ರಮಣ'ದ ಕೆಲಸ ಸಿಕ್ಕಿದ್ದರಿಂದ, ಮಧ್ಯಪ್ರದೇಶದ ಸಂಗೀತ ಕ್ಷೇತ್ರಗಳಾದ ದೇವಾಸ್, ಇಂದೂರ್‌ಗೆ ಮರಳಿ 20 ವರ್ಷಗಳ ನಂತರ ಹೋಗುವ ಸಂಧಿ ಸಿಕ್ಕಿದ್ದರಿಂದ ಅತ್ಯಂತ ಉಲ್ಲಾಸದಿಂದ ಹೊರಟಿದ್ದೆ. ಇಲ್ಲಿಯೇ ನನಗೆ ಅಂದರೆ, ರತಲಾವ್‌ದಲ್ಲಿ ಕೈಲಾಶ್ ಗೌತಮ್ ಎಂಬ ಗೃಹಸ್ಥರ ಪರಿಚಯವಾಯಿತು. ಇವರಿಂದಲೇ ನಾನು 'ಛಪ್ಪನ್ ಛೂರೀ ಜಾನಕಿ'ಯ ಕತೆಯನ್ನು ಅರಿತುಕೊಂಡೆ. ಮುಂದೆ ಸಾಧಾರಣ ಒಂದು ವರ್ಷದ ನಂತರ ನನಗೆ ಅಲಹಾಬಾದಕ್ಕೆ ಹೋಗುವ ಪ್ರಸಂಗ ಒದಗಿತು. ಆಗ ಕೈಲಾಶ ಗೌತಮ್‌ರು ಜಾನಕೀಬಾಯಿಯ ಮೇಲೆ ಒಂದು ಸಾಕ್ಷ್ಯಚಿತ್ರಮಾಡುವುದರಲ್ಲಿ ತೊಡಗಿದ್ದರು. ನನಗೆ ಜಾನಕಿಬಾಯಿಯವರ 'ಬೇಸಿಗೆ ಮಹಲ್', ಕಬ್ರಸ್ತಾನ್, ಮತ್ತು ಅವಳನ್ನು ಕಣ್ಣಾರೆ ಕಂಡಿದ್ದ ಮುದುಕ ಮಹೇಶವ್ಯಾಸ್ ಅವರನ್ನು ಭೆಟ್ಟಿಮಾಡಿಸಿದರು. 1990ರ ತನಕ ಗೌತಮ್‌ರೊಂದಿಗೆ ನನ್ನ ಒಡನಾಟ, ಪತ್ರವ್ಯವಹಾರ ಇತ್ತು. 'ಧರ್ಮಯುಗ'ದಲ್ಲಿ ಅವರು ಬರೆದ ಕಾಲಮ್ ನನಗೆ ಕಳಿಸಿಕೊಟ್ಟಿದ್ದರು. ಮುಂದೆ ಅವರ ಸಾಕ್ಷ್ಯಚಿತ್ರದ ಹಣೆಬರಹ ಏನಾಯಿತು ಎಂಬುದು ತಿಳಿಯಲೇ ಇಲ್ಲ. ಅವರ ಸಂಪರ್ಕವೂ ಕ್ರಮಶಃ ನಿಂತೇ ಹೋಯಿತು, ಇದ್ದದ್ದು ಕೇವಲ ಜಾನಕೀಬಾಯಿಯ ನೆನಪುಗಳು ಮತ್ತು ಅವಳ ಧ್ವನಿಮುದ್ರಣಗಳ ತಟ್ಟೆಗಳು.

ಒಂದೆರಡು 60 ಮಿಲಿ ವಿಸ್ಕಿ ಹೀರಿದ ಮೇಲೆ ಕೈಲಾಶ್ ಗೌತಮ್ ಅವರು ರತಲಾಮ್ ಊರಿನ ಏಕಮೇವ ಹೋಟೆಲು 'ಭಾರತ'ದಲ್ಲಿ ತಮ್ಮ ಜಾನಕಿಯ ಕತೆಯನ್ನು ಪ್ರಾರಂಭಿಸುತ್ತಿದ್ದರು. ಗೋಹರ ಜಾನ್ ಮತ್ತು ಜಾನಕಿ ಇಬ್ಬರೂ ಕೂಡಿ ಹಾಡಿದ ಕಚೇರಿಯ ನೆನಪು (ಮುದುಕ ಮಹೇಶ ವ್ಯಾಸ ಹೇಳಿದಂತೆ) ಪ್ರತಿ ರಾತ್ರಿ ಮರುಕಳಿಸುತ್ತಿತ್ತು. 'ಏಕ ಚೌದವೀ ಕಾ ಚಾಂದ, ದುಸರೀ ಅಮಾವಾಸ್ಯಾಕೀ ಖ್ವಾಬ್', ಹಾಸ್ಯಕವಿ ಎಂದು ಮನ್ನಣೆ ಪಡೆದ ಕೈಲಾಶರ 'ಅವಿಕಲ್ಪಸಮಾಧಿ' ಮುಟ್ಟುವ ಮೊದಲು ಅವರಿಂದ ಗೋಹರಜಾನ್ ಮತ್ತು ಜಾನಕೀ ಬಾಯಿಯ ಸೌಂದರ್ಯ ಮತ್ತು ಕುರೂಪತೆಯನ್ನು ಕುರಿತ, ತನ್ನದೇ ಕಾವ್ಯಶೈಲಿಯ ವರ್ಣನೆ ಮುಂದುವರಿಯುತ್ತಿತ್ತು.

ಬಡೀ ಮಲಕಾಜಾನಳಂತೆ ಜಾನಕಿ ಕವಯತ್ರಿಯೂ ಆಗಿದ್ದಳು. ಅಂತೆಯೇ, ಕೈಲಾಶ್ ಅವರ ವಿಶೇಷ ಪ್ರೇಮ 'ಕ್ಯಾ ಬತಾವೂಂ ಬುರ್ಡೆಸಾಬ್, ವೋ ಜಮಾನಾ ಹೀ ಉಸಕಾ ಥಾ. ಬದಸೂರತ್ ಹೋನೆಕೆ ವಜಹ್‌ಸೆ...' ಗದ್ಗದ ಧ್ವನಿಯಲ್ಲಿ ಅವರು ಹೇಳಿದ್ದು. ಆಕೆಯ ವಿದ್ರೂಪತೆಯ ಕಾರಣದಿಂದ ಸಿಲ್ಕ್ ಪರದೆ ಹಾಕಿ ಅದರ ಹಿಂದೆ ಕುಳಿತು ಜಾನಕಿಬಾಯಿ ಹಾಡುವ ಪದ್ಧತಿ ರೂಡಿಮಾಡಿಕೊಂಡಿದ್ದಳು. ಇತರ ಸಾಥೀದಾರರು ಪರದೆಯ ಹೊರಗೆ. ಅಲಹಾಬಾದದ ಪ್ರತ್ಯೇಕ ಜಮೀನದಾರರ ಮನೆಯಲ್ಲಿ ಈಕೆಯ ಜಲಸಾ ಆಗುತ್ತಿತ್ತು. ಇವಳ ಖ್ಯಾತಿ ಇಡೀ ಉತ್ತರ ಹಿಂದುಸ್ಥಾನದಲ್ಲಿ ಪಸರಿಸಿತ್ತು.

ಒಮ್ಮೆ ಮಧ್ಯಪ್ರದೇಶದ ರೇವಾ ಸಂಸ್ಥಾನದ ಮಹಾರಾಜರು ಕರೆಸಿಕೊಂಡರು, ಮಗಳ ಮದುವೆಯ ಸಮಾರಂಭದ ಶುಭ ಮುಹೂರ್ತಕ್ಕೆ. ಆಕೆಯ ಆಪ್ತಕಾರ್ಯದರ್ಶಿ ಪ್ರಧಾನಜಿಯ ಕಿವಿಯಲ್ಲಿ ಉಸುರಿದರು. ಹಾಡುವಾಗ ಪಡದೆ ಬೇಕು. ಜಾನಕಿ ಬಾಯಿಯ ಕೀರ್ತಿ ಕೇಳಿದ ಮಹಾರಾಜರು ತಲೆ ಅಲ್ಲಾಡಿಸಿದರು. ಅದ್ಭುತ ಕಚೇರಿ ಆಯಿತು. ಮಹಾರಾಜರಿಗೆ ಅತ್ಯಂತ ಸಂತೋಷವಾಗಿ ಅಮೂಲ್ಯ ಮುತ್ತಿನ ಹಾರ ಕೊಡಬಯಸಿದರು. ಆದರೆ ಮಾಡಿದ ಷರತ್ತು ಮುರಿದು ಪಡದೆ ತೆಗೆಸಿದರು. ಅವಳನ್ನು ನೋಡಿ ಕ್ಷಮೆಯಾಚಿಸಿ, ಹಾರದೊಂದಿಗೆ ವಜ್ರದ ಉಂಗುರವನ್ನೂ ದಯಪಾಲಿಸಿದರಂತೆ!

ಗೋಹರಜಾನಳಂತೆಯೇ ಈಕೆಯೂ ಗ್ರಾಮೊಫೋನ ಸೆಲೆಬ್ರಿಟಿ ಎಂದು ಮೆರೆದಳು. ಹತ್ತು ವರ್ಷಗಳಲ್ಲಿ 250 ಹಾಡುಗಳನ್ನು ಈಕೆ ರಿಕಾರ್ಡು ಮಾಡಿದಳು. ಗುರುತಿಗಾಗಿ ತನ್ನ ಇಂಪಾದ ಧ್ವನಿಯಲ್ಲಿ 'ಮೈ ನೇಮ್ ಈಸ್ ಜಾನಕಿಬಾಯಿ ಆಫ್ ಅಲಹಾಬಾದ್' ಹೇಳಿದ್ದು ಕೇಳಲಿಕ್ಕೆ ಈಗಲೂ ನಮಗೆಲ್ಲ ಖುಷಿ!

ಪಂಚಮ ಜಾರ್ಜ ಅಲಹಾಬಾದಿಗೆ ಬಂದಾಗ ಕಲಕತ್ತೆಯ ಗೋಹರಜಾನಳ ಕಚೇರಿಯ ನಂತರ ಜಾನಕಿಯೂ ಹಾಡಿದ್ದು ಮಹೇಶ ವ್ಯಾಸರ ಅಪ್ಪ ಕೇಳಿದ್ದರಂತೆ. ಅದೊಂದು ಅಭೂತಪೂರ್ವ ಮೆಹೆಫಿಲ್ ಆಗಿತ್ತಂತೆ.

ಅಲಹಾಬಾದದಲ್ಲಿ ಜಾನಕಿಬಾಯಿಯ ನಾಲ್ಕಾರು ದೊಡ್ಡ ಮನೆಗಳಿವೆ. ಅವರ ಮಕ್ಕಳು, ಮರಿಮಕ್ಕಳ ಬಗ್ಗೆ ಏನೂ ಮಾಹಿತಿ ಸಿಗಲಿಲ್ಲ. ಇವಳ ಹತ್ತು ಹಾಡುಗಳ ಧ್ವನಿಮುದ್ರಣ 1994ರಲ್ಲಿ 'ಚೇರಮನ್ಸ್ ಚಾಯ್ಸ್' ಎಂದು ಎಚ್‌ಎಮ್‌ವಿಯವರು

ಹೊರಗೆ ತಂದದ್ದು ವಿಶೇಷ. ಇವಳೇ ಬರೆದು ಹಾಡಿದ ಒಂದು ಕವಿತೆಯಿಂದ ಈ ಜಾನಕೀಬಾಯಿಯ ಕತೆಯನ್ನು ಮುಗಿಸುತ್ತೇನೆ.

'ಇಸ್ ನಗರೀಕೆ ದಸ್ ದರವಾಜಾ
ನ ಜಾನೂ ಕೌನಸಿ ಖಿಡಕಿ ಖುಲಿಥೀ,
ಸೈಂಯಾ ನಿಕಲಗಯೇ ಮೈಂ ನಾ ಲಡಿಥೀ.'
'ಸಾತ ಸಖಿ ಮೇರೆ ಆಗೆ ಖಡೀ ಥೀ
ಇನಸೇ ಪೂಛೋ ಮೈನೆ ಕುಛ ನ ಕಹೀ ಥೀ
ಸೈಂಯಾ ನಿಕಲಗಯೇ ಮೈಂ ನಾ ಲಡಿಥೀ'

ಮುಂದೆ ಇದು ಅವಳ ತತ್ತ್ವಜ್ಞಾನವನ್ನು ವಿವರಿಸುತ್ತದೆ.

3.5

ಜದ್ದನ್ ಬಾಯಿ, ಸಿನೇಸ್ಟಾರ್ ನರ್ಗೀಸಳ ತಾಯಿ (1892–1949)

ಜದ್ದನ್ ಬಾಯಿ ಸಿನೇ ನಟಿ ನರ್ಗಿಸ್, ಮತ್ತು ಸಿನೆಮಾದಲ್ಲಿ ಕೆಲಸಮಾಡುತ್ತಿದ್ದ ಅಖ್ತರ್ ಹುಸೇನ್ ಇವರ ತಾಯಿ ಎಂಬುದು ಗೊತ್ತಿದ್ದರೂ, ಆಕೆ 'ತವಾಯಫ್' ಸಂಸ್ಕಾರ ಪಡೆದ ಮನೆತನದಿಂದ ಬಂದವಳು ಎಂದು ಕೇವಲ ಕೆಲವರಿಗೇ ಗೊತ್ತಿದ್ದ ವಿಷಯ. ಇವಳು ಮೂಕಿ ಸಿನೇಮಾ ಟಾಕೀ ಆದ ದಶಕದಲ್ಲಿಯೇ ಹೆಸರು ಮಾಡಿದ ಗಾಯಕಿ, ಸಂಗೀತ ದಿಗ್ದರ್ಶಕಿ ಹಾಗೂ ನಿರ್ಮಾಪಕಿ ಎಂದೂ, ಇವಳ ನಂತರವೇ ಸರಸ್ವತೀದೇವಿ ಎಂಬ ಮತ್ತೊಬ್ಬಳು ಸ್ತ್ರೀ ಸಂಗೀತ ದಿಗ್ದರ್ಶಕಿಯಾಗಿ ಮುಂದೆ ಬಂದದ್ದೂ ಸಿನೇಮಾ ವರ್ತುಲದಲ್ಲಿದ್ದವರಿಗೆ ಗೊತ್ತು.

ಜದ್ದನ್ ಬಾಯಿ ಮೂಲತಃ ಅಲಹಾಬಾದಿನವಳು. ತಾಯಿ ದಲೀಪಾ ಜಾನ್. ಋಷಿಗಳ ಕುಲ ಮತ್ತು ನದಿಯ ಮೂಲ ಕೇಳಬಾರದಂತೆ. ಇದರಲ್ಲಿ ತವಾಯಫ್ ಮೂಲವನ್ನು ಕೂಡ ಸೇರಿಸಬಹುದು. ಗೋಹರಜಾನ್ ಮತ್ತು ಮೌಜುದ್ದೀನರಿಗೆ ಠುಮರಿ ಕಲಿಸಿದ ಭಯ್ಯಾ ಗಣಪತರಾವ್ ಅವರ ವೃದ್ಧಾಪ್ಯಕಾಲದ ಶಿಷ್ಯೆ ಈಕೆ. ಬಳಿಕ ಈಕೆ ಮೌಜುದ್ದೀನ ಬಳಿ ಕೆಲ ಕಾಲ ಕಲಿತು ಸಂಪೂರ್ಣವಾಗಿ 'ಕೋಠಿ'ಯಲ್ಲಿ ಹಾಡುವಷ್ಟು ನಿಪುಣಳಾದಳು. ಕೊಲಂಬಿಯಾ ರಿಕಾರ್ಡ್ ಕಂಪನಿಯವರು ಇವಳ ಗಜಲ್‌ಗಳ ಮುದ್ರಿಕೆಗಳನ್ನು ಮುದ್ರಿಸಿದರು. ಲಾಹೋರದಲ್ಲಿಯ ಒಂದು ಫಿಲ್ಮ ಕಂಪನಿ ಇವಳಿಗೆ ಮುಖ್ಯ ಪಾತ್ರವನ್ನು ಕೊಟ್ಟು 1933ರಲ್ಲಿ 'ರಾಜಾ ಗೋಪಿಚಂದ' ಚಲನಚಿತ್ರವನ್ನು ಮಾಡಿದರು. ಕರಾಚಿಯಲ್ಲಿಯ ಕಂಪನಿ ಪರವಾಗಿ 'ಇನ್ಸಾನ್ ಯಾ ಶೈತಾನ್'ದಲ್ಲಿ ನಟಿಸಿ, ನಂತರ ಪ್ರೇಮಚಂದರ 'ಸೇವಾಸದನ'ದಲ್ಲಿಯೂ ಪಾತ್ರವಹಿಸಿದಳು. ಮುಂದೆ ಒಂದೆರಡು ಚಲನಚಿತ್ರಗಳಿಗೆ ಸಂಗೀತ ದಿಗ್ದರ್ಶನ ಮಾಡುತ್ತಾ ಮಗಳು ನರ್ಗೀಸಳನ್ನು ಬಾಲಕಲಾವಿದೆಯಾಗಿ ಮುಂದೆ ತಂದಳು (1936).

ಜದ್ದನ್‌ಳ ಮೊದಲನೇ ಪತಿ ನರೋತ್ತಮ ಖತ್ರಿ. ಮುಸಲ್ಮಾನನಾಗಿ 'ಬಚ್ಚೆಬಾಬು' ಎಂಬ ಹೆಸರನ್ನಿಟ್ಟುಕೊಂಡ. ಎರಡನೆಯವ ಇರ್ಶಾದ್ ಮೀರಖಾನ, ಹಾಗೂ ಮೂರನೆಯವ ಮೋಹನ ಬಾಬು, ಸಾರಸ್ವತ ಕುಲೋತ್ಪನ್ನ, ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ 'ಅಬ್ದುಲ್ ರಶೀದ'ನಾದ. ಹೀಗಿತ್ತು ಜದ್ದನಬಾಯಿಯ ಜಾದೂ. ಇವನ

ಮಗಳೇ ನರ್ಗಿಸ್ ಊರ್ಫ ಫಾತಿಮಾ ರಶೀದ. ಅನ್ವರ್ ಹುಸೇನ್ ಮತ್ತು ಅಖ್ತರ್ ಇವರು ಬಚ್ಚಿಬಾಬುವಿನ ಮಕ್ಕಳು. ತನ್ನ 57ನೇ ವಯಸ್ಸಿನಲ್ಲಿಯೇ, ಅಂದರೆ, 1949ರಲ್ಲಿ ಜದ್ದನ್‌ಬಾಯಿ ತೀರಿಕೊಂಡಳು.

ಸ್ವಲ್ಪ ವಿನೋದಕ್ಕಾಗಿ ನಾನು 'ತವಾಯಫ್'ರ ಮೂಲವನ್ನು ಹುಡುಕಲು ಹೋಗಬಾರದು ಎಂದು ಹೇಳಿದರೂ ತಮ್ಮ ಮಕ್ಕಳ ಉನ್ನತಿಗಾಗಿ ಜದ್ದನ್‌ಬಾಯಿಯಂತಹ ನೂರಾರು ಮಹಿಳೆಯರಿಗೆ 'ತವಾಯಫ್/ದೇವದಾಸಿ ಸಂಸ್ಕೃತಿ'ಯನ್ನು ಬಿಟ್ಟುಕೊಡಲು, ಅಥವಾ ಸಂಪೂರ್ಣವಾಗಿ ಅಳಿಸಲು ಮುಂಬಯಿಯಂತಹ ಮಹಾನಗರವನ್ನು ಸೇರಿಕೊಂಡು 'ಸಿನೇ ಸಂಸ್ಕೃತಿ'ಯಲ್ಲಿ ಕಾಲಿಡಬೇಕಾಯಿತು. ಈ ಕ್ಷೇತ್ರದಲ್ಲಿ ಅವಕಾಶಗಳು ಸಿಗದೇ ಹೋದ ಅನೇಕರಿಗೆ ಹಿಂದಿನ ಶತಮಾನದಲ್ಲಿ ಕೆನೆಡಿ ಬ್ರಿಡ್ಜು, ಗಿರಗಾಂವಿನಲ್ಲಿ ತಾತ್ಪೂರ್ತಿಕ ಸ್ವರೂಪದಲ್ಲಿ ತಮ್ಮ 'ಕೋಠಿ'ಗಳನ್ನು ನಡೆಸಬೇಕಾಗಿ ಬಂದದ್ದು ಸತ್ಯ. ಉಸ್ತಾದ್ ಅಮೀರ್ ಖಾನ್, ಖಾದೀಮ್ ಹುಸೇನ್ ಅವರಂತಹ ಕೋಠಿವಾಲೆ ಗವಯಿಗಳು, ಉತ್ತರ ಹಿಂದುಸ್ಥಾನದಿಂದ ವಲಸೆ ಬಂದ ತವಾಯಫ್‌ರಿಗೆ ಸಂಗೀತವನ್ನು ಕಲಿಸಲು ಮುಂಬಯಿಯಲ್ಲಿ ಬೀಡುಬಿಟ್ಟರೆ, ಗೋವಾದಿಂದ ಬಂದ 'ದೇವದಾಸಿ'ಯರಿಗೆ ತರಬೇತಿ ಕೊಡಲು ಸಾರಸ್ವತ ಕುಲೋತ್ಪನ್ನ ಪಂಡಿತ ಹೊನ್ನಾವರ ಕೃಷ್ಣಭಟ್ಟರು ಸದಾ ತತ್ಪರರಾಗಿದ್ದರು. ಪಂ. ರಾಮಕೃಷ್ಣ ಬುವಾ ವಝೆ (ಇವರೂ ಗೋವಾದವರೇ) ಹೆಮ್ಮೆಯಿಂದ ತಮ್ಮನ್ನೂ 'ಕೋಠಿವಾಲೆ ಗವಯಿ' ಎಂದು ಹೇಳಿಕೊಳ್ಳುತ್ತಿದ್ದರು. ಅದೇ ಮುಂದೆ 1960ರ ದಶಕದಲ್ಲಿ ಗಾಯಕಿಯರು ತಮ್ಮ ಮೂಲವನ್ನು ಅಳಿಸಲು ಕೈಕೊಂಡ ಉಪಕ್ರಮಗಳು ಹಿಂದುಸ್ತಾನಿ ಸಂಗೀತದ ಇತಿಹಾಸದಲ್ಲಿ ಹೇರಳವಾಗಿವೆ. ಕಾಲಾಯ ತಸ್ಮೈ ನಮಃ!

ಮೇಘನಾದ ದೇಸಾಯಿ ಹಾಗೂ ಕೀಶ್ವರ ದೇಸಾಯಿ, ಪತಿಪತ್ನಿ ಕೂಡಿ ನರ್ಗೀಸ್‌ದತ್ತಳ ಜೀವನ ಚರಿತ್ರೆಯನ್ನು ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಮೇಘನಾದ ಅರ್ಥಶಾಸ್ತ್ರಜ್ಞ, ಮೇಲಿಂದ ಮೇಲೆ ಎನ್‌ಡಿಟಿವಿಯಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿ. ಅವರ ಪುಸ್ತಕದಲ್ಲಿ ನರ್ಗೀಸಳ ತಾಯಿ ಜದ್ದನಬಾಯಿ ಹಾಗೂ ಅವಳ ಅಜ್ಜಿ ದಲೀಪಾಜಾನ್‌ರನ್ನು ಕುರಿತು ಸಾಕಷ್ಟು ವಿವರಗಳೊಂದಿಗೆ, ಅಂದರೆ, ಅವಳ ಅಜ್ಜಿ ಹಾಗೂ ಮೋತಿಲಾಲ ನೆಹರೂ ಅವರ ಸಂಬಂಧದ ಬಗ್ಗೆ ವಿಶೇಷ ಟಿಪ್ಪಣಿ ಮಾಡಿದ್ದಾರೆ.

ಜದ್ದನ್‌ಬಾಯಿಯ ತಾಯಿ ದಲಿಪಾಜಾನ್ ಕೂಡ ಮೋತೀಲಾಲ ನೆಹರೂ ಅವರಂತೆಯೇ ಕಾಶ್ಮೀರದವಳು. ಬ್ರಾಹ್ಮಣ ಕುಟುಂಬದಲ್ಲಿ ಜನ್ಮತಾಳಿದರೂ ಬಾಲ್ಯಾವಸ್ಥೆಯಲ್ಲಿಯೇ ಅಪಹರಣಕ್ಕೆ ತುತ್ತಾಗಿ ಮುಂದೆ ತವಾಯಫ್ ಸಂಪ್ರದಾಯಕ್ಕೆ ಸೇರಿಕೊಂಡಳು. ಮೋತಿಲಾಲರ ಮೊದಲನೆಯ ಪತ್ನಿ ತೀರಿಕೊಂಡು ದುಃಖಿತರಾಗಿದ್ದ ಮೋತಿಲಾಲ ಮತ್ತು ದಲಿಪಾ ಜಾನ್‌ರ ಸಂಬಂಧ ಬೆಳೆಯಿತು. ಮೋತಿಲಾಲರು ಎರಡನೇ ಮದುವೆ ಮಾಡಿಕೊಂಡ ನಂತರವೂ ಈ ಸಂಬಂಧ ವೃದ್ಧಿಂಗತವಾಗಿತ್ತು. ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾದರೂ, ದಲೀಪಾ ಜಾನರ ಸಂಬಂಧ ಮೋತಿಲಾಲರ ಮೃತ್ಯುವಿನ ತನಕವಿತ್ತು. ಮೋತಿಲಾಲರು ತೀರಿಕೊಂಡ ಮೇಲೆ ದಲಿಪಾ ಜಾನ್, ನಿರಾಭರಣ ವಿಧವೆಯಂತೆ ತನ್ನ ಜೀವನಯಾತ್ರೆಯನ್ನು ಮುಗಿಸಿದಳು. ಅತ್ಯಂತ

ಬಡತನದಲ್ಲಿದ್ದ ಆಕೆಗೆ ಜವಾಹರಲಾಲರೂ, ಮೋತಿಲಾಲ್ ನೆಹರು ಅವರ ನಿಕಟ ಆಪ್ತ ಸರ್ ತೇಜ್ ಬಹದ್ದೂರ್ ಸಪ್ರು (1875–1949) ಅವರೂ ಆರ್ಥಿಕ ನೆರವನ್ನು ನೀಡುತ್ತಿದ್ದರಂತೆ.

ಜದ್ದನ್‌ಬಾಯಿ ಕೂಡ ಮೊದಲು ಕಲಕತ್ತೆಯಲ್ಲಿ ತವಾಯಫ್‌ಗಿರಿ ನಡೆಸಿ, ಬಳಿಕ ಚಲನಚಿತ್ರ ಕ್ಷೇತ್ರದಲ್ಲಿ ಪದಾರ್ಪಣ ಮಾಡಿದಳು. ಜದ್ದನ್‌ಬಾಯಿ, ಜವಾಹರಲಾಲ್ ನೆಹರು ಅವರಿಗೆ ಪ್ರತಿವರ್ಷ ಉತ್ತರ ಹಿಂದೂಸ್ಥಾನದಲ್ಲಿ ತುಂಬ ಪ್ರಚಲಿತವಾದ ರಾಖೀಬಂಧನ ಮಾಡುತ್ತಿದ್ದರೆಂಬ ಆಖ್ಯಾಯಿಕೆ ಇದೆ.

ಜದ್ದನ್‌ಬಾಯಿಯ ಆರೆಂಟು ಮುದ್ರಿತ 78 ಆರ್‌ಪಿಎಮ್ ಸ್ಪೀಡಿನ ಮುದ್ರಿಕೆಗಳಿವೆ. ಇವಳ ಹಾಡುಗಾರಿಕೆ ಅತ್ಯಂತ ಪರಿಪೂರ್ಣವಾಗಿದ್ದು, ಅವಳ ಹೈ ಸ್ಪೀಡಿನ ತಾನಗಾರಿಕೆ ಅದ್ಭುತವಾಗಿದೆ. ಸ್ವಲ್ಪ ಗಡುಸು ಧ್ವನಿಯ ಹಾಡುಗಾರಿಕೆಯಲ್ಲಿ ಇದ್ದ ನಾಟಕೀಯತೆಯಿಂದ ಕೇಳುಗರಿಗೆ ಸ್ವಲ್ಪ ಕೃತ್ರಿಮತೆಯ ಭಾಸವಾಗುತ್ತದೆ. ಅವಳ ಧ್ವನಿಮುದ್ರಣವೆಲ್ಲ 1942ರ ಮೊದಲಿನದು. ನಂತರ ಈಕೆ ಹಾಡುಗಾರಿಕೆಯನ್ನು ಕ್ರಮಶಃ ಬಿಟ್ಟುಕೊಟ್ಟಿರಬೇಕು ಎಂದೆನಿಸುತ್ತದೆ. ಮಗಳು ನರ್ಗಿಸಳ ಒಂದು ಹಾಡು ಕೂಡ ಮುದ್ರಿತವಾಗಿಲ್ಲ. ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ ನರ್ಗಿಸ್ ದತ್ ರಾಜ್ಯಸಭೆಯ ಸದಸ್ಯಳಾಗಿದ್ದಳು ಎಂಬ ಮಾತನ್ನು ನಾವು ಮರೆಯುವ ಹಾಗಿಲ್ಲ. ಅಂತೆಯೇ, ಅವಳ ಪತಿ ಸುನಿಲ್ ದತ್ ಮತ್ತು ಮಗಳು ಪ್ರಿಯಾ ದತ್ ಕೂಡ.

*****

3.6

ಸುರಶ್ರೀ ದಶಸಹಸ್ರೇಷು – ಕೇಸರಬಾಯಿ ಕೇರಕರ್ (1892–1977)

1977ರಲ್ಲಿ ಇಡೀ ವಿಶ್ವದ ಪರವಾಗಿ ಅಂತರಿಕ್ಷದಲ್ಲಿ ವ್ಹಾಯೇಜರ್–2 ಎಂಬ ಆಕಾಶ ನೌಕೆಯನ್ನು ನಾಸಾದಿಂದ ಬಿಡಲಾಯಿತು. ಪೃಥ್ವಿಯಲ್ಲಿ ಇದ್ದ ಅತ್ಯುತ್ತಮವೆಂದೆನಿಸಿಕೊಂಡಿದ್ದ ಅನೇಕ ಪ್ರತಿಕೃತಿಗಳನ್ನು ಮುದ್ರಣ, ವೀಡಿಯೋ ಅಥವಾ ಚಿತ್ರ ಸುರುಳಿಗಳಲ್ಲಿಯೋ ಇಟ್ಟು ಭವಿಷ್ಯದಲ್ಲಿ ಯಾವುದೇ ರೀತಿಯ, ಯಾವುದೇ ಪ್ರಕಾರದ ಇತರ ಗ್ರಹಗಳ ಪ್ರಾಣಿಗಳಿಗೆ ಈ ಯಾನ ಸಿಕ್ಕರೆ ಪೃಥ್ವಿಯಲ್ಲಿ ಆ ಕಾಲದ ಮನುಷ್ಯರ ರೀತಿ–ರಿವಾಜು, ಅವರ ಕ್ರೀಡೆ, ಅವರ ವಿವಿಧ ಪ್ರಕಾರದ ಸಂಗೀತ, ನೃತ್ಯ, ಇತ್ಯಾದಿ ವಿಷಯಗಳ ನಮೂನೆಗಳು ಅವರ/ಅವುಗಳ ಅಭ್ಯಾಸಕ್ಕಾಗಿ ಸಿಗಬೇಕೆಂಬ 'ದೂರದರ್ಶಿ' ವಿಚಾರದಿಂದ ಅದನ್ನು ಕಳಿಸಲಾಗಿತ್ತು. ಈಗಲೂ ಈ ಯಾನ ಅಂತರಿಕ್ಷದಲ್ಲಿ ತಿರುಗುತ್ತಲೇ ಇದೆ.

ಕೇಸರಬಾಯಿಗೂ ಈ ಅಂತರಿಕ್ಷನೌಕೆಗೂ ಏನು ಸಂಬಂದ? ಎಂದು ನೀವು ಕೇಳಬಹುದು. ಈ ನೌಕೆಯಲ್ಲಿ ಪಾಶ್ಚಿಮಾತ್ಯ ಸಂಗೀತದ, ಆಫ್ರಿಕೆಯ ಅನೇಕ ದೇಶಗಳ ಸಂಗೀತಗಳ ಪ್ರಭಾವವಿದ್ದರೂ, ಕೇವಲ ಕೇಸರಬಾಯಿ ಕೇರಕರ್ ಅವರು ಹಾಡಿದ 'ಜಾತ ಕಹಾಂ ಹೋ' ಈ ಭೈರವಿಯ 3.30 ನಿಮಿಷದ ತಟ್ಟೆಯ ಪುನರ್ಮುದ್ರಣ ಮಾಡಿ 'ಇದೇ ಭಾರತೀಯ ಸಂಗೀತದ ಅತ್ಯುತ್ತಮ ಪ್ರತಿಕೃತಿ' ಎಂಬ ಉದ್ಘೋಷಣೆಯೊಂದಿಗೆ ಸೇರಿಸಲಾಗಿದೆ. ವಿಶ್ವದ 5–6 ಎಥ್ನೋಮ್ಯೂಸಿ ಕಾಲೊಜಿಸ್ಟ್‌ಗಳು (ವಿವಿಧ ರಾಷ್ಟ್ರಗಳ ಸಂಗೀತಜ್ಞರು) ಒಟ್ಟಿಗೆ ಸೇರಿ ವಿಚಾರ ವಿನಿಮಯದ ಬಳಿಕ ಕೇವಲ ಕೇಸರಬಾಯಿಯ ಮುದ್ರಣವನ್ನು ಸೇಗಿಸಲಾಗಿತ್ತು. ಇದರ ಮುಖ್ಯಸ್ಥ ರಾಬರ್ಟ್ ಬ್ರೌನ್. ಅಂತೆಯೇ ಈ ಮುದ್ರಣದ ಹೆಸರನ್ನು 'ಸುರಶ್ರೀ ದಶಸಹಸ್ರೇಷು' ಎಂದೇ ಇಡಲಾಗಿದೆ. ಹತ್ತು ಸಹಸ್ರವರ್ಷಗಳವರೆಗೂ ಜೀವಂತವಾಗಿರಬಹುದಾದ ಸಂಗೀತ ಪ್ರಕಾರಗಳಲ್ಲಿ ಕೇಸರಬಾಯಿಯವರದೂ ಒಂದು ಎಂದು ಈ ಹೆಸರು ಇಡಲಾಗಿದೆ.

ಕೇಸರಬಾಯಿ ಕೇರಕರ್, ಹಿಂದೂಸ್ಥಾನೀ ಸಂಗೀತದ ನಭೋಮಂಡಲದಲ್ಲಿ ಪ್ರಖರ ಕಾಂತಿಯಿಂದ ಮಿನುಗುತ್ತಿರುವ ತಾರೆ. ಈಕೆಯ ಚರಿತ್ರೆಯು ಅಷ್ಟೆ ಅದ್ಭುತವಾಗಿದೆ. 85 ವರ್ಷ ಬಾಳಿದ ಕೇಸರಬಾಯಿ ಅತ್ಯಂತ ಕಠೋರ ಪರಿಶ್ರಮದಿಂದ ತನ್ನ ಅದ್ವಿತೀಯ

ಸ್ಥಾನವನ್ನು ಪಡೆದುಕೊಂಡು ಸುಮಾರು 40 ವರ್ಷಗಳ ಕಾಲ ಹಿಂದುಸ್ತಾನೀ ಸಂಗೀತದ ಸಾಮ್ರಾಜ್ಞಿ ಎಂದೆನಿಸಿಕೊಂಡೇ ರಸಿಕವೃಂದವನ್ನು ಆಳಿದ ಮಹಿಳೆ. ಇವರ ಗ್ರಾಮೋಫೋನ್ ರಿಕಾರ್ಡುಗಳು ಕೇವಲ 10-15ರಷ್ಟೆ ಇವೆ. ಎಚ್‌ಎಂವಿ ಕಂಪನಿಯ ಜಿ.ಎನ್. ಜೋಶಿಯವರು ತುಂಬ ಆಗ್ರಹಮಾಡಿದ್ದರಿಂದ 1940 ಮತ್ತು 1955ರ ತನಕ ಈ ಮುದ್ರಿಕೆಗಳ ಹಾಗೂ ಅದೇ ಮುದ್ರಿಕೆಗಳ ಒಂದು ಎಲ್‌ಪಿ (ಲಾಂಗ್ ಪ್ಲೇಯಿಂಗ್) ರಿಕಾರ್ಡುಗಳು ಹೊರಬಂದವಷ್ಟೆ. ಕೇಸರಬಾಯಿಗೆ ಗೊತ್ತಾಗದಂತೆ ಅವರ ಅನೇಕ ಭಕ್ತರು ರಿಕಾರ್ಡು ಮಾಡಿಟ್ಟುಕೊಂಡಿದ್ದರು. ಆಕೆ ತೀರಿಕೊಂಡ 20 ವರ್ಷಗಳ ನಂತರ ಶ್ರೀ ರಾಜಾ ಮತ್ತಿತರ ಪ್ರಭೃತಿಗಳು ತಮ್ಮಲ್ಲಿದ್ದ ಈ ಸಂಪತ್ತನ್ನು ಎನ್‌ಸಿಪಿಎ ಹಾಗೂ ವಿಶ್ವವಿದ್ಯಾಲಯಕ್ಕೆ ಕೊಟ್ಟರು. ಅವು ತುಂಬಾ ಜನಪ್ರಿಯವಾಗಿದ್ದು ಆಗಾಗ ಕೇಸರಬಾಯಿ ಶ್ರವಣಸತ್ರದಲ್ಲಿ ಕೇಳಲು ಸಿಗುತ್ತದೆ. ಕರ್ನಾಟಕ ಸಂಘ, ಮುಂಬಯಿ ಈ ಸಂಸ್ಥೆಯ ಕಲಾಭಾರತಿಯಲ್ಲಿ ಕೂಡ ಕೇಸರಬಾಯಿ ಶ್ರವಣಸತ್ರವನ್ನು 2002ರಲ್ಲಿ ಏರ್ಪಡಿಸಲಾಗಿತ್ತು. ಇದನ್ನು ಪ್ರಸ್ತುತಿಪಡಿಸಿದವರು ಡಾ. ಅಶೋಕ ರಾನಡೆ, ಭಾರತದ ಏಕಮೇವ ಎಥ್ನೋಮ್ಯೂಸಿಕಾಲಜಿಸ್ಟ್.

ನಾನು ಕೇಸರಬಾಯಿಯವರನ್ನು ಮೊಟ್ಟಮೊದಲು ಕೇಳಿದ್ದು 1957ರಲ್ಲಿ. ಅದೇ ತಾನೇ ಬೆಂಗಳೂರಿನಿಂದ ಧಾರವಾಡಕ್ಕೆ ಬಂದು, 'ಬೆಂಗಳೂರಿನಿಂದ ಫ್ಲೂ ತಂದ' ಎಂಬ ರಿಕಾರ್ಡು ಧಾರವಾಡ ಮ್ಯುನಸಿಪಾಲಿಟಿ ಕಚೇರಿಯಲ್ಲಿ ನೋಂದಾಯಿಸಿದ ಬುರ್ಡೆ ಕುಟುಂಬಕ್ಕೆ ಸೇರಿದವ! ಬೇನೆ ಗುಣಮುಖವಾದ ಕೂಡಲೇ ಕರ್ನಾಟಕ ಕಾಲೇಜಿನಲ್ಲಿ ಜ್ಯೂನಿಯರ್ ಬಿ.ಎಸ್‌ಸಿ.ಗೆ ಪ್ರವೇಶ ದೊರಕಿದ ದಿನವೇ ಧಾರವಾಡ ಪೋಸ್ಟ್ ಆಫೀಸಿನ ಪಕ್ಕದಲ್ಲಿದ್ದ ಧಾರವಾಡ ಜಿಮಖಾನಾದಲ್ಲಿ ಮುಂಬಯಿಯಿಂದ ಬಂದ ಕೇಸರಬಾಯಿಯವರ ಕಚೇರಿಯನ್ನು ಕೇಳಲು ಗೆಳೆಯ ವಸಂತ ಹಳದೀಪೂರ ನೊಂದಿಗೆ ಹೋದೆ. 1950ರಲ್ಲಿ ಧಾರವಾಡದ ಆಕಾಶವಾಣಿ ಕೇಂದ್ರ ಪ್ರಾರಂಭವಾಗಿತ್ತು. ಈ ಕಾರ್ಯಕ್ರಮವು ಆಕಾಶವಾಣಿ ಕೇಂದ್ರದ ವತಿಯಿಂದ ನಡೆದಿತ್ತು. ಕೇಸರಬಾಯಿಗೆ ಆಗ 65 ವರ್ಷ. ವಾರ್ಧಕ್ಯದ ಲವಲೇಶವೂ ಇಲ್ಲದ ಮುಖ. ಕಾಡಿಗೆಯಂತಹ ಕಪ್ಪು ಕೇಶ ಸಾಂಭಾರ. ಆಕಾಶವಾಣಿಯ ಹಿರಿಯ ವಾದಕರಲ್ಲಿ ಅಂದರೆ ಹಾರ್ಮೋನಿಯಂ ನುಡಿಸುವವರಲ್ಲಿ 'ನಾ ಒಲ್ಲೆ, ನೀ ಒಲ್ಲೆ' ಎಂದು ಮುಂದೆ ಬಾರದೆ ನಿಂತ ಸಿಬ್ಬಂದಿ. 20ರ ಯುವಕ ವಸಂತ ಕನಕಾಪುರ ಮುಂದೆ ಬಂದು ಕೇಸರಬಾಯಿಗೆ ನಮಸ್ಕಾರಮಾಡಿ ಹಾರ್ಮೋನಿಯಂ ಎದುರಿಗೆ ಕೂತ. ತಬಲಾ ಬಾರಿಸಲು ಬಸವರಾಜ ಬೆಂಡಿಗೇರಿ. ಇಬ್ಬರೂ ಕೇಸರಬಾಯಿಗೆ ಪರಿಚಿತರು. ಬೆಂಡಿಗೇರಿ, ಕನಕಾಪುರ ಕೆಲಕಾಲ ಮುಂಬಯಿದಲ್ಲಿ ವಾಸ್ತವ್ಯ ಮಾಡಿದ್ದರಂತೆ. ಕೇಸರಬಾಯಿ ಅವರು ಹಾಡಿದ ರಾಗಗಳಲ್ಲಿ ಒಂದೇ ಒಂದು ಈಗ ನೆನಪಿನಲ್ಲಿ ಉಳಿದಿದೆ. ಅದು ಲಲಿತಾಗೌರಿ. ಅವರು 'ಪ್ರೀತಮ್ ಸೈಂಯ್ಯಾ' ಎಂದು ಭಾರದಸ್ತ ಧ್ವನಿಯಿಂದ ಪ್ರಾರಂಭಮಾಡಿ 45 ನಿಮಿಷ ಹಾಡಿದರೆಂದು ನೆನಪು. ಪ್ರೇಕ್ಷಕರ ಮೊದಲನೇ ಸಾಲಿನಲ್ಲಿ ಮಲ್ಲಿಕಾರ್ಜುನ ಮನ್ಸೂರ್, ಹುಬ್ಬಳ್ಳಿಯಿಂದ ಬಂದ ಗಂಗೂಬಾಯಿ ಹಾನಗಲ್ ಪರಿವಾರ, ಧಾರವಾಡದ ಬಸವರಾಜ ರಾಜಗುರು, ಬಸವರಾಜ ಮನ್ಸೂರ್, ದೇಶಪಾಂಡೆ ಗುರುಗಳು, ಚಂದ್ರಶೇಖರ ಪುರಾಣಿಕ ಮಠ, ಅರ್ಜುನ ಸಾ ನಾಕೋಡ ಆಸೀನರಾಗಿದ್ದರು. ಅಭೂತಪೂರ್ವ ಕಚೇರಿಯಾಗಿತ್ತು ಅದು.

ನಾನು ಹೊಸದಾಗಿ ನೌಕರಿ ಸಲುವಾಗಿ 1959ರಲ್ಲಿ ಮುಂಬಯಿಯಲ್ಲಿ ಕಾಲಿಟ್ಟಾಗ ಮುಂಬಯಿ ವಿಶ್ವವಿದ್ಯಾಲಯದ, ಜಹಾಂಗೀರ್ ಆರ್ಟ್ ಗ್ಯಾಲರಿಯ ಎದುರಿಗೆ ಇರುವ ಕವಾಸಜಿ ಜಹಂಗೀರ್ ಹಾಲಿನಲ್ಲಿ ಕೇಸರಬಾಯಿಯವರ ಗಾಯನ ಏರ್ಪಡಿಸಲಾಗಿತ್ತು. ಈ ಅಪರೂಪದ ಕಚೇರಿಯಲ್ಲಿ ಆಗಿನ ಬಾಂಬೆ ರಾಜ್ಯದ (ಮಹಾರಾಷ್ಟ್ರ ಇನ್ನೂ ಆಗುವದರಲ್ಲಿತ್ತು) ಮುಖ್ಯಮಂತ್ರಿ ಯಶವಂತರಾವ್ ಚವ್ಹಾಣರು ಮೊದಲೇ ಬಂದು ಹಾಜರಿ ಹಚ್ಚಿದ್ದರು. ಅದರ ಕಾರಣ, ಕಾರ್ಯಕ್ರಮ ಪ್ರಾರಂಭವಾಗುವ 5 ನಿಮಿಷ ಮೊದಲು ಹೊರಬಾಗಿಲು ಹಾಕಬೇಕೆಂಬ ಕೇಸರ ಬಾಯಿಯ ಕಟ್ಟಾಜ್ಞೆ! ಅವರಿಗೆ ಸೇರದ ಅಂದರೆ ಜೈಪುರ ಅತ್ರೋಳಿ ಪರಂಪರೆಯ ಗುರು ಅಲ್ಲಾದಿಯಾ ಖಾನರ ಬಳಿ ಕಲಿಯುವ ಮೋಗುಬಾಯಿ ಇತ್ಯಾದಿ ಕುಟುಂಬದವರನ್ನು 'ಒಳಗೆ ಬಿಡಬಾರದು' ಎಂಬುದು ಮತ್ತೊಂದು ಸುಗ್ರೀವಾಜ್ಞೆ! ಕಾರ್ಯಕ್ರಮ ಪ್ರಾರಂಭವಾಗುವ ಮೊದಲು ವೇದಿಕೆಯ ಮೇಲೆ ಸಾರಂಗೀ ಬಾರಿಸುವ ಅಬ್ದುಲ್ ಲತೀಫ್ ತನ್ನ ವಾದ್ಯವನ್ನು ಹೊತ್ತುಕೊಂಡು ಎಡಬದಿಯಿಂದ ಬಂದು ನೆರೆದ ಜನರಿಗೆ ವಂದಿಸಿ ಕುಳಿತ ಮೇಲೆ ತಬಲಾ ನುಡಿಸುವ ಪಂಢರಿನಾಥ ನಾಗೇಶಕರ ಬಲಬದಿಯಿಂದ ಪ್ರವೇಶಿಸಿ ಸ್ಥಾನಾಪನ್ನರಾದ ಮೇಲೆ ಮಂದಗಜಗಾಮಿನಿ ಸ್ವರಸಾಮ್ರಾಜ್ಞಿ ಕೇಸರಬಾಯಿ ಬಂದು ರಾಜಠೀವಿಯಿಂದ ಸನ್ನೆಯಿಂದಲೇ ರಸಿಕ ಜನರ ವಂದನೆ ಸ್ವೀಕರಿಸಿ, ಮೊದಲನೇ ಸಾಲಿನಲ್ಲಿದ ಚವ್ಹಾಣ ಪ್ರಭೃತಿಗಳನ್ನು ಮಾತನಾಡಿಸಿ, ತನ್ನ ಕಚೇರಿಯನ್ನು ಪ್ರಾರಂಭಿಸುವ ಮೊದಲು ಕಚೇರಿಯ 'ಬೇಕು-ಬೇಡ'ಗಳ ವಿವರಣೆ ನೀಡಿದ್ದು ನಾನು ಕಣ್ಣಾರೆ ಕಂಡಿದ್ದೇನೆ. ಅವರ ರಾಜಠೀವಿಯ ಪ್ರತಿಮೆ ನನ್ನ ಕಣ್ಮುಂದೆ ಇನ್ನೂ ಇದೆ. 'ಟೇಪು ರಿಕಾರ್ಡಿಂಗ್ ಮಾಡಬಾರದು, ಮೈಕ್ರೋಫೋನ್ ಎಂಬ ರಾಕ್ಷಸ ನನಗೆ ನಿಷಿದ್ಧ, ಆದರೂ ನಿಮ್ಮ ಸಲುವಾಗಿ ಹಾಡುವೆ' ಇತ್ಯಾದಿ ಶಬ್ದಸುಮನಗಳ ಸುರಿಮಳೆ.

ಅದೊಂದು ನಿಜಕ್ಕೂ 'ನ ಭೂತೋ ನ ಭವಿಷ್ಯತಿ' ಕಚೇರಿಯಾಗಿತ್ತು. ಇದೇ ಕಚೇರಿಯಲ್ಲಿ ಕೊನೆಗೆ ಕೇಸರ ಬಾಯಿ ತನ್ನ ನಿವೃತಿಯನ್ನು ಘೋಷಿಸಿದ್ದೂ, ಅದಕ್ಕೆ ಕಾರಣಗಳನ್ನು ನೀಡಿದ್ದೂ ಹಾಗೂ ರಸಿಕರಿಗೆ ಈ ವರೆಗೆ ಗೊತ್ತಾಗದ ಅವಳ ವಿನೋದ ಬುದ್ಧಿಯ ಪ್ರದರ್ಶನ ಆಗಿದ್ದೂ ನನ್ನ ನೆನಪಿನಲ್ಲಿ ಅಂಟಿಕೊಂಡು ನಿಂತಿದೆ. ಯಶವಂತರಾವ್ ಅವರು ಅವರ ನಿವೃತ್ತಿಯ ಸುದ್ದಿ ಕೇಳಿ 'ನಿಮಗೇನು ಬೇಕು, ಏನನ್ನು ಕೊಡಲಿ ನಿಮಗೆ' ಎಂದು ಕೇಳಿದ್ದಕ್ಕೆ, ಅವರು ಮುಗುಳುನಗು ನಗುತ್ತ ತುಂಟತನದಿಂದ 'ನನಗೊಂದು ದಿನದ ಮಟ್ಟಿಗೆ ಬಾಂಬೆ ರಾಜ್ಯದ ಮುಖ್ಯಮಂತ್ರಿ ಯಾಗಬೇಕೆಂಬ ಕನಸಿದೆ' ಅಂದದ್ದು ಇಡೀ ಪ್ರೇಕ್ಷಾಗೃಹವನ್ನು ನಗೆಗಡಲಲ್ಲಿ ತೇಲಿಸಿದ್ದು ಇದೆ. ಮುಂದೆ ನನ್ನ ಸೋದರ ಮಾವ ಮೋಹನ ನಾಡಕರ್ಣಿ ಬಾಂಬೆ ಸರಕಾರದ ವಾರ್ತಾ ಪ್ರಚಾರ ಖಾತೆಯಲ್ಲಿದ್ದುದರಿಂದ ಗೊತ್ತಾಗಿದ್ದ ವಿಷಯವೆಂದರೆ, ಒಂದು ದಿನ ಯಶವಂತರಾವ್ ಅವರು ಕೇಸರಬಾಯಿಗೆ ಆಮಂತ್ರಿಸಿ, ಒಂದರ್ಧ ದಿನ ತಮ್ಮ ಖರ್ಚಿಯಲ್ಲಿ ಕೂಡಿಸಿ ತಮ್ಮ ಅಧಿಕಾರಿಗಳನ್ನು ಪರಿಚಯಿಸಿ, 'ಚಾಯ್-ಪಾನ' ಮಾಡಿಸಿ ಆದರಪೂರ್ವಕವಾಗಿ ಕಳಿಸಿಕೊಟ್ಟರಂತೆ.

1882ರಲ್ಲಿ ಪೋರ್ಚುಗೀಸರ ಆಡಳಿತದಲ್ಲಿದ್ದ ಗೋವಾ ಪ್ರಾಂತ್ಯದ ಕೇರಿ ಎಂಬ ಊರಲ್ಲಿ 'ದೇವದಾಸಿ' ಕುಟುಂಬದಲ್ಲಿ ಜನ್ಮಿಸಿದ ಕೇಸರಬಾಯಿ 6-8 ವರ್ಷದವಳಾದಾಗ

ತಾಯಿಯೊಂದಿಗೆ ಕೊಲ್ಲಾಪುರಕ್ಕೆ ಸಂಗೀತ ಕಲಿಯಲು ಬಂದಳಂತೆ. ಮೊದಲಿಗೆ ಕಿರಾನಾ ಪರಂಪರೆಯ ಅಬ್ದುಲ್ ಕರೀಂಖಾನರಿಂದ ಒಂದೆರಡು ವರ್ಷ ಬಳಿಕ ಗೋವಾದವರೇ ಆದ ಗ್ವಾಲಿಯರ್ ಪರಂಪರೆಯ ರಾಮಕೃಷ್ಣ ಬುವಾ ವಝೆಯವರಿಂದ ಹಾಗೂ ನಂತರ ಜೈಪುರ ಪರಂಪರೆಯ ಅಲ್ಲಾದಿಯಾಖಾನರಿಂದ ಬಳಿಕ ಅಲ್ಲಾಯುಷಿ, ಭಾಸ್ಕರ ಬುವಾ ಬಖಲೆಯವರಿಂದಲೂ ಕಲಿತರು. ಭಾಸ್ಕರ ಬುವಾ ಅಂದರೆ, ಬಾಲ ಗಂಧರ್ವರ ಗುರು.

ಗುರು ಜೈಪೂರ ಅತ್ರೋಳಿಯ ಅಧ್ವರ್ಯು ಎಂದೆನಿಸಿಕೊಂಡ ಅಲ್ಲಾದಿಯಾ ಖಾನರಲ್ಲಿ (1855–1946) ಕಲಿಯುವ ಮೊದಲೇ ಕೇಸರಬಾಯಿ, ಅನೇಕ ಕಚೇರಿಗಳಲ್ಲಿ ಹಾಡಿ ಆಗಲೇ ಹೆಸರು ಮಾಡಿದ್ದರು. ಆಕೆಯ ಯಜಮಾನ ಗೋಪಾಲದಾಸರಿಗೆ ಕೇಸರಬಾಯಿಯು ಸಂಗೀತದಲ್ಲಿ ಇನ್ನೂ ಎತ್ತರ ಬೆಳೆಯ ಬೇಕೆಂಬ ಆಸೆ. ಸರಿ, ಕೊಲ್ಲಾಪುರದಿಂದ ಮುಂಬಯಿಗೆ ಬಂದಾಗ ಚೌಪಾಟಿ ಬ್ಯಾಂಡ ಸ್ಟ್ಯಾಂಡಿನಲ್ಲಿ ಬಾಡಿಗೆ ಮನೆಯಲ್ಲಿ ಇರುತ್ತಿದ್ದ ಖಾನಸಾಹೇಬರಿಗೆ ಹೇಳಿಕಳಿಸಿದರು, ಗೋಪಾಲದಾಸರು. ಸಂಗೀತ ಕ್ಷೇತ್ರದಲ್ಲಿ ಈವರೆಗೆ ಕಾಣದ, ಅರಿಯದ ಒಂದು ಕಾಂಟ್ರಾಕ್ಟನ್ನು ಅಲ್ಲಿ ಮಾಡಲಾಯಿತು. ಯಾವುದು ಅದು ಕಾಂಟ್ರಾಕ್ಟು?

ಮೊದಲನೆಯದಾಗಿ, ಅಲ್ಲಾದಿಯಾ ಗುರುಗಳೆಂದು 10 ವರ್ಷ ಕಲಿಸಬೇಕು. ಎರಡನೆಯದಾಗಿ, ಪ್ರತಿ ತಿಂಗಳು ಅಲ್ಲಾದಿಯಾ ಖಾನರಿಗೆ ರೂ 200 ದಕ್ಷಿಣೆ ಕೊಡಬೇಕು,ಮೂರನೆಯದಾಗಿ, ಶಿಷ್ಯಸ್ವೀಕಾರದ ವೇಳೆ ರೂ. 5,000 ಗಂಡಾಬಂಧನದ ಹಣವನ್ನು ಗುರುಗಳಿಗೆ ಕೊಡಬೇಕು, ನಾಲ್ಕನೆಯದಾಗಿ, ಹತ್ತು ವರ್ಷಗಳಲ್ಲಿ ಗುರುಗಳು ಬೇರೆ ಯಾರಿಗೂ ಕಲಿಸಬಾರದು, ಐದನೆಯದಾಗಿ, ಕೇಸರಬಾಯಿ ಕಚೇರಿ ಇದ್ದಲ್ಲಿಗೆ ಗುರುಗಳು ಹೋಗುವದಾದಲ್ಲಿ ಸ್ವಂತ ಖರ್ಚಿನಲ್ಲಿ ಪ್ರವಾಸ ಮಾಡಬೇಕು. ಓದುಗರಿಗೆ ಈಗ ಅರ್ಥವಾಗಬಹುದು, ಕೇಸರಬಾಯಿ ತನ್ನ ಕಚೇರಿಯಲ್ಲಿ ಮೋಗುಬಾಯಿ ಕುಟುಂಬದವರು ಬರಬಾರದೆಂದು ನೀಡಿದ್ದ ಆಜ್ಞೆಯ ಕಾರಣ.

ಅಲ್ಲಾದಿಯಾ, ಮೋಗುಬಾಯಿ ಕುರ್ಡಿಕರರಿಗೆ ಗುಟ್ಟಿನಲ್ಲಿ ಕಲಿಸುತ್ತಾರೆ, ಎಂಬುದು ಕೇಸರಬಾಯಿ ಕೇರಕರ್ ಅವರ ತಮ್ಮ ಬಾಬೂರಾಯರಿಗೆ ಗೊತ್ತಿತ್ತು. ಅವರೇ ಕೇಸರಬಾಯಿಯ ಕಿವಿ ಊದಿದ್ದು. ಸ್ತ್ರೀ ಸುಲಭ ಹೊಟ್ಟೆಕಿಚ್ಚಿಗೆ ಕೇಸರಬಾಯಿ ಬಲಿಯಾದದ್ದು ಆಶ್ಚರ್ಯವೇನಿಲ್ಲ. ಕೇಸರಬಾಯಿಯ ಚರಿತ್ರೆಯನ್ನು ಬಾಬೂರಾಯರು ಬರೆದಿದ್ದು, ಅದರಲ್ಲಿ ಮೋಗುಬಾಯಿ ಕುರಿತ ಹಗೆತನದ ಬಗ್ಗೆ ದಾಖಲೆಗಳು ಇವೆ.

ಕೇಸರಬಾಯಿಯ ಧ್ವನಿ ಸಾಧಾರಣ ಪಟ್ಟಮ್ಮಾಳರಂತೆ. ಸ್ವಲ್ಪ ಗಡಸಾದರೂ ಪರಿಶ್ರಮದಿಂದ ಆಕೆ ಅದನ್ನು ಲಾಲಿತ್ಯಪೂರ್ಣವನ್ನಾಗಿ ಮಾಡಿಕೊಂಡಿದ್ದರು. ಮೂರೂ ಸಪ್ತಕಗಳಲ್ಲಿ ಸಲೀಸಾಗಿ ತಿರುಗಾಡಿ ಬರುವಂತಹುದು. ಉಚ್ಚಾರ ಸ್ಪಷ್ಟ. ಆಲಾಪ ಪ್ರಧಾನ ಹಾಡುಗಾರಿಕೆ, ಸ್ಥಾಯೀ ಮತ್ತು ಅಂತರಾ ಈ ಎರಡು ಭಾಗಗಳಲ್ಲಿ ನಾಲ್ಕು ಸಾಲಿನ ಬಂದಿಶ್ (ಕಾವ್ಯ, ಚೀಸ್) ಇದ್ದರೆ ಕೇಸರಬಾಯಿಗೆ ಕೇವಲ ಸ್ಥಾಯಿ ಭಾವದಲ್ಲಿಯೇ ಹಾಡಿ ತನ್ನ ಧ್ವನಿಯ ಕರಾಮತ್ತು ತೋರಿಸುವ ದಿಮಾಕು ಇತ್ತು. ಅವರ ಶ್ವಾಸ

ನಿಯಂತ್ರಣ ಅಂದರೆ ಬ್ರೆಥ್ ಕಂಟ್ರೋಲ್ (ದಮ್‌ಸಾಸ್) ಅಭೂತಪೂರ್ವ. ಅಂದರೆ, ಮಂದ್ರ ಸಪ್ತಕದಲ್ಲಿ ಆರೋಹದಲ್ಲಿಯೇ ಆಗಲಿ, ಅವರೋಹದಲ್ಲಿಯೇ ಆಗಲಿ ತಾನನ್ನು ಆರಂಭಿಸಿದರೆ ಮೂರು ಸಪ್ತಕದಲ್ಲಿ ಅದೇ ರಾಗದಲ್ಲಿ* ತಿರುಗಾಡಿ ತಬಲಾದೊಂದಿಗೆ ಸಮ್‌ಗೆ ಬರುವಾಗ 40–45 ಸೆಕಂಡುಗಳ ಶ್ವಾಸ ನಿಯಂತ್ರಣದ ಮಾದರಿ. ಹಾಡುವಾಗ ಸ್ವಲ್ಪವೂ ನಡುಗದ, ಸ್ಪಷ್ಟವಾದ, ಸ್ಫುಟವಾದ, ನಿರಾಯಾಸದ ಹಾಡುಗಾರಿಕೆ, ಹಚ್ಚಹಸುರಾಗಿ ಕೇಳಿಸುವಂತಹುದು.

ಕವಾಸಜಿ ಜಹಂಗೀರ್ ಹಾಲಿನಲ್ಲಿ ಹಾಡುವಾಗ ಕೇಸರಬಾಯಿಗೆ ಸ್ವಲ್ಪ ನಡುಕ ಉಂಟಾಗಿದ್ದುದನ್ನು ಹಾಡುವಾಗ ಸ್ವತಃ ಅರಿತರಂತೆ. ತನ್ನ ಹಾಡುವ ಗುಣಮಟ್ಟ ಇಳಿಯಬಾರದೆಂದು ಅದೇ ದಿನ ಕಚೇರಿ ಮುಗಿಸುವ ಮುನ್ನ 'ಇದೇ ನನ್ನ ಕೊನೆಯ ಕಚೇರಿ' ಎಂದು ಕೇಸರಬಾಯಿ ಘೋಷಿಸಿದಾಗ ಅಲ್ಲಿನ ಎರಡೂ ಗೋಲಾಕಾರದ ಮಜಲುಗಳಲ್ಲಿ ಕಿಕ್ಕಿರಿದು ನೆರೆದಿದ್ದ ಸಮುದಾಯ ಒಂದೆರಡು ಕ್ಷಣ ಸ್ತಬ್ಧವಾದದ್ದನ್ನು ನಾನು ನೋಡಿದ್ದೇನೆ, ಅನುಭವಿಸಿದ್ದೇನೆ. ಮಾರನೇ ವರ್ಷವೇ ಪೆಡ್ಡರ್ ರೋಡಿನಲ್ಲಿದ್ದ ಮಾಧವ್ ಆಪಟೆ, ಅರವಿಂದ್ ಆಪಟೆ ಅವರ ಬಂಗಲೆ ನೆಲಸಮ ಮಾಡುವ ಮೊದಲು ಕೇಸರಬಾಯಿ ಒಂದು ಕಚೇರಿಯನ್ನು ಅಭೂತಪೂರ್ವವಾಗಿ ನಡೆಸಿ ತನ್ನ ಅದ್ಭುತ ಹಾಡುಗಾರಿಕೆಗೆ ಪೂರ್ಣವಿರಾಮ ಹಾಕಿದರು.

ಆದರೂ ಠುಮರಿ ಕಲಿಯುವ ಲವಲವಿಕೆ ಆಕೆಗೆ. ಸಿದ್ಧೇಶ್ವರೀ ದೇವಿ ಮುಂಬಯಿಗೆ ಬಂದಾಗ ಅವರಿಂದ ಠುಮರಿ ಕಲಿಯುತ್ತಿದ್ದುದನ್ನು ಮುಂಜಾನೆ ನಡೆದಾಡುತ್ತಾ ಶಿವಾಜಿ ಪಾರ್ಕನ್ನು ಸುತ್ತು ಹಾಕುವ ಜನ ಪ್ರತಿದಿನವೂ ಕೇಳುತ್ತಿದ್ದರಂತೆ.

ಕೇಸರಬಾಯಿ ಕೇರಕರರ ಬಗ್ಗೆ ಮರಾಠಿಯಲ್ಲಿ ಅನೇಕ ಲೇಖನಗಳಿವೆ. ಮೇಲೆ ಹೇಳಿದಂತೆ ಬಾಬೂರಾವ್ ಕೇರಕರ ಬರೆದ ಅವಳ ಚರಿತ್ರೆ ಇದೆ. ಅಲ್ಲಾದಿಯಾ ಖಾನ್‌ರ ಬಗ್ಗೆ ಮರಾಠಿಯಲ್ಲಿ ಮೂರು ಪುಸ್ತಕಗಳಿವೆ. ಈ ಪುಸ್ತಕಗಳಲ್ಲಿ ಕೇಸರಬಾಯಿಯ ಹಿಂದುಸ್ತಾನಿ ಸಂಗೀತದ ಅದ್ವಿತೀಯ ಪ್ರಸ್ತುತಿಗೆ, ಅಲ್ಲಾದಿಯಾ ಖಾನ ಸಾಹೇಬರಿಗೆ ಒಳ್ಳೆಯ ಶಿಷ್ಯರನ್ನು ತಯಾರು ಮಾಡಿದ್ದಕ್ಕೆ ಅಭಿನಂದನೆಗಳ ಸುರಿಮಳೆಯೇ ಇದೆ.

ಅಲ್ಲಾದಿಯ ಖಾನ ಸಾಹೇಬರ ಶಿಷ್ಯರಲ್ಲಿ ಒಬ್ಬರ ಹಾಗೆ ಮತ್ತೊಬ್ಬರು ಹಾಡುವುದಿಲ್ಲ. ತಮ್ಮ ಹಾಗೆಯೇ ಹಾಡುವಂತಹ ಕ್ಲೋನುಗಳನ್ನು ಅವರು ತಯಾರಿಸಿಲ್ಲ ಎಂಬುದಾಗಿ ಈ ಪುಸ್ತಗಳಲ್ಲಿ ಸಂದರ್ಭೋಚಿತವಾಗಿ ಬರೆದದ್ದು ಇದೆ (ಸ್ವಾಮಿ ಧರ್ಮವ್ರತ). ಈ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಹೇಳಿ ಈ ಲೇಖಕ್ಕೆ ಪೂರ್ಣ ವಿರಾಮ ಹಾಕುತ್ತೇನೆ.

1855ರಲ್ಲಿ ಹುಟ್ಟಿದ ಖಾನ ಸಾಹೇಬರು ಕೇಸರಬಾಯಿಗೆ ಕಲಿಸುವಾಗ, ಕಂಟ್ರಾಕ್ಟಕ್ಕೆ ಸಹಿ ಹಾಕಿದಾಗ ಅವರ ವಯಸ್ಸು 75ವರ್ಷ, ಆಗ ಕೇಸರಬಾಯಿಗೆ 41 ವರ್ಷ. ಆಗಲೇ ಅವರು ಹಿಂದುಸ್ತಾನೀ ಸಂಗೀತ ಪ್ರಸ್ತುತಿಯಲ್ಲಿ ಹೆಸರುಮಾಡಿದ್ದರು. ಅಲ್ಲಾದಿಯಾ ಖಾನರು ಅವರಿಗೆ ದಮ್‌ಸಾಸ್ ಪರಿಶ್ರಮ, ತಾನ ಪ್ರಕಾರಗಳಲ್ಲಿ ರಾಗದ ಸ್ವರಗಳನ್ನು 'ಆ'ಕಾರದಲ್ಲಿ ಹಾಡುವುದು, ಇತ್ಯಾದಿಗಳ ಮಾರ್ಗದರ್ಶನ ಮಾಡಿರಬೇಕೆಂಬ ಊಹೆ ನನ್ನದು. ಕೊನೆಗೆ ಗುರು ಶಿಷ್ಯೆಯರಲ್ಲಿ ಒಂದು ತರಹದ ವಿತುಷ್ಟತೆ ಬಂದದ್ದು,

1946ರಲ್ಲಿ ಉಸ್ತಾದ್‌ರು ತೀರಿಕೊಂಡಾಗ. ಕೇಸರಬಾಯಿ ಅಂತ್ಯದರ್ಶನಕ್ಕೆ ಹೋಗದೆ ಇರುವುದು, ಇದೆಲ್ಲ ಕಣ್ಮುಂದೆ ತಂದರೆ ಕೇಸರಬಾಯಿ ತನ್ನಷ್ಟಕ್ಕೆ ತಾನೇ ಗುರುಗಳ ಮಾರ್ಗದರ್ಶನ ಅಳವಡಿಸಿಕೊಂಡಿರಬೇಕು. ಅದೇ ಕತೆ, ಅಲ್ಲಾದಿಯಾ ಖಾನರ ಮಗ ಮಂಜೀಖಾನ (ಮನ್ಸೂರರ ಗುರು), ಬೂರ್ಜಿಖಾನರ (ಪದ್ಮಾವತಿ ಗೋಖಲೆ, ಮನ್ಸೂರ, ಇವರ ಗುರುಗಳು) ಹಾಡುಗಾರಿಕೆಯಲ್ಲಿ ವೈವಿಧ್ಯವಿತ್ತು. ಕೇಸರಬಾಯಿಯ ಹಾಡುಗಾರಿಕೆ ಸ್ವಲ್ಪಮಟ್ಟದಲ್ಲಿ ಅವರ ಏಕಮೇವ ಶಿಷ್ಯೆ ಧೊಂಡು ತಾಯಿ ಹಾಡುತ್ತಿದ್ದಳು.

---

* ಮೇಲೆ 'ಅದೇ ರಾಗದಲ್ಲಿ' ಎಂದು ಬರೆದ ಕಾರಣ, ಈಗಿನ ಹಿಂದುಸ್ತಾನಿ ಹಾಡುಗಾರಿಕೆಯಲ್ಲಿ 'ತಾನ-ಪಲ್ಟಾ' ಒಂದೇ ರಾಗದಲ್ಲಿ ಪರಿಶ್ರಮಪೂರ್ವಕವಾಗಿ ಪ್ರಾಕ್ಟೀಸು ಮಾಡಿ ಅದನ್ನೇ ಪ್ರತಿಯೊಂದು ರಾಗದಲ್ಲಿ ಸೇರಿಸುವ ಪದ್ಧತಿಯು ಇಣುಕುಹಾಕಿದೆ.

*****

3.7

ರಸೂಲನಬಾಯಿ (1902–1972)

ಇತ್ತೀಚಿಗೆ ದೆಹಲಿಯ ಸಾಬಾ ದಿವಾಣ ತಯಾರು ಮಾಡಿದ 'ದ ಲಾಸ್ಟ್ ಸಾಂಗ್' ನೋಡಲು ಪೃಥ್ವಿ ಥಿಯೇಟರಿಗೆ ಹೋಗಿದ್ದೆ. 'ಸಂಗೀತ ಸಾಮ್ರಾಜ್ಞಿಯರ' ಮೇಲಿನ ಸರಣಿ ಪ್ರಾರಂಭಿಸಲು ಹೋಮ್‌ವರ್ಕ್ ಮಾಡುತ್ತಿದ್ದಾಗ ರಸೂಲನಬಾಯಿಯ ಬಗ್ಗೆ ಯಾರೋ ಪಂಜಾಬ್‌ದವರು ಸಾಕ್ಷ್ಯಚಿತ್ರಮಾಡುತ್ತಾ ಇದ್ದಾರೆ, ಎಂಬ ಸುದ್ದಿ ಅಂತರ್ಜಾಲದಲ್ಲಿ ಸಿಕ್ಕಿತ್ತು. ಅವರ ಚಿತ್ರಕ್ಕೆ ಧನಸಹಾಯ (50 ಲಕ್ಷ ರೂ) ಒದಗಿಸಿದ ಸಂಸ್ಥೆ ಬೆಂಗಳೂರಿನಲ್ಲಿದೆ. ನಮ್ಮ ಬೆಂಗಳೂರು! ಸರಿ, ಬೆಂಗಳೂರಿನ ಇಂಟರ್‌ನ್ಯಾಷನಲ್ ಫೈನ್ ಆರ್ಟ್ಸ್ ಫೌಂಡೇಷನ್‌ಗೆ ಫೋನಿಸಿದೆ. 5 ವರ್ಷದ ಹಿಂದೆ ಅವರು ಸಾಬಾ ದಿವಾಣರಿಗೆ ಆರ್ಥಿಕ ಸಹಾಯ ಮಾಡಿದ್ದರಂತೆ. 2012ರಲ್ಲಿ ಸಾಕ್ಷ್ಯ ಚಿತ್ರ 'ದ ಲಾಸ್ಟ್ ಸಾಂಗ್' ಬಿಡುಗಡೆಯಾಯಿತು. 120 ನಿಮಿಷಗಳ ಚಿತ್ರ, ನನ್ನ ಕುತೂಹಲ ಕೆರಳಿಸಿದ್ದು ರಸೂಲನ್ ಬಾಯಿಯ ಬಗ್ಗೆ ಏನಾದರೂ ಮಾಹಿತಿ ಸಿಗಬಹುದೆಂದು ತಿಳಿದುಕೊಂಡಿದ್ದೆ. 120 ನಿಮಿಷಗಳ ವೇಳೆ, ತಾಡದೇವದಿಂದ ಜುಹೂ ಪೃಥ್ವಿ ಥಿಯೇಟರ್ ವಾಪಸ್ಸು ಟ್ಯಾಕ್ಸಿ ಖರ್ಚು, ವೇಳೆ ಎಲ್ಲಾ ಹಾಳು. ಅಂತರ್ಜಾಲದಲ್ಲಿಯ ಮಾಹಿತಿ ನನ್ನ ಮಿತ್ರ ಸುರೇಶ ಚಾಂದವಣಕರ ಹಾಗೂ ಸ್ವಲ್ಪ ಮಟ್ಟಿಗೆ ಸಾಬಾ ದಿವಾಣರ 'ದ ಲಾಸ್ಟ್ ಸಾಂಗ್' ಇವುಗಳ ಆಧಾರದಿಂದ ಈ ಲೇಖನ ಬರೆಯುತ್ತಿದ್ದೇನೆ. ರಸೂಲನ್‌ಬಾಯಿಯ ಒಂದೇ ಒಂದು ಮುದ್ರಿತ ತಟ್ಟೆ "ಲಾಗತ ಜೋಬನವಾ ಚೋಟ್, ಫುಲಗೇಂದವಾ ನ ಮಾರೊ" ಈ ಹಾಡು 1935ರಲ್ಲಿ ಮುದ್ರಿತವಾದದ್ದು. ಇದೇ ಹಾಡನ್ನು ವಸ್ತುವಾಗಿ ಇಟ್ಟುಕೊಂಡು ಸಾಬಾ ದಿವಾಣ 'ದಿ ಲಾಸ್ಟ್ ಸಾಂಗ್' ಮಾಡಿದಳು. 'ಜೋಬನವಾ' ಅಂದರೆ ಸ್ತನಗಳ ಭಾಗ, ನಾಯಕಿ ಅತ್ಯಂತ ಶೃಂಗಾರಪೂರ್ವಕವಾಗಿ 'ಹೂವಿನ ಚೆಂಡು ಎಸೆಯಬೇಡ ಕಣೋ, ಮೊಲೆ ನೋಯುತ್ತೆ ಅಥವಾ ವಕ್ಷಸ್ಥಳಕ್ಕೆ ಗಾಯವಾಗುತ್ತೆ.' ಎಂಬರ್ಥ!

ಇದೇ ಹಾಡನ್ನು ಈಗಲೂ ಲಘು ಸಂಗೀತ ಹಾಡುವ ಗೃಹಿಣಿಯರೂ, ಉಲ್ಹಾಸ ಕಶಾಳಕರ್‌ರಂತಹ ಗವಯಿಗಳೂ ಹಾಡುತ್ತಿರುತ್ತಾರೆ, 'ಜೋಬನವಾ' ಶಬ್ದದ ಬದಲಾಗಿ 'ಕಲೇಜವಾ' ಸೇರಿಸಿದ್ದೂ ರಸೂಲನ್ ಬಾಯಿನೇ. ಶೃಂಗಾರ ಗೀತೆಗಳಲ್ಲಿ ಸಾರ್ವಜನಿಕರಿಗೆ ಮುಜುಗರವಾಗುವಂತಹ ಶಬ್ದಗಳನ್ನು ತೆಗೆದು ಸಾಹಿತ್ಯದ 'ಶುದ್ಧೀಕರಣ' 18–19ನೇ ಶತಮಾನದಿಂದಲೇ ಪ್ರಾರಂಭವಾಗಿರಬೇಕು. ಈತನಕ ಇಂತಹ ಅನೇಕ ಹಿಂದುಸ್ತಾನೀ

ಬಂದಿಶಗಳನ್ನು ರಸೂಲನ್‌ಬಾಯಿ, ಅಖ್ತರೀಬಾಯಿ, ಮಲಕಾ, ಬಡೀ ಮಲಕಾ, ಅಖ್ತರೀ ಜಾನ್, ಸುಂದ್ರಾಬಾಯಿ ಇವರೆಲ್ಲ ಶುದ್ಧೀಕರಣವನ್ನು ಮಾಡಿರಬೇಕು. ಇದರ ಮೇಲೆಯೇ ಆಕೆಯ ಸಾಕ್ಷ್ಯಚಿತ್ರ, ಅವಳ ಹೇಳಿಕೆಯ ಪ್ರಕಾರ, 'ಜೋಬನವಾ ಲಾಗೆ, ಚೋಟ್' ಇದು ತವಾಯಫ್ ಸಂಸ್ಕೃತಿಯ ಕೊನೆಯ ಹಾಡು – The Last C®č Lost Song!.

ಮೊದಲು ಈ ಶುದ್ಧೀಕರಣದ ವಿಷಯ. ಸಂಸ್ಕೃತ ಕಾವ್ಯದಲ್ಲಿ ಇಂತಹ ಶೃಂಗಾರ ರಸೋತ್ಪನ್ನದ ಅನೇಕ ಪದ್ಯಗಳಿವೆ. ಭಾಸನ 'ಸ್ವಪ್ನವಾಸವದತ್ತ' ಕಾಳಿದಾಸನ 'ಮಾಲವಿಕಾಗ್ನಿಮಿತ್ರ' ನಾಟಕಗಳಲ್ಲಿಯೂ ಇಂತಹ ಪ್ರಸಂಗಗಳಿವೆ. ಶುದ್ಧೀಕರಣ ವಾಗಬೇಕಾದರೆ ಈ ಬಂದಿಶ್‌ಗಳನ್ನು, ಹಾಡುಗಳನ್ನು ಅಷ್ಟು ಗಾಂಭೀರ್ಯದಿಂದ ಯಾರೂ ಆಲೋಚನೆ ಮಾಡುವುದಿಲ್ಲ. ಅತಿರೇಕದ ಕಲ್ಪನಾ ಶಕ್ತಿಯಿಂದ ಕ್ಷಣಮಾತ್ರಕ್ಕೆ ಕಲ್ಪಿಸಿ ಕೊಂಡ ಸ್ತ್ರೀಯ ಚಿತ್ರ ಇಣುಕಿ ನೋಡಬಹುದಷ್ಟೆ. ಇನ್ನೊಂದು ಉದಾಹರಣೆ, ಮರಾಠಿ ಸೌಭದ್ರ ನಾಟಕ, ಅಣ್ಣಾಸಾಹೇಬ ಕಿರ್ಲೋಸ್ಕರ ಬರೆದದ್ದು (1883). ಅದರಲ್ಲಿಯ ಕೃಷ್ಣ ತನ್ನ ಹೆಂಡತಿ ರುಕ್ಮಿಣಿಯನ್ನು 'ನಾನು ಸತ್ಯಭಾಮೆ ಬಳಿ ಹೋಗದೇ ನಿನ್ನ ಬಳಿ ಬಂದಿದ್ದೇನೆ' ಎಂದು ಆಕೆಯ ಹುಸಿಮುನಿಸು ಹೋಗಲಾಡಿಸಲು 'ನಚ ಸುಂದರಿ, ಕರು ಕೋಪ, ಮಜವರಿ ಧರಿ ಅನುಕಂಪಾs' ಹಾಡುತ್ತಾ 'ವಕ್ಷಸ್ಥಳ ದಂತವ್ರಣ' ಮಾಡುವ ಕಲ್ಪನೆಯಿಂದ ರಮಿಸುತ್ತಾನೆ. ಇದರರ್ಥ, ಜಯಮಾಲಾ ಶಿಲೇದಾರ (ರುಕ್ಮಿಣಿ) ಮತ್ತು ಛೋಟಾ ಗಂಧರ್ವ (ಕೃಷ್ಣ) ಈ ಹಾಡನ್ನು ಸೆನ್ಸಾರ್ ಮಾಡದೇ ಅದು ಇರುವ ಹಾಗೆಯೇ ಇದ್ದಂತೆ ಈಗಲೂ ಹಾಡುತ್ತಿರುವುದನ್ನು ವೇದಿಕೆಯ ಮೇಲೆ ನಾನು ನೋಡಿ ಆನಂದಿಸಿದ್ದೇನೆ. ಭಲೇ, ಅಣ್ಣಾ ಸಾಹೇಬರು ನಾಟಕ ಬರೆಯುವಾಗ ರುಕ್ಮಿಣಿಯ ಪಾತ್ರದಲ್ಲಿ ಭಾವೂ ಕೊಲ್ಹಟ್‌ಕರ್ ಇದ್ದರೂ ಈ ನಾಟಕದ 'ಆ' ಹಾಡಿನ ಶುದ್ಧೀಕರಣ ಆಗಲೇ ಇಲ್ಲ! ಇರಲಿ ಇದೊಂದು ಬೇರೆ ವಿಷಯವೇ!

ರಸೂಲನ್ ಹುಟ್ಟಿದ್ದು ಉತ್ತರಪ್ರದೇಶದ ಮಿರ್ಜಾಪುರದಲ್ಲಿ. ಇವಳ ತಾಯಿ ಖಾನದಾನೀ ತವಾಯಫ್ ನಾಯಕಸಾನಿ. ಮಿರ್ಜಾಪುರದಲ್ಲಿ ಒಳ್ಳೆಯ ಕೋಠಿಯ ಒಡತಿ. ಹುಡುಗಿ ಹುಟ್ಟಿದಳೆಂದು ಅದೇನು ಸಂಭ್ರಮ! ತವಾಯಫ್‌ಗಳಲ್ಲಿ ಹೆಣ್ಣುಮಗಳು ಹುಟ್ಟಿದರೆ ಫೇಡೆ, ಗಂಡುಮಗುವಾದರೆ ಭರ್ಫಿ! ಗಂಡು ಹುಟ್ಟಿದರೆ ಒಂದು ರೀತಿಯ ಸೂತಕಕಳೆ. ಅದೇ ಹೆಣ್ಣಾದರೆ, ಕೋಠಿ ಬಿಡಿ, ಇಡೀ ವಸತಿಯಲ್ಲಿಯೇ ನಾಚ–ಗಾನಾ! ಐದನೇ ವರ್ಷಕ್ಕೇನೇ ರಸೂಲನ್ ತಾಯಿಯೊಂದಿಗೆ ಹಾಡಲು, ನೃತ್ಯಮಾಡಲು ಕಲಿತಳು. ಮಗಳ ಪ್ರತಿಭೆ ನೋಡಿ ತಾಯಿ ಅದಾಲತ, ಮಗಳನ್ನು ಶಮ್ಮುಖಾನರಲ್ಲಿ ಟಪ್ಪಾ (ಇದೊಂದು ಸ್ಪೀಡಿನಲ್ಲಿ ಹಾಡುವ ತಾನಪ್ರಕಾರ; ಕೆಳಗಣ ಅಂದರೆ ಮಂದ್ರದಿಂದ ತಾರಷಡ್ಜದವರೆಗೆ ಸಾಧಾರಣ ನಾಗಾಲೋಟದಲ್ಲಿಯ ತಾನು) ಸಾರಂಗೀ ಬಾರಿಸುವ ಆಶೀಕ ಖಾನ, ನಜ್ಜುಖಾನರಲ್ಲಿ ಎಲ್ಲ ಪ್ರಕಾರದ ದಾದರಾ, ಹೋರಿ, ಕಜರಿ ಈ ಎಲ್ಲ ಲೋಕಸಂಗೀತ ಕಲಿಸಿದಳು. ಅವಳ ಮೊದಲ ಕಚೇರಿ 1920ರಲ್ಲಿ ಧನಂಜಯಗಡದಲ್ಲಿ ಆಯಿತು. 1948ರ ತನಕ ಈಕೆ ಉತ್ತರ ಹಿಂದುಸ್ತಾನದಲ್ಲಿ ಮತ್ತು ದಕ್ಷಿಣದ ಮುಂಬಯಿ, ಕೊಲ್ಲಾಪುರದಲ್ಲಿ ಅತ್ಯುತ್ತಮ ಠುಮರಿ ಗಾಯಕಿ ಎಂದು ತನ್ನ ಹೆಸರನ್ನು ಸ್ಥಾಪಿಸಿದಳು.

ತನ್ನ ಅನಕೂಲತೆಗಾಗಿ ಬನಾರಸ್ ಶಹರದಲ್ಲಿಯೇ ತನ್ನದೇ ಕೋಠಿ ಮಾಡಿಕೊಂಡಳು. 'ಪೂರಬ್ ಅಂಗಕೀ' ಠುಮರಿಯಲ್ಲಿ ಇವಳಂತೆ ಹಾಡುವವಳು ಸಿದ್ಧೇಶ್ವರೀ ದೇವಿಯನ್ನು ಬಿಟ್ಟು ಮೂರನೇ ಹೆಸರು ಇರಲೇ ಇಲ್ಲ.

1948ರಲ್ಲಿ ರಸೂಲನ್‌ಬಾಯಿ ತನ್ನ 46ನೇ ವಯಸ್ಸಿನಲ್ಲಿ ದೃಢನಿಶ್ಚಯಮಾಡಿ ತನ್ನ ವಿಜೃಂಭಣೆಯ ಕೋಠಿಯ ಅಸ್ತಿತ್ವವನ್ನು ಬಿಟ್ಟುಕೊಟ್ಟು ಅದೇ ಬನಾರಸ್ ಶಹರದ ಒಂದು ಗಲ್ಲಿಯಲ್ಲಿ ಗರತಿಯಂತೆ ಸಣ್ಣ ಮನೆಯಲ್ಲಿ ಗಂಡನ ಸಮವೇತ ತನ್ನ ಸಂಸಾರ ಪ್ರಾರಂಭಿಸಿದಳು.

ಅವಳ ಬಾಳ ಸಂಗಾತಿ ಹತ್ತು ವರ್ಷದಿಂದ ಜೊತೆಗಿದ್ದವ. ಸೀರೆಯ ವ್ಯಾಪಾರಿ. ಬನಾರಸ್ ಪರಂಪರೆ ಹಾಡುಗಾರ್ತಿ ಎಂದು ಅತ್ಯುಚ್ಚ ಶಿಖರಕ್ಕೆ ತಲುಪಿದಾಗಲೇ ಆಕೆ ತನ್ನ ತವಾಯಫ್, ಮುಜರಾ ಸಂಸ್ಕಾರ ಬಿಟ್ಟುಕೊಟ್ಟಳು. ಆ ಬಳಿಕ ಅವಳಿಗೆ ಆರ್ಥಿಕ ಸಹಾಯವಿದ್ದುದು ಕೇವಲ ಆಕಾಶವಾಣಿ, ಹಾಗೂ ಗ್ರಾಮೋಫೋನು ರಿಕಾರ್ಡುಗಳ ಮಾರಾಟದ ಹಕ್ಕುಗಳು ಅಷ್ಟೆ.

ದೆಹಲಿಯಲ್ಲಿದ್ದ ನೈನಾದೇವಿ ಈಕೆಯ ಶಿಷ್ಯೆ (1917–1993). 1957ರಲ್ಲಿ ರಸೂಲನ್‌ಬಾಯಿಗೆ ಕೇಂದ್ರ ಸರಕಾರದಿಂದ ಸಂಗೀತ ನಾಟಕ ಅಕೆಡೆಮಿಯ ಪ್ರಶಸ್ತಿ ಕೊಡಲಾಯಿತು. ಆದರೆ ಅದಕ್ಕಿಂತ ಮುಂಚೆ ಯಾರಿಗಾಗಿ ಆಕೆ ಕೋಠಿಯ ಜೀವನ ಕಚೇರಿ, ಹಾಡುಗಾರಿಕೆ ಬಿಟ್ಟುಕೊಟ್ಟಿದ್ದಳೋ ಅವನೇ 1962ರಲ್ಲಿ ತೀರಿಕೊಂಡಿದ್ದರಿಂದ ರಸೂಲನ್ ಆರ್ಥಿಕ ಬವಣೆಗೆ ಸಿಕ್ಕಿಬಿದ್ದಳು. ಅವಳು ಬನಾರಸ್ ರೇಡಿಯೋ ಸ್ಟೇಶನ್‌ದ ಹೊರಗೆ ಒಂದು ಟೀ ಸ್ಟಾಲ್ ಹಾಕಿಕೊಂಡು ತನ್ನ ಮುಂದಿನ ಜೀವನ ನಡೆಸಬೇಕಾಯಿತು. ದೈವದುರ್ವಿಲಾಸ ನೋಡಿ, ಬನಾರಸ್ ರೇಡಿಯೋ ಸ್ಟೇಷನ್‌ದ ಈಕೆ ಟಾಪ್ ಗ್ರೇಡ್ ಕಲಾವಿದೆ. ನೈನಾದೇವಿ ಮತ್ತಿತರ ಆಕಾಶವಾಣಿಯ ಜನ ಗೊತ್ತಿದ್ದರಿಂದ ಲಖನೌ, ಅಲಹಾಬಾದ್ ಸ್ಟೇಷನ್ನುಗಳಿಂದಲೂ ರಸೂಲನ್ ಹಾಡುತ್ತಿದ್ದಳು. 1970ರಲ್ಲಿ ದೂರದರ್ಶನದಲ್ಲಿ ಕೂಡ (ಕೇವಲ ದಿಲ್ಲಿಯಲ್ಲಿ ದೂರದರ್ಶನವಿತ್ತು) ಒಮ್ಮೆ ಇವಳ ಠುಮರಿ ಗಾಯನ ಲೈವ್ ಬಿತ್ತರಿಸಲಾಗಿತ್ತಂತೆ (ಈ ಚಿತ್ರಣ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ 'ರಾಮಜಾನೆ'!) ಇವಳ 6 ಹಾಡುಗಳು ಯು ಟ್ಯೂಬಿನಲ್ಲಿವೆ. ಇದರಲ್ಲಿ 'ಕಲೇಜವಾ' ಕೂಡ ಇದೆ.

1972ರಲ್ಲಿ ರಸೂಲನ್‌ಬಾಯಿ ಬನಾರಸ್‌ನಲ್ಲಿ ತೀರಿಕೊಂಡಳು. ಇವಳ ಅನೇಕ ಚಿತ್ರಗಳನ್ನು ಅಂತರ್ಜಾಲದಲ್ಲಿ ವೀಕ್ಷಿಸಬಹುದು. 19ನೇ ಶತಮಾನದ ತವಾಯಫ್‌ಗಳಂತೆ ಈಕೆ ಕೈಯಲ್ಲಿ ಸೇದುವ ಹುಕ್ಕಾ ಹಿಡಿದುಕೊಂಡು ತನ್ನ ಚಿತ್ರ ತೆಗೆಸಿಕೊಂಡಿದ್ದಾಳೆ.

*****

3.8

ಮೊಗೂಬಾಯಿ ಕುರ್ಡಿಕರ್ (1904–2001)

ಕೌಸಲ್ಯಾ ದಿನಕರ ಮಂಜೇಶ್ವರ್ ಇವರು ಮೋಗುಬಾಯಿ ಕುರ್ಡಿಕರ್ ಅವರ ಶಿಷ್ಯೆ ಹಾಗೂ ಮಾನಸಪುತ್ರಿಯಾಗಿದ್ದರು. ಆಕಾಶವಾಣಿಯ ಟಾಪ್ ಗ್ರೇಡ್ ಕಲಾವಿದರಾಗಿದ್ದರೂ ಮುಂಬಯಿಯಲ್ಲಿ ಇವರ ಕಾರ್ಯಕ್ರಮಗಳಾಗಿದ್ದು ಬಹಳ ಕಡಿಮೆ. ಅವರು 2008ರಲ್ಲಿ ಕಾಲವಶರಾದರು. ಮೂರು ವರ್ಷಗಳ ಮೊದಲು ಅನೀಶ್ ಪ್ರಧಾನ್ ಮತ್ತು ಶುಭಾ ಮುದ್ಗಲ್ ಇವರ Underscore Records ಪರವಾಗಿ ಕಲಾಭಾರತಿಯಲ್ಲಿ ಅವರ ಒಂದು ಸಿಡಿ ಬಿಡುಗಡೆ ಮಾಡಿ, ಖ್ಯಾತ ಸಂಶೋಧಕ ಡಾ. ಅಶೋಕ ರಾನಡೆಯವರ ದೃಕ್-ಶ್ರಾವ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. "ಇಂದು ಮೋಗುಬಾಯಿ ನಮ್ಮೊಂದಿಗಿಲ್ಲ. ಅವರ ಧ್ವನಿಮುದ್ರಿಕೆಗಳೂ, ಧ್ವನಿಸುರುಳಿಗಳೂ ತುಂಬ ಕಡಿಮೆ ಇವೆ. ಆದರೆ, ಮೋಗುಬಾಯಿಯವರ ನಿಜವಾದ ಪ್ರತಿಕೃತಿ ನಮಗೆಲ್ಲ ಈ ಕೌಸಲ್ಯಾಬಾಯಿಯವರ ಸಿಡಿಯ ಮೂಲಕ ಅರಿವಾಗುತ್ತದೆ" ಎಂದು ರಾನಡೆಯವರು ಹೇಳಿದರು.

ಇದೆಲ್ಲ ಬರೆಯುವ ಕಾರಣ, ಕಿಶೋರಿ ಅಮೋಣಕರ್ ಮೋಗುಬಾಯಿಯವರ ಮಗಳಾಗಿದ್ದರೂ, ಅವರ ಹಾಡುಗಾರಿಕೆಯ ಗುರು ಮೋಗುಬಾಯಿ ಆಗಿದ್ದರೂ ಕಿಶೋರಿಯವರ ಶೈಲಿ ಸ್ವತಂತ್ರ ರೀತಿಯದು. 'ಮೋಗುಬಾಯಿಯವರ ಹಾಡುಗಾರಿಕೆ ಇದ್ದಕಿದ್ದಂತೆ ಕೌಸಲ್ಯಾಬಾಯಿಯವರ ಶ್ರೀಕಂಠದಲ್ಲಿ ಇಳಿದಿದೆ' ಎಂದು ಹೇಳಿ ನಮಗೆಲ್ಲ ಕಲಾಭಾರತಿಯಲ್ಲಿ ಆ ದಿನ ಕೌಸಲ್ಯಾ ಮಂಜೇಶ್ವರ ಮತ್ತು ಮೋಗುಬಾಯಿ ಕುರ್ಡಿಕರ್‌ರ ಹಾಡುಗಾರಿಕೆಯ ಪ್ರಾತ್ಯಕ್ಷಿಕೆ, ರಾಗ 'ಸುಖಿಯ ಬಿಲಾವಲ'ದಲ್ಲಿ ಡಾ. ಅಶೋಕ ರಾನಡೆ ತೋರಿಸಿದರು. ವಿದುಷಿ ಮೋಗುಬಾಯಿ ಕುರ್ಡಿಕರ್‌ರ ಬಗ್ಗೆ ಲೇಖನ ಬರೆಯಲು ಲೇಖನಿ ಎತ್ತಿದಾಗ ಮೇಲೆ ಹೇಳಿದ ಘಟನೆಗಳ ನೆನಪು ಮರುಕಳಿಸಿತು.

1904ರ ಜುಲೈ 15ರಂದು ಗೋವಾದ ಕುರ್ಡಯಿ ಊರಲ್ಲಿ ದೇವದಾಸಿ ಮನೆತನದಲ್ಲಿ ಮೋಗುಬಾಯಿ ಹುಟ್ಟಿದರು. ರವಳನಾಥ ದೇವಾಲಯದ ಪರಿಚಾರಿಕೆ, ಇವರ ತಾಯಿ ಸಂಗೀತ ನೃತ್ಯದ ಬಾಲಾಮೃತವನ್ನು ಇವರಿಗೆ ಚಿಕ್ಕವರಿದ್ದಾಗಿನಿಂದ ಕುಡಿಸಿರಬೇಕು. ಕರ್ನಾಟಕದ ನಾಗರತ್ನಮ್ಮನವರ ಹಾಗೆ. ತಾಯಿಯ ಹೆಸರು ಜಯಶ್ರೀಬಾಯಿ. ಅವರ ಶಾರೀರ ಕೂಡ ಅತ್ಯಂತ ಮಧುರವಾಗಿತ್ತು. ಗ್ವಾಲಿಯರ್ ಪರಂಪರೆಯ ರಾಮಕೃಷ್ಣ ಬುವಾ ವಝೆ ಆ ಕಾಲದಲ್ಲಿ ಈ ದೇವದಾಸಿಯರಿಗೆ

ಸಂಗೀತ ಶಿಕ್ಷಣ ಕೊಡುತ್ತಿದ್ದರು. (ದತ್ತಿಬಾಯಿ, ತಾರಾಬಾಯಿ ಶಿರೋಡಕರ್ ಇತ್ಯಾದಿ) ಎರಡು ವರ್ಷದ ಪುಟ್ಟ ಮೋಗುವಿಗೆ ಅವರ ಬಳಿಯಲ್ಲೇ ಕಲಿಸಬೇಕೆಂದು ಅಮ್ಮನ ಹಂಬಲ. ಆದರೆ ಅವರ ಇಚ್ಛೆ ನೆರವೇರಲಿಲ್ಲ. ಮಗುವಿನ ವಯಸ್ಸು ತುಂಬಾ ಎಳೆಯದು, ಐದು ವರ್ಷದಾದ ಕೂಡಲೇ ಕಂಕುಳಲ್ಲಿ ಮಗುವನ್ನೆತ್ತಿ ನಡೆದರು ಪಕ್ಕದ ಜಾಂಬಾವಲಿಯತ್ತ (Jamboleum in Goa). "ಬುವಾ, ಈ ಮೋಗುಗೆ ಗಾನಾ ಕಲಿಸ್ತಿರಾ? ಪರಮೇಶ್ವರನ ಕೃಪೆ, ಅತ್ಯಂತ ಸುಂದರ ಶಾರೀರ ಪಡೆದಿದ್ದಾಳೆ. ನಿಮ್ಮ ಕೃಪೆ ಇದ್ದರೆ, ಸ್ವಲ್ಪ ಸಂಗೀತ ಕಲಿತಾಳು? ಎಂದು ರಾಮಕೃಷ್ಣ ಬುವಾ ವಝೆ ಅವರಲ್ಲಿ ಬೇಡಿಕೊಂಡಳು ತಾಯಿ. "ಅಮ್ಮ ನಮ್ಮದೇನು? ನಮ್ಮ ಕಾಲಿಗೆ ಚಕ್ರ. ಈ ಚಾತುರ್ಮಾಸ ಇಲ್ಲಿ, ಯಾರಿಗೆ ಗೊತ್ತು ಮುಂದೆ ಎಲ್ಲಿ?"

"ನಾಲ್ಕು ತಿಂಗಳಾದರೆ, ನಾಲ್ಕು ತಿಂಗಳು. ಇರಲಿ ನಿಮ್ಮ ಜೊತೆ. ನಮ್ಮ ತಾಲೀಮು ನಾಕು ತಿಂಗಳೆಂದರೆ, ಬೇರೆಯವರದು ಒಂದು ವರ್ಷ." ಸರಿ! ನಾಲ್ಕು ತಿಂಗಳು ತಾಯಿ ಮತ್ತು ಮಗಳು ಜಾಂಬಾವಲಿಯಲ್ಲಿ ಉಳಿದರು. ಆದರೆ ಮುಂದೆ? ಕುರ್ಡಯಿಗೆ ಮರಳಿ ಬಂದ ತಾಯಿಗೆ ಮಗಳದೇ ಕಾಳಜಿ. ನಾಲ್ಕೇ ತಿಂಗಳಲ್ಲಿ ಐದು ವರ್ಷದ ಬಾಲಕಿಗೆ ಎಲ್ಲ ಸ್ವರಗಳ ಪರಿಚಯವಾಗಿತ್ತು. ಅಂದಿನ ಕಾಲದಲ್ಲಿ (1910–1915) ಮರಾಠಿ ನಾಟಕ ಕಂಪನಿಗಳು ಸಂಗೀತ ಉಸ್ತಾದ್‌ರನ್ನೂ-ಪಂಡಿತರನ್ನೂ ತಮ್ಮ ತಮ್ಮ ಕಂಪನಿಗಳಲ್ಲಿ ಸಂಬಳಕೊಟ್ಟು ಇಟ್ಟುಕೊಳ್ಳುವ ರೂಢಿ ಇತ್ತು. ಚತುರ ಜಯಶ್ರೀ ಬಾಯಿ ತಾನೇ ನಾಟಕ ಕಂಪನಿಯಲ್ಲಿ ಕೆಲಸ ಮಾಡಿದರೆ, ತಂತಾನೆ ಸಂಗೀತ ಕಲಿಸುವ ಪ್ರಶ್ನೆ ಪರಿಹಾರವಾಗುತ್ತದೆ ಎಂದುಕೊಂಡು ನಿರ್ಧರಿಸಿ ಹುಡುಕಲು ಪ್ರಾರಂಭಿಸಿದರು. ಕೊಂಕಣಿ ಕಂಪನಿ ಇದ್ದರೆ ಭಲೆ! ಸಂಗೀತ ಕಲಿಸುವ ಉಸ್ತಾದ್ ಇದ್ದರೆ ಡಬಲ್ ಭಲಾ! ಇಂತಹ ಒಂದು ಚಂದ್ರೇಶ್ವರ ಭೂತನಾಥ ಸಂಗೀತ, ನಾಟಕ ಮಂಡಳಿ ಜಯಶ್ರೀಬಾಯಿಯವರಿಗೆ ಗೋವಾದಲ್ಲೇ ಸಿಕ್ಕಿತು!

ಚಂದ್ರೇಶ್ವರ, ಗೋವಾದಲ್ಲಿಯ ಒಂದು ಬೆಟ್ಟ, ಚಂದ್ರೇಶ್ವರದೇವರು ಈ ಬೆಟ್ಟದ ಅಧಿದೇವತೆ. ಪರ್ವತದ ಸುತ್ತಲೂ ಒಂದಿಪ್ಪತ್ತು ಕುಳಗಳು. ಖ್ಯಾತ ತಬಲಾವಾದಕ ಲಯಭಾಸ್ಕರ, ಖಾಪುಮಾಮಾ ಪರ್ವತಕರ್ ಇಲ್ಲಿಯವರೇ. ಅವರು ವಿಚಿತ್ರವೀಣೆ, ದಿಲರುಬಾ ಇತ್ಯಾದಿ ವಾದ್ಯಗಳನ್ನು ಬಾರಿಸುತ್ತಿದ್ದರು. ನಂತರ ಸನ್ಯಾಸಾಶ್ರಮದಲ್ಲಿದ್ದು ಸಂಗೀತ ಮುಂದುವರೆಸಿದರು. ಇಲ್ಲಿ ಮೋಗುಬಾಯಿಗೆ ಅವಳ ವಯಸ್ಸಿಗೆ ತಕ್ಕಂತೆ 'ಪ್ರಹ್ಲಾದ', 'ಧ್ರುವ' ಪಾತ್ರಗಳಲ್ಲಿ ಬಾಳು ಪರ್ವತಕರ್ (ಕಂಪನಿಯ ಮಾಲಿಕರು) ಶಿಕ್ಷಣ ಕೊಟ್ಟರು. ಜಯಶ್ರೀ, ನಾಟಕಗಳಲ್ಲಿಯೂ ತಾಯಿಯ ಪಾತ್ರ ವಹಿಸಿದ್ದರಿಂದ ವೇದಿಕೆಯ ಅಂಜಿಕೆ ತಂತಾನೆ ಬಿಟ್ಟು ಹೋಯಿತು. ಹೀಗೆ ಶುರು ಆಯಿತು ಮೋಗುಬಾಯಿಯವರ ನಾಟ್ಯ ಸಂಸ್ಕಾರ.

ಸ್ಥಾನೀಯ ನಾಟಕ ಕಂಪನಿಗಳ ಉತ್ಪನ್ನ ಅಷ್ಟಕಷ್ಟೆ, ಎರಡು ಹೊತ್ತಿನ ಕೂಳು, ವಿಶ್ರಾಮ, ನಾಟಕಗಳಲ್ಲಿಯ ಸಂಗೀತ-ಸಾಹಿತ್ಯದ ಅಭ್ಯಾಸ. ಗೋವಾದಲ್ಲಿಯೇ ಕಂಪನಿಯ ತಿರುಗಾಟ. ಹೀಗಿದ್ದಾಗಲೇ ಒಂದು ದಿನ ಮಾಲಕರು ನಾಟಕ ಕಂಪನಿಗೆ ಬೀಗ ಜಡಿದರು! ಇಷ್ಟರಲ್ಲಿ ಮೋಗು 8 ವರ್ಷದವಳಾಗಿದ್ದು, ನಾಟಕದ ಪದ್ಯಗಳಿಗೆ 'ವನ್ಸಮೋರ್'

ತೆಗೆದುಕೊಳ್ಳುವದು ವಾಡಿಕೆಯಾಗಿ ಬಿಟ್ಟಿತ್ತು. ತಾಯಿಗೆ ಆ ಕಾಲಕ್ಕೆ ಗುಣವಾಗದ ಕ್ಷಯರೋಗ ಅಂಟಿಕೊಂಡಿತ್ತು. ಕುರ್ಡಯಿಯಲ್ಲಿಯೇ ತಾಯಿ ಕಾಲವಶರಾದರು. ಎಂಟು ವರ್ಷದ ತಬ್ಬಲಿ ಮೋಗು! ಬಾಳು ಪರ್ವತಕರರ ಆಶ್ರಯದಲ್ಲಿದ್ದ ಮಗುವಿಗೆ ಒಂದು ದಿನ ಗುರುಗಳು (ಬಾಳಕೃಷ್ಣ ಬುವಾ ವಝೆ) ಹೇಳಿದರು, "ಮೋಗು, ಸಾತಾರಕರ ಮಂಡಳಿಯಿಂದ ನಿನಗೆ ಕಂಪನಿ ಸೇರಲು ಆಮಂತ್ರಣ ಬಂದಿದೆ. ನನಗೂ ಬಾ ಎಂದು ಹೇಳಿದ್ದಾರೆ. ಕಿರ್ಲೋಸ್ಕರ್ ಕಂಪನಿಯಲ್ಲಿ ತರಬೇತಿ ಪಡೆದ ಚಿಂತೋಬಾ ಗುರವ ದಿವೇಕರರೂ (ಇವರು ಪುಣೆಯ ಖ್ಯಾತ ವೀಣಾವಾದಕ ಹಿಂದರಾಜ ದಿವೇಕರರ ತಾತ) ಅಲ್ಲಿದ್ದಾರೆ. ನಿನ್ನ ಮುಂದಿನ ಶಿಕ್ಷಣದ ಪ್ರಬಂಧ ಆಗಿದೆ, ನಡೆ" ಎಂದು ಇಬ್ಬರೂ ಆ ಕಂಪನಿಯತ್ತ ನಡೆದರು.

ಇದೆಲ್ಲ ಮಾಹಿತಿ, ಮುಂದೆ ಬರುವ ಘಟನೆಗಳನ್ನೆಲ್ಲ ಕೌಸಲ್ಯಾತಾಯಿಯವರ ಪತಿ, ಮಂಜೇಶ್ವರ ದಿನಕರರಾಯರು ನನಗೆ ಆಗಾಗ ಹೇಳಿದ್ದು, ನಾನು ಬರೆದುಕೊಂಡಿದ್ದು. ಸಾತಾರಕರ ನಾಟಕ ಮಂಡಳಿ ಕೇವಲ ಸ್ತ್ರೀ ಕಲಾವಿದರದು, ಗಂಡು ಪಾತ್ರಗಳನ್ನು ಕೂಡ ಸ್ತ್ರೀಯರೇ ಮಾಡುತ್ತಿದ್ದರು. 1910–11ರಲ್ಲಿ ಸ್ಥಾಪನೆಯಾದ ಈ ಕಂಪನಿ ಒಳ್ಳೆಯ ಉಚ್ಛ್ರಾಯ ಅವಸ್ಥೆಯಲ್ಲಿತ್ತು, ಚಿಂತೋಬಾ ಗುರವ ಇವರು ಅತ್ಯಂತ ಲಕ್ಷ್ಯಪೂರ್ವಕವಾಗಿ ಮೋಗುಬಾಯಿಗೆ ಸಂಗೀತ ಕಲಿಸಲು ತೊಡಗಿದರು. 'ರಾಮರಾಜ್ಯವಿಯೋಗ'ದಲ್ಲಿ, 'ವಿವೇಕ', ಪುಣ್ಯಪ್ರಭಾವ ನಾಟಕದಲ್ಲಿ, 'ಕಿಂಕಿಣಿ', ಅಣ್ಣಾಸಾಹೇಬ ಕಿರ್ಲೋಸ್ಕರರ ಅಜರಾಮರವಾದ 'ಸೌಭದ್ರ' ನಾಟಕದಲ್ಲಿ, 'ಸುಭದ್ರಾ', ಇವೆಲ್ಲ ಪ್ರಮುಖ ಪಾತ್ರಗಳು ಮೋಗುಬಾಯಿಯವರ ಪಾಲಿಗೆ ಬಂದವು. ಈ ಕಂಪನಿಯಲ್ಲಿ ನೃತ್ಯ ಕಲಿಸಲು, ರಾಮಲಾಲ್, ಚುನಿಲಾಲ್ ಮತ್ತು ಮಜಲೇಖಾನ್ ಎಂಬ ನೃತ್ಯವಿಶಾರದರೂ ಇದ್ದರು. ಹೀಗೆ ನೃತ್ಯ ಮತ್ತು ಸಂಗೀತದಲ್ಲಿ ಪ್ರಾವಿಣ್ಯಗಳಿಸುತ್ತಾ ಬಾಲಕಿ ಮೋಗು ತಾರುಣ್ಯದೆಡೆ ಹೆಜ್ಜೆ ಹಾಕುತ್ತಿದ್ದಳು. ತುಂಬ ತಾರುಣ್ಯದ ಈ ಯುವತಿ ಅನೇಕರ ಮನ ಸೆಳೆಯುತ್ತಿದ್ದರೆ ಆಶ್ಚರ್ಯವೇನಿಲ್ಲ. ಗೋವಾದಲ್ಲಿ ಅಂಜನಿಬಾಯಿ ಮಾಲ್ಪೇಕರ ಜೊತೆ ಆದ ಪ್ರಸಂಗವೇ ಮಹಾರಾಷ್ಟ್ರದಲ್ಲಿಯ ಒಂದು ಚಿಕ್ಕ ಸಂಸ್ಥಾನದಲ್ಲಿ ಮೋಗುಬಾಯಿಯವರೊಂದಿಗೆ ಆಯಿತಂತೆ. 'ಪುಣ್ಯ ಪ್ರಭಾವ'ದಲ್ಲಿ ಕಿಂಕಿಣಿಯ ಪಾತ್ರ ವಹಿಸಿದ ಮೋಗು ಅವರ ಮೇಲೆ, ಮೋಹಿತರಾದ ಸಂಸ್ಥಾನಿಕರು ಎರಡು ಅಂಕಗಳು ಆದ ನಂತರ ನಾಟಕ ಕಂಪನಿಯ ಮಾಲಿಕರಿಗೆ, "ಕಿಂಕಿಣಿಯನ್ನು ಬಂಗಲೆ ಹತ್ತಿರ ನಾಟಕ ಮುಗಿದ ಕೂಡಲೇ ಕರತರಬೇಕು" ಎಂಬ ಕಟ್ಟಾಜ್ಞೆಯನ್ನು ಮಾಡಿದರು. ಮಾಲಿಕರು ಅತ್ಯಂತ ಧೈರ್ಯದಿಂದ ಮೋಗುಬಾಯಿಯವರನ್ನು ಮೋಟಾರಿನಲ್ಲಿ ಕುಳ್ಳಿರಿಸಿ ಈ ಸಂಸ್ಥಾನದ ಹದ್ದು ದಾಟಿಸಿದರು. ಎರಡೇ ಅಂಕಗಳಲ್ಲಿ ಕಿಂಕಿಣಿಯ ಪಾತ್ರವಿದ್ದ ಕಾರಣದಿಂದ ನಾಟಕ ಮುಗಿಯುವಷ್ಟರಲ್ಲಿ ಮೋಗು ಪರಾರಿಯಾಗಿದ್ದಳು. ಅವರ ಬಲಗೈ ತೋಳಿನ ಮೇಲಿನ ದೊಡ್ಡ ಗಾಯದ ಕಲೆ ಈ ಭಯಾನಕ ನೆನಪನ್ನು ಪದೇ ಪದೇ ಮಾಡುತ್ತಿತ್ತಂತೆ. ಈ ಪ್ರಸಂಗದ ನಂತರ ಮೋಗುಬಾಯಿ ಮರಳಿ ರಂಗಭೂಮಿಯ ಕಡೆ ನೋಡಲಿಲ್ಲ. ಆಕೆ ತನ್ನ ಊರು ಕುರ್ಡಯಿ ಸೇರಿದಳು. ಇದ್ದ ಒಂದೇ ಜೀವಕ್ಕೆ ಜತೆ ಎಂದು ಚಿಕ್ಕಮ್ಮ ರಮಾಬಾಯಿ ಇದ್ದರು. ಒಂದು ವರ್ಷ ಕೆಲಸ ಕಾರ್ಯವಿಲ್ಲದೇ ಮನೆಯಲ್ಲಿಯೇ ದಿನನಿತ್ಯ, ಗೊತ್ತಿದ್ದಷ್ಟೇ

ರಾಗ-ಪದಗಳ ಉಜಳಣಿ ತಂಬೂರಿಯ ಜೊತೆಗೆ ನಡೆದೇ ಇರುತ್ತಿತ್ತು. ಬಾಳುಮಾಮಾ ಪರ್ವತಕರ್ ಆಗಿಂದಾಗ ಮನೆಗೆ ಬಂದು ಸ್ಫೂರ್ತಿ ಕೊಟ್ಟು ಹೋಗುತ್ತಿದ್ದರು.

1919ರಲ್ಲಿ ಬಾಳುಮಾಮಾರ ಜೊತೆ ಸಾಂಗಲಿಗೆ ಮೋಗುಬಾಯಿಯ ಬರೋಣವಾಯಿತು. ಇನಾಯತಖಾನರ ಬಳಿ ಅವರ ಸಂಗೀತ ಶಿಕ್ಷಣ ಶುರು ಆದ 3-4 ತಿಂಗಳಲ್ಲೇ ಅದೂ ನಿಂತು ಹೋಯಿತು. ಇನಾಯತಖಾನರಿಗೆ ಕಲಿಸುವ ಡಿಮಾಂಡ ಬಹಳ ಇತ್ತು. ಗೋವಾದವರೇ ಆದ ಜ್ಯೋತ್ಸ್ನಾ ಕೆಳೇಕರ್ (ಭೋಳೆ) ಇವರಿಗೂ ಕಲಿಸುತ್ತಿದ್ದರು. ಮೋಗು ಧೈರ್ಯಗೆಡದೇ ಇನಾಯತಖಾನರು ಕಲಿಸಿದ್ದ ಚೀಜುಗಳನ್ನು ಮತ್ತೇ ಮತ್ತೇ ಹಾಡುತ್ತ, ಗೊತ್ತಿದ್ದ ಹಾಡುಗಳನ್ನು ತಂಬೂರಿಯೊಂದಿಗೆ ತಾಲೀಮು ಮಾಡುತ್ತಿರುತ್ತಿದ್ದಳು.

ಒಂದು ದಿನ ಹೀಗೆಯೇ, ಸಾಂಗಲಿಯ ಬಾಡಿಗೆ ಮನೆಯಲ್ಲಿ ತಂಬೂರಿ ಮೀಟುತ್ತ 'ಮೃಚ್ಛಕಟಿಕ' ನಾಟಕದಲ್ಲಿಯ ಒಂದು ಹಾಡು, 'ಮಾಡಿವರಿ ಚಲಗ ಗಡೆ' ನಾಟ್ಯ ಸಂಗೀತದಂತೆ ಹಾಡದೇ, ಖಯಾಲ್‌ದಂತೆ ಹಾಡುತ್ತ ಹಾಡುತ್ತ ಮಗ್ನಳಾದಾಗ ರಸ್ತೆಯಲ್ಲಿ ನಡೆಯುತ್ತಿದ್ದ, ಒಬ್ಬ ಶುಭ್ರ ವಸ್ತ್ರಧಾರಿ, ತೇಜಪುಂಜ ವ್ಯಕ್ತಿ ಒಮ್ಮೆಲೆ ಮೋಗುಬಾಯಿ ಹಾಡುತ್ತಿದ್ದುದನ್ನು ಕೇಳುತ್ತ ನಿಂತು, ಹಾಡು ನಿಲ್ಲಿಸಿದ ಕೂಡಲೇ ಭಾವ ಸಮಾಧಿಯಿಂದ ಹೊರಗೆ ಬಂದು, ಮಾಳಿಗೆ ಏರಿ ಮೋಗುವಿಗೆ ಧೀರ ಗಂಭೀರ ಧ್ವನಿಯಲ್ಲಿ, "ಗಾತೆ ರಹೊ ಬೇಟಿ, ಗಾತೆ ರಹೋ. ಪ್ರತಿದಿನ ಇಲ್ಲಿಂದ ಹೋಗುವಾಗ ನಿನ್ನ ಹಾಡನ್ನು ಕೇಳುತ್ತಿರುತ್ತೇನೆ. ನಿನ್ನ ಮುಂದೆ ಕುಳಿತು ಹಾಡು ಕೇಳುವ ಮನಸ್ಸಾಯಿತು. ಮೇಲೇರಿ ಬಂದೆ. ಹಾಡ್ತಿಯಾ?" ಎಂದು ಕೇಳಿದರು.

ಮೋಗುಬಾಯಿ ಪಿಟ್ಟೆನ್ನದೇ ಹಾಡಿನ ಅಂತರಾ ಪುನಃ ಪ್ರಾರಂಭಿಸಿದರು. ಹಾಡು ಮುಕ್ತಾಯವಾದ ಮೇಲೆ, "ಬೇಟಾ, ನಾಳೆಯಿಂದ ನಾನು ನಿನ್ನ ರಿಯಾಝು ಪ್ರಾರಂಭ ಮಾಡುತ್ತೇನೆ" ಎಂದಿಷ್ಟೇ ಹೇಳಿ ಮೋಗುವಿನ ನಮಸ್ಕಾರ ಸ್ವೀಕರಿಸುತ್ತಾ ಆ ವ್ಯಕ್ತಿ ಹೊರಟುಹೋಯಿತು.

ಇವರೇ ಖ್ಯಾತಿವೆತ್ತ ಉಸ್ತಾದ್ ಅಲ್ಲಾದಿಯಾಖಾನ ಸಾಹೇಬರು! ಮೋಗುವಿಗೆ ಅಕ್ಷರಶಃ ಅಲ್ಲಾದಿಯಾರ ಪರಿಚಯವಿರಲಿಲ್ಲ. ಕೇವಲ 15-16ರ ತರುಣಿ. ಅವರ ಠೀವಿ ನೋಡಿ ಅವರು ಸಂಗೀತದಲ್ಲಿಯ ಅಧಿಕಾರಯುತ ವ್ಯಕ್ತಿ ಎಂದಿಷ್ಟೇ ಗೊತ್ತಾಗಿತ್ತು ಅವರಿಗೆ. ತಾಲೀಮು ಪ್ರಾರಂಭವಾದ 4-5 ದಿನಗಳ ನಂತರವೇ ತನಗೆ ಕಲಿಸುವ ಉಸ್ತಾದ್ ಅಲ್ಲಾದಿಯಾಖಾನರು ಎಂದು ತಿಳಿದು ಬಂತು! ಭೀಮಸೇನ್ ಜೋಶಿಯವರಿಗೆ ಗುರುವಿನ ಶೋಧದಲ್ಲಿ ಊರೂರು ಸುತ್ತಬೇಕಾಗಿತ್ತು. ಆದರೆ ಇಲ್ಲಿ ಗುರುಗಳು ಶಿಷ್ಯರ ಶೋಧದಲ್ಲಿ ಬಂದಿದ್ದರು! ಹೀಗೆ ಸುಮಾರು 2 ವರ್ಷ ಅಲ್ಲಾದಿಯಾಖಾನರ, 'ಸಿನಾ ಬಸೀನಾ (ಗುರುಮುಖಿ) ತಾಲೀಮು ಮೋಗುಬಾಯಿಯವರಿಗೆ ಸಿಕ್ಕಿತು. 'ಮುಲ್ತಾನಿ', 'ತೋಡಿ', 'ಪೂರ್ವಿ' ಮತ್ತು 'ಧನಶ್ರೀ' ಈ ನಾಲ್ಕು ರಾಗಗಳನ್ನು ತಮ್ಮ ಶಿಷ್ಯಳ ಶ್ರೀಕಂಠದಲ್ಲಿ ಇಳಿಸಿದರು. ತಮ್ಮ ಜೈಪುರ್‌-ಅತ್ರೋಳಿ ಪರಂಪರೆಯ ಅನುಸಾರವಾಗಿ ಉಸ್ತಾದ್‌ರ ಆರೋಗ್ಯ ಮತ್ತು ವಯಸ್ಸು ನೋಡಿದರೆ ಆ ಕಾಲದಲ್ಲಿ ಮೋಗು, 'ಬಹುತ ಕುಛ್' ಕಲಿತಿರಬೇಕೆಂದು ತಜ್ಞರ ಊಹೆ. ಆಯುರ್ವೇದ ಪಂಡಿತರಾದ

ಸಾಂಬಾರೆ ವೈದ್ಯರ ಮನೆಗೆ ಹೋಗುವ ದಾರಿಯಲ್ಲಿಯೇ, ಮೋಗುಬಾಯಿಯವರ ಬಾಡಿಗೆಯ ಖೋಲಿ. ಆಗಾಗ ಭೇದಿಯಿಂದ ಬಳಲುತ್ತಿದ್ದ ಖಾನಸಾಹೇಬರು ಪ್ರತಿದಿನ ತಪ್ಪದೇ ವೈದ್ಯರ ಮನೆಗೆ ಹೋಗಿ ಬರುವಾಗ ಮೋಗುಗೆ ರಿಯಾಜು ಮಾಡಿಸುತ್ತಿದ್ದರು.

ಸಾಂಗಲಿಯ ಸಾಂಬಾರೆ ವೈದ್ಯರ ಉಲ್ಲೇಖ ಪಂ. ಮಲ್ಲಿಕಾರ್ಜುನ ಮನ್ಸೂರರ ಲೇಖನದಲ್ಲಿ ಕೂಡ ಬಂದಿದೆ. ಇವರು ಭಾರತದಲ್ಲಿಯ ಅತಿ ಪ್ರಸಿದ್ಧ ಆಯುರ್ವೇದ ತಜ್ಞರೂ ಖ್ಯಾತ ರಸಿಕಶಿರೋಮಣಿಗಳೂ ಆಗಿದ್ದರು. ನಾಟಕ ಕಂಪನಿಯ ಎಲ್ಲ ಹಾಡುಗಾರ–ಪಾತ್ರಧಾರಿಗಳೂ, ಗಾಯಕರೂ ಇವರೆಲ್ಲ ಈ ವೈದ್ಯರ ರೋಗಿಗಳು! ತಿಂಗಳಿಗೊಮ್ಮೆ ಇವರೆಲ್ಲ ಬಂದು ಸಂಗೀತ ಸಭೆ ನಡೆಸುವದು ಒಂದು ರೂಢಿಯಾಗಿತ್ತು. ಇಂತಹದೇ ಒಂದು ಅಲ್ಲಾದಿಯಾರ ಸಭೆಗೆ ಮಿರಜದಿಂದ ಮಲ್ಲಿಕಾರ್ಜುನ ಮನ್ಸೂರವರು ಸಾಂಗಲಿಗೆ ಬಂದದ್ದು. ಮೋಗುಬಾಯಿಯುವರ ಮಹಡಿಯ ಕೋಣೆಯಿಂದ ಸಾಂಬಾರೆಯವರ ಅಂಗಣ ಸ್ಪಷ್ಟ ಕಾಣಿಸುತ್ತಿತ್ತು.

ಒಂದು ದಿನ ವೈದ್ಯ ಸಾಂಬಾರೆಯವರು ಅಲ್ಲಾದಿಯಾಖಾನರು ಅವರಲ್ಲಿ ಬಂದಾಗ ಮಾತೆತ್ತಿದರು. "ಉಸ್ತಾದ್‌ರೇ, ನಿಮ್ಮಂತಹ ಶ್ರೇಷ್ಠ ಕಲಾವಿದರು ಒಂದು ಯಕಶ್ಚಿತ್ ಹುಡುಗಿಯ ಮನೆಗೆ ಹೋಗಿ ಸಂಗೀತ ಕಲಿಸುತ್ತಿದ್ದೀರಂತೆ. ಇದು ನನಗೆ ಸೇರಲಿಲ್ಲ. ಇದನ್ನು ನೀವು ಕೂಡಲೇ ನಿಲ್ಲಿಸಬೇಕಾಗಿ ನನ್ನ ನಮ್ರ ವಿನಂತಿ." ಅಲ್ಲಾದಿಯ, ಅವರಿಗೆ ಉತ್ತರಿಸದೇ ಹಾಗೆಯೇ ಹೊರಟುಹೋದರು. ಆದರೆ ಮಾರನೆಯ ದಿನ ಮೋಗುಬಾಯಿಯವರಿಗೆ ಕಲಿಸಲು ಬರಲಿಲ್ಲ. ಹೀಗೆ ದಿನಗಳು ಉರುಳಿದವು. ದಿನಾಲು ಉಸ್ತಾದ್‌ರು ತನ್ನ ಮನೆ ದಾಟಿ ಹೋದದ್ದು ಕಾಣಿಸುತ್ತಿತ್ತು. ಆದರೆ ತನಗೆ ಕಲಿಸಲು ಏಕೆ ಬರುವದಿಲ್ಲ? ಒಂದು ದಿನ ಧೈರ್ಯಮಾಡಿ ಮೋಗುಬಾಯಿ ಕೇಳಿದರು, "ಗುರುಗಳೇ ನನ್ನಿಂದ ಏನು ತಪ್ಪಾಯಿತು? ಯಾಕೆ ನನ್ನ ತಾಲೀಮು ನಿಲ್ಲಿಸಿದ್ದಿರಿ?" ಕಣ್ಣಂಚಿನಲ್ಲಿ ನೀರು ಸೂಸಿದ್ದು ಅವರಿಗೆ ಕಾಣಿಸಿತು. "ಏನು ಹೇಳಲಿ ಮೋಗು, ವೈದ್ಯ ಸಾಂಬಾರೆಯವರು ಹೀಗೆ ಹೇಳಿದರು." ಮೋಗು ಬಾಯಿಯವರಿಗೆ ಆಶ್ಚರ್ಯ. "ಗುರುಗಳೇ ನನ್ನ ಮೇಲೆ ವೈದ್ಯ ಸಾಂಬಾರೆಯವರಿಗೆ ಸಿಟ್ಟು ಯಾಕೆ? ಅದಕ್ಕೆ ಉತ್ತರ ಕೊಟ್ಟರು ಖಾನ್ ಸಾಹೇಬರು, "ನನ್ನ ಗಾಯಕಿ ಕಲಿಯುವ ಅಂತಸ್ತು ನಿನ್ನದಲ್ಲ, ಎಂಬ ಭಾವನೆ ಅವರದು. 'ನನ್ನ ಗ್ರಹಗಳೇ ಹಾಗೆ, ಏನೋ ದೋಷ ಇರಬಹುದು? ಇದಕ್ಕೇನಾದರೂ ಪರಿಹಾರವಿದೆಯೇ?' ಮೋಗು ತಲೆತಗ್ಗಿಸಿ ಗುರುಗಳು ಹೇಳಿದ ಮಾತು ನೆನೆಸಿಕೊಂಡು ವ್ಯಥೆ ಪಟ್ಟರು.

ಧೈರ್ಯ ಮಾಡಿಕೊಂಡು, ಮೋಗು ಉಸ್ತಾದ್‌ರಿಗೆ ಹೇಳಿದಳು, "ನನ್ನ ಹಾಡುಗಾರಿಕೆ ಸಾಂಬಾರೆ ಕೇಳಿದರೆ ಬಹುಶಃ ಅವರ ಪೂರ್ವಗ್ರಹದೂಷಿತ ಭಾವನೆ ಮಾಯವಾಗ ಬಹುದು ಗುರುಗಳೇ, ನೀವೇ ಪರಿಹಾರ ಸೂಚಿಸಬೇಕು."

ಖಾನಸಾಹೇಬರು ಮೋಗುಬಾಯಿಯವರ ಕಚೇರಿ ತಮ್ಮಲ್ಲಿ ಆಗಲಿ ಎಂದು ಹೇಳಿ ಅತ್ಯಂತ ಧೈರ್ಯದಿಂದ ಸಾಂಬಾರೆಯವರನ್ನು ಒಪ್ಪಿಸಿದರು. ಮತ್ತು ಅವರಿಗೆ ತಿಳಿಯದಂತೆ ಮೋಗುಬಾಯಿಗೆ 'ಮುಲ್ತಾನಿ' ರಾಗದ ಒಂದು ಬಂದಿಶ ಹೇಳಿಕೊಟ್ಟರು.,

'ಇನ್ ದುರ್ಜನ ಲೋಗೊಂಕೊ ಕಹಾ ಕೋಸು'! ಸಾಂಬಾರೆ ಪಖವಾಜ್ ಅತ್ಯುತ್ತಮ ಬಾರಿಸುತ್ತಿದ್ದರು. ಆ ದಿನದ ಕಚೇರಿ ಚೆನ್ನಾಗಿ ನೆರವೇರಿತು. ಸಾಂಬಾರೆಯವರಿಗೂ ತಮ್ಮ ತಪ್ಪಿನ ಅರಿವಾಯಿತು. "ದುರ್ಜನ' ತನ್ನನ್ನು ಉದ್ದೇಶಿಸಿಯೇ ಈಕೆ ಹಾಡುತ್ತಿದ್ದಾಳೆಯೇ? ಎಂದು ಭಾವಿಸಿ, ವೈದ್ಯರಾಜರು ಅಲ್ಲಾದಿಯಾಖಾನರ ಸೂಕ್ಷ್ಮ ನಿರೀಕ್ಷಣೆಗೆ, 'ದಾದ್' ಕೊಟ್ಟು ತಾವೇ ಮೋಗುಬಾಯಿಗೆ ಕಲಿಸಬೇಕೆಂದು ಬಿನ್ನವಿಸಿದರು. ಇಷ್ಟೇ ಅಲ್ಲ ಮೋಗುವಿಗೆ ಕೂಡ ಆಗಾಗ ಮನೆಗೆ ಬಂದು ಹೋಗಲು ಅಪ್ಪಣೆ ಮಾಡಿದರು. ಮೋಗುಬಾಯಿಗೆ ಆದ ಸಂತೋಷ ವರ್ಣಿಸಲಸದಳ...

ಮೋಗುಬಾಯಿಯವರ ಜಾತಕದಲ್ಲಿ ಗ್ರಹಮಾನ ಸರಿ ಇರಲಿಲ್ಲ ಎಂದು ಕಾಣಿಸುತ್ತದೆ. ಅಖಂಡ ಗುರುಯೋಗವೇ ಇರಲಿಲ್ಲ. ಅದಾದ ಕೆಲವೇ ತಿಂಗಳುಗಳಲ್ಲಿ ಭಾರತದಲ್ಲಿಯೇ ಅಸಾಮಾನ್ಯ ಗಾಯಕಿ ಎಂದು ಹೆಸರು ಮಾಡಿದ ಕೇಸರಬಾಯಿ ಕೇರಕರ್, ಅವರ ತಮ್ಮ ಮುಂದಿನ ಶಿಕ್ಷಣದ ಸಲುವಾಗಿ ಅಲ್ಲಾದಿಯಾಖಾನರಿಗೆ ಆಮಂತ್ರಣ ಬಂದಿತು. ಅಲ್ಲಾದಿಯಾ ಅವರು, ವಿಚಾರ ಮಾಡದೇ ಅದನ್ನು ಸ್ವೀಕರಿಸಿಬಿಟ್ಟರು. "ನೀನೂ ಮುಂಬಯಿಗೆ ಬಂದರೆ, ನಿನ್ನದೂ ತಾಲೀಮು ತೆಗೆದುಕೊಳ್ಳುತ್ತೇನೆ" ಎಂದು ಮೋಗುಬಾಯಿಗೆ ಹೇಳಿ ಮುಂಬಯಿಗೆ ಹೊರಟೇ ಹೋದರು.

18–19ರ ಯುವತಿ ಮೋಗುಗೆ, ಮುಂಬಯಿಗೆ ಹೋಗಿ ಇರುವದು ಅಷ್ಟು ಸುಲಭವಲ್ಲ ಎಂಬುದು ಗೊತ್ತಿತ್ತು. ನಿರಾಶೆಯಾಗಿ ಮರಳಿ ಕುರ್ಡಯಿಗೆ ರಮಕ್ಕನ ಜೊತೆ ಹೊರಟುಬಿಟ್ಟರು. ಇಲ್ಲಿಯೇ ಪ್ರಾರಂಭವಾಗುತ್ತದೆ 20ನೇ ಶತಮಾನದ ಒಂದೇ ಘರಾಣೆಯ, ಒಬ್ಬನೇ ಉಸ್ತಾದ್‌ನ, ಇಬ್ಬರು ಅಸಾಮಾನ್ಯ ಶಿಷ್ಯೆಯರ, ಸಂಗೀತ ಕ್ಷೇತ್ರದಲ್ಲಿಯ ಪೈಪೋಟಿ; ಈರ್ಷೆ, ಮತ್ಸರ ಮತ್ತು ಅಹಮಿಕೆಯ ಸಂಘರ್ಷ, ನಿಜ ಮತ್ತು ಮಿಥ್ಯ ದಂತಕಥೆಗಳ ಸುಗ್ಗಿ. ಕೇಸರಬಾಯಿ ಕೇರಕರ್ ಮತ್ತು ಮೋಗುಬಾಯಿ ಕುರ್ಡಿಕರ ಇವರ, 'ಸ್ನೇಹ ಸಂಬಂಧ'ದ ಕತೆಗಳಿಂದ ನಾಟಕಕಾರರಿಗೂ ಸಾಕಷ್ಟು ಕಚ್ಚಾಮಾಲು ದೊರಕಿತು. ಮರಾಠಿಯಲ್ಲಿ ಒಂದೆರಡು, ನಾಟಕಗಳು, ಕಾದಂಬರಿ ಹಾಗೂ ಒಂದು ಚಲನಚಿತ್ರ, ಈ ವಸ್ತುವಿನ ಆಧಾರದ ಮೇಲೆ ರಚಿಸಿದ್ದು ಪ್ರಕಾಶ ಕಂಡಿವೆ. ಮೋಗುಬಾಯಿಯವರ ಬಗ್ಗೆ ಬರೆಯುವಾಗ, ಸುರಶ್ರೀ ಕೇಸರಬಾಯಿ ಕೇರಕರ್ ಸಹಜವಾಗಿ ಉಪನಾಯಿಕೆ ಅಥವಾ, ಸೈಡ್ ಹಿರೋಯಿನ್ ತರಹ ತೋರುತ್ತಾರೆ. ಇಬ್ಬರ ಹಾಡುಗಾರಿಕೆ, ಒಂದೇ ಪರಂಪರೆ, ಒಂದೇ ಗುರುಗಳ ಬಳಿ ಕಲಿತಿದ್ದರೂ ಅವರಲ್ಲಿ ವಿವಿಧತೆ ಕಾಣುತ್ತದೆ. ಕೇಸರಬಾಯಿಯವರ ಠೀವಿ ರಾಜಮಾನ್ಯ, ಒಂದು ತರಹದ ಕಮಾಂಡಿಂಗ್ ಪರ್ಸನಾಲಿಟಿಯಂತಿದ್ದರೆ, ಅದೇ ಮೋಗುಬಾಯಿಯವರದು ಕುಲೀನ, ಶಾಲೀನ ಸೌಂದರ್ಯ. ಅವರ ಸಂಗೀತ ಕೂಡ ಹಾಗೆಯೇ ವಿನಮ್ರ, ಅತ್ಯಂತ ನಯವಾಗಿ ಪೋಣಿಸಿದ್ದು, ಇಬ್ಬರ ಧ್ವನಿಮುದ್ರಿಕೆಗಳನ್ನು ಒಂದರ ನಂತರ ಮತ್ತೊಂದು ಒಂದೇ ರಾಗದಲ್ಲಿದ್ದದ್ದನ್ನು ಹಚ್ಚಿ ನಾನು ಮತ್ತು ಮಂಜೇಶ್ವರ ದಿನಕರರಾಯರು ಗಂಟೆಗಟ್ಟಲೇ ಆಲಿಸಿದ್ದೂ ಇದೆ.

ಕೇಸರಬಾಯಿ ಶಿಷ್ಯತ್ವ ಸಿಕ್ಕ ಮೇಲೆ ಅಲ್ಲಾದಿಯಾ ಪಂಜರದಲ್ಲಿದ್ದ ಸಿಂಹದಂತೆ ಆದರು. ಮೊದಲೇ ಅತ್ಯಂತ ಸುಂದರವಾದ ರೀತಿಯಲ್ಲಿ ಖಯಾಲ್ ಹಾಡುವ ಮಗ

ಮಂಜೀಖಾನ (ಪಂ. ಮಲ್ಲಿಕಾರ್ಜುನ ಮನ್ಸೂರರ ಗುರು) ಒಮ್ಮೆಲೆ ಪೈಗಂಬರ ವಾಸಿಯಾಗಿದ್ದರಿಂದ ಅವರು ಬಹಳ ವ್ಯಥಿತರಾಗಿದ್ದರು. ಕೇಸರಬಾಯಿ ತಮ್ಮೆದುರಿಗಿಟ್ಟ ಎಲ್ಲ ನಿಯಮಗಳ ಕಂಟ್ರಾಕ್ಟಕ್ಕೆ ರುಜು ಹಾಕಿದರು. ಇದರಲ್ಲಿ ಒಂದು, "ಖಾನಸಾಹೇಬರು ತನ್ನ ಕಲಿಸುವಿಕೆಯ ಕಾಲದಲ್ಲಿ ಮತ್ತಾರಿಗೂ ಕಲಿಸಬಾರದು" ಎಂಬ ನಿಯಮ ಹಾಕಿದ್ದರು.

ಕುರ್ಡಯಿಗೆ ಮರಳಿ ಹೋದ ಮೋಗುಬಾಯಿಗೆ ಯಕ್ಷ ಪ್ರಶ್ನೆ. ತನ್ನ ಜಾತಕದಲ್ಲಿಯೇ ಈ ಗುರುಕೃಪೆ ಇರಲಿಕ್ಕಿಲ್ಲವೆಂದು ಕುಲದೇವತೆ ರವಳನಾಥನ ಮೊರೆ ಹೋದರು. ದೇವರ ಅನುಗ್ರಹದಂತೆ ರಮಕ್ಕಳೊಂದಿಗೆ ಸುಮಾರು 1923ರಲ್ಲಿ ಮುಂಬಯಿಗೆ ಪ್ರಯಾಣ ಬೆಳೆಸಿದರು. ಜಯಪುರ್ ಪ್ರಣಾಲಿಯ ಸಂಗೀತ ಕಲಿಯುವ ಪ್ರಶ್ನೆಯೇ ಇರಲಿಲ್ಲ. ಅಲ್ಲಾದಿಯಾ ಮಹಾಶಯರು ಕೇಸರಬಾಯಿಯವರ ಕರಾರಿನಲ್ಲಿ ಬಂದಿಯಾಗಿದ್ದರು. ದಿಕ್ಕು ಕಾಣದೇ ಕೊನೆಗೆ ಆಗ್ರಾ ಪರಂಪರೆಯ ವಿಲಾಯತ ಹುಸ್ಸೈನಖಾನರ ಅಳಿಯ ಬಶೀರಖಾನರ ಬಳಿ ತಮ್ಮ ವಿದ್ಯೆ ಮುಂದುವರೆಸಿದರು. ಜಯಪುರ್‌ಅತ್ರೋಳಿ ಪರಂಪರೆಯಲ್ಲಿ ಪಳಗಿದ ಮೋಗುಬಾಯಿಯವರ ಸ್ತ್ರೀ ಸುಲಭ ಶ್ರೀಕಂಠಕ್ಕೆ, ಆಗ್ರಾ ಪರಂಪರೆಯ ಮರ್ದಾನಿ ಥಾಟು (ಗಂಡು ಸ್ವರ)ಶೋಭಿಸುತ್ತಿರಲಿಲ್ಲ. ಕರ್ಮಧರ್ಮಸಂಯೋಗದಿಂದ ಮೋಗುಬಾಯಿ ಇರುವ ಕಾಲಿದಾಸ ಬಿಲ್ಡಿಂಗಿನ ಹಿಂದುಗಡೆಯೇ ಅಲ್ಲಾದಿಯಾಖಾನರ ವಾಸ್ತವ್ಯವಿತ್ತು! ಮುಂಜಾನೆ, ಸಂಜೆ ಮೋಗುಬಾಯಿ ರೀಯಾಝ್ ಮಾಡುವಾಗ ಅಲ್ಲಾದಿಯಾರ ಮನಸ್ಸು ಚಲವಿಚಲವಾಗದೇ ಇರುತ್ತಿರಲಿಲ್ಲ. ದೈವಯೋಗದ ಕರಾಮತ್ತು ನೋಡಿ ಗುರು ಬಶೀರಖಾನರು ಇವರ ಶಿಕ್ಷಣ ಅರ್ಧಕ್ಕೆ ಬಿಟ್ಟು ದಿಲ್ಲಿಗೆ ಪ್ರಸ್ಥಾನ ಮಾಡಿದರು. ಮತ್ತೊಮ್ಮೆ ಮೋಗುಬಾಯಿ, 'ಗುರು ಬಿನಾ' ಆದರು.

ವ್ಯಥಿತ ಸ್ಥಿತಿಯಲ್ಲಿದ್ದ ಅಲ್ಲಾದಿಯಾ ಒಂದು ದಿನ ಮೋಗುಬಾಯಿಗೆ ಬಿಲ್ಡಿಂಗಿನಲ್ಲಿ ಎದುರಾದಾಗ ಅವರನ್ನು ನಿಲ್ಲಿಸಿ ಕೇಳಿದರು. "ಮಗು, ಇತ್ತೀಚಿನ ನಿನ್ನ ರಿಯಾಜ಼ದಲ್ಲಿ ಇಂಪು ಕಡಿಮೆಯಾಗಿದೆ. ನಾನು ಹಾಕಿಕೊಟ್ಟ ಸಂಸ್ಕಾರ ಎಲ್ಲಿ ಮಾಯವಾಯಿತು?"

ಆಗ್ರಾ ಪರಂಪರೆಯ ನಾಭಿಯ ಒತ್ತಡದಿಂದ ರಾಗದ ಮೊದಲ ಷಡ್ಜ ಹಚ್ಚುವ ಕ್ರಿಯೆ ಮತ್ತು ಗಾಯನದಲ್ಲಿಯ ಕೃತ್ರಿಮತೆ, ಮೂಗಿನಿಂದ ಹಾಡುವದು ಇದೆಲ್ಲ ಪರಿಶೀಲಿಸಿದ ಉಸ್ತಾದ್‌ರ ವ್ಯಥೆ ಮೋಗುಬಾಯಿಯವರಿಗೆ ಅರ್ಥವಾಯಿತು.

"ನೀವು ಬಡಿಸಿಕೊಟ್ಟ ಪಂಚಪಕ್ವಾನ್ನಗಳ ಎಲೆಯನ್ನು, ನೀವೇ ಎತ್ತಿಕೊಂಡು ಹೋಗಿಬಿಟ್ಟಿರಿ. ನೀವೇ ಹೇಳಿ, ನಾನು ಎಷ್ಟು ದಿನ ಏಕಾದಶಿ ವ್ರತ ಮಾಡಲಿ?"

ದಿಗ್ಭ್ರಾಂತರಾದ ಖಾನಸಾಹೇಬರು ಒಂದು ಕ್ಷಣ ವಿಚಾರ ಮಾಡಿ ಉತ್ತರಿಸಿದರು. "ಮೋಗು ಒಂದು ಉಪಾಯವಿದೆ. ನನ್ನ ತಮ್ಮ ಹೈದರ್ ಕೊಲ್ಲಾಪುರದಲ್ಲಿ ಇದ್ದಾನೆ. ನಾನು ಹೇಳಿದರೆ ಆತ ಬಂದು ನಿನಗೆ ತಾಲೀಮು ಕೊಡಬಲ್ಲ."

"ಖಾನಸಾಹೇಬರೇ, ನೀವೇ ಮತ್ತೊಮ್ಮೆ ಪರಂಪರೆ ಬದಲಿಸಲು ಹೇಳುತ್ತಿದ್ದಿರಾ. ನೀವು ಅಪ್ಪಣೆ ಮಾಡಿದಂತೆ ನಾನು ಕಲಿಯಲು ಶುರು ಮಾಡಿದರೆ ನನ್ನ ತಾಲೀಮು

ವ್ಯವಸ್ಥಿತವಾಗಿ ನಡೆಯುವ ಗ್ಯಾರಂಟಿ ಏನು? ಬೇರೆ ಯಾರಾದರೂ ಅವರ ಕಿವಿ ಹಿಂಡಿದರೆ ಮಗದೊಮ್ಮೆ ನಾನೆಲ್ಲಿ ಹೋಗಲಿ?" ಮೋಗುಬಾಯಿಯ ಕಣ್ಣಂಚಿನಲ್ಲಿ ನೀರು ಮಿನುಗುತ್ತಿತ್ತು.

ಮುಪ್ಪಿನಲ್ಲಿಯ ಮಾರ್ದವತೆ ಮೋಗುಬಾಯಿಗೆ ಕಾಣಿಸುತ್ತಿತ್ತು. ಆದರೂ ಉಸ್ತಾದ್‌ರ ಕಣ್ಣಿನಲ್ಲಿ ಅವರಿಗೆ ಧೃಢ ನಿಶ್ಚಯ ಕಾಣಿಸಿತು.

"ಬೇಟಾ, ಇದು ಅಸಂಭವ. ಇದೋ ನಾನು ಖಾತ್ರಿ ಕೊಡುತ್ತೇನೆ."

ಮರಳಿದ ಖಾನಸಾಹೇಬರನ್ನು ನಿಲ್ಲಿಸಿ ಮೋಗುಬಾಯಿ ಹೇಳಿದ್ದು ಹೀಗೆ, "ಒಂದು ಪಕ್ಷಕ್ಕೆ ಹೈದರಖಾನರು ತಾಲೀಮು ಬಿಟ್ಟುಕೊಟ್ಟು ಹೋದರೆ, ನೀವೇ ಸ್ವತಃ ಕಲಿಸುತ್ತಿರಾ?" ಖಾನ ಸಾಹೇಬರು, "ಹೂಂ" ಎಂದು ಗೋಣು ಕೆಳಗೆ ಹಾಕಿದ ಕೂಡಲೇ ಇದುವರೆಗೆ ಅದುಮಿಟ್ಟಿದ್ದ ಕಣ್ಣೀರು ಧಾರೆ ಧಾರೆಯಾಗಿ ಇಳಿಯಿತು. ಆವಾರದಲ್ಲಿಯೇ ಉಸ್ತಾದ್‌ರ ಕಾಲುಮುಟ್ಟಿ ನಮಸ್ಕಾರ ಮಾಡಿದರು ಮೋಗುಬಾಯಿ. ಉಸ್ತಾದ್‌ರ ಕಣ್ಣೂ ತೇವವಾಗಿತ್ತು. ಕೇವಲ ಒಂದು ಶಬ್ದ, 'ಹೂಂ' ಎಂದದ್ದೆ ತಡ ಮೋಗುಬಾಯಿ ಮರಳಿ ಜೈಪುರ್ ಪರಂಪರೆಯತ್ತ ತಿರುಗಿದರು.

ಇದೆಲ್ಲ ವಿಸ್ತೃತವಾಗಿ ಬರೆಯುವ ಕಾರಣ ಮುಂಬರುವ ಮಾನವೀಯ ಮತ್ಸರದ ಅವತಾರಕ್ಕೆ ಇದೊಂದು ನಾಂದಿಯಾಗಿತ್ತು. ಇದೆಲ್ಲ 1923ರಲ್ಲಿ ಆದ ಘಟನೆ. ಮೋಗುಬಾಯಿ ಕೇವಲ 19ರ ಯುವತಿ ಜ್ಞಾನಾರ್ಜನೆಯ ಸಲುವಾಗಿ ಏನೆಲ್ಲ ತ್ಯಾಗಮಾಡುವ, ಈ ವಿಶಿಷ್ಟ ಬುದ್ಧಿ ಎಲ್ಲಿಂದ ಬಂದಿತು? ತಾಯಿ ಜಯಶ್ರೀಬಾಯಿಯ ಗೋಳನ್ನು ಪುಟ್ಟ ಮೋಗು ಅರಿತಿದ್ದಳು. ಇದೇ ಅವರಿಗೆ ಮುಂದಿನ ದಾರಿ ತೋರಿಸಿದ್ದಿರಬೇಕು.

ಮುಂಬಯಿಯಂತಹ ಶಹರದಲ್ಲಿ ಊಟ-ಉಡಿಗೆ, ವಾಸ್ತವ್ಯ ಎಲ್ಲ ಆಗಬೇಕಲ್ಲ? ದೇವದಾಸಿ ಕುಟುಂಬದವರಾದರೂ, ಅವರಿಗೂ ಕೂಡ ಸಮಾಜದಲ್ಲಿ ಗೌರವಯುತ ಉಪಪತ್ನಿಯ ಸ್ಥಾನವಿತ್ತು. ಅಂಜನಿಬಾಯಿ ಮಾಲ್ಪೇಕರ್ ತನ್ನ ಪತಿ ತೀರಿಕೊಂಡ ಕೂಡಲೇ 35ನೇ ವರ್ಷದಲ್ಲಿಯೇ ಹಾಡುಗಾರಿಕೆ ಬಿಟ್ಟುಕೊಟ್ಟದ್ದು ಇದೆ. ಮೇನಕಾ ಶಿರೋಡಕರ್, ಕೇಸರಬಾಯಿ ಹೀಗೆ ಅನೇಕ 'ಏಕಪತಿವ್ರತಸ್ಥ' ಕಲಾವತಿಯರ ಉದಾಹರಣೆಗಳು ತುಂಬಾ ಇವೆ. ಮೋಗುಬಾಯಿಯವರ ಪಾಲಿಗೆ ಮಾಧವರಾವ್ ಭಾಟಿಯಾ ಬಂದರು. ಅವರು ನಡತೆಯಲ್ಲಿ ಸೌಜನ್ಯಮೂರ್ತಿ, ಸಾಹಿತ್ಯ, ಸಂಗೀತ, ನೃತ್ಯದಲ್ಲಿ ಅಭಿರುಚಿ ಇದ್ದವರು. ಮಾಧವರಾವರು ಈ ಮೋಗುಬಾಯಿಯೆಡೆ ಆಕರ್ಷಿತರಾದರು. ಕೇವಲ ಸಂಗೀತ ಆಲಿಸುತ್ತಿದ್ದವರು ಅವರ ಜೀವನ ಸಂಗಾತಿಯಾದರು. ಮೋಗುಬಾಯಿ ಕುರ್ಡಿಕರ್ ಇವರ ಆಯುಷ್ಯದಲ್ಲೀಗ ಸ್ಥೈರ್ಯ ಬಂದಿತು. ಅಲ್ಲಾದಿಯಾ ಸಾಹೇಬರೂ ಕೂಡ ಮಾತು ಕೊಟ್ಟಂತೆ ಹೈದರ ಖಾನರನ್ನು ಕರೆಸಿದರು. ಅಖಂಡ ಆರು ವರ್ಷದ ಗುರುಮುಖಿ ವಿದ್ಯೆ ಮೋಗುಬಾಯಿಗೆ ಸಿಕ್ಕಿತು.

1931ರಲ್ಲಿ ಮೋಗುಬಾಯಿಗೆ ಕಿಶೋರಿ ಹುಟ್ಟಿದಳು. ಹೆರಿಗೆಗಾಗಿ ಕುರ್ಡಯಿಗೆ ಹೋದ ಮೋಗುಬಾಯಿ ಮರಳಿ ಬರುವ ತನಕ ಆರು ವರ್ಷ ಏಕಾಗ್ರತೆಯಿಂದ

ಕಲಿಸುತ್ತಿದ್ದ. ಹೈದರಖಾನರಿಗೆ ಯಾರೋ ಅಸೂಯೆಯಿಂದ ಅವರು ದಿನಾಲು ಮೆಲಕುವ ವೀಳ್ಯದಲ್ಲಿ ಆರ್ಸೆನಿಕ್ ಕೂಡಿಸಿದ್ದರಿಂದಲೋ ಏನೋ ಒಂದು ತರಹದ ಮೂಢತೆ ಆವರಿಸಿತ್ತು. ಕೊನೆಗೆ ಅಲ್ಲಾದಿಯಾಖಾನರೇ ಹೈದರಖಾನರನ್ನು ಅತ್ರೋಳಿಗೆ ಸ್ಥಳಾಂತರಿಸಿದರು.

ಕಿಶೋರಿ ಹುಟ್ಟಿದ ನಂತರ ಮೋಗುಬಾಯಿ, ಎಲ್ಲರ 'ಮಾಯಿ' ಆದರು. ಮರಳಿ ಅದೇ ಹಾಡು? "ಇನ್ ದುರ್ಜನ ಲೋಗೋಂಕೊ ಕಹಾಂ ಕೋಸುಂ"! ಒಂದು ದಿನ ಕೇಸರಬಾಯಿಯವರ ತಬಲಾ ಸಾಥ್ ಕೊಡುವ ವಿಷ್ಣು ಶಿರೋಡಕರ ಮೋಗುಬಾಯಿಯವರ ಮನೆಗೆ ಬಂದರು. "ಮಾಯಿ, ಒಂದು ಒಳ್ಳೆ ಸುದ್ದಿ ಕೊಡುತ್ತೇನೆ , ನನಗೇನು ಕೊಡ್ತೀರಿ?

"ಸಂಗೀತದ ಹೊರತಾಗಿ ನನ್ನಲ್ಲಿ ಕೊಡಲು ಏನಿದೆ ಅಣ್ಣ ."

"ನಿನ್ನ ನಶೀಬದಲ್ಲಿ ಮತ್ತೊಮ್ಮೆ ಗುರುದರ್ಶನ ಯೋಗವಿದೆ. ಸ್ವತಃ ಅಲ್ಲಾದಿಯಾಖಾನರೇ ಬಂದು ನಿಮಗೆ ತಾಲೀಮು ಕೊಡ್ತಾರೆ ನೋಡಿ" ಎಂದರು. ಶಿರೋಡಕರ ಹೇಳಿದ ಮಾತು ಒಂದು ದಿನ ನಿಜವಾಯಿತು. ಗೋಧೂಳಿ ಸಮಯದಲ್ಲಿ ಕಿಶೋರಿಯನ್ನು ತೊಡೆಯಲ್ಲಿಟ್ಟು ಪೂರ್ವಿರಾಗದ ಆಲಾಪ ಮಾಡುತ್ತಿದ್ದಾಗ ಬಾಗಿಲಲ್ಲಿ ಅದೇ ತೇಜಃಪುಂಜ ವ್ಯಕ್ತಿ, ಖಾನ ಸಾಹೇಬರದು!

ಮೆಟ್ಟಿಲು ಬಳಿಯಲ್ಲಿಯೇ ಕೆಲಕಾಲ ಪೂರ್ವಿರಾಗದ ಸ್ವರಗಳನ್ನು ಸವಿಯುತ್ತ ನಿಂತಿದ್ದ ಅಲ್ಲಾದಿಯಾ ಕೈಯಲ್ಲಿದ್ದ ಕೋಲನ್ನು ಬದಿಗಿಟ್ಟು, 'ಜೀತೆ ರಹೋ' ಅನ್ನುತ್ತಾ ಒಳಗೆ ಕಾಲಿಟ್ಟರು. ಹೈದರಖಾನರ ನಿಸ್ಸೀಮ ತಾಲೀಮಿನಿಂದ ನುಣುಪಾದ ಮೋಗುಬಾಯಿಯ ಸ್ವರಗಳು ಋಷಿತುಲ್ಯ ಗುರುಗಳಿಗೆ ಕೊಂಚ ಪಶ್ಚಾತ್ತಾಪ, ಕೊಂಚ ಅಭಿಮಾನ ಮತ್ತು ಬಹಳಷ್ಟು ಆತ್ಮವಿಶ್ವಾಸದ ಮಿಶ್ರ ಭಾವನೆಗಳು ಉಕ್ಕಿಬಂದವು. ಓತಪ್ರೋತ ಭಾವನೆಗಳ ಹೊರೆ ಹೊತ್ತಿದ್ದ ಖಾನ ಸಾಹೇಬರೂ, ಮೋಗುಬಾಯಿಯವರೂ ಜೊತೆಗೆ ಕೂತು ಅತ್ತುಬಿಟ್ಟರು. 'ಇಂತಹ ಒಂದು ರತ್ನಕ್ಕೆ ನಾನು ಸರಿಯಾದ ಆಕೃತಿ ಕೊಡಲಿಲ್ಲವಲ್ಲ' ಎಂಬ ಅಪರಾಧ ಭಾವನೆ ಅಲ್ಲಾದಿಯಾರನ್ನು ಚುಚ್ಚುತ್ತಲೇ ಇತ್ತು. ಕೇಸರಬಾಯಿಯವರ ಕಾಂಟ್ರಾಕ್ಟನ್ನು ಬದಿಗೆ ಸರಿಸಿ, ಅವರು ಮಾಯಿಯವರಲ್ಲಿ ಬಂದಿದ್ದರು. ಅವರಿಗೆ ಆಗ 80 ವರ್ಷ ದಾಟಿರಬೇಕು!

"ಈಗಾದರೂ ನನ್ನ ತಾಲೀಮಕ್ಕೆ ವ್ಯತ್ಯಯ ಬರಬಾರದು ಗುರುಗಳೇ" ಎಂದು ಮೋಗುಬಾಯಿ ಅಂದಾಗ ಖಾನಸಾಹೇಬರು ಮಾತಾಡದೇ ಸನ್ನೆಯಿಂದಲೇ ತಂಬೂರಿ ತೋರಿಸಿದರು. ಮುಂಜಾನೆಯ ಸಮಯವಾದರೂ ಕಾಫೀ ರಾಗ ಕಲಿಸಲು ಪ್ರಾರಂಭಿಸಿದರು. ಇದರ ಬಂದಿಶಿನ ಪ್ರಾರಂಭ, 'ಸುಖಕರ ಆಯೀ'! ಕಿಶೋರಿಗೆ ಆಗ ಕೇವಲ ಮೂರು ವರ್ಷ.

1919ರಿಂದಲೇ ಅಲ್ಲಾದಿಯಾರ ತಾಲೀಮು ನಡೆಯುತ್ತಿದ್ದರೂ ಈವರೆಗೆ, 'ಗಂಡಾ ಬಂಧನ' ಆಗಿರಲಿಲ್ಲ. ವಾರ್ಧಕ್ಯದೆಡೆ ಬಗ್ಗಿದ ಅಲ್ಲಾದಿಯಾಖಾನರಿಗೆ ಇದು ಒಂದು

ಅತ್ಯಂತ ಆವಶ್ಯಕವಾದ ವಿಷಯವೆಂದು ಗೊತ್ತಿತ್ತು. ಕೇಸರಬಾಯಿಯವರ ಮತ್ಸರ ಎಂದು ಹೆಡೆಯೆತ್ತುವುದೋ ಎಂಬ ಭಯ ಬೇರೆ. "ಮೋಗೂ, ಯಹ್ ಕಾಮ್ ಜಲ್ದಿ ಕರಾಲೋ. ತುಮ್ಹೆಂ ಮಾಲೂಮ್ ಹೈ ಕ್ಯೂಂ".

ಇದೇ ಹೊತ್ತಿಗೆ ಮೋಗುಬಾಯಿಯವರ ಯಜಮಾನರ ಆರೋಗ್ಯ ಸರಿ ಇರಲಿಲ್ಲ. ಮನೆಯಲ್ಲಿದ್ದ ಚಿನ್ನ ಸುಮಾರು 125 ತೊಲೆ ಮಾರಿ ನಾಲ್ಕು ಸಾವಿರರೂಪಾಯಿ ಜೋಡಿಸಿ ಇಟ್ಟರು (ತೊಲೆಗೆ 32 ರೂ) ಮೂರು ಸಾವಿರ ಗುರುದಕ್ಷಿಣೆ ಬಾಕಿ, ಮೇಲಿನ ಖರ್ಚು ಬಾಳುಮಾಮಾ, ಲಯಭಾಸ್ಕರ ಖಾಪುಮಾಮಾ, ಶಿರೋಡಕರ, ಇನ್ನಿತರರೆಲ್ಲ ಈ ವಿಧಿಗೆ ಹಾಜರು ಇದ್ದರು. 'ಗಂಡಾ ಬಂಧನ' ಇದು ಗುರು, ಶಿಷ್ಯೆಯನ್ನು ಸ್ವೀಕಾರ ಮಾಡುವ ಒಂದು ಔಪಚಾರಿಕ ವಿಧಿ. ಶಿಷ್ಯರ ಆಯುಷ್ಯದಲ್ಲಿ ಅತ್ಯಂತ ಮಹತ್ವದ ಘಟನೆ ಆದರೂ ಚರಿತ್ರೆಯಲ್ಲಿ ಅಷ್ಟೊಂದು ಮಹತ್ವವಿಲ್ಲವಿದ್ದರೂ ಮೋಗುಬಾಯಿಯವರ ಜೀವನದಲ್ಲಿ ಆದ ಒಂದು ಅತ್ಯಂತ ಕ್ಲೇಶದಾಯಕ ಅನುಭವವಾಗಿತ್ತು.

'ಗಂಡಾಬಂಧನದ' ದಿನವೇ ಗ್ರಹಾಚಾರ ಒದಗಿತು. ವಿರೋಧಿಗಳು ಒಂದು ಹ್ಯಾಂಡಬಿಲ್ಲು ಮುದ್ರಿಸಿ ಗಿರಗಾಂವಿನ ಗೋಮಾಂತಕ ಮರಾಠಾ ಸಮಾಜದ ಅಕ್ಕಪಕ್ಕದಲ್ಲಿ ಹಂಚಿದರು. 'ಕೇಳಿರಿ ಕೇಳಿರಿ, ಬೊಂಬಾಯಿಯ ರಸಿಕ ಜನರೇ, ಈ ಪತ್ರಿಕೆಯಲ್ಲಿ ಕೊಟ್ಟಂತೆ ಮೋಗುಬಾಯಿ ಕುರ್ಡಿಕರ ಇವರು ಎಂದಿಗೂ ಅಲ್ಲಾದಿಯಾಖಾನ ಸಾಹೇಬರ ಶಾಗಿರ್ದ ಆಗಿರಲಿಲ್ಲ, ಆಗಿರಲೂ ಸಾಧ್ಯವಿಲ್ಲ. ಎಲ್ಲರೂ ಈ ಮಾತನ್ನು ಗಮನಿಸಬೇಕು' ಎಂಬ ಪತ್ರಿಕೆ ಹಂಚಿದರು. ಯಾರೋ ಒಬ್ಬರು ಸರ್ವೇಯರ ಬಿಲ್ಡಿಂಗಿನಲ್ಲಿದ್ದ ಖಾನಸಾಹೇಬರಿಗೆ ಈ ಹ್ಯಾಂಡಬಿಲ್ಲನ್ನು ತೋರಿಸಿದರು. ಕೂಡಲೇ ಖಾನಸಾಹೇಬರು ಮೋಗುಬಾಯಿಯವರಿಗೆ ಒಕ್ಕಣೆ ಕಳಿಸಿದರು. 'ಬೇಟಾ, ಕಾಳಜಿ ಮಾಡಬೇಡ, ನಾನಿದ್ದೇನೆ ನಿನ್ನ ಜೊತೆ. ಈ ಸುಳ್ಳು ಸಮಾಚಾರಕ್ಕೆ ಸರಿಯಾದ ಉತ್ತರ ಕೊಡುವೆ'.

ಮುಂಜಾನೆ ಎದ್ದು ಅಲ್ಲಾದಿಯಾ ಅವರು ಕಾರ್ಯಕ್ರಮ ಆಯೋಜನೆ ಮಾಡಿದ ಸ್ಥಳಕ್ಕೆ ಬಂದು, ಮಧ್ಯಂತರದ ವಿಶ್ರಾಂತಿಯ ಹೊತ್ತಿಗೆ, ಶಿಷ್ಯರ ಹೆಗಲ ಮೇಲೆ ಕೈಯಿಟ್ಟು ವೇದಿಕೆಯನ್ನೇರಿ ಸಭಿಕರಿಗೆ ತಮ್ಮ ಧೀರ ಗಂಭೀರ ಧ್ವನಿಯಲ್ಲಿ ಎರಡು ಮಾತು ಹೇಳಿದರು. "ಹಮ್ ಏಕ್ ಗಲತ್ ಫೈಮಿ ದೂರ ಕರ್ನಾ ಚಾಹತೆ ಹೈಂ. ಯೇ ಹಮಾರಿ ಐಲಾನ ಹೈ, ಇಸಿಲಿಯೆ ಹಮ್ ಇಧರ್ ಹಾಜೀರ್ ಹುವೆಂ ಹೈಂ. ಮೋಗುಬಾಯಿ ಮೇರಿ ಗಂಡಾಬಂಧ್ ಶಾಗೀರ್ದ್ ಹೈ, ಔರ್ ಇಸಮೆಂ ಕೋಯಿ ಶಕ್ ನಹಿಂ." (ನಾವು ಒಂದು ತಪ್ಪು ಕಲ್ಪನೆಯನ್ನು ದೂರಮಾಡಲು ಇಷ್ಟ ಪಡುತ್ತೇವೆ. ಇದು ನಮ್ಮ ಘೋಷಣೆ, ಅದಕ್ಕಾಗಿಯೇ ನಾವು ಇಲ್ಲಿ ಬಂದಿರುವದು. ಮೋಗುಬಾಯಿ ನನ್ನ ಗಂಡಾಬಂಧ ಶಿಷ್ಯೆ ಆಗಿದ್ದಾಳೆ ಮತ್ತು ಇದರಲ್ಲಿ ಯಾವ ಶಂಕೆಯೂ ಇಲ್ಲ....'). ಇದನ್ನು ಇದ್ದಕ್ಕಿದ್ದಂತೆ ಈ ಲೇಖನದಲ್ಲಿ ಕೊಟ್ಟಿದ್ದೇನೆ. ಇದರ ಬಗ್ಗೆ ಕೇಸರಬಾಯಿ ಕೇರಕರ್ ಅವರ ಚರಿತ್ರೆಯಲ್ಲಿ ಪೂರ್ಣ ಒಕ್ಕಣೆ ಸಿಗುತ್ತದೆ.

ಖಾನ್ ಸಾಹೇಬರ ತಾಲೀಮೂ ಜೋರಾಗಿ ನಡೆದಿತ್ತು. ಮಾಧವರಾಯರೂ ತಮ್ಮ ಬಳಲಿಕೆ ಹಿಂದೆ ಬಿಟ್ಟು ದಿನನಿತ್ಯದ ವ್ಯವಹಾರದಲ್ಲಿ ಮಗ್ನರಾದರು. ಕಿಶೋರಿಗೆ

ಓರ್ವ ತಂಗಿ ಮತ್ತು 1938ರಲ್ಲಿ ಒಬ್ಬ ತಮ್ಮ ಹುಟ್ಟಿದರು. ಇಬ್ಬರೂ ಹುಟ್ಟಿದ್ದು ಗೋವಾದಲ್ಲಿಯೇ. ಉಲ್ಲಾಸ ಜನ್ಮ ತಾಳುವಾಗ ಮಾಧವರಾಯರು ಪರಲೋಕಕ್ಕೆ ಹೊರಟುಬಿಟ್ಟರು. ಆರು ವರ್ಷದ ಕಿಶೋರಿ, ಮೂರು ವರ್ಷದ ಲಲಿತಾ ಮತ್ತು ಅದೇ ತಾನೇ ಹುಟ್ಟಿದ ಉಲ್ಲಾಸ, ಅತ್ಯಂತ ದುಃಖದ ಪ್ರಸಂಗದಲ್ಲಿ ರವಳನಾಥನ ದರ್ಶನಮಾಡಿ ಮೋಗುಬಾಯಿ ಮಕ್ಕಳೊಂದಿಗೆ ಮುಂಬಯಿಗೆ ಬಂದರು. ರಿಯಾಜ಼್ ಮಾಡಿ ಮಾಡಿ ಅವರ ಸಂಗೀತ ಅತ್ಯಂತ ಉಚ್ಚಕೋಟಿಯದಾಗಿತ್ತು.

ಅಲ್ಲಾದಿಯಾರ ಶಿಷ್ಯ ಮಂಡಳಿ ತುಂಬ ದೊಡ್ಡದು. ಇವರಲ್ಲಿ ಮೋಗುಬಾಯಿ ಮತ್ತು ಕೇಸರಬಾಯಿಯವರು ಶ್ರೇಷ್ಠ ಗಾಯಕಿಯರಾಗಿದ್ದರು. ವೃದ್ಧಾಪ್ಯದಲ್ಲಿ ಖಾನಸಾಹೇಬರು ಮೋಗುಬಾಯಿಯವರಲ್ಲಿ ಹೆಚ್ಚು ವೇಳೆ ಕಳೆಯುತ್ತಿದ್ದರು. ಕೇಸರಬಾಯಿ ಖಾನಸಾಹೇಬರ ಜೊತೆಗೆ ಮಾತು ನಿಲ್ಲಿಸಿಬಿಟ್ಟಿದ್ದರೆಂದು ಗಾಳಿ ಸುದ್ದಿ ಹರಡಿತ್ತು. ಕೊನೆಗೆ 1946ರಲ್ಲಿ ಅಲ್ಲಾದಿಯಾ ಪೈಗಂಬರ ವಾಸಿಯಾದಾಗ ಕೂಡ ಕೇಸರಬಾಯಿ ಅವರತ್ತ ಹಾಯಲಿಲ್ಲ.**

ಮೋಗುಬಾಯಿಯವರ ಎರಡು ಕಚೇರಿಗಳನ್ನು ಕೇಳಿದ ಭಾಗ್ಯವಂತ ನಾನು. ಮೊದಲನೆಯದು ಎನ್‌ಸಿಪಿಎ ಅಂದರೆ ರಾಷ್ಟ್ರೀಯ ಕಲಾ ಕೇಂದ್ರದ ಉದ್ಘಾಟನೆಯಾದಾಗ, ಮತ್ತೊಮ್ಮೆ ಗಿರಗಾಂವಿನ ಸಾಹಿತ್ಯ ಸಂಘ ಮಂದಿರದಲ್ಲಿ. ಮೊದಲನೇ ಕಚೇರಿಯ ರಾಗಗಳು ಮರೆತು ಹೋಗಿವೆ. ಆದರೆ ಅದೊಂದು ಅಭೂತಪೂರ್ವ ಕಚೇರಿಯಾಗಿತ್ತು ಎಂದಿಷ್ಟೇ ನೆನಪು. ಗಿರಗಾಂವಿನ ಕಚೇರಿಯಲ್ಲಿ ಮೊದಲು ಹಾಡಿದ್ದು, ಕಿಶೋರಿ ಅಮೋಣಕರ, ಬಳಿಕ ಪಂ. ಮಲ್ಲಿಕಾರ್ಜುನ ಮನ್ಸೂರ್ ಮತ್ತು ಕೊನೆಗೆ ಮೋಗುಬಾಯಿಯವರ ಅಚ್ಚಳಿಯದ 'ಜೈ ಜೈಯವಂತಿ' ಮತ್ತು 'ಭೈರವಿ'. ಸ್ವರ ಸಾಥಿಗೆ ಕೌಸಲ್ಯಾ ಮಂಜೇಶ್ವರ ಮತ್ತು ಕಮಲ ತಾಂಬೆ ಇದ್ದರು.

ಮೋಗುಬಾಯಿಯ ಹಾಡುಗಾರಿಕೆಯ ವೈಶಿಷ್ಟ್ಯವೆಂದರೆ, ಲಯದಲ್ಲಿ ಡೌಲಿನಲ್ಲಿ ಕುದುರೆಯಂತೆ, ಅಂದರೆ ಜಾತಿವಂತ ಕುದುರೆಯ ಠೀವಿಯಲ್ಲಿ ಮುಂದೆ ಸಾಗುವದು. ಲಯಭಾಸ್ಕರ ಖಾಪುಮಾಮಾರ ಸಾನ್ನಿಧ್ಯ ಮೋಗುಬಾಯಿಯವರಿಗೆ ಯೋಗ್ಯ ವೇಳೆಯಲ್ಲಿ ಸಿಕ್ಕಿತ್ತು. ಮತ್ತೊಂದು ವಿಷಯ, ಅಲ್ಲಾದಿಯಾ ಖಾನರು 'ಅಂತರಾ' ಹಲವಾರು ಸಲ ಬಿಟ್ಟುಕೊಡುತ್ತಿದ್ದರು. ಆದರೆ ಕೆಲಕಾಲ ಆಗ್ರಾ ಪರಂಪರೆಯಲ್ಲಿ ಕಲಿತ ಮೋಗುಬಾಯಿಯವರಿಗೆ ಅಂತರಾ ಇಲ್ಲದ ಹಾಡುಗಾರಿಕೆ ಅಪೂರ್ಣವೆಂದೆನಿಸುತ್ತಿತ್ತು. ಶಕ್ಯವಾದ ಬಂದಿಶ್‌ಗಳಿಗೆ ತಾವೇ ಅಂತರಾ ಜೋಡಿಸಿ ಒಂದು ಪೂರ್ಣತ್ವ ಕೊಟ್ಟದ್ದು ಇದೆ. "ನನ್ನಲ್ಲಿ ಲಯ ಅಂಗ ಬಂದದ್ದು ಬಾಳುಮಾಮಾ ಮತ್ತು ಖಾಪುಮಾಮಾರಿಂದ ಮತ್ತು ಹಾಡಿನಲ್ಲಿಯ ಲಯಕಾರಿ ಹೈದರ್ ಖಾನ್ ಸಾಹೇಬರಿಂದ" ಎಂದು ಮೋಗುಬಾಯಿ ಹೇಳುತ್ತಿದ್ದರು.

ಎಚ್‌ಎಮ್‌ವಿಯ ಎರಡೋ, ನಾಲ್ಕೋ ತಟ್ಟೆಗಳನ್ನು ಮಾಡಿಸಿಕೊಂಡರು (78ಆರ್ ಪಿ ಎಮ್) ಯಮನ್ ರಾಗದಲ್ಲಿಯ ತರಾಣಾ 15 1/2 ಮಾತ್ರೆಯದು ಇದ್ದು, ಇದನ್ನು ಅತ್ಯಂತ ಕುಶಲತೆಯಿಂದ ಮೋಗುಬಾಯಿ ಹಾಡಿದ್ದಾರೆ. ಇಂಪಾದ ಶಾರೀರ,

ಹಾಡುಗಾರಿಕೆಯಲ್ಲಿ ಫಿರ್ಕಾ (ಸ್ಪಿನ್) ತಾನುಗಳು. ಫಿರ್ಕಾ ಅಂದರೆ ಒತ್ತಡ ಕೊಟ್ಟು ಆರೋಹ ಹಾಡುವದು ಮತ್ತು ಕೂಡಲೇ ಅವರೋಹದಲ್ಲಿ ಇಳಿಯುವದು. ಇದರಲ್ಲಿಯೇ ಲಡಿ ತಾನುಗಳ ಸುರುಳಿ ಬಿಚ್ಚುತ್ತಾ ಹೋಗುವದು. ಮನೆಗೆಲಸ ಮಾಡುತ್ತಾ ಮೋಗುಬಾಯಿ ಇಂತಹ ಫಿರ್ಕಾ ಅಭ್ಯಾಸ ಮಾಡುತ್ತಾ ಇರುತ್ತಿದ್ದರಂತೆ.

ಮುಪ್ಪಿನಲ್ಲಿ ಕೂಡ ಅಲ್ಲಾದಿಯಾಖಾನರ ಬುದ್ಧಿ ತೀಕ್ಷ್ಣವಾಗಿತ್ತು. ಹೀಗಾಗಿ ಮೋಗುಬಾಯಿಯವರಿಗೆ ಇದರ ಲಾಭ ತುಂಬಾ ಆಯಿತು. ಮೋಗುಬಾಯಿಯವರು ತಮ್ಮ ಶಿಷ್ಯರಿಗೆ ತಮ್ಮ ಗುರುಗಳ ಉತ್ತರದಾಯಿತ್ವದ ಮತ್ತು ಶ್ರೇಷ್ಠತೆಯ ಬಗ್ಗೆ ಯಾವಾಗಲೂ ಹೇಳುತ್ತಿದ್ದರಂತೆ. ಅಲ್ಲಾದಿಯಾ ತೀರಿಕೊಂಡಾಗ ಅವರ ವಯಸ್ಸು ತೊಂಬತ್ತೊಂದು. ಮೋಗುಬಾಯಿಯವರು ಇನ್ನೈದು ವರ್ಷ ಹೆಚ್ಚು ಬಾಳಿದರು. ಫೆಬ್ರುವರಿ 10, 2000ಕ್ಕೆ ರವಳನಾಥನ ಪಾದ ಸೇರಿದರು. ಇವರ ಶಿಷ್ಯರಲ್ಲಿ ಕಮಲ ತಾಂಬೆ, ಕೌಸಲ್ಯಾ ಮಂಜೇಶ್ವರ, ಸುಶೀಲಾರಾಣಿ ಪಟೇಲ, ಕುಮುದಿನಿ ಕಾಟಧರೆ, ಅರುಣ ದ್ರವಿಡ, ಸುಲಭಾ ಐಶವೀಕರ ಮತ್ತು ಅವರ ಮಗಳೇ ಕಿಶೋರಿ ಅಮೋಣಕರ. ಮತ್ತು ಇನ್ನಿತರರು.

* ಕೌಸಲ್ಯಾ ಮಂಜೇಶ್ವರರ ಪತಿ ದಿನಕರರು ಮಂಜೇಶ್ವರದ ದೊಡ್ಡ ಜಮೀನುದಾರರು. ಭೀಮಸೇನ ಜೋಶಿಯವರು ಕನ್ನಡ ಹಾಡುಗಳನ್ನು ಅಭ್ಯಸಿಸಿದ್ದು ಇವರ ಮನೆಯಲ್ಲಿಯೇ. ಭೂಗಂಧರ್ವ ರಹಿಮತಖಾನರು ತಿಂಗಳುಗಟ್ಟಲೆ ಇವರ ಆತಿಥ್ಯ ಪಡೆಯುತ್ತಿದ್ದ ಬಗ್ಗೆ ರಸವತ್ತಾಗಿ ಮಂಜೇಶ್ವರರು ಹೇಳುತ್ತಿದ್ದರು. ಇವರು ತಬಲಾದಲ್ಲಿ ನಿಷ್ಣಾತರು. ಮಣಿಭವದಲ್ಲಿ ಗಾಂಧೀಜಿಯಿದ್ದಾಗ ಅವರಿಗೆ ಕೌಸಲ್ಯಾ ಭಜನೆ ಹಾಡಿದ್ದು, ತಾನು ತಬಲಾ ಪಕ್ಕವಾದ್ಯ ನುಡಿಸಿದ್ದನ್ನು ಹೆಮ್ಮೆಯಿಂದ ಹೇಳುತ್ತಿದ್ದರು.

** ಬಿ ಆರ್ ದೇವಧರವರ 'ಅಲ್ಲಾದಿಯಾ ಖಾನ್' ಪುಸ್ತಕದಿಂದ

*****

3.9

ಸಿದ್ಧೇಶ್ವರೀ ದೇವಿ (1907–1976)

1959ರಲ್ಲಿ ಕರ್ನಾಟಕ ಕಾಲೇಜಿನ ಬಿ.ಎಸ್‌ಸಿ. (ಆನರ್ಸ್) ಪದವಿಯನ್ನು ಹೊತ್ತು, ಧಾರವಾಡದಿಂದ ಮುಂಬಯಿಗೆ ನೌಕರಿ ಹುಡುಕಲು ಬಂದೆ. ನಂತರ ಪಿಂಪರಿಯ ಹಿಂದುಸ್ತಾನ ಎಂಟಿಬಯೋಟಿಕ್ಸ್‌ದಲ್ಲಿ ಕೆಲಸಮಾಡಿದೆ. ಬಳಿಕ ಗ್ಲಾಕ್ಸೋ (ಈಗಿನ ಗ್ಲಾಕ್ಸೋ ಸ್ಮಿತ್‌ಕ್ಲೈನ್) ಕಂಪನಿಯ ಪ್ರತಿನಿಧಿಯೆಂದು ಭೋಪಾಳದಲ್ಲಿ 2 ವರ್ಷ ಕಳೆದು ವಾಪಸ್ಸು ಮುಂಬಯಿಗೆ ಬಂದೆ.

ಈ ನೆನಪಿನ ಬುತ್ತಿಯನ್ನು ಬಿಚ್ಚುವ ಕಾರಣ ನನ್ನ ಸಂಗೀತದ ವ್ಯಾಸಂಗ ಅರ್ಧದಲ್ಲಿಯೇ ಬಿಟ್ಟುಕೊಟ್ಟು, ಎಂ.ಎಸ್‌ಸಿ ಮೊದಲ ಲಿಸ್ಟಿನಲ್ಲಿ ನನ್ನ ಹೆಸರನ್ನು ಕಾಣದೇ ಇದ್ದುದರಿಂದ ನನ್ನ ಬದುಕೇ ಬದಲಾಯಿತು. ಡಾಕ್ಟರ ಆಗದೇ ಇದ್ದವ ಎಮ್‌ಆರ್ (ಮೆಡಿಕಲ್ ರೆಪ್) ಆಗ್ತಾನಂತೆ! ನನ್ನ ಜೀವನದಲ್ಲಿ ಸಂಗೀತಕಾರನಾಗುವ ಬದಲು ಸಂಗೀತದ ಮೇಲೆ ಬರೆಯುವ ಬರೆಹಗಾರನಾದೆ. ಒಂದನ್ನು ವೃತ್ತಿಯಾಗಿಟ್ಟುಕೊಂಡು ಮತ್ತೊಂದನ್ನು ಪ್ರವೃತ್ತಿಯಾಗಿಟ್ಟುಕೊಂಡೆ. ಊರೂರು ತಿರುಗಾಡಿದೆ. ಸಾಧ್ಯವಾದಷ್ಟು ಸಂಗೀತ ಕಚೇರಿಯನ್ನು ಕೇಳಿದೆ. ಸಾಧ್ಯವಾದಾಗ ಕೆಲವು ಸಂದರ್ಶನಗಳನ್ನು ಮಾಡಿದೆ. ಇವುಗಳಲ್ಲಿ ಭೋಪಾಳ–ಇಂದೂರ ಮಹಾಮಾರ್ಗದ ಮೇಲೆ ಇದ್ದ ದೇವಾಸದ ಕುಮಾರಗಂಧರ್ವ (1963), ಕವ್ವಾಲಿ ಕ್ವೀನ್ ಶಕೀಲಾಬಾನು, ಈಕೆಯೂ ಭೋಪಾಳದವಳೇ. (1964) ಕೇವಲ ಕಚೇರಿ ಕೇಳಿ ಸಂದರ್ಶನ ಮಾಡಲು ಸಿಗದೇ ಇರುವವರು ಸಿದ್ಧೇಶ್ವರೀ ದೇವಿ –ಈ ಲೇಖನದ ನಾಯಕಿ, ನಾಯಕಸಾನಿಯರಲ್ಲದ, ಆದರೆ ಸಂಗೀತದಲ್ಲಿ ಪ್ರಾವೀಣ್ಯವನ್ನು ಪಡೆದವರು ಅನೇಕರನ್ನು ನಾನು ಜಬಲಪುರ್, ದರ್ಭಾಂಗಾ, ಕಲಕತ್ತಾ, ಬಿಕಾನೇರ ಶಹರಗಳಲ್ಲಿ ಭೆಟ್ಟಿ ಮಾಡಿದ್ದುಂಟು. ಕೆಲವು ಮರೆತಿವೆ, ಕೆಲವು ನೆನಪಿನಲ್ಲಿವೆ. ಸಿದ್ಧೇಶ್ವರಿಯ ಕಚೇರಿಯ ನೆನಪು ಅಚ್ಚಳಿಯದೇ ನೆನಪಿನಲ್ಲಿ ನಿಂತಿದೆ.

ಸಾಧಾರಣ 1960–65ರ ನಡುವಿನ ವರ್ಷಗಳ ಹಿಂದಿನ ಮಾತು. ಭೋಪಾಳದ ತಾತ್ಯಾಟೋಪೆ ನಗರದಲ್ಲಿಯ ರವೀಂದ್ರ ಕಲಾಕ್ಷೇತ್ರದ ದೊಡ್ಡ ಬಯಲು ರಂಗಭೂಮಿಯಲ್ಲಿ ನಡೆದ ಕಚೇರಿ ಅದು. ಭೋಪಾಳ್ ಮಧ್ಯಪ್ರದೇಶದ ರಾಜಧಾನಿಯಾದ ಮೇಲೆ ಹೊಸದಾಗಿ ಕಟ್ಟಿಸಿದ ವಸಾಹತು ಅಂದರೆ ಟಿ.ಟಿ.ನಗರ.

ತಾತ್ಯಾಟೋಪೇ ನಗರ, ಭೋಪಾಲದಲ್ಲಿ ಇದು ಬಾರಾಸ್ ಪಚಾಸ ಎಂದು ಗುರುತಿಸಲಾಗುತ್ತಿತ್ತು, 1250 ಮನೆಗಳು ಇದ್ದದ್ದು ಎಂಬರ್ಥ. ಬಹುತೇಕವಾಗಿ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳು ಆ ಕಾಲದಲ್ಲಿ ಇದೇ ಬಡಾವಣೆಯ 'ರವೀಂದ್ರ' ದಲ್ಲಿಯೇ ನೋಡಿದ್ದು, ಕೇಳಿದ್ದು. ಯಾಮಿನಿ ಕೃಷ್ಣಮೂರ್ತಿಯವರ ಭರತನಾಟ್ಯ, ವಿಶಾಲ ಕಲಾಕ್ಷೇತ್ರದಲ್ಲಿ ಕೆಲವೇ ಜನರ ಉಪಸ್ಥಿತಿಯಲ್ಲಿ ಕುಮಾರ ಗಂಧರ್ವರ (ನಾನು ಕೇಳಿದ) ಮೊಟ್ಟ ಮೊದಲ ಕಚೇರಿ, ಒಂದು ಇರುವೆಗೂ ಸ್ಥಳ ಸಿಗದ ಕಿಕ್ಕಿರಿದ ಶಕೀಲಾಬಾನು ಭೋಪಾಲಿಯ ಕವ್ವಾಲಿ ಕಚೇರಿ, ದೇವಾಸದಿಂದ ಸಿದ್ಧೇಶ್ವರೀ ದೇವಿಯ ಗಾಯನವನ್ನು ಕೇಳಲು ಸಪತ್ನೀಕರಾಗಿ ಆಗಮಿಸಿದ ಕುಮಾರರೊಂದಿಗೆ ರಸಿಕರಿಂದ ತುಂಬಿ ತುಳುಕಿದ ಇದೇ ಭವನದಲ್ಲಿ, ಸಿದ್ಧೇಶ್ವರೀ ದೇವಿಯ ಅಭೂತಪೂರ್ವ ಉಪಶಾಸ್ತ್ರೀಯ ಸಂಗೀತ ಕಚೇರಿಯನ್ನು ಕೇಳಿದ್ದು.

ನನಗೆ ಸಿದ್ಧೇಶ್ವರೀ ದೇವಿಯ 'ಕಚೇರಿಗಿಂತ ಕುಮಾರರ ಜೋಡಿ 'ಧಾರವಾಡ ಕನ್ನಡ ಮಾತಾಡಾಕ ಸಿಗತೈತಿ' ಎಂಬುದೇ ದೊಡ್ಡ ವಿಷಯವಾಗಿತ್ತು. ಭೋಪಾಳ-ಇಂದೂರು ಮೂರು ತಾಸಿನ ಪ್ರವಾಸ. ದೇವಾಸಕ್ಕಿಂತ ಮೊದಲು 'ಆಷ್ಟಾ' ಎಂಬ ಊರು. ಅಲ್ಲಿ ಕೆಲಸ ಮುಗಿಸಿ ದೇವಾಸಕ್ಕೆ ಹೋಗಿದ್ದೆ. ಅಲ್ಲಿ ಕುಮಾರ ಗಂಧರ್ವರ ಭಾನು ಕುಲ ಇದೆ. ಅಲ್ಲಿ ಹೋಗಿ ಭೇಟಿ ಮಾಡಿ ಬಂದವ ನಾನು! ಕುಮಾರ ಸಾಹೇಬ್ರು ಭೋಪಾಳಕ್ಕs, ಅದೂ (ಸಿದ್ದೇಶ್ವರಿ) ದೇವೀ ಜಲ್ಸಾಕ್ ಬಂದಾರಂದ್ರs ಏನ್ರಿs? ತುಪ್ಪದ್ಹಾಗ ಹೋಳ್ಗಿ ಬಿದ್ದಾಂಗ!

ನಾಲ್ಕು ತಾಸಿನ ಕಚೇರಿ. ರಾತ್ರಿ 9ಕ್ಕೆ ಪ್ರಾರಂಭವಾದ ಕಚೇರಿಯ ಮಧ್ಯಂತರವಾದದ್ದು 11ಕ್ಕೆ. ಒಂದರ್ಧ ತಾಸಿನ ಅಲ್ಪೋಪಹಾರದ ನಂತರ ಪ್ರಾರಂಭವಾದದ್ದು, ಮುಗಿದದ್ದು ಮಧ್ಯರಾತ್ರಿಯ ಒಂದುವರೆಗೆ. ಮರುದಿನ ಅವರ ಕಚೇರಿ 'ಬೇಗಮ್‌ಗಂಜ್' ದಲ್ಲಿತ್ತು. ಅದು 'ಸಾಗರ' ಎಂಬ ಮಧ್ಯಪ್ರದೇಶದ ಮತ್ತೊಂದು ದೊಡ್ಡ ಶಹರದ ಪಕ್ಕದಲ್ಲಿಯ ಅಳಿದುಳಿದ ಸಣ್ಣ ಸಂಸ್ಥಾನದಲ್ಲಿತ್ತು. ಈ ಸಾಗರ ಊರು ನಮಗೆಲ್ಲ ಪರಿಚಯವಾದದ್ದು ಆಚಾರ್ಯ ರಜನೀಶ, 'ಓಶೋ' ಅವರಿಂದ. ಪೂರ್ವಾಶ್ರಮದಲ್ಲಿ ಸಾಗರದ ವಿಶ್ವವಿದ್ಯಾಲಯದಲ್ಲಿ ತತ್ತ್ವಜ್ಞಾನದ ಈ ಪ್ರಾಧ್ಯಾಪಕರಿದ್ದ ಸ್ಥಳವೆಂಬುದರಿಂದ. ಮತ್ತೊಂದು ಪರಿಚಯವೆಂದರೆ, ನೇಪಾಳದಿಂದ ಓಡಿ ಬಂದು ಬ್ರಿಟಿಷರ ಆಗಿನ ಆಳ್ವಿಕೆಯಲ್ಲಿ ರಕ್ಷಣೆ ಪಡೆದ ಮುಂದೆ ಜನಸಂಘದ ರೂವಾರಿಗಳಲ್ಲಿ ಒಬ್ಬರಾದ ವಿಜಯರಾಜೆ ಸಿಂಧಿಯಾ ಅವರಿಂದ. ಗ್ವಾಲಿಯರ್ ಸಂಸ್ಥಾನದ ಒಂದು ಕಾಲಕ್ಕೆ ಮಹಾರಾಣಿಯೆಂದು ಮೆರೆದ ವಿಜಯಾರಾಜೆ ಅವರ ತವರೂರು ಸಾಗರ ಆಗಿತ್ತು. ಸಿದ್ಧೇಶ್ವರೀ ದೇವಿ ಅಂದು ಹಾಡಿದ ಒಂದೂ ರಾಗ ಈಗ ನೆನಪಿಲ್ಲ. ನೆನಪಿನಲ್ಲಿ ನಿಂತದ್ದು ಅವರ ಕಚೇರಿ ನಾಲ್ಕು ತಾಸು ನಡೆದದ್ದು ಮತ್ತು ನನಗೆ ಸಿಕ್ಕ ಕುಮಾರ ಗಂಧರ್ವರ ವರ್ಣನಾತೀತ ಸಾನ್ನಿಧ್ಯ ಅಷ್ಟೆ!

1907ರಲ್ಲಿ ಜನಿಸಿದ ಸಿದ್ದೇಶ್ವರೀ ಒಂದು ವರ್ಷದಲ್ಲಿಯೇ ತಾಯಿ ಇಲ್ಲದ ತಬ್ಬಲಿಯಾದಳು. ವಾರಣಾಸಿಯಲ್ಲಿಯೇ ಇದ್ದ ತಾಯಿಯ ತಂಗಿ ರಾಜೇಶ್ವರಿದೇವಿ ಕೂಡ ಹೆಸರಾಂತ ತವಾಯಫ್, ಅವಳ ಮಗಳು ಕಾಮೇಶ್ವರಿ. 7-8 ವರ್ಷಗಳ ತನಕ

ಸಿದ್ಧೇಶ್ವರಿ ಮನೆಗೆಲಸ ಮಾಡಿ ಒಡನಾಡಿ ಕಾಮೇಶ್ವರಿಯೊಂದಿಗೆ ಹಾಡುತ್ತ ಕುಣಿಯುತ್ತ ದಿನಗಳೆಯುತ್ತಿದ್ದಳು. ಮಗಳ ಹಾಡುಗಾರಿಕೆಯ ಕಡೆ ಸೂಕ್ಷ್ಮದೃಷ್ಟಿ ಇಟ್ಟುಕೊಂಡ ರಾಜೇಶ್ವರಿ ತನ್ನ ಸಾರಂಗೀವಾದಕ ಸಿಯಾಜಿ ಮಿಶ್ರನನ್ನು ತನ್ನ ಮಗಳ ವ್ಯಾಸಂಗದ ಮೇಲ್ವಿಚಾರಕನಾಗಿ ನೇಮಿಸಿದ್ದಳು. ಒಂದು ದಿನ ಹಾಡುವಾಗ ಕಾಮೇಶ್ವರಿಯ ಹರಕತ್, ಮುರ್ಕಿಗಳು ಸರೀ ಬಾರದೇ ಇದ್ದಾಗ, ಸಿದ್ಧೇಶ್ವರೀ ಅಲ್ಲಿಯೇ ಆಡುತ್ತಲೇ ಅವುಗಳನ್ನು ಹಾಡಿ ತೋರಿಸಿದಳು. ಸರಿ, ರಾಜೇಶ್ವರಿಯ ಪಿತ್ತ ನೆತ್ತಿಗೇರಿ ಕಾಮೇಶ್ವರಿಯ ಮೇಲೆ ಏಟಿನ ಸುರಿಮಳೆಯಾಯಿತು. ಸಿದ್ಧೇಶ್ವರಿಯ ರಕ್ಷಾಚಕ್ರ ಕೂಡ ಅಸಫಲವಾಯಿತು.

ಸಿಯಾಜಿ ಮಿಶ್ರ ಸಿದ್ಧೇಶ್ವರಿಯ ಸ್ವಯಂಭೂ ಪ್ರತಿಭೆಯನ್ನು ಅವಾಕ್ಕಾಗಿ ನೋಡಿ ಸ್ತಂಭಿತನಾದ. ತಿಂಗಳು ಮುಗಿಯುವ ಮೊದಲೇ ಬ್ರಾಹ್ಮಣ ಕುಲದ ಮಿಶ್ರ ದಂಪತಿ ಸಿದ್ಧೇಶ್ವರಿಯನ್ನು ದತ್ತು ರೂಪದಲ್ಲಿ ಸ್ವೀಕರಿಸುವ ಪ್ರಸ್ತಾಪ ರಾಜೇಶ್ವರಿಯ ಮುಂದೆ ಇಟ್ಟರು. ವಿಧಿವತ್ ದತ್ತಕ ಸ್ವೀಕಾರವಾಯಿತು. ಸಿದ್ಧೇಶ್ವರಿಯು ಮಿಶ್ರಳಾದಳು ಮತ್ತು ಹೊಸ ಮನೆಯಲ್ಲಿ ಕಾಲಿಟ್ಟಳು.

ಇಲ್ಲಿಂದ ಪ್ರಾರಂಭವಾಯಿತು ಸಿದ್ಧೇಶ್ವರಿಯ ಜಯಭೇರಿ. ಇನಾಯತ್ ಖಾನ್ ಲಾಹೋರ್‌ವಾಲೆಯವರಿಂದ ಹಾಗೂ ದೇವಾಸದ ರಜಬ ಅಲಿ ಖಾನರಿಂದ ಖಯಾಲ್, ಧ್ರುಪದ್ ಮತ್ತು ಬಡೇ ರಾಮದಾಸರವರಿಂದ ಠುಮ್ರಿ, ದಾದರಾ, ಕಜರಿ ಮತ್ತು ಟಪ್ಪಾ ಕಲಿತಳು. ಹತ್ತು ವರ್ಷದ ಅಖಂಡ ಪರಿಶ್ರಮ. ದೇವಾಸದ ಕುಮಾರ ಗಂಧರ್ವ ಹಾಗೂ ಸಿದ್ಧೇಶ್ವರಿಯವರಿಗೆ ಪರಸ್ಪರ ಪರಿಚಯವಾದುದು ಉಸ್ತಾದ್ ರಜಬ್ ಅಲಿ ಖಾನರಿಂದಲೇ. ಕುಮಾರರು ದೇವಾಸಕ್ಕೆ ಹವೆ ಬದಲಾವಣೆಗಾಗಿ ಬಂದಾಗ ರಜಬ್ ಅಲಿ ಖಾನರ ವಾಸ್ತವ್ಯ ದೇವಾಸ ಸಂಸ್ಥಾನದಲ್ಲಿಯೇ ಇತ್ತು. ಮುಂದೆ ಆಗಿಂದಾಗ ದೇವಾಸಕ್ಕೆ ಬರುತ್ತಿದ್ದ ಸಿದ್ಧೇಶ್ವರೀ ದೇವಿಯವರ ಪರಿಚಯವೂ ಆಯಿತು. ಕುಮಾರರು ಭೋಪಾಲಕ್ಕೆ ಬರುವ ಕಾರಣ ಇದು ಎಂದು ಗೊತ್ತಾದದ್ದು ನನಗೆ ಈಗ, ಕೆಲವು ವರ್ಷಗಳ ಹಿಂದೆ.

ದರ್ಭಾಂಗಾ ಸಂಸ್ಥಾನದ ಮಹಾರಾಜರ ಆಸ್ಥಾನದಲ್ಲಿ ಸಾಧಾರಣ 1920ರಲ್ಲಿ ಇವಳ ಮೊಟ್ಟ ಮೊದಲಿನ ಕಚೇರಿ ಆಯಿತು. ಈ ಕಚೇರಿಯ ವೈಭವವೇ ಬೇರೆ. ಯಮುನಾ ನದಿಯಲ್ಲಿ ತೇಲುತ್ತಿದ್ದ ಹಡಗದ ಡೆಕ್ಕಿನ ಮೇಲೆ ಈ ಜಲಸಾ ಏರ್ಪಡಿಸಲಾಗಿತ್ತು –ಫ್ಲೋಟಿಂಗ್ ಜಲಸಾ!

ತವಾಯಫ್ ಅಥವಾ ನಾಯಕಸಾನಿಯರು ಹಿಂದುಸ್ತಾನೀ ಸಂಗೀತದ ಎಲ್ಲ ಪ್ರಕಾರದ ಪ್ರಸ್ತುತಿಯಲ್ಲಿಯೂ ಪ್ರಾವೀಣ್ಯ ಪಡೆದಿದ್ದರೂ, ಅವರ ಪ್ರತಿಭೆ ವಿಶೇಷವಾಗಿ ಠುಮರಿ ಪ್ರಕಾರದಲ್ಲಿ ಕಾಣಿಸುತ್ತದೆ. ಠುಮರಿ (ಠುಮಕತೇ ಚಲನಾ) ಕಥಕ್ ನೃತ್ಯದೊಂದಿಗೆ ಹಾಸು ಹೊಕ್ಕಿರುವ ಪ್ರಕಾರ. ಇದರಲ್ಲಿ ಪೂರಬ್ ಅಂಗ್ ಠುಮರಿ ಅಂದರೆ ಬನಾರಸದ ಠುಮರಿ (ಲಖನೌ ಶಹರದ ಪೂರ್ವಕ್ಕೆ ಬನಾರಸ್ ಇದೆ) ತುಂಬಾ ಪ್ರಸಿದ್ಧಿ ಪಡೆದಿದೆ. ಈ ಸರಣಿಯಲ್ಲಿ ಈ ತನಕ ಬಂದ ಎಲ್ಲಾ ನಾಯಕಸಾನಿಯರು 'ಪೂರಬ್ ಅಂಗಕೀ ಠುಮರೀ'ಯನ್ನೇ ಹಾಡುತ್ತಿದ್ದರು. ಇದಕ್ಕೆ ಅಪವಾದ ಗೋಹರ್ ಮತ್ತು ಬೇಗಮ್

ಅಖ್ತರ್. ಇವರ ಹಾಡುಗಾರಿಕೆ ಲಖನೌ ಪ್ರಕಾರದ ಬಂದಿಶ್‌ಕೀ ಠುಮರಿ ಮತ್ತು ಗಜಲ್ ಪ್ರಕಾರದವು. ಪಂಜಾಬ್ ಪ್ರಕಾರದ ಠುಮರಿ ಕೇವಲ ಗಂಡಸರೇ –ಅಂದರೆ ಬಡೆ ಗುಲಾಮ ಅಲಿ, ಬರಕತ ಅಲಿ, ಅಜಯ್ ಚಕ್ರವರ್ತಿಇವರೇ –ಹಾಡುತ್ತಿದ್ದರು. ಇದಕ್ಕೆ ಮತ್ತೊಂದು ಅಪವಾದವೆಂದರೆ ಶೋಭಾ ಗುರ್ಟು ಮತ್ತು ನಿರ್ಮಲಾದೇವಿ.

ಈ ಪೂರಬ ಠುಮರಿಯನ್ನು ಪ್ರಸಿದ್ಧಿಗೆ ತಂದದ್ದು ಸಿದ್ಧೇಶ್ವರೀ ದೇವಿಯೇ. ಅನೇಕ ಜಲಸಾಗಳಲ್ಲಿ ಭಾಗವಹಿಸಿ, ನೂರಕ್ಕಿಂತ ಹೆಚ್ಚು ಮುದ್ರಿತ ತಟ್ಟೆಗಳನ್ನು ಮಾಡಿ 1976ರತನಕ ಆಕೆ ಸಂಗೀತದಲ್ಲಿಯೇ ಸಕ್ರಿಯವಾಗಿದ್ದರು. ಇವರಿಗೆ ಒಬ್ಬಳೇ ಮಗಳು ಸವಿತಾದೇವಿ. ರಾಜಕೀಯ ಆಶ್ರಯಕ್ಕಾಗಿ ಈಕೆ ದೆಹಲಿಗೆ ಬಂದರು. ಇದರ ಪರಿಣಾಮವಾಗಿ ಕೊನೆಯ ಹತ್ತು ವರ್ಷಗಳಲ್ಲಿ ಯಾವ ಗಾಯಕಿಗೂ ಸಿಗದ ಅನೇಕ ಲಾಭಗಳು ಸಿದ್ಧೇಶ್ವರಿ ದೇವಿಗೆ ಸಿಕ್ಕವು. ಮೃತ್ಯುವಿನ ನಂತರ ಮಣಿಕೌಲ ಇವರ ಜೀವನದ ಮೇಲೆ ಒಂದು ಸಾಕ್ಷ್ಯಚಿತ್ರ ಮಾಡಿದ್ದಾರೆ. ಅದಕ್ಕೆ ಬಹುಮಾನವೂ ಸಿಕ್ಕಿದೆ. ಸಿದ್ದೇಶ್ವರಿಯವರಿಗೆ ಪದ್ಮಶ್ರೀಯೂ ದೊರೆತಿದೆ. ದೆಹಲಿ ಸರಕಾರದಿಂದ ವಾಸ್ತವ್ಯಕ್ಕಾಗಿ ಒಂದು ವಿಶಾಲ ಮನೆ ಹಾಗೂ ಇತರ ಸೌಲಭ್ಯಗಳು ಸವಿತಾದೇವಿಗೂ ದೊರೆತವು.

ಮುಂಬಯಿಯ ಬ್ರಿಜ್ ನಾರಾಯಣರು ಒಳ್ಳೆಯ ಸಂಘಟಕರು. ಸ್ವಾಮಿ ಹರಿದಾಸ ಸಮ್ಮೇಳನಕ್ಕೆ ಸಿದ್ಧೇಶ್ವರೀ ದೇವಿಯವರನ್ನು ಕರೆಸಿದ್ದರು (1968). ರಾತ್ರಿ ಎರಡು ಗಂಟೆಗೆ ಹಾಡಲು ಕುಳಿತಾಗ ಧೋಬಿತಲಾವ್‌ನಲ್ಲಿದ್ದ ಆಗಿನ ರಂಗಭವನದಲ್ಲಿ ಮುಂಜಾನೆಯ ಲಲಿತ್ ರಾಗ ಪ್ರಾರಂಭಿಸಿದ್ದು ನನ್ನ ನೆನಪಿನಲ್ಲಿ ಇನ್ನೂ ಅಚ್ಚಳಿಯದೇ ನಿಂತಿದೆ. ಆ ರಾತ್ರಿಯ ನೀರವತೆಯಲ್ಲಿ ಕೋಕಿಲೆಯ 'ಕುಹೂ' ಇವರ ಶ್ರುತಿಯಲ್ಲಿಯೇ ಕೂಗಿದ್ದು ಬಳಿಕ ಜನಸ್ತೋಮ ಕೋಗಿಲೆಗೂ, ಸಿದ್ಧೇಶ್ವರೀ ದೇವಿಯುವರಿಗೂ ಕರತಾಡನದಿಂದ ಮೆಚ್ಚಿಗೆಯನ್ನು ಸಂತಸದಿಂದ ಸೂಚಿಸಿದ್ದು ಒಂದು ಮರೆಯಲಾರದ ನೆನಪು.

*****

3.10

ಗೌಹರ ಮಾಮಾಜಿವಾಲಾ ಊರ್ಫ್ ಗ್ಲೋರಿಯಸ್ ಗೋಹರ್ (1910– 1984)

ನನಗೆ ಈ ಮೂರನೇ ಗೌಹರಳ ಪರಿಚಯವಾದದ್ದು ಮುಂಬಯಿಯಲ್ಲಿಯೇ, ಪರಿಚಯ ಮಾಡಿಕೊಟ್ಟವರು 1930–40ರ ದಶಕದಲ್ಲಿ ಚಲನಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ವಹಿಸುತ್ತಿದ್ದ ಹಬೀಬ ಎಂಬವ. ಈತ ಕೊನೆಕೊನೆಗೆ 'ಮಾಬ್' ಸೀನುಗಳಿಗೆ ಎಕ್ಸ್ಟ್ರಾಸ್ ಸಪ್ಲೈ ಮಾಡುವ, ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದ. ಸಚಿನ್ ಪಿಳಗಾಂವ್ಕರ್ ಕೃಷ್ಣನ ಪಾತ್ರ ಮಾಡಿದ ಚಲನಚಿತ್ರದಲ್ಲಿ ಹಬೀಬ 'ಕಾಲಿಯಾ' ಆಗಿದ್ದ. ಅವನ ಮನೆ ನಮ್ಮ ಮನೆಯ ಎದುರು ಇದ್ದ ಚಿಖಲ್‌ವಾಡಿಯಲ್ಲಿ. ಭಾಟಿಯಾ ಆಸ್ಪತ್ರೆಯಿಂದ ಗ್ರಾಂಟ್ ರೋಡ್ ಸ್ಟೇಶನ್ನಿಗೆ ಹೋಗುವ ರಸ್ತೆ ಚಿಖಲವಾಡಿ. ಚಿಖಲವಾಡಿ ಚಾಳ್ ಅಂದರೆ 75–80 ಚೌರಸ ಘೂಟಿನ ಸಣ್ಣ ರೂಮುಗಳ ಚಾಳ, ಕಾಮನ್ ನಳ, ಕಾಮನ್ ಟಾಯ್ಲೆಟ್. ಒಂದಾನೊಂದು ಕಾಲದಲ್ಲಿ ಪೀಲಾ ಹೌಸ್* ಏರಿಯಾದಲ್ಲಿದ್ದ ಹಬೀಬ, ಒಂದೊಂದಾಗಿ ಮೆಟ್ಟಲು ಇಳಿಯುತ್ತ 1970ರ ಹೊತ್ತಿಗೆ ಚಿಖಲವಾಡಿಗೆ ಬಂದು ಮುಟ್ಟಿದ್ದ. ಆಕ್ಟಿಂಗ್‌ನಿಂದ ಪುರುಸೊತ್ತು ಇದ್ದಾಗ ನಮ್ಮ ಲೆಮಿಂಗ್ಟನ್ ರಸ್ತೆಯಲ್ಲಿಯೇ ಇದ್ದ ಸ್ವಸ್ತಿಕ ಸಿನೇಮಾ ಪಕ್ಕದಲ್ಲಿದ್ದ ಗೌಹರ ಮಾಮಾಜಿವಾಲಳ ಮನೆಗೆಲಸವನ್ನು ಮಾಡಿಕೊಂಡು ಇದ್ದ.

ನಾನಾಚೌಕದಲ್ಲಿ ಕೆನೆಡಿ ಬ್ರಿಡ್ಜ ಪ್ರಾರಂಭವಾಗುವಲ್ಲಿ ಇರಾಣಿ ಹೋಟೆಲ್ 'ನ್ಯೂ ಇರೋಸ್' ಇದೆ. ಅಲ್ಲಿ 'ಡಬಲ್ ಪಾನಿಕಮ್' ಅಂದರೇನೇ ಧಾರವಾಡ ಭಾಷೆಯಲ್ಲಿ 'ಕೇಟಿ' ಕುಡಿದು ಸಿಗರೇಟು ಹೊತ್ತಿಸಿ, ಗಂಟೆಗಟ್ಟಳೆ ಕುಳಿತು ಟೈಮ್ ಪಾಸ್ ಮಾಡುವ ಹಬೀಬ ಭೆಟ್ಟಿಯಾದದ್ದೂ ಅಲ್ಲಿಯೇ. ಗೋಹರ ಮಾಮಾಜಿಯ ಒಂದು ಹಾಡು, ಅಂದರೇನೇ ಈ ಮೂರನೇ ಗೌಹರಳ ಹಾಡು ಗುಣಗುಣಿಸುತ್ತಿದ್ದ ಹಬೀಬನಿಗೆ ಸಂಗೀತದ ಗಂಧ ಇದೆ ಎಂದು ನಾನೂ ಎಂದೂ ಎಣಿಸಿರಲಿಲ್ಲ.

'ಅಚ್ಛಾ ಗಾತೇ ಹೋ ಕಾಲಿಯಾ' ನಾನೂ ಗೋಲ್ಡಫ್ಲೇಕ್ ಹೊತ್ತಿಸುತ್ತ ಹೇಳಿದೆ. ಚಿಖಲ್‌ವಾಡಿಯ ಈತ ವಾನರಸೇನೆಯಲ್ಲಿ ಕಾಲಿಯಾ ಎಂದೇ ಪರಿಚಿತ. ಕಾಲಿಯಾನನ್ನು ಸಿನೇಮಾದಲ್ಲಿ ನೋಡುವ ಸಲುವಾಗಿಯೇ ನನ್ನ ಮಗ–ಮಗಳು ಹಠವಾಡಿ ನಮ್ಮನ್ನೆಲ್ಲಾ ಗಂಗಾ–ಜಮುನಾ ಟಾಕೀಸಿಗೆ ಎಳೆದಕೊಂಡು ಹೋಗಿದ್ದರು.

'ಹಮ್ ಕಭೀ ಏಕ ಜಮಾನೇ ಮೇ ಬಾಜಾ ಭೀ ಬಜಾಲೇತೇ ಥೇ' ಹಬೀಬ ನನಗೆ ಮತ್ತೊಂದು ಶಾಕ್ ಕೊಟ್ಟ.

ಮುಂದುವರಿಯುವ ಮೊದಲು, ಈ ಮೂರನೇ ಗೌಹರ ಯಾರು ಎಂಬ ನಿಮ್ಮ ಪ್ರಶ್ನೆಗೆ ಈ ಉತ್ತರ: ಗೊಹರ ಜಾನ್ ಆಫ್ ಕಲಕತ್ತಾ - 'ಮೈ ನೇಮ್ ಈಸ್ ಗೋಹರಜಾನ್' ಎಂದು ಖ್ಯಾತಿ ಪಡೆದವಳು ಮೊದಲನೆಯವಳಾದರೆ, ಗೋಹರ-ಗಂಧರ್ವ ಎರಡನೆಯವಳು. ಗೋಹರ ಮಾಮಾಜಿ ವಾಲ, ಗುಜರಾತಿ ಬೊಹರಾ ಮುಸ್ಲಿಂ ಸಮಾಜಕ್ಕೆ ಸೇರಿದ ಮಹಿಳೆ. ತಾಯಿ ತವಾಯಿಫ್, ಆದರೆ, ಗೋಹರ್ ತನ್ನ ವಂಶಾವಳಿಯನ್ನು ಮರೆಮಾಚಿ, ಮೂಕೀ ಟಾಕೀ, ಸುಮಾರು 53 ಚಲನಚಿತ್ರಗಳಲ್ಲಿ ಅಭಿನಯಿಸಿ, ಹಾಡಿ, ಕುಣಿದು ಹೆಸರುಮಾಡಿದ ಸ್ಟಾರ್.

ಹಬೀಬ್ ಗುಣಗಣಿಸುತ್ತಿದ್ದ ಹಾಡಿನ ಮುಖಡಾ ಅತ್ಯಂತ ಮನಸೆಳೆಯುವಂತೆ ಇತ್ತು. ಭೈರವೀ ರಾಗದಲ್ಲಿ ಕಟ್ಟಿದ್ದು. ನಾನು 'ಭೈರವಿ' ಎಂದ ಕೂಡಲೇ ಹಬೀಬ್ ಕೂತಲ್ಲೇ ನೆಟ್ಟಗಾದ.

'ಆಪ್ ಭೀ ಶೌಕ್ ಫರ್ಮಾತೇ ಹೈಂ!' ಹಬೀಬ ಖುಷಿಯಿಂದ ಹೇಳಿದ. ಮುಂದೆ ಹಬೀಬ ಹೇಳಿದ್ದು ಹೀಗೆ. ಇದರ ಮುಖಡಾ 'ಕೋಯೀ ಕಿಸೀಕಾ ನಹೀಂ..'. 1933ರ ಸಿನೇಮಾ 'ಮಿಸ್ 1933'ದಲ್ಲಿ ಗೋಹರ್ ಮಾಮಾಜಿ ಹಾಡಿದ್ದು. ಆ ಕಾಲದಲ್ಲಿ ಮುಂಬಯಿ ಶಹರದಲ್ಲಿಯೇ ನೆಲೆಸಿದ್ದ ಝುಂಡೇಖಾನ್ ಎಂಬ ಗವಯಿಗಳ ಸಂಗೀತ ದಿಗ್ದರ್ಶನದಲ್ಲಿ ಗೋಹರ್ ಹಾಡಿದ್ದರು. ಹಬೀಬನಿಂದ ಕೂತಲ್ಲಿಯೇ ಈ ಹಾಡು ಕೇಳಿದೆ. ಕೊನೆಗೆ 'ಮೀರಾ ಕಹೇಂ' ಅಂದರೆ ಸಂತ ಮೀರಾಬಾಯಿ ರಚಿತ ಪದ್ಯ, ದೇವರ ನಾಮ!

ಮಾರನೇ ದಿನ ಸಾಧಾರಣ ಮುಂಜಾನೆ 11 ಗಂಟೆಗೆ ಮರಳಿ ನಮ್ಮ ಭೆಟ್ಟಿ, ಕೇಟಿ ಮತ್ತು ಸಿಗರೇಟ್ ಸೇವನೆ, ಮತ್ತೊಂದು ಹಾಡು, 'ಮತಕರೋ ಕಿಸೀಕೋ ಪ್ಯಾರ್'. ಇದೂ ಗೋಹರ ಹಾಡಿದ್ದೇ.

ಇದೆಲ್ಲಾ ಆದದ್ದು 1979-80ರಲ್ಲಿ. ಗೋಹರ ಮಾಮಾಜಿವಾಲಾರನ್ನು ಭೆಟ್ಟಿಮಾಡಬೇಕೆಂಬ ನನ್ನ ಉತ್ಸುಕತೆ ಇನ್ನೂ ಹೆಚ್ಚುತ್ತಿತ್ತು. ಹಬೀಬನು 1980ರ ನವೆಂಬರ್‌ನಲ್ಲಿ ಒಂದು ದಿನ ನನ್ನನ್ನು ಕೆನೆಡಿ ಬ್ರಿಡ್ಜ ಮಾರ್ಗದಿಂದ ಎಡಕ್ಕೆ ತಿರುವಿ ಡ್ರಿಮ್‌ಲ್ಯಾಂಡ್ ಬಿಲ್ಡಿಂಗ್‌ನ ನಾಲ್ಕನೇ ಅಂತಸ್ತಿಗೆ ಮುಟ್ಟಿಸಿದ. ಇದೇ ಗೋಹರ್ ಮಾಮಾಜಿವಾಲಾಳ ಮನೆಯಾಗಿತ್ತು.

ಪ್ರಶಸ್ತ ದಿವಾನಖಾನೆ. ಒಳ್ಳೆಯ ದಿನಗಳನ್ನೂ ಕಂಡ ರತ್ನಗಂಬಳಿ ನೆಲದ ಮೇಲೆ ಹಾಸಿತ್ತು. ಎರಡು ಗ್ಲಾಸಿನ ಕಪಾಟು ತುಂಬ ಪುಸ್ತಕಗಳು. ಅದಕ್ಕೆ ತಾಗಿ ಇಟ್ಟಿದ್ದ ಇನ್ನೊಂದರಲ್ಲಿ ದೇಶ-ವಿದೇಶಗಳ ಪ್ರತಿನಿಧಿತ್ವ ಪಡೆದ ಕೆಲ ಆಟಿಕೆ ಸಾಮಾನುಗಳು, ಚಿಕ್ಕಪುಟ್ಟ ಬುದ್ಧ, ಗಣೇಶ ಇತ್ಯಾದಿ. 'ಇವಳು ಮೂಕೀ-ಟಾಕೀ ಸ್ಟಾರೋ ಅಥವಾ ವಿಲ್ಸನ್ ಕಾಲೇಜ್ ಲೆಕ್ಚರರೋ' ಎಂದುಕೊಳ್ಳುತ್ತಾ ಪುಸ್ತಕಗಳ ಮೇಲೆ ಕಣ್ಣುಹಾಯಿಸಿದೆ.

ಜಾನ್ ಗುಂಥರ್ ಅವರ ಇನ್ ಸೈಡ್ ಸೀರೀಸ್! ರೀಡರ್ಸ ಡೈಜೆಸ್ಟ್ ಅವರ ಸ್ಪೆಶಲ್ ಪ್ರಕಟನೆಗಳು!

'ಐ ಅಸ್ಯೂಮ್, ಯು ಲೈಕ್ ಬುಕ್ಸ್' ಏನೂ ಕುಂದಿಲ್ಲದ ಇಂಗ್ಲಿಷು ಉಚ್ಚಾರದಿಂದ ನಾನು ಬೆಚ್ಚಿಬಿದ್ದೆ. ನನ್ನ ಜೊತೆ ಬಂದ ಹಬೀಬ ಒಳಗೆಲ್ಲೋ ಮಾಯವಾಗಿದ್ದ.

ಅವಳೇ ಗ್ಲೋರಿಯಸ್ ಗೋಹರ್ ಎಂದು ಬೇರೆ ಯಾರೂ ಹೇಳಬೇಕಾಗಿರಲಿಲ್ಲ. ಸ್ವಲ್ಪ ಸ್ಥೂಲ ಮೈಕಟ್ಟು, ನನಗಿಂತ ಮೂರು ಇಂಚು ಕಡಿಮೆ ಎತ್ತರ. ಆತ್ಮವಿಶ್ವಾಸ ತುಂಬಿದ ಮುಖ, ನೆಟ್ಟಗಿನ ನಡಿಗೆ. ಸಾಧಾರಣ ಎಪ್ಪತ್ತರ ಪ್ರಾಯ. ಅತ್ಯಂತ ತೇಜಃಪುಂಜ ಕಣ್ಣುಗಳು.

ನಾನು 'ಸಾರಿ', ಎಂದು ಒಂದು ಹೆಜ್ಜೆ ಹಿಂದೆ ಸರಿದಾಗ, 'ಏನೂ ಕಷ್ಟ ಇಲ್ಲ, ಫೀಲ್ ಫ್ರೀ, ಕೂತುಕೊಳ್ಳಿ' ಎಂದು ಮುಗುಳು ನಗುತ್ತ ಕೈ ಚಾಚಿದ ಕೂಡಲೇ ನನಗೆ ಹಾಯೆನ್ನಿಸಿತ್ತು. ನಮ್ಮ ಮುಂದಿನ ಸಂಭಾಷಣೆ ಇಂಗ್ಲಿಷಿನಲ್ಲಿ ನಡೆಯಿತು. ಬಹುಶಃ ಇಂಗ್ಲಿಷಿನಲ್ಲಿ ನಾನು ಮಾಡಿದ ಮೊಟ್ಟಮೊದಲ ಸಂದರ್ಶನವಿರಬೇಕು.

ಗೋಹರ್ ಗುಜರಾತಿ ಮನೆಮಾತಿನವಳಾದರೂ ಹುಟ್ಟಿದ್ದು ಲಾಹೋರಿನಲ್ಲಿ. ತಾಯಿಯ ಬಗ್ಗೆ ಪ್ರಶ್ನೆ ಕೇಳಿದರೆ, ತಳ್ಳಿಹಾಕುತ್ತಾಳೆ. ತಂದೆ ಕಾಯ್ಯುಮ್, ಪಬ್ಲಿಕ್ ಕಂಟ್ರಾಕ್ಟರ್. ಗೋಹರ್ ಕಲಿತದ್ದು ಕಾನ್ವೆಂಟಿನಲ್ಲಿ. ಮ್ಯಾಟ್ರಿಕ್ ಪರೀಕ್ಷೆಯ ಹೊತ್ತಿಗೆ ತಂದೆ ಉದ್ಯೋಗದಲ್ಲಿ ತುಂಬಾ ನಷ್ಟ ಅನುಭವಿಸಿದ್ದರಿಂದ ಪರೀಕ್ಷೆಯಾದ ಕೂಡಲೇ ಮಾಮಾಜಿವಾಲಾ ಕುಟುಂಬ ಮುಂಬಯಿಗೆ ಬಂತು. ಮ್ಯಾಟ್ರಿಕ್ ಪಾಸಾದ ಕೂಡಲೇ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಗೋಹರ್ ಚಿತ್ರಸೃಷ್ಟಿ ಪ್ರವೇಶಿಸಿದಳು. ಆಗ ಆಕೆಗೆ ಹದಿನಾರರ ಹರೆಯ, ಅದೊಂದು ಮೂಕಿ ಚಿತ್ರ, ಹೆಸರು – ಫಾರ್ಚ್ಯೂನ್ ಆರ್ ಫೂಲ್ಸ್ ಯಾನೆ ಬಾಪ ಕಿ ಕಮಾಯಿ! ಕೊಹಿನೂರ್ ಪಿಕ್ಚರ್ಸ್‌ರವರ ನಿರ್ಮಿತಿ. ತಿಂಗಳಿಗೆ ಮುನ್ನೂರು ರೂಪಾಯಿ ಸಂಬಳ!

"ನನಗೆ 'ಲಂಕಾ ನಿ ಲಾಡಿ ಅಥವಾ ಬ್ರೈಡ್ ಫ್ರಮ್ ಸಿಲೋನ್' ತುಂಬಾ ಪ್ರಸಿದ್ಧಿ ಕೊಟ್ಟಿತು. ಆ ಕಾಲದಲ್ಲಿ ಪ್ರತಿ ಚಲನಚಿತ್ರಕ್ಕೆ ಇಂಗ್ಲಿಷು ಮತ್ತು ಹಿಂದುಸ್ತಾನಿ ಹೆಸರು..."

"ಉರ್ದು" ನಾನು ಅವರ ಹೇಳಿಕೆ ಸರಿಪಡಿಸಲು ಒಂದು ಶಬ್ದ ಸೇರಿಸಿದೆ.

"ನೋ, ನೋ, ಇಟ್ ವಾಸ್ ಹಿಂದೂಸ್ಥಾನೀ" ಗೋಹರ ಸ್ವಲ್ಪ ಗಂಭೀರಳಾಗಿಯೇ, ಕಹಿಯಾಗಿಯೇ ಎಡಗೈಯಿಂದ ನನಗೆ 'ಚುಪ್' ಮಾಡಿ ಮುಂದುವರಿಸಿದಳು ಸಂಭಾಷಣೆಯನ್ನು.

"ನಮ್ಮ ಸಂಸ್ಕೃತಮಯ ಹಿಂದಿ ಪ್ರಾರಂಭವಾದದ್ದು ಸ್ವಾತಂತ್ರ್ಯದ ನಂತರ. ಪುರುಷೋತ್ತಮದಾಸ ಟಂಡನ್, ಮದನ ಮೋಹನ ಮಾಲವೀಯರಿಂದ. ಸಿನೇಮಾದಲ್ಲಿ, ಮೂಕೀ, ಟಾಕಿ ಚಿತ್ರಪಟಗಳ ಡಾಯಲಾಗ್ಸ್ ಎಲ್ಲ ಹಿಂದೂಸ್ಥಾನಿಯಲ್ಲಿಯೇ ಇರ್ತಿತ್ತು.

'ಕಿಂತು', 'ಅತ ಏವ' ಇವೆಲ್ಲ ಸೇರಿಸಿದ್ದು ನಂತರ" ಅವಳ ಮಾತು ಮಾತಿಗೆ ವ್ಯಂಗ್ಯದ ಮೊನಚು, ಅವಳ ಮಾತಿನ ಕೊಂಕು ಕೊಂಕಣಿಗನಾದ ನನಗೆ ಅರ್ಥವಾಗುತ್ತಿತ್ತು.

"ಏನು ನ್ಯಾಷನೆಲ್ ಇಂಟಗ್ರೇಶನ್ ಇತ್ತು ನೋಡಿ ಆಕಾಲದಲ್ಲಿ! ಮೋಹನಲಾಲ ದವೆ, ಗುಜರಾತಿ, ಅವನದೇ ಕತೆ. ಅವನೋ ಆ ಕಾಲದ ಸಲೀಮ-ಜಾವೇದ ಇದ್ದ ಹಾಗೆ. ಡೈರೆಕ್ಟರ್, ಪಾರ್ಸಿ, ಹೋಮಿ ಮಾಸ್ತರ್. ಅವರೇ ನನ್ನ ಅಪ್ಪನ ಫ್ರೆಂಡ್. ಆದರೆ ಹೀರೋ, ಹೀರೋಯಿನ್ ಸೆಲೆಕ್ಷನ್ ಮಾಡೋದು ಮೋಹನಲಾಲನೇ. ಅದೇ ದವೆ! ನನ್ನ ಆಯ್ಕೆ ಆತ ವಿರೋಧಿಸಿದ್ದು, ಗರಗರಾ ಕಣ್ಣು ತಿರುಗಿಸಿ ನನ್ನ ಕಡೆ ಸಿಟ್ಟಿನಿಂದ ನೋಡಿದ್ದರಿಂದಲೋ ಏನೋ, ನನ್ನ ಟ್ರಯಲ್ ಹೊತ್ತಿಗೆ ನಾನು ಗಳಗಳಾ ಅತ್ತುಬಿಟ್ಟೆ!. ನನ್ನ ರೋಲ್ ಕೂಡಾ ತುಂಬಾ ಅಳೋದೇ. ದವೆ ನನ್ನ ಸೆಲೆಕ್ಟ್ ಮಾಡಿಬಿಟ್ಟ! ಒಂದೇ ಟೇಕಿಗೆ."

"ಗೋಹರಜಿ, ನಾನು ನಮ್ಮ ಒಂದು ಭೈರವಿ ಮತ್ತು 'ಕೋಯಿ ಕಿಸೀಕಾ ನಹೀಂ'ಯನ್ನು ನಮ್ಮ ಹಬೀಬ ಹಾಡಿದ್ದನ್ನು ಕೇಳಿದ್ದೇನೆ. ನಮ್ಮ ಹತ್ತಿರ ರಿಕಾರ್ಡ್ಸ್ ಇವೆಯೋ?"

ಗೋಹರ ಮುಗುಳು ನಗುತ್ತಾ ,'ಹಬೀಬ ಹಾಡಿದ್ದು ಕೇಳಿದಿರಾ? ಈಗ ನಾನು ಹಾಡೋದು ಕೇಳಿ.. ಹಬೀಬಃ" ಎಂದು ಅಕ್ಷರಶಃ ಕೂಗಿದ್ದಕ್ಕೆ ಹಬೀಬ ಪ್ರತ್ಯಕ್ಷನಾದ.

ನಮ್ಮ ಮಾತುಕತೆ ಕೇಳುತ್ತಾ ನಿಂತಿದ್ದನೋ ಏನೋ. ಬಂದವನೇ ಗ್ರಾಮಾಫೋನ ಬಳಿ ಹೋಗಿ ಪಿನ್ನು ಬದಲಾಯಿಸಿ, ಹ್ಯಾಂಡಲ್ ಹೊಡೆದು ಮೊದಲು 'ಕೋಯಿ ಕಿಸೀಕಾ' ಹಚ್ಚಿದ. ಬಳಿಕ ಧ್ವನಿ ಕಡಿಮೆ ಮಾಡಲು ಮಶೀನಿನ ಖಾಲಿ ಜಾಗದಲ್ಲಿ ಒಂದು ಟಾವೆಲ್ ಮಡಿಚಿ ಒಳಗಿಟ್ಟ. ಆಮೇಲೆ ಹಚ್ಚಿದ್ದು ಭೈರವಿ. ನಾವಿಬ್ಬರೂ ಶಾಂತಚಿತ್ತದಿಂದ ಹಬೀಬ ತಂದ ಚಹ ಸೇವಿಸುತ್ತ ರಿಕಾರ್ಡು ಕೇಳುತ್ತ ಕುಳಿತೆವು. ಎಲ್ಲವೂ ಸ್ತಬ್ಧ. ನೀರವತೆ ಆವರಿಸಿತ್ತು.

"ನಿಮ್ಮ 'ಟಪ್ಪಾ ತಾನು' ತುಂಬಾ ಚೆನ್ನಾಗಿದೆ. ನಿಮಗೆ ಕಲಿಸಿದ್ದು ಯಾರು?"

"ಲಾಹೋರದಲ್ಲಿ ಆಶಿಕ್ ಅಲಿ. ನನ್ನ ತಾಯಿಗೆ ಕಲಿಸುವಾಗಲೇ ನಾನು ಕಲಿತದ್ದು. ಉಸ್ತಾದ್ ತುಂಬಾ ಲಹರಿ ಮನುಷ್ಯ. ಅಫು ತಿಂದು ಒಂದೊಂದು ಸಲ ಗಂಟೆಗಟ್ಟಲೆ ಕಲಿಸ್ತಿದ್ದ. ಆದರೆ ಇಲ್ಲಿ ನಮ್ಮ ಉಸ್ತಾದ್ ಝುಂಡೇ ಖಾನ್ ನನ್ನಿಂದ ಚೆನ್ನಾಗಿ ಪ್ರಾಕ್ಟೀಸ್ ಮಾಡಿಸಿದ್ರು. ಇದು 'ಮಿಸ್ 1933' ಪಿಕ್ಚರಿನ ಹಾಡು. ನನಗೆ 16 ಹಾಡುಗಳಿದ್ದವು. ನನ್ನ ಸೈಲೆಂಟ್ ಫಿಲ್ಮ್, ಟಾಕಿ ಫಿಲ್ಮ್ ಎಲ್ಲಾ ಸ್ಟುಡಿಯೋದಲ್ಲಿ ಸುಟ್ಟು ಬೂದಿ ಆಯ್ತು. ನನ್ನ ಬಳಿ ನಾಲ್ಕೇ ರಿಕಾರ್ಡು ಇವೆ ಅಷ್ಟೆ. ಮೂವ್ಹಿ ಒಂದೂ ಇಲ್ಲ" ಸ್ವಲ್ಪ ಅಸಮಾಧಾನದಿಂದಲೇ ಗೋಹರ ಹೇಳಿದ್ದು.

"ಝುಂಡೇ ಖಾನರ ಬಗ್ಗೆ ಸ್ವಲ್ಪ ಹೇಳ್ತೀರಾ?"

"ಝುಂಡೇಖಾನರು ಮಧ್ಯಭಾರತದ ಜಾವ್ಹರಾ ಸಂಸ್ಥಾನದವರು. ಮಧ್ಯಭಾರತ, ಮಹಾಕೋಶಲ, ಇವೆಲ್ಲ ನಮ್ಮ ಕಾಲದ ರಾಜ್ಯಗಳು. ಮಹಾಕೋಶಲದ ರಾಜಧಾನಿ

ನಾಗಪುರ್ ಆಗಿತ್ತು. ಈಗ ಅದು ಮಹಾರಾಷ್ಟ್ರದಲ್ಲಿದೆ. ದೇರ್ ಆಸ್ಪಿರೇಷನ್ ಫಾರ್ ಸೆಪರೇಟ್ ಸ್ಟೇಟ್ ಹ್ಯಾಸ್ ಟರ್ನ್‌ಡ್ ಇನ್‌ಟು ಫ್ರಸ್ಟ್ರೇಷನ್ಸ್. (ಮಧ್ಯಪ್ರದೇಶವಾದದ್ದು ನಂತರ. ಎಲ್ಲಾ ಸಂಸ್ಥಾನಗಳನ್ನು ಸೇರಿಸಿ ಮಾಡಿದ್ದು". ಗೋಹರ ಮಾಮಾಜಿ ನನಗೆ ಭೂಗೋಲದ 'ಜ್ಞಾನ'ವನ್ನು ದಯಪಾಲಿಸಿದಳು.

"ಝುಂಡೇಖಾನರು ಧ್ರುಪದ್ ಬಹಳ ಚೆನ್ನಾಗಿ ಹಾಡುತಿದ್ದರು. ವಯಲಿನ್, ಸಿತಾರ್, ತಬಲಾ ಕೂಡ ಬಾರಿಸುತ್ತಿದ್ದರು. ಕೊಹಿನೂರು ಕಂಪನಿಯಲ್ಲಿ ಬಳಿಕ ನಮ್ಮ ಅಂದರೆ ಚಂದೂಲಾಲ ಶಾಹ ಮತ್ತು ನಾನು ಸ್ಥಾಪಿಸಿದ ರಣಜಿತ ಮೂವಿಟೋನದಲ್ಲಿಯೂ ಮ್ಯೂಸಿಕ್ ಡೈರೆಕ್ಟರ್ ಎಂದು ಅನೇಕ ಚಲನಚಿತ್ರಗಳಿಗೆ ಸಂಗೀತವನ್ನು ಕೊಟ್ಟಿದ್ದಾರೆ. ಕೆಲವು ಸಲ ನಮ್ಮ ಪಕ್ಕದಲ್ಲಿದ್ದ ದೇವಧರ ಕ್ಲಾಸಿಗೂ ಹೋಗ್ತಿದ್ರು. ದೇವಧರ ಸಾಹೇಬರೂ ಕೂಡ ಮ್ಯೂಸಿಕ್ ಕೊಟ್ಟಿದ್ದಾರೆ".

ನನ್ನ ಚಲನಚಿತ್ರಗಳ ಮಾಹಿತಿ ಅಷ್ಟಕ್ಕಷ್ಟೆ. ಮಾಸ್ಟರ್ ಕೃಷ್ಣರಾವ್, ಶಂಕರರಾವ ವ್ಯಾಸ್ ಈ ಗವಯಿಗಳೂ ಅವರಿಂದಲೂ ಸ್ಫೂರ್ತಿಪಡೆದಿರಬೇಕು ಎಂದುಕೊಂಡೆ ನಾನು.

"ಯು ಆರ್ ಲಾಸ್ಟ್ ಸಮ್‌ವೇರ್, ಎ ಪೆನ್ನಿ ಫಾರ್ ಯುವರ್ ಥಾಟ್ಸ್' ಎಂದಳು ಮುಗುಳು ನಗುತ್ತಾ ಗ್ಲೋರಿಯಸ್ ಗೋಹರ್.

"ನನ್ನ ಕಾಲದಲ್ಲಿ ಹಾಡುವ ನಟಿಯರು ಕಡಿಮೆಯೇ! ಸುಲೋಚನಾ ನನ್ನ ಆಪ್ತ ಗೆಳತಿ. ರೂಬಿ ಮೇಯರ್ಸ್ ಅವಳ ಹೆಸರು. ಮಾಧುರಿ ಕೂಡ ಆಂಗ್ಲೋ–ಇಂಡಿಯನ್. ಬೆರಿ ಕ್ಲೈಸೆನ್ 'ಕುಕ್ಕೂ' (ಕಕ್ಕೂ ಡ್ಯಾನ್ಸರ್ ಎಂದೇ ನಮಗೆ ಗೊತ್ತು). ಅವಳೂ ಇಂಗ್ಲಿಷ್ ಮಾತಾಡುವವಳೇ. ಜೆನ್ನಿಫರ್ ಮರ್ರೆ 'ಪರ್‌ವರಿಶ್'ದಲ್ಲಿ ಡ್ಯಾನ್ಸ್ ಮಾಡಿದ್ದಾಳೆ. ನೋಡಿ, ಹನಿ ಓಬ್ರಾಯಿನ್, ಪೇಶನ್ಸ್ ಕೂಪರ್..."

ಪಟಾಪಟಾ ಒಂದೇ ಸಮನೆ ಅವಳ ಸಮಕಾಲೀನ ನಟಿಯರನ್ನು ನೆನಪಿಸುತ್ತಾ ಹೋದಳು ಗೋಹರ್.

ಮೂಕೀ ಚಿತ್ರಗಳಿಗೆ ಧ್ವನಿ ಬಂದ ನಂತರ ಸಾವಿರಾರು ರೂಪಾಯಿ ತಿಂಗಳಿಗೆ ಸಂಬಳ, ಆ ಕಾಲದಲ್ಲಿ ಗಳಿಸುತ್ತಿದ್ದ ಆಂಗ್ಲೋ ಇಂಡಿಯನ್ ತಾರೆಗಳು ಒಂದೊಂದಾಗಿ ಉಲ್ಕೆಗಳಂತೆ ಉರುಳಿದವು. ಹಾಡುವ ನಟಿಯರಿಗೆ ಚಾಲ್ತಿ ಸುರುವಾಯಿತು. ಅಮೀರಬಾಯಿ, ಪಾರುಲ ಘೋಷ, ಅಖ್ತರಿಬಾಯಿ ಬೇಗಮ್, ಜದ್ದನ್, ಗೋಹರ ಕರ್ನಾಟಕಿ, ಇನ್ನೂ ಎಷ್ಟೋ. ನಮ್ಮ ಈ ಲೇಖದ ಹೀರೋಯಿನ್ ಕೂಡ ಚಂದೂಲಾಲ್ ಶಾಹ್‌ಹರೊಂದಿಗೆ 1940ರ ತನಕ ಮುಖ್ಯ ಪಾತ್ರದಲ್ಲಿ ನಟಿಸಿ ಬಳಿಕ ಚಂದೂಲಾಲ ಶಾಹರೊಂದಿಗೆ 'ಬಿಸಿನೆಸ್' ಹಾಗೂ 'ಲೈಫ್ ಪಾರ್ಟನರ್' ಆಗಿಬಿಟ್ಟಳು. ಚಂದೂಲಾಲ್ ಶಾಹ್ ತನ್ನ ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಬಿಟ್ಟು ಗೋಹರಳೊಂದಿಗೆ ಇದೇ ಮನೆಯಲ್ಲಿ ಸಂಸಾರ ಹೂಡಿದ್ದನಂತೆ. 1965ರ ತನಕ ಹೇಗೋ ಏನೋ ಮುಳುಗುತ್ತಿದ್ದ ರಣಜಿತ್ ಸ್ಟುಡಿಯೋ (ಇದು ದಾದರ ಪಶ್ಚಿಮದ ದಾದಾ ಫಾಳ್ಕೆ ರಸ್ತೆಯಲ್ಲಿ ಸ್ಟೇಶನ್ನಿನಿಂದ

ಕೆಲವೇ ಮಾರು ದೂರದಲ್ಲಿತ್ತು, 1996 ತನಕ) ಸಂಭಾಳಿಸುತ್ತ ಕಾಲವಶನಾದ. ಗೋಹರ ಈ ಸಂದರ್ಶನದ ನಾಲ್ಕು ವರ್ಷಗಳ ನಂತರ ತೀರಿಕೊಂಡಳು (1984).

ನಮ್ಮ ವಠಾರದ 'ಕಾಲಿಯ' ಊರ್ಫ 'ಹಬೀಬ' ನಮ್ಮ ಸಂದರ್ಶನದ ನಂತರ ಒಂದೆರಡು ಸಲ ಇರಾಣಿ ಹೋಟೆಲ್ ನ್ಯೂ ಇರೋಸ್‌ದಲ್ಲಿ ಸಿಕ್ಕಿದ್ದ. ಕೊನೆಗೆ ಮಾಯವಾದ ಅನೇಕ ಥಿಯೇಟರುಗಳಂತೆ. ಅವನ 'ಕಾಲಿಯಾ' ಪಿಕ್ಚರು ನೋಡಿದ ಗಂಗಾ-ಜಮುನಾ, ಪಕ್ಕದ ಡಯನಾ, ಗೋಹರಳ ಡ್ರೀಮಲ್ಯಾಂಡ್ ಬಿಲ್ಡಿಂಗ್ ಪಕ್ಕದ ಸ್ವಸ್ತಿಕ ಟಾಕೀಸ್ ಇವೆಲ್ಲ ಒಂದೊಂದಾಗಿ ಅಸ್ತಂಗತವಾದುದು ಮಿಲೆನಿಯುವ್ ವರ್ಷದಲ್ಲಿ(2000).

* ಪಿಲಾ ಹೌಸ - ಪ್ಲೇ ಹೌಸ್ ಶಬ್ದದ ಅಪಭ್ರಂಶ ಆವೃತ್ತಿ. 18, 19ನೇ ಶತಮಾನದಲ್ಲಿ ಇಂಗ್ಲಿಷು ಜನ ಮುಂಬಯಿಯಲ್ಲಿ ವಾಸ್ತವ್ಯಕ್ಕೆ ಬಂದ ನಂತರ ಎರಡು ಪ್ಲೇ ಹೌಸ್ 'ಆಮ್ನೆ ಸಾಮ್ನೆ' ಕಟ್ಟಿಸಿದ್ದರು. ಮೊದಲು ಕೇವಲ ವ್ಯಾವಸಾಯಿಕ ವೃತ್ತಿ ನಾಟಕ ಕಂಪನಿಗಳೂ ನಂತರ ಇಲ್ಲಿಯೇ ವಸಾಹತು ಹೂಡಿದ ಜನ ನಾಟಕಗಳನ್ನು ಆಡುತ್ತಿದ್ದರು. 19ನೇ ಶತಮಾನದ ಕೊನೆಯಲ್ಲಿ ಇಲ್ಲಿ ಮರಾಠೀ, ಗುಜರಾತಿ, ಹಿಂದೀ, ಬಂಗಾಲೀ ನಾಟಕಗಳೂ ಪ್ರದರ್ಶಿಸಲ್ಪಡುತ್ತಿದ್ದವು. ಬಾಲಗಂಧರ್ವರ ಎಲ್ಲ ನಾಟಕಗಳು, ಜಯಶಂಕರರ 'ಸುಂದರಿ'ಯವರ ಗುಜರಾತೀ ನಾಟಕಗಳೂ ಇಲ್ಲಿ ಆಡಲಾಗುತ್ತಿದ್ದವು. ಪಕ್ಕದಲ್ಲಿಯೇ ಮುಂಬಯಿ ಶಹರದ 'ಫಾರಸ್ ರೋಡ '!

*****

3.11

"ಯಾದೇ ಬೇಗಮ್ ಅಖ್ತರಕೀ" (1914–1974)

29.3.2015 ಕಲಾಭಾರತಿಯ ಕಾರ್ಯಕ್ರಮಕ್ಕೆ ಹೋಗಿದ್ದೆ. ಕಾರ್ಯಕ್ರಮ ಸರಿಯಾಗಿ 10–15ಕ್ಕೆ ಪ್ರಾರಂಭವಾಯಿತು. ನಾನು ಸಂಘಟಿಸಿದ 21 ವರ್ಷಗಳ ಕಲಾಭಾರತಿಯ ಸಂಗೀತ ಕಚೇರಿಗಳಲ್ಲಿ 'ಯಾದೇ ಬೇಗಮ್ ಅಖ್ತರಕೀ' ಕೈಬೆರಳುಗಳಲ್ಲಿ ಎಣಿಸುವಂತಹ ಉತ್ತಮ ಕಾರ್ಯಕ್ರಮಗಳಲ್ಲಿ ಒಂದು. ಏನೋ, ಬರೆಯಬೇಕೆಂದೆನಿಸಿತು. ಯಾವುದೇ ಒಂದು ಘಟನೆ ರಿಪೀಟೆಡ್ಲಿ ಕಿರಿಕಿರಿ ಮಾಡುತ್ತಾ ಇದ್ದಾಗ ನಾನು ಬರೆಯೋದು. ಈ ಕಿರಿಕಿರಿಗೆ ನಾನು 'ಮೆದುಳಿನ ಕೊರೆತ' ಎಂದು ಹೆಸರಿಟ್ಟಿದ್ದೇನೆ. ತುರ್ತಾಗಿ ಬರೆದು ಮುಗಿಸುವ ಪ್ರೆಶರ್ ಇಲ್ಲ. ಆ ದಿನದ 9 ಹಾಡುಗಳಲ್ಲಿ 4 ಹಾಡು ಕೇಳಿ ಮನೆಗೆ ವಾಪಸ್ಸಾದೆ. ಎರಡು ದಿನದ ಮೆದುಳಿನ ಕಿರಿಕಿರಿ ಸಹಿಸಿ ಬ್ರಾಡ್ ಔಟಲೈನ್ ಹಾಕದೇ ಬರೆಯಲು ಕುಳಿತೆ. ಮೆದುಳಿನ ಕೊರೆತ ಸ್ತಬ್ಧವಾಯಿತು.

ಮೊದಲು ಪ್ರಣತಿ ಮ್ಹಾತ್ರೆಯ ಬಗ್ಗೆ. ಬ್ಯಾಂಕಿನಲ್ಲಿ ಉಚ್ಚ ಪದವಿಗೇರಿದ ಪ್ರಣತಿ ಅಭ್ಯಾಸದಲ್ಲಿಯೂ ಸಂಗೀತದಲ್ಲಿಯೂ ಎಲ್ಲರಿಗಿಂತ ಮುಂದೆ. ಕಲಾಭಾರತಿ ಮತ್ತು ಪ್ರಣತಿಯ ಸ್ನೇಹಸಂಬಂಧ 15 ವರ್ಷದ್ದು. ನಮ್ಮಲ್ಲಿ ಅಷ್ಟನಾಯಿಕೆಯರ ಸಂಗೀತಮಯ ಕಾರ್ಯಕ್ರಮ ಹಾಗೂ ಕಬೀರನ ಒಂದು ವಿಶಿಷ್ಟ ಕಾರ್ಯಕ್ರಮ ಸ್ವಾತಂತ್ರ್ಯದ 50ನೇ ವರ್ಷದ ಅನುಷಂಗವಾಗಿ ಪ್ರಸ್ತುತಿಪಡಿಸಿದ್ದನ್ನೂ ಅವಳ ಮೊನ್ನೆಯ ಕಚೇರಿಯು ಹೌಸಫುಲ್ ಆದದ್ದನ್ನೂ ಇಲ್ಲಿ ಒತ್ತಿ ಹೇಳಲೇಬೇಕು. ಅವಳ ಕಾರ್ಯಕ್ರಮದ ಜೋಡಣೆ ಅತ್ಯಂತ ಓರಣವಾಗಿರುವುದರಿಂದ ನಮ್ಮ ನಿಮಂತ್ರಕರಿಗೆ ಸರಿಯಾದ ವೇಳೆಗೆ ಪ್ರಾರಂಭಿಸಲು ಅನುವಾಯಿತು. ಅಸ್ಖಲಿತ ಉರ್ದು ಉಚ್ಚಾರದ ನಾಡಕರ್ಣಿಯವರ ನಿವೇದನೆ, ಅಡ್ಡಿ ಆತಂಕ ಉಂಟಾಗದ ಸಾರಂಗೀ ಮತ್ತು ಪೇಟಿವಾದಕರ ವಾದನ ಮತ್ತು ಅತ್ಯಂತ ಸಮಂಜಸವಾದ ರೀತಿಯಲ್ಲಿ ನುಡಿಸಿದ ತಬಲಾ ಹಾಗೂ ಅತ್ಯಪರೂಪವಾದ ಅಂದರೆ ಬೇಗಮ್ ಅಖ್ತರ್ ಸದೃಶ ಪ್ರಣತಿಯ ಹಾಡುಗಾರಿಕೆ. ಇವೆಲ್ಲ ತುಂಬ ಸಂತೋಷವನ್ನು ನೀಡಿತು.

ಪ್ರಾರಂಭದಲ್ಲಿ ಪ್ರಣತಿ, ಅಖ್ತರಬಾಯಿಯ ಅತ್ಯಂತ ಪ್ರಸಿದ್ಧ ಗಝಲ್ 'ದೀವಾನಾ ಬನಾನಾ ಹೈ ತೋ ದಿವಾನಾ ಬನಾದೇ'ಯನ್ನು ಹಾಡಿ ಮುಂದಿನ ಕಾರ್ಯಕ್ರಮಕ್ಕೆ ನಾಂದಿ ಹಾಡಿದಳು. ಒಟ್ಟಾರೆ ಹಾಡಿದ 9 ಹಾಡುಗಳಲ್ಲಿ 4 ಗಝಲ್, 2 ದಾದರಾ

ಠುಮರಿ ಮತ್ತು ಮಿಶ್ರ ಕಾಫಿ, ಮಿಶ್ರ ಖಮಾಜ್ ಹಾಗೂ ಭೈರವಿಯಲ್ಲಿ ಕೊನೆಗೆ "ಚಲರೇ ಪರದೇಸಿಯಾ ನೈನಾ ಮಿಲಾಯಕೆ 'ಯಾದೇ ಬೇಗಮ್ ಅಖ್ತರಕೀ' ಕಾರ್ಯಕ್ರಮವನ್ನು ಮುಗಿಸಿದಳು. ಈ ಬೇಗಮ್ ಅಖ್ತರ್ ಅಥವಾ ಅಖ್ತರೀ ಬಾಯಿ ಫೈಜಾಬಾದಿ ಎಂಬ ಒಂದು ಸಂಗೀತದ ಬಿರುಗಾಳಿಯ ಶತಮಾನೋತ್ಸವದ ಅಂಗವಾಗಿ ಹಾಡಿದ ಮುಂಬಯಿಯ ಮೊಟ್ಟಮೊದಲಿನ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಸಾರಂಗಿ ನುಡಿಸುತ್ತಿದ್ದ ಫರೂಖ ಲತೀಫ್, ಪೇಟಿ ಬಾರಿಸುವ ಶರೀಫ್ ಖಾನ್ ಇಬ್ಬರೂ ಲಖನೌದ ಕೋಠಿಯಿಂದ ಬಂದವರಂತೆ!

ಸಮಂಜಸವಾಗಿ ಹಾಡುಗಳಿಗೆ ಪೂರಕವಾಗಿ ನುಡಿಸಿದರೆ ತಬಲಾದ ಮೇಲೆ ಕೈಯಾಡಿಸುವ ಅಸೀಫ್ ಇನಾಮ್ ಅಲಿ ಖಾನರು ಚಾರಮಿನಾರ್ ಹೈದರಾಬಾದ್ ಕೋಠಿಯ ತಬಲಾ ನವಾಝರಂತೆ ಅತ್ಯುತ್ತಮ ಸಾಥ್ ಕೊಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು. ಮಾಶಾ ಅಲ್ಲಾ!

ಇದು ಅಖ್ತರಿಬಾಯಿ ಫೈಜಾಬಾದಿಯು 'ಕೊನೆಯ' ತವಾಯಫ್‌ಳ ಶತಮಾನೋತ್ಸವ. ಇವಳ ತಾಯಿ ಕೂಡ ತವಾಯಫ್ ಅಂದರೆ ನಾಯಕಸಾನಿ. ತಂದೆ ಫೈಜಾಬಾದ ಕೋರ್ಟಿನ ನ್ಯಾಯಾಧೀಶರು. ಮುಶ್ತರೀ ಬಾಯಿಗೆ ಅಂದರೆ ಬೇಗಂ ಅಖ್ತರಳ ತಾಯಿಗೆ ಆನುವಂಶಿಕತೆಯಿಂದ ತವಾಯಫ್‌ಗಿರಿ ಪ್ರಾಪ್ತವಾಗಿತ್ತು. ಅಖ್ತರ್ ಹುಟ್ಟಿದ್ದು, ತಂದೆ 3 ಸಲ ತಾಯಿಯ ಕಿವಿಯಲ್ಲಿ 'ತಲಾಕ್, ತಲಾಕ್, ತಲಾಕ್' ಎಂದು ತನ್ನ ಹೆಂಡತಿಗೆ ಉಸುರಿದ ನಂತರವೇ. ಇವಳಿಗೊಬ್ಬ ಅವಳಿ ಭಗಿನಿ ಇದ್ದಳಂತೆ –ಅಖ್ತರೀ ಮತ್ತು ಅನ್ವರೀ. ಹುಟ್ಟಿದ ಕೆಲವೇ ತಿಂಗಳುಗಳಲ್ಲಿ ಅನ್ವರಿಯನ್ನು ಮಣ್ಣುಮಾಡಬೇಕಾಯಿತು. ಇವಳು ಹುಟ್ಟಿದ ಮನೆ ಈಗಲೂ ಫೈಜಾಬಾದದಲ್ಲಿ ಇದೆಯಂತೆ. 'ಉಮರಾವ್ ಜಾನ್' ಸಿನೆಮಾ ನೋಡಿದವರಿಗೆ (ರೇಖಾ, ಫರೂಖ್ ಶೇಖ್) ಫೈಜಾಬಾದ ಹೊಸತಲ್ಲ. ಅವಳೂ ನಮ್ಮ ಅಖ್ತರಿಯಂತೆ ಫೈಜಾಬಾದದವಳೇ. ರಾಮಾಯಣ ಕಾಲದ ಸಾಕೇತ ಇದು. ಅವಧ್ ಅಂದರೆ ಅಯೋಧ್ಯಾ ಪಕ್ಕದಲ್ಲಿಯ ಪಟ್ಟಣ. ಮುಂದೆ ಮುಶ್ತರಿ ತನ್ನ ತವಾಯಫ್ ಕೋಠಿಯನ್ನು (ಮುಜರಾ ಮಾಡುವ ಮನೆ – ದೊಡ್ಡ ಮಹಲ್) ಸಾಹಬಗಂಜದಲ್ಲಿ ಕಟ್ಟಿಸಿದಳು. ಮೊಹರಂ ಸಮಯದಲ್ಲಿನ ತಾಜಿಯಾದಲ್ಲಿ ಮುಶ್ತರೀ ಬಾಯಿ ಹಾಗೂ ಅಖ್ತರೀ ಬಾಯಿ ಹಾಡಲು ಭಾಗವಹಿಸುತ್ತಿದ್ದರಂತೆ. ಮುಶ್ತರೀ ಬಾಯಿ ಕೂಡ ಒಳ್ಳೆಯ ಹಾಡುಗಾರ್ತಿ. ಹಳೆಯ ರಿಕಾರ್ಡುಗಳಲ್ಲಿ ಮುಶ್ತರೀ ಬಾಯಿಯ ಮುದ್ರಿತ ತಟ್ಟೆಗಾಗಿ ತುಂಬಾ ಹುಡುಕಾಡಿದೆ, ಆದರೆ ಸಿಗಲಿಲ್ಲ.

ಫೈಜಾಬಾದದ ಅಂಗೂರ ಕಾನ್ವೆಂಟಿನಲ್ಲಿ ಅಖ್ತರೀ ಕಲಿತಳು. ಅಖ್ತರಿಬಾಯಿ ಅಥವಾ ಬೇಗಮ್ ಅಖ್ತರ್ ಆಗುವ ಮೊದಲು ಅವಳನ್ನು 'ಬಿಬ್ಬಿ–ಬಿಠಿಯಾ' ಎಂದೇ ಊರಿನ ರಸಿಕರು ಕರೆಯುತ್ತಿದ್ದರಂತೆ. ಆದರೆ ಇಂಗ್ಲಿಷು ಕಲಿಯಲು ಉತ್ಸಾಹವನ್ನು ತೋರಿಸದಿದ್ದುದರಿಂದ ಮುಶ್ತರಿ, ಮಗಳನ್ನು ಇಮದಾದ ಖಾನ ಸಾರಂಗೀವಾಲರ ಬಳಿ ಬಿಹಾರದ ಪಾಟಣಾಕ್ಕೆ ಕಳಿಸಿಕೊಟ್ಟಳು. 1932ರ ಮೇ ತಿಂಗಳಲ್ಲಿ ತಾಯಿ–ಮಗಳು ಒಟ್ಟಿಗೆ ತಾನರಸ ಪರಂಪರೆಯ ಆತ್ತಾ ಮೊಹಮ್ಮದ ಖಾನರ ಬಳಿ ಕಲಿಯಲು

ಪ್ರಾರಂಭಿಸಿದರು. ಇಲ್ಲಿ ಖಯಾಲ್, ಠುಮರಿ, ದಾದರಾ, ಗಝಲ್ ಶಿಕ್ಷಣ ಪಡೆದು, 1927ರಲ್ಲಿ ಕಲಕತ್ತಾ ಸೇರಿದರು. 1934ರಲ್ಲಿ ಅಖ್ತರಿ ಕಲಕತ್ತೆಯ ರಿಪನ್ ಥಿಯೇಟರಿನಲ್ಲಿ ಮೊಟ್ಟ ಮೊದಲಿನ ಗಜಲ್ ಕಾರ್ಯಕ್ರಮವನ್ನು ಕೊಟ್ಟಳು. ಈ ಕಚೇರಿಯಲ್ಲಿ ಆಕೆಯನ್ನು ಸರೋಜಿನಿ ನಾಯುಡು ಪ್ರಶಂಸೆ ಮಾಡಿದರು. ಕೊನೆಗೆ ಅದೇ ವರ್ಷದಲ್ಲಿ, (ಪ್ರಣತಿ ಕಲಾಭಾರತಿಯಲ್ಲಿ ಹಾಡಿದ) 'ದೀವಾನಾ ಬನಾನಾ ಹೈ" ಹಾಡಿನ ರಿಕಾರ್ಡ್ ಮುದ್ರಣವಾಗಿ ಅದು 'ರಿಕಾರ್ಡ್ ಬ್ರೇಕ್'ಆಗುವಂತೆ ಮಾರಾಟವಾಯಿತು. ಅಖ್ತರೀ ಬಾಯಿಗೆ ತುಂಬಾ ಪ್ರಸಿದ್ಧಿ, ಹಣ ಹಾಗೂ ಟಾಕೀ ಸಿನೆಮಾದಲ್ಲಿ ಹೀರೋಯಿನ್ ಪಾತ್ರ ದಕ್ಕಿತು. ಮುಂದೆ ನಾಲ್ಕೈದು ಸಿನೆಮಾದಲ್ಲಿ ಕೆಲಸ ಮಾಡಿ ತನ್ನ ಪ್ರಾಣಕ್ಕಿಂತಲೂ ಪ್ರಿಯವಾದ ಲಖನೌದಲ್ಲಿ ದೊಡ್ಡ ಮನೆ ಕಟ್ಟಿಸಿ ಹಾಡುವುದನ್ನೇ ಕಸಬು ಮಾಡಿಕೊಂಡಳು. ಇಲ್ಲಿ ಅಖ್ತರಿಬಾಯಿಯ ಕಹಾನಿಯಲ್ಲಿ ಒಂದು ಟ್ವಿಸ್ಟ್ ಬರುತ್ತದೆ. ಅಬ್ಬಾಸಿ ಎಂಬ ತರುಣ ವಕೀಲನ ಪ್ರೇಮಪಾಶದಲ್ಲಿ ಈಕೆ ಸಿಕ್ಕಿಬಿದ್ದು 1945ರಲ್ಲಿ 'ನಿಕಾ' ಆಯಿತು. ಮುಂದೆ ಗಂಡ ಈಕೆಗೆ ಹಾಡಲು ಹತ್ತು ಹನ್ನೆರಡು ವರ್ಷ ಬಿಡಲೇ ಇಲ್ಲ. ಮಿಸ್ ಅಖ್ತರಿ ಫೈಜಾಬಾದಿ, ಬೇಗಮ್ ಅಖ್ತರೀ, ಅಬ್ಬಾಸಿ ಬೇಗಮ್ ಆದಳು.

1951ರಲ್ಲಿ ತಾಯಿ ಮುಶ್ತರೀ ಬಾಯಿ ತೀರಿಕೊಂಡಿದ್ದೇ ಅಖ್ತರಿ ಬಾಯಿಗೆ ಒಂದು ತರಹದ ಶಾಕ್ ಆಗಿ ಒಂದೆರಡು ವರ್ಷ ಮಾನಸಿಕ ಯಾತನೆಯನ್ನು ಅವಳು ಪಡಬೇಕಾಯಿತು. ಸಂಗೀತವೇ ಇವಳ ದುಃಖ ನಿವಾರಿಸಬಹುದೆಂದು ವೈದ್ಯರೂ, ಡಾಕ್ಟರರೂ, ಹಕೀಮರೂ ಹೇಳಿದ್ದರಿಂದ ಬೇಗಮ್ ತನ್ನ ಅಜ್ಞಾತವಾಸ ಮುಗಿಸಿ ತನ್ನ ಹಾಡುಗಾರಿಕೆಯನ್ನು ಮತ್ತೆ ಪ್ರಾರಂಭಿಸಿದಳು. ಅವಳು ಹಾಡುಗಾರಿಕೆಯನ್ನು ಪ್ರಾರಂಭಿಸಿದ್ದೇ ತಡ, ಬೇಗಮ್ ಅಖ್ತರ್ ಗಾಳಿ ಇಡೀ ಭಾರತದಲ್ಲಿ ಬೀಸಲಾರಂಭಿಸಿತು. 1968ರಲ್ಲಿ 'ಪದ್ಮಶ್ರೀ', 1972ರಲ್ಲಿ ಸಂಗೀತ ನಾಟಕ ಅಕೆಡಮಿಯ ಸದಸ್ಯತ್ವ ಆಕೆಗೆ ದೊರೆಯಿತು.

ನಾನು ಬೇಗಮ್‌ಳ ಎರಡು ಕಚೇರಿಗಳನ್ನು ಪ್ರತ್ಯಕ್ಷವಾಗಿ ಕೇಳಿದ್ದೇನೆ. ಮೊದಲ ಕಾರ್ಯಕ್ರಮ 1966ರ ಮೇ ತಿಂಗಳಲ್ಲಿ, ಮತ್ತೊಂದು 1974ರ ಸೆಪ್ಟೆಂಬರದಲ್ಲಿ. ಮೊದಲನೇ ಕಚೇರಿಯು ಮರೀನ್ ಡ್ರೈವ್‌ನಲ್ಲಿದ್ದ ಇಸ್ಲಾಮ್ ಜಿಮಖಾನಾದಲ್ಲಿ ಅದೇ ತಾನೇ ಹೊಸದಾಗಿ ಕಟ್ಟಿಸಿದ 'ವಾಸ್ತು ಪ್ರವೇಶ'ದ ನಿಮಿತ್ತ ನಡೆಯಿತು. ಸಾಧಾರಣ ರಾತ್ರಿ 10 ಘಂಟೆಗೆ ನಿಲೋಫ್ಠ್ ಖಾನ್ ಎಂಬ ಹುಡುಗಿಯ ಸೂರಬಹಾರ್ ಬಳಿಕ ಈಗಿನ ಖ್ಯಾತ ಸರೋದ್ ವಾದಕ ಬ್ರಿಜ್ ನಾರಾಯಣರವರ ಮೊಟ್ಟ ಮೊದಲಿನ ಕಚೇರಿ (ಪದಾರ್ಪಣ). ಕೊನೆಗೆ ಬೇಗಮ್ 12ರ ಸುಮಾರಿಗೆ ವೇದಿಕೆಗೆ ಬಂದಕೂಡಲೇ ಗುಜರಾತಿ ಶೇಠ್ ಜನ ಮುತ್ತಿಗೆ ಹಾಕಿ ಅವಳನ್ನು ಮುಂಜಾನೆಯ ನಾಲ್ಕರ ತನಕ ಫರ್ಮಾಯಿಶ್ ಮಾಡಿ ಹಾಡಿಸಿದ್ದನ್ನು ಕೇಳಿದ್ದೇನೆ, ಕೇಳಿ ಆನಂದಿಸಿದ್ದೇನೆ. ಅದೊಂದು ಮರೆಯಲಾಗದ ಅನುಭವ. ಪ್ರತಿಯೊಂದು ಹಾಡು ಹೇಳುವಾಗ ಬೇಗಮ್‌ಳಿಗೆ ಪ್ರಾಮ್ಪ್ಟಿಂಗ್ ಮಾಡಲು ನಾಲ್ಕೈದು ರಸಿಕರು ಮುಂದಾದದ್ದನ್ನು ಮತ್ತು ಅವಳು ಪ್ರತಿಯೊಂದು ಬೇಡಿಕೆಯನ್ನೂ ಪೂರೈಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಮತ್ತೊಂದು ಕಚೇರಿ 1974ರ ಸೆಪ್ಟೆಂಬರ ತಿಂಗಳಿನದು. ಪಾಟಕರ್ ಹಾಲ್‌ನಲ್ಲಿ ಮರೀನ್ ಲೈನ್ಸ್‌ನಲ್ಲಿ

ಕ್ಯಾನ್ಸರ್ ಪೇಷೆಂಟ್‌ಗಳ ನಿಧಿಯ ಸಲುವಾಗಿ ಇಟ್ಟ ಕಚೇರಿ. ಬೇಗಮ್‌ಳ ದೇಹಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ಆದರೂ 3 ತಾಸು ಒಂದರ ನಂತರ ಮತ್ತೊಂದು ಗಜ಼ಲ್, ಠುಮರಿ, ಹಾಡಿ ರಂಜಿಸಿದ್ದು, ಅವಳಿಗೆ ಆ ದಿನ ತುಂಬಾ ಬಹುಮಾನಗಳು ಬಂದಿದ್ದು ನೆನಪಿದೆ. ಆದರೆ, ಬೇಗಂ ತಮ್ಮ ಕಚೇರಿ ಮುಗಿಸಿದ ಕೂಡಲೇ ಸಿಕ್ಕ ಮೆಮೆಂಟೋ ಎಲ್ಲ ಸಾಲಾಗಿ ಇಟ್ಟು ಹರಾಜು ಮಾಡಿಸಿ 95,000 ರೂ ಹಣ ಒಟ್ಟು ಮಾಡಿಕೊಟ್ಟದ್ದೂ ಈಗಲೂ ನೆನಪಿದೆ. ಕ್ಯಾನ್ಸರ್ ರಿಲೀಫ್ ಫಂಡಿಗೆ ಎಂದು ಅದನ್ನು ಕಾರ್ಯದರ್ಶಿ ಎ.ಕೆ.ಸಪ್ರು ಅವರಿಗೆ ಒಪ್ಪಿಸಲಾಯಿತು.

ಮುಂಬಯಿಯಿಂದ ಅಹಮ್ಮದಾಬಾದಕ್ಕೆ ಹೋದ ಬೇಗಮ್ ಅಖ್ತರ್ ಮರಳಿ ಬರಲೇ ಇಲ್ಲ. ಅಲ್ಲಿ 1974ರ ಅಕ್ಟೋಬರ್ 27ರಂದು ನಡೆದ ಕಚೇರಿಯಲ್ಲಿ ಹಾಡುವಾಗ, ಶ್ರುತಿ ಸರಿಯಾಗುವುದಿಲ್ಲವೆಂದು ಮೇಲಿನ ಶ್ರುತಿಯಲ್ಲಿ ಹಾಡಲು ಪ್ರಾರಂಭಿಸಿದರು. ಬೇಗಂ ಹಾಡುತ್ತಲೇ ಹೃದಯಸ್ಥಂಭನದಿಂದ ತೀರಿಕೊಂಡಳು.

ನರ್ವಸ್ ಬ್ರೇಕ್ ಡೌನ್ ಆದಾಗ ಬೇಗಮ್‌ಳಿಗೆ ನಿದ್ರಾನಾಶವಾಗುತ್ತಿದ್ದುದರಿಂದ ಗುಳಿಗೆ, ಮದ್ದುಕೊಡಬೇಕಾಗಿತ್ತು. ಎರಡು ವರ್ಷಗಳ ಅತಿ ಸೇವನೆಯಿಂದ ಹದದಲ್ಲಿ ತರಬೇಕಾದರೆ ಸಾಕುಬೇಕಾಯಿತು. ಡ್ರಿಂಕ್ಸ್, ಡ್ರಗ್ಸ್ ಇವೆಲ್ಲಾ 'ದುನಿಯಾದಾರಿ' ಸಲುವಾಗಿ ಸೇವಿಸಬೇಕಾಯಿತು. ದಿನಕ್ಕೆ 50 55 ಸಿಗರೇಟುಗಳನ್ನು ಅಂದರೆ ಒಂದು ಡಬ್ಬ ಸಿಗರೇಟನ್ನು ಸೇದುತ್ತಿದ್ದ ಬೇಗಮ್‌ಳಿಗೆ ಹಾಡುವಾಗ ಒಮ್ಮೆಯೂ ಅವಳ ಕಂಠ 'ದಗಾ' ಕೊಡಲಿಲ್ಲ. ಹಾಡುತ್ತಲೇ ಪೈಗಂಬರವಾಸಿಯಾದಳು, ಬೇಗಮ್ ಅಖ್ತರ್. ತದ್ವಿರುದ್ಧ ತಾರ ಷಡ್ಜದಲ್ಲಿ ಅವಳ ಧ್ವನಿ ಸ್ವಲ್ಪ ಕ್ರ್ಯಾಕ್ ಆದದ್ದು ವಿಶಿಷ್ಠ ರೀತಿಯಲ್ಲಿ 'ಸೆಕ್ಸಿ' ಅನಿಸುತ್ತಿತ್ತು.

ಅವಳಿಗೆ 1975ರಲ್ಲಿ ಮರಣೋತ್ತರ 'ಪದ್ಮಭೂಷಣ' ಪ್ರಶಸ್ತಿಯನ್ನು ಪ್ರದಾನಸಲಾಯಿತು. ಇಷ್ಟೆ ಅಖ್ತರೀ ಬಾಯಿ ಫೈಜಾಬಾದಿಯ ಕತೆ. ಅವಳು ಹುಟ್ಟಿ ನೂರು ವರ್ಷ ಕಳೆದರೂ ಬೇಗಮ್‌ಳ ಗಜ಼ಲ್ ಈಗಲೂ ಹೊಸತಾಗಿ ಕೇಳಿಸುತ್ತಲೇ ಇದೆ.

*****

3.12

ಸರ್ದಾರ ಅಖ್ತರ್ (1915–1984)

ಹೈದರಬಾದ ಕರ್ನಾಟಕದ ಗಂಗಾವತಿ ಎಂಬ ಊರಲ್ಲಿಯ 77–78 ವರ್ಷಗಳ ಹಿಂದಿನ ಕತೆ. ಸೊಹರಾಬ್ ಮೋದಿಯ ಒಂದು ದೊಡ್ಡ ಐತಿಹಾಸಿಕ ಚಲನಚಿತ್ರದ ಭರ್ಜರಿ ಶೂಟಿಂಗಿಗಾಗಿ ಈ ಊರಲ್ಲಿಯ ಸುತ್ತುಮುತ್ತಿನ ಪ್ರದೇಶವನ್ನು ಆರಿಸಲಾಗಿತ್ತು. ಚಲನಚಿತ್ರದ ಹೆಸರು 'ಪುಕಾರ'. ಆಗಿನ ಕಾಲದ ಖ್ಯಾತ ಬೆಕ್ಕಿನ ಕಣ್ಣಿನ ನಟ ಚಂದ್ರಮೋಹನ್ ಬಾದಶಾಹ ಜಹಾಂಗೀರನ ಪಾತ್ರದಲ್ಲಿದ್ದರೆ, ರೂಪಸುಂದರಿ ನಸೀಂಬಾನು (ಸೈರಾಬಾನುವಿನ ತಾಯಿ) ನೂರಜಹಾನಳ ಪಾತ್ರದಲ್ಲಿ ಶೋಭಿಸುತ್ತಿದ್ದಳು. ಒಬ್ಬ ಮಡಿವಾಳ ಯುವತಿಯ ಪಾತ್ರದಲ್ಲಿದ್ದವಳು ನಮ್ಮ ಈ ಲೇಖನದ ನಾಯಕಿ 16 ವರ್ಷದ ತರುಣಿ ಸರದಾರ ಅಖ್ತರ್.

ಲಾಹೋರದ 'ಹಿರಾಮಂಡಿ'ಯ (ನಾಯಕಸಾನಿ ಬಝಾರ್ ಎಂದು ಹೇಳಬಹುದು) ಒಂದು ಕೋಠಿಯಲ್ಲಿ 'ನಾಚ–ಗಾನಾ' ಮಾಡುತ್ತಿದ್ದ ಇಬ್ಬರು ಸಹೋದರಿಯರಲ್ಲಿ (ಸರದಾರ ಅಖ್ತರ್ ಮತ್ತು ಬಹಾರ್ ಅಖ್ತರ್ ಎಂಬವರಲ್ಲಿ) ಒಬ್ಬಳು. ಲಾಹೋರವು ಆ ದಿನಗಳಲ್ಲಿ ಉತ್ತರ ಹಿಂದುಸ್ಥಾನದ ಸಿನೆ ಜಗತ್ತಿನಲ್ಲಿ ಪ್ರಮುಖವಾದ ಶಹರವೆಂದು ಪರಿಗಣಿಸಲ್ಪಡುತ್ತಿತ್ತು. ಅಲ್ಲಿಯೇ ಮುಂಬಯಿ, ಕ್ಷಮಿಸಿ ಆ ಕಾಲದ ಬೊಂಬಾಯಿ ಸಿನೆ ಜಗತ್ತಿನ ಎ.ಆರ್. ಕರ್ದಾರ್ ಹಾಗೂ ಮಿನರ್ವಾ ಮೂವಿಟೋನ್‌ನ ಸೊಹ್ರಾಬ್ ಮೋದಿ ತಮಗಾಗಿ ಸಿನೆ ಸಿಬ್ಬಂದಿಯನ್ನು ದಾಖಲಿಸಿಕೊಳ್ಳಲು ಬಂದಾಗ ಕರ್ದಾರ್ ಬಹಾರ್‌ಳನ್ನು ಮೋಹಿಸಿದ. ರೊಚ್ಚಿಗೆದ್ದ ಸರ್ದಾರ ಅಖ್ತರ ತನ್ನ ಭಗಿನಿಯನ್ನು ರಕ್ಷಿಸಲು ಪೋಲಿಸರಿಗೆ ಶರಣು ಹೋಗಿ 4 ದಿನ ಕಾರ್ದಾರನಿಗೆ ಲಾಹೋರ ಜೈಲಿನ ಹವೆ ಉಸಿರಾಡಿಸಿದಳು. ಸೊಹ್ರಾಬ್ ಚತುರತೆಯಿಂದ ಸರ್ದಾರಳನ್ನು ವಶಪಡಿಸಿಕೊಂಡು ಅವರ ಮುಂಬರುವ ಚಿತ್ರದಲ್ಲಿ (ಪುಕಾರ್) ಕೆಲಸ ಕೊಟ್ಟು ಮಿನರ್ವಾ ಮೂವಿಟೋನ್‌ದ ನೌಕರಿ ಕೊಟ್ಟು ಅವಳಿಗೆ ಪುಕಾರ್‌ದಲ್ಲಿಯ ಮಡಿವಾಳತಿಯ ಕೆಲಸ ಕೊಟ್ಟರು. ಬಹಾರ್‌ಳನ್ನು ಲಾಹೋರದಲ್ಲಿಯೇ ಬಿಟ್ಟು ಸರ್ದಾರ್ ಮುಂಬಯಿಗೆ ಬಂದು ಬಳಿಕ ಗಂಗಾವತಿಗೆ ಬಂದದ್ದು. ಮಳೆಗಾಲದ ಸಮಯ. ಆದರೆ ಚಲನಚಿತ್ರದ ಹೊರಗಿನ ಚಿತ್ರೀಕರಣ ನಡೆದೇ ಇತ್ತು. ಚಿತ್ರೀಕರಣದ ಕತೆ ಹೀಗಿತ್ತು. ನೂರಜಹಾ ರಾಣಿ ಬೇಟೆಗೆಂದು ಹೋದಾಗ, ನೀರು ಕುಡಿಯಲು ಬಂದ ಪ್ರಾಣಿ ಎಂದು ತಪ್ಪು ತಿಳಿವಳಿಕೆಯಿಂದ ಬಾಣ ಎಸೆದು ಮಡಿವಾಳಿತಿ ಸರ್ದಾರ ಅಖ್ತರಳ ಪತಿಯನ್ನು

ಕೊಲ್ಲುತ್ತಾಳೆ. ನ್ಯಾಯನಿಷ್ಠನೆಂದು ಹೆಸರಾಂತ ಜಹಾಂಗೀರನೆದುರು ಸರ್ದಾರ್ ಅಖ್ತರ ತನ್ನ ದೂರನ್ನು ಒಪ್ಪಿಸುತ್ತಾಳೆ. ನೂರಜಹಾನಳ ಮೇಲೆ ಕೊಲೆಯ ಆರೋಪವಿಡುತ್ತಾಳೆ. ನೂರಜಹಾನಳ ಪಾತ್ರ ರೂಪಸುಂದರಿ ನಸೀಂ ಬಾನು. ಸರ್ದಾರ ಈ ಪಾತ್ರದಲ್ಲಿ ಅತ್ಯಂತ ಸುಂದರವಾಗಿ ಅಭಿನಯಿಸಿದ್ದುದನ್ನು ನಾನು ಗೋಕರ್ಣದ ಟೂರಿಂಗ್ ಟಾಕೀಸಿನಲ್ಲಿ 1950ರಲ್ಲಿ ನೋಡಿದ ನೆನಪು. ವರ್ಷಕ್ಕೊಮ್ಮೆ ಶಿವರಾತ್ರಿಯ ಜಾತ್ರೆಗೆ ಟೂರಿಂಗ್ ಟಾಕೀಸು ಬರುತ್ತಿತ್ತು. ಅಲ್ಲಿಯೇ ತುಂಡು ತುಂಡಾದ ಪುಕಾರ ಸಿನೇಮಾದ ರೀಲುಗಳನ್ನು ನೋಡಿದ್ದು.

ಸರ್ದಾರ ಅಖ್ತರಳ ಶಾರೀರ ಸ್ವಲ್ಪ ಗಡುಸಾಗಿದ್ದರೂ ಸ್ವರ ಚೆನ್ನಾಗಿತ್ತು. ಅವಳ ನಾಲ್ಕೈದು ತಟ್ಟೆಗಳು (ಎಲ್ಲಾ ಸಿನೇಮಾ ಹಾಡುಗಳು) ಮಾರುಕಟ್ಟೆಯಲ್ಲಿ ಸುಮಾರು ಹೆಸರು ಮಾಡಿದವು. ಪುಕಾರದಲ್ಲಿಯ ಆಕೆಯ ಪಾತ್ರ ಚಿಕ್ಕದಾಗಿದ್ದರೂ, ನಟನೆಗೆ ಅವಕಾಶವಿದ್ದುದರಿಂದ ಇವಳಿಗೆ ಮಾನ್ಯತೆ ಸಿಕ್ಕಿತು. ಇಷ್ಟೇ ಅಲ್ಲ, ನಂತರ ಮೆಹಬೂಬ ಖಾನರ 'ಔರತ್' ಚಿತ್ರಪಟದಲ್ಲಿ ಮುಖ್ಯ ಪಾತ್ರ ಇವಳಿಗೆ ದೊರಕಿತು. 'ಔರತ್' ಅಂದರೆ ಮುಂದೆ ನರ್ಗಿಸ್ ನಟಿಸಿದ 'ಮದರ್ ಇಂಡಿಯಾ' ಚಲನಚಿತ್ರದ ಮೊದಲ ಆವೃತ್ತಿ. ಇದರಿಂದ 'ಔರತ್' ನೋಡಿದವರಿಗೆ ಈ ಪಾತ್ರದ ಗಹನತೆ, ಪರಿಪಕ್ವತೆಯ ತಳಹದಿಯ ಬಗ್ಗೆ ತಿಳಿಯಬಹುದು. ಇದು ಸಾಧಾರಣ 1940–41ರ ಚಲನಚಿತ್ರ. 1937ರಿಂದ 1944ರ ವರೆಗೆ ಸರ್ದಾರ ಅಖ್ತರ 'ಪಿಯಾ ಕೀ ಜೋಗನ್', 'ಪೂರ್ಣಿಮಾ' ಚಿತ್ರಪಟಗಳಲ್ಲಿ ಹೀರೋಯಿನ್ ಎಂದು ಮಿನುಗಿದಳು. ಇವುಗಳೆಲ್ಲ ಸಂಗೀತ ಪ್ರಧಾನ ಪಾತ್ರಗಳು. ಅವಳ ಹಾಡುಗಳನ್ನು ಅವಳೇ ಹಾಡಿದ್ದಾಳೆಯೇ ವಿನಃ ಪಾರ್ಶ್ವಗಾಯನಕ್ಕೆ ಮಾರುಹೋಗಲಿಲ್ಲ.

ಬಾಬೂರಾವ್ ಪಟೇಲರ 'ಫಿಲ್ಮಿಂಡಿಯಾ' ಪತ್ರಿಕೆ ಕೇವಲ ಸಿನೆಮಾಕ್ಕೇ ಮೀಸಲಾದ ಪತ್ರಿಕೆಯಾಗಿತ್ತು. ಎಲ್ಲ ಚಿತ್ರಗಳನ್ನೂ ಟೀಕಿಸುವದು, ಚಲನಚಿತ್ರ ತಾರೆಗಳ ಅನೈತಿಕ ಸಂಬಂಧಗಳ ಬಗ್ಗೆ ಸಿಕ್ಕಾಪಟ್ಟೆ ಬರೆಯುವುದು ಮತ್ತು ಸಂಪಾದಕರ ಪ್ರಶ್ನೋತ್ತರ ಈ ಪತ್ರಿಕೆಯ ಮುಖ್ಯ ಆಧಾರವಾಗಿತ್ತು. ಆ ಕಾಲದಲ್ಲಿ ಉತ್ತಮ ಪ್ರಶ್ನೆಯನ್ನು ಕೇಳಿದವರಿಗೆ 25 ರೂ.ಗಳ ಬಹುಮಾನ ಇಟ್ಟಿದ್ದರು. ಈ ಪತ್ರಿಕೆಯಲ್ಲಿ ಸರ್ದಾರ ಅಖ್ತರಳ ಬಗ್ಗೆ ಬರೆದದ್ದು ಹೀಗೆ: "ಸರ್ದಾರ, ಈ ಹೆಸರು ಪುರುಷರಂತೆ ಇದ್ದರೂ, ಮಾಟದ ಗೊಂಬೆ. ಆದರೂ ಆಕ್ಟಿಂಗ್ ಗೊತ್ತಿದ್ದ ಕೆಲವೇ ನಟಿಯರಲ್ಲಿ ಈಕೆಯ ಹೆಸರು ಮುಂಚೂಣಿಯಲ್ಲಿ! ತವಾಯಫ್‌ದಿಂದ ಸಿನೇಸ್ಟಾರ್ ಆದದ್ದು ಕೇವಲ ಇವಳ ಪ್ರತಿಭೆಯಿಂದಲೇ ಎಂದು ಹೇಳಬೇಕು. ಸಂಭಾಷಣೆಯ ಚಾತುರ್ಯವನ್ನು ಸೊಹರಾಬ್ ಕಲಿಸಿದರೂ, ಈಕೆಯ ಹಾವಭಾವಗಳು ಇತರರಂತೆ ಭಾವರಹಿತವಾಗಿ(ವುಡನ್!) ಕಾಣಿಸುವುದಿಲ್ಲ. ಈ ತನಕದ ಅವಳ ಆಕ್ಟಿಂಗ್ ಗ್ರಾಫ್ ಮಾಡಬೇಕಾದರೆ ಕೆಳಗಿನಿಂದ ಮೇಲೆ, 'ಪಿಯಾಕೀ ಜೋಗನ್', 'ಪೂರ್ಣಿಮಾ', 'ಪುಕಾರ', ಬಳಿಕ ಹೈಪಾಯಿಂಟ್ 'ಔರತ್'! "

'ಮ್ಯೂಸಿಕಲ್ ಹೆರಿಟೇಜ್ ಆಫ್ ಪಾಕಿಸ್ತಾನ್'ನಲ್ಲಿ ಬರೆದ ಲಾಹೋರಿನ ಸಯೀದ ಸಾಹೇಬರು ಕೆಳಗೆ ನೀಡಿದ ಮಹತ್ವದ ಮಾಹಿತಿ ಇಂಗ್ಲಿಷಿನಲ್ಲಿದ್ದದ್ದನ್ನು ಕನ್ನಡದಲ್ಲಿ

ತರ್ಜುಮೆ ಮಾಡಿಕೊಡುತ್ತಾ ಇದ್ದೇನೆ. ಇದರಿಂದಲೇ, ನಮಗೆಲ್ಲ ಸರ್ದಾರ ಅಖ್ತರ್ ಬಗ್ಗೆ, ಅವಳ ತವಾಯಫ್ ಮೂಲದ ಬಗ್ಗೆ ಗೊತ್ತಾದುದು.

1942ರಲ್ಲಿ ಸರ್ದಾರ ಅಖ್ತರ್ ಮೆಹಬೂಬ ಖಾನನನ್ನು ಮದುವೆಯಾದಳು. ಅವಳ ಅತ್ಯುತ್ತಮ ಹಾಡುಗಾರಿಕೆಯ ಉದಾಹರಣೆ ಎಂದರೆ ಶಂಕರ ರಾವ್ ವ್ಯಾಸ್ ಅವರ ಸಂಗೀತ ದಿಗ್ದರ್ಶನದಲ್ಲಿ ಹಾಡಿದ ಅನೇಕ ಹಾಡುಗಳು. ಮೂವತ್ತಕ್ಕೂ ಮಿಕ್ಕಿದ ಚಲನಚಿತ್ರಗಳಲ್ಲಿ ಸರ್ದಾರ್ ಅಖ್ತರ್ ನಟಿಸಿದ್ದಾಳೆ.

ಅಶ್ರಫ್ ಖಾನ್ ಎಂಬ ನಟ/ಸೂಫಿ ಸಂತನ ಭಕ್ತಳಾದ ಈಕೆ ಮರಳಿ 1971ರಲ್ಲಿ ಓ.ಪಿ.ರಾಲ್ಹನ್ ಇವರ 'ಹಲ್‌ಚಲ್' ಹಾಗೂ 1973ರಲ್ಲಿ 'ಬಂದೇ ಹಾಥ್' ಎಂಬ ಚಿತ್ರದಲ್ಲಿ ಸಹಾಯಕ ಅಭಿನೇತ್ರಿಯ ಪಾತ್ರವಹಿಸಿದ್ದಾಳೆ.

ಮೆಹಬೂಬ್ ಸ್ಟುಡಿಯೋದ ಮೆಹಬೂಬ್ 1964ರಲ್ಲಿಯೇ ತೀರಿಕೊಂಡ. ಬಳಿಕ ಮೆಹಬೂಬ ಸ್ಟುಡಿಯೋದ ಮಾಲಕೀ ಹಕ್ಕು ಸರ್ದಾರ್ ಅಖ್ತರಳಿಗೆ ಸಿಕ್ಕಿತು. ಸ್ಟುಡಿಯೋದಲ್ಲಿ ಸಾಕಷ್ಟು ಸುಧಾರಣೆ ಮಾಡಿ, ಬಾಡಿಗೆಯ ಹಣದಿಂದಲೇ ಗಂಡನ ಸಾಲವನ್ನು ಈಕೆ ತೀರಿಸಿದಳು. 1984ರಲ್ಲಿ ಈಕೆ ಅಮೇರಿಕೆಯಲ್ಲಿ ತೀರಿಕೊಂಡಳು.

ಇವಳ ಮಗ ಸಾಜೀದ್, ಅಮೆರಿಕೆಯಲ್ಲಿ ವಾಸ್ತವ್ಯ ಮಾಡಿ ಅಲ್ಲಿಯ ಹಾಲಿವುಡ್‌ನಲ್ಲಿ ಹೆಸರು ಮಾಡಿದ. 'ಹೀಟ್ ಅಂಡ್ ಡಸ್ಟ್' ಚಿತ್ರದಲ್ಲಿ ಈತನ ಒಂದು ಪಾತ್ರವಿದೆಯಂತೆ! ಇದನ್ನು ಮರ್ಚಂಟ್ ಐವರಿ (ಇಸ್ಮಾಯಿಲ್ ಮರ್ಚಂಟ್ ಮತ್ತು ಜೇಮ್ಸ ಐವರಿ) ಇವರ ಕಂಪನಿಯು 1983ರಲ್ಲಿ ತಯಾರಿಸಿತ್ತು.

*****

3.13

ಅಂಜನೀಬಾಯಿ ಮಾಲಪೇಕರ
ಮುಂಬಯಿಯ 'ವಸಂತಸೇನೆ' (1883–1974)

'ಉತ್ತರಧ್ರುವದಿಂ ದಕ್ಷಿಣ ಧ್ರುವಕು' ನಮ್ಮ ಈ ತವಾಯಫ್‌ಗಾಳಿ ಬೀಸುತಿದೆ ಎಂದು ಹೇಳುತ್ತಾ, ಉತ್ತರ ಹಿಂದುಸ್ತಾನದಿಂದ ಮುಂಬಯಿಗೆ ಪ್ರಸ್ಥಾನ ಮಾಡುವಾಗಲೇ, ಉತ್ತರ ಹಿಂದುಸ್ತಾನದ 'ತವಾಯಫ್' ದಕ್ಷಿಣದ 'ದೇವದಾಸಿ' ಆದದ್ದನ್ನು ಓದುಗರು ಗಮನಿಸಬೇಕು. ಈ ಸರಣಿಯ ಪ್ರಾರಂಭದಲ್ಲಿಯೇ ಇದರ ಬಗ್ಗೆ ಸಂಕ್ಷಿಪ್ತವಾಗಿ ಬರೆಯಲಾಗಿದೆ. ದೇವರ ಸೇವೆಗೆಂದು ಮುಡುಪಾಗಿಟ್ಟ ಈ ವರ್ಗ ಮಂದಿರ ಸಂಸ್ಕೃತಿಯ ಕಲಾಪ್ರತೀಕವೆಂದು, ನೈಸರ್ಗಿಕ ರೀತಿಯಲ್ಲಿಯೇ ಈ ಸಮಾಜ ಭಕ್ತಿ ಹಾಗೂ ಶೃಂಗಾರ ರಸಪ್ರಧಾನ ಸಂಗೀತದಲ್ಲಿ ಶತಮಾನಗಳಿಂದ ಹರಿದಾಸರ ಭಜನೆ, ಕೀರ್ತನೆಗಳನ್ನು ಹಾಡಿಕೊಂಡು ತಮ್ಮದೇ ಆದ ವಿಶಿಷ್ಟ ರೀತಿಯ ಕಲಾಪ್ರಕಾರಗಳನ್ನು ಜನಸಾಮಾನ್ಯರಿಗೆ ಇಷ್ಟವಾಗುವಂತೆ ಪ್ರಸ್ತುತಿಮಾಡಿಕೊಂಡು ಬಂದದ್ದನ್ನು ನಾವು ಕಾಣುತ್ತೇವೆ. ಕರ್ನಾಟಕದಲ್ಲಿಯ ವಿವಿಧ ಪ್ರದೇಶಗಳಲ್ಲಿಯ ದೇವದಾಸಿಯರು ಕೃಷ್ಣನನ್ನೇ ಈ ಭಕ್ತಿ/ಶೃಂಗಾರ ಪ್ರಧಾನ ಸಂಗೀತ–ನೃತ್ಯಪ್ರಕಾರಗಳ ಪ್ರತೀಕವನ್ನಾಗಿಟ್ಟುಕೊಂಡು, 'ಕೃಷ್ಣಾ ನೀ ಬೇಗನೆ ಬಾರೋ' ಅಥವಾ 'ಜಗದೋದ್ಧಾರನಾ, ಆಡಿಸಿದಳು', 'ಮೆಲ್ಲಮೆಲ್ಲನೆ ಬಂದನೆ' ಅಥವಾ ಇನ್ನೂ ಅನೇಕ ಹಾಡುಗಳನ್ನು ದೇವಸ್ಥಾನದ ಪ್ರಾಕಾರದಲ್ಲಿ ಹಾಡಿ, ಕುಣಿದು ದೇವರನ್ನೂ, ಪೂಜಾರಿಗಳನ್ನೂ ಹಾಗೂ ಜನಸಾಮಾನ್ಯರನ್ನೂ ಹಬ್ಬ–ಹುಣ್ಣಿಮೆಗಳಲ್ಲಿ ರಂಜಿಸಿದ್ದು ಇತಿಹಾಸದ ದಾಖಲೆ. ಲೋಕ ಸಂಗೀತವೇ ಕಾನೂನು ಕ್ರಮವಾಗಿ ಇಂತಹ ಪ್ರದರ್ಶನಗಳಲ್ಲಿ ಕ್ರಮೇಣ ಶಾಸ್ತ್ರೀಯ ಸಂಗೀತದಲ್ಲಿ ಹಾಸುಹೊಕ್ಕಾಯಿತು. ಯಕ್ಷಗಾನ ಪ್ರಬಲವಾದ ಪ್ರದೇಶಗಳಲ್ಲಿ, ಇತರ ಸ್ಥಳಗಳಲ್ಲಿ ಈ ಶೈಲಿಯ ಮೇಲೆ ಆಯಾ ಸ್ಥಾನಿಕ ಸಂಸ್ಕೃತಿಯ ಪ್ರಭಾವ ಆದದ್ದನ್ನು ನಾವು ಕಾಣುತ್ತೇವೆ. ಆಧುನಿಕತೆಯ ಗಾಳಿ, ಭಾರತ ಭೂಪ್ರದೇಶದಲ್ಲಿ ಜೋರಾಗಿ ಬೀಸುತ್ತಿದ್ದಾಗಲೇ, ಗೋವಾ ಪ್ರದೇಶದ ಸಾರಸ್ವತ ಕುಲದ ಅನೇಕ ದೇವಾಲಯಗಳಿಂದ ಈ ದೇವದಾಸಿಯರು ಬೊಂಬಾಯಿಗೆ ವಲಸೆ ಹೋದದ್ದು ಸಂಗೀತ ಇತಿಹಾಸದ ಇನ್ನೊಂದು ದಾಖಲೆ. 19ನೇ ಶತಮಾನದ ಕೊನೆಯ ದಶಕದಲ್ಲಿ, ಮುಂಬಯಿಗೆ ನಾಯಕಸಾನಿಯರ ಕುಟುಂಬದ ವಸಂತಸೇನೆ, ಅಂದರೆ, ಅಂಜನೀಬಾಯಿಯ ಅಜ್ಜಿ, ತಾಯಿ ಅವರು ವಲಸೆ ಬಂದರು ಎಂದು ಹೇಳಬಹುದು.

ಆ ಕಾಲದ ಬೊಂಬಾಯಿ ನಗರವು ಹತ್ತಿ ಗಿರಣಿಗಳ, ಹತ್ತಿ ನೂಲಿನ ಆಮದು-ರಫ್ತು ಮಾಡುವ ದೊಡ್ಡ ಕೇಂದ್ರವಾದುದರಿಂದ ಎಲ್ಲಾ ತರಹದ ವ್ಯವಸಾಯದ ಪರಿಣತಿ ಪಡೆದ ಕಸುಬುದಾರರ ಆಗರವಾಗಿತ್ತು. ಅದಾಗಲೇ ಬೊಂಬಾಯಿ ದೇಶದ ಆರ್ಥಿಕ ಕೇಂದ್ರವಾಗಿತ್ತು.

ಬೊಂಬಾಯಿಗೆ ವಲಸೆ ಬಂದಾಗ ಅಂಜನೀಬಾಯಿ ಕೇವಲ ಆರು ವರ್ಷದವಳು. ತಾಯಿ-ಅಜ್ಜಿಯೊಂದಿಗೆ ಬಂದವಳೇ ಭೆಂಡಿಬಝಾರದಲ್ಲಿ ತಮ್ಮ ವಸತಿಯಲ್ಲಿಯೇ ಬೇರುಬಿಟ್ಟಿದ್ದ ಮೂರು ಖಾನ್ ಬಂಧುಗಳಲ್ಲಿ ಎರಡನೆಯವನಾದ ನಝೀರ್ ಖಾನರಲ್ಲಿ ಸಂಗೀತ ಶಿಕ್ಷಣ ಪ್ರಾರಂಭಿಸಿದಳಂತೆ. ಖಯಾಲ್ ಗಾಯನ ಪದ್ಧತಿಯ ಉಸ್ತಾದ್‌ರಾಗಿದ್ದ ಈ ಮೂರೂ ಖಾನ್ ಬಂಧುಗಳು, ಉತ್ತರಪ್ರದೇಶದ ಮೊರಾದಾಬಾದದಿಂದ ಬಂದು ಇಲ್ಲಿ ನೆಲೆಸಿದ್ದರು. ಇವರ ವಸತಿ, ಮುಂಬಯಿಯ ಭೆಂಡಿಬಝಾರ ವಠಾರದಲ್ಲಿದ್ದುದರಿಂದಲೇ ಇವರ ಹಾಡುಗಾರಿಕೆಯ ಪ್ರಕಾರಕ್ಕೆ 'ಭೆಂಡಿಬಝಾರ್ ಘರಾಣೆ' ಎಂದು ಹೆಸರು ಬಂದದ್ದು. ಆಗಿನ ಬೊಂಬಾಯಿಯ ಈ ವಸತಿ ಹಿಂದು, ಮುಸಲ್ಮಾನರ ಪ್ರಮುಖ ವಿಭಾಗವಾಗಿತ್ತು. ಸಾಂಪ್ರದಾಯಿಕ ಗಾಯನ ಶೈಲಿಯಲ್ಲಿಯೇ ಹಾಡುತ್ತಿದ್ದರೂ ಈ ಬಂಧುಗಳು (ಅಂದರೆ ಛಜ್ಜು, ಸಝೀರ್ ಹಾಗೂ ಖಾದೀಮ್ ಹುಸೇನ್ ಖಾನರ) ತಮ್ಮ ಹಾಡುಗಾರಿಕೆಯಲ್ಲಿ 'ಮೀಂಡ್' ಪ್ರಕಾರದ ಕೆಳಗಿನ ಶ್ರುತಿಯ ಸ್ವರದಿಂದ ಮೇಲಿನ ಸ್ವರಕ್ಕೆ ಏರುವ ಅಥವಾ ಜಾರುವ ಅಲಂಕಾರವನ್ನು ಬಹಳ ಚೆನ್ನಾಗಿ ಪ್ರಸ್ತುತಿಸುತ್ತಿದ್ದರು. ಈ ಖಂಡ ಮೇರು ಪ್ರಕಾರ ಖಯಾಲ್ ಪ್ರಸ್ತುತಿಯಲ್ಲಿ ಒಂದು ವಿಶಿಷ್ಟ ಮೆರಗನ್ನು ನೀಡುತ್ತದೆ. ಜೊತೆಗೆ ಕರ್ನಾಟಕೀ ಪದ್ಧತಿಯಲ್ಲಿ ಸರಿಗಮ ಹೇಳುವ ಪ್ರಕಾರ! ಮುಂದೆ ವಿಲಂಬಿತ (ಉರ್ದು ಭಾಷೆಯಲ್ಲಿ ಇದು ಬಿಲಂಪತ) ಹಾಗೂ ಧ್ರುತ್‌ನಲ್ಲಿ (ಜಲದ್) ಶಬ್ದ (ಬೋಲ್) ಹೇಳುವಾಗ ತಾನಗಳಲ್ಲಿ ಅವುಗಳನ್ನು ಹೆಣೆಯುವುದು -ಇದಕ್ಕೆ ಬೋಲತಾನ್ ಎನ್ನುತ್ತಾರೆ -ಇವುಗಳಿಂದ ಸಮೃದ್ಧವಾದ ಪದ್ಧತಿಯನ್ನು ರೂಢಿಗೊಳಿಸಿದವರಲ್ಲಿ ಅಂಜನೀಬಾಯಿ ಮಾಲಪೇಕರರ ಹೆಸರನ್ನು ಆದರದಿಂದ ಹೇಳುತ್ತಾರೆ. 1920ರಲ್ಲಿಯೇ ತನ್ನ ಗುರುಗಳು ತೀರಿಕೊಂಡ ನಂತರ, ಮೆಹಫಿಲ್ಲುಗಳ ಉಸಾಬರಿಗೆ ಹೋಗದೇ, 91 ವರ್ಷಗಳ ದೀರ್ಘಾಯುಷ್ಯ ಪಡೆದರೂ ಕಲಿಸುವುದರಲ್ಲಿ ಮತ್ತು ದೇವರ ನಾಮ, ಭಜನೆಗಳಲ್ಲಿಯೇ ಅಂಜನೀಬಾಯಿ ತನ್ನ ಉಳಿದ ಆಯುಷ್ಯವನ್ನು ಕಳೆದಳು.

ಇವಳ ಚರಿತ್ರೆಯ ತುಣುಕುಗಳನ್ನು ಓದುವಾಗ ಒಂದು ವಿಷಯ ಅತ್ಯಂತ ಸೆಳೆಯಿತು. ಆಗಲೇ ಅವಳು ಅದಕ್ಕೆ ಬಲಿಯಾದಳು, ಈಗಲೂ ಇದೇ ವಿಷಯ ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ವಿಸ್ತಾರವಾಗಿ ಮುದ್ರಣವಾಗುತ್ತಿದೆ. ಅದೆಂದರೆ, ಲೈಂಗಿಕ ಹಿಂಸೆ. ಅಂಜನೀಬಾಯಿ ಎಷ್ಟು ರೂಪವತಿಯಾಗಿದ್ದಳೆಂದರೆ, ಅವಳ ಗುರು ನಝೀರ್ ಖಾನರು 'ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳಬೇಡ' ಎಂದು ತಾಕೀತು ಮಾಡಿದ್ದರಂತೆ. ಖ್ಯಾತ ಕಲಾವಿದ ರವಿವರ್ಮ ಮುಂಬಯಿಗೆ ಬಂದಾಗ, ಇವಳ ಸೌಂದರ್ಯಕ್ಕೆ ಮಾರುಹೋಗಿ ಆತ 4-5 ಚಿತ್ರಗಳನ್ನು ಮಾಡಿದನಂತೆ. 'ಜೋಕಾಲಿಯ ಮೇಲಿನ ಸುಂದರಿ', 'ಸ್ವರಬಾಟ್ (ವಾದ್ಯ)ದೊಂದಿಗೆ ಸುಂದರಿ' ಹೀಗೆ ಅನೇಕ ಚಿತ್ರಗಳನ್ನು

ಬಿಡಿಸಿ ತನ್ನದೇ ಆರ್ಟ್‌ಪ್ರೆಸ್ಸಿನಲ್ಲಿ ಮುದ್ರಿಸಿ, ಅವಳನ್ನು ಪ್ರಸಿದ್ಧಿಯ ಶಿಖರಕ್ಕೆ ಮುಟ್ಟಿಸಿದ್ದೂ ಆ ಕಾಲದ ಒಂದು ಸುದ್ದಿ. ಹಾಡುಗಾರಿಕೆ, ನೃತ್ಯ, ಕಲೆಯ ವಿಷಯದ ಪರಿಪೂರ್ಣಜ್ಞಾನ ಹೀಗೆ ಆ ಕಾಲದ ಅವಳ 'ಅರಮನೆ' ಅನೇಕ ವಿದ್ಯಾವಾಚಸ್ಪತಿಗಳ ಕೂಡುತಾಣವಾಗಿತ್ತು. ಈಗಲೂ, ಅಂದರೆ 2015ರ ಮೇ ತಿಂಗಳಿನಲ್ಲಿ ಕೂಡ, ನೀವು ನಾನಾ ಚೌಕದಿಂದ ಕೆನೆಡಿ ಬ್ರಿಡ್ಜನ (ಪವನ ಪೂಲ) ಮೇಲೆ ನಡೆದುಕೊಂಡು ಮುಂದೆ ಸಾಗಿದಾಗ 'ನಾರಾಯಣ ಆಶ್ರಮ' ಎಂಬ ಒಂದು ಚಿಕ್ಕದಾದ ಆದರೆ ಚೊಕ್ಕದಾದ ಮನೆ ಕಾಣಿಸುತ್ತದೆ. 'ಮಿಸ್ತ್ರಿ ಹಾಸ್ಪಿಟಲ್' ಬೋರ್ಡು ನಿಮ್ಮನ್ನು ಸ್ವಾಗತಿಸುತ್ತದೆ. ಇದೇ 'ಅಂಜನೀಬಾಯಿ ಮಾಲಪೇಕರ'ರ ಸದನವಾಗಿತ್ತು. ಇಲ್ಲಿಯೇ ಎಂ.ವಿ. ಧುರಂಧರ ಹಾಗೂ ರವಿವರ್ಮರಂತಹ ಅಂತಾರಾಷ್ಟ್ರೀಯ ಕೀರ್ತಿಯ ಕಲಾವಿದರು ಅಂಜನೀಬಾಯಿಯ ಚಿತ್ರಗಳನ್ನು ಬಿಡಿಸಿದ್ದು. "ಇಬ್ಬರು ಗೆಳತಿಯರು' – ರವಿವರ್ಮನ ಚಿತ್ರದಲ್ಲಿಯ ಗೆಳತಿಯರು ಕೆಳಗೆ ರಸ್ತೆಯ ರಹದಾರಿಯನ್ನು ಇಣುಕಿನೋಡುತ್ತಿದ್ದ ಚಿತ್ರ ಇದು. ನೀವು ಒಂದು ಕ್ಷಣ ನಿಂತು ಆ ವಾಸ್ತುವನ್ನು ಸೂಕ್ಷ್ಮವಾಗಿ ನೋಡಿದರೆ, ಆ ಚಿತ್ರದಲ್ಲಿಯ ಕಲಾಕುಸುರಿಯ ಬಗೆಯನ್ನು ಈಗಲೂ ನೀವು ಕಾಣಬಹುದು.

ಆಗಿನ ಕಾಲದ ಅಂದರೆ ಸಾಧಾರಣ ನೂರುವರ್ಷಗಳ ಹಿಂದೆ ಈಚಲಕರಂಜಿಕರ ಬುವಾ, ವಿಷ್ಣು ನಾರಾಯಣ ಭಾತಖಂಡೆ, ಪಲುಸ್ಕರ್ ಪ್ರಭೃತಿಗಳು ಅಂಜನಿಬಾಯಿಯ ಮನೆಯಲ್ಲಿ ನಡೆಯುತ್ತಿದ್ದ 'ಕಾವ್ಯ–ಶಾಸ್ತ್ರ ವಿನೋದ'ದ ಹರಟೆಗಳ ಬಗ್ಗೆ ಬರೆದಿಟ್ಟ ತುಣುಕು ಮಾಹಿತಿ ಅವರು ಬರೆದ ಮರಾಠಿ ಪುಸ್ತಕಗಳನ್ನು ಓದುವಾಗ ಸಿಗುತ್ತದೆ. ಪ್ರಾ. ಬಿ.ಆರ್. ದೇವಧರ್ ಅವರ 'ಸ್ಕೂಲ್ ಆಫ್ ಇಂಡಿಯನ್ ಮ್ಯೂಸಿಕ್' ಅಂಜನೀಬಾಯಿ ಅವರ ಮನೆಯ ಎದುರಿಗೇ ಇದ್ದುದರಿಂದ, ದೇವಧರರೂ ಅಂಜನೀಬಾಯಿಯವರ ಬಗ್ಗೆ ಸಾಕಷ್ಟು ಬರೆದಿದ್ದಾರೆ. ಅವರ ಮನೆಯಲ್ಲಿಯೇ ವಾಸಿಸುತ್ತಿದ್ದ ಕುಮಾರ ಗಂಧರ್ವ ಅವರು ನಾಲ್ಕೈದು ವರ್ಷ 'ಮಾಯಿ'ಯವರ (ಅಂಜನೀಬಾಯಿಯನ್ನು ಆದರದಿಂದ ಸಂಬೋಧಿಸುತ್ತಿದ್ದ ಶಬ್ದ – ಆಯೀ ಎಂಬ ಅರ್ಥ) ಬಳಿ ಕಲಿತಿದ್ದ ರಾಗಗಳ ಬಗ್ಗೆ ವಿವೇಚನೆ ಮಾಡುವಾಗ ಆಗಿಂದಾಗ 'ಮಾಯಿ'ಯನ್ನು ನೆನಪಿಸಿಕೊಳ್ಳುತ್ತಿದ್ದುದು ಎಷ್ಟೋ ಸಲ. ಕಿಶೋರಿ ಅಮೋಣಕರ ಕೂಡ ಅವಳ ಶಿಷ್ಯೆ.

ಅಂಜನೀಬಾಯಿ ಮಾಲಪೇಕರ್ ಹಾಡುಗಾರಿಕೆಯನ್ನು, ಅಂದರೆ ಪಬ್ಲಿಕ್ ಪರ್ಫಾರ್ಮನ್ಸೆಸ್‌ನ್ನು, ಬಿಟ್ಟುಕೊಟ್ಟಿದ್ದು 1920ರಲ್ಲಿ, ಅಂದರೆ ಅವಳ ಪ್ರಾಯದ 37ನೇ ವರ್ಷದಲ್ಲಿಯೇ. 1901ರಲ್ಲಿ ಆಕೆ ವಾಸವ್‌ಜಿ ಕೇರ ಎಂಬ ಧನಿಕ ರಸಿಕನ ಉಪಪತ್ನಿಯಾದಳು. 18ನೇ ವರ್ಷಕ್ಕೆ ಮದುವೆಯಾದರೂ 'ನಾಚ–ಗಾನಾ'ಕ್ಕೆ ಪತಿಯ ವಿರೋಧವೇನೂ ಇರಲಿಲ್ಲ. ಮದುವೆಯಾದ ಒಂದೆರಡು ವರ್ಷಗಳಲ್ಲಿಯೇ ಗೋವಾ ಪ್ರಾಂತದ ಗವರ್ನರ ಜನರಲ್‌ನ (ಪೋರ್ತುಗಾಲದವ) ಆದರದ ಆಮಂತ್ರಣ ಬಂತೆಂದು ಅತ್ಯಂತ ಉಲ್ಲಾಸದಿಂದ ಅಂಜನೀಬಾಯಿ ಪಣಜಿ ಮುಟ್ಟಿ, ಅಲ್ಲಿ ಒಂದೆರಡು ಕಾರ್ಯಕ್ರಮಗಳನ್ನೂ ನೀಡಿದಳು. ಕೊನೆಯ ಕಚೇರಿಯಲ್ಲಿ ಅಲ್ಲಿಯ ಗವರ್ನರ್–ಜನರಲ್ ಈಕೆಯ ಸೌಂದರ್ಯಕ್ಕೆ ಮರುಳಾಗಿ ಅಧಿಕಪ್ರಸಂಗಿತನ ಮಾಡಿದನೆಂದು ಅದೇ ರಾತ್ರಿ ಗೋವಾ ಪ್ರಾಂತದಿಂದ 'ಬದುಕಿದೆಯಾ ಬಡಜೀವವೇ' ಎಂದುಕೊಳ್ಳುತ್ತಾ

ಸಾವಂತವಾಡಿ ಸಂಸ್ಥಾನವನ್ನು ಸೇರಿ ಅಲ್ಲಿಯ ರಾಜಾ ಸಾಹೇಬ್ ಬಾಪೂ ಸಾವಂತರ ಆಶ್ರಯದಲ್ಲಿ ಒಂದೆರಡು ದಿನ ಕಳೆದು ಬ್ರಿಟಿಶ್ ಭಾರತದ ಬೊಂಬಾಯಿಯನ್ನು ಸೇರಿದಳಂತೆ. ಬೊಂಬಾಯಿ ಪ್ರಾಂತದ ಕೊಲಾಬಾ ಜಿಲ್ಲೆಯ ಏಕಮೇವ ಸಂಸ್ಥಾನವೆಂದರೆ ಸಾವಂತವಾಡಿ, ಅದು ಏಕಮೇವ ಹಿಂದು ರಾಜನ ಸಂಸ್ಥಾನ.

1923ರಲ್ಲಿ, ಜಗನ್ನಾಥ ಶಂಕರ್ ಶೇಠ್ ಅವರ ಮಗ ಶಂಕರ ಜಗನ್ನಾಥರ ಪ್ರೇರಣೆಯಿಂದ ಅಂಜನೀಬಾಯಿ ಮಾಲಪೇಕರ್ ಟೌನ್ ಹಾಲಿನ ದರ್ಬಾರ್ ಸಭಾಂಗಣದಲ್ಲಿ ಒಂದು ಕಚೇರಿಯನ್ನು ಏರ್ಪಡಿಸಿ ಹಾಡಿದಳಂತೆ. ಅದೊಂದು ಆ ಕಾಲದ ಕಲಾಜಗತ್ತಿನ ಸುದ್ದಿಯಾಗಿತ್ತು.

1929–30ರಲ್ಲಿ ವಾಸವ್‌ಜಿ ಇದ್ದೆಲ್ಲಾ ಆಸ್ತಿಯನ್ನು ಕಳೆದುಕೊಂಡ. ಈ ಆಘಾತ ತಾಳಲಾರದೇ, ಅಂಜನೀಬಾಯಿಯನ್ನು ಬಿಟ್ಟು ಪರಲೋಕವಾಸಿಯಾದ. ನಾರಾಯಣ ಆಶ್ರಮದ ಒಡತಿಯಾದ ಅಂಜನಬಾಯಿಯು ಒಂದೆರಡು ವರ್ಷಗಳಲ್ಲಿಯೇ ಅದೇ ವಾಸ್ತುವಿನ ಹೊರಗಿನ ಕೋಣೆಯಲ್ಲಿ (ಔಟ್ ಹೌಸ್‌ನಲ್ಲಿ) ತನ್ನ ಉಳಿದ 44–45 ವರ್ಷಗಳನ್ನು ಕಳೆಯಬೇಕಾಯಿತು. ಇದೇ ಕೋಣೆಯಲ್ಲಿಯೇ ಕೊನೆಯ ತನಕ 'ಮಾಯಿ' ಮಾಲಪೇಕರ್ ಅವರು ಕುಮಾರ ಗಂಧರ್ವ, ಕಿಶೋರಿ, ತ್ರ್ಯಂಬಕರಾವ್ ಜಾನೋರಿಕರ್, ಹಾಗೂ ಗುರುಗಳ ಅಂದರೆ ನಝೀರ್ ಖಾನರ ಹಿರಿಯ ಬಂಧುವಿನ ಮಗ ಅಮಾನ್ ಅಲಿಖಾನರಿಗೂ ಸಂಗೀತ ಕಲಿಸುತ್ತಿದ್ದರಂತೆ. ಕನ್ನಡಿಗ ರಮೇಶ ನಾಡಕರ್ಣಿಯವರೂ ಕೆಲಕಾಲ ಅಂಜನೀಬಾಯಿಯವರಲ್ಲಿ ಕಲಿತದ್ದು ಇದೆ.

ಭಾರತದ ಮೊಟ್ಟ ಮೊದಲಿನ ಸಂಗೀತ ನಾಟಕ ಅಕೆಡೆಮಿಯ ಗೌರವ ಸದಸ್ಯತ್ವವನ್ನು 1953ರಲ್ಲಿ ಅಂಜನೀಬಾಯಿಯವರಿಗೆ ಪ್ರದಾನಿಸಲಾಯಿತು. 1974ರಲ್ಲಿ ತಮ್ಮ ದೀರ್ಘಾಯುಷ್ಯವನ್ನು ಲಾವಣ್ಯವತಿ ಅಂಜನೀಬಾಯಿ ಮಾಲಪೇಕರ್ ಅವರು ಮುಗಿಸಿದರು.

ಇವರ ಹಾಡುಗಾರಿಕೆಯ ಎರಡು ಕ್ಲಿಪ್‌ಗಳನ್ನು ಯು ಟ್ಯೂಬಿನಲ್ಲಿ ಕೇಳಬಹುದು. ಅವು ಎರಡು–ಮೂರು ನಿಮಿಷದವು ಅಷ್ಟೆ. ಇವನ್ನು ಒಂದು ಐತಿಹಾಸಿಕ ದಾಖಲೆಯೆಂದು ನಾವೆಲ್ಲ ಸ್ವೀಕರಿಸಬೇಕಷ್ಟೇ ಹೊರತು, ಅವು ಅವರ ಸಂಗೀತದ ಒಂದು ಉತ್ತಮ ಉದಾಹರಣೆ ಎಂದು ಪರಿಗ್ರಹಿಸುವ ಆಗ್ರಹವನ್ನಿಟ್ಟುಕೊಳ್ಳಬಾರದು.

*****

ಅಧ್ಯಾಯ 4

ಅಪರೂಪದ ಧ್ವನಿಮುದ್ರಿಕೆಗಳು

4.1

ಪ್ರಸ್ತಾವನೆ

1902ರಲ್ಲಿ ಗ್ರಾಮೊಫೋನ್ ರೆಕಾರ್ಡಿಂಗ್ ಕಂಪನಿ ಭಾರತದಲ್ಲಿ ಕಾರ್ಯಾರಂಭ ಮಾಡಿದ್ದೇ, ಅದರ ವ್ಯಾಪಾರ ಮುಂದಿನ 8–10ವರ್ಷಗಳಲ್ಲಿ ತುಂಬಾ ಬೆಳೆಯಿತು. 1902 ರಿಂದ 2008 ರವರೆಗೆ ಏರಡೂವರೆ ಲಕ್ಷ ಧ್ವನಿಮುದ್ರಿಕೆಗಳು ಪ್ರಕಾಶಿತವಾದವು. ಈ ಲೇಖನ ಮಾಲೆಯಲ್ಲಿ 1902ರಿಂದ 1932ರ ಅವಧಿಯಲ್ಲಿ ಹೊರಗೆ ಬಂದ ಧ್ವನಿ ಮುದ್ರಿಕೆಗಳನ್ನಷ್ಟೆ ಅತ್ಯಂತ ನಿಖರತೆಯಿಂದ ಹುಡುಕಿ ತೆಗೆಯಲಾಗಿದೆ. ಲಭ್ಯವಾದ ರೆಕಾರ್ಡುಗಳಿಂದ ವಿಸ್ಮೃತಿಗೆ ಸೇರಿಹೋಗಬಹುದಾಗಿದ್ದ ಅಸಂಖ್ಯ ಗಾಯಕ ಗಾಯಕಿಯರು, ವಾದಕ ವಾದಕಿಯರನ್ನು ಗುರುತಿಸಲಾಗಿದೆ. 'ರೆಕಾರ್ಡು ಕಲೆಕ್ಟರ್ಸ್ ಅಸೋಸಿಯೇಶನ್'ನಲ್ಲಿ ಶುದ್ಧ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಉಪಶಾಸ್ತ್ರೀಯ ಸಂಗೀತ, ನಾಟಕದ ಸಂವಾದಗಳು, ಭಾಷಣ, ಪ್ರಹಸನ, ಲೋಕಸಂಗೀತ, ವಾದ್ಯ ಸಂಗೀತ,:ಫಾರ್ಸು, ಪಶು ಪಕ್ಷಿಗಳ ಧ್ವನಿ, ವಾದ್ಯವೃಂದ ಇಷ್ಟೆಲ್ಲ ಪ್ರಕಾರಗಳು ಇವೆ. ಈ 114 ವರ್ಷಗಳಲ್ಲಿ ಅನೇಕ ಮುದ್ರಿಕೆಗಳು ನಾಶವಾಗಿರಬೇಕು ಎಂಬುದು ನಮ್ಮ ಅಂದಾಜು.

ಇದೇ ಅವಧಿಯಲ್ಲಿ ಉತ್ತರ ಮತ್ತು ದಕ್ಷಿಣ ಭಾರತದಲ್ಲಿ 500ಕ್ಕಿಂತ ಹೆಚ್ಚಿನ ಕಲಾವಿದರ ಧ್ವನಿಮುದ್ರಿಕೆಗಳು ಹೊರಬಂದಿದ್ದವು. ಈಗಲೂ ಸಣ್ಣಪುಟ್ಟ ಊರುಗಳಲ್ಲಿ ಈ 78 ಆರ್‌ಪಿಎಮ್ ಗತಿಯ ಮುದ್ರಿಕೆಗಳು ಆಗಾಗ ಸಿಗುತ್ತಲೇ ಇರುತ್ತವೆ. ರೆಕಾರ್ಡ ಕಲೆಕ್ಟರ್ಸ ಅಸೋಸಿಯೇಶನದ ಸಂಗ್ರಹದಲ್ಲಿ, ಮಹಾರಾಷ್ಟ್ರ, ಬಂಗಾಲ ಮತ್ತು ಉತ್ತರ ಭಾರತದ ಗಾಯಕರ ಮುದ್ರಿಕೆಗಳ ಸಂಖ್ಯೆ ತುಂಬಾ ಇದೆ. ಇವರೆಲ್ಲ ಲಖನೌ, ಬನಾರಸ್ ಅವಧ್, ಪಾನಿಪತ, ಜಾಲಂಧರ, ಕಲಕತ್ತಾ, ಪಾಟ್ನಾ, ಗಯಾ, ಮತ್ತು ಮಧ್ಯಪ್ರದೇಶದ ಜಾವರಾ ಶಹರಗಳಿಂದ ಬಂದವರು. ಕಲಕತ್ತೆಯಲ್ಲಿ ಗ್ರಾಮೊಫೋನ್ ಕಂಪನಿಯ ಹೊರತಾಗಿ ಕ್ಲಾಸಿಕ್, ಸ್ಟಾರ್, ಮಿನರ್ವಾ, ಎಮೆರಾಲ್ಡ, ಕಾರಿನೇಥಿಯನ್ ಮೊದಲಾದ ನಾಟಕ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದವರ ನಾಟ್ಯಗೀತೆಗಳ

ರೆಕಾರ್ಡುಗಳು ಇವೆ. ಸೊಷಿಮುಖಿ, ಫಣಿಬಾಲಾ, ಮಿಸ್ ಸುಶೀಲಾ, ಅಚ್ಚೇರಿಯಾ, ವಿನೋದಿನಿ, ಮಿಸ್ ಕಿಟನ್, ಮಿಸ್ ರಾನಿ ಮುಂತಾದ ಹೆಸರುಗಳು ಪ್ರಮುಖವಾಗಿ ಕಾಣಬರುತ್ತವೆ. ನಾಟ್ಯ ಗೀತೆಗಳು ಇಂದಿನ ಚಿತ್ರಗೀತೆಗಳಂತೆ ಜನಪ್ರಿಯವಾಗಿದ್ದವು.

ಇದರ ಹೊರತಾಗಿ ಸಂಗೀತ-ನೃತ್ಯ ವಿಶಾರದರಾದ ಕೋಠಿಕಲಾವಿದರ ರೆಕಾರ್ಡುಗಳು ಸಿಕ್ಕಿವೆ. ಆ ಕಾಲದಲ್ಲಿ ಹೆಸರು ಮಾಡಿದವರೆಂದರೆ, ಅಲ್ಲಾರಾಖಿ, ಅಲ್ಲಾಬಂದಿ, ಅಮೀರ್ ಜಾನ್, ಅಮೀರ್ ನಿಶಾನ್, ಅಶಗರೀ ಜಾನ್, ಅಜೀಜ್ ಜಾನ್, ಅಚ್ಚನಬಾಯಿ, ಬನ್ನಿಜಾನ್, ಭುಬನೇಶ್ವರಿ, ಚುನ್ನಿಬಾಯಿ, ಬಿಂದುಮಾಲ, ದೋಅನ್ನಿಜಾನ್, ಗುಲ್ಜಾರಬೇಗಮ್ ಮೊದಲಾದವರು. ದಕ್ಷಿಣದ ಕೊಯಮುತ್ತೂರ ತಾಯಮ್ಮ, ವೆಂಕಮ್ಮ, ನಾಗಮ್ಮ ಮೊದಲಾದವರೂ ಇದ್ದಾರೆ. ಇವರಲ್ಲಿ ಮುಂಬಯಿಗೆ ಬಂದು ನೆಲೆಸಿದ ಗೋವಾ ಪ್ರಾಂತದ, 'ಬಾಯಿ'ಗಳ ಹೆಸರುಗಳೂ ಇವೆ. ಕಾಶಿ ಕಾರವಾರಕರೀಣ, ಕಸ್ತೂರಿ ಘಾತರಫೇಕರಿಣ, ಭಾಗಾಬಾಯಿ ನಾಡಕೈಕರಿಣ, ನೀರಾಬಾಯಿ ಬಾಂದೋಡಕರೀಣ ಮೊದಲಾದ ಪದಗಳ ಪ್ರಯೋಗ, ಅವರ ಸ್ಥಳ, ಕಾಲ ನಿರ್ದೇಶಿಸುತ್ತವೆ. ಕೆಲವು ಸಲ ಅವರ ಆಶ್ರಯದಾತರ ಹೆಸರುಗಳೂ ಮುದ್ರಿಕೆಗಳಲ್ಲಿ ಕಾಣಿಸಿಕೊಳ್ಳುವದುಂಟು. ಈಗ ಇವುಗಳನ್ನು ಆಲಿಸಿದಾಗ ಕೆಲವು ಅತ್ಯಂತ ಹಾಸ್ಯಾಸ್ಪದವಾಗಿ ಕೇಳಿಸಿದರೂ ಅವು ಆ ಕಾಲದ ಸಮಾಜದ ವ್ಯವಸ್ಥೆ, ಸಮಾಜ ರಚನೆಯ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತವೆ.

ಇಲ್ಲಿ ಇನ್ನೊಂದು ಮಾತು ಹೇಳಬೇಕಾಗಿದೆ. 1930ರಿಂದ ಚಲನಚಿತ್ರ ಯುಗ ಪ್ರಾರಂಭವಾದಾಗ ಆಗಿನ ಚಲನಚಿತ್ರ ಸಂಗೀತಕ್ಕೆ ಈ ವಿಸ್ಮೃತಿಯಲ್ಲಿ ಅಡಗಿದ ಗಾಯಕ-ಗಾಯಕಿಯರ ಮುದ್ರಿಕೆಗಳೇ ಚಾಲನೆ ಕೊಟ್ಟದ್ದು ಕಾಣಿಸುತ್ತದೆ. ಇದೇ ಸುಮಾರಿಗೆ ಸೋಶಿಮುಖಿ ಮತ್ತು ಫಣೀಬಾಲಾ ಇವರ ಧ್ವನಿಯನ್ನು ಮುದ್ರಿಸಿ ಭಾರತದ ಮೊಟ್ಟಮೊದಲಿನ ಧ್ವನಿಮುದ್ರಿಕೆಯನ್ನು ತಯಾರುಮಾಡಲಾಯಿತು.

ಹಲವು ಲೋಕ ಸಂಗೀತ ಪ್ರಕಾರಗಳನ್ನೂ ಮುದ್ರಿಸಿಕೊಂಡು ಇಟ್ಟದ್ದರಿಂದ ಈಗ ಕೇಳಲು ಸಿಗದಂತಹ ಅನೇಕ ಪ್ರಕಾರಗಳನ್ನು ಅಭ್ಯಾಸ ಮಾಡಲು ಇತಿಹಾಸಕಾರರಿಗೆ ಅನುಕೂಲವಾಯಿತು. ಸಂಶೋಧಕರಿಗಾಗಿ ಉತ್ತರಪ್ರದೇಶದ ಎಸ್.ಪಿ ಜೈನ್ ಎಂಬವರು 1935ರಲ್ಲಿ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಎರಡುಸಾವಿರ ಧ್ವನಿಮುದ್ರಿಕೆಗಳನ್ನು ಕೇಳಿ ಅವುಗಳ ಹಾಡುಗಳ ಒಂದು ಪುಸ್ತಕವನ್ನೇ, 'ಹಿಂದಿ ಗ್ರಾಮೊಫೋನ್ ಸಂಗೀತ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿಯ ಒಂದು ಹಾಡನ್ನು ಓರ್ವ ಮಿಸ್ ಅಖ್ತರಿ ಜಾನ್ ಹಾಡಿದ್ದು, ಮುಂದೆ ಅದು, 'ಪಾಕೀಜಾ' ಚಿತ್ರದಲ್ಲಿ ಕಾಣಿಸಿಕೊಂಡು, ಜನಪ್ರಿಯವಾದದ್ದನ್ನು ಉದಾಹರಣೆಯಾಗಿ ಇಲ್ಲಿ ಕೊಡುತ್ತಿದ್ದೇನೆ. ಇದು ದಾದ್ರಾದಲ್ಲಿದ್ದು (ಪಿ.3682) ಪ್ರಾತಿನಿಧಿಕವಾಗಿ ಆಲಿಸಬಹುದಾಗಿದೆ. ಇದನ್ನು ಕೃತಿಚೌರ್ಯ ಎನ್ನಬಹುದೆ?

ಇನ್ಹೀ ಲೊಗೋಂನೆ ಲೆ ಲೀನಾ ದುಪಟ್ಟಾ ಮೆರಾ
ನ ಜಾನೋ ಬರಜವಾಸೇ
ಪೂಛೋ ಜಿಸನೇ ಅಶರ್ಫಿ ಗಜ ದೀನಾ ದುಪಟ್ಟಾ ಮೆರಾ॥

1990ರ ದಶಮಾನದಲ್ಲಿ ಆಸ್ಟ್ರೇಲಿಯಾದಿಂದ ಬಂದ ಮೈಕೇಲ್ ಕಿನ್ನರ ಮತ್ತು ಇಲ್ಲಿಯ ರೆಕಾರ್ಡ್ ಕಲೆಕ್ಟರ್ಸ್ ಅಸೋಸಿಯೇಶನ್ನಿನ ಕಾರ್ಯದರ್ಶಿಗಳಾದ ಡಾ. ಸುರೇಶ್ ಚಾಂದವಣಕರ್ ಇವರ ಭೇಟಿಯ ಫಲಿತವೆಂದರೆ ಈ ಅಪರೂಪದ ಧ್ವನಿಮುದ್ರಿಕೆಗಳ ಸಂಶೋಧನೆ. ಇದರ ಮತ್ತೊಂದು ಲಾಭವೆಂದರೆ ಸ್ಮೃತಿಯಲ್ಲಿ ಅಡಗಿಹೋಗಿದ್ದ ಆರ್‌ಪಿಜಿಯವರ ಎಚ್‌ಮ್‌ವಿ ಲೇಬಲ್ಲಿನ 50 ಧ್ವನಿಸುರುಳಿಗಳ ಪುನರ್ಮುದ್ರಣ! ಇದರ ಹೆಸರು 'ಚೇರಮನ್ಸ್ ಛಾಯ್ಸ್' ಎಂದಿಟ್ಟರು. ಮುಂದೆ ಇವುಗಳು ತುಂಬ ಪ್ರಸಿದ್ಧಿಗೆ ಬಂದವು. ಆದರೆ, ಅವುಗಳಲ್ಲಿ ಕಲಾವಿದರ ಹೆಸರುಗಳನ್ನು ಬಿಟ್ಟು ಮತ್ತೇನೂ ಮಾಹಿತಿ ಇರಲಿಲ್ಲ ! ಕೆಲವು ಧ್ವನಿಮುದ್ರಿಕೆಗಳಲ್ಲಿ, ತಬಲಾ, ಸಾರಂಗಿ ಮತ್ತು ಹಾರ್ಮೋನಿಯಂ ಬಾರಿಸುವವರ ಹೆಸರೂ ಕೂಡ ಇರಲಿಲ್ಲ!

ಇದರ ಸಂಶೋಧನೆ ಮೈಕೇಲ್ ಕಿನ್ನರ ತೋರಿಸಿದ ಹಾದಿಯಲ್ಲಿ ನಡೆದು ಮುಂದೆ ಸುರೇಶ್ ಚಾಂದವಣಕರ್ ಮತ್ತಿತರರು ಸಂಶೋಧನೆ ಮಾಡಿ, ಅಲ್ಲಿಂದ ಇಲ್ಲಿಂದ ಮತ್ತು ನಾಲ್ಕೂ ಕಡೆಯಿಂದ (ಕೆಲವು ಸಲ ಹುಬ್ಬಳ್ಳಿ–ಧಾರವಾಡ ಊರುಗಳಿಂದ ಕೂಡ!) ಮಾಹಿತಿ ಒಟ್ಟುಗೂಡಿಸಿದ ಫಲಿತಾಂಶವೇ ಈ ಲೇಖನಮಾಲೆಯ ಮೂಲವಾಗಿದೆ. ಇವೆಲ್ಲ ಮೊದಲು ಅಂದರೆ 2002ರಲ್ಲಿ ಮಹಾರಾಷ್ಟ್ರ ಟೈಮ್ಸ್‌ನಲ್ಲಿ ಪ್ರಕಟವಾಗಿ ಒಟ್ಟು 20 ಕಾಲಮ್‌ಗಳು ಬೆಳಕಿಗೆ ಬಂದವು.

ಒಂದು ಕಾಲದಲ್ಲಿ ಈ ಮುದ್ರಿಕೆಗಳೊಂದಿಗೆ ಅವುಗಳ ಮುಖಪೃಷ್ಠದ ಮೇಲೆ ಹಾಡುವವರ ಚಿತ್ರ ಅಚ್ಚು ಹಾಕಿ ಸ್ವಲ್ಪ ಮಾಹಿತಿ ಕೊಡುವ ರೂಢಿ ಇತ್ತು. ಇವೆಲ್ಲ ಕೇವಲ 78 ಆರ್‌ಪಿಎಮ್ ಮುದ್ರಿಕೆಗಳಿಗಷ್ಟೇ ಸೀಮೀತವಾಗಿತ್ತು. ಈ ನಮ್ಮ ಸಂಶೋಧನೆ ಕೂಡ ಸದ್ಯಕ್ಕೆ 78 ಆರ್‌ಪಿಎಮ್ ವೇಗದ ಮುದ್ರಿಕೆಗಳಿಗಷ್ಟೇ ಸೀಮಿತವಾಗಿದೆ. ಇದರಲ್ಲಿ ಎರಡು ಪ್ರಕಾರಗಳು, ದೊಡ್ಡ ಆಕಾರದ 6 ನಿಮಿಷದ ಮುದ್ರಿಕೆಗಳು ಮತ್ತು 2 ನಿಮಿಷಗಳಿಗಿಂತ ಸ್ವಲ್ಪ ಕಡಿಮೆ ವೇಳೆಯವು. ಮುಂದೆ ಗ್ರಾಮೋಫೋನ ರಿಕಾರ್ಡಿಂಗ ಕಂಪನಿಯವರು ಎಕ್ಸಟೆಂಡೆಡ್ ಪ್ಲೆ (45 ಆರ್‌ಪಿಎಮ್) ಮತ್ತು ಲಾಂಗ್ ಪ್ಲೇ (331/4 ಆರ್‌ಪಿಎಮ್) ರಿಕಾರ್ಡ್ಸ್‌ಗಳನ್ನು ಬೆಳಕಿಗೆ ತಂದರು. ಇವುಗಳ ಬಗ್ಗೆ ಈ ಲೇಖನ ಮಾಲೆಯಲ್ಲಿ ನಾವು ಉಲ್ಲೇಖ ಮಾಡುವ ಕಾರಣ ಇಷ್ಟೆ. ಇವೆಲ್ಲ 1955ರ ನಂತರದ ವಿಷಯಗಳು. ಈ ಮಾಲಿಕೆಯಲ್ಲಿ ಕೇವಲ 28–29 ವರ್ಷಗಳ ಕಾಲಖಂಡವನ್ನಷ್ಟೇ ಸೇರಿಸಲಾಗಿದೆ. ಓದುಗರು ಮನ್ನಿಸಬೇಕು.

*****

4.2

ಭೂಗಂಧರ್ವ ರಹಿಮತ್‌ಖಾನ ಹದ್ದು ಖಾನ (1860–1922)

ಈ ಸರಣಿಯಲ್ಲಿ, ಗ್ವಾಲಿಯರ್ ಪರಂಪರೆಯ ಜನಕರೆಂದು ಖ್ಯಾತಿವೆತ್ತ ಹದ್ದು-ಹಸ್ಸು ಬಂಧುಗಳಲ್ಲಿಯ ಹದ್ದುಖಾನರ ಮಗ ರಹಿಮತ್ ಖಾನರು ಮೊದಲನೆಯವರು. ಹದ್ದುಖಾನರಿಗೆ ಮೂವರು ಗಂಡುಮಕ್ಕಳು – ಭೋಟೆ ಮಹಮ್ಮದ್, ಹೈದರ್ ಮತ್ತು ರಹಿಮತ್. ದೊಡ್ಡಪ್ಪನವರಲ್ಲಿ ಸಂಗೀತವನ್ನು ಕಲಿತ ರಹಿಮತ್‌ರ ಕಂಠ ಅತ್ಯಂತ ಮಧುರವಾಗಿತ್ತು. ಹೀಗಾಗಿ ಅವರ ಹೆಸರಿನೊಂದಿಗೆ ಭೂಗಂಧರ್ವ ಎಂಬ ಉಪನಾಮ ಕೂಡ ಸೇರಿತ್ತು.

ವಿಕ್ಷಿಪ್ತ ರೀತಿ–ನೀತಿ, ಫಕೀರಿ ಪ್ರವೃತ್ತಿ ಮೇಲಾಗಿ ಅಫೀಮಿನ ಬುತ್ತಿ ಕಿಸೆಯಲ್ಲಿ. ಹೀಗಾಗಿ ರಹಿಮತ್ ಖಾನರು ಅಲೆಮಾರಿತನದ ಜೀವನವನ್ನು ಕೊನೆಯವರೆಗೂ ಬಾಳಿದರು. ಅಫೀಮಿನ ಮತ್ತಿನಲ್ಲಿ ತನ್ನಷ್ಟಕ್ಕೆ ತಾನೇ ಹಾಡು ಹೇಳುತ್ತಾ, ಗುಣುಗುಣಿಸುತ್ತಾ ನಡೆಯುವುದು ಅಭ್ಯಾಸದ ಫಲವಾಗಿ ಬಿಟ್ಟಿತ್ತು. ಇವರ ತಂದೆ ಹದ್ದುಖಾನರು 'ಛತ್ರೆ ಸರ್ಕಸ್ಸಿ'ನ ಮಾಲಿಕರಾದ ವಿಷ್ಣುಪಂತ ಛತ್ರೆಯವರಲ್ಲಿ ಸಂಗೀತವನ್ನು ಕಲಿತಿದ್ದರು. ಬನಾರಸ್ಸಿನಲ್ಲಿ ಬೀದಿ ಬೀದಿ ಅಲೆಯುತ್ತಿದ್ದ ರಹಿಮತ್‌ನನ್ನು ಛತ್ರೆಯವರು ತನ್ನಲ್ಲಿಟ್ಟು ಅವರ ಅಫೀಮಿನ ವ್ಯಸನವನ್ನು ಹತೋಟಿಗೆ ತಂದರು. ನಂತರ ತಮ್ಮ ಸರ್ಕಸ್ಸಿನ ಮೇಳದೊಂದಿಗೆ ರಹಿಮತ್ ಖಾನರನ್ನೂ ಸೇರಿಸಿ ದಕ್ಷಿಣಕ್ಕೆ ಕೂಚು ಮಾಡಿದರು. ಪ್ರತಿಯೊಂದು ಊರಿನಲ್ಲಿ ಸರ್ಕಸ್ಸಿನ ಡೇರೆ ಹಾಕಿದ ಮೇಲೆ ಅಲ್ಲಿ ಭೂಗಂಧರ್ವರ ಕಚೇರಿ ಏರ್ಪಡಿಸಿ ರಸಿಕ ಜನರಿಗೆ ಸ್ವರಸಮಾರಾಧನೆ ಮಾಡಿಸುತ್ತಿದ್ದರು. 1905ರಲ್ಲಿ ವಿಷ್ಣುಪಂತ ಛತ್ರೆಯವರು ತೀರಿಕೊಂಡರೂ ಅವರ ತಮ್ಮ ಕಾಶೀನಾಥ ಕೂಡ ರಹಿಮತ್ ಖಾನರ ಕಾಳಜಿ ವಹಿಸಿದರು. ಅವರಿಗೇ ಎಷ್ಟು ಬೇಕೋ ಅಷ್ಟೆ ಅಫೀಮು ಕೊಟ್ಟು ಅವರ ಗಾಯನಕಲೆ ವ್ಯರ್ಥವಾಗದಂತೆ ನೋಡಿಕೊಂಡರು.

ಗೋವಿಂದರಾವ್ ಟೆಂಬೆ ಅವರು 'ಮಾಝಾ ಸಂಗೀತ ವ್ಯಾಸಂಗ' (ನನ್ನ ಸಂಗೀತ ವ್ಯಾಸಂಗ) ಎಂಬ ತಮ್ಮ ಪುಸ್ತಕದಲ್ಲಿ ಭೂಗಂಧರ್ವರ ಬಗ್ಗೆ ವಿಸ್ತಾರವಾಗಿ ಬರೆದಿಟ್ಟಿದ್ದರಿಂದ ನಮ್ಮಂತಹವರಿಗೆ ಅವರ ಗಾಯನ ಕಲೆಯ ಬಗ್ಗೆ ಸಾಕಷ್ಟು ಮಾಹಿತಿ ಸಿಗುತ್ತದೆ. ಅವರು ಭೂಗಂಧರ್ವರ 25–30 ಕಚೇರಿಗಳನ್ನಾದರೂ ಕೇಳಿರಬೇಕು.

‘ಭೂಗಂಧರ್ವರ ತಾನಗಳೆಂದರೆ ಬೀಜವಿಲ್ಲದ ಕಾಬೂಲೀ ಸಿಹಿ ದ್ರಾಕ್ಷೆಗಳನ್ನು ಜೇನುತುಪ್ಪದಲ್ಲಿ ಅದ್ದಿ ತಿಂದ ಹಾಗೆ’ ಎಂದು ಬರೆದಿಟ್ಟಿದ್ದಾರೆ. ಕರೀಂಖಾನರೂ ಕೆಲಕಾಲ ಭೂಗಂಧರ್ವರಲ್ಲಿ ಶಾಗೀರ್ದಿ(ಶಿಷ್ಯತ್ವ) ಮಾಡಿದ್ದರೆಂದೂ ಈ ಪುಸ್ತಕದಲ್ಲಿದೆ.

ಛತ್ರೆ ಬಂಧುಗಳಿಬ್ಬರ ನಿಧನವಾದ ನಂತರವೂ ಮಿರಜ, ಕುರುಂದವಾಡದಲ್ಲಿ ಇವರ ಕಚೇರಿಗಳು ಆಗಾಗ ಆಗುತ್ತಿದ್ದವಂತೆ. 1922ರಲ್ಲಿ ಕುರುಂದವಾಡದಲ್ಲಿಯೇ ಇವರು ಪೈಗಂಬರವಾಸಿಗಳಾದರು. ಅಲ್ಲಿ ಇವರ ಸಮಾಧಿ ಈಗಲೂ ಅತ್ಯಂತ ಹೀನಸ್ಥಿತಿಯಲ್ಲಿದೆ.

1919ರಲ್ಲಿ ಗ್ರಾಮೊಫೋನ್ ಕಂಪನಿಯವರು ಇವರ 6 ಮುದ್ರಿಕೆಗಳನ್ನು (ಪಿ–4696 – ಪಿ–4701) ತಯಾರಿಸಿದರು. ಇವುಗಳಲ್ಲಿ 11 ರಾಗಗಳನ್ನು ಧ್ವನಿಮುದ್ರಣ ಮಾಡಲಾಗಿದೆ. ಈ ಮುದ್ರಣಗಳಲ್ಲಿ ‘ಮಾಲಕೌಂಸ್, ಭೂಪ್’, ‘ತಿಲಂಗ್’, ‘ಬಸಂತ್’, ‘ಪೀಲೂ,’ ‘ಭೈರವಿ’ ‘ಹೋರಿ’, ‘ಟಪ್ಪಾ’ – ಇವುಗಳೆಲ್ಲಾ ಸೇರಿವೆ. ಎಕೌಸ್ಟಿಕ್ ಪದ್ಧತಿಯಲ್ಲಿ ಧ್ವನಿಮುದ್ರಣವಾಗಿದೆ, ಅದೂ ಅವರ ಮುಪ್ಪಿನಲ್ಲಿ ಮಾಡಿದ್ದರಿಂದ ಧ್ವನಿ ಕ್ಷೀಣವಾಗಿ ಕೇಳಿಸುತ್ತದೆ. ಅವರ ಧ್ವನಿಮುದ್ರಣದ ಕತೆಯನ್ನು ಮಾಸ್ಟರ್ ಕೃಷ್ಣರಾವರು ಅತ್ಯಂತ ರಸವತ್ತಾಗಿ ಬರೆದಿದ್ದು ಓದುಗರ ಮನೋರಂಜನೆಗಾಗಿ ಅದನ್ನು ಈ ಕೆಳಗೆ ಕೊಟ್ಟಿದ್ದೇನೆ.

“ನಾನು ಮತ್ತು ಬಾಲಗಂಧರ್ವ ಅವರಿಗೆ ಹುರುಪು ನೀಡಲು ತಂಬೂರಿಯ ಮೇಲೆ ಸಾಥ್ ಮಾಡಲು ಕುಳಿತಿದ್ದೆವು. ರಾಜಣ್ಣ ತಬಲಾ ಸಾಥಿಗೆ ಮತ್ತು ಬಳವಂತರಾವ್ ರುಕಡಿಕರ ಹಾರ್ಮೋನಿಯಂ. ಅಕೌಸ್ಟಿಕ್ ಪದ್ಧತಿ ಅಂದರೆ ಗ್ರಾಮೋಫೋನಿನ ತುತೂರಿಯಲ್ಲಿಯೇ ಹಾಡಬೇಕಾದುದರಿಂದ ಅವರಿಗೆ ಸಿಟ್ಟು ಬಂದು ಯದ್ವಾತದ್ವಾ ಮಾತನಾಡಲು ಆರಂಭಿಸಿದರು. ಅವರ ಲಕ್ಷ್ಯ ಒಂದೇ ಕಡೆಯಲ್ಲಿ ಇರಬೇಕೆಂದು ಕಣ್ಣೆದುರಿಗೆ ಎಚ್‌ಎಮ್‌ವಿಯವರ ನಾಯಿ ಮತ್ತು ಫೋನೋದ ದೊಡ್ಡ ಚಿತ್ರಗಳನ್ನು ಹಚ್ಚಲಾಗಿತ್ತು. ಮೊದಲ ಟೇಕ್ ಸರಿಯಾಗಿದೆಯೋ ಇಲ್ಲವೋ ಎಂದು ನೋಡಲು ಅವರ ರಿಕಾರ್ಡು ಹಚ್ಚಿದ ಕೂಡಲೇ ಅವರು ‘ಯಾರಿಂವ, ನನ್ನ ಹಂಗs ಹಾಡ್ತಾನ’ ಎಂದು ಸಿಟ್ಟು ಬಂದು ಹೋಗಬೇಕೆಂದು ಎದ್ದಾಗ ಅವರನ್ನು ಸಮಾಧಾನಪಡಿಸಬೇಕಾದರೆ ಬಾಲಗಂಧರ್ವರಿಗೆ, ನನಗೆ ಸಾಕುಬೇಕಾಯಿತು!

ಯಮನ್ ರಾಗ ಮತ್ತು ‘ಜಮುನಾ ಕೇ ತೀರ ಕಾನ್ಹಾ’ ಇವೆರಡು ಮುದ್ರಿಕೆಗಳನ್ನು ಧ್ವನಿಸುರುಳಿಗಳಲ್ಲಿ 2000ದಲ್ಲಿ ಮರಳಿ ತರಲಾಗಿದೆ.

*****

4.3

ಸಿತಾರ್‌ರತ್ನ ರಹಮತ್‌ಖಾನ ಧಾರವಾಡಕರ್ (1863–1954)

ಉತ್ತರ ಕರ್ನಾಟಕದಲ್ಲಿ ಸಿತಾರ್ ಸಂಸ್ಕೃತಿ ರೂಢಿಗೊಳಿಸಿದವರು ರಹಮತ್‌ಖಾನ ಧಾರವಾಡಕರ್‌ರವರು. 1863ರಲ್ಲಿ ಹುಟ್ಟಿದ ರಹಮತ್‌ಖಾನರು ಕಿರಾನಾ ಮನೆತನದವರೇ. ಅಬ್ದುಲ್ ಕರೀಂ ಖಾನರ ಚಿಕ್ಕಪ್ಪ. ದೊಡ್ಡಪ್ಪ ಭಾವನಗರ, ಲಿಮ್ಡಿ ಇತ್ಯಾದಿ ಅನೇಕ ಸಂಸ್ಥಾನಗಳಲ್ಲಿ ರಾಜಗಾಯಕರೆಂದು ಹೆಸರು ಗಳಿಸಿದವರು. ಇವರ ತಂದೆ ಗುಲಾಮ ಹುಸೇನ್, ಭಾವನಗರ ಸಂಸ್ಥಾನದ ರಾಜಗಾಯಕರಾದರೂ, ಪುಟ್ಟ ರಹಮತ್ ಬೀನ ಬಾರಿಸಲು ತವಕ ಪಡುತ್ತಿದ್ದ. ಅದೇ ಸಂಸ್ಥಾನದ ಸಿತಾರ್/ಬೀನ ವಾದಕ ಸೋದರಮಾವನಲ್ಲಿ ಸಿತಾರ್ ಕಲಿಯಲು ಪ್ರಾರಂಭ ಮಾಡಿದ. ನಾಲ್ಕು ವರ್ಷ ಸಿತಾರ್ ಕಲಿತ. ಸೋದರಮಾವನ ಕೃಪೆಯಿಂದ 10–15 ವರ್ಷ ಪ್ರಾಯದಲ್ಲಿಯೇ, 'ಉಸ್ತಾದ್‌ನಾದ'! ಲಿಮ್ಡಿ ದೊರೆಗಳ ಅಪ್ಪಣೆಯಾದುದರಿಂದ ಅಲ್ಲಿ ಸಿತಾರ್‌ದ ಮೊಟ್ಟ ಮೊದಲಿನ ಕಚೇರಿ ಮಾಡಿದ. ಮುಂದೆ ಗುಜರಾತ ಮತ್ತು ಪಂಜಾಬ್‌ದ ಅನೇಕ ಸಂಸ್ಥಾನಗಳಿಂದ ಸಿತಾರ್ ವಾದನಕ್ಕೆ ಆಮಂತ್ರಣ ಬಂದಿತು. ಇವರ ಖ್ಯಾತಿ ಮಧ್ಯ ಪ್ರದೇಶದ ರಾಯಗಢ ಸಂಸ್ಥಾನದವರೆಗೂ ಮುಟ್ಟಿತು. ಆದರೂ ಇನ್ನೂ ಕಲಿಯುವ ಹುಮ್ಮಸ್ಸು. ತನ್ನದೇ ಮನೆತನದ ಬೀನವಾದಕ, ಇಂದೂರ್ ಮತ್ತು ಮುಂದೆ ಪುಣೆಯಲ್ಲಿ ಸ್ಥಾಯಿಕರಾದ ಬಂದೇ ಅಲಿಯವರಲ್ಲಿ ಶಿಕ್ಷಣ ಮುಂದುವರೆಸಿದರು.

ರಹಮತ್‌ಖಾನರು ಪ್ರಚಲಿತ ಸಿತಾರ್‌ದಲ್ಲಿ ಸಾಕಷ್ಟು ಪರಿವರ್ತನೆ ಮಾಡಿ ಗಾತ್ರವನ್ನು ಬದಲಾಯಿಸಿದರು. ತಂತಿಗಳ ಸಂಖ್ಯೆಯನ್ನು ಹೆಚ್ಚಿಸಿ ಚಿಕಾರಿ ಮತ್ತು ಮೂರು ಷಡ್ಜ ಮಧ್ಯಮಗಳ ತಂತಿಗಳನ್ನು ಸೇರಿಸಿದ್ದರಿಂದ ಇವರ ಸಿತಾರ್ ಆಗ ಅಸ್ತಿತ್ವದಲ್ಲಿದ್ದ ಸಿತಾರ್ ಬೀನ್‌ಗಿಂತ ಇಂಪಾಗಿ ಕೇಳಿಸುತ್ತಿತ್ತು. ನಾಲ್ಕು ಸಪ್ತಕಗಳಲ್ಲಿಯ ಸಿತಾರ್! ಭಾತಖಂಡೆ ಮತ್ತು ವಿಷ್ಣು ದಿಗಂಬರ ಪಲುಸ್ಕರ ಇಂತಹ ವಿಭೂತಿಗಳೆಲ್ಲ ಬೊಂಬಾಯಿಯನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡಿದ್ದರಿಂದ ರಹಮತ್ ಖಾನರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಮಂತ್ರಣ ಸ್ವೀಕರಿಸಿ, ಮೈಸೂರಿನಲ್ಲಿಯೂ ಹೆಸರು ಗಳಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ವತ: ವೈಣಿಕ ವಿದ್ವಾನರಾಗಿದ್ದರಿಂದ ಅವರಿಗೆ ರಹಮತ್ ಖಾನರ ವಾದನ ತುಂಬ ಹಿಡಿಸಿತು.

ಅವರೇ ರಹಮತ್ ಖಾನರಿಗೆ, 'ಸಿತಾರ್‌ರತ್ನ' ಎಂಬ ಬಿರುದನ್ನು ದಯಪಾಲಿಸಿದರು. ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಗುಜರಾತದ ಸಂಸ್ಥಾನಗಳಲ್ಲಿ ಕೂಡ ಮಾನ್ಯತೆಯನ್ನು ಪಡೆದಿದ್ದುದರಿಂದ ರಹಮತ್ ಖಾನರು ಮೈಸೂರು ಆಸ್ಥಾನದ ವಿದ್ವಾಂಸರಾಗಲು ಒಪ್ಪದೇ ಮಧ್ಯದಲ್ಲಿದ್ದ ಪುಣೆಯಲ್ಲಿ ವಸತಿ ಹೂಡಿ, ಕಾಲಕಾಲಕ್ಕೆ ಮೈಸೂರಿಗೂ ಹೋಗಿ ಬರುತ್ತಿದ್ದರು. ಎರಡು ಕೈಗಳಿಂದ ಅತ್ಯಂತ ಸರಾಗವಾಗಿ ನುಡಿಸುತ್ತಿದ್ದ ರಹಮತ್ ಖಾನರ ಸಿತಾರ್ ಆಗಿನ ಕಾಲದಲ್ಲಿ ಖ್ಯಾತಿ ಪಡೆದ ಇನಾಯತ್ ಖಾನ್ (ಇವರು ವಿಲಾಯತ್ ಖಾನರ ತಂದೆ), ಹಫೀಜ್ ಅಲಿ (ಇವರು ಸರೋದಿನ ಅಮಜದ್ ಅಲಿಯವರ ತಂದೆ), ಅಲ್ಲಾ ಉದ್ದಿನ್ ಮೈಹರ್ (ಅಲಿ ಅಕಬರ್ ಖಾನರ ತಂದೆ) ಇವರ ವಾದನಕ್ಕಿಂತ ಶ್ರೇಷ್ಠವಾಗಿತ್ತು ಎಂಬುದು ಆಗ ಮಾಡಿದ 78 ಆರ್‌ಪಿಎಮ್ ಧ್ವನಿಮುದ್ರಿಕೆಗಳನ್ನು ಹೋಲಿಸಿ ನೋಡಿದರೆ ಮನದಟ್ಟಾಗುತ್ತದೆ. ಇವರ ಆರು ರಾಗಗಳ ಮೂರು ಧ್ವನಿಮುದ್ರಿಕೆಗಳಲ್ಲಿ (ಭೈರವಿ, ಮಾಲಕೌಂಸ, ಜೋಗಿಯಾ, ಲಲಿತ್, ಜೌನಪುರಿ, ಮತ್ತು ಪರಜ್) ರಾಗರಸ ಉತ್ತಮವಾಗಿದ್ದು, ಆಲಾಪಿಯ ನಡಿಗೆ ಅತ್ಯಂತ ಭಾವಪೂರ್ಣವಾಗಿದ್ದುದನ್ನು ಕಾಣಬಹುದು.

ಮುಂದೆ ಮೈಸೂರು ಮಹಾರಾಜರ ಒತ್ತಾಯ ಮತ್ತು ಪುಣೆಯಲ್ಲಿಯ ವಾಸ್ತವ್ಯದಿಂದ ಬೇಜಾರಾದ ರಹಮತ ಖಾನರಿಗೆ ಧಾರವಾಡದ ಸೃಷ್ಟಿ ಸೌಂದರ್ಯ ತುಂಬ ಹಿಡಿಸಿತು. 1912ರಲ್ಲಿಯೇ ಧಾರವಾಡದಲ್ಲಿ ಒಂದು ಮನೆ ಮಾಡಿ ಪುಣೆಯಿಂದ ಧಾರವಾಡಕ್ಕೆ ಮುಂದಿನ 5/6 ವರ್ಷಗಳಲ್ಲಿ ಸ್ಥಳಾಂತರಿಸಿದರು. 1954ರಲ್ಲಿ ನಿಧನರಾದ ರಹಮತ್ ಖಾನರು ಕೊನೆಯವರೆಗೂ ತಮ್ಮನ್ನು 'ಸಿತಾರ್‌ರತ್ನ ರಹಮತ್ ಖಾನ್ ಧಾರವಾಡಕರ್' ಎಂದೇ ಸಂಬೋಧಿಸಿಕೊಳ್ಳುತ್ತಿದ್ದರು. ಅವರಿಗೆ ಧಾರವಾಡದ ಮೇಲೆ ಅಷ್ಟು ಪ್ರೀತಿ! ಮಾಳಮಡ್ಡಿಯಲ್ಲಿ ಸಂಗೀತ ಶಾಲೆ ಆರಂಭಿಸಿ, ಮುಂದೆ ಇವರ ಮಗ ಅಬ್ದುಲ್ ಕರೀಂ ಖಾನ್ ಸಿತಾರೆವಾಲೆ ಮತ್ತು ಅವರ ಮಕ್ಕಳು, ಮೊಮ್ಮಕ್ಕಳೂ ಸಿತಾರ್‌ವಾದನದಲ್ಲಿ ಪ್ರವೀಣರಾದರು. ಎರಡನೇ ಮಗ ಬಾಲೇಖಾನರು ಧಾರವಾಡ ಆಕಾಶವಾಣಿಯ ಕಲಾವಿದರಾಗಿದ್ದರು. ಹಮೀದ ಕರ್ನಾಟಕ ಕಾಲೇಜಿನಲ್ಲಿ ಕಲಿಸುತ್ತಿದ್ದರು. (ಎ ಕರೀಂ ಖಾನರೆಂದು) ಅವಳಿ ಮಕ್ಕಳಲ್ಲಿ ಒಬ್ಬರು ಮಂಗಳೂರಿನಲ್ಲಿದ್ದರೆ, ಶಫೀಕ ಖಾನ್, ಗುಲಬರ್ಗಾ ಆಕಾಶವಾಣಿಯಲ್ಲಿದ್ದರು. ಉತ್ತರ ದಿಶೆಯ ಸಿತಾರ್‌ದ ಬಿರುಗಾಳಿಯನ್ನು ವಿಂಧ್ಯದಿಂದೀಚೆಗೆ ತಂದು ಕರ್ನಾಟಕದಲ್ಲಿ ನಿಲ್ಲಿಸಿದ ಶ್ರೇಯ ಈ ರಹಮತ್ ಖಾನ್ ಧಾರವಾಡಕರ್ ಅವರ ಮನೆತನಕ್ಕೆ ಸಲ್ಲುತ್ತದೆ.

*****

4.4

ಆಗ್ರೇವಾಲಿ ಮಲಕಾಜಾನ್ (1866– ?)

ಮೊದಲು ಧ್ವನಿ ಮುದ್ರಿಕೆಗಳನ್ನು ಕೊಟ್ಟ ಗಾಯಕಿಯರಲ್ಲಿ ಮಲಕಾಜಾನ್ ಆಗ್ರೇವಾಲಿಯ ಹೆಸರು ಮುಂಚೂಣಿಯಲ್ಲಿದೆ. ಬಹಳಷ್ಟು ಧ್ವನಿಮುದ್ರಿಕೆಗಳಿದ್ದರೂ ಆಕೆಯ ಹುಟ್ಟು ಸಾವುಗಳ ನೋಂದಣಿ ಎಲ್ಲೂ ಲಭ್ಯವಿಲ್ಲ ಎನ್ನುವದು ವಿಷಾದಕರ. ಮಲಕಾಜಾನ್ ಅಫ್ ಗಯಾ, ಮಲಕಾಜಾನ್ ಚುಲಬುಲೇವಾಲಿ ಇವರ ಹೆಸರಿನ ಧ್ವನಿಮುದ್ರಿಕೆಗಳು ಇದ್ದರೂ ಈ ಮಲಕಾಜಾನ್ ಆಗ್ರೇವಾಲಿ, ಕಲಕತ್ತೆಯ ಗೌಹರಜಾನಳ ಸಮಕಾಲೀನಳು.

ಉತ್ತರಪ್ರದೇಶದ ಅಝಮಗಡ ಆಕೆಯ ಹುಟ್ಟೂರು. 19ನೇ ಶತಮಾನದ ಕೊನೆಯ ದಶಕದಲ್ಲಿ ಔಧದ ನವಾಬ ವಾಜಿದ್ ಅಲಿ ಶಾಹನನ್ನು ಕಲಕತ್ತೆಗೆ ಸ್ಥಳಾಂತರಿಸಲಾಗಿತ್ತು. ಆಂಗ್ಲ ಜೀವನ ಪದ್ಧತಿಯ ಅನುಸಾರವಾಗಿ ಪೂರ್ವದ ಅಪೂರ್ವ ಶಹರವೆಂದು ಕಲಕತ್ತೆ ಪ್ರಪಂಚದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಇದೊಂದು ಉತ್ತರಾದಿ ಸಂಗೀತದ ಠುಮರಿಯ ಕೇಂದ್ರವಾಗಿತ್ತು. ಅಗ್ರಾ ಪರಂಪರೆಯಲ್ಲಿ ಕಲಿತಿದ್ದರಿಂದಲೋ ಅಥವಾ ಅಗ್ರಾದಲ್ಲಿ ನೆಲೆಸಿದ್ದರಿಂದಲೋ ಮಲಕಾಜಾನಳು 'ಆಗ್ರೇವಾಲಿ' ಎಂದೇ ಖ್ಯಾತಿ ಹೊಂದಿದ್ದಳು. ಆಕೆಯ ರಸಭರಿತ ತಾರುಣ್ಯದಲ್ಲಿ ವಾಜಿದ್ ಅಲಿ ಶಾಹನ ಸಂಬಂಧ ಉಂಟಾದುದರಲ್ಲಿ ಆಶ್ಚರ್ಯವಿಲ್ಲ. ಶಾಮಲಾಲ್ ಖತ್ರಿ, ದುಲಿಚಂದ್ ಇಂತಹವರ ಆಶ್ರಯವೂ ಇದ್ದೇ ಇತ್ತು. ಸಭಾಚಾತುರ್ಯ, ಅರಬ್ಬಿ ಹಾಗೂ ಇತರ ಪ್ರದೇಶಗಳ ಅತ್ಯುತ್ತಮ ಗಣಿಕೆಯರ 'ತೆಹಜೀಜ'(ರೀತಿ, ರಿವಾಜು)ಗಳಿಂದ ಆಕೆ ತಾರುಣ್ಯದಲ್ಲೇ ಪ್ರಸಿದ್ಧಿಯನ್ನು ಪಡೆದಿದ್ದಳು. ಇವಳ ಚರಿತ್ರೆ ಅಪೂರ್ಣವಿದ್ದರೂ ಇವಳ ನಿಂತಿರುವ ಒಂದು ಅಪರೂಪದ ಚಿತ್ರ ಎಚ್‌ಎಮ್‌ವಿಯವರ ಯಂತ್ರದೊಂದಿಗೆ ಸಿಕ್ಕಿದೆ. ಉಳಿದ ಮಾಹಿತಿ ಅವಳ ಸಮವಯಸ್ಕರು ಬರೆದಿಟ್ಟಿರುವುದರಿಂದ ಮತ್ತು ಖಾನ್‌ಸಾಹೇಬ ಫಯ್ಯಾಜ್ ಖಾನರ ಪ್ರೇಯಸಿ ಆಗಿದ್ದು ಮತ್ತು ತನಗಿಂತ ಹದಿನೈದು ವರ್ಷ ಕಿರಿಯನಾಗಿದ್ದರೂ ಅವಳ ಸೌಂದರ್ಯ ಮತ್ತು ಪ್ರತಿಭೆಗೆ ಒಲಿದು ತಾನಾಗಿಯೇ ಅವಳ ಬಲೆಯಲ್ಲಿ ಬಿದ್ದು, 'ಲಟ್ಟು' ಆದ ಮೌಜುದ್ದೀನರ ಬಗ್ಗೆ ಗೊತ್ತಿದ್ದುದರಿಂದ ಈಕೆಯ ಜೀವನದ ಕೆಲವು ಸರಸ ಪ್ರಸಂಗಗಳು ಬೆಳಕನ್ನು ಕಂಡಿವೆ.

ಗ್ರಾಮೊಫೋನ್ ಕಂಪನಿಯ ಎರಡನೆಯ ಸಿಲೆಬ್ರಿಟಿ ಎಂದರೆ ಮಲಕಾಜಾನ್ ಆಗ್ರೇವಾಲಿ ಎಂದು ಹೇಳಬಹುದು. ಇವಳು ಬಹುಶಃ ನೂರಕ್ಕಿಂತಲೂ ಹೆಚ್ಚು ಧ್ವನಿಮುದ್ರಿಕೆಗಳನ್ನು ಕೊಟ್ಟಿರಬಹುದೆಂಬ ನಮ್ಮ ಅಂದಾಜು. ಗೌಹರಜಾನಳ

ಧ್ವನಿಮುದ್ರಿಕೆಗಳ ಸೂಚಿ ಉಪಲಬ್ಧವಿರುವಂತೆ ಮಲಕಾಜಾನಳದು ಈವರೆಗೆ ದೊರೆತಿಲ್ಲ. ಕೆಲವೇ ಧ್ರುಪದ್, ಧಮಾರ್ ಖಯಾಲ್‌ಗಳ ಧ್ವನಿಮುದ್ರಿಕೆಗಳಿವೆ.

ಈಕೆಯ ಕಂಠಸಿರಿ ಉನ್ನತಮಟ್ಟದ್ದು. ಈಗಿನಂತೆ ಮೈಕ್ರೊಫೋನ್ ವ್ಯವಸ್ಥೆ ಆಗ ಇರಲಿಲ್ಲವಾದ್ದರಿಂದ ಎತ್ತರದ ಧ್ವನಿಯಲ್ಲಿ ರೆಕಾರ್ಡು ಮಶೀನಿನ ಧ್ವನಿವರ್ಧಕದಲ್ಲಿ ತುಂಬ ಶ್ರಮದಿಂದ ಹಾಡಬೇಕಾಗುತ್ತಿತ್ತು. ಈಗ ಅವರೆಲ್ಲರ ಧ್ವನಿಗಳು ನಮಗೆ ಚೀತ್ಕಾರದಂತೆ ಕೇಳಿಸಿದರೆ ಆಶ್ಚರ್ಯವೇನಿಲ್ಲ. ಆದರೂ 3 ನಿಮಿಷಗಳಲ್ಲಿ ಹಾಡುಗಳಲ್ಲಿನ ರಂಜಕತೆ ನಿರೂಪಿಸುವ ಕಲೆಯನ್ನು ಅಭ್ಯಾಸಪೂರ್ಣವಾಗಿ ಸಾಧ್ಯಮಾಡಿಕೊಂಡಿದ್ದರು.

1994ರಲ್ಲಿ ಎಚ್.ಎಮ್.ವಿಯವರು ಹೊರತಂದ 'ಚೇರ್‌ಮನ್ಸ್ ಛಾಯ್ಸ್'ನಲ್ಲಿ ಮಲಕಾ ಮತ್ತು ಗೌಹರಳ ಧ್ವನಿಸುರುಳಿಗಳು ಇವೆ. ಇವುಗಳ ಸಿಡಿಗಳೂ ಬಿಡುಗಡೆಯಾಗಿವೆ. ಪೀಲೂ, ಭೈರವಿಗಳಲ್ಲಿಯ ಭಜನೆಗಳು, ಕವ್ವಾಲಿ, ದಾದರಾ, ಹೋರಿ ಸೇರಿದಂತೆ 18 ಮುದ್ರಿಕೆಗಳಿವೆ. ಆದರೆ, ಸಾಕಷ್ಟು ಪ್ರಚಾರಕೊಡದೇ ಇದ್ದುದರಿಂದಲೋ ಅಥವಾ ಗ್ರಾಹಕರು ಇಷ್ಟಪಡದಿದ್ದುದರಿಂದಲೋ ಮಲಕಾಜಾನಳ ಧ್ವನಿಮುದ್ರಿಕೆಗಳು ಮರಳಿ ಮಾರುಕಟ್ಟೆಗೆ ಬರಲಿಲ್ಲ. ಇವಳ ಒಂದು ಅಪರೂಪದ 'ದೇಶ್' ಮತ್ತು 'ಸಾವನ್' ರಾಗಗಳ ಸಾಹಿತ್ಯ ಇಂತಿವೆ:

ದೇಶ್: ಬೀತಿ ಜಾತ ಬರಖಾ
ಋತು ಸಜನ ನಾಹೀ ಏರಿ
ನಯನ ಮೊರೆ ಪಪಿಹಾ ಬೋಲತ
ಪೀಹೂ ಪೀಹೂ ಕರೆ ಪುಕಾರ
ಉಸಕೆ ಜೋಬನ ಬಿರಹಾ ಸತಾವೆ
ಏಸೀ ಪಿಯಾ ದು:ಖದೇರಿ । ಬೀತಿ ಜಾತ ।

(ಇದರಲ್ಲಿಯ 'ಪೀಹೂ ಪೀಹೂ' ಪ್ರಸ್ತುತಿ ತುಂಬಾ ಚೆನ್ನಾಗಿದೆ.)

ಸಾವನ: ಪಪಿಹರಾ ಪೀಹೂ ಪಿಹೂ ಕರೆ
ಬೋಲಿ ಪಪಿಹರಾ ನ ಬೋಲ್
ಪಿಯಾ ದೇಸ ವಿದೇಸ ಹವೆ
ಮೋರಾ ಜೀಹು
ಪಪಿಹರಾ ಪೀಹೂ ಪೀಹೂ ಕರೆ ।
ಕಾರಿ ಬದರಿಯಾ ಪಿಯಾ ಮೋರಾ
ಪರದೇಸ್ ಬರಸನ ಲಾಗಾ ಮೇಘ
ಪಪಿಹರಾ ಪೀಹೂ ಪೀಹೂ ಕರೆ
ಪಾಸ ನಂಹಿ ಮೇರಾ ಪೀಹೂ॥

ಇದರಲ್ಲಿಯೂ ಆರೆಂಟು ಸಲ ಪೀಹೂ ಬಂದಿರುವದು ಆಕೆಯ ಪಂಚಮ ಉಚ್ಚಮಟ್ಟದ್ದಾಗಿದ್ದುದಕ್ಕೆ ಒಂದು ಉದಾಹರಣೆ. ಈ ಸಾಲುಗಳನ್ನು ಕೇವಲ ಸಾಹಿತ್ಯದ ದೃಷ್ಟಿಯಿಂದಲೇ ಕೊಟ್ಟಿರುವದು.

*****

4.5

ನವಾಬರ ನವಾಬ 'ಪ್ಯಾರಾ ಸಾಹೇಬ್' (1870–1940)

ಛಪ್ಪನ್ನ ಛೂರಿವಾಲಿ ಜಾನಕೀ ಬಾಯಿಯಂತೆ ಈ ನವಾಬರ ನವಾಬ ಪ್ಯಾರಾ ಸಾಹೇಬನ ಬಗ್ಗೆ ಕೂಡ ದಾಖಲೆಗಳು ಇರುವುದು ಕಡಿಮೆ. ಆ ಕಾಲದ ಅಂದರೆ 1902 ರಿಂದ 1920ರವರೆಗೆ ಅವರ 400 ಹಾಡುಗಳು ಮುದ್ರಿತವಾಗಿದ್ದವು. ಅಂದರೆ 200 ಮುದ್ರಿಕೆಗಳು ಹೊರಗೆ ಬಂದಿರಬೇಕು. ಅವರ ಜೀವಮಾನ ಕಾಲ ಸಾಧಾರಣ 1870ರಿಂದ 1940 ಇರಬೇಕು. ಕೆಲವು ಇತಿಹಾಸಕಾರರ ಹೇಳಿಕೆಯ ಮೇರೆಗೆ ಈತ ಮೊಗಲ ಬಾದಶಹ ಎರಡನೇ ಶಹಾ ಅಲಮ್ (1728–1806) ಇವರ ಆಸ್ಥಾನದಲ್ಲಿದ್ದ ಗಾಯಕನ ಮಗ. ಮೊಗಲರ ಇಳಿಗಾಲದಲ್ಲಿ ಅನೇಕ ಆಸ್ಥಾನ ಕಲಾವಿದರು ಆಶ್ರಯಕ್ಕಾಗಿ ಬೇರೆ ಬೇರೆ ಸಂಸ್ಥಾನಗಳಿಗೆ ಹೊರಟು ಹೋಗಿದ್ದ ಉದಾಹರಣೆಗಳು ಉತ್ತರ ಭಾರತದ ಸಂಗೀತಗಾರರ ಇತಿಹಾಸದಲ್ಲಿವೆ.

ಪ್ಯಾರಾ ಸಾಹೇಬರ ತಂದೆ, ವಾಜೀದ ಅಲಿಯನ್ನು ಲಖನೌ ಸಂಸ್ಥಾನದಿಂದ ಸ್ಥಳಾಂತರಿಸಿದ ನಂತರ 1858ರಲ್ಲಿಯೇ ನಿರಾಶ್ರಿತನಾಗಿ ಕಲಕತ್ತೆಗೆ ಹೋಗಬೇಕಾಯಿತು. ಅಲ್ಲಿ ಮಟಿಯಾ ಬೂರ್ಜದಲ್ಲಿಯೇ (ಅಂದರೆ ಮಣ್ಣಿನ ಮಹಲಿನಲ್ಲಿಯೇ) ಪ್ಯಾರೆ ಹುಟ್ಟಿಬೆಳೆದ. ಅವರ ಸಂಗೀತ ಶಿಕ್ಷಣ, ಉಸ್ತಾದ್‌ರ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಆ ಕಾಲದ ಧ್ವನಿಮುದ್ರಿಕೆಗಳೆಲ್ಲ 'ಬಾಯಿ' ಮತ್ತು 'ಜಾನ'ರದ್ದೇ ಆಗಿದ್ದವು. ಇದಕ್ಕೆ ಅಪವಾದವೆಂದರೆ ಒಬ್ಬ ಪ್ಯಾರೆ ಮತ್ತೊಬ್ಬ ಮೌಜುದ್ದೀನ್. ಇವರಿಬ್ಬರ ಕಂಠ ಕೂಡ ತುಸು ಮಟ್ಟಿಗೆ ಸ್ತ್ರೀ ಶಾರೀರವನ್ನು ಹೋಲುತ್ತಿತ್ತು. 1991 ರಲ್ಲಿ ದೂರದರ್ಶನದಲ್ಲಿ ಜನಪ್ರಿಯವಾದ ಸಿದ್ಧಾರ್ಥ ಕಾಕ್‌ರ, 'ಸುರಭಿ' ಈ ಕಾರ್ಯಕ್ರಮದಲ್ಲಿ ಗೌಹರ್ ಜಾನರ ಧ್ವನಿಮುದ್ರಿಕೆ ಮತ್ತು ಪ್ಯಾರಾ ಸಾಹೇಬರ ಮುದ್ರಿಕೆಗಳನ್ನು ಹಚ್ಚಿ ಅದರಲ್ಲಿ ಪುರುಷರ ಧ್ವನಿ ಹುಡುಕಲು ಹೇಳಿದ್ದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ಕೊನೆಯಲ್ಲಿ ಹೆಸರು ಹೇಳುವಾಗಲೂ ಈ ಪ್ಯಾರಾ ಸಾಹೇಬ, 'ಮೈ ನೇಮ್ ಇಜ್ ಪ್ಯಾರಿ' ಎಂದು ಹೇಳಿದ್ದ. ಇಲ್ಲಿ ಇನ್ನೊಂದು ಮಾತನ್ನು ಹೇಳಬೇಕು. ಈ ಧ್ವನಿಮುದ್ರಿಕೆಗಳಿಗೆ ಬೇಡಿಕೆ ಹೆಚ್ಚಾದಂತೆ ಅಂದಿನ ಸೀನೆ ಸಂಗೀತದ ಮುದ್ರಿಕೆಗಳ ಸಂಖ್ಯೆ ಬೆಳೆಯುತ್ತ ಹೋಗಿ ಹದಿನೈದು ವರ್ಷಗಳಲ್ಲಿ ಬಿಡುಗಡೆಯಾದ ಮುದ್ರಿಕೆಗಳ ಸಂಖ್ಯೆ 15 ಸಾವಿರ ರೆಕಾರ್ಡುಗಳಾಗಿದ್ದವು. ಅದಕ್ಕಿಂತ ಹೆಚ್ಚು ಧ್ವನಿಮುದ್ರಿಕೆಗಳು ಠುಮರಿ, ದಾದ್ರಾ, ಗಜ಼ಲ್, ಚೈತಿ, ಹೋರಿ ಇತ್ಯಾದಿ ಉಪಶಾಸ್ತ್ರೀಯ ಸಂಗೀತಗಳಲ್ಲಿಯೇ ಇದ್ದವು.

ಪ್ಯಾರಾ ಸಾಹೇಬರು ನವಾಬರ ಗವಯಿಗಳೆಂದೇ ಖ್ಯಾತಿ ಪಡೆದಿದ್ದರು. ಆಗಿನ ಕಾಲದ ಅವರ 'ಬಿದಾಗಿ' (ಗೌರವ ಧನ) ಜನಸಾಮಾನ್ಯರಿಗೆ ನಿಲುಕುವಂತೆ ಇರಲಿಲ್ಲ. ಹೀಗಾಗಿ ಜನಸಾಮಾನ್ಯರನ್ನು ತಣಿಸಲು ಎಚ್.ಎಮ್.ವಿಯವರು ಒಂದು ಯೋಜನೆ ಮಾಡಿ ಒಂದರ ಮೇಲೆ ಒಂದರಂತೆ ಪ್ಯಾರಾ ಸಾಹೇಬರ ಮುದ್ರಿಕೆಗಳನ್ನು ಹೊರತಂದು ಒಂದು ಬಿರುಗಾಳಿಯನ್ನೇ ಎಬ್ಬಿಸಿದರು. ಪ್ಯಾರಾ ಸಾಹೇಬರು ಸರ್ ಜ್ಯೋತೀಂದ್ರ ಮೋಹನ್ ಠಾಕೂರ್ ಬಳಿಕ ಮಹಾರಾಜ ಪ್ರದ್ಯೋತಕುಮಾರ್ ಠಾಕೂರ್ ಇವರ ಸೇವೆಯಲ್ಲಿದ್ದರು. ಎಚ್.ಎಮ್.ವಿಯವರಿಗೆ ಆಶ್ರಯದಾತರ ಅನುಮತಿಯ ಅಗತ್ಯವಿತ್ತು ಹೀಗಾಗಿ ಕೆಲವು ಮುದ್ರಿಕೆಗಳಲ್ಲಿ ಆಶ್ರಯದಾತರ ಹೆಸರುಗಳೂ ಇವೆ! 1905 ರಿಂದ 1930ರವರೆಗೆ ಅವರ ಕೃತಿಗಳ ಮುದ್ರಣವಾಗುತ್ತಲೇ ಇತ್ತು. ಮುಂದೆ 1945 ರಲ್ಲಿ ಕೂಡ ಈ ಧ್ವನಮುದ್ರಿಕೆಗಳ ಪುನರ್ಮುದ್ರಣ ಮಾಡಬೇಕಾಯಿತು. ಶುದ್ಧ ರಾಗಗಳಲ್ಲಿಯೂ ಮತ್ತು ಠುಮರಿಗಳಲ್ಲಿಯೂ ಪ್ಯಾರೆ ಸಾಹೇಬರ ಸಾಕಷ್ಟು ಧ್ವನಿಮುದ್ರಿಕೆಗಳಿವೆ.

ಮಹಮ್ಮದ ಇಕ್ಬಾಲರು ಮುಸ್ಲಿಮರ ರಾಷ್ಟ್ರಕವಿ ಎಂದೆನಿಸಿದ್ದು, 'ಸಾರೆ ಜಹಾಂಸೆ ಅಚ್ಛಾ' ಬರೆದ ಮೇಲೆ. ಅವರೇ ಬರೆದ ತರಾನಾ ಒ-ಮಿಲ್ಲಿ ಹಾಡನ್ನು ಪ್ಯಾರಾ ಸಾಹೇಬರಿಂದ ಹಾಡಿಸಿ ಧ್ವನಮುದ್ರಿಸಿಕೊಳ್ಳಲಾಯಿತು. ಮುಂದೆ ಇದೇ ಹಾಡು ಮುಸ್ಲಿಮ್ ಲೀಗ್ ಪಕ್ಷದ ಸ್ಪೂರ್ತಿ ಗೀತೆಯಾಯಿತು. ಅದರ ಸಾಹಿತ್ಯ ಹೀಗಿದೆ.

ಚೀನ್ ಓ ಅರಬ ಹಮಾರಾ
ಹಿಂದೋಸ್ಥಾಂ ಹಮಾರಾ
ಮುಸ್ಲಿಮ ಹೈಂ ಹಮ್ ವತನ ಹೈಂ
ಸಾರಾ ಜಹಾಂ ಹಮಾರಾ।

ಈ ರಿಕಾರ್ಡ್ 1928ರಲ್ಲಿ ಮುಂಬಯಿಯ ರಾಮಾಗ್ರಾಫ್ ಕಂಪನಿಯ ಮೂಲಕ ಮಾರುಕಟ್ಟೆಗೆ ಬಂದಿತು. ಮುಂಬಯಿಯಲ್ಲಿದ್ದ ಮಾಸ್ಟರ್ ನವರಂಗ ಶೋಲಾಪುರಕರ್ ಇವರೊಂದಿಗೆ ಲ್ಯಾಮಿಂಗ್‌ಟನ್ ರೋಡಲ್ಲಿದ್ದ ಇಂಪೀರಿಯಲ್ ಸಿನೆಮಾದಲ್ಲಿ ಇವರ ಕೆಲವು ಜಲಸಾಗಳಾದವು. ಅವರು ನಿಂತುಕೊಂಡೇ 'ಅದಾ' ಮಾಡಿ ಹಾಡುತ್ತಿದ್ದರಂತೆ.

ಇವರ ಖಟರಾಜ, ಅಸಾವರಿ, ಕಾಫಿ, ಭೈರವಿ, ಠುಮರಿ, ಕಜರಿಗಳ ರೆಕಾರ್ಡುಗಳು ಚೇರ್ ಮನ್ ಛಾಯ್ಸನಲ್ಲಿ (ಸಿಎಂಸಿ 882521) 1994ರಲ್ಲಿ ಪುನರ್ಮುದ್ರಣವಾಗಿವೆ.

*****

4.6

ಸಂಗೀತ ಪ್ರಚಾರಕ ಪಂ. ವಿಷ್ಣು ದಿಗಂಬರ್ ಪಲುಸ್ಕರ್ (1872–1931)

"ನಾನು ಒಬ್ಬ ತಾನ್‌ಸೇನ್ ಆಗಿ ತಯಾರು ಆಗದಿದ್ದರೂ, ನೂರಾರು ತಾನ್‌ಸೇನರನ್ನು ತಯಾರು ಮಾಡಿದ್ದೇನೆ" ಸಂಗೀತ ಪ್ರಚಾರಕ, ಸಂಗೀತದ ಉದ್ಧಾರಕ ಪಂ. ವಿಷ್ಣು ದಿಗಂಬರ ಹೇಳಿದ ಈ ಮಾತು ಎಷ್ಟು ನಿಜ ಎಂಬುದು ಅವರ ಬಗ್ಗೆ ಓದುವಾಗ ಅರಿವಾಗುತ್ತದೆ. ಅನೇಕ ಒಳ್ಳೆಯ ಗಾಯಕರನ್ನು ತಯಾರು ಮಾಡಿದರೂ, ಇಡೀ ಆಯುಸ್ಸನ್ನು ಸಂಗೀತ ಪ್ರಚಾರಕ್ಕಾಗಿ ಊರಿಂದ ಊರಿಗೆ ಅಲೆದು ಸವೆಸಿದರೂ ಅನೇಕ ಭಜನೆ ಮತ್ತು ಸಂಗೀತ ಕಚೇರಿಗಳನ್ನು ಕೊಟ್ಟರೂ ಇವರ ಧ್ವನಿಯ ಒಂದೂ ಧ್ವನಿತಟ್ಟೆ ಇಲ್ಲದೇ ಹೋಗಿರುವುದು ಒಂದು ವಿಷಾದದ ವಿಷಯ.

ವಿಷ್ಣು ದಿಗಂಬರ ಅವರ ತಂದೆ ಕೀರ್ತನಕಾರರಾಗಿದ್ದು ಮಹಾರಾಷ್ಟ್ರದ ಕುರುಂದವಾಡ ಸಂಸ್ಥಾನದ ಆಶ್ರಿತರಾಗಿದ್ದರು. ಚಿಕ್ಕಂದಿನಲ್ಲಿಯೇ ಒಂದು ಅಪಘಾತದಲ್ಲಿ ಇವರ ದೃಷ್ಟಿ ಮಂದವಾದುದರಿಂದ ತಮಗೆ ಇಷ್ಟವಾದ ಸಂಗೀತವನ್ನೇ ಕಲಿಯಲು ಪ್ರಾರಂಭಿಸಿದರು. ಸುಮಾರು 1870ರಿಂದ 1900ರ ತನಕ ಭಾರತೀಯ ಸಂಗೀತಕ್ಕೆ ಪ್ರಾಣವಾಯುವನ್ನು ಒದಗಿಸಿದರು. ಇವರ ನಂತರ ಚೈತನ್ಯವನ್ನು ತುಂಬಿದ ವ್ಯಕ್ತಿಗಳಲ್ಲಿ ವಿಷ್ಣು ನಾರಾಯಣ ಭಾತಖಂಡೆ, ಮಗ ದತ್ತಾತ್ರೇಯ ವಿಷ್ಣು ಇವರು ಅಗ್ರಗಣ್ಯರು.

ಹಿಂದೂಸ್ತಾನೀ ಸಂಗೀತವನ್ನು ಉತ್ತರದಿಂದ ದಕ್ಷಿಣಕ್ಕೆ ತಂದು ಕುರುಂದವಾಡ ಸಂಸ್ಥಾನದಲ್ಲಿಯೇ ದರ್ಬಾರು ಗಾಯಕರೆಂದು ಹೆಸರುಗಳಿಸಿದ ಬಾಳಕೃಷ್ಣ ಈಚಲಕರಂಜೀಕರ ಅವರಲ್ಲಿ ಶಿಷ್ಯತ್ವವನ್ನು ಪಡೆದ ವಿಷ್ಣು ದಿಗಂಬರರು 1887ರಿಂದ 1896ರ ವರೆಗೆ ಶಾಸ್ತ್ರೋಕ್ತ ರೀತಿಯಲ್ಲಿ ಸಂಗೀತ ಕಲಿತರು. ಇಲ್ಲಿಯೇ ಈ ರಾಜದರ್ಬಾರದ ಸಂಗೀತವನ್ನು ಸಾಮಾನ್ಯ ಜನರ ತನಕ ಮುಟ್ಟಿಸುವ ಪಣವನ್ನು ಅವರು ತೊಟ್ಟರು. 1896ರಲ್ಲಿ ಯಾರಿಗೂ ಹೇಳದೆ ತಮ್ಮ ಇಬ್ಬರು ಶಿಷ್ಯರೊಂದಿಗೆ ಮೀರಜದಿಂದ ಉತ್ತರಕ್ಕೆ ಪ್ರವಾಸಗೈದು ಊರಿಂದ ಊರಿಗೆ ಮೆಹಫಿಲ್ಲುಗಳನ್ನು ಜಮಾಯಿಸುತ್ತ ಲಾಹೋರನ್ನು ಮುಟ್ಟಿದರು. ಉಳಿದ ಶಿಕ್ಷಣದಂತೆಯೇ, ಸಂಗೀತ ಕೂಡ ವರ್ಗಗಳಲ್ಲಿ ಕಲಿಸಬೇಕೆಂಬ ಛಲದಿಂದ ಲಾಹೋರಿನಲ್ಲಿ 1901ರಲ್ಲಿ 'ಗಂಧರ್ವ ಕಾಲೇಜ'ನ್ನು ಸ್ಥಾಪಿಸಿದರು. 1908ರ ತನಕ ಅಲ್ಲಿಯೇ ವಾಸ್ತವ್ಯ. ಕಲಿಸಲು ಪುಸ್ತಕಗಳು ಬೇಕಲ್ಲವೇ? ಪ್ರೆಸ್ಸು ಹಾಕಿದರು.

ವಾದ್ಯ ನಿರ್ಮಿತಿ ಪ್ರಾರಂಭಿಸಿದರು. ಕಾಲೇಜನ್ನು ಮುಂದೆ ನಡೆಸಿಕೊಂಡು ಹೋಗುವಂತಹ ಸಂಗೀತ ಶಿಕ್ಷಕರ ಪಡೆಯನ್ನೇ ಪ್ರಾರಂಭಿಸಿದರು. ಅವರ ಅನುಯಾಯಿಗಳಲ್ಲಿ ಹೆಚ್ಚಾಗಿ ಮರಾಠೀ ಜನರಿದ್ದುದರಿಂದ ಮುಂಬಯಿಯ ಗಿರಗಾವಿನಲ್ಲಿಯೂ ಕಾಲೇಜನ್ನು ಪ್ರಾರಂಭಿಸಿದರು. 1915ರಲ್ಲಿ ಇವರ ಮೂರು ಮಹಡಿಯ ಕಾಲೇಜಿನಲ್ಲಿ 500 ವಿದ್ಯಾರ್ಥಿಗಳು ಕಲಿಯುತ್ತಿದ್ದರಂತೆ! ಈ ದೊಡ್ಡ ಸಾಹಸಕಾರ್ಯದಲ್ಲಿ ಸಾಕಷ್ಟು ಸಾಲವೂ ಆಗಿತ್ತು. ಮುಂದೆ ಹಾನಿಯನ್ನು ತಡೆದುಕೊಳ್ಳಲಾರದೇ ಮುಂಬಯಿ ಕಾಲೇಜನ್ನು ಮುಚ್ಚಲಾಯಿತು. ಜೊತೆಗೆ ಮೊದಲನೇ ಮಹಾಯುದ್ಧದ ಝಳ ಮುಂಬಯಿಗೆ ತಾಗಿತ್ತು. ಈ ಆಘಾತವನ್ನು ಸಹಿಸಲಾರದೇ ಈ ಸಂಗೀತದ ಸಂನ್ಯಾಸಿ ನಾಶಿಕ ಕ್ಷೇತ್ರಕ್ಕೆ ಹೋದರು. ಮುಂದೆ ರಾಮಾಯಣ ಪ್ರವಚನ ಮಾಡುತ್ತಲೇ ದೇಹವನ್ನು ಬಿಟ್ಟರು. ಈ ಸರಣಿಯಲ್ಲಿ ಇವರ ಬಗ್ಗೆ ಮತ್ತು ವಿಷ್ಣು ನಾರಾಯಣ ಭಾತಖಂಡೆಯವರ ಬಗ್ಗೆ ಬರೆಯುವುದು ಉಚಿತವೇ ಎಂಬ ಶಂಕೆ ಉಂಟಾದರೂ, ಇವರ ಹೆಸರು ಸೇರಿಸುವ ಕಾರಣ, ಇವರ ವಿದ್ಯಾದಾನ. ಈ ಸರಣಿ ಕೇವಲ ಮುದ್ರಿಕೆಗಳಿಗೆ ಮಾತ್ರ ಸೇರಿದ್ದರೂ, ಸಂಗೀತದ ಪ್ರಚಾರವನ್ನು ಇಡೀ ದೇಶದ ಉತ್ತರ, ಪಶ್ಚಿಮ ಮತ್ತು ಪೂರ್ವ ಭಾಗದಲ್ಲಿ ಮಾಡಿದ್ದರಿಂದ ಮತ್ತು ಅವರ ಅನೇಕ ಶಿಷ್ಯರು ಸಹಭಾಗಿಯಾಗಿ ಈ ಕೆಲಸ ಮುಂದುವರಿಸಿದ್ದರಿಂದ ಇವರನ್ನು ಈ ಶ್ರೇಣಿಯಲ್ಲಿ ಸೇರಿಸಲೇ ಬೇಕಾಯಿತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೂಡ, 1915ರಿಂದ ಮುಂದೆ ಹಲವು ವರ್ಷ 'ವಂದೇ ಮಾತರಂ' ಹಾಡಿ ಕಾಂಗ್ರೆಸ್ ಅಧಿವೇಶನ ಪ್ರಾರಂಭ ಮಾಡುತ್ತಿದ್ದ ಪಲುಸ್ಕರ್ ಅವರು ಅನೇಕ ಭಜನೆಗಳನ್ನು ಪ್ರಚಾರದಲ್ಲಿ ತಂದರು. 'ರಘುಪತಿ ರಾಘವ ರಾಜಾರಾಮ್', 'ಜಾನಕೀನಾಥ ಸಹಾಯ' ಇವೆಲ್ಲ ಅವರ ರಚನೆಗಳೇ. ಇವನ್ನೆಲ್ಲ ಹಾಡುತ್ತ ಜನಪ್ರಿಯ ಗೊಳಿಸಿದವರು ದತ್ತಾತ್ರೇಯ ವಿಷ್ಣು ಪಲುಸ್ಕರ.

*****

4.7

ಮೌಜುದ್ದೀನ್ ಖಾನ್ (1875–1926)

ಇವರು ಮೂಲತಃ ಪಂಜಾಬಿನವರು. ಉಪಶಾಸ್ತ್ರೀಯ ಸಂಗೀತ ಪ್ರಕಾರಗಳನ್ನು ಹಾಡುವುದರಲ್ಲಿ, ಆ ಕಾಲದಲ್ಲಿ ಇವರದ್ದು ಎತ್ತಿದ ಕೈ. ಇದಕ್ಕೇ ಇವರಿಗೆ, 'ಶ್ರುತಿಧರ' ಎಂಬ ಉಪನಾಮ ಕೂಡ ಇತ್ತು. ಉಪಶಾಸ್ತ್ರೀಯ ಸಂಗೀತ ಪ್ರಸಾರ ಮಾಡಿದ, ಭಾಯಿ ಗಣಪತರಾವ್ ಅವರು ಇವರ ಗುರು. ತಂದೆ ಗುಲಾಮ್ ಹುಸೇನ್ ಖಾನರಿಂದಲೂ ಮತ್ತು ಭೂಗಂಧರ್ವರೆಂದು ಹೆಸರು ಮಾಡಿದ ರಹಮತ್ ಖಾನರಿಂದಲೂ ಇವರು ಶಿಕ್ಷಣ ಪಡೆದಿದ್ದರು. ಶಾಲೆಯ ಶಿಕ್ಷಣ ಅಷ್ಟಕಷ್ಟೇ. ತಂದೆ ಬನಾರಸದಲ್ಲಿ ರಾಜಗಾಯಕರೆಂದು ನೇಮಕಗೊಂಡ ಮೇಲೆ ಬನಾರಸ್‌ದಲ್ಲಿ ನೆಲೆಸಿದರು.

ಬನಾರಸ್ ಆ ಕಾಲದಲ್ಲಿ ಉಪಶಾಸ್ತ್ರೀಯ ಸಂಗೀತದ ಕೇಂದ್ರವಾಗಿತ್ತು. ಪ್ರತಿಯೊಬ್ಬ ಕೋಠಿವಾಲಿ ಬಾಯಿ, 'ಜಾನ್' ತಮ್ಮ ತಮ್ಮ ಕ್ಷೇತ್ರದಲ್ಲಿ ತುಂಬ ಪರಿಣತಿಯನ್ನು ಪಡೆದಿದ್ದರು. ಹೀಗಾಗಿ ಚಿಕ್ಕ ವಯಸ್ಸಿನಲ್ಲಿಯೇ ಮದಿರೆ ಮತ್ತು ಮದಿರಾಕ್ಷಿಯರ ಸಹವಾಸ ಮೌಜುದ್ದಿನರಿಗೆ ಲಭಿಸಿತ್ತು. ಸುಗುನಾಬಾಯಿ ಮತ್ತು ಮಂಗೂಬಾಯಿ ಆ ಕಾಲದ ಖ್ಯಾತ ಕೋಠಿವಾಲಿಗಳು. ಅವರಿಗೆ ಈ ಇಪ್ಪತ್ತರ ಯುವಕ ಬಲಿಬಿದ್ದ. ಒಳ್ಳೆಯ ಅಚ್ಚುಕಟ್ಟಾದ ಉಡುಪು ಹಾಕುವ, ಉತ್ತಮ ಹಾಡುಗಾರ, ಪಂಜಾಬಿ ಸ್ಫುರದ್ರೂಪಿ. ಮತ್ತೇನು ಬೇಕು? ಬನಾರಸಕ್ಕೆ ಬಂದಾಗ ಭಾಯಿ ಗಣಪತರಾವ್‌ರು ಇವರ 'ಲಲಿತ'ರಾಗವನ್ನು ಕೇಳಿ ಮರುಳಾಗಿ ಅವರಿಗೆ ಠುಮ್ರಿ, ದಾದ್ರಾ ಇತ್ಯಾದಿ ಕಲಿಸಲು ಪ್ರಾರಂಭಿಸಿದರು. ಅವರೊಂದಿಗೆ ಕಲಕತ್ತೆಗೆ ಹೋದಾಗ ಮಲಕಾಜಾನ್ ಆಗ್ರೇವಾಲಿಯ ಪರಿಚಯವಾಯಿತು. ಫಯ್ಯಾಜ್ ಖಾನರೊಂದಿಗೆ ಸಬಂಧವಿಟ್ಟು ಕೊಂಡಿದ್ದ ಮಲಕಾಜಾನಳಿಗೆ ಈ ಪೋರ ಅಷ್ಟು ಸೇರಲಿಲ್ಲ!

ಮೊದಲ ಮಹಾಯುದ್ಧದ ನಂತರದ ಹಾನಿ ಕಲಕತ್ತ ನಗರಕ್ಕೂ ತಲುಪಿತ್ತು. ಅಷ್ಟರಲ್ಲಿಯೇ, ಭಾಯಿ ಗಣಪತರಾವ್ (ಇವರು ಮರಾಠಿಗರು) ತೀರಿಕೊಂಡರು. ಮೌಜುದ್ದೀನರ ತಂದೆಯೂ ಕಾಲವಶರಾದರು. ಸಂಸಾರ ಸುಖ ಅಷ್ಟಕಷ್ಟೇ. ಮದೀರಾಸಕ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಯಿತು. ಗೌಹರಜಾನ್ ಇವರನ್ನು ಎಚ್‌ಎಮ್‌ವಿಗೆ ಕರೆದುಕೊಂಡು ಹೋಗಿರಬಹುದೆಂಬ ಊಹೆ. 1905 ರಿಂದ 1910ರ ತನಕ ಇವರು 9 ಧ್ವನಿಮುದ್ರಿಕೆಗಳನ್ನು ಕೊಟ್ಟರು. ಇವೆಲ್ಲವೂ ಚೆನ್ನಾಗಿ ಮಾರಾಟವಾದವು. ಇವರ

ಒಂದೆರಡು ಮುದ್ರಿಕೆಗಳಲ್ಲಿ, 'ವಾಹ್ ಮೌಜುದ್ದೀನ ವಾಹ!' ಎಂದು ಕೊನೆಯಲ್ಲಿ ರೆಕಾರ್ಡಿಂಗ ಸ್ಟುಡಿಯೋದ ಜನ ಒಟ್ಟಿಗೆ ಶ್ಲಾಘಿಸಿದ್ದುದನ್ನು ಕೇಳಬಹುದು.

ಸುದೈವದಿಂದ ಆಸ್ಟ್ರೇಲಿಯಾದಿಂದ ಇಲ್ಲಿಗೆ ಅಬ್ದುಲ್ ಕರೀಂಖಾನರ ಧ್ವನಿಮುದ್ರಿಕೆಗಳ ಇತಿಹಾಸ ಬರೆಯಲು ಬಂದ ಮೈಕೇಲ್ ಕಿನ್ನರ್ ಮತ್ತು ಎಚ್‌ಎಮ್‌ವಿಯವರ ಸ್ನೇಹ ಸಂಬಂಧದ ಫಲಿತಾಂಶವೆಂದರೆ ಎಚ್‌ಎಮ್‌ವಿಯವರ 'ಛೇರಮನ್ಸ್ ಚಾಯ್ಸ್.' ಕಿನ್ನರ್ ಅವರ ಪ್ರೇರಣೆಯಿಂದ ಅವರ ಒಂಬತ್ತೂ ಧ್ವನಿಮುದ್ರಿಕೆಗಳು ಒಳ್ಳೆಯ ಸ್ಥಿತಿಯಲ್ಲಿ ಇದ್ದುದರಿಂದ ಅವುಗಳನ್ನು ಪರಿಷ್ಕರಿಸಿ 1994ರಲ್ಲಿ ಬಿಡುಗಡೆ ಮಾಡಿದರು. ಇವುಗಳಲ್ಲಿ, "ಕಾಂಕರಿಯೇಜಿನ ಮಾರೋ ಲಂಗರ"(ತೋಡಿ), "ಘುಲವಾ ಗಿನತ ಡಾರಡಾರ"ಸೋಹನಿ), " ಸೈಂಯ್ಯಾ ವಿದೇಸ ಗಯೆ"(ಪೀಲು), "ಇನ ದುರ್ಜನ್ ಲೋಗನಕೆ"(ಮುಲ್ತಾನಿ), "ತರಸತ ಹೈ ಮೋರೆ ಕಾನ" (ಬಿಹಾಗ) ಈ ರಾಗಧಾರಿ ಧ್ವನಿಮುದ್ರಿಕೆಗಳು ತುಂಬ ಚೆನ್ನಾಗಿವೆ. ಉಪಶಾಸ್ತ್ರೀಯ ಸಂಗೀತದಲ್ಲಿ , "ರಂಗ ದೇಖೆ ಜಿಯಾ ಲಲಚಾಯೆ" (ಭೈರವಿ ಹೋರಿ), "ಪಾನಿ ಬರೇಲಿ ಕೌನ ಅಲಬೇಲಿ(ಗಾರಾ)", "ಬಾಜುಬಂದ ಖುಲಖುಲ ಜಾ"(ಭೈರವಿ ಠುಮ್ರಿ), "ಸೈಂಯಾ ಬಿನಾ ನಂಹೀ ಆವತ ಚೈನ"(ಖಮಾಜ್ ಠುಮ್ರಿ), "ಡಗಮಗ ಡೋಲೆರಿ ಮೋರಿ ನಾಂವ" (ದಾದರಾ) ಮತ್ತು, "ಹಂಸೆ ನಾ ಬೊಲೋ ರಾಜಾ" ಇವೆಲ್ಲ ಇವೆ. ಇದರಲ್ಲಿ ಕೊನೆಯ ಹಾಡನ್ನು ಮರಾಠಿ ರಂಗಭೂಮಿಯಲ್ಲಿ, "ನಾಹಿ ಮಿ ಬೋಲತ ನಾಥ" ಎಂದು ಪರಿವರ್ತಿಸಿ ಅಜರಾಮರ ಮಾಡಿದ್ದು ಬಾಲಗಂಧರ್ವ ನಾರಾಯಣ ರಾಜಹಂಸ ಇವರು.

ಇವರ ಶಾರೀರ ಕೊಂಚ ಮೃದುವಾಗಿದ್ದರೂ ಭರ್ಜರಿಯಾಗಿತ್ತು. 'ಖುಲ್ಲಾ ಆವಾಜ್'ನಲ್ಲಿ ಹಾಡುತ್ತಿದ್ದರು. "ಕಾನನ ಮುರಲಿ ಧುನ್ ಸುನ್" ಈ ಹಾಡನ್ನು ಕೇಳುವಾಗ ಅದರ ವೇಗ ಮತ್ತು ಲಯ ಕೇಳುವವರಿಗೆ ದಿಗ್ಭ್ರಮೆಯನ್ನುಂಟು ಮಾಡುತ್ತದೆ. ಅವರ ಅತ್ಯಂತ ಜನಪ್ರಿಯ ಪೀಲೂ ಠುಮರಿಯ ಹಾಡಿನ ಸಾಹಿತ್ಯ ಕೆಳಗೆ ಕೊಡಲಾಗಿದೆ.

ಪಿಕೀ ಬೋಲಿನ ಬೋಲೆ ಪಪಿಹರಾ। ಅರೇ ಪಪಿಹರಾರೇ–ಅರೇ ಪೀಕೀ ಬೊಲೀ॥
ಅರೇ ಪೀಕೀ ಬೊಲೀ ನಾ ಬೋಲು। ಸುನ ಪಾವೆ ಮೊರೆ ಸಾಸನನದಿಯಾ ॥
ಏ ದೇಂಗೆ ಪಂಖ ಮರೋಡ। ಪೀಕೀ ಬೊಲೀ ನಾ ಬೋಲು ॥

ಗದುಗಿನ ಉಭಯಗಾನವಿಶಾರದ ಪಂಚಾಕ್ಷರಿ ಗವಯಿಗಳು ಮೌಜುದ್ದೀನ ಖಾನರಲ್ಲಿ ಉಪಶಾಸ್ತ್ರೀಯ ಸಂಗೀತವನ್ನು ಮೂರು ತಿಂಗಳ ಕಾಲ ಅಭ್ಯಾಸ ಮಾಡಿದ್ದರು.

*****

4.8

ಮೈ ನೇಮ್ ಈಸ್ ಗೋಹರಜಾನ ಆಫ ಕಲಕತ್ತಾ
(1876–1930)

ಗ್ರಾಮೊಫೋನಿನ ಮೊಟ್ಟ ಮೊದಲ 'ಸೆಲೆಬ್ರಿಟಿ ಸಿಂಗರ್' ಎಂದರೆ ಗೋಹರಜಾನ್. ಗೋಹರಜಾನ್ ಆಫ್ ಕಲಕತ್ತಾ. ಆ ಕಾಲದಲ್ಲಿ ಒಂದೇ ಹೆಸರಿನ ಅನೇಕ ಹಾಡುಗಾತಿಯರು ಇದ್ದರು. ರೆಕಾರ್ಡ್ ಪರಿಷ್ಕರಣ, ಇಂಗ್ಲಂಡ ಅಥವಾ ಜರ್ಮನಿಯಲ್ಲಿ ಆಗುತ್ತಿದ್ದುದರಿಂದ, ಈ ರೆಕಾರ್ಡುಗಳ ಹಿಂದಿ ಭಾಷೆ ಮತ್ತು ಸಂಗೀತದ ಜ್ಞಾನ ಅಲ್ಲಿನ ತಂತ್ರಜ್ಞರಿಗೆ ಇಲ್ಲದೇ ಇದ್ದ ಕಾರಣ, ಗುರುತಿಸಲು ಮಾಡಿದ್ದ ಒಂದು ಕ್ರಮವೆಂದರೆ, ಪ್ರತಿಯೊಬ್ಬ ಗಾಯಕ ಗಾಯಕಿ ಇಂಗ್ಲಿಷಿನಲ್ಲಿ ಅವರದೇ ಧ್ವನಿಯಲ್ಲಿ ತಮ್ಮ ಹೆಸರನ್ನು ಆರಂಭದಲ್ಲಿ ಸಾರುತಿದ್ದುದು.

ಹಿಂದುಸ್ತಾನಿ ಸಂಗೀತದ ಮೊಟ್ಟಮೊದಲಿನ ಮುದ್ರಣದ ಶ್ರೇಯ ಗೋಹರಜಾನಳಿಗೆ ಸಲ್ಲುತ್ತದೆ. ಮೊದಲಿನ ಮುದ್ರಿಕೆ ಕೊಟ್ಟ (1902) ಹತ್ತು ವರ್ಷಗಳಲ್ಲಿಯೇ ಆಕೆ ಅಂದಿನ ಗ್ರಾಮೊಫೋನ್ ಅಂಡ್ ಟೈಪ್‌ರೈಟರ್ಸ್ ಲಿಮಿಟೆಡ್ ಎಂಡ ಸಿಸ್ಟರ್ ಕಂಪನಿ ಎಂಬ ಉದ್ದನೆಯ ಹೆಸರಿನ ಕಂಪನಿಯ 'ಸಿಲೆಬ್ರಿಟಿ ಸಿಂಗರ್' ಆದಳು.

ಈ ಪ್ರತಿಭಾಶಾಲಿ ಯುವತಿ ಯುರೋಪ ಮೂಲದವಳು ಎಂದು ಹೇಳಿದರೆ ಓದುಗರಿಗೆ ವಿಸ್ಮಯವಾಗಬಹುದು. ಅವಳ ತಾಯಿ ವಿಕ್ಟೋರಿಯಾ ಯುವಾರ್ಡ, ಅರ್ಮೇನಿಯನ್ ಮೂಲದವಳು. ಧರ್ಮಾಂತರದ ನಂತರ ಅವಳ ಹೆಸರು 'ಮಲಕಾಜಾನ ಚುಲಬುಲೆವಾಲಿ' ಎಂದಾಯಿತು. ಗೋಹರಜಾನಳ ಆಂಗ್ಲ ಹೆಸರು 'ಅಂಜಲಿನಾ ಯುವಾರ್ಡ್'. ತಾಯಿಯಿಂದಲೇ ಗಾಯನ ಕಲಿತಿದ್ದು, ಮುಂದೆ ಬನಾರಸಿನಲ್ಲಿ ಬಿರ್ಜು ಮಹಾರಾಜರಿಂದ ಸಂಗೀತ ಮತ್ತು ನೃತ್ಯದ ಅಭ್ಯಾಸವಾಯಿತು. ಅಲಿಭಕ್ಷ ಕೂಡ ಸಂಗೀತ ಕಲಿಸುತ್ತಿದ್ದರು. ಅನೇಕ ವರ್ಷ ತಾಯಿ ಮತ್ತು ಮಗಳು ಬನಾರಸಿನ ರಾಯ ಭಗನಜೀಯವರ ಆಶ್ರಯದಲ್ಲಿದ್ದರು. ಮುಂದೆ ಗೋಹರಜಾನ ತನ್ನ ಅನೇಕ ಠುಮರಿಗಳನ್ನು ತನ್ನ ಆಶ್ರಯದಾತರ ನೆನಪಿಗೆ, 'ಭಗನಪಿಯಾ' ಎಂದು ತನ್ನ ಕಾವ್ಯನಾಮದಲ್ಲಿ ಕಟ್ಟಿ ಹಾಡಿದ್ದೂ ಇದೆ.

ಕಲಕತ್ತೆಗೆ ಬಂದ ನಂತರ ಶೇಠ ದುಲೀಪಚಂದ ಮತ್ತು ಶ್ಯಾಮಲಾಲ ಘನಿ ಇವರ ಜೋಡಿ ಗೋಹರಜಾನಳಿಗೆ ಆಶ್ರಯ ನೀಡಿತು. 1907ರಲ್ಲಿ ಗೋಹರಜಾನಳ ಮೆಹಫಿಲ್ಲು ಮುಂಬಯಿನ ಈಗಿನ ಏಶಿಯಾಟಿಕ್ ಸ್ಸೈಟಿ ಇರುವ ಸಭಾಂಗಣದಲ್ಲಿ

ನಡೆಯಿತು. ಕಿರಾನಾ ಘರಾಣೆಯ ಮೌಲಾಭಕ್ಷ ಅವರಿಂದ ಕೂಡ ಗೋಹರಳಿಗೆ ತಾಲೀಮು ದೊರೆಯಿತು. ಮುಂದೆ 1916ರಲ್ಲಿ ಗೋಹರಜಾನ್ ಪುಣೆಯಲಿದ್ದ ಅಬ್ದುಲ್ ಕರೀಂಖಾನ್ ಸಾಹೇಬರ ಸಂಗೀತ ಶಾಲೆಯಲ್ಲಿ ಹಾಡಿದ ದಾಖಲೆ ಇದೆ.

ಕಾರ್ಯಕ್ರಮಗಳ ನೆವದಿಂದಲೋ, ಎಚ್‌ಎಮ್‌ವಿಯವರ ಆಗಿನ ಕಾಲದ ಸೆಲೆಬ್ರಿಟಿ ಎಂದೋ ಅವಳ ಕಾರ್ಯಕ್ರಮಗಳು ದೇಶಾದ್ಯಂತ ನಡೆದವು. ಆಗಿನ ಕಾಲದಲ್ಲಿ ಅವಳಿಗೆ ಪ್ರತಿಯೊಂದು ಕಾರ್ಯಕ್ರಮಕ್ಕೂ ರೂ. 2000/-ದಿಂದ ರೂ 5000/-ದವರೆಗೆ ಸಿಗುತ್ತಿತ್ತು! 1911 ಪಂಚಮ ಜಾರ್ಜರ ದಿಲ್ಲಿ ದರಬಾರದಲ್ಲಿ ಅಂದರೆ, ರಾಜ್ಯಾರೋಹಣದ ಪ್ರತೀಕವೆಂದು ಏರ್ಪಡಿಸಿದ್ದ ಸಮಾರಂಭದಲ್ಲಿ ಅಲಾಹಾಬಾದಿನ ಜಾನಕಿಬಾಯಿಯೊಂದಿಗೆ 'ಮುಬಾರಕ ಹೋ' ಎನ್ನುವ ಸ್ತುತಿ ಹಾಡನ್ನು ಹಾಡಿದ ದಾಖಲೆ ಇದೆ. ಎಚ್‌ಎಮ್‌ವಿಯವರೊಂದಿಗೆ ಕರಾರು ಮಾಡಿ 1920ರ ತನಕ ಅಸಂಖ್ಯ ರೆಕಾರ್ಡುಗಳನ್ನು ಈಕೆ ಕೊಟ್ಟಳು. ಇದರಲ್ಲಿ ಕೆಲವು 10 ಇಂಚಿನ ಮುದ್ರಿಕೆಗಳಿದ್ದರೆ, ಇನ್ನೂ ಕೆಲವು 12 ಇಂಚಿನವು. ಉರ್ದು, ತೆಲುಗು, ತಮಿಳು, ಇಂಗ್ಲಿಷ, ಪೇಶಾವರಿ, ಅರೆಬಿಕ್, ಸಂಸ್ಕೃತ, ಕಚ್ಚಿ, ತುರ್ಕಿ, ಬಂಗಾಲಿ, ಪುಶ್ತು, ಮತ್ತು ಹಿಂದಿ ಹೀಗೆ ಒಟ್ಟು 12 ಭಾಷೆಗಳಲ್ಲಿ ಈ ಮುದ್ರಿಕೆಗಳಿದ್ದು, ಹಿಂದುಸ್ತಾನಿ ಗಾಯನ ಶೈಲಿಯ ಶಾಸ್ತ್ರೀಯ ರಾಗಗಳ ಹೊರತು, ಇತರ ಉಪಶಾಸ್ತ್ರೀಯ, ಚೈತಿ, ಹೋರಿ, ಕಜರಿ, ಟಪ್ಪಾ, ತರಾನಾ, ಗಝಲ್, ಮತ್ತು ಠುಮ್ರಿ, ಹೀಗೆ ವಿವಿಧ 12 ಪ್ರಕಾರಗಳ ಧ್ವನಿಮುದ್ರಿಕೆಗಳನ್ನು ಕೊಟ್ಟ ಕೀರ್ತಿ ಇವಳಿಗೆ ಸಲ್ಲುತ್ತದೆ. ಎಚ್‌ಎಮ್‌ವಿ ಹೊರತಾಗಿ, ಸನ್ ಪೆಥೆ, ನಿಕೊಲಸ್ ರೊಯಲ್, ಮತ್ತು ಸಿಂಗರ್ ಕಂಪನಿಗಳಿಗೂ ಅವಳು ಧ್ವನಿಯನ್ನು ನೀಡಿದ್ದಳು.

1920ರಿಂದ ಈಕೆಯ ಇಳಿಗಾಲ ಆರಂಭವಾಯಿತು. ಕಲಕತ್ತೆಯಲ್ಲಿ ಆರು ಕುದುರೆಗಳ ಗಾಡಿಯಲ್ಲಿ ತಿರುಗಾಡುತ್ತಿದ್ದ ಗೋಹರಜಾನಳು ಆರ್ಥಿಕ ಕಷ್ಟ-ನಷ್ಟಗಳನ್ನು ಎದುರಿಸಬೇಕಾಗಿ ಬಂತು. ಆಗಿನ ಮೈಸೂರು ಮಹಾರಾಜರಾದ ನಾಲ್ಮಡಿ ಕೃಷ್ಣರಾಜ ಒಡೆಯರ್ ಇವರು ಗೋಹರಜಾನಳಿಗೆ ಆಶ್ರಯ ಕೊಟ್ಟು ತಮ್ಮ ದರಬಾರದ ಗಾಯಕಿಯನ್ನಾಗಿ ಮಾಡಿಕೊಂಡರು. ಈ ವ್ಯವಸ್ಥೆ ಕೇವಲ ನಿವೃತ್ತಿ ವೇತನಕ್ಕಷ್ಟೇ ಇತ್ತು. ಗೋಹರಜಾನ್ 1930ರಲ್ಲಿ ತೀರಿಕೊಂಡಳು.

1944ರಲ್ಲಿ ಎಚ್‌ಎಮ್‌ವಿ ಕಂಪನಿಯು ಮಾತ್ರ ರೆಕಾರ್ಡಿಂಗ್ ಕಂಪನಿಯಾಗಿದ್ದು (ಉಳಿದ ಭಾರತೀಯ ಕಂಪನಿಗಳನ್ನು ಕೊಂಡುಕೊಂಡಿದ್ದರಿಂದ) ಇವರು 'ಥೇರ್ಮನ್ಸ್ ಚಾಯಿಸ್' ಲೇಬಲ್ಲಿನಲ್ಲಿ ಗೋಹರಜಾನಳ 18 ಹಾಡುಗಳ ಪರಿಷ್ಕರಣ ಮಾಡಿದರು. ಇದರಲ್ಲಿ ಜೋಗಿಯಾ, ಜೋನಪುರಿ, ಮಲ್ಹಾರ, ಸೂರಮಲ್ಹಾರ, ಭೈರವಿ, ಹೋರಿ, ಠುಮ್ರಿ, ಕಜರಿ ರಾಗ ಪ್ರಕಾರಗಳಿವೆ. 'ಮಿಲೆನಿಯಮ್ ಮ್ಯೂಸಿಕ್' ಅಂದರೆ 2000 ಇಸವಿಯ ಪ್ರಾರಂಭದಲ್ಲಿ ಹೊರಗೆ ಬಂದ ಆಲ್ಬಮ್‌ನಲ್ಲಿ ಇವರ 2 ಹಾಡುಗಳಿವೆ.

ಅದೇ ಏಶಿಯಾಟಿಕ್ ದರ್ಬಾರ ಹಾಲಿನಲ್ಲಿ ಗೋಹರಜಾನಳ ರೆಕಾರ್ಡುಗಳನ್ನು 2007 ಸಪ್ಟೆಂಬರ 3ರಂದು ಅಂದರೆ 100 ವರ್ಷಗಳ ಬಳಿಕ ಹಚ್ಚಿ ನಾವೆಲ್ಲ ಅವರ ನೆನಪನ್ನು ಮಾಡಿಕೊಂಡೆವು.

*****

4.9

ಗಾಯನಾಚಾರ್ಯ ರಾಮಕೃಷ್ಣ ನರಹರ ವಝೆ (1879–1945)

ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ, ದಾರಿದ್ರ್ಯದಲ್ಲಿ ಸಂಗೀತ ಕಲಿತ ರಾಮಕೃಷ್ಣ ವಝೆ ಇವರ ಮನೆತನದಲ್ಲಿ ಸಂಗೀತದ ಗಂಧ-ಗಾಳಿಯೇ ಇರಲಿಲ್ಲ. ತಾಯಿ ಸಾವಂತವಾಡಿ ಊರಲ್ಲಿಯ ಜಮೀನುದಾರರೊಬ್ಬರ ಮನೆಯಲ್ಲಿ ಅಡಿಗೆಯನ್ನು ಮಾಡಿ ತನ್ನ ಜೀವನವನ್ನು ಸಾಗಿಸುತ್ತಿದ್ದರು. ಗೋವಾ ಪ್ರಾಂತದ ಗಡಿಯಲ್ಲಿದ್ದ ಓಝರೆಯಲ್ಲಿ ಹುಟ್ಟಿದ ರಾಮಕೃಷ್ಣ ಮುಂದೆ ಊರು-ಊರು ಅಲೆದು ಪ್ರತಿಯೊಂದು ಮೆಟ್ಟಿಲಲ್ಲಿ ಹಿಂದೂ/ಮುಸಲ್ಮಾನರೆಂದು ಭೇದಭಾವ ಮಾಡದೇ 12 ವರ್ಷ ತಾನರಸ್ ಖಾನ್, ಬಂದೇ ಅಲಿ, ನಿಸ್ಸಾರ ಹುಸೇನ್ ಖಾನ್, ರಹಿಮತ್ ಖಾನ್ ಇವರ ಜಲಸಾ/ಕಚೇರಿಗಳನ್ನು ಕೇಳುತ್ತಲೇ, ಟಿಪ್ಪಣಿ ಮಾಡುತ್ತ ಮಾಡುತ್ತಾ, ಕಾಲಲ್ಲಿ ಚಕ್ರವಿದ್ದ ಹಾಗೆ ಅಲೆಮಾರಿ ಜೀವನ ನಡೆಸಿ ವಿದ್ಯಾರ್ಜನೆ ಮಾಡಿದರು. 19ನೆಯ ಮತ್ತು 20ನೆಯ ಶತಮಾನದ ಗಾಯಕರಲ್ಲಿ ಆತ್ಮಚರಿತ್ರೆಯ ರೂಪದಲ್ಲಿ ಬರೆದ ಅವರ 'ಸಂಗೀತ ಕಲಾವಿಹಾರ' ಭಾಗ 1 ಮತ್ತು 2 ಆ ಕಾಲದ ಅಂದರೆ 1890–1930ರ ಲಖನೌ, ಬನಾರಸ, ನೇಪಾಳದ ತನಕದ ಸಂಗೀತದ ಸ್ಥಿತಿ-ಗತಿ, ಸಮಾಜದ ವಿವಿಧ ರೂಪಗಳು ಕಾಣಲಿಕ್ಕೆ ಸಿಗುತ್ತವೆ. ಸ್ವಾಮಿ ವಿವೇಕಾನಂದರ ಆಶ್ರಮದಲ್ಲಿ ಕಳೆದ ಒಂದು ಸಪ್ತಾಹದ ಆಗು-ಹೊಗುಗಳನ್ನು, ಸ್ವಾಮಿಯವರ ಪಖಾವಜ್ ಬಾರಿಸುವ ಮತ್ತು ಧ್ರುಪದ್-ಧಮಾರ ಹಾಡುವ ವೈಖರಿಯ ಬಗ್ಗೆ, ಇದರಲ್ಲಿ ಬರೆದಿಟ್ಟಿದ್ದರಿಂದ ಸ್ವಾಮಿ ವಿವೇಕಾನಂದರ ಸಂಗೀತ ಶಿಕ್ಷಣದ ಬಗ್ಗೆ ನಮಗೆ ಅರಿವಾಗುತ್ತದೆ. ಖ್ಯಾತ ಸರ್ಕಸ್ ಪಟು ವಿಷ್ಣುಪಂತ ಛತ್ರೆಯವರು ಒಳ್ಳೆಯ ಹಾಡುಗಾರರೆಂದೂ ಹೆಸರು ಮಾಡಿದ್ದರು.. ಅವರು ಸರ್ಕಸ್ಸಿನೊಂದಿಗೆ ನೇಪಾಳದತನಕ ತಿರುಗಾಡಿ ಬಂದದ್ದೆಲ್ಲವನ್ನೂ ರಸವತ್ತಾಗಿ ಈ ಪುಸ್ತಕದಲ್ಲಿ ವರ್ಣಿಸಿದ್ದಾರೆ. ಇದೆಲ್ಲಾ ಮುಗಿಸಿ, ಗ್ವಾಲಿಯರ್ ಗಾಯಕಿಯನ್ನು ತಮ್ಮ ಕಂಠದಲ್ಲಿ ಇಳಿಸಿ, ಮರಳಿ ಪುಣೆಗೆ ಬರುವ ತನಕ ರಾಮು, ರಾಮಕೃಷ್ಣ ಬುವಾ ಆಗಿ 25ರ ಹರೆಯದವನಾಗಿದ್ದರು. ಪುಣೆಯ ಭರತನಾಟ್ಯಮಂದಿರವಿದೆಯಲ್ಲ, ಅಲ್ಲಿಯೇ ಮನೆಕಟ್ಟಿಸಿ 'ಪುಣೇಕರ' ಆದರು.

ಭಾಸ್ಕರ ಬುವಾ ಬಖಲೆಯವರಂತೆ ಇವರೂ ಕೂಡ 'ಲಲಿತಕಲಾದರ್ಶ' ಸಂಗೀತಕಾರರೆಂದೂ, ದೀನಾನಾಥ ಮಂಗೇಶಕರ್ ಅವರ 'ಬಲವಂತ' ಕಂಪನಿಯ

ಸಂಗೀತಮಾಸ್ತರ ಮತ್ತು ಗುರುಗಳೆಂದು ಹೆಸರು ಮಾಡಿದರು. ಅವರು ಸಂಗೀತ ನೀಡಿದ ಲಲಿತಕಲಾದರ್ಶದ 'ರಾಕ್ಷಸಿ ಮಹತ್ವಾಕಾಂಕ್ಷಾ', ಬಳವಂತ ಕಂಪನಿಯ 'ರಣದುಂಧುಬಿ', 'ಸನ್ಯಸ್ತಖಡ್ಗ', 'ಸನ್ಯಾಸಾಚಾ ಸಂಸಾರ' ಇವು ಆ ಕಾಲದ ಕೆಲವು ಖ್ಯಾತ ನಾಟಕಗಳ ಹೆಸರುಗಳು. ಈ ನಾಟಕಗಳ ನಾಟ್ಯ-ಗೀತೆಗಳನ್ನು ದೀನಾನಾಥ ಮಂಗೇಶ್ಕರ್ ಹಾಡಿದ್ದು, ಬಾಪೂರಾವ್ ಪೆಂಢಾರಕರ್ ಅವರ ಅನೇಕ ರಂಗಗೀತೆಗಳು ಧ್ವನಿತಟ್ಟೆಯಲ್ಲಿ ಮೂಡಿ ತುಂಬಾ ಪ್ರಸಿದ್ಧಿಗೆ ಬಂದವು. ಇವರು ಹಾಡಿದ 78 ಆರ್‌ಪಿಎಮ್ ಗತಿಯ ಧ್ವನಿಮುದ್ರಿಕೆಗಳು ಮೂರು ನಿಮಿಷದ ಅವಧಿಯ ಕೊಲಂಬಿಯಾ ಕಂಪನಿಯವರದು. ಇವು 1933–40ರಲ್ಲಿ ಮಾಡಿದವು ಮತ್ತು ಬಹಳ ಪ್ರಸಿದ್ಧಿಯನ್ನು ಪಡೆದವು. ಇವೆಲ್ಲಾ ಅವರು 50 ವರ್ಷ ದಾಟಿದ ನಂತರದ ಧ್ವನಿಮುದ್ರಿಕೆಗಳು. ಇವುಗಳಲ್ಲಿ ತೋಡಿ, ಖಟ್, ಭಟಿಯಾರ್, ಸಾರಂಗ ಭೈರವ, ಬಹಾರ, ಖಂಬಾವತಿ, ಕಾಫಿ, ಕಾನಡಾ, ತಿಲಕಕಾಮೋದ, ಮಾರವಾ, ಬಾಗೇಶ್ರೀ, ತಿಲಂಗ, (ಬೋಲರೇ ಪಪಿಹರಾs) ಮಲ್ಹಾರ ಮತ್ತು ಒಂದು (ಕರಮಕೀ ಗತಿ ನ್ಯಾರಿ) ಇವೆಲ್ಲ ಇವೆ. ಮುಂಬಯಿಯ ಫೋರ್ಟ್ ವಿಭಾಗದಲ್ಲಿದ್ದ ಎಸ್. ರೋಸ್ ಕಂಪನಿಯಲ್ಲಿ ಕೆಲವು ಎಚ್‌ಎಮ್‌ವಿಯವರ ಮುಂಬಯಿಯ ಸ್ಟುಡಿಯೋದಲ್ಲಿ ಜೆ.ಪಿ.ಸೇನ್ ಎಂಬುವರು ಇವುಗಳನ್ನು ಮುದ್ರಿಸಿದ್ದರು. 1962ರ ಎಚ್‌ಎಮ್‌ವಿಯವರ ಕ್ಯಾಟಲಾಗಿನಲ್ಲಿ ಇವೆಲ್ಲ ಇದ್ದದ್ದು, ಇವುಗಳ ಬೇಡಿಕೆ ಲಕ್ಷ್ಯದಲ್ಲಿಟ್ಟುಕೊಂಡು ಈ ಕಂಪನಿಯು ಇವುಗಳನ್ನು ಮರುಮುದ್ರಣ ಮಾಡಿತು. ಸ್ವಲ್ಪ ಸ್ಪೀಡ್ ಹೆಚ್ಚಾಗಿದ್ದುದರಿಂದ ನಮ್ಮಂತಹ 'ಕಾನ್‌ಸೇನ'ರಿಗೆ ಹಳೆಯ ರಿಕಾರ್ಡುಗಳೇ ಚೆನ್ನಾಗಿದೆ ಎಂದು ಅನಿಸುತ್ತದೆ. ಬುಖಾರಿ ಸಾಹೇಬ (ಸ್ಟೇಶನ್ ಡೈರೆಕ್ಟರ್, ಎಐಆರ್, ಮುಂಬಯಿ) ಅವರು ಸುದೈವದಿಂದ ವಝೆ ಅವರ ಸಂಗೀತದ ಭಕ್ತರಾಗಿದ್ದುದರಿಂದ ಒಂದು 27 ನಿಮಿಷದ 'ಮಿಯಾಮಲ್ಹಾರ' ಬುಖಾರಿ ಸಾಹೇಬರ ಸಂಗೀತ–ಸಂಗ್ರಹದಲ್ಲಿ ಇದೆಯಂತೆ. 70 ವರ್ಷದ ವಝೆಯವರ ಹಾಡುವ ಆಕ್ರಾಮಕ ಶೈಲಿಯನ್ನು ಇದರಲ್ಲಿ ಕಾಣಬಹುದು. ನಂತರದ ದಿನಗಳಲ್ಲಿ ಪಾಕಿಸ್ತಾನಕ್ಕೆ ಹೋಗಿ ನೆಲೆಸಿದ ಬುಂದುಖಾನರ ಸಾರಂಗಿ ಮತ್ತು ಝಕೀರ್ ಹುಸೈನರ ತಂದೆ ಅಲ್ಲಾ ರಾಖಾ ಅವರ ತಬಲಾ ಪಕ್ಕವಾದ್ಯ ಈ ಮುದ್ರಿಕೆಗೆ ಲಭಿಸಿದೆ.

ಸ್ವಾಮಿ ವಿವೇಕಾನಂದರು ಕಲಿಸಿದ ಅವರ ಆತ್ಮ ಚರಿತ್ರೆಯಲ್ಲಿದ್ದ ಒಂದು 'ದೋಹಾ'ವನ್ನು ಕೆಳಗೆ ಕೊಡಲಾಗಿದೆ:

ಸಂಗೀತ ಕಲಾ ಹೈ ನ್ಯಾರಿ, ಸಬಕೋ ಹೋಗಯಿ ಪ್ಯಾರೀ ।
ಕೋಯಿ ದಿನ ಗಲಿಗಲಿ ಮೇಂ ಫಿರತಿ, ಕೋಯಿ ದಿನ ಥಾಡೀ ರಾಜದರಬಾರೀ ।
ಐಸೀ ನಾರಿ ಜಿಸಕೊ ಮಿಲತೇ ಹೈ, ಬಾಕಿ ಹೈ ಬಲಿಹಾರೀ ॥

*****

4.10

ಸೂಫಿ ಪ್ರಣಾಲಿಯ ಗಾಯಕ
ಇನಾಯತ್ ಖಾನ್ ಪಠಾಣ (1882–1927)

ಸೂಫಿ ಪಂಥದ ಈ ಗಾಯಕನನ್ನು ಈಗಲೂ ಜನರು ಅತ್ಯಂತ ಆದರದಿಂದ ಮನ್ನಿಸುತ್ತಾರೆ. ಸೂಫಿ ಪಂಥದ ಪ್ರಸಾರ ಮತ್ತು ಪ್ರಚಾರಕ್ಕಾಗಿ ಈ ಇನಾಯತ ಖಾನರು* ತಮ್ಮ ಬದುಕಿನ ಕೊನೆಯ ಹತ್ತು ಹದಿನೈದು ವರ್ಷಗಳನ್ನು ಸವೆಸಿದರು. ಇವರ ಅಜ್ಜ ಮೌಲಾಭಕ್ಷ, ಬರೋಡಾ ಸಂಸ್ಥಾನದ ಆಸ್ಥಾನದಲ್ಲಿದ್ದರು. ಸಂಗೀತದ ಪ್ರಾಥಮಿಕ ಶಿಕ್ಷಣ ಅಲ್ಲಿಯೇ ಆಯಿತು. ಕುಶಾಗ್ರಮತಿಯ ಇನಾಯತಖಾನರು 20ರ ಹರೆಯದಲ್ಲಿಯೇ ಸಂಗೀತ ನಿಪುಣರಾಗಿ ಒಂದು ಪುಸ್ತಕವನ್ನು ಬರೆಯಲು ಆರಂಭಿಸಿದ್ದರು. ತಂದೆ ರಹಿಮತ್ ಖಾನರೊಂದಿಗೆ 1899ರಲ್ಲಿಯೇ ನೇಪಾಳದಲ್ಲಿ ಜರುಗಿದ ಸಂಗೀತ ಪರಿಷತ್ತಿಗೆ ಹೋಗಿದ್ದರು. 1902ರಿಂದ 1910ರ ತನಕ ದಕ್ಷಿಣ ಹಿಂದುಸ್ತಾನದಲ್ಲಿ ಎಲ್ಲಾ ಕಡೆ ತಿರುಗಾಡಿ ಅಲ್ಲಲ್ಲಿ ಕಚೇರಿಗಳನ್ನೂ ನಡೆಸಿದರು. ನಿಜಾಮನ ದರಬಾರಿನಲ್ಲಿ ಕೂಡ ಹಾಡಿ 'ದಿ ಮಾಡರ್ನ್ ತಾನಸೇನ' ಎಂಬ ಬಿರುದನ್ನೂ ಪಡೆದರು. ಈ ಬಿರುದನ್ನು ಅವರ ಆಗ ಬಿಡುಗಡೆಯಾದ ಕೆಲ ಧ್ವನಿಮುದ್ರಿಕೆಗಳಲ್ಲಿ ಕಾಣಬಹುದು.

1909ರಲ್ಲಿ ಕಲಕತ್ತಾ ಶಹರದಲ್ಲಿ ಬಂದು ನೆಲೆಸಿದಾಗ ಇವರು ಗ್ರಾಮಫೋನ್ ರಿಕಾರ್ಡಿಂಗ್ ಕಂಪನಿಯೊಂದಿಗೆ ಕರಾರು ಮಾಡಿಕೊಂಡಂತೆ ಒಟ್ಟು 29 ಹಾಡುಗಳ ಧ್ವನಿಮುದ್ರಣವಾಯಿತು. ಇವುಗಳೆಲ್ಲ ದೊಡ್ಡ ಆಕಾರದ 10 ಇಂಚು ವ್ಯಾಸದ ರೆಕಾರ್ಡ್‌ಗಳು. ಇವುಗಳನ್ನು 'ಗ್ರಾಮಫೋನ್ ಕಾನ್ಸರ್ಟ್ ರೆಕಾರ್ಡ್' ಎಂಬ ಲೇಬಲ್‌ಗಳಲ್ಲಿ ಬಿಡುಗಡೆ ಮಾಡಿದ್ದರು. 'ಬಾಯಿ' ಮತ್ತು 'ಜಾನ್'ಗಳ ಧ್ವನಿಮುದ್ರಿಕೆಗಳೇ ಪ್ರಮುಖವಾಗಿ ಮಾರಾಟವಾಗುತ್ತಿದ್ದಾಗ ಇನಾಯತಖಾನರ ಇಷ್ಟೊಂದು ಧ್ವನಿಮುದ್ರಿಕೆಗಳನ್ನು ಮಾರುಕಟ್ಟೆಗೆ ತಂದುದು ನಿಜಕ್ಕೂ ಶ್ಲಾಘನೀಯ. ಇವುಗಳ ಆಕರ ದೊಡ್ಡದಿದ್ದುದರಿಂದ ಎಚ್‌ಎಂವಿಯವರ ಕ್ಯಾಟಲಾಗಿನಲ್ಲಿ ಸೇರಿಸದೇ ಇದ್ದುದರಿಂದಲೋ ಏನೋ ಗ್ರಾಹಕರಿಗೆ ಇವುಗಳ ಹೆಚ್ಚಿನ ಪರಿಚಯವಾಗದೆ ಹೋಯಿತು. ಮುಂದೆ ಖಾನಸಾಹೇಬರು ತಮ್ಮ ಸೋದರಳಿಯರೊಂದಿಗೆ ಸೂಫಿ ಪಂಥದ ಪ್ರಚಾರಕ್ಕಾಗಿ ವಿದೇಶಕ್ಕೆ ಹೋದರು. 1914ರವರೆಗೆ ಅಂದರೆ ಮೊದಲ ಮಹಾಯುದ್ಧ ಪ್ರಾರಂಭವಾಗುವ ವರೆಗೆ ಲಾಸ್‌ಏಂಜಲ್ಸ್,

ಕೆಲಿಫೋರ್ನಿಯಾ, ಫ್ರಾನ್ಸ್, ರಷಿಯಾ, ಇಂಗ್ಲೆಂಡ್ ಮೊದಲಾದೆಡೆಗಳಲ್ಲಿ ಉಪನ್ಯಾಸ ಮತ್ತು ಸಂಗೀತ ಕಚೇರಿಗಳನ್ನು ನಡೆಸಿದರು. ಎಲ್ಲ ಕಡೆಯಿಂದ ಸನ್ಮಾನ, ದ್ರವ್ಯರಾಶಿ ದೊರೆಯುತ್ತಲೇ ಇತ್ತು. ಆದರೆ ಮುಂದೆ ಸಾವಕಾಶವಾಗಿ ಹಾಡುಗಾರಿಕೆಯನ್ನು ತೊರೆದು ಕೇವಲ ಧರ್ಮ ಪ್ರಚಾರಕ್ಕಾಗಿ ಉಳಿದ ಆಯುಷ್ಯವನ್ನು ಮುಡುಪಾಗಿಟ್ಟರು.

ಇವರ ಧ್ವನಿಮುದ್ರಿಕೆಗಳ ಮರುಮುದ್ರಣ ಭಾರತದಲ್ಲಿ ಆಗಲಿಲ್ಲ. 1994ರಲ್ಲಿ ಹಾಲೆಂಡಿನ ಹ್ಯೂ ಬೋರ್** ಮತ್ತು ಆಸ್ಟ್ರೇಲಿಯಾದ ಮೈಕೇಲ್ ಕಿನ್ನರ್ ಅವರ ಭಗೀರಥ ಪ್ರಯತ್ನದಿಂದ ಎಚ್‌ಎಂವಿ ಇಂಗ್ಲೆಂಡಿನವರು ಸೂಫಿ ಸಮಾಜಕ್ಕಾಗಿ ಇವರ ಎಲ್ಲಾ ಹಾಡುಗಳನ್ನು ಎರಡು ಸಿಡಿಗಳಲ್ಲಿ ಹೊರತಂದರು. ಅವುಗಳ ರಚನೆ ಇನಾಯತ ಖಾನರದ್ದು. 'ಅಡಾಣ', 'ಝಿಂಜೋಟಿ', 'ಪೂರಬಿ', 'ಸುರತಮಲ್ಹಾರ', 'ಕಾಫಿ', 'ಸಿಂಧೂರ', 'ಯಮನಕಲ್ಯಾಣ', 'ಜೋನ್‌ಪುರಿ' ಇನ್ನೂ ಅನೇಕ ಸೂಫಿ ಭಜನೆಗಳು ಇವುಗಳಲ್ಲಿ ಅಡಕವಾಗಿವೆ. 'ಯಾದ ರಹೋ ಸರಕಾರ' ಧ್ವನಿಮುದ್ರಿಕೆ 'ನಿಝಾಮ ಜ್ಯೂಬಲಿ ಸಾಂಗ್' ಎಂದು ಲೇಬಲಿನ ಮೇಲೆ ಬರೆದದ್ದು ಇದೆ. 'ಗಜಲ್ ಏ ಅಸೀಫ್' ಇದರ ಗಜಲ್ ನಿಜಾಮನೇ ಸ್ವತಃ ತನ್ನ ಕಾವ್ಯನಾಮದಲ್ಲಿ ಬರೆದಿದ್ದಾನೆ.

ಆಗಿನ ಕಾಲದ ಗಾಯಕರೆಲ್ಲ ತಮ್ಮ ಧ್ವನಿಯನ್ನು ಒತ್ತಿ ಹಾಡುತ್ತಿದ್ದ ಬಗ್ಗೆ ಹಿಂದೆ ಬರೆದಿದ್ದೇನೆ. ಹಾಗಾಗಿ ಧ್ವನಿ ಕಿಂಚಿತ್ ಧ್ವನಿಪಟಲಕ್ಕೆ ಭಾರವಾದಂತೆ ಅನಿಸುವುದು ಸಹಜ. ಆದರೆ ಇನಾಯತ ಖಾನರ ಕಂಠ ಸಹಜವಾಗಿಯೆ ಕೇಳಿಸುತ್ತದೆ. ಇದರ ಅರ್ಥ ಇಷ್ಟೆ. ಇವರ ಧ್ವನಿ ತುಂಬ ಹದವಾಗಿ ಹತೋಟಿಯಲ್ಲಿತ್ತು. ಎಲ್ಲ ಹಾಡುಗಳೂ ಕೇಳಲು ಚೆನ್ನಾಗಿವೆ. ಅವುಗಳಲ್ಲಿ 'ಯಮನಕಲ್ಯಾಣ'ದಲ್ಲಿನ ಪಾರಂಪರಿಕ ಚೀಜ್ 'ಪೀಹರವಾ ತಿಹಾರೋ' ಅತ್ಯುತ್ತಮವಾಗಿದೆ.

* ಈ ಇನಾಯತ ಖಾನ್ ಮತ್ತು ಸಿತಾರ್ ಕಲಾವಿದ ವಿಲಾಯತಖಾನರ ತಂದೆ ಇನಾಯತ ಖಾನ್ ಬೇರೆ ಬೇರೆ ವ್ಯಕ್ತಿಗಳು

** ಹ್ಯೂ ಬೋರ್, ಪಂಡಿತ ರಾಂ ನಾರಾಯಣ್ ಅವರಲ್ಲಿ ಸಾರಂಗಿ ಅಭ್ಯಾಸ ಮಾಡಿದ್ದಾರೆ. ಹಾಲೆಂಡಿನ ರೋಟರ್ ಡ್ಯಾಮ್ ಕನ್ಸರ್ವೇಟರಿಯಲ್ಲಿ ಭಾರತೀಯ ಸಂಗೀತ ವಿಭಾಗದ ಮುಖ್ಯಸ್ಥರೂ ಆಗಿದ್ದರು.

4.11

ಬಹಿರೇ ಅಬ್ದುಲ್ ವಹೀದ್ ಖಾನ್ (1882–1948)

ಸುದೈವದಿಂದ ಬಹಿರೇ ಅಬ್ದುಲ್ ವಹೀದ್ ಖಾನ್ 1938–40ರಲ್ಲಿ ಹಾಡಿದ ಕೆಲವಾದರೂ ರಾಗಗಳ (ಪಟದೀಪ, ಮುಲ್ತಾನಿ, ದರ್ಬಾರಿ ಕಾನಡಾ ಇತ್ಯಾದಿ) ಒಂದು ಎಲ್‌ಪಿಯನ್ನು ಗ್ರಾಮೊಫೋನ ಕಂಪನಿಯವರು ಮಾರುಕಟ್ಟೆಗೆ ತಂದಿದ್ದರಿಂದ ಇವರ ಗಾಯನಶೈಲಿಯ ಬಗ್ಗೆ ರಸಿಕರಲ್ಲಿ ಕುತೂಹಲ ಉಂಟಾಯಿತು. ಕಿರಾನಾ ಮನೆತನದ ಅಬ್ದುಲ್ ಕರೀಂಖಾನರ ಸೋದರಳಿಯ ಇವರು.

ಅಬ್ದುಲ್ ಕರೀಂಖಾನರಿಗಿಂತ ಹತ್ತು ವರ್ಷ ಚಿಕ್ಕವರು. ಹಾಡುವ ಶೈಲಿ ಅಬ್ದುಲ್‌ಕರೀಂ ಖಾನರ ಶೈಲಿಯಂತೆ ಸ್ವರಪ್ರಧಾನ. 20 ವರ್ಷ ಸಾರಂಗಿ ಕಲಿತು ನುಡಿಸುತ್ತಿದ್ದರು. ಸಾರಂಗಿಯ ಸ್ವರಗಳು ಸತತವಾಗಿ ಬಲಕಿವಿಯ ಮೇಲೆ ಬಿದ್ದು ಇವರ ಬಲ ಕಿವಿ ಕಿವುಡಾಗಿತ್ತು. ಅಂತೆಯೇ ಇವರು 'ಬಹಿರೇ' ಅಬ್ದುಲ್ ವಹೀದ ಎಂದು ಗುರುತಿಸಲ್ಪಡುತ್ತಿದ್ದರು. ಅಬ್ದುಲ್ ವಹೀದರು ಕೆಲ ಕಾಲ ಮೈಸೂರಿನ ದರಬಾರಿನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆ ಬಳಿಕ ಕೊಲ್ಲಾಪುರಕ್ಕೆ ಬಂದರು. 1911ರ ಬಳಿಕ ಪುಣೆ ಸೇರಿ ಅಬ್ದುಲ್ ಕರೀಂಖಾನರು ಪ್ರಾರಂಭಿಸಿದ 'ಆರ್ಯ ಸಂಗೀತ ವಿದ್ಯಾಲಯ'ದಲ್ಲಿ ಸಂಗೀತ ಕಲಿಸಲು ತೊಡಗಿದರು. ಅಬ್ದುಲ್ ಕರೀಂಖಾನರ ಮೆಹಫಿಲ್ಲುಗಳಲ್ಲೂ ದೊಡ್ಡ ದೊಡ್ಡ ಜಲಸಾ ಸಮಾರಂಭಗಳಲ್ಲೂ ಭಾಗವಹಿಸುತ್ತಿದ್ದರು. ಮುಂದೆ ಅಬ್ದುಲ್ ಕರೀಂಖಾನರ ಹೆಂಡತಿ ತಾರಾಬಾಯಿ ಮಾನೆ ವಿಚ್ಛೇದನ ಪಡೆದು ತನ್ನ ಮಕ್ಕಳೊಂದಿಗೆ ಹೊಸ ಸಂಸಾರ ಪ್ರಾರಂಭಿಸಿದ ಮೇಲೆ ಆಕೆಯ ಮಗಳು ಹೀರಾಬಾಯಿ ಬಡೋದೆಕರ ಅವರಿಗೆ ಸಂಗೀತ ಕಲಿಸಿದ್ದುದು ವಹೀದಖಾನ್‌ರೇ! ಸುರೇಶಬಾಬು ಮಾನೆ ಊರ್ಫ ಅಬ್ದುಲ್ ರೆಹಮಾನರನ್ನು ಬಿಟ್ಟು ಉಳಿದ ಎಲ್ಲರಿಗೂ ಸಂಗೀತವನ್ನು ಕಲಿಸಿದ ಶ್ರೇಯ ಇವರದೇ. ಅಂದರೆ ಸಾಕೀನ ಊರ್ಫ ಸರಸ್ವತಿ ರಾಣೆ, ಕಮಲಾ ಇವರಿಗೆಲ್ಲ ಉನ್ನತ ಮಟ್ಟದ ಸಂಗೀತ ಪ್ರಾಪ್ತಿಯಾದದ್ದು ಅಬ್ದುಲ್ ವಹೀದಖಾನ್‌ರಿಂದಲೇ. ಇವರ ರೇಡಿಯೊ ಹಾಡುಗಾರಿಕೆಯಿಂದ ಪ್ರಭಾವಿತರಾಗಿದ್ದ ಇಂದೋರಿನ ಅಮೀರಖಾನರ ಸಂಗೀತಕ್ಕೆ ತಳಪಾಯವನ್ನು ಪರೋಕ್ಷವಾಗಿ ಹಾಕಿದ್ದೂ ಇವರೇ.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಕಿರಾನಾ ಪರಂಪರೆಯ ಅಡಿಗಲ್ಲು ಹಾಕಿದ ಶ್ರೇಯ ಅಬ್ದುಲ್ ವಹೀದರಿಗೂ ಸಲ್ಲುತ್ತದೆ. ಇವರಿಗೆ ರೆಕಾರ್ಡು ಕೊಡುವದರಲ್ಲಿ

ಅಂದರೆ 3 ನಿಮಿಷಗಳ ಹಾಡುಗಾರಿಕೆಯಲ್ಲಿ ಸುತರಾಂ ಇಷ್ಟವಿರಲಿಲ್ಲ. ಬಹಳ ಸಾವಕಾಶವಾಗಿ ಆಲಾಪನೆ ಮಾಡುವ ಇವರ ರೀತಿಯನ್ನು ಮುಂದೆ ಇವರ ಶಿಷ್ಯರಾದ ಅಮೀರಖಾನರು ಬಹಳ ಚೆನ್ನಾಗಿ ಅಳವಡಿಸಿಕೊಂಡದ್ದು ರಸಿಕರಿಗೆಲ್ಲ ತಿಳಿದ ಮಾತು. ಇವರ ಶಿಷ್ಯರಲ್ಲಿ ಜೀವನಲಾಲ ಮಟ್ಟು, ಬೇಗಮ್ ಅಖ್ತರ, ಆಗ್ರೇವಾಲೆ ಗುಲಾಮ ಅಬ್ಬಾಸ ಖಾನ, ಪಂಜಾಬ್‌ದ ಹೀರಾಬಾಯಿ, ಪಂಡಿತ ಪ್ರಾಣನಾಥ, ರಫೀಕ ಗಜನಬಿ (ಮಹಮ್ಮದ ರಫಿ) ಪ್ರಮುಖರು. ಲಾಹೋರಿನ ಆಶಿಕ್ ಅಲಿ ಇವರಲ್ಲಿ ಶಿಕ್ಷಣ ಪಡೆದು ಮುಂದೆ ರಾಯಪೂರದಲ್ಲಿ, ಕಿರಾನ ಪರಂಪರೆಯನ್ನು ಮುಂದುವರೆಸಿದರು.

1940ರಲ್ಲಿ ವಹೀದರು ಕೈರಾನಾ ಸೇರಿದರು. 1945ರಲ್ಲಿ ತಮ್ಮ 65ನೇ ವಯಸ್ಸಿನಲ್ಲಿ 18 ವರ್ಷದ ತರುಣಿ ನಜಿಯಾ ಬೇಗಮಳನ್ನು ಮದುವೆಯಾಗಿ ಒಂದು ಮಗುವನ್ನು ಪಡೆದರು. ಮಗ ಹಾಫಿಸ್‌ಉಲ್ಲಾ ಮೂರು ವರ್ಷದವನಿದ್ದಾಗ ವಹೀದರ ನಿಧನವಾಯಿತು. ಕರ್ನಾಟಕದ ದೇವೇಂದ್ರ ಮುರ್ಡೇಶ್ವರ ಮತ್ತು ರಮೇಶ ನಾಡಕರ್ಣಿಯವರು ಆಕಾಶವಾಣಿಯಲ್ಲಿದ್ದಾಗ ವಹೀದರಿಂದ ಅನೇಕ ಕಾರ್ಯಕ್ರಮಗಳನ್ನು ಮಾಡಿಸುತ್ತಿದ್ದರು. ಅವರು ಹೇಳಿದಂತೆ ಆಕಾಶವಾಣಿಯ ಒಂದೂವರೆ ತಾಸು ಅವರಿಗೆ ಸಾಕಾಗುತ್ತಿರಲಿಲ್ಲವಂತೆ . ಅವರ ಹಾಡುಗಾರಿಕೆಯ ಪ್ರಸಾರ ಮುಗಿದಮೇಲೂ 3–4 ತಾಸು ಅವರ ಗಾಯನ ಮುಂದುವರಿಯುತ್ತಿತ್ತಂತೆ!

*****

4.12

ಸವಾಯಿ ಗಂಧರ್ವ (1886–1952)

ಕೇವಲ 66 ವರ್ಷಗಳ ಕಾಲ ಬಾಳಿದ ಸವಾಯಿ ಗಂಧರ್ವ (ರಾಮಭಾವು ಕುಂದಗೋಳಕರ್) ಪುಣೆಯಲ್ಲಿ ತಮ್ಮ ಅಳಿಯ ಡಾ. ನಾನಾ ಸಾಹೇಬ ದೇಶಪಾಂಡೆ ಅವರ ನಿವಾಸದಲ್ಲಿ ವಿಧಿವಶರಾಗುವ ಹತ್ತು ವರ್ಷ ಮೊದಲೇ ಪಕ್ಷವಾತಕ್ಕೆ ತುತ್ತಾಗಿ ಹಾಡುವದನ್ನು ನಿಲ್ಲಿಸಿದ್ದರು. ಆದರೆ ಕೊನೆಯವರೆಗೂ ಅವರಿಗೆ ಶಿಷ್ಯೋತ್ತಮರಾದ ಗಂಗೂಬಾಯಿ, ಭೀಮಸೇನ ಜೋಶಿ ಅವರ ಸೇವೆ ಪ್ರಾಪ್ತವಾಯಿತು. ಫೀರೋಜ಼್ ದಸ್ತೂರ್, ಗಂಗೂಬಾಯಿ, ಭೀಮಸೇನ ಜೋಶಿಯವರಂತಹ ಶಿಷ್ಯರನ್ನು ಪಡೆದ ಭಾಗ್ಯ ಸವಾಯಿಯವರದು.

ಧಾರವಾಡ ಜಿಲ್ಲೆಯ ಚಿಕ್ಕ ತಾಲೂಕು ಕುಂದಗೋಳದ, ನಾಡಿಗೇರ ವಾಡಾದಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಸವಾಯಿ ಗಂಧರ್ವರ ಪುಣ್ಯತಿಥಿ ಇಂದಿಗೂ ನಡೆದು ಬರುತ್ತಿದೆ. ಕರ್ನಾಟಕ – ಮಹಾರಾಷ್ಟ್ರದ ಯುವ ಗಾಯಕರು ಹಿರಿಯ ಕಲಾವಿದರೊಂದಿಗೆ ಸೇರಿ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ.

ಅಬ್ದುಲ್ ಕರೀಂಖಾನರ ಪಟ್ಟಶಿಷ್ಯ ಎಂದು ಹೆಸರು ಮಾಡಿದ್ದ ರಾಮಭಾವು, ಚಿಕ್ಕ ವಯಸ್ಸಿನಲ್ಲಿಯೇ ಗುರುಗಳ ಕಾರ್ಯಕ್ರಮಗಳಿಗಾಗಿ ಸರ್ಕೀಟಿಗೆ ಹೋದಾಗ 1910ರಲ್ಲಿ, 'ನಾಟ್ಯ ಪ್ರವರ್ತಕ' ನಾಟಕಕಂಪನಿ ಸೇರಿ ಸ್ತ್ರೀಪಾತ್ರಗಳನ್ನು ಮಾಡಲು ಪ್ರಾರಂಭಿಸಿದರು. 'ಸಂತ ಸಖು' ಪಾತ್ರದಲ್ಲಿ ಖ್ಯಾತಿ ಗಳಿಸಿದರು. ಅಬ್ದುಲ್ ಕರೀಂ ಖಾನ್ ಮತ್ತು ಅವರ ಹೆಂಡತಿ ತಾರಾಬಾಯಿ ಮಾನೆಯವರ ಮಧ್ಯೆ ವೈಮನಸ್ಸು ಉಂಟಾದಾಗ ಅದನ್ನು ಸರಿಪಡಿಸಲು ಸವಾಯಿ ಗಂಧರ್ವರು ಹವಣಿಸಿದರು. ನಾಟಕ ಕಂಪನಿಯಲ್ಲಿ ಆ ಕಾಲದಲ್ಲಿದ್ದ ಗಾಯಕ–ಗುರುಗಳ ಸಂಸ್ಕಾರ ಇವರ ಮೇಲೆ ಆಯಿತು. ಹೀಗಾಗಿ ಅಬ್ದುಲ್ ಕರೀಂಖಾನ್‌ರ ಹಾಡುಗಾರಿಕೆಯನ್ನು ತನ್ನ ಖಯಾಲ್ ಗಾಯಕೀಯ ಬುನಾದಿಯಾಗಿ ಇಟ್ಟುಕೊಂಡು, ವಝೆ ಬುವಾ, ರಹಮತ್ ಭೂಗಂಧರ್ವ, ಇವರ ಕೆಲವು ಎದ್ದು ಕಾಣಿಸುವ ವೈಶಿಷ್ಟ್ಯಗಳನ್ನು ತನ್ನಲ್ಲಿ ಸೇರಿಸಿಕೊಂಡರು. ಇವರ ಆಕ್ರಾಮಕ ಶೈಲಿಯ ಹಲವು ಅಂಶಗಳನ್ನು ಗಂಗೂಬಾಯಿಯವರಲ್ಲಿಯೂ, ಭೀಮಸೇನ ಜೋಶಿಯವರಲ್ಲಿಯೂ ಕಾಣಬಹುದು. ಇವರ ತಾರುಣ್ಯದಲ್ಲಿಯೇ ಎಲ್ಲ ಹಾಡುಗಳು ಮುದ್ರಿತ ಆದುದರಿಂದ ಮತ್ತು ನಂತರದ ಹತ್ತು ವರ್ಷ ಹಾಡುವದು

ಅಸಾಧ್ಯವೆನಿಸಿದ್ದರಿಂದ ಇವರ ಹಾಡುಗಳಿಗೆ ಬಹಳ ಬೇಡಿಕೆಯಿತ್ತು. 1933–35ರಲ್ಲಿ ಇವರ ಧ್ವನಿತಟ್ಟೆಗಳನ್ನು ಮರುಮುದ್ರಿಸಲಾಯಿತು. ಇವುಗಳಲ್ಲಿ 'ಮಿಯಾ ಮಲಹಾರ', 'ಕಾಫಿ', 'ಜೋಗಿಯಾ', 'ಸಾರಂಗ', 'ಪೀಲೂ', 'ಮಾಲಕೌಂಸ,' 'ಧಾನಿ', 'ಗುಜರಿ ತೋಡಿ' ಮತ್ತು 'ಶಂಕರಾ' ಸೇರಿಕೊಂಡಿವೆ. ಬಹುತೇಕ ಹಾಡುಗಳ ಕೃತಿಗಳು ಅವೇ ಇದ್ದುದರಿಂದ, ಗಂಗೂಬಾಯಿ, ಭೀಮಸೇನ, ರೋಶನಾರಾ ಬೇಗಮ್ ಹಾಗೂ ಸವಾಯಿ ಗಂಧರ್ವರ ಹಾಡುಗಾರಿಕೆಯ ಅಭ್ಯಾಸ ತುಲನಾತ್ಮಕ ದೃಷ್ಟಿಯಲ್ಲಿ ರಸಿಕರು ಮಾಡಬಹುದಾಗಿದೆ. ಅತ್ಯಂತ ಶಿಸ್ತಿನಿಂದ ಸವಾಯಿ ಗಂಧರ್ವರು ತಮ್ಮ ಹಾಡುಗಾರಿಕೆಯನ್ನು ರೂಢಿಸಿಕೊಂಡಿರುವದನ್ನು ಈ ಧ್ವನಿತಟ್ಟೆಗಳಲ್ಲಿ ನಾವು ಗುರುತಿಸಬಹುದು.

*****

4.13

ಭೋಸಲೆ ಕುಲೋತ್ಪನ್ನ ಕೇಶವ (1890–1921)

ಕೇವಲ ಮುವ್ವತ್ತೊಂದು ವರ್ಷ ಬಾಳಿದ ಕೇಶವರಾವ್ ಭೋಸಲೆಯ ಬಗ್ಗೆ ಬರೆಯದೇ ಮುಂದೆ ಸಾಗುವಂತಿಲ್ಲ. ಇವರ ಜನ್ಮ ಕೊಲ್ಹಾಪುರದಲ್ಲಿ ಆಗಿದ್ದರೂ, ಇವರು ಸ್ಥಾಪಿಸಿದ "ಲಲಿತ ಕಲಾದರ್ಶ ನಾಟಕ ಮಂಡಳಿ" ಕರ್ನಾಟಕದ್ದು, ಹುಬ್ಬಳ್ಳಿಯಲ್ಲಿ. 1907ರಲ್ಲಿ ಅಂದರೆ ತಮ್ಮ ಹದಿನೇಳನೇ ವರ್ಷಕ್ಕೇನೇ ಒಂದು ನಾಟಕ ಕಂಪನಿಯ ಒಡೆಯರಾದ ಕೇಶವ, ನಾಲ್ಕು ವರ್ಷದ ಪುಟಾಣಿ ಇದ್ದಾಗ ರಂಗ ಭೂಮಿ ಪ್ರವೇಶಿಸಿದರು. ಈಗಲೂ ಈ ಕಂಪನಿ ಮಹಾರಾಷ್ಟ್ರದಲ್ಲಿ ಬಾಳಿ ಬದುಕಿದೆ! ಏಳನೇ ವರ್ಷಕ್ಕೆ ಗೋ. ಬ ದೇವಲ್ ಇವರ 'ಶಾರದಾ' ನಾಟಕದಲ್ಲಿ 'ಶಾರದೆ'ಯ ಮುಖ್ಯ ಪಾತ್ರ ವಹಿಸಿದ್ದರು! 'ಸಂಗೀತ ಮದಾಲಸಾ', 'ದಾಮಿನಿ', 'ರಾಕ್ಷಸಿ ಮಹತ್ವಾಕಾಂಕ್ಷಾ', 'ವ್ರತಪಾಲನ' ಇವು ಇವರು ಪಾತ್ರವಹಿಸಿದ್ದ ಇತರ ಕೆಲವು ನಾಟಕಗಳ ಹೆಸರುಗಳು. 'ಶಹಾಶಿವಾಜಿ' ನಾಟಕದಲ್ಲಿ ಕೊನೆಯ ಪಾತ್ರ ವಹಿಸಿ, 32ನೆಯ ವರ್ಷಕ್ಕೆ ದೇಹವಿಟ್ಟರು. ಕಾಂಗ್ರೆಸ್ಸಿನ ಸ್ವರಾಜ್ಯ ಫಂಡಿನ ಸಲುವಾಗಿ ಬಾಲ ಗಂಧರ್ವರ ಜೊತೆಗೆ ಕೂಡಿ 1921ರಲ್ಲಿ ಎರಡೂ ಕಂಪನಿಗಳ ಒಂದು ಸಂಯುಕ್ತ ನಾಟಕ 'ಮಾನಾಪಮಾನ' ಆಡಿದ್ದರು. ಇವರಿಗೆ, 'ಸಂಗೀತಸೂರ್ಯ' ವೆಂಬ ಬಿರುದು ಕೂಡ ಇತ್ತು.

ಮರಾಠಿಯಲ್ಲಿಯ ನಾಟಕಕಾರ ಮಾಮಾ ವರೇರಕರ್ ಇವರ, 'ಮಾಝಾ ನಾಟಕೀ ಸಂಸಾರ' ಎಂಬ ಪುಸ್ತಕದಲ್ಲಿ 1908ರ ಇವರ ಒಂದು ಧ್ವನ ಮುದ್ರಿಕೆ ಇದೆ. 1909ರಲ್ಲಿ ಹೈದರಾಬಾದಿನಲ್ಲಿ ಜಾರ್ಜ್ ವಾಲ್ಟರ್ ಡಿಲ್ನಟ್ ಎಂಬವರು ಇವರ ಹನ್ನೆರಡು ಹಾಡುಗಳನ್ನು ಅಂದರೆ, ಆರು ಮುದ್ರಿಕೆಗಳನ್ನು ಮಾಡಿ ಮಾರುಕಟ್ಟೆಗೆ ತಂದರು. ಇದರಲ್ಲಿ 'ಸೌಭದ್ರ' ನಾಟಕದ ಮೂರು, 'ಮೂಕ ನಾಯಕ'ದ ಎರಡು, 'ಜೋಗಿಯಾ', 'ಬಾಗೇಶ್ರೀ' ರಾಗದ ಎರಡು, ಶಾರದಾ ನಾಟಕದ ಎರಡು, ರಾಮರಾಜ ವಿಯೋಗದಲ್ಲಿಯ ಎರಡು, ಮತ್ತು ಶಾಕುಂತಲ ನಾಟಕದ ಒಂದು, ಹೀಗೆ ಹನ್ನೆರಡು ಹಾಡು ಇವೆ. ಹಿಂದೆ ಬರೆದಂತೆ, ಗ್ರಾಮೊಫೋನ್ ತುತೂರಿಯಲ್ಲಿ ತಲೆ ಹಾಕಿ ಹಾಡು ಹಾಡಬೇಕಿತ್ತು. ಆಗ ಅದು ಮೇಣದ ಸಿಲಿಂಡರದ ಮೇಲೆ ಅಚ್ಚುಆಗುತ್ತಿತ್ತು. ಭೋಸಲೆ ಕೇಶವರಾಯರು ತಾವು ಹಾಡಿದ್ದು ಇದೇನಾ ಎಂದು ಸಿಟ್ಟಿಗೆದ್ದು ಮರಳಿ ಧ್ವನಿ ಮುದ್ರಿಕೆಯ ಗೋಜಿಗೆ ಹೋಗಲಿಲ್ಲ! ಒದರಿ ಹಾಡಿದ ತಮ್ಮ ಈ ಹಾಡು ಇಷ್ಟು ನಿಕೃಷ್ಟ ದರ್ಜೆಯದೇ? ಅನಿಸಿರಬೇಕು.

ಆದರೆ ಸಂಯುಕ್ತ, 'ಮಾನಾಪಮಾನದ' ನಂತರ ಧ್ವನಿಮುದ್ರಣದಲ್ಲಿ ಸುಧಾರಣೆ ಆಗಿದ್ದರಿಂದಲೂ, ಬಾಲ ಗಂಧರ್ವರ ಕೆಲ ರೆಕಾರ್ಡುಗಳು ಹೊರಗೆ ಬಂದಿದ್ದರಿಂದಲೂ, ಮೇಲಾಗಿ ಅವಕ್ಕೆ ತುಂಬ ಡಿಮಾಂಡು ಬಂದಿದ್ದರಿಂದಲೂ ಕೇಶವ ಭೋಸಲೆ ಒಪ್ಪಿಕೊಂಡರು. ಕಚ್ಚಾಮಾಲಿನ ಮೇಣದ ರೆಕಾರ್ಡು ಮೊದಲು ಕೇಳುವ ಆಶ್ವಾಸನೆ ಕೊಟ್ಟ ಮೇಲೆ. ಮಾನಾಪಮಾನದ, 'ಧೈರ್ಯಧರಿನ' 6 ಹಾಡುಗಳ ಕರಾರು ಮಾಡಲಾಯಿತು. ಮುದ್ರಣ ಪ್ರಾರಂಭವಾಗುವ ಮೊದಲೇ ಇವರ ದೇಹಾಂತವಾಯಿತು.

60 ವರ್ಷಗಳ ನಂತರ, ಈ ವರೆಗೆ ಕೇವಲ ಭೋಸಲೆಯವರ ಗಾಯನ ವೈಖರಿಯ ಬಗ್ಗೆ ಅನೇಕ ಲೇಖನಗಳನ್ನು ಓದಿದ ಕೆಲವರು ಇವರ ರೆಕಾರ್ಡುಗಳನ್ನು ಪತ್ತೆ ಹಚ್ಚಿ 1990 ರಲ್ಲಿ ಅವರ ಶತಮಾನೋತ್ಸವದ ಮುಹೂರ್ತ ಸಾಧಿಸಿ, 'ನಾಟ್ಯ ಗೀತ ಗಂಗಾ'(1996 ಎಚ್ ಎಮ್ ವಿ) 'ಶಾಕುಂತಲ ತೆ ಕುಲವಧು' ಕ್ಯಾಸೆಟ್ಟು ಹೊರಗೆ ತಂದರು. ಇದರಲ್ಲಿ ಕೇಶವ ಭೋಸಲೆಯವರ ಎರಡು ಹಾಡುಗಳಿವೆ. 'ರಾಮರಾಜ್ಯ ವಿಯೋಗ'ದಲ್ಲಿಯ, 'ಮನ ಮಾಝೆ ಭಡಕುನಿ ಗೇಲೆ' ಮತ್ತು 'ಶಾಕುಂತಲ'ದಲ್ಲಿಯ, 'ಮನಾನ ತಳಮಳಲೆ' ಇವೇ ಆ ಎರಡು ಹಾಡುಗಳು. ಇದನ್ನು ಬಿಟ್ಟು ಇನ್ನೂ ಯಾವ ರೆಕಾರ್ಡು ನಮ್ಮ ಕೈಗೆ ಹತ್ತಲಿಲ್ಲ.

*****

4.14

ಬಾಪೂರಾವ್ ಪೆಂಢಾರಕರ (1892–1937)

ಇವರೂ ಕೂಡ ಹುಟ್ಟಿದ್ದು ಕರ್ನಾಟಕದಲ್ಲಿಯೇ. ಜಮಖಂಡಿಯಲ್ಲಿ ಶಿಕ್ಷಣ, ಪುಣೆಯಲ್ಲಿ 1915ರಲ್ಲಿ ಮ್ಯಾಟ್ರಿಕ್ ಕಲಿಯುತ್ತಿದ್ದಾಗಲೇ ಶಿಕ್ಷಣ ಬಿಟ್ಟು 'ಲಲಿತಕಲಾದರ್ಶ' ನಾಟಕ ಕಂಪನಿ ಸೇರಿಕೊಂಡರು. ಸಾಮಾನ್ಯ ದೇಹಯಷ್ಟಿ, ರೂಪ ಸಂಪನ್ನತೆ ಅಷ್ಟಕ್ಕಷ್ಟೆ. ಶಾರೀರವೂ ಸುಮಾರು. ಮೇಲಾಗಿ ರೊಡ್ಡ (ಎಡಗೈ ಮುಂದೆ). ಆದರೂ ಲಲಿತಕಲಾದರ್ಶದ ಮಾಲಕರಾದ 'ಸಂಗೀತ ಸೂರ್ಯ' ಕೇಶವ ಭೋಸಲೆಯವರು ಈ ವೆಂಕಟೇಶ ಬಳವಂತ ಪೆಂಢಾರಕರ ಉರೂಫ್ ಬಾಪೂರಾವ್ ಅವರಿಗೆ ತರಬೇತಿಕೊಟ್ಟು ಸ್ತ್ರೀ ಪಾತ್ರಗಳನ್ನು ಚೆನ್ನಾಗಿ ಅಭಿನಯಿಸುವಂತೆ ಮಾಡಿದರು. 'ಮಾನಾಪಮಾನ್' ನಾಟಕದ ಮುಖ್ಯ 'ಭಾಮಿನಿ'ಯ ಪಾತ್ರವನ್ನು ಚೆನ್ನಾಗಿ ನಟಿಸುತ್ತಿದ್ದರಷ್ಟೇ ಅಲ್ಲದೆ, ಬಾಲಗಂಧರ್ವರಂತೆ ಖ್ಯಾತಿಯನ್ನೂ ಗಳಿಸಿದರು. ಕೇವಲ ಪರಿಶ್ರಮದಿಂದ 1920ರಲ್ಲಿ ಮಝು ಅವರ ಗಂಡಾಬಂಧನವೂ ಆಗಿ ಶಿಷ್ಯರಾದರು. ಮುಂದಿನ ವರ್ಷವೇ ಕೇಶವ ಭೋಸಲೆಯುವರು ತೀರಿಕೊಂಡಿದ್ದರಿಂದ 'ಲಲಿತಕಲಾದರ್ಶ'ದ ಮಾಲೀಕ ಪಟ್ಟ ಇವರಿಗೆ ಸಿಕ್ಕಿತು. ಇವರೂ ಕೂಡ 1937ರಲ್ಲಿ ತೀರಿಕೊಂಡಿದ್ದರಿಂದ ಇವರ ಮಗ ಭಾಲಚಂದ್ರ ಪೆಂಢಾರಕರ ಅದೇ ವರ್ಷ ಮಾಲಿಕರಾಗಿ 2007ರಲ್ಲಿ ಈ 'ಲಲಿತಕಲಾದರ್ಶ'ದ ಶತಮಾನೋತ್ಸವವನ್ನು ಮುಂಬಯಿ ಮತ್ತು ಪುಣೆಗಳಲ್ಲಿ ಅತ್ಯಂತ ಆತ್ಮೀಯತೆಯಿಂದ ನೆರವೇರಿಸಿದರು.

ಅಂದಹಾಗೆ ಇದೊಂದೇ ಮಹಾರಾಷ್ಟ್ರದಲ್ಲಿಯ ಅಳಿದುಳಿದ ಮರಾಠಿ ವೃತ್ತಿನಾಟಕ ಸಂಸ್ಥೆ ಆಗಿತ್ತು. 'ಲಲಿತಕಲಾದರ್ಶ'ದ ಸಾಮಾಜಿಕ ನಾಟಕಗಳು ಅತ್ಯಂತ ಲೋಕಪ್ರಿಯ ವಾಗಿದ್ದವು. ಮಾಮಾವರೇರಕರ ಬರೆದ 'ಸತ್ತೇಚಾ ಗುಲಾಮ', 'ತುರಂಗಾಚಾ ಭಾರತ' ಇವು ಪ್ರಸಿದ್ಧಿಯನ್ನು ಪಡೆದವು. ನ.ಚಿಂ. ಕೇಳಕರರ 'ಕೃಷ್ಣಾರ್ಜುನ ಯುದ್ಧ', 'ಕರಗ್ರಹಣ'ಗಳನ್ನು ಕೂಡ ಆಡುತ್ತಿದ್ದರು. 'ಶ್ರೀ' ನಾಟಕದಲ್ಲಿ ಒಂದು ಸೀನು, ಸಿನೇಮಾದಲ್ಲಿ ತೋರಿಸಿ ಹೊಸ ತಂತ್ರದ 'ಸಿನೇಮಾ–ನಾಟಕ'ಯುಗವನ್ನು ಇವರು ಪ್ರಾರಂಭಿಸಿದರು. ಆಗ ಸಮಾಜದಲ್ಲಿ ರಾಷ್ಟ್ರಾಭಿಮಾನ ಜೋರಾಗಿದ್ದುರಿಂದ 'ಸ್ವಯಂಸೇವಕ', 'ಸೋನ್ಯಾಚಾ ಕಳಸ' ಇವೆಲ್ಲಾ ಚೆನ್ನಾಗಿ ನಡೆದು ಹಣ ಬರುತ್ತಿದ್ದರೂ, ಟಾಕೀಗಳ ಪೈಪೋಟಿ ಜೋರಾಗಿ ನಡೆದಿತ್ತು. ಬಾಪೂ 'ಲಲಿತ ಕಲಾ ಮೂವಿ ಟೋನ್'ನ್ನು ಸ್ಥಾಪಿಸಿ 'ವಿಜಯಾಚೆ ಲಗ್ನ' ಸಿನೇಮಾವನ್ನು ನಿರ್ಮಿಸಿದರು. ಅದು ಅಯಸ್ವಿಯಾದರೂ

ಇವುಗಳ ಹಾಡುಗಳು 'ಕಲೆಕ್ಟರ್ಸ್ ಐಟೆಮ್' ಎಂದು ಈಗಲೂ ಚೋರಬಜ಼ಾರಿನಲ್ಲಿ ಕಂಡುಬರುತ್ತವೆ.

ಕೇಶವ ಭೋಸಲೇ ತೀರಿದ ನಂತರವೇ (1922) ಬಾಪೂ ಪೆಂಢಾರಕರ್ ಅವರ 'ಶಹಾ-ಶಿವಾಜಿ' ನಾಟಕದ ಶಿವಾಜಿಯ 'ದೇವತಾ ಕಾಮುಕತಾ ರಹಿತಾ' ಹಾಡಿನಿಂದ ಪ್ರಾರಂಭವಾದ ಮುದ್ರಣ, 1936ರ ತನಕ ಅಬಾಧಿತವಾಗಿ 70 ಮುದ್ರಿಕೆಗಳನ್ನು ಕೊಟ್ಟ ರಿಕಾರ್ಡು ಇದೆ. ಇದಾದದ್ದೆಲ್ಲಾ ಈಗ ಮುಂಬಯಿಯ 'ರಿದಮ್ ಹೌಸ್' ಇರುವಲ್ಲಿಯೇ. ಅಲ್ಲಿ ಮೊದಲಿಗೆ 'ಎಸ್ ರೋಸ್ ರಿಕಾರ್ಡಿಂಗ್ ಸ್ಟುಡಿಯೋ' ಇತ್ತು. ಅದನ್ನು ಮಾಡಿದ್ದು ಡಿಲನಟ್ ಎಂಬುವರು. ನಾನು 1974ರಲ್ಲಿ ಬಾಪೂರಾವ್ ಪೆಂಢಾರಕರ ಅವರ 12 ರಿಕಾರ್ಡುಗಳ ಎಲ್‌ಪಿಗಳನ್ನು ಖರೀದಿಮಾಡಿದೆ. ಇದರ ರಿಕಾರ್ಡಿಂಗ್ ಗುಣಮಟ್ಟ ಬಾಲಗಂಧರ್ವರ ನಾಟ್ಯಗೀತೆಗಳಿಗಿಂತ ಚೆನ್ನಾಗಿದೆ. ಮುಂದೆ 1998ರಲ್ಲಿ ಪುನರ್‌ನಿರ್ಮಿಸಿದ 'ಶಾಕುಂತಲ ತೆ ಕುಲವಧು' ನಾಲ್ಕು ಭಾಗಗಳ ಸಿ.ಡಿ.ಯಲ್ಲಿ ಎಲ್‌ಪಿಯ ರಿಕಾರ್ಡಿನಲ್ಲಿ ಇಲ್ಲದ ಬಾಪೂರಾಯರ ಹಾಡುಗಳನ್ನು ಸೇರಿಸಲಾಗಿತ್ತು.

ಇಲ್ಲಿ ಉದಾಹರಣೆ ಎಂದು ಅವರೇ ಹಾಡಿದ ಒಂದು ಮೊಟ್ಟಮೊದಲಿನ ಭಾವಗೀತೆ ಅಥವಾ ಸುಗಮಕವಿತೆಯನ್ನು (ನಾಟಕದ ಹಾಡಲ್ಲ) ಕೊಡಲಾಗಿದೆ. ಗಮ್ಮತ್ತಿನ ಮಾತೆಂದರೆ ಈ ಮುದ್ರಿಕೆಯ ಇನ್ನೊಂದು ಕಡೆ 'ಪುಣ್ಯ ಪ್ರಭಾವ' ನಾಟಕದ 'ಬೋಲ್ ಬ್ರಿಜಲಾಲ್' ಹಾಡು ಇದೆ. ಏಕೋ ಏನೋ ನಾಟಕದಲ್ಲಿಯ ಹಾಡು ಹಾಡದೇ, ಹೊಸದಾಗಿ ಕೂಸನ್ನು ಹೆತ್ತ ವಿಧವೆಯ ಹಾಡನ್ನು ಮುದ್ರಿಸಲಾಗಿದೆ. ಈ ಶಬ್ದಗಳನ್ನು ನೋಡಿ. ಕವಿ ರಾಮಗಣೇಶ ಗಡಕರಿ ('ಏಕಚಪ್ಯಾಲಾ ನಾಟಕದ ಲೇಖಕ).

ಹೇ ಕೋಣ ಬೋಲಲೆ ಬೋಲಾ, ರಾಜಹಂಸ ಮಾಝಾ ನಿಜಲಾ
ದುರ್ದೈವ ನಗಾಚಾ ಶಿಖರಿ । ನವ ವಿಧವಾ ದುಃಖಿ ಆಯೀ ।
ತೇ ಹೃದಯ ಕೈಸೆ ಆಯೀಚೆ । ಮೀ ಉಗಾಚ ಸಾಂಗತ ನಾಹಿಂ ।
ಜೆ ಆನಂದೇ ಹೀರಡತೆ । ದುಃಖಾತ ಕಸೆ ಮಗ ಹೋಯಿ।
ಹೇ ಕುಣೇ ಕುಣಾ ಸಾಂಗಾವೆ । ಆಯೀಚ್ಯಾ ಬಾಳಾ ಠಾವೆ ।
ಪ್ರೇಮಾಚಾ ಗಾಂವಾ ಜಾವೆ । ಮಗ ಐಕಾವೆ ಯಾ ಬೋಲಾಲಾ ।
ರಾಜಹಂಸ ಮಾಝಾ ನಿಜಲಾ ॥

*****

4.15

ಸಂಗೀತ ಮಾರ್ತಂಡ ಓಂಕಾರನಾಥ್ ಠಾಕೂರ್ (1897–1967)

ಗುಜರಾತದ ಜಹಾಜ್ ಓಂಕಾರನಾಥ್‌ರ ಹುಟ್ಟೂರು. ತಂದೆಯವರು ಸದಾ ಆಧ್ಯಾತ್ಮದಲ್ಲಿ ಮಗ್ನರು. ಮನೆಯ ತುಂಬ ಜನ. ಹೀಗಾಗಿ ಮನೆಯ ಕರ್ತಾ ತಾಯಿ. ಪುಟ್ಟ ಓಂಕಾರನಾಥನಿಗೆ ವ್ಯಾಯಾಮ ಮತ್ತು ಸಂಗೀತ ತುಂಬಾ ಇಷ್ಟವಾಗಿತ್ತು. ಜಹಾಜದಿಂದ ಮುಂದೆ ಭರೂಚಕ್ಕೆ ಬಂದ ಓಂಕಾರನಾಥನಿಗೆ ಅಲ್ಲಿಯೇ ಶೇಠ ಶಾಪೂರಜಿ ಡುಂಗಾಜಿ ಎಂಬ ಪಾರ್ಸಿ ಗೃಹಸ್ಥರು ತಕ್ಕಮಟ್ಟಿಗೆ ಸಂಗೀತ ಕಲಿಸಿ ಮುಂದೆ ಇವರನ್ನು ಮುಂಬಯಿಯಲ್ಲಿ ಆಗತಾನೇ ಪ್ರಾರಂಭವಾಗಿದ್ದ ಸಂಗೀತಾಚಾರ್ಯ ವಿಷ್ಣು ದಿಗಂಬರರ 'ಗಾಂಧರ್ವ ಮಹಾವಿದ್ಯಾಲಯ'ದ 'ಗುರುಕುಲ'ದಲ್ಲಿ ಸೇರಿಸಿದರು. 6 ವರ್ಷಗಳಲ್ಲಿಯೇ ಈ ವಿದ್ಯೆಯಲ್ಲಿ ಪಾರಂಗತನಾಗಿ ಓಂಕಾರನಾಥರು ಗುರುವಿನ ಆಜ್ಞೆ ಎಂದು 22ನೇ ವಯಸ್ಸಿಗೆ ಗಾಂಧರ್ವ ವಿದ್ಯಾಲಯದ ಶಾಖೆಯ ಪ್ರಿನ್ಸಿಪಾಲರೆಂದು ಲಾಹೋರಿಗೆ ಹೋದರು. ಅದೇ ವರ್ಷ ಮದುವೆಯೂ ಆಯಿತು. ಶಾಲೆಯಲ್ಲಿದ್ದಾಗಲೇ ಅಸಾಮಾನ್ಯ ಪ್ರತಿಭೆಯ ಓಂಕಾರನಾಥರು ಕಚೇರಿಗಳಲ್ಲಿ ಹಾಡುತ್ತಿದ್ದರು. ಹೆಂಡತಿ ಮತ್ತು ಮಗು ಪ್ರಸವವೇದನೆಯಿಂದ ತೀರಿಕೊಂಡ ನಂತರ ಠಾಕೂರರು ಮರುಮದುವೆ ಮಾಡಿಕೊಳ್ಳಲಿಲ್ಲ. ಸ್ವರಸಾಧನೆ, ನಾದೋಪಾಸನೆ, ವಿದ್ಯಾದಾನ, ಇವುಗಳಲ್ಲಿಯೇ ಮಗ್ನರಾದರು. ನೇಪಾಳ ನರೇಶರು ಇವರ ಅನೇಕ ಕಾರ್ಯಕ್ರಮಗಳನ್ನು ತಮ್ಮ ರಾಜ್ಯದಲ್ಲಿ ಮಾಡಿಸಿದರು. ದರ್ಬಾರ ಗಾಯಕನ ಪಟ್ಟವನ್ನೂ ಕೊಟ್ಟರು. ಆದರೆ ಆ 'ಬಂಧನ' ಕೂಡ ತಮಗೆ ಬೇಡವೆಂದು ಇವರು ಸಂಗೀತ ಜಲಸೆಗಳಲ್ಲಿಯೇ ತೊಡಗಿ ಇಡೀ ಭಾರತವನ್ನು ಸುತ್ತಿದರು. 1931ರಲ್ಲಿ ಇಟಲಿಗೂ ಹೋಗಿ ಮುಸೋಲಿನಿಯ ಎದುರು ಎರಡು–ಮೂರು ದಿನ ಸಂಗೀತ ಕಾರ್ಯಕ್ರಮ ನೀಡಿ ಅವರ 'ನಿದ್ರಾನಾಶ'ವನ್ನೂ ಸರಿಪಡಿಸಿದರು. ಗುರು ವಿಷ್ಣು ದಿಗಂಬರರು ತೀರಿಕೊಂಡ ನಂತರ ಪ್ರತಿಯೊಂದು ಕಾಂಗ್ರೆಸ್ ಅಧಿವೇಶನದಲ್ಲಿ 'ವಂದೇ ಮಾತರಂ' ಹಾಡುವುದು ಇವರಿಗೆ ಕಟ್ಟಿಟ್ಟಿದ್ದೇ. ಕೆಲವು ಬಾರಿ 'ವಂದೇ ಮಾತರಂ' ಖಯಾಲಿನಂತೆ ಕಚೇರಿಗಳಲ್ಲಿ ಹಾಡಿ ಹೊಸ ಪ್ರಕಾರದ ಸಂಗೀತಕ್ಕೆ ಅಡಿಗಲ್ಲನ್ನು ಹಾಕಿದರು. ಒಂದು ಸಲ ಲೋಕಸಭೆಯಲ್ಲಿ ನೆಹರು/ಪಟೇಲರ ಸಮ್ಮುಖದಲ್ಲಿ ಈ ಹಾಡನ್ನು 20 ನಿಮಿಷ ಹಾಡಿ, ಎಲ್ಲರಿಗೂ ನಿಂತು ನಿಂತು ಕಾಲುನೋವು ಆದದ್ದು ಆ ಕಾಲದ ಒಂದು ಅಪೂರ್ವ ಘಟನೆಯಾಗಿತ್ತು!

1947ರ ಆಗಸ್ಟ್ 15ರಂದು ರಾತ್ರಿ ದಿಲ್ಲಿ ಆಕಾಶವಾಣಿಯಲ್ಲಿ ಇವರು ಸಂಪೂರ್ಣ 'ವಂದೇ ಮಾತರಂ' ಹಾಡಿದ್ದನ್ನು ಇಡೀ ಭಾರತವರ್ಷ ಕೇಳಿತು. ಇದರ 9 ನಿಮಿಷಗಳ ಮುದ್ರಣ ಆಕಾಶವಾಣಿಯಲ್ಲಿ ಇನ್ನೂ ಇದೆ. ಅಫ್ಘಾನಿಸ್ಥಾನದ ಸುಲ್ತಾನರೆದುರು ಗಝಲ್ ಹಾಡಿದ್ದು, ಅಮೃತಸರದ ಸಿಖ್ಖರ ಗುರುದ್ವಾರದಲ್ಲಿ ಗುರುಬಾನಿ ಹಾಡಿದ್ದು ಓಂಕಾರನಾಥರ ವೈಶಿಷ್ಟ್ಯ.

ಓಂಕಾರನಾಥ ಠಾಕೂರರ ಮೆಹಫಿಲ್ಲುಗಳು ಯಾವಾಗಲೂ ಆಕ್ರಾಮಕ ವಾಗಿರುತ್ತಿದ್ದವು. ಅಭಿನಯ ಸಂಪನ್ನ ಠಾಕೂರರ ಹಾಡುಗಾರಿಕೆ ಚಮತ್ಕೃತಿ ಪೂರ್ಣ ಭಾವಪ್ರಧಾನವಾಗಿದ್ದು ಅನೇಕ ಸಲ ಹಾಡುವಾಗಲೇ ಕಣ್ಣೀರು ಸುರಿಸುವುದು ಸಾಮಾನ್ಯವಾಗಿತ್ತು. 'ಮೈಯಾ ಮೋರೆ, ಮೈನಹೀ ಮಾಖನ ಖಾಯೋ'ಯನ್ನು ಒಂದು ಕೀರ್ತನೆಯ ಸ್ವರೂಪದಲ್ಲಿ ಅವರು ಹಾಡುತ್ತಿದ್ದರು. ಅದೇ ವಿನ್ಯಾಸ, ಅದೇ ರೂಪಗಳನ್ನು ಪುರುಷೋತ್ತಮ ಜಾಲೋಟಾ ಮತ್ತು ಅವರ ಮಗ ಅನೂಪ ಜಾಲೋಟ ತುಂಬಾ ಪ್ರಸಿದ್ಧಿಗೆ ತಂದಿದ್ದರು. ಅವರ ಹಾಡುಗಾರಿಕೆ ಶ್ರವಣೀಯ ಹಾಗೂ ಪ್ರೇಕ್ಷಣೀಯವಾಗಿತ್ತು.

1928 ರಿಂದ 1961ರ ತನಕ ಇವರ ಧ್ವನಿಮುದ್ರಿಕೆಗಳು ಬರುತ್ತಾ ಇರುತ್ತಿದ್ದವು. ಇವರ 'ಮಾಲಕೌಂಸ್' ರಾಗದಲ್ಲಿಯ 'ಪಗ ಗುಂಗರೂ (ಘುಂಘರೂ) ಬಾಂಧ ಮೀರಾ ನಾಚೇರೆ' ಮತ್ತು 'ಮೈ ನಹೀಂ ಮಾಖನ್ ಖಾಯೋ' ಹಾಗೂ ಎರಡು ಬದಿಯಲ್ಲಿದ್ದ 'ಜೋಗಿ ಮತ್ ಜಾ' ಭೈರವಿಯಲ್ಲಿದ್ದು ಇವೆಲ್ಲಾ 12 ಇಂಚಿನ ತಟ್ಟೆಗಳಲ್ಲಿ ಇವೆ.

*****

4.16

ಪ್ರಿನ್ಸಿಪಾಲ್ ಬಾಪುರಾವ್ ಕೇತಕರ್ (1898-1954)

ಧ್ವನಿಮುದ್ರಿಕೆಗಳ ಚರಿತ್ರೆಯಲ್ಲಿ ಒಂದೂ ಧ್ವನಿಮುದ್ರಿಕೆ ಇಲ್ಲದ ಭಾಸ್ಕರ್ ಬುವಾ ಬಖಲೆಯವರ ಉಲ್ಲೇಖ ಆಗಾಗ ಬರುವ ಕಾರಣ, ಅವರ ಶಿಷ್ಯ ಕೋಟಿ ಮತ್ತು ರಭಸದಿಂದ ಮಾರಾಟವಾಗುವ ಈ ಶಿಷ್ಯರ ಧ್ವನಿಮುದ್ರಿಕೆಗಳು. ಈ ಹಿಂದೆ ಬಾಲಗಂಧರ್ವ ಮತ್ತು ಕೃಷ್ಣರಾವ್ ಘುಲಂಬ್ರಿಕರ್ ಅವರ ಬಗ್ಗೆ ಬರೆದಾಗಿದೆ. ಮತ್ತೊಬ್ಬ ಅಗ್ರೇಸರ ವ್ಯಕ್ತಿತ್ವ ಬಾಪೂರಾವ್ ಕೇತಕರ್ ಅವರದು. ಇವರು ಕೊಂಕಣ ಪಟ್ಟಿಯ ಚಿಪಳೂಣ್ ಊರಿನ ಬಳಿಯಲ್ಲಿದ್ದ 'ಕೇತಕಿ' ಹಳ್ಳಿಯವರು. ಆದರೆ ಹುಟ್ಟಿ ಬೆಳೆದದ್ದು ಕರ್ನಾಟಕದಲ್ಲಿ, ರಾಮದುರ್ಗ ಸಂಸ್ಥಾನದಲ್ಲಿ. ಇವರ ತಂದೆ ರಾಮದುರ್ಗ ಸಂಸ್ಥಾನದ ದರಬಾರ್ ಗವಯಿ ಆಗಿದ್ದರು. ತಂದೆಯವರ ಬಳಿ ಮ್ಯಾಟ್ರಿಕ್ ಆಗುವವರೆಗೆ ಮೊದಲಿನ ಧ್ರುಪದ್-ಧಮಾರದ ಅಭ್ಯಾಸವಾಗಿತ್ತು. ಆದರೆ ತಂದೆ ಅಕಾಲದಲ್ಲಿಯೇ ತೀರಿಕೊಂಡಿದ್ದರಿಂದ 18ನೇ ವರ್ಷಕ್ಕೆ ಇವರು ರಾಮದುರ್ಗ ಬಿಡಬೇಕಾಯಿತು. ಪುಣೆಯಲ್ಲಿ ಕೆಲಕಾಲ ಅಬ್ದುಲ್ ಕರೀಮರ "ಆರ್ಯಸಂಗೀತ"ದಲ್ಲಿ ಸಂಗೀತ ಕಲಿತರು. ಒಮ್ಮೆ ತರುಣ ಕೃಷ್ಣರಾವ್ ಪುಲಂಬ್ರಿಕರ್ ಇವರ ಕಚೇರಿಯನ್ನು ಅನುಭವಿಸಿದ ನಂತರ ನೇರವಾಗಿ ಅವರ ಗುರು ಭಾಸ್ಕರ ಬಖಲೆಯವರ ಶಿಷ್ಯತ್ವವನ್ನು ಸಂಪಾದಿಸಿದರು. ಮುಂದೆ ಅನೇಕ ವರ್ಷ ಬಖಲೆಯವರ 'ಭಾರತ ಗಾಯನ ಸಮಾಜ'ವನ್ನು ಸಂಭಾಳಿಸಿದರು. ಹೀಗಾಗಿ 'ಪ್ರಿನ್ಸಿಪಲ್' ಎಂಬ ಉಪನಾಮ ಅವರ ಹೆಸರಿನೊಂದಿಗೆ ಸೇರಿಕೊಂಡಿತು. ತಮ್ಮ ಭಾರತಗಾಯನ ಸಮಾಜದ ಕಟ್ಟಡದ ಸಲುವಾಗಿ ಹಣಕೂಡಿಸಲು 'ಸಂಶಯಕಲ್ಲೋಳ', 'ವರ-ವಂಚನಾ', 'ಪಂಚಾಂಗೀ ಜುಗಾರ' ಇತ್ಯಾದಿ ನಾಟಕಗಳನ್ನು ಆಡಿದರು. ಬಾಲಗಂಧರ್ವರ ನಾಟಕಗಳಲ್ಲಿಯೂ ವೇಳೆ-ಪ್ರಸಂಗ ಬಂದಾಗ ಭಾಗವಹಿಸುತ್ತಿದ್ದರು. ಕರಾಚಿಯಲ್ಲಿ ಕೂಡ ಭಾರತ ಗಾಯನ ಸಮಾಜವನ್ನು ಸ್ಥಾಪಿಸಲು ಕೆಲಕಾಲ ಅಲ್ಲಿಗೆ ಹೋಗಿ ನೆಲೆಸಿ, ಮರಳಿ ಬಂದದ್ದು ಉಂಟು. ಸರಸ್ವತಿ ಮೂವಿಟೋನ್‌ರವರ 'ಶ್ಯಾಮಸುಂದರ' ಸಿನೆಮಾಕ್ಕೆ ಇವರದೇ ಸಂಗೀತ. ಅದರಲ್ಲಿ ನಾರದನ ಪಾತ್ರವನ್ನು ಕೂಡ ವಹಿಸಿದ್ದರು. 1932ರ ಈ ಸಿನೇಮಾಕ್ಕೆ ತುಂಬಾ ಪ್ರಸಿದ್ಧಿಯು ದೊರೆತು ಅದನ್ನು ಹಿಂದಿ, ಬಂಗಾಲಿ ಭಾಷೆಗಳಲ್ಲಿಯೂ ಮಾಡಲಾಯಿತು.

1935ರಲ್ಲಿ ಓಡಿಯನ್ ಕಂಪನಿಯು ಇವರ ಕೆಲವು ಶಾಸ್ತ್ರೀಯ ಸಂಗೀತದ ರಾಗಗಳ ಮುದ್ರಿಕೆ ಮತ್ತು ನಾಟ್ಯಸಂಗೀತದ ಧ್ವನಿಮುದ್ರಿಕೆಗಳನ್ನು ಮಾರುಕಟ್ಟೆಗೆ ತಂದಿತು.

1930ರ ನಂತರದ ಎಲ್ಲಾ ಧ್ವನಿಮುದ್ರಿಕೆಗಳು ಇಲೆಕ್ಟ್ರಿಕ್ ಪದ್ಧತಿಯಿಂದ ಮಾಡಿದವು. ಹೀಗಾಗಿ ಇವರ ಧ್ವನಿಮುದ್ರಿಕೆಗಳ ಗುಣಮಟ್ಟ ಚೆನ್ನಾಗಿಯೇ ಇದೆ. ಇವರ 'ಬಾಗೇಶ್ರೀ', 'ಶಂಕರಾ', 'ದುರ್ಗಾ', 'ಸೋಹನಿ' 'ಕಾಫಿ,' 'ಮಾರವಾ', 'ತೋಡಿ' 'ದೇಸಕಾರ,' 'ಅಡಾಣಾ, 'ದೇವಗಾಂಧಾರ' ಮತ್ತು 'ಭೈರವಿ' ರಾಗಗಳಲ್ಲಿ ಧ್ವನಿಮುದ್ರಿಕೆಗಳಿದ್ದರೆ ಕೆಲವು ಮರಾಠೀ ನಾಟ್ಯಗೀತಗಳೂ ಇವೆ.

ಬಾಲಗಂಧರ್ವ, ಮಾಸ್ಟರ್ ಕೃಷ್ಣಾ ಮತ್ತು ಬಾಪೂ ಕೇತಕರರ ಧ್ವನಿಮುದ್ರಿಕೆಗಳ ತುಲನಾತ್ಮಕ ಅಭ್ಯಾಸಮಾಡಿದರೆ ಕೇತಕರರ ಉಚ್ಚಾರ ಸುಸ್ಪಷ್ಟವಾಗಿದ್ದು, ಶಬ್ದಗಳ ಭಾವ ಸಂಗೀತದಲ್ಲಿ ಕೇಳಿಬರುತ್ತದೆ. 'ಬಾಪೂ ಗಾಯನ, ಭಾಸ್ಕರ-ಬುವಾ ಅವರಂತೆಯೇ!' ಎಂದು ಆಗಿನ ಕಾಲದ ರಸಿಕರ ಅಂಬೋಣವಾಗಿತ್ತಂತೆ. ಖ್ಯಾತ ಬಾಲಗಂಧರ್ವರು ಕೂಡ 'ನಮ್ಮ ಬಾಪೂ ಅಸ್ತಾಯಿ ಅಂತರಾದಲ್ಲಿ ಭಾಸ್ಕರ ಬುವಾರಂತೆಯೇ ಹಾಡುತ್ತಾರೆ' ಎಂದು ಶಾಭಾಸಕಿ ಕೊಡುತ್ತಿದ್ದರಂತೆ. 'ವರವಂಚನಾ' ನಾಟಕದ ಪ್ರತಿಗಳೂ, ನಾಟಕವೂ ಸಿಗದೇ ಇದ್ದರೂ ಅದೇ ನಾಟಕದ ಒಂದು ಹಾಡು ತುಂಬಾ ಸುಂದರವಾಗಿದೆ. ಅದು ಹೀಗಿದೆ:

ಸುಂದರಾ ಗಮೇನಾ ತೀ ಬಾಲಾ ।
ದಾವೀನಾ ಮಜಲಾ ಜೀ ಪ್ರೇಮಲೀಲಾ ॥
ಅಧರ ಸುಧಾನ ಚ ವಿನಾ ಪ್ರಾಶಿತಾ ।
ಕಮಲ ಗಮೇ ಕರ ಯೇ ಜರೀ ಆತಾ ॥
ಪ್ರೇಮವಿಕಲ ಜೀ ಮಜಸೀ ಪಾಹತಾ ।
ತೀಚ ಕಾಮಿನಿ ರಮವೀ ಮನಾಲಾ ॥
ಸುಂದರಾ ಗಮೇನಾ ತೀ ಬಾಲಾ ॥ಪ॥

ಇವಳೇ ಆ ಬಾಲೆ ಸುಂದರಿಯಾಗಿ ಕಾಣುವವಳು।
ಆದರೆ ಅರಿಯಲಾಗದವಳು ಎನ್ನ ಪ್ರೀತಿಯ ಕಾಣದವಳು
ಇವಳೇ ಸುಂದರಿ ಅರಿಯಲು ಮಿಗಿಲಾದವಳು
ಅಮೃತ ಪ್ರಾಶನ ಮಾಡದ ಅವಳ ಅಧರ ಅತಿ ಮಧುರ
ಕಮಲದಂತಹ ಕೈಚಾಚಿ, ನನ್ನ ಕೈಯಲ್ಲಿಟ್ಟು
ಪ್ರೇಮ ವಿಹ್ವಲಳಾಗಿ ಮಾಡಿದವಳು
ಎನ್ನಯ ಮನವ ಸೂರೆಗೊಂಡವಳು

*****

4.17

ವ್ಯಾಸಪರ್ವದ ಪ್ರೊ. ಶಂಕರರಾವ್‌ವ್ಯಾಸ್(1898.1956)

ಇವರು ಹುಟ್ಟಿದ್ದು, ಬಾಲ್ಯವನ್ನು ಕಳೆದದ್ದು ಕೊಲ್ಲಾಪುರದಲ್ಲಿ. ಇವರ ಹೆಸರನ್ನು ಇವರ ತಂದೆಯವರು ವಿಷ್ಣು ದಿಗಂಬರರ 'ಗುರುಕುಲ'ದಲ್ಲಿ ನೋಂದಾಯಿಸಿದರು. 9 ವರ್ಷ ಕಲಿತು ಮುಂದೆ ಗುರುಗಳ ಅಪ್ಪಣೆ ಎಂದು ಲಾಹೋರದಲ್ಲಿಯೇ ಸಂಗೀತವನ್ನು ಕಲಿಸಲು ಆರಂಭಿಸಿದರು. 1931ರಲ್ಲಿ ಅಹಮದಾಬಾದಿಗೆ ಬಂದು ಅಲ್ಲಿ ಗಾಂಧರ್ವ ವಿದ್ಯಾಲಯ ಸ್ಥಾಪಿಸಿದರು. ಇವರು ಹಾಡುಗಾರಿಕೆಯಲ್ಲಿ ಪ್ರಾವೀಣ್ಯವನ್ನು ಗಳಿಸಿದುದಷ್ಟೇ ಅಲ್ಲ, ವಾದ್ಯಗಳಲ್ಲಿ ಸಿತಾರ್, ಸರೋದ್, ಹೊಸದಾಗಿ ಭಾರತೀಯತ್ವವನ್ನು ಪಡೆದ ಮ್ಯಾಂಡಲಿನ್, ಜಲತರಂಗ ಇವನ್ನೆಲ್ಲಾ ಚೆನ್ನಾಗಿ ನುಡಿಸುತ್ತಿದ್ದರು. ಕವಿ ಮನಸ್ಸಿನ ವ್ಯಾಸರು ಅನೇಕ ಬಂದಿಶ್‌ಗಳನ್ನು ಕಟ್ಟಿದ್ದರು. ಆರ್ಕೆಸ್ಟ್ರಾ ಅವರಿಗೆ ಅತ್ಯಂತ ಆಪ್ತವಾಗಿತ್ತು ಮತ್ತು ಸಂತೋಷವನ್ನು ಕೊಡುವಂತಹುದಾಗಿತ್ತು. ಗಾಂಧಿಯವರ ಅಹಮದಾಬಾದಿನ ಆಶ್ರಮದಲ್ಲಿ ಇವರು ಸಂಗೀತ ವಿಭಾಗವನ್ನೂ ಆರಂಭಿಸಿದ್ದರು.

1935ರಲ್ಲಿ ಅಹಮದಾಬಾದಿನಿಂದ ಮುಂಬಯಿಗೆ ಬಂದರು. ಪಶ್ಚಿಮ ದಾದರನಲ್ಲಿ ವ್ಯಾಸ್ ಸಂಗೀತ ವಿದ್ಯಾಲಯವನ್ನು ಪ್ರಾರಂಭಿಸಿದರು. ಇದು ಈಗಲೂ ದಾದರಿನ ಗಜಿಬಿಜಿಯಲ್ಲಿ ನಿಂತಿದೆ. ಇದಕ್ಕೆ ಅವರ ತಮ್ಮ ನಾರಾಯಣ ಮತ್ತು ಭಾವನೆಂಟ ವಸಂತರಾವ್ ರಾಜೋಪಾಧ್ಯೆ ಇವರ ಸಹಕಾರವೂ ಸಿಕ್ಕಿತು. 'ವ್ಯಾಸಬಂಧು' ಹೆಸರಿನಲ್ಲಿ ಅನೇಕ ವಾದ್ಯವೃಂದದ 'ಮುರಲೀಕೇ ಧುನ್' ಧ್ವನಿತಟ್ಟೆಗಳು ಹೊರಬಂದವು. ಇವಕ್ಕೆಲ್ಲಾ ತುಂಬಾ ಬೇಡಿಕೆ ಇತ್ತು. ಸಿನೇ ಸಂಗೀತದ ಆರಂಭದ ದಿನಗಳಲ್ಲಿ 1937ರಿಂದ 1955ರ ವರೆಗೆ ಅನೇಕ ಹಿಂದೀ ಸಿನೆಮಾಗಳಿಗೆ ಸಂಗೀತ ಕೊಟ್ಟದ್ದುಂಟು. ಇವರು ಒಟ್ಟು 43 (ಹಿಂದಿ 35, ಮರಾಠಿ 5 ಮತ್ತು ಗುಜರಾತಿ 3) ಸಿನೆಮಾಗಳಿಗೆ ಸಂಗೀತವನ್ನು ನೀಡಿದ್ದರು. ಇವುಗಳ ಹೊರತಾಗಿ ಅವರ ಆರ್ಕೆಸ್ಟ್ರಾ 15 ಚಲನಚಿತ್ರಗಳಿಗೆ ಪಾರ್ಶ್ವಸಂಗೀತವನ್ನು ಕೊಟ್ಟಿದ್ದಿದೆ.

ಪ್ರಕಾಶ್ ಪಿಕ್ಚರ್ಸ್‌ನವರ, 'ನರಸೀ ಭಗತ' (1940), 'ಭರತ ಭೇಟಿ' (1941), 'ರಾಮರಾಜ್ಯ' (1943) ಈ ಚಲನಚಿತ್ರಗಳಿಗೆ ಶಂಕರರಾವ್ ವ್ಯಾಸ್ ಅವರದೇ ಸಂಗೀತವಿತ್ತು. ಸರಸ್ವತಿ ರಾಣೆ ಹಾಡಿದ ಭೀಮಪಲಾಸ ರಾಗದಲ್ಲಿಯ 'ಬಿನಾ ಮಧುರ ಮಧುರ ಕಛು ಬೋಲ' ಹಾಡು ಇಡೀ ಹಿಂದೂಸ್ಥಾನದಲ್ಲಿ ಜನಪ್ರಿಯವಾಯಿತು.

ಇತ್ತೀಚೆಗೆ ಮುಂಬಯಿ ದೂರದರ್ಶನದಲ್ಲಿ ಮರಾಠೀ 'ರಾಮರಾಜ್ಯ'ವನ್ನು ಪ್ರಸಾರಮಾಡಲಾಯಿತು. ಅದರಲ್ಲಿಯ 'ಲಾಡಕ್ಯಾ ರಾಣೀಲಾ ಲಾಗಲೆ ದೋಹಾಳೆ' ಹಾಡು ಇನ್ನೂ ಸ್ಮರಣೆಯಲ್ಲಿದೆ. ಗಾಂಧರ್ವ ಮಹಾವಿದ್ಯಾಲಯದ ತಿಂಗಳೋಲೆ 'ಸಂಗೀತ ಕಲಾವಿಹಾರ' 1947ರಲ್ಲಿ ಪ್ರಾರಂಭಿಸಿದ್ದೂ ಇವರೇ. ಹಾಡುಗಾರ, ವಾದಕ, ಸಂಗೀತ ದಿಗ್ದರ್ಶಕ, ಕವಿ, ವ್ಯವಸ್ಥಾಪಕ, ಶಿಕ್ಷಕ, ಪತ್ರಕಾರ – ಈ ಎಲ್ಲಾ ಪ್ರಕಾರಗಳನ್ನೂ ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿದ್ದ ಬಹುಮುಖ ಪ್ರತಿಭೆಯ ಪ್ರೊ. ಶಂಕರರಾವ್ ವ್ಯಾಸ್ ಅವರು 1956ರ ಡಿಸೆಂಬರದಲ್ಲಿ ಅಹಮದಾಬಾದಿನಲ್ಲಿಯೇ ತೀರಿಕೊಂಡರು.

ಅವರೇ ಹಾಡಿದ ಅನೇಕ ಅಭಂಗ ಮತ್ತು ಭಜನೆಗಳ ಧ್ವನಿಮುದ್ರಿಕೆಗಳ ಹೆಸರು ಎಚ್‌ಎಮ್‌ವಿ ಕ್ಯಾಟಲಾಗ್‌ನಲ್ಲಿವೆ. ಒಂದು ತುಕಾರಾಮನ ಅಭಂಗವನ್ನು ಕೆಳಗೆ ನೀಡಲಾಗಿದೆ. ಇವರ ಶರೀರ ಭಾರದಸ್ತ ಇದ್ದರೂ ಶಾರೀರ ಮಧುರವಾಗಿದ್ದುದನ್ನು ಗಮನಿಸಬಹುದು:

ರೂಪಿ ಗುಂತಲೆ ಲೋಚನ। ಚರಣೀ ಸ್ಥಿರಾವಲೆ ಮನ॥
ದೇಹಭಾವ ಹರಪಲಾ। ತುಜಪಾಹತಾ ವಿಠ್ಠಲಾ॥
ಕಳೋ ನೇದಿ ಸುಖದುಃಖ। ತಹಾನ ಹರಪಲಿ ಭೂಕ॥
ತುಕಾರಾಮ್ಹಣೆ ನೋಹಿ ಪರತಿ। ತುಝ್ಯಾ ದರ್ಶನೇ ಮಾಗುತಿ॥

ಈ ಅಭಂಗ ಎಚ್‌ಎಮ್‌ವಿಯ (13454)ನೆಯ ಕ್ರಮಾಂಕದಲ್ಲಿದೆ.

*****

4.18

ಸಂಗೀತ ಕಳಾನಿಧಿ ಮಾಸ್ಟರ್ ಕೃಷ್ಣರಾವ್ ಫುಲಂಬ್ರಿಕರ್ (1898–1974)

ಕೃಷ್ಣರಾವ್ ಫುಲಂಬ್ರಿಕರರು ಬಾಲಗಂಧರ್ವರಂತೆಯೇ ಭಾಸ್ಕರಬುವಾ ಬಖಲೆ ಅವರ ಶಿಷ್ಯರು. ಬಾಲಗಂಧರ್ವರಿಗಿಂತ 10 ವರ್ಷ ಕಿರಿಯರು. ಆದರೆ ಬುದ್ಧಿಮತ್ತೆಯಲ್ಲಿಯೂ, ಸಂಗೀತದಲ್ಲಿಯೂ ಬಾಲಗಂಧರ್ವರ ಗುರುಸ್ಥಾನಕ್ಕೆ ಏರಿದವರು. ಬಖಲೆಯವರ ಬಳಿ ಕಲಿತದ್ದು ಕೇವಲ ನಾಲ್ಕು ವರ್ಷ (1911–1915ರತನಕ). ಬಳಿಕ ಗುರು ಹೇಳಿದ ಹಾಗೆ ಗಂಧರ್ವ ಕಂಪನಿ ಸೇರಿ ಸ್ತ್ರೀ ಪಾತ್ರ ಹಾಗೂ ಕೆಲವು ನಾಟಕಗಳಲ್ಲಿ ಪುರುಷ ಪಾತ್ರಗಳನ್ನೂ ಮಾಡಲು ಕೃಷ್ಣರಾವ್ ಫುಲಂಬ್ರಿಕರರು ಆರಂಭಿಸಿದರು. 'ಸಂಶಯಕಲ್ಲೋಳ', 'ಸ್ವಯಂವರ', 'ನಂದಕುಮಾರ', 'ಕಾನ್ಹೋಪಾತ್ರಾ', 'ಅಮೃತಸಿದ್ಧಿ'ಯಂತಹ ನಾಟಕಗಳಿಗೆ ಸಂಗೀತ ಕೊಟ್ಟು ಪ್ರಸಿದ್ಧಿ ಶಿಖರಕ್ಕೆ ಏರಿದರಷ್ಟೇ ಅಲ್ಲ, ಮುಂದೆ ಅನೇಕ ಪ್ರಭಾತ ಮತ್ತು ಇತರ ಕಂಪನಿಗಳಿಗಾಗಿ, ಚಲನಚಿತ್ರಗಳಿಗೆ ಸಂಗೀತ ದಿಗ್ದರ್ಶನ ಮಾಡಿದರು. ಮೈಫಲ್ಲಿನ ಅತ್ಯಂತ ಉತ್ತಮ ಗಾಯಕರು ಎಂದು ಮನ್ನಣೆಯನ್ನು ಪಡೆದಿದ್ದರು. 1933ರಿಂದ ಅವರು ಟಾಕೀಗಳಿಗೆ (ಮಾತನಾಡುವ ಸಿನೇಮಾ) ಕೊಟ್ಟ ಮರಾಠಿ ಮತ್ತು ಹಿಂದಿ ಸಿನೇಮಾ ಸಂಗೀತ ಅಜರಾಮರವಾಗಿದೆ. ಪ್ರಭಾತದ, 'ಧರ್ಮಾತ್ಮಾ' (ಇದರಲ್ಲಿ ಬಾಲಗಂಧರ್ವರು ಸಂತ ಏಕನಾಥನ ಮುಖ್ಯ ಪಾತ್ರ ವಹಿಸಿದ್ದರು) 'ಗೋಪಾಳಕೃಷ್ಣ', 'ಮಾಣೂಸ', 'ಅಮರಜ್ಯೋತಿ', 'ಶೇಜಾರಿ' ಇವು ಮುಖ್ಯವಾದುವು. ಅವರ ಅಭಿಜಾತ ಸಂಗೀತದ ಕಚೇರಿಗಳಲ್ಲಿಯೂ ಈ ಸಿನೆಮಾ ಸಂಗೀತದ ಹಾಡುಗಳನ್ನು ಹಾಡಲು ರಸಿಕ ಜನರು ಪ್ರೋತ್ಸಾಹಿಸುತ್ತಿದ್ದರು. ಪ್ರಭಾತ ಕಂಪನಿ ಒಡೆದು ದಿಕ್ಕುಪಾಲಾದ ಮೇಲೆ ಇವರು ವಿ. ಶಾಂತಾರಾಮರ (ಇವರು ಕನ್ನಡಿಗರು) ರಾಜಕಮಲದಲ್ಲಿಯೂ, 'ಭಕ್ತಿಚಾ ಮಳಾ' ಚಿತ್ರಕ್ಕೆ ಸಂಗೀತ ಕೊಟ್ಟರು. ಅದರ ಹಿಂದಿ ಮತ್ತು ಮರಾಠಿ ರೂಪಗಳ ಸಿನೇಮಾಗಳಲ್ಲಿ ಮುಖ್ಯ ಪಾತ್ರ ಅಂದರೆ, 'ಸಾವತಾ ಮಾಳಿ' ಯ ಭೂಮಿಕೆ ಮಾಡಿದ್ದರು.

ಅಭಿಜಾತ ಸಂಗೀತದ ಒಳ್ಳೆಯ ಹಾಡುಗಾರರಾಗಿದ್ದರೂ, ಕೃಷ್ಣರಾವ್ ಫುಲಂಬ್ರಿಕರರು ಶಾಸ್ತ್ರೀಯ ಸಂಗೀತದ ರಾಗ ಸಂಗೀತ ಅಳವಡಿಸಿಕೊಂಡು ಇತರ ಪ್ರಕಾರದ ಉತ್ತಮ ಸಂಗೀತವನ್ನು ಕೊಟ್ಟರು. ಬದಲಾವಣೆಯ ಬಿರುಗಾಳಿ ಬೀಸಿದಾಗ, 'ಹೊಸ' ಪ್ರಕಾರದ

ಸಂಗೀತ ಅಂದರೆ ಸಾಮಾಜಿಕ ನಾಟಕಗಳಿಗೆ ಸುಗಮ ಸಂಗೀತದಂತಹ ಹಾಡಲು ಮತ್ತು ಬಾರಿಸಲು ಸುಲಭವಾದ ಸಂಗೀತವನ್ನು ಒದಗಿಸಿದರು. 'ಕುಲವಧು' ನಾಟಕದಲ್ಲಿಯ ಎಲ್ಲ ಹಾಡುಗಳ ಧ್ವನಮುದ್ರಿಕೆಗಳು ರಭಸದಿಂದ ಮಾರಾಟವಾದವು. 'ಜ್ಯೋತ್ಸ್ನಾ ಭೋಳೆ' ಹಾಡಿದ, 'ಬೋಲಾ ಅಮೃತ ಬೋಲಾ' ಇದು 1942ರಲ್ಲಿ ಅತಿ ಹೆಚ್ಚು ಮಾರಾಟದ ಧ್ವನಿಮುದ್ರಿಕೆ ಎಂದು ಹೆಸರು ಪಡೆಯಿತು.

ಕೃಷ್ಣರಾವ್ ಘುಲಂಬ್ರಿಕರರು 1944ರಿಂದಲೇ, ' ವಂದೇ ಮಾತರಂ'ನ್ನು ರಾಷ್ಟ್ರ ಗೀತೆ ಆಗಬೇಕೆಂದು ತುಂಬಾ ಹೆಣಗಿದರು. ಪ್ರತಿಯೊಂದು ಸಲ ಹೊಸ ಹೊಸ ಧಾಟಿಗಳನ್ನು ಹಚ್ಚಿ ಅನೇಕ ಸಲ ದಿಲ್ಲಿಗೆ ಹೋಗಿ ಬಂದರು. ಆದರೆ, ಅವರ ಪ್ರಯತ್ನಕ್ಕೆ ಫಲ ದೊರೆಯಲಿಲ್ಲ. ಕೊನೆಗೆ 1952ರಲ್ಲಿ ಚೀನ ದೇಶಕ್ಕೆ ಹೋದಾಗ ಅಲ್ಲಿ ಡಿ.ವಿ ಪಲುಸ್ಕರ, ಹೀರಾಬಾಯಿ ಬಡೋದೆಕರರೊಂದಿಗೆ ಪ್ರತಿಯೊಂದು ಶಹರಗಳಲ್ಲಿ ಈ ಹಾಡನ್ನು ಹಾಡಿದರು. ವಯಸ್ಸಿನ ಆರುವತ್ತು ದಾಟಿದ ಮೇಲೆ ಭಜನೆಗಳನ್ನು ತಮ್ಮ ಕಚೇರಿಯಲ್ಲಿ ತಪ್ಪದೇ ಹಾಡುತ್ತಿದ್ದರು.

1920ರಿಂದ 1945ರವರೆಗೆ ಎಲ್ಲ ಗ್ರಾಮೊಫೋನ್ ಕಂಪನಿಗಳಿಗೆ 55 ಧ್ವನಿಮುದ್ರಿಕೆಗಳನ್ನು ಇವರು ಕೊಟ್ಟರು. ಇವುಗಳಲ್ಲಿ ಶಾಸ್ತ್ರೀಯ ಸಂಗೀತ, ನಾಟ್ಯಗೀತೆಗಳು, ಚಲಚಿತ್ರದ ಮತ್ತು 'ವಂದೇ ಮಾತರಂ, 'ಸೋತೆ ಹೋ ಕ್ಯಾ?', 'ಹೋಶಿಯಾರ್ ರೆಹೆನಾ' ಅಂತಹ ದೇಶಭಕ್ತಿಯ ಹಾಡುಗಳು ಮತ್ತು ಅನೇಕ ರಾಮದಾಸ್, ಏಕನಾಥ್, ಮತ್ತು ತುಕಾರಾಮರ ಅಭಂಗಗಳು ಮುಂದಿನ ಪೀಳಿಗೆಗಾಗಿ ಧ್ವನಿಮುದ್ರಿಕೆಗಳಲ್ಲಿವೆ.

1998ರಲ್ಲಿ ಕೃಷ್ಣರಾವ್ ಘುಲಂಬ್ರಿಕರರ ಜನ್ಮ ಶತಾಬ್ದಿ ಮಹಾರಾಷ್ಟ್ರದಲ್ಲೆಲ್ಲ ಅದ್ಧೂರಿಯಾಗಿ ಆಚರಿಸಲಾಯಿತು. ಅವರ ಹಿಂದಿನ ಧ್ವನಿ ಮುದ್ರಿಕೆಗಳಲ್ಲಿಯ ಕೆಲವನ್ನು ಪುನಃ ಮುದ್ರಿಸಿ ಮಾರುಕಟ್ಟೆಗೆ ಆರ್.ಪಿ.ಜಿ. ಕಂಪನಿ ತಂದಿತು. ಇವರ ಮತ್ತು ಬಾಲಗಂಧರ್ವರ ಹಾಡುಗಾರಿಕೆಯಿಂದಲೇ ನಮಗೆ ಅಲ್ಲಾದಿಯಾಖಾನ ಸಾಹೇಬರ ಮೊಟ್ಟಮೊದಲಿನ, 'ದಕ್ಕನ ಕಾ ಚೆಲಾ' (ದಕ್ಷಿಣದ ಶಿಷ್ಯ)ಭಾಸ್ಕರ ಬಖಲೆಯವರ ಹಾಡುಗಾರಿಕೆಯ ಮಹತ್ವ ಅರಿವಾಗಬೇಕಷ್ಟೇ!

*****

4.19

ಪಂ. ವಿನಾಯಕ ಬುವಾ ಪಟವರ್ಧನ (1898–1975)

ಸಂಗೀತ ಸಂನ್ಯಾಸಿ ವಿಷ್ಣುದಿಗಂಬರ ಪಲುಸ್ಕರ ಅವರ ಅಸಂಖ್ಯ ಶಿಷ್ಯರಾದವರಲ್ಲಿ ನಾರಾಯಣ, ಶಂಕರ ವ್ಯಾಸರಂತೆಯೇ ಹೆಸರು ಮಾಡಿದವರಲ್ಲಿ ಇವರೂ ಮುಖ್ಯರು. ನಾರಾಯಣ ವ್ಯಾಸರ ಜೊತೆಯಲ್ಲಿ ಹಾಡಿ, ಆಕಾಶವಾಣಿಯಲ್ಲಿ ಕೂಡ ಜುಗಲಬಂದಿ ಕಾರ್ಯಕ್ರಮ ಮಾಡಿ ಹೆಸರು ಗಳಿಸಿದರು.

ಮಿರಜ ಸಂಸ್ಥಾನದಲ್ಲಿ ಇವರ ಜನ್ಮವಾಯಿತು. ನಾಲ್ಕನೇ ವರ್ಷದಲ್ಲಿಯೇ ತಂದೆ–ತಾಯಿ ಇಬ್ಬರೂ ಪ್ಲೇಗ್ ಎಂಬ ಮಹಾಮಾರಿಗೆ ತುತ್ತಾಗಿ ಇವರು ತಬ್ಬಲಿಯಾದರು. ಇವರು ತಮ್ಮ ಚಿಕ್ಕಪ್ಪ ಈಚಲಕರಂಜಿಕರ ಅವರ ಶಿಷ್ಯರಾದರು. ಮತ್ತೊಬ್ಬ ಚಿಕ್ಕಪ್ಪ ಗುರುದೇವ ಅವರು ಪಖವಾಜ್ ಮತ್ತು ತಬಲಾ ನವಾಝು! ವಿಷ್ಣು ದಿಗಂಬರರು ಗುರುದೇವರೊಂದಿಗೆ ಲಾಹೋರಿಗೆ ಹೋದಾಗ ಅವರೊಂದಿಗೆ ಈ ಪುಟ್ಟ ವಿನಾಯಕನು ಹೋದ. ಅಲ್ಲಿಯೇ ಈ ವಿನಾಯಕನ ಸಂಗೀತ ಮೂರ್ತಿಯ ರಚನೆ ಪ್ರಾರಂಭವಾಯಿತು (1901). 1919ರ ತನಕ ಮಿರಜ್ ಸಂಸ್ಥಾನದ ಶಿಷ್ಯವೃತ್ತಿಯಿಂದ (ತಿಂಗಳಿಗೆ 16 ರೂಪಾಯಿ) ಸಂಗೀತವನ್ನು ಕಲಿತರು. 1918ರಲ್ಲಿಯ ಮುಂಬಯಿಯ ಸಂಗೀತ ಅಧಿವೇಶನದಲ್ಲಿಯೇ ಈ ಕ್ಲಾಸ್‌ರೂಮಿನಲ್ಲಿ ಸಂಗೀತ ಕಲಿತ ವಿನಾಯಕನ ಹಾಡುಗಾರಿಕೆಯ ಮೊಟ್ಟ ಮೊದಲಿನ ಜಾಹೀರು ಕಚೇರಿಯಾಯಿತು.

ಇವರ ಗುರು ಪಲುಸ್ಕರರಿಗೆ ತಮ್ಮಂತೆಯೇ ತಮ್ಮ ಶಿಷ್ಯರೆಲ್ಲರೂ ವಿದ್ಯಾದಾನದಲ್ಲಿಯೇ ತೊಡಗಬೇಕೆಂಬ ಆಸೆ. ಆದರೆ ರೂಪ–ಗುಣ ಸಂಪನ್ನ ವಿನಾಯಕ 1922ರಲ್ಲಿಯೇ ತಿಂಗಳಿಗೆ 160 ರೂ ಸಂಬಳಕ್ಕೆ ಗಂಧರ್ವ ಕಂಪನಿಯನ್ನು ಸೇರಿದರು. 'ಸಂಶಯಕಲ್ಲೋಳ' ನಾಟಕದ ಹೀರೋ ಆಶ್ವಿನಶೇಠರ 'ಸುಕಾಂತ ಚಂದ್ರಾನನಾ' ಹಾಡಲು ಪ್ರಾರಂಭಿಸಿದರೆ ಆನಂದದ ಪ್ರಚಂಡ ಅಲೆಗಳು ರಂಗಸ್ಥಳದಲ್ಲಿ ಎದ್ದು ರಸಿಕರನ್ನು ಮೋಹಿಸುತ್ತಿದ್ದವು. ಅನೇಕ ಕಚೇರಿಗಳು, ಇತರ ನಾಟಕಗಳಲ್ಲಿಯ ಪಾತ್ರಗಳು, ಗ್ರಾಮೊಫೋನ್ ರಿಕಾರ್ಡುಗಳು ಹೀಗೆ ವಿನಾಯಕ ಪಟವರ್ಧನ ಬಾಂಬೆ ಪ್ರಾಂತದಲ್ಲಿ ತುಂಬಾ ಪ್ರಸಿದ್ಧಿಗೆ ಬಂದರು. ಜೊತೆಗೆ ಆಕಾಶವಾಣಿಯಲ್ಲಿಯೂ ಹಾಡುತ್ತಿದ್ದರು. ಇಂಪಿರಿಯಲ್ ಟಾಕೀಸಿನ 'ಮಾಧುರಿ' ಎಂಬ ಚಲನಚಿತ್ರದಲ್ಲಿಯೂ ನಟಿಸಿದರು. 1931ರಲ್ಲಿ ವಿಷ್ಣು ದಿಗಂಬರರು ತೀರಿಕೊಂಡ ಕೂಡಲೇ ಇವರಿಗೆ ಪಶ್ಚಾತ್ತಾಪವಾಗಿ

ತಮ್ಮ ಪ್ರತಿಜ್ಞೆಯ ನೆನಪಾಗಿ ಈ ಎಲ್ಲಾ ಮಾಯಾಜಾಲವನ್ನೂ ಎತ್ತಿ ಒಗೆದು ಪುಣೆಯಲ್ಲಿ ಗುರುವಿನ ಋಣವನ್ನು ತೀರಿಸಲು ಗುರುವಿನ ಮಗ ಡಿ.ವಿ. ಪಲುಸ್ಕರರಿಗೆ ಕಲಿಸಲು ಪ್ರಾರಂಭಿಸಿದರು. ಮುಂದಿನ ತಮ್ಮ ಇಡೀ ಆಯುಸ್ಸನ್ನು ವಿದ್ಯಾದಾನದಲ್ಲಿಯೇ ಕಳೆದರು. ಅವರ ಪ್ರಮುಖ ಶಿಷ್ಯರ ಸಂಖ್ಯೆ 90ರ ತನಕ ಇದೆ - ಬಾಪು ತಥಾ ಡಿ.ವಿ. ಪಲುಸ್ಕರ, ರಾಜಾಭಾವು ಕೊಕಜೆ, ನಾಗೇಶ ಖಳೀಕರ, ಟಿ.ಡಿ. ಜಾನೋರಿಕರ ಇತ್ಯಾದಿ ಇತ್ಯಾದಿ.!

ಸ್ತ್ರೀಯರು ಹಾಡುಗಾರಿಕೆಯಲ್ಲಿ ಮುಂದೆ ಬರಬೇಕೆಂದು ಇವರಿಗೆ ತುಂಬಾ ಇಚ್ಛೆಯಿತ್ತು. ಸೀತಾ ಮಾವಿನ ಕುರ್ವೆ, ಲೀಲಾ ಲಿಮಯೆ (ರಮಲಾ ಕುತೆsಗ ಕಾನ್ಹಾ ಮುದ್ರಿಕೆ), ಇಂದೂ ಸೊಹೊನಿ, ಇವು ಅವರ ಶಿಷ್ಯೆಯರಲ್ಲಿ ಕೆಲವರ ಹೆಸರುಗಳು. ಉತ್ತರದ ಜಾಲಂದರದಲ್ಲಿ ಗುರುವಿನ ಶೋಧನೆಯ ಸಲುವಾಗಿ ಹೋದ ಭೀಮಸೇನ ಜೋಶಿಯವರಿಗೆ ಸವಾಯಿ ಗಂಧರ್ವರ ಹೆಸರನ್ನು ಸೂಚಿಸಿ ಅವರನ್ನು ಮರಳಿ ಮರುಯಾತ್ರೆಗೆ ಪ್ರವೃತ್ತ ಮಾಡಿದವರೇ ವಿನಾಯಕ ಬುವಾ ಅವರು. ವಿದ್ಯಾದಾನ ಮಾಡುತ್ತಿದ್ದಾಗಲೇ, 1975ರಲ್ಲಿ, ವಿನಾಯಕ ಬುವಾ ಪಟವರ್ಧನ ಅವರು ತೀರಿಕೊಂಡರು.

1928-35ರಲ್ಲಿ 30 ಹಾಡುಗಳನ್ನು ಅಂದರೆ 15 ಮುದ್ರಿಕೆಗಳನ್ನು ಕೊಟ್ಟರು. ಇವುಗಳಲ್ಲಿ ನಾಟ್ಯ ಸಂಗೀತವೇ ಜಾಸ್ತಿ. ಮಾಧುರಿ ಸಿನೇಮಾದ ಹಾಡುಗಳು ಕೂಡ ಇವೆ. 1935ರಲ್ಲಿ ಸಂಗೀತ ಪಾಠದ ಅಂದರೆ ಕಲಿಸುವ 'ಭೈರವ್,' 'ಖಮಾಜ್', 'ಪೂರ್ವಿ', 'ಯಮನ್', 'ಆಸಾವರಿ', 'ಕಾಫಿ', 'ಭೀಮಪಲಾಸ್', 'ದುರ್ಗಾ', 'ಬಾಗೇಶ್ರೀ' ಮತ್ತು 'ಮಾಲಕೌಂಸ್' ರಾಗಗಳ ಮುದ್ರಿಕೆಗಳೂ ಇವೆ. ಈ 10 ರಾಗಗಳೊಂದಿಗೆ ಒಂದು ನೊಟೇಶನ್ ಪುಸ್ತಕವನ್ನೂ ಕೊಡಲಾಗುತ್ತಿತ್ತು. ಇವರು ಗಾಯನದಲ್ಲಿ 'ತರಾನಾ' ಪ್ರಕಾರವನ್ನು ತುಂಬಾ ಚೆನ್ನಾಗಿ ಹಾಡುತ್ತಿದ್ದರು. 1998ರಲ್ಲಿ ಇವರ ಕೆಲವು ತರಾನಾಗಳನ್ನು ಪುನಃ ಮುದ್ರಿಸಿ ಆರ್‌ಪಿಜಿಯವರು ಮಾರುಕಟ್ಟೆಗೆ ತಂದಿದ್ದರು.

*****

4.20

ಮಾಸ್ಟರ್ ದೀನಾನಾಥ ಮಂಗೇಶ್ಕರ್ (1900–1942)

ಇವರು ಲತಾಮಂಗೇಶ್ಕರ್ ಮತ್ತು ಆಶಾ ಭೋಸಲೆಯವರ ತಂದೆ. ಹೆಸರಿಗಷ್ಟೆ ರಾಮಕೃಷ್ಣ ವಝೆ ಅವರ ಶಿಷ್ಯರು, ಆದರೆ, ನಾಟ್ಯಸಂಗೀತದಲ್ಲಿ ಮಿಂಚಿನ ಚಪಲತೆ ತೋರಿಸುವ ಹಾಡುಗಾರಿಕೆಯನ್ನು ಅಳವಡಿಸಿಕೊಂಡಿದ್ದರಿಂದ ತಮ್ಮದೇ ಒಂದು ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದ್ದರು. ಗುರುಗಳಂತೆ ಇವರು ಮಂಗೇಶಿ, ಗೋವಾದವರು. ಬಾಲಗಂಧರ್ವರು ಕಿರ್ಲೋಸ್ಕರ ಕಂಪನಿಯನ್ನು ಬಿಟ್ಟು ಹೋದಕೂಡಲೇ ಖಾಲಿಯಾದ ಜಾಗವನ್ನು ಇವರು ತುಂಬಿಕೊಟ್ಟರು.

ಕಿರ್ಲೋಸ್ಕರ್ ಮಂಡಳಿಯವರು ಆ ಕಾಲದಲ್ಲಿ ಉರ್ದು ನಾಟಕಗಳನ್ನೂ ಆಡುತ್ತಿದ್ದರು. 'ತಾಜ್–ಪೆ–ವಫಾ' ಮತ್ತು 'ಕಾಂಟೋಮೇ ಫೂಲ್' ಗಳಲ್ಲಿನ 'ಕಮಲಾ' ಎಂಬ ಸ್ತ್ರೀ ಪಾತ್ರವನ್ನು ಮತ್ತು ನಂತರದ ನಾಟಕಗಳಲ್ಲಿಯ ವಿನೋದ–ವೀರನ ಪಾತ್ರವನ್ನು ತುಂಬಾ ಚೆನ್ನಾಗಿ ದೀನಾನಾಥರು ಮಾಡುತ್ತಿದ್ದರಂತೆ! ಅನೇಕ ಉರ್ದು ಮತ್ತು ಫಾರಸೀ ನಾಟಕಗಳಲ್ಲಿ ಇವರು ಪಾತ್ರವಹಿಸುತ್ತಿದ್ದುದರಿಂದ ಆ ಕಾಲದಲ್ಲಿಯ ನಾಟಕ ಪದ್ಧತಿಯಂತೆ 'ಮಾಸ್ಟರ್ ದೀನಾನಾಥ್' ಎಂದು ಗುಜರಾತೀ, ಪಾರ್ಸಿ, ಉರ್ದು ಮಾತನಾಡುವ ಉತ್ತರ ಭಾರತ ಜನರಲ್ಲೆಲ್ಲಾ ಪ್ರಸಿದ್ಧಿಯನ್ನು ಪಡೆದರು.

1918ರಲ್ಲಿ ಎರಡನೇ ಬಾರಿ ಕಿರ್ಲೋಸ್ಕರ್ ಕಂಪನಿ ಇಬ್ಭಾಗವಾದ ಮೇಲೆ 18ನೇ ವಯಸ್ಸಿಯಲ್ಲಿ, ಅಣ್ಣಾ ಕಿರ್ಲೋಸ್ಕರ್ ಅವರ ಹೆಸರಿನಲ್ಲಿಯೇ 'ಬಳವಂತ ನಾಟಕ ಮಂಡಳಿ' ಎಂಬ ಹೆಸರನ್ನು ಇಟ್ಟುಕೊಂಡು 1918ರಿಂದ 1933ರತನಕ ಮಹಾರಾಷ್ಟ್ರ ಮತ್ತು ಉತ್ತರ ಹಿಂದೂಸ್ಥಾನದಲ್ಲಿ ವೈಭವದಿಂದ ಈ ಕಂಪನಿ ಮೆರೆಯಿತು. ಒಳ್ಳೆಯ ಲೇಖಕರಿಂದ ಅಂದರೆ ಗಡಕರಿ, ಕೊಲ್ಹಟ್‌ಕರ್, ಕೇಳ್ಕರ್, ವಾಸುದೇವಶಾಸ್ತ್ರಿ ಖರೆ ಅವರಿಂದ ನಾಟಕಗಳನ್ನು ಬರೆಸಿ ಆಡಿಸಿದರು. ಇವರು ಸ್ವಾತಂತ್ರ್ಯಪೂರ್ವಕಾಲದಲ್ಲಿಯೂ ಸ್ವಾತಂತ್ರ್ಯದ ವಿಷಯವನ್ನೇ ಎತ್ತಿ ನಾಟಕವಾಡುತ್ತಿದ್ದುದರಿಂದ (ಐತಿಹಾಸಿಕ, ಸಾಮಾಜಿಕ) ರಸಿಕ ಜನರು ಇವರ ಎಲ್ಲಾ ನಾಟಕಗಳನ್ನು ಎತ್ತಿ ಹಿಡಿದಿದ್ದರು. ಪೆಂಢಾರ್ಕರ್ ಅವರ ಹಾಗೆಯೇ ಇವರೂ ಕೂಡ 'ಬಳವಂತ ಮೂವಿಟೋನ್' ಕಂಪನಿ ಮಾಡಿ 'ಕೃಷ್ಣಾರ್ಜುನ ಯುದ್ಧ' ನಾಟಕದ ಟಾಕಿ ಮಾಡಿ ಕೈಸುಟ್ಟುಕೊಂಡು, ಸಾಲದ ಹೊರೆಯನ್ನು ಹೊತ್ತು, ಅಜ್ಞಾತವಾಸದಲ್ಲಿಯೇ, 1942ರಲ್ಲಿ ಮುಂಬಯಿಯ ನಾನಾ ಚೌಕದಲ್ಲಿ, ಚಿಕ್ಕಪುಟ್ಟ

ಮಕ್ಕಳನ್ನು, ಹರೆಯದ ಎರಡನೇ ಪತ್ನಿಯನ್ನೂ ಹಿಂದೆ ಬಿಟ್ಟು ತೀರಿಕೊಂಡರು. ಮಂಗೇಶ್ಕರ್ ಅವರ ಕುಟುಂಬದವರೆಲ್ಲಾ ಮುಂದೆ ಅವರ ಹೆಸರಿನಲ್ಲಿಯೇ ಅವರ ಅನೇಕ ರಿಕಾರ್ಡುಗಳನ್ನು ಮಾರುಕಟ್ಟೆಗೆ ಬರುವಂತೆ ಮಾಡಿದರು. ಆಶಾ ಭೋಸಲೆಯವರಂತೂ, ತಂದೆಯವರ 6 ನಾಟಕದ ಹಾಡುಗಳನ್ನು 1955ರಲ್ಲಿಯೇ ಹಾಡಿ ಖ್ಯಾತಿಗಳಿಸಿದರು.

ತನ್ನ ಜೀವಮಾನ ಅಂದರೆ 42 ವರ್ಷಗಳಲ್ಲಿ ಮಾಸ್ಟರ್ ದೀನಾನಾಥರು 50 ಹಾಡುಗಳನ್ನು, ಅಂದರೆ 25 ಮುದ್ರಿಕೆಗಳನ್ನು ಎಚ್ಎಮ್ವಿ 'ಟ್ವಿನ್ ರಿಕಾರ್ಡ್ಸ್' ಮತ್ತು 'ಯಂಗ್ ಇಂಡಿಯಾ' ಲೇಬಲ್ಲಿನಲ್ಲಿ ಹಾಡಿದ್ದಾರೆ. ಇವೆಲ್ಲ ಹೊಸ ಇಲೆಕ್ಟ್ರಿಕ್ ಪದ್ಧತಿಯಲ್ಲಿ ಮುದ್ರಣ ಮಾಡಿದ್ದರಿಂದ ಇವುಗಳ ಗುಣಮಟ್ಟ ಚೆನ್ನಾಗಿವೆ. ಎಚ್ಎಂವಿಯವರು ಇವರ 12 ಹಾಡುಗಳನ್ನು 1960ರಲ್ಲಿ ಎಲ್‌ಪಿಯಲ್ಲಿಯೂ ತಂದರು (ಹೊಸ ಮುದ್ರಣ). ಮೊದಲಿನ ರಿಕಾರ್ಡುಗಳಲ್ಲಿ ಆಕ್ರಾಮಕ ಹಾಡುಗಾರಿಕೆ ಇದ್ದರೆ, 1937ರ ರಿಕಾರ್ಡುಗಳಲ್ಲಿ ಕರುಣಾರಸ ಓತಪ್ರೋತವಾಗಿ ಚಿಮ್ಮಿರುವುದು ಕಾಣಿಸುತ್ತದೆ. ಇಡೀ ಕುಟುಂಬವೇ ಅತ್ಯಂತ ಪ್ರತಿಭಾ ಸಂಪನ್ನವಾಗಿದ್ದುದರಿಂದ ಮಹಾರಾಷ್ಟ್ರದಲ್ಲಿ ದೀನಾನಾಥರ ಹೆಸರು ಪ್ರಾತಃಸ್ಮರಣೀಯವಾಗಿದೆ. ಇವರ 'ಪರವಶತಾ ಪಾಶ ದೈವೆ ಜ್ಯಾಂಚಾ ಗಳಾ ಲಾಗಲಾ' ಹಾಡು ಪರಕೀಯ ಆಂಗ್ಲರನ್ನು ಉದ್ದೇಶಿಸಿ ಹಾಡಿದ್ದು, ಕೇಳಿದರೆ ಈಗಲೂ ರೋಮಾಂಚನ ಆಗುತ್ತದೆ. ಇಂತಹುದೇ ಇನ್ನೊಂದು 'ರಣ ದುಂಧುಭಿ' ನಾಟಕದ ಹಾಡನ್ನು ಕೆಳಗೆ ಕೊಡಲಾಗಿದೆ:

ಜಗೀ ಹಾ ಖಾಸ್ ವೇಡ್ಯಾಂಚಾ ಪಸಾರಾ ಮಾಜಲಾ ಸಾರಾ ।
ಗಮೇ ಯಾ ಭ್ರಾಂತ ಸಂಸಾರೀ ಧ್ರುವಾಂಚಾ ವೇಡ ಹಾ ತಾರಾ ।
ಕುಣಾಲಾ ವೇಡ ಕನಕಾಚೆ, ಕುಣಾಲಾ ಕಾಮಿನೀ ಜಾಚೆ ।
ಭ್ರಮಾನೆ ರಾಜಸತ್ತೇಚ್ಯಾ, ಕುಣಾಂಚೆ ಚಿತ್ತ ತೇ ನಾಚೆ॥

*****

4.21

ಅಪರೂಪದ ವ್ಯಾಸಪರ್ವ
ಪ್ರೊ. ನಾರಾಯಣ್ ರಾವ್ ವ್ಯಾಸ (1901–1984)

ಹಿಂದಿನ ಲೇಖನದ ಶಂಕರರಾಯರ ತಮ್ಮ ನಾರಾಯಣ. ವಯಸ್ಸಿನ 10ನೇ ವರ್ಷಕ್ಕೆ ಗಾಂಧರ್ವ ಮಹಾವಿದ್ಯಾಲಯಕ್ಕೆ ಪ್ರವೇಶಿಸಿದರು. ವರ್ಗದಲ್ಲಿ ಶಿಕ್ಷಣ ಪಡೆದು ಮುಂದೆ ಗಾಯಕರಾದವರಲ್ಲಿ ವ್ಯಾಸಬಂಧುಗಳು ಮೊಟ್ಟಮೊದಲನೆಯವರು. ನಾರಾಯಣರು 11 ವರ್ಷ ಲಾಹೋರದಲ್ಲಿ ತಾಲೀಮು ಪಡೆದು ಗುರುಗಳ ಆಜ್ಞೆ ಎಂದು ಅಣ್ಣನೊಂದಿಗೆ ಅಹಮದಾಬಾದಿಗೆ ಹೋಗಿ ಬಳಿಕ ಮುಂಬಯಿಗೆ ಬಂದರು. ಗಣೇಶೋತ್ಸವದ ಸಂಗೀತ ಸಭೆಗಳಲ್ಲಿ ವಿಶೇಷವಾಗಿ ಇವರು 1917–18ರಿಂದಲೇ ಭಾಗವಹಿಸಿದರು. ಹಿಂದುಸ್ತಾನದಲ್ಲಿ 'ಗ್ರಾಮೋಫೋನ್ ಸೆಲೆಬ್ರಿಟಿ ಸಿಂಗರ್' ಎಂದು ಇವರು ಖ್ಯಾತಿಯನ್ನು ಪಡೆದರು.ಇಡೀ ರಾಗದ ಗಾಯಕಿಯನ್ನು 3 ನಿಮಿಷಗಳ ಮುದ್ರಿಕೆಯಲ್ಲಿ ವ್ಯವಸ್ಥಿತವಾಗಿ ಇಳಿಸುವ ತಂತ್ರವನ್ನು ಇವರು ಚೆನ್ನಾಗಿ ಅಭ್ಯಾಸಮಾಡಿರಬೇಕು. 78 ಆರ್‌ಪಿಎಮ್ ತಟ್ಟೆಗಳು ಇರುವ ತನಕ ನಾರಾಯಣ ವ್ಯಾಸ ಅವರ ಧ್ವನಿಮುದ್ರಿಕೆಗಳಿಗೆ ತುಂಬಾ ಬೇಡಿಕೆ ಇತ್ತು. 1929ರಿಂದ 1942ರ ತನಕ 70 ಮುದ್ರಿಕೆಗಳನ್ನು ನಾರಾಯಣ ರಾವ್ ವ್ಯಾಸ ಅವರು ಕೊಟ್ಟಿರಬೇಕು. ಅಂದರೆ 140 ಹಾಡುಗಳು. ಇವುಗಳಲ್ಲಿ ರಾಗದಾರೀ, ಸುಗಮ ಸಂಗೀತ, ಭಜನೆಗಳಿದ್ದು ಇವು ಹಿಂದೀ, ಮರಾಠಿ ಹಾಗೂ ಗುಜರಾತೀ ಭಾಷೆಗಳಲ್ಲಿವೆ. ಶಾಸ್ತ್ರೀಯ ಸಂಗೀತದ ರಿಕಾರ್ಡುಗಳ ಮಾರಾಟವು ರಿಕಾರ್ಡು ಆದುದಕ್ಕೆ ಇವರಿಗೆ ಸುವರ್ಣ ಪದಕವನ್ನು ಕೊಡಲಾಗಿತ್ತು. ಇವರ ಚಿತ್ರ ಭಾರತದ ಮೂಲೆ ಮೂಲೆಗಳಲ್ಲಿ ಹಂಚಲಾಗುತ್ತಿತ್ತು. ಕೊನೆಗೆ ಇವರ ರಿಕಾರ್ಡುಗಳ ಬೇಡಿಕೆ ನೋಡಿ 12 ಇಂಚಿನ ಆರು ನಿಮಿಷದ ರಿಕಾರ್ಡುಗಳನ್ನೂ ತಯಾರಿಸಿ ಮಾರುಕಟ್ಟೆಗೆ ತಂದರು. ನಾರಾಯಣ ರಾಯರಿಗೆ ಮಾರುಕಟ್ಟೆಯ ತಂತ್ರವೂ ಗೊತ್ತಿತ್ತು. ಈ ದೊಡ್ಡ 12 ಇಂಚಿನ ರಿಕಾರ್ಡುಗಳಲ್ಲಿ ಒಂದು ಬದಿಗೆ ರಾಗಪ್ರಕಾರವಿದ್ದರೆ, ಮತ್ತೊಂದು ಬದಿಗೆ ಠುಮರಿ ಅಥವಾ ಭಜನೆ ಇರಲಿ ಎಂದು ಅವರೇ ಹೇಳಿ ಮಾಡಿಸುತ್ತಿದ್ದರಂತೆ. 'ತಾನ್‌ಕೆ ಕಪ್ತಾನ', 'ಮಾಡರ್ನ್ ತಾನ್‌ಸೇನ್' ಇವೆಲ್ಲ ಲೇಬಲ್ಲುಗಳನ್ನು ಅಂಟಿಸಿದ ಅವರ ಫೋಟೋಗಳ ದೊಡ್ಡ ಪ್ರಿಂಟು, ರೆಕಾರ್ಡುಅಂಗಡಿಗಳ ಗಾಜಿನ ಕಪಾಟಿನಲ್ಲಿ ವಿರಾಜಮಾನವಾಗಿರುತ್ತಿದ್ದವು. 'ಸಖೀ ಮೋರೆ ರುಮ್‌ಝುಮ್' (ದುರ್ಗಾ), 'ತುಮ್ ಜಾಗೋ ಮೋಹನ ಪ್ಯಾರೆ'

(ಭೈರವ), 'ನೀರ ಭರನ ತೋ ಮೈ ಚಲೀ ಜಾತಿ ಹೂಂ' (ಮಾಲಕೌಂಸ್), 'ನೀರ್ ಭರನ ಕೈಸೆ ಜಾವೂಂ' (ತಿಲಕ ಕಾಮೋದ) – ಇವುಗಳ ಧ್ವನಿಮುದ್ರಿಕೆಗಳು ಬಿಸಿಬಿಸಿ ಇಡ್ಲಿಗಳಂತೆ ಮಾರಾಟವಾಗುತ್ತಿದ್ದವು.

1937ರಲ್ಲಿ ವ್ಯಾಸ ಸಂಗೀತಾಲಯ ಆರಂಭವಾದ ಕೂಡಲೆ ಇವರು ವಿದ್ಯಾದಾನದಲ್ಲಿ ಮಗ್ನರಾದರು. ಶಿಷ್ಯರಲ್ಲಿ, ಮಾಸ್ಟರ್ ನವರಂಗ್, ವಸಂತರಾವ್ ರಾಜೋಪಾಧ್ಯೆ, ಪಿ.ಆರ್ ಆಠವಳೆ, ಶಂಕರ ಅಭ್ಯಂಕರ್, ಶರದ್ ಜಾಂಭೀಕರ್ ಮತ್ತು ಪ್ರಸಾದ ಸಾವಕಾರ್ ಇವರು ಮುಖ್ಯರು. ಇವರ ಮಗ ವಿದ್ಯಾಧರ್ ವ್ಯಾಸ್ ಅವರು ಒಳ್ಳೆಯ ಹಾಡುಗಾರರಾಗಿದ್ದು ಮುಂಬಯಿ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾಗಿ 10 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿ ಬಳಿಕ ಕೋಲ್ಕತ್ತಾದ ಸಂಗೀತ ರೀಸರ್ಚ್ ಅಕಾಡೆಮಿಯ ನಿರ್ದೇಶಕರಾದರು.

ನಾರಾಯಣ ವ್ಯಾಸರು ಮೆಹಫಿಲ್ಲು ಗಾಯಕರೆಂದು ಎಲ್ಲಾ ಕಡೆಯಲ್ಲಿಯೂ ಮನ್ನಣೆಯನ್ನು ಪಡೆದಿದ್ದರು. ಅತ್ಯಂತ ಮಧುರ ಶಾರೀರ, ಜೊತೆಗೆ ಮೂರೂ ಸಪ್ತಕಗಳಲ್ಲಿಯೂ ಸಲೀಸಾಗಿ ಚಲಿಸುವಂತಹುದು. ತಮ್ಮ ಗುರುಬಂಧು ವಿನಾಯಕ ಪಟವರ್ಧನ್ ಅವರ ಜೊತೆಗೆ ಅನೇಕ ಜುಗಲಬಂದಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದರು. ಎಚ್‌ಎಂವಿಯವರು ಕೂಡ ಇವರಿಬ್ಬರ 'ಮಾಲಗುಂಜಿ' ರಾಗದ ಗಾಯನವನ್ನು ಒಂದು ಎಲ್‌ಪಿ (ಮೂವತ್ತುಮೂರೂವರೆ ಆರ್‌ಪಿಎಂ) ಮಾಡಿದ್ದಾರೆ. ಇವರ ಭಜನೆ ಮತ್ತು ಹಾಡುಗಳ ಮರುಮುದ್ರಣ ಕ್ಯಾಸೆಟ್ಟಿನಲ್ಲಿ ಅವರ ಶತಾಬ್ದಿಯ ಹೊತ್ತಿಗೆ ರಿಲೀಸು ಮಾಡಲಾಗಿತ್ತು.

ಅವರ ಅತ್ಯಂತ ಖ್ಯಾತ ಭಜನೆ, 'ರಾಧೆ ಕೃಷ್ಣ ಬೋಲ್ ಮುಖಸೆ, ತೇರೋ ಕ್ಯಾ ಲಗೇ ರೆ ಮೋಲ್' ಆಗಿತ್ತು.

*****

4.22

ಪ್ರೊ. ಬಾಳಕೃಷ್ಣ ರಘುನಾಥ ದೇವಧರ್ (1901–90)

'ಆಲಮ್ ಆರಾ' ಇದನ್ನು ಭಾರತೀಯ ಟಾಕೀಗಳ ಮೊಟ್ಟಮೊದಲ ಚಲನಚಿತ್ರವೆಂದು ಪರಿಗಣಿಸಲಾಗುತ್ತದೆ. 'ಆಲಮ್ ಆರಾ'ದ ಮೊದಲು ಒಂದು 'ನಕಲೀ ತಾನ್‌ಸೇನ್' ಎಂಬ ಚಿತ್ರ (ಮೂಕೀ) ಬಂದಿತ್ತು. 1930ರಲ್ಲಿ ಈ ಚಲನಚಿತ್ರ ರಿಯಾಲ್ಟೋ ಥಿಯೇಟರಿನಲ್ಲಿ ಪ್ರದರ್ಶನಗೊಂಡಿತ್ತು. ಇದಕ್ಕೆ ಸಂಗೀತವನ್ನು ನೀಡಿದ್ದವರು ದೇವಧರ ಸಾಹೇಬರು! ಮೂಕಿಯಾಗಲೀ, ಟಾಕಿಯಾಗಲಿ, ಚಲನಚಿತ್ರಗಳಲ್ಲಿ ಮೊದಲು ಸಂಗೀತವನ್ನು ನೀಡಿದ ಶ್ರೇಯಸ್ಸು ದೇವಧರರದ್ದು. ದುರ್ದೈವದಿಂದ ಇದರ ಕ್ರೆಡಿಟ್ಟು ಕೊನೆಯವರೆಗೂ ಅವರಿಗೆ ಸಿಗಲಿಲ್ಲ.

1932ರಿಂದ 1943ರ ತನಕ ದೇವಧರರು 10 ಚಲನಚಿತ್ರಗಳಿಗೆ ಸಂಗೀತವನ್ನು ನೀಡಿದ್ದರು. 'ನೀಲಾ' ಚಲನಚಿತ್ರಕ್ಕೆ ಸಂಗೀತವನ್ನು ನೀಡಿದ್ದು ದೇವಧರ್ ಅವರು. ಅದನ್ನು ಈಗ ಎಲ್ಲರೂ ಮರೆತಿದ್ದಾರೆ. 'ನೀಲಾ' ಚಿತ್ರದ ಅಯಶಸ್ವಿ ಪ್ರಯೋಗದ ನಂತರ ಚಲನಚಿತ್ರ ಸಂಗೀತವು ಕ್ಷಣಿಕ, ಕಲಿಸುವುದೇ ಮುಖ್ಯ ಎಂದುಕೊಂಡು ದೇವಧರರು ತಮ್ಮ 'ಇಂಡಿಯನ್ ಸ್ಕೂಲ್ ಆಫ್ ಮ್ಯೂಸಿಕ್' ಎಂಬ ಸಂಸ್ಥೆಯನ್ನು ಮುಂಬಯಿಯ ಅಪೇರಾ ಹೌಸ್ ವಿಭಾಗದಲ್ಲಿ ಪ್ರಾರಂಭಿಸಿದರು. 'ವಾಯ್ಸ್ ಕಲ್ಚರ್' (Voice-Culture) ಬಗ್ಗೆ ಸಂಶೋಧನೆ ಮಾಡಿ, ಪಾಶ್ಚಾತ್ಯ ಸಂಗೀತದ ಅಭ್ಯಾಸ ನಡೆಸಿ, ಪರಂಪರೆಯಿಂದ ಹಿಂದೂಸ್ತಾನೀ ಸಂಗೀತದಲ್ಲಿ ಸಿಗುವಂತಹ ಅಪರೂಪದ ಬಂದಿಶ್‌ಗಳನ್ನು ಕಲೆಹಾಕುವ ಮಹತ್ಕಾರ್ಯವನ್ನು ದೇವಧರರು ತಮ್ಮ ದೀರ್ಘ ಆಯುಸ್ಸಿನ ಕೊನೆಯವರೆಗೂ ನಡೆಸಿಕೊಂಡು ಬಂದರು (1990). ಕುಮಾರಗಂಧರ್ವ ಎಂಬ ಒಂದು ಸಂಗೀತದ ಬಿರುಗಾಳಿಗೆ ಜನ್ಮಕೊಟ್ಟರು. 'ಸಂಗೀತ ಕಲಾವಿಹಾರ' ಎಂಬ ತಿಂಗಳ ಪತ್ರಿಕೆಯನ್ನು ತುಂಬಾ ಅಚ್ಚುಕಟ್ಟಾಗಿ ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ಕೊನೆಯವರೆಗೂ ನಡೆಸಿಕೊಂಡು ಬಂದರು. ಇದು ಈಗಲೂ ಮುಂಬಯಿ ಗಾಂಧರ್ವ ಮಹಾವಿದ್ಯಾಲಯದ ಮುಖಪತ್ರವೆಂದು ಮೆರೆಯುತ್ತಿದೆ. ಇಷ್ಟೇ ಅಲ್ಲ, ಅವುಗಳಲ್ಲಿ ಬರೆದ ಲೇಖನಗಳನ್ನೆಲ್ಲಾ ಒಟ್ಟುಗೂಡಿಸಿ 'ಥೋರ ಸಂಗೀತಕಾರ' (ಮಹಾನ ಸಂಗೀತಕಾರ), ಮತ್ತು ಇನ್ನೆರಡು ಪುಸ್ತಕಗಳನ್ನೂ ಬರೆದರು. ಮತ್ತೊಂದು 'ವಾಯ್ಸ್

ಕಲ್ಚರ್' ಮೇಲೆ. ನಿರಕ್ಷರ ಗವಯಿಗಳೂ ಧ್ವನಿಶಾಸ್ತ್ರದ ಬಗ್ಗೆ ಏನೂ ಗೊತ್ತಿರದಿದ್ದರೂ ಹೇಗೆ 'ಖರ್ಜ್'ದಲ್ಲಿ ಅಭ್ಯಾಸಮಾಡುತ್ತಿದ್ದರು ಎಂಬುದರ ಬಗ್ಗೆ ವಿವೇಚನೆಯನ್ನು ಆದಷ್ಟು ಶಾಸ್ತ್ರೋಕ್ತ ಪದ್ಧತಿಯಲ್ಲಿ ತಮ್ಮ ಪುಸ್ತಕದಲ್ಲಿ ದೇವಧರ್ ಅವರು ಮಾಡಿದ್ದಾರೆ. ತಮ್ಮ ಇಟಾಲಿಯನ್ ಗುರುಗಳ ಬಗ್ಗೆಯೂ ಬರೆದಿಟ್ಟಿದ್ದಾರೆ.

ವಾದ್ಯಮೇಳದ ಕಂಡಕ್ಟರ್ ಎಂದು, ಸಂಗೀತ ದಿಗ್ದರ್ಶಕ, ಹಾಡುಗಾರ ಎಂದು ಗ್ರಾಮಫೋನ್ ರಿಕಾರ್ಡ್ ಕಂಪನಿಗಳು ಇವರ ಕೆಲವು ಧ್ವನಿಮುದ್ರಿಕೆಗಳನ್ನು ಮಾರುಕಟ್ಟೆಗೆ ತಂದಿವೆ. 1930ರಲ್ಲಿ ಒಂದು 'ಪಾವನ' ಮತ್ತು 'ಭೈರವಿ'ಯಲ್ಲಿ (ಪಿ–13450) ಮತ್ತು 1937ರಲ್ಲಿ ಒಡಿಯೋನ್ ಕಂಪನಿಯ ಸಲುವಾಗಿ 'ಸಿಂಧೂರಾ' (ಸಜಸಜ ಆವತ) ಮತ್ತು 'ಹಿಂದೋಲ' 'ಬಹಾರ' (ಕೊಯಲಿಯಾ ಬೋಲೆ) ಈ ಹಾಡುಗಳು ಇವೆ. ಸುದೈವದಿಂದ ಗ್ರಾಮಫೋನ್ ಕಂಪನಿಯ 'ಗ್ರೇಟ್ ಲ್ಯೂಮಿನರೀಸ್' ಸರಣಿಯಲ್ಲಿ ಬಂದಿರುವ ಕ್ಯಾಸೆಟ್ಟಿನಲ್ಲಿ ಈ ಹಾಡುಗಳನ್ನು ದೇವಧರ ಮಾಸ್ತರರ ಧ್ವನಿಯಲ್ಲಿ ಈಗಲೂ ಕೇಳಬಹುದು. ಕೊನೆಯ ತನಕ ಆಕಾಶವಾಣಿಯ ಮುಂಬಯಿ ಬಿ ಕೇಂದ್ರದಿಂದ ಶಾಸ್ತ್ರೀಯ ಸಂಗೀತವನ್ನು ಹಾಡುತ್ತಲೇ ಇದ್ದರು. ಅವರ 'ಗ್ರೇಟ್ ಲ್ಯೂಮಿನರೀಸ್'ನಲ್ಲಿಯ ಸಿಂಧೂರಾ ಹಾಡಿನ ಶಬ್ದಗಳನ್ನು ಅಕ್ಷರಶಃ ಇಲ್ಲಿ ಕೊಡಲಾಗಿದೆ:

ಸಿಂಧೂರಾ: **ಸಜಸಜ ಆವತ ಹೈ ಬ್ರಜನಾರೀ ಖೇಲನತೊ।**
ಶಶಿವದನ ಮೃಗರನೈನಿ ॥ಧೃ॥
ಕೊಯಲಿಯಾ ಶೀರಚೀರ ಬಸಂತಿ । ಫೂಲನ ಗೋಹೆ ಲಾಯಿ ಬೇನಿ ॥1॥

ಹಿಂದೋಲ ಬಹಾರ: **ಕೇಶರಿಯಾ ಬೋಲತೆ ಲಜಾತ ।**
ಯೆ ನರನಾರಿನನಿ ಧಮಾರ ಆಗೆ ॥ಧೃ॥
ಸೋತಪೀರಿ ಭಯಿ ಏಸೆ ಜೈಸೆ ಸರಸೊಂ
ಸುಹಾಗ ರಂಗ ಬರಸತ
ತಿನ ತುಸವೆ ಬಾಗ ॥

*****

4.23

ಸುರೇಶ್ ಬಾಬು ಮಾನೆ ಊರ್ಫ ಅಬ್ದುಲ್ ರೆಹಮಾನ್ (1902–1953)

ತಂದೆ ಅಬ್ದುಲ್ ಕರೀಂಖಾನರು ಇಟ್ಟ ಹೆಸರು ಅಬ್ದುಲ್ ರೆಹಮಾನ್, ಮನೆಯ ಮುದ್ದಿನ ಹೆಸರು ಬಾಬು. ಹಿಂದು ತಾಯಿ ತಾರಾಬಾಯಿ ಮಾನೆ ನಾಮಕರಣ ಮಾಡಿದ್ದು ಸುರೇಶ. ತಾರಾಬಾಯಿ ಕರೀಂಖಾನರನ್ನು ತೊರೆದು, ಮರಳಿ ಮುಂಬಯಿಗೆ ಬಂದು, ಹಿಂದು ಧರ್ಮಕ್ಕೆ ಮರಳಿದ ಮೇಲೆ ತನ್ನ ತವರುಮನೆಯ ಅಡ್ಡ ಹೆಸರನ್ನು ರೂಢಿಯಲ್ಲಿ ತಂದರು. ಅಬ್ದುಲ್ ರೆಹಮಾನ್, ಸುರೇಶ್ ಬಾಬು ಮಾನೆ ಆದರು, ಹೀರಾಬಾಯಿ ಮುಂದೆ ಮದುವೆಯಾಗಿ ಬಡೋದೆಕರ್ ಎಂದು ಪ್ರಸಿದ್ಧರಾದರು, ಸಾಕೀನಾ, ಸರಸ್ವತಿ ಮಾನೆ ಎಂದೆನಿಸಿಕೊಂಡರು, ಮದುವೆಯ ಬಳಿಕ ಸರಸ್ವತಿ ರಾಣೆ ಎಂದೆನಿಸಿಕೊಂಡರು.

ಸುರೇಶ್ ಬಾಬು ಮಾನೆ ಅವರ ಶಾರೀರ ಅತ್ಯಂತ ಅದ್ಭುತವಾಗಿತ್ತು. ಸಾಧಾರಣ, ಕರ್ನಾಟಕದ ಬಸವರಾಜ ರಾಜಗುರು ಅವರಂತೆ. ಸ್ವಭಾವದಿಂದ ಸೋಮಾರಿಯಾಗಿದ್ದರಿಂದ, ದೊಡ್ಡ ಹಾಡುಗಾರ ಆಗುವ ಎಲ್ಲ ಲಕ್ಷಣಗಳು ಇದ್ದರೂ ಇವರ ಪ್ರಸಿದ್ಧಿ ಕೇವಲ ಮಹಾರಾಷ್ಟ್ರ, ಗುಜರಾತಗಳಿಗೆ ಮಾತ್ರ ಸೀಮಿತವಾಗಿತ್ತು. ತಂದೆಯ 'ಆರ್ಯ ಸಂಗೀತ ವಿದ್ಯಾಲಯ'ದಲ್ಲಿ ಕಲಿಸುತ್ತಿದ್ದ ಸುರೇಶಬಾಬು ತನ್ನ ತಾಯಿ ಮತ್ತು ತಂಗಿಯರೊಂದಿಗೆ ಮುಂಬಯಿಗೆ ಬಂದ ಮೇಲೆ, ನೂತನ ಸಂಗೀತ ವಿದ್ಯಾಲಯ ಪ್ರಾರಂಭಿಸಿ, ಅದರ ನಾಟ್ಯಶಾಲೆಯಲ್ಲಿ ಹೀರಾಬಾಯಿಯೊಂದಿಗೆ ಮರಾಠಿ ನಾಟಕಗಳಲ್ಲೂ ಅಭಿನಯಿಸುತ್ತಿದ್ದರು. ಬಸವರಾಜ ರಾಜಗುರು, ಪ್ರಭಾ ಅತ್ರೆ, ವಸಂತರಾವ್ ದೇಶಪಾಂಡೆ, ಹೀರಾಬಾಯಿ, ಸರಸ್ವತಿಬಾಯಿ, ಮೇನಕಾ ಬಾಯಿ ಶಿರೋಡಕರ್(ಶೋಭಾ ಗುರ್ಟು ಅವರ ತಾಯಿ), ಮಧುಕರ ಕಾನಿಟಕರ್, ಗಜಾನನ ವಾಟವೆ– ಹೀಗೆ ಅನೇಕ ಶಿಷ್ಯರನ್ನು ಪಡೆದ ಮಹಾನುಭಾವರು.

1926ರಲ್ಲಿ ಇವರ ಮೊಟ್ಟ ಮೊದಲ ಧ್ವನಿಮುದ್ರಿಕೆ ಮಾರುಕಟ್ಟೆಗೆ ಬಂದಿತ್ತು. ಇದೊಂದು ಅಪರೂಪದ ಧ್ವನಿಮುದ್ರಿಕೆ. ಒಂದು ಬದಿಯಲ್ಲಿ, 'ರಾಮ ಅಯೋಧ್ಯಾನಗರಿ' ಎಂಬ ಹಾಡು ಮತ್ತೊಂದು ಬದಿಯಲ್ಲಿ, 'ಬಾಲಮ ಮೋರಾ ನೈನಾ ತೆರೆ ರಸೀಲೆ' ಎಂಬ 'ಖಮಾಜ್' ರಾಗದ ಠುಮರಿ ಅತ್ಯಂತ ಶ್ರವಣೀಯವಾಗಿದೆ. ಮುಂದೆ ಅವರೇ

ಸಂಗೀತ ನೀಡಿದ ಮರಾಠಿ ನಾಟಕಗಳ (ನಾ.ತೀ ಫಡಕೆ ಬರೆದ) ಹಾಡುಗಳನ್ನು ಓಡಿಯನ್ ಕಂಪನಿಯವರು ರೆಕಾರ್ಡು ಮಾಡಿದರು. ಕೋಲಂಬಿಯಾದವರು ಕೂಡ ಇವರ 6 ಹಾಡುಗಳ ಧ್ವನಿಮುದ್ರಿಕೆಗಳನ್ನು ಬಿಡುಗಡೆ ಮಾಡಿದರು. ಇವೆಲ್ಲ ಠುಮರಿ, ಚೈತಿ ಪ್ರಕಾರದ ಹಾಡುಗಳಾದ್ದರಿಂದ ಸುರೇಶಬಾಬು ಕೇವಲ ಠುಮರಿ ಹಾಡುವ ಗಾಯಕರು ಎನ್ನುವ ಲೇಬಲ್ ಅವರಿಗೆ ಅಂಟಿಕೊಂಡಿತ್ತು. ಆದರೆ, ಅವರ ಶಾಸ್ತ್ರೀಯ ಸಂಗೀತದ ಹಾಡುಗಾರಿಕೆ ಉಚ್ಚ ಪ್ರಕಾರದ್ದಾಗಿದ್ದು ಆಕಾಶವಾಣಿಯಿಂದ ತಿಂಗಳಿಗೊಮ್ಮೆ ಬಿತ್ತರವಾಗುತ್ತಿತ್ತು. ಇವರು ಪ್ರಭಾತ ಕಂಪನಿಯ ಒಂದೆರಡು ಚಲನಚಿತ್ರಗಳಲ್ಲಿಯೂ ಅಭಿನಯಿಸಿದ್ದಿದೆ. 'ಮಹಾರಾಷ್ಟ್ರೀಯ ಠುಮರಿ' ಈ ಪ್ರಕಾರ ಸುರೇಶಬಾಬು ಮಾನೆ ಅವರ ವಿಶಿಷ್ಟ ಪದ್ಧತಿಯಾಗಿತ್ತು. ಇವರ ಝಲಕ್ ಬೇಕಿದ್ದರೆ, ರಸಿಕರು ಬಸವರಾಜ ರಾಜಗುರು ಅವರು ಹಾಡಿದ ಒಂದೆರಡು ಧ್ವನಿಮುದ್ರಿಕೆಗಳನ್ನು ಕೇಳಿದರೆ ಅಂದಾಜು ಸಿಗಬಹುದು.

ಹಾರ್ಮೋನಿಯಮ್, ಜಲತರಂಗ, ಸಾರಂಗಿ, ತಬಲಾ ತರಂಗ, ಕಾಷ್ಠತರಂಗ, ಶಹನಾಯಿ ಇವೆಲ್ಲ ವಾದ್ಯಗಳನ್ನು ಸುರೇಶಬಾಬು ಸಲೀಸಾಗಿ ನುಡಿಸಬಲ್ಲವರಾಗಿದ್ದರು. ಕೊನೆಗೆ ಕಬ್ಬಿಣದಿಂದ ಬಂಗಾರಮಾಡುವ (ಅಲ್ಕೆಮಿ) ಹುಚ್ಚಿಗೆ ಬಲಿಬಿದ್ದು ಸರ್ವನಾಶ ಮಾಡಿಕೊಂಡ ಸುರೇಶಬಾಬು ತಮ್ಮ 51ನೇ ವಯಸ್ಸಿನಲ್ಲಿಯೇ ತೀರಿಕೊಂಡರು. 1951ರಲ್ಲಿ ಹೊಸದಾಗಿ ಭಾರತಕ್ಕೆ ಬಂದ ಟೇಪರೆಕಾರ್ಡರನಲ್ಲಿ ಒಂದು ತಾಸಿನ ಧ್ವನಿಮುದ್ರಣವಷ್ಟೇ ಇವರ ಸಂಪತ್ತು.

*****

4.24

ಗಂಗೂಬಾಯಿ ಹಾನಗಲ್ (1913–2009)

2009ರಲ್ಲಿ ನಮ್ಮನ್ನೆಲ್ಲ ಅಗಲಿದ ಹಿರಿಯಕ್ಕ ಗಂಗೂಬಾಯಿ ಏಳು ವರ್ಷಗಳ ಮೊದಲೇ ಎಲುಬಿನ ಕ್ಯಾನ್ಸರ್ ಬೇನೆಗೆ ತುತ್ತಾದರೂ ಕೊನೆಯ ತನಕ ತನ್ನ 'ಹಿರಿಯಕ್ಕ'ನ ಆತ್ಮೀಯತೆಯನ್ನು ಕಾಪಾಡಿಕೊಂಡು ಬಂದಿದ್ದರು. ಭೆಟ್ಟಿಯಾಗಲು ಬಂದ ನನ್ನಂತಹರನ್ನು ಕೂಡ ಮಂಚದ ಮೇಲೆ ಪಕ್ಕದಲ್ಲಿ ಕುಳ್ಳಿರಿಸಿ, ಹೆಂಡತಿ ಮಕ್ಕಳ ಕ್ಷೇಮ ಸಮಾಚಾರ ವಿಚಾರಿಸಿ ಆನಂದಿಸುವದು ಅವರ ಪರಿಪಾಠವಾಗಿತ್ತು. ಅವರು ಹುಟ್ಟಿದ ಧಾರವಾಡದ ಮನೆಯನ್ನು ಕರ್ನಾಟಕ ರಾಜ್ಯಕ್ಕೆ ಅರ್ಪಿಸಿದಾಗ, ಅವರ ಹುಬ್ಬಳ್ಳಿಯ ಮನೆ 'ಗಂಗಾಲಹರಿ'ಯನ್ನು ಸಂಗ್ರಹಾಲಯ ಮಾಡಿದಾಗ ನಾನು ಅಲ್ಲಿಯೇ ಇದ್ದೆ. ಕುಂದಗೋಳದ ಸವಾಯಿ ಗಂಧರ್ವ ಉತ್ಸವದ ಕೊನೆಯ ತನಕ ಇದ್ದು ಕೆಲವೇ ನಿಮಿಷಗಳಾದರೂ ಹಾಡಿ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದರು. ಆ ವರ್ಷದ ಉತ್ಸವಕ್ಕೆ ನಾನು ಮುಂಬಯಿಯಿಂದ ಕುಂದಗೋಳಕ್ಕೆ ಅವರ ಗುರುಬಂಧು ಫಿರೋಜ್ ದಸ್ತೂರರ ಶಿಷ್ಯರನ್ನು ಕರೆದುಕೊಂಡು ಹೋಗಿದ್ದೆ.

ಈ ಲೇಖನ ಗಂಗೂಬಾಯಿಯವರ ಅಪರೂಪದ ಮರಾಠಿ ಭಾವಗೀತೆಗಳ ಬಗ್ಗೆ ಇದ್ದರೂ, ಅವರ ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದಿದ್ದುದರಿಂದ ಕೆಲವು ಸಾಲುಗಳನ್ನು ಅವರ ಬಗ್ಗೆ ಬರೆಯದೇ ಮುಂದೆ ಸಾಗುವದು ಕಠಿಣ.

ತಾಯಿ ಅಂಬಾಬಾಯಿ ಕರ್ನಾಟಕ ಸಂಗೀತದಲ್ಲಿ ಹಾಡುತ್ತಿದ್ದ ಕೃತಿಗಳನ್ನು ಗಂಗೂಬಾಯಿ ಅತ್ಯಂತ ಜತನದಿಂದ ಕಾಪಾಡಿಕೊಂಡಿದ್ದರು. ಅಂಬಾಬಾಯಿ ಹಾಡುತ್ತಿದ್ದ 'ನಾಟಕುರುಂಜಿ' ರಾಗದ, 'ಮನ ಧ್ಯಾಸ ಲಾಗೇ' ಹಾಗೂ ಈ ರಾಗದಲ್ಲಿಯ, 'ಕುಸುಮ ಚಾಪ' (N5174) ಇವುಗಳನ್ನು ಕನ್ನಡ ಕೃತಿಗಳ ಧಾಟಿಯಲ್ಲಿಯೇ ಹಾಡಿದ ಕನ್ನಡತಿ ಗಂಗೂಬಾಯಿ! ಗಮ್ಮತ್ತಿನ ಮಾತೆಂದರೆ ಹೀರಾಬಾಯಿ ಬಡೋದೆಕರ್, ಸರಸ್ವತಿ ರಾಣೆ, ಲಕ್ಷ್ಮೀಬಾಯಿ ಜಾಧವ ಹಾಗೂ ಲಾಟಕರ್ (ಮಾಣಿಕ ವರ್ಮಾ, ಮಾಲತಿ ಪಾಂಡೆ ಇವರೆಲ್ಲ ಸುಗಮ ಸಂಗೀತ ಹಾಡುವವರೆಂದು ಖ್ಯಾತಿ ಪಡೆಯುವ ಮೊದಲಿನ ಮಾತು ಇದು) ಈ ಗಾನಕೋಕಿಳೆಯರು ಮರಾಠಿಗಳಾಗಿದ್ದರೂ, 1931ರಿಂದ 1935ರವರೆಗೆ ಈ ಕನ್ನಡತಿ ಮರಾಠಿ ಭಾವಗೀತೆ, ದ್ವಂದ್ವ ಗೀತೆಗಳ ಸುಮಾರು 22 ಹಾಡುಗಳನ್ನು 78 ಆರ್.ಪಿ.ಎಂ.ನಲ್ಲಿ ಹಾಡಿ 'ಗ್ರಾಮೊಫೋನ ಸಿಲೆಬ್ರಿಟಿ' ಎಂದು ಮೆರೆದ ಮಾತು ಕನ್ನಡಿಗರು ಈಗ ಮರೆತಂತೆಯೇ! ಮಗಳು ಕೃಷ್ಣಾ ಎರಡು ವರ್ಷದ ಕೂಸು.

ಮಗುವಿಗೆ ಹಾಲುಣಿಸಿ ಎಚ್.ಎಮ್.ವಿ ರೆಕಾರ್ಡಿಂಗ್ ಸ್ಟುಡಿಯೊದಲ್ಲಿ ಮಲಗಿಸಿ, ಜಿ.ಎನ್ ಜೋಶಿಯವರೊಂದಿಗೆ , 'ತು ತಿಥೆ ಆನಿ ಮೀ ಇಥೆ' ಈ ರೋಮ್ಯಾಂಟಿಕ್ ಹಾಡನ್ನು (N 5130, O MC 1870) ಮುದ್ರಿಸಿಕೊಂಡ ವಿಷಯ ಗಂಗೂಬಾಯಿ ರಸವತ್ತಾಗಿ ಈ ಲೇಖಕನೊಂದಿಗೆ ಹಂಚಿಕೊಂಡಿದ್ದರು. ಗಂಗೂಬಾಯಿ, ಗಾಂಧಾರಿ ಹಾನಗಲ್ ಎಂದು ಖ್ಯಾತಿ ಪಡೆದದ್ದು 1933–34ರಲ್ಲಿಯೇ.

ಗಂಗೂಬಾಯಿ ಉರ್ಫ್ ಗಾಂಧಾರಿ ಹಾನಗಲ್ ತಮ್ಮ ಕಚೇರಿಗಳಲ್ಲಿ, ಗಝಲ್, ಠುಮರೀ ಅಥವಾ ನಾಟ್ಯ ಗೀತೆಗಳನ್ನು (ಮರಾಠಿ ಅಥವಾ ಕನ್ನಡ ರಂಗಗೀತೆ) ಎಂದೂ ಹಾಡದವರು, ತಿಲಂಗ ರಾಗದಲ್ಲಿ ಒಂದು ಠುಮರೀ, 'ಲೇ ಚಲೋ ಗೋಕುಲ ಗಾಂವ' (O E 1853) ಹಾಡಿದರೆ ಅದರ ಮತ್ತೊಂದು ಬದಿಗೆ , 'ದಿನ್ ದರ್ಶನ್ ಮೋಹೆ' ಗಝಲ್ ಹಾಡಿದ್ದಾರೆ!

ಮರಾಠಿ ಅಭಂಗಗಳನ್ನು ಕೂಡ ವಿಶೇಷವಾಗಿ ಗಂಗೂಬಾಯಿಯವರು 1931–35ರಲ್ಲಿ ಹಾಡಿದ್ದಾರೆ. 'ಆಮ್ಹಾ ಆನಂದ' ಸಿಂಧೂ ಭೈರವಿಯಲ್ಲಿ ಮತ್ತು 'ಲೋ ಲೋ ಲಾಗಲಾ ಅಂಬೇಚಾ' ಈ ಅಭಂಗಗಳು('N 5226') ರೆಕಾರ್ಡಿನಲ್ಲಿ ಇವೆ.

* ಜಿ.ಎನ್ ಜೋಶಿಯವರು ಉತ್ತಮ ಸಂಗೀತಕಾರರು, ಸಂಗೀತ ನಿರ್ಮಾಪಕರು ಆಗಿದ್ದರು. ಅವರು ಗಂಗೂಬಾಯಿಯವರೊಂದಿಗೆ ಮರಾಠಿಯಲ್ಲಿ ಹಾಡಿದ ಭಾವಗೀತೆಗಳು ಉತ್ಕೃಷ್ಟ ಹಾಡುಗಳೆಂದು classical great hits ಎಂದು ಪ್ರಸಿದ್ಧವಾಗಿವೆ.

*****

4.25

ಪಂ ಬಸವರಾಜ ರಾಜಗುರು (1920–1991)

ಉತ್ತರ ಹಿಂದುಸ್ತಾನದಲ್ಲಿ, ಅದೂ ಈಗಿನ ಪಾಕಿಸ್ತಾನದ ಲಾಹೋರಿನಲ್ಲಿ ಅತ್ಯಂತ ಚಿಕ್ಕ ವಯಸ್ಸಿನಲ್ಲಿ, 'ಸೂರಕಾ ಬಾದಶಾಹ' ಎಂಬ ಬಿರುದು ಗಿಟ್ಟಿಸಿದ ಬಸವರಾಜರ ಶಾರೀರ ಅತ್ಯಂತ ಮಧುರ. ಅವರ ಗಾಯನದ ಮಾಧುರ್ಯ ಕೇವಲ ಅವರದ್ದೇ. ಸುದೈವದಿಂದ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಅವರ ಗುರುಗಳಾದ ಗದುಗಿನ ಪಂಚಾಕ್ಷರಿ ಗವಯಿಗಳು ಬಸವರಾಜರನ್ನು ಮುಂಬಯಿಗೆ ತಂದು ಹಾಡಿಸಿದ್ದರಿಂದ ಮತ್ತು ಅವರ ಪ್ರತಿಭೆಯನ್ನು ಗುರುತಿಸಿ, ಎಚ್‌ಎಮ್‌ವಿ ಕಂಪನಿಯಲ್ಲಿ ದುಂಬಾಲು ಬಿದ್ದು 78 ಆರ್‌ಪಿಎಮ್ ಮುದ್ರಿಕೆಗಳನ್ನು ಮಾಡಿಸಿದ್ದರಿಂದ 1938ರಿಂದಲೇ ಇವರ ಹೆಸರು ಭಾರತದಾದ್ಯಂತ ಪ್ರಸಿದ್ಧಿ ಪಡೆಯಿತು. ಕೊನೆಯ ಉಸುರಿನ ತನಕ ಸಂಗೀತದಲ್ಲಿ ಮುಳುಗಿದ್ದ ಬಸವರಾಜರ ಇನ್ನೊಂದು ಶಕ್ತಿ ಎಂದರೆ ಅವರು ತಯಾರು ಮಾಡಿದ ಅತ್ಯಂತ ಮೇಧಾವಿ ತಂಡ. ತನ್ನ ಸಂಗೀತ ಸಂಪತ್ತನ್ನು ಧಾರಾಳವಾಗಿ ಎಲ್ಲರಿಗೂ ಹಂಚಿದ ಮಹಾನುಭಾವರು ಇವರು. ಈಗ ಕರ್ನಾಟಕದಲ್ಲಿ ಮುಂಚೂಣಿಯಲ್ಲಿ ಇರುವ ಸಂಗೀತಾ ಕಟ್ಟಿ, ಪೂರ್ಣಿಮಾ ಕುಲಕರ್ಣಿ, ಗಣಪತಿ ಭಟ್ಟ, ಪರಮೇಶ್ವರ ಹೆಗಡೆ, ಶ್ರೀಪಾದ ಮತ್ತು ಶ್ರೀಪತಿ ಹೆಗಡೆ, ವೆಂಕಟೇಶ ಕುಮಾರ, ಶಿವಾನಂದ ಪಾಟೀಲ, ನಚಿಕೇತ ಮೇವುಂಡಿ ಇವರ ಶಿಷ್ಯರಲ್ಲಿ ಕೆಲವರು.

ಸವಾಯಿ ಗಂಧರ್ವರ ಕುಂದಗೋಳ ತಾಲೂಕಿನ ಯಲಿಹಾಳ ಊರಿನಲ್ಲಿ ಹುಟ್ಟಿದರೂ ರಾಜಗುರು ಇವರಿಗೆ ಸವಾಯಿ ಗಂಧರ್ವರ ಸಹವಾಸ ಸಿಕ್ಕಿದ್ದು ಕೇವಲ ಆರು ತಿಂಗಳು. ಇವರ ಮನೆತನ ಕೆಳದಿ ರಾಜಗುರುಗಳ ಮನೆತನ. ಅಂತೆಯೇ ಉಂಬಳಿಯಲ್ಲಿ ಪಡೆದ ಹೊಲಗಳಲ್ಲಿಯ ಒಕ್ಕಲುತನ. ತಂದೆ ಮಹಾಂತಪ್ಪ ಕರ್ನಾಟಕ ಸಂಗೀತದ ಹಾಡುಗಾರಿಕೆಯನ್ನು ತಂಜಾವೂರಿಗೆ ಹೋಗಿ ಕಲಿತವರು. ಆರನೆಯ ವರ್ಷದಲ್ಲಿಯೇ ತಂದೆಯಿಂದ ಕರ್ನಾಟಕ ಸಂಗೀತ ಪಾಠ, ಆದರೆ ಬಾಲಕ ಬಸವರಾಜನಿಗೆ ನಾಟಕದ ಹುಚ್ಚು. ವಾಮನರಾವ ಮಾಸ್ತರರ 'ವಿಶ್ವಗುಣಾದರ್ಶ' ನಾಟಕ ಕಂಪನಿಯಲ್ಲಿ ಹೆಸರು ಮಾಡಿದರು. 1937ರಲ್ಲಿ, 'ವೀರ ಅಭಿಮನ್ಯು' ನಾಟಕದ, 'ಭಕ್ತ ಜೀವನ ರಾಮಾ ಸುಜನ ಜೀವನ' ಎಂಬ ಹಾಡಿನ ಮೊಟ್ಟಮೊದಲ ಮುದ್ರಿಕೆಯನ್ನು ತಂದ ಶ್ರೇಯ ಇವರದ್ದು. ಅದಾಗಲೇ ಎರಡು ವರ್ಷ ಮೊದಲು ಅಂದರೆ ತಮ್ಮ ಹತ್ತನೇ ವರ್ಷದಲ್ಲಿ ಬಸವರಾಜರು ಪಂಚಾಕ್ಷರಿ ಗವಯಿಗಳ ಸಂಗೀತದ ಗರಡಿಯನ್ನು

ಸೇರಿದ್ದರು. 11 ವರ್ಷ ಗವಯಿಗಳಲ್ಲಿ ಕಲಿತು ಗುರುಗಳ ಆಶೀರ್ವಾದ ಪಡೆದು ಮುಂದಿನ ಶಿಕ್ಷಣಕ್ಕಾಗಿ ಹಾತೊರೆಯುತ್ತಿದ್ದ ಅವರಿಗೆ ತಮ್ಮ 16ನೇ ವಯಸ್ಸಿನಲ್ಲಿ ವಿಜಯನಗರ ಉತ್ಸವದಲ್ಲಿ (1936)ಹಾರ್ಮೋನಿಯಮ್ ಸಾಥ ಕೊಟ್ಟವರು ಅವರ ಗುರುಗಳೇ.

1936ರಿಂದ 1941ರವರೆಗೆ ರಾಜಗುರು ಅವರ 12 ಕನ್ನಡ ವಚನಗಳು, ಶ್ಯಾಮಕಲ್ಯಾಣ್, ದೇಸ್, ಮಾಲಕೌಂಸ್, ಮೇಘ್, ಚಾಂದನಿ, ಕೇದಾರ್, ಹಂಸಧ್ವನಿ – ಈ ಆರು ರಾಗಗಳ ಧ್ವನಿಮುದ್ರಿಕೆಗಳು ಅವರ ಹೆಸರನ್ನು ಭಾರತದಲ್ಲೆಲ್ಲಾ ಜನಪ್ರಿಯಗೊಳಿಸಿದವು. 1938ರಲ್ಲಿ ಮುಂಬಯಿ ಆಕಾಶವಾಣಿಯಿಂದ ಅವರ ಅನೇಕ ಕಾರ್ಯಕ್ರಮಗಳ ನೇರ ಪ್ರಸಾರವಾಯಿತು.

ಇಷ್ಟಾದರೂ ಅವರಿಗೆ ಕಲಿಯುವ ದಾಹ. ಸುರೇಶಬಾಬು ಮಾನೆ (ಹೀರಾಬಾಯಿ ಬಡೋದೆಕರರ ಅಣ್ಣ) ಬಳಿಕ ಲಾಹೋರಿನಲ್ಲಿ ಹೀರಾಬಾಯಿ ಬಡೋದೆಕರರ ಗುರು ವಹೀದಖಾನರಲ್ಲಿ ಸಂಗೀತ ಶಿಕ್ಷಣ ಪಡೆದರು.

ಎಚ್‌ಎಮ್‌ವಿಯವರು ಈ ಮೊದಲು ಧ್ವನಿಮುದ್ರಿಸಿದ ರಾಜಗುರು ಅವರ ತಟ್ಟೆಗಳನ್ನು ಮೂರು ಭಾಗಗಳಲ್ಲಿ ಹೊರ ತಂದಿದ್ದಾರೆ. ದುರ್ದೈವದಿಂದ ಇವುಗಳಲ್ಲಿ ವಚನಗಳು ಇಲ್ಲ. ಈ ಪುನರ್ಮುದ್ರಣ ಸಾಧ್ಯವಾದದ್ದು ಕೇವಲ ಅವರ ಶಿಷ್ಯ ಶಿವಾನಂದ ಪಾಟಿಲರ ಪತ್ನಿ ಯೋಜನಾ ಶಿವಾನಂದ ಅವರ ಕೃಪೆಯಿಂದ. ಬಹುಶ: ಅವರ ವಚನ ಸಂಗ್ರಹ ಅವರ ಹೆಸರಿನಲ್ಲಿ ಪ್ರತಿಷ್ಠಾನ ಮಾಡಿದ ನಿಜಗುಣ ರಾಜಗುರು ಅವರಲ್ಲಿ ಇರಬಹುದು ಎಂಬುದು ಅಂದಾಜು ಅಷ್ಟೆ.

*****

ಅಧ್ಯಾಯ 5

ರಾಗಗಳು

5.1

ಭೈರವದ ಪ್ರಕಾರಗಳು – 1

ಈ ಮುಂಬಯಿ ಮಹಾನಗರದಲ್ಲಿ ನನ್ನ ವಾಸ್ತವ್ಯ ಭಾಟಿಯಾ ಆಸ್ಪತ್ರೆಯ ಪಕ್ಕದಲ್ಲಿ. ಅಂದರೆ ತಾಡದೇವ ಮತ್ತು ನಾನಾ ಚೌಕದ ಮಧ್ಯದಲ್ಲಿ. ಹೀಗಾಗಿ ಭಾರತೀಯ ವಿದ್ಯಾಭವನ, ದೇವಧರರ ಸಂಗೀತ ಶಾಲೆ, ಬಿರ್ಲಾ ಹಾಲ್, ರಂಗಭವನ, ರಾಷ್ಟ್ರೀಯ ಕಲಾಕೇಂದ್ರ ಇವೆಲ್ಲ ಅನತಿ ದೂರದಲ್ಲಿಯೇ ಇವೆ. ಮೊಟ್ಟ ಮೊದಲಿನ ಭೈರವರಾಗದ ಪ್ರಾತ್ಯಕ್ಷಿಕೆ ಕೇಳಿದ್ದು 1984ರಲ್ಲಿ. ಬೆಳಗಾವಿ ಜಿಲ್ಲೆಯ ಸೂಳೆಭಾವಿಯಲ್ಲಿ ಹುಟ್ಟಿದ ಪಂ. ಕೃಷ್ಣಾ ಗುಂಡೋ ಗಿಂಡೆಯವರಿಂದ, ಭಾರತೀಯ ವಿದ್ಯಾಭವನದಲ್ಲಿ. ಪಂ. ಗಿಂಡೆಯವರು ಕುಮಾರ ಗಂಧರ್ವರ ಊರಿನವರು, ಸಹಪಾಠಿಗಳು. ಪಂ. ಗಿಂಡೆಯವರ ಸಹಾಯಕರಾಗಿ 'ಭೈರವ ಕೆ ಪ್ರಕಾರ'ವೆಂಬ ಪುಸ್ತಕದ ಲೇಖಕ ಹಾಗೂ ಸಂಗೀತಜ್ಞರಾದ ಪಂ. ಜಯಸುಖಲಾಲ ಶಾಹ ಮೂರೂ ಪ್ರಾತ್ಯಕ್ಷಿಕೆಗಳಲ್ಲಿ ಸಹಭಾಗಿಗಳಾಗಿದ್ದರು. ಇದಕ್ಕಿಂತ ಮೊದಲು ವಿಲೇಪಾರ್ಲೆ (ಪೂ)ದಲ್ಲಿಯ ಅಚ್ಚಕನ್ನಡಿಗರಾದ ರಾಘವೇಂದ್ರ ಬೆಂಗೇರಿಯವರ ಮನೆಯಲ್ಲಿ 1978ರಲ್ಲಿ ಕುಮಾರ ಗಂಧರ್ವರ 'ನ ಭೂತೋ ನ ಭವಿಷ್ಯತಿ'ಯಂತಹ ಭೈರವ ಪ್ರಕಾರಗಳ ಕಚೇರಿ ಮುಂಜಾನೆ 9ರಿಂದ ಮಧ್ಯಾಹ್ನದ ತನಕ ನಡೆದಿತ್ತಂತೆ, ಇದನ್ನೇ ಬಳಿಕ ನವರಸ ಕಂಪೆನಿಯವರು ಧ್ವನಿಸುರುಳಿ ಮಾಡಿ ಮಾರುಕಟ್ಟೆಯಲ್ಲಿ ತಂದಿದ್ದು ಅದು ನನ್ನಲ್ಲಿದೆ, ಮುಂದೆ ಕಲಾಭಾರತಿಯ ಸ್ಥಾಪನೆಯ ನಂತರ ಎರಡೇ ವರ್ಷಗಳಲ್ಲಿ ಪಂ. ಅರವಿಂದ ಪಾರೀಖರು ನಮ್ಮ ಒತ್ತಾಯಕ್ಕೆ 1994ರಲ್ಲಿ 'ಭೈರವ ಕೆ ಪ್ರಕಾರ' ಮೊಟ್ಟಮೊದಲ ಬಾರಿ ಸಿತಾರಿನ ಮೇಲೆ ಪ್ರಸ್ತುತಿಸಿದ್ದರು. ಮೂರನೇ ವರ್ಷ ಅವರೇ 'ತೋಡೀ ಕೇ ಪ್ರಕಾರ'ದ ಪ್ರಾತ್ಯಕ್ಷಿಕೆಯನ್ನು ಕೊಟ್ಟು 1996ರಲ್ಲಿ 'ಸಾರಂಗ ಕೆ ಪ್ರಕಾರ' ಮಾಡುವ ಘೋಷಣೆಯನ್ನೂ ಮಾಡಲಾಗಿತ್ತು. ಆಗಿನ ಸದಾನಂದ ಶೆಟ್ಟಿಯವರು ಮತ್ತು ಅರವಿಂದ ಪಾರೀಖರು ಗೆಳೆಯರು. ಸಹ ರೊಟೇರಿಯನ್. ಹೀಗಾಗಿ ಅವರ ಬೆಂಬಲ ಮತ್ತು ಸಹವಾಸ ಕಲಾಭಾರತಿಗೆ ಮುಂದುವರೆಯಿತು. ಆದರೆ ಸಾರಂಗದ ಪ್ರಕಾರಕ್ಕೆ ಮುಹೂರ್ತ ಬರಲಿಲ್ಲ.

ಭೈರವ ಒಂದು ಅತ್ಯಂತ ಪ್ರಾಚೀನ ರಾಗವಾಗಿದ್ದು, ದಿನಂಪ್ರತಿಯ ಸೂರ್ಯೋದಯಕ್ಕೆ ಸಂಬಂಧಿಸಿದ್ದು. ರಾಜಕಪೂರನ 'ಜಾಗತೇ ರಹೋ' ಚಲನಚಿತ್ರ ನೆನಪಿದೆಯೇ? ಇಡೀ ರಾತ್ರಿ ರಾಜನಿಗೆ ಅಲ್ಲಿಂದಿಲ್ಲಿ ಓಡಾಡಿ ಕೊನೆಗೆ ಕುಡಿಯಲು ನೀರು ಬೇಕಾದಾಗ ನರ್ಗಿಸ್ (ಅರ್ಥಾತ್ ಲತಾ ಮಂಗೇಶ್ಕರ) ಭೈರವ ರಾಗದಲ್ಲಿ 'ಜಾಗೋ ಮೋಹನ ಪ್ಯಾರೆ' ಹಾಡು ಹಾಡುತ್ತಾ ಬೆಂದು ಬಸವಳಿದ ರಾಜನಿಗೆ ಕೊಡದಿಂದ ನೀರನ್ನು ಬಗ್ಗಿಸಿ ಕೊಡುತ್ತಾಳೆ ಮತ್ತು ರಾಜ ಅತ್ಯಂತ ಖುಷಿಯಿಂದ ಬೊಗಸೆ ಮಾಡಿ ನೀರು ಕುಡಿಯುತ್ತಿದ್ದಾಗ ಈ ಸಿನೆಮಾ ಮುಗಿಯುತ್ತದೆ, ಈ ಹಾಡು ಭೈರವದಲ್ಲಿತ್ತು.

ದೇವಾಧಿದೇವ ಶಿವಶಂಕರ ಕಾಲಭೈರವ, ಈ ರಾಗದ ಪಾಲಕ. ಹೀಗಾಗಿ ಹಿಂದುಸ್ತಾನಿ ಸಂಗೀತದಲ್ಲಿ ಭೈರವ ಅತ್ಯಂತ ಮಹತ್ವಪೂರ್ಣವಾಗಿದೆ. ಈ ಭೈರವ ಕುಟುಂಬ, ಅತಿ ವಿಶಾಲವಾಗಿದ್ದು ಹಳೆಯಕಾಲದ ಹಿಂದೂ ಅವಿಭಕ್ತ ಕುಟುಂಬದಂತೆ. ಅದಕ್ಕೆ ಆಪ್ತೇಷ್ಟರೂ ಕೂಡ ತುಂಬಾ. ಭೈರವ ರಾಗದ ಮನೆಯೆಂದರೆ ತುಂಬಿ ತುಳುಕುವ ಸಮೃದ್ಧ ಮನೆ. ಸೂರ್ಯೋದಯಕ್ಕೆ ಸಂಬಂಧಿಸಿರುವುದರಿಂದ ಭೈರವ ಅಥವಾ ಕುಟುಂಬದ ರಾಗ ಹಾಡದ ಗಾಯಕನಿಲ್ಲ, ಬಾರಿಸದ ವಾದಕನಿಲ್ಲ.

ಕಳೆದ 53 ವರ್ಷಗಳಿಂದ ಕರ್ನಾಟಕದ ಕುಂದಗೋಳಿನ ರಾಮಭಾವು ಕುಂದಗೋಳಕರ ಊರ್ಫ ಸವಾಯಿ ಗಂಧರ್ವರ ಉತ್ಸವ ಹುಬ್ಬಳ್ಳಿಯ ಸಮೀಪದ ಕುಂದಗೋಳದಲ್ಲಿ ಮತ್ತು ಪುಣೆಯಲ್ಲಿ ಎಡೆಬಿಡದೆ ನಡೆಸಿಕೊಂಡು ಬಂದವರೆಂದರೆ ಹುಬ್ಬಳ್ಳಿಯ ಡಾ. ಗಂಗೂಬಾಯಿ ಹಾನಗಲ್ಲ ಮತ್ತು ಪುಣೆಯ ಪಂ. ಭೀಮಸೇನ ಜೋಶಿ, ಸವಾಯಿ ಗಂಧರ್ವರ ಶಿಷ್ಯೋತ್ತಮರು. ಈ ಎರಡೂ ಉತ್ಸವಗಳಲ್ಲಿ 25-30 ಹೊಸ-ಹಳಬ ಗಾಯಕ-ವಾದಕರು ತಮ್ಮ ತಮ್ಮ ಕಲೆಯನ್ನು ಅದ್ಭುತವಾಗಿ ಪ್ರದರ್ಶಿಸುತ್ತಿದ್ದರು. ಪುಣೆಯ ಎರಡೂ ರಾತ್ರಿಗಳ ಮಹೋತ್ಸವ ಭೈರವದ ಒಂದು ಪ್ರಕಾರದಲ್ಲಿ ಅಥವಾ ತೋಡಿಯಲ್ಲಿ ಮುಗಿಯುತ್ತಿತ್ತು. ನಾನು ಪುಣೆಯ ಸವಾಯಿ ಗಂಧರ್ವದಲ್ಲಿ 1966, 1976ರಿಂದ 1979 ಮುಂದೆ 1988 ಮತ್ತು 2002ರಲ್ಲಿ ಪ್ರೇಕ್ಷಕನಾಗಿ ಪಾಲುಗೊಂಡಿದ್ದು ಉಂಟು. ಇವುಗಳಲ್ಲಿ 1966ರಲ್ಲಿ ಜಿತೇಂದ್ರ ಅಭಿಷೇಕಿ ಹಾಡಿದ್ದ 'ನಟ್‌ಭೈರವ್' ಇನ್ನೂ ನೆನಪಿನಲ್ಲಿದೆ. ಅವರ ವಿಲಂಬಿತ ಏಕತಾಳದಲ್ಲಿಯ 'ಜಿಯರಾಽ ಮಾನತ ನಾಹಿಂ' ಈ ಬಂದಿಶ್ ಹಾಗೂ ಧೃತಗತಿಯ ತ್ರಿತಾಳದಲ್ಲಿ ಕಟ್ಟಿದ 'ಜಬತಕ ಸೂರಜ - ಚಂದಾ ಫಿರೆ'ಯನ್ನು ನಾನೆಂದಿಗೂ ಮರೆಯಲಾರೆ. ಜಿತೇಂದ್ರ ಅಭಿಷೇಕಿ ಅವರು ಕುಮಾರ ಗಂಧರ್ವರಂತೆ ಸದಾ-ಸರ್ವದಾ ಏನಾದರೂ ಹೊಸತನ್ನು ಪ್ರೇಕ್ಷಕರಿಗೆ ಕೇಳಿಸುವ ಕುತೂಹಲವನ್ನು ಇಟ್ಟುಕೊಂಡವರು. ಹೊಸತು ಅಂದರೆ ಅಪ್ರಚಲಿತ ರಾಗಗಳನ್ನು ತಿದ್ದಿ ತಿದ್ದಿ ವೇದಿಕೆಯ ಮೇಲೆ ರಸಿಕರಿಗೆ ಹಾಡಿ ತೋರಿಸುವ ಛಲ ಇಟ್ಟು ಕೊಂಡವರು. ಕುಮಾರ ಗಂಧರ್ವ ಅಥವಾ ಪಂಡಿತ್ ಭೀಮಸೇನ ಜೋಶಿಯವರಂತಹ ಉತ್ತಮ ಶಾರೀರವಿರದಿದ್ದರೂ ಜಿತೇಂದ್ರರು ಗಂಟೆಗಟ್ಟಲೆ ಸಾಧನೆಯನ್ನು ಮಾಡಿ ತಮ್ಮ ಸಾಧಾರಣ ಗಂಟಲಿನಲ್ಲಿ ಅಸಾಧರಣತ್ವವನ್ನು ಇಳಿಸಿಕೊಂಡಿದ್ದರು. ಅವರ ಪ್ರತಿಯೊಂದು ಮೈಫಲ್ಲನ್ನು ಕೇಳಿ ಖುಷಿ ಪಟ್ಟಿದ್ದೇನೆ.

ಅವರಿಂದ ಭೈರವದ್ದೇ ಮೂರು ಪ್ರಕಾರಗಳನ್ನು ಪುಣೆಯ ಸವಾಯಿಗಂಧರ್ವದಲ್ಲಿ ಕೇಳಿದ್ದೇನೆ. ಇವುಗಳಲ್ಲಿ ಭೈರವದಲ್ಲಿಯ 'ಆನಂದಭೈರವ್' (ಹೇ ಮನ ಮೂರಖ ಜಾನ – ತ್ರಿತಾಳ), ಶಿವಮತ್ ಭೈರವ್ (ಡಾಲಡಾಲ ಪಾತ–ಪಾತ)

ಏಕತಾಳ ಹಾಗೂ ಧ್ರುತ್‌ದಲ್ಲಿ ಇರಾಣ ದೇಶದಿಂದ ಎರವಲು ಪಡೆದ ಇಂಪಾದ ಭೈರವದ ಒಂದು ಹೊಸ ಆವಿಷ್ಕಾರ 'ಝಿಲಾಫ್' ರಾಗವನ್ನು ಅರವಿಂದ ಪಾರೀಖರು 1994ರಲ್ಲಿ ಕರ್ನಾಟಕ ಸಂಘದಲ್ಲಿ ನುಡಿಸಿದ್ದು ಇನ್ನೂ ನೆನಪಿನಲ್ಲಿದೆ.

ಕರ್ನಾಟಕ ಸಂಗೀತದಲ್ಲಿ ನಮ್ಮ ಸುಬ್ಬರಾಯರು ಭೈರವವೆಂಬ ಪ್ರಕಾರವಿಲ್ಲ ಎಂದು ರಾಗನಿಧಿಯಲ್ಲಿ ಬರೆದಿದ್ದರೂ, ಇದೆ ಎಂಬುದಕ್ಕೆ ಕಾರಣವಿದೆ. ಇದು ಅತ್ಯಂತ ಪ್ರಾಚೀನ ರಾಗವೆಂದ ಮೇಲೆ ಇರಲೇ ಬೇಕಲ್ಲವೇ? ಹೆಸರು ಬೇರೆ ಇರುವ ಶಕ್ಯತೆ ಇದೆ. ಭೈರವ ರಾಗ 17ನೆಯ ಮೇಳಕರ್ತಜನ್ಯ ರಾಗವಿದ್ದು ಅವರೋಹದಲ್ಲಿ ನಿಷಾಧದ ಪ್ರಯೋಗವಿಲ್ಲ. ಹೀಗಾಗಿ ಹಿಂದುಸ್ತಾನಿ ಭೈರವಕ್ಕಿಂತ ಬೇರೆ ಇದೆ. ಹಿಂದುಸ್ತಾನಿ ಭೈರವದ ಹತ್ತಿರದ ಕರ್ನಾಟಕ ಸಂಬಂಧಿಗಳೆಂದರೆ 15ನೆಯ ಮೇಳಕರ್ತ 'ಮಾಯಾಮಾಳವಗೌಳ'. ಈ ಭೈರವ ಕುಟುಂಬದ ಪ್ರಮುಖರೆಂದರೆ 'ಕಾಲಿಂಗಡಾ', 'ರಾಮಕಲಿ' ಮತ್ತು 'ಬಂಗಾಲ ಭೈರವ್'. ಬಂಗಾಲ ಅಥವಾ ವಂಗಪ್ರದೇಶದ ಹೆಸರು ಹೊತ್ತ ಬಂಗಾಲಭೈರವವನ್ನು ನಿಜಕ್ಕೂ ಈವತ್ತಿನ ತನಕ ನಾನು ಕೇಳಿಲ್ಲ. ಕಲಿಂಗ ದೇಶದ ಹೆಸರು ಹೊತ್ತ ಕಾಲಿಂಗಡಾ ತುಂಬಾ ಪ್ರಚಲಿತವಾಗಿದ್ದು ಕನ್ನಡ–ಮರಾಠಿ ರಂಗಗೀತೆಗಳಲ್ಲಿಯೂ, ಭಜನೆಗಳಲ್ಲಿಯೂ ಇದನ್ನು ಧಾರಾಳವಾಗಿ ಉಪಯೋಗಿಸಿದ್ದಾರೆ. ಭೈರವ ಸ್ವಲ್ಪ ಗಂಭೀರ ಪ್ರಕಾರದ ರಾಗವಾಗಿದ್ದರೆ ಕಾಲಿಂಗಡಾ ಸ್ವಲ್ಪ ಚಂಚಲ ಪ್ರಕೃತಿಯದ್ದು. ಹೀಗಾಗಿ ಭೈರವದ್ದೆ ಸ್ವರಗಳಿದ್ದರೂ ರಿಷಭ ಮತ್ತು ಧೈವತದ ಆಂದೋಲನವಿಲ್ಲದ ಕಾರಣದಿಂದ ಇದನ್ನು ಪಾಪ, ಕ್ಷುದ್ರ ಪ್ರಕೃತಿಯ ರಾಗ ಎಂದು ಗಣಿಸುತ್ತಾರೆ. ಭೈರವದ ಹೊಸ ಹೊಸ ಆವಿಷ್ಕಾರಗಳನ್ನು ಈ ಆಂದೋಲನ ಪದ್ಧತಿಯಲ್ಲಿ ಹೆಚ್ಚು ಕಡಿಮೆ ಮಾಡಿ ಸಂಗೀತಜ್ಞರು ಪ್ರಯೋಗ ನಡೆಸುತ್ತಲೇ ಇರುತ್ತಾರೆ. ಕಾಲಿಂಗಡಾ ರಾಗ ಮಾಸ್ತರ ಕೃಷ್ಣರಾವ್ ಪುಲಂಬ್ರಿಕರರ ಪ್ರೀತಿಯ ರಾಗವಾಗಿತ್ತು. ಇದನ್ನು ಅವರ ಶಿಷ್ಯ ರಾಮ ಮರಾಠೆ ಬಹಳ ಚೆನ್ನಾಗಿ ಹಾಡಿದ್ದುದನ್ನು ನಾನು ಕೇಳಿದ್ದೇನೆ. ಅದು ಕೂಡ ಬಸಂತ್‌ರಾಗಕ್ಕೆ ಹೋಲುತ್ತಿದ್ದ ಪರಜ್‌ಕ್ಕೆ ಈ ಭೈರವ ರಾಗದ ಕಾಲಿಂಗಡಾ ಸೇರಿಸಿ 'ಪರಜ–ಕಾಲಿಂಗಡಾ' ಎಂಬ ರಾಗವನ್ನು ರಾಮ ಮರಾಠೆಯವರು ಚೆನ್ನಾಗಿ ಹಾಡುತ್ತಿದ್ದರು. ಮರಾಠಿ ನಾಟಕಗಳಲ್ಲಿಯೇ ಹೆಸರು ಮಾಡಿದ ಛೋಟಾ ಗಂಧರ್ವ ಮತ್ತು ರಾಮ ಮರಾಠೆ ಉಚ್ಚ ಕೋಟಿಯ ಗಾಯಕರಾಗಿದ್ದರೂ ಅವರಿಬ್ಬರಿಗೂ ರಂಗಗೀತೆ ಹಾಡುಗಾರರೆಂಬ ಉಪಾಧಿ ಸಿಕ್ಕಿದ್ದರಿಂದ ಶಾಸ್ತ್ರೀಯ ಸಂಗೀತ ಕೇಳುವವರಿಂದ ಅಷ್ಟು ಮನ್ನಣೆ ಸಿಗದೇ ಇದ್ದುದು ಒಂದು ವಿಷಾದದ ಮಾತು.

ಹೊಸದಾಗಿ ದೂರದರ್ಶನ ಮುಂಬಯಿಯಲ್ಲಿ ಪ್ರಾರಂಭವಾದಾಗ ಸುಹಾಸಿನಿ ಮುಳಗಾಂವಕರ ಎಂಬ ಯುವತಿ ಸಂಗೀತ ವಿಭಾಗದ ಮುಖ್ಯಸ್ಥರೆಂದು ಚಾರ್ಜ್ ವಹಿಸಿಕೊಂಡ ಕೂಡಲೇ, ಸಂಗೀತದ ಮೇಲೆ ಹೊಸ ಹೊಸ ಕಾರ್ಯಕ್ರಮಗಳನ್ನು

ಹಮ್ಮಿಕೊಂಡು ಅತ್ಯಂತ ಯಶಸ್ವಿ ರೀತಿಯಲ್ಲಿ ನೆರವೇರಿಸುತ್ತಿದ್ದರು. ಅವುಗಳಲ್ಲಿ 'ಪ್ರತಿಭಾ ಆಣಿ ಪ್ರತಿಮಾ' ಎಂಬ ಸಂದರ್ಶನದ ಕಾರ್ಯಕ್ರಮಗಳಲ್ಲಿ ಕುಮಾರ ಗಂಧರ್ವ, ಶೋಭಾ ಗುರ್ಟು, ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ, ಸುಧೀರ್ ಫಡಕೆ, ರಾಮ ಕದಮ್, ಇವರ ಸಂವಾದ ರವಿವಾರ ಮುಂಜಾನೆ ಬಿತ್ತರಿಸಲಾಗುತ್ತಿತ್ತು. ಇದರಲ್ಲಿ ರಾಮ ಕದಮ್ ಎಂಬ ಮರಾಠಿ ಸಂಗೀತ ದಿಗ್ದರ್ಶಕರ ಸಂದರ್ಶನ ನನ್ನ ಮೇಲೆ ತುಂಬಾ ಪ್ರಭಾವವನ್ನು ಬೀರಿತ್ತು. ಕಾರಣ ಇಷ್ಟೇ. ಕಾಲಿಂಗಡಾದಂತಹ ಶಾಸ್ತ್ರೀಯ ರಾಗವನ್ನು, ಲಾವಣಿಯಾಗಿ ಮಾರ್ಪಡಿಸಿದ ರೀತಿ, ಲಾವಣಿ 'ಸಾಂಗತ್ಯೆ ಐಕಾ' ಎಂಬ ಮರಾಠಿ ಚಲನಚಿತ್ರದ್ದು. ಹಾಡಿನ ಮುಖಡಾ 'ಬುಗಡಿ – ಮಾಝೀಽ ಸಾಂಡಲೀಗಽಽ ಜಾತಾ ಸಾತಾರ್‍ಯಾಲಾಽ'

'ಸಾಂಗತ್ಯೆ ಐಕಾ' ಚಿತ್ರದ ಚಿತ್ರೀಕರಣದ ಪ್ರಸಂಗ. ರಾಮಕದಮ್ ಮತ್ತು ಸಂಗೀತ ದಿಗ್ದರ್ಶಕ ವಸಂತ ಪವಾರ ಢೋಲಕ ಬಾರಿಸುವವನ ದಾರಿ ಕಾದು ಇಬ್ಬರೂ ಅವರ ಮನೆಗೆ ಟಾಂಗಾ ಮಾಡಿಕೊಂಡು (ಆಟೋ ಇನ್ನೂ ಬರುವುದರಲ್ಲಿತ್ತು) ಹೋಗಿ ನೋಡಿದರೆ ಏನು? ತಾಯಿ ತೀರಿಕೊಂಡ ಸನ್ನಿವೇಶ ಮನೆಯ ಹೆಣ್ಣುಮಕ್ಕಳೆಲ್ಲ 'ಗೊಳೊ' ಎಂದು ಅಳುತ್ತಿದ್ದಾಗ, ಅಂದರೆ ದುಃಖದ ರಾಗ ಎಳೆಯುತ್ತಿದ್ದಾಗ ಅವರಿಬ್ಬರಿಗೂ 'ಬುಗುಡೆ' ಹಾಡಿನ ಮೂಲ ಸಿಕ್ಕಿತಂತೆ! ರಾಮಕದಮ ಈ ಕತೆಯನ್ನು ಹೇಳಿ 'ಅರೇ ದ್ಯೇವಾಽ, ಮಾಝಿ ಆಽ ಯಿಽ ಗೇಲಿ ರೆಽ' ಎಂದು ಅಳುತ್ತಿದ್ದವರ ರಾಗವೇ ಕಾಲಿಂಗಡಾ ಇತ್ತು ಎಂದು ಹೇಳಿ ಪಕ್ಕದಲ್ಲಿದ್ದ ಹಾರ್ಮೋನಿಯಮ್‌ನ ಮೇಲೆ ಈ ಧುನ್ ನುಡಿಸಿ ಸ್ವತಃ ಹಾಡಿ, ಬಾರಿಸಿ, ಈ ಹಾಡಿನ ಪ್ರಾತ್ಯಕ್ಷಿಕೆಯನ್ನು ತೋರಿಸಿದ್ದರು. ಚಂಚಲ ಸ್ವಭಾವದ ಕಾಲಿಂಗಡಾದ ಜೀವ ಚಿಕ್ಕದು, ಅದಕ್ಕೆ ಭೈರವದ ಆಧಾರ ಬೇಕು. 'ಬೈಜು ಬಾವರಾ'ದಲ್ಲಿಯ 'ಮೋಹೇ ಭೂಲಗಯೇ ಸಾಂವರಿಯಾ' ಹಾಡು ಹಾಡಿದ್ದು ಲತಾ ಮಂಗೇಶಕರ, ಚಲನಚಿತ್ರದಲ್ಲಿ ಮೀನಾಕುಮಾರಿ. ರಾಮಕದಮರ ಸಂದರ್ಶನದ ಒಂದು ಮಾತೆಂದರೆ ಆರ್ತಸ್ವರವೇ ಕಾಲಿಂಗಡಾದ ಜೀವಾಳ. ಗಂಭೀರವಾದ ಭೈರವ ಕಾಲಿಂಗಡಾದಲ್ಲಿ ಆರ್ತಸ್ವರದ ಮಟ್ಟಿಗೆ ಏರುತ್ತದೆ. ಅದೇ ಭೈರವದ ಖುಷಿಯ ರೂಪವೆಂದರೆ ರಾಮಕಲಿ. ಫೈಯ್ಯಾಜ಼್ ಖಾನ ಸಾಹೇಬರ ಆರು ಮಿನಿಟಿನ ದೊಡ್ಡ 'ಉನ ಸಂಗಲಾಗೀ'ಯನ್ನು ಈಗಲೂ ಆಗ್ರಾ ಪರಂಪರೆಯವರು ಹಾಡುತ್ತಿರುತ್ತಾರೆ. ಕರ್ನಾಟಕ ಸಂಘದ ಕಾರ್ಯಕ್ರಮಗಳೆಲ್ಲ ಮುಂಜಾನೆ ಇದ್ದ ಕಾರಣದಿಂದ ಭೈರವದ ಅನೇಕ ಪ್ರಕಾರಗಳನ್ನು ನಾನು ಕೇಳಿದ್ದೇನೆ. ಅದರಲ್ಲಿ ಶಫೀ ಅಹಮ್ಮದ ಆಗ್ರಾವಾಲೆಯವರ ಹಾಗೂ ಫಯಾಜ಼್‌ಖಾನ ಸಾಹೇಬರ ಬೆಂಗಳೂರಿನ ಶಿಷ್ಯರಾದ ಪಂ. ರಾಮರಾವ್ ನಾಯಕರ ರಾಮಕಲಿ ಸ್ಮರಣೀಯವಾದವು. ಇಬ್ಬರೂ ಹಾಡಿದ ಬಂದಿಶ್ ಅದೇ, 'ಉನ ಸಂಗಲಾಗೀ' ಪಂ. ಭೀಮಸೇನ ಜೋಶಿಯವರ ಪ್ರೀತಿಯ ಮುಂಜಾನೆಯ ರಾಗಗಳೆಂದರೆ ತೋಡಿ, ಆಸಾವರಿ ತೋಡಿ, ಲಲಿತ ಹಾಗೂ ರಾಮಕಲಿ. ರಾಮಕಲಿಯಲ್ಲಿ ಅವರು ಹಾಡುವ ಕೃತಿ ಅಂದರೆ ವಿಲಂಬಿತದಲ್ಲಿ 'ದರಬಾರ ಧಾವೂ' ಏಕತಾಳದಲ್ಲಿ ಮತ್ತು ದ್ರುತ್ ನಡಿಗೆಯ ತ್ರಿತಾಳದಲ್ಲಿ 'ಸಗರೀ ರೈನಕೇ ಜಾಗೆ'. ಸವಾಯಿ ಗಂಧರ್ವ ಉತ್ಸವದ ಮುಕ್ತಾಯ ಜೋಶಿಯವರ ಹಾಡಿನಿಂದಲೇ ಆಗುತ್ತಿದ್ದ ಕಾರಣ ನಾನು ಅವರಿಂದ 3–4 ಸಲ ಎದುರಿಗೆ ಕುಳಿತು ರಾಮಕಲಿ ಕೇಳಿದ ಭಾಗ್ಯವಂತ.

ಜೋಶಿಯವರು ಪುಣೆಯಲ್ಲಿ ಭೈರವ ಹಾಡಿರುವುದನ್ನು ನಾನು ಕೇಳಿಲ್ಲ. ನನ್ನಲ್ಲಿ ಪಂ. ಜಯಸುಖಲಾಲ ಶಾಹ ಅವರು ಬರೆದ 500 ಪುಟದ 'ಭೈರವ ಕೆ ಪ್ರಕಾರ' ಪುಸ್ತಕವಿತ್ತು. ಅದರಲ್ಲಿ ಸಾಧಾರಣ ಭೈರವದ 30 ಪ್ರಕಾರಗಳನ್ನು ಕೊಟ್ಟಿದ್ದು, ಕೆಲವು ರಾಗಗಳು ಮತ್ತು ಕೃತಿಗಳು ಸ್ವರಚಿತವಾದವು. ನಾನೇನೂ ಗಾಯಕ/ವಾದಕನಲ್ಲದ ಕಾರಣದಿಂದ ಈ ಪುಸ್ತಕವನ್ನು ಭಾರತೀಯ ವಿದ್ಯಾಭವನದ ಗ್ರಂಥಾಲಯಕ್ಕೆ ಕೊಟ್ಟುಬಿಟ್ಟೆ. ಅದರಲ್ಲಿಯ 'ಶಿವಮತ್' ಭೈರವದಲ್ಲಿ ಆಗ್ರಾ ಪರಂಪರೆಯವರ ಒಂದು ಪಾರಂಪರಿಕ ಕೃತಿ 'ಡಾರಾ ಡಾರ ಪಾತ ಪಾತ ತೂಹೀ ಸಮಾಯೋ, ತೇರಾ ರಂಗ ತೂಹಿ ಬಹಾನೋ' ಎಂದು ಸಂಗೀತಕಾರ ಕವಿ ಈಶ್ವರನಲ್ಲಿ ನಿಸರ್ಗದ ಅಲೌಕಿಕ ವರ್ಣನೆ ಮಾಡಿದ್ದ ಕೃತಿಯೊಂದನ್ನು ಅಭಿಷೇಕಿ ಮತ್ತು ಅವರ ಗುರುಬಂಧು ಚಿಂತಾಮಣಿ ವ್ಯಾಸ ಬಹಳ ಚೆನ್ನಾಗಿ ಹಾಡುತ್ತಿದ್ದರು. ಕಿರಾನಾ ಪರಂಪರೆಯವರ ಜೋಶಿಯವರ ಇಷ್ಟದ ರಾಗ ರಾಮಕಲಿ ಇದ್ದರೆ ಹಿರಿಯಕ್ಕ ಗಂಗೂಬಾಯಿ ಹಾನಗಲ್ಲರದು ಪ್ರಭಾತ ಭೈರವ್. ಪೂರ್ವಾಂಗದಲ್ಲಿ ಲಲಿತದ ಲಾಲಿತ್ಯವಿರುವ ರಾಗವೆಂದರೆ ಪ್ರಭಾತ ಭೈರವ್. ಬೈರಾಗಿ–ಭೈರವ್ ರಾಗವನ್ನು ಪಂ. ಬಸವರಾಜ ರಾಜಗುರು ಮತ್ತು ಅವರ ಶಿಷ್ಯರಾದ ಗಣಪತಿ ಭಟ್ಟ ಹಾಗೂ ಬೆಂಗಳೂರಿನ ಪರಮೇಶ್ವರ ಹೆಗಡೆಯವರಿಂದ ಹಲವಾರು ಸಲ ಕೇಳಿದ್ದೇನೆ. ಸಂಗೀತದ ಜೀವನವನ್ನು ಅರ್ಧದಲ್ಲಿಯೇ ಬಿಟ್ಟು ತೀರಿಕೊಂಡ ಸರಲಾ ಭಿಡೆಯವರ ಬೈರಾಗಿ ಭೈರವ್ ರಾಗದಲ್ಲಿಯ ಗಣಪತಿಯ ವಂದನೆಯ ಒಂದು ಕೃತಿ ಕರ್ನಾಟಕ ಸಂಘದಲ್ಲಿಯ ಮೊದಲಿನ ಕಲಾಭಾರತಿಯ ಕಾರ್ಯಕ್ರಮದಲ್ಲಿ ಹಾಡಿದ್ದು ನೆನಪಿದೆ. ಇದನ್ನೇ ಮುಂದೆ ಮ್ಯಾಗ್ನಾಸೌಂಡ್‌ನವರು ಧ್ವನಿಸುರುಳಿ ಮಾಡಿದ್ದರು. ಈ ಬೈರಾಗಿ ಭೈರವದ ಭಜನೆಯ ರೂಪವೆಂದರೆ ಖ್ಯಾತ ಮರಾಠೀ ಸಂಗೀತ ದಿಗ್ದರ್ಶಕ ಸುಧೀರ್ ಹಾಗೂ ಲಲಿತಾ ಫಡಕೆಯವರ ಸಾಕುಮಗನಾದ ಶ್ರೀಧರ್ ಫಡಕೆ ಅವರು ಹಾಡುತ್ತಿದ್ದ 'ಓಂಕಾರ ಸ್ವರೂಪಾऽ ಸದ್ಗುರು ಸಮರ್ಥಾऽ ತುಜ ನಮೋ' ಹಾಡು.

ಬೈರಾಗಿ ರಾಗ ನಮ್ಮ ಕಲಾಭಾರತಿಯ ಪೋಷಕರಲ್ಲಿ ಒಬ್ಬರಾದ ಡಾ. ಓಸ್ವಾಲರ ಅತ್ಯಂತ ಇಷ್ಟವಾದ ರಾಗ. ಹೀಗಾಗಿ ನಮಗೆ ಬೇಕಾದಾಗ ಅಂದರೆ ಅವರ ದತ್ತಿ ಬೇಕಾದಾಗ ಹಾಡುವವರಿಂದ ಬೈರಾಗಿ ಹಾಡಿಸಿ ಆ ಆ ವಾರದ ಆರ್ಥಿಕ ನೆರವನ್ನು ನಾವು ಪಡೆದದ್ದು ಎಷ್ಟೋ ಸಲ!

*****

5.2

ಭೈರವ್‌ದ ಪ್ರಕಾರಗಳು – 2

ಅಹಿರಭೈರವ: ಹಿಂದುಸ್ತಾನಿ ಸಂಗೀತದ ಎಲ್ಲ ಶ್ರೇಷ್ಠ ಗಾಯಕ/ವಾದಕರೂ ಅಹಿರಭೈರವ್ ರಾಗದಲ್ಲಿ ಧ್ವನಿಸುರುಳಿಗಳನ್ನು ನೀಡಿದ್ದಾರೆ. ವೀಣಾ ಸಹಸ್ರಬುದ್ಧೆ, ಅಶ್ವಿನಿ ಭಿಡೆ ದೇಶಪಾಂಡೆ (ಕರ್ನಾಟಕದ ಹುಲಿ ಗಂಗಾಧರ ದೇಶಪಾಂಡೆಯವರ ಮರಿಸೊಸೆ), ಪದ್ಮಾ ತಳವಲಕರ್, ಪಂ. ಭೀಮಸೇನ ಜೋಶಿ, ಜಸರಾಜ, ಕಿಶೋರಿ ಆಮೋಣಕರ್, ಇತ್ಯಾದಿಯವರ ಹಾಡುಗಾರಿಕೆಯ ಧ್ವನಿಸುರುಳಿಗಳಿದ್ದು ವಾದಕರಲ್ಲಿ ರವಿಶಂಕರ, ಅಲಿ ಅಕಬರ್, ಹರಿಪ್ರಸಾದ, ಶಿವಕುಮಾರ ಶರ್ಮ, ಅಮಜಾದ ಅಲಿ ಮತ್ತು ಅನೇಕ ವಾದಕ–ಗಾಯಕರ ಧ್ವನಿಸುರುಳಿಗಳು ಅಹಿರಭೈರವ ರಾಗದಲ್ಲಿ ವಿಪುಲವಾಗಿ ಸಿಗುತ್ತವೆ. ಭೈರವ ಕುಟುಂಬದಲ್ಲಿ ಈ ಅಹಿರಭೈರವ್ ರಾಗವು ಅಚಲಸ್ಥಾನವನ್ನು ಪಡೆದಿದೆ. ಈ ಅಹಿರಭೈರವ್ ರಾಗಕ್ಕೆ ಮೊದಲು 'ಅಹಿರಿ' ಎಂದು ಕರೆಯುವ ರೂಢಿಯಿತ್ತು. ಚಲನಚಿತ್ರ ಸಂಗೀತದಲ್ಲಿ ಈ ಅಹಿರಭೈರವ್ ರಾಗವನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಉದಾಹರಣೆಗೆ ಅಮಿಯಾ ಚಕ್ರವರ್ತಿಯವರ 'ದೇಖ್ ಕಬೀರಾ ರೋಯಾऽ' ಎಂಬ ಆಪೆರಾ ಸ್ಟೈಲಿನ ಮೊಟ್ಟಮೊದಲಿನ ಚಲನಚಿತ್ರದಲ್ಲಿ, 'ಮೇರೆ ಬೀನಾऽ ತುಮ ಬೀನ ರೋಯೇ, ಸಜನಾ, ಸಜನಾऽ, ಸಜನಾऽ' ಎಂಬ ಹಾಡು ತುಂಬಾ ಜನಪ್ರಿಯವಾಗಿತ್ತು. ಮತ್ತೊಂದು ಹಾಡು 'ಮೇರಿ ಸುರತ್ ತೇರಿ ಆಂಖೆ' ಪಿಕ್ಚರಿನದು, ಮನ್ನಾಡೇ ಹಾಡಿದ್ದು 'ಪೂಛೋऽನಾ ಕೈಸೆ ಮೈನೇ ರೈನऽ ಬಿತಾऽ ಯೇऽ' ಎಂಬ ಹಾಡು ವ್ಯಾಕುಲ ಮನಸ್ಸಿನ ವಿರಹ ಭಾವನೆಯನ್ನು ಹುಟ್ಟಿಸುತ್ತದೆ ಎಂಬ ಮಾತು ಖಂಡಿತ. ರಾಮ ಮರಾಠೆ ಎಂಬ ಮರಾಠಿ ಗಾಯಕ ನಟ ಈ ರಾಗದಲ್ಲಿಯ 'ಜಯಶಂಕರಾ, ಗಂಗಾಧರಾऽ' ಎಂಬ ರಂಗಗೀತೆಯನ್ನು ಬಹಳ ಚೆನ್ನಾಗಿ ಹಾಡುತ್ತಿದ್ದರು. ಇದೇ ರಾಗದಲ್ಲಿ ಒಂದು 78 ಆರ್‌ಪಿಎಮ್‌ನಲ್ಲಿಯ ಬಸವರಾಜ ರಾಜಗುರು ಹಾಡಿದ 'ಅಲಬೇಲಾ, ಸಜನ, ಆಯೋರೆ' ಮಧ್ಯದಲ್ಲಿಯ ಫಾಸ್ ಅತ್ಯಂತ ಉತ್ಕಟತೆಯ ಪರಿಣಾಮವನ್ನು ಸಾಧಿಸುತ್ತದೆ. 'ಸೈಲೆನ್ಸ್ ಈಸ್ ಮೋರ್ ಎಲೋಕ್ವೆಂಟ್' ಎನ್ನುವ ಹಾಗೆ. ಇತ್ತೀಚಿನ ಹಿಂದಿ ಸಿನೇಮಾ 'ಹಮ್ ದಿಲ್ ದೇ ಚುಕೇ ಸನಮ್' ಚಿತ್ರಪಟದಲ್ಲಿ ವಿಕ್ರಮ ಗೋಖಲೆ ಎಂಬ ನಟನಿಗೆ ಸಾರಂಗೀವಾದಕ ಸುಲ್ತಾನ ತನ್ನ ಧ್ವನಿಯನ್ನು ಎರವಲು ಕೊಟ್ಟು, ಬಸವರಾಜರೇ ಹಾಡಿದ ಕೃತಿ 'ಅಲಬೇಲಾ ಸಜನ ಆಯೋರೆ'ಯನ್ನು ಅತ್ಯಂತ ಉತ್ಕಟತೆಯಿಂದ ಹಾಡಿದ್ದನ್ನು ತಾವೆಲ್ಲರೂ ಕೇಳಿರಬಹುದು.

ಅಹಿರಿ ಅಥವಾ ಅಹಿರ್ ಎಂದರೆ ಗವಳಿ – ದನಕಾಯುವವ ಎಂಬ ಅರ್ಥ. ಇದೊಂದು ಜಾತಿವಾಚಕರಾಗವಿದ್ದು, ದನಕಾಯುವ ಪಡೆಯ ಲೋಕಸಂಗೀತದಿಂದ ಬಂದಿರಬೇಕು. ಹಿಂದೆ ಪಹಾಡಿ ರಾಗದ ಬಗ್ಗೆ ಬರೆಯುವಾಗ ಇದು ಪರ್ವತ ರಾಶಿಗಳ ಬುಡದಲ್ಲಿಯ ಸಂಗೀತ ಎಂದು ಬರೆದಿದ್ದೆ. ಅಂತೆಯೇ ರಾಜಸ್ಥಾನದಲ್ಲಿಯ 'ಕೇಸರಿಯಾ ಮಾಂಡ್' ಕೂಡ ರಾಜಸ್ಥಾನದ ಮರಳಿನ ರಾಗ. ಅಹಿರಭೈರವ್ ಪೂರ್ವಾಂಗದಲ್ಲಿ ಭೈರವ್ ಹಾಗೂ ಉತ್ತರಾಂಗದಲ್ಲಿ ಕಾಫಿ ರಾಗದಂತಿದೆ ಎಂದು 'ಸಂಗೀತ ಕಲ್ಪದ್ರುಮ' ಎಂಬ ಪುಸ್ತಕದಲ್ಲಿ ವಿಸ್ತಾರವಾಗಿ ಕೊಟ್ಟಿದ್ದಾರೆ. ಈ ಅಹಿರಭೈರವದಲ್ಲಿಯೂ ಎರಡು ಪ್ರಕಾರಗಳು ಇವೆ. ಒಂದೆಂದರೆ ಆರೋಹದಲ್ಲಿ ನಿಷಾಧ ವರ್ಜ್ಯವಾಗಿದ್ದು ಷಾಡವ ಸಂಪೂರ್ಣವಾಗಿದ್ದರೆ, ಮತ್ತೊಂದರಲ್ಲಿ ಎಲ್ಲಾ ಏಳೂ ಸ್ವರಗಳಿದ್ದು ರಾಗವು, ಆರೋಹ ಮತ್ತು ಅವರೋಹಗಳಲ್ಲಿ ಸಂಪೂರ್ಣವಾಗಿದೆ.

ಕಳೆದ ಹದಿನೈದು ವರ್ಷಗಳಲ್ಲಿ ಗಾನ ಸರಸ್ವತಿ ಕಿಶೋರಿ ಅಮೋಣಕರ್ ಇವರು ಹಾಗೂ ನಂತರ ಬಸವರಾಜರು ತಮ್ಮ ತಮ್ಮ ಕಚೇರಿಗಳನ್ನು ಮುಂಜಾನೆ ಆರೂವರೆಗೆ ಪ್ರಾರಂಭಿಸಿ ಹನ್ನೊಂದು ಹೊಡೆಯುವವರೆಗೆ ರಂಜಿಸಿದ್ದು ಉಂಟು. ಇದು ಮುಂಬಯಿಯಲ್ಲಿ ಮಾತ್ರವಲ್ಲದೆ, ಬೆಂಗಳೂರಿನಲ್ಲಿ ಕೂಡ ಇಬ್ಬರೂ ಬೇರೆ ಬೇರೆಯಾಗಿ ಹಾಡಿ ಅಲ್ಲಿಯ ಹಿಂದುಸ್ತಾನೀ ಸಂಗೀತದ ರಸಿಕರನ್ನು ತಣಿಸಿದ್ದು ಉಂಟು. ಕಿಶೋರಿ ಕರ್ನಾಟಕ ಸಂಘದ ಪಕ್ಕದಲ್ಲಿನ ದಾದರ, ಮಾತುಂಗಾದಲ್ಲಿ ಮುಂಜಾನೆ ಹಾಡಿದ್ದ ಆಹಿರ್‌ಭೈರವ್ ಕಿವಿಯಲ್ಲಿ ಇನ್ನೂ ಗುಂಯ್ಯಗುಟ್ಟುತ್ತಾ ಇದೆ. ಅಹಹಾ! ಅದೊಂದು ಅವಿಸ್ಮರಣೀಯ ಕಚೇರಿ. ಮತ್ತೊಮ್ಮೆ ಚೆಂಬೂರಿನಲ್ಲಿ ಅಲ್ಲಾದಿಯಾಖಾನರ ಮಹೋತ್ಸವದಲ್ಲಿ ಮುಂಜಾನೆ ಹಾಡಿದ 'ಕಬೀರಭೈರವ', ಸಂತ ಕಬೀರನ ಹೆಸರನ್ನು ಹೊತ್ತ ರಾಗ ಇನ್ನೂ ಸ್ಮರಣೆಯಲ್ಲಿದೆ. ಈ ಕಬೀರಭೈರವವನ್ನು ಕಿಶೋರಿಯನ್ನು ಬಿಟ್ಟರೆ ಇನ್ನು ಯಾವ ಗಾಯಕರೂ ಹಾಡಿದುದನ್ನು ನಾನು ಕೇಳಿಲ್ಲ. ಕಿಶೋರಿ ಹಾಡಿದ್ದು ಗ್ವಾಲಿಯರ ಪರಂಪರೆಯ ವಿನಾಯಕರಾವ ಪಟವರ್ಧನರು ತಮ್ಮ ಪುಸ್ತಕದಲ್ಲಿ ಕಬೀರಭೈರವದ ಬಗ್ಗೆ ಬರೆಯುವಾಗ ಈ ರಾಗದಲ್ಲಿ ಭೈರವ, ಕಾಲಿಂಗಡಾ ಹಾಗೂ ರಾತ್ರಿಯ ಮಾಲಕೌಂಸ ರಾಗದ ಛಾಯೆ ಮತ್ತು ಕೊನೆಗೆ ಜೋಗಿಯಾ ರಾಗದ ಎಫೆಕ್ಟ್ ಇದೆ ಎಂದು ಬರೆದಿಟ್ಟಿದ್ದಾರೆ. ಕಿಶೋರಿ ಆಮೋಣಕರ ಇವೆಲ್ಲ ಛಾಯೆಗಳನ್ನೂ ಅತ್ಯಂತ ಪರಿಣಾಮಕಾರಿಯಾಗಿ ಹಾಡಿದ್ದಾರೆ. ಅಂತೆಯೇ ದಾದರ-ಮಾತುಂಗಾದಲ್ಲಿ ಎರಡು ಗಂಟೆ ಹಾಡಿದ್ದು ರಾಗ ಅಹಿರಭೈರವವಾದರೂ, ಇದೇ ರಾಗದಲ್ಲಿ ಸೂಕ್ಷ್ಮವಾಗಿ ಅತ್ಯಂತ ಚಾಣಾಕ್ಷ ರೀತಿಯಲ್ಲಿ ಹೊತ್ತು ಏರಿದ್ದನ್ನೂ ಬೆಳಗಿನ ಬೇರೆ ಬೇರೆ ರಾಗಗಳ ಮಿಶ್ರಣ ಮಾಡಿ ಸಹಜತೆಯಿಂದ ಹಾಡಿದರು.

ಶಿವಮತ ಭೈರವ್: ಜಿತೇಂದ್ರ ಅಭಿಷೇಕಿ, ಚಿಂತಾಮಣಿ ವ್ಯಾಸ, ಕುಮಾರ ಗಂಧರ್ವ (ಧ್ವನಿಸುರಳಿ), ಹಾಗೂ ಮಲ್ಲಿಕಾರ್ಜುನ ಮನ್ಸೂರರ ಕಚೇರಿಯಲ್ಲಿ ಈ ರಾಗವನ್ನು ಕೇಳಿದ್ದೇನೆ. ಇವುಗಳಲ್ಲಿ ಯಾವುದು ಸುಂದರವಾಗಿತ್ತು ಎಂದು ಕೇಳಿದರೆ ಉತ್ತರಿಸುವುದು ಅತ್ಯಂತ ಕಷ್ಟ. ಇವೆಲ್ಲವು ಗುಲಾಬಿಯ ಹೂವುಗಳಂತೆ, ಒಂದು ಕೆಂಪು, ಮತ್ತೊಂದು ಹಳದಿ, ಮಗದೊಂದು ಗುಲಾಬಿ. ಎಲ್ಲವೂ ಉಚ್ಚಕೋಟಿಯವು. ಕುಮಾರ ಗಂಧರ್ವ

ಹಾಗೂ ಮನ್ಸೂರರ ಧ್ವನಿಸುರುಳಿಗಳು ಈ ರಾಗದಲ್ಲಿವೆ ಮತ್ತು ಅವು ಅತ್ಯಂತ ಸುಮಧುರವಾಗಿವೆ. ಜಿತೇಂದ್ರ ಅಭಿಷೇಕಿಯವರ ನಟ್ ಭೈರವ್‌ದ ಬಗ್ಗೆ ನಾನು ಈಗಾಗಲೇ ಇದರ ಮೊದಲಿನ ಲೇಖನದಲ್ಲಿ ಬರೆದಿದ್ದೇನೆ. ಈ ರಾಗಕ್ಕೆ ಶ್ರೀಭೈರವವೆಂದೂ, ಅಥವಾ ಶಿವಭೈರವವೆಂದೂ ಕರೆಯುವ ವಾಡಿಕೆ ಇದೆ. ಅವರೋಹದಲ್ಲಿಯ ಕೋಮಲ ಗಾಂಧಾರದ ಮೂಲಕ ತೋಡಿಯ ಛಾಯೆ ಬರುವ ಶಕ್ಯತೆ ಇದೆ.

ಭವಮತ ಭೈರವ್, ಬಿಹಾಡಭೈರವ್: ಈ ಎರಡೂ ಭೈರವ್ ಪ್ರಕಾರದ ರಾಗಗಳನ್ನೂ ಒಂದೇ ಗುಂಪಿನಲ್ಲಿ ಸೇರಿಸುವ ಕಾರಣವೆಂದರೆ, ಇವೆರಡೂ ಕುಮಾರಗಂಧರ್ವರು ರಚಿಸಿದವು. ಅವರ ಮತ್ತೊಂದು ಮುಂಜಾನೆಯ ರಾಗವೆಂದರೆ ಸಹೇಲಿ ತೋಡಿ. ಮುಂಜಾನೆಯ ಪಾರಂಪರಿಕ ರಾಗಗಳಲ್ಲಿ ಮತ್ತೊಂದು ಅವರ ಮುದ್ದಿನ ರಾಗವೆಂದರೆ ಭಟಿಯಾರ್. ಭವಮತಭೈರವದಲ್ಲಿ ಆರೋಹದಲ್ಲಿ ಭೈರವವನ್ನು ಇಟ್ಟು ಅವರೋಹದಲ್ಲಿ ಅವರು ಭಟಿಯಾರ್ ರಾಗವನ್ನು ಚಾಣಾಕ್ಷತೆಯಿಂದ ಉಪಯೋಗಿಸಿದ್ದಂತೆ ಕಾಣಿಸುತ್ತದೆ. ಮಾಳವಾ ಪ್ರದೇಶದ ಲೋಕ ಸಂಗೀತದಲ್ಲಿಯ ರಾಗಗಳನ್ನೂ ಹುಡುಕಿ, ಅವುಗಳ ಪರಿಷ್ಕರಣೆ ಮಾಡಿ, ಬಂದಿಶ್‌ಗಳನ್ನೂ ಸ್ವರಬದ್ಧಮಾಡಿ, ಪ್ರತಿಯೊಂದಕ್ಕೆ ತಾಳವನ್ನು ಅನುಸರಿಸಿ 'ಅನೂಪರಾಗ ವಿಲಾಸ'ವೆಂಬ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಇವೆಲ್ಲವನ್ನೂ ಅವರು 'ಧುನ್ ಉಗಮ'ರಾಗಗಳೆಂದು ವರ್ಗೀಕರಿಸಿದ್ದಾರೆ. ಉದಾಹರಣೆಗೆ, ಸಹೇಲಿ ತೋಡಿ, ಬಿಹಾಡಭೈರವ್, ಭವಮತಭೈರವ್, ಮಾಲವತಿ, ಸೋಹನಿಭಟಿಯಾರ್, ಇತ್ಯಾದಿ. ಅವರ ಲೆಕ್ಕಕ್ಕೆ ಪಾರಂಪರಿಕ ರಾಗಗಳೆಂದರೆ ಕಲ್ಯಾಣ್ (ಯಮನ್‌ಕಲ್ಯಾಣ್), ಭೈರವ್, ಕೇದಾರ್, ವಗೈರೆ ವಗೈರೆ. ಬಿಹಾಡಭೈರವವನ್ನು ಅವರು ರಚಿಸಿದ್ದು ತಮ್ಮ ಬಾಲ್ಯದ ಗೆಳೆಯನನ್ನು ನೆನೆಸಿಕೊಂಡು ಮಧ್ಯಪ್ರದೇಶದ ಬೀಹ ನದಿಯ ತೀರದಲ್ಲಿ. ಭವಮತ ಭೈರವ ವಿರಹವ್ಯಥೆಯನ್ನು ಚೆನ್ನಾಗಿ ಬಿಂಬಿಸುತ್ತದೆ. 'ಬಿದೇಸ್ ಗಯೋ ತೂ ಪತಿಯಾಂ ನಹೀ ಭೇಜೋ ... ' ಎಂಬ ಕೃತಿ ಮಧ್ಯಲಯ ತ್ರಿತಾಳದಲ್ಲಿದ್ದು, ಇದರಲ್ಲಿ ಎರಡೂ ಮಧ್ಯಮಗಳಿವೆ.

2005 ಏಪ್ರಿಲ್ ತಿಂಗಳಿನಲ್ಲಿ ಮಹಾರಾಷ್ಟ್ರದ ರಾಜ್ಯಪಾಲರಾದ ಎಸ್.ಎಂ. ಕೃಷ್ಣ ಅವರು ಇಲ್ಲಿಯ ಅತ್ಯಂತ ರಮಣೀಯವಾದ ರಾಜಭವನದಲ್ಲಿ ಹಿರಿಯಕ್ಕ ಗಂಗೂಬಾಯಿ ಹಾನಗಲ್ಲ ಅವರ ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಹತ್ತು ವರ್ಷಗಳ ಮೊದಲು ಕರ್ನಾಟಕ ಸಂಘದಲ್ಲಿ ಗಂಗೂಬಾಯಿಯವರ 83ನೆಯ ಹುಟ್ಟುಹಬ್ಬವು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತ್ತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ವಿಜಯಾ ಮೆಹತಾ ಉಪಸ್ಥಿತರಾಗಿದ್ದರು. ಆ ಬಳಿಕ ರಾಜಭವನದಲ್ಲಿ ಪ್ರಶಸ್ತ ಮೈದಾನದ ಮೇಲೆ, ಮುಳುಗುತ್ತಿರುವ ಸೂರ್ಯನ ಸಾಕ್ಷಿಯಲ್ಲಿ ಟೈಮ್ಸ್ ಪತ್ರಿಕೆಯ ಅಂಬರೀಷ್ ಇಶ್ರ ಅಸ್ಖಲಿತ ಮರಾಠಿಯಲ್ಲಿ ವಿಲಾಸರಾವ್ ದೇಶಮುಖರ ಅಧ್ಯಕ್ಷತೆಯಲ್ಲಿ ಗಂಗೂಬಾಯಿಯವರ 93ನೇ ಹುಟ್ಟುಹಬ್ಬದ ಆನುಷಂಗಿಕವಾಗಿ ನಡೆಸಿಕೊಟ್ಟರು. ಇದೆಲ್ಲದರ ನೆನಪು ಬಂದ ಕಾರಣವೆಂದರೆ, ಗಂಗೂಬಾಯಿಯವರ ಪ್ರಭಾತಭೈರವವೆಂಬ ರಾಗ. ನಾನು ಗಂಗೂಬಾಯಿಯವರಿಂದ ಮುಂಜಾನೆಯ ತೋಡಿ, ಅಹಿರಭೈರವ್, ಕೋಮಲ ಋಷಭ ಅಸಾವರಿಯನ್ನು ಕೇಳಿದ್ದರೂ

ಪ್ರಭಾತಭೈರವವನ್ನು ಕೇಳಿದ್ದು ಕೇವಲ ಪುಣೆಯ ಸವಾಯಿಗಂಧರ್ವ ಮಹೋತ್ಸವದಲ್ಲಿ. 'ಅಬತೋ ಜೋಗ ಮನವಾ' – ಈ ಏಕತಾಳದಲ್ಲಿ ಕೃತಿ ಮತ್ತು ಧೃತಗತಿಯ ತ್ರಿತಾಳದಲ್ಲಿಯ 'ಹೇ ಹೋ, ಮತವಾಲೆ' ಈ ಕೃತಿಗಳನ್ನು 1970 ಮತ್ತು 1976ರಲ್ಲಿ ಕೇಳಿದ ನೆನಪು. ಲಲಿತ ರಾಗದ ಛಾಯೆಯಿರುವ ಪ್ರಭಾತಭೈರವವನ್ನು ಬೇರೆ ಯಾರೂ ಹಾಡಿದ್ದನ್ನು ಅಥವಾ ಬಾರಿಸಿದ್ದನ್ನು ನಾನು ಕೇಳಿಲ್ಲ ಮತ್ತು ಹೊಸ ಹೊಸ ಕಲಾವಿದರಿಂದ ಇನ್ನುಮುಂದೆ ಕೇಳುವ ಆಸೆಯನ್ನೂ ಇಟ್ಟುಕೊಂಡಿಲ್ಲ. ದುರದೃಷ್ಟವಶಾತ್, ಈ ರಾಗದ ಗಂಗೂಬಾಯಿಯವರ ಧ್ವನಿಸುರಳಿ ಇಲ್ಲವೆಂಬುದೇ ವ್ಯಥೆ. ಗಂಗೂಬಾಯಿಯವರು ಕೆಲಕಾಲದಿಂದ ಪುಣೆಯ ಸವಾಯಿ ಗಂಧರ್ವ ಉತ್ಸವದಲ್ಲಿ ಪಾಲುಗೊಂಡಿರಲಿಲ್ಲ. ಕುಂದಗೋಳದ ಸವಾಯಿ ಗಂಧರ್ವದಲ್ಲಿ ಕೂಡ ಭರತವಾಕ್ಯ ಹಾಡುತ್ತಿದ್ದುದೇ ಗಂಗೂಬಾಯಿ. ಕೊನೆಯ ವರ್ಷಗಳಲ್ಲಿ ಮಗಳು ಕೃಷ್ಣಾಬಾಯಿ ತೀರಿಕೊಂಡಿದ್ದರಿಂದ ಸಂಗೀತ ಸೇವೆಯನ್ನು ಸಲ್ಲಿಸಲಾಗಲಿಲ್ಲ ಎಂಬ ವ್ಯಥೆಯನ್ನು ಈ ಲೇಖಕನಲ್ಲಿ ತೋಡಿಕೊಂಡಿದ್ದರು. ಅನಾರೋಗ್ಯದ ಮೂಲಕ ಹಾಡುಗಾರಿಕೆ ಸಾಧ್ಯವಾಗಿರಲಿಲ್ಲವೆಂಬುದೂ ಅಷ್ಟೇ ಸತ್ಯ.

ಭೈರವ್ ಕುಟುಂಬವು ಒಂದು ಅತಿ ವಿಶಾಲ ಕುಟುಂಬವೆಂದು ಈ ಮೊದಲೇ ಹೇಳಿದ್ದೇನೆ. ಆನಂದಭೈರವ್, ಸೌರಾಷ್ಟ್ರಭೈರವ್, ಟಂಕಭೈರವ್, ಧುರಿಯಾ ಭೈರವ್, ಮಾಂಡಭೈರವ್, ಇವೆಲ್ಲಾ ಭೈರವ್‌ದ ವಿವಿಧ ಪ್ರಕಾರಗಳು. ಬೇಗಂ ಪರವೀನ ಸುಲ್ತಾನಾ ಮಂಗಲಭೈರವವನ್ನು ಚೆನ್ನಾಗಿ ಹಾಡುವ ಕಾಲವೊಂದಿತ್ತು. ಆನಂದಭೈರವದಲ್ಲಿ ಮಾಂಡ್ ಎಂಬ ಲೋಕಸಂಗೀತದ ಪ್ರಕಾರದ ಛಾಯೆ ಇರುವ ಕಾರಣದಿಂದ ಅದರ ಬಣ್ಣವೇ ಬೇರೆ.

ಜೋಡ ರಾಗಗಳಲ್ಲಿ ಭೈರವ್ ಬಹಾರ್ ಅಂದರೆ ಭೈರವ ಮತ್ತು ಬಹಾರ್ ರಾಗದ ಸಂಯುಕ್ತ ರಾಗ ತುಂಬಾ ಪ್ರಸಿದ್ಧವಾಗಿದೆ. ಇದನ್ನು ಹಾಡುವುದಕ್ಕೆ ಅತ್ಯಂತ ಸಮರ್ಥ ಹಾಡುಗಾರರೇ ಬೇಕು. ಪೂರ್ವಾಂಗದಲ್ಲಿ ಭೈರವದಂತೆ ಇದರ ಚಲನೆಯಿದ್ದರೆ, ಉತ್ತರಾಂಗದಲ್ಲಿ ಬಹಾರದ ನಡಿಗೆ ಇದೆ. ಮಾಲಕೌಂಸ್ ಮತ್ತು ಭೈರವದ ಜೋಡು ರಾಗ ಕೌಂಶಿ ಭೈರವ್ ಕೂಡ ಇದೆ. ಒಟ್ಟಾರೆ, ಭೈರವರಾಗದ ಯಾವದೇ ಪ್ರಕಾರ ಇರಲಿ ಅದರ ಪ್ರಸನ್ನತೆ ಯಾವಾಗಲೂ ಕೇಳುವವರಿಗೆ ಮತ್ತು ಹಾಡುವವರಿಗೆ ಇದ್ದೇ ಇರುತ್ತದೆ.

*****

5.3

ರಾಗಗಳ ನೃಪತಿ, ಸ್ವರರಾಜ ಭೂಪ

1952ರಲ್ಲಿ, ನನ್ನ ತಂದೆಯವರಿಗೆ ಗೋಕರ್ಣದಿಂದ ಕಾರವಾರಕ್ಕೆ ವರ್ಗವಾಗಿತ್ತು. ಒಂದೆರಡು ವಾರಗಳಲ್ಲಿಯೇ ನನಗೆ ಕಾರವಾರದಲ್ಲಿ ಮರಾಠಿ ಭಾಷೆಯ ಪ್ರಾಬಲ್ಯ ಕಾಣತೊಡಗಿತು. ಊರಿನಲ್ಲಿ ಒಂದೇ ಒಂದು ಟಾಕೀಸು. ಗೋಕರ್ಣದಲ್ಲಿ ಚಂದ್ರಹಾಸ, ಭೂಕೈಲಾಸ, ಇತ್ಯಾದಿ ಕನ್ನಡ ಸಿನೆಮಾ ನೋಡಿದ ನನಗೆ ಕಾರವಾರದ ಶಿರಿನ್ ಟಾಕೀಸಿನಲ್ಲಿ ವಾರಕ್ಕೊಮ್ಮೆ ಮರಾಠಿ ಸಿನೆಮಾ ನೋಡಲೂ, ಮರಾಠಿ ನಾಟಕಕ್ಕೆ ಹೋಗಲೂ ತಂದೆಯವರ ಅನುಮತಿ ಇತ್ತು. ಕಾರವಾರದಲ್ಲಿದ್ದ ಐದು ವರ್ಷಗಳಲ್ಲಿ ಒಂದೂ ಕನ್ನಡ ನಾಟಕ ಅಥವಾ ಸಿನೆಮಾ ನೋಡಿದ ನೆನಪಿಲ್ಲ. ಊರಿನ ಭಾಷೆ ಕೊಂಕಣಿ, ಗೋಕರ್ಣದ ಹಾಗೆ ಕನ್ನಡ ಇರಲಿಲ್ಲ. ಎಸ್.ಎಸ್.ಸಿ.ಯವರೆಗೆ ಕನ್ನಡ ಭಾಷೆ ಬಿಟ್ಟು ಉಳಿದ ಎಲ್ಲ ವಿಷಯಗಳನ್ನೂ ಕೊಂಕಣಿಯಲ್ಲಿಯೇ ಕಲಿಸುತ್ತಿದ್ದರು. ಸಂಸ್ಕೃತವನ್ನು ಕೂಡ. ಕಾರಣ ಇಷ್ಟೆ, ಕನ್ನಡ ಮತ್ತು ಮರಾಠಿಗಳನ್ನು ಬಿಟ್ಟು ಉಳಿದ ವಿಷಯಗಳನ್ನು ಮರಾಠಿ ಮತ್ತು ಕನ್ನಡ ವರ್ಗಗಳನ್ನು ಜೋಡಿಸಿ ಶಿಕ್ಷಕರು ಕಲಿಸುತ್ತಿದ್ದರು. ಕನ್ನಡ ರಾಜಭಾಷೆ, ಅಂದರೆ ಕೋರ್ಟು ಕಚೇರಿಗಳ ಭಾಷೆಯಾದುದರಿಂದ ಗಂಡು ಮಕ್ಕಳೆಲ್ಲ ಕನ್ನಡ ವರ್ಗಕ್ಕೆ, ಹೆಣ್ಣುಮಕ್ಕಳೆಲ್ಲ ಮರಾಠಿ ವರ್ಗದಲ್ಲಿ. ಗಂಡುಮಕ್ಕಳಿಗೆ ನೌಕರಿ ಒಂದು ಸಿಗಬೇಕಲ್ಲ ಎಂಬ ಕಳವಳ. ಭಾವೀ ಅಳಿಯ, ಬೊಂಬಾಯಿನವ ಬೇಕು ಎಂಬ ಹಂಬಲ! ಈ ನೆನಪಿನ ದೋಣಿಯನ್ನು ತೇಲಿಸುವ ಕಾರಣ ನಾನು ನೋಡಿದ ವಿ. ಶಾಂತಾರಾಮ ಅವರ 'ಅಮರ ಭೂಪಾಳಿ' ಎಂಬ ಮರಾಠಿ ಚಿತ್ರಪಟ. 1948–49ರಲ್ಲಿ ರಿಲೀಸಾದ ಈ ಚಿತ್ರಪಟ ಹೋನಾಜಿ ಎಂಬ ಲಾವಣಿ ಬರೆಯುವ, ಹಾಡುವ ನಾಯಕನ ಮೇಲಿದ್ದು ಇದೇ ಕಥಾವಸ್ತುವನ್ನು ಶಾಂತಾರಾಮರು 'ನವರಂಗ, ಇಯೆ ಮರಾಠಿಚೇ ನಗರಿ' ಹಾಗೂ 'ಪಿಂಜರಾ' ಚಿತ್ರಪಟಗಳನ್ನೂ ನಿರ್ಮಿಸಿದರು. ಕೊನೆಯವರೆಗೂ ಶಾಂತಾರಾಮ ಈ ಲಾವಣಿ ವಸ್ತುವಿನ ಮೇಲೆಯೇ ಚಿತ್ರಿಸುತ್ತಿದ್ದರು. ಈ 'ಅಮರ ಭೂಪಾಳಿ'ಯ ಒಂದು ಹಾಡು 'ಘನಶ್ಯಾಮ ಸುಂದರಾ ಶ್ರೀಧರಾ, ಅರುಣೋದಯ ಝುಲಾ ಹಾ' ನನ್ನ ಎಳೆಯ ವಯಸ್ಸಿನ ಮೇಲೆ ತುಂಬಾ ಪ್ರಭಾವ ಬೀರಿತ್ತು. ಶಿರಿನ್ ಟಾಕೀಸ್ ಪಕ್ಕದ ಹೋಟೆಲಿನಲ್ಲಿ ಈ ರೆಕಾರ್ಡು ಪದೇ ಪದೇ ಹಚ್ಚುತ್ತಿದ್ದುದರಿಂದ ನಾನು ಗೆಳೆಯರೊಂದಿಗೆ ಹೊರಗೆ ನಿಂತು ಹಾಡನ್ನು ಆಸ್ವಾದಿಸಿ ಮುಂದೆ ಸಾಗುತ್ತಿದ್ದೆ. ಈ ಅಮರ ಭೂಪಾಳಿಯ ರಾಗ ಭೂಪವಾಗಿತ್ತು, ಹಾಡಿದ್ದು ಲತಾ ಮಂಗೇಶ್ಕರ್. ಸಂಗೀತ ದಿಗ್ದರ್ಶನ ವಸಂತ ದೇಸಾಯಿ. ಈ ಭೂಪ ರಾಗದ

ಗಮ್ಮತ್ತು ನೋಡಿ. ಭೂಪ ಅಥವಾ ಭೂಪಾಳಿ ಹಾಡುವ ಸಮಯ ಮುಂಜಾನೆ 5ರಿಂದ 7ರ ವರೆಗೆ. ಭೂಪ ಕಲ್ಯಾಣ ಅಂದರೇನೇ ಶುದ್ಧಕಲ್ಯಾಣ ಹಾಡುವ ಸಮಯ ಸಾಯಂಕಾಲದ 7ರಿಂದ 10 ರಾತ್ರಿ ಹಾಗೂ ದೇಶಕಾರ (ಇದು ಭೂಪ ರಾಗದ ಒಂದು ರೆಂಬೆ) ಮುಂಜಾನೆ 7ರಿಂದ 10. ಈ ರಾಗದ ಬಗ್ಗೆ ಸಂಸ್ಕೃತದಲ್ಲಿಯ ಸೂಕ್ತಿಯನ್ನು ನೋಡಿ:

ಆರೋಹೆ ಚಾವರೋಹೆ ಚ ಭೂಪಾಲಿ ಮನಿವರ್ಜಿತಾ
ಗಾಂಶಾ ಧೈವತಸಂವಾದಿನ್ಯುಕ್ತಾ ತೀವ್ರಸ್ವರೈನಿಶಿ ॥

ಅಂದರೆ, ಮ ಮತ್ತು ನಿ ಆರೋಹ ಮತ್ತು ಅವರೋಹದಲ್ಲಿ ವರ್ಜಿತ. ಗಾಂಧಾರ, ವಾದಿ (ಅಂಶ) ಸ್ವರವಾದರೆ ದೈವತವು, ಸಂವಾದಿ. 'ಗಾನೇಕಾ ಸಮಯ ರಾತ್ ಕಾ ಪ್ರಥಮ ಪ್ರಹರ'ವೆಂದು ವಿಷ್ಣು ನಾರಾಯಣ ಭಾತಖಂಡೆಯವರು ಬರೆದಿಟ್ಟಿದ್ದಾರೆ. ಥಾಟ ಕಲ್ಯಾಣವೆಂದು ಬೇರೆ ಹೇಳಬೇಕಾಗಿಲ್ಲ. ಇದು ಏಳು ಸ್ವರಗಳ ಸಂಪೂರ್ಣ ರಾಗವಿರದಿದ್ದರೂ ಇವುಗಳ ಸರಗಮದ ವಿಚಾರ ಎಷ್ಟು ಚೆನ್ನಾಗಿ ಮಾಡಿದೆಯೆಂದರೆ ಭೂಪರಾಗ ಯಾವಾಗಲೂ ಕೇಳಲು ಚೆಂದ ಅನ್ನಬಹುದು.

ಭೂಪರಾಗದ್ದೇ ಸ್ವರಗಳನ್ನು ಹೊತ್ತ 'ದೇಶಕಾರ'ವು ಉತ್ತರಾಂಗ ಪ್ರಧಾನವಾದರೆ ಭೂಪ ಪೂರ್ವಾಂಗ ಪ್ರಧಾನ. ದೇಶಕಾರ ರಾಗದ ಧೈವತ, ತಾರ ಷಡ್ಜದೆಡೆ ಹಾರಲು ಯಾವಾಗಲೂ ಪ್ರಯತ್ನಿಸುತ್ತಿದ್ದರೆ (ಉತ್ತರಾಂಗ) ಭೂಪದಲ್ಲಿ ವಿರುದ್ಧ ಪ್ರಕೃತಿ. ಅಂತೆಯೇ ಕುಮಾರ ಗಂಧರ್ವರಿಗೆ ದೇಶಕಾರವೆಂದರೆ ತುಂಬಾ ಮಮತೆ ಇತ್ತು. 'ಜಾ ಜಾರೆ ಭವರಾ ಜಾ' ಈ ಕೃತಿ ಅವರು ತುಂಬಾ ಚೆನ್ನಾಗಿ ಹಾಡಿದ್ದನ್ನು ನಾನು ಕೇಳಿದ್ದೇನೆ. ಸಣ್ಣ ಸಣ್ಣ ತಾನಗಳಿಂದ ಸುಶೋಭಿತವಾದ ಈ ಕೃತಿಯನ್ನು ಅವರು ಹಾಡುವಾಗ ಭ್ರಮರವು ಪುಷ್ಪಪರಾಗವನ್ನು ಕೊಳ್ಳಲು ಒಂದು ಹೂವಿನಿಂದ ಮತ್ತೊಂದಕ್ಕೆ, ಮಗದೊಂದಕ್ಕೆ ಹಾರಾಡುವ ಚಿತ್ರವು ಕಣ್ಣಿನ ಮುಂದೆ ಕಟ್ಟುತ್ತಿತ್ತು. 'ಚಿಡಿಯಾ ಚೂಂ ಚೂಂಹಾನೀ' ಕೂಡಾ ಇದೇ ರಾಗದಲ್ಲಿ ಪಕ್ಷಿಗಳ ಚಿಲಿಪಿಲಿಯ ನೆನಪಾಗುತ್ತಿತ್ತು. ಕರ್ನಾಟಕ ಸಂಘದ ಪಕ್ಕದಲ್ಲಿದ್ದ ಕುಮಾರರ ಶಿಷ್ಯ ಖ್ಯಾತ ಸಿತಾರ್ ವಾದಕ ಪಂ. ಶಂಕರ ಅಭ್ಯಂಕರರು ಕೂಡಾ ದೇಶಕಾರದಲ್ಲಿ ರಚಿಸಿದ್ದ ಕೃತಿಗಳು ಕುಮಾರ ಗಂಧರ್ವರ ಕೃತಿಗಳಂತೆ ತುಂಬಾ ಶ್ರವಣೀಯವಾಗಿವೆ. ಅವರು ಎಸ್‌ಎನ್‌ಡಿಟಿ ವಿಶ್ವವಿದ್ಯಾಲಯದಲ್ಲಿ ಕಲಿಸುತ್ತಿದ್ದ ಕಾರಣದಿಂದ ಅವರ ಶಿಷ್ಯರಲ್ಲಿ ಹಲವರು ನಮ್ಮ ಕಲಾಭಾರತಿಯಲ್ಲಿ ಅನೇಕ ಬಾರಿ ಹಾಡಿ ತಣಿಸಿದ್ದು ಇದೆ. ಧಾರವಾಡದ ಮಲ್ಲಿಕಾರ್ಜುನ ಮನ್ಸೂರ ಅವರು ಪ್ರಾತಃಸ್ಮರಣೀಯರು. ಈ ಲೇಖನದಲ್ಲಿ ಕೂಡ ಅವರ ನೆನಪು ಪದೇ ಪದೇ ಆಗುವುದು ಸ್ವಾಭಾವಿಕ. ಗ್ವಾಲಿಯರ ಮನೆತನದ ಬಾಳಕಥೂ ಅಥವಾ ಬಾಲಾಮೃತ ಕುಡಿದ ಮನ್ಸೂರರು ಈ ರಾಗವನ್ನು ತಮ್ಮದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ರೂಪಗೊಳಿಸುತ್ತಿದ್ದರು. ಈ ರಾಗದ ಕೃತಿ 'ಹೂಂ ತೋ ತೋರೆ ಕಾರಣ/ನ' ಅತ್ಯಂತ ಪ್ರಭಾವವನ್ನು ಬೀರುತ್ತಿತ್ತು. ಮನ್ಸೂರವರದು, 'ಸುರೀಲಾ ಆವಾಜ ಔರ್ ನಖರಿಲಾ ಲಯಕಾರಿ' ಎಂದು ಉಸ್ತಾದ್ ಅಬ್ದುಲ್ ಹಾಲಿಮ್ ಜಾಫರ್ ಖಾನ್ ನನ್ನಲ್ಲಿ ಹೇಳಿದ್ದುಂಟು.

ಶುದ್ಧ ಕಲ್ಯಾಣ ಮತ್ತು ಭೂಪ ಅತ್ಯಂತ ಸಮೀಪದ ನೆಂಟರು. ಭೂಪದಲ್ಲಿ ಮಧ್ಯಮ ಮತ್ತು ನಿಷಾಧ ವರ್ಜಿತವೆಂದು ಈ ಮೊದಲೇ ಹೇಳಿದೆ. ಆರೋಹದಲ್ಲಿ ಭೂಪ ಮತ್ತು ಅವರೋಹದಲ್ಲಿ ಕಲ್ಯಾಣ. ಇದು ತುಂಬಾ ಸರಳವಾದ ವಿವರಣೆ. ಮಂದ್ರ ಸಪ್ತಕದ ಆಲಾಪ ಮತ್ತು ಒಂದೊಂದೇ ಸ್ವರವನ್ನು ಪೋಣಿಸುತ್ತಾ ಹೋಗುವಾಗ ಹಾಡುವವರಿಗೂ ಕೇಳುವವರಿಗೂ ರೋಮಾಂಚನವಾಗುತ್ತದೆ. ಕಿರಾನಾ ಪರಂಪರೆಯವರು ಇದನ್ನು ಅತ್ಯಂತ ಸುಂದರವಾಗಿ ಸ್ವರಗಳಿಂದ ಸುಶೋಭಿಸುತ್ತಾರೆ. ಕಳೆದ ಐವತ್ತು ಐವತ್ತೈದು ವರ್ಷಗಳಲ್ಲಿ ಭೀಮಸೇನ ಜೋಶಿಯವರಿಂದಲೆ ಇದನ್ನು ನೂರಾರು ಸಲ ಕೇಳಿರಬೇಕು. ಶುದ್ಧ ಕಲ್ಯಾಣ ರಾಗ ಟಾನಿಕ್ ತರಹ ಗಂಗೂಬಾಯಿಯವರಿಂದಲೂ ಅವರ ಮಗಳು ಕೃಷ್ಣಾಬಾಯಿಯವರಿಂದಲೂ ಬಹಳ ಸಲ ಕೇಳಿ ಖುಶಿಪಟ್ಟಿದ್ದೇನೆ. ನನ್ನ ಮಿತ್ರ ದತ್ತಾನಿಯವರನ್ನು ನಾನು ಚೇಷ್ಟೆ ಮಾಡುವುದೇ ಶುದ್ಧ ಕಲ್ಯಾಣದ ಮೇಲೆ. 'ಆಜ್ ಆಪ್‌ಕೊ ಶುದ್ಧ ಕಲ್ಯಾಣ ಕಾ ಡೋಸ್ ಮಿಲನೆವಾಲಾ ಹೈ' ಎಂದು ಘೋಷಿಸಿದ ಕೂಡಲೇ ದತ್ತಾನಿ ಗಹಗಹಿಸಿ ನಗುತ್ತಾರೆ. 'ಹಾಂ, ಭಾಯಿ, ಭೀಮಣ್ಣಾ ಕೆ ಬಾದ್ ಪಂದರಾ ದಿನ್‌ಮೆ ಗಂಗೂಬಾಯಿ ಗಾಯೆಗಿ ವಹ್ ಭಿ ಶುದ್ಧ ಕಲ್ಯಾಣ ಹೋಗಾ! ಔರ್ ಕ್ಯಾ ಚಾಹಿಯೆ?' ಅನ್ನುತ್ತಾರೆ. ಈ ಶುದ್ಧ ಎಂಬ ನುಡಿಗಟ್ಟು ರಾಗದ ಮುಂದೆ ಏಕೆ ಹಚ್ಚುತ್ತಾರೆ? ಎಂಬುದು ಒಂದು ಯಕ್ಷಪ್ರಶ್ನೆ. ಶುದ್ಧ ಬಂಗಲಾ ರಾಗದಿಂದ ಹಿಡಿದು, ಶುದ್ಧ ಭೈರವಿ, ಶುದ್ಧ ದೇಶಿ, ಶುದ್ಧ ಧನ್ಯಾಸಿ ಇತ್ಯಾದಿ ಅನೇಕ ರಾಗಗಳನ್ನೂ ರಾಗನಿಧಿ ಸುಬ್ಬರಾಯರು ಕೊಟ್ಟಿದ್ದಾರೆ.

ಪರಮೇಶ್ವರ ಹೆಗಡೆ, ವೆಂಕಟೇಶ ಕುಮಾರ, ವಿನಾಯಕ ತೊರವಿ ಅಷ್ಟೇ ಸಾಮರ್ಥ್ಯದಿಂದ ಈ ರಾಗವನ್ನು ಹಾಡುತ್ತಾರೆ ಮತ್ತು ಈ ಪರಂಪರೆಯನ್ನು ಕೈವಲ್ಯ ಗುರವ, ಜಯತೀರ್ಥ ಮೇವುಂಡಿ, ಪೂರ್ಣಿಮಾ ಕುಲಕರ್ಣಿ, ಗಂಗೂಬಾಯಿಯವರ ಶಿಷ್ಯ ಅಶೋಕ ನಾಡಿಗೇರ, ಶ್ರೀಕಾಂತ್ ದೇಶಪಾಂಡೆ ಇವರೆಲ್ಲ ಅತ್ಯಂತ ಕುಶಲತೆಯಿಂದ ಈ ರಾಗವನ್ನು ಮಂಡಿಸುತ್ತಾರೆ. ಇತ್ತೀಚಿಗೆ ಕುಮಾರ ಮರ್ಡೂರ ಇವರ ಶುದ್ಧ ಕಲ್ಯಾಣವನ್ನು ಕೇಳಿ ತುಂಬಾ ಖುಶಿಪಟ್ಟೆ. ಚಿಕ್ಕ ವಯಸ್ಸಿನಲ್ಲಿ ಈತ ಪ್ರಗಲ್ಭತೆಯನ್ನು ತೋರಿಸಿದ್ದು ನಮಗೆ ಹೆಮ್ಮೆಯ ಮಾತು. ಒಂದು ಮಾತು ನಿಶ್ಚಿತವಾಗಿ ಹೇಳಬಯಸುತ್ತೇನೆ. ನಮ್ಮ ಕರ್ನಾಟಕದ ಹಾಡುಗಾರರಂತೆ ಮತ್ತೆ ಯಾರೂ ಈ ರಾಗವನ್ನು ಹಾಡಲಾರರು. ಇದಕ್ಕೆ ಅಪವಾದ ಇದೇ ಘರಾಣೆಯ ರೋಶನಾರಾ ಬೇಗಂ.

ಶುದ್ಧ ಕಲ್ಯಾಣ ಅಥವಾ ಭೂಪ ಕಲ್ಯಾಣದ ಮಾತು ನಡೆದಾಗ ಇದೇ ರಾಗದಲ್ಲಿದ್ದ ಒಂದು ಪ್ರಸಿದ್ಧ ಚಲನಚಿತ್ರದ ಹಾಡು ಪದೇ ಪದೇ ನೆನಪಾಗುತ್ತದೆ. ರಾಜಕಪೂರ–ನರ್ಗಿಸರ 'ಚೋರಿ ಚೋರಿ' ನೆನಪಿದೆಯಲ್ಲ? ಅದರಲ್ಲಿಯ ಲತಾ ಮಂಗೇಶಕರ ಹಾಡಿದ 'ರಸಿಕ ಬಲಮಾ, ದಿಲಕೊ ಲಗಾಯಾ ತೋಸೆ' ಸಂಗೀತ ಕೊಟ್ಟಿದ್ದು ಶಂಕರ ಜಯಕಿಶನ್. ಮೊದಲಿನಿಂದಲೂ ಕೊನೆಯವರೆಗೆ ಈ ಹಾಡಿನಲ್ಲಿ ಶುದ್ಧ ಕಲ್ಯಾಣದ ಶುದ್ಧತೆಯನ್ನು ಸಂಗೀತ ದಿಗ್ದರ್ಶಕದ್ವಯರು ಅಚ್ಚುಕಟ್ಟಾಗಿ ಪಾಲಿಸಿದ್ದುದನ್ನು ವಿಶೇಷವಾಗಿ ನಮೂದಿಸಬೇಕಾಗುತ್ತದೆ. ತಾಳ ನಾಲ್ಕು ಮಾತ್ರೆಯ ಕೆಹರವಾ. ಭೂಪಕಲ್ಯಾಣವೇ

ಶುದ್ಧಕಲ್ಯಾಣವಾದುದರ ಬಗ್ಗೆ ಭಾತಖಂಡೆಯವರು 'ಭೂಪವೆಂದರೇನೆ ಭೂಪಕಲ್ಯಾಣ, ದುರ್ಗಾಕಲ್ಯಾಣ, ಹಮೀರಕಲ್ಯಾಣ, ಇತ್ಯಾದಿಗಳಂತೆ ದೊಡ್ಡ ಹೆಸರುಗಳನ್ನೂ ಮಟ್ಟದಾಗಿ ಮಾಡಿದ್ದರಿಂದ ಭೂಪಕಲ್ಯಾಣವು ಭೂಪವಾಯಿತು. ದುರ್ಗಾ, ಹಮೀರ, ಇತ್ಯಾದಿಗಳು ಭೂಪದಿಂದ ಬೇರೆ ಎಂದು ತೋರಿಸಲು ಶುದ್ಧಕಲ್ಯಾಣವೆಂಬ ಹೆಸರನ್ನು ಇಡಲಾಗಿದೆ ಎನ್ನುತ್ತಾರೆ. ಏನೇ ಇರಲಿ, ನಮಗೆಲ್ಲ ಭೂಪಕಲ್ಯಾಣವೋ ಶುದ್ಧಕಲ್ಯಾಣವೋ ಶುದ್ಧ ಖುಷಿ ಸಿಕ್ಕಿದ್ದೇ ಸಾಕು!

ಜೈತ ಕಲ್ಯಾಣ ಕೂಡಾ ಈ ಪರಂಪರೆಯದ್ದೆ ರಾಗ. ಶುದ್ಧಕಲ್ಯಾಣ ಕಿರಾನಾದವರ ಸೊತ್ತಾದರೆ, ಜೈತ, ಜೈತಕಲ್ಯಾಣ ಜಯಪುರ್ ಪರಂಪರೆಯವರದು. ಮಲ್ಲಿಕಾರ್ಜುನ ಮನ್ಸೂರರ ಹೆಸರು ಮತ್ತೇ ನೆನಪಾಗುತ್ತದೆ. ಮೊಗುಬಾಯಿ ಕುರ್ಡಿಕರರ ಪಟ್ಟ ಶಿಷ್ಯೆ ಕೌಸಲ್ಯ ಮಂಜೇಶ್ವರ ಹಾಡಿದ ಜೈತ ಕಲ್ಯಾಣ ತುಂಬಾ ಚೆನ್ನಾಗಿದೆ. ಅಂತೆಯೇ ಕಿಶೋರಿ ಅಮೋಣಕರ ಇವರ 'ಪಪಿಹಾನ ಬೋಲ' ಇದರಲ್ಲಿಯ ಪ್ರಸಿದ್ಧ ಬಂದಿಶ್. ಮೊಗುಬಾಯಿಯವರಿಂದ ಹಿಡಿದು ಗೀತಾ ಜಾವಡೇಕರರತನಕ ಹಾಡುವುದು ಇದೇ ಬಂದಿಶ್. 'ಮಾಣಿಕ, ಅಶ್ವಿನಿ ಭಿಡೆ ದೇಶಪಾಂಡೆ, ಪದ್ಮಾ ತಳವಲಕರ ಹಾಗೂ ಕಿಶೋರಿ ಅಮೋಣಕರ ಇವರ ಶಿಷ್ಯ ರಘುನಂದನ ಪಣಶೀಕರ ಹಾಡಿದ್ದ ಜೈತ ಕಲ್ಯಾಣವನ್ನು ನಾನು ಕೇಳಿದ್ದೇನೆ. ಜೈತ ರೆ ಜೈತ ಎನ್ನುವುದಕ್ಕೆ ಜಯಪುರದವರೆ ಸೈ.

'ಭೂಪ ನಟ' ಇದು ಮತ್ತೊಂದು ಜಯಪುರ್-ಅತ್ರೋಳಿ ಪರಂಪರೆಯ ರಾಗ. ಆಶ್ಚರ್ಯದ ಮಾತೆಂದರೆ ಈ ರಾಗದ ಬಗ್ಗೆ ರಾಗನಿಧಿ ಅಥವಾ ರಾಗವ್ಯಾಕರಣ ಮತ್ತು ಸಂಗೀತದ ಕೈಪಿಡಿ ಎನಿಸಿಕೊಂಡ ಭಾತಖಂಡೆಯವರ ಪುಸ್ತಕದಲ್ಲಿಯೂ ಈ ರಾಗದ ಮಾಹಿತಿ ಇಲ್ಲ. ಜಯಪುರ್-ಅತ್ರೋಳಿ ಪರಂಪರೆಯವರೇ ಇದನ್ನು ಹಾಡುವುದು. ಮೊಗುಬಾಯಿ ಕುರ್ಡಿಕರ್ ಇವರ ಮಗಳು ಶ್ರೀಮತಿ ಕಿಶೋರಿ ಆಮೋಣಕರ್ ಇವರೂ ಇದನ್ನು ತುಂಬಾ ಚೆನ್ನಾಗಿ ಪ್ರಸ್ತುತಿ ಪಡಿಸಿದ್ದು ನಾನು ಕೇಳಿದ್ದೇನೆ.

ಇಡೀ ಮಹಾರಾಷ್ಟ್ರದಲ್ಲಿ ಸುಧೀರ್ ಫಡಕೆ, ಸಂಗೀತ ಕೊಟ್ಟ ಗ.ದಿ. ಮಾಡಗೂಳಕರ್ ಇವರ ಖ್ಯಾತ ಮರಾಠೀ ರಾಮಾಯಣದ ಪದ್ಯ ಸಮೂಹವಾದ 'ಗೀತರಾಮಾಯಣ'ದ ಸುವರ್ಣ ಮಹೋತ್ಸವವನ್ನು ಅದ್ದೂರಿಯಾಗಿ ಇದೇ ವರ್ಷ ಆಚರಿಸಲಾಯಿತು. ಇದು ಪುಣೆ ಆಕಾಶವಾಣಿಯ ಕೊಡುಗೆ ಎಂದರೆ ಈಗಿನ ಆಕಾಶವಾಣಿಯ ಪದಾಧಿಕಾರಿಗಳು ನಂಬುವಂತಿಲ್ಲ. ನಮ್ಮ ನಿಮ್ಮ ಮಾತು ಬಿಡಿ, ಈ ಗೀತರಾಮಾಯಣದ ಮೊದಲಿನ ಪದ್ಯದ ಜನ್ಮದ ಬಗ್ಗೆ ಸುಧೀರ ಫಡಕೆ ಮತ್ತು ಗ,ದಿ ಮಾಡಗೂಳಕರ ಇವರಿಬ್ಬರೂ ದೂರದರ್ಶನದ 'ಸಂವಾದ'ದಲ್ಲಿ ಹೇಳಿದ ಮಾತು ನೆನಪಿನಲ್ಲಿ ಅಚ್ಚಳಿಯದೆ ನಿಂತಿದೆ. ಪುಣೆ ಆಕಾಶವಾಣಿಯಲ್ಲಿ ಸಪ್ತಾಹ ಗೀತ ಅಥವಾ ತಿಂಗಳಗೀತೆಯಲ್ಲಿ ಬಿತ್ತರಿಸಲಾಗುತ್ತಿದ್ದ ಈ ಗೀತ ರಾಮಾಯಣದ ಮೊದಲ ಗೀತೆ 'ಸ್ವಯೇ ಶ್ರೀರಾಮ ಪ್ರಭು ಐಕತಿ' ಏನೋ ಕಾರಣದಿಂದ ರೆಕಾರ್ಡಿಂಗ್‌ನ ಮೊದಲ ಭಾಗದ ಹಸ್ತಪ್ರತಿ ಎಲ್ಲೋ ಬಿದ್ದುಹೋಯಿತಂತೆ. ರೆಕಾರ್ಡು ಆಗುವ ಕೆಲ ಹೊತ್ತಿನ ಮೊದಲೇ ಸಿದ್ಧಹಸ್ತ

ಶೀಘ್ರಕವಿಗಳು ಇದನ್ನು ಮತ್ತೆ ಬರೆದುಕೊಟ್ಟು ಕುಳಿತಲ್ಲಿಯೇ, ಹಾರ್ಮೋನಿಯಂ ಬಾರಿಸಿ ಅಜರಾಮರ ಮಾಡಿದ ಕೃತಿ ಈ ಭೂಪ ರಾಗದಲ್ಲಿದೆ. 'ಸ್ವಯೇ ಶ್ರೀ ರಾಮಪ್ರಭು ಐಕತಿ, ಕುಶ–ಲವ ರಾಮಾಯಣ ಗಾತಿ' ಇದೇ ಕಾರ್ಯಕ್ರಮದಲ್ಲಿ ಆ ನೆನಪಿಗೆ ಸುಹಾಸಿನಿ ಮುಳಗಾಂವಕರರು ಒಂದು ಕವಿತೆ ಬರೆಯಲು ಹೇಳಿ, ಅಲ್ಲಿಂದಲ್ಲಿಯೇ ಸುಧೀರ ಫಡಕೆಯವರಿಗೆ ಧಾಟಿ ಹಚ್ಚಿ ಹಾಡಿಸಿದ್ದು ಇದೆ.

ಏನೇ ಇರಲಿ, ಸುಧೀರ ಫಡಕೆ ಹಾಗೂ ಭೂಪರಾಗಕ್ಕೂ ಏನೋ ನೆಂಟಸ್ತನ ಇದ್ದ ಹಾಗೆ ಕಾಣಿಸುತ್ತದೆ. ನಾನು ಕಾರವಾರದಲ್ಲಿದ್ದಾಗ ಮರಾಠೀ ಚಿತ್ರಪಟ 'ವಹಿನೀಚ್ಯಾ ಬಾಂಗಡ್ಯಾ' ನೋಡಿದ್ದೆ. ಇದರ ಹಿಂದಿ ಭಾಷಾಂತರವೆಂದರೆ 'ಭಾಭೀಕಿ ಚೂಡಿಯಾಂ'. ಇದರ ಹಿಂದಿನ ಆವೃತ್ತಿ ನಾನು ನೋಡಿದ್ದಿಲ್ಲ. ಆದರೆ ಇದರಲ್ಲಿಯ ಒಂದು ಸುಂದರವಾದ ಹಾಡು 'ಜ್ಯೋತಿ ಕಲಶ ಝಲಕೆ' ತುಂಬಾ ಪ್ರಸಿದ್ಧಿ ಪಡೆದಿತ್ತು. ಈ ಚಲನಚಿತ್ರದ ನಿರ್ಮಾಪಕರು, ಹೊಸ ಸಂಗೀತ ದಿಗ್ದರ್ಶಕರೆಂದು 'ಸುಧೀರ' ಎಂಬವರಿಗೆ ಪ್ರಾಧಾನ್ಯವನ್ನು ಕೊಟ್ಟಿದ್ದರು. ಆ ಸುಧೀರ್ ಫಡಕೆ ಮತ್ತು ಈ ಸುಧೀರ್ ಒಬ್ಬರೆ ಎಂಬ ತಿಳಿವಳಿಕೆ ಬರಲು ಒಂದೆರಡು ವರ್ಷ ಹಿಡಿದವು. ಮರಾಠಿ ಚಿತ್ರದ ಸಂಗೀತ ದಿಗ್ದರ್ಶಕ ರಾಮ್‌ಕದಮ್ ಅವರು ಹಿಂದೀ 'ಗೀತ ಗಾಯಾಂ ಪತ್ಥರೊಂನೆ' ಚಿತ್ರದ ರಾಮ್ ಲಾಲ್ ಆದ ಹಾಗೆ.

ನನ್ನಲ್ಲಿ ಹಾಥರಸ ಎಂಬ ಉತ್ತರ ಪ್ರದೇಶದ ಊರಿನಿಂದ 'ಸಂಗೀತ' ಎಂಬ ಒಂದು ಸಂಗೀತಕ್ಕೆ ಮೀಸಲಾದ 'ಫಿಲ್ಮಿ ಶಾಸ್ತ್ರೀಯ ಗೀತ'ವೆಂಬ 1973ರಲ್ಲಿ ಪ್ರಕಾಶಿತವಾದ ಸಂಚಿಕೆ ಇದೆ. ಇದರಲ್ಲಿ ಇಣುಕಿ ನೋಡುವಾಗ ಈ ಭೂಪ/ಶುದ್ಧ ಕಲ್ಯಾಣ ದೇಶಕಾರದಲ್ಲಿ ತುಂಬಾ ಹಾಡುಗಳಿವೆ ಎಂದು ತಿಳಿಯಿತು. ಓದುಗರ ಅವಗಾಹನೆಗಾಗಿ ಕೆಳಗೆ ಅದನ್ನು ಕೊಡುತ್ತಾ ಇದ್ದೇನೆ.

ಪಂಛಿ ಬನೂ ಉಡತಿ ಫಿರೂ	**(ಲತಾ) ಚೋರಿ ಚೋರಿ**
ಸಾಯೊನಾರಾ ಸಾಯೊನಾರಾ	**(ಲತಾ) ಲವ್ ಇನ್ ಟೋಕಿಯೊ**
ನೀಲ ಗಗನಕೆ ಛಾವಮೇ	**(ಲತಾ) ಆಮ್ರಪಾಲಿ**
ಮೇರಿ ಮೊಹಬ್ಬತ್ ಜವಾಂ ರಹೇಗಿ	**(ರಫಿ) ಜಾನವರ್**

ಇದಕ್ಕೆಲ್ಲದಕ್ಕಿಂತ ನನಗೆ ಆಶ್ಚರ್ಯಮಿಶ್ರಿತ ಆನಂದವನ್ನು ಕೊಟ್ಟಿದ್ದು ಬಾಳ ಕೊಲ್ಹಟಕರ ಬರೆದ 'ದೇವ ದೀನಾಘರಿ ಧಾವಲಾ' ನಾಟಕದ ಶೀರ್ಷಿಕೆ ಗೀತೆ. ಹಾಡಿದ್ದು ಯಾರು ಹೇಳಿ? ಕುಮಾರ ಗಂಧರ್ವ ಮತ್ತು ವಾಣಿ ಜಯರಾಂ. ಶಬ್ದಗಳು ಇಂತಿವೆ 'ಉಠಿ ಉಠಿ ಗೋಪಾಳಾ' ಇಬ್ಬರೂ ಅಮರಾಠಿಗರು!

*****

5.4

ರಾಗ ತೋಡಿ – 1

ಇದು ದಕ್ಷಿಣ ದೇಶದ ಒಂದು ಮಿಥಕ, ಕಥೆ. ತೋಡಿ ಸೀತಾರಾಮಯ್ಯನೆಂಬ ಹಾಡುಗಾರ ತಂಜಾವೂರಿನ ಸರಫೋಜಿ ಭೋಸಲೆಯ ಕಾಲದವ. ಮೈಸೂರು ಮಹಾರಾಜರಂತೆ ಸರಫೋಜಿ ಕೂಡಾ ಸಂಗೀತ–ನೃತ್ಯ–ನಾಟಕ ಕಲೆಗಳ ಪೋಷಕನಾಗಿದ್ದ. ಸ್ವತಃ 5 ಮರಾಠಿ ಸಂಗೀತ ನಾಟಕಗಳನ್ನು ಬರೆದವ. ಅದರಲ್ಲಿಯ ಸಂಗೀತವೆಲ್ಲವೂ ಸಹಜವಾಗಿ ಕರ್ನಾಟಕಿ ಧಾಟಿಯದಾಗಿಯೇ ಇತ್ತು. ಈ ತೋಡಿ ಸೀತಾರಾಮಯ್ಯನೆಂದರೆ ಇವನಂತೆ ತೋಡಿ ಹಾಡುವ ಮತ್ತೊಬ್ಬನು 'ಛಪ್ಪನ್ನೈವತ್ತಾರು' ದೇಶಗಳಲ್ಲಿ ಇರಲಿಲ್ಲವಂತೆ! ಮೈನೆರೆದ ಮಗಳ ತಂದೆಯಾದ ತೋಡಿ ಸೀತಾರಾಮಯ್ಯನ ನಾಲಿಗೆ ತುದಿಯಲ್ಲಿ ಸರಸ್ವತಿ ಕುಣಿಯುತ್ತಿದ್ದರೂ, ಕರಾಗ್ರೇ ಲಕ್ಷ್ಮಿ ಇರಲಿಲ್ಲ. ತೋಡಿ ಕೇಳುವುದಾದರೆ ಸೀತಾರಾಮಯ್ಯನವರದೇ ಸೈ! ಎಂದು ಜನ ಹೇಳುತ್ತಿದ್ದರು. ಬೇರೆಯ ಹಾಡುಗಾರರು ತೋಡಿಯ ಆಲಾಪನೆ ಶುರು ಮಾಡಿದ ಕೂಡಲೇ, ಕುಳಿತಿದ್ದ ರಸಿಕರಲ್ಲಿ ಕೆಲವರು ಮೂಗುಮುರಿಯುತ್ತ, ಕವಳ ಜಗಿಯಲೋ, ಹರಟೆ ಹೊಡೆಯಲೋ ಹೋಗುತ್ತಿದ್ದರು. ಮಗಳ ಮದುವೆಯ ಕಾಟದಿಂದ ಜರ್ಜರಿತನಾದ ಸೀತಾರಾಮಯ್ಯ ಸ್ವಲ್ಪ ಭಿಡಸ್ತ ಸ್ವಭಾವದವ. ಸರಫೋಜಿಯ ಪಾರುಪತ್ಯಗಾರರಿಗೆ ಹೇಳಿಕೊಂಡರೆ ಕೆಲಸವಾಗಬಹುದಾಗಿತ್ತು. ಮನೆಯವರ ಮಾತು ಕೇಳಿ ಸಾಹುಕಾರ ಷಣ್ಮುಗಂ ಚೆಟ್ಟಿಯಾರರಲ್ಲಿ ಸಾಲ ಬೇಡಿದ ಈ ತೋಡಿ ಸೀತಾರಾಮಯ್ಯ. ವ್ಯವಹಾರವೆಂದು ಷಣ್ಮುಗಂ ಅಡವು ಬೇಡಿದ. ಒತ್ತೆ ಇಡಲು ಆಸ್ತಿಪಾಸ್ತಿ ಬೇಕಲ್ಲಾ? ಸೀತಾರಾಮಯ್ಯ ತನ್ನ ಸ್ವಂತ ಆಸ್ತಿಯಾದ ರಾಗ ತೋಡಿಯನ್ನೇ ಅಡವಿಟ್ಟ. ಸರಿ, ವಿಜೃಂಭಣೆಯಿಂದ ಮಗಳನ್ನು ಧಾರೆಯೆರೆದು ಮದುವೆ ಮಾಡಿದ ಸೀತಾರಾಮಯ್ಯ. ಕೆಲ ತಿಂಗಳುಗಳು ಉರುಳಿದವು. ವಿಜಯದಶಮಿಯ ಉತ್ಸವ, ತಂಜಾವೂರಿನಲ್ಲಿ ಸಂಭ್ರಮವೇ ಸಂಭ್ರಮ. ಆಸ್ಥಾನದಲ್ಲಿ ಉತ್ಸವದ ಭಾಗವೆಂದು ಸಂಗೀತ, ನೃತ್ಯ ಕಚೇರಿಗಳನ್ನು ಏರ್ಪಡಿಸಲಾಗಿತ್ತು. ಮೈಸೂರು, ತಿರುವಾಂಕೂರು, ಸೇಲಂ ಇತ್ಯಾದಿ ಪ್ರದೇಶಗಳಿಂದ ಕಲಾವಿದರು ಭಾಗವಹಿಸಲು ಬಂದಿದ್ದರು. ಒಂಬತ್ತು ದಿನಗಳ ಸಮಾರಾಧನೆ. ಎಲ್ಲ ಭರ್ಜರಿಯಾಗಿ ನಡೆಯಿತು. ಕೊನೆಯ ದಿನ ಪದ್ಧತಿಯಂತೆ ಸೀತಾರಾಮಯ್ಯನವರನ್ನು ತೋಡಿ ಮತ್ತು ಭೈರವಿ ಹಾಡಿ ಮುಕ್ತಾಯಗೊಳಿಸಲು ಸರಫೋಜಿ ಅಪ್ಪಣೆ ಮಾಡಿದರು. ಗಾಯಕನಿಗೆ ಉಭಯಸಂಕಟ. 'ಬುದ್ಧಿ, ನಾನು ಬೇರೆ ಯಾವುದಾದರೂ ಹಾಡಿ ನಂತರ ಭೈರವಿ ಹಾಡುವೆ, ಅಪ್ಪಣೆ ಕೊಡಿ' ಎಂದು ಸೀತಾರಾಮಯ್ಯ ವಿನಂತಿಸಿದ.

ರಸಿಕ ಜನರೆಲ್ಲ, 'ತೋಡಿ, ತೋಡಿ' ಎಂದು ತೋಡಿಕೊಂಡರು. 'ತೋಡಿಯನ್ನು ಹಾಡಲು ನನ್ನಿಂದಾಗದು' ಎಂದು ನಿಂತಲ್ಲಿಯೇ ಕುಸಿದ ಸೀತಾರಾಮಯ್ಯ. ಆಸ್ಥಾನದಲ್ಲಿಯೇ ಇದ್ದ ಷಣ್ಮುಗಂ ಚೆಟ್ಟಿಯಾರರಿಗೆ ಗಾಯಕನ ದೊಡ್ಡಸ್ತಿಕೆಯ ಅರಿವಾಯಿತು. ಭೋಸಲೆ ಮಹಾರಾಜರಿಗೆ ಇದ್ದ ವಿಷಯುವನ್ನೆಲ್ಲಾ ಹೇಳಿ ಸೀತಾರಾಮಯ್ಯನವರನ್ನು ಸ್ವತಃ ತಾನೇ ತೋಡಿ ಹಾಡಲು ಬೇಡಿಕೊಂಡ. ಆ ದಿನದ ತೋಡಿ 'ಬಿನತೋಡ' (ಅಭೇದ್ಯ) ಆಗಿದ್ದಿರಬೇಕೆಂಬುದು ನಮ್ಮೆಲ್ಲರ ಊಹೆ.

ಮೇಲೆ ಹೇಳಿದ ಈ ಕತೆ ಮನೋರಂಜಕವಾಗಿದ್ದರೂ ಒಂದು ಮಾತು ನಿಶ್ಚಿತ. ತೋಡಿ ರಾಗದ ಮಹತ್ವ ಕೇಳುವವರಿಗೆ ಗೊತ್ತು. ಇದು ಮುಂಜಾನೆ ಸಮಯದ ರಾಗ. ಭೈರವದ ಕುಟುಂಬದಂತೆ ತೋಡಿ ಕುಟುಂಬ ಕೂಡ ದೊಡ್ಡದೇ. ಹೊಸ ಹೊಸ ರಾಗಗಳನ್ನು ತನ್ನಲ್ಲಿಯೆ ಸಮಾವೇಶಗೊಳಿಸಿಕೊಳ್ಳುವ ಕ್ಷಮತೆ ಈ ತೋಡಿ ರಾಗಕ್ಕೆ ಇದೆ. ಉದಾಹರಣೆಗೆ 'ಸಾಲಗವರಾಳಿ'. ಕರ್ನಾಟಕ ಪದ್ಧತಿಯ ಈ ರಾಗವನ್ನು ಶ್ರೀಕೃಷ್ಣ ರತನಜನಕರರು ಹಿಂದುಸ್ತಾನಿ ಪದ್ಧತಿಯಲ್ಲಿ ರೂಢಿಗೊಳಿಸಿದರು. ಇಷ್ಟೇ ಅಲ್ಲ, ಇದನ್ನು ಅವರ ಶಿಷ್ಯರಾದ ದಿನಕರ ಕಾಯ್ಕಿಣಿಯವರು ಬಹಳ ಚೆನ್ನಾಗಿ ಪ್ರಸ್ತುತಿಪಡಿಸಿದ್ದನ್ನು ಎರಡು ಬಾರಿ ಕೇಳಿದ್ದೇನೆ. ಅವರ ಶಿಷ್ಯೆ ಆರತಿ ಅಂಕಲಿಕರ್ ಕರ್ನಾಟಕ ಸಂಘದ ಕಲಾಭಾರತಿಯಲ್ಲಿ ಹಾಡಿದ್ದ 'ಸಾಲಗವರಾಳಿ' ಅಮೋಘವಾಗಿತ್ತು. ಇತ್ತೀಚೆಗೆ ಇದನ್ನೇ ಸಾಲಗವರಾಳಿ ತೋಡಿಯೆಂದು ನಾಮಕರಣ ಮಾಡಿಕೊಂಡಿದ್ದಾರೆ! ಹಾಗೆಯೇ ಅಸಾವರಿ ತೋಡಿ, ಲಾಚಾರಿ ತೋಡಿ, ಬಿಲಾಸಖಾನೀ ತೋಡಿ ಇತ್ಯಾದಿಗಳಿವೆ.

ನನ್ನ ಮಗಳು ಹೊಸದಾಗಿ ಶಾಸ್ತ್ರೀಯ ಸಂಗೀತ ಕಲಿಯುತ್ತಿದ್ದಾಗ ಯಮನದಿಂದ ಪ್ರಾರಂಭವಾದ ಸಂಗೀತಾಭ್ಯಾಸ ಎರಡನೆಯ ವರ್ಷಮುಗಿದಾಗ ಅವಳಿಗೆ ಒಂದೇ ಒಂದು ಕೃತಿಯ ಪಾಠವಾಗಿತ್ತು. ಅಭ್ಯಾಸದಲ್ಲಿ ವಿವಿಧತೆ ತರಲು ಅವಳ ಉಸ್ತಾದ್ ಮುಂಜಾನೆ ಬರಲು ಪ್ರಾರಂಭಿಸಿದ. ಅವಳ ಚಂಚಲ ಪ್ರವೃತ್ತಿಯನ್ನು ಕ್ರಮೇಣ ಸ್ತಿಮಿತಗೊಳಿಸುವ ಕಾರಣ ಇದ್ದಿರಬಹುದು. ಈ ಉಸ್ತಾದ್ 20ನೇ ಶತಮಾನದವನಾಗುದ್ದುದರಿಂದ ಬಿ.ಕಾಮ್. ಮುಗಿಸಿ ಪೇಪರ್ ಮಿಲ್ಲಿನಲ್ಲಿ ಕೆಲಸಕ್ಕಿದ್ದ ಕಾರಣದಿಂದ ಸಂಗೀತವನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳದೆ ಕಚೇರಿ ಸೇರುವ ಮೊದಲು ತೋಡಿ ಕಲಿಸಿ, ನಮ್ಮಲ್ಲಿಯ ಉಪಾಹಾರವನ್ನು ತಿಂದು ಕೆಲಸಕ್ಕೆ ಹಾಜರಾಗುತ್ತಿದ್ದ. ಉಪಜೀವನಕ್ಕೆ ಸಂಗೀತದ ಆಧಾರವಿಲ್ಲದ ಕಾರಣದಿಂದ ಈತ ಗಜಲ್ ಮತ್ತು ಇತರ ಉಪಶಾಸ್ತ್ರೀಯ ಸಂಗೀತದೆಡೆ ಹಾಯಲಿಲ್ಲ. ಅವಳ ಕಪಾಟನ್ನು ಸಾಫ ಮಾಡುವಾಗ ಸಂಗೀತದ ಪುಸ್ತಕ ಸಿಕ್ಕಿತು. ಅದರಲ್ಲಿ ಈ 20ನೇ ಶತಮಾನದ ಆಗ್ರಾ ಪರಂಪರೆಯ ಉಸ್ತಾದ್ ತನ್ನದೇ ಹಸ್ತಾಕ್ಷರಗಳಲ್ಲಿ ಬರೆದಿದ್ದುದನ್ನು ಕೆಳಗೆ ಓದುಗರ ಅವಗಾಹನೆಗಾಗಿ ಕೊಡುತ್ತಾ ಇದ್ದೇನೆ:

'ರಿಷಭಾ ಕೋಮಲ, ತೀವರ ಮ
ಧಗ ಸಂವಾದ ಬಖಾನ
ಸಂಪೂರಣ ತೋಡಿ ಕಹೀ,
ದ್ವಿತೀಯ ಪ್ರಹರ ದಿನಮಾನ'

ವಾದಿ ಧೈವತ, ಸಂವಾದಿ ಗಾಂಧಾರ, ರಿಷಭ ಗಾಂಧಾರ ಕೋಮಲವಾದರೆ ಮಧ್ಯಮ ತೀವ್ರ. ಇದರಲ್ಲಿ ಹಾಡುವ ಸಮಯವನ್ನು ಕೂಡ ಚೆನ್ನಾಗಿ ಕೊಡಲಾಗಿದೆ. ಭೈರವದಂತೆ ತೋಡಿ ಕೂಡಾ ಪ್ರಾಚೀನ ರಾಗ. ಅಕ್ಬರನ ಕಾಲದ ಲೋಚನನೆಂಬ ಕರ್ನಾಟಕದ ಸಂಗೀತ ಪಂಡಿತ ಖಾನ್‌ದೇಶಕ್ಕೆ ವಲಸೆ ಹೋದಾಗ (ವಲಸೆ ಹೋಗುವ ರೂಢಿ ಆಗಲೂ ಇತ್ತು) ಅವನೇ ಆ ಕಾಲದ 'ರಾಗ ತರಂಗಿಣಿ'ಯಲ್ಲಿ ಬರೆದ ಸಂಸ್ಕೃತ ಶ್ಲೋಕವನ್ನು ನೋಡಿ:

'ಶುದ್ಧಾಃ ಸಪ್ತಸ್ವರಾಃ ಕಾರ್ಯಾರಿಧೌ ತೇಷು ಚ ಕೋಮಲಂ।
ತೋಡಿ ಸುರಾಗಿಣಿ ಜ್ಞೇಯಾ ತತೋ ಗಾಯಕ ನಾಯಕೈಃ॥

ಬಾಯಿಪಾಠ ಸಲೀಸಾಗಬೇಕೆಂದು ಸಂಸ್ಕೃತದಲ್ಲಿಯ ಸೂತ್ರಗಳನ್ನು ಅತ್ಯಂತ ಸುಲಭ ರೀತಿಯಲ್ಲಿ ಕಟ್ಟಿರುವುದನ್ನು ನಾವಿಲ್ಲಿ ಕಾಣಬಹುದು. ನನ್ನ ಮಗಳ ಉಸ್ತಾದ್ ಬರೆದುಕೊಟ್ಟಿದ್ದು ಮತ್ತು ಲೋಚನ ಪಂಡಿತನ ಶುದ್ಧ ಸಂಸ್ಕೃತದಲ್ಲಿಯ ಶ್ಲೋಕದ ಅರ್ಥ ಒಂದೇ. ಹಾಡುವುದನ್ನು ಬರೆದುಕೊಳ್ಳಕೂಡದು ಎಂಬ ಮಿಥ್ಯವನ್ನು ನನ್ನ ಮಗಳ ಉಸ್ತಾದ್ ಸರಿಪಡಿಸಿದ್ದು ಹಿಂದುಸ್ತಾನಿ ಸಂಗೀತದ ನವಪಲ್ಲವವೆಂದು ನಾನು ತಿಳಿದುಕೊಂಡಿದ್ದೇನೆ.

ಏನೇ ಇರಲಿ, ಈ ತೋಡಿಯನ್ನೇ ಕರ್ನಾಟಕದವರು ಹನುಮತೋಡಿಯೆಂದು ಕರೆಯುವದುಂಟು. ನಾನು ಬಹಳಷ್ಟು ಸಲ ಕರ್ನಾಟಕ ಸಂಗೀತ ಕಚೇರಿಗಳಲ್ಲಿ ರಾಗಂ ತಾನಂ ಪಲ್ಲವಿಯನ್ನು ಈ ಹನುಮತೋಡಿಯಲ್ಲಿ ಕೇಳಿದ್ದೇನೆ.

ಈ ರಾಗದ ಹೆಸರು 'ತೋಡಿ' ಏಕೆ ಎಂಬುದು ಒಂದು ಕುತೂಹಲದ ವಿಷಯ. ತೋಡ-ಫೋಡ (ಕಡಿ-ಒಡಿ) ಪ್ರಕಾರದ ರಾಗವಲ್ಲವಾದರೂ ಏಕೆ ಈ ಹೆಸರು? ಸಂಗೀತ ಸಂಶೋಧಕರಿಗೆ ಇದೂ ಒಂದು ವಿಷಯ.

ತೋಡಿ ರಾಗದಲ್ಲಿ ಗಂಭೀರ, ಕರುಣ, ಶಾಂತ ರಸಗಳ ಮಿಶ್ರಣ ಭಕ್ತಿಭಾವದಲ್ಲಿ ಚಿತ್ರಿತವಾಗುತ್ತದೆ. ಭೈರವದಂತೆ ತೋಡಿಯಲ್ಲಿ ಕೂಡಾ ತುಂಬಾ ಕೃತಿಗಳು ಭಕ್ತಿ ಸಂಗೀತದಲ್ಲಿ ಕಟ್ಟಿದವು ಇವೆ. 'ಶೃಂಗಾರ, ವೀರ, ಕರುಣಾದ್ಭುತ, ಹಾಸ್ಯ, ಭಯಾನಕ, ಗಂಭೀರ, ರೌದ್ರೌ ಚ ರಸಃ ಶೃಂಗಾರ, ಸ್ಮೃತಿ ವಿಭ್ರಮಃ' - ಇದು ನವರಸ ಕುರಿತ ಅಮರನ ಅಮರಕೋಶದ ಸೂತ್ರ. ಇದರಲ್ಲಿ ಭಕ್ತಿ ರಸದ ಆವಿರ್ಭಾವವಿಲ್ಲ. ಏಕೆ ಇಲ್ಲ? ಎಂಬುದು ನಮ್ಮ ಪ್ರಶ್ನೆ ಇದ್ದರೂ ಉತ್ತರ ಕೊಡಲು ಅಮರಸಿಂಹನೇ ಬರಬೇಕು! ಅಂದ ಹಾಗೆ ತೋಡಿಯಲ್ಲಿ ಭಕ್ತಿರಸವಿದೆ. ಕರುಣರಸದ ಆರ್ತ ಕರೆಯಿದೆ. ಗಂಭೀರ ಪ್ರಕೃತಿಯ ಎಳೆ ಇಡೀ ರಾಗದಲ್ಲಿ ಮೂಡುತ್ತದೆ. ಮಂದ್ರ ಸಪ್ತಕದಿಂದ ತಾರ ಸಪ್ತಕದ ತನಕ ತೋಡಿಯ ಶಾಂತ, ಅತ್ಯಂತ ಧೀರ ಗಂಭೀರ ಆಲಾಪನೆ ಕೇಳಿದರೆ ಮುಂದಿನ 'ಧಕಾಧಕಿಯ ಜೀವನ' ಹೊರೆಯಲು ಬಡಜೀವ ಸಮರ್ಥವಾಗುತ್ತದೆ ಎಂಬ ಭಾವನೆ ನನ್ನದು.

ಹಿಂದೆ ಹೇಳಿದ ಹಾಗೆ ತೋಡಿ, ವಟವೃಕ್ಷದಂತೆ. ಪ್ರತಿಯೊಂದು ರೆಂಬೆಯಲ್ಲಿ ಹೊಸ ರಾಗ. ತೋಡಿ ವಟವೃಕ್ಷದ ರೆಂಬೆಗಳೆಂದರೆ ದರಬಾರಿ ತೋಡಿ, ಲಾಚಾರಿ

ತೋಡಿ, ಬಿಲಾಸಖಾನಿ ತೋಡಿ, ಲಕ್ಷ್ಮಿ ತೋಡಿ, ಬಹಾದೂರಿ ತೋಡಿ, ಮುದ್ರಾ ತೋಡಿ, ಹುಸೇನಿ ತೋಡಿ, ಅಂಜನಿ ತೋಡಿ, ಫಿರೋಜಖಾನ್ ತೋಡಿ, ಹೀಗೆ ತೋಡಿಯ ಅನಂತ ಪ್ರಕಾರಗಳಿವೆ. ಇದರಲ್ಲಿಯೂ ಕೂಡಾ ಮಲ್ಲಿಕಾರ್ಜುನ ಮನ್ಸೂರರು ಹಾಡುತ್ತಿದ್ದ 'ಖಟ್' ಎಂಬ ಪ್ರಕಾರ ತೋಡಿಯಲ್ಲಿಯೇ ಸಮಾವಿಷ್ಟವಾಗುತ್ತಿದೆಯೆಂದು ಅವರು ತೀರಿದ ಹತ್ತು ವರ್ಷಗಳ ನಂತರ ತಿಳಿದು ಝುಗ್ಗೆಂದಿತು. ದೇಸಿ ತೋಡಿ ಇದೆ. ಗಾಂಧಾರಿ ತೋಡಿ, ಜೌನಪೂರಿ ತೋಡಿ.. ಅಹುದು ಮರೆತೆ, ಕುಮಾರ ಗಂಧರ್ವರ 'ಸಹೇಲಿ ತೋಡಿ' ಅಂದರೆ 20ನೆಯ ಶತಮಾನದ ಒಂದು ಹೊಸ ರಾಗ. ಒಂದು ಹೊಸ ಕೃತಿ ನಮ್ಮಲ್ಲಿ ಹುಟ್ಟಿ ಬೆಳೆದಿದೆ..

ಕುಮಾರ ಗಂಧರ್ವ ರಚಿತ ಸಹೇಲಿ ತೋಡಿಯ ಕತೆ ಅಷ್ಟೇ ಮನೋರಂಜಕವಾಗಿದೆ. ಭೈರವ ಪ್ರಕಾರದಲ್ಲಿ ಕುಮಾರ ಗಂಧರ್ವರ 'ಸಹೇಲಿ ತೋಡಿ'ಯ ಉಲ್ಲೇಖ ಬಂದಿದೆ. ಆದರೂ ಈ ಲೇಖನ ತೋಡಿ ರಾಗದ ಬಗ್ಗೆ ಇರುವ ಕಾರಣದಿಂದ ಸಂದರ್ಭಾನುಸಾರವಾಗಿ ಇಲ್ಲಿ ಕೊಡುವುದು ಸೂಕ್ತವೆನಿಸುತ್ತಿದೆ.

ಕುಮಾರ ಗಂಧರ್ವರ ಮೊದಲ ಪತ್ನಿ ಭಾನುಮತಿ ಕಂಸ. ಕ್ಷಯ ರೋಗದಿಂದ ಬಳಲುತ್ತಿದ್ದ ಕುಮಾರರಿಗೆ ಪುನರ್ಜನ್ಮ ಕೊಟ್ಟಿದ್ದು ಭಾನುಮತಿ. ಅಂತೆಯೇ ಇಂದಿನ ಅವರ ಮನೆಯ ಸಂಕುಲ 'ಭಾನುಕುಲ'ವೆಂದೇ ಪ್ರಸಿದ್ಧವಾಗಿದೆ. ಆಗಿನ ಕಾಲದಲ್ಲಿ ಅಂದರೆ 1943ರಲ್ಲಿ ಎಂ.ಎ. ಫರ್ಸ್ಟ್ ಕ್ಲಾಸ್‌ನಲ್ಲಿ ಪಾಸಾಗಿ ಮುಂದೆ ಪಿ.ಎಚ್‌ಡಿ. ಮಾಡಲಿದ್ದ ಸುಂದರ ತರುಣಿ ಕನ್ನಡ ಎರಡನೇ ಇಯತ್ತೆ ಕಲಿತ ಕುಮಾರನನ್ನು ಮೋಹಿಸಿದಳು. ಮೊದಲು ಶಿಷ್ಯೆಯಾಗಿದ್ದಳು. ನಂತರ ಬಿ.ಆರ್. ದೇವಧರರಂತಹ ಶಾಂತ ಸ್ವಭಾವದ ಗುರುವಿನ ಆಜ್ಞೆಯನ್ನು ಪಡೆಯದೇ ಇಬ್ಬರೂ ಓಡಿಹೋಗಿ ಮದುವೆ ಮಾಡಿಕೊಂಡರು. ಶಿವಾಜಿ ಪಾರ್ಕ್‌ವಿಭಾಗದಲ್ಲಿ ಬಾಡಿಗೆ ಮನೆಯಲ್ಲಿ ಕೆಲಕಾಲ ನವ ವಧುವರರು ಸಂಸಾರ ಹೂಡಿದರು. ಕುಮಾರರ ಗೆಳೆಯರ, ಗುಂಪಿನವರ ಸಹಾಯ ಸಿಕ್ಕಿತು. ಭಾನುಮತಿಯವರಿಗೆ ಕಾಲೇಜಿನಲ್ಲಿ ಕಲಿಸುವ ನೌಕರಿ ಕೂಡ ಸಿಕ್ಕಿತು. ಕುಮಾರರ ಕಚೇರಿ, ಸಂಸಾರ ನೌಕೆ ತೇಲಿಸುತ್ತಿದ್ದಾಗಲೇ ಕ್ಷಯರೋಗ ಉಲ್ಬಣವಾಯಿತು. ಎಷ್ಟು ವಿಕೋಪಕ್ಕೆ ಹೋಯಿತೆಂದರೆ, ಕುಮಾರರಿಗೆ ಹಾಡಲು ಪ್ರತಿಬಂಧ ಹಾಕಲಾಯಿತು. ಅವರ ಪುಪ್ಪುಸದ ಒಂದು ಭಾಗವನ್ನೇ ಕಿತ್ತು ಹಾಕಲಾಯಿತು. ದೇವಾಸ ಎಂಬ ಮಧ್ಯಪ್ರದೇಶ ಊರಲ್ಲಿ ಹವೆ ಬದಲಾವಣೆಗೆ ಎಂದು ಸ್ಥಳಾಂತರಿಸಿದರು. ಭಾನುಮತಿಯವರಿಗೆ ಅಲ್ಲಿಯೇ ಶಾಲೆಯ ಶಿಕ್ಷಕಿಯ ಕೆಲಸ ಸಿಕ್ಕಿತು. ಕುಮಾರರಿಗೆ ಮಲಗಿದ್ದಲ್ಲೇ ಎಲ್ಲ ವ್ಯವಸ್ಥೆ ಮಾಡಲಾಯಿತು. 24 ಗಂಟೆಗಳೂ ಸಂಗೀತವನ್ನೇ ಆರಾಧಿಸುವಂತಹ ಪ್ರತಿಭಾವಂತನಿಗೆ ಹಾಡಲು ಪ್ರತಿಬಂಧ! ಆದರೆ ಚಿಂತನೆ, ಮನನ ಮಾಡಲು ಇಂತಹ ಕಾಯಿದೆ ಇರಲಿಲ್ಲವಲ್ಲ! ಆಗಲೇ ಕುಮಾರ ಗಂಧರ್ವರ ಹೊಸ ಜನ್ಮವಾಯಿತು. ಹೊಸ ಹೊಸ ರಾಗಗಳು ಹುಟ್ಟಿಕೊಂಡವು. ಅವುಗಳಲ್ಲಿ ಭಾನುಮತಿಗೆ ಅರ್ಪಿಸಿದ 'ಸಹೇಲಿ ತೋಡಿ' ಕೂಡಾ ಒಂದು.

ಬಿಲಾಸ್ ಖಾನ್ ತೋಡಿ ಎಂಬ ಪ್ರಕಾರಕ್ಕೆ ಹೋಲುತ್ತಿರುವ ಈ ರಾಗದ ರಚನೆ ಕುಮಾರರು ಮಾಡಿದ್ದು ಮಲಗಿದ್ದಲ್ಲೇ. ತಾರ ಸಪ್ತಕದಲ್ಲಿಯೂ ರಂಜಕತೆ ಇದ್ದ ಈ ರಾಗದ ಕೃತಿ ನೋಡಿ.

ಕಾಹೆರೆ, ಜಗವಾ ದೆ, ಸೋನೆದೆ,
ಸೋನೇದೇರೆ ಅಜ ಘರ ತೊರೆ ಕಲ್‌ಪರ ಘರ
ಉಡಿ ಜೈ ಹೈಂ ರೆ।
ಬತ್ಯೆ ದೆಹೋ ರೀ ಮಾ ಕಾಹೆ
ಉಡಿ ಜೈ ಹೈಂ?
ಕೈಸೆ ಸಮಜಾವೂಂ ಜೈಹೈಂರೆ
ಜೈಹೈಂರೆ ॥

ಈ ಚಿತ್ರ ಕಣ್ಮುಂದೆ ತನ್ನಿ. ಮಲಗಿದ್ದ ಸುಂದರಿಯನ್ನು, ನಾಯಕ ಅಥವಾ ಕವಿ ಸಕ್ಕರೆ ನಿದ್ರೆಯಲ್ಲಿದ್ದವಳನ್ನು ಎಬ್ಬಿಸಿದಾಗ, ಆಕೆ 'ಯಾಕಯ್ಯಾ ನೀನೆಬ್ಬಿಸುತ್ತಿದ್ದೀಯಾ? ಸ್ವಲ್ಪ ಮಂಪರು, ಮಲಗಲು ಬಿಡಯ್ಯಾ' ಎಂದು ಅತ್ಯಂತ ಮೋಹಕವಾಗಿ ಹೇಳುತ್ತಾಳೆ. 'ನಿನಗೇನು ಹೇಳಲಿ ನಾನು, ಹೇಗೆ ಸಮಜಾಯಿಸಲಿ? ಎಂದು ವಿಲಂಬಿತ ತ್ರಿತಾಳದಲ್ಲಿ ಹೇಳಿ 'ಚಂದಾ ಸಾ ಮುಖ್ ಬಿನ ಡಾರಾ' ಎಂದು ಸ್ಮಿತಹಾಸ್ಯದಲ್ಲಿ ಸ್ವಲ್ಪ ಬೇಗ ನಡಿಗೆಯ ತ್ರಿತಾಳದಲ್ಲಿ ಈ ಸಂಹಿತೆ ಮುಕ್ತಾಯವಾಗುತ್ತದೆ. ಕುಮಾರರಿಂದ ಇದನ್ನು ನಾನು 1984ರಲ್ಲಿ ಕೇಳಿದ ನಂತರ ನಮ್ಮ ಒತ್ತಾಯಕ್ಕೆ ಬಲಿ ಬಿದ್ದು ವಸುಂಧರಾ ಕೋಮಕಾಳಿ (ಕುಮಾರರ ದ್ವಿತೀಯ ಪತ್ನಿ) 'ಸಹೇಲಿ ತೋಡಿ'ಯನ್ನು ಕರ್ನಾಟಕ ಸಂಘದಲ್ಲಿ ಹಾಡಿದ್ದುಂಟು. . ಹಾಡುವ ಮೊದಲು ಇದರ ಪ್ರಸ್ತಾವನೆಯನ್ನು ಅವರೇ ಮಾಡಿದ್ದರು. ಹೀಗಾಗಿ ಸಹೇಲಿ ತೋಡಿ ಆ ದಿನ ಕೇಳಿದವರು ಕಣ್ಣು ಒರೆಸಿಕೊಳ್ಳುತ್ತ ಹೋಗಿದ್ದೂ ಇದೆ. ತೋಡಿಯ ಈ ಲೇಖನದಲ್ಲಿ ಸುರಸಕತೆಗಳು ಒಂದೊಂದಾಗಿ ನೆನಪಾಗುತ್ತಿವೆ, ಮತ್ತು ಓದುಗರ ಅವಗಾಹನೆಗಾಗಿ ಸ್ವಲ್ಪ ವಿಷಯಾಂತರವಾದರೂ ಬರೆಯಲೇಬೇಕೆಂಬ ಹಟ.

ಈ ತನಕ ಪಂ. ಓಂಕಾರನಾಥ ಠಾಕೂರ್ ಎಂಬ ಮಹಾಗಾಯಕನ ಬಗ್ಗೆ ಒಂದಕ್ಷರವೂ ಬರೆಯದ ಈ ಲೇಖಕನಿಗೆ ತೋಡಿಯಲ್ಲಿ ಪಂಡಿತರ ಕ್ಷಮತೆಯ ಬಗ್ಗೆ ಬರೆಯುವ ಮೋಹ ಕಡೆಗಣಿಸಲಾರದು ಎಂಬುದು ಅಷ್ಟೇ ಸತ್ಯ. ಓಂಕಾರನಾಥರ ಪ್ರವೃತ್ತಿ ಕೀರ್ತನಕಾರರದ್ದು. ಸ್ವಲ್ಪ ನಾಟಕೀಯತೆ ಹಾಗೂ ಅಹಂಭಾವದ್ದು. ವಂದೇ ಮಾತರಂ ಹಾಡುವಾಗ ಅಕ್ಷರಶಃ ಕಣ್ಣುಗಳಿಂದ ಗಂಗಾ ಜಮುನಾ ಹರಿಯುತ್ತಿರುವ ಪ್ರಸಂಗ ಖ್ಯಾತ ವಿಮರ್ಶಕ ಮೋಹನ ನಾಡಕರ್ಣಿ ನನ್ನಲ್ಲಿ ಹೇಳಿದ್ದುಂಟು.

ಎರಡನೇ ಮಹಾಯುದ್ಧದ ಕಾಲ 1941–42ರ ವಿಷಯ. ಓಂಕಾರನಾಥ ಠಾಕೂರರು ಯೂರೋಪ್‌ನ ಯಾತ್ರೆ ಕೈಗೊಂಡಿದ್ದರು. ಇಟಲಿ ದೇಶಕ್ಕೆ ಹೋದಾಗ ಅವರ ಕಛೇರಿಗೆ ದಸ್ತೂರ ಖುದ್ದು ಮುಸೋಲಿನಿ ಬಂದಿದ್ದರಂತೆ. ಅರವಿಂದ ಮಂಗಳೂರಕರರ ಪುಸ್ತಕದಲ್ಲಿ ಮರಳಿ ಮುಸೋಲಿನಿಗಾಗಿಯೇ ಒಂದು 5 ನಿಮಿಷದ ಮುಂಜಾನೆಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು ಎಂದು ಬರೆದಿದ್ದಾರೆ. ಸರಿ, ಓಂಕಾರನಾಥರು ತೋಡಿ ಹಾಡಲು ಪ್ರಾರಂಭಿಸಿದರು. ವೇಳೆ ಮುಗಿದರೂ ರಸಿಕ ಶಿರೋಮಣಿ ಇಟಲಿಯ ಸರ್ವಾಧಿಕಾರಿ ಸನ್ನೆಯಿಂದಲೇ ಮುಂದುವರಿಸಲು ಹೇಳಿದರಂತೆ. ಕರುಳು ಹಿಂಡುವ ಆರ್ತಸ್ವರದ ತೋಡಿ ಇಷ್ಟು ಸೇರಿತೆಂದರೆ ಕಣ್ಣುತುಂಬಿ ಬಂದ ಮುಸೋಲಿನಿ ನಂತರ ಹಾಡು ನಿಲ್ಲಿಸಲು ಹೇಳಿದರಂತೆ.

ಹಿಂದುಸ್ತಾನಿ ಸಂಗೀತದ ಶ್ರೇಷ್ಠ ಗಾಯಕರೆಲ್ಲ ಲಕ್ಷಾಧಿಪತಿಗಳಾಗುವ ಮೊದಲಿನ ಕಾಲ. ಆಗಿನ್ನೂ 'ಈವೆಂಟ್ ಮೇನೇಜ್‌ಮೆಂಟ್' ಹುಟ್ಟಿರಲಿಲ್ಲ. ಮನ್ನೂರರೂ ಕೂಡ ಕರೆದಲ್ಲಿ ಹೋಗಿ ಹಾಡುವ ಕಾಲ ಒಂದಿತ್ತು. ಕಿಶೋರಿ ಅಮೋಣಕರ್ ಒಂದು ಸಲ ಚೆಂಬೂರಿನ ಅಲ್ಲಾದಿಯಾ ಮಹೋತ್ಸವದಲ್ಲಿ ಸಮಾರೋಪಗೊಳಿಸಲು ಹಾಡಲು ಬಂದಿದ್ದರು. ಖಡಕೆ ಎಂಬ ರಸಿಕ ನಿವೃತ್ತ ಪೋಲಿಸ್ ಅಧಿಕಾರಿ ಕಳೆದ 25 ವರ್ಷಗಳಿಂದ 'ಅಲ್ಲಾದಿಯಾ ಮಹೋತ್ಸವ'ವನ್ನು ಚೆಂಬೂರಿನಲ್ಲಿ ನಡೆಸುತ್ತಾ ಬಂದಿದ್ದರು. 85 ವರ್ಷದ ಖಡಕೆ ಅಷ್ಟೇ ಉತ್ಸಾಹದಲ್ಲಿ ಮೂರು ದಿನದ ಈ ಉತ್ಸವವನ್ನು ನಡೆಸುತ್ತಿದ್ದರು. ರವಿವಾರ ಮುಂಜಾನೆ ಸಮಯ ಕರ್ನಾಟಕ ಸಂಘದ ಕಲಾಭಾರತಿ ಇನ್ನೂ ಹುಟ್ಟುವುದರಲ್ಲಿತ್ತು. ನಾನು 'ಟೈಮ್ಸ್'ನಲ್ಲಿ ಬರೆಯುತ್ತಿದ್ದ ದಿನಗಳು. ವೇದಿಕೆಯ ಎಡಭಾಗದಲ್ಲಿ ನನ್ನ ಮಿತ್ರರೊಂದಿಗೆ ಕುಳಿತಿದ್ದೆ. ಸರಿ, ಗಾನ ಸರಸ್ವತಿ ಹಾಡಲು ಪ್ರಾರಂಭಿಸಿದರು. ಆ ಭೂಪಾಲ ತೋಡಿ ಅಮೋಘವಾಗಿತ್ತು. ಒಂದು ತಾಸಿನ ಕಾರ್ಯಕ್ರಮ ಅತ್ಯಂತ ರಂಜಕವಾಗಿತ್ತು. ನನ್ನ ಪಕ್ಕದಲ್ಲಿ ಕುಳಿತ ಒಬ್ಬ ಮುದುಕರು 'ಅಮ್ಮಾ, ನೀವೀಗ ಹಾಡಿದ್ದು ಭೂಪಾಲ ತೋಡಿಯೇ?' ಎಂದ ಕೇಳಿದ ಪ್ರಶ್ನೆಗೆ ಕಿಶೋರಿ ಅಮೋಣ್ಕರರ ಸಿಟ್ಟು ನೆತ್ತಿಗೇರಿತು. ಪ್ರಶ್ನೆ ಕೇಳಿದವ ನಾನೆಂದು ಗ್ರಹಿಸಿ ಸಂಗೀತ ವಿಮರ್ಶಕವೆಂಬ ತಂಡವನ್ನೇ ತರಾಟೆಗೆ ತೆಗೆದುಕೊಂಡು ವಿಮರ್ಶಕರೆಲ್ಲ ಬಂದು ಹಾಡಿ ತೋರಿಸಿ, ಒಂದೇ ಒಂದು ತಾನ ಹೊಡೆದು ತೋರಿಸಿ, ಹತ್ತು ನಿಮಿಷ ರಾಗದ ಹೆಸರು ಹೇಳದೆ ತನ್ನ ಮನಸ್ಸಿನ ವ್ಯಥೆಯನ್ನು ತೋಡಿಕೊಂಡರು. ಪ್ರಶ್ನೆ ಕೇಳಿದವ ನಾನಲ್ಲದಿದ್ದರೂ ಸುತ್ತಲೂ ಕುಳಿತ ಜನಸಮುದಾಯ ಅವಾಕ್ಕಾಗಿ ನಾನು ಕುಳಿತ ಕಡೆಗೇ ದೃಷ್ಟಿ ಹಾಯಿಸಿದರು. ನಾನು ಮಾತ್ರ ಪಿಟ್ಟೆನ್ನದೆ ಇದನ್ನೆಲ್ಲ ಕೇಳಿ ಸಹಿಸಿಕೊಂಡೆ. ನಂತರ ಒಮ್ಮೆ ಸಂದರ್ಶನಕ್ಕೆಂದು ಅವರ ಮನೆಗೆ ಹೋದಾಗ ಕಿಶೋರಿಯವರು ಆತ್ಮೀಯತೆಯಿಂದ ಬರಮಾಡಿಕೊಂಡು ಒಂದು ತಾಸು ನನ್ನೊಂದಿಗೆ ಹರಟೆ ಹೊಡೆದರು. ಅವರ ಸಂದರ್ಶವದ ಧ್ವನಿಸುರಳಿ 'ಟೈಮ್ಸ್'ನ ಸೊತ್ತಾಗಿ ಎಲ್ಲಿಹೋಯಿತೋ ದೇವರೇ ಬಲ್ಲ. ಆದರೆ ಒಂದು ಮಾತು ನಿಶ್ಚಿತ. ಚೆಂಬೂರಿನಲ್ಲಿ ಕಿಶೋರಿಯವರು ಹಾಡಿದ ಆ ಭೂಪಾಲ ತೋಡಿಯ ಅದ್ಭುತ ಹಾಡುಗಾರಿಕೆಯನ್ನು ಮತ್ತೆ ಎಂದೂ ನಾನು ಕೇಳಿಲ್ಲ.

*****

5.5

ರಾಗ ತೋಡಿ – 2

'ಭೈರವದ ಪ್ರಕಾರಗಳು' ಲೇಖನವನ್ನು ಬರೆಯುವಾಗ ಸಂದರ್ಭೋಚಿತವಾಗಿ ಪುಣೆ ಮತ್ತು ಕುಂದಗೋಳದ ಸವಾಯಿ ಗಂಧರ್ವ ಉತ್ಸವದ ಬಗ್ಗೆ ಬರೆದಿದ್ದೆ. ಭೈರವ ಹಾಗೂ ತೋಡಿ ಈ ಎರಡೂ ರಾಗಗಳನ್ನು ಕಿರಾನಾ ಪರಂಪರೆಯವರು ಅತ್ಯಂತ ಚೆನ್ನಾಗಿ ಪ್ರಸ್ತುತಪಡಿಸುತ್ತಿರುವುದನ್ನು ನಾನು ಪದೇ ಪದೇ ಕೇಳಿದ್ದೇನೆ, ಮತ್ತು ಧ್ವನಿಸುರುಳಿಗಳ ಮಾರಾಟದಿಂದಲೂ ಇದು ಗೊತ್ತಾಗುತ್ತದೆ. ಗಂಗೂಬಾಯಿ ಹಾನಗಲ್, ಫಿರೋಜ್ ದಸ್ತೂರ್, ಸಂಗಮೇಶ್ವರ ಗುರವ್, ಅರ್ಜುನಸಾ ನಾಕೋಡ್, ಬಸವರಾಜ ರಾಜಗುರು ಇವರೆಲ್ಲರ 'ಮಿಂಯಾಕಿ ತೋಡಿ'ಯನ್ನು ಬಹಳಷ್ಟು ಸಲ ಕೇಳಿದ್ದೇನೆ. ಮೈ ಜುಂ ಆದದ್ದು ಹಲವು ಸಲ. ಮೇಲಿನ ಸೂಚಿಯಲ್ಲಿ ನಾನು ಭೀಮಸೇನರ ಹೆಸರನ್ನು ಸೇರಿಸದ ಕಾರಣ ಇಷ್ಟೆ. ಅವರ ತೋಡಿ ಸ್ವರ್ಗೀಯ ತೋಡಿ. ಅಂದರೆ 'ಫಿನಾಮೆನಾಲ್' (ಅತುಲನೀಯ)ಅನ್ನುವ ಹಾಗೆ. 'ಯೇರಿ ಮಾಯಿ ಆಜ್ ಶುಭ್ ಮಂಗಲ್ ಗಾವೋ' ಆಗಲಿ, ಅಥವಾ 'ಕಂಕರಿಯಾ ಜಿನ ಮಾರೊ' ಇಲ್ಲವೇ ಅವರ ಧೀರ ಗಂಭೀರ ಕಂಠದಿಂದ **'ದೈಯ್ಯಾ ಬಾಟ ದುಬರ ಬಂದ'** ಕೂಡಲೇ ಸಾವಿರಾರು ಶ್ರೋತೃಗಳಿಂದ ತಂತಾನೆ 'ವಾಹ್'! ಎಂಬ ಅಲೆ ಸೋಫಾಸೀನರಾದವರಿಂದ ಪ್ರಾರಂಭವಾಗಿ ಕೊನೆಯ ಸಾಲಿನ ಪ್ರೇಕ್ಷಕರ ತನಕ ಮುಟ್ಟುತ್ತದೆ. ಇದನ್ನು ನಾನು ಅಕ್ಷರಶಃ ನೋಡಿದ್ದೇನೆ, ಅನುಭವಿಸಿದ್ದೇನೆ. ಇದರರ್ಥ ಬೇರೆಯವರದು ಕಡಿಮೆ ದರ್ಜೆಯದು ಎಂದಲ್ಲ. ಪ್ರತಿಯೊಂದರಲ್ಲಿ ಪ್ರತಿಯೊಬ್ಬ ಗಾಯಕ ಗಾಯಕಿಯ ವೈಶಿಷ್ಟ್ಯ ಇದ್ದೇ ಇರುತ್ತದೆ. ಅಮೀರ್ ಖಾನರ ತೋಡಿಯನ್ನು ನಾನು ಮುಂಬಯಿಯ ಬಿರ್ಲಾ ಹಾಲಿನಲ್ಲಿ ಕೇಳಿದ್ದೆ 1963ರಲ್ಲಿ. ಅಮೀರ ಖಾನರ ತೋಡಿ ಅಂದರೆ ಅತ್ಯಂತ ಶಾಂತ ಪ್ರಕಾರದ್ದು. ಒಂದೊಂದೇ ಸ್ವರವನ್ನು ಮೆಲುಕಾಡಿಸುತ್ತ, ಪೋಣಿಸುತ್ತಾ ಸ್ವರಗಳ ಪ್ಯಾಟರ್ನ್ ಮಾಡುತ್ತ ಹೋಗುವ ಅಸಾಧ್ಯವೆನಿಸುವ ಕೆಲಸವನ್ನು ಅವರು ಅತ್ಯಂತ ಸಮರ್ಥವಾಗಿ ಮಾಡುತ್ತಿದ್ದರು. ಗಂಗೂಬಾಯಿಯವರ ಮಗಳಾದ ದಿ. ಕೃಷ್ಣಾಬಾಯಿ ಹಾನಗಲ್ಲರವರ ತೋಡಿ ಕರ್ನಾಟಕ ಸಂಘದಲ್ಲಿ ಹಾಡಿದ್ದು ಅಮೋಘವಾಗಿತ್ತು. ಅವರ ಧ್ವನಿಯ ಜಾತಿ ಹಳೆಯ ಕಾಲದ ರೋಶನಾರಾ ಬೇಗಂರವರ ಧ್ವನಿಯಂತೆ ಇತ್ತು. ಗಂಗೂಬಾಯಿಯವರ ಜೊತೆ ಹಾಡಿ ಹಾಡಿ ಅವರ ಪಟ್ಟಿ ಕೆಳಗೆ ಇಳಿದಿತ್ತು. ಅವರದೇ ಕಾರ್ಯಕ್ರಮದಲ್ಲಿ ಅವರ ಶ್ರುತಿ 'ಕರೆ ನಾಲ್ಕ'ರಲ್ಲಿತ್ತು.(Black 4) ಹೀಗಾಗಿ ಗಂಗೂಬಾಯಿ ಹಾಡುವಾಗ ಅಂತರಾ ಹಾಡುವ ಕೆಲಸ ಕೃಷ್ಣಾಬಾಯಿಯವರದೇ.

'ಅಂತ್ರಾ ಹಾಡೋದು ಬಿಟ್ಟುಬಿಟ್ಟೇನಿ!' ಅಂದು ನಗುತ್ತಾ ಗಂಗೂಬಾಯಿಯವರು ಹೇಳಿದ್ದುಂಟು.

ವಾದಕರಲ್ಲಿ ನಿಖಿಲ ಬ್ಯಾನರ್ಜಿ (ಸಿತಾರ್), ರವಿಶಂಕರ (ಸಿತರ್), ಅಮ್ಜದ್ ಅಲಿ (ಸರೋದ್), ಬಿಸ್ಮಿಲ್ಲಾ (ಶಹನಾಯಿ) ಇವೆಲ್ಲ ರೆಕಾರ್ಡುಗಳೂ, ಸುರುಳಿಗಳೂ ಮಾರುಕಟ್ಟೆಯಲ್ಲಿವೆ. ಇವರೆಲ್ಲರಲ್ಲಿ ಭೀಮಸೇನಜಿಯವರ 'ಸಿದ್ಧಿ' ಎಂಬ ಧ್ವನಿ ಸುರುಳಿಯಲ್ಲಿಯ 1967ರ ಸುಮಾರಿನ ಮುದ್ರಣ ತುಂಬಾ ಅಚ್ಚುಕಟ್ಟಾಗಿದ್ದು, ಅತ್ಯಂತ ಸುಂದರವಾಗಿದೆ. 'ಅಮರ್ ಪ್ರೇಮ್' ಸಿನೇಮಾದಲ್ಲಿಯ ಒಂದು ಅಮರಗೀತೆ 'ರೈನಾ ಬೀತೀಜಾಯೇ, ಶ್ಯಾಮ್ ನ ಆಯೇ' ತೋಡಿ ರಾಗದಲ್ಲಿದೆ.

ಬಿಲಾಸ್ ಖಾನಿ ತೋಡಿ, ತಾನಸೇನನ ಮಗ ಬಿಲಾಸ್ ಖಾನ್ ರಚಿಸಿದ್ದು, ತೋಡಿಯಲ್ಲಿದ್ದ ಇಡೀ ಆರ್ತ ಸ್ವರಗಳು ಬಿಲಾಸ್ ಖಾನಿ ತೋಡಿಯಲ್ಲಿವೆ. ಈ ಬಿಲಾಸ್ ಖಾನಿಯ ಹುಟ್ಟಿನ ಕತೆಯೂ ಅಷ್ಟೇ ಮನೋರಂಜಕವಾಗಿದೆ. ಇದೂ ಒಂದು ಸಂಗೀತ ಸೃಷ್ಟಿಯ ಮಿಥಕವೆ! (ಮಿಥ್).

ಚರ್ಚಿಲ್‌ರ ಮಗ ಚರ್ಚಿಲ್‌ನ ಹಾಗೆ ಆಗಲಿಲ್ಲ, ಗಾಂಧಿಯವರ ಮಕ್ಕಳ ಕತೆಯೇ ಬೇರೆ, ಬಡೆ ಗುಲಾಮ ಅಲಿಯವರ ಮಗ ಮುನವರ್‌ಅಲಿ ತಂದೆಯ ವಲಯದ ಹಿಂದೆಯೇ ಉಳಿದ. ಇಷ್ಟೇ ಏಕೆ, ಹಿಂದೆ ಕೊಟ್ಟ ಉದಾಹರಣೆ, ಗಂಗೂಬಾಯಿಯವರ ಮಗಳು ಕೃಷ್ಣಾ ಹಾನಗಲ್ಲ ಸ್ವತಃ ಉತ್ತಮ ಹಾಡುಗಾರ್ತಿಯಾದರೂ ಅವರ ಕೊನೆಯ ದಿನಗಳ ತನಕ ಗಂಗೂಬಾಯಿಯವರ ಪ್ರಸಿದ್ಧಿಯ ವಲಯದಲ್ಲಿಯೇ ಇರಬೇಕಾಯಿತು. ಇದೇ ಕತೆ ಅಕಬರ್‌ನ ಕಾಲದಲ್ಲಿಯೂ ಇತ್ತು. ತಾನಸೇನನ ಮಗ ಬಿಲಾಸಖಾನ್. ತನ್ನಂತೆ ಭಾರತ ವರ್ಷದಲ್ಲಿ ಮಗನ ಹೆಸರು ಮನೆಮನೆಗಳಿಗೆ ಮುಟ್ಟಬೇಕು, 'ತಾನಸೇನನಕ್ಕಿಂತ ಬಿಲಾಸ್ ಖಾನ್ ಒಂದು ಗುಂಜಿ ಜಾಸ್ತಿ' ಎಂದು ಎನಿಸಿಕೊಳ್ಳಬೇಕು ಎಂದು ತಂದೆಗೆ ಅನಿಸಿದ್ದು ಸಹಜ. ತಾನಸೇನ್ ಹಣ್ಣು ಹಣ್ಣು ಮುದುಕನಾಗಿ ತೀರಿಕೊಂಡನಂತೆ. ಬಿಲಾಸ್ ಖಾನ್ ತಂದೆಯ ಹೆಣದ ಮುಂದೆ ವಜ್ರಾಸನ ಹಾಕಿಕೊಂಡು (ಆಗಿನ ರೂಢಿಯಂತೆ) ತೋಡಿ ಹಾಡಲು ಕುಳಿತ. ಆ ತೋಡಿಯ ಸ್ವರ ರಚನೆಯೇ ಭಿನ್ನವಾಗಿತ್ತು. ಕರುಳು ಹಿಂಡುವ ಸ್ವರಗಳು ತಮಗೆ ತಾವೇ ಬಿಲಾಸ್ ಖಾನನ ಕಂಠದಿಂದ ಬರಲಾರಂಭಿಸಿದವು. ಈ ರಾಗದ ತಾರಸಪ್ತಕದ ಷಡ್ಜಕ್ಕೆ ತಾನಸೇನನ ಹೆಣದ ಗೋಣು ಬಲದಿಂದ ಎಡಕ್ಕೆ ಹೊರಳಿತಂತೆ! ಅಂದರೆ, ಈ ಬಿಲಾಸ್ ಖಾನಿ ತೋಡಿ ಇಷ್ಟು ಅದ್ಭುತವಾಗಿತ್ತೆಂದರೆ ತಾನಸೇನನ ಪ್ರೇತ 'ವಾಹವಾ' ಎಂದಿರಬೇಕು ಎಂಬುದು ಈ ಮಿಥಕ್. ಮನೋವೈಜ್ಞಾನಿಕರ ಭಾಷೆಯಲ್ಲಿ ಹುಲಿಯ ಹೊಟ್ಟೆಯಲ್ಲಿ ನರಿ ಹುಟ್ಟಲಾರದು ಎಂದು ಬಿಂಬಿಸುವುದಕ್ಕೆ ಈ ಕತೆ ಹುಟ್ಟಿರಬಹುದು ಎಂಬ ಅಂದಾಜು.

ಬಿಲಾಸ್ ಖಾನಿ ತೋಡಿಯ ರಚನೆಯೇ ಹಾಗೆ. ಭೂಪಾಲ ತೋಡಿಯಂತೆ, ಬಿಲಾಸ್ ಖಾನಿ ತೋಡಿಯನ್ನು ಕೂಡ ಭೈರವಿ ಥಾಟಿನಲ್ಲಿ ಸೇರಿಸುತ್ತಾರೆ. ತೋಡಿ ಥಾಟಿನಲ್ಲಿ ಅಲ್ಲ. ಹೀಗಾಗಿ ರಾಗದ ರಚನೆಯೇ ತೋಡಿಗಿಂತ ಭಿನ್ನವಾಗಿದ್ದು ಮೊದಲಿನ ಕೆಲವೇ ಸ್ವರಗಳಲ್ಲಿ ಸಂಗೀತಜ್ಞಾನಿಗಳು ಒಮ್ಮೆಲೆ ಈ ರಾಗವನ್ನು ಗುರುತಿಸುವುದುಂಟು.

ಮಧ್ಯಮ ಮತ್ತು ನಿಷಾಧ ಸ್ವರಗಳನ್ನೂ ಆರೋಹದಲ್ಲಿ ಬಿಟ್ಟುಕೊಟ್ಟು ಅವರೋಹದಲ್ಲಿ ಪಂಚಮವರ್ಜ್ಯವಾಗಿದ್ದರೂ ಈ ರಾಗ ಗಾಂಧಾರವನ್ನು ಎಳೆಯುವುದರಿಂದಲೂ, ಎಲ್ಲಾ ಸ್ವರಗಳು ಕೋಮಲವಿದ್ದ ಕಾರಣದಿಂದಲೂ ಈ ರಾಗದ ರಚನೆ ಅತ್ಯಂತ ಉತ್ಕೃಷ್ಟವಾಗಿದೆಯೆಂದು ಹೇಳಬಹುದು. ಹಿಂದುಸ್ತಾನಿ ರಾಗಗಳಲ್ಲಿ, ಕೋಮಲ ಅಸಾವರಿ ಹಾಗೂ ಭೈರವಿ ರಾಗಗಳಂತೆ ಇದ್ದರೂ ಇದರ ಪ್ರಕೃತಿಯೇ ಬೇರೆ. ಕಿಶೋರಿ ಅಮೋಣಕರ್ ಒಮ್ಮೆ ರೂಪಾರೇಲ್ ಕಾಲೇಜಿನಲ್ಲಿ ನೀಡಿದ ಕಚೇರಿ, ಹಾಗೂ ಅಶ್ವಿನಿ ಭಿಡೆ ದೇಶಪಾಂಡೆಯವರ ಬಿಲಾಸ್ ಖಾನಿ ತೋಡಿಯನ್ನು ನಾನೆಂದಿಗೂ ಮರೆಯಲಾರೆ. ಅಶ್ವಿನಿ ಹಾಡಿದ್ದು ಕಾಲಾಘೋಡಾ ಫೆಸ್ಟಿವಲ್ಲಿನಲ್ಲಿ ಮುಂಜಾನೆಯ ಸಮಯ ರವಿವಾರ ಯಾವಾಗಲೂ ಗಜಬಜಿಸುತ್ತಿರುವ ಡೇವಿಡ್ ಸಸೂನ್ ಲೈಬ್ರರಿಯ ಉದ್ಯಾನದ ರಮ್ಯಸ್ಥಳದಲ್ಲಿ. ಬಿಲಾಸ್ ಖಾನಿಯ ಸ್ವರಗಳ ಗುಂಜನದಲ್ಲಿ 'ನೀಕೆ ಘುಂಘರಿಯಾ' ವಿಲಂಬಿತ ಏಕತಾಲ ಖ್ಯಾಲದಲ್ಲಿ ಅವರೋಹದ ಪಂಚಮ ಸ್ವರವಿಲ್ಲದ ಬಿಲಾಸ್ ಖಾನಯಲ್ಲಿ ಸುತ್ತಮುತ್ತಲಿನ ಮರಗಳಲ್ಲಿಯ ಕೋಗಿಲೆಗಳು ತಮ್ಮ ಸ್ವರ ಸೇರಿಸಿದಾಗ ಹಾಡುವವರಿಗೂ ಸ್ಮಿತ ಹಾಸ್ಯ ಬಂದದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ, ಅನುಭವಿಸಿದ್ದೇನೆ (ಕೋಗಿಲೆಗಳು ವಸಂತ ಋತುವಿನ ಹೊರತಾಗಿಯೂ ಹಾಡುತ್ತವೆ ಎಂಬುದು ಇಲ್ಲಿ ಸ್ವಲ್ಪ ಅಪ್ರಸ್ತುತ).

1959–60ರ ಕಾಲದಲ್ಲಿ ನಾನು ಪಿಂಪರಿ–ಪುಣೆಯಲ್ಲಿ ಹಿಂದೂಸ್ಥಾನ ಆಂಟಿಬಯೋಟಿಕ್ಸ್‌ದಲ್ಲಿ 'ಅಪ್ರೆಂಟಿಸ್' ಆಗಿದ್ದೆ. ತಬಲಾ ಕಲಿಯಲು ಗುಲಾಮ ರಸೂಲ್ ಎಂಬ ಉಸ್ತಾದ್‌ರ ಬಳಿ ಹೋಗುತ್ತಿದ್ದೆ. ಅಲಿ ಅಕಬರ್ ಮತ್ತು ರವಿಶಂಕರರ ಅಪರೂಪದ ಜುಗಲಬಂದಿ ಮೊಟ್ಟ ಮೊದಲು ಕೇಳಿದ್ದು ಪುಣೆಯಲ್ಲಿಯೇ. ಮುಂಜಾನೆಯ ಮೆಹಫಿಲ್ಲು. ಮಧ್ಯದಲ್ಲಿ ಅಲ್ಲಾರಾಖಾ. ಪ್ರೇಕ್ಷಕರ ಎಡಕ್ಕೆ ಅಲಿ ಅಕಬರ್ ಮತ್ತು ಬಲಕ್ಕೆ ರವಿಶಂಕರ್. ಅವರಿಬ್ಬರೂ ಬಾರಿಸಿದ ಬಿಲಾಸ್ ಖಾನಿ ತೋಡಿಯನ್ನು ಕೇಳುವುದು ಒಂದು ಮರೆಯಲಾರದ ಅನುಭವವಾಗಿತ್ತು. ಒಂದೂವರೆ ತಾಸಿನ ಬಿಲಾಸ್ ಖಾನಿ ಸ್ವರ್ಗೀಯ ಸಂಗೀತದ ಒಂದು ಉತ್ತಮ ಉದಾಹರಣೆ ಎಂದರೆ ಅತಿಶಯೋಕ್ತಿ ಆಗಲಾರದು. ಮಿತವಾದ, ಹದವಾದ ತಬಲಾವಾದನ ಅಂದರೆ ಸವಾಲು–ಜವಾಬುಗಳು ಇದ್ದರೂ ಸಹ, ಒಬ್ಬರು ಮಧ್ಯ ಸಪ್ತಕದ ಸಂಚಾರದಲ್ಲಿದ್ದರೆ ಮತ್ತೊಬ್ಬರು ಮಂದ್ರ ಸಪ್ತಕದ ಪೂರಣದ ಓರಣ. ಅವರ ಬಿಲಾಸ್ ಖಾನಿಯ ತೋಡಿಯ ಎಲ್‌ಪಿ, ಮುಂದೆ ಮಾರುಕಟ್ಟೆಯಲ್ಲಿ ಬಂದಿದ್ದರೂ ಆ ದಿನ ರೂಪುಗೊಂಡ ಸ್ವಯಂ ಪ್ರೇರಿತ ಬಿಲಾಸ್ ಖಾನಿ ಅತ್ಯದ್ಭುತವಾಗಿತ್ತು.

ಹಿಂದೆ ನಾನು ಕುಮಾರ ಗಂಧರ್ವರ 'ಸಹೇಲಿ ತೋಡಿ'ಯ ಬಗ್ಗೆ ಬರೆದಿದ್ದೆ. ಈ ಸಲ ಅವರದೇ ಬಿಲಾಸ್ ಖಾನಿ ತೋಡಿಯ ಬಗ್ಗೆ ಕೆಲ ಸಾಲುಗಳು. ಇತ್ತೀಚಿಗೆ ಕಲಾಭಾರತಿಯ ಪೋಷಕರಾದ ಡಾ. ಓಸ್ವಾಲರ 75ನೇ ವರ್ಧಂತಿ ಸಮಾರಂಭಕ್ಕೆ ಡಾಕ್ಟರ ಸಾಹೇಬರು ನಮ್ಮನ್ನು ಸಪತ್ನೀಕರಾಗಿ ಕರೆದಿದ್ದರು. ಹುಟ್ಟು ರಸಿಕ ಓಸ್ವಾಲರು ರಾಜನ್–ಸಾಜನ್ ಮಿಶ್ರರ ಕಚೇರಿ ಏರ್ಪಡಿಸಿದ್ದರು. ಅವರು ಒಂದು ಗಂಟೆ ಬಿಲಾಸ್ ಖಾನಿ ಹಾಡಿ ತಣಿಸಿದರು. ಆಶ್ಚರ್ಯದ ಮಾತೆಂದರೆ, ಅವರು 'ಆಲೀರೇ ಮೈತೋ' ಬಂದಿಶ್ ಹಾಡಿದ್ದು. ಅಂದರೆ ಅದು ಕಿಶೋರಿಯವರಿಂದ ರಚಿತವಾದ ಬಂದಿಶ್.

ರಾಜನ್-ಸಾಜನ್ ಮಿಶ್ರ ಬನಾರಸ್ಸಿನವರು; ಹಾಡುಗಾರಿಕೆಯಲ್ಲಿ 'ಭೀಮಸೇನರ ಛಾಪು' ಎದ್ದು ಕಾಣಿಸುತ್ತದೆ. ದ್ವಂದ್ವಗೀತೆಯಾದುದರಿಂದ ಸ್ವಲ್ಪ ವೈವಿಧ್ಯವೂ ಇರುತ್ತದೆ. ಬನಾರಸ್ ಪರಂಪರೆಯ ಮಿಶ್ರ ಬಂಧುಗಳು ಕಿರಾನಾ ಪರಂಪರೆಯಲ್ಲಿ ಜಯಪುರಿನ ಕಿಶೋರಿಯವರ ಬಂದಿಶ್ ಪ್ರಸ್ತುತಿ ಪಡಿಸಿದ್ದು ಈ ಶತಮಾನದಲ್ಲಿ, ಸಂಗೀತದಲ್ಲಿ ಯಾವುದೂ ನಿಷಿದ್ಧವಲ್ಲ ಎಂಬುದನ್ನು ತೋರಿಸುತ್ತದೆ. ಕುಮಾರ ಗಂಧರ್ವ, ಜಸರಾಜ್ ಇವರ ಬಿಲಾಸ್ ಖಾನಿಯನ್ನು ಹಲವು ಸಾರಿ ಕೇಳಿದ್ದೇವೆ. ಕುಮಾರರು 'ಸಹೇಲಿ ತೋಡಿ'ಯನ್ನು 'ಧುನ ಉಗಮ' ರಾಗದ ಗುಂಪಿನಲ್ಲಿ ಸೇರಿಸಿದರೆ, ಬಿಲಾಸ್ ಖಾನಿಯನ್ನು ಪಾರಂಪರಿಕ ರಾಗಗಳ ಗುಂಪಿನಲ್ಲಿ ಸೇರಿಸಿದ್ದಾರೆ. ಅವರ 'ಅನುಪಮರಾಗವಿಲಾಸ' ಪುಸ್ತಕದಲ್ಲಿಯ ಅವರದೇ ಕೃತಿಯೆಡೆ ಕಣ್ಣುಹಾಯಿಸಿ:

ನಯನಮೇ ಜಲಭರ್ ಆಯೆ ದೇಖನ ತೋಹೆ
ಕಾಹೆ ಪಿಯಾ ದೇತ ನಹೀ ದರಸ್ ಮೋಹೆ ॥ಸ್ಥಾ॥
ಶೋಕ್ ಮನ್ ಛಾಯೆ, ಯಾದ್ ತರಸಾಯೆ
ಕೈಸೆ ಧರೂ ಧೀರ, ದೇವೋ ದರಸ್ ಮೋಹೆ ॥ಅಂತರಾ॥

ಅರ್ಥ ತುಂಬಾ ಸರಳವಾಗಿದೆ. ಬಹುಶಃ ಇದನ್ನು ಕುಮಾರರು ದೇವಾಸಕ್ಕೆ ಸ್ಥಳಾಂತರವಾದ ಕೂಡಲೇ ರಚಿಸಿರಬೇಕು. ಮಾಲವೀ ಶಬ್ದಗಳ ಸಂಚಾರ ಈ ಕೃತಿಯಲ್ಲಿ ಇಲ್ಲ. ಕವಿಯ ಲಯಬದ್ಧ, ಪ್ರಾಸಬದ್ಧ ಕವಿತೆಯಂತೆ ಈ ಕೃತಿ ಕಾಣಿಸುತ್ತಿದ್ದರೂ ಹಾಡುವಾಗ ಕರುಣರಸ ಓತಪ್ರೋತವಾಗಿ ಹರಿಯುತ್ತದೆ.

ಕರ್ನಾಟಕ ಸಂಗೀತದಲ್ಲಿ ಬಿಲಾಸಖಾನಿ ತೋಡಿ ಇಲ್ಲ. ಕರ್ನಾಟಕದ 'ಭೂಪಾಲಂ' ರಾಗವು ಬಿಲಾಸಖಾನಿಗೆ ಹೋಲುತ್ತದೆಯಂತೆ. ಗುಲ್ಜಾರರ ಚಿತ್ರಪಟದಲ್ಲಿನ (ಲೇಕಿನ) ಕುಮಾರ ಗಂಧರ್ವರ ಶಿಷ್ಯ ಸತ್ಯಶೀಲ ದೇಶಪಾಂಡೆ, 'ನೀಕೆ ಘುಂಘರಿಯಾ' ಹಾಡನ್ನು ಸುಂದರವಾಗಿ ಹಾಡಿದ್ದಾರೆ ಮತ್ತು ಇದನ್ನು ದಿಗ್ದರ್ಶಕರು ಮೋಹಕವಾದ ರೀತಿಯಿಂದ ಚಿತ್ರಿಸಿದ್ದಾರೆ. ಈ ಕೃತಿ ಬಿಲಾಸಖಾನಿಯಲ್ಲಿದೆ.

ಇನ್ನು ತೋಡಿ ವೃಕ್ಷದ ರೆಂಬೆಗಳ ಬಗ್ಗೆ ಏನು ಬರೆಯಲಿ? ಅಸಾವರಿ ತೋಡಿಯು ತೋಡಿ ಮತ್ತು ಅಸಾವರಿಯ ಮಿಶ್ರಣ. ಇದನ್ನು ನಾನು ಈವರೆಗೆ ಕೇಳಿದ್ದೇ ಇಲ್ಲ. ಕೆ.ಜಿ. ಗಿಂಡೆಯವರು 'ಆಸಾ' ಎಂಬ ರಾಗ ಒಂದು ಸಾರೆ ಹಾಡಿದ್ದು ಇದೆ. ಅದಕ್ಕೆ ಅವರು 'ಅಸಕಲಿ' ಎಂದು ಹೆಸರಿನ್ನಿಟ್ಟಿದ್ದರು. ಇವುಗಳಲ್ಲಿ 'ಕೋಮಲ ಅಸಾವರಿ' ತುಂಬಾ ಪ್ರಚಲಿತವಾಗಿದೆ. ಇದೇ ರಾಗ ಕಳೆದ 50 ವರ್ಷಗಳಲ್ಲಿ 'ಕೊಮಲ ಋಷಭ ಅಸಾವರಿ'ಯೆಂದೇ ಗುಣಿಜನರು ಹೆಸರಿಸಿದ್ದಾರೆ. ಅಸಾವರಿ ಮತ್ತು ಜೋನಪುರಿಯ ನಡುವೆ ತುಂಬಾ ಸಾಮ್ಯವಿದ್ದ ಕಾರಣದಿಂದ ಇದರಲ್ಲಿ ವೈವಿಧ್ಯವನ್ನು ತರಲು ಕೋಮಲ ಋಷಭವನ್ನು ಏರಿಸಿದ್ದೇ ಕೋಮಲ ಋಷಭ ಅಸಾವರಿಯಾಯಿತು. ಗಾಂಧಾರಿ ತೋಡಿ ಕೂಡ ಇದರಂತೆಯೇ. ಶ್ರೀ ಕೃಷ್ಣ ರತನಜನಕರರು ಇದನ್ನು ಯಾವಾಗಲೂ ಹಾಡುತ್ತಿದ್ದರು.

ಗುಜರಿ ಅಥವಾ ಗುರ್ಜರಿ ತೋಡಿ:

ಇದು ತುಂಬಾ ಪ್ರಚಲಿತವಾದ ರಾಗವಾಗಿದೆ. ಪಂಚಮ ವರ್ಜ್ಯವೇ ಈ ರಾಗದ ಲಕ್ಷಣ. ಇತ್ತೀಚೆಗೆ 'ಗುಜರಿ ತೋಡಿ'ಯನ್ನು ಕೂಡ 'ಮಿಯಾಂಕಿ ತೋಡಿ' ಅಥವಾ ತೋಡಿಯೆಂದು ಹಾಡುವ ರೂಢಿಯಾಗುತ್ತಾ ಇದೆ. ಅಂದರೆ ತೋಡಿ ಪ್ರಕಾರಗಳಲ್ಲಿ ಗುಜರಿ ತೋಡಿ ಮತ್ತು ಬಿಲಾಸಖಾನಿ ಇವೇ ಮುಂಜಾನೆ ಕೇಳಲು ಸಿಗುತ್ತವೆ. ಮಧ್ಯೆ 'ಕೋಮಲ ಅಸಾವರಿ' ಇಷ್ಟೆ. ಸರಾಗವರಾಳಿ ತೋಡಿಯ ಬಗ್ಗೆ ಈಗಾಗಲೇ ಬರೆದಿದ್ದೇನೆ. ಜಯಪುರ-ಅತ್ರೋಲಿ ಪರಂಪರೆಯ ಗಾಯಕರು 'ಭೂಪಾಲ್ ತೋಡಿ ಮತ್ತು 'ಬಹಾದುರೀ ತೋಡಿ'ಗಳನ್ನು ಯಾವಾಗಲೂ ಹಾಡುತ್ತಿರುತ್ತಾರೆ. ಎರಡೂ ಪ್ರಕಾರದ ತೋಡಿಗಳಲ್ಲಿ 'ಋಷಭ' ವರ್ಜ್ಯಮಾಡಿ ಹಾಡುವ ಜಯಪುರ್ ಪದ್ಧತಿಯೇ ರೂಢಿಗೊಂಡಿದೆ. 'ಮಂದ್ರ' ಮತ್ತು 'ಮಧ್ಯ ಸಪ್ತಕ'ದಲ್ಲಿಯೇ ಈ ರಾಗ ಅರಳುತ್ತದೆ. ಬಹಾದೂರಿ ತೋಡಿಯ ಬಗ್ಗೆ ಒಂದು ಮಾತು. ಎರಡು ತೋಡಿಗಳ ಅಂದರೆ ಶುದ್ಧ ತೋಡಿ ಮತ್ತು ಬಿಲಾಸಖಾನಿ ತೋಡಿಯ ಮಿಶ್ರಣವೇ 'ಬಹಾದೂರಿ ತೋಡಿ'.

ಕರ್ನಾಟಕದ ಒಂದು ವೈಶಿಷ್ಟ್ಯವನ್ನು ಹೇಳಬಹುದು. ಮುಂಬರುವ ದಿನಗಳಲ್ಲಿ ವಯಸ್ಸಿನ 50ರ ಒಳಗಿನ ಗಾಯಕರಲ್ಲಿ ಕರ್ನಾಟಕದವರೇ ಈ ತೋಡಿ ರಾಗವನ್ನು ತುಂಬಾ ಚೆನ್ನಾಗಿ ಹಾಡಬಲ್ಲರು ಎಂದು ಕಂಡುಬರಬಹುದು. ಮಹಾರಾಷ್ಟ್ರದಲ್ಲಿ ನೆಲೆಸಿದ ಪ್ರಸಿದ್ಧ ಗುರುಗಳು ಅಷ್ಟೊಂದು ಕಲಾವಿದರಿಗೆ ಗುರುಕುಲ ಪದ್ಧತಿಯಲ್ಲಿ ತರಬೇತಿಯನ್ನು ಕೊಟ್ಟಿಲ್ಲ ಎಂಬುದೂ ಸತ್ಯ. ಕರ್ನಾಟಕದಲ್ಲಿ ನೆಲೆಸಿದ ಗುರುಸ್ಥಾನ ತಲುಪಿದ ಸಂಗಮೇಶ್ವರ ಗುರವ್, ಬಸವರಾಜ ರಾಜಗುರು, ಪುಟ್ಟರಾಜ ಗವಯಿಗಳಿಗೆ ಗಾಯಕರ ಹೊಸ ಪೀಳಿಗೆಯನ್ನು ತಯಾರು ಮಾಡಿದ ಶ್ರೇಯಸ್ಸು ಸಲ್ಲುತ್ತದೆ. ಬೆಂಗಳೂರಿನ ರಾಮರಾವ್ ನಾಯಕರನ್ನು ಬಿಟ್ಟರೆ ಹೆಣ್ಣುಮಕ್ಕಳಿಗೆ ಅಷ್ಟು ಅಚ್ಚುಕಟ್ಟಾಗಿ ಕಲಿಸುವ ಗುರುಗಳೂ ಸಿಗಲಿಲ್ಲ ಎಂಬುದು ಮತ್ತೊಂದು ವ್ಯಥೆ. ಪರಮೇಶ್ವರ ಹೆಗಡೆ, ವಿನಾಯಕ ತೊರವಿ, ವೆಂಕಟೇಶ ಕುಮಾರ, ಕುಮಾರದಾಸ, ಶ್ರೀಪಾದ ಹೆಗಡೆ ಹಾಗೂ ಹಳೆಯ ಕಾಲದ ಪುರಾಣಿಕಮಠ ಇವರು ಚೆನ್ನಾಗಿ ಕಲಿಸುವ ಸಾಮರ್ಥ್ಯವನ್ನಿಟ್ಟುಕೊಂಡದ್ದು ಸಮಾಧಾನದ ಸಂಗತಿ. ಮುಂಬರುತ್ತಲಿರುವ ಕಲಾವಿದರಲ್ಲಿ ಧನಂಜಯ ಹೆಗಡೆ, ಕುಮಾರ ಮರ್ಡೂರ (ಸೋಮನಾಥ ಮರ್ಡೂರರ ಚಿರಂಜೀವಿ), ಆನಂದ ದೇಶಪಾಂಡೆ ಹಾಗೂ ಜಯತೀರ್ಥ ಮೇವುಂಡಿ ಜಯಭೇರಿ ಹೊಡೆಯುತ್ತಿರುವುದು ಮುಂಬಯಿಯ ಮತ್ತು ಪುಣೆ ರಸಿಕರಿಗೆ ಈಗಾಗಲೇ ಗೊತ್ತಿದೆ. ಆದರೆ ಹೆಣ್ಣುಮಕ್ಕಳಲ್ಲಿ ರಾಮರಾವ್ ನಾಯಕರ ಶಿಷ್ಯೆ ಲಲಿತಾ ರಾವ್ ಇವರು ಕೆಲವು ಹೆಣ್ಣುಮಕ್ಕಳಿಗೆ ಸಂಗೀತದಲ್ಲಿ ಬಹಳ ಚೆನ್ನಾದ ತರಬೇತಿಯನ್ನು ಕೊಟ್ಟರೂ ಇವರೆಲ್ಲ ಮದುವೆಯಾಗಿ ಜಪಾನಗೋ, ಅಮೆರಿಕಾ ದೇಶಕ್ಕೋ ಹೋಗಿಸೇರಿ ಕೊಂಡಿದ್ದು ಅಷ್ಟೇ ಕೂಡ ಸತ್ಯ. ಮಹಾರಾಷ್ಟ್ರದ ಸ್ತ್ರೀ ಗಾಯಕರೆಲ್ಲ ತುಂಬಾ ನಿಷ್ಣಾತರು.

*****

5.6

ಬಜೆ ಸರಗಮ್ ಯಹ್ ದೇಸ್ ರಾಗಮ್

ಹಿಂದೆ ಯಮನ ರಾಗದ ಬಗ್ಗೆ ಬರೆಯುವಾಗ 'ಚಲನಚಿತ್ರಗಳ ಶೇಕಡಾ 50ರಷ್ಟು ಹಾಡುಗಳು ಈ ರಾಗದಲ್ಲಿವೆ' ಎಂದು ಬರೆದಿದ್ದೆ. ಭೈರವಿ ಮತ್ತು ದೇಸ್ ರಾಗಗಳು ಕೂಡ ಇದಕ್ಕೆ ಅಪವಾದವಲ್ಲ. ದೇಶಿ ಹಾಗೂ ದೇಸರಾಗದಲ್ಲಿ ಗೊಂದಲ ಆಗುವ ಸಂಭವವಿದೆ. ಎರಡರಲ್ಲಿಯೂ ಮೂಲಭೂತ ಭಿನ್ನತೆ ಇದೆ. ಖ್ಯಾತ ಇಂಗ್ಲಿಷು ಪತ್ತೆದಾರಿ ಲೇಖಕ ಸರ್ ಆರ್ಥರ ಕಾನನ ಡಾಯಲ್‌ನ ಭಾಷೆಯಲ್ಲಿ 'ಇಟ್ ಈಸ್ ಎಲಿಮೆಂಟರಿ, ಮೈ ಡಿಯರ್ ವ್ಯಾಟ್ಸನ್' ಎಂದು ಶೆರಲಾಕ್ ಹೋಮ್ಸ್ ಹೇಳಿದ್ದು ಇಲ್ಲಿಗೂ ಅನ್ವಯಿಸುತ್ತದೆ. ದೇಶಿರಾಗ ತೋಡಿರಾಗಕ್ಕೆ ಸಂಬಂಧಿಸಿದ್ದು. ಮುಂಜಾವಿನ ರಾಗ. ದೇಸ್ ರಾಗ ಹಾಡುವ ಸಮಯ ಸೂರ್ಯಾಸ್ತದ ನಂತರ. ರಾತ್ರಿ ಹಾಡುವ, ಬಾರಿಸುವ ರಾಗ. ಯಮನ, ಪಹಾಡಿಗಳ ನಂತರ ಈ ರಾಗ ಚಲನಚಿತ್ರ ಸಂಗೀತದಲ್ಲಿ ತುಂಬಾ ಪ್ರಚಲಿತವಿದೆ. ಖಮಾಚ ಥಾಟಿನ ಈ ರಾಗದಲ್ಲಿ ಠುಮರಿ, ದಾದರಾ, ಸುಗಮ ಸಂಗೀತದ ಕೃತಿಗಳು ತುಂಬಾ ಚೆನ್ನಾಗಿ ಅರಳುತ್ತವೆ. ಇದಕ್ಕೆ ಅತ್ಯಂತ ಸಮೀಪದ ರಾಗವೆಂದರೆ ಸೋರಟ್ ಹಾಗೂ ತಿಲಕ್-ಕಾಮೊದ್. ಈ ರಾಗಗಳೂ ಕೂಡ ದೇಸ್‌ರಾಗದಂತೆ ಕೇಳಲು ತುಂಬಾ ಶ್ರವಣೀಯವಾದರೂ ಒಂದಕ್ಕೊಂದಕ್ಕೆ ಸುತರಾಂ ಸಂಬಂಧವಿಲ್ಲ. 'ದೇವದಾಸ್' ಚಿತ್ರಪಟದಲ್ಲಿಯ ಸೈಗಲ ಹಾಡಿದ 'ದುಃಖಕೆs ದಿನ ಅಬs ಬೀತsತ ನಾಹಿಂ' ಅಮರತ್ವವನ್ನು ಪಡೆದ ಈ ಹಾಡು 1934ರದ್ದಾದರೆ, ಇತ್ತೀಚಿನ ರಾಷ್ಟ್ರೀಯ ಏಕಾತ್ಮಕತೆಯನ್ನು ಬಿತ್ತರಿಸುವ 'ಬಜೆ ಸರಗಮ್ ಮಿಲೆ ಸೂರ' ಪಂ. ಭೀಮಸೇನ ಜೋಶಿ, ಬಾಲಮುರಲಿಕೃಷ್ಣ ಮತ್ತು ಇನ್ನಿತರ ಕಲಾವಿದರಿಂದ ಹಾಡಿಸಿ ಬಾರಿಸಲ್ಪಟ್ಟ ರಾಗವೇ ದೇಸ್. ಕರ್ನಾಟಕ ಸಂಗೀತದಲ್ಲಿಯ 'ಹರಿಕಾಂಭೋಜಿ'ಯಂತೆ. ಬಾಲಮುರಳಿ ಕೃಷ್ಣರು ಇದನ್ನು ವಯೋಲಾದ ಮೇಲೆ ಬಾರಿಸಿದ್ದೂ ಈ ಹಾಡಿನಲ್ಲಿ ಚಿತ್ರಿತವಾಗಿದೆ.

1959-60ರ ಸಮಯ. ಆಗಿನ ಬೊಂಬಾಯಿಯ ಬಂಗಾಲಿ ನಿವಾಸಿಗಳು ದಸರಾ ಹೊತ್ತಿಗೆ ಚರ್ಚ್‌ಗೇಟ್ ಸಮೀಪದಲ್ಲಿ ಅಂದರೆ ಈಗ 'ಫ್ಯಾಷನ್ ಸ್ಟ್ರೀಟ್' ಇರುವಲ್ಲಿ, ಅಲ್ಲಿಯ ದೊಡ್ಡ ಮೈದಾನದಲ್ಲಿ 'ದುರ್ಗಾಬಾಡಿ' ಉತ್ಸವವನ್ನು ಅತ್ಯಂತ ಭವ್ಯ ರೀತಿಯಲ್ಲಿ ನಡೆಸುತ್ತಿದ್ದರು. ಇಡೀ ಭಾರತದಿಂದ ಜ್ಯೇಷ್ಠ ಮತ್ತು ಶ್ರೇಷ್ಠ ಕಲಾವಿದರು ಇದರಲ್ಲಿ ಭಾಗವಹಿಸುತ್ತಿದ್ದರು. ಕಲಕತ್ತಾದಿಂದ ಅಲಿ ಅಕಬರ್, ರವಿಶಂಕರ್, ನಿಖಿಲ್

ಬ್ಯಾನರ್ಜಿ ಬಂದರೆ ವಾರಣಾಸಿಯಿಂದ ಬಿಸ್ಮಿಲ್ಲಾ ಖಾನರು ಬಂದು ಮೊದಲನೆ ದಿನದ ಶುಭ ಆರಂಭವನ್ನು ತಮ್ಮ ಶಹನಾಯಿಯಿಂದ ಮಾಡುತ್ತಿದ್ದರು. ಒಂದು ಸಲ ಖ್ಯಾತ ಠುಮರಿ ಗಾಯಕಿ ಸಿದ್ಧೇಶ್ವರಿ ದೇವಿಯವರ ಗಾಯನವನ್ನು ಇಲ್ಲಿ ಕೇಳಿದ ನೆನಪು. ಮಣಿರಾಮ್, ಪ್ರತಾಪ ನಾರಾಯಣ್ (ಈಗಿನ ಖ್ಯಾತ ಚಲನಚಿತ್ರ ಸಂಗೀತಕಾರರಾದ ಜತಿನ ಲಲಿತರ ಅಜ್ಜ), ಹಾಗೂ ಕಿರಿಯ ತಮ್ಮ ಜಸರಾಜರ 'ತಿರಂಗೀ' ಗಾಯನ ಕೂಡಾ ಇಲ್ಲಿಯೇ ಕೇಳಿದ್ದು. ಖ್ಯಾತ ಮೇವಾಟಿ ಪರಂಪರೆಯ ಹಾಡುಗಾರರಲ್ಲಿ ಈಗ ಉಳಿದವರೆಂದರೆ ಇತ್ತೀಚೆಗೆ ಸಂಗೀತ ಮಾರ್ತಾಂಡರೆಂದು ಖ್ಯಾತಿ ಪಡೆದ ಜಸರಾಜರಷ್ಟೆ! ಮೂವರೂ ಬಂಧುಗಳು ಸ್ಫುರದ್ರೂಪಿಗಳು. ಮಧ್ಯದಲ್ಲಿ ಸ್ವಲ್ಪ ಸ್ಥೂಲ ಶರೀರದ ಮಣಿರಾಮರು ಆಸನಸ್ಥರಾದರೆ ಬಲಬದಿಗೆ ಕೊಂಚ ಹಿಂದೆ ಪ್ರತಾಪ ನಾರಾಯಣ ಹಾಗೂ ಎಡಬದಿಗೆ ತಂಬೂರಿಯೊಂದಿಗೆ ಜಸರಾಜರು ಕುಳಿತು ಮಣಿರಾಮ ಹಾಡಲು ಅವಕಾಶ ಕೊಟ್ಟಾಗ ತಮ್ಮ ಸ್ವರವನ್ನು ಸೇರಿಸುತ್ತಿದ್ದರು. ಮಣಿರಾಮರ ಕಂಠಶ್ರೀ ಸ್ವಲ್ಪ ಗಡುಸಾಗಿದ್ದರೆ ಜಸರಾಜರದ್ದು ಮುಲಾಯಮ್ (ಕೋಮಲ) ಆಗಿತ್ತು. ಮೂವರೂ ಕೂಡಿ ಹಾಡಿದ 'ದೇಸ್' ರಾಗ ನನ್ನ ನೆನಪಿನ ಗಂಟಿನಲ್ಲಿ ಅಚ್ಚಳಿಯದೇ ಮಹತ್ವದ ಸ್ಥಾನವನ್ನೂ ಪಡೆದುಕೊಂಡಿದೆ. ಅಂದಿನ ದಿನಗಳಲ್ಲಿ ಇಂದಿನ ಸಂಗೀತ ಮಾರ್ತಾಂಡರು (ಜಸರಾಜ್) ಪಂ. ಮಣಿರಾಮರಿಗೆ ತಬಲಾ ಸಾಥ್ ಕೊಟ್ಟಿದ್ದುದನ್ನು ಓಪೆರಾ ಹೌಸಿನ ಪಕ್ಕದಲ್ಲಿಯ ಲಕ್ಷ್ಮೀಬಾಗ್ ಹಾಲಿನಲ್ಲಿ ನಾನು ಕೇಳಿದ್ದೆ. ಈ ದುರ್ಗಾಬಾಡಿ ಉತ್ಸವದಲ್ಲಿ ಅಮೀರಖಾನ್, ಗಂಗೂಬಾಯಿ ಹಾನಗಲ್ಲ ಹಾಗೂ ಭೀಮಸೇನ ಜೋಶಿಯವರನ್ನು ಕೇಳಿದ ಮಸುಕುಮಸುಕಾದ ನೆನಪು. ಈಗಲೂ ಈ ದುರ್ಗಾ ಬಾಡಿ ಉತ್ಸವವನ್ನು ನಡೆಸುತ್ತಾ ಬಂದಿದ್ದಾರೆ. ಆದರೆ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಅಂದಿನ ವಿಜೃಂಭಣೆಯೇ ಬೇರೆ! ದೇಸ್ ರಾಗಕ್ಕೆ ಒಂದು ನೈಸರ್ಗಿಕ ಸ್ವಭಾವ ಗುಣಧರ್ಮಗಳೊಂದಿಗೆ ಒಂದು ತರಹದ ಮಾಧುರ್ಯವಿದೆ. ಮೂಲಭೂತ ಏಳು ಬಣ್ಣಗಳಿಂದ ಕುಶಲ ಚಿತ್ರಕಾರ ತನ್ನ ಕುಂಚಗಳಿಂದ ಒಂದು ಅದ್ಭುತ ಚಿತ್ರವನ್ನು ನಿರ್ಮಿಸಿದ ಹಾಗೆ. ಇಲ್ಲಿಯೂ ಕೂಡ ಮೂಲಭೂತ ಏಳು ಸ್ವರಗಳಿಂದ ಕುಶಲ ಹಾಡುಗಾರ/ವಾದಕ ತನಗೆ ಕೊಟ್ಟ ರಾಗದ ವ್ಯಾಕರಣಕ್ಕನುಸಾರವಾಗಿ ಋಷಭದಿಂದ ಮಧ್ಯಮಕ್ಕೆ ಹೋಗಿ ಅಂದರೆ ಮಧ್ಯದ ಗಾಂಧಾರವನ್ನು ತಲುಪಿ ಋಷಭಕ್ಕೆ ಬರುವ ಎಳೆತವೇ (ಮೀಂಡ್) ಈ ಸೌಂದರ್ಯದ ಆತ್ಮವಾಗಿದೆ. ಈ ರಾಗದ ವಾದಿ ಸಂವಾದಿ ಸ್ವರಗಳ ಗೋಜಿಗೆ ಹೋಗದೆ (ಇದರಲ್ಲಿ ಸ್ವಲ್ಪ ಭಿನ್ನತೆ ಇದೆ) ಇದಷ್ಟೆ ರಾಗದ ಉಸಾಬರಿ ಸಾಕು.

ದೇಸ್ ರಾಗ ಅರಳುವುದು ವಾದನದಲ್ಲಿಯೇ. ಠುಮರಿ, ದಾದರಾ ಗಜಲ್‌ಗಳಲ್ಲಿ ಕೂಡ ಇದನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. 'ದೇಸ್' ಎಂಬ ಹೆಸರು 'ದೇಶ'ದ ಅಪಭ್ರಂಶವಾಗಿರಬೇಕು, ಸೌರಾಷ್ಟ್ರದ ಅಪಭ್ರಂಶ 'ಸೋರಟ್' ಆದ ಹಾಗೆ, ಕೆಲವು ಹಿಂದೂಸ್ಥಾನೀ ಗಾಯಕರು ಋಷಭ ಸ್ವರಕ್ಕೆ 'ರಿಖಬ್' ಅಂದ ಹಾಗೆ. ರಾಜಸ್ಥಾನ, ಉತ್ತರಪ್ರದೇಶ ಲೋಕಸಂಗೀತದ ಕೆಲ ಹಾಡುಗಳು ದೇಸರಾಗದಲ್ಲಿವೆ ಎಂದು ಕುಮಾರ ಗಂಧರ್ವರು ಹೇಳುತ್ತಿದ್ದರು. ಅಂತೆಯೇ 'ಸೋರಟಿ-ದೇಸಾ' 'ಸಾವನ್ ದೇಸಾ' ಹಾಗೂ 'ಜಲಧರ್ ದೇಸಾ' ಎಂಬ ರಾಗಗಳನ್ನು ತಮ್ಮ 'ಅನೂಪರಾಗವಿಲಾಸ'

ಪುಸ್ತಕದಲ್ಲಿ ಬರೆದಿಟ್ಟಿದ್ದಾರಂತೆ. ಕುಮಾರ ಗಂಧರ್ವರ 'ದೇಸ್' ರಾಗದಲ್ಲಿ ಅವರೇ ಕಟ್ಟಿದ 'ಆ, ರಾಜಾಜಿಕ ಘರೆಕ' ಯನ್ನು ನಾನು ಕೇಳಿದ್ದೇನೆ. ಅಂತೆಯೇ 'ಸೋರಟ್ ದೇಸ'ದಲ್ಲಿಯ ಅವರ ಕೃತಿ 'ನಯೋ ನಯೋ ಮೇಹಾ ಜೇಠ' ಅಂದರೆ ಜ್ಯೇಷ್ಠ ತಿಂಗಳದ ಉಗಮದ ಬಗ್ಗೆ ಅವರದೇ 'ಮಾಲವಕೇ ಗೀತ' ಎಂಬ ಕಾರ್ಯಕ್ರಮದಲ್ಲಿ ಕೇಳಿದ್ದೇನೆ.

ದೇಸರಾಗಕ್ಕೂ ಮಹಾದೇವನಿಗೂ ಸಂಬಂಧವಿಲ್ಲ. ಭೈರವ ಹಾಗೂ ಶಂಕರಾ ರಾಗದಲ್ಲಿ ಮಹಾದೇವನ ವರ್ಣನೆಯ ಕೃತಿಗಳು ಇವೆ. ಅಂತೆಯೇ ದೇಸ್‌ದಲ್ಲಿ ಕೂಡ. ನಾನು, ಈ ಮೊದಲು ಕೊಟ್ಟ ಮೇವಾತಿ ಬಂಧುಗಳ ಕೃತಿ 'ಗಲೇ ಭುಜಂಗ, ಭಸ್ಮ ಅಂಗ' ಅಂದರೆ ಪಾರ್ವತಿ ಮೊಟ್ಟ ಮೊದಲು ಶಂಕರನನ್ನು ನೋಡಿದಾಗಿನ ಸನ್ನಿವೇಶ. ಅವನ ಧ್ಯಾನಸ್ಥ ಮೂರ್ತಿಯ ವರ್ಣನೆ ಈ ಕೃತಿಯಲ್ಲಿದೆ. ಇದನ್ನೇ ನಂತರ ಜಸರಾಜರು ಧ್ವನಿ ಸುರುಳಿಯಲ್ಲಿ ಕೊಟ್ಟಿದ್ದಾರೆ. ವಾತಾವರಣ ನಿರ್ಮಿತಿಗೆ ಈ ರಾಗ ತುಂಬಾ ಅನುಕೂಲವಾಗಿದೆ. ಈ ರಾಗಕ್ಕೆ ಅಪೂರ್ವವಾದ ಒಂದು ತರಹದ 'ಎಲಾಸ್ಟಿಸಿಟಿ' ಇದೆ, ಅಂತೆಯೇ ಇದನ್ನು 'ವಂದೇ ಮಾತರಂ' ಹಾಡಿಗೂ ಕೂಡ ಉಪಯೋಗಿಸಿಕೊಂಡಿದ್ದಾರೆ.

4–5 ವರ್ಷಗಳ ಹಿಂದೆ ಸಂಗೀತ ರಿಸರ್ಚ್ ಅಕಾಡಮಿಯ ದತ್ತಿ ಪಡೆದುಕೊಂಡು ಒಂದು ಶುಕ್ರವಾರ ಸಂಜೆ (ಮಧ್ಯೆ ಕಲಾಭಾರತಿಯ ಕಾರ್ಯಕ್ರಮ ಶುಕ್ರವಾರ ಬೇಕೆಂದು ಬೇಡಿಕೆ ಬಂದಿತ್ತು. ಆದರೆ ರಸಿಕ ಶ್ರೋತೃಗಳ ಅಭಾವದಿಂದ ಮರಳಿ ಮುಂಜಾನೆಯ ಕಾರ್ಯಕ್ರಮ ಪ್ರಾರಂಭವಾಯಿತು) ನಡೆಸಿದ ಕಾರ್ಯಕ್ರಮದಲ್ಲಿ ಕಲಕತ್ತಾದಿಂದ ಆಗಮಿಸಿದ ಜಯಾ ಬೋಸರವರು ಸೀತಾರದ ಮೇಲೆ ಬಾರಿಸಿದ 'ದೇಸ್' ಇನ್ನೂ ಕಣ್ಮುಂದೆ ಕಟ್ಟಿದಂತಿದೆ. ಅತ್ಯಂತ ಸುಂದರವಾದ ಆಲಾಪ ಜೋಡ ಕ್ರಿಯೆಯಿಂದ ಪ್ರಾರಂಭವಾದ ಈ ರಾಗದಲ್ಲಿ ವಿಲಂಬಿತ ಬಾರಿಸದೇ, ಜಯಾ ನೇರವಾಗಿ ಮಧ್ಯಲಯ ಹಾಗೂ ಧ್ರುತಗತ ಬಾರಿಸಿದ್ದರಿಂದ ಅದು ಇನ್ನೂ ನೆನಪಿನಲ್ಲಿ ಉಳಿದುಕೊಂಡಿದೆ. ಲಯಕ್ಕೆ ಸಮನಾಗಿ ನಯನ ಘೋಷ್ (ಈತ ಸಿತಾರ್ ಪ್ರವೀಣ) ತಬಲಾ ಬಾರಿಸಿದ್ದರು. ನೆಹರೂ ಸೆಂಟರಿನಲ್ಲಿ ಹರಿಪ್ರಸಾದ ಚೌರಾಸಿಯಾ ಒಂದೂವರೆ ತಾಸು ಈ ರಾಗ ಧ್ರುಪದ್ ಅಂಗದಲ್ಲಿ ಮೊದಲು ಪಕಾವಜದೊಂದಿಗೆ, ಬಳಿಕ ಖ್ಯಾಲದಲ್ಲಿ ತಬಲಾದೊಂದಿಗೆ ಬಾರಿಸಿದ್ದು ಈ ರಾಗದ ವೈವಿಧ್ಯವನ್ನು ತುಂಬಾ ಚೆನ್ನಾಗಿ ಎತ್ತಿ ತೋರಿಸುತ್ತಿತ್ತು. ಪೈಗಂಬರವಾಸಿ ಝಿಯಾ ಮೊಯಿನುದ್ದೀನ್ ಡಾಗರ್ ಭಾರತೀಯ ವಿದ್ಯಾಭವನದಲ್ಲಿ ರುದ್ರ ವೀಣೆಯಲ್ಲಿ ಬಾರಿಸಿದ ಎರಡು ರಾಗಗಳು ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿವೆ. ಒಂದು ಕಾಂಭೋಜಿ, ಮತ್ತೊಂದು ದೇಸ್. ಡಾಗರ್ ಮನೆತನದ 19ನೇ ಮುಖ್ಯಸ್ಥರೆಂದರೆ (ಇವರಿಗೆ 'ಖಲೀಫಾ' ಎಂದೂ ಸಂಬೋಧಿಸುವುದೂ ಉಂಟು) ಮೊಯಿನುದ್ದೀನ ಸಾಹೇಬರು. ಬಂಗಾರದ ಕಡ್ಡಿಯ ಕನ್ನಡಕ ಧರಿಸಿದ ಶುಭ್ರವಸ್ತ್ರಾನ್ವಿತರಾದ ಡಾಗರರು, ವಿಶ್ವವಿದ್ಯಾಲಯದ ಪ್ರೊಫೆಸರರಂತೆ ಕಾಣುತ್ತಿದ್ದರು. ಇವರ ಪನವೇಲದ 'ಧ್ರುಪದ್' ಆಶ್ರಮಕ್ಕೆ ಹೋದರೆ ನಿಮಗೆ ಶಾರದಾ ದೇವಿಯ ದೇವಾಲಯಕ್ಕೆ ಹೋದ ಅನುಭವ ಉಂಟಾಗುತ್ತದೆ. 4–5 ಜರ್ಮನ್ ನಿವಾಸಿಗಳು ಮತ್ತಿಬ್ಬರು ಭಾರತೀಯರು. ಎದುರಿಗೆ ಐದಡಿ ಎತ್ತರದ ಶಾರದಾ ದೇವಿಯ

ಮೂರ್ತಿ, 24 ಘಂಟೆ ಎಣ್ಣೆಯ ದೀಪ, ಗಂಧದ ಸುವಾಸನೆ. ಮೂರ್ತಿಯ ಎರಡೂ ಬದಿಗೆ ಹಾಸಿಗೆ ಮತ್ತು ಸಂಗೀತದ ಉಪಕರಣಗಳು. ಇದನ್ನೆಲ್ಲಾ ಇಲ್ಲಿ ಬರೆಯುವ ಕಾರಣವೆಂದರೆ ಧ್ರುಪದ್ (ಧ್ರುವ ಪದ) ಪರಂಪರೆ ಹಿಂದುಸ್ತಾನಿ ಸಂಗೀತದ ಅತ್ಯಂತ ಪ್ರಾಚೀನ ಪರಂಪರೆಯಾಗಿದ್ದು, ಸಾಮವೇದದಿಂದ ಹುಟ್ಟಿದ್ದು ಎಂದು ಝಿಯಾ ಹೇಳುತ್ತಿದ್ದರು. ಅಂದ ಹಾಗೆ ಅವರ ಮಗಳ ಹೆಸರು ವೈದೇಹಿ. ಎಂದೂ ಅಭಕ್ಷಬಕ್ಷಣ ಮಾಡದ ಡಾಗರ ಮನೆತನದ ಪ್ರತಿಯೊಬ್ಬರೂ ಕಾಣಲಿಕ್ಕೆ ಅಪ್ಪಟ ವೈದಿಕರಂತೆ ಇದ್ದಾರೆ. ಅವರ ಮಗ ಬಹಾವುದ್ದೀನ್ ಈ ಮನೆತನದ 20ನೇ ಖಲೀಫಾ.

ಅವರು ಬಾರಿಸಿದ 'ಕಾಂಭೋಜಿ' ನಮಗೆಲ್ಲ ಕೇಳಲಿಕ್ಕೆ 'ಝಿಂಝೋಟಿ' ರಾಗದ ನೆನಪನ್ನು ತರುತ್ತಿತ್ತು. ಹೆಸರು ಕರ್ನಾಟಕೀ ಪ್ರಕಾರದ್ದು. ಮತ್ತೊಂದು ದೇಸ್. ರುದ್ರವೀಣೆಯಲ್ಲಿಯ ಧೀರ ಗಂಭೀರ ಪ್ರತಿಧ್ವನಿಯಿಂದ ಈ ರಾಗ ತುಂಬಾ ಪ್ರಭಾವ ಬೀರಿತ್ತು. ಈ ಪದ್ಧತಿಯ ಹಾಡುಗಾರಿಕೆಯಲ್ಲಿ ಪಖಾವಜಕ್ಕೆ ಅಂದರೆ ಮೃದಂಗ ನುಡಿಸಲು ಅವಕಾಶ ಒಂದೇ ನಿಮಿಷ, ಬಾಕಿ ಕ್ರಿಯೆಯೆಲ್ಲ ಆಲಾಪನೆಯಲ್ಲಿಯೇ. ಈಗ ರುದ್ರವೀಣೆ ಬಾರಿಸುವ ಖ್ಯಾತ ಹೆಸರೆಂದರೆ ಅಸದ್ ಅಲಿಖಾನ್‌ರದಷ್ಟೇ!

ಪಹಾಡಿ ರಾಗದ ಬಗ್ಗೆ ಬರೆದಾಗ ಬ್ರಿಜ್ ಭೂಷಣ ಕಾಬ್ರಾ (ಗಿಟಾರ), ಹರಿಪ್ರಸಾದ್ ಚೌರಾಸಿಯಾ (ಬಾನ್ಸುರಿ) ಮತ್ತು ಶಿವಶಂಕರ ಶರ್ಮಾ (ಸಂತೂರ್) ಇವರು ಬಾರಿಸಿದ 'ಕಾಲ್ ಆಫ್ ದ ವ್ಯಾಲಿ' ರಿಕಾರ್ಡಿನ ಬಗ್ಗೆ ವಿವೇಚಿಸಿದ್ದೆ. ಇದೇ ಧ್ವನಿಸುರುಳಿಯಲ್ಲಿ 'ದೇಸ್' ರಾಗವನ್ನು ಕೂಡ, ಈ ಮೂವರೂ ಬಹಳ ಚೆನ್ನಾಗಿ ಮೂಡಿಸಿದ್ದಾರೆ. ತಬಲಾ ಜತೆ ಕೊಟ್ಟಿದ್ದು ಝಕೀರ್ ಹುಸೇನ್. ಇದು 1960ರಲ್ಲಿ ಎಚ್‌ಎಂವಿಯವರು ರಿಲೀಸು ಮಾಡಿದ್ದು, ಕೇವಲ ಲಘು ಸಂಗೀತ ಹಾಗೂ 'ಪೊಪ್' ಪ್ರಕಾರಕ್ಕೆ ಹಿಮ್ಮೇಳವಾಗಿರುತ್ತಿದ್ದ ಗಿಟಾರ, ಶಾಸ್ತ್ರೀಯ ಸಂಗೀತದಲ್ಲಿ ಪ್ರಯೋಗ ನಡೆಸಿದ್ದು ಖ್ಯಾತ ಸಂಗೀತ ದಿಗ್ದರ್ಶಕ ಸಜ್ಜಾದ್ ಹುಸೇನ್. ಬಳಿಕ ಬ್ರಿಜ ಭೂಷಣ ಕಾಬ್ರಾ, ನಂತರ ವಿಶ್ವಮೋಹನ ಭಟ್ಟ, ಇತ್ಯಾದಿ. ವಿಶ್ವಮೋಹನ ಭಟ್ಟರು ರವಿಶಂಕರರ ಅನುಯಾಯಿಗಳು. ತಮ್ಮ ಗಿಟಾರಕ್ಕೆ, 'ಮೋಹನ ವೀಣಾ' ಎಂದು ಹೆಸರಿಟ್ಟು 'ಫ್ಯೂಷನ್ ಮ್ಯೂಸಿಕ್'ನಲ್ಲಿ ಹೆಸರುಮಾಡಿ ಪ್ರಸಿದ್ಧ ಗ್ರಾಮಿ ಪಾರಿತೋಷಕವನ್ನು ಎರಡು ಸಲ ಪಡೆದವರು. ಇವರ ದೇಸ್, 'ಎಕ್ಸ್‌ಪ್ಲೊರೇಷನ್ಸ್' ಎಂಬ ಹೆಸರಿನಲ್ಲಿ ಪ್ರಕಾಶಿಸಲ್ಪಟ್ಟ ಸುರುಳಿಯಲ್ಲಿ ತುಂಬಾ ಚೆನ್ನಾಗಿದೆ.

ರಾಜಸ್ಥಾನದ ಲೋಕಸಂಗೀತ ಹಾಡುವ ಅಲ್ಲಾಹ ಝಿಲಾಬಾಯಿಯವರ 'ಕೇಸರಿಯಾ ಬಾಲಮ್', ಹಾಡು ನಾಗೇಶ ಕುಕನೂರರವರ, 'ಡೊರ್' ಎಂಬ ಚಲಚಿತ್ರದಲ್ಲಿ ಉಪಯೋಗಿಸಿದ್ದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ಇದರಲ್ಲಿಯ ಮತ್ತೊಂದು ಹಾಡು ಮಿಶ್ರ ದೇಸ್ ರಾಗದಲ್ಲಿದ್ದು ಅಲ್ಲಾಹ್ ಝಿಲಾಬಾಯಿಯವರು ಅತ್ಯಂತ ಸುಂದರವಾಗಿ ಹಾಡಿದ್ದು, ಆ ಸುರುಳಿ ನನ್ನಲ್ಲಿದೆ. ಇದರ ಶಬ್ದಗಳು 'ಝೂಲೋ ಮಾಸೋ ದಿಯೋ ನಜಾಯೆ' ಮುಂದೆ ದೀಪ ಪ್ರಕಾರದಲ್ಲಿ ಈ ಸುರುಳಿ ಹಚ್ಚಿ ಕಣ್ಮುಚ್ಚಿ ಕುಳಿತರೆ ನೀವು ಬೀಕಾನೇರದ ಅಲ್ಲಾಹ ಝಿಲಾಬಾಯಿಯವರ ಮನೆಯ ಎರಡನೇ ಅಂತಸ್ತಿಗೆ ಮುಟ್ಟುವಿರಿ. ಇವರಿಗೆ 80ನೇ ವರ್ಷಕ್ಕೆ ಪದ್ಮಶ್ರೀ ಸಿಕ್ಕಿತು. ನಾನು ಭೆಟ್ಟಿಯಾದಾಗ ಅವರ ವಯಸ್ಸು 84. ಆದರೂ ಅವರ ಶಾರೀರ ಮೊದಲಿದ್ದ ಹಾಗೆಯೇ ಇತ್ತು.

ಎಷ್ಟು ಬೇಡಿಕೊಂಡರೂ ಅವರು ಹಾಡಲಿಲ್ಲ. ಮಾರನೆಯ ವರ್ಷವೇ ಅವರು ತೀರಿಕೊಂಡರು (1990).

ನನ್ನ ರಾಜಸ್ಥಾನದ ಪ್ರವಾಸದಲ್ಲಿ ಅಲ್ಲಿಯ 'ಕೇಸರಿಯಾ' ಹಾಡು ಬಹಳ ಸಲ ಕಲಾವಿದರಿಂದ ಕೇಳಿದರೂ ಅಲ್ಲಾಹ ಬಾಯಿಯವರ ಶಾರೀರದ ಮುಂದೆ ಅದು 'ಫಿಕಾ' (ಸಪ್ಪೆ) ಎನ್ನಿಸುತ್ತಿತ್ತು. ಗಂಗೂಬಾಯಿಯವರಂತಹದ ಮರ್ದಾನಿ ಗಂಟಲಿನ ಮಾರ್ದವತೆ ಅಲ್ಲಾಹ ಝಿಲಾಬಾಯಿಯವರಲ್ಲಿತ್ತು. 'ಆವೋರಿ ಸಖೀ ಝೋಟಾ ದೀಜೆ' ಮತ್ತು 'ಹೋಜಿ ಮ್ಹಾರಿ ಬೆಗ ಸುಧ ಲಿಜೊ' ಬಂದಿಶಗಳಲ್ಲಿ ಅಸ್ಸಲ್ ಮಾರವಾಡೀ ಭಾಷೆಯ ಪ್ರಯೋಗ ಚೆನ್ನಾಗಿ ಕೇಳಲು ಸಿಗುತ್ತದೆ. ಮತ್ತೊಂದು ವರ್ಷ ಋತುವಿನ ಹಾಡು ಇದೇ ರಾಗದಲ್ಲಿದ್ದು ಮಾರವಾಡೀ ಭಾಷೆಯದು ಜಸರಾಜರು ಹಾಡಿದ್ದು 'ಘನ ಗಗನ ಘನ ಉಮಡ ಕೀನೋ' ಕಿವಿಯಲ್ಲಿ ಇನ್ನೂ ಗುಯಿಗುಟ್ಟುತ್ತಾ ಇದೆ. ಠುಮರಿ ಗಾಯಕಿ ಬೇಗಮ್ ಅಖ್ತರ್ ಅಥವಾ ಅಖ್ತರೀ ಬಾಯಿಯವರನ್ನು ಅಜರಾಮರ ಮಾಡಿದ್ದು ಮರಾಠಿ ಸಾಹಿತಿ ಪು ಲ ದೇಶಪಾಂಡೆ. ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ, ಬಾಲ ಗಂಧರ್ವ, ಭೀಮಸೇನ ಜೋಶಿ ಹಾಗೂ ಬೇಗಂ ಅಖ್ತರ್ ಇವರೆಲ್ಲ ಪು.ಲ. ದೇಶಪಾಂಡೆಯವರ ಶ್ರದ್ಧೆಯ ವ್ಯಕ್ತಿಗಳು. ಪು.ಲ. ದೇಶಪಾಂಡೆಯವರ 'ತುಜ್ ಆಹೆ ತುಜ್ ಪಾಶಿ' ನಾಟಕದಲ್ಲಿ ಅಪ್ರತ್ಯಕ್ಷ ರೀತಿಯಲ್ಲಿ ಅಖ್ತರಿ ಬಾಯಿ ಪ್ರೇಕ್ಷಕರ ಮನಸೂರೆಗೊಳ್ಳುತ್ತಾಳೆ. ಇವಳು ದೇಸ್ ರಾಗದಲ್ಲಿ ಹಾಡಿದ ವರ್ಷ ಋತುವಿನ ನಂತರದ ಶಾಂತ ಮಳೆ (ಅಂದರೆ ಉಮಡ್ ಘಮಡ್ ನಂತರದು) 'ಛಾ ರಹೀ ಕಾಲೀ ಘಟಾ, ಜಿಯರಾ ಮೋರಾ ಲಹರಾಯೇ' ಇದು ದಾದರಾ ತಾಳದಲ್ಲಿಯ ಹಾಡು ಜೀವನದಲ್ಲಿ ಪ್ರಸನ್ನತೆಯನ್ನು ತರುತ್ತದೆ. ಶೋಭಾ ಗುರ್ಟು ಕೂಡ ಇದಕ್ಕೆ ಅಪವಾದವಿಲ್ಲ. 'ಸಾವನ ಆಯೋ ಮಾ' ಎಂಬ ಹಾಡು 'ಚಂದಿ' ತಾಳದಲ್ಲಿ ಹಾಡಿದ್ದು ಅವಿಸ್ಮರಣೀಯವಾಗಿದೆ.

ದೇಸ್ ರಾಗ ಅಂದರೆ ಗ್ರೇಟ್ ರಾಗ! 'ನೀಲಾ ಆಕಾಶ್' ಎಂಬ ಒಂದು ಸಿನೇಮಾದಲ್ಲಿ ಮದನ್ ಮೋಹನರು ಲತಾ ಮಂಗೇಶಕರರಿಂದ ಇದೇ ರಾಗದಲ್ಲಿ 'ಅಪಕೋ ಪ್ಯಾರ ಛುಪಾನೇ ಕೀ ಬುರೀ ಆದತ ಹೈ' ಹಾಡಿಸಿದ್ದುದನ್ನು ಇಲ್ಲಿ ನೆನಸಿಕೊಳ್ಳಬಹುದು.

ಶಂಕರ ಜಯಕಿಶನ್‌ರು 'ಆರಜೂ' ಚಿತ್ರದಲ್ಲಿ ಹಾಡಿಸಿದ ರಾಗ ಕೂಡ ದೇಸ್ ರಾಗವೇ! 'ಅಜೀ ರುಠಕರ್ ಅಬ್ ಕಹಾಂ ಜಾಯಿಯೇಗಾऽ' (ಮಹಮ್ಮದ ರಫಿ) ಕೊನೆಗೆ ಒಂದೇ ಒಂದು ದೇಸ್ ರಾಗದ ಉದಾಹರಣೆಯನ್ನು ಕೊಟ್ಟು ಈ ಲೇಖನವನ್ನು ಪೂರ್ತಿಗೊಳಿಸುತ್ತೇನೆ.

'1942 ಲವ್‌ಸ್ಟೋರಿ' ನೆನಪಿದೆಯಲ್ಲ? ರಾಹುಲ್ ದೇಬ್ ಬರ್ಮನ್‌ರ ಕೊನೆಯ ಸಿನೆಮಾ. 'ಪ್ಯಾರ್ ಹುವಾऽ ಛುಪ್‌ಕೆಸೆऽ' ಹಾಡು ಈ ರಾಗದಲ್ಲಿದೆ, ಅರ್ಥಾತ್ ಖಯ್ಯಾಮರ 'ಕಾಹೇಕೊ ಬ್ಯಾದೆ ಬಿದೇಸ್' ಈ 'ಉಮರಾವ್ ಜಾನ್' ಚಿತ್ರಪಟದ ಹಾಡು ದೇಸ್ ರಾಗದ ವರ್ಣರಂಜಿತತೆಯನ್ನು ಪೂರ್ಣವಾಗಿ ತೋರಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

*****

5.7

ತಿನಕ ತಿನ ಧಾನಿ, ಈ ರಾಗ ಮುಲ್ತಾನಿ

'ರಾಗವ್ಯಾಕರಣ' ಎಂಬ ಪುಸ್ತಕದಲ್ಲಿ 'ಮುಲ್ತಾನೀ ರಾಗ ಹಾಡುವ ಸಮಯ ಮಧ್ಯಾಹ್ನ 1ರಿಂದ 4ರವರೆಗೆ', ಎಂದು ಬರೆದಿದೆ. ಅಂತೆಯೇ ನಮ್ಮ 'ರಾಗನಿಧಿ'ಯ ಸುಬ್ಬರಾಯರು ಇದನ್ನು 'ಪರಮೇಲ ಪ್ರವೇಶಕ ರಾಗ' ಅಂದರೆ ಹಗಲಿನ ಕೊನೆಯ ಪ್ರಹರದ ರಾಗವೆಂದು ಹೇಳುತ್ತಾರೆ. ಇತ್ತೀಚೆಗೆ ಕಳೆದ 25–30 ವರ್ಷಗಳಲ್ಲಿ ಸಂಜೆ 5ಕ್ಕೆ ಪ್ರಾರಂಭವಾದ ಕಚೇರಿಯನ್ನು ರಾತ್ರಿ 8ರ ವೇಳೆಗೆ ಮುಗಿಸುವ ಪದ್ಧತಿ ಮುಂಬಯಿಯಲ್ಲಿ ರೂಢಿಯಾಗುತ್ತಾ ಇದೆ. ಕಾರಣ, ಹಲವಾರು ಮನೆಯ ರಸಿಕ ಸ್ತ್ರೀ ಪುರುಷೋತ್ತಮರು ಹಗಲಿಡೀ ಲಿಂಗಭೇದಭಾವವಿಲ್ಲದೆ ದುಡಿಯುತ್ತಿರುತ್ತಾರೆ. ಮೂರು ತಾಸಿಗಿಂತ ಜಾಸ್ತಿ ವೇಳೆಯನ್ನು ಸಂಗೀತ–ನೃತ್ಯ ಕಲೆಗೆ ಮೀಸಲಿಡರು! ಎರಡನೆಯದಾಗಿ, ಈ ಮಹಾನಗರದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆ ಓಡಾಡುವ ಭಯ. ಹೀಗಾಗಿ ಸಂಗೀತ–ನೃತ್ಯ ಕಚೇರಿಗಳಲ್ಲಿ ಪ್ರತಿದಿನ ಹಾಜರಿ ಕಡಿಮೆಯಾಗುತ್ತಾ ಬಂದಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳುವ ಕೆಲವೇ ಸಂಗೀತ–ನೃತ್ಯ ಕಲಾವಿದರ ಗುಂಪೇ ಇಂತಹ ಕಾರ್ಯಕ್ರಮಗಳಿಗೆ ಬರುವುದೂ ಮತ್ತೊಂದು ರೂಢಿ. ಒಬ್ಬರ ಕಾರ್ಯಕ್ರಮ ಮುಗಿದ ಕೂಡಲೇ ಅವರ ಕುಟುಂಬ ಪರಿವಾರದವರು ಮತ್ತೊಬ್ಬ ಕಲಾವಿದರ ಕಚೇರಿಯನ್ನು ಕಡೆಗಣಿಸಿ ಹೊರಟುಹೋಗುವ ದುಷ್ಟ ಪದ್ಧತಿಯೂ ರೂಢಿಯಾಗುತ್ತಾ ಇದೆ. ಇವೆಲ್ಲಾ ವಿನಾಶುಲ್ಕದ ಕಾರ್ಯಕ್ರಮಗಳು. ದುಬಾರಿ ಹಣ ತೆತ್ತು 5 ಸ್ಟಾರ್ ಕಲಾವಿದರ 'ಸೋ, ಸೋ' ಕಾರ್ಯಕ್ರಮಗಳಿಗೆ 'ಸ್ಟೇಟಸ್ ಸಿಂಬಲ್' ಎಂದು ಜನ ಹೋಗುತ್ತಾರೆ. ಅತ್ಯಂತ ಪ್ರಾಮಾಣಿಕತೆ, ಆತ್ಮೀಯತೆಯಿಂದ ಹಾಡುವ, ಬಾರಿಸುವ, ಕಲಾವಿದರ ಕಚೇರಿಗಳನ್ನು ದುರ್ಲಕ್ಷಿಸುತ್ತಿರುವುದು ಸಾಮಾನ್ಯ ಮಾತಾಗಿಬಿಟ್ಟಿದೆ! ಇದರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮಾಡುವ ಸಂಸ್ಥೆಯ ಸಭಾಸದರೂ ಪಾಲುಗೊಳ್ಳದಿರುವುದು ನಿಜಕ್ಕೂ ದುರ್ದೈವದ ಸಂಗತಿ. ಮತ್ತೊಂದು ಭೀತಿಯೆಂದರೆ ರಾತ್ರಿ 9ರಿಂದ ಮುಂಜಾನೆಯ 4ಗಂಟೆಯ ತನಕ ಹಾಡುವ, ನುಡಿಸುವ ರಾಗಗಳು ಕ್ರಮೇಣ ಅಸ್ತಂಗತವಾಗುವ ಲಕ್ಷಣಗಳೂ ಕಾಣಿಸುತ್ತಾ ಇವೆ. ಮಧುವಂತಿ, ಮುಲ್ತಾನಿ ಅಥವಾ ಭೀಮಪಲಾಸಿ ಇತ್ತೀಚೆಗೆ ಪ್ರಚಾರದಲ್ಲಿ ಬರುವ ಕಾರಣ ಇದೇ. ರಾತ–ತರಂಗಗಳನ್ನು ಕೊನೆಯಲ್ಲಿ ಮೂಡಿಸುವ ವಿಚಾರವೂ ಇದೇ. ಈ ರಾಗಗಳಲ್ಲಿ ಕೃತಿಗಳು ಕೂಡ ಕೆಲವೇ ಇದ್ದು ಮಧುವಂತಿಯಾದರೆ 'ನ ಮಾನೆ ಸಖೀ ಮೋರೆ' ಯಿಂದ ಪ್ರಾರಂಭವಾಗುತ್ತಿದ್ದರೆ, ಮುಲ್ತಾನಿಯ ಕೃತಿ

ಸದಾರಂಗನದು, 18ನೇ ಶತಮಾನದ್ದು. ಪಂಡಿತ ಭೀಮಸೇನ ಜೋಶಿಯವರಾಗಲೀ ಅಥವಾ ಅವರ ಮೊಮ್ಮಗ ಹಾಡುಗಾರನಾದರೆ ಅವರ ಕಚೇರಿ ಪ್ರಾರಂಭವಾಗುವುದೇ ಈ ಸದಾರಂಗನ ಅಮರಕೃತಿಯಿಂದ. ಅದರ ಶಬ್ದಗಳು ಹೀಗಿವೆ:

'ಗೋಕುಲ ಗಾಂವ ಕಾ ಛೋರಾ, ಬರಸಾನೆ ಕೀ ನಾರ ॥ ಸ್ಥಾಯಿ ॥
ಇನ ದೋವೂನ ಮನ ಮೋಹ ಲಿಯೊ ಹೈ
ರಹೆ ಸದಾರಂಗ ನಿಹಾರ ರೇ ॥ ಅಂತರಾ ॥

ಈ 15 ಶಬ್ದಗಳ 36 ಅಕ್ಷರಗಳ ಬಂದಿಶನ್ನು ಖ್ಯಾತಗಾಯಕರು ಒಂದು ತಾಸು ಸಲೀಸಾಗಿ ಹಾಡಬಲ್ಲರು. ಈ 36 ಅಕ್ಷರಗಳ ಕೃತಿಯಲ್ಲಿ ಸಾಹಿತ್ಯವಿದೆ, ಕಲ್ಪನಾ ವಿಲಾಸವಿದೆ, ವಿಸ್ತಾರವಾಗಿ ಹಾಡುವ ಕ್ಷಮತೆ ಇದೆ. ಕವಿ ಸದಾರಂಗ ಒಂದು ಮೂಲೆಯಲ್ಲಿ ಕುಳಿತು ಕೃಷ್ಣ-ರಾಧೆಯ (ಛೋರಾ – ಕೃಷ್ಣ ನಾರ ರಾಧೆಯ) ಸಲ್ಲಾಪವನ್ನು ವೀಕ್ಷಿಸುತ್ತಾ ಅದೂ ಕೂಡ ಅದೃಶ್ಯವಾಗಿ ಭಕ್ತಿಭಾವದಿಂದ ಹಾಡುತ್ತಿರುವ ಭಾಸವಾಗುತ್ತದೆ.

ಮುಲ್ತಾನಿ ರಾಗದಲ್ಲಿ ಮಧುವಂತಿಗಿಂತ ಹೆಚ್ಚು ವೇಳೆ ಬೋರು ಮಾಡದೆ ಹಾಡುವ ಕ್ಷಮತೆ ಇದೆ. ಇದರ ಅರ್ಥ ಪದೇ ಪದೇ ಅದೇ ಆವರ್ತನೆ ಅದೇ ಶಬ್ದೋಚ್ಚಾರ, ಸ್ವರ-ವ್ಯಂಜನಗಳ ಸಂಗತಿ, ಅದೇ ತಾನುಗಳ ಸುರಿಮಳೆಯನ್ನೂ ಬದಿಗಿರಿಸಿ ರಾಗದ ಚೌಕಟ್ಟಿನಲ್ಲಿಯೇ ಇಟ್ಟುಕೊಂಡು ಹಾಡುಗಾರ ಮುಲ್ತಾನಿಯನ್ನು ಹಾಡಬಲ್ಲ. ಇತ್ತೀಚೆಗೆ ಮುಲ್ತಾನಿಗಿಂತ ಮಧುವಂತಿಯೇ ರೇಡಿಯೋದಲ್ಲಿ ಮತ್ತು ಕಚೇರಿಗಳಲ್ಲಿ ಕೇಳಬರುತ್ತದೆ. ಇದರ ಕಾರಣ ಮಧುವಂತಿ ರಾಗದ ರಸ್ತೆ ನೇರವಾಗಿದ್ದರೆ, ಮುಲ್ತಾನಿಯದು ಓರೆಕೋರೆ. ಕೆಲವು ಕಡೆ ಬಂಡೆಗೆ ಹೋಗಿ ಅಪ್ಪಳಿಸುವ ಭಯವಿದೆ, ಅಥವಾ ಇತ್ತೀಚೆಗೆ ರಸ್ತೆ ರಿಪೇರಿ ಮಾಡುವಾಗ ಹೊಸತಾಗಿ ತಂದುಹಾಕಿದ ಅಡ್ಡ-ತಿಡ್ಡ ಸಣ್ಣ ದೊಡ್ಡ ಕಲ್ಲುಗಳ ಮೇಲೆ ನಡೆಯುವ ಪ್ರಸಂಗ ಬಂದಾಗ ಅಭ್ಯಾಸವಿಲ್ಲದವರು ನಡೆಯಲು ಪ್ರಯತ್ನಿಸಿದರೆ ಅಪಾಯಕ್ಕೆ ಈಡಾಗುವುದು ಬಹುತೇಕ ನಿಶ್ಚಿತ.

ಕೇಸರಬಾಯಿ ಕೇರಕರ್‌ರಾಗಲಿ ಅಥವಾ ನಮ್ಮ ಗಂಗೂಬಾಯಿ ಹಾನಗಲ್ಲರಾಗಲಿ ಹಾಡುಗಾರಿಕೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಅತ್ಯಂತ ಪರಿಶ್ರಮಪಟ್ಟಿದ್ದು ಗೊತ್ತಿದ್ದ ವಿಷಯವೇ. ಆ ಕಾಲದಲ್ಲಿ ಗುರುಗಳು ತಮ್ಮ ಶಿಷ್ಯರಿಗೆ ರಾಗದ ಹೆಸರು ಹೇಳದೇ ಗಂಟೆಗಟ್ಟಲೆ ತಾಲೀಮು ಮಾಡಿಸುತ್ತಿದ್ದರು. ರಾಗದ ಹೆಸರನ್ನು ಕೇಳಲು ಭಯ! ಮುಂಜಾನೆ ತೋಡಿಯ ರಿಯ್ಯಾಜು, ಮಧ್ಯಾಹ್ನದ ವಾಮಕುಕ್ಷಿಯ ನಂತರ ಮುಲ್ತಾನಿ (ಆಗಿನ್ನು 'ಮಧುವಂತಿ' ಹುಟ್ಟಿರಲಿಲ್ಲ), ರಾತ್ರಿ ಪೂರಿಯಾ. ಇವನ್ನೇ ಪಂಡಿತ ಭೀಮಸೇನ ಜೋಶಿ ಮೂರು ವರ್ಷ ಸತತವಾಗಿ ಕಲಿತದ್ದು. ಗಂಗೂಬಾಯಿಯವರು ಕೂಡ ಹಾಗೆಯೇ. ಈ ರಾಗಗಳು 'ಯಮನ ಒಂದು ಗಂಟಲಾಗ ಇಳಿದ್ರ ಸಾಕು, ಉಳಿದವು ಹಂಗs ಬರ್ತಾವ' ಎಂದು ವಿದುಷಿ ಗಂಗೂಬಾಯಿಯವರು ನನ್ನಲ್ಲಿ ಹೇಳಿದ್ದುಂಟು. ಇದರರ್ಥ ಇಷ್ಟೆ. ಗುರುಗಳು ರಾಗದ ಸ್ವರಜ್ಞಾನ ಮಾಡಿಸುವಾಗ ಈ ಗಂಟೆಗಟ್ಟಲೆ ರಿಯ್ಯಾಜಿನಿಂದ ಗಂಟಲಿನ ಧ್ವನಿಯಂತ್ರ ನುಣುಪಾಗುವುದಷ್ಟೇ ಅಲ್ಲ, ಅಪರೋಕ್ಷ ಸ್ವರಜ್ಞಾನದ ತಿಳಿವು ಬರುತ್ತಿರುವುದು ಸಹಜವೇ.

ಮಧ್ಯಾಹ್ನದ ಊಟದ ಕೊನೆಯ ಮಜ್ಜಿಗೆ ಅನ್ನ, ನಂತರದ ವಾಮಕುಕ್ಷಿಯಾಗಿ ಗಂಟಲಿನಲ್ಲಿ ಒಂದು ಕಪ್ಪು ಚಹಾ ಇಳಿದ ಮೇಲೆ ಬರುವ ಹುರುಪನ್ನು ಈ 'ಮುಲ್ತಾನಿ' ಕೊಡುತ್ತದೆ. ಅಡುಗೆ ಮನೆಯಲ್ಲಿ ಇಡೀ ದಿನ ಕೆಲಸ ಮಾಡಿ ಕಸಮುಸುರೆಯಾಗಿ ದಣಿವಾದ ಶರೀರ ಒಂದರ್ಧ ತಾಸು ಮಲಗಿ ಎದ್ದ ಮೇಲಿನ ಶಾಂತತೆಯನ್ನು ಈ ರಾಗ ಕೊಡುತ್ತದೆ. ಸಂಧಿ ಪ್ರಕಾಶದ ಬಿಸಿಲಿನ ಕಾವಿನ ಹಾಗೆ, ಮಂದ ಪವನದ ಕಂಪು ಮತ್ತು ಇಳಿಬಿಸಿಲಿನ ತಂಪು ಎಂದು ಸ್ವಲ್ಪ ಕಾವ್ಯಮಯವಾಗಿ ಹೇಳಬಹುದು.

ಈ ರಾಗದ ಮೇಲೆ ಬರೆಯುವ ಮೊದಲು ಗುರುಸಮಾನರಾದ ಆಚಾರ್ಯ ಭಟ್ಟರಿಗೆ ಕೇಳಿದೆ (ಇವರು ಶುಕ್ಲ ಚಂದ್ರಶೇಖರ ಭಟ್ಟ ಅವರು, ಮೂಲ ಶಿರಾಲಿಯವರು, ರತನಜನಕರ ಅವರ ಶಿಷ್ಯರು, ತಾನಸೇನ ಸಮ್ಮಾನ ವಿಭೂಷಿತರು): ಪ್ರಾಚೀನ ಸಂಸ್ಕೃತ ಪುಸ್ತಕಗಳಲ್ಲಿ ಮುಲ್ತಾನಿ ಬಗ್ಗೆ ಮಾಹಿತಿ ಇಲ್ಲವಂತೆ. ಮೊಟ್ಟಮೊದಲಿನ ಈ ರಾಗದ ವಿವರ 14ನೇ ಶತಮಾನದ ಲೋಚನ ಬರೆದ 'ರಾಗತರಂಗಿಣಿ'ಯಲ್ಲಿ ಬರುತ್ತದೆ. ಪುಣೆಯಲ್ಲಿ ವಾಸ್ತವ್ಯ ಮಾಡಿದ ಗೋವಾದ ಮಂಗೇಶಿ ದೇವಾಲಯದ ಅರ್ಚಕರ ಮನೆತನದಲ್ಲಿ ಹುಟ್ಟಿದ ಪಂ. ಜಿತೇಂದ್ರ ಅಭಿಷೇಕಿ ಅಂದರೆ 20ನೇ ಶತಮಾನದ ಹಿಂದುಸ್ತಾನಿ ಸಂಗೀತದ ವಾಗ್ಗೇಯಕಾರ. ಮರೆತುಹೋದ, ಚಾಲನೆಯಲ್ಲಿ ಇಲ್ಲದ ಬಹಳ ರಾಗಗಳನ್ನು ಇವರು ಕಚೇರಿಯಲ್ಲಿ ಬಳಕೆಯಲ್ಲಿ ತಂದರು. ಉದಾಹರಣೆ 'ದಿನಕಿ ಪೂರಿಯಾ, ಉತ್ತರೀ ಬಸಂತ'. ರಾಮಪುರ ಸೆಹಸ್ವಾನ ಮನೆತನದ ಉತ್ತರೀ ಬಸಂತವೇ ಮುಲ್ತಾನಿಯ ಮೂಲವೆಂದು ಈ ಪಂಡಿತರ ಹೇಳಿಕೆಯಾಗಿತ್ತು. ಅವರು ಹೇಳಿದ ಮೇಲೆ ಬೇರೆ ಮಾತಿಲ್ಲ.

ಕೆಲ ವರ್ಷಗಳ ಮೊದಲು ಮಧ್ಯಾಹ್ನದ ಹೊತ್ತಿನ ಆಕಾಶವಾಣಿಯ ಪ್ರಸಾರದಲ್ಲಿ ಮುಲ್ತಾನಿ ರಾಗ ಬಹಳ ಸಲ ಕೇಳಬರುತ್ತಿತ್ತು. ಇತ್ತೀಚೆಗೆ ಮಧುವಂತಿಯೇ ಜಾಸ್ತಿ ಕೇಳಬರುತ್ತಿದೆ. ಮುಲ್ತಾನಿ ರಸ್ತೆ ಕಲ್ಲುಗುಂಡಿನದು ಎಂದು ಮೊದಲೇ ಹೇಳಿದ್ದೇನೆ. ಸರಿಯಾಗಿ ಹಾಡದಿದ್ದರೆ ಬೋರು ಹೊಡೆಯುವುದೂ ಇದೆ. ಹಾಡುವಾಗ ಕೊನೆ ಎಲ್ಲಿ ಬರಬೇಕು, ಯಾವ ಶಬ್ದ ಎಳೆಯಬಹುದು, ವಿಶ್ರಾಮ ಎಲ್ಲಿ ಇವುಗಳನ್ನು ವಿಚಾರಮಾಡಿ ಸಾವಧಾನತೆಯಿಂದ ಈ ರಾಗದ ವಿಸ್ತಾರಕ್ಕೆ, ಇದರ ಕಾವ್ಯಕ್ಕೆ ಕುಂದುಬಾರದಂತೆ ಹಾಡಬೇಕು. (ಎಲ್ಲಾ ರಾಗಗಳೂ ಹಾಗೆಯೇ). ಉದಾಹರಣೆಗೆ ಮೇಲೆ ಕೊಟ್ಟ ಚೀಜು ಅಥವಾ ಬಂದಿಶದಲ್ಲಿ ಬರಸಾನಾ ಎಂಬುದು ರಾಧೆಯ ಊರು. ನಾನು ಹಲವು ಸಲ ಈ ರಾಗ ಕೇಳುವಾಗ ಕೆಲವು ಹಾಡುಗಾರರು ಬರಸಾನೇ, ಕಿನಾರ ಎಂದು ಶಬ್ದರಚನೆ ಮಾಡಿದ್ದುದನ್ನು ನಾನು ಕೇಳಿದ್ದೇನೆ. ಕಿನಾರ ಎಂದರೆ ದಡ. ಕಾವ್ಯ ತಿಳಿಯದೇ ಹಾಡಿದ ಪ್ರಮಾದ ಅಥವಾ ತಾಳಕ್ಕೆ ತಪ್ಪಿದುದರಿಂದ ವಿಶ್ರಾಮ ಸಿಕ್ಕಿದ ಸ್ಥಳ ಕಿನಾರ. ಭೀಮಸೇನ ಜೋಶಿಯವರ ಮುಲ್ತಾನಿ ಕೇಳಿದಷ್ಟು ಕಡಿಮೆ. ಶಬ್ದೋಚ್ಚಾರ, ಭಾವ ಪ್ರದರ್ಶನ, ಭಕ್ತಿಭಾವನೆಯನ್ನು ಹುಟ್ಟಿಸುವ ಪ್ರಕ್ರಿಯೆ, ಪ್ರತಿಯೊಂದು ಸ್ವರದಲ್ಲಿ ಸೂಸುತ್ತಿರುವುದನ್ನು ,ಹೊಸ ಗಾಯಕರೂ, ವಾದಕರೂ, 'ಕಾನಸೇನ'ರೂ ಗಮನಿಸಬೇಕು. ಇದರಲ್ಲಿಯ ಬೇಗ ನಡಿಗೆಯ ಬಂದಿಶ್ 'ಕಂಗನ ಮಂದರಿಯಾ' ಕೇಳುವಾಗಲಂತೂ ಅತ್ಯಂತ ಆತ್ಮೀಯತೆ, ಸ್ನೇಹಭಾವ ಉಂಟಾಗುತ್ತದೆ. ಈಗ ಮುಲ್ತಾನ ಪ್ರದೇಶ ನಮ್ಮದೆ ಉಳಿಯದಿದ್ದರೂ ಅಲ್ಲದಿದ್ದರೂ ಮುಲ್ತಾನಿ ರಾಗ ನಮ್ಮದೇ, ಇದನ್ನು ಯಾರೂ ನಮ್ಮಿಂದ ಕಸಿದುಕೊಳ್ಳಲು ಸಾಧ್ಯವಿಲ್ಲವೆಂಬ ಸಮಾಧಾನ ನನಗಿದೆ.

ಮುಲ್ತಾನಿ ರಾಗಕ್ಕೂ ಕರ್ನಾಟಕ-ಮಹಾರಾಷ್ಟ್ರ ಪ್ರದೇಶಕ್ಕೂ ಒಂದು ಸಂಬಂಧವಿದೆ. ಉತ್ತರಾದೀ ಸಂಗೀತದ ಉತ್ತರ ಪ್ರದೇಶದ ಕೈರಾನಾ ಊರಿನ ಉಸ್ತಾದ್ ಅಬ್ದುಲ ಕರೀಂಖಾನರು ಮತ್ತು ಅವರ ತಮ್ಮ ಉಸ್ತಾದ್ ವಹೀದ ಖಾನರು ಈ ಪ್ರದೇಶದಲ್ಲಿಯ ವಾಸ್ತವ್ಯ ಮತ್ತು ಅವರು ತಯಾರಿಸಿದ ದೊಡ್ಡ ಶಿಷ್ಯವೃಂದ. ಮುಲ್ತಾನದ ಬಡೇ ಗುಲಾಮ ಅಲಿ ಖಾನರೂ ಕೂಡ ಈ ರಾಗವನ್ನು ಅಷ್ಟೇ ಪ್ರಭಾವಶಾಲಿಯಾಗಿ ಹಾಡುತ್ತಿದ್ದರು. ಇದಷ್ಟೇ ಸಾಲದೆಂಬಂತೆ ಗ್ವಾಲಿಯರ ಪರಂಪರೆಯ ಕೃಷ್ಣರಾವ್ ಶಂಕರ ಪಂಡಿತ, ಧಾರವಾಡದ ಗುರುರಾವ ದೇಶಪಾಂಡೆ, ಓಂಕಾರನಾಥ ಠಾಕೂರ್ (ಸುರಜನ ಮತವಾಲಾ - ಬಂದಿಶ್) ಹಾಗೂ ಜಯಪುರ್ ಪ್ರಣಾಲಿಯ ಮೋಗುಬಾಯಿ ಕುರ್ಡಿಕರ (ಕೌನ್ ದೇಸ ಗಯಿ ಪಿಯಾ-ಬಂದಿಶ್) ತುಂಬಾ ಚೆನ್ನಾಗಿ ಪ್ರಸ್ತುತ ಮಾಡುತ್ತಿದ್ದುದು ಮತ್ತು ಅವರ ಶಿಷ್ಯರು, ಮರಿಶಿಷ್ಯರು ಈ ರಾಗವನ್ನೇ ತಮ್ಮದನ್ನಾಗಿ ಮಾಡಿಕೊಂಡರು. ಇಂದೋರ ಪರಂಪರೆಯ ಅಮೀರಖಾನರ ವಾಸ್ತವ್ಯ ಮುಂಬಯಿಯಲ್ಲಿಯೇ. ಪೆಡ್ಡರ್ ರೋಡಿನ ವಸಂತ ಬಂಗಲೆಯಲ್ಲಿ ಬರುವ ಮುನ್ನ ಅವರು ಕೆನೆಡಿ ಬ್ರಿಡ್ಜ್ ಅಂದರೆ ಓಪರಾಹೌಸ್ ವಿಭಾಗದಲ್ಲಿ ಮನೆಮಾಡಿದ್ದರು. ಈಗಲೂ ಕೂಡಾ ಕೆನಡಿ ಬ್ರಿಡ್ಜ್ ಇಳಿದು ಕೆಳಗೆ ಹೋದರೆ ಒಂದು ಪುರಾತನ 'ಹಿಂದುಸ್ತಾನಿ ಸಂಗೀತ ಶಾಲಾ' ಎಂಬ ಫಲಕ ನಿಮ್ಮನ್ನು ಸ್ವಾಗತಿಸುತ್ತದೆ. 40 ವರ್ಷಗಳ ಮೊದಲಿನ ಬೋರ್ಡ್. ಮುಸಲ್ಮಾನರಾದರೂ ಅವರೂ ಭಕ್ತಿಭಾವದಿಂದ ಹಾಡಿದ 'ಹೇ ಗಿರಿಧರ ಗೋಪಾಲ ದಯಾಕರೋ' ಗೀತೆಯನ್ನು ಇಂದು ಕೇಳಿದರೆ ಕೂಡ ರೋಮಾಂಚನ ಹುಟ್ಟಿಸುತ್ತದೆ. ಇದನ್ನೇ ಅಮೀರಖಾನರು 'ಶಬಾಬ್' ಚಿತ್ರಪಟದಲ್ಲಿ ನೌಶಾದ ಸಾಹೇಬರ ಸಂಗೀತ ನಿರ್ದೇಶನದಲ್ಲಿ ಹಾಡಿದ್ದಾರೆ. ಉತ್ತರಾದೀ ಸಂಗೀತದ ರಸರಾಜ್‌ರೆಂದು ಅನಿಸಿಕೊಂಡ ಜಸರಾಜ್‌ರೂ ಕೂಡ ಮುಲ್ತಾನಿ ಹಾಡಿದ್ದನ್ನು ಕೇಳಿದ್ದೇನೆ. ಅವರ ಶಿಷ್ಯ ಸಂಜೀವ ಅಭ್ಯಂಕರ ಇತ್ತೀಚೆಗೆ ಪುಣೆಯಲ್ಲಿ 'ಲಾಗೀ **ತಾಗೀರೆ** ಸಾಂವರಿಯಾ ತೋಸೆ ಅಂಖಿಯಾ'ವನ್ನು ಸಮರ್ಥವಾಗಿ ಹಾಡಿದ್ದು ಬಹಳ ದಿನಗಳ ನಂತರ ಈ ರಾಗವನ್ನು ಕೇಳುವ ಪ್ರಸಂಗ ಬಂದಿದ್ದುದರಿಂದಲೋ ಏನೋ ಇನ್ನೂ ಜ್ಞಾಪಕದಲ್ಲಿದೆ.

ಕುಮಾರ ಗಂಧರ್ವರ 'ಕುಮಾರ ಟಚ್' ಇಲ್ಲದ ರಾಗವೇ ಇಲ್ಲವೆಂದು ನಾನು ಈ ಮೊದಲೇ ಹೇಳಿದ್ದೆ. ಮುಲ್ತಾನಿ ಕೂಡ ಅದಕ್ಕೆ ಅಪವಾದವಲ್ಲ. ಅವರಿಗೆ ಮುಲ್ತಾನಿಗಿಂತ ಭೀಮಪಲಾಸಿಯೇ ಹೆಚ್ಚು ಸೇರುತ್ತಿತ್ತು. ಆದರೆ ಇಡೀ ದಿನದ ತಾಪತ್ರಯವನ್ನು ಕಳೆದು ಹುಸ್ಸೆಂದು ಮನಸ್ಸು ಸಂಧಿಪ್ರಕಾಶದ ದಾರಿ ತವಕದಿಂದ ಕಾಯುವ ಸ್ಥಿತಿಯ ವರ್ಣನೆಯನ್ನು ಮಾಡುವ ಮುಲ್ತಾನಿಯಲ್ಲಿಯ ಅವರ ಸ್ವಂತ ರಚನೆ 'ಬೆಗಿಯಾರ ಸಾಂವರಿಯಾ'ದಲ್ಲಿಯ ತಾರಸಪ್ತಕದಲ್ಲಿಯ ತಾರಷಡ್ಜದ ಸಮ್ (ಪದ್ಯದ ಒಂದು ಸಾಲಿನ ಕೊನೆ ತಾಲದ ಆವರ್ತನೆಯ ಜೋಡಿಗೆ ಮುಗಿಸಿದ್ದು) ಅವರ ಸಾಮರ್ಥ್ಯವನ್ನು ತೋರಿಸುತ್ತದೆ. 'ನೈನನಮೇ ಆನಬಾನ' ಹಾಗೂ 'ಕವನ ದೇಸಗಯೇ (ಕವನ=ಕೌನ) ಈ ಎರಡೂ ಪರಂಪರೆಯಿಂದ ಬಂದ ಚೀಜುಗಳು ಈಗಲೂ ಕೇಳಬರುತ್ತವೆ. ಕರ್ನಾಟಕದ ಜಯತೀರ್ಥ ಮೇವುಂಡಿ ಮತ್ತು ವೆಂಕಟೇಶ ಕುಮಾರ್ ಈ ರಾಗವನ್ನು ಚೆನ್ನಾಗಿ ಹಾಡಿದ್ದನ್ನು ಕೇಳಿದ್ದೇನೆ.

ಇದನ್ನು ಬರೆಯುವಾಗ ಎಂದಿನಂತೆ ಈ ರಾಗ ಕರ್ನಾಟಕ ಪದ್ಧತಿಯಲ್ಲಿದೆಯೋ ಎಂದು ಹುಡುಕಿದೆ. ರಾಗನಿಧಿಯ ಸುಬ್ಬರಾಯರೂ ರಾಗ ವ್ಯಾಕರಣದ ಬಿಮಲಾಕಾಂತ್

ಅವರೂ ಒಮ್ಮತದಿಂದ ಈ ರಾಗದ ಕರ್ನಾಟಕೀ ಅವತಾರವೆಂದರೆ 'ಗಮಕ ಸಾಮಂತ' ರಾಗವೆಂದೂ ಅದೂ 45ನೆಯ ಮೇಳಕರ್ತರಾಗವಾದ ಶುಭಪಂತುವರಾಳಿಯಿಂದ ಬಂದದ್ದು! ಎಂದು ಹೇಳಿದ್ದಾರೆ. ಇದು ಪ್ರಚಾರದಲ್ಲಿದೆಯೋ ಇಲ್ಲವೋ ಎಂಬುದು ದಾಕ್ಷಿಣಾತ್ಯ ಪ್ರಣಾಲಿಯ ಕಾನಸೇನರಿಗೆ, ಪಂಡಿತರಿಗೆ ಗೊತ್ತಿರಬಹುದು.

ಅರವತ್ತರ ದಶಕದಲ್ಲಿ ಖ್ಯಾತ ಮರಾಠೀ ನಾಟಕಕಾರ ವಸಂತ ಕಾನೇಟಿಕರ್ ಬರೆದ ಸಂಗೀತ ನಾಟಕ 'ಮತ್ಸ್ಯಗಂಧಾ' ಮುಂಬಯಿಯಲ್ಲಿ ಮೊದಲ ಬಾರಿ ಪ್ರದರ್ಶಿಸಲ್ಪಟ್ಟಿತು. ಈಗಿನ ಟಿ.ವಿ.ಯ ಸೂಪರ್ ಸ್ಟಾರ್ ಆಶಾಲತಾ ಅವರು ಸತ್ಯವತಿಯ ಪಾತ್ರದಲ್ಲಿ ನಟಿಸಿದ್ದರು. ಆರ್ಟ್ ಇಂಡಿಯಾದಲ್ಲಿ ಕೆಲಸಕ್ಕಿದ್ದ ರಾಮದಾಸ ಕಾಮತ್ 'ಪರಾಶರ ಋಷಿ'ಯ ಪಾತ್ರವನ್ನು ವಹಿಸಿದ್ದರು. ಇದಕ್ಕೆ ಸಂಗೀತವನ್ನು ಒದಗಿಸಿದವರು ಜಿತೇಂದ್ರ ಅಭಿಷೇಕಿ. ಈ ನಾಟಕವನ್ನು ನಾನು ಸಪತ್ನೀಕನಾಗಿ 2–3 ಬಾರಿ ನೋಡಿದ್ದು ಇದೆ. ಈ ನಾಟಕದಲ್ಲಿ ಪರಾಶರನ ಒಂದು ಹಾಡಿಗೆ ಅತ್ಯಂತ ಸುಂದರವಾದ ಧಾಟಿಯನ್ನು ಮುಲ್ತಾನಿಯಲ್ಲಿ ಕಟ್ಟಿದ್ದು ಇದೆ. ಸಂಜೆಯ ಹೊತ್ತು ಗಂಗಾತೀರದಲ್ಲಿ ಈ ಋಷಿ ಸತ್ಯವತಿಯ ಹಾದಿಯನ್ನು ನೋಡುತ್ತಾ ಕುಳಿತಿದ್ದಾನೆ. ಮುಲ್ತಾನಿ ರಾಗದ ಎಲ್ಲಾ ಛಾಯೆಗಳು ಚೆನ್ನಾಗಿ ಮೂಡಿಬಂದ ಹಾಡು ಅದು. ತಂಪಾದ 'ಮುಸುಕಿದೀ ಮಬ್ಬಿನಲಿ' ಕುಳಿತ ಪರಾಶರರ ಹಾಡು ಹೀಗಿದೆ:

'ನಕೋ ವಿಸರೂऽ ಸಂಕೇತ ಮೀಲನಾಚಾ
ತೃಷಿತ ಆಹೇ ಮೀ ತುಝ್ಯಾ ದರ್ಶನಾಚಾऽ'
'ಮಿಲನದ ಸಂಕೇತ ಮರೆಯದಿರು ಪ್ರಿಯೆ
ನಿನ್ನ ದರುಶನಕೆ ತೃಷಿತನಿರುವೆ'

ಸ್ವಲ್ಪ ಅಸ್ವಸ್ಥತೆಯ ಹಾಡು, ಕವಿವರ್ಯ ಬೇಂದ್ರೆಯವರ 'ಇನ್ನೂ ಯಾಕऽ ಬರಲಿಲ್ಲ ಅಂವಾ, ಹುಬ್ಬಳ್ಳಿಯಾಂವಾ, ವಾರದಾಗ ಮೂರ ಸರ್ತಿ ಬಂದು ಹೋಗಾಂವಾ' ಹಾಡಿನಲ್ಲಿ ಬರುವಂತಹ ಅಸ್ವಸ್ಥತೆ! ಫರಕು ಇಷ್ಟೆ, ಬೇಂದ್ರೆಯವರ ಕವಿತೆಯಲ್ಲಿ ಪ್ರೇಯಸಿ ಹಾದಿ ನೋಡುತ್ತಿದ್ದರೆ ಇಲ್ಲಿ 'ಗಂಗಾತೀರದಲ್ಲಿ ನಿಂತ ಸುಯತಿವರ' ಪರಾಶರ ತನ್ನ ಪ್ರೇಯಸಿಯ ಹಾದಿ ಕಾಯುತ್ತಿದ್ದಾನೆ. ಲತಾ ಮಂಗೇಶ್ಕರರ ತಂದೆ ದೀನಾನಾಥ ಹಾಗೂ ಅಬ್ದುಲ್ ಕರೀಂ ಖಾನರಿಗೆ ಖ್ಯಾತಿಯನ್ನು ತಂದುಕೊಟ್ಟ 'ಪ್ರೇಮ ಸೇವಾ ಶರಣ' ಮೊದಲು ಮುಲ್ತಾನಿಯಲ್ಲಿತ್ತು, ವೈವಿಧ್ಯವನ್ನು ತರುವುದಕ್ಕೆ, ಇದನ್ನು ಭೀಮಪಲಾಸದಲ್ಲಿ ಕಟ್ಟಿದರು. ಈಗ ಮರಾಠಿ ಸಂಗೀತ ನಾಟಕಗಳೇ ಅಸ್ತಂಗತವಾದುದರಿಂದ ಮುಂದೆ ಯಾವ ರಾಗದಲ್ಲಿ ಈ ಹಾಡು ಇರಬಹುದು ಎಂಬ ಪ್ರಶ್ನೆ ಅಪ್ರಸ್ತುತ!

ಹರಿಪ್ರಸಾದ ಚೌರಾಸಿಯಾ, ನಿಖಿಲ ಬ್ಯಾನರ್ಜಿ ಇವರ ಸಿ.ಡಿ. ಹಾಗೂ ಧ್ವನಿ ಸುರಳಿಗಳು ಈ ರಾಗದಲ್ಲಿವೆ. ಮನೋಹರವಾಗಿವೆ. ಇತ್ತೀಚಿನ ಹಾಡುಗಾರ್ತಿ ಅಶ್ವಿನಿ ಭಿಡೆ ದೇಶಪಾಂಡೆ ಹಾಗೂ ಕಲಾಭಾರತಿಯ ಮೊಟ್ಟಮೊದಲಿನ ಕಲಾವಿದೆ ಶ್ರುತಿ ಸಡೋಲಿಕರ್ ಇವರ ಮುಲ್ತಾನಿ ಕೂಡ ಗಮನಾರ್ಹವಾಗಿತ್ತು.

*****

5.8

ಬಸಂತ್ ಕೀ ಬಹಾರ ಆಯೀ

ನಾನು ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದಾಗ ತರಾಸು ಅವರ 'ಹಂಸಗೀತೆ'ಯ ಹಿಂದೀ ಅವತಾರವಾದ 'ಬಸಂತ್ ಬಹಾರ್' ರಿಲೀಸಾಗಿತ್ತು (1959). ಮೂಲ 'ಹಂಸಗೀತೆ'ಯನ್ನು ನೋಡಿದವರಿಗೆ 'ಬಸಂತ್ ಬಹಾರ್' ಸೇರದೇ ಇದ್ದುದು ದೊಡ್ಡ ಮಾತಲ್ಲ. ಕನ್ನಡ ಕುಲಕೋಟಿಯ ನಮಗೆಲ್ಲ ಈ ಚಲನಚಿತ್ರ ಸೇರದಿದ್ದರೂ ಇದರಲ್ಲಿಯ ಎಲ್ಲಾ ಹಾಡುಗಳೂ ಅಂದಿನ ಖ್ಯಾತ ಬಿನಾಕಾ ಗೀತ ಮಾಲೆಯಲ್ಲಿ ಅಂದರೆ ಬುಧವಾರ ರಾತ್ರಿ 8ರಿಂದ 9ರ ತನಕ ರೇಡಿಯೋ ಸಿಲೋನ್‌ದಲ್ಲಿ ಪ್ರಸಾರವಾಗುತ್ತಿದ್ದಾಗ ನಾವಿರುತ್ತಿದ್ದ ಭಾವಸಾರ ಕ್ಷತ್ರಿಯ ಚಾಳಿನ ಪಕ್ಕದ ಮನೆಯ ವಕೀಲರ ಹೆಣ್ಣು ಮಕ್ಕಳೆಲ್ಲ ಒಟ್ಟಿಗೆ ಸೇರಿ ಪ್ರತಿಯೊಂದು ಹಾಡು ಹಚ್ಚಿದ ಕೂಡಲೇ ಅದರೊಂದಿಗೆ ನಾಲ್ಕು ಹೆಣ್ಣು ಧ್ವನಿ ಸೇರಿಸಿ ವೃಂದಗಾನ ನಡೆಸುತ್ತಿದ್ದುದರಿಂದ ನನಗೂ ಸ್ವಲ್ಪ ಮಟ್ಟಿಗೆ ಪ್ರತಿಯೊಂದು ಹಾಡಿನ ಮುಖಡಾ ಬಾಯಿಪಾಠವಾಗಿತ್ತು. ಅದರಲ್ಲಿ ಹಾಡಲಿಕ್ಕೆ ಬಾರದ ಒಂದು ಹಾಡು 'ಕೇತಕಿ-ಗುಲಾಬ ಚಂಪಕ ಬನ ಫೂಲೇ' ಪಂ. ಭೀಮಸೇನ ಜೋಶಿ ಹಾಗೂ ಮನ್ನಾಡೆಯವರ ಜುಗಲಬಂದಿ. ಈ ಹಾಡೇ ಈ ಚಲನಚಿತ್ರದ ಹಂಸಗೀತೆಯಾಗಿತ್ತು. ಗಮ್ಮತ್ತಿನ ಮಾತೆಂದರೆ ಇದರಲ್ಲಿ ಚೆನ್ನಾಗಿ ಹಾಡುವ ಭೀಮಸೇನ ಜೋಶಿಯವರನ್ನು ಸುಮಾರಾಗಿ ಹಾಡುತ್ತಿದ್ದ ಮನ್ನಾಡೇ ಈ ಜುಗಲಬಂದಿಯಲ್ಲಿ ಸೋಲಿಸಿದ್ದು. 'ಬಸಂತ್ ಬಹಾರ್' ಇಷ್ಟವಾಗದ್ದಕ್ಕೆ ಹಾಡುಗಾರಿಕೆಯಲ್ಲಿ ಭೀಮಸೇನ ಜೋಶಿ ಸೋತಿದ್ದೂ ಒಂದು ಕಾರಣವಾಗಿರಬಹುದು. ಅಂದರೆ ಪರದೆಯ ಮೇಲೆ ನಾಯಕನಾದ ಭರತಭೂಷಣ್ (ಮನ್ನಾಡೇ) ಖಳ ನಾಯಕನಾದ ಪರಶುರಾಮನನ್ನು ಸೋಲಿಸಿದ್ದು. ಇದಕ್ಕಿಂತ ಹತ್ತು ವರ್ಷ ಮೊದಲು ರಿಲೀಸಾದ 'ಬೈಜೂ-ಬಾವರಾ'ದ ನಿರ್ದೇಶಕರು ಅಂತಹುದೇ ಒಂದು ಪ್ರಸಂಗವನ್ನು ಚಿತ್ರಿಸಿದ್ದರು. ಬೈಜೂ ಬಾವರಾದಲ್ಲಿ ಅಂದಿನ ಖ್ಯಾತ ಪಲುಸ್ಕರ್ ಮತ್ತು ಅಮೀರಖಾನ್ ಅವರ ಹಾಡುಗಾರಿಕೆಯನ್ನು ಬೈಜು ಮತ್ತು ತಾನಸೇನರಿಗೆ ಎರವಲು ಕೊಟ್ಟಿದ್ದರಿಂದ ಅದರ ಸೊಬಗು ಅವರ್ಣನೀಯವಾಗಿತ್ತು. ಬಸಂತ್ ಬಹಾರ್‌ದ ಹಾಡು ಚೆನ್ನಾಗಿದ್ದರೂ ಆ ಹಾಡಿನ ಚಿತ್ರ ಬಣ್ಣ ಬಣ್ಣದ ಚಿತ್ರದಂತೆ ಕಾಣಿಸದೆ, ಕಾರ್ಟೂನಿನಂತೆ ಕಾಣಿಸುತ್ತಿದ್ದು, ಸಂಗೀತದ ಅಜ್ಞಾನ, ದಿಗ್ದರ್ಶಕರಲ್ಲಿ ಪ್ರಖರವಾಗಿ ಕಾಣಿಸುತ್ತಿತ್ತು. ಅಂದ ಹಾಗೆ ಬೈಜೂ ಬಾವರಾ ಚಲನಚಿತ್ರಕ್ಕೆ ಸಂಗೀತ ಕೊಟ್ಟಿದ್ದು ನೌಷಾದ್ ಸಾಹೇಬರು ಮತ್ತು ಬಸಂತ್ ಬಹಾರ್‌ಕ್ಕೆ ಆಗಿನ ಖ್ಯಾತ ಶಂಕರ್ ಜಯಕಿಷನ್ ಜೋಡಿ.

ಮುಂಬಯಿ ಮಹಾನಗರದಲ್ಲಿ, ದಿನಂಪ್ರತಿ ಮರಗಳ ನೆರಳು ಕಡಿಮೆಯಾಗಿ ಕಾಂಕ್ರೀಟ ಬಿಲ್ಡಿಂಗ್‌ಗಳೆಂಬ ಪೆಡಂಭೂತಗಳ ನೆರಳು ಹೆಚ್ಚುತ್ತಿದ್ದಾಗ ಕೂಡ, ರಾತ್ರಿಯ ಕೊನೆಯ ಪ್ರಹರದಲ್ಲಿ ಕೋಗಿಲೆಯ ಕುಹೂ ಈಗಲೂ ಕೇಳಿಸುತ್ತಿರುವಾಗ, ಗೋಕರ್ಣದಲ್ಲಿ ಕಲಿತ 'ವಸಂತ ಸಮಯೇ ಪ್ರಾಪ್ತೆ, ಕಾಕಃ ಕಾಕಃ, ಪಿಕಃ ಪಿಕಃ' ಸುಭಾಷಿತ ನೆನಪಾಗುವುದು ಸಹಜ. ಮುಂಬಯಿಯ ಪಕ್ಷಿ ಪ್ರಪಂಚದಲ್ಲಿ ಕಪ್ಪಗಿನ ಕಾಗೆಯ ಭೂಮಿಕೆ ಅಬಾಧಿತವಾಗಿದ್ದು ದಿನವಿಡೀ ಕಾಕ ಸಂಗೀತ ಅಥವಾ ವೃಂದಗಾನ ಕೇಳುತ್ತಿರುವಾಗ ವಸಂತ ಋತುವಿನಲ್ಲಿಯ ಮುಂಜಾನೆಯ ಕೋಕಿಲ ಧ್ವನಿ ರಂಜಿಸುತ್ತಿದ್ದಾಗಿನ ಪ್ರಸಂಗ ಆಗಿಂದಾಗ ಒದಗುತ್ತಿರುವುದು ನಮ್ಮ ನಿಮ್ಮ ಅದೃಷ್ಟ! ವಸಂತ ಋತುವಿನ ಆಗಮನ ಸೂಚಿಸುವ ಕವಿಮನಗಳ ಸ್ಫೂರ್ತಿಯೇ ಈ ರಾಗದ ಮೂಲವಾಗಿದೆ. ಸಂಸ್ಕೃತ ರಚನೆಗಳಲ್ಲಿ ಹನ್ನೆರಡನೇ ಶತಮಾನದ ಜಯದೇವನ ಅಷ್ಟಪದಿಗಳಲ್ಲಿ ಅಷ್ಟೇ ಅಲ್ಲ, ಮತ್ತಿತರ ಕವಿಗಳಲ್ಲೂ ಈ ವಸಂತ ಋತುವು ವರ್ಣಿಸಲ್ಪಟ್ಟಿದೆ. ಕಾಲಿದಾಸನ ಋತುಸಂಹಾರದ ಉದಾಹರಣೆ ಒಂದೇ ಸಾಕು. ಹಿಂದುಸ್ತಾನಿ ಸಂಗೀತ ಪ್ರಕಾರಗಳಲ್ಲಿ ಕೂಡ ಈ ಆರೂ ಋತುಗಳ ವರ್ಣನೆ ಒಂದಲ್ಲ ಒಂದು ಪ್ರಕಾರದಲ್ಲಿ ಬಂದಿಶ್, ಅಂದರೆ ರಚನೆಗಳ ಮುಖಾಂತರ ರಾಗರೂಪವನ್ನು ಪಡೆದುಕೊಂಡು ಕಾಲ, ಸಮಯ, ಋತು, ತಿಂಗಳು ಸಾಧಿಸಿ ಹೊರಬರುತ್ತಲೇ ಇರುತ್ತವೆ. ಈ ಚೈತ್ರ-ವೈಶಾಖದಲ್ಲಿ ಬಸಂತ್, ಬಹಾರ್ ಹಾಗೂ ಬಸಂತ್‌ಕ್ಕೆ ಅತಿ ಹತ್ತಿರವಾದ 'ಪರಜ್'ನಲ್ಲಿಯೂ ವಸಂತ ಋತುವಿನ ವರ್ಣನೆಯನ್ನು ವಾಗ್ಗೇಯಕಾರರು ಪದೇಪದೇ ಮೂಡಿಸಿದ್ದು ಅನೇಕ ಗಾಯಕ-ನಾಯಕರು ಹಾಡಿದ್ದು ಇದೆ. ಕೋಗಿಲೆ ವಸಂತ ಋತುವಿನ ಬರುವಿಕೆಯನ್ನು ಸೂಚಿಸುತ್ತಿದ್ದರೆ, ಚಾತಕ ಪಕ್ಷಿ ಮಳೆಗಾಲದ ಹಾದಿಯನ್ನು ನೋಡುತ್ತದೆಯಂತೆ. ಅಂದರೆ 'ಮಲ್ಹಾರ್' ರಾಗಗಳ ಸಮಯ. ಸಮಯೋಚಿತವಾಗಿ ಮಲ್ಹಾರ್ ರಾಗಗಳ ವಿಚಾರ ಈ ಮೊದಲೇ ಮಾಡಿದ್ದಾಗಿದೆ. ಹಿಂದುಸ್ತಾನಿ ಸಂಗೀತ ಪದ್ಧತಿಯಲ್ಲಿ ರಾಗಲಕ್ಷಣಗಳ ಕೃತಿ ಅದೇ ಹಾಡಿನಲ್ಲಿ ಕಟ್ಟಿದ್ದು ಅಪರೂಪದ ಮಾತಲ್ಲ. ಗುರುಗಳು ಆ ರಾಗದಲ್ಲಿ ಕಲಿಸುವ ಮೊದಲ ಕೃತಿ ಅಂದರೆ ಇದೇ. ಇದಕ್ಕೆ ಲಕ್ಷಣಗೀತೆ ಎನ್ನುತ್ತಾರೆ. ಇದರ ಹೊರತಾಗಿ ಕೂಡ ಇನ್ನೂ ಕೆಲವು ರಚನೆಗಳಲ್ಲಿ ರಾಗದ ಲಕ್ಷಣಗೀತೆ, ಋತುಗಳ ಪರಿಚಯ ಕೂಡ ಕವಿ ಮಾಡಿಕೊಡುತ್ತಾನೆ. ಬಸಂತರಾಗದಲ್ಲಿಯ ಈ ಕೆಳಗೆ ಕೊಟ್ಟಿರುವ ರಚನೆ ಈಗಿನ ಖ್ಯಾತ ಕಥಕ್ ಕಲಾವಿದ, ಬಿರ್ಜೂ ಮಹಾರಾಜರ ತಾತ ಬಿಂದಾದೀನ ಮಹಾರಾಜ ರಚಿಸಿದ್ದು. ನಾನು ಮೊಟ್ಟ ಮೊದಲು ಇದನ್ನು ಕೇಳಿದ್ದು ಠುಮರೀ ಸಾಮ್ರಾಜ್ಞಿ ಸಿದ್ಧೇಶ್ವರೀ ದೇವಿಯವರ ಬಾಯಿಯಲ್ಲಿ. 'ಕಾಲಾಘೋಡಾ'ದ ಬಯಲಿನ ಮರಗಳಲ್ಲಿ ಬೀಡು ಹೂಡಿದ್ದ ಕೋಕಿಲೆಗಳ ಸಾಕ್ಷಿಯಲ್ಲಿ. ಸಾಧಾರಣ 1960-63ರಲ್ಲಿ. ಇದೊಂದು ಅಚ್ಚಳಿಯದ ನೆನಪು.

1959ರಿಂದ 1966ರ ವರೆಗೆ ಬ್ರಿಜನಾರಾಯಣರ 'ಸುರಸಿಂಗಾರಸಂಸದ್' ತುಂಬಾ ಊರ್ಜಿತಾವಸ್ಥೆಯಲ್ಲಿತ್ತು. ಅವರ 'ಕಲಕೆ ಕಲಾಕಾರ' ಹಾಗೂ 'ಸ್ವಾಮಿ ಹರಿದಾಸ ಸಮ್ಮೇಲನ'ದಲ್ಲಿ ಪಾಲುಗೊಳ್ಳಲು ದೇಶದ ಮೂಲೆಮೂಲೆಯಿಂದ ಕಲಾವಿದರು ಬರುತ್ತಿದ್ದರು. ಸ್ವತಃ 'ಸಂಗೀತದಾಸ್' ಎಂಬ ಉಪಾಧಿಯನ್ನು ಧರಿಸಿದ್ದ ಬ್ರಿಜನಾರಾಯಣರ ಅಂದಿನ ಥಾಟೇ ಬೇರೆಯಾಗಿತ್ತು. ಅಹಂಕಾರ ಸ್ವಭಾವದ ಬ್ರಿಜನಾರಾಯಣರ ಏಕಾಧಿಪತ್ಯದ

ವಿರೋಧಿಸಿ ಕಮಲ್ ಸಿಂಗ್ ಎಂಬವರು 'ಆಜಕೆ ಕಲಾಕಾರ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮುಖಾಂತರ ಸಂಗೀತ ಮಹೋತ್ಸವವನ್ನು ಆಚರಿಸುತ್ತಿದ್ದರು. ಹೆಣ್ಣು ಧ್ವನಿಯ ಕಮಲ್ ಸಿಂಗ್ ಒಳ್ಳೆಯ ಠುಮರಿ ಗಾಯಕರೂ ಆಗಿದ್ದರು. ಹೀರಾದೇವಿ ಮಿಶ್ರ, ನಿರ್ಮಲಾದೇವಿ, ಲಕ್ಷ್ಮಿಶಂಕರ್, ಸಿದ್ಧೇಶ್ವರೀದೇವಿ, ಬೇಗಂ ಅಖ್ತರ್, ಶೋಭಾ ಗುರ್ಟು ಮತ್ತು ಗಿರಿಜಾದೇವಿ ಇವು ಆ ಕಾಲದ ಠುಮರಿ ಗಾಯಕಿಯರ ಕೆಲವು ಹೆಸರುಗಳು. ಸಿದ್ಧೇಶ್ವರಿ 'ಆಜಕೆ ಕಲಾಕಾರ'ದಲ್ಲಿ ಹಾಡಿದ ಬಸಂತರಾಗದ ಕೃತಿ ಹೀಗಿತ್ತು.

ದೂಲ್ಹಾ ರಾಗ ಬಸಂತ್
ಮದನ ಮಹೋತ್ಸವ ಆಜ ಸಖೀರೀ,
ಬಿಂದಾ ಭಯೋ ಹೇಮಂತ್!

ಬಸಂತ ಋತುವಿಗೆ ಗಂಡುರೂಪವನ್ನು ಒದಗಿಸಿ, ವರನ ವೇಷಭೂಷಣ ತೊಡಿಸಿ, ಸಾಕ್ಷಾತ್ ಮನ್ಮಥನ ರೂಪ ಕೊಟ್ಟು, ಕವಿ, ನರ್ತಕ ಬಿಂದಾದೀನ ಮಹಾರಾಜರು ಸಖೀಗೀತವನ್ನು ಕಟ್ಟಿ, ಮದನಮಹೋತ್ಸವವನ್ನು ಆಚರಿಸುತ್ತಾರೆ. ಈಗ ಕಣ್ಮುಚ್ಚಿ ಈ ರಚನೆಯನ್ನು ಮೆಲುಕಾಡಿಸಿದರೆ, ಬಿರ್ಜು ಮಹಾರಾಜರ ಕಥಕ ನೃತ್ಯದ ಪದಲಾಲಿತ್ಯ ನೆನಪಾಗುತ್ತದೆ. ಯೌವನದ ವರನ ಥಾಟಿನ ಜಂಬದ ಕೋಳಿಯ ನಡಿಗೆ (ಈ ಜಂಭ ಎರವಲು ತಂದದ್ದು) ಒಳಗಿಂದೊಳಗೆ ಸ್ವಲ್ಪ ಆಶ್ಚರ್ಯಮಿಶ್ರಿತ ಹೆದರಿಕೆ, ಮುಂಬರುವ ಪ್ರಣಯ ಪ್ರಸಂಗದ ಆತಂಕ ಇವೆಲ್ಲ ಒಂದೊಂದಾಗಿ ಕಣ್ಣಿನ ಮುಂದೆ ಕಟ್ಟುತ್ತವೆ. ಇದು ನವ ಪಲ್ಲವದ ನಾಂದಿ ಎಂದರೆ ತಪ್ಪಾಗಲಾರದು. ಮಾವಿನ ಹೂಗಳ ಮಾದಕ ಸುಗಂಧಗಾಳಿ, ಕೋಕಿಲೆಗಳ ಪಂಚಮಧ್ವನಿ, ಕಂಕುಳ ತುಟಿಗಳ ಮೇಲೆ ಮಿನುಗುತ್ತಿರುವ ಬೆವರನ್ನೂ ತಂಪಾಗಿಸುವ ಸೂಕ್ಷ್ಮವಾದ ಗಾಳಿ, ಇವುಗಳೊಂದಿಗೆ ಧಾರವಾಡದ ರಸ್ತೆಗಳ ಎರಡೂ ಬದಿಗೆ ಕೆಂಪು ಹೂಗಳ ಆಚ್ಛಾದನೆ ಇವೆಲ್ಲವುಗಳ ನೆನಪನ್ನು ಮಾಡಿಕೊಂಡರೆ ... ಅಹಹಾ, 'ತೇ ನೋ ಹಿ ದಿವಸಾ ಗತಾ!' ಈಗ ಅನ್ನುವುದಿಷ್ಟೇ!

ರಾಗ ಬಸಂತ್ ನವಪಲ್ಲವದ ಉತ್ಸಾಹದ ಪ್ರತಿಕೃತಿ. ಈ ಋತುವಿನಲ್ಲಿ ಬಸಂತ್ ರಾಗವನ್ನು ಯಾವಾಗಲೂ ಹಾಡಬಹುದಾದರೂ ನಾನು ಕೇಳಿದ ಮತ್ತೊಂದು ಅವಿಸ್ಮರಣೀಯ ಕಚೇರಿ ಅಂದರೆ ಬೇಗಂ ಅಖ್ತರ್ ಅವರ ರಾತ್ರಿ ಹನ್ನೆರಡರ ನಂತರದ್ದು! ಮಾಘ ತಿಂಗಳಿನ ವಸಂತ ಪಂಚಮಿಯ ನಂತರ ಫಾಲ್ಗುಣದ ಪೂರ್ಣಿಮೆಯ ತನಕ ಈ ನವಪಲ್ಲವದ ಕಾಲ. ಅಂದರೆ ಮಧ್ಯ ಫೆಬ್ರವರಿಯಿಂದ ಏಪ್ರಿಲ್ ಮೊದಲಿನ ವಾರದ ತನಕ. ಈ ನವಪಲ್ಲವದ ರಚನೆಗಳಲ್ಲಿ ಕೃಷ್ಣರಾಧೆಯ ರಾಸಲೀಲೆಯ ಅನೇಕ ಕೃತಿಗಳಿವೆ. ಕಿರಾನಾ ಪರಂಪರೆಯ ಅಬ್ದುಲ್ ಕರೀಂ ಖಾನರು ಈ ಋತುವನ್ನು ಅಂದರೆ 'ಫಗಫಾಗುನ ಪಾಲ್ಗುಣ'ವನ್ನು ಅಜರಾಮರ ಮಾಡಿದ ಕೃತಿಯೆಂದರೆ 'ಫಗವಾ ಬ್ರಿಜ ದೇಖನಕೋ ಚಲೀರೀ'. ಇದನ್ನೇ ಒಂದಾನೊಂದು ಕಾಲದಲ್ಲಿ ರೋಶನಾರಾ ಬೇಗಮ್, ಗಂಗೂಬಾಯಿ ಹಾನಗಲ್ಲ, ಭೀಮಸೇನ ಜೋಶಿ, ಹೀರಾಬಾಯಿ ಬಡೋದೇಕರ್, ಮಾಣಿಕವರ್ಮಾ ಹಾಡಿದ ಧ್ವನಿಸುರುಳಿಗಳನ್ನೂ, ಕೆಲವರ ಪ್ರತ್ಯಕ್ಷ ಮೆಹಫಿಲ್ಲುಗಳನ್ನೂ ನಾನು ಕೇಳಿದ್ದೇನೆ. ಈ ಮೆಹಫಿಲ್ಲುಗಳಲ್ಲಿ ಮತ್ತೊಂದು ಅಂದರೆ,

ನಿಯಾಜ್ ಅಹಮ್ಮದ್ ಖಾನ್ ಫೈಯಾಜ್ ಅಹಮ್ಮದ್ ಖಾನ್ ಬಂಧುಗಳು, ಗವಾಲಿಯ ಟ್ಯಾಂಕದ ಪಕ್ಕದ ತೇಜಪಾಲ್ ಹಾಲಿನಲ್ಲಿ ಹಾಡಿದ ಬಸಂತ್ ರಾಗ ಚಿರಸ್ಮರಣಿಯ. ಆಕಾಶವಾಣಿಯ 36 ರಾಗಗಳ ಸೂಚಿಯಲ್ಲಿ ಬಸಂತ್ 'ವಸಂತ'ವೆಂದು ಇದ್ದು, ಪದ್ಮಾ ತಳವಲ್‌ಕರ್, ಶಿವಕುಮಾರ್ ಶರ್ಮ, ಅಶ್ವಿನಿ ಭಿಡೆ, ಹರಿಪ್ರಸಾದ ಚೌರಾಸಿಯಾ, ಪ್ರಭಾ ಅತ್ರೆ ಇವರ ಕಚೇರಿಗಳನ್ನು ಅಪ್ರತ್ಯಕ್ಷವಾಗಿ, ಕೆಲವೊಮ್ಮೆ ಪ್ರತ್ಯಕ್ಷವಾಗಿ ಕೇಳಿದ್ದೂ ಇದೆ. ಇವರ ಧ್ವನಿ ಸುರುಳಿಗಳೂ, ಸಿ.ಡಿ.ಗಳೂ ಮಾರುಕಟ್ಟೆಯಲ್ಲಿ ಧಾರಾಳವಾಗಿವೆ.

ನಾನು ಪತ್ರಿಕೆಯ ಸಂಗೀತ ವಿಮರ್ಶಕನಾಗಿದ್ದಾಗ 'ಮ್ಯೂಜಿಕ ಟುಡೇ' ಎಂಬ ಕಂಪನಯ (ಇದು ಇಂಡಿಯಾ ಟುಡೇ ಸಂಗೀತ ವಿಭಾಗ) ಪಂಜಾಬಿ ಭಾಷೆಯಲ್ಲಿಯ ಒಂದು ಗುರುಬಾನಿಯ ಧ್ವನಿಸುರುಳಿಗಳ ಕಟ್ಟುಗಳನ್ನು ಕಳಿಸಿಕೊಟ್ಟಿದ್ದರು. ಇವುಗಳ ಶ್ಲೋಕಗಳಲ್ಲಿ ಬಸಂತ್ ಮತ್ತು ಬಿಹಾಗ್ ರಾಗದಲ್ಲಿ ಅನೇಕ ಕೃತಿಗಳು ಇವೆ. ಶ್ರೇಷ್ಠ ಸಂಗೀತಜ್ಞ ಶ್ರೀಕೃಷ್ಣ ರತನಜನಕರರ ಹೇಳಿಕೆಯ ಪ್ರಕಾರ, ವಸಂತ ರಾಗ ಎಂಟನೇ ಶತಮಾನದಿಂದ ಪ್ರಚಲಿತವಿದ್ದು ಈಗಿನ ವಸಂತ ಅಥವಾ ಬಸಂತ್ ಆಗಿನ ವಸಂತಕ್ಕಿಂತ ತುಂಬಾ ಭಿನ್ನವಾಗಿತ್ತು ಎಂದು ಒಂದೆಡೆ ಬರೆದಿಟ್ಟಿದ್ದಾರೆ. ಕರ್ನಾಟಕ ಸಂಗೀತದಲ್ಲಿ ವಸಂತವೆಂಬ ರಾಗವು 16ನೇ ಮೇಳಕರ್ತ 'ಮಾಯಾಮಾಳವಗೌಳ'ದಲ್ಲಿ ಜನ್ಯವಾಗಿದೆ. 'ಮಾಯಾಮಾಳವ ಗೌಳ'ವು ಭೈರವ ಥಾಟಿನಂತಿದ್ದು ಅದಕ್ಕೆ ಮತ್ತು ಈ ಲೇಖನದ ಬಸಂತಕ್ಕೂ ಸುತರಾಂ ಸಂಬಂಧವಿಲ್ಲವೆಂದು ರಾಗನಿಧಿಯ ಸುಬ್ಬರಾಯರು ಹೇಳುತ್ತಾರೆ. ಈ ರಾಗದ ಮಜಾ ನೋಡಿ, ಆರೋಹದಲ್ಲಿ ಕೋಕಿಲೆಯ ಪಂಚಮಸ್ವರ ಇಲ್ಲವೇ ಇಲ್ಲ. ಆದರೆ ಅವರೋಹದಲ್ಲಿದೆ. ಹೀಗಾಗಿ ಇದನ್ನು ಮಾರವಾ ಥಾಟಿನಲ್ಲಿ ಸೇರಿಸುತ್ತಾರೆ. ಬಸಂತ್ ರಾಗಕ್ಕೆ ತೀವ್ರ ಮಧ್ಯಮ ಸೇರಿಸಿ ಅದನ್ನು ಪೂರ್ವಿ ಥಾಟಿನಲ್ಲಿ ಸೇರಿಸಿ ಹಾಡುವದು ಇತ್ತೀಚೆಗೆ ರೂಢಿಗೊಂಡಿದೆ. ಇದೇ ಬಹಾರ್ ರಾಗದಲ್ಲಿ ಆರೋಹ ಮತ್ತು ಅವರೋಹದಲ್ಲಿ ಪಂಚಮವಿರುವ ಕಾರಣದಿಂದ ಬಸಂತ್ ಬಹಾರ್‌ಕ್ಕೆ ಒಂದು ತರಹದ ಹೊಳಪು ಬರುತ್ತದೆ. ಇದು ಉತ್ತರಾಂಗ ಪ್ರಧಾನ ರಾಗವಾಗಿದ್ದು ರಾಗದಲ್ಲಿಯ ಕೊಂಚ ಲಲಿತದ ಅಂಗ ಬಂದಾಗ ಅಥವಾ ಸೇರಿಸಿದಾಗ ಇದರ ಸೊಗಡು ಅವರ್ಣನೀಯ. ತಾರಷಡ್ಜದಲ್ಲಿ ನಿಲ್ಲುವಿಕೆ ಅಥವಾ 'ಠಹರಾವ್' ಒಂದು ತರಹದ ಹರ್ಷೋಲ್ಲಾಸ ಬೀಸುತ್ತದೆ.

ಬಸಂತ್ ರಾಗದ ಮಹತ್ವ ಏನು ಹೇಳಲಿ? ಬಸಂತೀ ಕೇದಾರದ ಬಗ್ಗೆ ಬರೆದಿದ್ದೇನೆ. ಬಸಂತ್-ಹಿಂಡೊಲ್ ಮತ್ತು ಕುಮಾರ ಗಂಧರ್ವರು ರಚಿಸಿದ ಗೌರಿ-ಬಸಂತ್ ಹಾಗೂ ರತನಜನಕರರ ಬಸಂತ್ ಮುಖಾರಿ ಇವುಗಳನ್ನು ಯಾರೂ ಮರೆಯಲಾರರು. 'ಗೋಪಿಕಾ ವಸಂತ' , ಕರ್ನಾಟಕ ಸಂಗೀತದಿಂದ ಎರವಲು ಪಡೆದ ಮತ್ತೊಂದು ರಾಗ. ಇದು 20ನೇ ಮೇಳಕರ್ತ 'ನಟಭೈರವಿ'ಯಿಂದ ಹುಟ್ಟಿದ್ದು ಎನ್ನುತ್ತಾರೆ ಬಿಮಲಾಕಾಂತ ರಾಯ ಚೌಧರಿ. ಏನೇ ಇರಲಿ, ಬಸಂತ್ ರಾಗದ ಡೌಲೇ ಬೇರೆ.

ಕುಮಾರ ಗಂಧರ್ವ ಮತ್ತು ಮಲ್ಲಿಕಾರ್ಜುನ ಮನ್ಸೂರರ ಹೆಸರು ಬರದೇ ಈ ಲೇಖನವನ್ನು ಪೂರ್ಣಗೊಳಿಸಲಾಗುವುದಿಲ್ಲ. ಕುಮಾರ ಗಂಧರ್ವರ 'ಗೌರಿಬಸಂತ'ವನ್ನು ನಾನು ಕೇಳಿರುವುದು ಒಂದೇ ಒಂದು ಸಲ. ಮಲ್ಲಿಕಾರ್ಜುನರ 'ಪರಜ್' ಎರಡು

ಸಲ. ಪರಜ್ ರಾಗವು ಬಸಂತ್‌ವನ್ನು ಹೋಲುತ್ತಿದ್ದುದರಿಂದ ಅದನ್ನು ಈ ಗುಂಪಿನಲ್ಲಿಯೇ ಸೇರಿಸಿದ್ದೇನೆ. ಯಾವಾಗಲೂ ಸಂಗೀತದಲ್ಲಿಯೇ ಮುಳುಗಿರುತ್ತಿದ್ದ ಮಲ್ಲಿಕಾರ್ಜುನರು ಒಂದು ಸಲ ಮಧ್ಯಂತರದ ನಂತರ ನಾಟಕದಲ್ಲಿ ಎಂಟ್ರಿ ಕೊಡುವಾಗ ಹಾಡುತ್ತಲೇ ಬಂದು ವೇದಿಕೆಯ ಮೇಲೆ ಕುಳಿತು ಪರಜ್ ರಾಗದ ಆರಾಧನೆ ಮಾಡಿದ್ದು ಒಂದು ಅವಿಸ್ಮರಣೀಯ ಘಟನೆ. ಅವರಿಗೆ ಮೈಕ್ ಅಡ್ಜಸ್ಟ್‌ಮೆಂಟ್, ತಬಲಾ ಶ್ರುತಿ, ತಂಬೂರಿಯ ಮೀಟುವ ಗೋಜೇ ಇರಲಿಲ್ಲ! ವೇದಿಕೆಯ ಮೇಲೆ ಕುಳಿತದ್ದೇ ಸಾಕು, ಹಾಡಲು ಗಡಿಬಿಡಿಯಿಂದ ಪ್ರಾರಂಭ ಮಾಡುವ ಅಭ್ಯಾಸವನ್ನು ಇಟ್ಟುಕೊಂಡಿದ್ದರು. ಇದಕ್ಕೆ ವಿರುದ್ಧ ಕುಮಾರ ಗಂಧರ್ವರು. ಒಂದು ಅರ್ಧ ಗಂಟೆ ತಂಬೂರಿಗಳ ಮಧ್ಯದಲ್ಲಿ ಕಣ್ಮುಚ್ಚಿ ಧ್ಯಾನಸ್ಥ ಭಂಗಿಯಲ್ಲಿದ್ದ ಅವರನ್ನು ನಾನು ಹಲವಾರು ಸಲ ನೋಡಿದ್ದೇನೆ. ದೇವಾಸದಿಂದ ತಂಬೂರಿ ಜೋಡಿಯ ಟಿಕೇಟು ಮಾಡಿ ಹೊತ್ತು ತರುತ್ತಿದ್ದರು. ಈಗಲೂ ಕಲಾಪಿನಿ ಮತ್ತು ವಸುಂಧರ ಕೋಂಕಾಳಿಯವರು ತಮ್ಮ ತಂಬೂರಿ ಜೋಡಿಯನ್ನು ಮುಂಬಯಿಯ ಕಾರ್ಯಕಲಾಪಗಳಿಗೆ ದೇವಾಸದಿಂದಲೇ ತರುತ್ತಾರೆ. ಪರಜ್ ಮತ್ತು ಬಸಂತ್ ಅವಳಿ ಜವಳಿ ಬಂಧುಗಳಂತೆ. ಸ್ವಲ್ಪ ಭಿನ್ನತೆ ತೋರಿಸುವುದಕ್ಕೋ ಏನೋ ಪರಜ್‌ದಲ್ಲಿ ನಿಷಾಧದ ಮೇಲೆ ಠೆಹರಾವ್ ಮಾಡಿದ ಪರಜ್ ಬಸಂತ್‌ಕ್ಕಿಂತ ಸ್ವಲ್ಪ ಭಿನ್ನವಾಗಿ ಕೇಳಿಸುತ್ತದೆ. ಖ್ಯಾತ ವಿಮರ್ಶಕ ಮೋಹನ ನಾಡಕರ್ಣಿಯವರ ಮನೆಯಲ್ಲಿ ಒಮ್ಮೆ ಮಲ್ಲಿಕಾರ್ಜುನರು ಪರಜ್ ಹಾಡುತ್ತಿದ್ದಾಗ ಒಮ್ಮೆಲೆ ನಿಲ್ಲಿಸಿ 'ನೋಡಿ ಇದು ಬಸಂತ್' ಎಂದು ಬಸಂತ್ ಮತ್ತು ಪರಜ್‌ದ ಭಿನ್ನತೆಯನ್ನು ಎತ್ತಿ ತೋರಿಸಿದಾಗ ನಾನು ಅದಕ್ಕೆ ಸಾಕ್ಷಿಯಾಗುವಷ್ಟು ಭಾಗ್ಯವಂತನಾಗಿದ್ದೆ ಎಂದು ಹೇಳಿ ಈ 'ಬಸಂತ್ ಕಿ ಬಹಾರ್ ಆಯಿ'ಯನ್ನು ಮುಗಿಸುತ್ತಾ ಇದ್ದೇನೆ. ಈ ಬಸಂತ್ ಕೀ ಬಹಾರ್ ಆಯಿ' ಮರಾಠಿ ನಾಟಕ 'ಮಂದಾರಮಾಲಾ'ದಲ್ಲಿಯ ಹಾಡು, ನಾಟಕದಲ್ಲಿ ಖ್ಯಾತ ನಟರಾದ ಪ್ರಸಾದ್ ಸಾವಕಾರ್ ಹಾಗೂ ರಾಮಮರಾಠೆ ಹಾಡುತ್ತಿದ್ದ ಒಂದು ಜುಗಲಬಂದಿ ದೃಶ್ಯದ ಹಾಡು. ಇಬ್ಬರೂ 20 ನಮಿಷ ಈ ಹಾಡನ್ನು ಹಾಡಿ ನಾಟಕದ ಭರತವಾಕ್ಯವನ್ನು ನುಡಿಯುತ್ತಿದ್ದರು.

*****

5.9

ಬಿಹಾಗ್‌ದ ವಿಹಂಗಮ ನೋಟ

'ಗೂಂಜ ಉಠಿ ಶಹನಾಯಿ' ಚಲನಚಿತ್ರ ನೆನಪಿದೆಯಲ್ಲ? ಇದರಲ್ಲಿ ನಾಯಕ ರಾಜೇಂದ್ರಕುಮಾರ ಶಹನಾಯಿ ವಾದಕ. ಇಡೀ ಚಲನಚಿತ್ರದಲ್ಲಿ ತೆರೆಯ ಹಿಂದಿನ ಶಹನಾಯಿ ಉಸ್ತಾದ್ ಬಿಸ್ಮಿಲ್ಲಾ ಖಾನರದೇ. ತೆರೆಯ ಮೇಲೆ ಶಹನಾಯಿಯ ಮೇಲೆ ಸಿಕ್ಕಾಪಟ್ಟೆ ಕೈಯಾಡಿಸಿದವ ಮಾತ್ರ ರಾಜೇಂದ್ರಕುಮಾರ. 'ತೇರೆ ಸೂರ್ ಔರ್ ಮೇರೆ ಗೀತ್' ಲತಾ ಮಂಗೇಶಕರ ಹಾಡಿದ ಈ ಹಾಡಿಗೆ ಸ್ವರಸಾಥ್ ಕೊಟ್ಟಿದ್ದು ಬಿಸ್ಮಿಲ್ಲಾಖಾನರು. ಇದು ಬಿಹಾಗ್ ರಾಗದಲ್ಲಿ ರಚಿತವಾದ ಹಾಡು. ಕಳೆದ ಮೂರು ದಶಕಗಳಿಂದ ಬಿಸ್ಮಿಲ್ಲಾ ಖಾನರು ಇದನ್ನು ತಮ್ಮ ಪ್ರತಿಯೊಂದು ಕಚೇರಿಯಲ್ಲಿ ನುಡಿಸುತ್ತಿದ್ದಾರೆ ಮತ್ತು ಚಪ್ಪಾಳೆಯನ್ನು ಪಡೆದುಕೊಳ್ಳುತ್ತಾರೆ. 'ಬೀತಿ ನಾ ಬಿತಾಯೇ ರೈನಾ' (ಪರಿಚಯ ಚಲನಚಿತ್ರದ) ಇದು ಮತ್ತೊಂದು ಬಿಹಾಗ್‌ದ ಛಾಯೆ ಇದ್ದ ಹಾಡು. ಅಂದ ಹಾಗೆ ಬಿಹಾಗ್‌ದು ದೊಡ್ಡ ಕುಟುಂಬ. ಬಿಹಾಗ್, ಬಿಹಾಗಡಾ, ಮಾರೂಬಿಹಾಗ್, ನಟಬಿಹಾಗ್, ಚಾಂದನ್ ಬಿಹಾಗ್, ಛಾಯಾಬಿಹಾಗ್, ಹೇಮಬಿಹಾಗ್, ಸ್ವಾನಂದಿ, ಪಟಬಿಹಾಗ್, ಶಂಕರಾಬಿಹಾಗ್ – ಇವೆಲ್ಲ ಈ ಬಿಹಾಗ್ ಕುಟುಂಬದ ರಾಗಗಳು. ಹಿಂದೆ ಬರೆದಂತೆ ಥಾಟು–ಮೇಳಗಳ ಗೋಜಿಗೆ ಹೋಗದೆ ಒಂದೇ ಮಾತನ್ನು ಹೇಳುವುದಾದರೆ ಪಂಡಿತ್ ಮಲ್ಲಿಕಾರ್ಜುನ ಮನ್ಸೂರ ಅವರು ಅಜರಾಮರ ಮಾಡಿದ 'ನೀಂದ ನಹೀ ಆಯೇ' – ಇದು ಬಿಹಾರಿ ರಾಗದಲ್ಲಿದ್ದು ಇದಕ್ಕೂ ಈ ಬಿಹಾಗ್ ಕುಟುಂಬಕ್ಕೂ ಏನೂ ಸಂಬಂಧವಿಲ್ಲವೆಂಬ ಮಾತು ಮೊದಲೇ ಹೇಳುವುದು ಲೇಸು. ಯಮನ್, ಯಮನ್ ಕಲ್ಯಾಣದಂತೆ ಹಿಂದುಸ್ತಾನಿ ಸಂಗೀತದಲ್ಲಿ ಬಿಹಾಗ್ ಬಹಳ ಜನಪ್ರಿಯ ರಾಗ. ಮತ್ತೊಂದು ಮಾತು. ಪಂಡಿತ್ ಮಲ್ಲಿಕಾರ್ಜುನ ಮನ್ಸೂರ ಅವರದಾಗಲಿ ಅಥವಾ ಪಂಡಿತ್ ರತ್ನಾಕರ ಪೈರವರ ಬಿಹಾಗ್ ಮತ್ತು ಸಂಗೀತಮಾರ್ತಾಂಡ ಜಸರಾಜರವರ ಬಿಹಾಗ್ ಲಕ್ಷ್ಯಪೂರ್ವಕವಾಗಿ ಕೇಳಿದರೆ ಸ್ವಲ್ಪ ವ್ಯತ್ಯಾಸ ಕಂಡುಬರುವುದು ಸೋಜಿಗದ ಮಾತಲ್ಲ. ಜಯಪುರ್–ಅತ್ರೋಲಿ ಪರಂಪರೆ, ಅಂದರೆ, ಮಲ್ಲಿಕಾರ್ಜುನರ ಬಿಹಾಗ್ ಮಾರವಾ ಥಾಟಿನದು ಆದರೆ, ಜಸರಾಜರದು ಬಿಲಾವಲ್ ಥಾಟಿನದು ಎಂದು ಸಂಗೀತ ಜ್ಞಾನವಿದ್ದವರಿಗೆ ಗೊತ್ತಾಗಬಹುದು.

1956–57ರ ಮಾತು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕಲಿಯುತ್ತಿದ್ದ ದಿನಗಳು. ಆಗಿನ ಪೋಸ್ಟ್ ಆಫೀಸು, ಧಾರವಾಡ ಜಿಮಖಾನ ಕ್ಲಬ್, ಮಹೀಂದ್ರಕರ

ಚಾಳ ಇವೆಲ್ಲ ಇದ್ದ ಕ್ಷೇತ್ರಕ್ಕೆ 'ದಂಡಿನ ಬಂಗಲೆ' ಎಂದು ಕರೆಯುವ ಪರಿಪಾಠವಿತ್ತು. ಒಂದು ವಿಶಾಲ ಮೈದಾನದಲ್ಲಿ ಠಾಕರೇ ಸಾಹೇಬನ ಗೋರಿ ಇತ್ತು. ಇದನ್ನು ಮುಂದೆ ಕಿತ್ತೂರು ಚೆನ್ನಮ್ಮಾ ಪಾರ್ಕ್ ಮಾಡಲಾಯಿತು. ಅಲ್ಲಿಯೇ ಧಾರವಾಡ ಜಿಮಖಾನಾ. ಇದೆಲ್ಲವನ್ನೂ ಇಂದು ನೆನಪಿಸುವ ಕಾರಣ 1954ರಲ್ಲಿ ಈ ಧಾರವಾಡ ಜಿಮಖಾನದಲ್ಲಿ ಏರ್ಪಡಿಸಿದ್ದ ಜಯಪುರ್-ಅತ್ರೋಳಿ ಪರಂಪರೆಯ ಪ್ರಗಲ್ಭ ಗಾಯಕಿ ಕೇಸರಬಾಯಿಯ ಹಾಡುಗಾರಿಕೆ. ಇಂಟರ್ ಸೈನ್ಸ್‌ನಲ್ಲಿ ಓದುತ್ತಿದ್ದ ನನಗೆ ಬಸವರಾಜ ರಾಜಗುರು, ಬಸವರಾಜ ಮನ್ಸೂರರು, ಮಲ್ಲಿಕಾರ್ಜುನ ಮನ್ಸೂರರು, ಗುರುರಾವ್ ದೇಶಪಾಂಡೆ (ಗ್ವಾಲಿಯರ ಪರಂಪರೆಯವರು), ಅರ್ಜುನಸಾ ನಾಕೋಡ, ವಿದುಷಿ ಗಂಗೂಬಾಯಿ ಹಾನಗಲ್ಲ, ಇವರೆಲ್ಲ ದೇವತೆಗಳ ಸಮಾನ. ಸಿದ್ಧರಾಮ ಜಂಬಲದಿನ್ನಿ, ಪಂಚಾಕ್ಷರಿ ಮತ್ತಿಗಟ್ಟಿ, ಬಸವರಾಜ ಬೆಂಡಿಗೇರಿ (ತಬಲಾ) ವಸಂತ ಕನಕಾಪುರ (ಪೇಟಿ) ಇವರೆಲ್ಲ ಕೇಸರಬಾಯಿ ಕೇರಕರರ ಹಾಡುಗಾರಿಕೆಗೆ ಉಪಸ್ಥಿತರಿದ್ದ ನೆನಪು. ನನಗೆ ಅತ್ಯಂತ ಆಶ್ಚರ್ಯವಾದದ್ದು ಎಂದರೆ ಇಂತಹ ಅತಿರಥ ಮಹಾರಥಿಗಳೆಲ್ಲ ಭಕ್ತಿಭಾವದಿಂದ ಮುಂದೆ ಕುಳಿತು ಕೇಸರಬಾಯಿಯವರ ಗಾಯನವನ್ನು ಆಲಿಸಿದ್ದು. ಅವರು ಹಾಡಿದ ನಟ್‌ಬಿಹಾಗ್ ಇನ್ನೂ ಅಚ್ಚಳಿಯದಂತಿದೆ. 'ಝುನ್ ಝುನ್ ಝುನ್ ಪಾಯಲ' ಈ ಹಾಡು ಫೈಯ್ಯಾಜ್ ಖಾನರ ಧ್ವನಿಮುದ್ರಿಕೆಯಲ್ಲಿ ಬಂದಿಸ್ತವಾದದ್ದು, ಹಲವು ಬಾರಿ ಕೇಳಿರುವ ನನಗೆ ಕೇಸರಬಾಯಿಯವರ ಈ ರಾಗ ತುಂಬಾ ಸೇರಿತ್ತು. ಅದೇ ಪರಂಪರೆಗೆ ಸೇರಿದವರಾದರೂ ಮಲ್ಲಿಕಾರ್ಜುನರ ನಟ್‌ಬಿಹಾಗ್ ಮತ್ತು ಕೇಸರಬಾಯಿಯವರ ನಟ್‌ಬಿಹಾಗ್‌ದಲ್ಲಿ ಕೂಡ ಸೂಕ್ಷ್ಮ ವ್ಯತ್ಯಾಸ ಇದ್ದದ್ದು ನನಗೆ ಈಗಲೂ ನೆನಪಿಗೆ ಬರುತ್ತಿದೆ. ಮನ್ಸೂರರ ನಟ್‌ಬಿಹಾಗ್‌ದಲ್ಲಿ ಲಾಲಿತ್ಯ ತುಂಬಿ ತುಳುಕಿದರೆ, ಕೇಸರಬಾಯಿಯವರದ್ದು ಅತ್ಯಂತ ಧೀರಗಂಭೀರವಾದದ್ದು. ತಾನ್ ಕ್ರಿಯೆಯಲ್ಲಿ ಕೂಡ ಹಾಗೆಯೇ. ಮುಂದೆ ಮುಂಬಯಿಗೆ ಬಂದ ನಂತರ ಕೂಡ ಕೇಸರಬಾಯಿಯವರ ಎರಡು ಮೆಹಫಿಲ್‌ಗಳನ್ನು ನಾನು ಕೇಳಿದ್ದೇನೆ. ಒಂದು ಸಿ.ಜೆ. ಹಾಲ್‌ನಲ್ಲಿ ಮತ್ತು ಕೊನೆಯದು ಮಾಧವ ಆಪ್ಟೆಯವರ ಮನೆಯಲ್ಲಿ (1964). ಆದರೆ ಕೇಸರಬಾಯಿಯವರು ನಟ್‌ಬಿಹಾಗ್ ರಾಗವನ್ನು ರಿಪೀಟ್ ಮಾಡಲೇ ಇಲ್ಲ.

ಬಿಹಾಗ್ ಇದು, ಅಜಯ್ ಚಕ್ರವರ್ತಿಮತ್ತು ಬಸವರಾಜರ ಅತ್ಯಂತ ಪ್ರಿಯವಾದ ರಾಗ ಎಂದು ನನ್ನ ಊಹೆ. ಇವರ ಸಂಜೆಯ ಕಚೇರಿಗಳಲ್ಲಿ ಬಿಹಾಗ್‌ವಿಲ್ಲದೇ ಇದ್ದುದು ತುಂಬಾ ಅಪರೂಪ. ಕೃತಿಯೂ ಕೂಡ ಅದೇ 'ಲಟ್ ಉಲಝೀ ಸುಲಝಾ ಬಾಲಮ'. ಜಸರಾಜರ ಅಸಂಖ್ಯ ಕಚೇರಿಗಳಲ್ಲಿ ನನ್ನ ನೆನಪಿನಲ್ಲಿರುವುದು ವಿಲೇಪಾರ್ಲೆಯಲ್ಲಿಯ ಪು.ಲ.ದೇಶಪಾಂಡೆ ಸಭಾಗೃಹದಲ್ಲಿಯ ಅವರು ಹಾಡಿದ ಬಿಹಾಗ್ (1971-72) ಮತ್ತು 1995ರಲ್ಲಿ ಟಾಟಾ ಥಿಯೇಟರಿನಲ್ಲಿ ಅಜಯ್ ಚಕ್ರವರ್ತಿಹಾಡಿದ್ದು. ಇದರ ಜೋಡಿಗೆ ಸದಾರಂಗರವರ 'ಕೈಸೆ ಸುಖ ಸೋಹೆ'. ಇದು ಶೃಂಗಾರಪ್ರಧಾನ ರಾಗ. ಆಲಾಪನೆಯಲ್ಲಿ ಪ್ರತಿಯೊಂದು ಸ್ವರವನ್ನೂ ನಯವಾಗಿ ಪೋಣಿಸಿ ಶೃಂಗಾರಯುಕ್ತ ಮೃದುತ್ವದಿಂದ ಹಾಡಿದ ಈ ರಾಗ ಕೊನೆಗೆ, ಚಮತ್ಕಾರಪೂರ್ಣ ತಾನಗಳಿಂದ ಇದರ ಶೃಂಗಾರರಸ ಹೊರಟುಹೋಗಿ, ತುಂಬಾ ಒಣಗಿದ್ದೂ, ಸೊರಗಿದ್ದೂ ಇದೆ. ಆದರೆ, ಪದ್ಮಾ ತಳವಲ್ಕರ ಹಾಡಿದ ಈ ರಾಗ ಸಿ.ಡಿ.ಯಲ್ಲಿ ಮತ್ತು ಧ್ವನಿಸುರುಳಿಗಳಲ್ಲಿ 'ಸುಪರ್ಬ್' ಆಗಿದೆ ಎಂದು ಎದೆ ತಟ್ಟಿ ಹೇಳಬಲ್ಲೆ.

ಕುಮಾರ ಗಂಧರ್ವ ಹಾಡಿದ ಬಿಹಾಗ್ ಅತ್ಯಂತ ಭಿನ್ನವಾದದ್ದು. ಅಜಂತಾ ಎಲ್ಲೋರಾಕ್ಕೆ ಹೋಗಿ ಬಂದ ಮೇಲೆ ಅಲ್ಲಿಯ ಕೈಲಾಸ ಶಿಲ್ಪ ನೋಡಿ ಮೈಮರೆತು ಕೂತಾಗ ಅವರ ಪ್ರತಿಭೆ ಮರುಕಳಿಸಿದ್ದು ಅವರೇ ರಚಿಸಿ ಹಾಡಿದ 'ಯೋ ಮೋರಾ ಮನ್ ಹರೋ ರೇ'. ಕುಮಾರ ಗಂಧರ್ವರ ಗಾಯನಶಿಲ್ಪದ ಸೊಬಗೇ ಬೇರೆ. ಅಮೂರ್ತ ಸಂಗೀತದ ಸಜೀವಶಿಲ್ಪಿ ಮತ್ತೊಬ್ಬ ಪ್ರತಿಭಾವಂತ ಮೂರ್ತಶಿಲ್ಪಿಗೆ ಕೊಟ್ಟ 'ಪಾವತಿ' ಅಥವಾ 'ದಾದ' ಈ ರಚನೆ ಎಂದು ಹೇಳಬಹುದು.

ಪುರಾತನಕಾಲದ ವಿಹಂಗ ಎಂದರೆ ಇಂದಿನ ಬಿಹಾಗ್ ಎಂದು ಸ್ವಲ್ಪ ಸ್ಥೂಲವಾಗಿ ಹೇಳಬಹುದು. ಯಾವುದೇ ರಾಗ ಹಾಗೆಯೇ ಇರುವುದಿಲ್ಲ, ಸಮಯಾನುಸಾರವಾಗಿ ಬದಲಾಗುತ್ತಿರುತ್ತದೆ ಎಂಬ ಮಾತನ್ನು ಪಂಡಿತ ರತನಜನಕರ್ ಅವರು, ವಸಂತ ಮತ್ತು ಈಗ ಪ್ರಚಾರದಲ್ಲಿರುವ ಬಸಂತದ ಬಗ್ಗೆ ಸಂಶೋಧನೆ ಮಾಡಿ ಬರೆದಿದ್ದಾರೆ. ಸೋಮೇಶ್ವರನ ಕಾಲದ ಮಾನಸೋಲ್ಲಾಸದಲ್ಲಿ ಉಲ್ಲೇಖಗೊಂಡ ವಿಹಂಗಮದ ರಾಗರೂಪ ಕಳೆದ ಶತಮಾನಗಳಲ್ಲಿ ಎಷ್ಟು ಬದಲಾಗಿದೆಯೋ ದೇವರೇ ಬಲ್ಲ. ಉದಾಹರಣೆಗೆ, ತೀವ್ರ ಮಧ್ಯಮದ ಪ್ರಯೋಗ ಇತ್ತೀಚೆಗೆ ಹೆಚ್ಚಾಗುತ್ತಾ ಇದೆ, ಎಂಬುದು ನನ್ನ ಅಭಿಪ್ರಾಯ. ಶಾಸ್ತ್ರಶುದ್ಧ ಚೌಕಟ್ಟು ಇರದೇ ಇದ್ದ ಪಕ್ಷದಲ್ಲಿ ಬಿಹಾಗ್ ಬದಲಾಗಿ ಇನ್ನೂ 50 ವರ್ಷಗಳಲ್ಲಿ ಏನಾಗಿಹೋಗುತ್ತದೆಯೋ ಅವನೇ ಬಲ್ಲ. ಕಿಶೋರಿ ಅಮೋಣ್‌ಕರರ ತಾಯಿ ವಿದುಷಿ ಮೋಗುಬಾಯಿ ಕುರ್ಡಿಕರರ 'ಬಾಜಿರೇ ಮೋರೆ ಪಾಯಲ....' ಬಿಹಾಗ್‌ದ ಒಂದು ಮಾರ್ದವತೆಯ ಪ್ರಕಾರ. ಪಂಡಿತ್ ದಿನಕರ ಕಾಯ್ಕಿಣಿಯವರು 'ಗಗನವಿಹಂಗ' ಎಂಬ ಒಂದು ರಾಗವನ್ನು ಬಿಹಾಗ್‌ದ ಪ್ರತಿರೂಪವಾಗಿ ರಚಿಸಿದ್ದಾರೆ.

ಕರ್ನಾಟಕ ಸಂಗೀತದಲ್ಲಿ ವಿಹಂಗಮವೂ ಇಲ್ಲ, ಬಿಹಾಗ್‌ವೂ ಇಲ್ಲ. ಹಿಂದುಸ್ತಾನಿ ಪ್ರಕಾರದ ಬಿಹಾಗ್‌ವನ್ನು ಎಂ.ಎಸ್. ಗೋಪಾಲಕೃಷ್ಣನ್ ಅವರು ವಯಲಿನ್‌ನಲ್ಲಿ ಕರ್ನಾಟಕ ಪದ್ಧತಿಯಲ್ಲಿ ಬಾರಿಸಿ ಚಾಲನೆಯಲ್ಲಿ ತಂದಿದ್ದಾರೆ. ಬೆಹಾಗ ಮತ್ತು ಬೇಗಡಾ ಎಂಬ ರಾಗಗಳಿದ್ದು, ಇವುಗಳಿಗೂ ಉತ್ತರಾದೀ ಸಂಗೀತದ ಬಿಹಾಗಿಗೂ ಸಂಬಂಧವಿಲ್ಲ. ಆದರೂ ಒಂದು ಮಾತು. ಬೇಹಾಗ ರಾಗದ ಚಲನೆ ಬಿಹಾಗ್ ಮತ್ತು ಬಿಹಾಗಡಾದ ಮಿಶ್ರಣದಂತಿದೆ ಎಂದು ಕೆಲವರ್ಷಗಳ ಹಿಂದೆ ಖ್ಯಾತ ಗಾಯಕಿ ಅರುಣಾ ಸಾಯೀರಾಮ (ಟಿ. ಬೃಂದಾ ಅವರ ಶಿಷ್ಯೆ) ಹೇಳಿದ್ದ ನೆನಪು.

ಬಿಹಾಗ್ ರಾಗ, ಗಾಯನ ಮತ್ತು ವಾದನ ಎರಡಕ್ಕೂ ಬಹಳ ಅನುಕೂಲಕರವಾಗಿದೆ. ಅಲ್ಲಾವುದ್ದೀನ ಖಾನ್ (ಸರೋದ್), ರವಿಶಂಕರ್ (ಸಿತಾರ್), ಅಮಜಾದ್ ಅಲಿ (ಸರೋದ್), ಬಿಸ್ಮಿಲ್ಲಾ ಖಾನ್ (ಶಹನಾಯಿ) ಅವರ ಮುದ್ರಿಕೆಗಳು ಬಿಹಾಗ್‌ದಲ್ಲಿವೆ. ಇದರ ಗಾಯನದಲ್ಲಿಯಂತೂ ಸಾಕಷ್ಟು ಧ್ವನಿಸುರುಳಿಗಳಿವೆ. ಇನ್ನು ಬಿಹಾಗ್‌ದ ಸೋದರ-ಸೋದರಿಯರ ಬಗ್ಗೆ: ನಟ್‌ಬಿಹಾಗ್‌ದ ಬಗ್ಗೆ ಈ ಹಿಂದೆ ಬರೆದಿದ್ದೆ. ಪಟ್‌ಬಿಹಾಗ್‌ವನ್ನು ಪ್ರಸಿದ್ಧಿಗೆ ತಂದದ್ದು ಕಿಶೋರಿ ಅಮೋಣಕರ್. 'ಧನ ಧನ ಮಂಗಲ ಗಾವೋ' - ಈ ಮುದ್ರಿಕೆಯನ್ನು ಎಚ್‌ಎಮ್‌ವಿಯವರು ಪ್ರಕಟಿಸಿದ್ದು, ಇದರ ಧ್ವನಿಸುರುಳಿಗಳೂ ಈಗ ಲಭ್ಯವಿದೆ. ಮಲ್ಲಿಕಾರ್ಜುನ ಮನ್ಸೂರರು 'ಸಾವನಿ',

ಸಾವನಿನಟ್ ಹಾಡುತ್ತಿದ್ದರು. 'ಸಾವನಿ' ಕೂಡ ಬಿಹಾಗ್ ಕುಟುಂಬಕ್ಕೆ ಸೇರಿದ್ದು ('ದೇವದೇವ' ರಚನೆ), ಇದಕ್ಕೆ ಬಿಹಾಗ್ ಅಂಗದ ಸಾವನ ಎಂದು ನಾವು ನಮ್ಮ ಅನುಕೂಲತೆಗಾಗಿ ಹೇಳಬಹುದು. ಬಿಹಾಗ್‌ಕ್ಕಿಂತ ಮಾರುಬಿಹಾಗ್ ಜಾಸ್ತಿ ಜನಪ್ರಿಯವಾಗಿದೆ. ಪ್ರಭಾ ಅತ್ರೆಯವರ ಮಾರುಬಿಹಾಗ್ ಎರಡು ದಶಕಗಳ ಹಿಂದೆ ಕೇಳಿದ್ದು ಇನ್ನೂ ಚೆನ್ನಾಗಿ ನೆನಪಿನಲ್ಲಿದೆ. ಭೀಮಸೇನ ಜೋಶಿ, ಮಾಣಿಕ ವರ್ಮಾ, ಹೀರಾಬಾಯಿ ಬಡೋದೇಕರ್ ಇವರೆಲ್ಲ ಜನಪ್ರಿಯಗೊಳಿಸಿದ ಮತ್ತಷ್ಟು ಕಲಾವಿದರು. 'ರಸಿಯಾ ಹೋ ನಾ ಜಾವೋ' ಎಂಬ ಬಂದಿಶ್‌ನ್ನೆ ಯಾವಾಗಲೂ ಹಾಡುತ್ತಿರುತ್ತಾರೆ. ಗ್ವಾಲಿಯರ್ ಪರಂಪರೆಯ ಮಾಲಿನಿ ರಾಜುರ್‌ಕರರ ಮಾರುಬಿಹಾಗ್ ಕೂಡ ತುಂಬಾ ಲಾಲಿತ್ಯಪೂರ್ಣವಾಗಿದೆ.

ಠುಮರಿ ಮತ್ತು ಗಝಲ್‌ದಲ್ಲಿ ಕೂಡ ಬಿಹಾಗ್ ರಾಗ ತುಂಬಾ ಚೆನ್ನಾಗಿ ಅರಳುತ್ತದೆ. ಖ್ಯಾತ ಗಿರಿಜಾದೇವಿ ಒಮ್ಮೆ ಬಿಹಾಗ್ ರಾಗದಿಂದ ತನ್ನ ಕಚೇರಿ ಪ್ರಾರಂಭಿಸಿ ನಂತರ ಅದೇ ರಾಗದಲ್ಲಿ 'ದಾದರಾ' ತಾಲದಲ್ಲಿ 'ಕೈಸಾ ಜಾದೂ ಡಾರಾ' ಟಾಟಾ ಥಿಯೇಟರಿನಲ್ಲಿ ಹಾಡಿದ್ದರು. ಅಖ್ತರಿಬಾಯಿ ಬೇಗಂ, ಇಸ್ಲಾಮ್ ಜಿಮಖಾನಾದಲ್ಲಿ (ಮರೀನ್ ಡ್ರೈವ್) ರಾತ್ರಿ ಹನ್ನೆರಡರ ನಂತರ 'ಕೈಸೆ ದಿನ ಕಟೆ ರತಿಯಾಂ' ಹಾಡಿದ್ದರು, ಬ್ರಿಜನಾರಾಯಣರ ಸರೋದ್, ಮೊದಲ ಬಾರಿಗೆ ರಾಗ ಬಿಹಾಗ್‌ದಿಂದ 'ರಂಗಪ್ರವೇಶ'ಮಾಡಿದ್ದರ (1967–68) ನೆನಪು ಇನ್ನೂ ಮಾಸಿಲ್ಲ. ಕುಮಾರ ಗಂಧರ್ವ ಹಾಡಿದ 'ಮರ್ಮ ಬಂದಾತಲೀ ಠೇವ ಹೀ' ಎಂಬ ಮರಾಠೀ ರಂಗಗೀತೆ ಕಿವಿಯಲ್ಲಿ ಇನ್ನೂ ಗಂಯ್‌ಗುಡುತ್ತಾ ಇದೆ. ಅಂದಿನ ಸಂಗೀತ ವಿಮರ್ಶಕರು ಕುಮಾರ ಗಂಧರ್ವರನ್ನು ಅವರ 'ಕನ್ನಡ–ಮರಾಠಿ' ಉಚ್ಚಾರದ ಬಗ್ಗೆ ತರಾಟೆಗೆ ತೆಗೆದುಕೊಂಡು ತಮ್ಮ, 'ಸಂಗೀತ ವರ್ಜಿತ ಪಾಂಡಿತ್ಯ'ವನ್ನು ಪ್ರದರ್ಶನ ಮಾಡಿದ್ದರು.

ಬಿಹಾಗ್‌ದ ಕ್ಯಾನವಾಸ ತುಂಬಾ ವಿಶಾಲವಾದದ್ದು. ಕಿವಿಗೆ ಕರ್ಕಶತೆ ಉತ್ಪನ್ನವಾಗದಂತೆ ಹೊಸ ಹೊಸ ಪ್ರಯೋಗಗಳನ್ನು ಈ ರಾಗದಲ್ಲಿ ವಿದ್ವಾಂಸರು ಹಿಂದೆ ಮಾಡಿದ್ದಾರೆ. ಉದಾಹರಣೆಗೆ 'ಗುಣಿದಾಸ' ಜಗನ್ನಾಥ ಬುವಾ ಕಟ್ಟಿದ 'ಸ್ವಾನಂದಿ' ಎಂಬ ರಾಗ. ಇದನ್ನು ಅವರ ಶಿಷ್ಯರಾದ ಚಿಂತಾಮಣಿ ವ್ಯಾಸರಿಂದ ನಾನು ಹಲವು ಸಲ ಕೇಳಿದ್ದೇನೆ. ಪಂಡಿತ ಜಿತೇಂದ್ರ ಅಭಿಷೇಕಿಯವರು ಕೂಡ ಇದನ್ನು ಬಹಳ ಚೆನ್ನಾಗಿ ಜಮಾಯಿಸುತ್ತಿದ್ದರು ರಸಕವಳದಂತೆ. ಬಿಹಾಗ್, ಭಿನ್ನಷಡ್ಜ ಹಾಗೂ ಭಟಿಯಾರ್‌ದ ಮಿಶ್ರಣದಿಂದ ತಯಾರಿಸಿದ ಈ ರಾಗದ ಸ್ವರೂಪವೇ ಬೇರೆ. ಈಗ ಗುಣಿದಾಸರೂ ಇಲ್ಲ, ವ್ಯಾಸ ಮತ್ತು ಅಭಿಷೇಕಿ ಕೂಡ ಇನ್ನಿಲ್ಲ. ಇರುವುದು 'ಸ್ವಾನಂದಿ' ರಾಗ ಮತ್ತು ಬಿಹಾಗ್ ರಾಗತರಂಗದ ಶ್ರೀಮಂತಿಕೆ ಹೆಚ್ಚಿಸಿದ ಇತರ ಅನೇಕ ಕೃತಿಗಳು.

*****

5.10

ಶ್ರೀರಾಗ; ಹಿಂದೆಯೂ ಶ್ರೀ ಮುಂದೆಯೂ ಶ್ರೀ

ಶ್ರೀ ಒಂದು ಪುರಾತನ ರಾಗ, ರಾಗ ವ್ಯಾಕರಣ ಎಂಬ ಪುಸ್ತಕದಲ್ಲಿ ಶ್ರೀಯ ಉಲ್ಲೇಖವಿದೆ. ಶ್ರೀಕಾಮೋದವಿದೆ, ಶ್ರೀ ಟಂಕವಿದೆ. ಶ್ರೀ ಭೈರವ, ಶ್ರೀ ವಸಂತ, ಶ್ರೀರಂಜನಿ, ಶ್ರೀ ಹಿಂದೋಲ ಇವೂ ಕೂಡ ಇವೆ. ಅಂದ ಹಾಗೆ ಜೈತಾಶ್ರೀ, ರಾಗೇಶ್ರೀ, ಬಾಗೇಶ್ರೀ ಎಂಬ ರಾಗಗಳೂ ಕೂಡ ಇವೆ. ಅದಕ್ಕೇ ಹೇಳಿದ್ದು ಹಿಂದೆಯೂ ಶ್ರೀ, ಮುಂದೆಯೂ ಶ್ರೀ...ಆಗಿ ಶ್ರೀ ರಾಗ ಮೆರೆದಿದೆ. ಶ್ರೀರಾಗ ಸಂಜೆಯ ರಾಗ, ಹಾಡಲು ತುಂಬ ಕಠಿಣ, ಆಲಾಪನೆಯಲ್ಲಿಯೆ ಜಾರಿಬೀಳುವ ಸಂಭವ ಜಾಸ್ತಿ ಇದೆ. ಇದರ ಹಾದಿ ವಕ್ರ. ವಕ್ರ ಅಷ್ಟೇ ಅಲ್ಲ, ಓರೆಕೋರೆ. ಹೀಗಾಗಿ ಕೆಲವೇ ಗಾಯಕ, ವಾದಕರು ಈ ರಾಗವನ್ನು ಸಂಜೆ ಹಾಡಲು ಬಯಸುತ್ತಾರೆ. ರಸಾಯನ ಸರಿಯಾಗಿ ಕೂಡಿ ಬಂದರೆ ಇದರಂತಹ ಅಂದದ ರಾಗ ಮತ್ತೊಂದಿಲ್ಲ. ಇದರ ನಡಿಗೆಯೇ ಬೇರೆ. ಮಂದ ಗಜಗಾಮಿನಿಯಂತೆ 'ಡಿಗ್ನಿಫೈಡ್ ವಾಕ್'. ಇದು ಟೈಮ್ ಪಾಸ್ ರಾಗವಲ್ಲ ಎಂದು ಪದೇಪದೇ ಒತ್ತಿಹೇಳಬೇಕಾಗುತ್ತದೆ. ಪುಣ್ಯಕ್ಕೆ ಕಲಾಭಾರತಿಯ ಕಾರ್ಯಕ್ರಮಗಳೆಲ್ಲ ಮುಂಜಾನೆ ನಡೆಯುತ್ತಿದ್ದವು. ಹೀಗಾಗಿ ಹೊಸ ಹೊಸ ಗಾಯಕ ವಾದಕರ 'ಶ್ರೀ' ಕೇಳುವ ಪ್ರಸಂಗ ಬಹಳ ಕಡಿಮೆ. ಇತ್ತು, ಮಧ್ಯೆ, ಶುಕ್ರವಾರ ಸಾಯಂಕಾಲದ ಪ್ರಯೋಗವನ್ನು ಒಂದು ವರ್ಷ ನಡೆಸಿದಾಗ ನವೋದಿತ ಕಲಾವಿದರು ಶ್ರೀ ಹಾಡಲು ಹೋಗಿ ಜಾರಿ ಬಿದ್ದದ್ದೂ ಇದೆ. 'ನನ್ನನ್ನು ಶಿಷ್ಯನೆಂದು ಸ್ವೀಕರಿಸಿ' ಎಂದು ಎಳೆಯ ಗಾಯಕರು ದುಂಬಾಲು ಬಿದ್ದಾಗ ತಪ್ಪಿಸಿಕೊಳ್ಳಲು ಹಿಂದಿನ ಕಾಲದ ಉಸ್ತಾದ್‌ರು 'ಬೇಟಾ, ತುಮ್ 'ಶ್ರೀ' ಗಾಕೇ ದಿಖಾವೊ, ಫಿರ್ ಹಮ್ ಸೋಚೆಂಗೆ' ಎಂದು ರಾಗವೆಳೆಯುತ್ತಿದ್ದರು. ಅವರಿಗೆ 'ಹಮಖಾಸ ಫೇಲು'! (ಗ್ಯಾರಂಟಿ) ಎಂದು ಮೊದಲೇ ಗೊತ್ತಿರುತ್ತಿತ್ತು. ಇದು ಶ್ರೀರಾಗದ ಮಹಿಮೆ.

ಜಯಪುರ್-ಅತ್ರೋಲಿ ಪರಂಪರೆಯವರು ಸಹಸಾ ಶ್ರೀ ರಾಗದ ಗೋಜಿಗೆ ಹೋಗುವುದಿಲ್ಲ. ಅವರು ಹಾಡುವುದು ಜೋಡರಾಗಗಳು ಅಥವಾ ಜೈಪಾಶ್ರೀ, ಧವಲಾಶ್ರೀ, ಮುಂತಾದವುಗಳು. ಎರಡು ರಾಗಗಳನ್ನು ಸೇರಿಸಿ ಹಾಡುವುದೂ ಕೂಡ ಅಷ್ಟೇನೂ ಸುಲಭವಲ್ಲ. ಉದಾಹರಣೆಗೆ ಭೀಮ ಪಲಾಸಿ ಹಾಡುವುದು ಸುಲಭ, ಪ್ಯೂರ್ ಭೀಮ ಹಾಡುವುದು ಅಷ್ಟೇ ಕಠಿಣ. ಕರ್ನಾಟಕ ಸಂಗೀತದ ಶ್ರೀ ಹಿಂದುಸ್ತಾನಿ ಸಂಗೀತದ ಸಾರಂಗದಂತೆ. ನಿಖರವಾಗಿ ಹೇಳುವುದಾದರೆ ಬೃಂದಾವನೀ ಸಾರಂಗದಂತೆ. ಎಲ್ಲೋ

ಓದಿದ ಘಟನೆ ಈಗ ಜ್ಞಾಪಕಕ್ಕೆ ಬರುತ್ತಾ ಇದೆ. ಮಹಾರಾಜರ ಕಾಲದ ಮೈಸೂರಿನ ದಸರಾ ಉತ್ಸವದ ವಿಜೃಂಭಣೆ ಎಲ್ಲರಿಗೂ ಗೊತ್ತು. ನಾಲ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದಿನಂತೆ ಉತ್ತರ ದಕ್ಷಿಣದಿಂದ ಅಂದರೆ ಹತ್ತೂ ದಿಶೆಗಳಿಂದ ಗಾಯನ, ವಾದನ ಸಾಮ್ರಾಟರು, ಮೈಸೂರಿಗೆ ದಸರಾ ಉತ್ಸವದಲ್ಲಿ ಪಾಲುಗೊಳ್ಳಲು ಹೋಗುತ್ತಿದ್ದರು. ಒಡೆಯರು, ದರ್ಬಾರು ಗಾಯಕ ವಾದಕರ ಸಮಿತಿಯೊಂದನ್ನು ಸ್ಥಾಪಿಸಿದ್ದರು. ಅದು ಒಂದು 'ಆಡಿಷನ್ ಟೆಸ್ಟ್' ಇದ್ದ ಹಾಗೆ. ಸ್ವತಃ ಒಡೆಯರು ಸ್ಥಾನಾಪನ್ನರಾಗಿ ಆಲಿಸುತ್ತಿದ್ದರು. ಪ್ರತಿಯೊಬ್ಬ ಗಾಯಕ, ವಾದಕರಿಗೆ 15 ನಿಮಿಷದ ಅವಧಿ. ಆಯ್ದ ಕಲಾವಿದರನ್ನು ಮೈಸೂರಿನಲ್ಲಿ ಉಳಿಸಿಕೊಂಡು ಇತರರನ್ನೂ ಮಾನ, ಮರ್ಯಾದೆಯಿಂದ (ಭಕ್ಷೀಸು, ಪ್ರವಾಸದ ಖರ್ಚು ಕೊಟ್ಟು) ಬೀಳ್ಕೊಡುವ ರೂಢಿಯಿತ್ತು.

ಒಂದು ಸಾಯಂಕಾಲ ಉತ್ತರದ ಗಾಯಕನ ಶ್ರವಣ ಪರೀಕ್ಷೆ ಇತ್ತು. ಶ್ರೀ ರಾಗದ ಆಲಾಪನೆ ಪ್ರಾರಂಭ ಮಾಡಿದ ಆ ಮಹಾನುಭಾವ, ಒಡೆಯರ ಆಜ್ಞೆಯಂತೆ, 15 ನಿಮಿಷದಲ್ಲಿ ಹಾಡಲೆಂದು ಧ್ರುತಲಯದ ಬಂದಿಶ್ 'ಪರೀ ಹೂಂ ತೋ ಆಸನ ಗೈಲಿs' ಶುರು ಮಾಡಿದ. ಮಹಾರಾಜರ ಸಿಟ್ಟು ಕ್ರಮೇಣ ನೆತ್ತಿಗೇರತೊಡಗಿತ್ತು. ಮೈಸೂರು ವಾಸುದೇವಾಚಾರ್ಯರಿಗೆ ಈ 'ಅನರ್ಥ' ಲಕ್ಷಕ್ಕೆ ಬಂದು ಗಾಯಕನ ಕಿವಿಯಲ್ಲಿ ಏನೋ ಉಸುರಿದರು. ಕೂಡಲೇ 'ಗಿಯರ್' ಬದಲಿಸಿ ಈ ಗಾಯಕ 'ದರ್ಶನ ದೇನಾ ಪ್ರಾಣ ಪಿಯಾರೇ' ಧ್ರುತಗತಿಯಲ್ಲಿ ಪ್ರಾರಂಭಿಸಿದ ಕೂಡಲೇ ಮಹಾರಾಜರ ಸಹಿತ ಎಲ್ಲರೂ ತಲೆದೂಗುತ್ತಾ 'ಭೇಷ್ ಭೇಷ್' ಅಂದರು. ವಾಸುದೇವಾಚಾರ್ಯರು ಉಸುರಿದ್ದು 'ಬೃಂದಾವನೀಸಾರಂಗ'ವನ್ನು ಹಾಡಲು. ಅಂದರೆ ಹಿಂದೂಸ್ತಾನಿಯ ಶ್ರೀ ರಾಗವು ಬೃಂದಾವನಿ ಸಾರಂಗದಂತೆ ದಸರೆಯಲ್ಲಿ ಹಾಡಲು ಸಿಕ್ಕಿತಷ್ಟೆ ಅಲ್ಲ, ಇನಾಮೂ ಚೆನ್ನಾಗಿ ದೊರೆಯಿತು.

ಕರ್ನಾಟಕದ ಪುಟ್ಟರಾಜ ಗವಯಿಯವರ ಶಿಷ್ಯ ವೆಂಕಟೇಶಕುಮಾರ್ ಈ ರಾಗವನ್ನು ಬಹಳ ಚೆನ್ನಾಗಿ ಹಾಡುತ್ತಾರೆ. ಅವರು ಹಾಡಿದ 'ಆನಂದ ದೇ ಮುಖಚಂದ್ರ' ಬಂದಿಶ್ ವಿಲಂಬಿತ ಏಕ ತಾಲದಲ್ಲಿ ಮುಂಬಯಿಯ ಮುಲುಂಡದಲ್ಲಿ ಹಾಡಿದ್ದು ನನಗೆ ಚೆನ್ನಾಗಿ ನೆನಪಿನಲ್ಲಿದೆ. ಇವೆರಡೂ, ಪಾರಂಪರಿಕವಾಗಿ ಬಂದ ಗ್ವಾಲಿಯರ್ ಮನೆತನದ ರಚನೆಗಳು. ಅತ್ಯಂತ ಧೀರ ಗಂಭೀರ ಗಜಗಮನದ ನಡಿಗೆಯಲ್ಲಿ ಹೊರಟ ಶ್ರೀ ರಾಗ, ಅತ್ಯಂತ ಆಳವಾಗಿದ್ದು ತಾರ ಷಡ್ಜ ಬಂದ ಕೂಡಲೇ ರಾಗದ ಉತ್ಪತ್ತಿ, ರಾಗದ ಜ್ಞಾನವಿಲ್ಲದವರಿಗೂ ಚೆನ್ನಾಗಿ ಅರ್ಥವಾಗುತ್ತದೆ.

ಪಂ. ಭೀಮಸೇನ ಜೋಶಿಯವರ ಅಸಂಖ್ಯ ಮೆಹಫಿಲ್ಲುಗಳನ್ನು ನಾನು ಪ್ರತ್ಯಕ್ಷವಾಗಿ ಕೇಳಿದ್ದೇನೆ. ಅಂದರೆ 1957ರಿಂದ 2004ರ ತನಕ. ಆದರೆ ಅವರ ಪ್ಯೂರ್ ಶ್ರೀ ನಾನು ಇದುವರೆಗೂ ಕೇಳಿಲ್ಲ. ಅವರ ಜೋಡ್‌ರಾಗ ಅವರೇ ಕಟ್ಟಿದ್ದ 'ಮಾರವಾಶ್ರೀ'ಯನ್ನು ನಾನು ಎರಡು ಮೂರು ಸಲ ಕೇಳಿದ್ದೇನೆ. ಎರಡೂ ಸಾಯಂಕಾಲ ಹಾಡುವ ರಾಗಗಳು. ಒಂದು ಅಂದರೆ 'ಶ್ರೀ ಪೂರ್ವಿ' ಥಾಟಿನದದ್ದಾದರೆ, 'ಮಾರವಾ' ಮಾರವಾ ಥಾಟಿನ ಪ್ರಮುಖ ರಾಗ. ಸಾಯಂಕಾಲದ 'ಸೋಹನಿ' ಮತ್ತು 'ಪೂರಿಯಾ'ಗಳು ಮಾರವಾ ರಾಗಕ್ಕೆ ಹೋಲಿಸಿದರೆ ಶ್ರೀ ರಾಗ ಹಾಡುವಾಗ ಕೊಂಚ ಮೇಲೆ ಕೆಳಗಾದರೆ 'ಪೂರಿಯಾಧನಶ್ರೀ' ಅಥವಾ ಗೌರಿ ರಾಗದಲ್ಲಿ ಗಾಯಕ, ವಾದಕರು ಸೇರುವ

ಸಂಭವವಿದೆ. ಎಲ್ಲಾ ಗಾಯಕ, ವಾದಕರು ಆಲಾಪನೆಯಲ್ಲಿ ಪ್ಯೂರ್ ರಾಗವನ್ನು ಇಟ್ಟುಕೊಂಡು ಹಾಡಿದರೂ ಕೂಡ, ತಾನ್‌ಗಳನ್ನು ಜಲ್ದು ರೀತಿಯಲ್ಲಿ ಹೊಡೆಯುವಾಗ, ಈ ತಾನಗಳು ಸಾಮಾನ್ಯ ರಾಗಗಳಲ್ಲಿ ಇದ್ದಕ್ಕಿದ್ದ ಹಾಗೆ ಸೇರಿಕೊಳ್ಳುವುದು, ಸೇರಿಸಿಕೊಳ್ಳುವುದು ಅಪರೂಪವಲ್ಲ. ಪಂಡಿತ ಜಸರಾಜರ 'ಶ್ರೀ" (1977) ಇಂಥ ಪ್ರಕಾರಕ್ಕೆ ಸೇರಿದ್ದು. ಆಲಾಪನೆ, ರಾಗ ವಿಸ್ತಾರ ಅತ್ಯಂತ ಸುಸ್ಪಷ್ಟ, ಆದರೆ ಸ್ವರಗಳ ತಾನಗಳನ್ನು ಪ್ರೇಕ್ಷಕರೆದುರಿಗೆ ಎಸೆದಾಗ ಇಂತಹ ಮಿಕ್ಸ್-ಅಪ್ ಆಗಿದ್ದುದನ್ನು ವೀಕ್ಷಿಸಿದ್ದೇನೆ. ಇಲ್ಲಿ ರಸಭಂಗವಾಗದಿದ್ದರೂ ರಾಗದ ನಿರ್ಮಲತೆ ಇರುವುದಿಲ್ಲ ಎಂಬ ಮಾತು ಅಷ್ಟೇ ಸತ್ಯ. ಇಲ್ಲಿ ಒಂದು ಮಾತು ಕಹಿ ಎನಿಸಿದರೂ ಬರೆಯುವ ಕರ್ತವ್ಯವೆಂದು ಬರೆಯಲೇ ಬೇಕು. ಸಂಗೀತ ಮಾರ್ತಂಡರೆಂದು ಪ್ರಸಿದ್ಧಿ ಪಡೆದ ಜಸರಾಜರೇ ಇಂತಹ ಪ್ರಯೋಗಗಳನ್ನು ಮಾಡಿದರೆ ಅವರ ಅಸಂಖ್ಯ ಶಿಷ್ಯವೃಂದ ಮನಸ್ಸಿಗೆ ತೋಚಿದ್ದನ್ನು ಮಾಡುದೆ ಇರುತ್ತಾರೆಯೆ> ಹಾಗೆ ಮಾಡಿದರೆ, ಅದು ಅವರ ತಪ್ಪೆ?

ಶಾಸ್ತ್ರಶುದ್ಧ 'ಶ್ರೀ'ಯನ್ನು ನಾನು ಕೇಳಿದ್ದು, ಅನುಭವಿಸಿದ್ದು ಪಂಡಿತ ಚಿಂತಾಮಣಿ ವ್ಯಾಸ ಅವರಿಂದ. ಜಿತೇಂದ್ರ ಅಭಿಷೇಕಿಯವರು ತೀರಿಕೊಳ್ಳುವ ಕೆಲವೇ ತಿಂಗಳುಗಳ ಮುನ್ನ ಅವರ ಶ್ರೀರಾಗವನ್ನು ಕೂಡ ನಾನು ದಾದರ್-ಮಾತುಂಗ ಕಲ್ಚರಲ್ ಸೆಂಟರಿನಲ್ಲಿ ಕೇಳಿದ್ದೇನೆ. ಪಂಡಿತ ಕೃಷ್ಣಾ ಗುಂಡೋ ಗಿಂಡೆ, ಪಂ. ದಿನಕರ ಕಾಯಕಿಣಿ ಇವರು 'ಶ್ರೀ' ರಾಗದ ಪ್ರಾತ್ಯಕ್ಷಿಕೆ ಭಾರತೀಯ ವಿದ್ಯಾಭವನದಲ್ಲಿ 15 ವರ್ಷಗಳ ಮೊದಲು ಮಾಡಿದ್ದು ಇದೆ. ಇದರ ಹಿಂದಿನ ಇತಿಹಾಸ ತುಂಬಾ ರಂಜಕವಾಗಿದೆ. ಗಿಂಡೆ, ಕಾಯಕಿಣಿಯವರ ಗುರು. ಆಚಾರ್ಯ ಶ್ರೀಕೃಷ್ಣ ರತಜನಕರರಿಗೆ ಶ್ರೀರಾಗ ತುಂಬಾ ಸೇರುತ್ತಿತ್ತು. ಅವರು ಚೆನ್ನಾಗಿ ಹಾಡುತ್ತಿದ್ದರಷ್ಟೇ ಅಲ್ಲ, ಅದರಲ್ಲಿ 60-70ಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದರು. ಗಿಂಡೆಯವರು ಇವೆಲ್ಲ ಸ್ವರಬದ್ಧ ಮಾಡಿ ಲಿಪಿಯಲ್ಲಿ ಬರೆದಿಟ್ಟದ್ದರಿಂದ ಸಂಗೀತ ಅಭ್ಯಾಸಿಗಳಿಗೆ ಅನುಕೂಲವಾಗಿದೆ. ಅಂತೆಯೇ ಅವರ ಶಿಷ್ಯರೆಲ್ಲ ಶ್ರೀ ರಾಗದಲ್ಲಿ ಪ್ರಾವೀಣ್ಯವನ್ನು ಗಳಿಸಿದರು.

ಶ್ರೀ ರಾಗದ ಚಲನೆ ಧ್ರುಪದ್ ಅಂಗದಿಂದ ನಡೆದರೆ ಅದಕ್ಕೊಂದು ಗಾಂಭೀರ್ಯ ಬರುತ್ತದೆ. ಭಾತಖಂಡೆಯವರು ಈ ರಾಗವನ್ನು ಪೂರ್ವಿ ಥಾಟಿನಲ್ಲಿ ಸೇರಿಸಿದರೂ ಕೆಲವು ಸಲ ಕಾಫಿ ಥಾಟಿನಲ್ಲಿಯೂ ಶೋಭಿಸುತ್ತದೆ. ತಾನಸೇನಕಾಲದ 'ದೀಪಕ್' ನೆನಪಿನಲ್ಲಿದೆಯಷ್ಟೆ! ಈ ಶ್ರೀರಾಗದ ಮೂಲ ಆ ದೀಪಕದಲ್ಲಿದೆ ಎನ್ನುತ್ತಾರೆ ಕೆಲವು ಸಂಗೀತಜ್ಞರು. ಶ್ರೀ ರಾಗದ ಬಗ್ಗೆ ಕೆಲವು ದಂತಕಥೆಗಳೂ ಇವೆ. 'ರಾಧಾಗೋವಿಂದ ಸಾರ' ಎಂಬ ಪುಸ್ತಕದಲ್ಲಿ ಶಿವನ ಪಂಚಮುಖಗಳಲ್ಲಿ ಒಂದಾದ 'ಈಶಾನ' ಮುಖದಿಂದ ಶ್ರೀ ಹೊರಗೆ ಬಂದಿತಂತೆ. ಇವೆಲ್ಲ ಮಿಥಕಗಳೆಂದು ಒಪ್ಪಿಕೊಂಡರೂ ಶಿವನ ಗಾಂಭೀರ್ಯ, ಭೈರವದಂತೆ ಇದರಲ್ಲಿಯೂ ಇದೆ ಎಂಬ ಮಾತನ್ನು ಯಾರೂ ಅಲ್ಲಗಳೆಯಲಾರರು.

ನಾನು ಕಲಾಭಾರತಿಯ ಮೊಟ್ಟ ಮೊದಲಿನ ಕಲಾವಿದರಾದ ಶ್ರುತಿ ಸಡೋಲಿಕರ್, ವೀಣಾ ಸಹಸ್ರಬುದ್ಧೆ, ಪದ್ಮಾ ತಳವಲಕರ ಅವರು ಶ್ರೀ ರಾಗವನ್ನು ಹಾಡಿದ್ದನ್ನು ಕೇಳಿದ್ದೇನೆ. ಜಯಪುರ್-ಅತ್ರೋಲಿ ಪರಂಪರೆಯವರಾದರೂ ಮೊದಲು ಗ್ವಾಲಿಯರ

ಘರಾಣೆಯ ಸಂಬಂಧವಿಟ್ಟುಕೊಂಡ ನಮ್ಮ ಪಂ. ಮಲ್ಲಿಕಾರ್ಜುನ ಮನ್ಸೂರರು ಶ್ರೀ ರಾಗವನ್ನು ಚೆನ್ನಾಗಿ ಹಾಡುತ್ತಿದ್ದರು. ವಿಲಾಯತ್ ಖಾನ, ಅಮಜದ ಅಲಿಯವರ ಸಿತಾರ್, ಸರೋದ್‌ಗಳಲ್ಲಿ ಶ್ರೀ ಯನ್ನು ಕೂಡ ನಾನು ಕೇಳಿದ್ದೇನೆ. ಇತ್ತೀಚೆಗೆ ಪಂ. ಉಲ್ಲಾಸ ಕಶಾಳಕರ್ (ಇವರು ನಮ್ಮಲ್ಲಿ ಮೂರು ನಾಲ್ಕು ಸಲ ಹಾಡಿದ್ದಾರೆ) ಶ್ರೀ ರಾಗದ ಅಪ್ರತಿಮ 'ಪೇಶ್‌ಕಶ್'ವನ್ನು ನಾನು ಕೇಳಿದ್ದೇನೆ. ಭಾತಖಂಡೆಯವರು 'ಚತುರ ಪಂಡಿತ' ಹೆಸರಿನಲ್ಲಿ 'ಹರರಂಗ' ಎಂಬ ಕಾವ್ಯನಾಮದಲ್ಲಿ ಶ್ರೀ ರಾಗದಲ್ಲಿ ಬಹಳಷ್ಟು ಬಂದಿಶಗಳನ್ನೂ ಕಟ್ಟಿದ್ದಾರೆ. ಇದರಲ್ಲಿ 'ಹರೀ ಕೆ ಚರಣ ಕಮಲ' ಪ್ರಮುಖವಾದದ್ದು. ಇದನ್ನು 35ನೇ ವರ್ಷಕ್ಕೇ ತೀರಿಕೊಂಡ ಬೈಜು–ಬಾವರಾ ಖ್ಯಾತಿಯ ಡಿ.ವಿ. ಪಲುಸ್ಕರ ಚೆನ್ನಾಗಿ ಹಾಡುತ್ತಿದ್ದರಂತೆ. ಎಚ್‌ಎಂವಿಯ ಜಿ.ಎನ್. ಜೋಶಿಯವರನ್ನು ನಾನು ಟೈಮ್ಸ್‌ನಲ್ಲಿ ಬರೆಯುತ್ತಿದ್ದ ದಿನಗಳಲ್ಲಿ ಸಂದರ್ಶಿಸಿ ಲೇಖನ ಬರೆದಿದ್ದಾಗ ಜೋಶಿಯವರು ನನಗೆ ಪಲುಸ್ಕರರ 'ಹರಿ ಕೇ ಚರಣಕಮಲ'ದ ಎಲ್‌ಪಿ ರೆಕಾರ್ಡನ್ನು ಎಚ್‌ಎಂವಿಯವರು ಮಾಡಿದ ಕತೆ ಹೇಳಿದ್ದು ಕರುಣಾಜನಕವಾಗಿದೆ.

1955ರ ವಿಷಯ. ಜಿ.ಎನ್ ಜೋಶಿಯವರು ಸುಮಾರು 20 ನಿಮಿಷಗಳ ರಿಕಾರ್ಡು ಮಾಡಲು ಪಲುಸ್ಕರರಿಗೆ ವಿನಂತಿಸಿದರು. ಗಣಪತಿ ಉತ್ಸವದ ಗಮ್ಮತ್ತಿನ ದಿನಗಳವು. ನಾಲ್ಕೈದು ಕಡೆ ಅವರ ಕಚೇರಿಯಾಗಿತ್ತು. ಕೊನೆಯ ಮೆಹಫಿಲ್ಲು ವಿಲೆಪಾರ್ಲೆಯಲ್ಲಿ ಆಯಿತು. ಅದನ್ನು ಮುಗಿಸಿ ಮಧ್ಯಾಹ್ನ ಎರಡು ಗಂಟೆಗೆ ಜೋಶಿಯವರು ಪಲುಸ್ಕರರನ್ನು ರಿಕಾರ್ಡು ಮಾಡಲು ವೇಳೆ ಕೊಟ್ಟರು. ರಿಕಾರ್ಡಿಂಗ್ ಮುಗಿಸಿ ಡೆಕ್ಕನ್ ಕ್ವೀನ್ ಗಾಡಿಯಿಂದ ಪುಣೆಯಲ್ಲಿದ್ದ ತಮ್ಮ ಮನೆಗೆ ತೆರಳುವುದೆಂದು ಪಲುಸ್ಕರರು ನಿಶ್ಚಯಿಸಿದರು. ಮುಂಜಾನೆಯ ಮೆಹಫಿಲ್ ಮುಗಿಸಿದ ಪಲುಸ್ಕರರಿಗೆ ಉಬ್ಬಸ ಆರಂಭವಾಯಿತು. ಬೆಂದು ಬಸವಳಿದರೂ ತಮ್ಮಲ್ಲಿದ್ದ ವನೌಷಧಿಗಳ ಸಹಾಯದಿಂದ ಫ್ಲೋರಾ ಫೌಂಟನ್‌ನಲ್ಲಿದ್ದ ಎಚ್‌ಎಮ್‌ವಿ ಆಫೀಸಿಗೆ ಪಲುಸ್ಕರರು ತಮ್ಮ ಶಿಷ್ಯನೊಂದಿಗೆ ಬಂದರು. ಅವರಿಗೆ ರಿಕಾರ್ಡಿಂಗನ್ನು ಮುಂದೂಡಿಸುವ ವಿಚಾರವಿತ್ತು. ಆದರೂ ಜೋಶಿಯವರ ಆಗ್ರಹಕ್ಕೆ ಬಲಿಬಿದ್ದು 20 ನಿಮಿಷದ ಶ್ರೀ ರಾಗವನ್ನು ರಿಕಾರ್ಡು ಮಾಡಿದರು. ದೈವದ ದುರ್ವಿಲಾಸ ಇಷ್ಟೆ. ಪುಣೆಗೆ ಹೋದ ಪಲುಸ್ಕರರು ಹಾಸಿಗೆ ಹಿಡಿದವರು ಮತ್ತೆ ಏಳಲೇ ಇಲ್ಲ. ಅದೇ ವರ್ಷದ ಅಕ್ಟೋಬರ ತಿಂಗಳಲ್ಲಿ ತೀರಿಕೊಂಡರು.

ಶ್ರೀ ರಾಗದ ರೆಕಾರ್ಡು ಅವರ ಕೊನೆಯ ಮತ್ತು ಎಚ್‌ಎಮ್‌ವಿಯವರ ಮೊದಲ ಲಾಂಗ್ ಪ್ಲೇಯಿಂಗ್ ರೆಕಾರ್ಡು ಆಗಿತ್ತು. ಜೋಶಿಯವರು ಸತತವಾಗಿ 18 ತಾಸು ಕುಳಿತು ಪ್ಯಾಚ್‌ವರ್ಕ್ ಮಾಡಿ ರೆಕಾರ್ಡನ್ನು ಮಾರುಕಟ್ಟೆಗೆ ತಂದರು. ಅಂದರೆ ಅವರ ಮೊದಲಿನ ಆರು ನಿಮಿಷದ ರೆಕಾರ್ಡು ಮತ್ತೆ ಈ ಹೊಸ 20 ನಿಮಿಷದ ರೆಕಾರ್ಡುಗಳನ್ನು ಜೋಡಿಸಿ ಇಪ್ಪತ್ತಮೂರೂವರೆ ಮಿನಿಟಿನ ರೆಕಾರ್ಡು ತಯಾರು ಮಾಡಿದರು. ಡಿ.ವಿ. ಪಲುಸ್ಕರರ ಈ ಶ್ರೀ ರಾಗ ಅಜರಾಮರವಾಗಿದೆ. ಇದ್ದದ್ದು ಅವರದು ಒಂದೇ ದೊಡ್ಡ ರಿಕಾರ್ಡು, ಆಕಾಶವಾಣಿಯಲ್ಲಿ ಅವರು ಹಾಡಿದ ಕೆಲವು ರಾಗಗಳಿವೆ. ಆದರೆ ಶ್ರೀ ಅದರಲ್ಲಿ ಇಲ್ಲ.

ಶ್ರೀ ರಾಗದಲ್ಲಿಯ ಅಲಿ ಅಕಬರ್ ಮತ್ತು ರವಿಶಂಕರ್ ಅವರ ಜುಗಲಬಂದಿ ತುಂಬಾ ಚೆನ್ನಾಗಿದೆ. ರವಿಶಂಕರ್ ಅವರ ಖರ್ಜ (ಮಂದ್ರ) ಸಪ್ತಕದಲ್ಲಿ ಸ್ವರಗಳು ಮತ್ತು ಜೋಡಿಗೆ ಅಲಿ ಅಕಬರ್ ಅವರ ಮಧ್ಯ ಸಪ್ತಕದಲ್ಲಿಯ ಚಲನೆಯಿಂದ ಈ ಶ್ರೀ ರಾಗ ಎಷ್ಟೊಂದು ಅರಳಿದೆಯೆಂದರೆ, ದೊಡ್ಡ ಗುಲಾಬಿಯ ಹಾಗೆ. ಅದರಲ್ಲಿ ರಾಗದ ಗಾಂಭೀರ್ಯತೆ, ರಾಜಠೀವಿ, 'ಹಾಂಟಿಂಗ್' (ಚಿರಸ್ಮರಣೀಯ) ಮತ್ತು 'ಮೆಡಿಟೇಟಿವ್' (ಧ್ಯಾನಸ್ಥ) ಸ್ಪಿರಿಟ್ ಬಹಳ ಚೆನ್ನಾಗಿ ಮೂಡಿ ಬಂದಿದೆ. ಸಾಯಂಕಾಲ ಮಂದ ದೀಪದ ಪ್ರಕಾಶದಲ್ಲಿ ಬಂದು ಆರಾಮ ಖುರ್ಚಿಯಲ್ಲಿ ಕುಳಿತು ಈ ಧ್ವನಿ ಸುರುಳಿಯನ್ನು ಹಾಕಿ, ಈ ಶ್ರೀ ರಾಗದ ಸೇವನೆ ಮಾಡುತ್ತಾ ಧ್ಯಾನಸ್ಥನಾಗುವುದರಲ್ಲಿಯೇ ಧನ್ಯತೆ ಇದೆ.

*****

5.11

ಪಹಾಡಿ – 'ಪರಬತಸೇ ನಿಕಲೀ' ಸಂಗೀತ

ಪ್ರಾಧ್ಯಾಪಕ ದೇವಧರ್ ಸಾಹೇಬರು ಹಿಂದುಸ್ತಾನಿ ಸಂಗೀತದ ಮೊಟ್ಟ ಮೊದಲ ಸೂಟು, ಬೂಟು ಮತ್ತು ಟೈ ಧರಿಸಿದ ಸಂಗೀತಗಾರರು. ಮುಂಬಯಿಯ ಒಪೇರಾ ಹೌಸ್ ವಿಭಾಗದಲ್ಲಿ ಆಂಗ್ಲ ಹೆಸರಿನ 'ದೇವ್‌ಧರ್ ಸ್ಕೂಲ್ ಆಫ್ ಮ್ಯೂಸಿಕ್' ಈಗಲೂ ಸಂಗೀತದ ಪ್ರಚಾರ ಮತ್ತು ಪ್ರಸಾರ ಕಾರ್ಯವನ್ನು ನಡೆಸುತ್ತಿದೆ. ಕರ್ನಾಟಕದ ಗೋಕರ್ಣದಿಂದ ವಿಘ್ನೇಶ್ವರ ಶಾಸ್ತ್ರಿಗಳು ಇಲ್ಲಿ ವಯೊಲಿನ್ ಕಲಿಸುತ್ತಿದ್ದ ಕಾಲವೊಂದಿತ್ತು. ಅವರು ಜೋಗ್, ದಾತಾರರಂತಹ ವಿಶ್ವಮಾನ್ಯ ಕಲಾವಿದರನ್ನು ರೂಪಿಸಿದ್ದು ಇಲ್ಲಿಯೇ. ಇಲ್ಲೇ ಕುಮಾರ ಗಂಧರ್ವ, ಪಂಢರೀನಾಥ ಕೊಲ್ಲಾಪುರೆ, ಚಂದ್ರಶೇಖರ ರೇಳೆ, ಭಾನುಮತಿ ಕಂಸ್, ವಸುಂಧರಾ ಶ್ರೀಖಂಡೆ, ಮೊದಲಾದವರು ಸಂಗೀತ ಶಿಕ್ಷಣ ಪಡೆದು ಮುಂದೆ ಬಂದವರು. ಪಹಾಡಿ ರಾಗದ ಅನೇಕ ರೂಪಗಳ ದರ್ಶನ ಅದಾಗಲೇ ಮರಾಠಿ ಲಾವಣಿಯಿಂದಲೂ ಸಿನಿಮಾ ಸಂಗೀತದಿಂದಲೂ ರಸಿಕರಿಗೆ ಪರಿಚಿತವಾಗಿದ್ದರೂ ಶಾಸ್ತ್ರೀಯ ನೆಲೆಯಲ್ಲಿ ಬಡೇ ಗುಲಾಮ್ ಅಲಿ ಮತ್ತು ಬರಕತ್ ಅಲಿ ಅವರ ಲಾಹೋರ್ ಪಂಜಾಬಿ ಪದ್ಧತಿಯ ಪಹಾಡಿಯನ್ನು ಪರಿಚಯ ಮಾಡಿಸಿಕೊಟ್ಟ ಶ್ರೇಯ ಈ ದೇವಧರ್ ಸಾಹೇಬರಿಗೆ ಸಲ್ಲುತ್ತದೆ.

ಮಂದ್ರ ಸಪ್ತಕದಿಂದ ಮಧ್ಯ, ತಾರ ಸಪ್ತಕಕ್ಕೆ ತಲುಪಿ ಅಲ್ಲಿಂದ ಡುಮುಕ್ಕೆಂದು ಮರಳಿ ಮಂದ್ರದ ಅದೇ ಸ್ವರಕ್ಕೆ ಜಾರಿ ಬರುವ ವಿನ್ಯಾಸವನ್ನು ಗುಲಾಮ್ ಅಲಿಯವರು ರಸಭಂಗವಾಗದಂತೆ ನಿರ್ವಹಿಸುತ್ತಿದ್ದರು. ಇದೇ ಅವರ ಪಟಿಯಾಲ ಘರಾಣೆಯ ಹಲವು ವೈಶಿಷ್ಟ್ಯಗಳಲ್ಲಿ ಒಂದು. ಗುಲಾಮ್ ಅಲಿಯವರ ಶಾರೀರ ಅತ್ಯಂತ ಮೃದುಲವಾದುದು. 'ವಜ್ರಾದಪಿ ಕಠೋರಾನಿ' ದೇಹವಾದರೂ 'ಮೃದೂನಿ ಕುಸುಮಾದಪಿ ಶಾರೀರ'. ಕೋಮಲತೆಯಿಂದ ಅವರು ರಾಗಕ್ಕೆ ಸಂಬಂಧಿಸಿದಂತೆ ಚಪಲತೆಯಿಂದ ತಾನಗಳನ್ನು ಎಸೆಯುತ್ತಾ ಬರುವುದು ಅವರ ಹಾಡುಗಾರಿಕೆಯ ಇನ್ನೊಂದು ವೈಶಿಷ್ಟ್ಯ. ಇದೇ ರಾಗದಲ್ಲಿ ಏನೂ ಶೃಂಗಾರವಿಲ್ಲದ ಭಕ್ತಿರಸದಿಂದ ತುಂಬಿ ತುಳುಕುವಂತಹ 'ಹರಿಃ ಓಂ' ಅರ್ಧ ತಾಸು ಕೇಳಿದ ಅದೃಷ್ಟವಂತ ನಾನು. ಇದೇ ಹಾಡನ್ನು ಅಜಯ ಚಕ್ರವರ್ತಿಯವರು ಕೂಡ ಅತ್ಯಂತ ಸೊಗಸಾಗಿ ಹಾಡುತ್ತಾರೆ. ಆದರೆ ಅದು ಭಕ್ತಿರಸವಿಲ್ಲದ ಹಾಡು. 'ನಿಮಗೆ ಪಹಾಡಿ ಠುಮರಿ ಕೇಳಬೇಕೆನಿಸಿದರೆ

ಬರಕತ್ ಅಲಿ ಅವರ ಠುಮರಿ ಕೇಳಿ, ನನ್ನದು ಅವರೆದುರು ಸಪ್ಪೆ' ಎಂದು ಗುಲಾಂ ಅಲಿ ಹಾಡುವುದನ್ನು ಅರ್ಧದಲ್ಲಿ ನಿಲ್ಲಿಸಿ ಹೇಳುತ್ತಿದ್ದರು.

ಪಹಾಡಿ ರಾಗದ ಮೂಲ, ಹಿಮಾಲಯ ಪರ್ವತಶ್ರೇಣಿಯ ಬುಡದ ಲೋಕಸಂಗೀತದಲ್ಲಿದೆ. ಪಹಾಡಿಯಲ್ಲಿ ಭೈರವಿ ಮತ್ತು ಯಮನದಂತೆ ಎಲ್ಲಾ ಸ್ವರಗಳೂ ಇವೆ. ಈ ರಾಗವು ಕರ್ನಾಟಕ ಪದ್ಧತಿಯ ಶಂಕರಾಭರಣದಂತೆ ಕೇಳಿಸುತ್ತದೆ ಎಂದು 'ರಾಗನಿಧಿ' ಸುಬ್ಬರಾಯರು ಹೇಳುತ್ತಾರೆ. ಹಿಂದುಸ್ತಾನಿಯಲ್ಲಿ ಪಹಾಡಿಯನ್ನು ಸಣ್ಣ ರಾಗದಂತೆ ಬಳಸುವುದು ಜಾಸ್ತಿ. ಅಂದರೆ, ಹತ್ತು ಹದಿನೈದು ನಿಮಿಷಗಳಷ್ಟೆ. ಅದೂ ಠುಮರಿ ಅಂಗದಲ್ಲಿ. ಜಾಸ್ತಿ ಹರಕತ್-ಮುರಕಿಯೊಂದಿಗೆ ಜೋಗಿಯಾ ರಾಗದ ಹಾಗೆ ಒಂದು ದೊಡ್ಡ ರಾಗದ ಅನಂತರ ಒಂದು ಲಘು ಪ್ರಸ್ತುತಿಯಲ್ಲಿ ಇದರ ಬಳಕೆಯಾಗುತ್ತದೆ. ಹಿಂದುಕುಶ್ ಪರ್ವತ ಶ್ರೇಣಿ, ಹಿಮಾಲಯದ ಆಚೆ ಕೂಡ ತಪ್ಪಲಿನ ಲೋಕಸಂಗೀತದಲ್ಲಿ ಈ ಪಹಾಡಿಯ ಝಲಕ್ ಸಿಗುತ್ತದೆ.

2005ರಲ್ಲಿ ಮುಂಬಯಿಯ ರಾಷ್ಟ್ರೀಯ ಸಾಂಸ್ಕೃತಿಕ ಕೇಂದ್ರದಲ್ಲಿ 'ಭಾರತ-ಇರಾಣ ಸಾಂಸ್ಕೃತಿಕ ಆದಾನ್-ಪ್ರದಾನ್' ಎಂಬ ವಿಷಯವನ್ನು ಕುರಿತ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಮೊಗಲರ ಕಾಲದಲ್ಲಿ ರಾಷ್ಟ್ರೀಯ ಭಾಷೆಯಾದ ಪರ್ಶಿಯನ್, ಉರ್ದುವಿನ ಬೆಳವಣಿಗೆಯೊಂದಿಗೆ ಇರಾಣ-ಹಿಂದುಸ್ಥಾನ ಸಂಗೀತದ ಮೇಲಿನ ಚರ್ಚೆ ನಡೆದಾಗ ಇರಾನಿನ ಕಲಾವಿದರೊಬ್ಬರು ಕೊಳಲಿನಂತೆ ಕಾಣಿಸುವ ಒಂದು ವಾದ್ಯದಲ್ಲಿ ನಮ್ಮ ಪಹಾಡಿ ತುಣುಕನ್ನು ನುಡಿಸಿದಾಗ ನಾವೆಲ್ಲ ಅಚ್ಚರಿಪಟ್ಟಿದ್ದೆವು.

ಕೊಳಲೆಂಬ ಬಿದಿರು ವಾದ್ಯ, ತವಿಲ್ ಅಥವಾ ಡೋಲಿನ ಸಂಪರ್ಕದೊಂದಿಗೆ ಪಹಾಡಿ ರಾಗವನ್ನು ತನ್ನದಾಗಿಸಿತು. ಹಾಗೂ ಕೃಷ್ಣನ ಕೊಳಲಿನ ಗೊಲ್ಲ ಸಂಸ್ಕೃತಿ ಪರ್ವತ ಬುಡದಿಂದ ಗಂಗಾ ಯಮುನಾ ಬಯಲು ಪ್ರದೇಶಕ್ಕೆ ಬಂದು, ಈಗ ಇಡೀ ಭಾರತಮಯವಾಗಿದೆ. ಹೊಸದಾಗಿ ನಮ್ಮಲ್ಲಿಗೆ ಟಿ.ವಿ. ಬಂದಾಗ ಬಂಗಾಲಿ ಯುವತಿಯೊಬ್ಬಳು 'ದಮಾದಮ್ ಮಸ್ತ್ ಕಲಂದರ್', 'ಝೂಲೆ ಲಾಲ' ಅನ್ನುತ್ತ ತಾಳಕ್ಕೆ ತಕ್ಕಂತೆ ಕುಣಿಯುತ್ತ 'ಲಾಲ ಮೇರೆ' ಎಂದು ಹಾಡಿದ ರೂನಾ ಲೈಲಾ ನೆನಪಿದೆಯೇ? ಆ ಹಾಡು ಪಹಾಡಿಯಲ್ಲಿ ಕಟ್ಟಿದ್ದು. ಅದರ ಇನ್ನೊಂದು ತುದಿಯೆಂದರೆ 'ಚೌದವಿಕಾ ಚಾಂದ್ ಹೋ' ಸಿನಿಮಾ ಹಾಡು, ಹಿಂದಿ, ಮರಾಠಿ ರಂಗಗೀತೆ, ಭಾವಗೀತೆ, ಲಾವಣಿಗಳು ಕೂಡ ಈ ರಾಗದಲ್ಲಿವೆ.

ಪಂ. ಶಿವಕುಮಾರ್ ಶರ್ಮಾ ಕಾಶ್ಮೀರದಿಂದ ಮುಂಬಯಿ ತನಕ ಸಂತೂರ್ ವಾದ್ಯವನ್ನು ತಂದು, ನಂತರ ದಕ್ಷಿಣದ ಕಾವೇರಿಯ ತನಕ ಮುಟ್ಟಿಸಿದರು. ದಕ್ಷಿಣದ ಸಂತೂರ್ ವಾದಕ ಆರ್. ವಿಶ್ವೇಶ್ವರನ್ ಶರ್ಮಾ ಅವರ ಶಿಷ್ಯ. ಅವರೇ ಈ ವಾದ್ಯ ಮತ್ತು ಪಹಾಡಿ ರಾಗವನ್ನು ದಕ್ಷಿಣದಲ್ಲಿ ಪ್ರಚಾರಕ್ಕೆ ತಂದವರು.

ಎಚ್‌ಎಂವಿಯವರು 'ಕಾಲ್ ಆಫ್ ದ ವ್ಯಾಲಿ' ಎನ್ನುವ ಒಂದು ಎಲ್‌ಪಿ ರೆಕಾರ್ಡ್ ಹೊರತಂದಿದ್ದರು. ಶಿವಕುಮಾರ್ ಶರ್ಮಾ (ಸಂತೂರ್), ಹರಿಪ್ರಸಾದ್ (ಬಾನ್ಸುರಿ) ಮತ್ತು ಬ್ರಿಜ್‌ಭೂಷಣ ಕಾಬ್ರಾ (ಗಿಟಾರ್) ನುಡಿಸಿರುವ ಪಹಾಡಿ ಅಜರಾಮರವಾಗಿದೆ. ಖ್ಯಾತ ಗಾಯಕಿ ಶೋಭಾ ಗುರ್ಟು ಅವರ 'ರಂಗೀ ಸಾರೀ ಗುಲಾಬಿ ಚುನರಿಯಾ', ಲಕ್ಷ್ಮೀಶಂಕರ್ ಹಾಡಿದ 'ಮೋರಿ ಭೋಡೋ ಗಗರಿಯಾ', ಇವುಗಳಲ್ಲಿ ಬಾಲಕೃಷ್ಣನ ತುಂಟತನ ಕಾಣಿಸಿದರೆ ನಿರ್ಮಲಾ ದೇವಿ ಅವರ 'ನೈನಾ ಮೋರೇ ತರಸ ಗಯೋರೇ' ಹಾಡಿನಲ್ಲಿ ಶೃಂಗಾರದ ತರಂಗಗಳಿವೆ. ಮರಾಠಿ ರಂಗಗೀತೆಗಳಲ್ಲೂ ಪಹಾಡಿಯನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಕೋರಾ ಕಾಗಜ್ ಥಾ (ಕಿಶೋರ್ ಕುಮಾರ್), ಜೋ ವಾದಾ ಕಿಯಾ ಥಾ (ಲತಾ), ಮೇರೇ ಆಂಖೊಮೆ ಬಸ್‌ಗಯಾ ಕೊಯಿರೇ (ಲತಾ), ಇನ್ಹೀ ಲೋಗೋನೆ (ಲತಾ), ಚಾಹೂಂಗ ಮೈ ತುಝೆ (ರಫೀ) – ಈ ಚಿತ್ರಗೀತೆಗಳು ಕೂಡ ಪಹಾಡಿ ರಾಗದಲ್ಲಿವೆ.

*****

5.12

ಖಾಸ್ ರಾಗ ಮತ್ತು ಆಮ್ ರಾಗಗಳು

ಪಂ. ಭೀಮಸೇನ ಜೋಶಿಯವರಾಗಲೀ ಡಾ. ಗಂಗೂಬಾಯಿ ಹಾನಗಲ್‌ರಾಗಲೀ ಅಥವಾ ವಾದಕರಲ್ಲಿ ಪಂ. ರವಿಶಂಕರರಾಗಲೀ ಪ್ರತಿಯೊಂದು ಕಚೇರಿಯಲ್ಲಿ ಹಾಡುವದಕ್ಕೆ ಅಥವಾ ಬಾರಿಸುವದಕ್ಕೆ ಸಿದ್ಧ ರಾಗಗಳಲ್ಲಿಂದ ಒಂದೆರಡು ಬಾರಿಸಿ, ತಮ್ಮ ಬೈಠಕ್ ಅಥವಾ ಮೆಹಫಿಲ್‌ನ್ನು (ಕಚೇರಿ), ಮುಂಜಾನೆಯ ಸಮಯವಾದರೆ ಮೀಯಾಕಿ ತೊಡಿ, ಅಸಾವರಿ, ಭೈರವ್ ಇತ್ಯಾದಿ ರಾಗಗಳಿಂದ, ಮಧ್ಯಾಹ್ನದಲ್ಲಾದರೆ, ಸಾರಂಗದ ಒಂದೆರಡು ಪ್ರಕಾರಗಳಿಂದ ಆಯ್ಕೆ ಮಾಡಿ ಭೈರವಿಯೊಂದಿಗೆ ಮುಕ್ತಾಯಗೊಳಿಸುತ್ತಾರೆ. ಸಂಜೆಯ ಹೊತ್ತಿಗೆ ಮಾರವಾ, ಪೂರಿಯಾ, ಗೌರಿ ಇತ್ಯಾದಿ ರಾಗಗಳ ಸಂಯೋಜನೆ ಮಾಡಿ ತಮ್ಮ ಕಚೇರಿಯನ್ನು ಅಲಂಕರಿಸುತ್ತಾರೆ. ಅಪ್ರಚಲಿತ ರಾಗ ಅಥವಾ 'ಖಾಸ್' ರಾಗಗಳನ್ನು ಹಿಂದುಸ್ತಾನಿ ಪದ್ಧತಿಯುಲ್ಲಿ ಜಾರಿಗೆ ತಂದವರು ಉಸ್ತಾದ್ ಅಲ್ಲಾದಿಯಾಖಾನರು (1855–1946). ಸಂಗೀತ–ನಾಟ್ಯಪ್ರವೀಣರಾಗಿದ್ದ ಹಾಗೂ ದಿನಕ್ಕೆ 24ಗಂಟೆಗಳು ಸಾಲವೂ ಎನ್ನುವಂತಿದ್ದ ರೇವಾ ಸಂಸ್ಥಾನದ ರಾಜರು ದಿನ ನಿತ್ಯ 8–10 ಗಂಟೆ ಹಾಡಿಸಿದಾಗ, ಅಲ್ಲಾದಿಯಾ ಅವರು ಹಾಡಿ ಹಾಡಿ ಅವರು ತಮ್ಮ 38–40ನೆಯ ವಯಸ್ಸಿನಲ್ಲಿ, ಗಂಟಲು ಕಳೆದುಕೊಂಡ ಗಾಯಕರು! ಆಮೇಲೆ ಅಲಹಾಬಾದಕ್ಕೆ ಹೋಗಿ ವೈದ್ಯರಿಂದ ಉಪಚಾರಪಡೆದು ತಮ್ಮ ಹಾಡುಗಾರಿಕೆಯನ್ನು ಒಂದು ವಿಶಿಷ್ಟ ಪದ್ಧತಿಗೆ ಅಳವಡಿಸಿ ಅದಕ್ಕೆ, 'ಜಯಪುರ ಅತ್ರೋಳಿ ಘರಾಣೆ' ಎಂದು ನಾಮಕರಣ ಮಾಡಿ, ಕೊನೆಗೆ ಕೊಲ್ಲಾಪುರಕ್ಕೆ ಬಂದು ಅಲ್ಲಿಯೇ ನೆಲೆಸಿದರು. ಕೇಸರಬಾಯಿ, ಲಕ್ಷ್ಮೀಬಾಯಿ, ಮೋಗುಬಾಯಿ ಕುರ್ಡಿಕರ್ (ಕಿಶೋರಿ ಅಮೋಣಕರ ಅವರ ತಾಯಿ) ಭಾಸ್ಕರಬುವಾ ಬಖಲೆಯಂಥಹ ಗಣ್ಯ ಶಿಷ್ಯರನ್ನು ಪಡೆದರು. ಅವರ ಇಬ್ಬರು ಮಕ್ಕಳಾದ ಮಂಜೀಖಾನ್, ಭುರ್ಜಿಖಾನ್ ಅವರು ಕೂಡ ಉತ್ತಮೋತ್ತಮ ಶಿಷ್ಯರನ್ನು ತಯಾರು ಮಾಡಿದರು. ಅಪ್ರಚಲಿತ ರಾಗಗಳನ್ನು ಪ್ರಚಾರದಲ್ಲಿ ತಂದವರು ಇವರೇ. ಹಾಡುಗಾರಿಕೆಯನ್ನು ತಮ್ಮ ಶಾರೀರಕ್ಕೆ ಅನುಗುಣವಾಗಿ ಬದಲಾಯಿಸಿ ಸ್ವಲ್ಪ ಧ್ರುಪದ್–ಧಮಾರದ ಆಧಾರವನ್ನಿಟ್ಟುಕೊಂಡು ಮಿಂಚಿನ ತಾನಗಳನ್ನು ಒಂದೇ ಶ್ವಾಸದಲ್ಲಿ ಉಚ್ಚರಿಸುತ್ತ, ಕೃತಿಗಳನ್ನು ಹಾಡುತ್ತಿದ್ದರು.

"ನೀವು 'ಆಮ್' ರಾಗಗಳನ್ನು ಏಕೆ ಹಾಡುವದಿಲ್ಲ?" ಈ ಪ್ರಶ್ನೆಯನ್ನು ಅಲ್ಲಾದಿಯಾಖಾನರಿಗೆ ಕೇಳಿದ್ದು ಪ್ರೊ.ಬಿ.ಆರ್ ದೇವಧರ್! "ಬೇಟಾ, ಯಮನ,

ತೋಡಿ, ಭೈರವ ಪೂರಿಯಾ ಎಲ್ಲರೂ ಹಾಡುತ್ತಾರೆ. ಸಂಗೀತ ಮಹಾಸಾಗರದಲ್ಲಿ ಈಜುವಾಗ ಕೆಲ ಸಣ್ಣ ಮೀನುಗಳು ಕೂಡ ತುಂಬ ಚೆನ್ನಾಗಿ ಕಾಣಿಸುತ್ತವೆ. ಆ ಸೌಂದರ್ಯ ಬೇರೆಯೇ"

ಸರಿ, ಈ ರೂಢಿಯನ್ನು ಮುಂದುವರೆಸಿದುದು ಅವರ ಪಟ್ಟ ಶಿಷ್ಯೆಂದಿರಾದ ಕೇಸರಬಾಯಿ, ಪಂ. ಮಲ್ಲಿಕಾರ್ಜುನ ಮನ್ಸೂರ ಮುಂತಾದವರು. ಕುಮಾರ ಗಂಧರ್ವರಂತೂ ಗಾಯಕರಲ್ಲಿ, 'ನಾಯಕರು' ಎಂದೆನಿಸಿಕೊಂಡವರು. ಅವರು ತಮ್ಮ ಸ್ವಪ್ರತಿಭೆಯಿಂದ ಹೊಸ ಹೊಸ ರಾಗಗಳ ನಿರ್ಮಿತಿ ಮಾಡಿದರು. ಇಷ್ಟೇ ಅಲ್ಲ ಅವುಗಳನ್ನು ತಮ್ಮ ಮೆಹಫಿಲ್‌ಗಳಲ್ಲಿ ಹಾಡಿ ತೋರಿಸಿದರು. 'ಅನೂಪರಾಗವಿಲಾಸ' ಎಂಬ ಕೃತಿಯನ್ನು ರಚಿಸಿದರು. ಆದರೆ, 'ಆಮ್' ಮತ್ತು 'ಖಾಸ್' ರಾಗಗಳನ್ನು ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ನಂತರದ ಸಂಗೀತ ವಿದ್ವಾಂಸರು ಉಪಯೋಗಿಸಿದ್ದು ಇವರನ್ನು ಅನುಸರಿಸಿಯೇ. 'ಆಮ್' ಎಂದರೆ ಜನ ಸಾಮಾನ್ಯರು. ಕೇವಲ ಆಮ್ ರಾಗ ಕೇಳಿ, ರಸಿಕರು ನಿರಾಶೆಯಿಂದ ಮನೆಗೆ ಮರಳಿ ಹೋದ ಉದಾಹರಣೆಗಳು ತುಂಬ ಇವೆ. ಈ ಲೇಖನದ ವಿಷಯ ಇದೇ ಆಗಿದೆ.

ಹರಿಪ್ರಸಾದ ಚೌರಾಸಿಯಾ (ಶಿವ ಹರಿ ಪ್ರಸಿದ್ಧಿಯ) ಅನ್ನಪೂರ್ಣಾದೇವಿಯವರ ಶಿಷ್ಯ. ಒಂದು 'ಮಲ್ಹಾರ ಉತ್ಸವ'ದಲ್ಲಿ 70 ನಿಮಿಷ 'ಮಧು ಮಲ್ಹಾರ' ರಾಗ ಬಾರಿಸಿದರು. ಅವರ ಹೇಳಿಕೆಯ ಪ್ರಕಾರ ಇದು 'ಮಧುವಂತಿ' ಮತ್ತು 'ಮಿಯಾ ಮಲ್ಹಾರ'ದಿಂದ ಉತ್ಪನ್ನ ಮಾಡಿದ ರಾಗ. ಅತ್ತ ಮಧುವಂತಿಯೂ ಅಲ್ಲ, ಇತ್ತ ಮಲ್ಹಾರವೂ ಅಲ್ಲದ ಈ ಹೊಸ ಕಲಮೀ ರಾಗವು ರಸಿಕರನ್ನು ತಣಿಸಲಾರದಾಯಿತು. ಜನರೆಲ್ಲ ಭವ್ಯವಾದ ನೆಹರೂ ಸೆಂಟರಿನ ಸಭಾಗೃಹದಿಂದ ಒಬ್ಬೊಬ್ಬರಾಗಿ ಹೊರಟು ಹೋದರು. ಈ ಸಂಗೀತ ವಿದ್ವಾಂಸರೆಲ್ಲ ಯಾವುದಾದರೂ 'ಖಾಸ' ರಾಗವೆಂದರೆ ಮಿಯಾ ಮಲ್ಹಾರ, ಸೂರದಾಸ ಮಲ್ಹಾರ ಬಾರಿಸಬಹುದೇ ಎಂಬ ತವಕದಿಂದ ಕುಳಿತ ಪ್ರೇಕ್ಷಕರಿಗೆ ತಣ್ಣೀರು ಸುರಿದ ಹಾಗೆ ಆದದ್ದು ನಾನು ನೋಡಿದ್ದೇನೆ, ಅನುಭವಿಸಿದ್ದೇನೆ.

ಪ್ರಭಾ ಅತ್ರೆ, ಅತೀ ಪ್ರತಿಭಾವಂತ ಗಾಯಕಿ. ಅವರು ಕೂಡ ಒಂದು ಬೈಠಕ್ಕಿನಲ್ಲಿ ಪಟದೀಪ್ ಮಲ್ಹಾರ್ ಹಾಡಿದರು! ವಿಲಾಯತ ಖಾನರು ಬಾರಿಸುವದೇ ಅಪ್ರಚಲಿತ ರಾಗಗಳನ್ನು. ಅಲಿ ಅಕಬರ್ ಖಾನರು ತಮ್ಮ 75ನೇ ವರ್ಷದ ಹೊಸ್ತಿಲಿನಲ್ಲಿ ಕಾಲಿಟ್ಟಾಗ ಬಾರಿಸಿದ್ದು 'ನಾರಾಯಣಿ ಗೌರಿ' ಮತ್ತು 'ಹೇಮ ಹಿಂಡೋಲ್'. ಜನರೆಲ್ಲ 'ಪೂರಿಯಾ' ಅಥವಾ 'ಕಲ್ಯಾಣ' ಪ್ರಕಾರಗಳನ್ನು ಕೇಳಬೇಕೆಂದು ಕಿಕ್ಕಿರಿದು ನೆರೆದಿದ್ದರು.

ಕಿಶೋರಿ ಅಮೋಣಕರರು ಬೇರೆ ಥರ. ಅವರು ಹೆಸರೇ ಹೇಳುವುದಿಲ್ಲ! ಹಾಡುತ್ತ ಹೋಗುತ್ತಾರೆ. ಒಂದು ಸಲ ಅವರ ಬೈಠಕ್ಕಿನಲ್ಲಿ ಮುಂದೆ ಕುಳಿತಾಗ ನನ್ನ ಪಕ್ಕದಲ್ಲಿ ಕುಳಿತ ಮುದುಕರು, "ಅಮ್ಮಾ, ನೀವು ಇದೀಗ ಹಾಡಿದ ರಾಗ ಯಾವುದು?" ಎಂದು ಕೇಳಿದ ಪ್ರಶ್ನೆಗೆ ಅವರು ಅರ್ಧ ಗಂಟೆ ಲೆಕ್ಚರ್ ಬಿಗಿದರು. (ನನ್ನಂತಹ) ಸಂಗೀತ ವಿಮರ್ಶಕರ ಉದ್ಧಾರ ಮಾಡಿ, ವಿಮರ್ಶಕರೊಂದಿಗೆ ದ್ವಂದ್ವಯುದ್ಧಕ್ಕೆ ತಯಾರಾದರು! ಪಾಪ ಮುದುಕ, ತನ್ನ ಸೊಸೆ ಕಾಟ ಮನೆಯಲ್ಲಿ ತಡೆಯಲಾರದೇ ಕೆಲ ಹೊತ್ತು

ಸಂಗೀತದಲ್ಲಿ ಎಲ್ಲ ತಾಪತ್ರಯ ಮರೆಯುವ ಎಂದುಕೊಂಡಾಗ 'ಇಲ್ಲಿಯೂ ಅದೇ ಪ್ರಕಾರ' ಎಂದು ಬೇಸತ್ತು ಹೊರಟು ಹೋದದ್ದು ನೆನಪಿದೆ.

ಇತ್ತೀಚೆಗೆ, ಕರ್ನಾಟಕ ಸಂಘದಲ್ಲಿ ಉದಯೋನ್ಮುಖಿ ಗಾಯಕಿಯೊಬ್ಬಳು, 'ವಿಜಯನಗರಿ' ಹಾಡಿದಳು. ಹದಿನೆಂಟರ ಹರೆಯದವಳು, ಸಿದ್ಧರಾಗಗಳನ್ನು ಬಿಟ್ಟು ಸಣ್ಣಜೀವದ (ಮಿಶ್ರ ಶಿವರಂಜನಿ) ಪ್ರಕಾರದ ರಾಗವನ್ನು ಹಾಡಿದ್ದು ಏಕೆ?

ಮೇಲೆ ಹೇಳಿದ ಪ್ರಕಾರ ಭೀಮಸೇನರಾಗಲೀ, ಗಂಗೂಬಾಯಿಯವರಾಗಲೀ ಅಥವಾ ಆರೋಲ್ಕರ ಅಂತಹ ಮೇಧಾವಿ ಗಾಯಕರಾಗಲೀ ತಮ್ಮ ಕಚೇರಿಗಳನ್ನು ಅಲಂಕರಿಸುವದು 'ಆಮ್' ರಾಗಗಳಿಂದಲೇ. 'ಪೈಸಾ ವಸೂಲ' ಎಂದು ತೃಪ್ತಿಯಿಂದ ಜನ ವಾಪಸ್ಸು ಹೋಗುವಾಗ ನೂರೆಂಟು ಸಲ ಕಳೆದ 50 ವರ್ಷಗಳ ಅನುಭವದಿಂದ ನಾನು ಹೇಳಲು ಬಯಸುತ್ತೇನೆ. ಎಸ್. ಎಲ್ ಭೈರಪ್ಪನವರು ಹೇಳಿದ ಹಾಗೆ "ರಾಗ ಅದೇ ತೋಡಿ, ವಿಧಾನ ಅದೇ, ಆದರೆ ಗಂಗೂಬಾಯಿ ಪ್ರತಿಸಲ ಹಾಡುವಾಗ 'ವಿಶ್ವರೂಪ ದರ್ಶನ' ತೋರಿಸುತ್ತಾರೆ. ರಾಗ ಜೀವಂತ ಮಾಡುತ್ತಾರೆ. ಅವರಿಂದ ತೋಡಿ ರಾಗ 30–40 ಸಲ ಕೇಳಿದ್ದೇನೆ. ಮತ್ತೇ ಕೇಳಬೇಕೆಂಬ ಚಪಲ."

ಭೀಮಸೇನರ ಶುದ್ಧ ಕಲ್ಯಾಣ ಕೇಳಲು ಜನ ಇಂದಿಗೂ 'ನಾ ಮುಂದೆ , ನೀ ಮುಂದೆ' ಎಂದು ಭಾರತೀಯ ಬೈಠಕ್ಕಿನಲ್ಲಿ ಕುಳಿತು ಸರಿಯುತ್ತ ಸರಿಯುತ್ತ ಸ್ಟೇಜ ಹತ್ತಿರ ಮುಟ್ಟುತ್ತಾರೆ! ಉಸ್ತಾದ್ ಅಮೀರಖಾನರು ಸಾಯಂಕಾಲ ಹಾಡುವದಾದರೆ ಅವರ ಕಚೇರಿ ಪ್ರಾರಂಭವಾಗುವುದೇ 'ಮಾರವಾ' ರಾಗದಿಂದ. ಅವರು ಜೀವಿಸಿದ್ದಾಗ ಅವರ ಮೇಲಿನ, 'ಗುರುಭಾವನೆ'ಯಿಂದ ಎಂದೂ ಹಾಡದ ಭೀಮಸೇನ ಜೋಶಿಯವರು 'ಮಾರವಾ' ರಾಗ ಹಾಡಲು ಶುರು ಮಾಡಿದ್ದು ಅವರು ತೀರಿಕೊಂಡ ನಂತರವೇ. ವಸಂತರಾವ ನಾಯಕ ಮುಖ್ಯಮಂತ್ರಿಯಾಗಿದ್ದಾಗ ಪ್ರತಿ ವರ್ಷ ಮಹಾರಾಷ್ಟ್ರ ಸರಕಾರ ನಡೆಸುತ್ತಿದ್ದ 'ಕಲಾ ಉತ್ಸವ'ದಲ್ಲಿ ಅಮಿರಖಾನರ ಹಿಂದೆ ಕುಳಿತು ಪಂಡಿತ ಭೀಮಸೇನ್ ಜೋಶಿಯವರು ತಂಬೂರಿಯನ್ನು ನುಡಿಸುತ್ತಿದ್ದುದನ್ನು ನಾನು ನೋಡಿದ್ದೇನೆ. (ವಸಂತರಾವರೊಂದಿಗೆ ಕಲಾ ಉತ್ಸವವೂ ಮಾಯವಾಯಿತು!)

ಉಸ್ತಾದ್ ಬಡೆ ಗುಲಾಮ್ ಅಲಿ ಕೂಡ ಹಾಡುವದು 'ಆಮ್' ರಾಗಗಳನ್ನೇ. ಬೇಗಮ್ ಅಖ್ತರ್ ಜೀವಿಸಿದ್ದಾಗ ಹಾಡುತ್ತಿದ್ದ ಠುಮ್ರಿ, ದಾದರಾಗಳ ಸ್ವರೂಪಗಳೆಲ್ಲ 'ಆಮ್' ರಾಗದಲ್ಲಿಯೇ ಇದ್ದು ಅವುಗಳ 'ವಿಸ್ತಾರ'ಕ್ಕೆ (ರಾಗವನ್ನು ವಿಸ್ತರಿಸುವದು) ಜನ, 'ವಾಹವ್ವಾ' ಎಂದು ಇಸ್ಲಾಮ್ ಜಿಮಖಾನಾದಲ್ಲಿ ಮುಂಜಾನೆ ಮೂರು ಘಂಟೆಗೆ ಅವರಿಗೆ ಸಲಾಮು ಮಾಡಿದ್ದು ನೆನಪಿದೆ. ಇನ್ನೂ ವಾದಕರಲ್ಲಿ ಬಿಸ್ಮಿಲ್ಲಾ ಖಾನರು 70ರ ಹರೆಯದಲ್ಲಿಯೂ ಬಾರಿಸುವುದು ಬಿಹಾಗ್ , ಮಾಲಕಂಸ್, ಜಯಜಯವಂತಿ ರಾಗಗಳನ್ನು. 1990 ರಲ್ಲಿ ರವಿಶಂಕರ, 'ಯಮನ ಕಲ್ಯಾಣ್' ಬಾರಿಸಿದರು. 72 ವರ್ಷ ಪ್ರಾಯದ ಪಂಡಿತರು ಈ ರಾಗವನ್ನು ನುಡಿಸಿದಾಗ ಮೈ ಜುಮ್ಮೆನಿಸಿದ್ದು ನೆನಪಾಗುತ್ತದೆ. ಯಮನ ಕಲ್ಯಾಣ್, ಇದು ಸಂಗೀತದ ಮೂಲಾಕ್ಷರಗಳಂತೆ. ಆದರೆ ಅದರ ಭವ್ಯತೆ ಇರುವದು ವಾದಕರ ವೈವಿಧ್ಯದಲ್ಲಿಯೇ.

ಪ್ರತಿಯೊಂದು ಕಾರ್ಯಕ್ರಮಗಳಿಂದ ಲಕ್ಷಗಟ್ಟಲೇ ಗಳಿಸುವ ಕಲಾವಿದರು (ಕಿಶೋರಿ ಅಮೋಣಕರ್ ಸ್ವತಃ ಟೈಮ್ಸ್ ಸುದ್ದಿಗಾರನಿಗೆ ಹೇಳಿದ ಮಾತು, "ನಾನು ಒಂದುವರೆ ಲಕ್ಷ ಕೇಳಿದೆ, ಕೊಟ್ಟದ್ದು ಒಂದೇ ಲಕ್ಷ." ಅಲಿಅಕಬರ್ ಎರಡು, ವಿಲಾಯತ್‌ಖಾನ್‌ರು ಅರವಿಂದ ಪಾರೀಖರ ಗುರುಗಳಾಗಿದ್ದರಿಂದ ಅವರ ಫೀ ಒಂದುವರೆ ಲಕ್ಷ!

ಈಗ ನೋಡಿ, ಇಷ್ಟು ಹಣ ತೆತ್ತು ಎರಡು ವರ್ಷಕ್ಕೊಮ್ಮೆ ಕಾರ್ಯಕ್ರಮ ಕೊಡುವ ಈ ಕಲಾವಿದರಿಗೆ 'ರಿಯಾಜ಼್' ಮಾಡಲು (ಅಭ್ಯಸಿಸಲು) ಪುರುಸೊತ್ತಿಲ್ಲದೇ ದೇಶವಿಡೀ ಶಿಷ್ಯವೃಂದರೊಂದಿಗೆ ಪರದೇಶದ ಪರ್ಯಟನೆ ಮುಗಿಸಿ, ಅವರ ಕಾರ್ಯಕ್ರಮಗಳಿಗೆ ಸಂಗೀತಜ್ಞರು, ಗಾಯಕ-ವಾದಕರೆಲ್ಲ ಕುಳಿತಾಗ , 'ಆಮ್'ರಾಗ ಹಾಡುವ ಧೈರ್ಯ ಬರಬೇಕಲ್ಲ?

ಅಲಿ ಅಕಬರ್ ಖಾನರ ಕಚೇರಿ ಕೂಡ ಹೀಗೆಯೇ ಆಯಿತು. ಮೊದಲ 20 ಸಾಲುಗಳಲ್ಲಿ ಮುಂಬಯಿಯ ಅತಿರಥ ಮಹಾರಥರೆಲ್ಲ ಕುಳಿತಾಗ ಪ್ರಾಕ್ಟೀಸ್ ಇಲ್ಲದ, 30 ವರ್ಷಗಳಿಂದ ಅಮೇರಿಕೆಯಲ್ಲಿ ವಾಸ್ತವ್ಯ ಮಾಡಿದ, ಅಲಿ ಅಕಬರ್ ಖಾನರಿಗೆ ಶುದ್ಧವಾಗಿ ಯಮನ ಅಥವಾ ಪೂರಿಯಾ ಬಾರಿಸಬೇಕೆಂದು ಅನಿಸಿದರೂ ಬಾರಿಸಲಾಗದೆ ಹೋದ ಕಾರಣ ಇದೇ. ಕಲಿಸುವುದೇ ತಮ್ಮ ಧ್ಯೇಯವಾಗಿಟ್ಟುಕೊಂಡ ಅಲಿ ಅಕಬರ್‌ರಿಗೆ ಇಂಥ ರಾಗಗಳನ್ನು ಬಾರಿಸುವ ಪ್ರಸಂಗ ಸಿಗುವದೇ ಅತಿ ವಿರಳ! ಸಿಕ್ಕಲ್ಲಿ ಎಲ್ಲ ಜನ ಗುಂಪು ಗುಂಪಾಗಿ (ಅವರ ಮುಂಬಯಿಯ ಶಿಷ್ಯ ಸಂಖ್ಯೆ 20!) ನೆರೆಯುತ್ತಾರೆ. 'ಗಾಂಡೀವಂ ಸಂಸ್ರತೇ ಹಸ್ತಾತ್' ಅಥವಾ 'ಸೀದಂತಿ ಮಮ ಗಾತ್ರಾಣಿ', ಆದರೆ ಆಶ್ಚರ್ಯವಿಲ್ಲ ('ಗಾಂಡೀವ' ಬಾಣವು ನನ್ನ ಕೈಯಿಂದ ಜಾರುತ್ತಲಿದೆ', 'ನನ್ನ ಅವಯವಗಳು ಶಿಥಿಲವಾಗುತ್ತಿವೆ.' ಭಗವದ್ಗೀತೆಯಲ್ಲಿ ಕಂಗೆಟ್ಟ ಅರ್ಜುನನು ಹೇಳಿದ ಮಾತು)

ಅದೇ ಸ್ಥಿತಿ ಹರಿಪ್ರಸಾದ ಚೌರಾಸಿಯಾ ಅವರದು. 'ಶಿವಹರಿ' ಎಂಬ ಚಲನಚಿತ್ರದಲ್ಲಿ ಪ್ರಸಿದ್ಧಿ ಪಡೆದನಂತರ ಅವರ ಬಾರಿಸುವಿಕೆ ಬಹಳ ಠಿಟಚಿಥಿಟಿರ ಣಠ ಣುಜ ರಚಿಟಟಜಡಿಥಿ ಆಗಿದೆ. ಪ್ರಭಾ ಅತ್ರೆ ಈಗಲೂ ಮನಸ್ಸು ಮಾಡಿದರೆ, 'ಆಮ್' ರಾಗಗಳನ್ನು ಬಹಳ ಚೆನ್ನಾಗಿ, ವಿಸ್ತರಿಸಿ ಮನತಣಿಯುವಂತೆ ಹಾಡುತ್ತಾರೆ. ಆದರೆ ಇಂಥಹ ಪ್ರಸಂಗಗಳು ವಿರಳವೇ.

30-40 ವರ್ಷ ಕಚೇರಿ ಕೇಳಿ, ಕೇಳಿ ಈ ವಿಶ್ಲೇಷಣೆ ಮಾಡಿದ್ದೇನೆ. ನಾನು ಇನ್ನೊಮ್ಮೆ ಅಲಿ ಅಕಬರ್ ಖಾನರನ್ನು ಕೇಳಿದ್ದೇನೆ (1996ರ ಸವಾಯಿ ಗಂಧರ್ವರ ಉತ್ಸವದಲ್ಲಿ) ಮತ್ತು ಆ ಬಳಿಕ ಮತ್ತೆ ಆಲಿಸುವ ಸೌಭಾಗ್ಯ ಸಿಕ್ಕಿತ್ತು.*

ಆದರೆ, ಭೀಮಸೇನ ಜೋಶಿಯವರು, ಗಂಗೂಬಾಯಿ ಹಾನಗಲ್‌ವರು ಅಥವಾ ರವಿಶಂಕರರ ಹಾಗೆ ಮನಸೂರೆಗೊಳ್ಳುವ ಆಮ್ ರಾಗಗಳನ್ನು ಹಾಡುವ ಕಲಾವಿದರ ಸಂಖ್ಯೆ ಮೊದಲು ಎರಡು ಕೈಗಳಿಂದ ಎಣಿಸಬಹುದಾಗಿತ್ತು. ಈಗ ಒಂದೇ ಕೈ ಸಾಕು.

* ಈ ಲೇಖನವು 29/03/1997ರ ಸಾಪ್ತಾಹಿಕ ಸಂಜೆಯಲ್ಲಿ ಪ್ರಕಟವಾಗಿತ್ತು.

*****

5.13

ಈ ಮನವೋ, ಆ ಮನವೋ ಅಥವಾ ಯಮನವೋ!

ಈ ಮಾತು ಸುಮರು 50 ವರ್ಷಗಳ ಹಿಂದಿನದು. ಆಗಿನ ಮುಂಬಯಿಯ 'ನೇಪಿಯನ್ ಸೀ' ರಸ್ತೆ ಅಂದರೆ ಅರಬ್ಬಿ ಸಮುದ್ರಕ್ಕೆ ತಾಗಿದ ಮಲಬಾರ ಗುಡ್ಡದ ಹಿಂಬದಿಯ ರಸ್ತೆ. ಈಗಿನಂತೆ ಕಾಂಕ್ರೀಟ್ ಕಾಡು ಇದ್ದಿರಲಿಲ್ಲ. ದೊಡ್ಡ ದೊಡ್ಡ ಅಂದವಾದ ಬಂಗಲೆಗಳ ಸಾಲು. ಪ್ರತಿಯೊಂದೂ ಅರಮನೆಯಂತೆ ವಿಶಾಲವಾದವು. ಅಂತಹ ಒಂದು ಮನೆಯಲ್ಲಿ ಮದುವೆಯ ಸಂಭ್ರಮ. ಅತಿಥಿಗಳಿಗಾಗಿ ಸಿತಾರ್ ನವಾಜ್ ವಿಲಾಯತ್ ಖಾನರ ವಾದನದ ಕಾರ್ಯಕ್ರಮ ಏರ್ಪಾಡಾಗಿತ್ತು. ತಬಲಾ ಸಾಥಿಗೆ ಝುಕೀರ ಹುಸೇನ್‌ರ ತಂದೆ ಅಲ್ಲಾ ರಾಖಾ ಅವರು. ಕಾರ್ಯಕ್ರಮದ ರೂಪುರೇಷೆ ಹೀಗಿತ್ತು. ರಾತ್ರಿ ಎಂಟಕ್ಕೆ ಪ್ರಾರಂಭವಾದ ಕಛೇರಿಗೆ ಹತ್ತಕ್ಕೆ ಮಧ್ಯಂತರ. ಬಳಿಕ ಅತಿಥಿಗಳಿಗೆ ಬೆಳ್ಳಿ ತಾಟು ಬಟ್ಟಲುಗಳಲ್ಲಿ ಶಾಕಾಹಾರಿ ಸುಗ್ರಾಸ ಭೋಜನ. ಸರಿಯಾಗಿ ಹನ್ನೊಂದು ಗಂಟಗೆ ಕಛೇರಿಯ ಉತ್ತರಾರ್ಧ ಪ್ರಾರಂಭ. ನಡುರಾತ್ರಿ ಒಂದು ಗಂಟೆಗೆ ಕೇಸರಿ ಸಕ್ಕರೆ ಮಿಶ್ರಿತ ಹಾಲು. ಮೂರು ಗಂಟೆಗೆ ಭೈರವಿಯೊಂದಿಗೆ ಕಚೇರಿ ಸಮಾಪ್ತಿ.

ಸುತ್ತು-ಸುತ್ತಿನ ಮೆಟ್ಟಲು ಹತ್ತಿ ಹೋದರೆ, ಒಂದು ಅತಿ ವಿಶಾಲವಾದ ಸುಮಾರು 200 ಜನ ಆರಾಮವಾಗಿ ಕುಳಿತುಕೊಳ್ಳಬಹುದಾದ ಪ್ರಶಸ್ತ ಹಾಲ್, ಗೋಡೆಗೆ ತಾಗಿ ಮನೆಯ ಅತಿಥಿಗಳಿಗಾಗಿ, ಪ್ರತಿಷ್ಠಿತರಿಗಾಗಿ ಸೋಫಾ ಸೆಟ್ಟು. ರಸಿಕರಿಗೆ ಅಂದರೆ, ನನ್ನಂಥವರಿಗೆ ಹಾಸಿದ ರತ್ನಗಂಬಳಿ. ಎಂದಿನಂತೆ ವೇದಿಕೆಯ ಎಡಭಾಗದಲ್ಲಿ ಪ್ರತಿಷ್ಠಾಪನೆಗೊಂಡಿದ್ದೆ. ಜೊತೆಗೆ ಐಎಂಜಿ (ಇಂಟರನ್ಯಾಶನಲ್ ಮ್ಯಾನೆಜಮೆಂಟ್ ಗ್ರೂಪ್)ಯ ಸಂಚಾಲಕ, ಹರೀಶ ಕಪಾಡಿಯಾ ಮತ್ತು ದೇವಿದಾಸ ದತ್ತಾನಿ. ನನ್ನ ಸೋದರ ಮಾವ ಪ್ರಸಿದ್ಧ ಸಂಗೀತಜ್ಞ ಮೋಹನ ನಾಡಕರ್ಣಿಯವರೂ ಜೊತೆಗಿದ್ದರು.

ವೇದಿಕೆಯ ಮೇಲೆ ರಾಜ ಠೀವಿಯ ಉಸ್ತಾದ್ ವಿಲಾಯತ್ ಖಾನ್, ಅವರ ಸಹಕಲಾವಿದರಾಗಿ ಅರವಿಂದ ಪಾರೀಖ್, ತಬಲಾ ಸಾಥಿ ಅಲ್ಲಾ ರಾಖಾ, ಪಕ್ಕದಲ್ಲಿ ಪುಟ್ಟ ಬಾಲಕ ಝುಕೀರ್ ಹುಸೇನ್, ತಂಬೂರಿ ನುಡಿಸಲು ಒಬ್ಬ ಶಿಷ್ಯ, ತಾಂಬೂಲ ತಯಾರಿಸಿಕೊಡಲು ಇನ್ನೊಬ್ಬ ಶಿಷ್ಯ.

ಸರಿಯಾಗಿ ರಾತ್ರಿ ಎಂಟಕ್ಕೆ ಕಛೇರಿ ಆರಂಭವಾಯಿತು. ಯಾವ ರಾಗವಿರಬಹುದು? ಎನ್ನುವ ಗುಜುಗುಜು ಆರಂಭವಾಯಿತು. ಮೈಕ್ ಕೈಯಲ್ಲಿ ಎತ್ತಿಕೊಂಡು ಉಸ್ತಾದ್‌ರು ನವಾಬಿ ಥಾಟಿನಲ್ಲಿ 'ಅದಾಬ ಅರ್ಜ' ಮಾಡಿ ರಸಿಕರನ್ನುದ್ದೇಶಿಸಿ ಎರಡು ಮಾತುಗಳನ್ನಾಡಿದರು. "ಜೀ, ಹಾಂ, ಮೈ ಯಮನ್ ಹೀ ಬಜಾ ರಹಾಹೂಂ. ಸಿದ್ಧರಾಗಗಳಲ್ಲಿ ಇದೊಂದು. ಇದರ ಹೆಸರನ್ನೇ ಗಮನಿಸಿ. ಕೆಲವರು ಇದನ್ನು 'ಈಮನ್' 'ವೆನ್ನುತ್ತಾರೆ. 'ಏ ಮನಹೋ ಯಾ ವೋ ಮನ ಹೋ, ಮೈ ನಹೀಂ ಜಾನತಾ. ಆದರೆ ನುಡಿಸಲು ಕುಳಿತಾಗ ನನ್ನ ಮನಸ್ಸಿನಲ್ಲಿ ಈ ರಾಗದ ರೂಪ, ಪ್ರತಿಬಾರಿ ಬುಗ್ಗೆ ಬುಗ್ಗೆಯಂತೆ, ಕಾರಂಜಿಯಂತೆ ಹೊಸ ಹೊಸ ಆಯಾಮಗಳೊಂದಿಗೆ ಬರುತ್ತಾ ಇರುತ್ತದೆ. ಇಸ್ಲಿಯೆ, ಇಸ್ ಕಾ ನಾಮ ಭೀ ಹೇ ಮನ!" ಎಂದು ಹೇಳಿ ಕಣ್ಣು ಮುಚ್ಚಿ ಸಿತಾರಿನ ಮೇಲೆ ಕೈಯಾಡಿಸಲು ಆರಂಭಿಸಿದರು. ಸಿತಾರ್‌ವನ್ನು ಕೆಳಗಿರಿಸಿದಾಗ ಗಂಟೆ ಹತ್ತು. ಎರಡು ತಾಸು ಅಖಂಡವಾಗಿ ವಿಲಾಯತ್ ಖಾನರು ಆಲಾಪ್, ಜೋಡ್, **ಝಾಲಾ** ನುಡಿಸಿ ಮಧ್ಯಲಯದ ರಚನೆ, ಮತ್ತೊಂದು ವೇಗ ನಡಿಗೆಯ ಬಂದಿಶನ್ನು ಪ್ರಸ್ತುತಪಡಿಸಿ, ಹಾಡಿ ತೋರಿಸುತ್ತ, ನಡುನಡುವೆ ತಬಲಾವಾದಕರೊಂದಿಗೆ ಸವಾಲ್ ಜವಾಬ್ ಮಾಡಿ ಪೂರ್ವಾರ್ಧವನ್ನು ಸಂಪನ್ನಗೊಳಿಸಿದರು.

ರಾಗ ಯಮನ್ ಒಂದು **'ಅಫಲಾತೂನ'** (ವರ್ಣನಾತೀತ) ರಾಗ ಎಂದು ಹೇಳಬಹುದು. ಪ್ರತಿಸಲ ಕೇಳುವಾಗ ಹೊಸ ಭಾವನೆಗಳ ಆವಿಷ್ಕಾರ ಮನಸ್ಸಿನಲ್ಲಿ ಮೂಡುವುದೂ ಮತ್ತು ಕಳೆದುಹೋದ ವಸ್ತು ಮರಳಿ ಸಿಕ್ಕಾಗ ದೊರೆಯುವ ಆನಂದ ಹೊರಹೊಮ್ಮುವುದೂ ನಡೆಯುತ್ತಲೇ ಇರುತ್ತದೆ. ಗೋಧೂಳಿ ಸಮಯದಲ್ಲಿ ಹಾಡುವಂಥ ರಾಗ ಇದು. ಅಂದರೆ 'ಸಂಧಿಪ್ರಕಾಶ' ಸಮಾಪ್ತವಾದ ಕೂಡಲೇ ಗಾಢಾಂಧಕಾರದ ಮೊಟ್ಟ ಮೊದಲ ಮೆಟ್ಟಲಿನ ರಾಗ. ಕಾಣದೆಡೆ ಇದ್ದಕ್ಕಿದ್ದಂತೆ ದೊಡ್ಡದಾದ ಮನುಷ್ಯಾಕಾರದ ನೆರಳುಗಳು ಕಂದೀಲಿನ ಬೆಳಕಿನಲ್ಲಿ ಗೋಡೆಯ ಮೇಲೆ ಮೂರ್ತ ರೂಪವನ್ನು ಪಡೆದಂತೆ. ಇದಕ್ಕಿಂತ ದೊಡ್ಡದಾದ, ಜೀವವಿದ್ದ ನೆರಳುಗಳ ಭಾಸವನ್ನು ಈ ರಾಗ ಮೂಡಿಸುತ್ತದೆ. ಈ ರಾಗದಲ್ಲಿ ಭಕ್ತಿ, ಸಮರ್ಪಣಾ ಭಾವವಿದೆ. ವಿರಹದ ವ್ಯಾಕುಲತೆ ಇದೆ, ಪ್ರೇಮದ ಮಾಯಾಜಲವಿದೆ. ಅಷ್ಟೇಕೆ, ನಿರ್ಗುಣ ಈಶ್ವರೀ ಭಾವವನ್ನು ಕೂಡ ಈ ರಾಗ ಹುಟ್ಟಿಸುತ್ತದೆ. ಇದೊಂದು ವಿರೋಧಾಭಾಸದ ರಾಗವೆಂದರೆ ಅತಿಶಯೋಕ್ತಿಯಾಗಲಾರದು. ಮೇಣದಂತೆ ಯಾವ ಆಕಾರವನ್ನೂ ಇದಕ್ಕೆ ಒದಗಿಸಲು ಅಷ್ಟೇ ಸಮರ್ಥ ಗಾಯಕ, ವಾದಕ ಬೇಕು.

ನದಿಯ ಉಗಮ, ಋಷಿಮುನಿಗಳ ಮೂಲವನ್ನು ಕೇಳಬಾರದಂತೆ. ಈ ಮಾತು ರಾಗಕ್ಕೂ ಅನ್ವಯಿಸಬಹುದು. ಈ ರಾಗದ ಉಗಮ 'ಕಲ್ಯಾಣ'ದಲ್ಲಿದೆ ಎನ್ನುತ್ತಾರೆ ಪ್ರಾಜ್ಞರು. ಅಂದರೆ ಕಲ್ಯಾಣ ಥಾಟಿನ ರಾಗ. ಹಾಡುವಾಗ ಈ ರಾಗ ಯಾವತ್ತೂ ತಪ್ಪುವಂತಿಲ್ಲ. ಒಂದು ವೇಳೆ ಶುದ್ಧ ಕಲ್ಯಾಣವಾದರೂ ಅತ್ತಿತ್ತ ಸರಿಯಬಹುದು. ಆದರೆ ಯಮನ್ ಹುಟ್ಟುವುದೂ, ಕೊನೆಮುಟ್ಟುವುದೂ ಕಲ್ಯಾಣದಲ್ಲಿಯೇ. ಎರಡೂ ಪದ್ಧತಿಗಳಲ್ಲಿಯೂ ಈ ರಾಗ ಸಂಪೂರ್ಣವಾಗಿದೆ. ಕರ್ನಾಟಕ ಸಂಗೀತದ 'ಮೇಚಕಲ್ಯಾಣಿ'

ಯಮನದಂತಿದೆ. ಕರ್ನಾಟಕ ಸಂಗೀತದ 'ಯಮುನಾ ಕಲ್ಯಾಣಿ' ಕೂಡ ಯಮನದಂತಿದೆ.

ಯಮನ್ ರಾಗ ಕೇಳುವಾಗ ನನ್ನನ್ನು ಬಾಲ್ಯದ ನೆನಪು ಕಾಡುತ್ತದೆ. ಗೋಕರ್ಣದಲ್ಲಿ ಕಾರ್ತಿಕ ಹುಣ್ಣಿಮೆಯ ದಿನ. ಗೋಕರ್ಣದ ಇಡೀ ಕೋಟಿತೀರ್ಥ ಮತ್ತು ಮಹಾಬಳೇಶ್ವರ ದೇವಸ್ಥಾನ ಕಾರ್ತಿಕ ಹುಣ್ಣಿಮೆಯಂದು ಅಸಂಖ್ಯ ದೀಪಗಳಿಂದ ಶೋಭಿಸುತ್ತವೆ. ಕೋಟಿತೀರ್ಥ ಕೆರೆಯಲ್ಲಿ ಸಾವಿರಾರು ಹಣತೆಗಳನ್ನು ತೇಲಿಬಿಡುತ್ತಾರೆ. ಪ್ರತಿಯೊಂದು ಹಣತೆಯೂ ಸುಶೋಭಿತವಾಗಿದ್ದು ಅದರ ಮಂದ ಪ್ರಕಾಶದ ತೇಜಸ್ಸೇ ಬೇರೆ. ಹಾಗೆಯೇ ಯಮನ್ ರಾಗದ ಪ್ರತಿಯೊಂದು ಸ್ವರಕ್ಕೂ ಪ್ರಾಧಾನ್ಯವಿದೆ. ವಾದಿ ಸಂವಾದಿ ಸ್ವರಗಳಿದ್ದರೂ ಈ ರಾಗದಲ್ಲಿ ತೀವ್ರ ಮಧ್ಯಮವನ್ನು ಸೇರಿಸಿದರೆ ಯಮನ್‌ಕಲ್ಯಾಣವಾಗುತ್ತದೆ. ಇತ್ತೀಚೆಗೆ, ಯಮನ್ ಮತ್ತು ಯಮನ್‌ಕಲ್ಯಾಣಗಳ ಭೇದ ಕಡಿಮೆಯಾಗುತ್ತಾ ಇದೆ. ಕೋಮಲ ಮಧ್ಯಮ ಸ್ವರದ ವಿಚಾರ ಕೆಲವೇ ಗಾಯಕರು ಮಡುತ್ತಾರೆ. ಕುಮಾರ ಗಂಧರ್ವರ ಕಲ್ಯಾಣದಲ್ಲಿ (ಅವರು ಯಮನ್ ರಾಗವನ್ನು ಕಲ್ಯಾಣವೆಂದು ಕರೆಯುವ ರೂಢಿಯನ್ನು ಇಟ್ಟುಕೊಂಡಿದ್ದರು) ಕೋಮಲ ಮಧ್ಯಮ ಒಂದೇ ಒಂದು ಸಲ ಪ್ರಯೋಗಿಸಿದಾಗ ಮೈಯಲ್ಲಿ ವಿದ್ಯುತ್ ಸಂಚಾರವಾದ ಹಾಗೆ ಆಗಿತ್ತು. ಬಹಳ ಬಳಸಿದರೆ ಯಮನೀ ಆಗುವ ಸಂಭವ ಹೆಚ್ಚು!

ಹಾಸನಗಿ ಗಣಪತಿ ಭಟ್ಟರು ಗೋವಾದ ಶಾಂತಾದುರ್ಗಾ ದೇವಸ್ಥಾನದಲ್ಲಿ ಹಾಡಿದ ಯಮನ್ ಇನ್ನೂ ನನ್ನ ಕಿವಿಯಲ್ಲಿ ಗುಂಯ್‌ಗುಡುತ್ತಾ ಇದೆ. ಖ್ಯಾತ ಮರಾಠಿ ಚಲನಚಿತ್ರ ನಿರ್ಮಾಪಕಿ, ನಟಿ, ಸ್ಮಿತಾ ತಳವಲ್ಕರ್ ಈ ಕಾರ್ಯಕ್ರಮದ ನಿವೇದಕಿಯಾಗಿದ್ದರು. ಗಣಪತಿ ಭಟ್ಟರನ್ನು ಶ್ರೋತೃಗಳಿಗೆ ಪರಿಚಯಿಸಿ, 'ಪಂಡಿತರು ಈಗ ಮಾಮೂಲಾದ ಯಮನ್ ಹಾಡಲಿದ್ದಾರೆ' ಎಂದರು. ಭಟ್ಟರಿಗೆ ಇಷ್ಟೇ ಸಾಕಾಯಿತು. ಮೈಕನ್ನು ತೆಗೆದುಕೊಂಡು ಯಮನ್ ರಾಗದ ಮಹತ್ವವನ್ನು ಒತ್ತಿ ಹೇಳಿ 'ಇದು ಮಾಮೂಲು ರಾಗವಲ್ಲ, ಪ್ರತಿಸಲ ಹಾಡುವಾಗಲೂ ರಾಗದ ಹೊಸ ಹೊಸ ರೂಪಗಳು ಆವಿಷ್ಕಾರವು ಮನಸ್ಸಿನಲ್ಲಿ ಹೊಳೆಯುತ್ತಾ ಇರುತ್ತವೆ. ನಿನ್ನೆಯ ಯಮನ್ ಇಂದಿನ ಹಾಗೆ ಇರುವುದಿಲ್ಲ. ಇದು ಮಾಮೂಲು ಅಲ್ಲ, ಮಹತ್ವದ ರಾಗ' ಎಂದು ನುಡಿದು ತುಸು ಅಸಮಾಧಾನದಿಂದಲೇ ರಾಗ ವಿಸ್ತಾರವನ್ನು ಆರಂಭಿಸಿದರು. ಅತ್ಯಂತ ಚಾಣಾಕ್ಷತೆಯಿಂದ ಒಂದೂವರೆ ತಾಸು ದೈವೀ ಸಂಚಾರವಾದಂತೆ ಹಾಡಿ ತಣಿಸಿದ್ದು ನಾನು ಸಪತ್ನೀಕನಾಗಿ ಆ ಕಚೇರಿಯನ್ನು ಆಲಿಸುತ್ತಾ ಕುಳಿತದ್ದು ಒಂದು ಮರೆಯಲಾರದ ಅನುಭವ (1989).

ಯಮನ್ ರಾಗವನ್ನು ಕಲಿಯುವುದು ಸುಲಭ, ತಿಳಿಯಲು ಸುಲಭ, ಹಾಡಲು ಸುಲಭ, ಆದರೆ ಅದು ಅಷ್ಟೇ ಜಟಿಲ. ಯಾವುದೇ ಸಂಗೀತ ತರಗತಿಯಲ್ಲಿ ಶಾಸ್ತ್ರಶುದ್ಧ ಯಮನವನ್ನು ನೀವು ಕೇಳಬಹುದು. ಆದರೆ ಅದರಷ್ಟು ರೂಕ್ಷ, ಒರಟು ಯಮನ ಇನ್ನೊಂದಿಲ್ಲ. ಸ್ವರಾಲಾಪದ ಅಭ್ಯಾಸಕ್ಕಾಗಿ ಕಲಿಸುವುದು ದುರ್ವಿಲಾಸ! ಅಷ್ಟೆ. ಬಹಳಷ್ಟು ಸಂಗೀತಗಾರರು ಹಾಡುವ ಪದ್ಧತಿ ಇತ್ತೀಚೆಗೆ ಇದೇ ಆಗಿದೆ. ಆಗ್ರಾ ಪರಂಪರೆಯ ರಾಜಾಮಿಯಾ ನನ್ನ ಮಗಳಿಗೆ ಮೂರು ವರ್ಷಗಳಲ್ಲಿ ಕಲಿಸಿದ್ದು ಒಂದೇ ರಾಗ –

ಯಮನ್. ನನ್ನ ಮಗ ಒಂದು ವರ್ಷ ಕಲಿತು, 'ಇದಕ್ಕಿಂತ ತಂಬೂರಿ ಶ್ರುತಿಮಾಡುವುದನ್ನು ಕಲಿಯುತ್ತೇನೆ' ಎಂದು ಹೇಳಿ ಕಲಿಯುವುದನ್ನೇ ಬಿಟ್ಟುಬಿಟ್ಟ, ಮಗಳು ಮೂರು ರಚನೆಗಳನ್ನು ಕಲಿತು ಆಮೇಲೆ ಕೈಮುಗಿದಳು. ತಮಾಷೆಗೆ ನಾನದನ್ನು 'ಬೀಸುಗಲ್ಲಿನ ಯಮನ್' ಎಂದು ಕರೆಯುತ್ತಿದ್ದೆ.

1950–60ರಲ್ಲಿ ಮುಂಬಯಿಯ ಗಣಪತಿ ಉತ್ಸವಕ್ಕೆ ಕರ್ನಾಟಕದಿಂದ ಹಾಡುಗಾರರ ತಂಡ ಮುಂಬಯಿಗೆ ಬರುತ್ತಿತ್ತು. ಚಿಖಲವಾಡಿಯಲ್ಲಿ ಮನ್ಸೂರರು ಹಾಡಲು ಕುಳಿತರೆ ಲೆಮಿಂಗಟನ್ ರೋಡಿನಲ್ಲಿ ಗಂಗೂಬಾಯಿ ಹಾನಗಲ್ಲ ಮತ್ತು ಗಿರಿಗಾಂವ್‌ನಲ್ಲಿ ಭೀಮಸೇನ್ ಜೋಶಿ, ಲಕ್ಷ್ಮೀಬಾಗದಲ್ಲಿ ಫಿರೋಜ ದಸ್ತೂರ್ ಬೇರೆ ಬೇರೆ ದಿನಗಳಲ್ಲಿ ಯಮನ್ ರಾಗವನ್ನು ಹಾಡಿದ್ದು ಇನ್ನೂ ನೆನಪಿದೆ. ತಾತ್ಪರ್ಯ ಇಷ್ಟೇ. ಮಾಲಿನಿ ರಾಜೂರ್ಕರ್ ಆಗಲಿ, ರಶೀದ ಖಾನರಾಗಲಿ, ಬಿಸ್ಮಿಲ್ಲಾ ಖಾನರಾಗಲಿ ರಾಗ ಒಂದೇ, ರೂಪ ಅನೇಕ. ಕಿಶೋರಿ ಅಮೋಣಕರ್ ಅವರ 'ಮೋಹನ್ ಲಗನ ಲಾಗೀ ತುಮ್ ಸಂಗ್' ಯಮನ್ ಮತ್ತು ಅವರ ತಾಯಿ ಮೊಗುಬಾಯಿ ಕುರಡೀಕರರ 3 ನಿಮಿಷದ ರೆಕಾರ್ಡಿನಲ್ಲಿರುವ ಯಮನ್ ರಾಗದ ವೈವಿಧ್ಯದ ಬಗ್ಗೆ ಏನು ಬರೆಯಲಿ? ಕುಮಾರ, ಗಂಗೂಬಾಯಿ, ಭೀಮಸೇನರ ನೂರಾರು ಮೆಹಫಿಲ್ಲುಗಳನ್ನು ಕೇಳಿದ್ದೇನೆ. ಆದರೂ ಯಮನ್ ಅರಿಯಲು ಇಂಗಲಾರದ ಹಸಿವು ಇನ್ನೂ ಇದೆ!

*****

5.14

ಯಮನ್-ಸುಗಮ ಮತ್ತು ಚಲನಚಿತ್ರ ಸಂಗೀತದಲ್ಲಿ 2

'ನೀನೊಲಿದರೆ ಕೊರಡು ಕೊನರುವುದಯ್ಯಾ...' ಮಲ್ಲಿಕಾರ್ಜುನ ಮನ್ಸೂರರು ಹಾಡಿದ ಈ ಕನ್ನಡ ವಚನ ಯಮನ್‌ನಲ್ಲಿತ್ತು ಎಂದು ಈ ಲೇಖನ ಬರೆಯುತ್ತಿರುವಾಗಲೇ ನೆನಪಿಗೆ ಬರುತ್ತಿದೆ. ಸಿನೆ ಜಗತ್ತಿನಲ್ಲಿ ಯಮನ್ ರಾಗಕ್ಕೆ ವಿಶಿಷ್ಟ ಸ್ಥಾನವಿದೆ. ಯಮನ್, ಶಿವರಂಜನಿ ಮತ್ತು ಭೈರವಿ ಈ ಮೂರು ರಾಗಗಳಲ್ಲೇ ಶೇಕಡಾ ಐವತ್ತರಷ್ಟು ಸಿನಿಮಾ ಹಾಡುಗಳಿವೆ. ಲತಾ ಮಂಗೇಶ್ಕರ್ ಯಮನ್ ರಾಗದಲ್ಲಿ ಹಾಡಿರುವ ಹಾಡುಗಳ ಸಂಖ್ಯೆ 50ಕ್ಕಿಂತ ಹೆಚ್ಚಿಗೆ ಇವೆ ಎಂದು ನನ್ನ ಅಂದಾಜು. ತಾನು ಯಮನ್‌ನಲ್ಲಿ ಹಾಡಿದ ಹಾಡುಗಳು ಕಡಿಮೆ ಎನ್ನುವ ತಿಳಿವಳಿಕೆಯಿಂದಲೋ ಏನೋ ಲತಾ 'ಶ್ರದ್ಧಾಂಜಲಿ' ಧ್ವನಿಸುರುಳಿಯಲ್ಲಿ ಪಂಕಜ ಮಲ್ಲಿಕ್ ಹಾಡಿದ್ದ 'ಮೈ ಕ್ಯಾ ಜಾನೂ ಕ್ಯಾ ಜಾನೂರೇ' ಮತ್ತು ಕುಂದನ್ ಲಾಲ್ ಸೈಗಲ್ ಹಾಡಿದ್ದ 'ದೋ ನೈನಾ ಮತವಾಲೇ ತಿಹಾರೇ' ಹಾಡುಗಳನ್ನು ಸೇರಿಸಿದ್ದು ಮಾರುಕಟ್ಟೆಯಲ್ಲಿ ಯಮನ್ ರಾಗದ ಜನಪ್ರಿಯತೆಗೆ ಸಾಕ್ಷಿ. ಭಕ್ತಿಸಂಗೀತ, ಭಾವಗೀತೆ, ಪ್ರೇಮ, ವಿರಹಗೀತೆ, ಗಜಲ್, ಕವ್ವಾಲಿ ಇದ್ದರೂ ಕೂಡ, ಯಮನ್ ರಾಗದ ಬೇಡಿಕೆಗೆ ಕೊರತೆ ಖಂಡಿತ ಇಲ್ಲ ಎನ್ನುವುದು ಸುಧೀರ ಫಡಕೆ, ಶಂಕರ್-ಜೈಕಿಶನ್, ಬರ್ಮನ್, ಮದನ ಮೋಹನ, ಖಯ್ಯಾಮ, ಮತ್ತು ಸಿ. ರಾಮಚಂದ್ರ ಇವರಿಗೆಲ್ಲ ಗೊತ್ತಿತ್ತು. ಈ ಪಟ್ಟಿಯಲ್ಲಿ ನಾನು ನೌಷದ ಅಲಿ ಅವರ ಹೆಸರನ್ನು ಸೇರಿಸದಿರಲು ಕಾರಣ ಅವರು ಬಹುತೇಕ ಎಲ್ಲ ರಾಗಗಳನ್ನು ಬಳಸಿದ್ದಾರೆ ಎನ್ನುವ ಕಾರಣಕ್ಕಾಗಿ. ಯಮನ್ ರಾಗಕ್ಕಷ್ಟೇ ಪ್ರಾಧಾನ್ಯ ಕೊಡದ ಸಂಗೀತ ನಿರ್ದೇಶಕರು ಅವರು. ಹದಿನೈದಕ್ಕೂ ಹೆಚ್ಚು ಶಾಸ್ತ್ರೀಯ ರಾಗಗಳನ್ನು ನೌಷಾದ್ ಚಿತ್ರಗೀತೆಗಳಿಗಾಗಿ ಬಳಸಿಕೊಂಡಿದ್ದಾರೆ. ಕಳೆದ ಐವತ್ತು ವರ್ಷಗಳಿಂದ ಮುಂಬಯಿವಾಸಿಯಾದ ನನಗೆ ಕನ್ನಡ ಚಲನಚಿತ್ರ ಸಂಗೀತ, ಸುಗಮ ಸಂಗೀತದ ಸಂಪರ್ಕ ತಪ್ಪಿಹೋಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಹೀಗಾಗಿ ಪ್ರಕೃತ ಲೇಖನದಲ್ಲಿ, ಯಮನ್‌ನಲ್ಲಿಯ ಉದಾಹರಣೆಗಳನ್ನು ಕೇವಲ ಹಿಂದಿ ಮತ್ತು ಮರಾಠಿ ಚಲನಚಿತ್ರ ಸಂಗೀತಕ್ಕೆ ಮತ್ತು ರಂಗಸಂಗೀತಕ್ಕೆ ಸೀಮಿತವಾಗಿ ಇಟ್ಟುಕೊಂಡಿದ್ದೇನೆ.

ಮದನ್‌ಮೋಹನ್ ಮತ್ತು ರೋಷನ್ ಇವರಿಗೆ ಯಮನ್ ತುಂಬ ಮೆಚ್ಚಿನ ರಾಗವಾಗಿತ್ತು. 'ಬಹಾನಾ' ಚಿತ್ರದಲ್ಲಿ ಲತಾ ಹಾಡಿದ 'ಜಾರೇ ಬದರಾ ಜಾ' ಹಾಡು ಅಜರಾಮರವಾಗಿದೆ. ಈ ಪದ್ಯದ ಶಬ್ದ ಮತ್ತು ಸ್ವರರಚನೆ ಅಪ್ರತಿಮವಾದುದು.

ಹಾಗೆಯೇ 'ಅನಪಡ್' ಚಿತ್ರದಲ್ಲಿಯ ಇನ್ನೊಂದು ಹಾಡನ್ನು ಜ್ಞಾಪಿಸಿಕೊಳ್ಳಿ - 'ಜಿಯಾ ಲೇ ಗಯೋ ರೆ ಮೋರಾ ಸಾಂವರಿಯಾ'. ಅದೇನು ಸ್ವರ ಉಚ್ಚಾರ, ಅದೇನು ಲಯ!

ನನಗೆ ಮೊಟ್ಟ ಮೊದಲು ಪರಿಚಯವಾದ ಯಮನ್‌ದಲ್ಲಿಯ ಹಾಡೆಂದರೆ ರೋಶನ್ ಅವರ 'ಏರಿ ಅಲೀ ಪಿಯಾ ಬೀನ'. ಇದು ಆಗ್ರಾ ಘರಾಣೆಯ ಒಂದು ಶಾಸ್ತ್ರೀಯ ಸಂಗೀತವನ್ನು ಆಧರಿಸಿದ್ದು. ಇದ್ದಕ್ಕಿದ್ದಂತೆ ಸ್ಥಾಯಿ ಮತ್ತು ಅಂತರಾಗಳನ್ನು ಉಪಯೋಗಿಸಿ ಮುಂದಿನ ಎರಡು ಸಂಚಾರ ಮತ್ತು ಅಭೋಗಗಳಲ್ಲಿ ಬದಲಾವಣೆ ಮಾಡಿ, ಔಚಿತ್ಯಪೂರ್ಣ ಪಾರ್ಶ್ವಸಂಗೀತ ನೀಡಿ ಲೋಕಾಭಿಮುಖ ಮಾಡಿದ ಕೀರ್ತಿ ರೋಶನ್ ಅವರಿಗೆ ಸೇರಿದ್ದು. ಇದರ ಮೊದಲ ವಾಕ್ಯ ಆಗ್ರಾ ಘರಾಣೆಯ ಭಂಡಾರದಲ್ಲಿ ಎಂದು ಸೇರಿತೋ ಏನೋ. ಆದರೆ ಮೀರಾಬಾಯಿ ಈ ಹಾಡಿನ ಕವಯಿತ್ರಿ. ಇದು ನನ್ನ ಗಮನಕ್ಕೆ ಬಂದುದು ಇತ್ತೀಚೆಗೆ.

ನಾನು ಪುಣೆಯ ಹಿಂದುಸ್ಥಾನ್ ಆಂಟಿಬಯೋಟಿಕ್ಸ್‌ನಲ್ಲಿ ಕೆಲಸಕ್ಕಿದ್ದಾಗ 'ಬರಸಾತಕೀ ರಾತ್' ಚಿತ್ರ ಬಿಡುಗಡೆಯಾಯಿತು. 'ಜಿಂದಗೀ ಭರ್ ನಹೀಂ ಭೂಲೇಂಗೆ ...' ಹಾಡು ಕೇಳಿದರೆ ಈಗಲೂ ರೋಮಾಂಚನವಾಗುತ್ತದೆ.

ಅಂತೆಯೇ ನೆನಪಿಗೆ ಬರುವ ಇನ್ನೊಂದು ಹಾಡು ರೋಶನರದ್ದೇ 'ನಿಗಾಹೆ ಮಿಲಾನೆಕೋ ಜೀ ಚಾಹತಾ ಹೈ'. ಫಿಲ್ಮೀ ಕವ್ವಾಲಿ ಸಂಸ್ಕೃತಿಯ ಇನ್ನೊಂದು ಯಮನದಲ್ಲಿಯ ಹಾಡು.

ಕೇದಾರ್ ಶರ್ಮಾ ಅವರ ಚಿತ್ರ 'ಚಿತ್ರಲೇಖಾ' ನೆನಪಿದೆಯಲ್ಲ? ಅದರಲ್ಲಿಯ ಒಂದು ಹಾಡು ಸಂತ ತುಲಸೀದಾಸರದ್ದು. ಮೂಲ ರೂಪ ಹೀಗಿದೆ: 'ಮನ ತೂ ಕಾಹೆನ ಧೀರ ಧರೆ ...' ಇದು ಯಮನ್ ಕಲ್ಯಾಣದಲ್ಲಿ ಹೊಸ ವೇಷವನ್ನು ತೊಟ್ಟು ಮಹಮದ್ ರಫಿಯವರ ಧ್ವನಿಯಲ್ಲಿ ಕಾಣಿಸಿಕೊಂಡದ್ದು 'ಮನರೇ ಕಾಹೆ ನಾ ಧೀರ ಧರೇ... 'ಈ ವೇಷಾಂತರ ಅತ್ಯುತ್ತಮ ಮಟ್ಟದ್ದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನೃತ್ಯದೊಂದಿಗೆ ಯಮನ್ ರಾಗದಲ್ಲಿಯ ನಟ್‌ಖಟ್ (ತುಂಟತನದ) ಹಾಡೆಂದರೆ 'ಪಾನ ಖಾಯೆ ಸೈಯಾಂ ಹಮಾರೆ', ಚಿತ್ರ 'ತೀಸರೀ ಕಸಂ'.

1970ರ ಸುಮಾರು ಪಾಕಿಸ್ತಾನೀ ಗಜಲ್‌ಗಾಯಕರು ಭಾರತಕ್ಕೆ ಬರಲಾರಂಭಿಸಿದರು. 1947ರಲ್ಲಿ ಪಾಕಿಸ್ತಾನ ಹುಟ್ಟಿದ ಮೂರು ದಶಕಗಳಲ್ಲಿಯೇ ಅಲ್ಲಿಯ ಶಾಸ್ತ್ರೀಯ ಸಂಗೀತ ಲುಪ್ತವಾಗಲು ಪ್ರಾರಂಭವಾಗಿ, ಶಾಸ್ತ್ರೀಯ ಗಾಯಕರ ಪರಂಪರೆ ಗಜಲ್, ಕವ್ವಾಲಿಯತ್ತ ತಿರುಗಿತು. ಉದಾಹರಣೆಗೆ, ನುಸರತ್ ಫತ್ತೆ ಅಲಿ, ನಜಾಕತ್ ಸಲಾಮತರು. ಬಡೇ ಗುಲಾಂ ಅಲಿ ಅವರಿಂದ ಮನ್ನಣೆ ಪಡೆದ ಪಟಿಯಾಲ ಮನೆತನದ ಪರಂಪರೆಗೆ ಸೇರಿದ ಇವರು, ಗಜಲ್ ಮತ್ತು ಕವ್ವಾಲಿಗಳಲ್ಲಿಯೇ ಹೆಸರು ಗಳಿಸಿದರು. ಕ್ರಿಕೆಟ್ ಆಟಗಾರರಂತೆ ಈ ಪಾಕಿಸ್ತಾನಿ ಗಜಲ್ ಗಾಯಕರು ಪದೇ ಪದೇ ಭಾರತಕ್ಕೆ ಬಂದು ಕಚೇರಿಗಳನ್ನು ಕೊಡಲಾರಂಭಿಸಿದರು. ಇಲ್ಲಿ ಬಾಲಿವುಡ್‌ನ ಗೇಟ್ ಅವರಿಗೆ ಸದಾ ತೆರೆದೇ ಇತ್ತು. ಇವರಲ್ಲಿ ಮೆಹದಿ ಹಸನ್, ಗುಲಾಮ ಅಲಿ, ನುಸರತ್ ಪತ್ತೆ

ಅಲಿ, ಫರೀದಾ ಖಾತೂನ್, ಮಲ್ಲಿಕಾ ಪುಖರಾಜ್ ಮತ್ತು ಆಕೆಯ ಮಗಳು ಹೇರಳವಾಗಿ ಸಂಪಾದನೆ ಮಾಡಿದ್ದು ವಾಸ್ತವವೇ ಆಗಿದೆ. ಇದರಲ್ಲಿ ಮೆಹದಿ ಹಸನ್ ಹಾಡಿದ ಶುದ್ಧ ಯಮನ್ ರಾಗದ **'ರಂಜಿ ಸಹೀಂ'** ಹಾಡನ್ನು ಮುಂಬಯಿಯ ಮನೆಮನೆಗೆ ತಲುಪಿಸಿದ **ಕೀರ್ತಿ** ಚಿತ್ರ ತಾರೆ **ರೇಖಾಗೆ** ಸಲ್ಲುತ್ತದೆ. ಈ ಹಾಡಿನ ಸಾಹಿತ್ಯ, ಸಂಗೀತ ಎಷ್ಟು ಇಂಪಾಗಿದೆ ಎಂದರೆ ನಲವತ್ತು ವರ್ಷದ ಬಳಿಕವೂ ಅದರ ಅಮಲು ಇಳಿದಂತೆ ಕಾಣಿಸುವುದಿಲ್ಲ. ಕಿಶೋರಿ ಅಮೋಣಕರ್ ಅವರು ಹಾಡಿದ ಮೀರಾಬಾಯಿಯ 'ಮ್ಹಾರೋ ಪ್ರಣಾಮ' ಅತ್ಯಂತ ಉನ್ನತ ಮಟ್ಟದ್ದು. ಅವರು ಶೋಭಾ ಗುರ್ಟು, ಕಿಶೋರಿಯಿಂದ ಕಲಿತು ಪ್ರತಿಯೊಂದು ಕಚೇರಿಯಲ್ಲಿ ಈ ಹಾಡನ್ನು ಪರಿಣಾಮಕಾರಿಯಾಗಿ ಹಾಡಿ ಪ್ರಸಿದ್ಧಿಗೆ ತಂದರು. ಡಿ.ವಿ. ಪಲುಸ್ಕರ್ ಹಾಡಿದ ತುಳಸೀದಾಸರ 'ಶ್ರೀರಾಮಚಂದ್ರ ಕೃಪಾಲು' ಯಮನ್ ರಾಗದಲ್ಲಿದ್ದು 1945ರಲ್ಲಿ ಎಚ್‌ಎಂವಿಯವರು ಬಿಡುಗಡೆ ಮಾಡಿದ ಕೂಡಲೇ ಪ್ರಸಿದ್ಧಿಯ ತುತ್ತ ತುದಿಗೆ ಮುಟ್ಟಿತಂತೆ. ಇದನ್ನೇ ಮುಂದೆ ಲತಾ ಮಂಗೇಶ್ಕರ್ ಹಾಡಿ ತನ್ನ ಭಜನೆಯ ಧ್ವನಿಸುರಳಿಯಲ್ಲಿ ಸೇರಿಸಿದರು. ಮರಾಠಿ ಮಂದಿಗೆ ಮರೆವು ಜಾಸ್ತಿ! ಲೋಕಸತ್ತಾ ಮರಾಠಿ ದಿನಪತ್ರಿಕೆಯಲ್ಲಿ ಅಚ್ಯುತ ಗೋಡಬೋಲೆ ಎಂಬುವರು ಈ ಕೃತಿಯ ಶ್ರೇಯಸ್ಸನ್ನು ಹೃದಯನಾಥ ಮಂಗೇಶ್ಕರ್‌ಗೆ ಕೊಟ್ಟು, ಹೊಗಳಿ, ಅಂಕಣ ಬರೆದಾಗ ಅದೇ ಪತ್ರಿಕೆಯಲ್ಲಿ ಐತಿಹಾಸಿಕ ಸಂದರ್ಭ ಕೊಟ್ಟು ಮಂಗೇಶ್ಕರರ ರೀಮಿಕ್ಸನ್ನು ಬಹಿರಂಗಗೊಳಿಸಿ ಪಲುಸ್ಕರರ ಆತ್ಮಕ್ಕೆ ಕೊಂಚ ಶಾಂತಿಯನ್ನು ಕೊಡಿಸುವ ಕೆಲಸವನ್ನು ಈ ಲೇಖಕ ಮಾಡಿದ್ದು ಅಪ್ರಸ್ತುತವಾದರೂ ಉಲ್ಲೇಖಿಸುತ್ತಿದ್ದೇನೆ.

ಮುಂಬಯಿಯಲ್ಲಿ ಆದಾಯ ತೆರಿಗೆ ಅಧಿಕಾರಿಯಾಗಿದ್ದ ಸುರಿಂದರ ಸಿಂಗ ಮತ್ತು ಅವರ ಸೋದರ ತೇಜಪಾಲ ಸಿಂಗರು ಉಸ್ತಾದ್ ಅಮೀರ್ ಖಾನರ ಶಿಷ್ಯರು. ಸುರಿಂದರ್ ಕೆಲಕಾಲ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸಂಗೀತ ವಿಮರ್ಶಕನಾಗಿಯೂ ಕೆಲಸಮಾಡಿದ್ದರು. ಇವರಿಬ್ಬರೂ ಗುರುನಾನಕರ ಗುರುಬಾನಿಯ ಕೆಲವು ಶ್ಲೋಕಗಳಿಗೆ ಯಮನ್ ರಾಗವನ್ನು ಬಳಸಿಕೊಂಡಿದ್ದಾರೆ. ಅದರ ಮೊದಲ ಸಾಲು 'ಮಿಲಾ ಮೇರೆ ಪ್ರೀತಮ್ ಜಯಿಯೋ'.

ಠುಮರಿ, ದಾದ್ರಾಗಳಲ್ಲೂ ಯಮನ್ ರಾಗವಿದೆ. ಬೇಗಂ ಅಖ್ತರ್ ಹಾಡಿದ 'ಕೋಯಲಿಯಾ ಮತ ಕರ್ ಪುಕಾರ್' ಹಾಗೆಯೇ ಮರಾಠಿ ನಾಟಕ 'ಕಟ್ಯಾರ ಕಾಳಜಾತ ಘುಸಲೀ' ಯಲ್ಲಿ ವಸಂತ ರಾವ್ ದೇಶಪಾಂಡೆ 'ಕರೇಜಿವಾ ಲಗೆ ಕಠಾರ್' ಎನ್ನುವ ಹೃದಯಂಗಮ ಹಾಡನ್ನು ನೀಡಿದ್ದಾರೆ. ನೆನಪಿಗೆ ಬರುವ ಕೆಲವು ಯಮನ್ ರಾಗದ ಚಿತ್ರಗೀತೆಗಳೆಂದರೆ – 'ನ ತೊ ಕಾರವಾಕಿ ತಲಾಶ್ ಹೈ' (ಬರಸಾತ ಕೀ ರಾತ್), 'ಜರಾಸಿ ಆಹಟ್ ಹೋತಿ ಹೈ' (ಹಕೀಕತ್), 'ಅಭಿ ನ ಜಾವೋ' (ಹಂ ದೋನೋ), 'ಚಂದನ್ ಸಾ ಬದನ್' (ಸರಸ್ವತೀ ಚಂದ್ರ), 'ಘರಸೆ ನಿಕಲತೇ ಹೀ (ಪಾಪ ಕೆಹತೆ ಹೈ).

*****

ಅಧ್ಯಾಯ 6

ಸಂಗೀತವನ್ನು ಕುರಿತು

6.1

ತಾನಸೇನನಿಂದ ಭೀಮಸೇನನವರೆಗೆ ಉತ್ತರಾದಿ ಸಂಗೀತ ನಡೆದುಬಂದ ಹಾದಿ

ಬುಧವಾರ ಮೇ 2002 ಒಂದನೇ ತಾರೀಕಿನಂದು ಅಂದರೆ ಮಹಾರಾಷ್ಟ್ರರಾಜ್ಯದ ದಿನದಂದು, ಅದಾಗಲೇ ಪದ್ಮವಿಭೂಷಿತರಾಗಿದ್ದ, ಅಚ್ಚಕನ್ನಡಿಗರಾದ ಪಂಡಿತ ಭೀಮಸೇನ ಜೋಶಿಯುವರಿಗೆ ಮಹಾರಾಷ್ಟ್ರ ಸರಕಾರದ ಪರವಾಗಿ ಮುಂಬಯಿಯುಲ್ಲಿ 'ಮಹಾರಾಷ್ಟ್ರಭೂಷಣ' ಪದವಿಯನ್ನು ಪ್ರದಾನಮಾಡಿ 5 ಲಕ್ಷ ರೂಪಾಯಿಯ ಮೊತ್ತ ಮತ್ತು ಮಾನಪತ್ರವನ್ನು ಕೊಟ್ಟು ಗೌರವಿಸಲಾಯಿತು. ಈ ಪ್ರತಿಷ್ಠಿತ ಸಮಾರಂಭದಲ್ಲಿ ಹಾಡಲು ಧಾರವಾಡದಿಂದ ಮತ್ತೊಬ್ಬ ಅಚ್ಚಕನ್ನಡಿಗ ವೆಂಕಟೇಶ ಕುಮಾರರನ್ನು ಕರೆಸಿದ್ದು ಮುಂಬಯಿಯಲ್ಲಿ 50 ವರ್ಷಗಳಿಂದ ನೆಲೆಸಿದ ಯಾವುದೇ ಕನ್ನಡ ಹೃದಯಕ್ಕೆ ಭಾರೀ ಉಲ್ಲಾಸವನ್ನು ಕೊಡುವ ಘಟನೆಯಾಗಿತ್ತು. 9 ಕೋಟಿ ಜನರು ವಾಸ್ತವ್ಯವಿದ್ದ ರಾಜ್ಯದಲ್ಲಿ ಜೋಶಿಯವರ ಸತ್ಕಾರಕ್ಕೆ ನೆರೆಯ ಕರ್ನಾಟಕದಿಂದ ಉತ್ತರಾದೀ ಸಂಗೀತ ಹಾಡುವ ಗಾಯಕರನ್ನು 'ಆಯಾತ'ಮಾಡಿಕೊಳ್ಳುವ ಪರಿಸ್ಥಿತಿ ಒದಗಿದ್ದು ಈ ರಾಜ್ಯದಲ್ಲಿ ಈ ಪದ್ಧತಿಯಲ್ಲಿ ಹಾಡುವ 'ಆ' ಮಟ್ಟದ ಗಾಯಕರೇ ಇಲ್ಲ ಎಂದು ಸಾಮಾನ್ಯರು ತಿಳಿದುಕೊಂಡರೆ ಅದು ಅತಿಶಯೋಕ್ತಿಯ ಮಾತಲ್ಲ.

ಇಂದಿಗೆ ಎಂಬತ್ತೊಂಬತ್ತು ವರ್ಷಗಳ ಹಿಂದೆ ಗದುಗಿನಲ್ಲಿ ಹುಟ್ಟಿ ತಮ್ಮ ಹತ್ತನೇ ವರ್ಷಕ್ಕೇ ಮನೆಬಿಟ್ಟು ಓಡಿಹೋಗಿ ಮುಂಬಯಿ, ಕಲಕತ್ತಾ, ಜಾಲಂಧರ, ಲಾಹೋರ ಶಹರಗಳಲ್ಲಿ ಭಾವಿಗುರುಗಳ ಶೋಧ ನಡೆಸಿ, ಮರಳಿ 6 ವರ್ಷಗಳ ನಂತರ, ಗದುಗಿನ ಪಕ್ಕದ ಕುಂದಗೋಳಕ್ಕೆ ಬಂದು, ಇಲ್ಲಿಯ ಕಿರಾನಾ ಘರಾಣದ ಸವಾಯಿ ಗಂಧರ್ವ ರಾಮಭಾವು ಕುಂದಗೋಳಕರ ಅವರಲ್ಲಿ ಶಿಷ್ಯತ್ವವನ್ನು ಪಡೆದು, ಮುಂದೆ ತಮ್ಮ ಗುರುಗಳ ಹೆಸರನ್ನು ಅಜರಾಮರ ಮಾಡಿದ ಶ್ರೇಯ ಭೀಮಸೇನ ಜೋಶಿಯವರದು. ಕಳೆದ 50 ವರ್ಷಗಳಿಂದ ಪುಣೆಯಲ್ಲಿ ತಮ್ಮ ಗುರುಗಳ ಸ್ಮರಣಾರ್ಥ 'ಸವಾಯಿ ಗಂಧರ್ವ' ಉತ್ಸವ ಎಡೆಬಿಡದೆ ನಡೆಸಿದ ಧೀಮಂತರು ಇವರು. ಅಂದಹಾಗೆ

ಭೀಮಸೇನರ ಅಕ್ಕ 90 ವರ್ಷ ಹರೆಯದ ಗಂಗೂಬಾಯಿ ಹಾನಗಲ್ಲ ಕೂಡ ಕಡಿಮೆ ತೂಕದವರಲ್ಲ. ಮೇ ತಿಂಗಳ 19 ಮತ್ತು 20 2003ರಲ್ಲಿ ಪುಣೆಯಲ್ಲಿ 'ಅಕ್ಕನ' 90ನೆಯ ಹುಟ್ಟುಹಬ್ಬ ಮತ್ತು ಪದ್ಮವಿಭೂಷಣ ಸನ್ಮಾನದ ಸತ್ಕಾರ ಅದ್ಧೂರಿಯಾಗಿ ನಡೆಯಿತು. ಇದರಲ್ಲಿ ಕೂಡ ಕೊನೆಗೆ ಹಾಡಿದವರು ಹೈದರಾಬಾದಿನ ಗ್ವಾಲಿಯರ ಪರಂಪರೆಯ ಖ್ಯಾತ ಕಲಾವಿದೆ ಮಾಲಿನಿ ರಾಜೂರಕರ.

ಕರ್ನಾಟಕದ ಈ ಎರಡು ವಿಭೂತಿಗಳ ಸತ್ಕಾರ ಮುಂಬಯಿ ಮತ್ತು ಪುಣೆಯಲ್ಲಿ ವೀಕ್ಷಿಸುತ್ತ ಕುಳಿತಾಗ ಉತ್ತರಾದಿ ಸಂಗೀತದ ಹಿಂದಣ ನಾಲ್ಕೈದು ಶತಮಾನಗಳ ಇತಿಹಾಸದ ಪುಟಗಳು ಸ್ಮೃತಿಪಟಲದಲ್ಲಿ ಹಾದುಹೋದವು. ಇದಕ್ಕೆ ಪೂರಕವಾಗಿ ಪುಣೆಯ ನೂರು ವರ್ಷಕ್ಕೂ ಮಿಕ್ಕಿದ ವಾಡೆಯಲ್ಲಿಯ ಗಾಂಧರ್ವ ಮಹಾವಿದ್ಯಾಲಯದ ಗ್ರಂಥಾಲಯದಲ್ಲಿ ಮೊಗಲರ ಕೊನೆಯ ಬಾದಶಹ ಬಹಾದೂರ ಝಾಫರ ಬರೆದಿಟ್ಟ ವಾಕ್ಯಗಳು ಓದುಗರ ಲಕ್ಷ್ಯವನ್ನು ಸೆಳೆಯುತ್ತವೆ. ಬ್ರಹ್ಮದೇಶದ ಮೂಲೆಯಲ್ಲಿ ಸೆರೆಯಲ್ಲಿಡಲ್ಪಟ್ಟಿದ್ದ, ಉತ್ತರಾದಿ ಸಂಗೀತದ ಮೇಧಾವಿ, 'ಜಾಫ಼ರ' ಎಂಬ ಕಾವ್ಯನಾಮವನ್ನಿಟ್ಟುಕೊಂಡು ನೂರಾರು ಪದ್ಯಗಳನ್ನು ರಚಿಸಿದ ಈ ಬಾದಶಹ ಬರೆದಿಟ್ಟಿದ್ದಾದರೂ ಏನು? ಕೊನೆಯ ಪಂಕ್ತಿಗಳು ಹೀಗಿವೆ:

"... ಇತನಾಹಿ ಬದನಸೀಬ ಝಾಫರ, ದಫನ ಕೆ ಲಿಯೆ
ದೋ ಗಜ ಜಮೀನ ಭೀ ನ ಮಿಲೆಂ ಯಾರ ಮೆ..."
'ಮಣ್ಣಾಗಲು ಎರಡು ಗಜ ಇಲ್ಲದ ಜಾಫರ್, ನಿನೇಂಥ ದುರ್ದೈವಿ!'

ಬಹಾದೂರ ಶಾಹನ ಅಭಿಮಾನಿಯೊಬ್ಬ ಇದನ್ನು ಈ ರೀತಿ ಪೂರ್ತಿಗೊಳಿಸಿದ್ದು ಎಷ್ಟು ಸಾರ್ಥಕ ಎಂದು ಓದುಗರೇ ನಿಶ್ಚಯಿಸಬೇಕು. ಇದರ ಅನ್ವಯಾರ್ಥವನ್ನು ಕೊಡುವ ಆವಶ್ಯಕತೆ ಇಲ್ಲ.

"ಬದ ನಸೀಬ ತುಮ ನ ಹೋ ಜಾಫರ
ಜುಡಾ ಹೈ ತೇರಾ ನಾಮ ಹಮೇಶಾ ಗಝಲ್ ಖ್ಯಾಲಕೆ ಪೈಗಾಮಮೇ"
' ಗಝಲ್ ಖ್ಯಾಲ್ ಅಂಟಿದ ಶಾಶ್ವತ ನಂಟಿನ ಜಾಫರ್ ನಿನೇಕೆ ದುರ್ದೈವಿ?'

ಇದರರ್ಥ ಇಷ್ಟೆ. ಸಂಗೀತದ ಚರಿತ್ರೆಯ ವಿಷಯ ಬಂದಾಗ ಇದರಲ್ಲಿಯ ಉಸ್ತಾದ್, ಪಂಡಿತ, ಆಚಾರ್ಯ, ವಾಗ್ಗೇಯಕಾರ, ಗಾಯಕ, ನಾಯಕ ಅಥವಾ ಭಕ್ತಿಪರಾಯಣ ಪ್ರಚಾರಕರು - ಇವರು ಬಾಳಿದ್ದು, ಬದುಕಿದ್ದು ಇಂತಿಂತಹ ರಾಜ ಮಹಾರಾಜರ ಕಾಲದಲ್ಲಿ ಎಂಬುದನ್ನು ನಮೂದಿಸಲೇಬೇಕಾಗುತ್ತದೆ. ಗೋಪಾಲ ನಾಯಕ ಮತ್ತು ಅಮೀರ ಖುಸ್ರೋವಿನ ಬಗ್ಗೆ ಬರೆಯುವಾಗ ಸಂದರ್ಭೋಚಿತವಾಗಿ ಅಲ್ಲಾವುದ್ದೀನ ಖಿಲಜಿಯ (13ನೇ ಶತಮಾನ)ಹೆಸರು ಬಂದೇ ಬರುತ್ತದೆ. ಅದರಂತೆ ತಾನಸೇನ ಬಾಳಿದ್ದು, ಬದುಕಿದ್ದು ದಿಲ್ಲಿಯ ಅಕ್ಬರ್ (16ನೇ ಶತಮಾನ) ಮತ್ತು ಗ್ವಾಲಿಯರ್‌ನ ಮಾನ್‌ಸಿಂಹ ತೊಮರ್ ಇವರ ಕಾಲದಲ್ಲಿ. ಅಂದಿನಿಂದ ಕಾಬೂಲ್, ಕಂದಹಾರ್, ಲಾಹೋರ್ ಇವೆಲ್ಲ 60-70 ವರ್ಷಗಳ ಹಿಂದಿನ ತನಕವೂ ಉತ್ತರಾದೀ ಸಂಗೀತದ ಕ್ಷೇತ್ರಗಳಾಗಿದ್ದವು. ಈಗ ಅಲ್ಲಿ ಈ ಸಂಗೀತದ ನಾಮಾವಶೇಷವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಭೀಮಸೇನ ಜೋಶಿ ಗುರುವಿನ ಶೋಧಕ್ಕೆ ಹೋದದ್ದು

ಜಾಲಂಧರ, ಲಾಹೋರ್‌ಗಳಿಗೆ. ಉತ್ತರಾದಿ ಸಂಗೀತದ ಪಾಣಿನಿ ಎಂದೆನಿಸಿಕೊಂಡ ವಿಷ್ಣು ನಾರಾಯಣ ಭಾತಖಂಡೆ ಅವರ ಶಿಷ್ಯ ಶ್ರೀಕೃಷ್ಣ ರತನಜನಕರ -ಇವರೆಲ್ಲಾ ಸಂಗೀತದ ಪಾಠಶಾಲೆಯನ್ನು ಪ್ರಾರಂಭಿಸಿದ್ದು ಲಾಹೋರಿನಲ್ಲಿಯೇ. ಋಷಿತುಲ್ಯ ವಿಷ್ಣು ದಿಗಂಬರ ಪಲುಸ್ಕರರ ಗಾಂಧರ್ವ ಮಹಾವಿದ್ಯಾಲಯದ ಸ್ಥಾಪನೆಯಾದದ್ದು ಇಲ್ಲಿಯೇ. ಈ ಮೂವರು ಮಹಾರಾಷ್ಟ್ರದವರೇ! ಆದರೆ, ಇದೇ ಲಾಹೋರಿನಲ್ಲಿ ಅಬ್ದುಲ ಕರೀಮಖಾನರ ಶಿಷ್ಯೆ ರೋಶನಾರಾ ಬೇಗಮ್, ಸಾರಂಗೀ ನವಾಜ್ ಬುಂದು ಖಾನ್ ಇವರೆಲ್ಲ ವಿಭಜನೆಯ ನಂತರ ಪಾಕಿಸ್ತಾನಕ್ಕೆ ಹೋಗಿ ಮಮ್ಮಲ ಮರುಗಿದ್ದೂ ಇದೆ. ರೋಶನಾರಾ ಬಡತನದಲ್ಲಿ ನಗರಸಭೆಯ ಒಂದು ಆಸ್ಪತ್ರೆಯಲ್ಲಿ ಸತ್ತದ್ದು, ಬುಂದುಖಾನ್ ಬೇವಾರ್ಸಿ ಸ್ಥಿತಿಯಲ್ಲಿ ದಿನಗಳೆದದ್ದು ಅತ್ಯಂತ ದುಃಖದ ಮಾತುಗಳು. ಭಾರತದಲ್ಲೇ ಇದ್ದರೆ ಕನಿಷ್ಠ ಪಕ್ಷಕ್ಕೆ ಪದ್ಮವಿಭೂಷಿತರಾಗುತ್ತಿದ್ದರೋ ಏನೋ? ಉತ್ತರಾದಿ ಸಂಗೀತಕ್ಕೆ ಇಂತಹ ದುಃಸ್ಥಿತಿ ಬಂದದ್ದು ರಾಜಕೀಯ ಧುರೀಣರ ಧರ್ಮಾಂಧತೆಯಿಂದ ಎಂದು ವಿಷಾದದಿಂದ ನಮೂದಿಸಬೇಕಾಗುತ್ತದೆ. ಕಟ್ಟರ್ ಇಸ್ಲಾಮ್‌ವಾದದಲ್ಲಿ ಸಂಗೀತಕ್ಕೆ ಸ್ಥಾನವಿಲ್ಲ. ಅಲ್ಲಿಯ ಸೂಫಿ ಧರ್ಮಪ್ರಣಾಲಿಯ ಅವನತಿ ಕೂಡ ಇದಕ್ಕೆ ಪೂರಕ ಎಂದು ಹೇಳಬಹುದು. ಇಲ್ಲದಿದ್ದರೆ, ಕಾಬೂಲ-ಕಂದಹಾರದ ಖ್ಯಾತ ಗಾಯಕ ಮಹಮ್ಮದ್ ಹುಸೇನ್ 'ಸಾರಂಗ' 40 ವರ್ಷಗಳ ತನಕವೂ ಪ್ರತಿವರ್ಷ ಮಕ್ಕಾ-ಮದೀನಾಕ್ಕೆ ಹೋದ ಹಾಗೆ ಮುಂಬಯಿ, ಪುಣೆ, ಕಲಕತ್ತಾ ಸಂಗೀತ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಬರದೇ ಇರುತ್ತಿದ್ದರೇ?

ಸೂಫೀ ಸಂಗೀತ, ಕವ್ವಾಲಿ ಇವೆಲ್ಲ ಮುಸಲ್ಮಾನರ ಆಳಿಕೆಯುಲ್ಲಿ ಊರ್ಜಿತಾವಸ್ಥೆಯನ್ನು ಮುಟ್ಟಿದ ಉತ್ತರಾದಿ ಸಂಗೀತದ ಕೆಲವು ಪರಂಪರೆಗಳು. ಔರಂಗಜೇಬ ಬಾದಶಹ (1618-1707) ಸಂಗೀತ ಕಲಾದ್ವೇಷಿಯೆಂದು ಜನಸಾಮಾನ್ಯರ ತಿಳಿವಳಿಕೆ. ರಾಗ, ಸಂಗೀತ ತಿಳಿಯದವನು ನಸುನಕ್ಕು 'ನಾನು ಔರಂಗಜೇಬ! ' ಎಂದು ಹೇಳುವ ರೂಢಿ ಇದೆ. ಆದರೆ ಈತ ಸಂಗೀತ ಬಲ್ಲವನಾಗಿದ್ದ, ಕಾವ್ಯಶಾಸ್ತ್ರವಿನೋದ ಪಾರಂಗತನಾಗಿದ್ದ ಮತ್ತು ಅತ್ಯಂತ ರಸಿಕ ಮನೋಜ್ಞನಾಗಿದ್ದನೆಂಬುದಕ್ಕೆ ದಾಖಲೆಗಳಿವೆ. ಸಂಗೀತ, ನೃತ್ಯ ಮತ್ತಿತರ ಆಸ್ಥಾನ ವಿದ್ವಾಂಸರೆಲ್ಲ ಬಾದಶಹನನ್ನು ಹೊಗಳುವುದೇ ತಮ್ಮ ಕಾಯಕವೆಂದು ಮಾಡಿಕೊಂಡಿದ್ದಾರೆ ಎಂದು ಈತ ಅರಿತುಕೊಂಡ, ಸಿಂಹಾಸನವನ್ನೇರಿದ ದಶಮಾನೋತ್ಸವದ ಕಾಲದಲ್ಲಿ, ಆಸ್ಥಾನವು ರಾಜಕೀಯಕ್ಕೆ ಸಂಬಂಧಪಟ್ಟ ಕಲಾಪಕ್ಕೆ ಇರಬೇಕೇ ಹೊರತು ಮನೋರಂಜನೆಗಾಗಿ ಅಲ್ಲ ಎಂಬ ಮಾತು ಮನದಟ್ಟಾದ ಕೂಡಲೇ ಆಸ್ಥಾನದ ಸಂಗೀತ ಕಚೇರಿಗಳಿಗೆ ಪೂರ್ಣವಿರಾಮ ಹಾಕಿದ. ಹಾಡುಗಾರಿಕೆಯನ್ನು ನಿಲ್ಲಿಸಿದರೂ ತನ್ನ ಆಸ್ಥಾನದ ಗಾಯಕರನ್ನು ಪ್ರತಿನಿತ್ಯ 'ಕುರ್ನಿಸಾತ್' ಮಾಡಿಸಲು ಈತ ಮರೆಯಲಿಲ್ಲ. 'ಬ್ರಹ್ಮ, ವಿಷ್ಣು, ಮಹೇಶ, ಗಣೇಶ ಮತ್ತು ವ್ಯಾಸ' ಇವರ ಕೃಪೆಯಿಂದ, ಹಿಂದೂಜ್ಯೋತಿಷ್ಯರಿಂದ ಮುಹೂರ್ತ ತೆಗೆಸಿ ಜುಲೈ 23, 1658ರಂದು ಸಿಂಹಾಸನಾರೂಢನಾದ! ಇದನ್ನು ಇಲ್ಲಿ ಕೊಡುವ ಕಾರಣ ಈಗಲೂ ಚಲನೆಯಲ್ಲಿರುವ ಆಗಿನ ಕಾಲದಲ್ಲಿ ರಚಿಸಿದ ಒಂದು ಧ್ರುವಪದ ರಚನೆ. ಬಾಬರನಿಂದ ಬಹಾದೂರಶಾಹನವರೆಗೆ ಪ್ರತಿಯೊಬ್ಬ ಮೊಗಲರಾಜನೂ ಸಂಗೀತ ಕಲಿಯುತ್ತಿದ್ದ ,ಎಂಬ ಮಾತನ್ನು ನೆನಪಿನಲ್ಲಿಟ್ಟುಕೊಳ್ಳುವಂತಹುದು.

ಉತ್ತರಾದಿ ಪ್ರಕಾರದ ಮಾತೆತ್ತಿದಾಗ ಆಗಿನ ಕಾಲದ ಹಿಂದೂಮಹಾರಾಜರನ್ನು ನಾವು ಮರೆಯುವ ಹಾಗಿಲ್ಲ. ಇವರೆಲ್ಲರಲ್ಲಿ 30 ವರ್ಷ (1486-1516) ರಾಜ್ಯವಾಳಿದ

ಗ್ವಾಲಿಯರ ಸಂಸ್ಥಾನದ ಮಾನಸಿಂಹ ತೋಮರನ ಕಾಲದಲ್ಲಿಯೇ ಉತ್ತರಾದಿ ಸಂಗೀತ ಲೋಕಾಭಿಮುಖವಾಯಿತು. ಭಕ್ತಿ ಪ್ರಣಾಲಿಯ ಸೂಫಿ ಸಂತರ ಸಂಗೀತವನ್ನೂ ಪುಷ್ಟಿ ಮಾರ್ಗದ ಭಕ್ತಿಸಂಗೀತವನ್ನೂ ಬ್ರಜ್ ಭಾಷೆಗಳಲ್ಲಿ ಅನೇಕ ಕವಿಗಳಿಂದ ಬರೆಸಿ ಹಾಡುಗಾರರಿಂದ ಈತ ಹಾಡಿಸಿದ. ಇವನ ಕಾಲದಲ್ಲಿ ರಚಿಸಿದ ಧ್ರುವಪದಗಳು ಎಷ್ಟು ರುಚಿಕಟ್ಟಾಗಿದ್ದವೆಂದರೆ, ದಿಲ್ಲಿಯ ಮೊಗಲರೂ ಈ ಧ್ರುವಪದಗಳನ್ನು ತಮ್ಮದಾಗಿ ಮಾಡಿಕೊಂಡರು. ಸಂಗೀತದ ಇತಿಹಾಸದಲ್ಲಿ ಮಾನಸಿಂಹನು ಬ್ರಜ್ ಭಾಷೆಗಳ ಧ್ರುವಪದ, ಖ್ಯಾಲ, ಕವ್ವಾಲಿಗಳ ಪ್ರವರ್ತಕನೆಂದು ಹೆಸರಾಗಿದ್ದಾನೆ. ಬೈಜು, ತಾನಸೇನ್, ಸ್ವಾಮಿ ಹರಿದಾಸ, ಇವರೆಲ್ಲ ಪ್ರಸಿದ್ಧಿಗೆ ಬಂದುದು ಈ ತೋಮರನ ಕಾಲದಲ್ಲಿಯೇ! ಸರಸ್ವತಿಯ ಆರಾಧಕ ಬಿಜಾಪುರದ ಎರಡನೆ ಇಬ್ರಾಹಿಮ್ ಆದಿಲ್ ಶಾಹ (1556–1627) ಕೂಡ ತೋಮರನಂತೆ ಉತ್ತರಾದಿ ಸಂಗೀತಕ್ಕೆ ಭಾರಿ ಬೆಂಬಲ ಕೊಟ್ಟ.

ತಾನಸೇನ್ ಹಾಗೂ ಬೈಜೂ ಇವರ ಜುಗಲಬಂದಿ ಚಿತ್ರಿತವಾದ 'ಬೈಜೂ ಬಾವರಾ' ಕಾಲ್ಪನಿಕ ಚಿತ್ರಪಟ. ತಾನಸೇನ್ ಕಲಿತದ್ದು ಗ್ವಾಲಿಯರ ಆಸ್ಥಾನದಲ್ಲಿ ಮತ್ತು ರೀವಾ ಸಂಸ್ಥಾನದಲ್ಲಿ. ಮೊಗಲ ಸಾಮ್ರಾಜ್ಯದ ವಿಸ್ತಾರದಲ್ಲಿ ನಾಲ್ಕೂ ದಿಶೆಗಳಲ್ಲಿ ಪರಾಜಯ ಹೊಂದಿದ ರಾಜರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡು ಅವರ ಆಸ್ಥಾನ ವಿದ್ವಾಂಸರನ್ನು ಆದರದಿಂದ ಬರಮಾಡಿಕೊಳ್ಳುವ ರೂಢಿ ಅಲ್ಲಾ ಉದ್ದೀನ್ ಖಿಲಜಿಯಿಂದ ಔರಂಗಜೇಬನ ಕಾಲದ ತನಕ ಅವ್ಯಾಹತವಾಗಿ ನಡೆಯಿತು. ಅಂದಿನ ಅಂಧಶ್ರದ್ಧೆಗಳ ಮೌಲ್ವಿಗಳ ವಿರೋಧವನ್ನು ಎದುರಿಸಿ ಸೂಫಿ ಧರ್ಮ ಸಂಸ್ಕೃತಿಯು ಉತ್ತರಾದಿ ಸಂಗೀತದ ಭದ್ರವಾದ ತಳಹದಿಯಾಯಿತು, ಆಳುವವರ ರಾಜಾಶ್ರಯದಿಂದ ಊರ್ಜಿತಾವಸ್ಥೆಗೆ ತಲುಪಿತು. ಮೀರಾಬಾಯಿ, ತುಲಸಿದಾಸರ ಭಕ್ತಿ ರಚನೆಗಳು ಅಥವಾ ವೈಷ್ಣವ ಸಂಪ್ರದಾಯದ ಚೈತನ್ಯ ಮಹಾಪ್ರಭುಗಳ ಪ್ರಭಾವ ಇದನ್ನು ಮತ್ತಷ್ಟು ಭದ್ರವಾಗಿಯೂ ಧರ್ಮಾತೀತವನ್ನಾಗಿಯೂ ಮಾಡಿತು. ಅಂದರೆ ಧರ್ಮನಿರಪೇಕ್ಷತೆಯ ಮೊದಲಿನ ಪಾಠಕ್ಕೆ ಸಂತ ಕಬೀರನೊಂದಿಗೆ ಕೆಲಮಟ್ಟಿಗೆ ಅಂದಿನ ಆಳುವ ಜನರೂ ಬೆಂಬಲವಿತ್ತಿದ್ದರು. ಇಂತಹ ಪ್ರಕ್ರಿಯೆಗಳಲ್ಲಿ ತಾನಸೇನನಿಂದ ಇಂದಿನ ಭೀಮಸೇನನವರೆಗೆ ಇದು ನಿರ್ಮಲ ಗಂಗಾಜಲದಂತೆ ಹರಿಯುತ್ತಾ ಬಂದಿದೆ.

ಗೋಸ್ವಾಮಿ ಪರಂಪರೆಯ ಶ್ರೇಷ್ಠ ಸಂಗೀತ ಸಾಧಕ ವೃಂದಾವನದ ಸ್ವಾಮಿ ಹರಿದಾಸರು ಇದರಲ್ಲಿ ಅಗ್ರಗಣ್ಯರು. (16ನೆಯ ಶತಮಾನ). ಇವರ ಸಮಾಧಿ ವೃಂದಾವನದಲ್ಲಿದೆ. ಈಗಲೂ ಅಲ್ಲಿ ಪ್ರತಿವರ್ಷ ಹರಿದಾಸ ಸ್ವಾಮಿಗಳ ಹೆಸರಿನಲ್ಲಿ ಸಂಗೀತ ಸಮಾರಾಧನೆ ನಡೆಯುತ್ತದೆ. ಕರ್ನಾಟಕದ ಸಂಗೀತದಲ್ಲಿ ಪುರಂದರದಾಸರ ಪದಗಳಿಗೆ ಸ್ಥಾನವಿದ್ದಂತೆ ಉತ್ತರಾದಿಯಲ್ಲಿ ಸ್ವಾಮಿ ಹರಿದಾಸರ ಧ್ರುವಪದಗಳನ್ನು ಈಗಲೂ ಜನ ತನ್ಮಯತೆಯಿಂದ ಹಾಡುತ್ತಾರೆ. ಬ್ರಜಭಾಷೆಯನ್ನು ರಾಜಾಶ್ರಯದಿಂದ ಲೋಕಾಶ್ರಯದೆಡೆಗೆ ಒಯ್ಯಲು ಬೈಜು, ಅವನ ಮಗ ಬಕ್ಷು, ಮತ್ತು ಹರಿದಾಸರು ತುಂಬಾ ಸಹಾಯ ಮಾಡಿದ್ದಾರೆ. ಅವರು ಪಂಜಾಬ್‌ದ ಸಾರಸ್ವತ ಸಮಾಜಕ್ಕೆ ಸೇರಿದ ಹರಿದಾಸ ಸ್ವಾಮಿಗಳ ಆಧ್ಯಾತ್ಮಿಕ ದೃಷ್ಟಿಕೋನವನ್ನಿಟ್ಟುಕೊಂಡೇ ಈ ಸಂಗೀತ ಪ್ರವೃತ್ತಿಯನ್ನು ಹುಲುಸಾಗಿ ಬೆಳೆಸಿದರು.

ಇನ್ನು ತಾನಸೇನ್‌ನ ಬಗ್ಗೆ ನೋಡುವ. ಅಕಬರ್‌ನು ತಾನಸೇನನನ್ನು ಕರತಂದಿದ್ದು ಗ್ವಾಲಿಯರದಿಂದ. ತಾನಸೇನನು ಆಗ್ರಾದ ಅಕಬರ್‌ನ ದರ್ಬಾರಿಗೆ ರೇವಾ ಮಾರ್ಗವಾಗಿ ಗ್ವಾಲಿಯರ್‌ನಿಂದ ಬಂದಾಗ ಮಧ್ಯವಯಸ್ಕನಾಗಿದ್ದ. ಅಕ್ಬರನು ತಾನಸೇನನಿಗೆ ಕೊಟ್ಟ ಬಿರುದು 'ಕಂಠಾಭರಣ ವಾಣೀವಿಲಾಸ'ನೆಂದು. ತಾನಸೇನ್ ತೀರಿಕೊಂಡಾಗ ಅಕ್ಬರ್ ದುಃಖಾತಿರೇಕದಿಂದ ರೋದಿಸುತ್ತಾ 'ಕಳೆದ ಸಾವಿರ ವರ್ಷಗಳಲ್ಲಿ ತಾನಸೇನನಂತಹ ಗಾಯಕ ಹುಟ್ಟಿರಲಿಲ್ಲ' ಎಂದು ಹೇಳಿದ ಮಾತು 'ಅಕಬರ್‌ನಾಮಾ' ಪುಸ್ತಕದಲ್ಲಿ ಅಂಕಿತವಾಗಿದೆ. ಪ್ರಸಾರ ಮಾಧ್ಯಮಗಳಿಲ್ಲದ ಆ ಕಾಲದಲ್ಲಿ ನಿಜಕ್ಕೂ ತಾನಸೇನನ ಸಾವು ಸಾಂಸ್ಕೃತಿಕ ದೃಷ್ಟಿಯಿಂದ ಬಾದಶಹನಿಗೆ ಒಂದು ಆಘಾತವಾಗಿರಬೇಕು. ಜಹಾಂಗೀರನಾಮಾ, ಇಕ್ಬಾಲ್‌ನಾಮಾಗಳು ಜಹಾಂಗಿರ್ ಮತ್ತು ಶಾಹಜಹಾನನ ಆಳಿಕೆಯಲ್ಲಿ, ಪ್ರಸಿದ್ಧಿ ಪಡೆದ ಬೈಜು-ಬಕ್ಷುಗಳ ಸಾವಿರ ಧ್ರುವಪದಗಳ 'ಸಹಸರಸ' ಇವೆಲ್ಲ ಪ್ರಮಾಣವೆಂದು ತಿಳಿದುಕೊಂಡರೆ ತಾನಸೇನ ಹುಟ್ಟಿದ್ದು 1480–1490ರಲ್ಲಿ ಎಂಬುದು ಇತಿಹಾಸಕಾರರ ಹೇಳಿಕೆ. ತೇಲಂಗ ಅಥವಾ ಬ್ರಾಹ್ಮಣ ಕುಲೋತ್ಪನ್ನ ತಾನಸೇನ ಹುಟ್ಟಿಬೆಳೆದು ಬೈಜು, ಬಕ್ಷು ಹಾಗೂ ಶೇಖ ಮಹಮ್ಮದರಲ್ಲಿ ಸಂಗೀತವನ್ನು ಕಲಿತ. ಸಾಯುವಾಗ ಅವನ ವಯಸ್ಸು 95. ಈತನ ಧರ್ಮಪರಿತ್ಯಾಗದ ವಿಷಯ ಇತಿಹಾಸಕಾರರಿಗೆ ಬಿಟ್ಟದ್ದು. ತಾತ್ಪರ್ಯ ಇಷ್ಟೆ. ತಾನಸೇನ, ತಾನಸೇನನಾಗಿ ಉಳಿದ, ಮಗ ಬಿಲಾಸಖಾನನಾದ (ಬಿಲಾಸ್ ಖಾನಿ ತೋಡಿ – ಬಿಲಾಸ್ ಖಾನನ ಹೆಸರನ್ನು ಅಜರಾಮರ ಮಾಡಿದ ಉತ್ತರಾದಿ ರಾಗ). ತಾನಸೇನನ ಮತ್ತೊಬ್ಬ ಮಗ ತಾನತರಂಗ್ ಖಾನನಾದ. ಮೊಮ್ಮಕ್ಕಳೆಂದರೆ ಸೌಹಿಲ್ ಸೇನ್ ಮತ್ತು ಸುಧೀನ್ ಸೇನ್. ತಾನಸೇನನ ಅಳಿಯ ಲಾಲಖಾನ್, ಶಾಹಜಹಾನನ ಕಾಲದಲ್ಲಿ ಒಬ್ಬ ಉತ್ತಮ ಹಾಡುಗಾರನೆಂದು ಹೆಸರು ಗಳಿಸಿದ. ಮುಂದೆ ಈ ವಂಶದಲ್ಲಿ ಗಂಡು ಮಕ್ಕಳಿಲ್ಲದ್ದರಿಂದ ಈ ಸೇನಿಯಾ ಪರಂಪರೆ ಅಂದರೆ ತಾನಸೇನನ ವಂಶಾವಳಿ ರಾಮಪುರ–ಸೆಹಸ್ವಾನ ಘರಾಣೆಯ ಈಗಿನ ಹಾಡುಗಾರ ಗುಲಾಮ ಮುಸ್ತಾಫಾ ಖಾನನ ತನಕ ಮುಟ್ಟುತ್ತದೆ. ತಾನಸೇನನ ಶಿಷ್ಯೋತ್ತಮರಿಂದ ಮೈಹರ್ ಘರಾಣೆಯು ಅಲ್ಲಾವುದ್ದೀನ ಖಾನನ ತನಕ ನಡೆದು ಬಂದು ಅನ್ನಪೂರ್ಣಾದೇವಿಯ ತನಕ ಮುಂದುವರಿಯುತ್ತದೆ. ತಾನಸೇನನ ಸಮಾಧಿ ಗ್ವಾಲಿಯರ್‌ನಲ್ಲಿದ್ದು ಪ್ರತಿವರ್ಷ ತಾನಸೇನ ಸಮಾರೋಹವನ್ನು ಅದ್ದೂರಿಯಿಂದ ಆಚರಿಸಲಾಗುತ್ತದೆ.

ಜಹಾಂಗೀರನ ಕಾಲದಲ್ಲಿ ಲಾಲ್ ಖಾನ್, ಖ್ಯಾತ ಹಾಡುಗಾರ. ಶಾಹಜಹಾನನ ಕಾಲದಲ್ಲಿ ಕೂಡ ಲಾಲ್ ಖಾನನು ತನ್ನ ಮೊಮ್ಮಕ್ಕಳೊಂದಿಗೆ ಕಚೇರಿ ನಡೆಸುತ್ತಿದ್ದನಂತೆ. ಆಗ ಅವನಿಗೆ 90 ವರ್ಷ ವಯಸ್ಸು. ತಾನಸೇನನ ಮತ್ತೊಬ್ಬ ಮರಿಮಗ ಖುಶಾಲ್ ಖಾನನು ಈಗಿನ ಕೆಲ ಕಲಾವಿದರಂತೆ ರಾಜಕೀಯ ಧುರೀಣರೊಂದಿಗೆ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದ. ಔರಂಗಜೇಬನ ಕಾಲದಲ್ಲಿ ಈತ ಆಸ್ಥಾನ ಗಾಯಕನಾಗಿದ್ದ. ಅಂದರೆ, ಔರಂಗಜೇಬನು ತನ್ನ ಆಸ್ಥಾನದಲ್ಲಿ ಸಂಗೀತಕ್ಕೆ ಪೂರ್ಣವಿರಾಮ ಕೊಡುವವರೆಗೆ ಅಷ್ಟೆ!

ಗಝಲ್, ಕವ್ವಾಲಿ, ಧ್ರುವಪದಗಳೊಂದಿಗೆ ಈಗ ತುಂಬಾ ಪ್ರಚಾರದಲ್ಲಿದ್ದ ಖಯಾಲ್ ಪ್ರಕಾರದ ಪ್ರಸಿದ್ಧಿ ರಾಜಧಾನಿ ಆಗ್ರಾದಿಂದ ಸುತ್ತಮುತ್ತಲೂ ಹರಡಲು ಪ್ರಾರಂಭವಾದದ್ದು ಔರಂಗಜೇಬನ ಅಂತ್ಯಕಾಲದಲ್ಲಿ. ನಿಯಾಮತ್ ಖಾನ ಊರ್ಫ ಸದಾರಂಗನು ಹುಟ್ಟಿ ಬೆಳೆದದ್ದು ಔರಂಗಜೇಬನ ಮಗ ಬಹಾದ್ದೂರ್ ಖಾನನ ಆಳ್ವಿಕೆಯಲ್ಲಿ. ಬಹಾದ್ದೂರ್

ಖಾನನ ಮಗ ಮಹಮ್ಮದ್ ಶಾಹ ರಂಗಿಲೆಯ (1719–1748) ಕಾಲದಲ್ಲಿ ಸದಾರಂಗನು ಬಹಳ ಪ್ರಸಿದ್ಧಿಯನ್ನು ಪಡೆದ. ಈತನ ಅಂಕಿತವಿರುವ ಖಯಾಲಿನ ಬಂದಿಶ್‌ಗಳು (ಪದಗಳು) ಈಗಲೂ ಉತ್ತರಾದಿ ಪ್ರಣಾಲಿಯ ಹಾಡುಗಾರರು ಭಾವಪೂರ್ಣತೆಯಿಂದ ಪ್ರಸ್ತುತಪಡಿಸುತ್ತಾರೆ. ಸದಾರಂಗನ ಸೋದರಳಿಯ ಅದಾರಂಗನು ಅವನ ಶಿಷ್ಯೋತ್ತಮನು ಕೂಡ. ಬೀನ್‌ವಾದ್ಯವನ್ನು ಕೂಡ ಈತ ಅತ್ಯಂತ ಸಲೀಸಾಗಿ ನುಡಿಸುತ್ತಿದ್ದ. "ಮೂರು ತಂತಿಗಳ ಒಂದು ಅದ್ಭುತ ವಾದ್ಯ (ಸಿತಾರ್?) ಮೇಲೆ ಯಾವುದೇ ರಾಗ ರಾಗಿಣಿಗಳನ್ನು ಇತರರು ಹಾಡುವಂತೆ ಬಾರಿಸುತ್ತಿದ್ದ" .

1761ರ ಸುಮಾರಿಗೆ ನಾದಿರಶಾಹನ ದಾಳಿಯ ಬಳಿಕ ಮಹಮ್ಮದ ಶಾಹ ರಂಗೀಲೆಯ ಮನಸ್ಸು ಮೊದಲಿನಂತೆ ಕಲಾಸಕ್ತವಾಗಿ ಉಳಿಯಲಿಲ್ಲ. ಅವನ ಆಸ್ಥಾನದ ಗಾಯಕರೆಲ್ಲ ಒಬ್ಬೊಬ್ಬರಾಗಿ ಬಿಟ್ಟು ಬೇರೆ ಸಂಸ್ಥಾನಗಳಿಗೆ ಕೂಚುಮಾಡಿದರು. ಅವನ ಕೋಮಲಾಂಗಿ, ಪ್ರಿಯಸಖಿ, ಕಮಲಾಬಾಯಿ, ದಿಲ್ಲಿ ಬಿಟ್ಟು ಅವಧ ಸಂಸ್ಥಾನದೆಡೆ ಹೆಜ್ಜೆಯಿಟ್ಟರೆ, ಅದಾರಂಗನ ಪ್ರಿಯಶಿಷ್ಯ ಕರೀಮ್ ಸೇನ್ ಕರ್ನಾಟಕದ ಹೈದರಾಲಿಯ ಆಶ್ರಯಕ್ಕೆ ಬಂದ. ಅವನ ಮಗ ಹೈದರಾಬಾದಿನ ನಿಜಾಮನೆಡೆಗೆ ಹೋದ. ಹೀಗೆ, ರಾಮಪುರ್, ಹೈದರಾಬಾದ್, ಅವಧ್, ಬನಾರಸ್, ಇವೆಲ್ಲ ಹೊಸ ಸಾಂಸ್ಕೃತಿಕ ಕೇಂದ್ರಗಳಾದದ್ದು ನಾದಿರಶಾಹನ ಕೃಪೆಯಿಂದಲೇ ಎಂದು ಹೇಳಬಹುದು!

ಮಧ್ಯಪ್ರದೇಶದ ರೇವಾ ಸಂಸ್ಥಾನವು ತಾನಸೇನನ ಕಾಲದಿಂದಲೂ ಈವರೆಗೆ ಅಂದರೆ 1970ರ ತನಕ ಕೆಲ ಕಲಾವಿದರಿಗೆ ಸಂಬಳ ಕೊಡುತ್ತಿದ್ದುದಕ್ಕೆ ದಾಖಲೆಗಳಿವೆ. ಈ ಸಂಸ್ಥಾನದ ವಿಶ್ವನಾಥ ಸಿಂಹ, ಕಾಶಿ ನರೇಶ್ ಉದಿತ್ ನಾರಾಯಣ್, ರಾಮಪುರದ ಅಹಮ್ಮದ್ ಅಲಿ ಮತ್ತು ಲಖನೌದ ವಾಜಿದ್ ಅಲಿ ಇವರೆಲ್ಲ ಹತ್ತೊಂಬತ್ತನೇ ಶತಮಾನದಲ್ಲಿ ಉತ್ತರಾದಿ ಪ್ರಣಾಲಿಗೆ ಆಶ್ರಯವನ್ನು ಕೊಟ್ಟ ಗುಣಗ್ರಾಹಿಗಳು. ದಿಲ್ಲಿಯ ಪತನದಿಂದ ಈ ಎಲ್ಲಾ ಹೊಸ ಕೇಂದ್ರಗಳು ಶಕ್ತಿಶಾಲಿಗಳಾದವು. ಅಂತೆಯೇ ಠುಮರಿ, ದಾದರಾ ಪ್ರಕಾರಗಳು ಕಥಕ್ ನೃತ್ಯದೊಂದಿಗೆ ಹೆಜ್ಜೆ ಹಾಕಿ ಮುಂದೆ ಬಂದವು. ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ದಿಲ್ಲಿಯ ತಾನರಸ್ ಖಾನ್ ತುಂಬಾ ಹೆಸರು ಗಳಿಸಿದ್ದರು. ತಾನರಸ ಖಾನರ ಅಸಂಖ್ಯ ಶಿಷ್ಯಸಂಪತ್ತಿಯಲ್ಲಿ ಅವರ ಮಗ ಉಮರಾವ್ ಖಾನ್, ಈ ರೂಢಿಯನ್ನು ನಡೆಸಿಕೊಂಡು ಹೋದರೂ ತಾನ್‌ಗಳ ಜಟಿಲತೆಯೇ ರಂಜಕತೆಯ ಮುಖ್ಯಭಾಗವೆಂದು ತಿಳಿದುಕೊಂಡು, ಅದನ್ನೇ ರಿಯಾಜು ಮಾಡಿ ರಾಗರಂಗಗಳನ್ನು ಬದಲಾಯಿಸಿದುದರಿಂದ ಈ ಘರಾಣೆ ಮುಂದೆ ನಾಸೀರ್ ಅಹಮರ್ ಖಾನರೊಂದಿಗೆ ಲುಪ್ತವಾಯಿತು. ಆದರೆ ವಾದ್ಯ ಸಂಗೀತ ಸಂಪ್ರದಾಯದಲ್ಲಿ ಬಾರಿಸುವ ಕಲಾವಿದರು ನಮ್ಮಲ್ಲಿ ಇನ್ನೂ ಇದ್ದಾರೆ. ಕಾಶಿಯ ಸುಪ್ರಸಿದ್ಧ ಬಿಸ್ಮಿಲ್ಲಾಖಾನರು ಶಹನಾಯಿ ನವಾಜ ಅಹಮ್ಮದ ಅಲಿ ಪರಂಪರೆಯವರು.

ಹದ್ದು–ಹಸ್ಸುಖಾನ್ ಗ್ವಾಲಿಯರವಾಲೆ: ಭೀಮಕಾಯ ಹೊತ್ತ ಈ ಬಂಧುಗಳು ತಂದೆ ನಥನ್ ಖಾನರಿಂದ ಶಿಕ್ಷಣ ಪಡೆದರು. ಇವರ ಮೊಟ್ಟ ಮೊದಲಿನ ಶಿಷ್ಯರೆಂದರೆ ಶಂಕರ ಪಂಡಿತ, ದೀಕ್ಷಿತ, ಬಾಲಗುರು ಜೋಶಿ ಮೊದಲಾದವರು. ಶಂಕರ ಪಂಡಿತರು ಅನೇಕ ಶಿಷ್ಯರಿಗೆ ತರಬೇತಿಯನ್ನು ನೀಡಿದರು. ವಾಸುದೇವ ಜೋಶಿಯ ಜೊತೆ ಬಾಳಕೃಷ್ಣ ಈಚಲಕರಂಜೀಕರ ಅವರು ಈ ಪರಂಪರೆಗೆ ಸೇರಿದವರು.

ಕವ್ವಾಲಿ ಎಂದರೆ ಸೂಫಿ ಭಕ್ತಿ ಸಂಗೀತ, ಇಸ್ಲಾಮ್ ಧರ್ಮದ ಸೂಕ್ತಿಪಠಣದ ಭಕ್ತಿಸಂಗೀತ. ಅರಬ್ಬಿ ಭಾಷೆಯಲ್ಲಿ ಕೌಲ ಅಂದರೆ ಸೂಕ್ತಿ, ಸುಭಾಷಿತ. ಕೌಲ ಹಾಡುವವರೆಲ್ಲ ಕವ್ವಾಲರು (ಅಮೀರ ಖುಸ್ರೋ ಹೇಳಿದ್ದು). ಹಿಂದೂಗಳೂ ಇದರಲ್ಲಿ ಭಾಗವಹಿಸಿ ಪ್ರಖ್ಯಾತರಾಗಿದ್ದರು. ಶಂಕರ ಶಂಭು ಕವ್ವಾಲರು 1950–70ರಲ್ಲಿ ಪಾಕಿಸ್ತಾನಕ್ಕೆ ಹೋಗಿ ಅಲ್ಲಿ ಜಯಭೇರಿ ಹೊಡೆದು ಬಂದಿದ್ದರು. ಗ್ವಾಲಿಯರ ಪರಂಪರೆಯವರಲ್ಲಿ ಈ ಕವ್ವಾಲ ಬಚ್ಚೆಯವರಿಗೆ ಉನ್ನತ ಸ್ಥಾನವಿದೆ. ಈ ಕವ್ವಾಲ ಬಚ್ಚೆಯರಲ್ಲಿ ಬಡೇ ಮಹಮ್ಮದ ಖಾನ ಕವ್ವಾಲ ಬಚ್ಚೆ, ನಿಯಾಮತ ಖಾನರಿಂದ ತಾಲೀಮು ಪಡೆದಿದ್ದರು. ಮುಂದೆ ಈ ಕವ್ವಾಲ ಪದ್ಧತಿ ಫೈಯಾಜ ಖಾನ ಆಗ್ರಾವಾಲೆ ಅವರ ಮೊಮ್ಮಗ, ರಂಗೀಲೆ ಘರಾಣೆಯ ಗುಲಾಮ ರಸೂಲರಿಂದ ವಿಕಸಿತಗೊಂಡಿತು. ಈ ಕವ್ವಾಲ ಬಚ್ಚೆಯವರ ರೂಢಿಯನ್ನು ಉಳಿಸಿಕೊಂಡು ಮುಂದೆ ಬಂದವರೆಂದರೆ ಹಡ್ಡು–ಹಸ್ಸು ಖಾನ್ ಬಂಧುಗಳು. ಖ್ಯಾಲ್ ಪ್ರಕಾರದ ಅಧ್ವರ್ಯುಗಳೆಂದು ಹೆಸರು ಮಾಡಿದರು. ಅಲ್ಲಾದಿಯಾ ಖಾನರ ಚರಿತ್ರೆಯಲ್ಲಿ ಅವರು 15 ವರ್ಷದವರಿದ್ದಾಗ ಹಡ್ಡುಖಾನರ ಗಾಯನದ ಬಗ್ಗೆ ತಾವು 'ಅವರ ಮಂದ್ರಸಪ್ತಕದ ತಾನಪೂರ್ಣ 'ಪಲ್ಟೆ'ಯನ್ನು ಕೇಳಿ ಮಂತ್ರಮುಗ್ಧನಾಗಿದ್ದೆ' ಎಂದು ಬರೆಯಲಾಗಿದೆ. ರಾಜಾ ಭೈಯ್ಯಾ ಪೂಛ್‌ವಾಲೆ, ಓಂಕಾರನಾಥ ಠಾಕೂರ್, ಕೃಷ್ಣರಾವ್ ಶಂಕರ ಪಂಡಿತ – ಇವರೆಲ್ಲ ಇದೇ ಪ್ರಣಾಲಿಗೆ ಸೇರಿದವರು. ರಾಮಕೃಷ್ಣ ಬುವಾ ವಝೆ, ಧಾರವಾಡದ ಗುರುರಾವ್ ದೇಶಪಾಂಡೆ, ಬಿ.ಆರ್. ದೇವಧರ್ ಮೊದಲಾದವರು.

ಇವರಲ್ಲಿ ಏಕಮೇವಾದ್ವಿತೀಯರೆನಿಸಿಕೊಂಡ, ಕರ್ನಾಟಕದ ಸೂಳೆಭಾವಿಯಲ್ಲಿ ಹುಟ್ಟಿ ಮುಂದೆ ಮಧ್ಯಪ್ರದೇಶದ ದೇವಾಸವನ್ನು ತನ್ನ ಕರ್ಮಭೂಮಿಯನ್ನಾಗಿ ಮಾಡಿಕೊಂಡ ಕುಮಾರ ಗಂಧರ್ವ ಉರ್ಫ ಶಿವಪುತ್ರ ಕೊಂಕಾಳಿಯವರ ಕಾರ್ಯ ಮಹತ್ತರವಾದದ್ದು. ಈ ಘರಾಣೆಯ ಕೆಲ ವೈಶಿಷ್ಟ್ಯಗಳನ್ನು ತಮ್ಮದನ್ನಾಗಿ ಮಾಡಿಕೊಂಡರೂ ಕ್ಷಯರೋಗದಿಂದಾಗಿ ತಮ್ಮ ಪುಪ್ಪುಸದ ಒಂದು ಭಾಗವನ್ನು ಕಳೆದುಕೊಂಡರೂ ತಮ್ಮ 'ಅಪೂರ್ಣ' ಶಾರೀರಕ್ಕೆ ಹೊಂದುವಂತೆ, ಇಡೀ ಸಂಗೀತ ಪ್ರಣಾಲಿಯನ್ನೇ ಮಣಿಸಿದ ಅದಮ್ಯಶಕ್ತಿಯ, ಸ್ವಯಂಭೂ ಗಾಯಕರು ಅವರು! ಇವರ ಮಗ ಮುಕುಲ ಶಿವಪುತ್ರ ಮತ್ತು ಮಗಳು ಕಲಾಪಿನಿ ಈ 'ಕುಮಾರ ಪ್ರಣಾಲಿ'ಯನ್ನು ಮುಂದುವರಿಸಿದ್ದಾರೆ.

ಹೀಗೆಯೇ ಮತ್ತೊಬ್ಬ ಮೇರುವ್ಯಕ್ತಿ ಎಂದರೆ ಇನಾಯತ್ ಹುಸೇನ್ ಖಾನ್. ಆಗಿನ ಕಾಲದ ಪದ್ಧತಿಯಂತೆ ಮಗನಿಗಾಗಿ 'ಪೂರಿ ತಾಲೀಮ್', ಮನೆಯ ಅಳಿಯನಿಗಾಗಿ 'ಆಧಿ ತಾಲೀಮ್', ಹಾಗೂ ಮಿಕ್ಕಿದ ಸಂಗೀತಜ್ಞಾನವೆಲ್ಲ ಶಿಷ್ಯವೃಂದಕ್ಕೆಲ್ಲಾ ಮೀಸಲಾಗಿತ್ತು. ಪುಣ್ಯಕ್ಕೆ ಬಹಾದೂರ್ ಖಾನರ ಶಿಷ್ಯ ಮತ್ತು ಅಳಿಯನೆಂದರೆ ಇನಾಯತ್ ಹುಸೇನ್. ಇವರಿಂದಲೇ ವಿಷ್ಣು ನಾರಾಯಣ ಭಾತ್‌ಖಂಡೆಯವರು ಸಂಗೀತ ಕಲಿತರು ಮತ್ತು 20ನೆಯ ಶತಮಾನದ ಸಂಗೀತದ ಪಾಣಿನಿ ಎಂದು ಹೆಸರು ಗಳಿಸಿದರು, ಘರಾಣಾದ ನಾಲ್ಕು ಗೋಡೆಗಳಲ್ಲಿ ಬಂದಿಯಾಗಿದ್ದ ಮತ್ತು ಕೇವಲ ರಾಜಾಶ್ರಯ ಪಡೆಯುತ್ತಿದ್ದ, ಉತ್ತರಾದೀ ಸಂಗೀತವನ್ನು ಸಾಮಾನ್ಯರಿಗೆ ಅರ್ಥವಾಗಿಸುವಂತಹ ಮಹತ್ಕಾರ್ಯವನ್ನು ಮಾಡಿದರು. ಭಾತ್‌ಖಂಡೆ 15

ವರ್ಷದವರಾಗಿದ್ದಾಗ ಇನಾಯತ್ ಖಾನರಿಂದ ಬೀನ್‌ವಾದ್ಯವನ್ನು ಕಲಿಯುತ್ತಿದ್ದರಂತೆ. ಇನಾಯತ್ ಹುಸೇನ್‌ರ ವೃತ್ತಿಪರ ಶಿಷ್ಯರೆಂದರೆ ರಾಮಕೃಷ್ಣ ಬುವಾ ವಝೆ, ನಜೀರ್ ಖಾನ್ ಭೆಂಡಿ ಬಝಾರವಾಲ (ಮುಂಬಯಿ), ಹಾಗೂ ಈಗಿನ ಸರೋದ್ ಗುರು ಅಮ್ಜದ ಅಲಿಯವರ ತಂದೆ ಹಫೀಜ್ ಖಾನ್.

ಆಗ್ರಾ ಘರಾಣೆ: ಈ ಮನೆತನದ ಮೂಲ, ಗ್ವಾಲಿಯರ್ ಘರಾಣೆಯೊಂದಿಗೆ ಇದೆ. ಹಾಜಿ ಸುಜಾನ ಈ ಮನೆತನದ ಮೂಲಪುರುಷ ಗೊಗ್ಗರು ಗಂಟಲಿನ ಘಗ್ಗೆ ಖುದಾ ಬಕ್ಷ್, ತನ್ನ ಶಾರೀರದ ನ್ಯೂನತೆಯನ್ನು ಮೊದಲೇ ಕಂಡುಕೊಂಡಿದ್ದರು. ಧ್ರುವಪದದ ಆಲಾಪನೆಯ ಅತಿ ಮಂದಗತಿ ತನಗೆ ಸಾಧ್ಯವಾಗದೆಂದು ತಿಳಿದು, ಗ್ವಾಲಿಯರಿಗೆ ಬಂದು, ಪೀರಬಕ್ಷನ ಶಿಷ್ಯನಾಗಿ, ಖಯಾಲ್ ಕಲಿತು ಅತ್ಯುತ್ತಮ ಗಾಯಕನೆಂದೆನಿಸಿಕೊಂಡರು. ತಂದೆಯವರ ಬದಿಯಿಂದ ರಂಗೀಲೆ ಘರಾಣೆಯ, ಹಾಗೂ ತಾಯಿಯವರ ಕಡೆಯಿಂದ ಆಗರಾ ಮನೆತನಕ್ಕೆ ಸೇರಿದವರು. ಹೀಗಾಗಿ, ಫೈಯ್ಯಾಜ್ ಖಾನರ ಗಾಯನದಲ್ಲಿ ಆಗ್ರಾ ಘರಾಣೆಯ ಮನೆತನದ ವೈಶಿಷ್ಟ್ಯಗಳು ಕೊಂಚ ಬದಲಾದವು. ಫಯ್ಯಾಜ್ ಖಾನರು (1886–1950) ಮೊದಲಿಗೆ ಬರೋಡಾ ಸಂಸ್ಥಾನದಲ್ಲಿದ್ದು ಆಗ್ರಾ ಮನೆತನದ ಪ್ರಭಾವ ಭಾರತದಾದ್ಯಂತ ಬೀರುವುದಕ್ಕೆ ಇಡೀ ಭಾರತ ಸಂಚಾರ ಮಾಡಿ ಕಚೇರಿಗಳನ್ನು ನಡೆಸಿದರು. ಮೈಸೂರು ಸಂಸ್ಥಾನದಲ್ಲಿ ಪ್ರತಿವರ್ಷ ದಸರಾ ಉತ್ಸವದಲ್ಲಿ ಹಾಡುವ ಪರಿಪಾಠವಿಟ್ಟುಕೊಂಡು ಮೈಸೂರು ಅರಸರಿಂದ 'ಅಫತಾಬ್–ಎ–ವಮೌಸೀಕಿ' ಎಂಬ ಬಿರುದನ್ನೂ ಪಡೆದರು. ಭಾತ್‌ಖಂಡೆಯವರು ಉತ್ತರಾದಿ ಸಂಗೀತ ಪ್ರಸಾರಕ್ಕಾಗಿ ಏರ್ಪಡಿಸಿದ 4–5 ಸಂಗೀತ ಉತ್ಸವಗಳಲ್ಲಿ ಫೈಯ್ಯಾಜ್ ಖಾನರು ತಪ್ಪದೇ ಭಾಗವಹಿಸುತ್ತಿದ್ದರು. ಫೈಯ್ಯಾಜ್ ಖಾನ ಸಾಹೇಬರನ್ನು ಉತ್ತರಾದಿ ಸಂಗೀತದ ಆಗ್ರಾ ಪರಂಪರೆಯ 'ಯುಗಪುರುಷ'ರೆಂದೇ ತಿಳಿಯಬೇಕು. ಇವರ ಶಿಷ್ಯರಲ್ಲಿ ಬೆಂಗಳೂರಿನ ರಾಮರಾವ್ ನಾಯಕ, ಆತಾ ಹುಸೇನ್, ಪಂಡಿತ್ ರತನಜನಕರ್ ಮತ್ತು ಆಗ್ರಾ ಮನೆತನ ಮುಂದೆ ನಡೆಸಿಕೊಂಡು ಹೋಗುವ ಭಾರವನ್ನು ಹೊತ್ತ ವಿಲಾಯತ್ ಹುಸೇನ್ ಖಾನರು ಇದ್ದಾರೆ. ಇವರ ಬಳಿಕ ಇವರ ಬಂಧು ಖಾದೀಮ್ ಹುಸೇನ್ ಖಾನರು ಈ ಸಂಗೀತ ಮನೆತನದ ಮುಖ್ಯಸ್ಥರಾದರು. ಪಂಡಿತ್ ದಿನಕರ ಕಾಯ್ಕಿಣಿ, ಆಚಾರ್ಯ ಎಸ್.ಸಿ.ಆರ್. ಭಟ್ಟ ಇವರೆಲ್ಲ ಶ್ರೀ ಕೃಷ್ಣ ರತನಜಕರರಿಂದ ಶಿಕ್ಷಣವನ್ನು ಪಡೆದು ನೂರಾರು ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿದ್ದಾರೆ. ಸ್ವಾಮಿ ವಲ್ಲಭದಾಸರೂ ಆಗ್ರಾ ಸಂಗೀತ ಮನೆತನದವರು.

ಜಯಪುರ್ ಘರಾಣೆ: ಪ್ರತಿಯೊಂದು ಮನೆತನದಲ್ಲಿ ಒಬ್ಬ ಪ್ರತಿಭಾವಂತ ಮತ್ತು ಪ್ರಯೋಗಶೀಲ ಗಾಯಕನಿದ್ದರೆ ಆ ಘರಾಣೆಯ ಚೌಕಟ್ಟು ತಂತಾನೇ ಕಳಚಿ ಬೀಳುವುದು ಸಹಜ. ಇಂತಹ ಉದಾಹರಣೆ ಉತ್ತರಾದಿ ಸಂಗೀತದಲ್ಲಿ ಬಹಳ ಇವೆ. ಇವರೇ ಉತ್ತರಾದಿ ಸಂಗೀತದ ಮೇರು ವ್ಯಕ್ತಿಗಳು. ಅಲ್ಲಾದಿಯಾ ಖಾನ್ ಸಾಹೇಬರು ಇಂತಹ ಮೇರುವ್ಯಕ್ತಿಗಳಲ್ಲಿ ಒಬ್ಬರು. ಈ ಪರಂಪರೆಗೆ, ಧ್ರುವಪದ ಗಾಯನದ ಹೊಳಪನ್ನು ಕೊಟ್ಟು ಖಯಾಲ್ ಗಾಯನಕ್ಕೆ ಅಳವಡಿಸಿ, ವಕ್ರ ತಾನಗಳ ಸಿಡಿಲಿನಂತಹ ಏರಿಳಿತದ ಪ್ರಕಾರಗಳನ್ನು ಇವರು ಪ್ರಚಾರದಲ್ಲಿ ತಂದರು. ಹದಿನೇಳನೆಯ ಶತಮಾನದಲ್ಲಿ ತಾನರಸ್ ಖಾನ್ ಮಾಡಿದ್ದ ಪ್ರಯೋಗವನ್ನು ಇವರೂ ಮಾಡಿದರು. ಈ ಪ್ರಣಾಲಿಯ ಭಾವಿ ಶಿಷ್ಯವೃಂದ; ರಾಗದ ಶುದ್ಧತೆಯನ್ನು ತಾನ್‌ಗಳಲ್ಲಿ ಇಟ್ಟುಕೊಂಡಿದ್ದರಿಂದ,

ಹಲವು ಅಪ್ರಚಲಿತ ರಾಗಗಳನ್ನು ಕಚೇರಿಗಳಲ್ಲಿ ಹಾಡಿ 'ವಾಹವಾ', 'ಭೇಷ್' ಎಂದು ರಸಿಕರ ಮಾನ್ಯತೆ ಪಡೆದುದರಿಂದ, ಮತ್ತು ಕರ್ಮಧರ್ಮಸಂಯೋಗದಿಂದ ಅತ್ಯಂತ ಪ್ರತಿಭಾವಂತ ಶಿಷ್ಯರನ್ನು 'ಪೂರಿ ತಾಲೀಮ' ಕೊಟ್ಟು ತರಬೇತಿಗೊಳಿಸಿದುದರಿಂದ ಈ ಘರಾಣೆ ಇಂದು ಬಹಳ ಊರ್ಜಿತಾವಸ್ಥೆಯಲ್ಲಿದೆ. ಜಯಪುರ-ಅತ್ರೋಳಿ ಅಥವಾ ಅಲ್ಲಾದಿಯಾ ಮನೆತನದ ಇವರ ಇಬ್ಬರು ಮಕ್ಕಳು ಮಂಜೀಖಾನ್, ಭೂರ್ಜಿಖಾನರು ತಮ್ಮದೇ ವಿಶಿಷ್ಟ ಸ್ಥಾನವನ್ನು ತಂದೆಯುವರಿದ್ದಾಗಲೇ ಪಡೆದುಕೊಂಡಿದ್ದರು. ಕೇಸರಬಾಯಿ ಕೇರಕರ್ ಮತ್ತು ಮೋಗುಬಾಯಿ ಕುರ್ಡಿಕರ್ ಇವರೆಲ್ಲ ಅಲ್ಲಾದಿಯಾ ಖಾನರ ಶಿಷ್ಯ ಪರಂಪರೆಗೆ ಸೇರಿದವರು. ನಿವೃತ್ತಿ ಬುವಾ ಸರನಾಯಕ, ಗಜಾನನ ಬುವಾ ಜೋಶಿ (ಗಾಯನ-ವಯೊಲಿನ) ಮತ್ತು ಹಿಂದಿನ ಶತಮಾನದ ಪ್ರತಿಭಾವಂತ ಗಾಯಕ ಭಾಸ್ಕರ ಬುವಾ ಬಖಲೆ ಇವರೆಲ್ಲ ಈ ಪರಂಪರೆಯ ಅಜರಾಮರ ಗಾಯಕರು. ಮಂಜೀಖಾನ ಮತ್ತು ಬುರ್ಜಿಖಾನ್ ಅವರ ಶಿಷ್ಯ ಮಲ್ಲಿಕಾರ್ಜುನ ಮನ್ಸೂರರ ಹೆಸರನ್ನು ಯಾರು ತಾನೆ ಕೇಳಿಲ್ಲ? ಈ ಘರಾಣೆಯ ಮತ್ತೊಬ್ಬ ಯುಗಪುರುಷರೆಂದರೆ ಭಾಸ್ಕರ ಬುವಾ ಬಖಲೆ (1867-1922) ಅವರು ಪ್ರತಿಯೊಂದು ಮನೆತನದ ಅಧ್ವರ್ಯುಗಳ ತಾಲೀಮನ್ನು ಪಡೆದ ಹಿಂದಿನ ಶತಮಾನದ ಮಹಾನುಭಾವರು. ಬಡೋದಾ ಸಂಸ್ಥಾನದ ಬಳಿಯ ಕರೂರ್ ಎಂಬಲ್ಲಿ ಹುಟ್ಟಿದ ಇವರಿಗೆ ಚಿಕ್ಕಂದಿನಲ್ಲಿಯೇ ಎಲ್ಲಾ ಪರಂಪರೆಯ ಸಂಗೀತ ಆಲಿಸುವ, ಅಭ್ಯಸಿಸುವ ಪ್ರಸಂಗಗಳು ಒದಗಿದವು. ಆಗ್ರಾ ಪರಂಪರೆಯ ಸಂಗೀತವನ್ನು ಆಲಿಸುವ, ಅಭ್ಯಸಿಸುವ ಪ್ರಸಂಗಗಳು ಒದಗಿದವು. ಆಗ್ರಾ ಮನೆತನದ ನಥನ್ ಖಾನರಿಂದ 'ಫಿರ್ರತ್ ಮತ್ತು ಬೋಲ್‌ತಾನ್'ವನ್ನು ಇವರು ಪಡೆದುಕೊಂಡರೆ, ಫೈಜ್ ಮಹಮ್ಮದರಿಂದ ವಿಲಂಬಿತ ಪ್ರಸ್ತುತಿಯ ಗುರುಮಂತ್ರವನ್ನು ಪಡೆದರು. ಆಲಾಪ್ ಮತ್ತು ತರಾನಾಗಳನ್ನು ಹಿಂದೆ ಹೇಳಿದ ಬಂದೇ ಅಲಿಖಾನ ಬೀನ್‌ಕಾರರಿಂದ ಪಡೆದರೆ, ಕಠಿಣ, ಅಪ್ರಚಲಿತ ರಾಗಗಳ ಪ್ರಸ್ತುತಿ ಇವರಿಗೆ ಅಲ್ಲದಿಯಾ ಖಾನರಿಂದ ದೊರಕಿತು. ಇಷ್ಟೇ ಅಲ್ಲ, ಗ್ವಾಲಿಯರ್ ಪರಂಪರೆಯ ಹಡ್ಡುಖಾನ್ ಅವರ ಸುಪುತ್ರ ಭೂಗಂಧರ್ವರೆಂದು ಪ್ರಸಿದ್ಧಿ ಪಡೆದ ರಹಿಮತ್ ಖಾನರವರಿಂದ ಉತ್ತರಾದಿ ಸಂಗೀತದ ಮಾಧುರ್ಯವನ್ನು ತಮ್ಮ ಗಾಯನದಲ್ಲಿ ಅಳವಡಿಸಿಕೊಂಡರು. ಕರ್ನಾಟಕ, ಮಹಾರಾಷ್ಟ್ರದಲ್ಲಿ ಉತ್ತರಾದೀ ಸಂಗೀತದ ಪ್ರಚಾರ ಇವರಿಂದ ಆಯಿತು. ಕೆಲಕಾಲ ಧಾರವಾಡದ ಟ್ರೈನಿಂಗ್ ಕಾಲೇಜಿನಲ್ಲಿ ಸಂಗೀತದ ಶಿಕ್ಷಕರಾಗಿದ್ದರು.

ಪತಿಯಾಲಾ ಘರಾಣೆ: ಈ ಮನೆತನದ ಅಧ್ವರ್ಯು ಬಡೆ ಗುಲಾಮ್ ಅಲಿಖಾನ್ ಸಾಹೇಬರು (1902-1968). ಪಂಜಾಬ್ ಅಂಗದ ಠುಮರಿ ಗಾಯನವನ್ನು ಇವರೂ, ಇವರಿಗಿಂತ ಇವರ ತಮ್ಮ ಬರಕತ್ ಅಲಿ ಅವರು ಬಹಳ ಚೆನ್ನಾಗಿ ಪ್ರಸ್ತುತ ಪಡಿಸುತ್ತಿದ್ದರು. ಪಂಜಾಬ್‌ದ ಕಸೂರ್‌ನಲ್ಲಿ ಜನ್ಮಿಸಿದ ಇವರು ಚಿಕ್ಕಪ್ಪ ಕಾರೇಖಾನರಿಂದ ಮತ್ತು ಅಲೈಯಾಫತ್ತು ಜೋಡಿಯ ಅಲಿಬಕ್ಷರಿಂದ ಸಂಗೀತ ಶಿಕ್ಷಣವನ್ನು ಪಡೆದರು. ಹೊಟ್ಟೆಪಾಡಿಗಾಗಿ ಕೆಲಕಾಲ ಸಾರಂಗಿಯನ್ನೂ ನುಡಿಸುತ್ತಿದ್ದರು. ಇವರ ವಾಸ್ತವ್ಯ ಪಾಕಿಸ್ತಾನದಲ್ಲಿ, ಆದರೆ ಇವರ ಹಿತಚಿಂತಕರು, ರಸಿಕವೃಂದ ಭಾರತದಲ್ಲಿ. ಲಾಹೋರದ ನಿವಾಸಿಯಾಗಿದ್ದುದರಿಂದ, ಭಾರತದ ನಾಗರಿಕನಾಗುವ ಸಂಭವವಿರಲಿಲ್ಲ. ಅಂದರೆ,

ಭಾರತದಲ್ಲಿಯೇ ಹುಟ್ಟಿಬೆಳೆದು ವಿಭಜನೆಯ ನಂತರ ಪಾಕಿಸ್ತಾನಕ್ಕೆ ಹೋದವರು ಸಲೀಸಾಗಿ ನಾಗರಿಕತ್ವವನ್ನು ಪಡೆದುಕೊಂಡರು. ಇವರೆ ಬಡೆ ಗುಲಾಮ್ ಅವರಂಥವರಿಗೆ, ವಿಭಜನೆಯ ಮೊದಲಿನ ಲಾಹೋರ ವಾಸ್ತವ್ಯದಿಂದ ಭಾರತೀಯ ನಾಗರಿಕತ್ವ ಪಡೆಯುವುದಕ್ಕೆ ಬಹಳ ಶ್ರಮಿಸಬೇಕಾಯಿತು. ಕೊನೆಗೊಮ್ಮೆ 1957ರಲ್ಲಿ ಭಾರತೀಯ ನಾಗರಿಕರಾದರು. ಬಳಿಕ ಹನ್ನೊಂದು ವರ್ಷಗಳಲ್ಲಿಯೇ ತೀರಿಕೊಂಡರು. ಇವರ ಮಗ ಮುನವರ್ ಅಲಿ ಕಲಕತ್ತೆಯ ಸಂಗೀತ ರಿಸರ್ಚ್ ಅಕಾಡೆಮಿಯಲ್ಲಿ ಗುರುಕುಲ ಪದ್ಧತಿಯಂತೆ ಸಂಗೀತವನ್ನು ಕಲಿಸುತ್ತಿದ್ದರು. ಈಗ ಈ ಮನೆತನದ ಭಾರವನ್ನು ಖ್ಯಾತ ಗಾಯಕ ಅಜಯ್ ಚಕ್ರವರ್ತಿ ಸಂಭಾಳಿಸುತ್ತಿದ್ದಾರೆ. ಇದರದೇ ಉಪಶಾಖೆಯಾದ ಮೇವಾಡ ಮನೆತನ. ಇವರ ಪ್ರಸ್ತುತಿ ಕೊಂಚ ಆಲಂಕಾರಿಕವಾಗಿದ್ದು ರಾಗದ ಕಡೆಗೆ ಸ್ವಲ್ಪ ದುರ್ಲಕ್ಷ್ಯವೆ. ಈ ಮನೆತನದ ಪಂ. ಜಸರಾಜರು ಅತ್ಯಂತ ಖ್ಯಾತಿಯನ್ನು ಪಡೆದ ಗಾಯಕರು.

ಕಿರಾನಾ ಮನೆತನ: ಪಾನಿಪತ್ತದ ಬಳಿಯ ಕೈರಾನಾ ಊರಿನಿಂದ ದಕ್ಷಿಣಕ್ಕೆ ಬಂದ ಅಬ್ದುಲ ಕರೀಮ ಖಾನ ಸಾಹೇಬರು ಈ ಉತ್ತರಾದಿ ಪ್ರಣಾಲಿಯನ್ನು ತುಂಬಾ ಲೋಕಾಭಿಮುಖರಾಗಿ ಮಾಡಿದರು. ಅವರದು ಮೂಲತಃ ಸಾರಂಗಿವಾದಕರ ಮನೆತನ. ಮೊಗಲ ಬಾದಶಹ ಜಹಾಂಗೀರನ ಕಾಲದಲ್ಲಿ ಕೈರಾನಾದಲ್ಲಿ ನೆಲೆಸಿದ ಇದು ಒಂದು ಐತಿಹಾಸಿಕ ಕುಟುಂಬ. ಕರ್ನಾಟಕ, ಮಹಾರಾಷ್ಟ್ರದ ನಿವಾಸಿಗಳು ಅಬ್ದುಲ ಕರೀಂ ಖಾನರನ್ನು ಕಿರಾನಾ ಪ್ರಣಾಲಿಯ ಪ್ರವರ್ತಕರೆಂದು ತಿಳಿದುಕೊಂಡಿದ್ದಾರೆ, ಆದರೆ, ಉತ್ತರ ಹಿಂದುಸ್ಥಾನದಲ್ಲಿ ಇದೇ ಮನೆತನದ ಇತರ ಗಾಯಕರು, ವಾದಕರು ದಿಲ್ಲಿ, ಪಾನಿಪತ್ತು ಮತ್ತು ಕಲಕತ್ತಾದಲ್ಲಿ ನೆಲೆಸಿದ್ದಾರೆ. ಇವರ ಪರಂಪರೆ ಕೊಂಚ ಭಿನ್ನವಾದದ್ದು. ಹಾಡುಗಾರಿಕೆಯಲ್ಲಿ, ನಿಯಾಜ಼ ಅಹಮ್ಮದ್-ಫೈಯ್ಯಾಜ ಅಹಮ್ಮದ್, ಕಲಕತ್ತೆಯ ಮಗರೂರ್ ಅಲಿ ಖಾನ ಹಾಗೂ ದಿಲ್ಲಿಯ ಮಣಿಪ್ರಸಾದ ಹಳೆಯ ಕಿರಾನಾ ಪರಂಪರೆಯನ್ನು ಉತ್ತರದಲ್ಲಿ ಬೆಳೆಸಿದರೆ, ಅಬ್ದುಲ ಕರೀಮ ಖಾನ ಸಾಹೇಬರು ದಕ್ಷಿಣದಲ್ಲಿ ಅತ್ಯಂತ ನಾಟ್ಯಮಯ ಪರಿಸ್ಥಿತಿಯಲ್ಲಿ ಬರೋಡಾದಿಂದ, ಮಿರಜ, ಸಾಂಗಲಿ, ಮುಂಬಯಿ ಮತ್ತು ಬೆಳಗಾವಿಯಲ್ಲಿ ವಾಸ್ತವ್ಯಮಾಡಿ ಅಸಂಖ್ಯ ಕಚೇರಿಗಳನ್ನು ನಡೆಸಿದರು. ಕರ್ನಾಟಕ ಸಂಗೀತವನ್ನೂ ಚೆನ್ನಾಗಿ ಅರ್ಥಮಾಡಿಕೊಂಡು, ಕೀರವಾಣಿ ಮತ್ತು ಸಿಂಧುಭೈರವಿಯಂತಹ ಕರ್ನಾಟಕ ಸಂಗೀತದ ರಾಗಗಳನ್ನು ಉತ್ತರಾದಿ ಸಂಗೀತದಲ್ಲಿ ತಂದು ರೂಢಿಗೊಳಿಸಿದರು. ಇವರ ಪಟ್ಟ ಶಿಷ್ಯ ಸವಾಯಿ ಗಂಧರ್ವ ಊರ್ಫ ರಾಮಭಾವು ಕುಂದಗೋಳಕರ, ರೋಶನಾರಾ ಬೇಗಂ, ಮಗ ಸುರೇಶಬಾಬು ಮಾನೆ, ಮಗಳು ಹೀರಾಬಾಯಿಗೆ ತಾಲೀಮು ಕೊಟ್ಟದ್ದು ಇವರ ಕಿರಿಯ ತಮ್ಮ ಉಸ್ತಾದ್ ವಹೀದ್ ಖಾನರು. ಕೆಲಕಾಲ ಇವರೂ ಕಲಿಸಿದರು. ಸವಾಯಿ ಗಂಧರ್ವರ ಹೆಸರನ್ನು ಅಜರಾಮರ ಮಾಡಿದ ಶ್ರೇಯ ಪಂಡಿತ ಭೀಮಸೇನ ಜೋಶಿ ಹಾಗೂ ಸಂಗೀತ ವಿದುಷಿ ಗಂಗೂಬಾಯಿ ಇವರಿಗೆ ಸಲ್ಲುತ್ತದೆ. ಮುಂಬಯಿಯಲ್ಲಿ ಪಂಡಿತ ಫಿರೋಜ್ ದಸ್ತೂರ್ದ ಅವರು ಎಂಬತ್ತು ದಾಟಿದರೂ ಆಗಾಗ ಕಚೇರಿ ನಡೆಸುತ್ತಿದ್ದರು. ಕಿರಾನಾ ವಾದ್ಯ ಪರಂಪರೆಯಲ್ಲಿ ಸಾದಿಕ್ ಅಲಿ ಬೀನ್‌ಕಾರ ಎಂಬ ಮಹಾಪುರುಷರು ಬೀನ್‌ಕಾರರೆಂದು ಖ್ಯಾತಿ ಪಡೆದಿದ್ದರು. ಇವರ ಮಗ ಬಂದೇ ಅಲಿ ಖಾನ್, ಮೊಮ್ಮಗ ಮುರಾದ್ ಖಾನ್.

ಮನೆತನ, ಪರಂಪರೆ, ಘರಾಣೆ ಈ ಶಬ್ದಗಳು ರೂಢಿಗೊಂಡದ್ದು ಇಪ್ಪತ್ತರ ಶತಮಾನದಲ್ಲಿಯೇ. ಹಾಡುಗಾರ, ವಾದಕ ಬೇರೆ ಬೇರೆ ಸಂಸ್ಥಾನಗಳಿಗೆ ವಲಸೆ ಹೋಗುವ ಪದ್ಧತಿ ಇದ್ದುದರಿಂದ ಅಲ್ಲಿ ಮೊದಲೇ ಸ್ಥಾಪಿತರಾಗಿದ್ದ ಕಲಾವಿದರ ಕೌಶಲ್ಯ ಮತ್ತು ಹೊಸದಾಗಿ ಬಂದವರ ವೈಶಿಷ್ಟ್ಯಗಳನ್ನು ಗುರುತಿಸಲು ಮಾಡಿದ ಶಬ್ದ 'ಘರಾಣೆ'. ಈ ಪದ್ಧತಿ ಪ್ರಾರಂಭವಾದ ಕೂಡಲೇ ಈ ಮನೆತನದ 'ಖಲೀಫಾ' ಯಾರು ಎಂಬ ಪ್ರಶ್ನೆ ಬಂದಾಗ 'ಘರಾಣೆ' ರೂಢಿಗೊಂಡಿತು. ಖಲೀಫಾ ಎಂದರೆ ತನ್ನ ವಂಶದ ಜನ್ಮಜಾತ ನಾಯಕರು. ಉದಾಹರಣೆಗೆ ಮೈಹರ್ ಘರಾಣೆಯ ಖಲೀಫಾ ಅವರು ಅಲ್ಲಾ ಉದ್ದೀನ್ ಖಾನರ ಮಗ, ಉಸ್ತಾದ್ ಅಲಿ ಅಕಬರ್ ಖಾನರು. ಅವರ ವಾಸ್ತವ್ಯವೆಲ್ಲ ಅಮೇರಿಕೆಯಲ್ಲಿದ್ದರೂ ಸಹ, ಅವರ ಹೊರತು ಅಲ್ಲಾವುದ್ದಿನ್ ಖಾನರ ಅಳಿಯ, ಇತ್ತೀಚೆಗೆ ಭಾರತರತ್ನ ಪ್ರಶಸ್ತಿಯನ್ನು ಪಡೆದ ರವಿಶಂಕರರು ಆಗಲಾರರು, ಅಥವಾ ಭಾರೀ ಶಿಷ್ಯ ಸಂಪತ್ತಿಯನ್ನು ತಯಾರುಮಾಡಿದ ಮಗಳು ಅನ್ನಪೂರ್ಣಾದೇವಿ ಕೂಡ ಆಗಲಾರರು. ಹಾಗೆಯೇ, ಇಡೀ ಭಾರತವರ್ಷದಲ್ಲಿ ಇತ್ತೀಚೆಗೆ ಮುನ್ನಡೆಯಲ್ಲಿದ್ದ ಜಯಪುರ-ಅತ್ರೋಲಿ ಘರಾಣೆಯ ಖಲೀಫಾ, ಎಂದೂ ಕಚೇರಿ ನಡೆಸದ ಕೊಲ್ಲಾಪುರ ನಿವಾಸಿ ಬಾಬಾ ಅಜ್ಜೀಜುದ್ದೂನ್ ಖಾನರೇ ಹೊರತು ಬೇರೆ ಯಾರೂ ಈ ಪಟ್ಟಕ್ಕೆ ಅರ್ಹರಲ್ಲ. ಕಾರಣ ಬಾಬಾ, ಈ ಮನೆತನದ ಅಲ್ಲಾದಿಯಾ ಖಾನರ ಮೊಮ್ಮಗ. ಮಲ್ಲಿಕಾರ್ಜುನ ಮನ್ಸೂರರು ಕೂಡ ಈ ಬಾಬಾರ ಬಳಿ ಹೊಸ ಬಂದಿಶ್‌ಗಳನ್ನು ಕಲಿಯಲು ಎಪ್ಪತ್ತರ ಹರೆಯದಲ್ಲಿ ಬಂದಾಗ ಬಾಬಾರ ಕಾಲುಮುಟ್ಟಿ ನಮಸ್ಕಾರವನ್ನು ಮಾಡಿ ಶಿಷ್ಯನಂತೆ ಕಲಿತದ್ದು ಇದೆ. ಮಲ್ಲಿಕಾರ್ಜುನರ ಮನೆತನವೇ ಬೇರೆ ಎಂದು ತಿಳಿದರೆ, ಅವರ ಮಗ ರಾಜಶೇಖರ ಈ ಹೊಸ ಮನೆತನದ ಖಲೀಫಾ ಆಗುತ್ತಾರೆಯೇ ಹೊರತು, ಪಂಚಾಕ್ಷರೀ ಮತ್ತಿಗಟ್ಟಿ ಅಲ್ಲ.

40 ವರ್ಷಗಳ ಮೊದಲು ಮೋಟಾರಿನಲ್ಲಿ ಹೋದಾಗ ಈ ಊರುಗಳಲ್ಲಿಯ 'ಬುಝುರ್ಗ' ಮುದುಕರು ಈ ಘರಾಣೆಗಳ 'ಕಿಸ್ಸೆ' ಕತೆಗಳನ್ನು ರಸವತ್ತಾಗಿ ಬಣ್ಣಿಸುವವರಿದ್ದರು. ಧ್ರುಪದ್ ಪರಂಪರೆಯ 'ಬಂಡಾರ್' ಮನೆತನ ಬಿಕಾನೇರ ಬಳಿಯಲ್ಲಿದ್ದರೆ, ಧ್ರುಪದ್ ಪದ್ಧತಿಯ ಮೂಲ 'ನೌಹಾರ' ಜಯಪುರ ಬಳಿಯಲ್ಲಿದೆ. ಡಾಗರ್ ಬಾಣಿಯ ಮೂಲ ಅಲಿಗಡದ ಪಕ್ಕದ ದಂತೂರಿನಲ್ಲಿ ಸಿಗುತ್ತದೆ. ಆಗ್ರಾ, ಅತ್ರೋಲಿ, ಖುರ್ಜಾ ಕೈರಾನಾ, ಸಿಕಂದರ್ ಪುರ್, ಲೋಹಾರಿ ತಳವಂಡಿ ಇವೆಲ್ಲ ಗಾಯಕರ ಸುಗ್ಗಿ ಪ್ರದೇಶವಷ್ಟೇ ಅಲ್ಲ, ಭಾರತದ ಖ್ಯಾತ ಪೈಲವಾನರ ಗರ್ಭ ಸ್ಥಾನವೂ ಹೌದು! ಮೈಹರ್, ರೇವಾ, ಸತನಾದ ಪಕ್ಕದಲ್ಲಿಯ ಒಂದು ಚಿಕ್ಕ ಸಂಸ್ಥಾನ. ಇದು ಮೈಹರ್ ಘರಾಣೆ ಆದದ್ದು ಆಗಿದ್ದು ಅಲ್ಲಾವುದ್ದೀನರ ಕೃಪೆಯಿಂದ. ಇದೆಲ್ಲವನ್ನೂ ಬರೆಯುವ ಕಾರಣವೆಂದರೆ, 'ಇಟ್ಟಾವಾ' ಪರಂಪರೆ, ಇಮದಾದ ಮನೆತನಕ್ಕೆ ಸೇರಿದ ವಿಲಾಯತ್ ಖಾನ್ (ಸಿತಾರ್) ಇವರ ಶಿಷ್ಯರೆಲ್ಲ ಸೇರಿ ಅವರು ಜೀವಂತವಿದ್ದಾಗಲೇ, 'ವಿಲಾಯತ್ ಖಾನ್ ಘರಾಣೆ'ಯನ್ನು ಸ್ಥಾಪಿಸುವ ಆಟಾಟೋಪವನ್ನು ನಡೆಸಿದ್ದರು. ಇಂತಹ ರಾಜಕಾರಣ ನಡೆದಾಗ ಭೀಮಸೇನ ಜೋಶಿಯವರು ಹೇಳಿದ ಮಾತು ಎಷ್ಟು ಸತ್ಯವೆಂದೆನಿಸುತ್ತದೆ. ಸತ್ಕಾರ ಒಂದರಲ್ಲಿ ಉತ್ತರಿಸುವಾಗ 'ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೆ ಗುರುಗಳು ವಿದ್ಯಾದಾನ ಮಾಡಿದುದರಿಂದ ಇಂದು ನಾವು ಲಕ್ಷಗಟ್ಟಲೆ

ಸಂಪಾದಿಸುತ್ತಿದ್ದೇವೆ' ಎಂದರು. ಕೊಳಲಿನಲ್ಲಿ ಪನ್ನಾಬಾಬು ಘರಾಣೆ, ಸಂತೂರಿನಲ್ಲಿ ಶಿವಜೀ (ಶಿವಕುಮಾರ ಶರ್ಮಾ) ಘರಾಣೆ ಇವೆಲ್ಲ ಮಾನವನ 'ಹಾಂಜಿ' ಸ್ವಭಾವದ ಸಂಕುಚಿತ ದೃಷ್ಟಿಕೋನದ ಮತ್ತೊಂದು ರೂಪವನ್ನು ಎತ್ತಿ ತೋರಿಸುತ್ತದೆ.

ಧ್ರುಪದ್ ಮತ್ತು ಖಯಾಲ್ ಎಂಬ ಉತ್ತರಾದಿ ಪ್ರಣಾಲಿಯಲ್ಲಿ ದಕ್ಷಿಣದಲ್ಲಿ ಪ್ರಚಲಿತವಿದ್ದ 'ಜಾವಳಿ' ಪ್ರಕಾರದ ಠುಮರಿ ಸಂಗೀತಕ್ಕೂ ಪರಂಪರೆಗಳಿವೆ. ಇವುಗಳಲ್ಲಿ 'ಬನಾರಸ್ ಘರಾಣೆ', 'ಪಂಜಾಬ್ ಘರಾಣೆ' ಮತ್ತು 'ಲಖನೌ ಘರಾಣೆ' ಪ್ರಚಾರದಲ್ಲಿವೆ. ಪಂಜಾಬ್ ಘರಾಣೆಯ ಠುಮರಿಯ ಭಾರ ಖ್ಯಾಲ್ ಗಾಯಕ ಬಂಗಾಲದ ಅಜಯ್ ಚಕ್ರವರ್ತಿ ಹೊತ್ತರೆ, ಬನಾರಸ್ ಘರಾಣೆಯ ಸಿದ್ಧೇಶ್ವರಿ ದೇವಿ, ಗಿರಿಜಾ ದೇವಿ ಇಡೀ ಭಾರತದಲ್ಲಿ ಹೆಸರನ್ನು ಮಾಡಿದ್ದಾರೆ. ಲಖನೌ ಘರಾಣೆಯ ಬೇಗಂ ಅಖ್ತರ್ ಅಥವಾ ಅಖ್ತರಿ ಬಾಯಿಯವರ ಹೆಸರೆತ್ತದೆ ಯಾರೂ ಠುಮರಿಯ ವಿಷಯದಲ್ಲಿ ಭರತವಾಕ್ಯವನ್ನು ನುಡಿಯುವುದು ಅಶಕ್ಯ. ಮರಾಠಿಗರಿಗೆ ಠುಮರಿ ಹಾಡಲು ಬರುವುದಿಲ್ಲ, ಕನ್ನಡಿಗರಿಗೆ ಮರಾಠೀ ಉಚ್ಚಾರದ ದಾಂಧಲೆ ಇದ್ದಾಗ ಉರ್ದು ಪದ್ಯವನ್ನು ಹೇಗೆ ಹಾಡಬಲ್ಲರು? ಇದಕ್ಕೆಲ್ಲ ಉತ್ತರ ಕೊಟ್ಟದ್ದು ಭೈಯ್ಯಾ ಗಣಪತರಾವ್ ಎಂಬ ರಾಜ ಘರಾಣೆಯ ಹಾಡುಗಾರ. ಇವರಿಂದಲೇ ಠುಮರಿ ಇಡೀ ಹಿಂದುಸ್ಥಾನದಲ್ಲಿ ಪ್ರಚಲಿತಗೊಂಡಿತು. ಇವರ ತಾಯಿ ಚಂದ್ರಭಾಗಾದೇವಿ, ಗುರು ಸಾದಿಕ ಅಲಿ. ಧ್ರುಪದ್, ಟಪ್ಪಾ, ಖಯಾಲ್ ಇವನ್ನೆಲ್ಲಾ ಕಲಿತು ಗಣಪತರಾಯರು ಠುಮರಿಯ ಖಾಸಾ ಅಂಗವಾದ 'ಖಟಕಾ' ಮತ್ತು 'ಮುರುಕಿ'ಗಳನ್ನು ತಮ್ಮ ಕಂಠದಲ್ಲಿಳಿಸಿಕೊಂಡಿದ್ದರು. ಇವರ ಬಗ್ಗೆ 'ಖಯಾಲ್ ಗಾಯನದಲ್ಲಿ ಸದಾರಂಗನಂತೆ, ಠುಮರಿಯಲ್ಲಿ ಗಣಪತರಾವ್' ಎಂಬ ಮಾತು ರೂಢಿಯಲ್ಲಿತ್ತು. ಇವರ ಶಿಷ್ಯರಲ್ಲಿ ಸಜ್ಜಾದ ಹುಸೇನ್, ಗೌಹರಜಾನ್ ಆಗ್ರೆವಾಲಿ ಮಲಕಾಜಾನ ಮತ್ತು ಜದ್ದನ್ ಬಾಯಿ (ಚಿತ್ರಪಟ ತಾರೆ ನರ್ಗೀಸ್ ಅವರ ತಾಯಿ) ಇದ್ದಾರೆ. ಇವರ ಶಿಷ್ಯ ಮೌಜುದ್ದೀನ್ 1920-40ರಲ್ಲಿ ಠುಮರಿ ಸಾಮ್ರಾಟರೆಂಬ ಹೆಸರನ್ನು ಗಳಿಸಿದ್ದರು. 1915ರಲ್ಲಿ ಭೈಯ್ಯಾ ಗಣಪತರಾವ್ ಜೋಧಪುರದಲ್ಲಿ ತೀರಿಕೊಂಡರು. ಕರ್ನಾಟಕ, ಮಹಾರಾಷ್ಟ್ರದಲ್ಲಿ ಠುಮರಿ ಪ್ರಚಲಿತವಿದ್ದರೂ, ಇಲ್ಲಿಯ ಠುಮರಿಗಳಿಗೆ ಲಾವಣಿ ಲೋಕಸಂಗೀತದ ಒಗ್ಗರಣೆ ಇರುತ್ತದೆ. ಉರ್ದು ಮತ್ತು ಪರ್ಶಿಯನ್ ಶಬ್ದಗಳ ಉಚ್ಚಾರ ಕನ್ನಡಿಗರೂ, ಮರಾಠಿಗರೂ ಸರಿಯಾಗಿ ಉಚ್ಚರಿಸದೇ ಹಾಡುತ್ತಿದ್ದುದರಿಂದ ಶೋಭಾ ಗುರ್ಟು ಬಿಟ್ಟು ಈ ಪ್ರಣಾಲಿಯಲ್ಲಿ ಯಾರೂ ಮುಂದೆ ಬರಲಿಲ್ಲ ಎಂಬುದು ದುಃಖದ ವಿಷಯ.

ಉತ್ತರಾದೀ ಸಂಗೀತ ಪ್ರಣಾಲಿಯಲ್ಲಿ ಪಕ್ಕವಾದ್ಯಗಳ ಅಂದರೆ ಪಖಾವಜ, ತಬಲಾ ಮತ್ತು ಇತರ ವಾದ್ಯಗಳಾದ ಸಿತಾರ್, ಸರೋದ್, ಬಾನ್ಸುರಿ (ಕೊಳಲು) ಮತ್ತು ಇತ್ತೀಚಿನ ಸಂತೂರ್ ಇವುಗಳಿಗೂ ಪರಂಪರೆ ಇದೆ. ತಾನಸೇನನ ವಂಶಜರು ಬೀನ್‌ಕಾರರಾಗಿದ್ದು ಇವರ ವಂಶಜರೇ ಇಂದು ಸಿತಾರ್ ಮತ್ತು ಸರೋದ್ ವಾದ್ಯಗಳಲ್ಲಿ ಹೆಸರುಮಾಡಿದ್ದಾರೆ. ರಾಮಪುರದ ಮೈಹರ್ ಘರಾಣೆಯ ಅಲ್ಲಾವುದೀನ ಖಾನ ಗಾಯನದಲ್ಲಿ ಪ್ರಾವೀಣ್ಯವನ್ನು ಪಡೆದು, 10-15 ವಾದ್ಯಗಳನ್ನು ಬಾರಿಸುತ್ತಿದ್ದರೂ, ಸರೋದ್ ವಾದ್ಯವನ್ನೇ ತನ್ನದಾಗಿ ಮಾಡಿಕೊಂಡರು. ಇಟ್ಟಾವಾ ಪರಂಪರೆಯ ಸಿತಾರ್ ವಾದಕ ವಿಲಾಯತ ಖಾನರು; ಸೂಫಿ ಸಂತ ಇನಾಯತ ಖಾನರ ಮಗ.

ಕಲಿತದ್ದು ಧ್ರುವತಾರಾ ಜೋಶಿ ಎಂಬ ಇನಾಯತ ಖಾನರ ಶಿಷ್ಯರಲ್ಲಿ. ಈಗಿನ ಖ್ಯಾತ ಸರೋದ್ ವಾದಕ ಅಮಜಾದ ಅಲಿ 8 ವರ್ಷದವರಿದ್ದಾಗ ತಂದೆ ಹಫೀಜ ಅಲಿ ತೀರಿಕೊಂಡರು. ಮುಂದೆ ಅಲ್ಲಿ ಇಲ್ಲಿ, ಅಲಿ ಅಕಬರ್ ಖಾನರ ಬಳಿ ಕಲಿತು ಮುಂದೆ ಬಂದರು. ತಮ್ಮ ಘರಾಣೆಗೆ 'ಬಂಗಶ್' ಘರಾಣೆ ಎಂದು ನಾಮಕರಣ ಮಾಡಿದರು. ಮೈಹರ್ ಘರಾಣೆಯ ಪಂಡಿತ ರವಿಶಂಕರರ ಶಿಷ್ಯ, ಖ್ಯಾತ ವಿಶ್ವಮೋಹನ ಭಟ್ಟರು ಪಾಶ್ಚಾತ್ಯ ವಾದ್ಯವಾದ ಗೀಟಾರಿಗೆ ಕೊಂಚ ಬದಲಾವಣೆಯನ್ನು ಮಾಡಿ ಅದಕ್ಕೆ 'ಮೋಹನವೀಣಾ' ಎಂದು ಹೆಸರನ್ನು ಇಟ್ಟಿದ್ದಾರೆ.

ಭಾತ್‌ಖಾಂಡೆಯವರಿಗೆ (1860-1937) ಉತ್ತರಾದಿ ಸಂಗೀತದ ವೈಯ್ಯಾಕರಣಿ (ವ್ಯಾಕರಣ) ಅಥವಾ ಪಾಣಿನಿ ಎಂಬ ಉಪಾಧಿ ಇದೆ. ಇವರು ಮೊದಲು ಸಿತಾರ್ ಕಲಿತು ನಂತರ ಧ್ರುವಪದ ಮತ್ತು ಖಯಾಲ್ ಕಲಿತರು. ಆದರೆ ವಿಧಿಲಿಖಿತ ಬೇರೆಯೇ ಇತ್ತು. ಕೆಲ ಗೆಳೆಯರ ಸಹಾಯದಿಂದ ಮತ್ತು ಫಾರ್ಸಿ ಉತ್ತೇಜಕ ಮಂಡಳಿಯ ಧನಸಹಾಯ ಹಾಗೂ ಸಕ್ರಿಯ ಕಾರ್ಯಗಳಿಂದ ಇಡೀ ಉತ್ತರಾದಿ ಸಂಗೀತ ಪ್ರಣಾಲಿಯನ್ನು ವೈಜ್ಞಾನಿಕ ದೃಷ್ಟಿಕೋಣದಿಂದ ಅಭ್ಯಸಿಸಿ ಅದಕ್ಕೊಂದು ಹೊಸ ಆಯಾಮ ಕೊಟ್ಟ ಮೇರು ಮೇಧಾವಿ ಇವರು. ಹಲವು ಬಾರಿ ದೇಶಾಟನೆ ನಡೆಸಿ, ಹಳ್ಳಿಯಿಂದ ದಿಲ್ಲಿಯವರೆಗೆ ಇತಿಹಾಸ ಸಂಶೋಧಕನಂತೆ ದಿನರಾತ್ರಿ ದುಡಿಯುವಲ್ಲಿ ಮುಳುಗಿದವರು. ಆದರೆ ನಿರಕ್ಷರಕುಕ್ಷಿ ಆದರೂ ಅತ್ಯಂತ ಜ್ಞಾನಿಗಳಾಗಿ ಸಂಗೀತದಲ್ಲಿ ಅವ್ವಲ್ ಸ್ಥಾನವನ್ನು ಪಡೆದ ಉಸ್ತಾದ್‌ರೊಂದಿಗೆ ಬೆರೆತು ಅವರ ರಾಗ ಮತ್ತು ಬಂದಿಶಗಳ ಭಂಡಾರವನ್ನು ಅರಿತುಕೊಂಡರು. ಇಷ್ಟೇ ಅಲ್ಲ ಈ ರಾಗ ಸಂಗೀತಕ್ಕೆ ಸ್ವರಗಳ ಭಾಷೆಯಲ್ಲಿ ನೀಡಿದರು. ಮತ್ತು ಹತ್ತು ಥಾಟುಗಳಲ್ಲಿ ವಿಭಜನೆ ಮಾಡಿದರು. ಇವರು ಬರೆದ 'ಹಿಂದೂಸ್ತಾನಿ ಸಂಗೀತ ಪದ್ಧತಿ'ಯ 5 ಭಾಗಗಳು ಉತ್ತರಾದಿ ಪ್ರಣಾಲಿಯ ಇಂದಿನ ಕೈಪಿಡಿಗಳು. ಭಾತಖಾಂಡೆಯುವರ ಈ ಕೆಲಸವನ್ನು ಮುಂದುವರಿಸಿದವರು ಅವರ ಶಿಷ್ಯ ಶ್ರೀಕೃಷ್ಣ ರತನಜನಕರ್ ಇವರು. ಆ ವೇಳೆಗೆ ಭಾರತಕ್ಕೆ ಸ್ವಾತಂತ್ರ್ಯ ದೊರಕಿತ್ತು. ಆಗಿನ ಪ್ರಸಾರ ಮಾಧ್ಯಮದ ಸಚಿವರಾದ ಬಿ.ವಿ. ಕೇಸಕರರು ಇವರ ಶಿಷ್ಯರು. ಹೀಗಾಗಿ ಆಕಾಶವಾಣಿಯಲ್ಲಿ ಲೋಕಾಶ್ರಯವಲ್ಲದೇ, ಇವರ ಪರಂಪರೆಗೆ 'ಸರಕಾರದ ಆಶ್ರಯ'ವೂ ಸಿಕ್ಕಿತು. ಬೇರೆ ಪ್ರಣಾಲಿಯ ಕುಶಲ ಗಾಯಕರನ್ನು ಆಡಿಷನ್‌ಗೆ ಕರೆಸಿ ಇತರ ಕಲಾವಿದರ ಕೋಪಕ್ಕೆ ತುತ್ತಾದರು. ರಾಷ್ಟ್ರೀಯ ಪ್ರಸಾರ ಮಾಧ್ಯಮಕ್ಕೆ ಒಂದು ಹೊಸ ದಿಕ್ಕನ್ನು ಕೊಟ್ಟರೂ ಕೇಸಕರ್ ಅವರಿಗೆ ತುಂಬ ನೋವು ಕೊಟ್ಟದ್ದು, ಖ್ಯಾತ ಕಲಾವಿದರೆಲ್ಲ ಸೇರಿ ಆಕಾಶವಾಣಿಗೆ ಬಹಿಷ್ಕಾರವನ್ನು ಹಾಕಿದಾಗ. ಈ ಕಲಾಕಾರ ಮಂಡಳಿಯ ನೇತೃತ್ವವನ್ನು ಮಲ್ಲಿಕಾರ್ಜುನ ಮನ್ಸೂರ, ಕೇಸರಬಾಯಿ, ಮೋಗುಬಾಯಿ, ಗಂಗೂಬಾಯಿ ಮುಂತಾದವರು ವಹಿಸಿಕೊಂಡಿದ್ದರು.

ಭೀಮಸೇನರನ್ನು ಕಿರಾನಾ ಪರಂಪರೆಯಲ್ಲಿ ಸೇರಿಸಿದ್ದು ಅವರು ಸವಾಯಿ ಗಂಧರ್ವರ ಶಿಷ್ಯರೆಂದು. ಆದರೆ ಸ್ವಸಾಮರ್ಥ್ಯದಿಂದ ತಮ್ಮ ಗಾಯನ ಶೈಲಿಯಲ್ಲಿ, ಕಿರಾನಾ ತಳಹದಿಯನ್ನು ಭದ್ರವಾಗಿಟ್ಟು ಎಂತಹ ಬದಲಾವಣೆಯನ್ನು ಮಾಡಿದ್ದಾರೆ ಎಂಬುದಕ್ಕೆ ಭೀಮಸೇನ ಜೋಶಿಯವರ 'ಹಿಂದಿನ' 3 ನಿಮಿಷದ ರಿಕಾರ್ಡು, ಅದೇ ರಾಗದಲ್ಲಿಯ ಸವಾಯಿ ಗಂಧರ್ವರ 3 ನಿಮಿಷದ ರಿಕಾರ್ಡು ಮತ್ತು ಇತ್ತೀಚಿನ

'ಸ್ವರಾಧಿರಾಜ' ಧ್ವನಿಸುರುಳಿಗಳನ್ನು ಅಭ್ಯಸಿಸಿದರೆ ಒಂದು ಮಾತು ನಿಶ್ಚಿತವಾಗಿ ಮುಂದೆ ಬರುತ್ತದೆ. 1940ರ ಅವರ ಹಾಡುಗಾರಿಕೆಯಲ್ಲಿ ಸವಾಯಿ ಗಂಧರ್ವರ ಛಾಪು ಶೇಕಡಾ 80ರಷ್ಟು ಇದ್ದರೆ, ಅವರ ಇತ್ತೀಚಿನ ಅದೇ ರಾಗದ ಧ್ವನಿಸುರುಳಿಗಳಲ್ಲಿ ಬೇರೆ ಬೇರೆ ಪರಂಪರೆಗಳನ್ನು ಎಷ್ಟು ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ ಎಂಬ ಮಾತು ಸ್ಪಷ್ಟವಾಗುತ್ತದೆ. ಅವರ 'ಲಲಿತಾಗೌರಿ'ಯಲ್ಲಿ ಕೇಸರಬಾಯಿ ಇಣುಕಿದರೆ, ಅವರ 'ಮಾರವಾ'ದಲ್ಲಿ ಇಂದೋರಿನ ಅಮೀರ್ ಖಾನರ ಪ್ರಭಾವ ಸ್ವಲ್ಪ ಕಾಣಿಸುತ್ತದೆ. 'ಮಿಯಾಮಲ್ಹಾರ'ದಲ್ಲಿಯಂತೂ, ಉತ್ತರಾದಿ ಪ್ರಣಾಲಿಯ ಆಗ್ರಾ, ಗ್ವಾಲಿಯರ ಘರಾಣೆಯ ಅಂಶಗಳನ್ನು ರಸಿಕರು ಗಮನಿಸಬಹುದು. ಆದರೆ ಮೂಲ ಮಾತ್ರ ಕಿರಾನಾ ಘರಾಣೆಯೇ. ಭಕ್ತಿ ಸಂಗೀತಕ್ಕೂ, ಹೊಸ ದಿಕ್ಕು ತೋರಿಸಿ ಮರಾಠಿಯಲ್ಲಿ ಸಂತವಾಣಿ, ಕನ್ನಡದಲ್ಲಿ ದಾಸರ ಪದಗಳನ್ನು ಮನೆಮನೆಗೆ ಮುಟ್ಟಿಸಿದರು. ತಾನಸೇನನ ನಂತರ ಭೀಮಸೇನರ ಹೆಸರು ಮನೆಮಾತಾದದ್ದು ಅವರ ಗುಣಗ್ರಾಹಕತ್ವ ಹಾಗೂ ನವ್ಯವಿದ್ದುದನ್ನೆಲ್ಲಾ ತನ್ನ ಹಾಡುಗಾರಿಕೆಯಲ್ಲಿ ರೂಪವನ್ನು ಕೆಡಿಸದೇ ಸೇರಿಸಿಕೊಳ್ಳುವ ಹವ್ಯಾಸವಿಟ್ಟುಕೊಂಡದ್ದರಿಂದ. ಭೀಮಸೇನ ಜೋಶಿ ಇಂದಿಗೆ 'ತಾನಸೇನನ ನಂತರ ಭೀಮಸೇನ' ಎಂಬ ಉಪಾಧಿಗೆ ಅರ್ಹರಾಗಿದ್ದಾರೆ. ಸವಾಯಿ ಗಂಧರ್ವ ಹೇಗೆ ಹಾಡುತ್ತಿದ್ದರು ಎಂಬುದು ಗಂಗೂಬಾಯಿಯವರ ಗಾಯನದಲ್ಲಿ ತನ್ನದೇ ಆದ ವಿಶಿಷ್ಟ ಪದ್ಧತಿಯಲ್ಲಿ ಸಿಕ್ಕರೆ, ಅವರ ಮಗಳು ಕೃಷ್ಣಾಬಾಯಿಯವರ ಸ್ವತಂತ್ರ ಹಾಡುಗಾರಿಕೆಯಲ್ಲಿ ಅಬ್ದುಲ್ ಕರೀಮ್ ಖಾನರ ಒಂದಾನೊಂದು ಕಾಲದ ಶಿಷ್ಯೆ ರೋಶನಾರಾ ಬೇಗಂ ಇಣುಕುತ್ತಾರೆ.

ಸುಮಾರು 400 ವರ್ಷಗಳ ಹಿಂದೆ ಅಕಬರ್ ಬಾದಶಾಹ ತಾನಸೇನ್ (1556–1608) ಸಾವಿರವರ್ಷದಲ್ಲಿ ಹುಟ್ಟಿದ ಒಬ್ಬ ಗಾಯಕ ಎಂದು ಸ್ವಲ್ಪ ಅತಿಶಯೋಕ್ತಿಯಿಂದ ಭಾವವಿಹ್ವಲನಾಗಿ ಹೇಳಿದ್ದು ಇತಿಹಾಸದ ಮಾತು. ಇದನ್ನು ಸ್ವಲ್ಪ ಮರೆತು, ಭೀಮಸೇನ ಜೋಶಿಯವರು ತಮಗೆ ಗೊತ್ತಿದ್ದ ಕೆಲವೇ ಸಿದ್ಧ ರಾಗಗಳನ್ನು, ಆ ರಾಗಗಳ ಶುದ್ಧತೆಯನ್ನು ಮರೆಯದೇ, ಅವುಗಳನ್ನು ಚೆನ್ನಾಗಿ ತಿಕ್ಕಿ ತಿಕ್ಕಿ ಹೊಸ ಹೊಳಪನ್ನು ನೀಡಿ, ಇಪ್ಪತ್ತನೇ ಶತಮಾನದ ನಾಲ್ಕನೇ ದಶಕದಿಂದ ಈವರೆಗೆ ಎಡೆಬಿಡದೇ ಅಸಂಖ್ಯ ಕಚೇರಿಗಳನ್ನು ನಡೆಸಿದ ಏಕಮೇವಾದ್ವಿತೀಯ ಹಾಡುಗಾರ ಎಂದು ಎದೆ ತಟ್ಟಿ ಹೇಳಬಹುದು. ವಿದೇಶದಲ್ಲಿ ವಾಸಿಸುತ್ತ, ಭಾರತೀಯತ್ವವನ್ನು ತೊರೆದು, ಎರಡು ವರ್ಷಕ್ಕೊಮ್ಮೆ ಭಾರತಕ್ಕೆ ಬಂದು ಭಾರತ ಸರಕಾರದಿಂದ ಭಾರತರತ್ನ ಪ್ರಶಸ್ತಿಯನ್ನು ವಯಸ್ಸು 80 ದಾಟಿದರೂ ದಿಲ್ಲಿಯಲ್ಲಿ ಗುರುಕುಲ ಸ್ಥಾಪಿಸುವ ಉದ್ದೇಶದಿಂದ ಸರಕಾರದಿಂದ 8–10 ಎಕರೆ ಜಮೀನು ಪಡೆಯುವ ಆಸೆಯನ್ನು ಇಟ್ಟುಕೊಂಡಿದ್ದ ವಿದ್ವಾಂಸರೆಲ್ಲಿ? ಮತ್ತು ಸರಕಾರದಿಂದ ಏನನ್ನೂ ಅಪೇಕ್ಷಿಸದೇ ರಸಿಕರನ್ನು ಉಚಿತವಾಗಿಯೋ ಅಥವಾ ಕಡಿಮೆ ದರದಲ್ಲಿ ಹಾಡಿ ತಣಿಸುವ ಶಕ್ತಿಯನ್ನು ತನ್ನ ಕೊನೆ ತನಕ ಇಟ್ಟುಕೊಂಡಿದ್ದ ಪಂಡಿತ ಭೀಮಸೇನ ಜೋಶಿಯವರೆಲ್ಲಿ?

*****

6.2

ಡಾ. ಭೈರಪ್ಪ ಹಾಗೂ ಅವರ 'ಮಂದ್ರ'

2005 ಡಿಸೆಂಬರ್ ತಿಂಗಳಲ್ಲಿ ಪುಣೆ ವಿಶ್ವವಿದ್ಯಾಲಯ ಮತ್ತು ಡಾ. ಪುಂಡೆ ಅವರು ಸ್ಥಾಪಿಸಿದ 'ಗುರುಕುಲ ಅಭ್ಯಾಸ ಮಂಡಳ' ಇವರ ಸಹಪ್ರಾಯೋಜಕತೆ ಪಡೆದು "ಡಾ. ಎಸ್.ಎಲ್. ಭೈರಪ್ಪ ಅವರ ಮರಾಠಿ ಕಾದಂಬರಿಗಳ ಅನುವಾದ" ಎಂಬ ವಿಷಯದ ಮೇಲೆ ಚರ್ಚಾಸತ್ರ ನಡೆಯಿತು. ಸುತ್ತಮುತ್ತಲಿನ ವಿದ್ಯಾಲಯಗಳ ಮರಾಠಿ ಪ್ರಾಚಾರ್ಯರು ಮತ್ತು ಡಾ. ಭೈರಪ್ಪನವರ ಕಾದಂಬರಿಗಳನ್ನು ಅಭ್ಯಸಿಸಿದವರು ಪಾಲುಗೊಂಡಿದ್ದರು. ಈ ತನಕ ಕರ್ನಾಟಕದಲ್ಲಿ ಒಂದೂ ವಿಶ್ವವಿದ್ಯಾಲಯದಿಂದ ಇಂಥ ಚರ್ಚಾಕೂಟ ಏರ್ಪಟ್ಟಿರಲಿಲ್ಲ. ಕರ್ನಾಟಕದಲ್ಲೇ ಆತ್ಮೀಯತೆಯ ಕರೆ ಬಾರದ ಡಾ. ಭೈರಪ್ಪನವರ ಕೃತಿಗಳ ಬಗ್ಗೆ, ನೆರೆ ಭಾಷೆಯ ಮರಾಠಿಗರು ಇಂತಹ ಒಂದು ದೊಡ್ಡ ಪ್ರಮಾಣದ ಚರ್ಚಾಕೂಟವನ್ನು ಏರ್ಪಡಿಸಿ ಡಾ. ಭೈರಪ್ಪನವರನ್ನೂ ಹಾಗೂ ಅನುವಾದ ಮಾಡಿದ ಡಾ. ಉಮಾ ಕುಲಕರ್ಣಿ (ಇವರು ವರದರಾಜ ಆದ್ಯ ಪ್ರಶಸ್ತಿ ಪಡೆದವರು) ಹಾಗೂ ವಿಜಯಲಕ್ಷ್ಮೀ ರೇವಣಕರ ಇವರನ್ನೂ ಸಪ್ರೇಮದಿಂದ ಸನ್ಮಾನಿಸಿದ್ದು ಮರಾಠಿಗರ ಹೃದಯವೈಶಾಲ್ಯವನ್ನು ತೋರಿಸುತ್ತದೆ.

'ಮಂದ್ರ' ಭೈರಪ್ಪನವರ ಆ ವರ್ಷವಷ್ಟೇ ಬಿಡುಗಡೆಯಾದ ಕಾದಂಬರಿ. ಕನ್ನಡದಲ್ಲಿ ಪ್ರಕಾಶನವಾದ ಐದೇ ದಿನಗಳಲ್ಲಿ ಈ ಕಾದಂಬರಿಯ 2000 ಪ್ರತಿಗಳು ಮಾರಾಟವಾಗಿ ಎರಡನೇ ಮುದ್ರಣ ಕಾಣುವಂತಾಯಿತಂತೆ! ಇದೊಂದು ಕನ್ನಡ ಕಾದಂಬರಿಗಳ ಮಾರಾಟದ ದಾಖಲೆ. ಮಂದ್ರದ ಬಗ್ಗೆ ಕುತೂಹಲದ ಆರೋಹಣ ಕನ್ನಡ ಸಾಹಿತ್ಯ ಬಳಗದಲ್ಲಿ ತುಂಬಾ ಉತ್ಕಟತೆಯಿಂದ ನಡೆದಿದ್ದಾಗ ಡಾ. ಭೈರಪ್ಪನವರು ತಮ್ಮ ಶ್ರೀಮತಿಯವರೊಂದಿಗೆ ದಕ್ಷಿಣ ಅಮೇರಿಕೆಯ ಪ್ರವಾಸ ಕೈಗೊಂಡಿದ್ದರು! ನನಗೆ ಪುಣೆ ವಿಶ್ವವಿದ್ಯಾಲಯದ ಮರಾಠಿ ವಿಭಾಗದಿಂದ ಮಂದ್ರದ ಬಗ್ಗೆ ನಿಬಂಧವನ್ನು ಓದಲು ದೂರವಾಣಿ ಬಂದಾಗ ಅತ್ಯಂತ ಸಂತೋಷದಿಂದ ನಾನು ಒಪ್ಪಿಕೊಂಡೆ. ಮರಾಠಿಯಲ್ಲಿ ಬರೆದು ಓದಿದ ಭಾಷಣದ ಕನ್ನಡ ತರ್ಜುಮೆಯನ್ನು ಓದುಗರಿಗಾಗಿ ಕೆಳಗೆ ಕೊಡುತ್ತಾ ಇದ್ದೇನೆ. ಮರಾಠಿಯಲ್ಲಿ ಬರೆದ ಕರಡು ಪ್ರತಿಯನ್ನು ಓದಿ ತಿದ್ದಿದ ಮರಾಠಿಯ ನಿವೃತ್ತ ಪ್ರಾಧ್ಯಾಪಕರಾದ ಶ್ರೀಮತಿ ಶಿಲ್ಪಾ ತೆಂಡೂಲ್ಕರ್ ಅವರ ಸಹಾಯವನ್ನು ಸ್ಮರಿಸಿ ಇದನ್ನು ಬರೆಯುತ್ತಾ ಇದ್ದೇನೆ.

ಡಾ. ಭೈರಪ್ಪ ಅವರ ಮಂದ್ರ

ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಹಿಂದುಸ್ತಾನಿ ಸಂಗೀತಕ್ಕೆ ವಿಪುಲವಾದ ರಾಜಾಶ್ರಯ ಮತ್ತು ಲೋಕಾಶ್ರಯ ಮೊದಲೂ ಇತ್ತು, ಈಗಲೂ ಇದೆ. "ಪೈದಾಯಿಷಿ ಯುಪಿಮೆ, ಪಾಲಾ ಕರ್ನಾಟಕ್‌ನೆ ಔರ್ ಪೋಸಾ ಮಹಾರಾಷ್ಟ್ರನೆ" ಈ ಮಾತು ಅಥವಾ ಉಸ್ತಾದ್ ಅಲ್ಲಾದಿಯಾಖಾನ ಸಾಹೇಬರ 'ಉತ್ತರ ಪೈದಾ ಕರತಿ ಹೈ ಔರ್ ದಖ್ಖನ ಸುನತೀ ಹೈ' ಈ ಮಾತು, ಕರ್ನಾಟಕ ಅಥವಾ ಮಹಾರಾಷ್ಟ್ರ ಹಿಂದುಸ್ತಾನೀ ಸಂಗೀತದ ಜನ್ಮಭೂಮಿಯಲ್ಲ ಆದರೆ ಕರ್ಮಭೂಮಿ ಮಾತ್ರ ನಿಜ! ಎಂಬುದನ್ನು ತೋರಿಸಿಕೊಡುತ್ತದೆ. ಕರ್ನಾಟಕದಲ್ಲಿ ಕರ್ನಾಟಕ ಸಂಗೀತಕ್ಕೆ ಪ್ರಾಧಾನ್ಯವಿದ್ದರೂ ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದ ಹಿಂದುಸ್ತಾನೀ ಸಂಗೀತಕಾರರು ಜಗದ್ವಿಖ್ಯಾತರೆಂದು ಮನ್ನಣೆ ಪಡೆದಿದ್ದಾರೆಂಬ ಮಾತನ್ನು ಮರೆಯಲಾಗದು.

ಭೈರಪ್ಪನವರು ಮೈಸೂರು-ಕರ್ನಾಟಕದವರು. ಅವರು ಹುಟ್ಟಿ ಬೆಳೆದ ಪರಿಸರದಲ್ಲಿ ಹಿಂದುಸ್ತಾನೀ ಸಂಗೀತದ ಪರಂಪರೆ ಕಡಿಮೆ. ಇಲ್ಲವೇ ಇಲ್ಲ ಎನ್ನಬಹುದು. ಆದರೆ ರಾಜಧಾನಿಯಾದ ಮೈಸೂರಿನಲ್ಲಿ ಮಹಾರಾಜರ ಕೃಪಾದೃಷ್ಟಿ ಇದ್ದುದರಿಂದಲೂ ಖ್ಯಾತ ದಸರಾ ಉತ್ಸವದ ಮೂಲಕವೂ ಉತ್ತರ ಹಿಂದುಸ್ತಾನದ ಪ್ರಸಿದ್ಧ ಗಾಯಕ, ವಾದಕರು ಈ ನಗರದಲ್ಲಿ ಕೆಲಕಾಲ ಆಸ್ಥಾನ ವಿದ್ವಾಂಸರೆಂದು ಮೆರೆದಿದ್ದು ಇದೆ! ಉಸ್ತಾದ್ ಫೈಯಾಜಖಾನರಿಗೆ 'ಅಫ್ತಾಬ್-ಎ-ಮೌಸೀಕಿ' ಎಂಬ ಬಿರುದು ಕೊಟ್ಟದ್ದು ಮೈಸೂರಿನ ಮಹಾರಾಜರೇ! ಉಸ್ತಾದ್ ರಹಿಮತ್ ಖಾನ್, ಉಸ್ತಾದ್ ಅಬ್ದುಲ್ ಕರೀಂ ಖಾನ್ ಕಿರಾನೆ ವಾಲೆ, ಉಸ್ತಾದ್ ಅಮಾನ್ ಅಲಿ ಖಾನ್ ಬೆಂಡಿ ಬಜಾರವಾಲೆ, ಧಾರವಾಡದ ಉಸ್ತಾದ್ ರಹಿಮತ್ ಖಾನ್ ಸಿತಾರ್‌ವಾಲೆ ಇವರೆಲ್ಲರ ಮೇಲೆ ಮಹಾರಾಜರ ಸಿರಿನೋಟ ಇದ್ದೇ ಇತ್ತು. ಬಿಡಾರಂ ಕೃಷ್ಣಪ್ಪ ಮತ್ತು ಅಮಾನ್ ಅಲಿಯವರು ಪರಮ ಸ್ನೇಹಿತರು. ಬಿಡಾರಂ ಅವರು ಕಲಿಸಿದ ಹಂಸಧ್ವನಿ ರಾಗದಲ್ಲಿಯ 'ವಾತಾಪಿ ಗಣಪತಿ' ಕೃತಿಯನ್ನು ಅಮಾನ ಅಲಿಯವರು 'ಲಾಗೇ ಲಗऽನ' ಎಂಬ ಹಿಂದುಸ್ತಾನಿ ಬಂದಿಶ್ ರಚಿಸಿ ಮಹಾರಾಜರೆದುರು ಹಾಡಿ ತೋರಿಸಿದ್ದು ಸರ್ವಶ್ರುತ. ಇದೆಲ್ಲ ನೆನಪಿಸಿಕೊಳ್ಳುವ ಸಂದರ್ಭವೆಂದರೆ ಡಾ. ಭೈರಪ್ಪ ಅವರ 20ನೆಯ ಕೃತಿ 'ಮಂದ್ರ'ವು-ಇದೊಂದು ಹಿಂದುಸ್ತಾನಿ ಸಂಗೀತದ ಮೇಲಿನ ಕಾದಂಬರಿ. ಇದನ್ನು ಓದುವಾಗ ಈ ಕಾದಂಬರಿಯ ನಾಯಕ ಮೋಹನಲಾಲನ ಬಗೆಗೆ ಒಂದು ತರಹದ ತಿರಸ್ಕಾರ ಉತ್ಪನ್ನವಾಗುತ್ತದೆ. 'ಗುರುವಿನ ಗುಲಾಮನಾಗುವ ತನಕ' ಅಥವಾ 'ಗುರುಃ ಬ್ರಹ್ಮಾ ಗುರುಃ ವಿಷ್ಣುಃ' ಇಂತಹ ವಾಕ್ಯಗಳು ತಿರುಳಿಲ್ಲದ ಬುರುಡೆಗಳಂತೆ! ಈ ಗುರುವಿನ ವ್ಯಕ್ತಿಚಿತ್ರ ವಿಷಯವಾಸನೆಯಿಂದ ತುಂಬಿತುಳುಕುವ ವ್ಯಭಿಚಾರದಿಂದ ವಿದ್ರೂಪ ವಾದದ್ದು, ಅತ್ಯಂತ ಸಾವಧಾನವಾಗಿ ಪ್ರಕಾಶಕ್ಕೆ ಬರುತ್ತಿದ್ದುದು ಓದುಗನ ಲಕ್ಷ್ಯವನ್ನು ಸೆಳೆಯುತ್ತದೆ. ಕಾದಂಬರಿಯ ಮೊದಲನೆಯ ವಾಕ್ಯವೇ ತನ್ನ ಪ್ರಿಯ ಶಿಷ್ಯೆ ಮಧುಮಿತಾ ಷಾಳನ್ನು ಉದ್ದೇಶಿಸಿ ಹೇಳಿದ್ದು: 'ಮಹಾಗರತಿಯ ಹಾಗೆ ಹಟಮಾಡಿದಳು' ಓದುಗನ ಮನಸ್ಸನ್ನು ಅಸ್ವಸ್ಥಗೊಳಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಗುರುವಿನ ಮಹಿಮೆಯನ್ನು ಈ ನಮ್ಮ ಖಂಡದಲ್ಲಿ ಶತ-ಶತಮಾನಗಳಿಂದ ಕೊಂಡಾಡುತ್ತ ಬಂದವರು ನಾವು. ಈ ವಿದ್ರೂಪ ವೇಷಧಾರಿ

ನಾಯಕನ ಪಾತ್ರ ಓದುಗರಲ್ಲಿ ಒಂದು ತರಹದ ದೊಡ್ಡ ಅಲೆ ಎಬ್ಬಿಸುತ್ತದೆ. 'ಗುರುವಿನ ಗುಲಾಮನಾಗಿರುವ ತನಕ ಮುಕುತಿ ಸಿಗದು' ಎಂಬ ಪುರಂದರದಾಸರ ಮಾತೇ ಇಲ್ಲಿ ಹುರುಳಿಲ್ಲದ್ದು ಎಂದೆನಿಸುತ್ತದೆ. "ಗುರುಬಿನ ಕೋನ ಬತಾಯೇ ಬಾಟ" ಎಂಬುದು ಪರಂಪರೆಯಿಂದ ನಡೆದು ಬಂದ ಕೃತಿಯನ್ನು ಹಿಂದುಸ್ತಾನಿ ಗಾಯಕರೆಲ್ಲ ಹಾಡಿಕೊಳ್ಳುತ್ತ ಇದ್ದುದನ್ನು ನಾವು ನೆನಪಿಸಿಕೊಳ್ಳಬಹುದು. ಈ ದಾರಿ ತೋರಿಸುವವರೇ ದೂರ ಸರಿಸುವರೇ, ತಪ್ಪು ದಾರಿ ತೋರಿಸುವರೇ ಎಂಬ ಶಂಕೆ ಬಾಧಿಸುವುದು ಸಹಜ. ಒಬ್ಬ ಒಳ್ಳೆಯ ಗುರು ಆಗಬೇಕಾದ ಪಕ್ಷದಲ್ಲಿ ಆತನಿಗೊಬ್ಬ ಆ ಕಲೆಯಲ್ಲಿ ಸರ್ವೋತ್ಕೃಷ್ಟ ಶಿಷ್ಯ ಇರಬೇಕು, ಅಥವಾ ತಾನು ಅಂತಹ ಶಿಷ್ಯನನ್ನು ತಯಾರುಮಾಡಬೇಕೆಂಬ ಆಸೆ ಪ್ರತಿಯೊಬ್ಬ ಗುರುವಿನಲ್ಲಿ ಸದಾ ಜಾಗೃತವಾಗಿ ಇರುವಂತಹ ಮಾತು. ಈ ಮಂದ್ರದಲ್ಲಿಯ ಮೋಹನಲಾಲ್ ಇದರ ವಿರುದ್ಧವಾಗಿ ವರ್ತಿಸುತ್ತಾನೆ. ಮಧುಮಿತಾ ಒಳ್ಳೆಯ ಶಿಷ್ಯೆಯಾಗುವ ಸಂದರ್ಭದಲ್ಲಿಯೇ ಆಕೆಯನ್ನು ಕೆಡಿಸುತ್ತಾನೆ. ಗುರುವನ್ನೇ ಪರಬ್ರಹ್ಮನೆಂದು ಆರಾಧಿಸುವಂತಹ ಈ ದೇಶದಲ್ಲಿ ಇಂತಹ ಕೃತ್ಯ ನಡೆದಿದೆ. 1947ರ ನಂತರದ ನಮ್ಮದೇ ಸರಕಾರದ ಆಡಳಿತದಲ್ಲಿದ್ದ, ರಾಜ್ಯ ಹೋಗಿದ್ದ, ಆದರೆ ವಾನಪ್ರಸ್ಥ ಪಡೆದ ಒಬ್ಬ ಸುಸಂಸ್ಕೃತ ಸಂಗೀತ ಕಲಾವಿದ ರಾಜನಿಂದ ಗುರುಮುಖಿ ವಿದ್ಯೆ ಪಡೆದ ಮೋಹನಲಾಲ್ ಕೊನೆಗೆ ಜ್ಯುದಾಸನಂತೆಯೇ ವರ್ತಿಸುತ್ತಾನೆ.

ಮಂದ್ರ ಇದು ಸಂಗೀತದ ಮೇಲಿನ ಕಾದಂಬರಿ, ಸಂಗೀತಕಾರನ ಬಗ್ಗೆ ಅಲ್ಲ ಎಂಬ ಮಾತನ್ನು ಇಲ್ಲಿ ನಮೂದಿಸಬೇಕಾಗಿದೆ. ಸಂಗೀತ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ಅಧಃಪತನ ಮತ್ತು ಆಗುಹೋಗುಗಳನ್ನು ಡಾ. ಭೈರಪ್ಪನವರು ಇದರಲ್ಲಿ ರೂಪಿಸಿದ್ದಾರೆ. ಎಲ್ಲ ಲೇಖಕರು ತುಳಿದು ಸವೆಸಿದ ಹಾದಿಯನ್ನು ಬಿಟ್ಟು, ಬೇರೆಯೇ ಕಾಲು ದಾರಿಯ ಜಾಡನ್ನು ಹುಡುಕಿ ತಮ್ಮ ವಿಶಿಷ್ಟವಾದ ನಡಿಗೆಯ ಲಯದಲ್ಲಿ ನಡೆಯುತ್ತಾರೆ. ಅಂತೆಯೇ ವ್ಯಭಿಚಾರವೇ ತನ್ನ ಶಿಷ್ಟಾಚಾರವೆಂದು ತಿಳಿದುಕೊಂಡು ಅದನ್ನೇ 35–40 ವರ್ಷಗಳ ತನ್ನ ಜೀವನ ಮೂಲ್ಯವೆಂದು ತಿಳಿದುಕೊಂಡ ಮೋಹನಲಾಲನ ಅಶ್ಲಾಘ್ಯ ವರ್ತನೆಯನ್ನು ಇಲ್ಲಿ ಚಿತ್ರಿಸಲಾಗಿದೆ. ಗುರುವಿನ ಅರ್ಥಪೂರ್ಣ ಜೀವನಕ್ಕೆ ಬಿರುಕು ಕೊಟ್ಟದ್ದೂ ಇದೇ ವರ್ತನೆ. ಇತ್ತೀಚೆಗೆ ಸಂಗೀತ ಕ್ಷೇತ್ರದಲ್ಲಿ ಕಾಣಬರುವ ಕೆಲವು ಅರ್ಥಶೂನ್ಯ ವಿಚಾರಗಳಿಗೆ ಕಾದಂಬರಿಯ ಉದ್ದಕ್ಕೂ ಡಾ. ಭೈರಪ್ಪನವರು ಕನ್ನಡಿ ಹಿಡಿದಿದ್ದಾರೆ. 'ಗುರುವಿನ ಈ ಬಾಳ್ವೆ ಸರಿಯೇ' ಎಂದು ಓದುಗರಿಗೆ ಕಳವಳವೆನಿಸುವಷ್ಟು ರಸಪೂರ್ಣವಾಗಿ ಚಿತ್ರಿಸಿದ್ದಾರೆ.

ಡಾ. ಭೈರಪ್ಪನವರ ಕಾದಂಬರಿ–ಲೇಖನದ ಓಘವು ಜಾತಿ ಕುದುರೆಯ ನಡಿಗೆಯಂತೆ ಲಯಬದ್ಧವಾದದ್ದು, ವಿಶಿಷ್ಟತೆಯಿಂದ ತುಂಬಿದ್ದು. ಅವರ ಕಾದಂಬರಿಗಳ ವಿಷಯಗಳ ವೈವಿಧ್ಯ ಮತ್ತು ಅವುಗಳೊಳಗಿನ ವ್ಯಕ್ತಿಗಳ ಒಂದು ಬಂಡಾಯ ಪ್ರವೃತ್ತಿ ಈ ಮಂದ್ರದಲ್ಲಿ ಕೂಡ ಇದೆ. ಕಾದಂಬರಿಯ ಮೊದಲ ಪುಟದಲ್ಲಿಯೇ ನಾಲ್ಕೇ ಸಾಲುಗಳಲ್ಲಿ ಡಾ. ಭೈರಪ್ಪನವರು ಈ ಕಾದಂಬರಿಯ ಮರ್ಮವನ್ನು ವಿಶದ ಪಡಿಸಿದ್ದಾರೆ.

ಎಷ್ಟೋ ಹೊತ್ತಿನ ನಂತರ ಭೋಸ್ಲೆಯ ಧ್ವನಿ: "ಕಲೆಯನ್ನು ನೋಡಿದಾಗ ಸ್ವರ್ಗಪ್ರವೇಶ ಮಾಡಿದ ಹಾಗೆ ಆಗತ್ತೆ. ಕಲಾವಿದನ ಒಳಹೊಕ್ಕಾಗ ಬೇರೆಯೇ ಇರುತ್ತೆ. ಯಾಕೆ ಈ ಕಾಂಟ್ರಡಿಕ್ಷನ್?" –ಇದೇ ಮಂದ್ರ ಕಾದಂಬರಿಯ ತಿರುಳು.

ಸುಮಾರು 600 ಪುಟದ ಕಾದಂಬರಿ ಓದಿ ಇಟ್ಟ ಮೇಲೆ ವಿಮರ್ಶಕ-ಓದುಗನ ಲಕ್ಷ್ಯಕ್ಕೆ ಮೊದಲನೇ ಪುಟದಲ್ಲಿಯೇ ಮಂದ್ರಸಪ್ತಕದ ಷಡ್ಜ ಹಚ್ಚಿದ ತರಹ, ಮತ್ತೆ ಮುಂದೆ ಅಲೆಅಲೆಯಾಗಿ ತಾರ ಸಪ್ತಕದ ಷಡ್ಜ ಕೊನೆಯ ಪುಟದಲ್ಲಿದೆ ಎಂಬ ಮಾತು ಬರದೇ ಇರುವುದಿಲ್ಲ. ಮಂದ್ರದ ಸ್ವರವೆಂದರೆ ಅತ್ಯಂತ ಆಳವಾದ ಚಿಂತನೆ-ಮನನ ಮಾಡುವ ಸ್ಥಿತಿ. ಬದಲಾಗುತ್ತಿರುವ ನಮ್ಮ ಸಂಸ್ಕೃತಿಯ ಪರಿಣಾಮ. ಭೈರಪ್ಪನವರು ತಮ್ಮ ಸಂವೇದನಶೀಲದ ಬರವಣಿಗೆಯಿಂದ ಬದಲಾಗುತ್ತಿರುವ ಗುರುವಿನ ಅಭಿವ್ಯಕ್ತಿಯನ್ನು ಎತ್ತಿ ತೋರಿಸುತ್ತಾರೆ. ಸಂಗೀತದಲ್ಲಿ ಗುರುಶಿಷ್ಯ ಪರಂಪರೆಯ ಈ 'ಹೊಸ' ಚೌಕಟ್ಟಿನ ಭಯಂಕರ ಸ್ವರೂಪವನ್ನು ಚಿತ್ರಿಸುತ್ತಾರೆ. ಒಂದು ತರಹದ ಕೆಂಪು ಕಂದೀಲನ್ನು ಉಮೇದುವಾರಿ ಮಾಡುವ ವಿದ್ಯಾರ್ಥಿಗಳಿಗೆ ತೋರಿಸುತ್ತಾರೆ. ಇದು ಸಂಗೀತ ಕಲಿಸುವ ಪಾಲಕರಿಗೂ ಅನ್ವಯಿಸುತ್ತದೆ. 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬಂತೆಯೇ ಈ ಹೊಸ ವಿಧಾನವೆಂದು ಮೋಹನಲಾಲನ ಮೂಲಕ ಸೂಚಿಸುತ್ತಾರೆ. ಭಾರತರತ್ನ ಪಡೆದ ಅಥವಾ ಭಾರತರತ್ನದ ಬಗ್ಗೆ ಪ್ರಯತ್ನಿಸುವ ಕೆಲ ಹಿಂದುಸ್ತಾನಿ ಗಾಯಕ, ವಾದಕರ ಪ್ರವೃತ್ತಿ ಇದಕ್ಕಿಂತ ಬೇರೆ ಇರಲಿಕ್ಕಿಲ್ಲ ಎಂಬ ಮಾತು ಇಂದಿನ ಸಂಗೀತದ ಆಗುಹೋಗುಗಳನ್ನು ನಿರೀಕ್ಷಿಸುವವರಿಗೆ ಹೊಸತಲ್ಲ. ದುಷ್ಪ್ರವೃತ್ತಿ ಇದ್ದವರೇ ಕೊನೆಗೆ ವಿಜಯ ಪಡೆಯುತ್ತಾರೋ ಏನೋ ಎಂಬ ಭಾವನೆ ಆಗಾಗ ಸುಳಿದರೂ "ಇದು ಸರಿ, ಇದು ತಪ್ಪು" ಎಂದು ಸರಿತಪ್ಪುಗಳ ಕಲ್ಪನೆ ಕಾದಂಬರಿಯ ಕೊನೆಗೆ ಬರದೇ ಇರುವುದಿಲ್ಲ.

ಕನ್ನಡ ಭಾಷೆಯ ಮಂದ್ರ, ಒಂದು ದೊಡ್ಡ ಸಾಹಿತ್ಯ-ಸಂಸ್ಕೃತಿಯ ಬಿರುಗಾಳಿಯನ್ನೇ ಎಬ್ಬಿಸಿತು ಎಂದರೆ ಅತಿಶಯೋಕ್ತಿ ಆಗಲಾರದು. ಕರ್ನಾಟಕದ ಮುಖ್ಯ ಪಟ್ಟಣಗಳಲ್ಲಿ ಮಂದ್ರದ ಬಗ್ಗೆ ಚರ್ಚಾಕೂಟ ನಡೆದದ್ದು ಪ್ರತಿಯೊಂದು ದಿನಪತ್ರಿಕೆ-ವಾರಪತ್ರಿಕೆಗಳಲ್ಲಿ ವಿಮರ್ಶಾತ್ಮಕ ಲೇಖನಗಳು ಬಂದಿದ್ದೂ ಇದೆ. ನಮ್ಮವರೇ ಆದ ವ್ಯಾಸರಾಯ ಬಲ್ಲಾಳರೂ ಒಂದು ದಿನಪತ್ರಿಕೆಯಲ್ಲಿ ಬರೆದ ವಿಮರ್ಶಾತ್ಮಕ ಲೇಖನವನ್ನು ಓದಿದ ನೆನಪು. Brick bats ಮತ್ತು Bouquets in equal measure ಸಿಕ್ಕಿದ್ದೂ ಇದೆ! 'ಭೈರಪ್ಪನವರೆಂದರೆ ಒಬ್ಬ ಜಿಜ್ಞಾಸು, ಪಾಂಡಿತ್ಯಪೂರ್ಣ ಲೇಖಕರು, ಆಳವಾಗಿ ಅಭ್ಯಸಿಸದೇ ಯಾವುದೇ ವಿಷಯಕ್ಕೂ ಕೈ ಹಾಕಲಾರರು' ಎಂಬ ಮಾತಿನಿಂದ 'ಡಾ. ಭೈರಪ್ಪನವರ ಲೇಖನಿ ಇತ್ತೀಚೆಗೆ ತುಂಬಾ ಚೂಪಾಗುತ್ತಾ ಇದೆ. ಮರ್ಮ ಭೇದಿಸುವ ಪ್ರಕಾರ ಜಾಸ್ತಿ ಆಗುತ್ತಾ ಇದೆ' ತನಕ ಬೇರೆ ಬೇರೆ ಅನಿಸಿಕೆಗಳು ಅಚ್ಚಾಗಿ ಬಂದಿವೆ. ಸಂಗೀತ ಒಂದು ಅಮೂರ್ತ ಕಲೆ, ಅದರ ಆಸ್ವಾದ ಕೂಡ ಅಷ್ಟೇ. ಸಂಗೀತದಲ್ಲಿಯೇ ಆಳವಾಗಿ ಮುಳುಗಿದ ವ್ಯಕ್ತಿಗಳಲ್ಲಿ ತರ್ಕಶುದ್ಧತೆ, ತರ್ಕಶಾಸ್ತ್ರಗಳ ಅಭಾವ ಇರುವುದು ಸಹಜ ಎಂಬ ಮಾತನ್ನು ವಿಮರ್ಶಕರು ನೆನಪಿನಲ್ಲಿಡಬೇಕು. ಸಂಗೀತ ಕ್ಷೇತ್ರದಲ್ಲಿದ್ದ ರಾಜಕೀಯತೆ ಮತ್ತು ಅದರಿಂದಾಗುವ ದುಷ್ಪರಿಣಾಮಗಳ ಚಿತ್ರಣ ಮಂದ್ರದ ಪುಟಪುಟಗಳಲ್ಲಿ ದೊರೆಯುತ್ತದೆ.

ಭಾರತೀಯ ಸಂಸ್ಕೃತಿ ಇಡೀ ಜಗತ್ತಿನಲ್ಲಿ ಅತ್ಯಂತ ಪ್ರಾಚೀನ ಸಂಸ್ಕೃತಿ ಎಂದು ಪ್ರಸಿದ್ಧ ಇತಿಹಾಸಜ್ಞ ಆರ್ನಾಲ್ಡ್ ಟಾಯನ್‌ಬಿ ಹೇಳಿದ್ದೂ, ಅಂತೆಯೇ ಭಾರತೀಯ ಧರ್ಮಶಾಸ್ತ್ರ, ಅಧ್ಯಾತ್ಮ, ತತ್ತ್ವಜ್ಞಾನ ಮತ್ತು ಸಂಗೀತ ಕೂಡ! ಎಂದು ಬೇರೆ ಹೇಳಬೇಕಾಗಿಲ್ಲ. ಹಾಗೆಯೇ, ಇವಕ್ಕೆಲ್ಲ ಪರದೇಶಗಳಲ್ಲಿ ಇತ್ತೀಚೆಗೆ ಭಾರಿ ಡಿಮಾಂಡು!

ರಜನೀಶರಿಂದ ರವಿಶಂಕರ್ ಅವರ ವರೆಗೆ, ಅಲಿ ಅಕಬರ್ ಖಾನರಿಂದ ಝುಕೀರ್ ಹುಸೇನ್‌ರವರೆಗೆ ಈ ಮಾತು ಅನ್ವಯಿಸುತ್ತದೆ. ಅಂತೆಯೇ ಕಾದಂಬರಿಯ ಪ್ರಾರಂಭ, ಕ್ಯಾಲಿಫೋರ್ನಿಯಾದ ಲಾಸ್ ಗಟಾಸ್ ನಗರದಲ್ಲಿ ಆರಂಭವಾಗುತ್ತದೆ. ಮಧುಮಿತಾ ಷಹಾ ಅಂದರೆ ಮೋಹನಲಾಲನ ಶಿಷ್ಯೆಯ ಮನೆಯಲ್ಲಿ. ಈ ಕಾದಂಬರಿಯಲ್ಲಿ ಮೋಹನಲಾಲ, ಅವನ ಪ್ರಿಯಶಿಷ್ಯೆ ಮಧುಮಿತಾ, ಮೊದಲ ಹೆಂಡತಿ ರಾಮಕುಮಾರಿ, ಎರಡನೇ ಹೆಂಡತಿ ಚಂಪಾ ನಾಯಕ, ಮೋಹನಲಾಲನ show-off ಶಿಷ್ಯೆ ಲಾರೆನ್ ಸ್ಮಿತ್ (ಇದೊಂದು ಉತ್ತರಾದೀ ಸಂಗೀತಕ್ಕಿರುವ ಶಾಪ!) ಅವನ ಪ್ರೇಯಸಿ ಕೂಡ ಚುನ್ನಬಾಯಿ. ಮಧುಮಿತಾನ ಗಂಡ ಕಾದಂಬರಿಯಲ್ಲಿದ್ದೂ ಇಲ್ಲದಂತಹ ವ್ಯಕ್ತಿ ವಿಕ್ರಮ ಮತ್ತು ನೃತ್ಯಾಂಗನೆ ಮೋಹಿನಿ ದಾಸ್. ಅಂತೆಯೇ ಅವನ ಸಹಕಲಾವಿದರಾದ ಓಂಕಾರ ಪ್ರಭು (ತಬಲಾ) ಹಾಗೂ ಪೇಟಿವಾದಕ ರಾಜಾರಾಮ ಟಿಪ್‌ನೀಸ್ ಇತ್ಯಾದಿ ಪಾತ್ರಗಳು ಸಂಗೀತದಲ್ಲಿಯಂತೆ 7 ಶುದ್ಧ ಮತ್ತು 5 ವಿಕೃತ ಸ್ವರಗಳಿದ್ದ ಹಾಗೆ ಆ ವ್ಯಕ್ತಿಗಳು ಆಗಾಗ ಬಂದು ಅಂದರೆ ಆರೋಹಣ ಅವರೋಹಣದಲ್ಲಿ ಪ್ರವೇಶಿಸಿ ಸ್ಥಾಯಿಭಾವದಲ್ಲಿ ಪ್ರಸ್ತಾಪಿಸಲ್ಪಡುತ್ತಾರೆ! ಸಂಗೀತದಲ್ಲಿಯ ವಾದಿ ಸ್ವರದಂತೆ ಮಧುಮಿತಾ, ಸಂವಾದಿ ಸ್ವರದಂತೆ ಮೋಹನಲಾಲನ ಮೊದಲನೇ ಅಶಿಕ್ಷಿತ ಹೆಂಡತಿ ರಾಮಕುಮಾರಿ. ರಾಗ ಯಾವುದು? ಮೋಹನ ಅರ್ಥಾತ್ ಮೋಹನಲಾಲ!.

ಮಂದ್ರ ಕಾದಂಬರಿಯ ಸ್ಥಳ, ಮುಂಬಯಿ ಮಹಾನಗರ, ಕಾಲ, ಇತ್ತೀಚಿನ ಕಾಲ ಅಂದರೆ 35–40 ವರ್ಷಗಳದ್ದು; ರಾಜ್ಯವನ್ನು ಕಳೆದುಕೊಂಡ ರಾಜಮಹಾರಾಜರ ಸಮಯದಿಂದ ಈ ತನಕ. ಸಂಗೀತದಲ್ಲಿ ಒಂದು ಉಚ್ಚ ಕೋಟಿಯ ಪರಮಗುರು ರಾಜಾ ಸಾಹೇಬರಿಂದ ಗುರು–ಶಿಷ್ಯ ಪರಂಪರೆಯಲ್ಲಿ ಸಂಗೀತಾಭ್ಯಾಸ ನಡೆಸಿದ ಉತ್ತರದ ಮೋಹನಲಾಲ ದಕ್ಷಿಣಕ್ಕೆ ಬಂದು ಮುಂಬಯಿಯಲ್ಲಿ ನೆಲೆಸುತ್ತಾನೆ. (ಉತ್ತರಾದಿ ಸಂಗೀತದ ಸಾಮ್ಯವಿರಬಹುದೇ?) ಅಲ್ಲಿಂದ ಕೊನೆಯವರೆಗೆ ಅವನ ವಾಸ್ತವ್ಯ ಇಲ್ಲಿಯೇ. ಎಂದಿನಂತೆ ಭೈರಪ್ಪನವರು ತಮ್ಮ flash-back ತಂತ್ರವನ್ನು ಇಲ್ಲಿ ಕೂಡ ಬಳಸಿದ್ದಾರೆ.

ಡಾ. ಭೈರಪ್ಪನವರ ಕಾದಂಬರಿಗಳಲ್ಲಿಯ ವಿಷಯ ವೈವಿಧ್ಯತೆ ಓದುಗರ ಲಕ್ಷ್ಯವನ್ನು ಸೆಳೆಯುತ್ತದೆ. ಎರಡೇ ಅಕ್ಷರಗಳ ಮಹತ್ವವನ್ನು ನೆನಸಿ ಕಾದಂಬರಿಯ ನಾಮಾಂಕನ ಮಾಡುವ ವಿಧಾನದಲ್ಲಿ ಡಾ. ಭೈರಪ್ಪನವರು ನಿಷ್ಣಾತರು. 'ಸಾರ್ಥ', 'ತಂತು', 'ದಾಟು', ಮತ್ತು 'ಮಂದ್ರ'– ಹೆಸರು ಸಣ್ಣದಿದ್ದಷ್ಟು ಕೃತಿ ದೊಡ್ಡದು. ಸಂಗೀತಕ್ಷೇತ್ರದವರಿಗೆ ಮಂದ್ರದ ಅರ್ಥ ವಿಶದ ಪಡಿಸುವ ಅಗತ್ಯವಿಲ್ಲ. ಮಂದ್ರ, ಮಧ್ಯ ಮತ್ತು ತಾರ ಸಪ್ತಕಗಳಲ್ಲಿ ಲೀಲಾಜಾಲವಾಗಿ ತಿರುಗಾಡಿ ಮೂರು ಸಪ್ತಕಗಳಲ್ಲಿರುವ ಸ್ವರಗಳ ಸುರಿಮಳೆ, ಕುಶಲ ಕಲಾವಿದ ತೋರಿಸುತ್ತಿರುವುದು ಎಲ್ಲರಿಗೂ ಗೊತ್ತು. ಆದರೆ, 'ಮಂದ್ರ' – ಈ ಹೆಸರೇ ಏಕೆ? 'ಮಧ್ಯ' ಏಕಿಲ್ಲ ಅಥವಾ 'ತಾರ'ವನ್ನೇಕೆ ದುರ್ಲಕ್ಷಿಸಿದರು ಭೈರಪ್ಪನವರು?

ಸಂಗೀತಜ್ಞಾನಿಗಳು ಹೇಳುವಂತೆ ಮಂದ್ರ ಸಪ್ತಕದ ಉಗಮ ಹೃದಯದಲ್ಲಿ ಆಗುತ್ತದೆ. ಮಧ್ಯದ ಉಗಮ ಗಂಟಲಲ್ಲಿ ಅಂದರೆ ಸ್ವರ ಯಂತ್ರದಲ್ಲಿ ಮತ್ತು ತಾರ ಸಪ್ತಕದ್ದು ಮಿದುಳಿನಲ್ಲಿ. ಈ ಕಾದಂಬರಿಯಲ್ಲಿ ಹೃದಯದ ಸ್ಪಂದನಗಳು ಹೇರಳವಾಗಿವೆ. ಮಿಕ್ಕಿ ಮೀರಿದ್ದು ಮತ್ತೊಂದು ಮಾತು. ಇತ್ತೀಚೆಗೆ ಹಾಡುಗಾರಿಕೆಯಲ್ಲಿ ಮತ್ತು ವಾದನದಲ್ಲಿ ಕೂಡ ಮಂದ್ರ ಸಪ್ತಕದ ಬಳಕೆ ಕಡಿಮೆಯಾಗುತ್ತಾ ಇದೆ. ಜಾಸ್ತಿಯಾಗಿ

ಮಧ್ಯ ಮತ್ತು ತಾರ ಸಪ್ತಕದಲ್ಲಿ ಸಂಚಾರ, ಅತಿ ತಾರ ಸಪ್ತಕ ಕೂಡ ಚಪ್ಪಾಳೆಗಿಟ್ಟಿಸುವ ಸಲುವಾಗಿ ಆಗಾಗ ಬಳಸುವುದು ಮಾಮೂಲಾಗಿ ಬಿಟ್ಟಿದೆ. ಮಂದ್ರ ಸಪ್ತಕದಲ್ಲಿಯ ಕಸುಬು ಅತ್ಯಂತ ಲಕ್ಷಣೀಯವಾದದ್ದು. ಗಾಯನ, ವಾದನದ ಮುಂಬರುವ ಭವ್ಯ ಆಕಾರದ ಕೃತಿಗೆ ಮಂದ್ರ ಸಪ್ತಕದ ತಳಹದಿ ಬೇಕೇಬೇಕು. ಮಂದ್ರ ಸಪ್ತಕದ ಖರ್ಜ್ – ಇದು ಗಾಂಭೀರ್ಯದ ಒಂದು ಲಕ್ಷಣ.

ಸಂಗೀತ ಮತ್ತು ಸಾಹಿತ್ಯದ ಒಂದು ಸುಂದರ ಮನಮೋಹಕವಾದ ಸಂಗಮವನ್ನು ಭೈರಪ್ಪನವರು ಮಂದ್ರದಲ್ಲಿ ಸಾಧಿಸಿದ್ದಾರೆ. 35–40 ವರ್ಷಗಳ ಹಿಂದಿನ ಉತ್ತರಾದಿ ಸಂಗೀತದ ತಾನ್, ಪಲಟೆಗಳನ್ನು ಭೈರಪ್ಪನವರು ಕಲಿತಿದ್ದಾರೆ. ಮಂದ್ರ ಬರೆಯುವ ಮೊದಲು ಅದರಲ್ಲಿ ಬರುವ ರಾಗ ಲಕ್ಷಣಗಳನ್ನೆಲ್ಲಾ ಮರಳಿ ಅಭ್ಯಸಿಸಿದ್ದು ಸಂಗೀತ ಗೊತ್ತಿದ್ದವರಿಗೆ ಗೋಚರಿಸದೇ ಇರಲಾರದು. ಕಥಕ ನೃತ್ಯವನ್ನು ಅಭ್ಯಸಿಸಿದ್ದುದರಿಂದ ಇಲ್ಲಿಯ ಮನೋಹರಿ ದಾಸ್ ಒಂದು ನಿತಾಂತ ಸುಂದರ ಲಯದಲ್ಲಿ ಹೆಜ್ಜೆ ಹಾಕಿ ಕುಣಿಯುತ್ತ ಕುಣಿಯುತ್ತ ವಾಚಕರ ಮನಸ್ಸು ಗೆಲ್ಲುತ್ತಾಳೆ. ಲೇಖಕರು ತಮ್ಮ ಗಂಟಲಲ್ಲಿ ಸ್ವರ ಹಿಡಿದು ತಮ್ಮ ಲೇಖನಿಯನ್ನು ಸ್ವರ ವ್ಯಂಜನಗಳ ಮಸಿಯಲ್ಲಿ ಅದ್ದಿ ಈ ಕಾದಂಬರಿಯ ಅಕ್ಷರಗಳನ್ನು ಮೂಡಿಸಿದ್ದಾರೆ. ಸಂಗೀತದಂತಹ ಅಮೂರ್ತಕಲೆಗೆ ಸಜೀವ ಕಳೆ ತುಂಬಿದ್ದಾರೆ. ಒಂದು ಸಮರ್ಪಕತೆಯಿಂದ, ಒಂದು ಸಹಜತೆಯಿಂದ ಇದನ್ನು ಸಾಧಿಸಿದ್ದಾರೆ. ಅಂತೆಯೇ, ಮಂದ್ರ ಸಪ್ತಕದ ಖರ್ಜ್‌ದಲ್ಲಿಯ ಷಡ್ಜ ಹಚ್ಚಿದ್ದು ಈ ಕಾದಂಬರಿಯ ಮೊದಲಿನ ವಾಕ್ಯದಲ್ಲಿಯೇ. "ಮಹಾಗರತಿ ಹಂಗೆ ಹಟಮಾಡಿದಳು" ಎಂಬ ವಾಕ್ಯದಿಂದ ಪ್ರಾರಂಭವಾದ ಈ ಬೃಹತ್ಕಾದಂಬರಿ, ಮುಂಬಯಿ ಕಿಂಗ್ ಜಾರ್ಜ್ ಹೈಸ್ಕೂಲಿನ ಪಟಾಂಗಣದಲ್ಲಿಯ ಅತಿ ವಿಶಾಲ ಕಿಕ್ಕಿರಿದ ಜನಸಮುದಾಯ ಅಂದರೆ ಮೋಹನಲಾಲನನ್ನು ಬೀಳ್ಕೊಡುವ ಸಮಾರಂಭದ ಹೊತ್ತಿಗೆ ಮುಕ್ತಾಯಗೊಳ್ಳುತ್ತದೆ. ಅತ್ಯಂತ ಭವ್ಯ ವಾತಾವರಣ, ಸಂಗೀತಮಯ ಸ್ತಬ್ಧತೆ. ಹತ್ತು ಹನ್ನೆರಡು ಸಾವಿರಕ್ಕೂ ಮೀರಿದ ಪ್ರೇಕ್ಷಕರು (ಪುಣೆಯ ಸವಾಯ ಗಂಧರ್ವದಂತಹ ವಾತಾವರಣ!). ಎಲ್ಲರೂ ಮೋಹನಲಾಲನ ಮಂದ್ರ ಸ್ವರಗಳನ್ನು ಆಲಿಸುವ ತವಕದಲ್ಲಿ, ಆದರೆ ಸಾಂಸ್ಕೃತಿಕ ಮೌಲ್ಯಗಳನ್ನು ಈಗಾಗಲೇ ಕಳೆದುಕೊಂಡ, ವ್ಯಭಿಚಾರ, ಹಾದರಗಳಿಂದ ಕಳೆಗುಂದಿದ ಅರವತ್ತರ ಮೋಹನಲಾಲನಿಗೆ ಮಂದ್ರ ಸಪ್ತಕದ ಷಡ್ಜ ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗುವುದಿಲ್ಲ. ಮನಸ್ಸನ್ನು ಸ್ಥಿಮಿತಗೊಳಿಸಿ, ಪ್ರಯತ್ನಪಟ್ಟು ಮರಳಿ ಏರುವ ಪ್ರಯಾಸ ಮಾಡುತ್ತಾನೆ. ಗಂಟಲು ಸಾಥ್ ಕೊಡುವುದಿಲ್ಲ. ಕೊನೆಗೆ ಎದ್ದು ಕೈ ಮುಗಿದು ಕ್ಷಮೆ ಯಾಚಿಸಿ ಹೊರಟುಹೋಗುತ್ತಾನೆ. ಆತ ಆ ದಿನ ಹಾಡಲು ಯೋಚಿಸಿದ್ದು ಬೇರೆ ಯಾವುದೇ ರಾಗವಲ್ಲ, ಶುದ್ಧ ಕಲ್ಯಾಣ್. ಇದೊಂದು ಅತ್ಯಂತ ಅರ್ಥಪೂರ್ಣವಾದ ಪ್ರತಿಮೆ. ಇದು ಈ ಕಾದಂಬರಿಯ ತಾರ ಷಡ್ಜದ ಮೇಲಿನ ಠೆಹರಾವ್!

ನಂತರ ಕಾಲೇಜಿನಲ್ಲಿಯೇ ತಂಬೂರಿ ಜೋಡಿಸಲ್ಪಟ್ಟ ರೂಮಿನಿಂದ ಮಧುಮಿತಾ, ರಾಜಾರಾಮ್ ಟಿಪ್‌ಣೀಸರ ಮನೆಗೆ ಬಂದು ಅವರ ಮನೆಯಲ್ಲಿಯೇ ಕುಳಿತು, ಟಿಪ್‌ಣೀಸ್ ಹೇಳಿದಂತೆ ಶುದ್ಧ ಕಲ್ಯಾಣ್ ಹಾಡುತ್ತಾಳೆ. ಮೋಹನಲಾಲನ ಹೊಡೆತ ತಿಂದು ಶಾಪಕ್ಕೆ ಸಿಕ್ಕಿದ ಅವಳು ಮುಂದೆ ರಾಜಾರಾಮ ಟಿಪ್‌ಣೀಸರ ಬಳಿ ಕಲಿತು, ಪ್ರಾವೀಣ್ಯವನ್ನು ಗಳಿಸಿದ್ದರಿಂದ ಆ ದಿನದ ಶುದ್ಧ ಕಲ್ಯಾಣದ 'ಸೌಮ್ಯ, ಗಂಭೀರವಾಗಿ

ನಿಶ್ಚಲ ರೂಪದಲ್ಲಿ ಚಲಿಸುವ ಸ್ವರದಲ್ಲಿಯೂ ಒಂದು ಲಯವನ್ನು ಆಂತರಿಕವಾಗಿ ಹತೋಟಿಯಲ್ಲಿಟ್ಟುಕೊಂಡು, ಮಧುಮಿತಾ ರಾಗದ ಚೌಕಟ್ಟನ್ನು ಮುರಿಯದೇ ಮುಕ್ತಾಯದ ಷಡ್ಜಕ್ಕೆ ಹರಿಯುತ್ತಾಳೆ. "ಕಾಕಾ, ಈಗ ನಾನು ಚೆನ್ನಾಗಿ ಹಾಡಿದೆ ಅಂತ ನನಗೂ ಅನಿಸ್ತಿದೆ. ಆದರೆ ವಿಕ್ರಂ (ಗಂಡ) ಇದನ್ನ ಕೇಳಬೇಕಾಗಿತ್ತು. ಅವರು ನನ್ನನ್ನು ಬಿಟ್ಟರು. ಚಿಂತೆಯಿಲ್ಲ. ತಮ್ಮನ್ನು ತಾವು ಸಂಗೀತದಿಂದ ವಂಚಿಸಿಕೊಂಡಿದ್ದಾರೆ. ಅವರಿಗೆ ಜೀವನದಲ್ಲಿ ಯಾವ ಅರ್ಥ ಉಳಿದಿದೆ?. ಎಂದು ನೀರು ತುಂಬಿಸುರಿಯುವ ಕಣ್ಣುಗಳಿಂದ ನೋಡಿದಳು" – ಇದು ಕಾದಂಬರಿಯ ಕೊನೆಯ ವಾಕ್ಯ.

600 ಪುಟದ ಈ ಕಾದಂಬರಿಯಲ್ಲಿ ಹಣಕಾಸಿನ ಸಮೃದ್ಧಿ, ಗವಯಿ ಮೋಹನಲಾಲನ ಏರಿಳಿತ, ಗುರು ಮೋಹಲಾಲನಿಂದ ಆದ ಮಧುಮಿತಾ ಷಹಾಳ ನೀತಿಭ್ರಷ್ಟತೆ, ಅವಳ ಅತ್ಯಂತ ಸುಖದ್ದಾಗಬಹುದಾಗಿದ್ದ ಸಂಸಾರ – ಸ್ವಾರಸ್ಯದ ಅಂತ್ಯ, ಮೋಹನಲಾಲನ ಎರಡನೆ ಹೆಂಡತಿ ಚಂಪಾಳಿಂದ ಆದ ಮೋಸ, ಪಾತರಗಿತ್ತಿ ನೃತ್ಯಾಂಗನೆ ಮನೋಹರಿ ದಾಸ್‌ಳ ಪ್ರೀತಿಶೃಂಖಲೆಯಲ್ಲಿ ಬಂಧಿತನಾದ ಮೋಹನ ಲಾಲನಿಗೆ ಅವಳಿಂದ ಆದ ಅಪಮಾನ, ಹೀಗೆಲ್ಲ ಘಟನೆಗಳನ್ನು ಭೈರಪ್ಪನವರು ತಮ್ಮ ಸಮರ್ಥ ಲೇಖನಿಯಿಂದ ಪ್ರಖರವಾಗಿ ಉತ್ಕಟತೆಯಿಂದ ಕೆತ್ತಿದ್ದಾರೆ.

ಡಾ. ಉಮಾ ಕುಲಕರ್ಣಿ ಹಾಗೂ ವಿರೂಪಾಕ್ಷ ದಂಪತಿಗಳಿಂದ ಮಂದ್ರದ ಮರಾಠಿ ರೂಪ ಅತ್ಯಂತ ಸಮಂಜಸವಾಗಿ ಮಾಡಲ್ಪಟ್ಟಿದೆ. ಅಭಿಜಾತ ಸಂಗೀತದ ಜ್ಞಾನ ಕುಲಕರ್ಣಿ ದಂಪತಿಗಳಿಗೆ ಇದೆ, ಇದೊಂದು ಹೆಚ್ಚಿನ ಗರಿ ಎಂದು ಹೇಳಬಹುದು. ಈ ತನಕ ಕನ್ನಡದಲ್ಲಿ ಸಂಗೀತ ವಿಷಯದ ಬಗ್ಗೆ ಕೂಲಂಕಷವಾಗಿ ಬರೆದ ಕಾದಂಬರಿಗಳು ಇಲ್ಲವೇ ಇಲ್ಲ. ಇದ್ದುದು ಸಂಗೀತಗಾರರ ಮೇಲೆ ಬರೆದ ಕಾದಂಬರಿಗಳು. ಮಾಸ್ತಿಯವರ 'ಸುಬ್ಬಣ್ಣ', ತರಾಸು ಅವರ 'ಹಂಸಗೀತೆ', ಅನಕೃ ಅವರ 'ಸಂಧ್ಯಾರಾಗ', 'ಉದಯರಾಗ', ಇವೆಲ್ಲ ಇವೆ. ಮರಾಠಿಯಲ್ಲಿ ನಾನು ಓದಿದ್ದು ಎರಡು ಕೃತಿಗಳು. ಈ ಕೃತಿಗಳು ಮತ್ತು ಮಂದ್ರದ ನಡುವೆ ಇರುವ ಭಿನ್ನತೆ ಇಷ್ಟೇ. – ಮೇಲೆ ಹೇಳಿರುವವು ಸಂಗೀತಗಾರರ ಮೇಲೆ ಬರೆದ ಕಾದಂಬರಿಗಳು, ಮಂದ್ರದಲ್ಲಿ ಭೈರಪ್ಪನವರು ಸಂಗೀತಕ್ಕೆ ಸಜೀವತ್ವವನ್ನು ಕೊಟ್ಟಿದ್ದಾರೆ. ಅದಕ್ಕೊಂದು ಎಲುಬಿನ ಹಂದರ ಮಾಡಿ, ರಕ್ತ ಮಾಂಸ ಏರಿಸಿ, ಪ್ರಾಣವಾಯು ಊದಿ ಸಜೀವತೆಯ ಕಳೆಯನ್ನು ತುಂಬಿದ್ದಾರೆ.

ಸಂಗೀತ ಒಂದು ಅಮೂರ್ತಕಲೆ ಎಂದು ಮೇಲೆ ಹೇಳಿದ್ದೇನೆ. ಅಂತೆಯೇ ಸಂಗೀತವನ್ನು ಆಲಿಸುವುದು ಕೂಡ. ಆದರೂ ಪ್ರತಿಯೊಂದು ಪಾತ್ರಕ್ಕೂ ವಿಶಿಷ್ಟ ಬಣ್ಣವನ್ನು ಬಳಿಯುವ ಶಬ್ದಚಿತ್ರಕಾರ ಭೈರಪ್ಪನವರು ಇಲ್ಲಿ ರಂಗಚಿತ್ರಕಾರರಾಗಿದ್ದಾರೆ. ಪ್ರತಿಯೊಬ್ಬ ವ್ಯಕ್ತಿ ಅವರ ಕುಂಚದಿಂದ ಸಜೀವತೆಯನ್ನು ಪಡೆದು ಕಾದಂಬರಿಯಲ್ಲಿ ಉದ್ದಕ್ಕೂ ಮೆರೆಯುತ್ತಿರುತ್ತಾನೆ. ಲೈಂಗಿಕತೆ ಇಲ್ಲದೆ ಇದ್ದರೆ ಸಜೀವತೆ ಬರುವುದಾದರೂ ಹೇಗೆ? ಸಂಗೀತದಲ್ಲಿ ಉಪಜ ಇದ್ದ ಹಾಗೆ ಲೈಂಗಿಕತೆಯ ಉಪಜ ಮನೋಹರಿ ದಾಸ ಎಂಬ ವ್ಯಕ್ತಿಚಿತ್ರದಲ್ಲಿಯೂ ಇದೆ.

ಅಪೇಕ್ಷಿತತೆ ಮತ್ತು ಅನಪೇಕ್ಷಿತತೆ ಇವೆರಡೂ ಸಂಗೀತದ ಬಲವಾದ ಸ್ಥಾನಗಳು. ಗಾಯಕ ಹಾಡುವಾಗ ಪ್ರತಿಯೊಂದು ಸಲ ಸಮ್ಮಿಗೆ ಅಂದರೆ ತಬಲಾದ ಆವರ್ತನೆಯೊಂದಿಗೆ

ಸರಿಸಮವಾಗಿ ಸಮ್ಮಿಗೆ ಬರುವಾಗ ಈ ಅನಪೇಕ್ಷಿತತೆಯಿಂದ ರಸಿಕರಿಂದ 'ಭೇಷ್, ವಾಹ್‌ವಾ' ಎಂಬ ಪ್ರತಿಕ್ರಿಯೆ ತಂತಾನೇ ಬರುತ್ತದೆ. ಗಾಯಕನ ಪ್ರತಿಯೊಂದು ಕರಾಮತಿಗೆ, ಚಮತ್ಕೃತಿಗೆ ತಂತಾನೇ ಈ ಪ್ರತಿಕ್ರಿಯೆ ಸಿಗುತ್ತದೆ. ಇದಾಯಿತು ಅನಪೇಕ್ಷಿತತೆಯಿಂದಾಗಿ. ಇನ್ನು ಅಪೇಕ್ಷಿತ ಚೀಜ಼ನ್ನೇ ಅಂದರೆ ಕೃತಿಯನ್ನೇ ಅದೇ ರಾಗದಲ್ಲಿ ಹಾಡಿದರೆ ಈ ಆನಂದ, ಸಂತೋಷ ಪರಮವಾಗುತ್ತದೆ. ಒಳ್ಳೆಯ ಸಂಗೀತವನ್ನು ಅಂದರೆ ಭಾವಪೂರ್ಣ, ರಸಪೂರ್ಣ ಸಂಗೀತವನ್ನು ಕೇಳಿದಾಗ ಆಗುವ ಸಂತೋಷ, ಆನಂದಗಳ ಬುಗ್ಗೆ ಅಥವಾ ಕಾರಂಜಿ ಈ ಕಾದಂಬರಿಯನ್ನು ಓದಿದಾಗ ಆಗುತ್ತದೆ. ಈ ಆನಂದ ದ್ವಿಗುಣಿತವಾಗಲು ಸಂಗೀತ ಜ್ಞಾನ ಬೇಕೆಂದಿಲ್ಲ, ಓದುತ್ತಲೇ ಓದುಗರು ಸಂಗೀತಜ್ಞಾನವನ್ನು ಕೆಲಮಟ್ಟಿಗೆ ಪಡೆಯುತ್ತಾರೆ ಎಂಬುದು ಕೂಡ ಈ ಕಾದಂಬರಿಯ ವಿಶಿಷ್ಟತೆ!

ಡಾ. ಭೈರಪ್ಪನವರ 'ಸಾರ್ಥ', 'ತಂತು' ಕೃತಿಗಳಲ್ಲಿಯ ಪಾತ್ರಗಳಿಗೆ ಒಂದು ಆಧ್ಯಾತ್ಮಿಕ ಹಿನ್ನೆಲೆ ಇದೆ. ಮಂದ್ರವೂ ಅದಕ್ಕೆ ಅಪವಾದವಲ್ಲ! ಎಲ್ಲಾ ಕಲಾವಿದರಂತೆ ಮೋಹನಲಾಲನಲ್ಲಿಯೂ 'ನಾನೊಬ್ಬ ಕಲಾವಿದ' ಎನ್ನುವ ಅಹಂಭಾವ ಇದ್ದೇ ಇದೆ. ಕಲಾವಿದರ ಖಾಸಗೀ ಜೀವನದ ಬಗ್ಗೆ ಮೀಮಾಂಸೆ ಮಾಡಿದರೆ, ಗುಣದೋಷಗಳನ್ನು ಎತ್ತಿ ತೋರಿಸಿದರೆ, ಅವರ ಕಲೆಗೆ ಅವಮಾನ ಮಾಡಿದ ಹಾಗೆ ಅಲ್ಲ, ಅಥವಾ ಅವರ ಕಲೆ ಒಂದು ಗುಂಜಿಯಷ್ಟೂ ಕಳೆಗುಂದುವುದಿಲ್ಲ. ಅವರ ಕಲೆ ಕಲಂಕಿತವಾಗುವುದಿಲ್ಲ. ಭೈರಪ್ಪನವರು ಮೋಹನಲಾಲನ ಬಗ್ಗೆ ನಿಸ್ಪೃಹತೆಯಿಂದ ವಿಚಾರ ಮಾಡಿದ್ದಾರೆ. ಮಾನವ ಸಹಜ ಪ್ರತಿಕ್ರಿಯೆಗಳು, ವಿಷಯವಾಸನೆಯ ಬಾಧೆಗಳು ಹಾಗೂ ಕಾಮಪ್ರವೃತ್ತಿಯ ಪ್ರಚೋದನೆಗಳು ಅಶಿಕ್ಷಿತ ರಾಮಕುಮಾರಿ ಹಾಗೂ ಕಾಮಬಾಧೆ ಕಳೆದುಕೊಳ್ಳಲು ಹೋದ ವೇಶ್ಯಾವಾಟಿಕೆಯಲ್ಲಿಯ ಹೆಂಗಸು, ಕೂಡ ಇದರಿಂದ ಹೊರತಾಗಿಲ್ಲ. ಇವರೆಲ್ಲರೂ ಒಂದು ಚಕ್ರದ ಸುಳಿಯಲ್ಲಿ ಸಿಕ್ಕಿ ಮೇಲೆ ಕೆಳಗೆ ಜಿಗಿದಾಡುತ್ತಿರುತ್ತಾರೆ. ಒಂದು ಆರೋಹಣ ಅವರೋಹಣದಂತೆ .

ಇಡೀ ಕಾದಂಬರಿಯಲ್ಲಿ ಒಂದು ನಿಸ್ವಾರ್ಥಿ ಪಾತ್ರವಿದೆ –ಗೋರೆ ವಕೀಲರದು. ಇವರು ಹಣಕಾಸಿನ ವಕೀಲರು. ಮೋಹನಲಾಲನನ್ನು ಒಂದಾನೊಂದು ಕಾಲದಲ್ಲಿ ಪುರಸ್ಕರಿಸಿದ್ದವರು. ಪರಾಂಜಪೆ ಎಂಬ ಪತ್ರಕರ್ತ, ಸಂಘಟಕನೊಂದಿಗೆ ಮೋಹನ ಲಾಲನನ್ನು ಹಾಡುಗಾರಿಕೆಯ ಮೇರುಪರ್ವತದ ಶಿಖರದ ತುತ್ತ ತುದಿಯಲ್ಲಿ ಕುಳ್ಳಿರಿಸಿದವರಲ್ಲಿ ಒಬ್ಬರು. ಗೋರೆಯವರ ಸಂಗೀತದ ಮೇಲಿನ ಭಕ್ತಿ, ನಿಸ್ಪೃಹವಾದ ಪ್ರೇಮ, ಒಳ್ಳೆಯ ಗುಣ ವೈಶಿಷ್ಟ್ಯಗಳಿದ್ದ ಕಲಾವಿದನ ಬಗ್ಗೆ ಇದ್ದ ತಿಳಿವಳಿಕೆ – ಇವೆಲ್ಲವನ್ನೂ ಲೇಖಕರು ಅತ್ಯಂತ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ಇದೊಂದು ಮೋಹನಲಾಲನ ವಿರೋಧಾಭಾಸದಂತೆ ಕಾಣುವ ವ್ಯಕ್ತಿಚಿತ್ರ. ಕಾದಂಬರಿಯುದ್ದಕ್ಕೂ ಮೋಹನಲಾಲ ಅಲೌಕಿಕತ್ವದಿಂದ ಲೌಕಿಕತ್ವದ ಕಡೆಗಿನ ಹಾದಿಯನ್ನು ತುಳಿದರೆ ಗೋರೆಯವರು ಸ್ಥಿತಪ್ರಜ್ಞರಂತೆ ಆತನ ಎಲ್ಲಾ ತಪ್ಪುಗಳನ್ನೂ ಕ್ಷಮಿಸಿ ಮರಳಿ ಜೀವದಾನ ಕೊಡುವಂತಹ ಸ್ವಭಾವದ ವ್ಯಕ್ತಿ. ಇಂತಹ ವ್ಯಕ್ತಿ ನಮ್ಮ ಪುಣೆ–ಮುಂಬಯಿಗಳಲ್ಲಿ ಬಹುಶಃ ಇರಬಹುದು ಕೂಡ.

ಇಂದಿನ ಸಂಗೀತ ಕ್ಷೇತ್ರದಲ್ಲಿ ಇತ್ತೀಚೆಗೆ ಕೈಲಾಸವಾಸಿಯಾದ ಗುರುವಿನ ಹೆಸರಿನಲ್ಲಿ ಗುರುಪೂರ್ಣಿಮಾ ಆಚರಿಸಿ 'ಗುರುದಕ್ಷಿಣೆ' ಎತ್ತಿ ಸ್ವಾಹಾ ಮಾಡುವಂತಹ

ವ್ಯಕ್ತಿಗಳಿಗೇನೂ ಕಡಿಮೆ ಇಲ್ಲ! ತಂದೆ-ತಾಯಿ ಹಾಡುವವರಿದ್ದರೆ, ಅವರ ಸಂತತಿ ಹಿರಿಯರ ಹೆಸರಿನಲ್ಲಿ "ಸಂಗೀತದ ಸೇವೆ' ಎಂದುಕೊಂಡು ಮುದಿಕುದುರೆಗೆ ಚಾಟಿ ಹೊಡೆದು ರೇಸಿಗೆ ಇಳಿಸುವ ಅತ್ಯಂತ ಕೀಳು ಸ್ವಭಾವದವರೂ ಈ ಕ್ಷೇತ್ರದಲ್ಲಿ ದುರ್ದೈವವಶಾತ್ ಕಡಿಮೆ ಇಲ್ಲ. ಮಾನಧನವೆಂದು 2-3 ಲಕ್ಷ ಹೊಡೆದು ಆಲಿಸುವವರಿಗೆ ನಾಮ ಎಳೆದದ್ದೂ ಇದೆ! ಸಂಗೀತದ ಸಾಧನೆಯ ಸ್ವರೂಪ ಅತ್ಯಂತ ಕಠಿಣ! ಎಂದು ಬೇರೆ ಹೇಳಬೇಕಾಗಿಲ್ಲ. ಇದರಲ್ಲಿಯ ಉಮೇದುವಾರಿ ಎಂದರೆ ಕಬ್ಬಿಣದ ಕಡಲೆ ಬಾಯಲ್ಲಿ ಹಾಕಿಕೊಂಡಂತೆ! ಸ್ಥಾಪತ್ಯಕಲೆ, ಮೂರ್ತಿಕಲೆ, ಚಿತ್ರಕಲೆ ಅಥವಾ ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ ಇವೆಲ್ಲವೂ ಒಂದು ಸಲ ಪದವಿ ಸಿಕ್ಕಿದ ಮೇಲೆ ಉಪಜೀವನಕ್ಕೆ ಸಾಕಷ್ಟು ಸಂಬಳ ದೊರಕಿಸಬಹುದು. ಆದರೆ ಸಂಗೀತ-ನೃತ್ಯ ಕಲೆಗಳಲ್ಲಿ ಹಾಗಲ್ಲ. ಬ್ಯಾಚಲರ್ ಆಫ್ ಮ್ಯೂಸಿಕ್ ಸಿಕ್ಕರೂ, ಪ್ರಾವೀಣ್ಯ ಪಡೆದರೂ 10 ಸಾವಿರ ಪದವೀಧರರಲ್ಲಿ ಕೈಬೆರಳಲ್ಲಿ ಎಣಿಸುವಷ್ಟೆ! ಕಲಾವಿದರಿಗೆ ಕಚೇರಿ ನಡೆಸುವ ಸಾಮರ್ಥ್ಯ ದೊರಕುತ್ತದೆ. ಅದರಲ್ಲಿಯೂ ಪ್ರಾವೀಣ್ಯವಿದ್ದರಷ್ಟೇ ಉಪಯೋಗವಿಲ್ಲ. ಈ ಯುಗದಲ್ಲಿ ಪಬ್ಲಿಸಿಟಿ ಕೂಡ ಬೇಕಲ್ಲ! 'ಬಡೆ ಬಾಪ್‌ಕೆ ಬೇಟೆ' ಆದರೂ ಸಹ ಅವರಿಗೆ ಸಿಗುವ ಸ್ಥಾನಮಾನ ಅತ್ಯಂತ ಪರಿಶ್ರಮಪೂರ್ಣವಾಗಿ ಹಾಡುಗಾರಿಕೆ, ಬಾರಿಸುವಿಕೆಯಲ್ಲಿ ಪ್ರಾವೀಣ್ಯವನ್ನು ಪಡೆದಿರಬೇಕು. 'ಘರಾಣೆ'ಯ ಹಣೆಪಟ್ಟಿಯೂ ಕೂಡಬೇಕು. ಅದರಲ್ಲಿಯೂ ಮೋಹಲಾಲನಂತಹ ಗುರು ಸಿಕ್ಕರೆ 'ಮುಕ್ತಿ' ಸಿಗದೆ ಇರುವುದಿಲ್ಲ! ಎಂದು ಸ್ವಲ್ಪ ಉಪಹಾಸಾತ್ಮಕವಾಗಿಯೇ ಹೇಳಬೇಕಾಗುತ್ತದೆ.

'ಮಂದ್ರ' ಒಂದು ಸಿದ್ಧರಾಗದ ಕಚೇರಿಯಂತೆ, ಕುಮಾರ ಗಂಧರ್ವ ಒಂದು ರಚನೆಯನ್ನು ಹಾಡುವಾಗ ಯಾವ ತರಹದ ಚಿಂತನೆಮಾಡುತ್ತಿದ್ದರೋ ಅಂತಹದೇ ಒಂದು ತರಹದ ವಿಚಾರವನ್ನು ಡಾ. ಭೈರಪ್ಪನವರು 'ಮಂದ್ರ' ಬರೆಯುವ ಮೊದಲು ಮಾಡಿರಬೇಕೆಂದು ಅನಿಸುತ್ತದೆ. 'ಮಂದ್ರ' ಕಾದಂಬರಿಯ ವಿಮರ್ಶಾತ್ಮಕ ಲೇಖನವನ್ನು ಕೇವಲ ಸಂಗೀತ ಗೊತ್ತಿದ್ದವರೇ ಬರೆದರೆ ಉತ್ತಮ ಎಂದೆನಿಸುತ್ತದೆ. ಮಂದ್ರ ಎಂದರೆ ಉತ್ತಮ ಸಾಹಿತ್ಯ ಕೃತಿ ಅಷ್ಟೇ ಅಲ್ಲ, ಒಂದು ಉತ್ತಮ ಸಂಗೀತ- ಸಾಹಿತ್ಯ ಕೃತಿ. ಈಗಾಗಲೇ ಹೇಳಿದಂತೆ ಕನ್ನಡದಲ್ಲಿ ಸಂಗೀತ ಮತ್ತು ಸಂಗೀತಕಾರರ ಕಲೆಯ ಕುರಿತು ಗ್ರಂಥಗಳು ಹೆಚ್ಚಿಲ್ಲ. ಇರುವಂತಹವು ಕೇವಲ ಜೀವನ ಚರಿತ್ರೆಗಳು. ಮರಾಠಿ, ಹಿಂದಿ ಮತ್ತು ಬಂಗಾಲಿಗಳಲ್ಲಿ ಸಂಗೀತದ ಮೇಲೆ ಬಹಳಷ್ಟು ಸಾಹಿತ್ಯವು ಹೊರಬಂದಿವೆ. ಸಂಗೀತದ ಮೇಲೆ ವರ್ಷಕ್ಕೆ 4-5 ಪುಸ್ತಕಗಳು ಹೊರಬೀಳುತ್ತವೆ. ದಸರಾ-ದೀಪಾವಳಿಯ ಹೊತ್ತಿಗೆ ಸಂಗೀತ ವಿಶೇಷಾಂಕಗಳು ಹೊರಬೀಳುತ್ತಿರುತ್ತವೆ. ಕನ್ನಡದಲ್ಲಿ ಹಾಗೆ ಆಗುವುದನ್ನು ನಾನು ನೋಡಿಲ್ಲ, ಓದಿಲ್ಲ. ಈವರೆಗೆ ಕುಮಾರ ಗಂಧರ್ವರ ಮೇಲೆ 5, ಭೀಮಸೇನ ಜೋಶಿಯವರ ಮೇಲೆ 4 ಮರಾಠಿಯಲ್ಲಿ ಪುಸ್ತಕಗಳು ಬಂದಿವೆ.

ನಿತಾಂತ ಸುಂದರವಾಗಿ ಹಾಡಿದ ರಾಗ ಮನಸೂರೆಗೊಳ್ಳುತ್ತದೆ. 'ಬಢಿಯಾ ಗಾನಾ ಬಜಾನಾ' ಕೇಳಿದ ಮೇಲೂ ಮನಸ್ಸು ಶಾಂತವಾಗುವ ಬದಲು ಭಾವೋದ್ರೇಕಕ್ಕೆ ಒಳಗಾಗುತ್ತದೆ, ಉತ್ತೇಜಿತವಾಗಿ ನಿದ್ರೆ ಬರುವ ಬದಲು ಓಡಿಹೋಗುತ್ತದೆ. ಮಂದ್ರ ಓದಿದ ಮೇಲೆ ಕೂಡ ಹಾಗೆಯೇ ಭೈರಪ್ಪನವರಿಗೆ 'ವ್ಹಾ! ಕ್ಯಾ ಬಾತ್ ಹೈ' 'ಭೇಷ್!'

ಎಂಬ ಉದ್ಗಾರ ಪುಸ್ತಕ ಕೆಳಗಿಟ್ಟ ಮೇಲೆ ತಂತಾನೆ ಹೊರಬರುತ್ತದೆ.

ಸಂಗೀತಜ್ಞಾನವುಳ್ಳ ದಿ. ವಾಸಂತಿ ಮಜುಮದಾರ ಮರಾಠಿಯೊಳಗಿನ ಕವಿಯತ್ರಿ ಅವರು ಬರೆದ 'ಗ್ರಂಥಾರಿ'ಯ ಸಂಗೀತ ವಿಶೇಷಾಂಕದಲ್ಲಿ ಅಚ್ಚಾದ ಅವರ ಮರಾಠಿ ಕವಿತೆಯಲ್ಲಿ ಮಂದ್ರದ ಸಾರ ಅಡಗಿದೆ. 'ಮಂದ್ರವನ್ನು ಓದದೇ ವಾಸಂತಿ ತೀರಿಕೊಂಡರು. ಈ ಮರಾಠಿ ಕವಿತೆಯನ್ನು ಡಾ. ಭೈರಪ್ಪನವರು ಓದುವುದು ಅವಶ್ಯ ಕವಿತೆಯ ಕನ್ನಡದ ತರ್ಜುಮೆ ಹೀಗಿದೆ:

"ಆದಿ ಅಂತ್ಯವಿಲ್ಲದಂತಹ ಅಸೀಮ ಆಕಾಶದ ವ್ಯಾಪ್ತಿ,
ಆದಿ ಅಂತ್ಯವಿಲ್ಲದಂತಹ ತುಂಬಿ ಹರಿಯುವ ಸ್ವರಸೃಷ್ಟಿ,
ಸ್ವರ..ಸ್ವರ ಸುರುವಾತಿನಿಂದಲೇ ಇದೆಯೇ? ಅಥವಾ,
ನವನಿರ್ಮಾಣದ ಸೃಷ್ಟಿಯೇ? ಎಲ್ಲಿಂದ..?

ಕೇವಲ ಸ್ವರಯಂತ್ರದಿಂದ ಇದರ ಉಗಮವೇ?
ಸಜ್ಜಾದ ಸ್ವರಯಂತ್ರದ ಸಂಪರ್ಕದ ಸ್ವಪ್ರತಿಭೆಯಿಂದಲೇ?

ಪ್ರತಿಭೆ ಎಲ್ಲಿದೆ?
ಕೊರಡು ಮಿದುಳಿನ ದ್ರವ್ಯದಲ್ಲಿಯೇ?
ಹೃದಯಸ್ಪಂದನದಲ್ಲಿಯೇ?
ವ್ಹಾ! ತುಂಬಿತುಳುಕುವ ಗುಣ ಸೂತ್ರದ ಜ್ಞಾನದಿಂದಲೇ?
ಸ್ವರದ ಶಬ್ದರೂಪ...
ಕರಾಗ್ರೆ ನೃತ್ಯರೂಪ.
ಕರಮಧ್ಯೆ ಶಬ್ದರೂಪ...
ಅಂತೆಯೇ ಸ್ವರಗಳ ಸಂಕೇತ ಲಿಪಿಯಾವುದು?
ತಂತಾನೇ ತಿಳಿದುಕೊಳ್ಳುವಂತಹ ಲಿಪಿ.
ಈ ಸ್ವರಗಳನ್ನು ಅನುಭವಿಸಿದಾಗ ಸೃಷ್ಟಿಯ ಘಟಕವಾದೆ ನಾ?
ಸ್ಥಳ-ಕಾಲ ಬದಲಾಗುತ್ತಿರುವಾಗ
ತನ್ನದೇ ಆದ ಸ್ಥಳ ಕಾಲಾತೀತ ಅಸ್ತಿತ್ವ
ಅಬಾಧಿತ ಸ್ವರಗಳ ಸಂಗೀತ..."

ಅಂದರೇನೇ ಅಸ್ವತ್ತೆಯ ಒಂದು ಸಂಗೀತಾರಾಧನೆಯ ಮುಚ್ಚಂಜೆ ಅಂದರೆ 'ಮಂದ್ರ'.

*****

6.3

ಆ ಅವಿಸ್ಮರಣೀಯ ಮೆಹಫಿಲಗಳು

ಐವತ್ತು ವರ್ಷಗಳ ಹಿಂದೆ ಪುಣೆಯ ಪಾನಶೇತದಲ್ಲಿ ಮಹಾಪೂರ ಬಂದು ನೀರು ಹರಿದು ಎಲ್ಲವೂ ಮುಳುಗಿಹೋಗಿತ್ತು. ಈ ಘಟನೆಯ ಎರಡು ವರ್ಷ ಹಿಂದೆ ಅಂದರೆ 1959ರಲ್ಲಿ ನಾನು ಪಿಂಪರಿಯ ಹಿಂದುಸ್ಥಾನ ಆಂಟಿಬಯೋಟಿಕ್ಸ್‌ನಲ್ಲಿ ಅಪ್ರೆಂಟಿಸ್ ಎಂದು ಅದೇ ತಾನೇ ಸೇರಿಕೊಂಡಿದ್ದೆ. ಧಾರವಾಡದ ಕರ್ನಾಟಕ ಕಾಲೇಜಿನಿಂದ ವಿಜ್ಞಾನ ಶಾಖೆಯಲ್ಲಿ ಪದವೀಧರನಾಗಿ ಬಂದಿದ್ದೆ. ಪಂ. ಮಲ್ಲಿಕಾರ್ಜುನ ಮನ್ಸೂರ್, ಪಂ. ಬಸವರಾಜ ರಾಜಗುರು, ವಿದುಷಿ ಗಂಗೂಬಾಯಿ ಇವರೆಲ್ಲರ 'ಸಂಗೀತ ಶ್ರವಣದ' ಗಾಢ ಸಂಬಂಧ ನನಗೆ ಇತ್ತು! ನಾನು ಕಾಲೇಜಿನಲ್ಲಿ ಕಲಿಯುತ್ತಿರುವಾಗ ಈ ಅಥವಾ ಆ ಕಾರಣದಿಂದ ಇಲ್ಲವೇ ಅವರ ಯಾವದಾದರೊಂದು ಕಾರ್ಯಕ್ರಮಗಳ ನಿಮಿತ್ತವಾಗಿ, ಮೇಲಿಂದ ಮೇಲೆ ಭೇಟಿಯಾಗುವ ಪ್ರಸಂಗಗಳು ಬರುತ್ತಿದ್ದವು. ಆದರೆ, ಪಂ. ಕುಮಾರ ಗಂಧರ್ವ ಮತ್ತು ಪಂ. ಸಂಗಮೇಶ್ವರ ಗುರವರ ಸಾಂಗೀತಿಕ (ಸಂಗೀತಕ್ಕೆ ಸಂಬಂಧಪಟ್ಟ) ಇಲ್ಲವೇ ಹತ್ತಿರದ ಪರಿಚಯ ಇನ್ನೂ ಆಗುವದರಲ್ಲಿತ್ತು. ಬಾಲ್ಯಾವಸ್ಥೆಯಲ್ಲಿಯೇ ಮುಂಬಯಿಯ ದೇವಧರ ಮಾಸ್ತರರ ಸಂಗೀತಾಭ್ಯಾಸ ಅವರಿಗೆ ಲಭಿಸಿತ್ತು.

ಗದುಗಿನ ಭೀಮಸೇನ ಜೋಶಿಯವರು 'ಪುಣೆಕರ' ಆಗಿದ್ದರು. ಸದಾಶಿವಪೇಟದಲ್ಲಿ ಇರುತ್ತಿದ್ದರು. ನಾವು ಭಕ್ತಿಯಿಂದ ಮಾಡಿದ ನಮಸ್ಕಾರವನ್ನು ಲಕ್ಷ್ಮೀರೋಡಿನಲ್ಲಿ ಕೂಡ ಆನಂದದಿಂದ ಸ್ವೀಕರಿಸಿ ಕನ್ನಡದಲ್ಲಿ ಉಭಯಕುಶಲೋಪರಿ ಕೇಳುತ್ತಿದ್ದರು. ನನ್ನ ಮತ್ತು ಅವರ ಜನ್ಮದೂರು ಒಂದೇ ಗದಗ! ಇಷ್ಟೇನೇ ನಮ್ಮ ಸಂಬಂಧ ಎಂದು ಭಾವಿಸಬೇಡಿ!

ಪುಣೆಯ ಆಗಿನ ಡೆಪ್ಯುಟಿ ಕಲೆಕ್ಟರ್ ಮಧುಕರ ವಾಮನ ದೇಸಾಯಿ ಆಗಿದ್ದರು. ಹುಬ್ಬಳ್ಳಿಯಲ್ಲಿ ಬಾಲ್ಯವನ್ನು ಕಳೆದವರು. 'ಪೇಟಿವಾದಕ' ಕಲೆಕ್ಟರ ಎಂದೇ ಅವರು ಪರಿಚಿತರಿದ್ದರು. ಅವರ ಮಾತೃಭಾಷೆ ನನ್ನ ಹಾಗೆ ಕೊಂಕಣಿಯಾಗಿತ್ತು. ಪಾನಶೇತ್ ಮಹಾಪೂರ ಕಾಲದಲ್ಲಿ ಮೂರು ತಿಂಗಳು ದೇಸಾಯಿ ಸಾಹೇಬರು ತಮ್ಮ ಊಟ ತಿಂಡಿಯ ಪರಿವೆ ಇಲ್ಲದೇ, ಪ್ರವಾಹಪೀಡಿತರ ಸಹಾಯಕ್ಕೆ ದುಡಿಯುತ್ತಿದ್ದ ಕಾರಣ ಡಾಕ್ಟರರು ಅವರಿಗೆ ವಿಶ್ರಾಂತಿಯ ಸಲಹೆಯನ್ನು ಕೊಡಬೇಕಾಯಿತು. ದೇಸಾಯಿಯವರ ವಿಶ್ರಾಂತಿಯ ವ್ಯಾಖ್ಯೆ ವಿಲಕ್ಷಣವೇ ಆಗಿತ್ತು. ಒಂದು ರಾತ್ರಿ ತಮ್ಮ ಮನೆಯಲ್ಲಿಯೇ ಪಂ. ಭೀಮಸೇನ ಜೋಶಿಯವರ ಸಂಗೀತ ಕಾರ್ಯಕ್ರಮವನ್ನಿಟ್ಟುಕೊಂಡರು. ಅದು ಬೆಳಗಿನ ಜಾವದತನಕ ನಡೆಯಿತು.

ಮುಂದೆ ದೇಸಾಯಿಯವರು ಅಹಮದ್ ನಗರ, ಬೆಳಗಾವಿ, ಇತ್ಯಾದಿ ಅನೇಕ ನಗರಗಳಲ್ಲಿ ತಮ್ಮ ಕಲೆಯ ಸಾಮ್ರಾಜ್ಯವನ್ನು ಸಂಘಟಿಸುತ್ತ ಮುಂಬಯಿಗೆ ಬಂದರು. ಅಲ್ಪಾವಧಿಯಲ್ಲಿಯೇ ಮಹಾರಾಷ್ಟ್ರದಲ್ಲಿ ಅವರು ಓರ್ವ ಕಲಾಕಾರ, ರಸಿಕ ಮತ್ತು ಪ್ರಬಲ ಆಡಳಿತಗಾರರೆಂದು ವಿಖ್ಯಾತರಾದರು. ಆಗಿನ ಅವರ ಮನೆಯಲ್ಲಿ ಮುಂಬಯಿಯ ಆ ಕಾಲದ ಗಾಯಕರು ಮತ್ತು ವಾದಕರಷ್ಟೇ ಅಲ್ಲ, ಕರ್ನಾಟಕದ ಕಲಾಕಾರರ ಮೆಹಫಿಲಿಗಳು (ಗಾಯನ ಸಭೆಗಳು) ಕೂಡ ನಿರಂತರವಾಗಿ ನಡೆಯುತ್ತಿದ್ದವು.

ದೇಸಾಯಿಯವರ ಬಂಗಲೆಯಲ್ಲಿ ಕರ್ನಾಟಕ ಪ್ರಾಂತದ ಜ್ಯೇಷ್ಠಕಲಾವಿದರ ಸಂಗೀತವನ್ನು ನಾನು ಕೇಳಿದ್ದೇನೆ. ಅವರು ನೀಡಿದ ಅಲೌಕಿಕ ಆನಂದದಿಂದ ನನ್ನ ಜೀವನಕ್ಕೆ ಸುಖ ಶಾಂತಿ ಮತ್ತು ಮೆರಗು ಒದಗಿವೆ. ಆ ಅವಿಸ್ಮರಣೀಯ ನೆನಪುಗಳನ್ನು ಇಲ್ಲಿ ಬೆಳಕಿಗೆ ತರುವ ನನ್ನ ಪ್ರಯತ್ನವಿದು. ಇವರಲ್ಲಿ ಮೊದಲಿಗರು ಭಾರತರತ್ನ ಪಂ. ಭೀಮಸೇನ ಜೋಶಿಯವರು. ಪಂ. ಭೀಮಸೇನ ಜೋಶಿಯವರನ್ನು ನಾವು ಪ್ರೀತಿ ಗೌರವದಿಂದ ಭೀಮಣ್ಣ ಎಂದು ಕರೆಯುವ ವಾಡಿಕೆಯಿತ್ತು. ಅವರು ಮುಂಬಯಿ ಕರ್ನಾಟಕ ಸಂಘದ ಆಜೀವ ಸದಸ್ಯರಿದ್ದರು. ಕನ್ನಡದಲ್ಲಿಯ ಪುರಂದರದಾಸ, ಕನಕದಾಸ ಇತ್ಯಾದಿ ದಾಸವಾಣಿ ಕಾರ್ಯಕ್ರಮದ ನಂತರ ಪಂಡಿತಜೀ ಮರಾಠಿ ಸಂತವಾಣಿಗೆ ಹೊರಳುತ್ತಿದ್ದರು. ಹೀಗಾಗಿ ಅವರು ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡೂ ಪ್ರಾಂತಗಳಲ್ಲಿ ಪ್ರಚಂಡ ಲೋಕಪ್ರಿಯತೆಯನ್ನು ಗಳಿಸಿದ್ದರು. ಕನ್ನಡ ಮತ್ತು ಮರಾಠಿ ಭಾಷೆಯಲ್ಲಿಯ ಅಪೂರ್ವ ಮತ್ತು ವಿಭಿನ್ನ ಕಾರ್ಯಕ್ರಮವನ್ನು ಮುಂಬಯಿಯ ನ್ಯಾಶನಲ್ ಸೆಂಟರ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ದ (ಎನ್.ಸಿ.ಪಿ.ಎ) ವಿಶಾಲವಾದ ಸಭಾಗೃಹದಲ್ಲಿ ಆಯೋಜಿಸಿದ್ದರು. ಮರಾಠಿಯ ಕವಿಯತ್ರಿ ವಾಸಂತಿ ಮಜುಮದಾರರು ಭೀಮಸೇನರು ಹಾಡುತ್ತಿದ್ದ ಕನ್ನಡದ 'ಕಂಗಳಿದ್ಯಾತಕೋ' ಹಾಡಿನ ರಾಗವನ್ನು ಒಂದು ಮರಾಠಿ ಅಭಂಗಕ್ಕೆ ಹಚ್ಚಿ ಹಾಡಿದ ಸ್ವರಸಂಗಮ ಇನ್ನೂ ನೆನಪಿನಲ್ಲಿದೆ. ಆ ಹಾಡನ್ನು ಮುಂಬಯಿ ಆಕಾಶವಾಣಿಯಲ್ಲಿ ಕಾರ್ಯನಿರತರಾಗಿದ್ದ ರಾಮ ಪಾಠಕರು ಪಂಡಿತಜಿಯ ಸಂತವಾಣಿಯನ್ನು ಸಂಗೀತಬದ್ಧಮಾಡಿದ್ದರು. ಅವರು ಒಂದು ಕಡೆ ಹೀಗೆ ಬರೆದಿದ್ದಾರೆ: 'ಸ್ವರಚಿತ್ರ ಈ ಕಾರ್ಯಕ್ರಮದ ಕಲ್ಪನೆ ನನ್ನದು. ನಾನು ಪಂಡಿತಜೀಯವರ ಜೊತೆಗೆ 1981ರ ನಡುವೆ ಕಾರ್ಯಕ್ರಮ ಇಟ್ಟುಕೊಳ್ಳುವವನಿದ್ದೆ. ಅದಕ್ಕೋಸ್ಕರ ನಮ್ಮ ಲೈಬ್ರರಿಯಿಂದ 'ಸಕಲ ಸಂತ ಗಾಥಾ' ಎಂಬ ಕೃತಿಯನ್ನು ತರಿಸಿದ್ದೆ. ಅದರ ಮೇಲೆ ಕಣ್ಣುಹಾಯಿಸುತ್ತಿದ್ದಾಗ ನಾಮದೇವರ 'ತೀರ್ಥವಿಠಲ'ದ ಮೇಲೆ ನನ್ನ ಗಮನ ಹರಿಯಿತು. ಮನಸ್ಸಿನಲ್ಲಿಯೇ ಸ್ಥಾಯಿಯ (ಮುಖಡಾ) ಸಾಲುಗಳನ್ನು ನಾನು ಸಂಯೋಜಿಸಿ ಗುಣುಗುಣಿಸಿದೆ. ಪಕ್ಕದಲ್ಲಿ ಸಿಂಗಲ್ ರೀಡನ ಆರ್ಗನ್ ಇತ್ತು. ಭೀಮಸೇನರಿಗೆ ರೂಪುರೇಷೆ ತೋರಿಸಿದೆ. ಪಂಡಿತರಿಗೆ ಅಷ್ಟೇ ಸಾಕಾಯಿತು. 'ವ್ಹಾ! ಬಹಳ ಸುಂದರ! ಈಗ ನೋಡಿ ನಾನು ಈ ರಾಗದ ಜೊತೆ ಹೇಗೆ ಗಮ್ಮತ್ತು ಮಾಡುತ್ತೇನೆ' ಎಂದರು. ನಿಜವಾಗಲೂ ಈ ರಾಗವನ್ನು ಅವರು ಚಿನ್ನ ಮಾಡಿತೋರಿಸಿದರು. ಭೀಮಣ್ಣನವರು ಈ ಅಭಂಗವನ್ನು ಎಷ್ಟು ಎತ್ತರಕ್ಕೆ ತಂದಿಟ್ಟರು ಎಂದರೆ ಅದು ಪ್ರತಿ ಸಂತವಾಣಿ ಕಾರ್ಯಕ್ರಮದ ಒಂದು ಮೇರು ಪರ್ವತದಂತೆ ಇಂದಿಗೂ ಪ್ರಚಲಿತವಿದೆ!"

ಒಂದು ಶನಿವಾರ ರಾತ್ರಿ, ಮ.ವಾ ದೇಸಾಯಿಯವರ ಮನೆಯಲ್ಲಿ ಮೆಹಫಿಲಿನ ಪ್ರಾರಂಭ ಪಂಡಿತಜೀಯವರ ಪ್ರೀತಿಯ ಶುದ್ಧ ಕಲ್ಯಾಣ ರಾಗದಿಂದಲೇ ಆಗಿದ್ದು ಒಂದು ಸಿಹಿ ನೆನಪು. 40–45 ನಿಮಿಷ ಬರೀ 'ತುಮ ಬಿನಾ ಕೌನ್ ಖಬರಿಯಾ' ಈ

ವಿಲಂಬಿತ ಬಂದಿಶನ್ನು ಏಕ ತಾಲದಲ್ಲಿ ಪಂ. ಭೀಮಸೇನರು ಹಾಡಿದರು. ಎಂದೂ 'ನೋಮ್ ತೋಮ್' ಮಾಡದ ಪಂಡಿತಜಿ ಆ ದಿನ 10 ನಿಮಿಷ 'ನೋಮ್ ತೋಮ್' ಆಲಾಪ ಹಾಡಿದರು. ನಂತರ ಧೃತ್ ತೀನ್ ತಾನದಲ್ಲಿ 'ರಸಬೀತಿ ಆವೆ' ಹಾಡಿದ್ದುದನ್ನು ನಾನು ಮರೆತಿಲ್ಲ. ಶ್ರೋತೃಗಳಲ್ಲಿ ಪು.ಲ. ದೇಶಪಾಂಡೆಯವರಿದ್ದರು. ಅವರು ಬಾಲಗಂಧರ್ವರ ಹಾಡನ್ನು ಹಾಡಲು ಕೇಳಿಕೊಂಡರು. ನಂತರ ಪು.ಲ. ಮತ್ತು ಮ.ವಾ. ಅವರು ಒಬ್ಬರಾದ ಮೇಲೊಬ್ಬರು ಹಾರ್ಮೋನಿಯಮ್ ಬಾರಿಸಿ ಪಂಡಿತ್‌ಜಿಗೆ ಸಾಥ ಕೊಟ್ಟರು. ಹೀಗೆ ನಮಗೆಲ್ಲ ಒಂದು ಅಪೂರ್ವ ಯೋಗ ಆ ದಿನ ಲಭಿಸಿತು. ಈಗ ಭೀಮಸೇನಜಿ, ಮ.ವಾ. ಮತ್ತು ಪು.ಲ. ಇನ್ನೆಲ್ಲಿ?

ಎಂಬತ್ತೆರಡರ ಸುದೀರ್ಘ ಆಯುಷ್ಯದ ಮಲ್ಲೇಶಣ್ಣವರು ಅಂದರೆ ಪಂ. ಮಲ್ಲಿಕಾರ್ಜುನ ಮನ್ಸೂರವರಂತೂ ಕೊನೆಯ ತನಕ ಹಾಡುತ್ತಲೇ ಇದ್ದರು. ಪು.ಲ. ಅಂತೂ 'ಅವರು, ಹಾಡಿನಲ್ಲಿ ಮುಳುಗಿದ ಮನುಷ್ಯ' ಎಂದು ಹೇಳುತ್ತಿದ್ದರು. ನಮ್ಮ ದೇಶದಲ್ಲಿಯ ಗಾಯಕರಾಗಲೀ, ವಾದಕರಾಗಲೀ, ಆತ್ಮ ಚರಿತ್ರೆಯನ್ನು ಬರೆಯುವ ಪರಿಪಾಠವನ್ನು ಇಟ್ಟುಕೊಂಡಿರುವುದಿಲ್ಲ. ಅವರ ಕಲೆ, ಧ್ವನಿಮುದ್ರಿಕೆಯಲ್ಲಿ ರೆಕಾರ್ಡು ಆದರೆ ಸಾಕು. ಅವರು ಸಂತೃಪ್ತರು. ಆದರೆ, ಮಲ್ಲೇಶಣ್ಣನವರು ಆಕಾಶವಾಣಿಯ ಅಧಿಕೃತ ಸಲಹೆಗಾರರೆಂದು ನಿಯುಕ್ತರಾದ ಮೇಲೆ ಧಾರವಾಡ, ಪುಣೆ, ಮುಂಬಯಿ ಮತ್ತು ದಿಲ್ಲಿಯ ಕೇಂದ್ರಗಳಿಂದ ಹಾಡುತ್ತಲಿದ್ದರು. ಅವರ ಮೆಹಫಿಲಿಯಲ್ಲಿಯ ಅನೇಕ ಟೇಪುಗಳು ಮತ್ತು ರಿಕಾರ್ಡುಗಳು ಉಪಲಬ್ಧವಿವೆ. ಭೆಂಡಿಬಜಾರ ಘರಾಣೆಯ ರಮೇಶ ನಾಡಕರ್ಣಿ ಮತ್ತು ದೇವೇಂದ್ರ ಮುರ್ಡೇಶ್ವರ (ಇವರೀರ್ವರೂ ಕರ್ನಾಟಕದವರು) ಇವರು ಮುಂಬಯಿ ಕೇಂದ್ರದ ಸಂಗೀತ ವಿಭಾಗದ ಪ್ರೊಡ್ಯುಸರ್ ಆಗಿದ್ದರು. ಅವರ ಮತ್ತು ಪು.ಲ. ಅವರ ವಿನಂತಿಗೆ ಮನ್ನಣೆಕೊಟ್ಟು ಅಣ್ಣಾವರು ಕನ್ನಡ ಭಾಷೆಯಲ್ಲಿ ತಮ್ಮ ಆತ್ಮಚರಿತ್ರೆ, 'ನನ್ನ ರಸಯಾತ್ರೆ'ಯನ್ನು ಬರೆದರು. ಇದು ನಮ್ಮ ಮುಂಬಯಿ ಕರ್ನಾಟಕ ಸಂಘದಲ್ಲಿಯೇ ಪ್ರಕಾಶಿತವಾಯಿತು. ಈಗಷ್ಟೇ ನಿವೃತ್ತರಾದ ಅವರ ಪುತ್ರ ರಾಜಶೇಖರ ಮನ್ಸೂರ ಅವರು ಪು.ಲ. ಅವರ ಸಲಹೆಯಿಂದ ಮಾಡಿದ ಈ ಪುಸ್ತಕದ ಇಂಗ್ಲಿಷ ಅನುವಾದವನ್ನು ಕರ್ನಾಟಕ ವಿಶ್ವದ್ಯಾಲಯವು ಪ್ರಕಟಿಸಿದೆ. ಮರಾಠಿಯಲ್ಲಿ ಕೂಡ, 'ಗಾನಯೋಗಿ' ಎಂಬ ಹೆಸರಿನಲ್ಲಿ ಆತ್ಮಚರಿತ್ರೆ ಪ್ರಕಾಶಿತವಾಗಿದೆ. ಈ ಪುಸ್ತಕದ ಆಧಾರದ ಮೇಲೆ ನಂದನ ಕುದ್ಯಾಡಿಯವರು 1992ರ ಸುಮಾರಿಗೆ ಇದೇ ಹೆಸರಿನ ಲಘುಚಿತ್ರಪಟ ತಯಾರಿಸಿದರು ಮತ್ತು ಅದಕ್ಕೆ ಬಹಳ ಪ್ರಸಿದ್ಧಿ ಕೂಡ ಸಿಕ್ಕಿತು.

ಮನ್ಸೂರ ಅವರು ಬಾಲಗಂಧರ್ವರ ಹಾಗೂ ದೀನಾನಾಥರ ನಾಟ್ಯ ಸಂಗೀತದ ರಾಗಗಳನ್ನು ಹಚ್ಚಿ 'ವಿದ್ಯಾರಣ್ಯ' ಇತ್ಯಾದಿ ಕನ್ನಡ ನಾಟಕಗಳಲ್ಲಿ ಹಾಡಿದ್ದುಂಟು. ಈ ನಾಟಕಗಳಲ್ಲಿಯ ನಾಟ್ಯಗೀತೆಗಳ 78 ಆರ್‌ಪಿಎಮ್ ರೆಕಾರ್ಡುಗಳು (ಮುದ್ರಿಕೆಗಳು) ಒಂದಾನೊಂದು ಕಾಲದಲ್ಲಿ ಜನಪ್ರಿಯವಾಗಿದ್ದವು. ಹಿರಿಯಣ್ಣ ಬಸವರಾಜರ ಜೊತೆಗೆ ಮಲ್ಲೇಶಣ್ಣರು 10–12 ಸಿ ಗ್ರೇಡ್ ಚಿತ್ರಪಟಕ್ಕೆ ಸಂಗೀತ ಕೊಟ್ಟಿದ್ದೂ ಇದೆ. ಈ ಚಿತ್ರಪಟಗಳ ಗಾಯಿಕೆ ಗೋಹರಾಬಾಯಿ ಇಲ್ಲವೇ ಅಮೀರಬಾಯಿ (ಇವರೀರ್ವರೂ ಕರ್ನಾಟಕದವರು) ಆಗಿದ್ದರು. ಮುಂದೆ ಗೋಹರ ಗಂಧರ್ವ ಆದ ಗೋಹರಾಬಾಯಿ ಇವರೇ! ಚಂದ್ರಹಾಸ ಈ ಕನ್ನಡ ಚಿತ್ರಪಟದಲ್ಲಿಯ ಸಂಗೀತ ದಿಗ್ದರ್ಶನವನ್ನು ಅಣ್ಣಾ ಅವರು ಮಾಡಿದ್ದಾರೆ ಮತ್ತು ಅದರ ನಾಯಿಕೆ ಅಮೀರಬಾಯಿ ಕರ್ನಾಟಕಿ ಇದ್ದರು.

ದುರ್ದೈವದಿಂದ ಇದರ ಒಂದೂ ಪ್ರತಿ ಪುಣೆಯ ಫಿಲ್ಮ ಇನ್‌ಸ್ಟಿಟ್ಯೂಟಿನಲ್ಲಿಲ್ಲ. ಸುದೈವದಿಂದ ಮನ್ಸೂರವರ ಬಹಳಷ್ಟು ಸಂಗೀತ ಮುದ್ರಿಕೆಗಳುವಿವಿಧ ಸಂಗ್ರಹಾಲಯಗಳಲ್ಲಿ ಉಪಲಬ್ಧವಿವೆ. ಮುಂಬಯಿನಲ್ಲಿ ಅವರ ಅನೇಕ ಪ್ರಶಂಸಕರು ಇಲ್ಲಿಯ ತನಕ ಅವರ ಸಂಗೀತದ ವಿವಿಧ ಪೈಲುಗಳನ್ನು ಅನುಸರಿಸಿ ದೃಕ್ ಶ್ರಾವ್ಯ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅವರು ಹಾಡಿದ ಮರಾಠಿ ಭಾವಗೀತೆ (ಹೀ ರಾತ ಸವತ ಬಾಯಿ) ವಚನ ಸಂಗೀತ (ಕನ್ನಡ) ಮತ್ತು ಶಾಸ್ತ್ರೀಯ ಸಂಗೀತದ ಶ್ರವಣ-ಸತ್ರ ಆಯೋಜಿಸುತ್ತಿರುತ್ತಾರೆ.

ಮಧುಕರ ವಾಮನ ದೇಸಾಯಿಯವರಲ್ಲಿ ಅಣ್ಣಾ ಅವರು ಬಂದು ಹೋಗುವದು ಇದ್ದೇ ಇತ್ತು. ಅವರು ಹಾಡಿದ ಜೈಜೈವಂತಿ ಮತ್ತು ಛಾಯಾನಟ್ ರಾಗಗಳಲ್ಲಿಯ ಖಯಾಲ್, ದೃಷ್ಟಿಹತ್ತುವ ಹಾಗೆ ಇತ್ತು. 2010ರಲ್ಲಿ ಮುಂಬಯಿ, ಪುಣೆ, ಬೆಂಗಳೂರು ಹಾಗೂ ಧಾರವಾಡದಲ್ಲಿ ಜರುಗಿದ ಅಣ್ಣಾ ಅವರ ಜನ್ಮ ಶತಾಬ್ಧಿಯ ಸಮಾರಂಭ ಬಹಳ ದಿಮಾಕಿನದಾಗಿತ್ತು.

ತೊಂಬತ್ತೇಳು ವರ್ಷದ ಪ್ರದೀರ್ಘ ಆಯುಷ್ಯ ಲಭಿಸಿದ ವಿದುಷಿ ಗಂಗೂಬಾಯಿ ಹಾನಗಲ್ ಅವರನ್ನು ನಾವು ಅತ್ಯಂತ ಆದರದಿಂದ ಹಾಗೂ ಆತ್ಮೀಯತೆಯಿಂದ "ಅಕ್ಕಾವರು' ಎಂದು ಸಂಬೋಧಿಸುತ್ತೇವೆ. ಅವರು ಕ್ಯಾನ್ಸರಿನಂತಹ ರೋಗದಿಂದ ತ್ರಸ್ತರಾದರೂ ತಾಯಿಯ ವಾತ್ಸಲ್ಯದಿಂದ ನಮ್ಮೆಲ್ಲರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಕೈ. ಶಿವಾನಂದ ಪಾಟೀಲರಿಗೆ ಅವರು 'ಅವ್ವ' ಆಗಿದ್ದರು. ಭೀಮಣ್ಣರ ಜನ್ಮ ,ರಥಸಪ್ತಮಿಯಂದು ಹಾಗೂ ಅಕ್ಕನವರದು ಶಿವರಾತ್ರಿಯಂದು.

ಅಕ್ಕಾ ಅವರು ಯಾವಾಗಲೂ ಹೇಳುವದು 'ಹಾಡುವಾಗ ಗಂಟಿನೊಳಗ ಸುರ್ (ಸ್ವರ) ಮುಂದ ಕಾಣ್ತಿರ್ತದ, ರಾತ್ರಿ ಬೇರಾತ್ರಿ ಜಾಗರಣಿ ಮಾಡುವಾಗ ನನಗಂತೂ ಯಾವದರದ್ದೂ ಭಾನ ಇರುವುದಿಲ್ಲಾ.'

ತಾಯಿ ಅಂಬಾಬಾಯಿ ಕೂಡ ಕರ್ನಾಟಕ ಸಂಗೀತದ ಉಪಾಸಕಿಯಾಗಿದ್ದರು. ಹರಪನಹಳ್ಳಿ ಇಮಾಮ ಸಾಹೇಬರಿಂದ ಅವರಿಗೆ ತಾಲೀಮು ಸಿಕ್ಕಿತ್ತು. ಅವರದೇ ಕರ್ನಾಟಕ ಸಂಗೀತದ ಕೆಲ ರಾಗಗಳನ್ನು ಮರಾಠಿಯ ಹಾಡುಗಳಿಗೆ ಅಳವಡಿಸಿಕೊಂಡು (1933-34ರಲ್ಲಿ) ಹಾಡಿದ್ದುಂಟು. ನಾಟಕುರುಂಜಿ ರಾಗದಲ್ಲಿಯ 'ಮನ ಧ್ಯಾಸ ಲಾಗೇ' ಇಲ್ಲವೇ ಮಧ್ಯಮಾವತಿ ರಾಗದಲ್ಲಿಯ 'ಕುರುಮ ಚಾಪ' ಈ ಪದ್ಯ ರಚನೆ ಸ.ಅ. ಶುಕ್ಲಾ ಇವರದು. ಇಷ್ಟೇ ಅಲ್ಲ, ಎಚ್‌ಎಮ್‌ವಿಯ ಜಿ.ಎನ್. ಜೋಶಿಯವರ ಜೊತೆಗೆ ಹಾಡಿದ 'ಚಕಾಕೆ ಕೋರ ಚಂದ್ರಾಚಿ' ಈ ಯುಗಳ ಗೀತೆಯು ಒಂದು ಕಾಲದಲ್ಲಿ ಮಹಾರಾಷ್ಟ್ರಕ್ಕೆ ಹುಚ್ಚನ್ನು ಹಿಡಿಸಿತ್ತು. ಗಂಗೂಬಾಯಿ ಇವರು ಗಾಂಧಾರಿ ಹಾನಗಲ್ ಈ ಹೆಸರಲ್ಲಿ ಸುಮಾರು 22 ಮರಾಠಿ ಗೀತೆಗಳನ್ನು ಹಾಡಿದ್ದಾರೆ. ಹೀರಾಬಾಯಿ ಬಡೋದೆಕರ್, ಸರಸ್ವತೀ ರಾಣೆಯವರಂತಹ ಪ್ರಸಿದ್ಧಿ ಗಳಿಸಿದ ಗಾಯಕಿಯರು ಇದ್ದ ಆ ಕಾಲದಲ್ಲಿ ಕೂಡ ಗಂಗೂಬಾಯಿಯವರು ಮೆರೆದಿದ್ದರು. ಇಲ್ಲಿ ನನಗೆ ಒಂದು ಮಾತು ಹೇಳಬೇಕೆಂದೆನಿಸುತ್ತದೆ. ಅವರು ತಮ್ಮ ಕಾಲಾವಧಿಯಲ್ಲಿ ಒಂದು ಮೆಹಫಿಲನಲ್ಲಿಯೂ ಮರಾಠಿ ಹಾಡನ್ನಾಗಲೀ, ಭಜನೆಯನ್ನಾಗಲೀ ಹಾಡಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿಯ ಸುಳೆಭಾವಿ ಗ್ರಾಮದ ಕುಮಾರ ಗಂಧರ್ವರು ಊರ್ಫ ಶಿವಪುತ್ರ ಕೋಮಕಾಳಿ ಇವರ ಬಗ್ಗೆ ಏನು ಬರೆಯಲಿ? ಒಂದು ಸಲ ಅವರ ಶಿಷ್ಯ ಹಾಗೂ ಮಿತ್ರ ಪಂಢರಿನಾಥ ಕೊಲ್ಹಾಪುರೆಯ ಜೊತೆಗೆ ಇಂದೋರಿನಲ್ಲಿ ಬಂಗಾರದ ಅಂಗಡಿಗೆ ಚಿನ್ನದ ಬಳೆಗಳನ್ನು ಖರೀದಿ ಮಾಡಲು ಹೋಗಿದ್ದರಂತೆ. ಅಲ್ಲಿ ಅವರಿಗೆ ಒಂದು ಜೋಡಿ ಬಳೆಗಳು ಬಹಳ ಮೆಚ್ಚಿಗೆಯಾಗಿ ಇಂದೋರಿ ಭಾಷೆಯಲ್ಲಿ ಹೀಗೆ ಉದ್ಗರಿಸಿದರಂತೆ, 'ವಾಹ! ಕ್ಯಾ ಬಾತ ಹೈ! ಕಿತನಾ ಸುಂದರ ನಕ್ಷಿ ಕಾಮ (ಕೆಲಸ). ಕೆಲೆಯ ಯಾರ್ ಹ್ಯಾ ಸೊನಾರಾನೆ ಹಮೆ ಪಣ ಗಾತಾನಾ, ಕಂಗನವಾ ಮೋರಾ (ಕೇದಾರ ರಾಗದಲ್ಲಿಯ ಒಂದು ಪಾರಂಪರಿಕ ಬಂದಿಶ) ಲಕ್ಷಾತ ಠೇವಾಯ್ಲಾ ಪಾಹಿಜೆ' (ಈ ಅಕ್ಕಸಾಲಿಗನು ಎಷ್ಟು ಸುಂದರವಾಗಿ ಬಳೆಗಳ ಮೇಲೆ ಕುಸುರಿ ಕೆಲಸಮಾಡಿದ್ದಾನೆ. ನಮಗೂ ಈ ಚೀಸ್ ಹಾಡುವಾಗ ಇದನ್ನು ಲಕ್ಷ್ಯದಲ್ಲಿಡಬೇಕು ಯಾರ್). ಅವರು ನಿಜವಾಗಲೂ ದೇವಾಸಕ್ಕೆ ಹೋದ ಮೇಲೆ ಕೇದಾರ ರಾಗದಲ್ಲಿಯ ಆ ಬಂದಿಶ್ ಹಾಡುವಾಗಿನ ಅವರ ಪೇಶ್‌ಕಶ್ (ನಿರೂಪಣೆ) ಅಪ್ರತಿಮವಾಗಿತ್ತು ಎಂದು ಪಂಢರಿನಾಥ ಕೊಲ್ಹಾಪುರೆಯವರು ನೆನಪಿಸಿಕೊಳ್ಳುತ್ತಿದ್ದರು.

ಚಿತ್ರಕಾರರು, ಸಾಹಿತಿಗಳು ಕುಮಾರ ಅವರ ನಿಕಟ ಸ್ನೇಹಿತರಾಗಿರಬೇಕು. ಹೀಗಾಗಿ ಅವರು ಕುಮಾರರು ಹಾಡುವ ಪದ್ಧತಿ, ಅವರ ದೃಷ್ಟಿಕೋಣ ವಿಸ್ತೃತವಾಗಲು ಕಾರಣವಾಗಿರಬೇಕು ಎಂಬುದಕ್ಕೆ ಈ ಮೇಲಿನ ಉದಾಹರಣೆಯನ್ನು ಕೊಡಬೇಕಾಯಿತು.

ಕುಮಾರ ಅವರ ಮೇಲೆ ಹಿರಿಯ ಗಾಯಕ ಸಮೀಕ್ಷಕರಾದ ಮತ್ತು ಸಂಗೀತಜ್ಞರಾದ ಪಂ. ವಾಮನರಾವ ದೇಶಪಾಂಡೆಯವರು ಬಹಳಷ್ಟು ಬರೆದಿದ್ದಾರೆ. ಕುಮಾರರ ವಿದ್ವತ್ತೆಯ ಬಗ್ಗೆ ಮೆಚ್ಚಿದ್ದಾರೆ. ಅವರ 'ಅನುಪ ರಾಗ ವಿಲಾಸ' ಈ ಪುಸ್ತಕದ ಮೇಲೆ ಬರೆಯುವಾಗ ಅವರು ಹೀಗೆ ಹೇಳುತ್ತಾರೆ: 'ಕುಮಾರರ ಅಭಿಪ್ರಾಯಗಳು ಸ್ಪಷ್ಟವಾಗಿದ್ದವು. ಚರ್ಚೆ, ವಾದ, ಪ್ರತಿವಾದಮಾಡದೇ ಬೇರೆಯವರಿಗೆ ತಮ್ಮ ಅಭಿಪ್ರಾಯವನ್ನು ಸ್ವಲ್ಪ ಕಾಲದಲ್ಲಿಯೇ ಮನಗಾಣಿಸುತ್ತಿದ್ದರು. ಅವರು ಗಾಯಕರು ಮಾತ್ರವಲ್ಲ, ವಿದ್ವಾಂಸರೂ ಆಗಿದ್ದರು. ಗಾಯಕರ ವಿದ್ವತ್ತೆಯನ್ನು ಅವರ ಶ್ರೋತೃವರ್ಗದಲ್ಲಿ ಕಾಣಬಹುದು. ಆದರೆ, ಕುಮಾರರ ವಿದ್ವತ್ತೆಗೆ ಸಾಹಿತಿಗಳ, ಚಿತ್ರಕಾರರ ಮತ್ತು ಸೌಂದರ್ಯಶಾಸ್ತ್ರ ಅಭ್ಯಾಸಕರಲ್ಲಿ, ಹೀಗೆ ಅನೇಕ ಕಡೆಯಿಂದ ಮನ್ನಣೆ ಸಿಗುತ್ತದೆ.'

ಮ.ವಾ ದೇಸಾಯಿಯವರ ಮನೆಯಲ್ಲಿ ಆಯೋಜಿಸಿದ್ದ ಕುಮಾರರ ತ್ರಿವೇಣೀ ಕಾರ್ಯಕ್ರಮಕ್ಕೆ ನಾನು ಹಾಜರಿ ಹಾಕಿದ್ದೆ. ಮೀರಾಬಾಯಿ, ತುಳಸಿದಾಸ ಮತ್ತು ಕಬೀರ - ಈ ಮೂವರು ಸಂತರ ಅಪೂರ್ವ ಸಂಗೀತದ ದರ್ಶನವನ್ನು ಅವರು ನಮಗೆ ಲಭಿಸುವಂತೆ ಮಾಡಿದ್ದರು. ಅದಕ್ಕೇ ಹೇಳುವುದು ನಿರ್ಮಿತಿಯ ಕ್ಷಮತೆ ಇದ್ದ ಏಕಮೇವಾದ್ವಿತೀಯ ಗಾಯಕನೆಂದರೆ ಕುಮಾರ ಗಂಧರ್ವರೆಂದು.

ಮುಂಬಯಿಯಲ್ಲಿ ನಡೆದ ಪಂ. ಬಸವರಾಜ ರಾಜಗುರು ಮತ್ತು ಪಂ. ಸಂಗಮೇಶ್ವರ ಗುರವ ಇವರ ಮೆಹಫಿಲಿಗಳು ಮೇಲೆ ಹೇಳಿದ ಗಾಯಕರಿಗಿಂತ ಸ್ವಲ್ಪ ಕಡಿಮೆಯೇ ಇವೆ. ಭಾಷಾವಾರು ಪ್ರಾಂತರಚನೆಯ ನಂತರ ಕರ್ನಾಟಕದಿಂದ ಮುಂಬಯಿಯಲ್ಲಿ ಸಂಗೀತ ಸಭೆಗಳನ್ನು ರಂಜಿಸುವವರು ಕೊನೆಯ ಈ ಇರ್ವರು ಸರದಾರರ ಪೈಕಿ ರಾಜಗುರು ಅವರ ವಾಸ್ತವ್ಯ ಸ್ವಲ್ಪ ಕಾಲ ಉತ್ತರದಲ್ಲಿ ಇದ್ದ ಕಾರಣ,

ಅವರ ಪ್ರವಾಸ ಪಂಜಾಬ್, ಉತ್ತರ ಪ್ರದೇಶದಲ್ಲಿಯ ಲಖನೌ, ಬನಾರಸ್‌ಗಳಲ್ಲಿಯೇ ಸತತವಾಗಿ ಇರುತ್ತಿತ್ತು. ಆ ದಿಶೆಯಿಂದ ಹೋಗಿ ಬರುವಾಗ ಅವರ 3–4 ವರ್ಷದಲ್ಲಿ ಮುಂಬಯಿ ಪ್ರವಾಸ ಒಮ್ಮೆಯಾದರೂ ಆಗುತ್ತಿತ್ತು. ಸವಾಯಿ ಗಂಧರ್ವರ ಊರಾದ ಕುಂದಗೋಳದ ಹತ್ತಿರದ ಎಲಿಹಾಳ ರಾಜಗುರು ಅವರ ಊರು. ತಂದೆ ಕರ್ನಾಟಕ ಸಂಗೀತದಲ್ಲಿ ಪ್ರವೀಣರಾಗಿದ್ದರು. ದಕ್ಷಿಣದ ತಂಜಾವೂರಿನಲ್ಲಿ ಶಿಕ್ಷಣಕ್ಕೋಸ್ಕರ ನೆಲೆಸಿದ್ದರು. ಆರು ವರ್ಷದ ಬಸವರಾಜ ಅವರಿಗೆ ಬಾಲ ಪ್ರಹ್ಲಾದನ ಭೂಮಿಕೆಯನ್ನು ಮಾಡಲು ವಾಮನ ರಾವ್ ಮಾಸ್ತರರ ಕರೆ ಬಂದಿತು. ಹತ್ತಿರದ ಗದಗದ ಉಭಯ ಗಾನ ವಿಶಾರದ ಪಂಚಾಕ್ಷರಿ ಗವಯಿಯವರ ಹತ್ತಿರ ಹತ್ತು ವರ್ಷ ಅತ್ಯಂತ ಕಡಕ್ಕಾದ ವಿದ್ಯೆಯನ್ನು ಪ್ರಾಪ್ತಮಾಡಿಕೊಂಡರು. 1936ರಲ್ಲಿ ವಿಜಯನಗರ ಫೆಸ್ಟಿವಲ್‌ನಲ್ಲಿ ಅವರ ಮೊದಲ ಹಾಡುಗಾರಿಕೆ ಏರ್ಪಾಡಾಗಿದ್ದಿತು. ಅತ್ಯಂತ ಮಧುರ ಧ್ವನಿಯಲ್ಲಿ ಅವರ ಸ್ವಚ್ಛ–ಶುದ್ಧ ಗಾಯನ ರಸಿಕರ ಮನಸ್ಸನ್ನು ಸೂರೆಗೊಂಡಿತು. ಬಸವರಾಜರು ಆಮೇಲೆ ಹಿಂತಿರುಗಿ ನೋಡಲಿಲ್ಲ. ಕನ್ನಡ ಸಂಗೀತ ನಾಟಕದಲ್ಲಿ ಅವರ ಹೆಸರು ಪ್ರಖ್ಯಾತವಾಯಿತು. ಇಷ್ಟೇ ಅಲ್ಲ, ಅವರ ಧ್ವನಿಯ ಬಲದ ಮೇಲೆ ಅವರು 'ಸ್ವರ ಬಾದಶಹ' (ಧ್ವನಿಯ ಬಾದಶಹ) ಎಂದು ಉತ್ತರ ಭಾರತದಲ್ಲಿ ಹೆಸರನ್ನು ಗಳಿಸಿದರು. ಇದಕ್ಕೆ ಕಾರಣಗಳೂ ಇವೆ. ಸವಾಯಿ ಗಂಧರ್ವರು ಕುಂದಗೋಳದಲ್ಲಿದ್ದಾಗ ಅವರ ಬಳಿ ಕಲಿಯುವ ಪ್ರಬಲವಾದ ಇಚ್ಛೆ ಬಸವರಾಜರಲ್ಲಿತ್ತು. ಆದರೆ ಅವರಿಗೆ ಕೇವಲ ಆರು ತಿಂಗಳಿನ ತರಬೇತಿ ಮಾತ್ರ ಸಿಕ್ಕಿತು. ಸವಾಯಿ ಗಂಧರ್ವರಿಗೆ ಪಾರ್ಶ್ವವಾಯುವಾದಾಗಿನಿಂದ ಅವರು ಕೆಲ ಕಾಲ ಗಂಗೂಬಾಯಿಯವರ ಜೊತೆ ಹುಬ್ಬಳ್ಳಿಯಲ್ಲಿದ್ದರು. ಆಮೇಲೆ ಅಳಿಯರೊಂದಿಗೆ ಪುಣೆಯಲ್ಲಿ ವಾಸ್ತವ್ಯ ಹೂಡಿದರು. ಮನಸ್ಸಿಗೆ ಒಪ್ಪುವಂತೆ ಅವರಿಗೆ ತರಬೇತಿ ಸಿಕ್ಕಿರಲಿಲ್ಲ. ಷಡ್ಜದ ಮೇಲೆ ಪ್ರಭುತ್ವವನ್ನು ಪಡೆಯಲು ಕೆಲಕಾಲ ಬಸವರಾಜರು ಹೀರಾಬಾಯಿಯವರ ಸೋದರ ಮತ್ತು ಗುರುಗಳಾದ ಸುರೇಶಬಾಬು ಮಾನೆ ಊರ್ಫ ಉಸ್ತಾದ್ ವಹೀದ ಖಾನರಲ್ಲಿ ತರಬೇತು ಪಡೆಯಲು ಲಾಹೋರಿಗೆ ಹೊರಟುಹೋದರು. ಅವರಲ್ಲಷ್ಟೇ ಅಲ್ಲದೆ, ಉಸ್ತಾದ್ ಮುಬಾರಕ್ ಆಶಿಕ್ ಆಲಿಯವರಿಂದ ಕೂಡ ಅವರು ಕೆಲಕಾಲ ತಾಲೀಮು ಪಡೆದರು. ಅವರ ದುರ್ದೈವಕ್ಕೆ ಲಾಹೋರಿನಲ್ಲಿದ್ದಾಗಲೇ 1947ರಲ್ಲಿ ಭಾರತದ ವಿಭಜನೆಯಾಯಿತು. ಮತ್ತು ಆ ರಾತ್ರಿಯೇ ಅವರ ಉಸ್ತಾದ್‌ರ ಆಜ್ಞೆಯ ಮೇರೆಗೆ ಲಾಹೋರಿನಿಂದ ದಿಲ್ಲಿಯ ಕಡೆಗೆ ಹೋಗುವ ಹಿಂದೂಗಳ ಗುಂಪಿನಲ್ಲಿ ಸೇರಿಕೊಂಡು ಸುಮಾರು ಆರು ಮೈಲಿ ರೈಲು ಕ್ಯಾರೇಜಿನ ಕೆಳಗಿನ ಪಟ್ಟಿಯನ್ನು ಹಿಡಿದು ತೂಗಾಡುತ್ತ ಮಾಡಿದ ಭಯಾನಕ ಪ್ರವಾಸದ ನೆನಪನ್ನು ಅವರು ಆಗಾಗ್ಗೆ ಮಾಡಿಕೊಳ್ಳುತ್ತಿದ್ದರು. ಆತನಕ ರಾಜಗುರು ಅವರ ಮೆಹಫಿಲಿಗಳು ಲಾಹೋರಿನಲ್ಲಿ ನಡೆಯುತ್ತಿದ್ದವು. ಅದೇ ಸುಮಾರಿಗೆ ಲಾಹೋರಿನ ಬಡೇ ಗುಲಾಮ ಅಲಿಯವರು ತಮ್ಮ ಬೀಡಾರವನ್ನು ಮುಂಬಯಿಯಲ್ಲಿ ಇದಾಗಲೇ ಹೂಡಿದ್ದರು.

ಮ.ವಾ. ದೇಸಾಯಿಯವರ ಮನೆಯಲ್ಲಿ 1985ರ ಜುಲೈ 23ರ ರಾಜಗುರು ಅವರ ಅಪರೂಪದ ಮೆಹಫಿಲ್ಲಿನ ನೆನಪು ನನಗೆ ಇಲ್ಲಿಯವರೆಗೂ ತಾಜಾ ಇದೆ. ಅವರು ಪ್ರಾರಂಭದಲ್ಲಿಯೇ ರಂಗಿಗೇರಿಸಿದ ಸುಮಾರು 70 ನಿಮಿಷದ ಮಿಯಾ ಮಲ್ಹಾರದ ನಿರೂಪಣೆ ಕೇವಲ ಶ್ರವಣೀಯ ಮಾತ್ರವಲ್ಲ, ಬುದ್ಧಿವಂತ ರಸಿಕರಿಗೆ ವೈಚಾರಿಕ ಪ್ರೋತ್ಸಾಹವನ್ನೂ ನೀಡಿತ್ತು. ಷಡ್ಜದಲ್ಲಿನ ಠೆಹರಾವಿನ (ಒಂದೇ ಸ್ವರದಲ್ಲಿ

ದೀರ್ಘಕಾಲ ಇರುವುದು) ಉತ್ಕಂಠತೆ ಅತ್ಯಂತ ಆಕರ್ಷಕವಾಗಿತ್ತು. ಚಹ ಸೇವನೆಯ ನಂತರ ಅವರ 'ಜನಸಮ್ಮೋಹಿನಿ' ರಾಗ ಮತ್ತು ಅದರಲ್ಲಿ ಹಾಡಿದ ಅವರ ಕನ್ನಡ ವಚನ ರಂಗೇರಿತ್ತು.

ಪಂ. ಸಂಗಮೇಶ್ವರ ಗುರವ ಅಂದರೆ ಕೈವಲ್ಯ ಕುಮಾರ ಹಾಗೂ ನಂದಿಕೇಶ್ವರರ ತಂದೆ. ಹಾಗೆಯೇ ಮೇಲೆ ಉಲ್ಲೇಖಿಸಿದ ಗಾಯಕರಲ್ಲಿ ಚಿಕ್ಕವರಾಗಿದ್ದರು. (1931–2014) ಪಂ. ರಾಜಗುರು ಅವರ ತರಹ ಅತ್ಯುತ್ತಮ ಸಂಗೀತ ಶಿಕ್ಷಕರೆಂದು ಅವರು ಕರ್ನಾಟಕದಲ್ಲಿ ಹೆಸರುಮಾಡಿದ್ದರು. ಸಂಗಮೇಶ್ವರರ ತಂದೆ ಗಣಪತ್‌ರಾವ್ ಅವರು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಹೆಸರು ಗಳಿಸಿದ್ದ ಭಾಸ್ಕರ ಬುವಾ ಬಖಲೆ ಅವರ ಶಿಷ್ಯರಾಗಿದ್ದರು. ಅಲ್ಪಾಯುವಾಗಿದ್ದ ಭಾಸ್ಕರ ಬುವಾ ಅವರು ಜಯಪುರ ಘರಾಣಾದ ಉಸ್ತಾದ್ ಅಲ್ಲಾದಿಯಾ ಖಾನರ ಶಿಷ್ಯರಾಗಿದ್ದರು. ಅವರ ಸಾವಿನ ನಂತರ ಗಣಪತ್‌ರಾವ್ ಅವರು ಅಬ್ದುಲ್ ಕರೀಮ್ ಖಾನರ ಕಿರಾನಾ ಮನೆತನದ ತರಬೇತಿ ಪಡೆದು ಒಂದು ವೈಶಿಷ್ಟ್ಯಪೂರ್ಣ ಜಯಪೂರ್–ಕಿರಾನಾ ಮನೆತನಗಳ ಸಂಗೀತ ರಸಾಯನದ ಏಕಮೇವ ಪ್ರತಿನಿಧಿಯಾಗಿದ್ದರು. ತಂದೆಯ ಈ ರಸಾಯನ ಸಂಗಮೇಶ್ವರರ ಕೊರಳಲ್ಲಿ ಕೂಡ ಇಳಿದಿರಲು ಸಾಕು. ವಿನೋದಕ್ಕೆ ನಾವು ಅತ್ರೋಲಿ ಮತ್ತು ಕಿರಾನಾ ಹೀಗೆ ಎರಡು ಪ್ರವಾಹಗಳ ಸಂಗಮವನ್ನೇ ಸಂಗಮೇಶ್ವರರಲ್ಲಿ ಕಾಣಬಹುದು ಎನ್ನೋಣವೇ?

ಬೆಳಗಾವಿ ಒಂದು ಕಾಲದಲ್ಲಿ ರಾಮಕೃಷ್ಣ ಬುವಾ ವಝೆ ಮತ್ತು ಕರೀಂ ಖಾನ್ ಸಾಹೇಬರ ಶಿಷ್ಯಂದಿರಾದ ಕಪಿಲೇಶ್ವರಿ ಬಂಧುಗಳ ಕಾರಣ ಹಿಂದುಸ್ತಾನಿ ಸಂಗೀತದ ತವರುಮನೆಯೇ ಆಗಿತ್ತು. ಇಲ್ಲಿಯೇ ಸಂಗಮೇಶ್ವರರು ಬಾಲ್ಯವನ್ನು ಕಳೆದು ದೊಡ್ಡವರಾದರು. ಬಸವರಾಜರ ನಂತರ ಗುರವ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರೆಂದು ನೇಮಿಸಲ್ಪಟ್ಟರು. ಅವರ ಶಿಷ್ಯಸಂಪತ್ತು ಬಸವರಾಜರ ಶಿಷ್ಯಸಂಪತ್ತಿನಂತೆಯೇ ಬಲು ದೊಡ್ಡದು. ವಾಚಕರು ಒಂದು ವಿಷಯವನ್ನು ಗಮನಿಸಬೇಕು. ಭಾಷಾವಾರು ಪ್ರಾಂತ ರಚನೆಯ ನಂತರ ಹುಬ್ಬಳ್ಳಿ–ಧಾರವಾಡದ ಕಲಾವಂತರಿಗೆ ಮಹಾರಾಷ್ಟ್ರ ರಾಜ್ಯದಿಂದ ಬರುತ್ತಿದ್ದ ಮೆಹಫಿಲಿಯ ಆಮಂತ್ರಣಗಳು ನಿಧಾನವಾಗಿ ಕಡಿಮೆಯಾಗುತ್ತಾ ಬಂದವು. ಸಂಗಮೇಶ್ವರರಿಗೆ ಇದರ ಪೆಟ್ಟು ಬಲು ಜೋರಿನಿಂದ ಬಿತ್ತೆಂದರೆ ಸುಳ್ಳಾಗಲಾರದು.

ನಂದ ರಾಗವು ಜಯಪುರ ಠೇವಣಿಯಲ್ಲಿಯ ಅಪರೂಪದ ರಾಗ. ವಕ್ರ ತಿರುವಿನ ಮೀಂಡದ ಪ್ರಕಾರ ಕಿರಾನಾದ ಮಾಧುರ್ಯ ಮತ್ತು ಜಯಪುರದ ಸಮ್ ಮೇಲೆ ಬರುವ ವಕ್ರ ಪ್ರಕ್ರಿಯೆಯು ಅವರ ನಂದ ರಾಗ ಮತ್ತು ತಾನದಲ್ಲಿ ತುಂಬ ಎದ್ದು ಕಾಣುತ್ತಿತ್ತು. ನಂತರದ ಕಬೀರ ಭಜನೆ ಕೂಡ ಶರಣಭಾವದ ಕಾರಣ ರಸಿಕರ ಮನಸ್ಸಿಗೆ ತಟ್ಟುತ್ತಿತ್ತು. ಈ ಕಾರ್ಯಕ್ರಮ ಮುಂಬಯಿಯ ದಾದರ–ಮಾತುಂಗಾದ ಸಂಗೀತ ಸಭೆಯಲ್ಲಿ ಮುಕ್ತಾಯವಾಗಿತ್ತು. ಹೀಗಿದ್ದರು ಈ ಮಹಾನ ಗಾಯಕರು ಮತ್ತು ಹೀಗಿವೆ ಹೃದಯಸ್ಪರ್ಶಿಸುವ ಅವರ ಕೆಲವು ನೆನಹುಗಳು.

*****

6.4

ಭಾರತೀಯ ಸಂಗೀತಕ್ಕೆ ಪಾಶ್ಚಿಮಾತ್ಯರ ಕೊಡುಗೆ

1966ರ ಸುಮಾರಿನಲ್ಲಿ ಪಂಡಿತ ರವಿಶಂಕರ ಮತ್ತು ಯಹೂದೀ ಮೆನುಹಿನ್ (ಪ್ರಸಿದ್ಧ ವಯೊಲಿನ್ ವಾದಕ) ಸಹಯೋಗದ ಅಧ್ಯಾಯ ಪ್ರಾರಂಭವಾಯಿತು. ಇದೇ ಕಾಲದಲ್ಲಿ ಪಂಡಿತ ರವಿಶಂಕರರ ಪ್ರತಿಭಾವಲಯ ಬಹಳ ಪ್ರಸಿದ್ಧಿಗೆ ಬಂದ ಬೀಟಲ್ ಗ್ರೂಪನ್ನು ಆಕರ್ಷಿಸಿದ್ದು ಆ ಕಾಲದ ವಿಶ್ವ ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖವಾದ ಸುದ್ದಿಯಾಗಿತ್ತು. ಉಸ್ತಾದ್ ಅಲಿ ಅಕಬರ್‌ಖಾನ (ಪಂ. ರವಿಶಂಕರರ ಮೈದುನ), ನಮ್ಮ ಕನ್ನಡಿಗರೇ ಆದ ಪಂ. ತಾರಾನಾಥ ರಾವ್‌ರು ಅಲ್ಲಾರಾಖಾರ ಜೊತೆಗೆ ಯೂರೋಪ ಸಂಚಾರ ಮಾಡಿಬಂದ ಪ್ರಸಿದ್ಧ ತಬಲಾ ಪಟುಗಳು. ಇವರೆಲ್ಲ ತಮ್ಮದೇ ಆದ ಗಾಯನ-ವಾದನ ಶೈಲಿಯಿಂದ ಪರದೇಶದ ಶ್ರೋತೃವೃಂದಗಳನ್ನು ಆಕರ್ಷಿಸಿದ್ದರು. ಇದನ್ನು ಒಂದು ವಿಶಿಷ್ಟ ಪ್ರಕಾರದ ಸಾಂಸ್ಕೃತಿಕ ಸ್ಫೋಟವೆಂದು ನಾವೆಲ್ಲ ಅರಿಯಬೇಕು. ಪಾಶ್ಚಿಮಾತ್ಯ ಸಂಗೀತವು ಹಾರ್ಮನಿಯಿಂದ (ಸಾಮರಸ್ಯ) ಭಾರತೀಯತ್ವದ (ಸ್ವರ ವಿನ್ಯಾಸ) ಮೆಲೊಡಿಯ ಕಡೆ ಹೆಜ್ಜೆ ಹಾಕುವ ಪ್ರಕ್ರಿಯೆ ಪ್ರಾರಂಭವಾಯಿತು. ನಮ್ಮ ಭಾರತೀಯ ಸಂಗೀತದ ಪ್ರಸಾರದಲ್ಲಿ ಯಹೂದೀ ಮೆನುಹಿನ್ನರು ತುಂಬ ಆಸ್ಥೆಯಿಂದ ಭಾಗವಹಿಸಿದರು. ಬರ್ಲಿನ್, ಫ್ರಾಂಕಫರ್ಟ್, ಬಾಸ್ಲ ಮತ್ತು ಅಮೇರಿಕೆಯ ದೊಡ್ಡ ದೊಡ್ಡ ಶಹರಗಳಲ್ಲಿ ಪಂ. ರವಿಶಂಕರರ ಮತ್ತು ಯುಹೂದಿ ಮೆನುಹಿನ್ನರ ಜುಗಲ್ ಬಂದಿಯ ಕಾರ್ಯಕ್ರಮಗಳು ಬಹಳ ವಿಜೃಂಭಣೆಯಿಂದ ಜರುಗಿದವು. ಅದೇ ಕಾಲದಲ್ಲಿ ನಮ್ಮಲ್ಲಿ ಕೂಡ 'ಈಸ್ಟ್-ವೆಸ್ಟ್ ಎನ್ಕೌಂಟರ್' ಎಂಬ ಒಂದು ಕಚೇರಿಯನ್ನು ಕೇಳಿದುದನ್ನು ಸ್ಮರಿಸಿಕೊಳ್ಳುತ್ತೇನೆ.

ಇದೇ ಕಾಲದಲ್ಲಿ ಪಂ. ರವಿಶಂಕರರು ಬೀಟಲ್ ವಲಯದಲ್ಲಿ ಸಿಕ್ಕಿ ಬಿದ್ದದ್ದು ಅಷ್ಟೇ ನಿಜ. ಈ ಸಂಗೀತದ ಸುಳಿಯಿಂದ ಹೊರಬರಲು ರವಿಶಂಕರರಿಗೆ ಸಾಕುಬೇಕಾಯಿತು. ಅದಕ್ಕೆ ಕಾರಣ ಬೀಟಲ್ ಗ್ರೂಪಿನ ಕ್ಷಣಭಂಗುರತ್ವ, ಮೂವತ್ತು ವರ್ಷಗಳ ಗುರುಶಿಷ್ಯ ಪರಂಪರೆಯಿಂದ ಭಾರತೀಯ ಸಂಗೀತವನ್ನು ಆತ್ಮಸಾತ್ ಮಾಡಿಕೊಂಡ ಹಿರಿಯ ಆಚಾರ್ಯರಿಗೆ ವಿಷಮ ಅವಸ್ಥೆಯಾಯಿತು. ಹಣ ಇದೆ, ರಾಶಿರಾಶಿಯಾಗಿ ಬಂದು ಬೀಳುತ್ತಿದೆ, ಆದರೆ ಮನಃಶಾಂತಿ ಇಲ್ಲದಾಯಿತು. ಪರಂಪರೆಗೆ ಅನುಸಾರವಾಗಿ ಕಾರ್ಯ ಮಾಡುವ ಹುಮ್ಮಸ್ಸು ಇತ್ತು, ಆದರೆ ಮನಸ್ಸಿಗೆ ಸುಖ-ಶಾಂತಿ ಸಿಗುವ ಅವಕಾಶವಿರಲಿಲ್ಲ.

ಅದಾಗಲೇ ಕೆಲವು ಶಿಸ್ತುಪ್ರಿಯ ಅಮೇರಿಕನ್ ವಿದ್ಯಾರ್ಥಿಗಳು ರವಿಶಂಕರರ ಮತ್ತು ಅಲಿ ಅಕಬರ್‌ರ ಪ್ರತಿಭೆಗೆ ಮಾರು ಹೋಗಿದ್ದರು. ಅವರ 'ಕಿನ್ನರ್' ಸ್ಕೂಲು ಪ್ರಾರಂಭವಾದದ್ದು ಹೀಗೆ. ಸತತವಾಗಿ ನಡೆದ ಶುದ್ಧ ಪರಿಪಕ್ವ ದಾರಿಯಲ್ಲಿ ಹೆಜ್ಜೆ ಹಾಕಲು ಮುಂದೆ ಬಂದವರೆಂದರೆ ಹ್ಯೂ ಶಿಪರ್ಸ್ (ಹಾಲಂಡ್), ಡೇನಿಯಲ್ ಬ್ರಾಡ್ಲೆ (ಅಮೇರಿಕಾ) ಮತ್ತು ಕೆನ್ನ್ ಜುಕರ್‌ಮನ್ (ಸ್ವಿಡ್ಜರ್ಲಂಡ್) ಡೇವಿಡ್ ಸ್ಟ್ರೊಸಿಫ (ಕೆನಡಾ), ಅಲನ್ ಪೊಸ್ಲೇ (ಆಸ್ಟ್ರೇಲಿಯಾ) ಮತ್ತು ಇತರ ಹಲವಾರು ಶಿಷ್ಯಂದಿರು. ಯಾವ ಪ್ರದೇಶದಲ್ಲಿ ತಬಲಾ ವಾದನ (ಖಿಥಿಣುಟುಳಿ ಚಿಳಿಳಿಂಟರಿಚಿಟುಟಜಟಣ ರಟಿ ಖಟಿಜುಚಿಟಿ ಜಡಿಣಾಥ) ಅಪರೂಪವೋ ಅಲ್ಲಿಂದ ಭಾರತಕ್ಕೆ ಬಂದು ನಮ್ಮ ಕರ್ನಾಟಕ ಸಂಘದ ಕಲಾಭಾರತಿ ವೇದಿಕೆಯ ಮೇಲೆ ಅತಿ ಉತ್ಸಾಹದಿಂದ, ಶಿಸ್ತಿನಿಂದ ರಸಭರಿತ ಸಂಗೀತವನ್ನು ಒದಗಿಸಿದ್ದುದು ಕೂಡ ನಮ್ಮ ಭಾರತೀಯತ್ವಕ್ಕೆ ಕೊಟ್ಟ ಆಹ್ವಾನ! ಮುಂಬರಲಿದ್ದ ನಮ್ಮ ಪೀಳಿಗೆ ಟಿವಿ, ಎಮ್‌ಟಿವಿ ಮತ್ತು ವೀ ಚಾನೆಲ್ ಎಂದು ತವಕದಿಂದ ಕಾಯುವಾಗ ಈ ಜನರೆಲ್ಲ ನಮ್ಮ ಭಾರತೀಯ ಸಂಗೀತ ಸಂಸ್ಕೃತಿಯನ್ನು ತಮ್ಮದಾಗಿ ಮಾಡಿಕೊಂಡು ಅದರಲ್ಲಿ ಪ್ರಾವೀಣ್ಯ ಪಡೆದರು. ನಮ್ಮ ಸಂಗೀತದ ಭಾರತೀಯತ್ವ ಇನ್ನು ಮುಂದೆ ಉಳಿಯುವದು ಕೆನಡಾದಲ್ಲೋ, ಅಮೇರಿಕೆಯಲ್ಲೋ ಅಥವಾ ಜರ್ಮನಿಯಲ್ಲೋ ಎಂದು ಎನಸುವದು ಸಹಜ!

ಡೇನಿಯಲ್ ಬ್ರಾಡ್ಲೆ, ನಿಖಿಲ್ ಬ್ಯಾನರ್ಜಿಯ ವಿದ್ಯಾರ್ಥಿ. ಅವರ ಗುರುಗಳು ಅಕಾಲ ಮೃತ್ಯುವಿಗೆ ತುತ್ತಾದ ಮೇಲೆ ಡೇನಿಯಲ್ಲರ ಜೀವನ ಚುಕ್ಕಾಣಿ ಇಲ್ಲದ ದೋಣಿಯ ಹಾಗೆ ಆಯಿತು. ಹಿಂದಿನ ಸಲ ಭಾರತಕ್ಕೆ ಬಂದಾಗ ಅಲಿ ಅಕಬರ್ ಖಾನರ ಸಹೋದರಿ ಮತ್ತು ರವಿಶಂಕರರ ಮೊದಲ ಪತ್ನಿ ಶ್ರೀಮತಿ ಅನ್ನಪೂರ್ಣಾದೇವಿಯ (ಇವರು ಮುಸಲಮಾನರಾದರೂ ದೇವಿ ಶಾರದೆಯ ಉಪಾಸಕರು) ಬಳಿ ಶಿಷ್ಯತ್ವ ಪಡೆಯಲು ಬಂದಾಗ ಅವರು ನಿರಾಕರಿಸಿದಾಗ ಬ್ರಾಡ್ಲೆ ನನ್ನ ಬಳಿ, 'ಇದು ನನ್ನ ಕೊನೆಯ ಕಾನ್ಸರ್ಟ್. ನಿಮ್ಮ ಕಲಾಭಾರತಿ ಕಾರ್ಯಕ್ರಮದ ನಂತರ ನನ್ನ ಸಿತಾರ್ ಮೂಲೆ ಸೇರಲಿದೆ' ಎಂದು ವಿಷಾದದ ನಗೆ ನಕ್ಕರು. ಒಳ್ಳೆಯ ಮಾತು ಅಂದರೆ ಕಲಾಭಾರತಿಯ ಅವರ ಕಚೇರಿ ಬಹಳ ಸೊಗಸಾಗಿ ನಡೆಯಿತು. ಅವರ ಕಚೇರಿಯ ಧ್ವನಿ ಸುರುಳಿಯನ್ನು ನಾನು ಡೇನಿಯಲರಿಗೆ ಕೊಟ್ಟು, ತಿರುಗಿ ಅನ್ನಪೂರ್ಣಾದೇವಿಯವರನ್ನು ಸಂದರ್ಶಿಸುವ ಸಲಹೆಯನ್ನು ಕೊಟ್ಟೆ. ಊಟ-ಉಪಚಾರದ ನಂತರ ದೇವಿಯವರು ಧ್ವನಿಸುರುಳಿ ಹಚ್ಚುವ ಅಪ್ಪಣೆ ಇತ್ತರು. ಕೊಂಚ ಹೊತ್ತು ಲಕ್ಷಪೂರ್ವಕವಾಗಿ ಆಲಿಸಿ ಪ್ರಸನ್ನರಾದ ಅನ್ನಪೂರ್ಣಾದೇವಿ ಹೀಗೆ ಹೇಳಿದರಂತೆ: "ಮಗು, ನೀನು ವರ್ಷದಲ್ಲಿ ಮೂರು ತಿಂಗಳು ಭಾರತಕ್ಕೆ ಬರುವ ಹಾಗೂ ಇಲ್ಲೇ ಇರುವ ಹಾಗಿದ್ದರೆ ಹೇಳು. ನನಗೆ ರಾತ್ರಿ ಊಟ ನನ್ನಲ್ಲೇ, ರಾತ್ರಿ ಎಂಟರವರೆಗೆ ಇಲ್ಲಿರಬೇಕು, ಮಾರನೆಯ ದಿನ ಬೆಳಗಿನ ಮೂರು ಘಂಟೆಗೆ ನಿನಗೆ ಹೋಗಲು ಪರ್ಮಿಶನ್' ಅವರ ಧ್ವನಿಯಲ್ಲಿ ಮಾರ್ದವತೆ ಇತ್ತು. ಇವರ ಕಣ್ಣು ತೇವವಾಗಿದ್ದವು.

ಮರುದಿನ ಮುಂಜಾನೆ ನಮ್ಮ ಭೇಟಿ . ಡೇನಯಲ್ ಅತಿ ಉತ್ಸಾಹದಿಂದ ನನ್ನನ್ನು ಬರಮಾಡಿಕೊಂಡು ಕೂಡಿಸಿದರು. 'ನಿಮ್ಮಿಂದ ನನ್ನ ಸಿತಾರ್ ಜೀವಂತವಾಯಿತು' ಅಂದರು. ನಂತರ ಅವರು ಎರಡನೆಯ ಸಲ ಭಾರತಕ್ಕೆ ಬಂದರು. ಮಹಮ್ಮದ್ ಅಲಿ ರೋಡಿನ ಒಂದು ಕಿರು ಜಾಗದಲ್ಲಿ ಮಲಗಿ, ರಾತ್ರಿ ಎಂಟುವರೆಗೆ ಅನಪೂರ್ಣಾದೇವಿಯವರ ಮನೆಗೆ ಸಿತಾರ್ ಕಲಿಯಲು ಹೋಗುತ್ತಿದ್ದರಂತೆ.

ಸ್ವಿಡ್ಜರ್ಲಂಡಿನ ಕೆನ್ನ್ ಜುಕರ್‌ಮನ್ ಮತ್ತೊಬ್ಬ ರಸಿಕ ವಾದಕರು. ಅವರು ತಮ್ಮ ದೇಶದಲ್ಲಿ ಅಲಿ ಅಕಬರ್‌ರ ಹೆಸರಿನಲ್ಲಿ ಸಂಗೀತದ ಕಾಲೇಜು ನಡೆಸುತ್ತಿದ್ದಾರೆ. ಪ್ರತಿ ವರ್ಷ ನವೆಂಬರಿನಲ್ಲಿ ಭಾರತಕ್ಕೆ ಬಂದು ಕಚೇರಿ ನಡೆಸುತ್ತಾರೆ. ಅವರ ಕೈಗಳಲ್ಲಿ ಜಾದೂ ಇದೆ. ಬಹಳ ಸಲೀಸಾಗಿ, ಅತಿ ಕ್ಲಿಷ್ಟವಾದ ಸರೋದ್‌ವಾದನವನ್ನು ಉತ್ಕೃಷ್ಟವಾಗಿ ಬಾರಿಸುತ್ತಾರೆ. ಇಡೀ ವಿಶ್ವದಲ್ಲಿ ಅವರು ಸರೋದ್‌ವಾದನದಲ್ಲಿ ಎರಡನೆಯ ನಂಬರ್ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮುಂದೆ ಕರ್ನಾಟಕ ಸಂಘದಲ್ಲಿ ಅವರ ಕಚೇರಿ ಇಡಲಾಯಿತು.

ಇನ್ನೂ ಹಾಲಂಡಿನ ಹ್ಯೂ ಶಿಪರ್ಸ್ ಇವರು ಅತ್ಯುತ್ತಮ ಕ್ರೀಡಾಪಟು. ಹಾಲಂಡಿನಲ್ಲಿದ್ದೇ ಜನಪ್ರಿಯತೆ ಗಳಿಸಿದ ಅಪರೂಪದ ಕಲಾವಿದರು. ಮೊದಲು ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪಾಶ್ಚಿಮಾತ್ಯ ಸಂಗೀತದ ವಿದ್ಯಾರ್ಥಿಯಾಗಿ ಅಲ್ಲಿಯೇ ಕೆಲಕಾಲ ದುಡಿದರು. ಈಗ ಹಾಲಂಡ್‌ನಲ್ಲಿ ಭಾರತೀಯ ಸಂಗೀತದ ವರ್ಗಗಳನ್ನೂ ನಡೆಸುತ್ತಾರೆ. ಪ್ರತಿ ವರ್ಷ ನವಂಬರ್□ಡಿಸೆಂಬರ್ ತಿಂಗಳಲ್ಲಿ ಹಾಲಂಡಿನಲ್ಲಿ ವಿಪರೀತ ಚಳಿ ಇರುವುದರಿಂದ, ಭಾರತಕ್ಕೆ ಬಂದು ಕಚೇರಿ ನಡೆಸುತ್ತಾರೆ. ಕೈಯಲ್ಲಿದ್ದ ಕಾಸೆಲ್ಲ ವಿಮಾನ ಸೇವೆಗೆ ತೆತ್ತು ಇಲ್ಲಿಯ ಸಭೆಗಳು ಕೊಟ್ಟ ಅತ್ಯಲ್ಪ ಮೊತ್ತವನ್ನು ಸೇವಾ ಭಾವದಿಂದ ಸ್ವೀಕರಿಸಿ ಕೃತಕೃತ್ಯರಾಗುತ್ತಾರೆ. ಅವರು ಕ್ವೀನ್ಸ್‌ಲ್ಯಾಂಡಿನ ಗ್ರಿಫಿತ್ ವಿಶ್ವವಿದ್ಯಾಲಯದಲ್ಲಿ ಹಿರಿಯ ಪ್ರಾಧ್ಯಾಪಕರು.

ಪ್ರಾರಂಭದಲ್ಲಿ ನಾನು ಕೆಲವೇ ಹೆಸರುಗಳನ್ನು ಕೊಟ್ಟಿದ್ದೇನೆ. ಈ ವಾಣಿಜ್ಯೀಕರಣದ ಕಾಲದಲ್ಲಿ ಸೇವಾಭಾವನೆಯಿಂದ ಸಂಗೀತ ಸೇವೆ ಇವರೆಲ್ಲ ಮಾಡುವದು ಏಕಲವ್ಯನ ರೀತಿಯಲ್ಲಿ ಎಂದು ನನಗೆ ಅನಿಸುತ್ತದೆ. ಹ್ಯೂ ಹೇಳಿದ ಹಾಗೆ, "ಖಾನ್ ಸಾಹೇಬರು (ಅಲಿ ಅಕಬರ್ ಖಾನ್) ಸಿಗುವದು ಬಹಳ ಕಷ್ಟ. ಬಿಟ್ಟರೆ ಸಿಕ್ಕದ ಖಾನರನ್ನು ವಶೀಕರಿಸಲು ತುಂಬಾ ಕಷ್ಟದ ಮಾತು.' ಎಪ್ಪತ್ತು ದಾಟಿದ ಖಾನರ ಸೇವೆ ವರ್ಷಕ್ಕೆ 'ಕುಲ ಮಿಲಾಕೆ ಬೀಸ ಘಂಟಾ" ಎಂದು ಅಸ್ಖಲಿತ ಹಿಂದಿಯಲ್ಲಿ ಹೇಳುತ್ತಾರೆ!

ಗಾಯಕರಲ್ಲಿ ಹೆಸರು ಪಡೆದ 'ಭಾಗವತರ್' ಎಂದರೆ ಜಾನ್ ಹಿಗ್ಗಿನ್ಸ್ ಅವರ ಅಕಾಲ ಮೃತ್ಯುವಿನಿಂದ ದಕ್ಷಿಣಾದಿ ಸಂಗೀತಕ್ಕೆ ಅಪರಿಮಿತ ಹಾನಿಯಾಯಿತು ಎಂದು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು. ಕೊಂಚವೂ ತಪ್ಪದೇ ತಮಿಳಿನಲ್ಲಿ ಮಾತನಾಡುತ್ತಿದ್ದ ಜಾನ್ ತನ್ನ 27ನೆಯ ವರ್ಷಕ್ಕೆ ಪರಲೋಕ ವಾಸಿಯಾದರು. ಅವರ ಧ್ವನಿಸುರುಳಿಗಳನ್ನು ಈಗಲೂ ಮದ್ರಾಸ್ ಆಕಾಶವಾಣಿಯವರು ತಪ್ಪದೇ ಹಾಕುತ್ತಾರೆ.

ಇನ್ನು ಇಟಾಲಿಯನ್ ಸುಂದರಿ ಅಮೇರಿಯಾ ಕ್ಯೂನಿಯಳ ಕಥೆಯೇ ಬೇರೆ. ಬ್ಯಾಲೇ ನೃತ್ಯದಲ್ಲಿ ಪ್ರಾವಿಣ್ಯ ಪಡೆದ ಈ ಮಹಿಳೆ ಕಥಕ್ ನೃತ್ಯ ಕಲಿಯಲು ಭಾರತಕ್ಕೆ ಮೊದಲ ಸಲ ಬಂದಳು. ಆಕೆ ಡಾಗರ್ ಬಂಧುಗಳ ಧ್ರುಪದ್ ಕಚೇರಿ ಕೇಳಿ ಬಹಳ ಕಠಿಣವಾದರೂ ಈ ಗಾಯನವನ್ನು ಕಲಿಯಲು ಪ್ರಯತ್ನಿಸಿ ಅದರಲ್ಲಿ ಪಾರಂಗತಳಾಗಿ, ಇಲ್ಲಿ ಹಲವಾರು ಕಾರ್ಯಕ್ರಮಗಳನ್ನು ಈಗಾಗಲೇ ಕೊಟ್ಟಿದ್ದಾಳೆ. ಎರಡು ವರ್ಷಕ್ಕೊಮ್ಮೆ ಭಾರತಕ್ಕೆ ಬಂದು ವೃಂದಾವನದಲ್ಲಿ (ಉತ್ತರಪ್ರದೇಶ) ಪಂ. ಮಲ್ಲಿಕ್ ಅವರ ಮನೆಯಲ್ಲಿ ವಾಸಮಾಡಿ ತರಬೇತಿ ಪಡೆದಳು. ಆಗಾಗ ಬಂದು ಮುಂಬಯಿಯಲ್ಲಿ ಹಾಡಿದ್ದೂ ಇದೆ.

ಈ ಲೇಖನದಲ್ಲಿ ಬಹಳಷ್ಟು ಹೆಸರುಗಳು ಬಂದಿರಲಿಕ್ಕಿಲ್ಲ. ರಾಮನಾರಾಯಣರ ಶಿಷ್ಯರು, ಶಿವಕುಮಾರರ (ಶಿವಹರಿ) ಶಿಷ್ಯರು. ಇಷ್ಟೇಕೇ ನಮ್ಮವರೇ ಆದ ಪಂ. ಭೀಮಸೇನ ಜೋಶಿಯವರ ಶಿಷ್ಯರು ಮತ್ತು ಅವರ ಹಾಡುಗಾರಿಕೆಯಲ್ಲಿ ಆಸಕ್ತಿಯಿರುವ ದೊಡ್ಡ ಪಾಶ್ಚಾತ್ಯ ಜನಸಮುದಾಯವಿದೆ.

ಭಾರತೀಯ ಸಂಗೀತದ ಭವಿಷ್ಯದ ಬಗ್ಗೆ ನಾವು ಬಹಳ ವಿಚಾರ ಮಾಡಬೇಕಿಲ್ಲ. ಅದು ಚೆನ್ನಾಗಿ ಚಿಗುರಿದೆ, ಮರ ಇರುವುದು ಭಾರತದಲ್ಲಿ. ಆದರೆ ಫಲಗಳು (ಪ್ರತಿಫಲ) ಎಲ್ಲೆಲ್ಲಿ ಬಿಟ್ಟಿವೆ, ಎಲ್ಲಿ ಬಿಡಲಿವೆ ಎಂಬ ಮಾತನ್ನು ಓದುಗರು ವಿಚಾರಪೂರ್ವಕವಾಗಿ ಪರಿಶೀಲಿಸಬೇಕು.

*****

6.5

ಭಾರತೀಯ ಸಂಗೀತದಲ್ಲಿಯ ಏಕಾತ್ಮಕತೆ

ಇದೊಂದು ಇತ್ತೀಚಿನ ಮಾತು. ಕಂಪ್ಯೂಟರನಲ್ಲಿ ಸರ್ಫಿಂಗ್ ಮಾಡುತ್ತಿದ್ದಾಗ ಇದ್ದಕಿದ್ದ ಹಾಗೆ ಯು ಟ್ಯೂಬಿನಲ್ಲಿ ಪಾಕಿಸ್ತಾನದ ರಿಯಾಸುದ್ದೀನ್ ಕವ್ವಾಲನ ತಂಡ ಹಾಡುತ್ತಿದ್ದ ಸನ್ನಿವೇಶ ಕಾಣಿಸಿತು. ಕೇಳಿ, ನೋಡಿ ಆಶ್ಚರ್ಯಚಕಿತನಾದೆ. ಕವ್ವಾಲಿಯ ಹಾಡು ಸಂಸ್ಕೃತ ಭಾಷೆಯಲ್ಲಿ ಇತ್ತು. ಕೆಲವು ಶಬ್ದಗಳು ಹೀಗಿದ್ದವು.

"ಗಿರಿಧರ, ಚತುರ, ಸುಂದರ, ದಾಮೋದರ, ಕಮಲನಯನ, ಕೃಪಾಲ, ಅಲಕ್ ನಿರಂಜನ, ನಿರಾಕಾರ, ನಿರ್ಗುಣ" ಬೆರಗಾಗುವಂತಹದೇ ವಿಷಯ! ಕವ್ವಾಲಿಯ ರಾಗ 'ಖಟ್'. ತಬಲಾದ ಬೋಲ್, ಭಾಷೆಯೊಂದಿಗೆ ಲಯದಲ್ಲಿ ಚಪ್ಪಾಳೆ ಇಕ್ಕುತ್ತ ನಡೆದಿತ್ತು ಕವ್ವಾಲಿ. 'ಖಟ್' ರಾಗ ಜೈಪುರ-ಅತ್ರೋಳಿ ಘರಾಣೆಯ ಒಂದು ಅಪ್ರಚಲಿತ ರಾಗ. 'ಷಟ್' ಶಬ್ದದ ಅಪಭ್ರಂಶ 'ಖಟ್', ಆರು ರಾಗಗಳ ಮಿಶ್ರಣವಂತೆ! ಪಂ. ಮನ್ಸೂರರವರಿಂದ ಅನೇಕ ಸಲ ಕೇಳಿದ ರಾಗ. ಹಾಡಿನ ಪ್ರಾರಂಭ ಈ ರಿಯಾಸುದ್ದೀನ್ ಮಾಡಿದ್ದು ಕೂಡ ಮನ್ಸೂರ್ ಸ್ಟೈಲ್‌ನಲ್ಲಿಯೇ! ಕವ್ವಾಲಿ ನಂತರ ಈ ರಿಯಾಸುದ್ದೀನನು ವಿವರಣೆ ನೀಡಿದ್ದು ಕೂಡ ಅದ್ಭುತವೇ!

ಈ ಕವ್ವಾಲಿಯ ಮೂಲ ಗೀತ ಗೋವಿಂದ! "ಜೋ ರಾಗ ಮೈ ಆಪಕೆ ಖಿದ್‌ಮತ್ ಮೆಂ ಪೇಶ್ ಕರ್ ರಹಾ ಹುಂ, ವೋ ಖಟ್ ನಾಮಸೆ ಜಾನಾ ಜಾತಾ ಹೈ. ಪಹಲೆ ಇಸ್ಕಾ ನಾಮ್ ಯೆ ನಹಿ ಥಾ." ರಿಯಾಸುದ್ದೀನ್ ತಬಲಾದ ಲಯದಲ್ಲಿಯೇ ಕೀರ್ತನೆ ಮಾಡುವವರ ಶೈಲಿಯಲ್ಲಿ ವಿವರಣೆ ನೀಡುತ್ತಿದ್ದ. ಗೋಪಾಲ ನಾಯಕನ ಮೆಹಫಿಲ್ಲು. ಈ ಗೋಪಾಲ ನಾಯಕನು ಕನ್ನಡಿಗ! ಸಂಗೀತಜ್ಞ ಯಾದವರ ದೇವಗಿರಿ ಹಿಂದು ರಾಜ್ಯದಲ್ಲಿದ್ದವನು. ಅಲ್ಲಾಉದ್ದೀನ ಖಿಲಜಿ, ಈ ಯಾದವರ ಕೊನೆಯ ರಾಜ ರಾಮಚಂದ್ರನನ್ನು ಸೋಲಿಸಿ, ಅಮೀರ್ ಖುಸ್ರೋನ ಬಿನ್ನಹವನ್ನು ಮನ್ನಿಸಿ, ಗೋಪಾಲ ನಾಯಕನನ್ನು ದಿಲ್ಲಿಗೆ ಕರೆದುಕೊಂಡು ಹೋದ. ಅಲ್ಲಿ ನಾಯಕನು ಖಿಲಜಿಯ ಮುಂದೆ ತನ್ನ ಹಾಡುಗಾರಿಕೆಯನ್ನು 'ಪೇಶ್'(ಪ್ರಸ್ತುತ) ಮಾಡಿದ. ಇದನ್ನು ಲಕ್ಷಪೂರ್ವಕವಾಗಿ ಕೇಳಿ ಅಮೀರ ಖುಸ್ರೋ, 'ಕುಮಾಮ್', 'ಕುವಾಲಿ', 'ಕವ್ವಾಲಿ' ಮಾಡಿದನಂತೆ! "ಜೋ ಗೋಪಾಲಸೆ ಗವಾಯಾಗಯಾ, ವಹ್ ಗೀತ್ ಥಾ, ಗೀತ್ ಗೋಬಿಂದ, ಪರಬಂಧ. ಗೋಪಾಲ್‌ಕೆ ಸವಾಲ್‌ಮೆ ಖುಸ್ರೋ ನೆ, ಯೆ ಕವ್ವಾಲಿ ಮೆ ಜವಾಬ್ ದಿಯಾ, ಲೇಕಿನ್ ಖಿಲಾಫ್ ಮೆ." ರಿಯಾಸುದ್ದೀನ ತನ್ನ ಟಿಪ್ಪಣಿಯನ್ನು

ಮುಂದುವರೆಸಿದ. ವೇದಿಕೆಯಲ್ಲಿದ್ದ ಎಲ್ಲರೂ ಚಪ್ಪಾಳೆಯೊಂದಿಗೆ ಧ್ವನಿಗೂಡಿಸಿದರು. ನೋಡಿ, ಮೊದಲು ಗೀತ ಗೋವಿಂದದ ಒಂದೇ ಒಂದು ಸಾಲನ್ನು ಹಾಡಿದವ ರಿಯಾಸುದ್ದೀನ ಅಷ್ಟೇ. ಇದೊಂದು ಅತ್ಯಂತ ಅಪರೂಪದ ಸಂಗೀತದ ಮೇಲಿನ ಮಿಥ್ಯೆ (ಟಥಿಣಖ) ಒಂದು ಆಖ್ಯಾಯಿಕೆ! ಸಾಧಾರಣ 10 ನಿಮಿಷದ್ದು ಅಷ್ಟೇ. ಇದು ಮೌಖಿಕ ರೂಪದಲ್ಲಿ 12/13 ಶತಮಾನದಿಂದ ಈ ವರೆಗೆ ನಡೆದು ಬಂದ ಆಖ್ಯಾಯಿಕೆ, ಸಂಸ್ಕೃತ ಅಪಭ್ರಂಶವಾದುದು 20ನೇ ಶತಮಾನ ಬಂದ ಮೇಲೆ.

ಹಿಂದುಸ್ತಾನಿ ಸಂಗೀತ ಪದ್ಧತಿಯಾಗಲೀ, ಕರ್ನಾಟಕ ಸಂಗೀತ ಪದ್ಧತಿಯಾಗಲೀ, ಇವುಗಳಲ್ಲಿ ಇಂತಹ ಮಿಥ್ಯೆಗಳಿಗೇನು ಕಡಿಮೆ ಇಲ್ಲ. ಅಮೀರ ಖುಸ್ರೋನ ಹೆಸರಿನಲ್ಲಿಯೇ ಉತ್ತರಾದಿ ಸಂಗೀತದ ಅನೇಕ ಆಖ್ಯಾಯಿಕೆಗಳಿವೆ. ತಂಬೂರಿಯ ತಂತಿಗಳಿಗೆ ಕಟ್ಟಿಗೆ ಪಟ್ಟಿಗಳನ್ನು ಜೋಡಿಸಿ ಆತ, 'ಸಿತಾರ್' ಮಾಡಿದನಂತೆ! ಪಖಾವಜ್‌ನ್ನು (ಮೃದಂಗದಂತಹ ವಾದ್ಯ) ಎರಡು ಹೋಳು ಮಾಡಿ 'ಹೊಸ' ತಬಲ ಮತ್ತು 'ಡಗ್ಗಾ' ಅವನೇ ಮಾಡಿದನಂತೆ. ಇಂತಹ ಅನೇಕ ದಂತಕಥೆಗಳು ಅವನ ಹೆಸರಿನಲ್ಲಿವೆ. ಆದರೆ ನನ್ನ ದೃಷ್ಟಿಯಲ್ಲಿ ಈ ಮೇಲೆ ಕೊಟ್ಟ ಕತೆ ತುಂಬ ಮಹತ್ವದ್ದು. ಇಲ್ಲಿ ಖುಸ್ರೋ ಗೋಪಾಲ ನಾಯಕನನ್ನು, 'ಸವಾಲ್-ಜವಾಬ'ದ ಸಂಗೀತದಲ್ಲಿ ಸೋಲಿಸಿದ್ದು ಅತ್ಯಂತ ಗೌಣ ವಿಷಯ. ಭಲೆ, ಆತ ಝಿಲಾಫ್ ರಾಗದಲ್ಲಿ 'ಕುಮಾಮ್' ಅಥವಾ 'ಕವ್ವಾಲಿ' ಹಾಡಿ, 'ತಕ್ಕುದಾದ ಜವಾಬ ಕೊಟ್ಟು,' 'ಖಟ್' ರಾಗದಲ್ಲಿ 24 ಸರ್ಗಗಳುಳ್ಳ ಗೀತಗೋವಿಂದ ಹಾಡಿದ ಗೋಪಾಲನನ್ನು ಸೋಲಿಸಿದ ಎಂಬ ಮಾತಿನಲ್ಲಿಯೇ ಉತ್ತರಾದಿ ಸಂಗೀತದ ಉಗಮದ ಉತ್ತರವಿದೆ. ಹಿಂದವಿ ಭಾಷೆಯ (ಉರ್ದು+ಪರ್ಶಿಯನ್+ಹಿಂದಿ) ಪ್ರಚಾರದಲ್ಲಿದ್ದದ್ದೂ 'ಕವ್ವಾಲಿ' ಎಂಬ ಹೊಸ ಸಂಗೀತದ ಕಲಮಿನ ಉತ್ತರ ಕೂಡ ಅಡಗಿದೆ. ಗೋಪಾಲ ನಾಯಕನ ಕಾಲದಲ್ಲಿ, 'ದಾಕ್ಷಿಣಾತ್ಯ'ದ ಸಂಗೀತದ ಪ್ರಭಾವ ಆಗ ಉತ್ತರದಲ್ಲಿ ಪ್ರಚಾರವಾದದ್ದೂ, ಸುಮಾರು 80-100 ವರ್ಷಗಳ ಮೊದಲು. ಒಡಿಸ್ಸಾ ರಾಜ್ಯದಲ್ಲಿದ್ದ ಜಯದೇವ ಕವಿಯ ಗೀತ ಗೋವಿಂದ ಆಗ ಭಾರತದ ಉದ್ದಕ್ಕೂ ಉಚ್ಛ್ರಾಯದಲ್ಲಿತ್ತು. ಇಂದಿಗೂ ಈ ಜಯದೇವ ಕವಿಯ ಗೀತ ಗೋವಿಂದ ಆಸೇತುಹಿಮಾಚಲದವರೆಗೆ ಅಸ್ಸಾಮ್, ಮಣಿಪುರ್, ಒಡಿಸ್ಸಾದಿಂದ ಕಛ್ ಗುಜರಾತದವರೆಗೆ ಪ್ರಚಾರದಲ್ಲಿದೆ ಎಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. ಎಮ್.ಎಸ್. ಸುಬ್ಬುಲಕ್ಷ್ಮಿಯವರು ಕರ್ನಾಟಕ ಪದ್ಧತಿಯಲ್ಲಿ ರಾಗಮಾಲೆಯಲ್ಲಿ ಹಾಡಿದ ಗೀತಗೋವಿಂದದ ಒಂದೆರಡು ಸರ್ಗಗಳು ಈಗಲೂ ಯುಟ್ಯೂಬಿನಲ್ಲಿ ವೀಕ್ಷಿಸಬಹುದು. ಈ ಗೀತಗೋವಿಂದವು ನಾಟ್ಯ, ನೃತ್ಯ, ಸಂಗೀತಗಳನ್ನು ಒಳಗೊಂಡ ನೃತ್ಯ ಪ್ರಕಾರ ಕಥಕ್ಕಳಿ, ಭರತನಾಟ್ಯ, ಓಡಿಸ್ಸಿ, ಮತ್ತು ಮಣಿಪುರಿ ಪ್ರಕಾರಗಳಲ್ಲಿಯೂ ಸಿಗುತ್ತದೆ. ಕಥಕ್ ನೃತ್ಯದಲ್ಲಿ ಇವುಗಳದೇ ಸ್ವಲ್ಪ ಅಪಭ್ರಂಶ ರೂಪವನ್ನು ನಾವು ಕಾಣಬಹುದು. ಈಗಲು ಓಡಿಸ್ಸಾ ರಾಜ್ಯದಲ್ಲಿ ನೃತ್ಯಾವಿಷ್ಕಾರದಲ್ಲಿ ಅಷ್ಟಪದಿಗಳನ್ನು ಅರ್ಧ ಹಾಡಿ ಬಿಡುವದು ನಿಷಿದ್ಧವೆಂಬ ನಂಬಿಕೆ ಪ್ರಚಾರದಲ್ಲಿದೆ

ಸಾಹಿತ್ಯದಲ್ಲಿ ಶಬ್ದಗಳು ಅಪಭ್ರಂಶವಾದರೆ ಅದು ನಿಷಿದ್ಧ. ಆದರೆ ಸಂಗೀತದಲ್ಲಿ? ಅದೊಂದು ಸಂಗೀತದ ಹೊಸ ಆವಿಷ್ಕಾರ/ ಅವತಾರವೆಂದು ದೃಢವಾಗಿ ಹೇಳಬಹುದು. ಜಯದೇವ ಕವಿಯ ನೃತ್ಯ ನಾಟಕೆಯ ಅಪಭ್ರಂಶ, 'ಕವ್ವಾಲಿ'ಯ ರೂಪವೆಂದು,

ಹೊಸ ಸಂಗೀತ ಪ್ರವಾಹದ ಉಗಮವೆಂದು ತಿಳಿದುಕೊಂಡರೆ ಅದು ತಪ್ಪಾಗಲಾರದು. ಸಾಹಿತ್ಯದಲ್ಲಿ ಇಂತಹ, 'ಮೋಡ್-ತೋಡ್ (ಒಡೆ, ತುಂಡು ಮಾಡು) ಅಕ್ಷಮ್ಯವಾದರೂ ಕೇಳಲು ಇಂಪಾದ, ರುಚಿಕಟ್ಟಾದ ಸಂಗೀತದ ಉಗಮ ಒಂದು ನವೀನ ಕಲ್ಪನಾ ವಿಲಾಸವೆಂದು ಅರ್ಥಮಾಡಿಕೊಳ್ಳಬಹುದು.

ಇದು ಉತ್ತರ ಭಾರತದ ಸಂಗೀತ ಪ್ರಕಾರದಲ್ಲಿಯೇ ಸಂಸ್ಕೃತ ಭಾಷೆಯ (ರಾಜಮಾನ್ಯ) ಮೇಲೆ ಬೀರಿದ ದುಷ್ಪರಿಣಾಮದ ಒಂದು ಉದಾಹರಣೆ. ಸಂಸ್ಕೃತ ಆಗಿನ ಕಾಲದ ರಾಜ್ಯಕರ್ತರಿಗೆ, 'ಪರಭಾಷೆ'! ದೇವದೇವತೆಗಳ ಸ್ತುತಿ ಒಳಗೊಂಡು, ಲಯಬದ್ಧ ರೀತಿಯಲ್ಲಿ ಗೇಯ ಪ್ರಕಾರದಲ್ಲಿ ಕಟ್ಟಿದ ಭಾಷೆ, ಕ್ರಮವಾಗಿ ದುರ್ಭರವಾಗಿರಬೇಕು. ಸಂಸ್ಕೃತ ಕಾವ್ಯಗಳ ಅನುವಾದ ಸುಲಭವಲ್ಲ. ಈ ಭಾಷೆಯ ಉಚಿತ ಬದಲಾವಣೆಯೆಂದರೆ ಕಾವ್ಯವನ್ನು ಹೋಳುಗಳನ್ನಾಗಿ ಮಾಡಿ ನಾಲ್ಕು ಸಾಲಿನ ಹಾಡಾಗಿಸಿ, ಬೋಲಿ (ಜನಸಾಮಾನ್ಯರ ಭಾಷೆ) ಭಾಷೆಯಲ್ಲಿ ಪರಿವರ್ತಿಸುವದು ಮತ್ತು ದೇವದೇವತೆಗಳ ಸ್ತುತಿಯ ಬದಲಾಗಿ ಆಗಿನ ಕಾಲದ ಅನ್ನದಾತರಾದ, 'ಬಾದಶಾಹ'ನ ಸ್ತುತಿಮಾಡುವದು ಹಿಂದವಿ ಭಾಷೆಯಲ್ಲಿ! ಗೀತಗೋವಿಂದ ಪ್ರಬಂಧ (ಪರಬಂಧ) ಪ್ರಕಾರದಲ್ಲಿದ್ದುದು ಮುಂದೆ ಖುದ್ದ ಬಾದಶಾಹನ ಸ್ತುತಿ ಸುಮನಗಳಲ್ಲಿ, ಪ್ರಬಂಧ ಪ್ರಕಾರಗಳ ಚೌಕಟ್ಟು ಕ್ರಮೇಣ ಮುರಿದು ಬಿದ್ದಿದ್ದರೆ ಆಶ್ಚರ್ಯವೇನೂ ಇಲ್ಲ! ಜಿತೇಂದ್ರ ಅಭಿಷೇಕಿ ಎಂಬ ಗ್ವಾಲಿಯರ್-ಆಗ್ರಾ ಪರಂಪರೆಯ ಗಾಯಕರು ಹೇಳಿದಂತೆ, ಪ್ರತಿಯೊಂದು ಕಾವ್ಯದ ಉದ್ಗ್ರಾಹ (ಮೊದಲ ಸಾಲು/ಧ್ವನಿ) ಹಾಡುವ ಮೊದಲು ಧ್ರುವಪದ (ಪಲ್ಲವಿ) ಹಾಡುವ ರೀತಿ ಇತ್ತು. ಉದಾಹರಣೆಗೆ ಅವರು ಗೀತ ಗೋವಿಂದದ ಈ ಸಾಲಿನ ಉಲ್ಲೇಖ ಮಾಡುತ್ತಾರೆ. 'ರತಿಸುಖಸಾರೆಗತಮಭಿಸಾರೆ ಮದನ ಮನೋಹರ ವೇಷಂ' ಭಾಷೆ ಸಂಸ್ಕೃತ. ಎಷ್ಟು ಸುಲಭವಾಗಿದೆ ನೋಡಿ ಮೇಲಿನ ಸಾಲುಗಳು?

ಹೀಗೆ ಕ್ರಮೇಣ ಧ್ರುವಪದ (ಧ್ರುಪದ)ವಷ್ಟೇ ಉಳಿಯಿತು. ಉದ್ಗ್ರಾಹ ಕ್ರಮೇಣ ಮಾಯವಾಗಿ 2-8 ಸಾಲಿನ ಹಿಂದಿ ಬೋಲಿ ಭಾಷೆಯ ರೂಪ ತಾಳಿತು. ಈ ಬದಲಾವಣೆಗೆ ಮುಸ್ಲಿಮ್ ರಾಜ್ಯದಲ್ಲಿ 150-200 ವರ್ಷಗಳಾದರೂ ಉರುಳಿರಬೇಕು ಎಂಬುದು ನನ್ನ ಅಂದಾಜು. ಗೀತ ಗೋವಿಂದ, ಅಮೀರ ಖುಸ್ರೋ ಮತ್ತು ಖಿಲಜಿಯ ನಂತರವೇ, ಸಾಧಾರಣ ಮುಘಲರ ಕಾಲದ ತಾನಸೇನನ ದ್ರುಪದಗಳು ಈಗಲೂ ಉತ್ತರಭಾರತದಲ್ಲಿ ಕಿವಿಯ ಮೇಲೆ ಕೈ ಇಟ್ಟುಕೊಂಡು ಭಕ್ತಿ ಭಾವದಿಂದ ಗವಯಿಗಳು ಹಾಡುತ್ತಿರುತ್ತಾರೆ.! ಪ್ರಬಂಧ ಗಾಯನದ ನಂತರದ ದ್ರುಪದ-ಧಮಾರ ಗಾಯನ ತಾನಸೇನನ ಕಾಲದಲ್ಲಿ ಅತ್ಯಂತ ಲೋಕಪ್ರಿಯವಾಗಿರಬೇಕು. ಡಾಗರ ಬಾನಿಯ ದ್ರುಪದದಲ್ಲಿ ಸಂಸ್ಕೃತ ರಚನೆಗಳೂ ಇವೆ. ಮುಂದೆ 18ನೇ ಶತಮಾನದಲ್ಲಿ ಮುಘಲರ ಅಳಿಗಾಲದಲ್ಲಿಯೇ ಸದಾರಂಗ ಮತ್ತು ಅದಾರಂಗರ ಕಾಲದಲ್ಲಿ ಖಯಾಲ್ ಗಾಯನದ ಬೀಜ ನೆಟ್ಟಿದ್ದಾಗಿತ್ತು. ಇದು ಮತ್ತು ಠುಮರಿಗಳು ಈಗ ಪ್ರಚಾರದಲ್ಲಿರುವ ಹಿಂದುಸ್ತಾನಿ ಮತ್ತು ಉತ್ತರಾದಿ ಪದ್ಧತಿಯೆಂದು ಸ್ವಲ್ಪ ಲಘುವಾಗಿಯೇ ಹೇಳಬಹುದು.

ಜಿತೇಂದ್ರ ಅಭಿಷೇಕಿ ಒಬ್ಬ ಉಚ್ಚಕೋಟಿಯ ಹಿಂದುಸ್ತಾನಿ ಪದ್ಧತಿಯ ಗಾಯಕರಾಗಿದ್ದರು. ಅವರು ಒಂದು ಮರಾಠಿ ಪತ್ರಿಕೆಯಲ್ಲಿ ಬರೆದದ್ದನ್ನು ಇಲ್ಲಿ

ಉಲ್ಲೇಖಿಸುತ್ತಿದ್ದೇನೆ. "ಮೊದಲು ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಕೀರ್ತನಕಾರರು ಗೀತ ಗೋವಿಂದದ ಕೆಲವು ಸರ್ಗಗಳನ್ನು ಬೇರೆ ಬೇರೆ ರಾಗಗಳಲ್ಲಿ, ಅಂದರೆ ಮುಲ್ತಾನಿ, ಬಸಂತ, ಹಮೀರ್ ರಾಗಗಳಲ್ಲಿ ಹಾಡುತ್ತಿದ್ದುದನ್ನು ನಾನು ಕೇಳಿದ್ದೇನೆ. ನಾನು ಸಹ 'ಭೋ ರಾಧಿಕಾ ಮುಗ್ಧೆ' ಹಾಡಿದ್ದೇನೆ." ಗೋಪಾಲನಾಯಕನ ಈ ಜಯದೇವ ಕವಿ ವಿರಚಿತ, 'ಪರಬಂಧ' ಪ್ರಕಾರದ ಗೀತ ನಾಟ್ಯ ಅಥವಾ ಗೀತನೃತ್ಯ ಆಗಷ್ಟೇ ತುಂಬಾ ಪ್ರಚಾರದಲ್ಲಿ ಇದ್ದಿರಬೇಕು. ಇತಿಹಾಸಕಾರರೂ ಕೂಡ ಗೀತ ಗೋವಿಂದದ ಕಾಲ 11-12 ನೇ ಶತಮಾನವೆಂದು ಗ್ರಹಿಸುತ್ತಾರೆ. ಗೀತ ಗೋವಿಂದದ ಪ್ರಕಾರ ಆ ಕಾಲದಲ್ಲಿ ರಾಜಾಶ್ರಯದಿಂದಲೇ ಲೋಕಾಶ್ರಯ ಕೂಡ ಪಡೆದಿರಬೇಕು. ಆ ಕಾಲದ ಕಾದಂಬರಿ ರೂಪದಲ್ಲಿಯ ಸನ್ನಿವೇಶಗಳನ್ನು ಭೈರಪ್ಪನವರು ಮನತಟ್ಟುವಂತೆ, 'ಸಾರ್ಥ' ಕಾದಂಬರಿಯಲ್ಲಿ ವರ್ಣಿಸಿದ್ದಾರೆ. ಅದೇ ಸುಮಾರಿಗೆ, 'ಸಂಗೀತ ಗಂಗಾಧರಮ್' ಮತ್ತು 'ಗೀತ ಗಿರೀಶ' ಎಂಬ ಗೀತ ನೃತ್ಯಗಳು ಶೈವ ಸಾಹಿತ್ಯದಲ್ಲಿ ಪ್ರಕಟವಾದವು. ಅದೇ ಹೊತ್ತಿಗೆ ಚೈತನ್ಯ ಮಹಾಪ್ರಭುವಿನ ಸಂಚಾರ ಉತ್ತರದಲ್ಲಿ ಜಗನ್ನಾಥ ಪುರಿಯಿಂದ ಬಂಗಾಲ ಮತ್ತು ಮಥುರಾ ವೃಂದಾವನದ ತನಕ ಹರಡಿದ್ದರಿಂದ ವೈಷ್ಣವ ಸಾಹಿತ್ಯಕ್ಕೆ ತುಂಬ ಲೋಕಾಶ್ರಯ ಸಿಕ್ಕಿರಬೇಕು.

ಮುಂಬಯಿ ಶಹರದಲ್ಲಿ ಗ್ವಾಲಿಯರ್ ಪರಂಪರೆಯ ಪಾರಸಿ ಜಾತಿಯ ಪಂಜಾಲ ಬಾಲಾಪೂರಿಯಾ ಎಂಬ ಗಾಯಕ-ಶಿಕ್ಷಕರಿದ್ದರು. ಅಂದ ಹಾಗೆ ಭಾರತದಲ್ಲಿಯ ಪಾರಸಿ ಸಮಾಜ ಪಾಶ್ಚಾತ್ಯ ಸಂಗೀತದಲ್ಲಿ ಹೆಸರು ಮಾಡಿದ್ದರೂ (ಜುಬಿನ್ ಮೆಹ್ತಾ, ಎ.ವಿ ಬಿಲಿಮೊರಿಯಾ) ಹಿಂದುಸ್ತಾನಿ ಸಂಗೀತದಲ್ಲಿಯೂ ಹೆಸರು ಮಾಡಿದವರು. ಫಿರೋಜ್ ದಸ್ತೂರ್, ಜಾಲಸಾಹೇಬ ಹಾಗೂ ತಬಲಾ ಕಲಾಕಾರ ಆಬಾನ್ ಮಿಸ್ತ್ರಿ ಇತ್ಯಾದಿ. ಹಿಂದುಸ್ತಾನಿ ಸಂಗೀತದ ಮೊಟ್ಟಮೊದಲಿನ ಸಂಘಟನೆ ಎಂದರೆ ಪಾರಸಿ ಗಾಯನ ಸಮಾಜ! ಇರಲಿ, ಈ ಜಾಲ ಸಾಹೇಬರೂ ತಮ್ಮ ಕಚೇರಿಯ ಸಮಾಪ್ತಿ ಒಂದೆರಡು ಅಷ್ಟಪದಗಳನ್ನು ಹಾಡಿಯೇ ಕಚೇರಿ ಮುಗಿಸುತ್ತಿದ್ದರು.

ಭಾರತದ ದಕ್ಷಿಣದ ರಾಜ್ಯಗಳಲ್ಲಿ ವಿಜಯನಗರ ಮತ್ತು ದೇವಗಿರಿ ಬಿಟ್ಟು ಇತರ ಪ್ರಾಂತಗಳಲ್ಲಿ ದೀರ್ಘಕಾಲ ಪರಕೀಯರ ಆಕ್ರಮಣ ಆಗದೇ ಇದ್ದರೂ ಕೂಡ ಅಲ್ಲಿಯ ಸಂಸ್ಕೃತಿ ಹೊರಗಿನವರ ಪ್ರಭಾವದಿಂದ ದೂರ ಉಳಿಯಲಿಲ್ಲ. ವಿಜಯನಗರ ಸಾಮ್ರಾಜ್ಯದಲ್ಲಿ ವರ್ಷಕ್ಕೆ ಹನ್ನೆರಡೂ ತಿಂಗಳುಗಳು, ಸಂಗೀತ 'ಸುಗ್ಗಿ'ಯ ಕಾಲವಿದ್ದುದರಿಂದ ನಾವಿನ್ಯದ ಶೋಧದಲ್ಲಿದ್ದ ಕಲಾವಿದರೂ, ಸಂಗೀತಕರೂ ಇದೇ ಸಾಮ್ರಾಜ್ಯದ ಮೂಲೆಮೂಲೆಯಲ್ಲಿ ವಲಸೆ ಬಂದು ಸ್ಥಾಪಿತರಾಗಿದ್ದರು. 15 ಮತ್ತು 16ನೇ ಶತಮಾನದಲ್ಲಿ ಕರ್ನಾಟಕ ಸಂಗೀತದ ಪಿತಾಮಹರೆಂದು ಎನಿಸಿಕೊಂಡ ಪುರಂದರದಾಸರು ಹಾಗೂ ತೆಲುಗು ಮತ್ತು ಸಂಸ್ಕೃತದಲ್ಲಿ ತುಂಬ ಸಾಹಿತ್ಯ ರಚಿಸಿದ ಅಲ್ಲಸಾನಿ ಪೆದ್ದನ ಮತ್ತು ನಂತರದ ಅನೇಕ ಸಂಗೀತಜ್ಞರು ಕರ್ನಾಟಕ ಸಂಗೀತವನ್ನು ಸಮೃದ್ಧಗೊಳಿಸಿದರು.

ಬಿಜಾಪುರದ ಬಾದಶಹರು ಹಾಗೂ ತಂಜಾವೂರಿನ ಶಿವಾಜಿಯ ಮಲತಮ್ಮ ವೆಂಕೋಜಿಯ ವಂಶಜರು ಕರ್ನಾಟಕ ಸಂಗೀತ, ನಾಟಕ ಮತ್ತು ನೃತ್ಯಗಳಿಗೆ ಒಳ್ಳೆಯ

ರಾಜಾಶ್ರಯ ಕೊಟ್ಟಿದ್ದರಿಂದ ಸರ್ಫೋಜಿಯ ಕಾಲದಲ್ಲಿ ಕರ್ನಾಟಕ ಸಂಗೀತ ಹುಲುಸಾಗಿ ಬೆಳೆಯಿತು. ಈ ಕಡೆ ಮೈಸೂರಿನ ಒಡೆಯರು ಕೂಡಾ ವಿಜಯನಗರ ಸಾಮ್ರಾಜ್ಯ ಅಳಿದ ಮೇಲೆ ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತಕ್ಕೆ ಒಳ್ಳೆಯ ಆಧಾರಕೊಟ್ಟ ಅನೇಕ ಉದಾಹರಣೆಗಳು ಇವೆ. ಭಾರತರತ್ನ ಎಮ್.ಎಸ್ ಸುಬ್ಬುಲಕ್ಷ್ಮಿ ಹಾಡಿದ ಅಷ್ಟಪದಿಗಳಿರಲಿ ಅಥವಾ ಮುಂಬಯಿಯಲ್ಲಿದ್ದ ಪಾರಸೀ ಸಮಾಜದ ಜಾಲ ಸಾಹೇಬರು ಇರಲಿ ಅಥವಾ ಭರತ ನೃತ್ಯಾಂಗನೆ ಸುಚೇತಾ ಭೀಡೆ ಅಥವಾ ಓಂಕಾರನಾಥ ಪರಂಪರೆಯ ಹಿಂದುಸ್ತಾನಿ ಸಂಗೀತದ ವಾಯೋಲಿನ ಬಾರಿಸುವ ವಿದುಷಿ ಎನ್ ರಾಜಂ ಅಥವಾ ಅವರ ಬಂಧು ಕರ್ನಾಟಕ ಪರಂಪರೆಯ ಡಾ. ಟಿ.ಎನ್. ಕೃಷ್ಣನ್ ಇರಲಿ, ಅವರೆಲ್ಲ ದನಿಗೂಡಿಸಿದ ಸ್ವರಸಮೂಹಗಳು ಬೇರೆ ಬೇರೆ ಪ್ರಕಾರದವು ಇದ್ದರೂ ಹೃದಯಕ್ಕೆ ತಟ್ಟುವಾಗ ಒಂದೇ ಪ್ರಕಾರದ್ದು ಎಂದು ಎನಿಸುತ್ತವೆ. ಸ್ವರಗಳು ಕುಣಿಯುತ್ತ ಕುಣಿಯುತ್ತ ಕೇಳುವವರ ಮನಸೂರೆಗೊಳ್ಳುತ್ತವೆ. ಇದೇ ಭಾರತೀಯ ಸಂಗೀತದ ಏಕಾತ್ಮಕತೆ ಎಂದು ಎನಿಸುತ್ತದೆ.

ಸೆಪ್ಟೆಂಬರ 2011ರಲ್ಲಿ ಮುಂಬಯಿ ನಗರದ ರಾಷ್ಟ್ರೀಯ ಕಲಾಕೇಂದ್ರದ ವತಿಯಿಂದ ಕರ್ನಾಟಕ ಮತ್ತು ಹಿಂದುಸ್ತಾನಿ ಸಂಗೀತದ ಒಂದು ಚರ್ಚಾಸತ್ರ ನಡೆಯಿತು. ಕರ್ನಾಟಕ ಸಂಗೀತದ ಪರವಾಗಿ ಡಾ. ಟಿ.ಎನ್. ಕೃಷ್ಣನ್*, ಡಾ. ಎಂ. ಬಾಲಮುರಳಿಕೃಷ್ಣ ಭಾಗವಹಿಸಿದ್ದರು. ಹಿಂದುಸ್ತಾನಿ ಸಂಗೀತದ ಅಧ್ವರ್ಯಗಳೆಂದು ತಾಳವಾದ್ಯಕ್ಕೆ ಪಂ. ಸುರೇಶ ತಳವಲ್ಕರ್** ಹಾಗೂ ಮನ್ನಾರುಗುಡಿ ಈಶ್ವರನ್** ಮತ್ತು ಕಂಠ ಸಂಗೀತದ ಪ್ರತಿನಿಧಿಗಳೆಂದು ಕಲಕತ್ತೆಯ ಅಜಯ್ ಚಕ್ರವರ್ತಿ ಮತ್ತು ಬಹುಕಾಲ ಮುಂಬಯಿ ಯಲ್ಲಿಯೇ ಇದ್ದು ಒಂದು ದಶಕದ ಹಿಂದೆ ಚೆನ್ನೈನಲ್ಲಿ ತಳ ಊರಿದ ಅರುಣಾ ಸಾಯಿರಾಮ್*** ಭಾಗವಹಿಸಿದ್ದರು.

ಈ ಲೇಖನದ ಯಾವುದೇ ಸುಳಿವು ಆ ಸತ್ರದಲ್ಲಿ ಕಾಣದಿದ್ದರೂ ಚರ್ಚಾಸತ್ರದ ನೆರಳಿನಲ್ಲಿಯೇ ಈ ಏಕಾತ್ಮತೆಯ ಭಾವನೆ ನನ್ನನ್ನು ಎಚ್ಚರಿಸಿತು. ಇದನ್ನೇ ಭಾರತದ ಸರಕಾರ ಲಕ್ಷಗಟ್ಟಲೇ ಹಣ ಹರಿಸಿ, 'ಮಿಲೆ ಸುರ' ದೇಸ ರಾಗದಲ್ಲಿ ಪ್ರಸ್ತುತಿ ಮಾಡಿ ಉತ್ತರ ದಕ್ಷಿಣ ಮತ್ತು ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಹರಡಿರುವ ಭಾರತವರ್ಷವನ್ನು, 'ಒಂದು'ಗೂಡಿಸಿದ ಎ.ಆರ್ ರೆಹಮಾನ್ ಅವರನ್ನೂ ಮರೆಯಲಾರೆವು.

* ಡಾ. ಟಿ.ಎನ್. ಕೃಷ್ಣನ್ ಇವರು ಅದ್ಭುತ ಪಿಟಿಲು ವಾದಕರು

** ಸುರೇಶ ತಳವಲಕರ ಅವರು ಕರ್ನಾಟಕ ಮತ್ತು ಹಿಂದುಸ್ತಾನಿ ಎರಡೂ ಸಂಗೀತ ಪ್ರಕಾರದಲ್ಲಿ ನುರಿತ ತಬಲಾ ಮತ್ತು ಪರ್ಕಶನ್ ವಾದಕರು

*** ಮನ್ನಾರುಗುಡಿ ಈಶ್ವರನ್ ಅವರು ಕರ್ನಾಟಕ ಸಂಗೀತದಲ್ಲಿ ಪ್ರಾವಿಣ್ಯಪಡೆದವರು ಮತ್ತು ಅಪ್ರತಿಮ ಮೃದಂಗ ವಾದಕರು.

*****

6.6

ಹಿಂದುಸ್ತಾನಿ ಸಂಗೀತದಲ್ಲಿಯ ಹೆಣ್ಣುಧ್ವನಿಯ ಪುರುಷಗಾಯಕರು

ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದ ಆಯಾಮದಲ್ಲಿ ಮುಂಚೂಣಿಯಲ್ಲೇ ನಿಂತು ತಮ್ಮ ಗಂಧರ್ವಗಾಯನದಿಂದ ಸಹಸ್ರಾರು ಸಂಗೀತ ರಸಿಕರನ್ನು ಭಾವಪರವಶರಾಗಿಸುತ್ತಿದ್ದ ಅನೇಕ ಗಾಯಕ-ಗಾಯಕಿಯರನ್ನು ನಾವೆಲ್ಲಾ ನೋಡಿದ್ದೇವೆ, ಕೇಳಿದ್ದೇವೆ ಮತ್ತು ಅವರ ಬಗ್ಗೆ ಓದಿದ್ದೇವೆ. ಆಧುನಿಕ ಕಾಲದಲ್ಲಿ ಸಂಗೀತ ಕಲೆಯ ಬೆಳವಣಿಗೆಯ ಬಗೆಗೆ ಅನೇಕ ಪ್ರಯತ್ನಗಳು ನಡೆದು, ಇಂದು ಶಾಸ್ತ್ರೀಯ ಸಂಗೀತವು ಪ್ರತಿಯೊಂದು ಮನೆಯನ್ನು ಏನಕೇನ ಪ್ರಕಾರೇಣ ಹೊಕ್ಕಿದೆ. ಇದೊಂದು ತುಂಬ ಸಂತೋಷದ ಮಾತು. ಈ ಸಂಗೀತದ ಪ್ರಸಾರ ಮತ್ತು ಪ್ರಚಾರ ಕಳೆದ 150-175 ವರ್ಷಗಳಿಂದ 'ಕೋಠಿವಾಲೆ ಗವಯಿ' ಅಂದರೆ ನಾಯಕಸಾನಿ ಅಥವಾ ತವಾಯಫ್‌ರಿಗೆ ಕಲಿಸುವ, ಉಸ್ತಾದ್ ಅಥವಾ ಪಂಡಿತರಿಂದ ಹಾಗೂ 'ನಾಚ್-ಗಾನಾ', 'ಮುಜರಾ' ಮಾಡುತ್ತಿದ್ದ ನಾಯಕಸಾನಿಯರಿಂದ ಆಗುತ್ತಾ ಬಂದಿದೆ. 1902ರಲ್ಲಿ ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದ ಮೊದಲ ಧ್ವನಿಮುದ್ರಿಕೆ ಮಾರುಕಟ್ಟೆಯಲ್ಲಿ ಬಂದದ್ದು ನಾಯಕಸಾನಿ ಗೋಹರಜಾನಳದ್ದು. ಆದರೆ ಅತ್ಯಂತ ಹೆಚ್ಚಿನ ಸಂಖ್ಯೆಯ ಧ್ವನಿಮುದ್ರಿಕೆಗಳು ಮಾರಾಟವಾದದ್ದು 'ಪ್ಯಾರಾ ಸಾಹೇಬ' ಅವರದು. ಹೆಣ್ಣುಧ್ವನಿಯ ಪುರುಷ ಗಾಯಕರಲ್ಲಿಯ 19 ಮತ್ತು 20ನೇ ಶತಮಾನದಲ್ಲಿನ ಅದ್ಭುತ ವ್ಯಕ್ತಿ ಆತ. ನಾನ್ನೂರು ಐವತ್ತು ಬೇರೆ ಬೇರೆ ರಾಗಗಳನ್ನು ಇನ್ನೂರ ಇಪ್ಪತ್ತೈದು ಧ್ವನಿಮುದ್ರಿಕೆಗಳಲ್ಲಿ ಕೇವಲ ಹತ್ತು ವರ್ಷಗಳಲ್ಲಿ ಅಂದರೆ, 1905ರಿಂದ 1915ರ ತನಕ, ಧ್ವನಿಮುದ್ರಣ ಮಾಡಿಟ್ಟ ಏಕಮೇವ ಹೆಣ್ಣುಧ್ವನಿಯ ಪುರುಷ ಗಾಯಕ.

ಇವರ ಚರಿತ್ರೆಯ ಬಗ್ಗೆ ಯಾವ ವಿವರಗಳಿಲ್ಲದಿದ್ದರೂ ಪ್ಯಾರಾಸಾಹೇಬರು ಸಾಧಾರಣ 1870ರಿಂದ 1940ರ ವರೆಗೆ, ಅಂದರೆ 70 ವರ್ಷ ಜೀವಿಸಿದ್ದಿರಬೇಕು. ಸಂಗೀತಕ್ಕೇ ಮೀಸಲಾದ ಒಂದು ಉರ್ದು ಮಾಸಪತ್ರಿಕೆಯಲ್ಲಿ ಇವರು ಮೊಗಲ ಬಾದಶಾಹ, ಶಾಹ ಆಲಮ್‌ನ ವಂಶಜನಿರಬೇಕೆಂಬ ಅಂದಾಜು ಮಾಡಲಾಗಿತ್ತು. ಅವರ ಸಂಗೀತದ ಶಿಕ್ಷಣದ ಬಗ್ಗೆ ಯಾವುದೇ ಪ್ರಕಾರದ ವಿವರಗಳೂ ಇಲ್ಲ. ಒಂದು ವಿಷಯ, 20ನೇ ಶತಮಾನದ ಪೂರ್ವಾರ್ಧದ ತನಕ ತವಾಯಫ್ ಹಾಡುಗಾರಿಕೆಯಲ್ಲಿ ನೃತ್ಯಮಾಡುತ್ತಾ, ನಿಂತುಕೊಂಡೇ ಹಾಡುವ ವಿಧಾನ ಪ್ರಚಲಿತವಾಗಿತ್ತು. ಈ ನವಾಬರ

ನವಾಬ ಕೂಡ ತಮ್ಮ ಹಾಡುಗಾರಿಕೆಯನ್ನು ನಿಂತುಕೊಂಡೇ ಮಾಡುತ್ತಿದ್ದನಂತೆ. ನವಾಬರು ಅಥವಾ ಸುಲ್ತಾನರೆದುರಿಗೆ ಅಪ್ಪಣೆಯ ಹೊರತಾಗಿ ಕುಳಿತುಕೊಳ್ಳಬಾರದು ಎಂಬುದೂ ಇದಕ್ಕೆ ಒಂದು ಕಾರಣವಾಗಿರಬಹುದು. ಕಥಕ್ ನೃತ್ಯದೊಂದಿಗೆ ಠುಮರಿ ಹಾಡುವಿಕೆ, ಅದೂ ಕೂಡ ಮತ್ತೊಬ್ಬ ಹೆಣ್ಣುಧ್ವನಿಯ ಹಾಡುಗಾರಿಕೆಯ ಪೈಪೋಟಿ ಇದ್ದಾಗ, ಈ ನವಾಬರ ನವಾಬ ಪ್ಯಾರಾಸಾಹೇಬ ತನ್ನ ಹಾಡುಗಾರಿಕೆಯಿಂದ ಜನರನ್ನು ಮಂತ್ರಮುಗ್ಧಮಾಡುತ್ತಿದ್ದಿರಬೇಕು. ಇವರು 'ರಯಸೋಂಕಾ ಗವಯಿ' ಎಂದೇ ಪ್ರಸಿದ್ಧಿಯನ್ನು ಪಡೆದವರು. ಜನಸಾಮಾನ್ಯರಿಗೆ ಇವರ ಸಂಗೀತ ಎಟುಕದೇ ಇದ್ದರೂ, ಬಹುಶಃ ಇವರ ಧ್ವನಿಮುದ್ರಿಕೆಗಳ ಮಾರಾಟವು ಉಚ್ಚಾಂಕ ಪಡೆದಿರಬಹುದು. ತಟ್ಟೆಯ ಕೊನೆಗೆ ಇವರು 'ಮೈ ನೇಮ್ ಈಸ್ ಪ್ಯಾರೀ' ಎಂದು ಮಾಡುತ್ತಿದ್ದ ಉದ್ಘೋಷ ಕೂಡ ಕೇಳುವವರಿಗೆ ತುಂಬಾ ಸಂತೋಷವನ್ನು ನೀಡುತ್ತಿತ್ತು. 1916ರ ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಇವರು ಮಹಮ್ಮದ ಇಕ್ಬಾಲ್ ಬರೆದ 'ತರಾನೆ-ಏ ಮಿಲ್ಲಿ'ಯನ್ನು ಹಾಡಿದ್ದುದು, ಅಲ್ಲಿಂದಲೇ ಅದನ್ನು ಮುದ್ರಣ ಮಾಡಿದ್ದುದು, 'ಚೀನೋ ಅರಬ್ ಹಮಾರಾ, ಹಿಂದೋಸ್ತಾ ಹಮಾರಾ, ಮುಸ್ಲಿಮ್ ಹೈ ವತನ ಹೈ, ಸಾರಾ ಜಹಾ ಹಮಾರಾ' ಈ ಹಾಡು ಲೀಗಿನ ಸ್ಫೂರ್ತಿಯ ಹಾಡಾಗಿದ್ದುದು ಇತಿಹಾಸದ ಒಂದು ದಾಖಲೆ.

ನಾನು ಕೇಳಿದ ಮತ್ತೊಬ್ಬ ಹೆಣ್ಣು ಧ್ವನಿಯ ಗಾಯಕ ಕಮಲ್ ಸಿಂಹ. ಇವರು ಬಿಹಾರದಿಂದ ಬಂದಿದ್ದ ಗೃಹಸ್ಥರು. ಖ್ಯಾತ ಸಂಘಟಕ 'ಕಲ ಕೇ ಕಲಾಕಾರ'ದ ರೂವಾರಿ ಬ್ರಿಜ್ ನಾರಾಯಣರ ಬಲಗೈ ಎಂದು ಖ್ಯಾತಿಗಳಿಸಿದ ಕಮಲ್ ಸಿಂಹ ತಮ್ಮ ಒಳಧ್ವನಿಯಿಂದ ಹಾಡುತ್ತಿದ್ದರು. ಇವರ ವೈಶಿಷ್ಟ್ಯವೆಂದರೆ ಠುಮರಿ ಗಾಯನ ಪ್ಯಾರಾ ಸಾಹೇಬರಂತೆ. ಮುಂದೆ ಬ್ರಿಜ್ ನಾರಾಣರಿಗೂ ಇವರಿಗೂ ಜಗಳವಾಗಿ ಒಂದೆರಡು ವರ್ಷ ಕಮಲ್ ಸಿಂಹರು 'ಆಜ ಕೆ ಕಲಾಕಾರ'ವನ್ನು ಸ್ಥಾಪಿಸಿ, ಉಲ್ಕೆಯಂತೆ ಒಂದೆರಡು ವರ್ಷ ಮಿನುಗಿ ಮಾಯವಾದರು. ಇವರ ಎರಡು ಈ.ಪಿ.ಗಳನ್ನು (ಎಕ್ಸ್ಟೆಂಡೆಡ್ ಪ್ಲೇ 45 ಆರ್‌ಪಿಎಮ್) ಎಚ್‌ಎಮ್‌ವಿಯವರು 1975ರ ಸುಮಾರಿಗೆ ಹೊರತಂದಿದ್ದರೆಂಬುದು ನನ್ನ ನೆನಪು. ಇವರು ಮುಂಬಯಿ ಆಕಾಶವಾಣಿಯ ಬಿ-ಹೈ ಗ್ರೇಡ್ ಕಲಾವಿದರಾಗಿದ್ದರು.

*****

6.7

ಹಿಂದುಸ್ತಾನಿ ಸಂಗೀತದಲ್ಲಿ ಗಜ಼ಲ್ ಪ್ರಕಾರ

ಇಂದಿನ ಹಿಂದುಸ್ತಾನಿ ಸಂಗೀತದ ಮೂಲ, ಸಾಮಗಾನದಲ್ಲಿ ಎಂಬ ವಿಷಯ ಎಲ್ಲರಿಗೂ ಗೊತ್ತಿರುವಂತಹುದೇ. ಕಾಲ ಬದಲಾದ ಹಾಗೆ ಹೊಸಹೊಸ ಪ್ರಯೋಗ ಮಾಡುವ ಮನುಷ್ಯನ ಪ್ರಬಲ ಇಚ್ಛೆಯ ಕಾರಣದಿಂದ ಈ ಸಾಮಗಾನ ಮುಂದೆ ಗಂಧರ್ವಗಾನವಾಗಿ ಮಾರ್ಪಟ್ಟಿತು. ಇದರಲ್ಲಿಯೂ ಅನೇಕ ಶಾಖೆ, ಉಪಶಾಖೆಗಳು ಹುಟ್ಟಿ, ಅವುಗಳ ವೈಶಿಷ್ಟ್ಯದಿಂದ ಹೊಸ ಹೊಸ ಪದ್ಧತಿಗಳು ನಿರ್ಮಾಣವಾದವು. ಇದೇ ರೀತಿ ಸಾಮಗಾನ, ಗಂಧರ್ವಗಾನ ಮುಂದೆ ರಾಗ, ಗಾನ ಅಂದರೆ ಮೂರು ಸ್ವರಗಳ ಸಾಮಗಾನ, ಸಾಮವೇದದ ಋಕ್ಕುಗಾನ 12 ಸ್ವರಗಳ ಮತ್ತು 22 ಶ್ರುತಿಗಳ ರಾಗಗಾಯನವಾಗಿ ಮಾರ್ಪಾಡು ಹೊಂದಿತು.

ಈ ರಾಗಗಾನದಲ್ಲಿ ಜನಪದ ಸಂಗೀತದ ಅಂದರೆ, ಉದಾಹರಣೆಗೆ ಕನ್ನಡ ಬೀಸುವಕಲ್ಲಿನ ಹಾಡುಗಳು, ಮರಾಠಿ ಓವಿಗಳು, ಉತ್ತರಪ್ರದೇಶದ ಜೋಕಾಲಿ (ಝೂಲಾ) ಹಾಡುಗಳನ್ನು ಹಾಡುವ ರೂಢಿ ಇದೆ. ಸಮಾಂತರ ರೇಷೆಂಯಲ್ಲಿ, ದೇವಾಲಯಗಳಲ್ಲಿ ದೇವರನಾಮಗಳು, ಆರಾಧನೆಯ ಧ್ರುಪದ್ ಪದ್ಧತಿಗಳ ಕೃತಿಗಳೂ, ಪ್ರಬಂಧ ಗಾಯನ ಇತ್ಯಾದಿಗಳ ಉತ್ಪತ್ತಿ ಕ್ರಮೇಣ ಆಗುತ್ತಿದ್ದು, ಇತರ ಲಲಿತ ಪ್ರಕಾರದ ದೇಸಿಗಾಯನವು ಹುಟ್ಟಿ, ಕೆಲವು ಬೆಳೆದವು. ಕೆಲವು ಲುಪ್ತ ಕೂಡ ಆದವು!

ಕವ್ವಾಲಿ ಪ್ರಕಾರ ಹಾಗೂ ಗಜ಼ಲ್ ಪ್ರಕಾರಗಳು ಸಂಗೀತದ ಇತಿಹಾಸಕಾರರ ಹೇಳಿಕೆಯ ಪ್ರಕಾರ ಅಮೀರ ಖುಸ್ರೋರವರ ಕಾಲದಲ್ಲಿ (12ನೇ ಶತಮಾನ) ಜನಪ್ರಿಯತೆಯ ಶಿಖರ ಮುಟ್ಟಿ ಮುಂದೆ ಎರಡು-ಮೂರು ಶತಮಾನಗಳಲ್ಲಿ ಹಿಂದೆ ಬಿದ್ದು, ಪುನಃ 20/21 ನೇ ಶತಮಾನದಲ್ಲಿ ಜನಪ್ರಿಯತೆಯ ಉಚ್ಚಾಂಕವನ್ನು ಪಡೆದಿದೆ. ಗಜ಼ಲ್ ಶಬ್ದದ ಅರ್ಥ, ಪರ್ಶಿಯನ್ ಭಾಷೆಯಲ್ಲಿ ಪ್ರಿಯತಮೆಯೊಂದಿಗಿನ ಸಂವಾದ ಅಥವಾ ಸರಸ-ಸಲ್ಲಾಪ ಎನ್ನಬಹುದು. ಹೀಗಾಗಿ ಗಜ಼ಲದ ಸ್ಥಾಯಿ ಭಾವ ಶೃಂಗಾರವೇ ಆದರೂ ಇದರೊಂದಿಗಿನ ವಿರಹ, ಮಿಲನ, ದುಃಖ, ವ್ಯಾಕುಲತೆ, ಈ ಭಾವಗಳೂ ಅದರಲ್ಲಿ ಸುಂದರವಾಗಿ ಮೂಡುತ್ತವೆ. ಗಜ಼ಲ್ ಅಂದರೆ ಚಿಗರೆ ಎಂಬ ಅರ್ಥವೂ ಇದೆ! (ಚಂಚಲತೆಯ ಭಾವಪೂರ್ಣತೆಯ ಸಜೀವ ಮೂರ್ತಿ)

ಗಜಲ್ ಗಾಯನದ ಜನಪ್ರಿಯತೆಯ ಕಾರಣವೆಂದರೆ, ಅದರ ಸಮೃದ್ಧ ಸಾಹಿತ್ಯ. 'ಶೇರ್ ಶಾಹಿರೀ' ಎಂಬ ನುಡಿಕಟ್ಟಿನ ಶೇರ್ ಎಂಬುದು ಅತ್ಯಂತ ಮಹತ್ವಪೂರ್ಣವಾಗಿದ್ದು, ಇದು ಅರ್ಥಪೂರ್ಣ, ಭಾವಪೂರ್ಣ ಇಷ್ಟೇಕೆ ಚಮತ್ಕೃತಿಪೂರ್ಣವೂ ಆಗಿದೆ. ಅನೇಕ ರೂಪಕಗಳನ್ನು ಕವಿ, ಕಲ್ಪನಾ ವಿಲಾಸದಿಂದ ಶೃಂಗರಿಸುತ್ತಾನೆ. ಎರಡನೆಯ ಪಂಕ್ತಿಯಲ್ಲಿ ಚಮತ್ಕೃತಿ ಕಾಣಿಸುವಂತಹ ವಿಶಿಷ್ಟ ಪ್ರಯೋಗಗಳನ್ನು ಮಾಡಿ, ಓದುಗರನ್ನೂ ಕೇಳುವವರನ್ನೂ ದಂಗು ಬಡಿಸುತ್ತಾನೆ. ಕನ್ನಡದಲ್ಲಿ ಚುಟುಕು ಸಾಹಿತ್ಯ ನಿರ್ಮಾಣ ಮಾಡಿದ ದಿನಕರ ದೇಸಾಯಿ ಅಥವಾ ಇತ್ತೀಚಿನ ದುಂಡಿರಾಜರ ವಿನೋದಪೂರ್ಣ ಚುಟುಕುಗಳಂತೆ! ಗಜ಼ಲ್‌ಗಳಲ್ಲಿ ಹಾಸ್ಯ ತುಂಬಾ ಕಡಿಮೆ ಇದ್ದರೂ ಒಂದು ತರಹದ ಕಪ್ಪು ಹಾಸ್ಯ (ಬ್ಲ್ಯಾಕ್ ಹ್ಯೂಮರ್) ಕೇಳುವವರನ್ನು ತಿವಿಯುತ್ತಿರುತ್ತದೆ. ಒಂದು ಗಜ಼ಲ್‌ದಲ್ಲಿ ಇಂತಹ ಶೇರುಗಳು ಹೇರಳವಾಗಿರುತ್ತವೆ. ಸದ್ಯ 3, 5, 7 ಶೇರುಗಳು ಒಂದು ಗಜ಼ಲ್‌ದಲ್ಲಿ ಸಿಗಬಹುದು. ಈ ದ್ವಿಪದಿಗಳಲ್ಲಿ ಕವಿ ತನ್ನ ಕವಿತೆಯ ಆಶಯಗಳನ್ನು ಯಮಕಗಳ ಮೂಲಕ ಮುಟ್ಟಿಸುತ್ತಿರುತ್ತಾನೆ. ಉದಾಹರಣೆಗೆ ಈ ಶೇರು ನೋಡಿ, "ಬುಜಗಯಾ ದಿಲ್ ಹಯಾತ್ ಬಾಕೀ ಹೈ, ಛುಪ್ ಗಯಾ ಚಾಂದ್, ರಾತ್ ಬಾಕಿ ಹೈ"

ಈ ದ್ವಿಪದಿಯಲ್ಲಿಯ 'ಬಾಕಿ ಹೈ' ಶಬ್ದ ಎರಡು ಪಂಕ್ತಿಯಲ್ಲಿ ಎರಡು ಸಲ ಬಂದಿದೆ. ಇಂತಹ ಯಮಕಕ್ಕೆ 'ರದೀಪ' ಎನ್ನುತ್ತಾರೆ. 'ಹಯಾತ್' ಹಾಗೂ 'ರಾತ್' ಇವೂ ಕೂಡ ಉಚ್ಚಾರಕ್ಕೆ ಸಮವಾಗಿದ್ದರೂ ಅರ್ಥ ಬೇರೆ ಇದ್ದುದರಿಂದ ಇದಕ್ಕೆ 'ಕಾಫಿಯಾ' ಎಂದು ಕರೆಯುವ ಸಂಪ್ರದಾಯವಿದೆ. ಗಜ಼ಲ್‌ಗಳ ಮೂಲ ಇರಾಣದ ಲೋಕ ಸಂಗೀತದಲ್ಲಿತ್ತು. ಅದಕ್ಕೆ ಹಿಂದುಸ್ತಾನಿ ಬಣ್ಣವನ್ನು ಬಳಿದವರು ಅಮೀರ್ ಖುಸ್ರೋ ಎಂಬ ಮಾತು, ಮುಂಬಯಿಯಲ್ಲಿ ಜರುಗಿದ, ಇಂಡೋ ಇರಾನಿಯನ್ ಮ್ಯೂಸಿಕಲ್ ಕಾನ್ಫ್ಲುಯೆನ್ಸ್‌ನಲ್ಲಿ ಅರ್ಥವಾಯಿತು. ಇರಾಣದಿಂದ ಬಂದ ಒರ್ವ ಯುವತಿ ಅಲ್ಲಿಯ ಲೋಕ ಸಂಗೀತ ಹಾಡಿದಾಗ ಇಲ್ಲಿಯ ಸೂಫಿ ಸಂತರ ಹಾಡುಗಳ ಅನುಭವವಾದುದನ್ನು ಇಲ್ಲಿ ನೆನೆಯಬಹುದು.

ಭಾರತದಲ್ಲಿ ಈ ಗಜ಼ಲ್ ಪ್ರಕಾರ ರೂಢಿಯಾದ ನಂತರ, ಉತ್ತರಪ್ರದೇಶದ ಲಖನವೀ ಗಜ಼ಲ್, ಬನಾರಸೀ ಗಜ಼ಲ್, ದಿಲ್ಲಿಯ ಗಜ಼ಲ್ ಇತ್ಯಾದಿ ಪ್ರಕಾರಗಳು ಚಾಲ್ತಿಯಲ್ಲಿ ಬಂದವು. ಬೇರೆ ಬೇರೆ ಭಾಷೆಗಳ ಕವಿಗಳೂ ಕೂಡ ತಾವಾಗಿಯೇ ಈ ಪ್ರಕಾರಕ್ಕೆ ಆಕರ್ಷಿತರಾಗಿದ್ದು, ಕನ್ನಡ ಮತ್ತು ಮರಾಠಿಯಲ್ಲಿ ಅನೇಕ ಕವಿಗಳು ಗಜ಼ಲ್‌ಗಳನ್ನು ರಚನೆ ಮಾಡಿದರು. ಗಜ಼ಲ್‌ಗಳ ರಚನೆ ತುಂಬಾ ಆಗಿದ್ದರೂ, ಕನ್ನಡದಲ್ಲಿ ಗಜ಼ಲ್ ಗಾಯಕರ ಸಂಖ್ಯೆ ಬಹಳ ಕಡಿಮೆ ಎನ್ನುವದು ಅಷ್ಟೇ ಸತ್ಯ. ಮರಾಠಿಯಲ್ಲಿ ಭೀಮರಾವ್ ಪಂಬಾಳೆ ಇವರ ಹೆಸರು ಮನೆಮಾತಾದರೆ, ಕನ್ನಡದಲ್ಲಿ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಶಾಸ್ತ್ರೀಯ ಸಂಗೀತವನ್ನು ವಿಧಿವತ್ತಾಗಿ ಕಲಿತು ಮುಂದೆ ಕರ್ನಾಟಕದಲ್ಲಿ ಏಕಮೇವ ಗಜ಼ಲ್ ಗಾಯಕರೆಂದು ಹೆಸರು ಮಾಡಿದ ರವೀಂದ್ರನಾಥ ಹಂದಿಗನೂರ

ಅವರನ್ನು ಮರೆಯುವ ಹಾಗಿಲ್ಲ. ಇವರಿಗೆ ಸ್ಫೂರ್ತಿ ಎಂದರೆ ಪಾಕಿಸ್ತಾನದ ಖ್ಯಾತ ಗಝಲ್ ಗಾಯಕ ಗುಲಾಮ್ ಅಲಿ. ಹಂದಿಗನೂರರು ಶರಣ ಸಾಹಿತ್ಯವನ್ನು ಕೂಡ ಅಷ್ಟೇ ಸಾಮರ್ಥ್ಯದಿಂದ ಕಚೇರಿಯಲ್ಲಿ ಹಾಡುತ್ತಿರುತ್ತಾರೆ. ಶರಣರ ತತ್ತ್ವಜ್ಞಾನ ಮತ್ತು ಕಾಮ-ಪ್ರೇಮಗಳ ವೈಫಲ್ಯ ಚಿತ್ರಿಸುವ ಗಝಲ್ ಗಾಯನ ಒಂದಕ್ಕೊಂದು ಹದವಾಗಿ ಬೆರೆಯುವದು ಶಕ್ಯವೋ ಇಲ್ಲವೋ ಎಂಬುದು ಬೇರೆ ವಿಷಯ.

ಆದರೆ, ಗಜ಼ಲ್ ಪ್ರಣಾಲಿಯನ್ನು ಕನ್ನಡದಲ್ಲಿ ತಂದ ಶ್ರೇಯ ನಿಜಕ್ಕೂ ರವೀಂದ್ರನಾಥ ಹಂದಿಗನೂರರಿಗೆ ಸಿಗುವದು ನಿರ್ವಿವಾದ. ಬೇಗಂ ಅಖ್ತರ್, ಮೆಹದಿ ಹಸನ್, ಗುಲಾವ್ ಅಲಿ, ಜಗಜೀತ್ ಸಿಂಗ್ ಇವರ ಉರ್ದು-ಹಿಂದಿ ಗಝಲ್‌ಗಳು ಧ್ವನಿಸುರುಳಿಗಳಲ್ಲಿ ತುಂಬಾ ಇವೆ. ಪಾಕಿಸ್ತಾನದಲ್ಲಿಯಂತೂ ಪಟಿಯಾಲಾ, ಮತ್ತು ಕಿರಾನಾ ಎಂಬ ಶಾಸ್ತ್ರೀಯ ಸಂಗೀತದ ಮನೆಗಳು ಅಳಿದು ಹೋಗಿವೆ. ಉಳಿದಿರುವವು ಎಂದರೆ ಅದೇ ಮನೆತನದ ಹಜ಼ರತ್ ಫ಼ತ್ತೆ ಅಲಿ ಹಾಗೂ ಇಂಗ್ಲಂಡಿನಲ್ಲಿ ಹುಟ್ಟಿ ಬೆಳೆದ ಅದನಾನ್ ಸಾಮಿ ಇವರೆಲ್ಲ ಗಝಲ್ ಪರಂಪರೆಗೆ ಮಾರು ಹೋಗಿದ್ದನ್ನು ಕಾಣಬಹುದು, ಕೇಳಬಹುದು.

ಸಿಂಧಿ, ಗುಜರಾತಿ ಭಾಷೆಗಳಲ್ಲಿಯೂ ಗಝಲ್‌ದ ಪ್ರಮಾಣ ಹೆಚ್ಚಾಗಿದೆ. ಒಂದು ಮಾತು ಇಲ್ಲಿ ಹೇಳುವದು ಸೂಕ್ತವೆನಿಸುತ್ತದೆ. ಸಾಹಿತ್ಯ ಎಷ್ಟೇ ಉಚ್ಚಮಟ್ಟದ್ದಿದ್ದರೂ ಜನಪ್ರಿಯತೆಯ ಉಚ್ಚಾಂಕ ಸಿಗುವದು ಗಾಯಕರಿಂದಲೇ ಎಂಬುದು ಅಷ್ಟೇ ಸತ್ಯ.

*****

6.8

ಕಲಾಸಕ್ತ ಕಮಿಶನರ್ ಮಧುಕರ ವಾಮನ ದೇಸಾಯಿ (1918–1975)

ಕರ್ನಾಟಕ ಸಂಘದಲ್ಲಿ ಒಮ್ಮೆ ಮುನಿಸಿಪಲ್ ಶಾಲೆಗಳ ಬಗ್ಗೆ ಮಾತುಕತೆ ನಡೆದಾಗ ನನಗೆ ನೆನಪಾದದ್ದು ಕರ್ನಾಟಕದಿಂದ ಈ ಕಡೆ ಬಂದು ಮುಂಬಯಿ ನಗರದ 'ಮುನಿಸಿಪಲ್ ಕಮಿಶನರ್' ಎಂದು 4 ವರ್ಷ ಕೆಲಸ ಮಾಡಿದ ಕಲಾಪ್ರೇಮಿ ಮವಾ ದೇಸಾಯಿಯವರು. ಇವರು ಕರ್ತವ್ಯದಕ್ಷ ಪ್ರಶಾಸಕರೆಂದು ಹೆಸರುಮಾಡಿದವರು. ಮವಾ ದೇಸಾಯಿ ಮೂಲತಃ ಗೋವಾದವರು. ತಂದೆ, ಬಾಂಬೆ ರಾಜ್ಯದ ಪೊಲೀಸ್ ಖಾತೆಯಲ್ಲಿ ಬ್ರಿಟಿಷರ ಕೆಳಗೆ ಕೆಲಸ ಮಾಡಿ ಪೋರ್ಚುಗೀಸರ ಆಡಳಿತದಲ್ಲಿದ್ದ ಗೋವಾಕ್ಕೆ ಮರಳದೇ, ಹುಬ್ಬಳ್ಳಿಯಲ್ಲಿಯೇ ನಿವೃತ್ತಿ ಪಡೆದು ಅಲ್ಲಿ ಮನೆಕಟ್ಟಿಕೊಂಡು ಇದ್ದವರು. ಮವಾದೇಸಾಯಿ ಮುಂದೆ ಏರ್ ಫೋರ್ಸ್‌ನಲ್ಲಿ ಪೈಲೆಟ್ ಎಂದು ಕೆಲಸಕ್ಕಿದ್ದವರು. ಐಎಎಸ್ ಮುಗಿಸಿ ಬಾಂಬೆ ರಾಜ್ಯದಲ್ಲಿ ಡೆಪ್ಯುಟಿ ಕಲೆಕ್ಟರ್, ಹುದ್ದೆಗಳಿಗೆ ಬಡ್ತಿಯನ್ನು ಪಡೆದು ಕೊನೆಗೆ ಇಂಡಸ್ಟ್ರೀಸ್ ಕಮಿಶನರ್ ಆಗಿ, ನಂತರ ಮುಂಬಯಿಯ ಮುನಸಿಪಲ್ ಕಾರ್ಪೊರೇಶನ್‌ದ ಮುಖ್ಯ ಪ್ರಶಾಸಕರಾದರು. ಅವರು ನಿವೃತ್ತಿ ಆಗುವ ಮೊದಲೇ, ಅಂದರೆ 5 ಆಗಸ್ಟ 1975ರಲ್ಲಿ ಹೃದಯಾಘಾತದಿಂದ ತೀರಿಕೊಂಡರು.

ತಿನಯೀಕರ್ ಸದಾಶಿವರಾಯರು ಕೂಡಾ ಕರ್ನಾಟಕದ ಬೆಳಗಾವಿಯವರು. ಶಿವಸೇನೆಯ ಆರ್ಭಟಕ್ಕೆ ಸರಿಯಾಗಿ ಉತ್ತರ ಕೊಡುವಂತಹ ನಗರಪಾಲಿಕೆಯ ಪ್ರಶಾಸಕರಾಗಿದ್ದರು. ತಿನಯೀಕರರು ಮುನಿಸಿಪಲ್ ಕಮಿಶನರ್ ಆಗಿದ್ದಾಗ ಮಹಾರಾಷ್ಟ್ರದ ಮುಖ್ಯ ಸಚಿವರಾಗಿದ್ದ ಜೆ.ಬಿ ಡಿಸೋಜರೂ ಕೂಡಾ ಮಂಗಳೂರಿನಿಂದಲೇ ವಲಸೆ ಬಂದವರು. ಜೆಬಿಯವರಿಗೂ (ಅವರಿಗೆಲ್ಲಾ ಕರೆಯುವುದು ಜೆಬಿ ಎಂದೇ) ಅವರಿಗಿಂತ ಮೊದಲು ಮುಖ್ಯ ಸಚಿವ ಮತ್ತು ಅದಕ್ಕಿಂತ ಮೊದಲು ಮುನಿಸಿಪಲ್ ಕಮಿಶನರ್ ಆಗಿದ್ದ ಡಿ.ಎಂ. ಸುಖ್ಠಂಕರ್ ಇವರಿಗೆಲ್ಲರಿಗೂ ಇದ್ದ ಸಮಾನ ಗುಣವಿಶೇಷವೆಂದರೆ ಅವರಿಗಿದ್ದ ಸಂಗೀತ, ಚಿತ್ರಕಲೆಯಲ್ಲಿದ್ದ ವಿಶೇಷ ಆಸಕ್ತಿ.

ಈ ಲೇಖನದಲ್ಲಿ ರಾಜ್ಯ ಶಾಸಕರಲ್ಲಿ ಅಡಗಿದ್ದ ಸಂಗೀತ, ನೃತ್ಯ ಮತ್ತು ಚಿತ್ರಕಲೆಗಳ ಆಸಕ್ತಿಯ ಸಮಾನಸೂತ್ರತೆ ಇದ್ದುದರಿಂದಲೇ ಅವರನ್ನೆಲ್ಲ ಇಲ್ಲಿ ಸೇರಿಸಬೇಕಾಯಿತು. ನಾನು ಕಲಿತದ್ದು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ. ತಂದೆಯವರು ಎಂಎಸ್‌ಸಿ

ಓದಿಸಲು ತಯಾರಿದ್ದರೂ ಸಂಗೀತದ ಗೀಳಿನಿಂದ ಮುಂಬಯಿ ಸೇರಿದೆ. ಅದಕ್ಕಿಂತ ಮೊದಲು ನಾನು 1959ರಿಂದ 1961ರಲ್ಲಿ ಪುಣೆ ಪಕ್ಕದಲ್ಲಿದ್ದ ಪಿಂಪರಿಯಲ್ಲಿ ಹಿಂದೂಸ್ಥಾನ್ ಆ್ಯಂಟಿ ಬಯೋಟಿಕ್ಸ್‌ದಲ್ಲಿ ಅಪ್ರೆಂಟಿಸ್ ಎಂದು ಸೇರಿಕೊಂಡಿದ್ದೆ. ದಿವಸಕ್ಕೆ 8 ತಾಸಿನ ಡ್ಯೂಟಿ ಇದ್ದುದರಿಂದ ಮುಂಜಾನೆ ಡ್ಯೂಟಿ ಇದ್ದರೆ ಮಧ್ಯಾಹ್ನ ಕಂಪನಿ ಬಸ್ಸಿನಲ್ಲಿ ಪುಣೆ, ರಾತ್ರಿ ಡ್ಯೂಟಿ ಇದ್ದರಂತೂ ಕೇಳಬೇಡಿ, ಇಡೀ ದಿನ ಪುಣೆಯಲ್ಲಿ ಗುಲಾಮ್ ರಸೂಲರಲ್ಲಿ ತಬಲಾ ಕಲಿತು ಬಳಿಕ ರಿಕಾರ್ಡು ಲೈಬ್ರೆರಿಯಲ್ಲಿ ರಿಕಾರ್ಡು ಕೇಳುವದು, ಸಂಗೀತ ನಾಟಕ, ಜಲಸಾಗಳಿಗೆ ಹೋಗುವದು – ಇವುಗಳನ್ನು ಮಾಡುತ್ತಿದ್ದೆ. ಪಂ. ಭೀಮಸೇನ ಜೋಶಿಯವರ 4 ತಾಸಿನ ಬೈಠಕ್ಕು ಕೇಳಿದ್ದು ಮೊದಲನೇ ಸಲ ಪುಣೆಯಲ್ಲಿಯೇ! ಅದು ಕೂಡಾ ಆಗ ಪುಣೆಯಲ್ಲಿದ್ದ ಡೆಪ್ಯುಟಿ ಕಲೆಕ್ಟರ್ ಆಗಿದ್ದ ಮಧುಕರ ವಾಮನ ದೇಸಾಯಿಯವರ ಮನೆಯಲ್ಲಿ.

50 ವರ್ಷ ಹಿಂದಿನ ಪುಣೆಯ ಮಳೆಗಾಲದಲ್ಲಿಯೇ ಪಾನಶೇತ ಡ್ಯಾಮ್ ಒಡೆದು ಅರ್ಧಕ್ಕಿಂತ ಹೆಚ್ಚಿನ ಪುಣೆ ನಾಮಶೇಷವಾಯಿತು. ಈ ಪಾನಶೇತ್ ಡ್ಯಾಮ್ ಕಟ್ಟಿದ್ದೇ 1958–59ರಲ್ಲಿ. ಆಗಿನ ಪ್ರಧಾನಿ ಜವಾಹರಲಾಲ ನೆಹರೂ ಇದನ್ನು ಉದ್ಘಾಟಿಸುವವರಿದ್ದರು. ಅಂಬೀ ನದಿಯ ಪಾತ್ರ ಅಗಲ ಮಾಡಿ ಸುತ್ತಲಿನ ಪ್ರದೇಶದ ನೀರಾವರಿಗಾಗಿ ಮಾಡಿದ ಅಣೆಕಟ್ಟು, ನೀರಿನ ಮಟ್ಟ ಹೆಚ್ಚಾದರೆ ಪುಣೆ ಶಹರದಲ್ಲಿ ಹರಿಯುವ ನದಿಯಲ್ಲಿ ನೀರು ಬಿಡಲು 4–6 ದ್ವಾರಗಳು ಇದ್ದವು. ಅಣೆಕಟ್ಟು ಕಟ್ಟಿದ ಮೊದಲನೇ ಮಳೆಗಾಲದಲ್ಲಿಯೇ ಈ ದುರಂತ ಸಂಭವಿಸಿತ್ತು. (1961). ನನಗೆ ಮಧ್ಯಾಹ್ನದ ಡ್ಯೂಟಿ. ಮಧ್ಯಾಹ್ನ 2 ರಿಂದ ರಾತ್ರಿ 10 ಗಂಟೆಯ ತನಕ. ಜುಲೈ 12ನೇ ತಾರೀಖಿನ ಮುಂಜಾನೆ ಪಾನಶೇತ (ಖಡಕವಾಸಲಾ ಪಕ್ಕದ) ಡ್ಯಾಮ್‌ನಲ್ಲಿ ಬಿರುಕು ಉಂಟಾದದ್ದು, ನಂತರ ನದಿ ತೀರದ ಹಳ್ಳಿಗಳು ಅಂದರೆ ಈಗಿನ ಕೊಥ್ರೂಡ್, ಡೆಕ್ಕನ್ ಜಿಮ್ಖಾನಾ, ಲಕಡೀ ಪೂಲ್, ಅಲಕಾ ಟಾಕೀಸ್, ಟಿಲಕ ರೋಡ್, ನದಿಗೆ ಸಮಾನಾಂತರವಾಗಿದ್ದ ಶನಿವಾರ ಪೇಠೆ, ಇಲ್ಲಿಯ ಮನೆ, ದನಕರುಗಳು ಕೊಚ್ಚಿ ಹೋದ ದಿನದ ಕರಾಳ ಚಿತ್ರಗಳು 50 ವರ್ಷಗಳ ನಂತರ ನನ್ನ ಮನಸ್ಸಿನಲ್ಲಿ ಸಜೀವವಾಗಿ ಉಳಿದಿವೆ. ಆ ಸಮಯದಲ್ಲಿ ಮವಾ ದೇಸಾಯಿಯವರ ಕರ್ತವ್ಯದಕ್ಷತೆ, ನಿಷ್ಠೆ ಕಣ್ಮುಂದೆ ಕಟ್ಟಿತು. ಸತತವಾಗಿ 3 ತಿಂಗಳು ದಿನ–ರಾತ್ರಿ ಕೆಲಸ ಮಾಡಿದ್ದರಿಂದ ದೇಸಾಯಿಯವರಿಗೆ ವಿಶ್ರಾಂತಿಯ ಸಲಹೆ ಕಡ್ಡಾಯವಾಗಿ ಕೊಡಲಾಯಿತು. 'ಪೇಟಿ ಬಾರಿಸುವ ಕಲೆಕ್ಟರ್' ಎಂದು ಖ್ಯಾತಿ ಪಡೆದ ದೇಸಾಯಿಯ ವಿಶ್ರಾಂತಿ ಎಂದರೆ ಸಂಗೀತದಲ್ಲಿ ಮುಳುಗಿ ಏಳುವುದು, ಪೇಟಿ ಬಾರಿಸುವುದು, ಇವೇ! ಧಾರವಾಡದಲ್ಲಿದ್ದಾಗ ಗಂಗೂಬಾಯಿ, ಬಸವರಾಜ ರಾಜಗುರು ಮತ್ತು ಪಕ್ಕದಲ್ಲಿಯೇ ಇದ್ದ ಮನ್ಸೂರರ ಸಂಗೀತ ತುಂಬಾ ಕೇಳಿದ್ದೆ. ಮಲ್ಲಿಕಾರ್ಜುನರ ಶಿಷ್ಯ ಪಂಚಾಕ್ಷರಿ ಮತ್ತಿಗಟ್ಟಿ ಕೆಲಕಾಲ ನನ್ನ ಸಂಗೀತವನ್ನು ತಿದ್ದಿದ್ದೂ ಇದೆ. ಆದರೆ, ಕರ್ನಾಟಕದವರೇ ಆಗಿದ್ದ ಪಂ. ಭೀಮಸೇನ ಜೋಶಿ (ಅಷ್ಟರವರೆಗೆ 'ಪುಣೇಕರ್' ಆಗಿದ್ದರು) ಮತ್ತು ಕುಮಾರ ಗಂಧರ್ವರು ಚಿಕ್ಕಂದಿನಲ್ಲಿಯೇ ಮುಂಬಯಿಯಲ್ಲಿ ದೇವಧರ ಮಾಸ್ತರರಲ್ಲಿ ಕಲಿಯಲು ಬಂದಿದ್ದರು. ಹೀಗಾಗಿ ಭೀಮಣ್ಣವನರ ಸಂಗೀತದ ಪರಿಚಯವಿದ್ದರೂ ಅವರ ಮೆಹಫಿಲ್ಲು ಪುಣೆಗೆ ಬರುವ ತನಕ ಕೇಳಿರಲಿಲ್ಲ. ನಾವು ಅಂದರೆ ಧಾರವಾಡದಿಂದ ಪುಣೆಗೆ

ಬಂದ ಪಿಂಪರಿ ಗುಂಪಿನವರು ಲಕ್ಷ್ಮೀ ರೋಡಿನಲ್ಲಿ ಆಗಾಗ ಭೀಮಣ್ಣನವರನ್ನು ಭೆಟ್ಟಿಯಾದಾಗ ನಮ್ಮ ಕ್ಷೇಮ ಸಮಾಚಾರ ಕನ್ನಡದಲ್ಲಿಯೇ ನಡೆಯುತ್ತಿತ್ತು. ಆಗಲೂ ಭೀಮಣ್ಣ ಪಕ್ಕದ ಸದಾಶಿವ ಪೇಟೆಯಲ್ಲಿ ಸ್ವಲ್ಪ ಎತ್ತರದ ಸ್ಥಳದಲ್ಲಿಯೇ ವಾಸಿಸುತ್ತಿದ್ದರು. ಅಂದ ಹಾಗೆ, ಪಾನಶೇಟ್ ಮುಳುಗಡೆಯಲ್ಲಿ ಶನಿವಾರಪೇಠೆ ಕೊಚ್ಚಿಹೋದ ಹಾಗೆ, ಅಲಕಾ ಟಾಕೀಸಿನ ಮೊದಲನೇ ಹಂತದವರೆಗೆ ನೀರಿನ ಪಾತಳಿ ಏರಿದರೂ ಲಕ್ಷ್ಮೀ ರೋಡ್, ಸದಾಶಿವಪೇಟೆ ಸುರಕ್ಷಿತವಾಗಿದ್ದವು. ಮನೆಮಠ ಕೊಚ್ಚಿ ಹೋದವರಿಗೆಲ್ಲ ಪಕ್ಕದ ಖಡಕಿ ದಾಪೋಲಿಯ ಸೈನ್ಯದ ಸದರ್ನ ಕಮಾಂಡ್‌ದವರು ಸ್ವಾರಗೇಟ್ ಮತ್ತು ಕ್ಯಾಂಪಿನ ಬಯಲು ಪ್ರದೇಶದಲ್ಲಿ ಮೂರು ತಿಂಗಳ ತುರ್ತುವಾಸಕ್ಕೆ ಚಿಕ್ಕಮಟ್ಟ ಮನೆಗಳನ್ನು, ರಿಕಾರ್ಡು ವೇಳೆಯಲ್ಲಿ ಕಟ್ಟಿಕೊಟ್ಟ ನೆನಪು.

ಮವಾ ದೇಸಾಯಿಯವರ ಬಂಗಲೆ ಕ್ಯಾಂಪ್ ಏರಿಯಾದಲ್ಲಿಯೇ ಇತ್ತು. ಆಗಸ್ಟ್ ತಿಂಗಳ ಕೊನೆಯ ದಿನಗಳು. ಮರುದಿನ ನನಗೆ ರಾತ್ರಿ ಪಾಳಿ ಮುಗಿಸಿದ್ದರಿಂದ ವಾರದ ರಜೆ ಇತ್ತು. ಸಂಗೀತ ಕೇಳಲು 15–20 ಜನರಷ್ಟೆ. ಖ್ಯಾತ ಸಾಹಿತಿ ಪು.ಲದೇಶಪಾಂಡೆ, ಆಗ ಮರಾಠೀ ಚಿತ್ರಪಟದ ಕೆಲಸದಲ್ಲಿ ವ್ಯಸ್ತರಾಗಿದ್ದರೂ ಸಂಗೀತ ಎಂದರೆ ಮೊದಲನೇ ಸಾಲಿನಲ್ಲಿ 'ವಾಹವಾ', 'ಕ್ಯಾಬಾತ್‌ಹೈ' ಎಂದು ಹಾಡುಗಾರರನ್ನು ಹುರಿದುಂಬಿಸಲು ಬಂದೇ ಬರುತ್ತಿದ್ದರು. ನಮ್ಮ ಭಾಷೆಯಲ್ಲಿ ಇವರೆಲ್ಲ 'ವಾಹವಾ ಮಂಡಳಿ'. ಈ ಮಂಡಳಿ ಇರದಿದ್ದರೆ ಕಚೇರಿ ನಿರ್ಜೀವ. ಆ ದಿನ ಭೀಮಣ್ಣ 'ಮಲ್ಹಾರ'ವನ್ನೇ ಎತ್ತಿಕೊಂಡರು. ಪೇಟಿ ನುಡಿಸಲು ಮಾಣಿಕರಾವ್ ಠಾಕೂರದಾಸ ಮತ್ತು ತಬಲಾ ಲಾಲಾಜಿ ಗೋಖಲೆಯವರದು. ಲಾಲಾಜಿಯವರು ಖ್ಯಾತ ತಬಲಾ ಪಟು ಅಹಮದಜಾನ್ ತಿರಖ್ವಾ ಸಾಹೇಬರ ಬ್ರಾಹ್ಮಣ ಶಿಷ್ಯ. ಒಂದೂವರೆ ತಾಸು ಭೀಮಣ್ಣನವರಿಂದ ಕೇಳಿದ್ದು ಅದೇ ಮೊದಲ ಬಾರಿ. ನಂತರ ಪುಲ ಮತ್ತು ದೇಸಾಯಿಯವರ ಒತ್ತಾಯಕ್ಕೆ ನಾಲ್ಕಾರು ಮರಾಠೀ ನಾಟ್ಯ ಸಂಗೀತ ಮತ್ತು ದೇಸಾಯಿಯವರಿಗಾಗಿ ಒಂದೆರಡು ದಾಸರ ಕನ್ನಡ ಹಾಡುಗಳನ್ನು ಕೇಳಿದ ನೆನಪು. ಹಿಂದೆ ತಂಬೂರಿಗೆ ಮಾಧವ ಗುಡಿ ಮತ್ತು ವತ್ಸಲಾಬಾಯಿ. ಮೊಟ್ಟಮೊದಲು ಮತ್ತು ಕೊನೆಯ ಬಾರಿ ವತ್ಸಲಾಬಾಯಿ ಹಾಗೂ ಭೀಮಣ್ಣ ಕನ್ನಡ ನಾಟಕದಲ್ಲಿ ಜಡಭರತರು (ಭೀಮಣ್ಣನವರ ಚಿಕ್ಕಪ್ಪ) ಸೇರಿಸಿದ ಬೇಂದ್ರೆಯವರ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೆ ಚುಂಬಕ ಗಾಳಿಯು ಬೀಸುತಿದೆ' ಹಾಡಿದ ಹಾಡನ್ನೂ ದೇಸಾಯಿಯವರ ಒತ್ತಾಯಕ್ಕೆ ಹಾಡಿದ್ದು, ಇನ್ನೂ ನೆನಪಿನಲ್ಲಿ ನಿಂತಿದೆ. ಪೇಟಿ ಬಾರಿಸಿದವರು ದೇಸಾಯಿಯವರೇ.

ಮುಂದೆ ಈ ಪೇಟಿವಾದಕ ದೇಸಾಯಿ ಅಹಮ್ಮದ್ ನಗರ, ಸೊಲ್ಲಾಪುರದಲ್ಲಿ ಕಲೆಕ್ಟರ್ ಆಗಿದ್ದರು. ಹೋದ ಕಡೆಯಲ್ಲಿ 'ಕಲೆಯ ರಾಜ್ಯ' ಸ್ಥಾಪಿಸಿ ಕೊನೆಯಲ್ಲಿ ಮುಂಬಯಿ ಸೇರಿ ಮಂತ್ರಾಲಯದಲ್ಲಿ ಮೇಲೇರಿದರು. ಮುನಿಸಿಪಲ್ ಕಮಿಶನರ್ ಆದರು. ಕೆಲಕಾಲ ಗುಜರಾತಿನ ಬಾನಸ್‌ಸ್ಕಾಂಥಾ ಜಿಲ್ಲೆಯಲ್ಲಿ ಕಲೆಕ್ಟರ್ ಎಂದು ಹೆಸರು ಮಾಡಿದ್ದರಂತೆ. ಏನೇ ಇರಲಿ, ಮುಂಬಯಿ ಮಹಾನಗರ ಪಾಲಿಕೆಯಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ (ಹಿಂದೀ, ಮರಾಠೀ, ಗುಜರಾತಿ, ಕನ್ನಡ ಭಾಷೆಗಳಲ್ಲಿ)

ಸಂಗೀತ ಕಲಿಸಲಾಗುತ್ತಿದ್ದರೂ ಅದನ್ನು ಕಡ್ಡಾಯವಾಗಿ ಮಾಡಿ ಎಲ್ಲಾ ಶಾಲೆಗಳ ಸಂಗೀತ ಶಿಕ್ಷಕರ ಸಲುವಾಗಿ ದಾದರ್‌ನ ಹಿಂದೂ ಕಾಲೊನಿಯಲ್ಲಿ ಒಂದು ನಗರ ಪಾಲಿಕೆಯ ಅಕಾಡೆಮಿಯನ್ನೂ ಸ್ಥಾಪಿಸಿದ ಮಹಾನುಭಾವರು. ಒಳ್ಳೊಳ್ಳೆಯ ಸಂಗೀತಕಾರರನ್ನು ಸಂಗೀತ ಶಿಕ್ಷಕರೆಂದು ನೇಮಿಸಿದರು. ಇವರಲ್ಲಿ ಭೀಮಣ್ಣನವರ ಪೇಟಿ ಸಂಗಾತಿ ತುಳಸೀದಾಸ ಬೋರ್‌ಕರ್, ಅರ್ಚನಾ ಮತ್ತು ವಿಶ್ವನಾಥ ಕಾನಹೆರೆ, ಕರ್ನಾಟಕದಿಂದ ಬಂದ ಗಜಾನನ ಯಾಜಿ, ದುರ್ಗೇಶ್ ಚಂದಾವರ್‌ಕರ್ ಮೊದಲಾದವರು ಇದ್ದರು. ಮ.ವಾ ದೇಸಾಯಿಯವರ ಅಲ್ಟಾಮೌಂಟ್ ರಸ್ತೆಯಲ್ಲಿದ್ದ ಬಂಗಲೆಯಲ್ಲಿ ನಾನು ಅನೇಕ ಸಂಗೀತ ಕಚೇರಿಗಳನ್ನು ಕೇಳಿದ್ದೇನೆ. ಕರ್ನಾಟಕದಿಂದಲೇ ಕರೆಸಿದ ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ. ಕುಮಾರ ಗಂಧರ್ವ, ಗಂಗೂಬಾಯಿ ಇವರ ಹೊರತಾಗಿ ಇಲ್ಲಿಯವರೇ ಆದ ಅನೇಕ ಗಾಯಕ ವಾದಕರ ಕಾರ್ಯಕ್ರಮಗಳನ್ನೂ ಆಲಿಸಿದ್ದೇನೆ. ಮೂರು ತಿಂಗಳಿಗೊಮ್ಮೆ ಏರ್ಪಡಿಸುತ್ತಿದ್ದ ಸಂಗೀತ ಕಚೇರಿಗಳ ಒಲವು ಮುಂದಿನ ಕಮಿಶನರ್‌ರೂ ಕೂಡಾ ಆ ಬಂಗಲೆಯ ಫರ್ನಿಚರುಗಳ, ಧ್ವನಿ ಸಂಯೋಜನೆಗಳೊಂದಿಗೆ ಮುಂದುವರೆಸಿದ್ದು ತೋರಿಸಿದ್ದು ಮುಂಬಯಿಯ ಆ ಕಾಲದ ರಸಿಕರ ಪುಣ್ಯ! ನಾನು ಕೊನೆಯ ಕಚೇರಿ ಕೇಳಿದ್ದು ಭೀಮರಾವ್ ಪಾಂಚಾಲೆಯವರ ಮರಾಠಿ ಗಜಲ್‌ಗಳದ್ದು. ಕರುಣ ಶ್ರೀವಾಸ್ತವ ಎಂಬುವರು ಕಮಿಷನರ್ ಇದ್ದಾಗ 5–6 ವರ್ಷಗಳ ಹಿಂದೆ. ಈಗ ಎಕಾಡೆಮಿಯೂ ದುರವಸ್ಥೆಯಲ್ಲಿದೆ. ಸಂಗೀತ ಶಿಕ್ಷಕರು ನಿವೃತ್ತಿ ಆದ ನಂತರ ನೇಮಕಾತಿ ಇಲ್ಲದೇ ಇದ್ದುದರಿಂದ ಶಾಲೆಗಳಲ್ಲಿ ಸಂಗೀತದ ಅಭ್ಯಾಸ ಕಡಿಮೆ ಆಗುತ್ತಾ ಹೋಗಿದೆ.

ಮಧುಕರ ವಾಮನ ದೇಸಾಯಿ 1918ರಲ್ಲಿ ಹುಟ್ಟಿದರು. ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ, ಬಳಿಕ ಕರ್ನಾಟಕ ಕಾಲೇಜಿನಿಂದ ಬಿ.ಎ. ಆನರ್ಸ್ ಮುಗಿಸಿದರು. ಹಾಕಿ ಮತ್ತು ಕ್ರಿಕೆಟ್ ಆಟಗಾರ ಟೀಮಿನ ಕ್ಯಾಪ್ಟನ್ ಆಗಿದ್ದರು. ಆಗ ಎರಡನೇ ಮಹಾಯುದ್ಧ ಪ್ರಾರಂಭವಾಗಿತ್ತು. ಏರ್ ಫೋರ್ಸ್‌ನಲ್ಲಿ ಪೈಲೆಟ್ ಎಂದು 1943ರ ತನಕ ಆಕ್ಟೀವ್ ಸರ್ವೀಸಿನಲ್ಲಿದ್ದರು. ಬಳಿಕ 1947ರಲ್ಲಿ ಇಂಡಿಯನ್ ಅಡ್ಮಿನಿಸ್ಟ್ರೇಟೀವ್ ಸರ್ವೀಸಿನಲ್ಲಿ (ಐಎಎಸ್) ಆಯ್ಕೆಯಾದರು. ಬೆಳಗಾವಿ, ರತ್ನಗಿರಿಯಲ್ಲಿ, ಅಸಿಸ್ಟೆಂಟ್ ಕಲೆಕ್ಟರ್ ಆಗಿ ಕೆಲಸಮಾಡಿದರು. ಕೇವಲ ಮೂರೇ ತಿಂಗಳಲ್ಲಿ ಮವಾ ದೇಸಾಯಿಯವರು ಶಸ್ತ್ರಾಸ್ತ್ರ ಕಾರಖಾನೆಯನ್ನು ವರಣಗಾವಿನಲ್ಲಿ ಸ್ಥಾಪಿಸಿದರು. 1971ರಿಂದ ನಿಧನದ ತನಕ ಮುಂಬಯಿ ಮುನಿಸಿಪಲ್ ಕಮಿಶನರ್ ಆಗಿದ್ದ ಇವರು ಬಾಂದ್ರಾ ಕಸಾಯಿಖಾನೆಯನ್ನು ಒಂದೇ ರಾತ್ರಿಯಲ್ಲಿ ಅಲ್ಲಿಂದ ಉಚ್ಚಾಟನೆಮಾಡಿದ್ದುದನ್ನು ಇಲ್ಲಿ ನಮೂದಿಸಲೇಬೇಕು.

*****

6.9

ಠುಮಕ, ಠುಮಕ ಚಲನೇವಾಲಿ ಠುಮರಿ

ಹಿಂದುಸ್ತಾನೀ ಸಂಗೀತ ಪದ್ಧತಿಯಲ್ಲಿ ಠುಮರಿ ಗಾಯನಕ್ಕೊಂದು ಸ್ಥಾನವಿದೆ. ಕೆಲವು ವರ್ಷಗಳ ಹಿಂದೆ ಮುಂಬಯಿ ವಿಶ್ವವಿದ್ಯಾಲಯದ ಸಂಗೀತ ವಿಭಾಗದವರು 7 ದಿನಗಳ ಒಂದು ಠುಮರಿ ಸೆಮಿನಾರನ್ನು ಆಯೋಜಿಸಿದ್ದು, ಅದರಲ್ಲಿ ದೇಶದ ಖ್ಯಾತ ಠುಮರಿ ಗಾಯಕರೂ, ಕಥಕ ನೃತ್ಯ ಕಲಾವಿದರೂ ಭಾಗವಹಿಸಿದ್ದರು. ಠುಮರಿಗೆ ಕೆಲವರು ಠುಂಬರೀ ಎಂದೂ ಠುಮ್ರಿ ಎಂದೂ, ಠುಮೀರೀ ಎಂದು ಸಂಬೋಧಿಸುವ ವಾಡಿಕೆ ಇದ್ದುದು ಈ ಸೆಮಿನಾರಿನಲ್ಲಿ ತಿಳಿಯಿತು. 'ಠುಮಕ್' ಶಬ್ದದಿಂದ ಠುಮರಿಯ ಉತ್ಪತ್ತಿ ಆಗಿದೆ. ಇದೊಂದು ಉತ್ತರ ಭಾರತದ ನೃತ್ಯ ಗೀತೆ. ಶಾಸ್ತ್ರೀಯ ಸಂಗೀತ ಹಾಗೂ ಜಾನಪದ ಸಂಗೀತದೊಂದಿಗೆ ಇದರ ಸಂಬಂಧವಿದೆ. ಇದು ಉಪಶಾಸ್ತ್ರೀಯ ಸಂಗೀತ ಪ್ರಕಾರಗಳಲ್ಲಿ ಒಂದು ಎಂದು ನಿಶ್ಶಂಕೆಯಿಂದ ಹೇಳಬಹುದು. ಯಾವುದೇ ರಾಗದಲ್ಲಿ ಠುಮರಿಯನ್ನು ಹಾಡಬಹುದಾದರೂ ಕೆಲವು ರಾಗಗಳಲ್ಲಿ ಮಾತ್ರ ಅದು ಚೆನ್ನಾಗಿ ಅರಳುತ್ತದೆ. ಉದಾಹರಣೆಗೆ ಯಮನ್ ರಾಗದಲ್ಲಿ ಠುಮರೀ ಹಾಡಬಹುದಾದರೂ ಅಥವಾ ಭೂಪಾಳಿಯಲ್ಲಿ ಲಾವಣಿಯ (ಇದೊಂದು ಅಸಲ್ ಮರಾಠೀ ಲೋಕನೃತ್ಯ-ಸಂಗೀತದ ಪ್ರಕಾರ. ವಿ. ಶಾಂತಾರಾಮರ 'ಅಮರ ಭೂಪಾಳಿ' ಚಲನಚಿತ್ರ ಇದರ ಮನೋಹರ ಸಂಗಮಕ್ಕೆ ಒಂದು ಉದಾಹರಣೆ) ಪ್ರಾತ್ಯಕ್ಷಿಕೆ ಕೊಡಬಹುದಾದರೂ ಖಮಾಚ್, ತಿಲಂಗ್, ಕಾಫಿ, ಪಿಲೂ, ಮುಲತಾನಿ ಕಾಫಿ, ಸಿಂಧೂರಾ, ರಾಜಾಸ್ಥಾನದ ಮಾಂಡ್, ದೇಸ್, ಪಹಾಡಿ, ಗಾರಾ, ಶಿವರಂಜನಿ, ಜೋಗಿಯಾ, ಭೈರವಿ... ಎಷ್ಟು ರಾಗಗಳನ್ನು ಎಣಿಸಲಿ? ಈ ರಾಗಗಳಲ್ಲಿ ಠುಮರಿ ಬಹಳ ಚೆನ್ನಾಗಿ ಮೂಡುತ್ತದೆ. ಇವೆಲ್ಲ ಉತ್ತರ ಹಿಂದೂಸ್ಥಾನದ ಲೋಕಸಂಗೀತದಲ್ಲಿ ಜನಪ್ರಿಯವಾಗಿವೆ. ಅಂತೆಯೇ ಸಿನೆ-ಸಂಗೀತದಲ್ಲಿಯೂ ಕೂಡ.

ಠುಮರಿಯ ಮೂಲವನ್ನು ಶೋಧಿಸುವ ಪ್ರಯತ್ನವನ್ನು ಮಾಡಿದರೆ ನಾವು ಸೀದಾ ಭರತಮುನಿಯ ನಾಟ್ಯಶಾಸ್ತ್ರಕ್ಕೆ ಅಂದರೆ ಸಾಧಾರಣ 2000 ವರ್ಷಗಳಿಗಿಂತ ಹಿಂದಕ್ಕೆ ಹೋಗಿ ಮುಟ್ಟುವ ಸಂಭವವಿದೆ. ನಾಟ್ಯಶಾಸ್ತ್ರದಲ್ಲಿಯ ಧ್ರುವಗೀತೆಯೇ ಠುಮರಿಯ ಮೂಲ. ಕಾಲಿದಾಸನ ಮಾಲವಿಕಾಗ್ನಿಮಿತ್ರ ನಾಟಕದಲ್ಲಿಯ ನಾಯಿಕೆ ಮಾಲವಿಕ; ಚತುಷ್ಪದಿಯನ್ನು (ನಾಲ್ಕು ಸಾಲಿನ ಪದ್ಯ) ಹಾಡುತ್ತಾಳೆ. ಹೇಗೆ ಹಾಡುತಿದ್ದಿರಬಹುದು? ಎಂಬುದು ಒಂದು ಯಕ್ಷಪ್ರಶ್ನೆಯಾದರೂ ಅಂದಿನ ನೃತ್ಯ

ಪಟುಗಳು ಅಭಿನಯದೊಂದಿಗೆ ಸ್ವತಃ ಹಾಡುತ್ತಿದ್ದರು. ಡಾ. ಭೈರಪ್ಪನವರ 'ಸಾರ್ಥ' ಕಾದಂಬರಿಯಲ್ಲಿ ಗುಪ್ತಕಾಲೀನ ಸಂಗೀತ–ನೃತ್ಯ ನಾಟಕಗಳ ವಿವರ ಬಹಳ ಚೆನ್ನಾಗಿ ಚಿತ್ರಿತವಾಗಿದೆ. ಔರಂಗಜೇಬನ ಕಾಲದಲ್ಲಿ ಬರೆದ 'ರಾಗದರ್ಪಣ'ದಲ್ಲಿ ಠುಮರಿಯ ಉಲ್ಲೇಖ ಬರುತ್ತದೆಯಂತೆ. ಈಗ ಪ್ರಚಾರದಲ್ಲಿದ್ದ ಠುಮರಿಯ ಬೀಜ 18ನೇ ಶತಮಾನದ ಕೊನೆಯ ಮೂರು ದಶಕಗಳಲ್ಲಿ ಸಿಗುತ್ತದೆ. ಗ್ವಾಲಿಯರ ಸಂಸ್ಥಾನದಲ್ಲಿದ್ದ ಗ್ವಾಲಿಯರ ಪರಂಪರೆಯ 'ಕವ್ವಾಲ ಬಚ್ಚೆ' (ಸಾಜಿದ ಅಲಿ, ವಾಜಿದ ಅಲಿ) ಇಂತಹ ಠುಮರಿಗಳನ್ನು ಹಾಡುತ್ತಿದ್ದರು ಎಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ. ನೃತ್ಯಕಲಾವಿದ ಬಿಂದಾದೀನ ಮಹಾರಾಜ (ಈಗಿನ ಬಿರ್ಜೂ ಮಹಾರಾಜರ ಮುತ್ತಾತ), ಗ್ವಾಲಿಯರ್ ಭಯ್ಯಾ ಗಣಪತ ರಾವ್, ನಂತರ ಗೋವಾ ಮತ್ತು ಪುಣೆಯಲ್ಲಿ ವಾಸ್ತವ್ಯ ಹೂಡಿದ ರಾಮಕೃಷ್ಣ ಬುವಾ ವಝೆ ಇವರೆಲ್ಲಾ ಅತ್ಯುತ್ತಮವಾಗಿ ಶಾಸ್ತ್ರೀಯ ಸಂಗೀತವನ್ನು ಹಾಡುತ್ತಿದ್ದರು. ಜೊತೆಗೆ, ಗಣಿಕಾ ಕಲಾವಿದರ ನೃತ್ಯದೊಂದಿಗೆ ಭಾವ ಪ್ರದರ್ಶನ ಮಾಡುತ್ತ ಈ ಠುಮರಿಗಳನ್ನೂ ಬಹಳ ಚೆನ್ನಾಗಿ ಹಾಡುತ್ತಿದ್ದರು. ಅಷ್ಟೇ ಅಲ್ಲ, ಬಹಳಷ್ಟು ಶಿಷ್ಯರಿಗೆ ತರಬೇತಿಯನ್ನು ನೀಡಿದ್ದರು. ವಾಜಿದ ಅಲಿ ಲಖನೌದ ಬಾದಶಾಹ. ಇಡೀ ದಿನ ಸಂಗೀತ–ನೃತ್ಯಗಳಲ್ಲಿ ಮುಳುಗಿದ್ದ ಈತನ ರಾಜ್ಯವನ್ನು ಕಬಳಿಸುವುದು ಬ್ರಿಟಿಷ್ ಸೇನೆಗೆ ಸುಲಭ ಸಾಧ್ಯವಾಗಿತ್ತು. ರಾಜ್ಯ ಹೋದರೂ ಪರವಾ ಇಲ್ಲ, ತಾನು ಕೃಷ್ಣನಂತೆ ಪೋಷಾಕು ಧರಿಸಿ ತನ್ನ ಸ್ತ್ರೀ ಪರಿವಾರದೊಂದಿಗೆ ವಾಜಿದ್ ಅಲಿ ನೃತ್ಯವನ್ನು ಮಾಡುತ್ತಿದ್ದಾಗ ತನ್ನ ಠುಮರಿ ಕುಸಿದು ಬಿತ್ತೆಂದು ಬಿಕ್ಕಳಿಸಿದನಂತೆ! ಸೆರೆಯಲ್ಲಿದ್ದ ನವಾಬನನ್ನು ಕಲಕತ್ತೆಗೆ ಸ್ಥಳಾಂತರಿಸುವಾಗ ಆತನ ಆಧ್ಯಾತ್ಮಿಕ ಒಲವಿನ ಠುಮರಿ ರಚನೆ, 'ಬಾಬುಲ ಮೋರಾ, ನೈಹರ ಛೂಠೋನ ಜಾಯ' ಪಲುಸ್ಕರರಿಂದ ಪಂಡಿತ ಭೀಮಸೇನ ಜೋಶಿಯವರ ತನಕ ಪ್ರತಿಯೊಬ್ಬರೂ ಹಾಡುತ್ತಿದ್ದರು ಎಂಬುದು ಅದರ ಲೋಕಪ್ರಿಯತೆಗೆ ಸಾಕ್ಷಿ.

ಈಗ ಪ್ರಚಾರದಲ್ಲಿರುವ ಠುಮರಿಯಲ್ಲಿ ಮೂರು ಪ್ರಕಾರಗಳಿವೆ. ಮೊದಲಿನದಾಗಿ, ಪಂಜಾಬ್‌ದ ಬಡೇ ಗುಲಾಮ ಅಲಿ, ಬರಖತ್ ಅಲಿ ಖ್ಯಾತಿಗೊಳಿಸಿದ 'ಪಂಜಾಬಿ ಠುಮರಿ', ಬೇಗಂ ಅಖ್ತರರ 'ಲಖನೌ ಠುಮರಿ', ಹಾಗೂ ಗೌಹರಜಾನ್, ಸಿದ್ಧೇಶ್ವರಿ ದೇವಿಯವರ 'ಬನಾರಸೀ ಠುಮರೀ'. ಟಪ್ಪಾ ಅಂಗವು ಪಂಜಾಬೀ ಠುಮರಿಯಲ್ಲಿದ್ದರೆ, ಕಥಕ–ನೃತ್ಯದ ಒಲವು ಲಖನೌ ಠುಮರಿಯಲ್ಲಿ ಮತ್ತು ಲೋಕ ಸಂಗೀತದ ಕಜರಿ, ಹೋರಿ ಮುಂತಾದ ಪ್ರಭಾವ ಬನಾರಸದ ಠುಮರಿಯಲ್ಲಿ ಸಿಗುತ್ತದೆ ಎಂದು ಸಾಮಾನ್ಯವಾಗಿ ಹೇಳಬಹುದು. ಬಂಗಾಲದ ಶೌರಿಮಿಯಾ ಈ ಪಂಜಾಬ್‌ದ ಟಪ್ಪಾ ಅಂಗವನ್ನು ಬಂಗಾಲದಲ್ಲಿಯೂ ರೂಢಿಯಲ್ಲಿ ತಂದ.

ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ಅವರಂತೆ, ಗ್ವಾಲಿಯರದ ಮಾನಸಿಂಗ ತೋಮರನು ಕೂಡ ಅತ್ಯಂತ ಕುಶಲ ಸಂಗೀತಕಲಾವಿದ ರಾಜನಾಗಿದ್ದ. ಈತ ಒಂದು ಸಲ ಭೈರವಿಯನ್ನು ಹಾಡುತ್ತಿದ್ದಾಗ 'ರಿಷಭ' ಸ್ವರವನ್ನು ತೀವ್ರಮಾಡಿದ. ಇದರಿಂದ ರಾಗದ ರಂಜಕತೆ (ವಾಹವ್ವಾ, ಭೇಷ್, ಭೇಷ್) ಹೆಚ್ಚಾಯಿತು. ನಂತರ ಇದೇ ಪ್ರಯೋಗವನ್ನು ಇತರ ರಾಗಗಳಲ್ಲಿಯೂ ಮಾಡಿದ. ಇದಕ್ಕೆಲ್ಲಾ ಆತ 'ತೋಮರಿ

ಭೈರವಿ', 'ತೋಮರಿ ಖಮಾಚ' ಎಂದು ಹೆಸರಿಸಿದ. ತೋಮರಿ ಖಮಾಚ ಮುಂದೆ ಖಮಾಚ ಠುಮರಿ ಆಯಿತು ಎಂದು ಖ್ಯಾತ ಠುಮರಿತಜ್ಞರಾದ ಭರೂಚಿನ ಆರ್.ಸಿ. ಮೆಹತಾ ಅವರು ಠುಮರಿ ಸೆಮಿನಾರಿನಲ್ಲಿ ಹೇಳಿದರೆಂದು ನೆನಪು. ಹಿಂದುಸ್ತಾನಿ ಸಂಗೀತದಲ್ಲಿ ಈಗ ತುಂಬಾ ಪ್ರಚಾರದಲ್ಲಿರುವ ಖಯಾಲ್ ಗಾಯನಕ್ಕಿಂತ ಈ ಠುಮರಿಯಲ್ಲಿಯ ಸಾಹಿತ್ಯ, ಕಾವ್ಯ ಸ್ವಲ್ಪ ಮೇಲಿನ ದರ್ಜೆಯದು. ಆದರೆ ಸಾಸ-ನಣಂದ (ನಾದಿನಿ) ತೊಂದರೆ, ನಟಖಟಿ (ತುಂಟ) ಕೃಷ್ಣನ ಲೀಲೆ, ಪರದೇಶ ಪ್ರವಾಸಕ್ಕೆ ಹೋದ ಪ್ರಿಯಕರನ ನೆನಪು ಕಾಡುತ್ತಿರುವ ನಾಯಿಕೆ, ಅರ್ಥಾತ್ ಸ್ವಲ್ಪ ಸಂಶಯ, ಪರವೂರಿಗೆ ಹೋಗುತ್ತೇನೆಂದು ತನ್ನ ಸವತಿಯತ್ತ ಹೋಗಿದ್ದಾನೋ ಏನೋ ಎಂದುಕೊಂಡು 'ಪಿಯಾ ತೋ ಮಾನತ ನಾಹೀ' (ಭೀಮಸೇನ ಜೋಶಿ), 'ದಿನ ನಹೀ ಚೈನ ರಾತನಹೀಂ ನಿಂದಿಯಾ' (ಬೇಗಂ ಅಖ್ತರ್), 'ಪತ್ ರಾಖೋ ನ ರಾಖೋ ತೋಹರಿ ಮರ್ಜಿ' ('ನಿನ್ನ ಪಥ ಗಮನಿಸು, ಲಹರಿಯಲ್ಲ', ಶೋಭಾ ಗುರ್ಟು) ಮೂರೂ ಪ್ರಕಾರದ ಠುಮರಿಗಳನ್ನು ಮಿಶ್ರಮಾಡಿ ಹಾಡುವ ರೂಢಿಯನ್ನು ಇಟ್ಟುಕೊಂಡಿದ್ದವರು. ಇವುಗಳೆಲ್ಲ ಶಬ್ದಪ್ರಧಾನವಾದ ಠುಮರಿ ಗಾಯನದ ಕೆಲವು ಉದಾಹರಣೆಗಳು. ನಿರ್ಮಲಾದೇವಿ ಅರುಣ್ ಹಾಡಿದ ಠುಮರಿ 'ಮೋರಿ ಬಾಲಿ ಉಮರ ಭೀ ಲೇಜಾಯೇ' (ಮನಸ್ಸಿನ ಜೊತೆ, ವಯಸ್ಸನ್ನು ಕಳೆದುಕೊಂಡೆ), ಲಕ್ಷ್ಮಿ ಶಂಕರ್ ಜೊತೆ ಕೂಡಿ ಹಾಡಿದ 'ಸಾವನ ಬೀತಾ ಜಾಯೇಃ' ಮರೆಯಲು ಅಶಕ್ಯ. ಹೆಣ್ಣು ಒಂದು ಉಪಭೋಗದ ವಸ್ತು, ಎಂದು ಗಂಡು ಗ್ರಹಿಸಿಕೊಂಡ ದಿನಗಳಲ್ಲಿ ಕೂಡ ಅಭಿಸಾರಿಕೆಯಾದ ನಾಯಿಕೆ ವಿರಹದ ವ್ಯಾಕುಲ ಸ್ಥಿತಿಯಲ್ಲಿ ಹಾಡಿ 'ಹಮ್ ಭಿ ಕುಚ್ ಕಮ್ ನಹೀ' ಎಂದು ಸಾರಿದ ಅನೇಕ ಉದಾಹರಣೆಗಳು ಠುಮರಿಯಲ್ಲಿವೆ.

ಪೀಟರ್ ಮ್ಯಾನುಯೆಲ್ ಎಂಬಾತ ಠುಮರಿಗಳ ಒಂದು ಸ್ಥೂಲವಾದ ವರ್ಗೀಕರಣ ಮಾಡಿದ್ದಾನೆ. ಠುಮರಿಯಲ್ಲಿ 3% ಕೃಷ್ಣ ಗೋಪಿಯರ ಪ್ರಣಯಲೀಲೆಯ ವಿಷಯವಾಗಿದ್ದರೆ, 78% ಪ್ರಿಯಕರ 'ದೂರದೇಶ'ಕ್ಕೆ ಪ್ರಯಾಣವನ್ನು ಹೂಡಿದ್ದರಿಂದ ವಿರಹವನ್ನು ತಾಳಲಾರದ ವಿರಹೋತ್ಕಂಠಿತ ನಾಯಕಿಯ ವಿಷಯವಾಗಿದೆ. ಇನ್ನು 13% ನಾಯಿಕೆಯ ಸವತಿ ಮತ್ಸರಕ್ಕೆ ಮೀಸಲಾದರೆ, ಕೇವಲ 2% ಕೃಷ್ಣ ತನ್ನ ಪ್ರಿಯೆಗೆ ಸಮಾಧಾನ ಮಾಡುವ ವಿಷಯಗಳಿವೆಯಂತೆ!

ಲೋಕಗೀತೆಯ ಪ್ರಕಾರದಲ್ಲಿ ನಮ್ಮಲ್ಲಿಯ ಅಂದರೆ ಉತ್ತರ ಕರ್ನಾಟಕದಲ್ಲಿರುವ ನಾಗರ ಪಂಚಮಿಯ ದಿನ ಜೋಕಾಲಿ ಕಟ್ಟಿ ಹಾಡುವ ರೂಢಿಯಂತಹುದೇ 'ಝೂಲಾ' ಉತ್ತರ ಪ್ರದೇಶದ ಠುಮರಿ ಪ್ರಕಾರದಲ್ಲಿದೆ. 'ಹೋರಿ' ಕೂಡ. ಇವುಗಳಲ್ಲಿ ಕೂಡ ರಾಧೆ ಕೃಷ್ಣರ ಕ್ರೀಡೆಯ ವೈವಿಧ್ಯ ಇದೆ. ಉದಾಹರಣೆಗೆ 'ಝೂಲಾ ಧೀರೆಸೆ ಝೂರಾವೋ ಬನವಾರೀರೆ' ಅಥವಾ 'ಝುಮಕ ಝುಕೀ ಆಯೀ ಬದರಿಯಾ ಕಾರೀ' ಮತ್ತು 'ಝೂಲಾ ಝೂಲೇ ನಂದ ಕಿಶೋರ್' ಇವೆಲ್ಲ ಪರಂಪರಾನುಸಾರವಾಗಿ ಹಾಡುವ ಜೋಕಾಲಿ ಗೀತೆಗಳು. ಅಂತೆಯೇ ಹೋರಿ ಪ್ರಕಾರದಲ್ಲಿ ಇಡೀ ವೃಂದಾವನ, ಗೋಕುಲ, ಬರಸಾನಾ ಈ ಊರುಗಳ ವರ್ಣನೆ ಮತ್ತು ಇಲ್ಲಿ ಕೃಷ್ಣ ಗೋಪಿಯರ ಹೋಳಿ-ಹುಣ್ಣಿಮೆಯ ದರ್ಶನವಾಗುತ್ತದೆ. 'ಬಿರಜಮೇ ಹೋಲೀ ಕೈಸೇ ಖೇಲೂಂ' (ಹೀರಾಬಾಯಿ

ಬಡೋದೇಕರ್), 'ಛೈಲವಾ ನಾ ಡಾರೊ ಗುಲಾಲ' (ಗಿರಿಜಾದೇವಿ) ಮತ್ತು 'ಸಾಂಜಕಾಲ ನಂದಲಾಲ ಖೇಲೆ ಹೋರಿss' (ಫೈಯ್ಯಾಜ ಖಾನ) ಇಂತಹ ಪದ್ಯಗಳಿವೆ. ಕೃಷ್ಣಭಕ್ತೆ ಮೀರಾಬಾಯಿಯ ಕೆಲವು ರಚನೆಗಳು ಈ ಹೋರಿ ಪ್ರಕಾರದಲ್ಲಿ ಸೇರಿಹೋಗಿವೆ. 'ಫಾಗುನಕೆ ದಿನ ಚಾರ ಹೋಲಿ ಖೇಲ ಮನಾವೆ' ಮತ್ತು 'ಹೋರಿ ಖೇಲತ ಹೈ ಗಿರಿಧಾರಿ' ಇವೆರಡು ಮೀರಾಬಾಯಿ ಕೃತಿಗಳನ್ನು ಭಜನೆಯಂತೆ ಹಾಡದೇ ಠುಮರೀ ಅಂಗದಲ್ಲಿ ಹಾಡುತ್ತಾರೆ ಎಂಬುದು ವೈಶಿಷ್ಟ್ಯ. ಎಲ್ಲಾ ಠುಮರಿ ಪ್ರಕಾರಗಳು ಶೃಂಗಾರಪ್ರಧಾನವೆಂದು ಹೇಳಲಾಗುವುದಿಲ್ಲ. ಅಧ್ಯಾತ್ಮದತ್ತ ಒಲವು ಇರುವ ಕೆಲವು ಠುಮರಿಗಳಿವೆ. 'ಮುರಲಿಯಾ ಕೌನ ಗುಮಾನ ಭರೀ' ಭಕ್ತ ಸೂರದಾಸನ ರಚನೆಯನ್ನು ಠುಮರಿಯಾಗಿ ಹಲವು ಸಲ ಕೇಳಿದ್ದೇನೆ. ಕಬೀರನ 'ಸೋಚ ಸಮಝು ನಾದಾsನ'ವನ್ನು ಪಂಡಿತ ಭೀಮಸೇನ ಜೋಶಿಯವರು ಅಜರಾಮರ ಮಾಡಿದ್ದಾರೆ. 'ಸಾಂಝು ಭಯೀ ಘರ ಆವೋ ನಂದಲಾಲ' ಈ ಠುಮರಿಯನ್ನು 35 ವರ್ಷಗಳ ಹಿಂದೆ ಸಿದ್ದೇಶ್ವರೀ ದೇವಿ ಹಾಡಿದ ನೆನಪು ಮರುಕಳಿಸಿದ್ದು 12 ಡಿಸೆಂಬರ, 2004ರಲ್ಲಿ. ಹಿರಿಯ ಗಾಯಕಿ ಗಿರಿಜಾದೇವಿ ಅವರು ಪುಣೆಯಲ್ಲಿ ನಡೆದ ಸವಾಯಿ ಗಂಧರ್ವ ಉತ್ಸವದಲ್ಲಿ ಹಾಡುವಾಗ, 'ನನ್ನ ಜೀವನದ ಮುಸ್ಸಂಜೆ ಆಗಿದೆ, ಈಗಲಾದರೂ ನಿನ್ನ ದರುಶನ ಕೊಡಪ್ಪಾ ಕೃಷ್ಣಾ' ಎನ್ನುವ ಅರ್ಥದ ಠುಮರಿಯನ್ನು ಹಾಡಿದಾಗ ಈ ವ್ಯಾಕುಲತೆ, ಈ ಉತ್ಕಟತೆ ಅತ್ಯಂತ ಅರ್ಥಪೂರ್ಣವಾಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ.

*****

6.10

ಸಂಗೀತ ಕ್ಷೇತ್ರದ ಹೊಸ ಹತ್ತು ಮೆಟ್ಟಿಲುಗಳು

ಸಿಂದಬಾದ್ ನಾವಿಕನ ಸಾಹಸ ಕಥೆಗಳು ಎಲ್ಲರಿಗೂ ಗೊತ್ತು. ಸಂಗೀತ ಸಾಗರದಲ್ಲಿ ಈಜುವದಕ್ಕೆ ಅಥವಾ ಈಜುವ ಸಾಹಸ ಮಾಡುವವರಿಗೆ ಸರ್ವಸಾಮಾನ್ಯ ತತ್ತ್ವವಿಧಿಗಳನ್ನೂ ಬಿಟ್ಟು, ಹತ್ತು ಹೊಸ ಮೆಟ್ಟಲುಗಳನ್ನು ನಾನು ಈ ಲೇಖನದ ಮೂಲಕ ಸೂಚಿಸುತ್ತಾ ಇದ್ದೇನೆ. ಇದು ಇಂದಿನ I scratch your back you scratch mine ಎಂಬ ತತ್ತ್ವವನ್ನು ಅನುಸರಿಸಿ, ಈ ಸಂಗೀತವೆಂಬ ಕಲೆ, ಕಲೆಯಾಗಿರದೇ ಇದರ ವ್ಯಾಪಾರ ನಡೆದಾಗ ಅಥವಾ ನಡೆಸಿದಾಗ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡುವವದಾದರೆ, ಈ ಹೊಸ ತತ್ತ್ವಜ್ಞಾನ, ಅತಿ ಅಗತ್ಯವಾದುದು ಎಂದು ಮೊದಲೇ ಹೇಳುವದು ವಾಸಿ! Ten Commandments of commercialization of music ಎಂದು ನಾವು ಇದನ್ನು ಪರಿಗಣಿಸಬಹುದು.

178 ವರ್ಷಗಳ ಹಿಂದೆ ಸ್ಥಾಪಿತವಾದ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮುಖ್ಯ ಸಂಪಾದಕರು ಸರ್ವೇಸರ್ವ ಆಗಿದ್ದರು. ಇದು 1988ರತನಕ ಮುಂದುವರೆಯಿತು. ಈ ಹೊಸ ಯುಗದಲ್ಲಿ ಖ್ಯಾತ ಪತ್ರಕರ್ತ ಎಮ್.ವಿ ಕಾಮತ್‌ರು ಹೇಳಿದಂತೆ, 'ಇದು ಈಗ ಟೈಮ್ಸ್ ಆಗಿ ಉಳಿದಿಲ್ಲ, ಅಡ್ವರ್ಟೈಜಿಂಗ್ ಟೈಮ್ಸ್ ಆಗಿ ಬಿಟ್ಟಿದೆ'. ಮುಂಬಯಿ ಟೈಮ್ಸ್‌ನ ಮೊದಲ ಪುಟ, ಎರಡು, ಮೂರು ಪುಟ ಬಿಟ್ಟರೆ, ಬಾಕಿ ಎಲ್ಲ ಪುಟದ 'ಮಸಾಲೆ' ದೆಹಲಿಯಿಂದ ಬರುತ್ತದೆ. ಇಲ್ಲಿಯ ಪತ್ರಕರ್ತರ ಕೆಲಸವೆಂದರೆ, ಅದರ ಉದ್ದ ಅಗಲ ಅಳತೆ ಮಾಡಿ, ಪೇಜು ಮಾಡುವದು! ಸೃಜನಶೀಲತೆಯನ್ನು ಕುರಿತು ಬೊಬ್ಬೆ ಹೊಡೆಯುವ ಸಂಪಾದಕರು, ಸಹ ಸಂಪಾದಕರು, ಒಬ್ಬೊಬ್ಬರಾಗಿ ಬಿಟ್ಟು ಹೋದರೂ, ಕೆಲಸ ಮಾತ್ರ ಚೆನ್ನಾಗಿಯೇ ನಡೆಯುತ್ತದೆ! 120 ಪರ್ಸೆಂಟು ಫಾಯದೆ! ಪೇಪರು ನಡೆಸುವವರು, ವ್ಯವಸ್ಥಾಪನ ಶಾಸ್ತ್ರ ಕಲಿತ ಎಮ್‌ಬಿಎಗಳಿಗೆ ಪ್ರಥಮ ಸ್ಥಾನ! ಸಂಪಾದಕರಿಗೆ ಪತ್ರಿಕೆಗಳಲ್ಲಿ ಎರಡನೇ ಸ್ಥಾನ.

ಹಿಂದೊಮ್ಮೆ ನನ್ನ ಸೊಸೆಯ ಅಜ್ಜ ತೀರಿಕೊಂಡಾಗ ಈ ಸುದ್ದಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿತ್ತು. ಆಗ ನಾನು ಟೈಮ್ಸ್‌ನಲ್ಲಿ ಕೆಲ ವರ್ಷ ಮತ್ತು ಈಗಲೂ ಆಗೀಗ ಲೇಖನ ಬರೆಯುವ ಕಾರಣದಿಂದ, ನಾನೂ ಆ ಕುಟುಂಬದವನೇ ಆಗಿದ್ದೆ. ನನ್ನ ವರ್ಚಸ್ಸು ಅಲ್ಲಿ ಇದೆ ಮತ್ತು ನನ್ನ ಮಾತನ್ನು ಯಾರೂ ತೆಗೆದುಹಾಕಲಾರರು ಎಂಬ ನಂಬಿಕೆಯಿಂದ ನನಗೆ ದೂರವಾಣಿಯ ಮೂಲಕ ಅವರನ್ನು ಸಂಪರ್ಕಿಸಲು

ಮನೆಯವರು ವಿನಂತಿಸಿದರು. ಸರಿ. ನಾನು ಫೋನು ಮಾಡಿ ವಿಚಾರಿಸಿದೆ. Business Manager Response Classified Ads ಎಂಬ ಒಂದು ಕಿಲೋ ಮೀಟರ್ ಉದ್ದ ಹೆಸರಿನ ಹುದ್ದೆ ಪಡೆದ ಓರ್ವ ನನಗೆ ಹೇಳಿದ್ದು ಹೀಗೆ, "ಅಂತ್ಯ ವಿಧಿಯ ಕಾರ್ಯಕ್ರಮದ ಫೋಟೊ ಕಳಿಸಿದರೆ 30% ರಿಬೇಟು! ನಿಮಗೆ ಅಕ್ಷರಗಳಲ್ಲಿ ಮತ್ತು ಶಬ್ದಗಳಲ್ಲಿ ಕೊಡುವದಾದರೆ 10%. ನಿಮಗೆ ಯಾವ ಕಾಲಮ್ ಬೇಕು?" ಸ್ವಲ್ಪ ನಿಧಾನ ಮತ್ತು ಸಾವಧಾನದಿಂದ ನನಗೆ ಹೇಳಿದ್ದು. "ಸಾರಿ, ಹುಟ್ಟಿದ್ದು, ಕುಶಲತೆಯ ಬಗ್ಗೆ (Greetings, Felicitation, Birthday) ಇವಕ್ಕೆ ರಿಯಾಯತಿ ಇಲ್ಲ! ಇದು ಮೂರನೇ ಪೇಜಿನಲ್ಲಿ ಬರುತ್ತದೆ. ಮತ್ತು ನಾಲ್ಕನೆಯ ಪೇಜಿನ ಬಲಗಡೆಯ ಕೆಳಗಿನ ಕಾರ್ನರು ಕೇವಲ ಮೃತರ ಸಲುವಾಗಿ ಮೀಸಲಾಗಿಟ್ಟಿದೆ, ರಿಯಾಯ್ತಿ ಸಹಿತ" ಎಂದು ಮತ್ತೊಂದು ವಾಕ್ಯ ಜೋಡಿಸಿ ಹೇಳಿದ.

ಸರಿ ಇದಕ್ಕೂ ಮತ್ತು ಸಂಗೀತ ಕ್ಷೇತ್ರದ ಹೊಸ ಮೆಟ್ಟಲುಗಳಿಗೆ ಏನು ಸಂಬಂಧ ಎಂದು ನೀವು ಕೇಳಬಹುದು. ಸಂಬಂಧ ಇದೆ. ಮೊದಲು ಕಲಿತ ಮೂಲ್ಯಗಳ ಹೊರತಾಗಿ ಈ ಹೊಸ man eats man ಸ್ಥಿತಿಯಲ್ಲಿ 178 ವರ್ಷದ ಪೇಪರಿನವರು, ಸತ್ತ ಮೇಲೆ ಹಣಮಾಡುವ ಜಾಹೀರಾತು ಪ್ರಕಾರದಿಂದ ಹೊಸ, 'ಜ್ಞಾನೋದಯ'ವಾಯಿತು. ಬಳಿಕ ಚಿಂತನ, ಮನನ ಮಾಡಿ ಈ ಹೊಸ ಮೆಟ್ಟಲುಗಳ ನಿರ್ಮಾಣ ಮಾಡಿದ್ದೇನೆ. ಹೊಸಹೊಸ ಕಲಾವಿದರು ಇದನ್ನು ಗಮನಿಸಬೇಕು.

1) ಜಂಬ ಕೊಚ್ಚಿಕೊಳ್ಳುವದು

ಹಿಂದಿನ ಗುರುಗಳು ಹೇಳಿದ್ದು ಮರೆತು, ಬಡಾಯಿ ಹೊಡೆಯುವ ಹೊಸ ಕಲೆಯನ್ನು ಕಲಿಯಬೇಕು. ಹಿಂದಿನ ನಿಮ್ಮ ಕಚೇರಿಗಳ ಬಗ್ಗೆ, ನಿಮಗಿಂತ ಕಿರಿಯರ ಕಚೇರಿ ಆಲಿಸುವಾಗ, ಹಿಂದಿನ ಸಾಲಿನಲ್ಲಿ ಕುಳಿತು, ಬದಿಗೆ ಇದ್ದ (ಯಾರೇ ಇರಲಿ, ಹೆಣ್ಣು ಹುಡುಗಿಯರು ಇದ್ದರೆ ಭೇಷ್!) ಕಿವಿಯಲ್ಲಿ ತನ್ನ ವಿಶ್ವಾಸಾರ್ಹತೆಯ ಬಗ್ಗೆ ಉದಾಹರಣೆಗಳ ಸಹಿತ ಹೇಳುವದು. ಉದಾ: ದುಬಾಯಿನಲ್ಲಿ ನಾನು 'ತೋಡಿ' ಬಾರಿಸುವಾಗ ಮಧ್ಯದಲ್ಲಿ ಪಂಚಮದ ಸ್ವಲ್ಪ ಟಚ್ (touch) ಕೊಟ್ಟೆ, ಜನರೆಲ್ಲ ಮಿಂಚಿನ ವೇಗದಲ್ಲಿ ಚಪ್ಪಾಳೆ ಹೊಡೆದರು. (ವೇದಿಕೆಯ ಮೇಲೆ ಕಲಾವಿದ ತೋಡಿ ಬಾರಿಸುತ್ತಿದ್ದಾಗ ನಡೆಸಿದ ಮಾತು)

2) ಕಚೇರಿ ಮಧ್ಯದಲ್ಲಿ ವ್ಯಾಖ್ಯಾನ

ತನ್ನ ಗುರು, ಗುರುವಿನ ಗುರು, ಗುರುವಿನ ಗುರುವಿನ ಗುರು ಇವರ ಬಗ್ಗೆ ಕೆಲ ಒಳ್ಳೆ ಮಾತು ಹೇಳಿ ತನ್ನ ಬಲಗೈಯಿಂದ, ಕಿವಿಯನ್ನು ಮುಟ್ಟಿ ನಮಸ್ಕಾರ ಮಾಡುವ ಕ್ರಿಯೆ ಅತ್ಯವಶ್ಯ! ನಿಮ್ಮ ಗುರುಗಳ ಪ್ರಭಾವಳಿ ಪ್ರಭಾವಪೂರ್ಣವಾಗಿರಬೇಕು. ಹಿಂದುಸ್ತಾನಿ ಸಂಗೀತವಾದರೆ ತಾನಸೇನನ ಸಂಬಂಧ, ಕರ್ನಾಟಕ ಪದ್ಧತಿಯಾದರೆ ತ್ರಿಮೂರ್ತಿಗಳಲ್ಲೊಬ್ಬರ (ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಾಶಾಸ್ತ್ರಿಗಳು) ನೆಂಟಸ್ತಿಕೆ ಹೇಳುವದು ಅಪ್ರಸ್ತುತವಾಗಲಾರದು!

3) ದೇಹ ಭಾಷೆ (Body language):

ನೀವು ದೇಹ ಭಾಷೆಯನ್ನು ಅರ್ಥಮಾಡಿಕೊಂಡಿರಬೇಕು. ಶಾರೀರದ ಸರಳತೆ ಸರಿಯಾಗಿದ್ದರೂ, ಸ್ವಲ್ಪ ಬೇಸರದಿಂದ ಅತ್ತಿತ್ತ ನೋಡಿ, ಕಚೇರಿ ನಡೆಸುವ ಅಧಿಕಾರಿಗಳನ್ನು ಕರೆದು ಮಧ್ಯದಲ್ಲಿಯೇ ಕಚೇರಿ ನಿಲ್ಲಿಸಿ, ಒಂದೆರಡು ಉಪದೇಶಾತ್ಮಕ ಮಾತುಗಳನ್ನು ಹೇಳಬೇಕು. ಅವರ ಧ್ವನಿಯಂತ್ರಗಳ ಬಗ್ಗೆ ಕಿರಿಕಿರಿ ಮಾಡಬೇಕು. ಇದರಿಂದ ನಿಮ್ಮ ಬೆಲೆ ಹೆಚ್ಚುತ್ತದೆ!

4) ಹಿರಿಯ ಕಲಾವಿದರ ಗುರು ಮಂತ್ರ

ಇದನ್ನು ನೀವು ಪ್ರಾಕ್ಟೀಸ್ ಮಾಡಿ ಉಪಯೋಗದಲ್ಲಿ ತರಬೇಕು. ಉದಾ: ಅಮಜದ್ ಅಲಿಖಾನರು 25 ನಿಮಿಷ ಧ್ವನಿ ಸಂವರ್ಧಕ ಯಂತ್ರದ ಸಲುವಾಗಿ ಖರ್ಚು ಮಾಡಿದರೆ, ನೀವು 30 ನಿಮಿಷ ಮಾಡಲು ಕಲಿಯಬೇಕು. ಇಂಥ ವಿಷಯಗಳಲ್ಲಿ, ಕುಮಾರಗಂಧರ್ವರು, ಭೀಮಸೇನ ಜೋಶಿ, ಗಂಗೂಬಾಯಿಯವರನ್ನು ಎಂದೂ ತಮ್ಮ ಮಾದರಿಯಾಗಿ ತಿಳಿಯಬಾರದು. ನಿಮ್ಮ ಕಲೆ ಕುದುರಿಸುವ ಕೆಲಸ ನೀವು ಕಿಶೋರಿ ಅಮೋಣಕರ್ ಅಥವಾ ಪಂ. ಜಸರಾಜರಂತೆ ನಾಟಕೀಯತೆಯನ್ನು ತೋರಿಸಲು ಕಲಿಯಬೇಕು. ಬಿಹಾಗ ಹಾಡುವದಾದರೆ, ಮೊದಲು ಕಣ್ಣು ಮುಚ್ಚಿ, 'ಓಂ ಓಂ ಶ್ರೀ' ಎಂದು 2-4 ನಿಮಿಷ ಅದೇ ರಾಗದಲ್ಲಿ ಧ್ವನಿ ಹಚ್ಚಿ, ಒಂದೆರಡು ಸಂಸ್ಕೃತ ಶ್ಲೋಕಗಳನ್ನು ಹೇಳಿದರೆ, ನಿಮಗೆ ಸಭಿಕರ ಚಪ್ಪಾಳೆ ಖಂಡಿತ! ಶ್ಲೋಕ ಬರದೆ ಇದ್ದರೆ, ರಾಮಃ ರಾಮ್ ರಾಮಃ ಎಂಬ ವ್ಯಾಕರಣದ ಚಲನೆಯನ್ನು ಬಿಹಾಗದಲ್ಲಿ ಹಾಡಬಹುದು!

5) ಶಿಷ್ಯರನ್ನು ಹಾಡಿಸುವದು

ನಿಮ್ಮ ಕಚೇರಿಯಲ್ಲಿ ಕ್ಲಾಸು ನಡೆಸಲು ಮರೆಯಬಾರದು. ನೀವು ಹಾಡಿದ್ದೇ ನಿಮ್ಮ ಬಲಬದಿಯ ಶಿಷ್ಯನ/ಳ (ಶಿಷ್ಯೆ ರೂಪ-ಗುಣ-ಸುಂದರಿಯಾಗಿದ್ದರೆ ಉತ್ತಮ) ಕಡೆಯಿಂದ ಹಾಡಿಸಬೇಕು. ಅವರು ಹಾಡುವಾಗ ಕಣ್ಣು ಮುಚ್ಚಿ, ಚೆನ್ನಾಗಿದ್ದರೂ ಕೂಡ, ಕಣ್ಣು ದೊಡ್ಡದು ಮಾಡಿ, 'ಅದು ಹಾಗಲ್ಲ ಹೀಗೆ' ಎಂದು ಮಂತ್ರ ಹೇಳಬೇಕು. ಬಳಿಕ ಎಡ ಬದಿಗೆ ಕುಳಿತಿರುವವನಿಗೆ ಹಾಡಲು ಹೇಳಿದರೆ ಆತ ಅಂಜುತ್ತಾನೆ. ಬಳಿಕ ತಾವು ಜಯಭೇರಿ ಹೊಡೆಯಲು ಮುಕ್ತರು.

6) ಸುಳ್ಳು ಹೇಳುವ ಕಲೆ

ಇದು ಕೂಡ ಸ್ವಲ್ಪ ಅಭ್ಯಾಸ ಬಲದಿಂದಲೇ ಬರುತ್ತದೆ. ಈಗ ನೀವು, ಮೂರು ಕಲಾವಿದರ ಕಚೇರಿಯಲ್ಲಿ ಒಬ್ಬರು ಎಂದುಕೊಳ್ಳಿ, ನಿಮ್ಮಿಂದ ಕಚೇರಿ ಮುಕ್ತಾಯ ಮಾಡಬೇಕೆಂದು ಕಾರ್ಯದರ್ಶಿಗಳ ವಿಚಾರವಿದ್ದರೆ, ಕೊನೆಯ ತನಕ ಸಂಘಟಕರು ಹಾಗೆಯೇ ತಿಳಿದುಕೊಳ್ಳಲಿ. ಒಬ್ಬ ಕಲಾವಿದರ ಕಚೇರಿ ಮುಕ್ತಾಯವಾಗುವ ಮೊದಲು ತಾವು ಡಿಜೈನ್ ವೇರ್ ಬಟ್ಟೆಗಳನ್ನು ಧರಿಸಿ, ಹಣೆಗೆ ದೊಡ್ಡ ನಾಮ ಹಾಕಿ, ಹೆಂಡತಿ ಮಕ್ಕಳು, ಗೆಳೆಯರ ಗುಂಪು (ಇದಕ್ಕಾಗಿ ನೀವು ಹಣ ಖರ್ಚುಮಾಡಬೇಕು) ಹತ್ತಿಪ್ಪತ್ತು ಜನ ಒಮ್ಮೆಲೆ ಬಂದು ಸಂಘಟಕರನ್ನು ಕರೆದು, "ಇಲ್ನೋಡಿ ಸಾರ್, ನನಗೆ ಇವತ್ತೇ

ಬೆಂಗಳೂರಿನ ಫ್ಲೈಟ್ ಹಿಡಿಯುವದಿದೆ, ಅಲ್ಲಿಯ ಕಚೇರಿ ಮುಗಿಸಿ ಗುಲ್ಬರ್ಗಾಕ್ಕೆ ಹೋಗಿ ವಾಪಸ್ಸು ಬರಬೇಕು, ದಯವಿಟ್ಟು ನಾನೀಗ ಮೊದಲು ಹಾಡುತ್ತೇನೆ/ ಬಾರಿಸುತ್ತೇನೆ. ನಂತರದ ಕಲಾವಿದರಿಗೆ ಕೊನೆಗೆ ಇಟ್ಟುಬಿಡಿ." ಸರಿ, ನಿಮ್ಮ ಲಾಯಿನ್ ಕ್ಲಿಯರ್. ನಿಮಗೆ 60 ನಿಮಿಷಗಳ ಅವಧಿ ಇದ್ದರೆ, ಅದನ್ನೂ 75 ನಿಮಿಷಗಳವರೆಗೆ ಸ್ಟ್ರೆಚ್ ಮಾಡಿ, ಹಾಡಿದ್ದನ್ನೇ ವಾಪಸ್ಸು ಹಾಡಿ, ಆವರ್ತನೆಯ ಮೇಲೆ ಆವರ್ತನೆ ಝಾಡಿಸಿ, ತಬಲಾದವನಿಗೆ ತನ್ನ ಕಲೆಯನ್ನು ತೋರಿಸಲು ಆಸ್ಪದ ಕೊಟ್ಟು, ಕೊನೆಯ ಕಲಾವಿದನಿಗೆ ಅರ್ಧ ಗಂಟೆ ಮಾತ್ರ ಬಿಡುವದು. ಇದರಿಂದ ನಿಮ್ಮ ಹೆಸರು ಬಹುಶ್ರುತವಾಗಲೇಬೇಕು.

7) ತಡಮಾಡಿ ಬರುವದು

ಸಂಘಟಕರು ಕೊಟ್ಟ ನಿಗದಿತ ವೇಳೆಯನ್ನು ಉಲ್ಲಂಘಿಸಿ, ಅವರು ಕೊಟ್ಟ ನಿಯಮಾವಳಿಗಳನ್ನು ತಮ್ಮ 10ನೇ ಅಂತಸ್ತಿನ ಬೆಡ್ ರೂಮಿನ ಕಿಟಕಿಯಿಂದ ಅರಬ್ಬಿ ಸಮುದ್ರಕ್ಕೆ ಒಗೆದು, ನಿಶ್ಚಿಂತರಾಗಿ ಹೇಳಿದ ಹೊತ್ತಿಗಿಂತ ಒಂದರ್ಧ ಗಂಟೆ ತಡಮಾಡಿ ಹೋಗುವದು ಉಚಿತ. ಇದರಿಂದ ನಿಮ್ಮ ಮಾರ್ಕೆಟ್ ವ್ಯಾಲ್ಯು ಏರುತ್ತದೆ. ಬಂದ ಕೂಡಲೇ ನಮಸ್ಕಾರ, ಚಮತ್ಕಾರಗಳ ನಂತರ, ಚಹ ಸೇವಿಸಿ, ತಂಬೂರಿಗಳನ್ನು ಶ್ರುತಿ ಮಾಡಿ, ಮತ್ತೆ ಪಡದೆ ಬದಿಗೆ ಸರಿದ ಮೇಲೆ ವಾಪಸ್ಸು 1/2 ಗಂಟೆ ತಂಬೂರಿ ಶ್ರುತಿ ಮಾಡಲು ಮರೆಯಬಾರದು. ಎರಡು ಗಂಟೆಯ ಕಚೇರಿಯಲ್ಲಿ ಒಂದು ಗಂಟೆ ಹೀಗೆ ವ್ಯರ್ಥ ಕಳೆಯಬೇಕು. ಶ್ರೋತೃಗಳಿಗೆ ಬೇಸರ ಬಂದರೂ ಚಿಂತೆಯಿಲ್ಲ, ಮಧ್ಯದಲ್ಲಿಯೇ 'ವಿಮರ್ಶಕ'ರೆಂಬ ಕಾಡುಪ್ರಾಣಿಗಳನ್ನು ಉದ್ಧಾರಮಾಡಬೇಕು. ಅವರನ್ನೂ, "ನೀವು ಬರೆಯುತ್ತೀರಾ, ನನ್ನ ಹಾಗೆ ಹಾಡಲು ನಿಮಗೆ ಬರುತ್ತಾ?" ಎಂದು ಪ್ರಚೋದಿಸಬೇಕು. ಇದರಲ್ಲಿ ನಿಮ್ಮ ಶ್ರೇಷ್ಠತೆ ಕಾಣಿಸುವದು ಸಹಜ.

8) ಜಾಹೀರಾತುಬಾಜಿ ಮತ್ತು ಜನಪ್ರಸಿದ್ಧಿ

ನನ್ನ ಹೊಸ ಮೆಟ್ಟಿಲುಗಳಲ್ಲಿ ಇದು ಮೊದಲನೆಯ ಮೆಟ್ಟಿಲು ಆಗಬಹುದಿತ್ತು. ವ್ಯವಹಾರ ಕುಶಲತೆಯಿಂದ ಇದನ್ನು ಉಪಯೋಗಿಸಬಹುದು. ಹೊಸತಾಗಿ ಈ ಕಲೆಯಲ್ಲಿ ಪ್ರವೇಶ ಮಾಡುವವನು ಮೊದಲಿನ ಕಚೇರಿಗಳ ಪ್ರಾಪ್ತಿಯನ್ನು ಸಂಭಾವನೆ, ತಮ್ಮ ಸ್ವಂತ ಖರ್ಚಿನಲ್ಲಿ ದಿನಪತ್ರಿಕೆಗಳಲ್ಲಿ ಹಾಕಬೇಕು. Impresario ಮುಖಾಂತರ (ಅಂದರೆ ಸಾರ್ವಜನಿಕ ಮನರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಲು ಕಲಾವಿದರಿಂದ ಹಣ ಪಡೆದು ಸಂಘಟಿಸುವ ಸಂಯೋಜಕರು), ಒಂದೆರಡು ಪಾರ್ಟಿ ಝಾಡಿಸಿ, ತಮ್ಮ ಬಾಯೋಡಾಟಾ (biodata) ಎಲ್ಲರಿಗೂ ಕೊಟ್ಟು ಸ್ವಪ್ರಸಿದ್ಧಿ ಮಾಡಬೇಕು. ಮಧ್ಯ ವಯಸ್ಸಾದ ಕೂಡಲೇ ತನ್ನದೇ ಹೆಸರಿನಲ್ಲಿ ಒಂದು ಪ್ರತಿಷ್ಠಾಪನವನ್ನು ಮಾಡಿ, ತಮ್ಮ ಕೈಲಾಸವಾಸಿ ಗುರುಗಳ (Long live Guruji!) ಪುಣ್ಯತಿಥಿಯನ್ನು ಅತಿ ಶ್ರದ್ಧೆಯಿಂದ ಆಚರಿಸಬೇಕು. ಈ ರೂಢಿಯನ್ನು ಹಿರಿಯ ಕಲಾವಿದರಾದ ಗಂಗೂಬಾಯಿ ಮತ್ತು ಪಂ. ಭೀಮಸೇನ ಜೋಶಿಯವರು ಪ್ರಾರಂಭಿಸಿದ್ದರು. 'ಶ್ರದ್ಧೆ' ಎಂಬ ಮಾತು ಬರೀ ಪುಸ್ತಕದಲ್ಲಿಡಲು ತಾವೆಲ್ಲ ಕಲಿಯುಬೇಕು. ತಾವು ಕಿರಿಯ ವುಟ್ಟದ ಕಲಾವಿದರಾದರೂ ಕಡ್ಡಾಯದಿಂದ ಕಚೇರಿಯ ಮುಕ್ತಾಯ ತಮ್ಮಿಂದಲೇ ಆಗಬೇಕು. 21 ನೇ ಶತಮಾನದೆಡೆಯ 'ಶ್ರದ್ಧೆಯ' ಹೊಸ ವ್ಯಾಖ್ಯೆ ನೀಡಬೇಕು.

9) ಮುಖಸ್ತುತಿ ಮಾಡುವ ಅಥವಾ ಭಟ್ಟಂಗಿತನದ ಕಲೆ

ಇದೂ ಒಂದು ಗಳಿಸಿಕೊಂಡ ಕಲೆ, ಹುಟ್ಟಿನಿಂದ ಬಂದದ್ದಲ್ಲ. ಗಂಗೂಬಾಯಿ ಅವರ ಮುಂದೆ, 'ಅಕ್ಕಾ, ಅಕ್ಕಾ' ಎಂದು ಹೊಗಳಿ ಅವರು ಹಾಡಿ ಹುಬ್ಬಳ್ಳಿಗೆ ಹೋದ ಮೇಲೆ, 'ಆ ಮುದುಕಿ ಇನ್ನೂ ತನಕಾ ಯಾಕ ಹಾಡಬೇಕು?' ಎಂದು ನಾಲ್ಕಾರು ಜನರ ಮುಂದೆ ಆತ್ಮಸ್ತುತಿ ಮಾಡಿಕೊಳ್ಳಲು ಕಲಿಯಬೇಕು. ಪಂ. ಭೀಮಸೇನ ಜೋಶಿಯವರ ಅಥವಾ ಪಂ. ಜಸರಾಜರಂಥಹ ದಿಗ್ಗಜರ ಸತ್ಕಾರವಾದರೆ, ವೇದಿಕೆಯ ಮೇಲೆ ತನ್ನ ಬಂಟನೊಂದಿಗೆ ಹೋಗಿ ಅವನಿಂದ ದೊಡ್ಡ ಪುಷ್ಪಗುಚ್ಛವನ್ನೋ, ಹೂವಿನ ಹಾರವನ್ನೋ ಇಸಿದುಕೊಂಡು ನೂರಾರು ಜನರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಆಗ ಪ್ರೇಕ್ಷಾಗೃಹದಲ್ಲಿ ಜನಜಂಗುಳಿ ಬೆಪ್ಪಾಗಿ, 'ಎಂತಹ ಸಾದಾ ಮನುಷ್ಯನಿವ, ಗರ್ವವಿಲ್ಲದ ಒಳ್ಳೆಯ ಮನುಷ್ಯ' ಎಂಬ ಹೊಗಳಿಕೆಯನ್ನು ಪ್ರಾರಂಭಿಸುವದು ಸಹಜ. "... ರಂತಹ ಕಲಾವಿದ ಕಳೆದ ಹತ್ತು ಸಾಪಿರ ವರ್ಷಗಳಲ್ಲಿ ಈ ಭಾರತದಲ್ಲಿ ಹುಟ್ಟಿಲ್ಲ" ಎಂಬ ಮಾತು ಹೇಳಲು ಮರೆಯಬಾರದು. ಇದರಲ್ಲಿ 'ಹತ್ತು ಸಾವಿರ'ವೆಂಬ ವಿಶೇಷಣ ಮುಖ್ಯ ಕಲಾವಿದ ಬದಲಾಗಬಹುದು. ಉದಾ: ಪಂ. ಭೀಮಸೇನ ಜೋಶಿ, ಪಂ. ಬಾಲಮುರಳಿ ಕೃಷ್ಣ ಅಥವಾ ಟಿ.ಎನ್. ಕೃಷ್ಣನ್ ಇತ್ಯಾದಿ. ಕರ್ತೃ ಬದಲಾಗಬಹುದು. ಇಲ್ಲಿ ಪ್ರಸಂಗಾವಧಾನ ಮುಖ್ಯ ಇವರಿಗೆ ತಮಾಶೆಗಾಗಿ attache ಎಂಬ ಶಬ್ದ ರೂಢಿಯಲ್ಲಿದೆ!

10) ಕಲಾವಿದರ ನಾಡು ವ್ಯಸನಗಳ ಬೀಡು

ಹಾಸಿಗೆ ನೋಡಿ ಕಾಲುಚಾಚುವ ಬಗ್ಗೆ ವಿಚಾರ ಮಾಡಬೇಕು. ಇತಿ-ಮಿತಿಯ ಆಯವ್ಯಯದ ಪಟ್ಟಿ ನೋಡಿ ಎಷ್ಟು ಬೇಕು ಅಷ್ಟೇ ಸೇವಿಸಿ ಮುಖದ ವಾಸನೆ ಬಾರದಂತೆ, ಬಾಬಾ ತಂಬಾಕಿನ ನವರತನ ಕಿಮಾಮದ ಎಲೆ ಅಡಕಿಯ ತುತ್ತನ್ನು ಬಾಯಿಯ ಬಲಬದಿಯಲ್ಲಿಟ್ಟು, ರೇಶಿಮೆ ನಿಲುವಂಗಿಯನ್ನು ಒಂದೆರಡು ಕಡೆಯಲ್ಲಿ, ರಕ್ತರಂಜಿತ ಮಾಡಿ ನಂತರ ಕಚೇರಿಗೆ ಕೂಡಬೇಕು. ಕೂತಾಗ ಪಂ. ಭೀಮಸೇನ ಜೋಶಿಯವರಂತೆ ಕಾಲಮೇಲೆ ಶಾಲನ್ನು ಹೊದ್ದುಕೊಳ್ಳಲು ಮರೆಯಬಾರದು. (ಭೀಮಸೇನರಿಗೆ 30 ವರ್ಷಗಳ ಮೊದಲು ವಾತಾನುಕುಲದ ತಾಪತ್ರಯವಾಗಿ, ಕೊಂಚ ಸಂಧಿವಾತದ ತೊಂದರೆ ಇದ್ದುದರಿಂದ, ಅವರು ಶಾಲನ್ನು ಕಾಲ ಮೇಲೆ ಇಡಲು ಶುರು ಮಾಡಿದ್ದೇ, ನಂತರ ಇತರರು ಇದನ್ನು ಜಿಭ್ಝುಂಟ ಮಾಡಿಬಿಟ್ಟರು! ಈ ವಿಷಯವನ್ನು ಪಂಡಿತರು ಪ್ರಸ್ತುತ ಲೇಖಕರಿಗೆ ಹೇಳಿದ ಮಾತು).

ಮೇಲೆ ಹೇಳಿದ ಹೊಸ ಹತ್ತು ಮೆಟ್ಟಲುಗಳನ್ನು ಪಾರು ಮಾಡಿದರೆ ಯಶಸ್ಸು ಖಂಡಿತ. ಸಿದ್ಧಿ, ಏಳಿಗೆ ನಿಶ್ಚಿತ! ಈಗಲ್ಲದಿದ್ದರೂ 21ನೆಯ ಶತಮಾನದಲ್ಲಿ ಸಫಲತೆ ನಿಮ್ಮ ಕಿಸೆಯಲ್ಲಿ!

*****

6.11

ಸಂಗೀತದೊಳಗಿನ ಹಾವಭಾವಗಳು

"ಮೂಕಂ ಕರೋತಿ ವಾಚಾಲಂ, ಪಂಗುಂ ಲಂಘಯತೇ ಗಿರಿಂ" ಬಾಲ್ಯದಲ್ಲಿ ಕಲಿತ ಸುಭಾಷಿತದ ನೆನಪು ಆಗಾಗ ಮರುಕಳಿಸುತ್ತದೆ. ಭಾಷೆ ಬಾರದವನೊಬ್ಬ ಮತ್ತೊಬ್ಬನೊಂದಿಗೆ ಸಂಪರ್ಕ ಸಾಧಿಸಿ ತನಗೆ ಹೇಳಬೇಕಾದುದನ್ನು ಅವನಿಗೆ ಅರ್ಥವಾಗುವಂತೆ ತಿಳಿಸುವದು ತುಂಬ ಕಷ್ಟದ ಕೆಲಸ. ಭಾಷೆ ಗೊತ್ತಿದ್ದವರೂ ಕೂಡ ಒಮ್ಮೊಮ್ಮೆ ಸಂಭಾಷಣೆ ನಡೆಸುವಾಗ ಇಡೀ ಶರೀರದ ವಿವಿಧ ಭಾಗಗಳನ್ನು ಹಾವಭಾವಗಳೊಂದಿಗೆ, ಕಣ್ಣುಗಳನ್ನು ಸಣ್ಣದು ಮಾಡಿ, ಹುಬ್ಬೇರಿಸಿ ಕೈಗಳ ಸಹಾಯದಿಂದ ಮಾತುಕತೆ ನಡೆಸುತ್ತಾ ಇರುವುದನ್ನು ನಾವು ನೋಡಿದ್ದೇವೆ. ಹೇಳಬೇಕಾದ್ದನ್ನು ಭಾವಪೂರ್ಣವಾಗಿ ಆತ್ಮವಿಶ್ವಾಸವನ್ನು ಗುರುತರದಿಂದ ಏರಿಸಲಿಕ್ಕೆ ಈ ಬಾಡಿ ಲ್ಯಾಂಗ್ವೇಜು (body language) ತುಂಬಾ ಸಹಾಯ ಮಾಡುತ್ತದೆ. ಸಂಗೀತ ಕೂಡ ಇದಕ್ಕೆ ಅಪವಾದವಲ್ಲ.

ಒಮ್ಮೆ ಪುಣೆ ಶಹರದ ಖ್ಯಾತ ಭರತನಾಟ್ಯ ಶಿಕ್ಷಕಿ ಸುಚೇತಾ ಭಿಡೆ ಚಾಫೇಕರ ಕರ್ನಾಟಕ ಸಂಘಕ್ಕೆ ಬಂದಿದ್ದರು. ಅವರ ಶಿಷ್ಯೆ ಸ್ಮಿತಾ ಸಾಠೆಯ ಅರಂಗೇಟ್ರಂದ ಮಾತು ಕತೆ ಜೋರಾಗಿ ನಡೆದಿತ್ತು. ತಂಜಾವೂರಿನ ವೆಂಕೋಜಿಯ ಮರಾಠಿ ಪದ್ಯಗಳನ್ನು ಉತ್ತರಾದಿ ಸಂಗೀತಕ್ಕೆ ಅಳವಡಿಸಿಕೊಂಡು ಮೃದಂಗದ ಬದಲಾಗಿ ತಬಲಾಸಾಥಿಯ ಪ್ರಯೋಗವನ್ನು ಯಶಸ್ವಿಯಾಗಿ ಮಾಡಿ ತೋರಿಸಿದ ಮಹಿಳೆ ಈಕೆ. ಮಾತಾಡುವಾಗ ಕಣ್ಣಲ್ಲಿ ಭಾವ, ಮಿತವಾಗಿ ನಡೆಸಿದ ಕೈಗಳ ಹಾವಭಾವ ಮತ್ತು ಮಂದಸ್ಮಿತ ಮುಖ ನಮ್ಮೆಲ್ಲರ ಮನ ತಟ್ಟುವಂತಿತ್ತು. ಹಿತವಾದ ಬಾಡಿ ಲ್ಯಾಂಗ್ವೇಜು (body language), ಮಿತವಾದ ಮಾತುಕತೆ. ಸರಿ ನಾವೆಲ್ಲ ತಲೆದೂಗಿದ್ದೇ!

ಸಂಗೀತದಲ್ಲಿ ಕೂಡ ಕೈ ಮೈ ಭಾಷೆ(body language) ಇದೆ. ಆದರೆ ಸ್ಥಾನ ಕೆಳಮಟ್ಟದ್ದು. ಇದಕ್ಕೆ ಶಾಸ್ತ್ರಗಳ ಆಧಾರ ಕೂಡ ಇದೆ. ಸಂಗೀತ ಕೇಳುವವರು ಕೂಡ ಇದನ್ನು ಅಭ್ಯಸಿಸುತ್ತಾರೆ ಎಂದು ಬೇರೆ ಹೇಳಬೇಕಾಗಿಲ್ಲ! ಸಂಗೀತದ ವೇದವಾಕ್ಯ, "ಶುದ್ಧವಾಣಿ ಶುದ್ಧಮುದ್ರಾ' ಇದ್ದರೂ ನಮ್ಮ ಉಸ್ತಾದ್‌ರ ಅಪಭ್ರಂಶ ಮಾತಿನಲ್ಲಿ ಅದು, "ಸುಧಬಾಣಿ ಸುಧ ಮುಡದಾ" ಆಗಿ , 'ಮುಡದಾ' (ಸತ್ತ ದೇಹ) ಶಬ್ದ ನಗೆ ಚಟಾಕಿ ಹೊಮ್ಮಿಸಿದ್ದೂ ನನಗಿನ್ನೂ ಚೆನ್ನಾಗಿ ನೆನಪಿನಲ್ಲಿದೆ!

ದೇಹ ನಡುಗಿಸುವದು, ಕೈ ಎತ್ತಿ ಹಾವಭಾವ ಪ್ರದರ್ಶಿಸುವದು, ಧ್ವನಿ ಕಂಪನದಿಂದ ಒಂದು ತರಹ ಅಪಸ್ವರ ಆಗದೇ, 'ಮುಕಾರ್' ಮಾಡುವದು ಇವೆಲ್ಲ ಗಾಯನದ ಸಜೀವತ್ವದ ದ್ಯೋತಕವೆಂದೆನಿಸಿದರೂ ಇದರಲ್ಲಿ ಕೂಡ ಒಂದು ಶಾಸ್ತ್ರವಿದೆ! ಉದಾಹರಣೆಗೆ ಕುಮಾರ ಗಂಧರ್ವರು ಮೇಲಿನ ಸಪ್ತಕದಲ್ಲಿ 'ಊ'ಕಾರದ ಪ್ರಯೋಗ ಮಾಡಿದಾಗ, ತುಟಿಗಳಿಗೆ ಒಂದು ಗೋಲಾಕಾರ ಕೊಟ್ಟುಬಾಯಿಯ ರಂಧ್ರದಿಂದ ಸಿಗರೇಟಿನ ಹೊಗೆ ಗೋಲಾಗಿ ಬಿಟ್ಟಂತೆ ಸ್ವರಗಳನ್ನು ನಾಜೂಕಾಗಿ ಎಸೆದು ಬಾಯಿ ಸಣ್ಣದು, ದೊಡ್ಡದು ಮಾಡಿ, ಲಯಬದ್ಧವಾಗಿ ನಡೆಸಿದ ಪ್ರಕ್ರಿಯೆಯನ್ನು ಇಲ್ಲಿ ನಾವು ನೆನಪಿಸಿಕೊಳ್ಳಬಹುದು. ಇದಕ್ಕೆ ಸಮಯೋಚಿತವಾಗಿ, ಅದೇ ಹೊತ್ತಿಗೆ ಬಲಗೈ ಹೆಬ್ಬೆರಳು ತರ್ಜನಿ ಜೋಡಿಸಿ ಶೂನ್ಯಾಕಾರದ ಕೃತಿಯನ್ನು ಲಯಬದ್ಧವಾಗಿ ಹಿಂದೆ-ಮುಂದೆ ಮಾಡಿ ಇದರ, 'ಕುಮಾರ್ ಎಫೇಕ್ಟ'ನ್ನು ನಾವೆಲ್ಲ ಬಹಳ ಸಲ ಅನುಭವಿಸಿದ್ದೇವೆ. ಇದೇ ಹೊತ್ತಿಗೆ ಸಂಗೀತ ಕೇಳುವವರ ರಿಫ್ಲೆಕ್ಸ್ ಆಕ್ಷನ್‌ನ್ನು (ಪರಾವರ್ತಿತ ಪ್ರತಿಕ್ರಿಯೆಯನ್ನು) ಸೂಕ್ಷ್ಮವಾಗಿ ಕಂಡುಕೊಳ್ಳಬಹುದು! ಸಂಗೀತ ಹಾಡುವಾಗ ಕಣ್ಣು ಹಾಯಿಸಿದರೆ ನಿಮಗೆ ಕೇಳುವವರ ಹಾವ -ಭಾವಗಳ ಪರಿಚಯವಾಗುವುದು ಸಹಜ! ಪ್ರಸ್ತುತ ಲೇಖನ, ಹಾಡುವ ಕಲಾವಿದರ ಬಗ್ಗೆ ಇದ್ದ ಕಾರಣದಿಂದ ನಮ್ಮ ಮಾತು ಕಲಾವಿದರ ಕೃತಿಗಳಿಗೆ ಮೀಸಲಾಗಿ ಇಡೋಣ.

ಪ್ರತಿಯೊಬ್ಬ ವ್ಯಕ್ತಿ ತಾನು ಸಂಗೀತಗಾರನಾಗಿರಲೀ, ಭಾಷಣಕಾರನಾಗಿರಲೀ ಅಥವಾ ನೇತಾಗಿರಿ ಮಾಡುವ ಲೀಡರ್ ಆಗಲೀ ಅವರೆಲ್ಲ ಈ ಒಂದು ವಿಶಿಷ್ಟ ಕೈ-ಮೈ ಭಾಷೆ ಅರ್ಥಾತ್ ಬಾಡಿಲ್ಯಾಂಗ್ವೇಜನ್ನು ತಿಳಿದೋ ಅಥವಾ ತಿಳಿಯದೇಯೋ ತಮ್ಮದನ್ನಾಗಿ ಮಾಡಿಕೊಂಡಿರುತ್ತಾರೆ. ಒಂದು ಧೀರ ಗಂಭೀರ ವಾದ ವಿಚಾರ ಜನರ ಮುಂದೆ ಇಡುವಾಗ, ಬಲಗೈಯಿಂದ ಸ್ವಲ್ಪ ತಲೆ ತುರಿಸಿ, ಮೂಗಿನ ಮೇಲೆ ಕೈಯಾಡಿಸಿ, ಅದನ್ನೇ ಜನರ ಮುಂದೆ ಕೈ ಚಾಚಿ ತನ್ನ ಮಾತನ್ನು ಜನಜಂಗುಳಿಗೆ ತಿಳಿಸುವ ಪ್ರಕ್ರಿಯೆ ನಾವು ದಿನನಿತ್ಯ ನೋಡುತ್ತೇವೆ. ಈ ಕೈ-ಮೈ-ಭಾಷೆ ಸಂಗೀತಕ್ಕೆ ಹೇಗೆ ಪೋಷಕವಾಗಿದೆ ಎಂಬುದಕ್ಕೇ ಮೀಸಲಿಟ್ಟುಕೊಂಡು ಮುಂದೆ ಸಾಗುವ.

1) ಮೇಲಿನ ಷಡ್ಜ ಹಚ್ಚುವಾಗ ಒಂದು ಸಜೀವತ್ವದ ಕಳೆ ತುಂಬುವುದಕ್ಕೆ ಪ್ರತಿಯೊಬ್ಬ ಕಲಾವಿದ ತನ್ನ ಕೈಮೈ ಭಾಷೆಯ ಉಪಯೋಗ ಮಾಡುತ್ತಿರುತ್ತಾನೆ. ಕೆಲವು ಪಂಡಿತರು ತನ್ನ ನಾಲ್ಕಿಂಚು ಕುತ್ತಿಗೆಯನ್ನು ಜಿರಾಫೆಯಂತೆ ಎತ್ತುವುದು ಉಂಟು! ಈ ಜಿರಾಫೆ ಕ್ರಿಯೆಯಿಂದ ಅವರ ಷಡ್ಜ ಉತ್ತಮವಾಗಿ ಹಚ್ಚುತ್ತಲಿದೆ ಎಂಬುದು ಅವರ ಭ್ರಮೆಯಷ್ಟೇ!

2) ಗಾಯನ ಪ್ರಾರಂಭವಾಗಿದೆ. ವಿಲಂಬಿತ ಕೃತಿಯಲ್ಲಿ (ಬಂದಿಶ) ಸಮ್ಮಿಗೆ ಬರುವಾಗ ಅಂದರೆ ತಬಲಾ ಬೋಲಿನ ಅಂಗದಿಂದ ಗಾಯನ ಖಯಾಲ್‌ಗೆ ಬರುವ ಪ್ರಕ್ರಿಯೆಗೆ ಬಂದ ಕೂಡಲೇ ತಾನೇ. 'I am the King of all I survey' ಥಾಟಿನಿಂದ ನಾಲ್ಕೂ ದಿಕ್ಕುಗಳಲ್ಲಿ ಕಣ್ಣು ಹಾಯಿಸಿ ಎತ್ತಿದ ಕೈ ಥಾಟಿನಿಂದ ನೋಡುವುದು ಮತ್ತೊಂದು ಪ್ರಕ್ರಿಯೆ. (ಶೇಕಡಾ 40% ಕಲಾವಿದರು ಇದನ್ನು ಶಾಸ್ತ್ರೋಕ್ತವಾಗಿ ಬಳಸುತ್ತಾರೆ.)

3) ಮಂಗನಿಂದ ಮಾನವನಾದ ಎಂಬ ಮಾತಿಗೆ ಈ ಕೆಲ ಮರ್ಕಟ ಚೇಷ್ಟೇಗಳಿಂದ ಪುಷ್ಟಿ ದೊರೆಯುತ್ತದೆ. ಪದ್ಮಾಸನ ಹಾಕಿ ಕೂತಾಗ (ಕಾಲ ಮೇಲೆ ಶಾಲು ಹೊದೆಯುವದು, ಇದನ್ನು ಪಂ. ಭೀಮಸೇನ ಜೊಶಿಯವರು ರೂಢಿಯಲ್ಲಿ ತಂದರು. ಕಾರಣ ಅವರಿಗೆ Rheumatismನಿಂದ ಹವಾನಿಯಂತ್ರಿತ ಸಭಾಗೃಹದಲ್ಲಿ ನೋವು ಹೆಚ್ಚಾಗುತ್ತಿದ್ದರಿಂದ ಶಾಲು ಹೊದೆಯುತ್ತಿದ್ದರು.) ಕೈಗಳನ್ನು, ಮುಂಗೈಗಳನ್ನೂ ಶಾಸ್ತ್ರೋಕ್ತ ಸೌಜನ್ಯದಿಂದ ಹಿಂದೆ ಮುಂದೆ ಪಕ್ಕದಲ್ಲಿ ಆಡಿಸಿ. ಹಾರ್ಮೋನಿಯಮ್ ಬಾರಿಸುವವನೆಡೆ ಕಣ್ಣು ಮಿಟುಕಿಸಿ ಹಿಂಬದಿಯ ಶಿಷ್ಯನಿಗೆ ಚಾಲೆಂಜ್ ಮಾಡುವದು ಕೂಡಾ ಈಗ ರೂಢಿಯಾಗಿಬಿಟ್ಟಿದೆ.

4) ಈಗ ಪಕ್ಕವಾದ್ಯದವರೂ ಈ ಕೈ ಮೈ ಭಾಷೆಯಲ್ಲಿ ಚೆನ್ನಾಗಿ ಪಳಗಿದ್ದಾರೆ. ಸಂಗೀತದಿಂದಲೇ ಹಾಡುಗಾರ ಹೇಳಿದ್ದೂ ತಾವು ಬಾರಿಸಬೇಕೆಂಬ ಮಾತು ಪೇಟಿವಾದಕರಿಗೆ ಗೊತ್ತು. ಗಾಯಕನ ಸ್ವರ-ವ್ಯಂಜನೆಗಳನ್ನು ಅನುಸರಿಸಿ, 'ತಾನ್' ಪ್ರಕ್ರಿಯೆಗಳಲ್ಲಿ ಆದದ್ದೇ ಆದರೆ ಅತ್ಯಂತ ಸಮೀಪದ ಸ್ವರ ಹಿಡಿದು ತನ್ನ ಎಡಗೈ ಹಾಡುವವನ ಹಾಗೆ ಹಾವ-ಭಾವ ಮಾಡುತ್ತಾ ಗೋಣು ಚೆಲ್ಲುವದನ್ನು ನೋಡಲು ಬಹಳ ಮೋಜು! ಹಲವು ಸಲ ಅರ್ಥಕ್ಕೆ ಈ ಹಾವಭಾವ ಬಿಟ್ಟಿದ್ದೂ ಇದೆ!

5) ಹಾಡುವವ ಮೇಲಿನ ಸ್ವರದಿಂದ ಕೆಳಗಿನ ಸ್ವರಕ್ಕೆ ಜಾರುವಾಗ ಅಂದರೆ 'ಮೀಂಡ್ 'ಎಂಬ ಪ್ರಕ್ರಿಯೆ ಸಾಧಿಸುವಾಗ ಇದನ್ನು ಮುಖೋದ್ಗತ ಮಾಡಿದ್ದರೂ ಮಧ್ಯದಲ್ಲಿಯೇ ತ್ರಿಶಂಕು ಅವಸ್ಥೆಯಲ್ಲಿ ಕೆಲವು ಸಲ ಈ ಸ್ವರಗಳನ್ನು ಬಿಟ್ಟದ್ದೂ ಉಂಟು! ಇನ್ನೂ ಕೆಲವು ಸಲ ವಾದಕರು ಇದನ್ನು ಮುಕ್ತಾಯಗೊಳಿಸುವದೂ ಉಂಟು.

6) ಮೇಲಿನ ಸಪ್ತಕದಲ್ಲಿ ಹಾಡುವ ಸ್ತ್ರೀ ಕಲಾವಿದರು, ಸ್ತ್ರೀ ದಾಕ್ಷಿಣ್ಯದಿಂದ ಎರಡೂ ಕೈ ಎತ್ತಿ ಹಾಡುವದಿಲ್ಲ. ಅವರ ಕೈಗಳು ಸಮಾನಂತರವಾಗಿ ನೆಲವನ್ನು ತೋರಿಸುತ್ತವೆ. ಕೈ ಎತ್ತಿ ತೋರಿಸುವ ರೂಢಿ ಗಂಡಸರಿಗೆ ಮೀಸಲಾಗಿದ್ದು.

7) ಕೆಲ ಕಲಾವಿದರ ಸ್ವರದಲ್ಲಿ ಮಾರ್ದವತೆ ಕಡಿಮೆ ಇರುತ್ತದೆ. ಆದರೆ ಮುಖ್ಯವಾಗಿ ದಪ್ಪ ಧ್ವನಿಯ ಗಾಯಕರು, ಅಂದರೆ ಕೆ.ಜಿ ಗಿಂಡೆಯಂಥವರು, ಗಾಯನದಲ್ಲಿಯ ಮಾರ್ದವತೆಯನ್ನು ಹಾವಭಾವದಿಂದ ತೋರಿಸುತ್ತಿದ್ದರು! ಉಸ್ತಾದ್ ಬಡೆ ಗುಲಾಮ್ ಅಲಿ ಖಾನರವರು, 'ಕಾ ಕರೂಂ ಸಜನಿ, ಆಯೆಂ ನ ಬಾಲಮ' ಹಾಡುವಾಗ, ದೊಡ್ಡ ಮೀಸೆಯ ಪೈಲವಾನರ ಶರೀರವುಳ್ಳ ಈ ಖ್ಯಾತ ಗಾಯಕ ತನ್ನ ಗಾಯನದಲ್ಲಿ ವಿರಹ ಭಾವ ತೋರಿಸುತ್ತಿದ್ದರಷ್ಟೇ ಅಲ್ಲ, ಅವರೇ ವಿರಹ ವ್ಯಥೆಯನ್ನು ತಾಳಲಾರದ ಒಬ್ಬ ಸುಂದರಿಯಂತೆ ತೋರುತ್ತಿದ್ದರು! ಕರೆ ಒಂದರಲ್ಲಿ (Black one ಇದು ಹಾರ್ಮೋನಿಯಮ್ ಶ್ರುತಿ) ಹಾಡುವ ಫಯ್ಯಾಜ್ ಖಾನರ 'ಬಾಜು ಬಂದ ಖುಲಖುಲಿ ಜಾಯ್' ಭೈರವಿ ಹಾಡುವಾಗ ಕೂಡ ಇದೇ ಮಾತು ಕಣ್ಮುಂದೆ ಕಟ್ಟುತ್ತದೆ. ಪಂ. ಭೀಮಸೇನ ಜೋಶಿ, 'ಪಿಯಾ ಮಿಲನಕೆ ಆಸ' ಪೀಲೂ ಠುಮರಿ ಹಾಡುವಾಗ ಕಣ್ಣಲ್ಲಿ ನೀರು ತುಂಬಿದ ಕ್ಷಣಗಳೇಷ್ಟೋ!

8) 40–45 ವರ್ಷಗಳ ಹಿಂದೆ ಪಂ. ಭೀಮಸೇನ ಜೋಶಿಯವರ ಸಂಗೀತದಲ್ಲಿ ಮೈ ಕೈ ಭಾಷೆ ಅಮೋಘವಾಗಿರುತ್ತಿತ್ತು. ಅವರಂತೂ ಕುಳಿತಲ್ಲಿಂದ ಜಿಗಿಯುವದು, ಮುಖದ ಮೇಲಿನ ಭಾವ ಪ್ರದರ್ಶನ, ಮೈ ಕೈ ಅಲ್ಲಾಡಿಸಿ ತುಂಟ ನೋಟ ತಬಲಾ ಬಾರಿಸುವವರೆಡೆ, ಹುಬ್ಬೇರಿಸಿ, ಹಾರ್ಮೋನಿಯಮ್ ಬಾರಿಸುವವರ ಕಡೆ . 'ಹಮ್ ಭೀ ಕುಛ್ ಕಮ್ ನಹಿಂ' (ನಾವೂ ಯಾರಿಗೂ ಕಮ್ಮಿ ಇಲ್ಲ) ಎಂಬುದನ್ನು ಪದೇ ಪದೇ ಪ್ರದರ್ಶಿಸಿದ್ದುದನ್ನು ನಾನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ಅದೇ ಪಂಡಿತರ ಈ ಕೈ–ಮೈ–ಭಾಷೆಯ ಪ್ರಖರತೆ ಕಳೆದ 20 ವರ್ಷಗಳಲ್ಲಿ ಕಡಿಮೆ ಆದದ್ದನ್ನೂ ಕಂಡಿದ್ದೇನೆ.

9) ಹಾವಭಾವವಿಲ್ಲದ ಒಬ್ಬ ಗಾಯಕನಿಗೆ ನಾನು ಕಚೇರಿ ಮುಗಿದ ಮೇಲೆ ಕರೆದು, 'ಶುದ್ಧ ಮುದ್ರಾ ಮತ್ತು ಶುದ್ಧ ವಾಣಿ' ಅಂದರೆ, ಬರೀ ಶಾಸ್ತ್ರೋಕ್ತವಾಗಿ ಬಾಯಿ ಬಿಟ್ಟು ಹಾಡುವದಷ್ಟೇ ಅಲ್ಲ, ಸ್ವಲ್ಪ ಅಲ್ಲಲ್ಲೆ ಹಾವಭಾವಗಳನ್ನು ಮಾಡಲು ಕಲಿ' ಎಂದು ಹೇಳಿದ್ದುಂಟು! ಇದು ಒಂದು ಉತ್ತರ ಧ್ರುವದ ಮಾತಾದರೆ. ಮತ್ತೊಬ್ಬ ಕಲಾವಿದೆ ದಕ್ಷಿಣ ಧ್ರುವದಂತೆ. ಸಂಜೆಯ ಹೊತ್ತಿಗೆ ಪೂರಿಯಾ ಧನಶ್ರೀ ಹಾಡುತ್ತಿದ್ದ ಗಾಯಕಿ ಹಾಡುವುದನ್ನು ಬಿಟ್ಟು, ಸಂಜ್ಞೆಯಿಂದಲೇ ಹಿಂದೆ ಕುಳಿತವರನ್ನು ಮುಂದೆ ಬರೆಸಿ, 'ಕುಳಿತುಕೊ' ಎಂದು ಸಂಜ್ಞೆಯಿಂದಲೇ ತಿಳಿಸಿ ಮುಗುಳ್ನಗುತ್ತ ಇಡೀ ಸಭಾಗೃಹವನ್ನು ವೀಕ್ಷಿಸಿದ್ದನ್ನು ನಾನು ಕಂಡಿದ್ದೇನೆ. ಇವೆರಡೂ ಪ್ರಕಾರಗಳು ಸಂಗೀತಕ್ಕೆ ಪೂರಕವಲ್ಲ, ಮಾರಕ ಎಂದು ನಾನು ತಿಳಿದಿದ್ದೇನೆ. ಆಲಿಸುವವರಲ್ಲಿ ಚೇತನ ತುಂಬುವ ಕೆಲಸ ಹಾಡುವವರದು. ಅದನ್ನು ಸರಿಯಾಗಿ ಅಭ್ಯಸಿಸಿದವರೇ ಮುಂದೆ ಹೆಸರನ್ನು ಗಳಿಸುತ್ತಾರೆ ಎಂಬ ಮಾತು ಅಷ್ಟೇ ಸತ್ಯ.

*****

6.12

ಸರಸ್ವತಿದೇವಿಯ ಮುಸಲ್ಮಾನ ಉಪಾಸಕರು

ಮೈಹರ್ ಎಂಬುದು ಮಧ್ಯಪ್ರದೇಶದಲ್ಲಿಯ ಸತನಾ ಜಿಲ್ಲೆಯಲ್ಲಿಯ ಒಂದು ಸಣ್ಣ ಊರು. ಒಂದಾನೊಂದು ಕಾಲದಲ್ಲಿ ಸಂಸ್ಥಾನವಾಗಿದ್ದ ಮೈಹರ್ ಸಂಗೀತ ಕ್ಷೇತ್ರದಲ್ಲಿಯ ಜಾಗತಿಕ ನಕಾಶೆಯ ಮೇಲೆ ಬರುವ ಕಾರಣವೆಂದರೆ ಬಾಬಾ ಅಲ್ಲಾ ಉದ್ದೀನ್ ಖಾನರ ಅಲ್ಲಿಯ 60-70 ವರ್ಷಗಳ ವಾಸ್ತವ್ಯ. ಇವರು ಜಾಗತಿಕ ಕೀರ್ತಿಯ ಸಿತಾರ್ ವಾದಕರಾದ ಪಂ. ರವಿಶಂಕರರ ಗುರು ಮತ್ತು ಮಾವ ಮತ್ತು ಅಲಿ ಅಕಬರ್ ಖಾನರ ತಂದೆ. ಸ್ವರ್ಗೀಯ ಪನ್ನಾಲಾಲ ಘೋಷರ ಮತ್ತು ನಿಖಿಲ್ ಬ್ಯಾನರ್ಜಿಯವರಂತಹ ದಿಗ್ಗಜರ ಶಿಷ್ಯತ್ವವನ್ನು ಪಡೆದ ಅಲ್ಲಾ ಉದ್ದೀನ ಖಾನರು ದೀರ್ಘಾಯುಷ್ಯವನ್ನು ಕೂಡ ಪಡೆದಿದ್ದರು. 103 ವರ್ಷ ಬಾಳಿದ ಅಲ್ಲಾ ಉದ್ದೀನರು ನನಗೆ ಗೊತ್ತಿದ್ದ ಮಟ್ಟಿಗೆ ಇತ್ತೀಚಿನ ಮುಸಲ್ಮಾನರಲ್ಲಿಯ ಶಾರದಾದೇವಿಯ ಭಕ್ತರು. ಪ್ರತಿನಿತ್ಯ ನೂರನಾಲ್ವತ್ತು ಮೆಟ್ಟಲುಗಳನ್ನು ತುಳಿದು ತಮ್ಮ ಅಯುಷ್ಯದ ನೂರನೆಯ ವರ್ಷದಲ್ಲಿ ಪದಾರ್ಪಣ ಮಾಡಿದವರು. ಮೈಹರ್‌ದ ಶಾರದಾದೇವಿಯ ದೇವಸ್ಥಾನದ ಆವರಣದಲ್ಲಿ ಅವರು ನಡೆಸಿದ ಶಾರದೆಯ ಪೂಜೆ ಅದ್ದೂರಿಯಾಗಿ ನಡೆಯಿತು. ಅವರ ಮಗಳು ರವಿಶಂಕರರ ಹೆಂಡತಿಯ ಹೆಸರು ಅನ್ನಪೂರ್ಣಾದೇವಿ. ಅವರು ಜಗತ್ತಿನಲ್ಲಿಯ ಹೆಸರಾಂತ 'ಸೂರ್ ಬಹಾರ್' ವಾದಕರಲ್ಲೊಬ್ಬರು. ಅಲಿ ಅಕಬರ್ ಖಾನ್, ಅನ್ನನಪೂರ್ಣಾದೇವಿ, ಅಲ್ಲಾ ಉದ್ದೀನರ ಮೊಮ್ಮಗ ಅಶೀಷ್ ಖಾನ್ ಇವರೆಲ್ಲರ ಸರೋದ್‌ದ ಮೇಲೆ ಶಾರದಾದೇವಿಯ ಚಿಕ್ಕದಾದ ಮೂರ್ತಿ ಇರುವುದನ್ನು ತಾವು ಈಗಲೂ ಕಾಣಬಹುದು. ಅಲಿ ಅಕಬರ್ ಖಾನರು, ಕಳೆದ 20-40 ವರ್ಷಗಳಿಂದ ಅಮೆರಿಕೆಯಲ್ಲಿಯೇ ಇದ್ದಾರೆ. ಮೂರು ಧರ್ಮಗಳ ಸಮ್ಮಿಳನ (ಹಿಂದು, ಮುಸ್ಲಿಮ್, ಇತ್ತೀಚೆಗೆ ಕ್ರಿಶ್ಚಿಯನ್ ಹೆಂಡತಿ ಮಾಡಿಕೊಂಡಿರುವದರಿಂದ) ಅವರ ಮನೆಯಲ್ಲಿ ಕಣ್ಣಾರೆ ನೋಡಿದ ಅವರ ಶಿಷ್ಯೆ ಪ್ರಖ್ಯಾತ ಪಾರ್ಶ್ವ ಗಾಯಕಿ ಆಶಾ ಭೋಸಲೆ ಹೇಳಿದಂತೆ, ಅವರ ಮನೆಗೆ ಬರುವ ಎಲ್ಲರ ಲಕ್ಷ್ಯ, ಬಾಗಿಲ ಹೊಸ್ತಿಲ ಮೇಲೆ ಬರೆದ ಕುರಾನದ ವಾಕ್ಯ, ಮಧ್ಯದಲ್ಲಿಯ ಶಾರದೆಯ ಮೂರ್ತಿ ಮತ್ತು ಪಕ್ಕದಲ್ಲಿಯ ಯೇಸುವಿನ ಕ್ರೂಸು ಚುಂಬಕದಂತೆ ಸೆಳೆಯುತ್ತದೆಯಂತೆ.

ಸುಮಾರು 46 ವರ್ಷ ಬಾಳಿದ ಇಬ್ರಾಹಿಮ್ ಆದಿಲ್ ಶಾಹ ಆಳಿದ್ದು ಕೇವಲ 26 ವರ್ಷ (1580-1627) ಉತ್ತರದಿಂದ ಆಗಿಂದಾಗ ಬರುವ ಮೊಗಲರ ಸುಂಟರಗಾಳಿ

ನಿಲ್ಲಿಸುವದರಲ್ಲಿ ಅವನ ಶಕ್ತಿ, ಯುಕ್ತಿ, ಚಾತುರ್ಯ ಹೆಚ್ಚವಾದರೂ ಆಗಿನ ಮೊಗಲ್ ಬಾದಶಾಹ ಅಕಬರ್‌ನಲ್ಲಿ ಮತ್ತು ಇಬ್ರಾಹಿಮ್‌ರ ನಡುವೆ ಒಂದು ಸಾಮ್ಯ ನಾವು ಕಾಣಬಹುದು. ಅದೆಂದರೆ ವೇಷಭೂಷಣ ಮುಸಲ್ಮಾನರದ್ದಾದರೂ ಅವರಲ್ಲಿಯ ಹಿಂದೂ ಪ್ರೇಮ. ಅಕಬರ್‌ನ ದರ್ಬಾರದ ಭಾಷೆ ಪರ್ಶಿಯನ್ ಮಿಶ್ರಿತ ಹಿಂದುಸ್ತಾನಿಯಾದರೆ ಬಿಜಾಪುರದ ಆದಿಲ್ ಶಾಹಿ ರಾಜಭಾಷೆ ಪರ್ಶಿಯನ್ ಮಿಶ್ರಿತ ಉರ್ದು-ಮರಾಠಿ!

ಇಬ್ರಾಹಿಮ್ ಆದಿಲ ಶಾಹನ ರಾಜಮುದ್ರೆ ಸರಸ್ವತಿ. ಕೆಲವು ಐತಿಹಾಸಿಕ ದಾಖಲೆಗಳಲ್ಲಿ ಈ ಸರಸ್ವತಿಯನ್ನು ಕೆಲವು ಶಾಹೀ ಫರ್ಮಾನಿನಲ್ಲಿ ಕೂಡ ನಾವು ಕಾಣಬಹುದು!

ಈ 17ನೇ ಶತಮಾನದ ಇಬ್ರಾಹಿಮ್‌ಗೆ ಮತ್ತೊಂದು ಆಸಕ್ತಿ ಎಂದರೆ ತನ್ನನ್ನು ಎಲ್ಲರೂ 'ಜಗದ್ಗುರು' ಎಂದು ಸಂಬೋಧಿಸಬೇಕೆಂಬ ಆಸೆ! ಅವನ ಕಾಲದಲ್ಲಿ ಆಡಳಿತ ಕಾರಭಾರ ನೋಡುವವರಲ್ಲಿ (ಕಾರಭಾರಿ) ಹಿಂದುಗಳಿದ್ದರು! ಅವನ ಪ್ರಿಯ ವಾದ್ಯವೆಂದರೆ ಸರಸ್ವತಿಯ ಕೈಯಲ್ಲಿಯ ವೀಣೆ. ಅವನ ಸಂಗ್ರಹದಲ್ಲಿದ್ದ ನವರಸ ವೀಣೆ ಇಬ್ರಾಹಿಮ್‌ನ ಪ್ರಿಯ ವಾದ್ಯ. ಇತಿಹಾಸದಲ್ಲಿಯ ಮತ್ತೊಂದು ದಾಖಲೆಯೆಂದರೆ ಈ ನವರಸ ವೀಣೆಯನ್ನು ಆನೆಯ ಮೇಲೆ ಅಂಬಾರಿಯಲ್ಲಿಟ್ಟು ಮಾಡಿಸಿದ ಅದರ ಭವ್ಯ ಮೆರವಣಿಗೆಯ ವೃತ್ತಾಂತ!

ಬಿಜಾಪುರದ ಅನತಿ ದೂರದಲ್ಲಿ ನವರಸಪುರವೆಂಬ ಊರು ಕಟ್ಟಿಸಿ ರಾಜಧಾನಿಯನ್ನು ಅಲ್ಲಿ ಸ್ಥಳಾಂತರಿಸುವ ವಿಚಾರವಿತ್ತು ಈ ಇಬ್ರಾಹಿಮ್‌ಗೆ.

ಸಂಗೀತ ಪ್ರೇಮಿಗಳಲ್ಲಿಯೇ ಸರಸ್ವತಿ ಆರಾಧನೆ ಜಾಸ್ತಿ ಪ್ರಮಾಣದಲ್ಲಿ ಕಾಣಬರುತ್ತದೆ. ಸಂಗೀತದಲ್ಲಿ ಪ್ರಗಲ್ಭ ಪಾಂಡಿತ್ಯ ಪಡೆದ ಇಬ್ರಾಹಿಮ್ ಸಂಗೀತದ ಮೇಲೆ ಬರೆದ ಪುಸ್ತಕವೆಂದರೆ 'ಕಿತಾಬ-ಏ-ನವರಸ್'. ಇದರಲ್ಲಿ 17 ರಾಗಗಳಲ್ಲಿ 29 ರಚನೆಗಳನ್ನು ಈ ಸಂಗೀತಪ್ರೇಮಿ ಮಾಡಿದ್ದಾನೆ. ಈಗ ಪ್ರಚಲಿತವಿದ್ದ ಕಾನಡಾ ಪ್ರಕಾರ, ರಾಮಡಿ (ರಾಮಕಲಿ) ಮಲ್ಹಾರ ಮತ್ತು ಭೂಪಾಳಿ ರಾಗಗಳಲ್ಲಿಯ ರಚನೆಗಳು ವಿಶೇಷವಾಗಿ, ಸರಸ್ವತಿ, ಗಣೇಶ ಸ್ತುತಿಗಳು, ಗುಲಬರ್ಗಾದ ಪ್ರಸಿದ್ಧ ಸೂಫಿ ಸಂತ ಗೇಸುಧರಾಜ ಬಂದೆ ನವಾಜ್ ಮೇಲೆ ಕೂಡ ಬರೆದ ಒಂದು ರಚನೆ ಇದೆ. ಸಂಗೀತಜ್ಞರ ಅನಿಸಿಕೆಯಂತೆ ಖಯಾಲ್ ಮತ್ತು ಧ್ರುಪದ್‌ಗಳ ಮಧ್ಯ ಭಾಗವೆಂದೆನಿಸುವ ಬ್ರಜ್ ಭಾಷೆಯಲ್ಲಿಯ ಈ ರಚನೆಗಳು ಈ ಸಂಗೀತಪ್ರೇಮಿ ಶಾಹನ ಪಾಂಡಿತ್ಯವನ್ನು ತೋರಿಸುತ್ತದೆ.

ವಿನೋದಕ್ಕಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಶಹನಶಾಹ ಅಕಬರ್ ಬಾದಶಾಹನ ರಾಯಭಾರಿ ಬಿಜಾಪುರಕ್ಕೆ ಬಂದಾಗ ಈ ಸಂಗೀತಪ್ರೇಮಿ ಇಬ್ರಾಹಿಮ್ ಆದಿಲ್ ಶಾಹ ಕೇಳಿದ್ದೇನು?

"ನಿಮ್ಮ ಶಹನಶಾಹ ಸಂಗೀತಪ್ರೇಮಿಯೆಂದು ತುಂಬಾ ಕೇಳಿದ್ದೇನೆ"

"ಅಹುದು ಸರಕಾರ"

"ಯಾವ ಪ್ರಹರಿನಲ್ಲಿ ಸಂಗೀತ ಕೇಳುತ್ತಾರೆ?"

"ಮೂರು ಪ್ರಹರಗಳಲ್ಲಿ"

"ತಾನಸೇನ್ ಅಕಬರ್ ಜಹಾಪನಾರ ಮುಂದೆ ಕುಳಿತು ಹಾಡುತ್ತಾನೊ ಅಥವಾ ನಿಂತುಕೊಂಡು ಹಾಡುತ್ತಾನೆಯೋ?"

"ನಿಂತುಕೊಂಡು ಹಾಡುವದು ಸರಸ್ವತಿ ದೇವಿಗೆ ಅವಮಾನ ಮಾಡಿದಂತೆ!"

ಆದಿಲ್ ಶಾಹನಿಗೆ ಪ್ರಿಯವಾದ ಮತ್ತೊಂದು ವೀಣೆಯೆಂದರೆ ಮೋತಿಖಾನ್ ವೀಣೆ.

ಇಬ್ರಾಹಿಮ್ ಆದಿಲಶಾಹರ ದರ್ಬಾರಿನಲ್ಲಿದ್ದ ಜುಹುರಿ ಎಂಬ ಕವಿವರ್ಯ ತನ್ನ ಸಂಗೀತ ಪ್ರೇಮಿ ಬಾದಶಾಹರ ಬಗ್ಗೆ ತುಂಬ ಮಾರ್ಮಿಕವಾಗಿ ಬರೆದಿಟ್ಟಿದ್ದಾನೆ. ಬಾದಶಾಹರ ಹೇಳಿಕೆಯಂತೆ 'ಬಲವಿಲ್ಲದ ಮುಂಗೈ ಫಲಹೀನ ಟೊಂಗೆಯಂತೆ', 'ಸೂರ್(ಸ್ವರ)ನ್ನು ಸರಿಯಾಗಿ ಧುನ್‌ದಲ್ಲಿ ಹಾಡದ ಪ್ರಾಣಿ ತಂತಿ ಇಲ್ಲದ ವೀಣೆಯಂತೆ'.

"ಈದ್-ಏ-ನೌರಸ್" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಈ ಸಂಗೀತಪ್ರೇಮಿ ಪ್ರತಿ ತಿಂಗಳ 9ನೇ ದಿನ (ನವದಿನ) ಜಂಗೀ ಮೆಹಫಿಲ್ಲು ಇಟ್ಟು, ಎಲ್ಲರಿಗೂ ರಸದೌತಣವನ್ನು ಪುಕ್ಕಟೆ ಕೊಡುತ್ತಿದ್ದ. (ಕಲಾಭಾರತಿಯ ಉಗಮ ಹೀಗೆಯೇ ಆಗಿರಬಹುದೇ?) ದೂರದೂರದಿಂದ ಉಸ್ತಾದ್ ಮತ್ತು ಪಂಡಿತರನ್ನು ಕರೆಯಿಸಿ ಇಂತಹ ಕಚೇರಿಗಳನ್ನು ಮಾಡಿಸುತ್ತಿದ್ದ. ಈ ಕಲಾಪ್ರೇಮಿ ಇಬ್ರಾಹಿಮ್ ಬಗ್ಗೆ ಬರೆದಷ್ಟೂ ಕಡಿಮೆ. ಸಾಮಾನ್ಯವಾಗಿ ರಾಗಮಾಲಿಕೆಗಳನ್ನು ಚಿತ್ರರೂಪದಲ್ಲಿ ಇಳಿಸುವ ಶ್ರೇಯಸ್ಸು ರಾಜಸ್ಥಾನದ ರಾಜ-ಮಹಾರಾಜರಿಗೆ ಸಲ್ಲುತ್ತದೆ. ಇದಕ್ಕಿಂತ ಮೊದಲು ಪ್ರೇರಣೆ ಸಿಕ್ಕದ್ದು ಇಬ್ರಾಹಿಮ್ ಆದಿಲ್ ಶಾಹನಿಗೆ. ರಾಗಧ್ಯಾನ, ಅದಕ್ಕೆ ಅನುರೂಪವಾದ ರಚನೆ, ದೇವ ದೇವತೆಗಳ ಚಿತ್ರ (ಉದಾ: ಭೈರವ, ಕಾನಡಾ, ಕೇದಾರ) ಆದರೆ, ಅಂದಿನ ಕೇದಾರ ಮತ್ತು ಭೈರವ. ಅವುಗಳಿಗೂ ಈಗಿನ ಭೈರವ್ ಮತ್ತು ಕೇದಾರ ರಾಗಗಳಿಗೂ ಸುತರಾಂ ಸಂಬಂಧವಿಲ್ಲವೆಂದು ಹೇಳಬಯಸುತ್ತೇನೆ.

ವೀಣೆ ಬಾರಿಸುತ್ತ ಸಿಂಹಾಸನದ ಮೇಲೆ ವಿರಾಜಮಾನನಾಗಿ ಈ ಸರಸ್ವತಿಯ ಭಕ್ತ, ಭೆಟ್ಟಿಯಾಗಲು ಬಂದ ಪ್ರಜೆಗಳ ಮುಜುರೆ ಸ್ವಿಕರಿಸುತ್ತಿದ್ದ ಎಂಬುದಕ್ಕೆ ಇತಿಹಾಸದ ಪುರಾವೆಗಳಿವೆ. ಇಸ್ಲಾಮ್ ಧರ್ಮದಲ್ಲಿ ವಾದ್ಯ ನಿಷಿದ್ಧ, ಆದರೆ, ಅವನು ಸಂಗೀತಕ್ಕೆ ಕೊಟ್ಟ ಕೊಡುಗೆಗಳು ಅತುಲನೀಯುವೆಂಬ ಮಾತನ್ನು ನಾವಿಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಈ ನವರಸಭರಿತ ಆದಿಲ್ ಶಾಹನ ಬಗ್ಗೆ ಒಂದು ಆಖ್ಯಾಯಿಕೆ ಇದೆ.. ಈ ಶಾಹನ ಸಂಗೀತದ ಹುಚ್ಚು, ಸರಸ್ವತಿಯ ಆರಾಧನೆ, ವೀಣೆಯ ಪ್ರೇಮ ಮತ್ತು ಹಿಂದು ಧರ್ಮದವರ ಬಗ್ಗೆ ಇದ್ದ ಆಸ್ಥೆ ನೋಡಿ, ಕೇಳಿ, ಕೆಲ ಮುಲ್ಲಾ, ಮೌಲ್ವಿಗಳು

ವದಂತಿ ಹಬ್ಬಿಸಿದರಂತೆ, ಇಬ್ರಾಹಿಮ್ ಇಸ್ಲಾಮ್ ಧರ್ಮ ತೊರೆದು ಹಿಂದು ಧರ್ಮ ಸ್ವೀಕರಿಸುತ್ತಾನೆ ಎಂದು. ಇದರಿಂದ ದೊಡ್ಡ ಕೋಲಾಹಲ ಉಂಟಾಯಿತಂತೆ. ಮದೀನಾದಿಂದ ಒಬ್ಬ ಸಘದುತೌಲಾ ಹುಸೇನಿ ಎಂಬ ಮೌಲವಿಯನ್ನು ಕರೆಸಿ ಬಾದಶಾಹನಿಗೆ ಪ್ರಶ್ನೆ ಹಾಕಿದಾಗ, ಅವನು "ಹೌದು, ನಾನು ಸರಸ್ವತಿಯ ಭಕ್ತ. ಇದನ್ನು ನಾನು ಸ್ವೀಕರಿಸಿರುವುದು ಸ್ವರ ಮಾಧುರ್ಯವನ್ನು ಪಡೆಯಲಿಕ್ಕೆ. ನನಗೆ ಇಸ್ಲಾಮ್ ಧರ್ಮದ ಬಗ್ಗೆ ಕೂಡ ಅಷ್ಟೇ ನಿಷ್ಠೆ ಇದೆ." ಹುಸೇನಿ ಹುಸ್ಸೆಂದು ಆದಿಲ್ ಶಾಹನಿಗೆ ಆಶಿರ್ವಚನ ಕೊಟ್ಟಿದ್ದರಿಂದ ಅವನ ಧ್ವನಿ ಮತ್ತೂ ಜಾಸ್ತಿ ಮಧುರವಾಯಿತಂತೆ!

ನಾವೀಗ 17ನೇ ಶತಮಾನದೆಡೆ ಹಿಂದಿರುಗಿ ನೋಡಿದರೆ, ಶಿವಾಜಿ, ಶಹಾಜಿಯಂತಹ ಹಿಂದುಗಳ ವೇಷ, ಭೂಷ ಅಥವಾ ಶ್ರೀ ಗುರುಗೋವಿಂದಸಿಂಹರ ಪೋಷಾಕು ಅಥವಾ ಕರ್ನಾಟಕ-ಮಹಾರಾಷ್ಟ್ರದಲ್ಲಿಯ, ಆದಿಲ್ ಶಾಹಿ, ಕುತುಬ್ ಶಾಹಿ, ಬೀದರದ ಬರೀದ್ ಶಾಹಿ ಇವರಲ್ಲಿ ಹಿಂದು, ಸಿಖ್ ಮುಸ್ಲಿಮ್ ಸಮಾನತೆಯನ್ನು ಕಾಣುತ್ತೇವೆ. ಅದರಂತೆ ಹಲವಾರು ರೀತಿ ರಿವಾಜುಗಳಲ್ಲಿ ಮತ್ತು ಸಂಗೀತದ ಪ್ರಕಾರಗಳಲ್ಲಿ ಇನ್ನೂ ಹೆಚ್ಚಿನ ಸಾಮ್ಯವನ್ನು ವೀಕ್ಷಿಸುತ್ತೇವೆ. ಉತ್ತರದಲ್ಲಿಯ ವಾಸ್ತುಶಿಲ್ಪ, ಸಂಗೀತ, ಚಿತ್ರಕಲೆ, ಆಭರಣ, ಪೋಷಾಕು ಇವೆಲ್ಲವುಗಳಲ್ಲಿ ಆ ಕಾಲದ ನವಾಬರಿಂದಲೂ ಪೋಷಿತ ಪ್ರದೇಶಗಳಲ್ಲಿ ಹೋಲಿಕೆಯನ್ನು ನಾವು ಕಾಣಬಹುದು.

*****

6.13

ಸಂಗೀತೋಪಚಾರ

'ಸಂಗೀತ ಮನಕೋ ಪಂಖ ಲಗಾಯೆ
ಸುರೋಂಕೀ ರಿಮ್‌ಝಿಮ್ ಋತು ಬರಸಾಯೆ ॥

ಈ ಹಾಡು ಹೇಳುವಂತೆ ಸಂಗೀತದೊಂದಿಗೆ ಶರೀರ, ಮನಸ್ಸಿನ ವ್ಯಾಧಿ, ಪೀಡೆಗಳು ಮಾಯವಾಗುತ್ತವೆ ಎಂಬ ಕಲ್ಪನೆ ಇಂದಿನದಲ್ಲ. ಹಿಂದಿನಿಂದಲೂ ಅನೇಕರು ಈ ಕುರಿತು ಸಂಶೋಧನೆ ನಡೆಸುತ್ತಾ ಬಂದಿದ್ದಾರೆ. ಈಗಲೂ ಮಹಾರಾಷ್ಟ್ರದ ಲೋನಾವಳಾದಲ್ಲಿ ವೈದ್ಯ ಬಾಲಾಜಿ ತಾಂಬೆ ಇವರ ಶುಶ್ರೂಷಾಲಯದಲ್ಲಿ ಸಂಗೀತೋಪಚಾರ ನಡೆಯುತ್ತದೆ. ಇಂತಹುದೇ ಒಂದು ಪ್ರಯತ್ನ ಗ್ರಾಮಫೋನ್ ರೆಕಾರ್ಡುಗಳ ಮೂಲಕ ನಡೆಸಿದ್ದು, ಅದೂ ಒಂದು ಶತಮಾನದ ಹಿಂದೆ ಆದದ್ದು ಒಂದು ಅದ್ಭುತವೆಂದೇ ತಿಳಿಯಬೇಕು.

ಈ ತನಕ ನಾವು ಗ್ರಾಮಫೋನ್ ರಿಕಾರ್ಡುಗಳ ಬಗ್ಗೆ ಬರೆಯುವಾಗ ಕೊಲಂಬಿಯಾ ಕಂಪೆನಿಯ ಬಗ್ಗೆ ಬರೆಯದಿರುವುದಕ್ಕೆ ಕಾರಣ ಕೊಲಂಬಿಯಾ ಅಮೇರಿಕದ ಕಂಪೆನಿಯಾಗಿದ್ದು ಭಾರತದಲ್ಲಿ 1930ರ ಮೊದಲು ಕೇವಲ ಗ್ರಾಮಫೋನಿನ ಮಾರಾಟ, ಸಿಲಿಂಡರ್ಸ್ ಮತ್ತು ಇತರ ಯಂತ್ರಗಳ ಮಾರಾಟದಲ್ಲಿ ತೊಡಗಿತ್ತು. 1931ರ ನಂತರವೇ ಈ ಕಂಪೆನಿ ರಿಕಾರ್ಡುಗಳನ್ನು ಮಾಡಲು ತೊಡಗಿದ್ದು. ಈ ಲೇಖನ ಮಾಲೆಯ ಅಭ್ಯಾಸ ಕೇವಲ 1902ರಿಂದ 1930ರ ವರೆಗೆ ಇದ್ದುದರಿಂದ ಇದರ ಬಗ್ಗೆ ಬರೆಯುವ ಗೋಜಿಗೆ ಹೋಗಿರಲಿಲ್ಲ. ಆದರೆ, ಸತ್ಯಬಾಲಾ ದೇವಿ ಇವರ ವೀಣಾವಾದನದ ರಿಕಾರ್ಡು 1910ರಲ್ಲಿ ಅಮೇರಿಕಾ ಕೊಲಂಬಿಯಾ ಲೇಬಲಿನಲ್ಲಿ ಬಿಡುಗಡೆ ಹೊಂದಿರುವುದರ ಹಿಂದಿನ ಕತೆ ರೋಚಕವಾಗಿದೆ.

ಸೂರತ್ ನಗರದ ಡಾ. ಉಮೇದರಾಮ್ ಲಾಲಭಾಯಿ ದೇಸಾಯಿ (1869–1930) ಇವರ ಶಿಕ್ಷಣ ನಡೆದದ್ದು ಇಂಗ್ಲೆಂಡ್–ಅಮೆರಿಕಾದಲ್ಲಿ. ಅವರೊಬ್ಬ ಅತ್ಯಂತ ನಿಷ್ಣಾತ ಸರ್ಜನರಾಗಿದ್ದರು. ಎಂ.ಡಿ., ಎಂ.ಎಸ್., ಪದವಿಗಳನ್ನು ಹೊತ್ತು ಭಾರತಕ್ಕೆ ಬಂದು ಮುಂಬಯಿಯಲ್ಲಿ ಫೋರ್ಟ್ ಪ್ರದೇಶದಲ್ಲಿ ತಮ್ಮ ಮೆಡಿಕೋ ಇಲೆಕ್ಟ್ರಿಕ್ ಡಿಸ್ಪೆನಸ್ಸರಿ ನಡೆಸುತ್ತಿದ್ದರು. ಬಿಹಾರದ ಜಮೀನುದಾರ ಮನೆತನದಲ್ಲಿ ಹುಟ್ಟಿದ ಸತ್ಯಬಾಲಾ ದೇವಿಯೊಂದಿಗೆ ಅವರ ಮದುವೆ ಸುಮಾರು 1905ರಲ್ಲಿ ನಡೆಯಿತು. ಅಂದರೆ ಆಗ

ಅವರ ವಯಸ್ಸು 35 ಆಗಿದ್ದರೆ ಸತ್ಯಬಾಲ ಕೇವಲ 13 ವರ್ಷದವಳು. ಈ ಸತ್ಯಬಾಲ ತುಂಬ ಗುಣಗ್ರಾಹಿಯಾಗಿದ್ದಳು. ಗಾಯನ ಮತ್ತು ವಾದನದಲ್ಲಿ ಪ್ರಾವೀಣ್ಯದ ಜೊತೆಗೆ, ಆಕೆಗೆ ಅನೇಕ ಭಾಷೆಗಳು ಬರುತ್ತಿದ್ದವು. ವಿಚಿತ್ರವೀಣೆ, ವಯೊಲಿನ್ ಮುಂತಾದ ವಾದ್ಯಗಳ ಮೇಲೂ ಪ್ರಭುತ್ವವಿತ್ತು. ಮುಂದೆ ಇವರಿಬ್ಬರೂ ಸೂರತಿನ ತಮ್ಮ ಪಿತ್ರಾರ್ಜಿತ ಮಹಲಿನಲ್ಲಿಯೇ ವಾಸ್ತವ್ಯ ಹೂಡಿದಾಗ ಡಾಕ್ಟರ್ ಸಾಹೇಬರು ತಮ್ಮ ದವಾಖಾನೆಯನ್ನು ಅಲ್ಲಿಯೇ ಪ್ರಾರಂಭಿಸಿದರು. ಸತ್ಯಬಾಲಾ ದೇವಿಯೊಂದಿಗೆ ತಮ್ಮ ರೋಗಿಗಳ ಮೇಲೆ ಸಂಗೀತೋಪಚಾರವನ್ನು ಆರಂಭಿಸಿದರು. ಕೆಲವೇ ದಿನಗಳಲ್ಲಿ ಅವರ ಕೀರ್ತಿ ಎಲ್ಲ ಕಡೆಗೂ ಹಬ್ಬಿತು.

ರೇವಾ ಸಂಸ್ಥಾನದ ಮಹಾರಾಜರ ಮೇಲೆಯೂ ಡಾ. ದೇಸಾಯಿ ಮತ್ತು ಸತ್ಯಬಾಲಾ ದೇವಿಯವರ ಈ ಸಂಗೀತೋಪಚಾರ ನಡೆದು ಅವರ ರೋಗ ವಾಸಿಯಾಗಿತ್ತು. ಮಹಾರಾಜರು ಡಾ. ದೇಸಾಯಿ ಮತ್ತು ಸತ್ಯಬಾಲಾ ದೇವಿಯವರನ್ನು ಸಂಗೀತೋಪಚಾರದ ಪ್ರಚಾರಕ್ಕಾಗಿ ಅಮೇರಿಕಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿದರು. ಅಲ್ಲಿ ಅವರು ಈ ಉಪಚಾರದ ಬಗ್ಗೆ ಕಮ್ಮಟಗಳನ್ನು ಅನೇಕ ಕಡೆ ನಡೆಸಿದ್ದರು. ದೇವಿಯವರ ವೀಣೆ ಆರುನೂರು ವರ್ಷಗಳ ಹಿಂದಿನದಾಗಿದ್ದು ಅಕಬರ್‌ನ ಆಸ್ಥಾನದಲ್ಲಿ ನುಡಿಸಲ್ಪಡುತ್ತಿತ್ತು ಎಂಬ ವದಂತಿ ಹರಡಿತ್ತು. ದೇವಿಯವರ 50ಕ್ಕೂ ಹೆಚ್ಚು ರಿಕಾರ್ಡುಗಳು ಅಲ್ಲಿ ಬಿಡುಗಡೆಯಾದುದರಿಂದ ದಂಪತಿಗೆ ತುಂಬಾ ಪ್ರಸಿದ್ಧಿ ದೊರೆಯಿತು. ಲೇಬಲಿನ ಮೇಲೆ ಸತ್ಯಬಾಲಾ ದೇವಿಯವರ ಚಿತ್ರ ಮತ್ತು ತಬಲಾದ ಬೋಲ್‌ಗಳು ಇವೆ. ಈಗಲೂ ಈ ರಿಕಾರ್ಡುಗಳು ಚಿಕ್ಕಪುಟ್ಟ ಊರುಗಳ ಜಮೀನ್ದಾರರ ಸಂಗ್ರಹದಲ್ಲಿ ನೋಡಲು ಸಿಗುತ್ತವೆ. ಇದರ ವಾದನ ಕೇಳಿದರೆ ಈ ಉಪಚಾರ ಹೇಗೆ ನಡೆಯಿತು? ರೋಗ ಶಮನವಾಯಿತೇ? ಎಂಬ ವಿವರಗಳು ಅತಿರಂಜಿತವೆಂದೇ ಅನಿಸುತ್ತವೆ. ಮುಂದೆ, ಈ ದೇಸಾಯಿ ದಂಪತಿ ಭಾರತಕ್ಕೆ ಮರಳಿ ರಾಯಪುರ ಸಂಸ್ಥಾನದ ನವಾಬರ ಆಶ್ರಯದಲ್ಲಿದ್ದರು. ಅವರ ಸಂಗೀತ ಉಪಚಾರದ ಬಗ್ಗೆ ಅಥವಾ ಅವರ ಮುಂದಿನ ಜೀವನಕ್ರಮದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಒಟ್ಟು ನೂರು ವರ್ಷಗಳ ಹಿಂದೆ ಇಂತಹ ಸಂಗೀತ ಉಪಚಾರದ ಯತ್ನ ನಡೆದಿತ್ತು ಎಂಬುದಕ್ಕೆ ಈ ಒಂದು ಉದಾಹರಣೆ ಸಾಕು.

*****

6.14

'ಸಿಂಗಿಂಗ್' ಸಿಂಗ್ ಬಂಧುಗಳ ವೃತ್ತಾಂತ

ಸುರಿಂದರ್ ಸಿಂಗ್ ಮತ್ತು ತೇಜಪಾಲ್ ಸಿಂಗ್ ಇವರಿಬ್ಬರೂ ಹಿಂದುಸ್ತಾನಿ ಸಂಗೀತ ಕ್ಷೇತ್ರದಲ್ಲಿ 'ಸಿಂಗ್ ಬಂಧು'ಗಳು ಎಂದು ಪರಿಚಿತರು. ಇವರಿಬ್ಬರೂ ಮುಂಬಯಿಯಿಂದ ದೆಹಲಿಗೆ ಪ್ರಸ್ಥಾನಮಾಡಿ ಎರಡು ದಶಕಗಳಾದವು. ಮುಂಬಯಿಗೆ ಬಂದು ನೆಲೆಸಿದ್ದು ದೆಹಲಿಯಿಂದಲೇ. ಇಬ್ಬರೂ ಇಂದೂರ್ ಪರಂಪರೆಯ ಉಸ್ತಾದ್ ಅಮೀರ ಖಾನರ ಶಿಷ್ಯರು. ಸುರಿಂದರ್ ಇನ್‌ಕಮ್ ಟ್ಯಾಕ್ಸ್ ಖಾತೆಯಲ್ಲಿ ಕೆಲಸಕ್ಕಿದ್ದರು. ಬಿಡುವಿನಲ್ಲಿ ಅಮೀರ ಖಾನರ ಬಳಿ ಪೆಡ್ಡರ್ ರೋಡ್‌ನಲ್ಲಿದ್ದ ವಸಂತ ಬಿಲ್ಡಿಂಗ್‌ನಲ್ಲಿ ಸಂಗೀತ ಕಲಿಯುತ್ತಿದ್ದರು ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಸಂಗೀತ ವಿಮರ್ಶಕನೆಂದೂ ಅಂಕಣ ಬರೆಯುತ್ತಿದ್ದರು. 1966ರಲ್ಲಿ ರೇಡಿಯೋದಲ್ಲಿ ನಿವೇದಿಕೆಯಾಗಿದ್ದ ಪದ್ಮಾ ಸಚದೇವ ಎಂಬವಳನ್ನು ಮದುವೆ ಮಾಡಿಕೊಂಡರು. ಮುಂದೆ ಪದ್ಮಾ ಒಂದೆರಡು ವರ್ಷಗಳಲ್ಲಿಯೇ ಡೋಗ್ರಿ ಭಾಷೆಯ ಕವಿ ಎಂದೂ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಹಾಗೂ 1970ರಲ್ಲಿ 'ಪದ್ಮಶ್ರೀ' ಯನ್ನೂ ಪಡೆದರು.

ಸುರಿಂದರ್-ತೇಜಪಾಲರ ನೆನಪಾದದ್ದು ಅವರು ಟೈಮ್ಸ್ ಪೇಪರ್‌ಗೆ ಕೊಟ್ಟ ಸ್ಫೋಟಕ ಸಂದರ್ಶನದ ಮಾಹಿತಿ, ನನ್ನ 20-30 ವರ್ಷಗಳಿಂದ ಕಾಪಾಡಿ ಇಟ್ಟುಕೊಂಡ ಮ್ಯೂಸಿಕ್ ಕ್ಲಿಪ್‌ಗಳಿಂದ. ಅವರು ಸ್ವತಃ ವಿಮರ್ಶಕರಾಗಿದ್ದರೂ 'ಸಂಗೀತ ವಿಮರ್ಶೆ ಎಂಬುದು ಒಂದು ಸೋಗು-ಒಂದು ಕುಚೋದ್ಯ' ಎಂಬ ಹೇಳಿಕೆ ನೀಡಿದ್ದರು. ಇದು ಅಕ್ಟೋಬರ್ ತಿಂಗಳ ಒಂದು ಶನಿವಾರದ 1989ರಲ್ಲಿ ಟೈಮ್ಸ್‌ನಲ್ಲಿ ಪ್ರಕಟವಾಯಿತು. ಮರಾಠೀ, ಹಿಂದಿ ಹಾಗೂ ಇಂಗ್ಲಿಷ್ ಪತ್ರಿಕೆಯ ವಿಮರ್ಶಕರೆಲ್ಲ ಅವರ ವಿರುದ್ಧ ಒಟ್ಟಾಗಿ ಪ್ರತಿಭಟಿಸಿದ್ದು ಮುಂಬಯಿಯ ಪತ್ರಿಕೋದ್ಯಮ ಇತಿಹಾಸದ ಒಂದು ದಾಖಲೆ. ಸಿಂಗ್ ಬಂಧುಗಳ ಸಂದರ್ಶನ ಮಾಡಿದವರು ರಾವುಫ್ ಅಹಮ್ಮದ್ ಎಂಬ ಪತ್ರಕರ್ತರು. ನಾನು ಭಾರತೀಯ ವಿದ್ಯಾಭವನದ ಜರ್ನಲಿಸಂ ಕೋರ್ಸ್‌ನ್ನು 1966ರಲ್ಲಿ ಮಾಡುತ್ತಿದ್ದಾಗ ಇವರೂ ನನ್ನ ಜೊತೆ ಇದ್ದರು. ಮುಂದೆ ಫಿಲ್ಮ್‌ಫೇರ್‌ದಲ್ಲಿ ಎಡಿಟರ್ ಆಗಿ ಮಿಂಚಿದರು. ಗೂನು ಬೆನ್ನು ಬಿಟ್ಟರೆ, ರಾವುಫ್ ಒಳ್ಳೆಯ ಮಾತುಗಾರ, ಬರಹಗಾರ. ರಾವುಫ್ ಅಹಮ್ಮದ್ ಸಂದರ್ಶನ ಮಾಡಿದ್ದು ಕೇವಲ ಸುರಿಂದರ್ ಸಿಂಗ್ ಅವರನ್ನು. ಒಂದು ಕಾಲಂನಲ್ಲಿ ಅವರ ಪರಿಚಯ, ಉಳಿದ ನಾಲ್ಕು ಕಾಲಂಗಳಲ್ಲಿ ಪ್ರಶ್ನೆ ಹಾಗೂ ಉತ್ತರಗಳು ಮತ್ತು ಸುರಿಂದರ್ ಸಿಂಗ್ ಅವರ ಒಂದು ದೊಡ್ಡ ಕಲರ್ ಪ್ರಿಂಟ್ ಫೋಟೋ,

ಜೊತೆಗೆ ಸಿಂಗ್ ಬಂಧುಗಳ ಒಂದು ಸಣ್ಣ ಚಿತ್ರ. ಶನಿವಾರದ ಟೈಮ್ಸ್‌ನ ಒಂದು ಪೂರ್ಣಪುಟ ಈ ಸಂದರ್ಶನಕ್ಕೇನೇ ಮೀಸಲಾಗಿತ್ತು!

ಸಿಂಗ್ ಬಂಧುಗಳು ತಮ್ಮ ಈ ಸ್ಫೋಟಕ ಸಂದರ್ಶನದಿಂದ ವಿಮರ್ಶಕರ ರೋಷವನ್ನು ಎಳೆದುಕೊಂಡದ್ದಷ್ಟೇ ಅಲ್ಲ, ಪಂ. ಜಸರಾಜ, ಕಿಶೋರಿ ಅಮೋಣ್ಕರ ಹಾಗೂ ಪಂ. ಭೀಮಸೇನ ಜೋಶಿಯವರಂತಹ ದಿಗ್ಗಜಗಳನ್ನು ನೋಯಿಸಿದ್ದೂ ಇದೆ. ಭಾರತೀಯ ಸಂಗೀತದ ಅತಿರಥ ಮಹಾರಥಿಗಳನ್ನು ಈ ರೀತಿ ಕಾಲು ಎಳೆದು ಒಂದು ರೀತಿಯ ಜಗಳವನ್ನೇ ಪ್ರಾರಂಭಿಸಿದರೆಂದು, ಒಂದೆರಡು ವರ್ಷಗಳಲ್ಲಿಯೇ ಸುರಿಂದರ್ ಸಿಂಗ್ ಹಾಗೂ ತೇಜಪಾಲ್ ಸಿಂಗ್‌ರು 'ಅಸಹಕಾರ ಚಳವಳಿ'ಯನ್ನು ಎದುರಿಸಬೇಕಾಯಿತು. ಮುಂಬಯಿ, ಪುಣೆ, ನಾಗಪುರದಿಂದ ಕಾರ್ಯಕ್ರಮಗಳಿಗಾಗಲಿ ಅಥವಾ ಮಿವರ್ಶೆ ಬರೆಯುವುದಕ್ಕಾಗಲಿ ಕರೆ ಬರಲೇ ಇಲ್ಲ. ಮುಂಬಯಿಸ್ಥಿತ ವಿಮರ್ಶಕರು/ಸಂಘಟಕರು ಅಸಹಕಾರದ ಕಹಳೆಯನ್ನು ಊದಿದರು. ಬಹುಶಃ ಅವರು ಮುಂಬಯಿಯನ್ನು ಬಿಟ್ಟು ದೆಹಲಿಯಲ್ಲಿ ನೆಲೆಸಿದ್ದು ಇದರಿಂದಲೇ ಎಂದು ನನಗೆ ಈಗ ಎನಿಸುತ್ತದೆ. ಅವರ ಸಂದರ್ಶನದ ಪ್ರಶ್ನೆ ಹಾಗೂ ಉತ್ತರಗಳನ್ನು ಸಂಕ್ಷೇಪದಲ್ಲಿ ಕೆಳಗೆ ಕೊಡಲಾಗಿದೆ.

ಪ್ರಶ್ನೆ: ನಿಮ್ಮಲ್ಲಿ ಸಂಗೀತ ವಿಷಯದಲ್ಲಿ ಆಸ್ಥೆ ಆನುವಂಶಿಕವೇ?

ಉತ್ತರ: ತೇಜಪಾಲ್ ನನಗಿಂತ 2 ವರ್ಷಕ್ಕೆ ಹಿರಿಯ. ಅವನಿಗೂ ಸಂಗೀತದಲ್ಲಿ ಆಸಕ್ತಿ. ಆದರೆ, ಮನೆಯಲ್ಲಿ ಹೇಳುವ ಹಾಗೆ ಇಲ್ಲ. 'ದೊಡ್ಡವನಾದ ಮೇಲೆ ಭಜನೆ ಹೇಳುತ್ತ ತಿರಗ್ತಿಯೇನು? – ತಂದೆಯವರ ಗದರಿಸುವಿಕೆ. ಆದರೂ, ಮೀರತ್ ಶಹರದ ಶಾಲೆಯಲ್ಲಿಯೂ ಕಾಲೇಜಿನಲ್ಲಿಯೂ ಮ್ಯೂಸಿಕ್ ಬಕ್ಷೀಸು ನಮಗೇ ಕಟ್ಟಿಟ್ಟದ್ದು. ನಾನು ಐಎಎಸ್ ಪಾಸಾದೆ. ಸರಕಾರೀ ನೌಕರಿ. ತೇಜಪಾಲ್ ಅದಾಗಲೇ ಬೊಂಬಾಯಿಗೆ ಬಂದಿದ್ದ. ನನಗೂ ಟ್ರಾನ್ಸ್‌ಫರ್ ಆಯ್ತು. ಸಂಗೀತ ಕಲಿಯಲು ಪ್ರಾರಂಭಿಸಿದ್ದು ನಾನು. ನನಗೆ ಕಲಿಸುವಾಗ ತೇಜಪಾಲ್ ಕೇಳಿ ಕೇಳಿ ಅವನೇ ಹಾಡಲಿಕ್ಕೆ ಶುರುಮಾಡಿಬಿಟ್ಟ. ನಾನು ತಬಲಾ ನುಡಿಸಲು ಕಲಿತೆ. ನಮ್ಮದು ಐದು ಜನರ ಸಂಸಾರ –ಅಂದರೆ ನಾನು, ತೇಜಪಾಲ್, ಬಾಕಿ ಮೂರು ತಂಗಿಯರು. ಕೊನೆಯ ತಂಗಿಯ ಮದುವೆ ಆದ ಕೂಡಲೇ ನಾನು ಇಲ್ಲಿಗೆ ಟ್ರಾನ್ಸಫರ್ ಆಗಿ ಬಂದೆ. ತೇಜಪಾಲ್ ನನ್ನನ್ನು ಹಿಂಬಾಲಿಸಿದ. 1969ರಲ್ಲಿ ಇನ್‌ಕಮ್ ಟ್ಯಾಕ್ಸ್ ಆಫೀಸರೆಂದು ಮೇಲಿನ ಹುದ್ದೆ ಸಿಕ್ಕಿತು. ನನ್ನ ಮದುವೆಯೂ ಆಗಿತ್ತು. 1981ರಲ್ಲಿ ರಾಜೀನಾಮೆ ಸಲ್ಲಿಸಿ ಫುಲ್ ಟೈಮ್ ಗಾಯನ ಮಾಡಬೇಕೆಂದಿತ್ತು. ಆದರೆ, ಹೆಂಡತಿ, ಮಕ್ಕಳು.... ನಮ್ಮ ಗುರುಗಳೂ (ಉಸ್ತಾದ್. ಅಮೀರ್ ಖಾನ್) ಅಗಲೇ ಕಲಕತ್ತೆಯಲ್ಲಿ ಏಕ್ಸಿಡೆಂಟ್‌ನಲ್ಲಿ ತೀರಿಕೊಂಡಿದ್ದರು. ಆದರೂ, 1983ರಲ್ಲಿ ನಾನು ಜಾಬ್ ಬಿಟ್ಟೆ. ತೇಜಪಾಲ್ ಕೂಡ.

ಪ್ರಶ್ನೆ: ಹಾಡುಗಾರಿಕೆಯಲ್ಲಿಯೇ ಸಾಕಷ್ಟು ಉತ್ಪನ್ನವಿದೆಯೇ?

ಉತ್ತರ: ಇಲ್ಲ, ತುಂಬಾ ತೊಂದರೆ, ತಾಪತ್ರಯ ಎದುರಿಸಬೇಕಾಯಿತು. ಪದ್ಮಾಗೆ (ಹೆಂಡತಿ) ನೌಕರಿ ಇತ್ತು.

ಪ್ರಶ್ನೆ: ಭೀಮಸೇನ ಜೋಶಿಯಂಥವರು ಗಾಯನದಲ್ಲಿಯೇ ಲಕ್ಷಗಟ್ಟಲೆ ಗಳಿಸುತ್ತಾರೆ ಹೌದಾ?

ಉತ್ತರ: ಹೌದು, ಕೆಲವರಷ್ಟೆ. ಸಂಗೀತದಲ್ಲಿಯೂ ಸಿನೆಮಾದಂತೆ ಸ್ಟಾರ್ ಸಿಸ್ಟಮ್ ಇದೆ. ನಿಮ್ಮ ಸಂಗೀತ ಸಮ್ಮೇಳನದ ಯಶಸ್ಸಿಗೆ ಕೆಲವು ಹೆಸರುಗಳು ಅತ್ಯಗತ್ಯ. ಇವಿಲ್ಲದೇ ಯಾವುದೇ ಸಮ್ಮೇಳನ ಸಾಧ್ಯವಿಲ್ಲವೆಂಬ ನಂಬಿಕೆ ಸಂಘಟಕರಲ್ಲಿ. ಇದೆ.

ಪ್ರಶ್ನೆ: ಆ ಕಲಾವಿದರ ಹೆಸರುಗಳು?

ಉತ್ತರ: ಪಂ. ಭೀಮಸೇನ ಜೋಶಿ, ಕಿಶೋರಿ ಆಮೋಣ್ಕರ, ಶಿವಕುಮಾರ ಶರ್ಮ, ಪ್ರತಿಷ್ಠಿತ ಸಮ್ಮೇಳನಗಳ 'ಜಾವಿ'.

ಪ್ರಶ್ನೆ: ಪಂ. ಜಸರಾಜರು?

ಉತ್ತರ: ಅವರು ಕೂಡ ಸ್ಟಾರೇ. ಕಂಠ ಸಂಗೀತದಲ್ಲಿ ಅನುಕ್ರಮವಾಗಿ ಭೀಮಸೇನ ಜೋಶಿ, ಕಿಶೋರಿ ಆಮೋಣ್ಕರ್, ಕುಮಾರ ಗಂಧರ್ವ, ಮತ್ತು ಪಂ. ಜಸರಾಜ್. ಸೆಮಿಸ್ಟಾರ್ ಅಂದರೆ, ಮಲ್ಲಿಕಾರ್ಜುನ ಮನ್ಸೂರ, ಪರವೀನ ಸುಲ್ತಾನಾ.

ಪ್ರಶ್ನೆ: ನೀವು ಮತ್ತು ತೇಜಪಾಲ್ ಈ ಸಿಸ್ಟಮಿನಲ್ಲಿ ಎಲ್ಲಿದ್ದೀರಿ?

ಉತ್ತರ: ನಾವು ಈ ವರ್ತುಲದ ಮೇಲೆ ಹೊರಬದಿ ಜೋಲಾಡುತ್ತಾ ಇದ್ದೇವೆ. ನಾವಿನ್ನೂ ಚಕ್ರವ್ಯೂಹ ಭೇದಿಸಿ ಒಳಗೆ ಹೋಗಬೇಕಾಗಿದೆ.

ಪ್ರಶ್ನೆ: ನನಗೊಂದು ದಿಗ್ಭ್ರಮೆ. ಈ ಸ್ಟಾರ್ ಸಿಸ್ಟಮ್ ಸಂಗೀತದಲ್ಲಿ ಹೇಗೆ, ಫಿಲ್ಮದಲ್ಲಿದ್ದಂತೆಯೇ ಶಾಹರುಖ್ ಖಾನ್‌ನಂತೆ ಇಲ್ಲಿಯೂ ಜನ ಮರುಳೋ, ಜಾತ್ರೆ ಮರುಳೋ ಇದೆಯೇ?

ಉತ್ತರ: ಇಲ್ಲಿಯೂ ಇದೆ. ಆದರೆ, ಸ್ವಲ್ಪ ಜಟಿಲ. ಕಾಂಪ್ಲೆಕ್ಸ್ ಸಿಚ್ಯುಯೇಶನ್. ಇಲ್ಲಿ ಭೀಮಸೇನ ಜೋಶಿ ಇದ್ದಾರೆ. ಅತ್ಯುತ್ತಮ ಗಾಯಕರು. ಅವರ ಕೇಳುಗರು ಅಕ್ಷರಶಃ ಧಾಳಿ ಹಾಕುತ್ತಾರೆ. ಇಲ್ಲಿ ಪರವೀನ ಸುಲ್ತಾನಾ ಕೂಡಾ ಇದ್ದಾರೆ, ಆ ಮಟ್ಟದಲ್ಲಿ ಇರದಿದ್ದರೂ ಕೂಡ. ಅವರ ಕಾರ್ಯಕ್ರಮಗಳಿಗೂ ಜನ ಸೇರುತ್ತಾರೆ. ಕಾರಣ ಏನೇ ಇರಬಹುದು. ಆದರೆ, ಇದು ವಸ್ತುಸ್ಥಿತಿ. ನಮ್ಮ ಉಸ್ತಾದ್ ಅಮೀರ ಖಾನರೂ ಇದ್ದರು. ಆದರೆ, ಅವರ ಸಂಗೀತದ ಕೇಳುಗರು ಕಡಿಮೆ. ಆದರೂ ಸಮ್ಮೇಳನದ ಯಶಸ್ಸಿಗೆ ಅವರೂ ಹಮೇಶಾ ಹಾಡುತ್ತಿದ್ದರು. ಒಮ್ಮೆ ಭೀಮಸೇನ ಜೋಶಿಯವರಿಗೆ ಹಿತಚಿಂತಕರೊಬ್ಬರು ಕೇಳಿದರಂತೆ: 'ಯಾರಿವ ಅಮೀರ ಖಾನ್? ಅವನ ಸಂಗೀತ ಬೋರು' ಅಂದರಂತೆ. ಭೀಮಸೇನ ಜೋಶಿ ಕೇಳಿದರಂತೆ: 'ನನ್ನ ಹಾಡು ಸೇರುತ್ತಾ?' 'ಓಹೋ! ನೀವು ಸಂಗೀತ ಸಾಮ್ರಾಟರು'. ಭೀಮಸೇನ ಜೋಶಿ ಹೇಳಿದರಂತೆ 'ನಾನು ನಿಮಗಾಗಿ ಹಾಡ್ತೇನೆ, ಅಮೀರ ಖಾನ ಸಾಹೇಬರು ತನಗಾಗಿ ಹಾಡ್ತಾರೆ'. ಅವರು ಗವಯಿಗಳ ಗವಯಿ. ಅಮೀರ್ ಖಾನ್ ಸಾಹೇಬರಂಥವರು ಈಗಿಲ್ಲ.

ಪ್ರಶ್ನೆ: ಶಾಸ್ತ್ರೀಯ ಸಂಗೀತದ ಗಾಯಕರು, ಅಂದರೆ ಸ್ಟಾರ್ಸ್, ಹೊಸ ಹೊಸ ಪ್ರತಿಭಾಶಾಲಿ ಯುವ ಗಾಯಕ ಗಾಯಕಿಯರನ್ನು ಕೌಶಲ್ಯದಿಂದ ಹಿಮೆಟ್ಟಿಸುತ್ತಿರುತ್ತಾರೆ ಎಂದು ಕೇಳಿದ್ದೇವೆ.! ಇದು ಸರಿಯೇ?

ಉತ್ತರ: ಅಕ್ಷರಶಃ ನಿಜವಾದ ಮಾತು. ಕಳೆದ ಒಂದೆರಡು ದಶಕಗಳಲ್ಲಿ ಅತ್ಯಂತ ಪ್ರತಿಭಾಶಾಲಿ ಹೆಸರನ್ನೇನಾದರೂ ನೀವು ಕೇಳಿದ್ದೀರಾ? ಹಾಡುಗಾರಿಕೆಯಲ್ಲಿ ಅದೇ ಹಳೆಯ ಹೆಸರುಗಳು, ಅದೇ ಸಂಘಟಕರು. ಬೇರೆ ಬೇರೆ ಹೆಸರಿಟ್ಟು ಪ್ರಾಯೋಜಕತೆ ಪಡೆದು ಕಾರ್ಯಕ್ರಮ ಏರ್ಪಡಿಸುತ್ತಾರೆ. ಅತಿ ಮಹತ್ವದ ಸಂಗೀತಕಾರರಿಗೂ ಈ ಆರ್ಥಿಕ ಸಂರಕ್ಷಣೆಯ ಕಾಟವಿದೆ ಎಂದರೆ ನಂಬುತ್ತೀರಾ?

ಪ್ರಶ್ನೆ: ಇದರಿಂದ ನಿಮಗೆ ತೊಂದರೆ ಆಗಿದ್ದು ಇದೆಯೇ?

ಉತ್ತರ: ಹುಂ. ತುಂಬಾ. ಪಶ್ಚಿಮ ಭಾರತದಲ್ಲಿ ನಮಗೆ ಯಶಸ್ಸು ಸಿಗಲು ಮೂರು ಮೆಹಫಿಲ್ಲುಗಳು ಕಾರಣೀಭೂತವಾದವು. ಮೊದಲನೆಯದು ಬ್ರಿಜನಾರಾಯಣರ ನೇತೃತ್ವದ 'ಕಲಕೀ ಕಲಾಕಾರ' ಸಮ್ಮೇಳನ (1968). ಇವರದೇ 'ಸ್ವಾಮೀ ಹರಿದಾಸ ಸಮ್ಮೇಳನ' (1970) ಮತ್ತು ಈ ಭಾಗದ ಅತ್ಯಂತ ಪ್ರತಿಷ್ಠಿತ ಪುಣೆಯ 'ಸವಾಯಿಗಂಧರ್ವ' (1968). ಈ ಸವಾಯಿ ಗಂಧರ್ವ ಒಂದು ದೊಡ್ಡ ಹಬ್ಬದಂತೆ. 15,000 ಜನ ಸೇರುತ್ತಾರೆ ಕಾರ್ಯಕ್ರಮ ಕೇಳಲು. ನಮ್ಮ ಹಾಡುಗಾರಿಕೆಗೆ ತುಂಬಾ ಜನ ಸೇರಿತ್ತು. ಕಾರಣ ಮರುದಿನದ ಪತ್ರಿಕೆಗಳಲ್ಲಿ ನಮ್ಮ ಚಿತ್ರದೊಂದಿಗೆ ಉದ್ದುದ್ದದ ವಿಮರ್ಶೆಗಳೂ ಬಂದಿದ್ದವು. ನಾವು ಆಗ ಸಂಗೀತ ಕ್ಷೇತ್ರದಲ್ಲಿಯ 'ಬಚ್ಚಾ ಕಂಪೆನಿ'. ಮುಂದಿನ ಹತ್ತು ವರ್ಷ ನಮಗೆ ಈ 'ಸವಾಯಿ ಗಂಧರ್ವ'ದ ಮೂಲಕ ಕಚೇರಿಗಳು ಸಿಗುತ್ತಾ ಹೋದವು. ಆದರೆ, ನಂತರ ಸವಾಯಿ ಗಂಧರ್ವದಿಂದ ಮುಂದೆ ಕರೆ ಬರಲೇ ಇಲ್ಲ! ಒಂದು ಮಾತು. ಇದರ ವ್ಯವಸ್ಥೆ ಎಲ್ಲ ಭೀಮಸೇನ ಜೋಶಿಯವರದೆ.

ಪ್ರಶ್ನೆ: ಸವಾಯಿಗಂಧರ್ವದಲ್ಲಿ ಹಾಡುವುದಕ್ಕೆ ಪಾತ್ರತೆಯ ಗುಣಮಟ್ಟದ ನಿರ್ಧಾರವನ್ನು ಯಾರು ಮಾಡುತ್ತಾರೆ? ಕಮಿಟಿ ಇದೆಯೇ?

ಉತ್ತರ: ಒಂದು ನಿಶ್ಚಿತ ರೂಪದ ಆಯ್ಕೆಯ ಸಿಸ್ಟಮ್ ಇಲ್ಲ. ಯಾರೋ ಭೀಮಸೇನ ಜೋಶಿಯವರಿಗೆ 'ಸಿಂಗ ಬಂಧುಗಳು' ಚೆನ್ನಾಗಿ ಹಾಡ್ತಾರೆ, 'ಸವಾಯ್'ದಲ್ಲಿ ಕರೆಸಿ! ಎಂದು ಪತ್ರ ಬರೆದರಂತೆ. ಪಂಡಿತಜಿಯವರು ಆ ಪ್ರಕಾರ ನಮಗೆ ತಿಳಿಸಿದರು. ನಾವು ಎರಡೂ ಕೈಗಳಿಂದ ಈ ಛಾನ್ಸ್ ಹಿಡಿದು ತುಂಬಾ ಚೆನ್ನಾಗಿ ಪ್ರಸ್ತುತಿಸಿದೆವು. ನಂತರದ ವರ್ಷಗಳಲ್ಲಿ ನಮ್ಮನ್ನು ಕರೆಯದಿದ್ದ ಕಾರಣ ನಾವು ಹುಡುಕಲು ಪ್ರಯತ್ನಿಸಿದೆವು. ಸವಾಯ್ ಸಂಘಟಕರ ಸಂಪರ್ಕದಲ್ಲಿದ್ದ ಪುಣೆಯ ಓರ್ವ ಹಾರ್ಮೋನಿಯಂ ವಾದಕನ ಮೂಲಕ ಭೀಮಸೇನ ಜೋಶಿಯವರಿಗೆ ನಾವು ಇಷ್ಟವಿಲ್ಲವೆಂಬುದು ನಮಗೆ ಅರ್ಥವಾಯಿತು.

ಪ್ರತಿಯೊಂದು ಸಂಘಟನೆಯಲ್ಲಿ ಈ ತರಹದ ಒಳಸಂಚು ಅಂದರೆ ಕ್ಲಿಕ್ (ಛಿಟುಡಣಜ) ಅಂತಾರಲ್ಲ ಅದು ಇರುತ್ತೆ. ಸಂಗೀತ ಸರ್ಕಲ್ಲುಗಳು ಎರಡು ಪ್ರಕಾರದವು.

ಒಂದು ಕಲಾವಿದರದ್ದು, ವ್ಯವಸ್ಥಾಪನೆ ಅವರದೇ. ಮತ್ತೊಂದು ರಸಿಕ ಶ್ರೋತೃಗಳದು. ಕಲಾವಿದರ ಸರ್ಕಲ್ಲು ಪ್ರಾರಂಭಿಸಿದ್ದೂ ಪಂಡಿತಜಿಯವರೆ (ಭೀಮಸೇನ ಜೋಶಿ). ಈ ಒಳಸಂಚಿನಿಂದ ತಮಗೆ ಬೇಕಾದವರೇ ಆಯ್ಕೆ ಆಗುತ್ತಾರೆ. ಟ್ಯಾಲೆಂಟ್ ಇದೆಯೇ, ಇಲ್ಲವೆ ಇದೆಲ್ಲವನ್ನೂ ಯಾರೂ ಗಮನಿಸುವುದಿಲ್ಲ. ಇದರಲ್ಲಿ ದೊಡ್ಡ ಉದ್ಯೋಗಿಗಳೂ ನಾ ಮುಂದೆ ನೀ ಮುಂದೆ ಎಂದು ಪೈಪೋಟಿ ನಡೆಸಿ ಪ್ರಾಯೋಜಕತೆ ನೀಡುತ್ತಾರೆ. ಇವುಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳೂ ಇವೆ. ಒಂದು ಮಾತು ಹೇಳಬೇಕು. ನಾನು ಕೆಲವರ್ಷ ಕ್ರಿಟಿಕ್ ಎಂದು ಇಂಗ್ಲಿಷು (ಇಂಡಿಯನ್ ಎಕ್ಸ್‌ಪ್ರೆಸ್) ಪತ್ರಿಕೆಯಲ್ಲಿ ವಿಮರ್ಶೆ ಬರೆಯುತ್ತಿದ್ದೆ. ಹಿಂದಿಯಲ್ಲಿ ಕೂಡ. ಇದೂ ಕೂಡಾ ನಮ್ಮ ವಿರೋಧಕ್ಕೆ ಕೈ ಹಚ್ಚಿತು. 'ಬಡೇ ಬಡೇ ಕಲಾಕಾರ್ ಭೂಲೇ ನಹೀಂ'.

ಪ್ರಶ್ನೆ: ನೀವು ಗಾಯಕರು, ನೀವು ಬರೆಯುವಾಗ ವ್ಯಕ್ತಿಯ ವಿಷಯವನ್ನು ಬದಿಗೆ ಇಟ್ಟು ಆಬ್ಜೆಕ್ಟೀವ್ ಆಗಿ ಬರೆಯಲು ಸಾಧ್ಯವಿಲ್ಲವೇ?

ಉತ್ತರ: ಮನುಷ್ಯನಿಗೆ ಎಷ್ಟು ಸಾಧ್ಯವೋ ಅಷ್ಟು ಆಬ್ಜೆಕ್ಟೀವ್ ಆಗಿ ಬರೆಯಬಲ್ಲೆ. ಅಂದರೆ ವಿಶೇಷವಾಗಿ ಇಂಗ್ಲಿಷಿನಲ್ಲಿ ಬರೆಯುವ ಮೋಹನ ನಾಡಕರ್ಣಿ, ಸುಮಿತ ಸವೂರ, ಪ್ರಕಾಶ ಬುರ್ಡೆ ಮತ್ತಿಬ್ಬರು, ಇವರಿಗಿಂತ ಹೆಚ್ಚಿಗೆ ಆಬ್ಜೆಕ್ಟೀವ್ ಆಗಿ ಬರೆಯಬಲ್ಲೆ. ದುರ್ದೈವದಿಂದ ಹೀಗೆ ಬರೆಯುವವರು ತುಂಬಾ ವಿರಳ. ಒಂದು ಮಾತು ಹೇಳಬೇಕು. ಮೋಹನ ನಾಡಕರ್ಣಿ ಭೀಮಸೇನ ಜೋಶಿಯವರ ಸಂಗೀತದ ಬಗ್ಗೆ ಕಟುವಾಗಿ ಪ್ರತಿಸಲ ಟೀಕಿಸಿದ್ದರೂ ಆಯುಷ್ಯದ ಉತ್ತರಾರ್ಧದಲ್ಲಿ ಭೀಮಸೇನ ಜೋಶಿಯವರನ್ನು ಹೊಗಳಿ ಪುಸ್ತಕ ಬರೆದರು. ಅವರ ಪ್ರೀತಿಯ ಗಾಯಕರೆಂದರೆ ಮನ್ಸೂರ, ಹಾನಗಲ್ಲ. ಇದನ್ನೂ ನಾನು ವಿರೋಧಿಸುತ್ತೇನೆ. ಇದು ಹಾಸ್ಯಾಸ್ಪದ, ಅಸಂಬದ್ಧ, ಹೊಂದಿಕೆ ಇಲ್ಲದಂಥದ್ದು. ಕೆಲ ವಿಮರ್ಶಕರಂತೂ ಅಹಂಕಾರಿ, ಆತ್ಮಕೇಂದ್ರಿತ ವ್ಯಕ್ತಿಗಳು. ಯುವ ಗಾಯಕ ಗಾಯಕಿಯರಂತೂ ಇಂತಹ ವ್ಯಕ್ತಿಗಳ ಪ್ರಶಂಸೆ ಮಾಡುತ್ತಲೇ ಇರುತ್ತಾರೆ. ಒಳ್ಳೆಯ ಸಂಗೀತಜ್ಞ ಬರೆಯಬಲ್ಲವನಾದರೆ ಆತ ಇವರಿಗಿಂತ ಒಳ್ಳೆಯ ವಿಮರ್ಶಕನಾಗಬಹುದು. ಅವನ ಪ್ರಾಮಾಣಿಕತೆ ಇವರಿಗಿಂತ ಮೇಲಿನ ದರ್ಜೆಯದು.

ಪ್ರಶ್ನೆ: ನನಗೆ ಸ್ವಲ್ಪ ಸ್ವಲ್ಪ ಅರ್ಥವಾಗ್ತಾ ಇದೆ. ಭಾರತದಲ್ಲಿಯ ಸಂಗೀತ ವಿಮರ್ಶಕರ ಗುಣಮಟ್ಟ ಹೇಗೆ?

ಉತ್ತರ: ಅತ್ಯಂತ ಶೋಚನೀಯ. ಮುಂಬಯಿಯಲ್ಲಿದ್ದ ಎಲ್ಲ ವಿಮರ್ಶಕರೂ ಒಂದೇ ಜಾತಿಯವರು. ಇದೊಂದು ಅಸಹನೀಯವಾದುದು. ಒಂದೇ ಪ್ರದೇಶದಿಂದ ಬಂದವರು. ಮೋಹನ ನಾಡಕರ್ಣಿ ಮನ್ಸೂರರ ಬಗ್ಗೆ, ಗಂಗೂಬಾಯಿ ಹಾನಗಲ್ಲರ ವಿರೋಧವಾಗಿ ಎಂದೂ ಬರೆಯಲಾರರು. ಅಂತೆಯೇ ಸುಮೀತ, ಕಾರ್ನಾಡ, ಬುರ್ಡೆ.

ಕೆಲ ವಿಮರ್ಶಕರಂತೂ ಗಾಯಕ-ವಾದಕರ ಏಜೆಂಟ್‌ರಂತೆ ಕೆಲಸಮಾಡಿದ್ದು, ಅವರನ್ನೂ ಪ್ರೋತ್ಸಾಹಿಸಿ ಮೇಲೆ ತಂದದ್ದು ನಾನು ಕಣ್ಣಾರೆ ಕಂಡಿದ್ದೇನೆ. ಕಾರ್ಯಕ್ರಮ ಏರ್ಪಡಿಸಿದರೆ ಅವರಿಗೂ 'ಕಟ್' ಸಿಗುತ್ತದೆಯಂತೆ!

ಕೆಲ ದಿನಗಳ ಹಿಂದೆ ನಾನು ದೆಹಲಿಗೆ ಹೋಗಿದ್ದೆ, ಒಂದು ಮೆಹಫಿಲ್ಲಿಗಾಗಿ. ಒಬ್ಬ ಗಾಯಕನ ಹೆಂಡತಿ ದೆಹಲಿಯ ಪ್ರತಿಷ್ಠಿತ ವಿಮರ್ಶಕರಿಗೆ ದುಂಬಾಲು ಬಿದ್ದು 'ಉನಕೀ ಇಝುತ್ ಆಪಕೆ ಹಾಥ್‌ಮೇ' (ಅವರ ಗೌರವ ನಿಮ್ಮ ಕೈಯಲ್ಲಿದೆ) ಎಂದು ಹೇಳಿದ್ದು ಕೇಳಿ ಅವಾಕ್ಕಾದೆ. ಮರುದಿನ ಪೇಪರಿನಲ್ಲಿ ಅವಳ ಪತಿರಾಜನ ಸುಮಾರಾದ ಕಚೇರಿ 'ಅಭೂತಪೂರ್ವ'ವಾಗಿತ್ತು ಎಂದು ಓದಿದಾಗ, ಆ ವಿಮರ್ಶಕ 'ಏನ್ಮಾಡಲಿ ಹೇಳಿ, ಓರ್ವ ಸ್ತ್ರೀ ಹೀಗೆ ಬೇಡಿಕೊಂಡರೆ?' ಎಂದು ನಮ್ಮನ್ನೇ ಕೇಳಿದ.

ಪ್ರಶ್ನೆ: ಅಂದರೆ ವಿಮರ್ಶಕರ ಗುಣಮಟ್ಟ ಇಂಥಹದೇ ಎಂದಾಯ್ತು ಅಲ್ಲವೇ?

ಉತ್ತರ: ಹೌದು ಮತ್ತೆ. ಇಂಗ್ಲಿಷು ಪ್ರೆಸ್ಸಿನ ಸಂಪಾದಕರೂ ನಿಂದೆಗೆ ಪಾತ್ರರು. ಅವರಿಗೆ ಸಂಗೀತದ ಬಗ್ಗೆ ಅಜ್ಞಾನ. ಶಾಸ್ತ್ರೀಯ ಸಂಗೀತದಿಂದ ಮೈಲುಗಟ್ಟಲೆ ದೂರ. ಕಿವುಡರೇ ಎನ್ನಬೇಕು. ಪುಸ್ತಕ ವಿಮರ್ಶೆಗಾಗಿ ಒಳ್ಳೆಯ ವಿಮರ್ಶಕರನ್ನು ನೇಮಿಸಿದರೆ ಸಂಗೀತದ ಬಗ್ಗೆ ಉದಾಸೀನತೆ. ಇಂಗ್ಲಿಷು ಭಾಷೆಯ ಜ್ಞಾನ ಪ್ರದರ್ಶಿಸಿದರೆ ಅವರಿಗೆ ತುಂಬಾ ಖುಷಿ. ಅವರೇ ಟಾಪ್ ಕ್ರಿಟಿಕ್!

ನಾನು ಮುಂಬಯಿಯಲ್ಲಿದ್ದಾಗ ಒಬ್ಬ ವಿಮರ್ಶಕ ಎಲ್ಲರಿಗೂ 'ಇದು ಯಾವ ರಾಗ' ಎಂದು ಕೇಳಿಕೊಂಡು ಬರೆಯುತ್ತಿದ್ದ. ಮಧುವಂತಿ ಹಾಡಿದಾಗ ನಾನು ಅವನಿಗೆ 'ಮಾಲಕೌಂಸ' ಎಂದು ಹೇಳಿದ್ದೆ, ಆತ ಪ್ರೆಸ್ಸಿನಲ್ಲಿ 'ಮಾಲಕೌಂಸ' ಎಂದೇ ಬರೆದಿದ್ದ.

ಪ್ರಶ್ನೆ: ಭಾರತದ ಐದು ಪ್ರಮುಖ ಗಾಯಕರ ಹೆಸರು ಹೇಳಿ.

ಉತ್ತರ: ಪಂ. ಭೀಮಸೇನ ಜೋಶಿ, ಕಿಶೋರಿ ಆಮೋಣಕರ, ಕುಮಾರ ಗಂಧರ್ವ, ಗಂಗೂಬಾಯಿ ಹಾನಗಲ್ಲ, ಮಲ್ಲಿಕಾರ್ಜುನ ಮನ್ಸೂರ. ಕೊನೆಯ ಎರಡು ಹೆಸರುಗಳು ಲೆಕ್ಕದಲ್ಲಿ ಹಿಡಿಯಬಾರದು. ಈಗ ಅವರಿಗೆ ವಯಸ್ಸಾಗಿದೆ. ಕಿಶೋರಿಯ ನಂತರ ಜಸರಾಜರು. ಜಸರಾಜರು ತುಂಬಾ ಜನಪ್ರಿಯರಾದರೂ ಅವರ ಸಂಗೀತ ಅಷ್ಟಕ್ಕಷ್ಟೆ!"

ಮೇಲೆ ಬರೆದದ್ದು 1989ರ ನವೆಂಬರ್ ಎರಡನೇ ತಾರೀಖಿಗೆ. ಇಂಗ್ಲಿಷಿನಲ್ಲಿದ್ದದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿದ್ದೇನೆ. ನಾನು 1984ರಿಂದಲೇ ಟಾಯಿಮ್ಸ್‌ನಲ್ಲಿ ಬರೆಯಲು ಪ್ರಾರಂಭಿಸಿದ್ದರೂ, ಗ್ಲಾಕ್ಸೊ ಕಂಪನಿಯಲ್ಲಿ ಕೆಲಸಕ್ಕಿದ್ದುದರಿಂದ ನನ್ನ ಹೆಸರಿನಲ್ಲಿ ವಿಮರ್ಶೆ ಬರುತ್ತಿರಲಿಲ್ಲ. ಕ್ರಮೇಣ ನನ್ನ ಹೆಸರಿನಲ್ಲಿಯೇ ಪ್ರಕಟವಾಗಲು ಪ್ರಾರಂಭವಾಯಿತು. ಈ ಸ್ಫೋಟಕ ವೃತ್ತಾಂತ ಓದಿ ರಸಿಕರೂ, ಸಂಗೀತಕಾರರೂ, ವಿಮರ್ಶಕರೂ, ಪತ್ರಿಕಾಕರ್ತರೂ ಹೊಡೆದು ಎಬ್ಬಿಸಿದಂತಾದರು. ಮುಂದಿನ ಶನಿವಾರ ಅಂದರೆ 21.11.1989ರಂದು ಸುರಿಂದರ್ ಸಿಂಗ್ ಕ್ಷಮಾಯಾಚನೆಯಂತೆ ಒಂದು ಸಂಪಾದಕರಿಗೆ ಪತ್ರ ಬರೆದರು. ಅದರ ಒಕ್ಕಣೆ ಹೀಗಿದೆ.

"ನನ್ನ ಸಂದರ್ಶನದ ಮಾಹಿತಿ ರಾವುಫ್ ಅಹಮ್ಮದ್ ಬರೆದದ್ದು. ನಾನು ಯೋಚಿಸಿದಂತೆ ಸಂದರ್ಶನದ ವಿವರಗಳು ಬರಲೇ ಇಲ್ಲವೆಂದು ಇಲ್ಲಿ ವಿಷಾದದಿಂದ ನಮೂದಿಸುತ್ತಿದ್ದೇನೆ. ಮೋಹನ ನಾಡಕರ್ಣಿಯವರು ಬಹಳ ಒಳ್ಳೆಯ ವಿಮರ್ಶಕರು.

ಅವರೂ ಕೂಡ ಪಕ್ಷಪಾತದ ಹೊರತಾಗಿಲ್ಲವೆಂದು ನಾನು ಹೇಳ ಬಯಸುತ್ತಿದ್ದೆ. ರಿಕಾರ್ಡು ಸರಿಪಡಿಸಲು ನಾನು ಮತ್ತೊಮ್ಮೆ ನಾಡಕರ್ಣಿ, ಜಿತೇಂದ್ರ ಪ್ರಸಾದ ಹಾಗೂ ವರ್ಮಾ ಅವರ ಕ್ಷಮೆಯಾಚಿಸಿ ಅವರ ಬಗ್ಗೆ ನನಗೆ ತುಂಬಾ ಗೌರವವಿದೆ ಎಂದು ಹೇಳಬಯಸುತ್ತೇನೆ. ಜಸರಾಜರ ಬಗ್ಗೆ ನಾನು ಹೇಳಿದ್ದು ಅವರೂ ಕೂಡ ಒಬ್ಬ ಸ್ಟಾರ್ ಗಾಯಕರು ಎಂದು. ಅಮೀರ ಖಾನರಂತಹವರಲ್ಲದಿದ್ದರೂ ಜಸರಾಜರೂ ಕೂಡ ಓರ್ವ ಸ್ಟಾರೇ ಎಂದು ಹೇಳಬಯಸುತ್ತೇನೆ."

– ಇತಿ ಸುರಿಂದರ್ ಸಿಂಗ್

ಓದುಗರೇ. ಇದೊಂದು ವೃತ್ತಾಂತ ಅಷ್ಟೆ!

*****

6.15

ಸ್ವರ ಅಪಸ್ವರ

ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತ ಪದ್ಧತಿಗಳು ಒಂದೆಡೆ ಸೇರಬಹುದೇ? ಭಾರತದಲ್ಲಿ ಒಂದೆಡೆ ನೆಲೆಗೊಂಡವರು ಇನ್ನೊಂದೆಡೆಯ ಇಂಪಾದ ಸಂಗೀತವನ್ನು ಏಕೆ ಆಸ್ವಾದಿಸಲಾರರು? ಈ ಕಿವುಡುತನ ಮಾನಸಿಕ ಕಲ್ಪನೆಯೇ? ಅಥವಾ ಶಾರೀರಿಕ ವಿಷಯಕ್ಕೆ ಸಂಬಂದಿಸಿದ್ದೇ? ತಾನು ಕೇಳದೇ ಇರುವ ಸಂಗೀತವು ಕಿವಿಯಮೇಲೆ ಬಿದ್ದಾಗ, ತನ್ನದೆಲ್ಲವೆಂದು ಬಗೆದು ಕೆಲವರು ಅಸಹನೆ ಇಲ್ಲವೇ ತಮ್ಮದೇ ಇಷ್ಟಾನಿಷ್ಟದ ಕಲ್ಪನೆಯಿಂದ ಕಿವಿ ಮುಚ್ಚಿಕೊಂಡು ಬಿಡುತ್ತಾರಲ್ಲ?

ಒಂದು ಪದ್ಧತಿಯ ಸಂಗೀತವು ಯಾವ ನಿರ್ಬಂಧನೆಗಳಿಲ್ಲದ, ಸಾರ್ವತ್ರಿಕ ಭಾಷೆಯನ್ನೊಳಗೊಂಡಿದೆ ಎಂಬ ಅಭಿಪ್ರಾಯಪಡುವವರು ಇದ್ದಾರೆ. ಮತ್ತೊಂದೆಡೆ ಸಂಗೀತವು ಸೀಮಿತ ಮತ್ತು ಪ್ರಾದೇಶಿಕ ಕೂಡ ಆಗಲು ಸಾಧ್ಯವಿದೆ. ಏಕೆಂದರೆ, ತನ್ನ ಕೇವಲ ಆತ್ಮಸಂತೋಷಕ್ಕಾಗಿ, ತಲ್ಲೀನತೆಗಾಗಿ ಸಂಗೀತವನ್ನು ಆಸ್ವಾದಿಸುವವರು ಇರುತ್ತಾರೆ. ಅದಕ್ಕೆ ಕೆಲವು ಸ್ವಂತ ನೆನಪುಗಳು ಅಂಟಿಕೊಂಡಿರುವದರಿಂದ ವೈಯಕ್ತಿಕ ಅನುಭೂತಿ ಕೂಡ ಸಿಗುತ್ತದೆ. ಹೀಗಾಗಿ ಸಂಗೀತವನ್ನು ರೂಪಿಸುವಲ್ಲಿ ಹಾಡುಗಾರನಷ್ಟೇ ಅಲ್ಲದೇ ಕೇಳುವವನೂ ಕೂಡ ಸಹಭಾಗಿ ಆಗಿರುತ್ತಾನೆ.

ನಿಯಮಿತವಾಗಿ ಸಂಗೀತ ಕೇಳುವವರಿಗೆ ಅದೊಂದು conditioning, (ರೂಢ ಮಾನಸಿಕಸ್ಥಿತಿ) ಆಗಿ ಬಿಡುತ್ತದೆಯೇ? ಅಂಟಿಜುಣುಖಂಟುಟಿಟಿ ಅಂದರೆ ಕಟ್ಟುನಿಟ್ಟಾಗಿ 'ಪಾವ್ಲೋವಿಯನ್ ಸಿದ್ಧಾಂತ'ದ ಪ್ರಕಾರ ಅಲ್ಲ. Conditioning ಅಂದರೆ, ಸಂಗೀತಾಸಕ್ತರಲ್ಲಿ ಒಬ್ಬರು ಹಿಂದುಸ್ತಾನಿ ಸಂಗೀತಕ್ಕೆ, ಇನ್ನೊಬ್ಬರು ಕರ್ನಾಟಕ ಪದ್ಧತಿಗೆ, ಮೂರನೆಯವರು ಸುಗಮ ಸಂಗೀತಕ್ಕೆ ಅಥವಾ ಪಾಶ್ಚಾತ್ಯ ಸಂಗೀತಕ್ಕೆ ಒಗ್ಗಿಹೋಗಿರುತ್ತಾರೆ ಹಾಗೆ. ವ್ಯಕ್ತಿಗತ ಆಸಕ್ತಿಗಳು, ತಿಳುವಳಿಕೆ, ಹಾಗೂ ಭಾವನಾತ್ಮಕ ಅಭಿರುಚಿಗಳು ಬೌದ್ಧಿಕವಾಗಿ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಭಿನ್ನ ವಿರುತ್ತವೆಯಲ್ಲವೇ ಹಾಗೆ. ದಕ್ಷಿಣದವರು ಹಿಂದುಸ್ತಾನಿ ಸಂಗೀತಕ್ಕೆ ಸಲಿಸಾಗಿ ಮಾರು ಹೋಗುತ್ತಾರೆ, ಆದರೆ ಉತ್ತರದವರು ಅದೇ ತರಹ ಪ್ರತಿಕ್ರಿಯೆ ತೋರಿಸಲಿಕ್ಕಿಲ್ಲ. ದಕ್ಷಿಣ ಭಾರತದ ಅನೇಕರು ಹಿಂದುಸ್ತಾನಿ ಸಂಗೀತವನ್ನು ಕಲಿಯುತ್ತಿದ್ದಾರೆ ಮತ್ತು ಅದರಲ್ಲಿ ಪ್ರಾವೀಣ್ಯ ಕೂಡ ಪಡೆದಿದ್ದಾರೆ. ಇನ್ನೂ ಕೆಲವರು ಉದಾಹರಣೆಗೆ ಪಂಚಾಕ್ಷರಿ ಗವಯಿಗಳು, ಶಕುಂತಲಾ ನರಸಿಂಹನ್,

ಎನ್. ರಾಜಮ್, ಮತ್ತು ಇನ್ನೆಷ್ಟೋ ಗಾಯಕರು ಎರಡೂ ಪದ್ಧತಿಗಳಲ್ಲಿ ಅಷ್ಟೇ ನಿಪುಣರಿದ್ದಾರೆ. ಆದರೆ ಈ ಸಾಂಸ್ಕೃತಿಕ ಸಂಚಾರ ಏಕಮುಖಿಯಾಗಿದೆ ಎನ್ನುವ ಸತ್ಯವನ್ನು ನಾವು ಒಪ್ಪಿಕೊಳ್ಳಬೇಕು.

ಪೂರ್ವಗ್ರಹವೆಂಬುದು ಮಣಿಯದಂತಹ ವಿಚಾರ (prejudices die hard). ಹಿಂದಿ ಭಾಷೆಯು ಭಾರತದ ರಾಷ್ಟ್ರಭಾಷೆಯಾಗಿದೆಯೆಂಬ ತರ್ಕದ ಮೇಲೆಯೇ, ಭೌಗೋಲಿಕ ವ್ಯಾಪಕತೆಯ ಹಿಂದುಸ್ತಾನಿ ಸಂಗೀತವೂ ಅಧಿಕೃತ ಸಂಗೀತವಾಗಿದೆ ಅಂದರೆ ತಪ್ಪಲ್ಲ. ಮೂಲ ಸಂಗೀತ ತತ್ವಗಳು ಎರಡೂ ಸಂಗೀತ ಪ್ರಕಾರಗಳಲ್ಲಿ ಒಂದೇ ಆಗಿವೆ. ಆದರೆ,'ಕರ್ನಾಟಕ' ಸಂಗೀತವು ಕೇವಲ ಪ್ರಾದೇಶಿಕ ಸಂಗೀತ ಅಥವಾ ಒಂದು ಜನಾಂಗೀಯ (ethnic) ಸಂಗೀತ ಎನ್ನುವವರಿದ್ದಾರೆ. ಇಂಥ ಧೋರಣೆಯನ್ನು ನಂಬಿದವರು ಅಮೇರಿಕೆಯ ಕೆಲ ವಿಶ್ವವಿದ್ಯಾಲಯಗಳಲ್ಲಿ 'ಜನಾಂಗೀಯ ಸಂಗೀತ ಶಾಸ್ತ್ರ'ವನ್ನು ಅಭ್ಯಸಿಸಲು, ಅರ್ಹತೆಯನ್ನು ಪಡೆದದ್ದೂ ಉಂಟು!

ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತದ ಮಧ್ಯೆ ಒಂದು ಸೇತುವೆ ಕಟ್ಟಲು ಕಷ್ಟವೇ? ಎರಡರ ನಡುವೆ ಮೂಲಭೂತ ವ್ಯತ್ಯಾಸವಿದೆ ಎನ್ನುತ್ತಾರೆ ಓರ್ವ ಹಿಂದುಸ್ತಾನಿ ಸಂಗೀತ ವಿಮರ್ಶಕರು. ಈ ವ್ಯತ್ಯಾಸವು ಅವರ ವಿಚಾರಸರಣಿ, ಗಾಯನವಿಧಾನ (ಪ್ರಾರಂಭಿಸುವ ರೀತಿ) ಮತ್ತು ನಿರೂಪಣೆ (ಪ್ರಸ್ತುತಿ)ಗಳಲ್ಲಿ ಕಂಡು ಬರುತ್ತದೆ. ಹೋಗಲಿ. ಹಿಂದೊಮ್ಮೆ ಹಿಂದುಸ್ತಾನಿ ಮತ್ತು ಕರ್ನಾಟಕ ಒಂದೇ ಮೂಲ ಹೊಂದಿದ್ದು, ಶತಮಾನಗಳಲ್ಲಿ ಕವಲೊಡೆದಿವೆ. ಇಬ್ಬರೂ ಅಕ್ಕ ತಂಗಿಯರ ತರಹ, ಒಬ್ಬಳು, ಅಭಿಸಾರಿಕೆಯಂತೆ ಹೆದರದೇ ಮುನ್ನಡೆಯುವವಳು, ಇನ್ನೊಬ್ಬಳು ನಾಚಿಕೆ, ಸಂಕೋಚಪಡುವ ವಧುವಿನಂತೆ ಹೊರಗೆ ಹೆಜ್ಜೆ ಹಾಕಲು ಮನಸ್ಸಿಲ್ಲದವಳು! ಹಿಂದುಸ್ತಾನಿ ಸಂಗೀತವು ಸ್ವತಂತ್ರ, ವಿಶಾಲ ಮತ್ತು ಪರಿಶೋಧನಾತ್ಮಕವಾಗಿದ್ದು, ಕರ್ನಾಟಕ ಸಂಗೀತವು ಸುರುಳಿಯಾಗಿ, ಗಟ್ಟಿಯಾಗಿ ಆಂತರಿಕ ನಿಲುವಿನದು ಮತ್ತು ಹೆಚ್ಚು ಶೈಲೀಕೃತವಾಗಿರುವದು. ಅವುಗಳಲ್ಲಿ ಭಿನ್ನ ಮನೋಧರ್ಮ ಮತ್ತು ಭಿನ್ನಪ್ರಕೃತಿಯು ಕಂಡು ಬರುತ್ತದೆ ಮತ್ತು ವಿಷಯಗಳ ಕ್ರಮಬದ್ಧ ಸಂಯೋಜನೆ ಕೂಡ ಬೇರೆಯಾಗಿದೆ. ಕರ್ನಾಟಕ ಸಂಗೀತವನ್ನು ನೆನೆಪಿಸಿಕೊಂಡಾಗ ಚೋಳ ಕಂಚಿನ ವಿಗ್ರಹಗಳು ಇಲ್ಲವೇ ಮದುರೈಮೀನಾಕ್ಷಿ ದೇವಾಲಯದ ಆವಾರದ ಶಿಲ್ಪಗಳು ಮತ್ತು ಕಾಂಜೀವರಮ್ ಸೀರೆಗಳ ಕಲಾತ್ಮಕ ನೇಯ್ಗೆ ನೆನಪಾಗುತ್ತದೆ. ಮತ್ತೊಂದೆಡೆ ಹಿಂದುಸ್ತಾನಿ ಸಂಗೀತವು ಗಂಗಾನದಿಯ ಬಯಲಿನಿಂದ ಹಗುರವಾಗಿ ತೇಲಿಸಿಕೊಂಡು ಹೋದಂತೆ ತೋರುತ್ತದೆ. ಹಿಂದುಸ್ತಾನಿ ಸಂಗೀತವೆಂದರೆ ಎರಕಹೊಯ್ದಂತೆ, ಕರ್ನಾಟಕ ಸಂಗೀತ ಒಂದು ಕೆತ್ತನೆಯಂತೆ. ಹೀಗೆ ಹೇಳುವದು ಖಂಡಿತವಾಗಿ ಸಾಮಾನ್ಯೀಕರಣ ಮತ್ತು ಅನುಕೂಲವಾಗಿ ರೂಪಕಾಲಂಕಾರ ಮಾಡಿದಂತೆ. ಈ ಎರಡೂ ಶೈಲಿಯ ದೊಡ್ಡ ಗಾಯಕರು ತಮ್ಮ ತಮ್ಮ ಹಾಡಿಕೆಗೆ ಆಕಾರಕೊಡಬೇಕಾಗಿರುವುದಷ್ಟೇ ಅಲ್ಲದೆ, ಅದನ್ನು ಶಿಲ್ಪದಂತೆ ಕೆತ್ತಲೂ ಬೇಕು. ಈ ಎರಡೂ ಕಾರ್ಯಗಳ ಪ್ರಮಾಣವು ಬೇರೆ ಬೇರೆಯಾಗಿರಬಹುದು.

ಈ ಎರಡು ವಿಚಾರಧಾರೆಗಳು ರಾಗ ಮತ್ತು ತಾಲಗಳ ಆಧಾರದ ಮೇಲೆ ನಿಂತಿವೆ ಎಂಬುದನ್ನು ನಾವು ನೆನಪಿಡಬೇಕು. ಆದರೆ ಅವು ತೀರ ಭಿನ್ನವಾಗಿವೆ.

ಸ್ವರಾವರೋಹಣಗಳು ಒಂದೇ ಇಲ್ಲ. ಎರಡೂ ಶಿಬಿರಗಳಲ್ಲಿಯ ಕೇಳುಗರಲ್ಲಿರುವ ಮುಖ್ಯ ಅಡ್ಡಿ ಇದೇ! ದಕ್ಷಿಣದ ಶೈಲಿಯು ತಾಲ ಮತ್ತು ಗಮಕಗಳಿಗೆ ಉತ್ತರದವರಿಗಿಂತ ಹೆಚ್ಚು ಮಹತ್ವ ಕೊಡುತ್ತದೆ. ಗಮಕವು ಹೆಚ್ಚು ಆಲಂಕಾರಿಕವಾಗಿರುತ್ತದೆ. ಈ ಸ್ವರಾವರೋಹಣಗಳಿಂದಲೇ ಕರ್ನಾಟಕ ಸಂಗೀತ ಹಿಂದುಸ್ತಾನಿ ಸಂಗೀತಕ್ಕಿಂತ ಬೇರೆಯಾಗಿದೆಯೇ? ಎಂದು ಪ್ರಶ್ನಿಸಕೊಳ್ಳಬೇಕು.

ಹಿಂದುಸ್ತಾನಿ ಸಂಗೀತದ ಸೌಂದರ್ಯ ಅದರ ಸಡಿಲ ರಚನೆಯಲ್ಲಿ ಅಡಗಿದೆ. ಪ್ರಾಚೀನ ಕಾಲದಿಂದಲೇ ಇದರ ರಚನೆ ಚೆನ್ನಾಗಿ ಆಗಿರಲು ಸಾಕು. ಮುಸ್ಲಿಮ್ ಪ್ರಭಾವ ಮತ್ತು ಆಶ್ರಯದಿಂದ ಈ ಸಂಗೀತಕ್ಕೆ ಹೊಸ ರೂಪ ಬಂದು, ಈ ಪ್ರಕ್ರಿಯೆಯಲ್ಲಿ ಇದರ ರಾಗಕ್ಕೆ ಪರ್ಶಿಯನ್ನರ, ಅರಬರ, ತುರ್ಕರ ಇಲ್ಲವೇ ಬಹುಶ: ಮಧ್ಯ ಏಶಿಯಾದ ಇಂಪಾದ ಸಂಗೀತದಿಂದ ರಂಗೇರಿತು. ಅದೇ ಸಮಯದಲ್ಲಿ ದಕ್ಷಿಣದಲ್ಲಿ ಪುರಂದರದಾಸರಿಗಿಂತ ಮೊದಲು ಯಾವ ಸಂಗೀತ ಪ್ರಚಲಿತವಿತ್ತು ಎಂದು ಹೇಳಲು ಸಾಧ್ಯವೆ? ವಾಸ್ತವದಲ್ಲಿ ನಮಗೆ ಸಾಮಾನ್ಯವಾಗಿ ಬರವಣಿಗೆಯಲ್ಲಿ ಕಂಡುಬರುವ 'ಕರ್ನಾಟಿಕ್' ಅಥವಾ 'ಕರ್ನಾಟಕ' ಎಂಬ ಶಬಕ್ಕೆ ವಿವರಣೆ ನಮ್ಮಲಿಲ್ಲ.*

ಹಿಂದುಸ್ತಾನಿ ಸಂಗೀತದ ಬೆಳವಣಿಗೆಯು ನೈಸರ್ಗಿಕವಾಗಿ ಯಾವ ಸೈದ್ಧಾಂತಿಕ ಚೌಕಟ್ಟಿನಲ್ಲೂ ಸಿಲುಕದೇ ಆಯಿತು. ಆದರೆ ಕರ್ನಾಟಕ ಸಂಗೀತಕ್ಕೆ ಅನೇಕ ಸಿದ್ಧಾಂತಗಳಿದ್ದು ಕ್ರಮಬದ್ಧವಾಯಿತು. ಇದು ವಿಚಿತ್ರ ಆದರೆ ನಿಜವಾದ ಸಂಗತಿ ಏನೆಂದರೆ ಎರಡೂ ಪದ್ಧತಿಗಳು ಭರತ, ಮಾತಂಗ ಮತ್ತು ಶಾರ್ಙ್ಗದೇವರನ್ನು ಉಲ್ಲೇಖಿಸುತ್ತವೆ. ಈ ಸಕ್ರಮೀಕರಣದಿಂದ (systematization) ಕರ್ನಾಟಕ ಸಂಗೀತವು ದುರ್ಬಲವಾಯಿತೆ? ಹಾಗಾದರೆ, 20 ನೇ ಶತಮಾನದ ಉದಯ ಕಾಲದವರೆಗೆ ಆಚಾರ್ಯ ಭಾತಖಂಡೆಯವರವರೆಗೆ ಹಿಂದುಸ್ತಾನಿ ಸಂಗೀತವು ಕ್ರಮಬದ್ಧತೆಗಾಗಿ ಏಕೆ ಕಾಯಬೇಕಾಯಿತು? ರಾಗಗಳ ವರ್ಗೀಕರಣವನ್ನು ಸೃಷ್ಟಿಮಾಡಿ ಪುನಃ ಬರೆಯಲು ಆಗಿನ ವಾತಾವರಣವು ಅಷ್ಟು ಗೊಂದಲಮಯವಾಗಿತ್ತೇ? ವಸ್ತುತಃ ಕರ್ನಾಟಕ ಪದ್ಧತಿಯ ಬಗ್ಗೆ ಹೆಚ್ಚು ಅರಿಯಲು ಅವರಿಗೆ ದಕ್ಷಿಣಕ್ಕೇ ಬರಬೇಕಾಯಿತು. 18ನೇ ಶತಮಾನದ ಕೊನೆಯವರೆಗೆ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಈಗ ಇರುವುದಕ್ಕಿಂತ ಹೆಚ್ಚಾಗಿ, ಅರ್ಥಪೂರ್ಣವಾಗಿ ಸಂಪರ್ಕಗಳು ಆಗುತ್ತಿದ್ದವು. ಈ ಹೇಳಿಕೆ ಆಶ್ಚರ್ಯಕರವೆನಿಸಬಹುದು. ಈಗಿನಕ್ಕಿಂತ ಆಗಿನ ಜನರಿಗೆ ಕೆಲವೇ ಪೂರ್ವಾಗ್ರಹಗಳನ್ನು ಜಯಿಸುವುದಿತ್ತು, ಎಂಬುದನ್ನು ಗಮನದಲ್ಲಿಡಬೇಕು.

ಬ್ರಿಟಿಷರ ಕಾಲದಲ್ಲಿಯೇ ಮೊದಲ ಬಾರಿ ಅಡಳಿತಕ್ಕೋಸ್ಕರ ಭಾರತವು ಒಂದು ರಾಷ್ಟ್ರವೆಂದು ಏಕೀಕೃತವಾಯಿತು. ಆದಾಗ್ಯೂ ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡಿದಾಗ ಅವುಗಳಲ್ಲಿ ಅನೇಕ ಭಿನ್ನತೆಗಳು ಇದ್ದವು. ಪ್ರಾಚೀನ ಮತ್ತು ಮಧ್ಯಯುಗದಲ್ಲಿ ಉತ್ತರ ದಕ್ಷಿಣಗಳ ಮಧ್ಯೆ ಬಹಳಷ್ಟು ಕೊಡು-ಕೊಳ್ಳುವಿಕೆಯಿತ್ತು. ಮುತ್ತುಸ್ವಾಮಿ ದಿಕ್ಷಿತರ (1775–1835) ಮತ್ತು ಸ್ವಾತಿ ತಿರುನಾಳ ರಾಮವರ್ಮಾ (1813–1846) – ಈ ವಾಗ್ಗೇಯಕಾರರನ್ನು ನನ್ನ ಪ್ರಕಾರ ಇದು ಸರಿಯಾದ ಶಬ್ದವಲ್ಲ ಇವರು ಸಂಗೀತ

ಸಂಯೋಜಕರು, ಇಲ್ಲಿ ಉಲ್ಲೇಖಿಸುವದು ಅವಶ್ಯ. ಮುತ್ತುಸ್ವಾಮಿ ದೀಕ್ಷಿತರು ಹಿಂದುಸ್ತಾನಿ ರಾಗದಲ್ಲಿ ಕೆಲವು ಕೃತಿಗಳನ್ನು ರಚಿಸಿದರು ಮತ್ತು ಸ್ವಾತಿ ತಿರುನಾಳ ಮಹಾರಾಜರು ನಾಲ್ಕುನೂರಕ್ಕಿಂತ ಹೆಚ್ಚು ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತ ಕೃತಿಗಳನ್ನು ಸೃಷ್ಟಿಸಿದ್ದಾರೆ.

ಕುತೂಹಲ ಕೆರಳಿಸುವ ಮಾತೆಂದರೆ, ದಕ್ಷಿಣದಲ್ಲಿ ನೃತ್ಯ ಪ್ರದರ್ಶನ ಇಲ್ಲವೇ ಸಂಗೀತ ಮೇಳಕ್ಕೆ ಹಿಂದಿ ಶಬ್ದ 'ಕಚೇರಿ'ಎಂದು ಉಪಯೋಗಿಸುತ್ತಾರೆ. 'ಶಬ್ಬಾಷ್' ಎಂಬ ಪರ್ಷಿಯನ್ ಶಬ್ದವನ್ನು ಉತ್ತರದ ಮೆಹಫಿಲ್‌ಗಳಲ್ಲಿ ಮತ್ತು ದಕ್ಷಿಣದ ಕಚೇರಿಗಳಲ್ಲಿ ಕೂಡಿಯೇ ತಮ್ಮ ಮೆಚ್ಚುಗೆ ತೋರಿಸಲು ವ್ಯಕ್ತಪಡಿಸುತ್ತಾರೆ!

ಉತ್ತರದಷ್ಟು ಇಲ್ಲದಿದ್ದರೂ, ಮುಸಲ್ಮಾನರ ಪ್ರಭಾವ ಇನ್ನೂ ದಕ್ಷಿಣಕ್ಕೆ ಹೋದ ಹಾಗೆ ಇತ್ತು. ಆದರೆ ಉತ್ತರದವರ ಉಡುಪಿನಲ್ಲಿ ತಂಜಾವೂರ ಮರಾಠಾ ರಾಜರ ಪ್ರಭಾವ ದಕ್ಷಿಣ ಭಾರತದ, 'ಕರ್ನಾಟಿಕ್'* ಪ್ರದೇಶದಲ್ಲಿ ಇತ್ತೆಂಬುದನ್ನು ಸ್ವೀಕರಿಸಬೇಕು. ತಂಜಾವೂರದ ಮರಾಠರು ನೃತ್ಯ ಮತ್ತು ಸಂಗೀತದಲ್ಲಿ ಬಹಳ ಮುಂದಿದ್ದರು ಮತ್ತು ಆಗಿನ ಲೋಕಪ್ರಿಯುವಾದ ನೃತ್ಯಕ್ಕೆ 'ಭರತನಾಟ್ಯವ್'ಎಂದು ಹೆಸರಿಟ್ಟರು. ಸಖಾರಾಮರಾವ್ ಎಂಬ ತಂಜಾವೂರದ ಮರಾಠಿಗರು, 'ಗೋಟುವಾದ್ಯ' ಎಂಬ ಒಂದು ಪ್ರಕಾರದ ವೀಣೆಯನ್ನು ಜನಪ್ರಿಯಗೊಳಿಸಿದರು. ಇವರ ಮುಂಚೆ ಈ ವಾದ್ಯವನ್ನು ನುಡಿಸಿದವರ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಇವರು ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ (1908–2003) ಅವರ ಗುರುಗಳು. ಅಗಾಧ ಬಾಲ ಪ್ರತಿಭೆಯ ಮಗು ಎಂದೆನ್ನಿಸಿಕೊಂಡಿದ್ದ ಮೈಸೂರಿನ ರವಿಕಿರಣ ಈ ಗೋಟುವಾದ್ಯಕ್ಕೆ 'ಚಿತ್ರವೀಣೆ'ಎಂದು ಪುನರ್ನಾಮಕರಣ ಮಾಡಿದ್ದಾರೆ.

ಹಿಂದುಸ್ತಾನಿ ಸಂಗೀತದ ಜೊತೆ ತುಲನೆ ಮಾಡಿದಾಗ, ಬಹುಮಟ್ಟಿಗೆ ಕರ್ನಾಟಕ ಸಂಗೀತವು, ಶುದ್ಧ ಎಂದು ಸಾಧಿಸುವವರು ಇದ್ದಾರೆ, ಪಾಶ್ಚಾತ್ಯ ಪ್ರಭಾವವು ಸ್ವಲ್ಪ ಮಟ್ಟಿಗೆ ಕರ್ನಾಟಕ ಸಂಗೀತದ ಮೇಲೂ ಉತ್ತರದವರ ಸಂಪರ್ಕದ ಮೂಲಕ ಆಗಿರುವ ಸಾಧ್ಯತೆ ಇದೆ. ಕರ್ನಾಟಕ ರಾಗಗಳಾದ ಹುಸೇನಿ, ಕಲ್ಯಾಣಿ, ಮತ್ತು ಅರಬಿ ಇವು ಆ ಪ್ರಭಾವದ ಸಾಕ್ಷಿ ಕೊಡುತ್ತವೆ. ಮುತ್ತುಸ್ವಾಮಿ ದೀಕ್ಷಿತರು ಸೌರಾಷ್ಟ್ರ (ಸೌರಾಷ್ಟ್ರ ಎಂದರೆ ಸೂರ್ಯನ ಭೂಮಿಯೆಂದು) ರಾಗದಲ್ಲಿ ಒಂದು ಕೃತಿಯನ್ನು ರಚಿಸಿದರು. 'ಸುರಟಿ' ರಾಗವು ಸೂರತ್ ಪಟ್ಟಣಕ್ಕೆ ಸಂಬಂಧಿಸಿದೆಯೇ ಎಂದು ಯಾರಾದರೂ ಹೇಳಬಹುದೆ? ದಕ್ಷಿಣದ ಸಂಗೀತಗಾರರೂ ಕೂಡ ತಮ್ಮ ಸೀಮೆಯನ್ನು ದಾಟಿ ಸ್ಫೂರ್ತಿ ಪಡೆದಿದ್ದಾರೆ. ಎರಡೂ ಪದ್ಧತಿಗಳಲ್ಲಿ ನಿಪುಣರಾದ 'ಉಭಯಗಾನ ವಿಶಾರದ'ರು ಸಮಾನಾಂತರ ರಾಗಗಳನ್ನು ಕಂಡು ಹಿಡಿದು ಆನಂದಮಯ ವಾತಾವರಣ ಕಲ್ಪಿಸಬೇಕಾಗಿದೆ. ವಸ್ತುತಃ ನೀಲಾ ಭಾಗವತ (ಹಿಂದೂಸ್ಥಾನಿ) ಮತ್ತು ಅರುಣಾ ಸಾಯಿರಾಮ (ಕರ್ನಾಟಕ) ಇವರು ಇಂತಹ 'ಸಮಾನಾಂತರ' ಕಾರ್ಯಕ್ರಮಗಳಲ್ಲಿ ಎರಡೂ ಪದ್ಧತಿಯ ಹಾಡುಗಾರಿಕೆಯನ್ನು ಪ್ರಸ್ತುತಪಡಿಸಿ ರಸಿಕರ ಮನ ರಂಜಿಸಿದ್ದಾರೆ.

ದಕ್ಷಿಣದ ಸಂಗೀತಕಾರರು ಉತ್ತರದ ಹಾಡುಗಾರಿಕೆಯನ್ನು ಮೆಚ್ಚುತ್ತಿದ್ದರೆನ್ನುವದಕ್ಕೆ ಒಂದು ಸುಪರಿಚಿತ ಕತೆ ಇದೆ. ಒಮ್ಮೆ ದಕ್ಷಿಣದ ಸುಪ್ರಸಿದ್ಧ ಕರ್ನಾಟಕ ಪದ್ಧತಿಯ ಹಾಡುಗಾರರಾಗಿದ್ದ ಜಿ.ಎನ್. ಬಾಲಸುಬ್ರಹ್ಮಣ್ಯಮ್ ಅವರು ಕೊಲಕೊತ್ತಾದಲ್ಲಿ, ಉತ್ತರದ ಬಡೆಗುಲಾಮ ಅಲಿಖಾನರ ಸಂಗೀತ ಕೇಳಿ ಮಂತ್ರಮುಗ್ಧರಾಗಿ ಅವರ ಕಾಲಿಗೆರಗಿದರಂತೆ! ಇತ್ತೀಚಿಗೆ ನಾನು ಇನ್ನೊಂದು ಕತೆ ಕೇಳಿದೆ. 1982ರಲ್ಲಿ ಚೆನ್ನೈನಲ್ಲಿ ಎಮ್.ಡಿ ರಾಮನಾಥರ ಹಾಡುಗಾರಿಕೆಯನ್ನು ಕೇಳಿ ಕುಮಾರ ಗಂಧರ್ವರು ಆನಂದಿತರಾಗಿ ಅವರ ಕಾಲು ಮುಟ್ಟಿ ನಮಸ್ಕರಿಸಿದರಂತೆ! ಮುಂಚಿನ ಕತೆಗೆ ಅತಿರಿಕ್ತವಾಗಿ, ಇಲ್ಲಿ ಈ ಇಬ್ಬರೂ ದಕ್ಷಿಣದವರಾಗಿದ್ದರು. ಗಂಧರ್ವರು ಹಿಂದುಸ್ತಾನಿ ಸಂಗೀತ ರೂಢಿಸಿಕೊಂಡವರು, ಉತ್ತರ ಕರ್ನಾಟಕದ ಸುಳೆಬಾವಿಯವರು. ವಿವೇಕರಹಿತ ಪಕ್ಷಪಾತ ಮತ್ತು ಪ್ರಾದೇಶಿಕ ಸಂಕುಚಿತ ಮನೋಭಾವನೆಯ ವಾತಾವರಣದಲ್ಲಿ ಈ ಎರಡು ಕತೆಗಳು ಭರವಸೆಯ ಕಿರಣಗಳಂತೆ ಕಾಣುತ್ತವೆ. ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತವನ್ನು ಗಂಗಾ ಮತ್ತು ಕಾವೇರಿ ನದಿಗಳಿಗೆ ಹೋಲಿಸುತ್ತಾರೆ. ಈ ಎರಡೂ ನದಿಗಳನ್ನು ಜೋಡಿಸುವ ಯೋಜನೆಯನ್ನು ಕೆಲವು ಕೇಂದ್ರ ಸರಕಾರವನ್ನು ಆಳಿದ ನಾಯಕರು ಭಾರತ ಭೂಪಟಲದಲ್ಲಿ ಗುರುತು ಹಾಕಿದ್ದರು. ಈ ಎರಡೂ ನದಿಗಳು ತಮ್ಮ ಭಿನ್ನ ಪ್ರವಾಹವನ್ನು ಕಾಪಾಡಿಕೊಂಡು ಬಂದಿವೆ. ಆದರೆ ತಮ್ಮನ್ನು ಭಾರತೀಯರು ಎಂದು ಎನಿಸಿಕೊಳ್ಳಬೇಕೆನ್ನುವವರು ಮಾತ್ರ, ಎರಡೂ ನದಿಗಳಲ್ಲಿ ಒಂದೊಂದು ಮುಳುಗು ಹಾಕಿ ಸಂಗೀತೈಕ್ಯದ ವಿಮೋಚನೆಯನ್ನು ಅರಸಬೇಕು!

* ಚಾಲೂಕ್ಯ ಚಕ್ರವರ್ತಿ ಮೂರನೆಯ ಸೋಮೇಶ್ವರ ಅಥವಾ ಭೂಲೋಕಮಲ್ಲನ (1126–1138) 'ಮಾನಸೊಲ್ಲಾಸ'ದ ಪ್ರಕಾರ ಅದಾಗಲೇ ಇಡೀ ಭಾರತದಲ್ಲಿ ರೂಢಿಯಲ್ಲಿದ್ದ ಸಂಗೀತ ಪ್ರಕಾರದ ಸ್ಪಷ್ಟ ಕಲ್ಪನೆ ಮೂಡುತ್ತದೆ. ಆದರೆ ಅದಕ್ಕೆ ಕರ್ನಾಟಕ ಸಂಗೀತ ಎಂಬ ಹೆಸರು ಬರಲು ದಕ್ಷಿಣ ಭಾರತವನ್ನೆಲ್ಲ ವ್ಯಾಪಿಸಿದ ವಿಜಯನಗರ ಸಾಮ್ರಾಜ್ಯ (1336–1565) ಕಾರಣವಾಗಿದೆ.

** 'ಕರ್ನಾಟಕ್' ಈ ಪ್ರದೇಶ ಅಳಿದುಳಿದ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದು, ಈಗಿನ ಕರ್ನಾಟಕದ ಆಗ್ನೇಯ ಭಾಗ, ನೆಲ್ಲೂರ್(ಆಂಧ್ರ), ಈಗಿನ ತಮಿಳ ನಾಡಿನಲ್ಲಿಯ ಚಿಂಗಲಪೆಟ್, ದಕ್ಷಿಣ ಆರ್ಕೊಟ್, ಉತ್ತರ ಆರ್ಕೊಟ್, ತಂಜಾವೂರ್, ಮದುರಾ, ತಿನ್ನಯವೆಲ್ಲಿ ಮತ್ತು ತಿರುಚಿನಾಪಳ್ಳಿ ಜಿಲ್ಲೆಗಳನ್ನು ಒಳಗೊಂಡಿತ್ತು.

*****

6.16

ಇದು ಸಿತಾರವೋ ಇಂಡಿಯನ್ ಗಿಟಾರವೋ?

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಸಂಗೀತದ ಧ್ವನಿಮುದ್ರಣ ಭಾರತದಲ್ಲಿ ಕಾಲಿಟ್ಟಿತು. ಉಸ್ತಾದ್ ಬರಕತುಲ್ಲಾ ನುಡಿಸಿದ ಒಂದು ಧ್ವನಿಮುದ್ರಿಕೆಯ ಮೇಲೆ ಆ ಕಾಲದ ಒಂದೇ ಒಂದು ರೆಕಾರ್ಡಿನ ಒಂದು ಬದಿಯಲ್ಲಿ ಭೂಪ್ ಕಲ್ಯಾಣ್ ರಾಗ, ಇನ್ನೊಂದು ಬದಿಯಲ್ಲಿ ಪೀಲೂ ರಾಗಗಳಿವೆ. ಲೇಬಲ್ಲಿನ ಮೇಲೆ 'ಇಂಡಿಯನ್ ಗಿಟಾರ್' ಎಂದು ಬರೆದಿದೆ. ಹಿಂದುಸ್ತಾನ ಸಂಗೀತದ ಪರಿಚಯವಿಲ್ಲದ ಬ್ರಿಟಿಷ್ ಸಾಹೇಬರು ಮಾಡಿದ ಕರಾಮತ್ತು ಇದು. ಹೀಗೆಯೇ ಶಹನಾಯಿ ಮತ್ತು ನಾದಸ್ವರಗಳಿಗೆ ಇಂಡಿಯನ್ 'ಬ್ಯಾಗಪೈಪರ್' ಎಂದು ಹೆಸರಿಟ್ಟಿದ್ದನ್ನು ಕೇಳಿ ತಮಾಷೆ ಎನ್ನಿಸುತ್ತದೆ. ಆಸ್ಟ್ರೇಲಿಯಾದ ಮಾಯಕೆಲ್ ಕಿನ್ನರ್ ಇವರು ತಮ್ಮ ಡಿಸ್ಕೋಗ್ರಾಫಿಯ ಸಂಶೋಧನೆಯ ಭಾಗವೆಂದು, ಭಾರತದಲ್ಲಿ 1910ರ ತನಕ ಬಿಡುಗಡೆಯಾದ ಸುಮಾರು ಹತ್ತು ಸಾವಿರ ಧ್ವನಿಮುದ್ರಿಕೆಗಳ ಶಾಸ್ತ್ರಬದ್ಧ ಸೂಚಿಯನ್ನು ಇತ್ತಿಚೆಗೆ ಪ್ರಕಟಿಸಿದರು. ಇದು ಧ್ವನಿಮುದ್ರಿಕೆಗಳ ಇತಿಹಾಸದಲ್ಲಿಯ ಒಂದು ಮೈಲಿಗಲ್ಲು.

ಈ ತನಕ ಗಾಯನದ ಬಗ್ಗೆ ನಾವು ದೃಷ್ಟಿ ಹಾಯಿಸಿದ್ದಾಯಿತು. ಆ ಕಾಲದಲ್ಲಿ ಹಾಡುಗಾರಿಕೆಗೆ ಪ್ರಾಶಸ್ತ್ಯವಿದ್ದರೂ ಪ್ರಾಯೋಜಕತೆ ಪಡೆದು ಅನೇಕ ವಾದ್ಯಗಳ ಸಂಗೀತ, 'ಸೋಲೋ' ರೂಪದಲ್ಲಿ ಮತ್ತು ವಾದ್ಯವೃಂದ ರೂಪದಲ್ಲಿ ಬಿಡುಗಡೆ ಮಾಡಿದ್ದೂ ಇದೆ. ಕಲಕತ್ತಾ ಶಹರದಲ್ಲಿಯ ಆ ಕಾಲದ ಖ್ಯಾತ, 'ಕ್ಲಾಸಿಕ್ ಥಿಯೇಟರ್ ಅಂಡ್ ಕಾನ್ಸರ್ಟಿಕಮ್' ಇವರ ಬ್ಯಾಂಡ್ ಭಾವನಗರ್, ಸೂಂತ್, ಝೂಲಾವರ್ ಪ್ರಾಂತಗಳ ಬ್ಯಾಂಡ್, ರಜ್ಜಾಕ್ ಸೂರತ್ ಅವರ ಬ್ಯಾಂಡ್ –ಇವುಗಳ ಧ್ವನಿಮುದ್ರಣ ಮಾಡಲಾಯಿತು. ಅಷ್ಟಾದಾಗ ತಂಜಾವೂರು, ಮೈಸೂರು ಮೊದಲಾದ ದಕ್ಷಿಣದ ರಾಜರು ಸುಮ್ಮನಿರುತ್ತಾರೆಯೇ? ಅವರು ತಮ್ಮ ತಮ್ಮ ಬ್ಯಾಂಡುಗಳ ಧ್ವನಿಮುದ್ರಿಕೆಗಳನ್ನೂ ಮಾಡಿಸಿದರು. ಅಮೃತಸರದ ಜಹಾಂಗೀರ್ ಬ್ಯಾಂಡ್, ಅಲ್ಲಾ ಉದ್ದೀನ್ ಖಾನರ ಮೈಹರ್ ಬ್ಯಾಂಡು, ತಾಜ್ ಗುಲಶನ್ ಪುಶ್ತೋ ಆರ್ಕೇಸ್ಟ್ರಾ, ಮತ್ತು 17ನೇ ಇನ್‌ಫಂಟ್ರಿಯವರ ರೆಜಿಮೆಂಟ್ ಬ್ಯಾಂಡು ಇವೆಲ್ಲ 78 ಆರ್‌ಪಿಎಮ್ ಧ್ವನಿಮುದ್ರಿಕೆಗಳಲ್ಲಿ ಬಂದವು. 'ಇಂಡಿಯನ್ ಬ್ಯಾಗ್‌ಪೈಪರ್' ಎಂದರೆ ಶಹನಾಯಿಯು ಕೆಲವು ಧ್ವನಿಮುದ್ರಿಕೆಗಳು 1910ರ ಮೊದಲೇ ಮಾರುಕಟ್ಟೆಗೆ ಬಂದಿದ್ದವು. ಫಾಜುಲಾಲ್ ಪಂಡಿತ್, ಶೇಖ್ ಮುನ್ನಾ ಹೈದ್ರಾಬಾದ ಪೈಪರ್ಸ್, ತಾಲೀಮ್ ಹುಸೇನ್ ಇವರ ಧ್ವನಿಮುದ್ರಿಕೆಗಳು

ಚೆನ್ನಾಗಿ ಮಾರಾಟವಾಗುತ್ತಿದ್ದವು. ಅಲಿ ಬಕ್ಷ್ ಎಂದು ಬಿಸ್ಮಿಲ್ಲಾರ ಸೋದರಮಾವನ ಹೆಸರಿನಲ್ಲಿಯೆ ತಾಲೀಮ್ ಹುಸೇನರು ಅನೇಕ ರೆಕಾರ್ಡುಗಳನ್ನು ಕೊಟ್ಟಿದ್ದರಂತೆ. ಶಹನಾಯಿಗೆ, 'ರೋಶನಚೌಕಿ' ಎಂಬ ಇನ್ನೊಂದು ಹೆಸರಿದ್ದುದು ಮೈಕೇಲ್ ಕಿನ್ನರರ ಸಂಶೋಧನೆಯ ನಂತರ ಬೆಳಕಿಗೆ ಬಂದಿತು.

ದೇವಸ್ಥಾನದ ಪ್ರಾಂಗಣದಲ್ಲಿ ಮುಂಜಾನೆಯ ಮಸುಕಿನಲ್ಲಿ ಮತ್ತು ಸಂಜೆಯ ಗೋಧೂಳಿಯ ಸಮಯದಲ್ಲಿ ಶಹನಾಯಿಯಲ್ಲಿ ರಾಗಸಂಗೀತ ನುಡಿಸಲಾಗುತ್ತಿತ್ತು. ಈ ರೆಕಾರ್ಡುಗಳಲ್ಲಿ ಆಗಿನ ಕಾಲದ ಪಾರಂಪರಿಕ ಸಂಗೀತ ಕೇಳಲು ಸಿಗುತ್ತದೆ. ಶಹನಾಯಿಗಳಲ್ಲಿಯ ಸಣ್ಣ ಶಹನಾಯಿಗೆ, 'ನಫೀರಿ', 'ಸುಂದ್ರಿ' ಎನ್ನುತ್ತಾರೆ. ಅದರೊಂದಿಗೆ ತಾಳ ಹಿಡಿಯಲು ನುಡಿಸಲಾಗುತ್ತಿದ್ದ ಚರ್ಮವಾದ್ಯಕ್ಕೆ, 'ನಕ್ಕಾರಾ' (ನಗಾರೆ), 'ಚೌಘಡಾ' ಎನ್ನುತ್ತಾರೆ.' ಸುಮಾರು ಐವತ್ತಕ್ಕಿಂತ ಹೆಚ್ಚು ರೆಕಾರ್ಡುಗಳು ಶಹನಾಯಿಗಳಲ್ಲಿ ಇವೆ.

ಬೀನ್ ಅಥವಾ ಪುಂಗಿ ವಾದನದ ರೆಕಾರ್ಡುಗಳೂ ಇವೆ. ಹೀರಾ, ವಿಷ್ಣುನಾಥ್ ಮತ್ತು ಪಣಜಿಯ ರಹೀಮ್ ಬಕ್ಷ್ ಇವರ ಪುಂಗಿಯ ರೆಕಾರ್ಡುಗಳು ಲಭ್ಯವಿವೆ. ವೀಣೆಯ ರೆಕಾರ್ಡು ಎಮ್.ಎನ್ ಚಟರ್ಜಿಯವರದು. ಬೆಂಜೋ ಅಥವಾ ಸರೋದ್ ನುಡಿಸಿದ ಅಫದುಲ್ಲ ಕೈಕುಭ್ ಖಾನ್, ಎಸ್.ಎಮ್ ಚಕ್ರವರ್ತಿಯ ಎಸ್ರಾಜ್ ರೆಕಾರ್ಡು, ಟಿ.ಆರ್ ಅಪ್ಪಾದುರೈ ಅಯ್ಯಂಗಾರ್ ಅವರ ಜಲತರಂಗ, ಅಲಿ ಬಕ್ಷ್ ಅವರ ಸಾರಂಗಿ, ನಾರಾಯಣಸ್ವಾಮಿ ಅಯ್ಯರ್ ಅವರ ವಯೋಲಿನ್, ಶಶಿಭೂಷಣ ಅಧಿಕಾರಿ ಅವರ ಹಾರ್ಮೋನಿಯಮ್, ಹೀಗೆ ಅನೇಕ ವಾದ್ಯಸಂಗೀತದ ರೆಕಾರ್ಡುಗಳು ದೊರೆತಿವೆ.

ಇವುಗಳಿಗೆಲ್ಲಾ ಪ್ರಾಯೋಜಕತೆ ಇದ್ದುದರಿಂದ ಕಂಪನಿಗಳು ರೆಕಾರ್ಡು ಮಾಡಿ ಕೊಡುತ್ತಿದ್ದವು. ಭಾವನಗರದ ಮಹಾರಾಜರು ತಮ್ಮ ರಾಜಕುಮಾರಿಯ ಸಿತಾರ್ ವಾದನವನ್ನು ಹೀಗೆಯೇ ರೆಕಾರ್ಡು ಮಾಡಿಸಿದ್ದರು. ವಿಲಾಯತ್ ಖಾನರ ಅಜ್ಜ ಇಮದಾದ್ ಖಾನರ ಒಂದೇ ಒಂದು ರೆಕಾರ್ಡು ಮೈಸೂರು ಮಹಾರಾಜರ ಕೃಪೆಯಿಂದ ಮಾಡಲ್ಪಟ್ಟಿರುವದು ಒಂದು ವಿಶೇಷ ಸುದ್ದಿ. ಇದರ ಮರುಮುದ್ರಣ (ಸಿಎಮ್‌ಸಿ 882507-08) 1994ರಲ್ಲಿ ಮಾಡಲಾಯಿತು. ಮೂಲಪ್ರತಿ ಬಂದದ್ದು 100 ವರ್ಷಗಳ ಹಿಂದೆ.

*****

6.17

ಹಿಂದೂಸ್ತಾನಿ ಸಂಗೀತ ಮತ್ತು ಸೂಫಿ ಪ್ರಣಾಲಿ

ಕೆಲವು ವರ್ಷಗಳ ಮೊದಲಿನ ಮಾತು. ಅಂತರ್ಜಾಲದಲ್ಲಿ ಮೀಯುತ್ತಿದ್ದಾಗ, ಪಾಕಿಸ್ತಾನದ ಗಝಲ್ ಗಾಯಕ ರಿಯಾಸುದ್ದೀನ ಹಾಡುತ್ತಿದ್ದ. ಒಂದು ಹತ್ತು ನಿಮಿಷದ ಕ್ಲಿಪ್ ಯು ಟ್ಯೂಬಿನಲ್ಲಿ ಸಿಕ್ಕಿತ್ತು. ಆತ ಹಾಡುತ್ತಿದ್ದುದು ಅಮೀರ ಖುಸ್ರೋವಿನ ಗಝಲ್ ಎಂದು ಗೊತ್ತಾದ ಕೂಡಲೇ, ಇಡೀ ಕ್ಲಿಪ್‌ನ್ನು ತನ್ಮಯತೆಯಿಂದ ಆಲಿಸಿದೆ. ಮಧ್ಯದಲ್ಲಿಯೇ ಆತ ಹಾಡುವುದನ್ನು ಬಿಟ್ಟು ಕೀರ್ತನಕಾರರ ಶೀವಿಯಲ್ಲಿ ತನ್ನ ಮಾತು ಆರಂಭಿಸಿದ; "ಆಜ ಕೇ ತಾರೀಕ್ ಮೆಂ ಹಮ್ ಗೋಪಾಲಕೆ ಗೀತ್ ಗೋಬಿಂದ್ ಪರಬಂಧ ಸುನಾರಹೆ ಹೈ –ಗೀತ್ ಗೋಬಿಂದ್, ನಿರಾಕಾರ್, ನಿರ್ಗುಣ್...." (ಇವತ್ತಿನ ಕಾರ್ಯಕ್ರಮದಲ್ಲಿ ತಮಗೆ "ಗೀತ ಗೋವಿಂದ"ದ ಗೋಪಾಲ(ನಾಯಕ)ನ ರಚನೆಯನ್ನು ಹಾಡುತಿದ್ದೇವೆ... ಗೀತ ಗೋಬಿಂದ, ನಿರಾಕಾರ, ನಿರ್ಗುಣ .ಇತ್ಯಾದಿ.." ಸಂಸ್ಕೃತ ಭಾಷೆಯ ಅಪಭ್ರಂಶ ಶಬ್ದಗಳು ಎಡಬಿಡದೇ ಹೊರ ಬೀಳುತ್ತಿದ್ದವು. "ಯಹ್ ಥಾ ಗೋಪಾಲ ಕಾ ಸವಾಲ್, ಜವಾಬ್ ಮೇ ಜನಾಬ್ ಅಮೀರ್ ಖುಸ್ರೋನೇ ಖಟ್ ರಾಗಮೇ ಯಹ್ ಬಾತೇ ಬತಾಯಿ, ಸುನಾಯೀ. ಯೇ ರಾಗ ಕಾ ನಾಮ್ ಪೆಹಲೆ ಖಟ್ ನಹೀಂ ಥಾ.." (ಗೋಪಾಲನ ಈ ಪ್ರಶ್ನೆಗೆ ಉತ್ತರರೂಪವಾಗಿ ಅಮೀರ ಖುಸ್ರೋ ಖಟ್ ರಾಗದಲ್ಲಿ ಜವಾಬು ಕೊಟ್ಟ (ರಾಗ) ಹಾಡಿದ. ಈ ರಾಗದ ಮೊದಲಿನ ಹೆಸರು ಖಟ್ ಎಂದು ಇರಲಿಲ್ಲ ." 30 ಕಿ.ಮಿ. ಸ್ಪೀಡಿನಲ್ಲಿದ್ದ ಡ್ರಾಯವರ್ ಕಾರಿನ ಒಮ್ಮೆಲೆ ಗೇರ್ ಬದಲಾಯಿಸಿ ಹೈ ಸ್ಪೀಡಿನಲ್ಲಿ ಹೋಗುವ ತರಹದಲ್ಲಿ ರಿಯಾಸುದ್ದೀನ ಮತ್ತು ಆತನ ಇತರ ಸಂಗಡಿಗರು ಒಮ್ಮಲೆ ಕವ್ವಾಲಿ ಹಾಡುವ ಭಂಗಿಯಲ್ಲಿ ಚಪ್ಪಾಳೆ ತಟ್ಟುತ್ತಾ ಕವ್ವಾಲಿಯ ತರಾನಾ ಪ್ರಾರಂಭಿಸಿದರು.

ಇದೊಂದು ಅಮೀರ್ ಖುಸ್ರೋನ ಕಾಲದ ಮಿಥಕವಾದರೂ (myth), ದಂತಕತೆ ಎಂದು ಎನಿಸಿಕೊಂಡರೂ, ದೇವಗಿರಿಯಿಂದ ಅಲ್ಲಾವುದ್ದೀನ್ ಖಿಲಜಿ ಆ ಕಾಲದ ವಿಖ್ಯಾತ ಸಂಗೀತಜ್ಞನೆಂದು ಹೆಸರು ಪಡೆದ ಗೋಪಾಲನಾಯಕನನ್ನು (ಈತ ಕನ್ನಡಿಗ) ಸೆರೆಹಿಡಿದು ದಿಲ್ಲಿಗೆ ಒಯ್ದನಂತೆ, ಅಮೀರ್ ಖುಸ್ರೋ ಆ ಕಾಲದ ಖ್ಯಾತ ಸೂಫಿ ಪ್ರಣಾಲಿಯ ಕವಿ, ಸಂಗೀತಕಾರ ಹಾಗೂ ಅಲ್ಲಾವುದ್ದೀನ ಖಿಲಜಿಯ ಆಸ್ಥಾನದ ಫಾರೀಸಿ ಭಾಷೆಯ ತಜ್ಞನೆಂದೂ, ಕವ್ವಾಲಿ ಎಂಬ ಹಿಂದೂಸ್ತಾನೀ ಸಂಗೀತ ಪ್ರಕಾರದ ಪ್ರವರ್ತಕನೆಂದೂ ಇತಿಹಾಸದ ಒಂದು ದಾಖಲೆ ಇದೆ. ಅಂತೆಯೇ, ಕವಿ ಜಯದೇವನ

ಗೀತಗೋವಿಂದ ಕಾವ್ಯ ಈ ಮಿಥಕ/ದಂತಕತೆಯ ಕಾಲಕ್ಕಿಂತ 50-60 ವರ್ಷದ ಮೊದಲಿನದು. ಆಗ ಈ ಅಷ್ಟಪದಿಗಳು ಆಸೇತು ಹಿಮಾಚಲ ಪರ್ಯಂತ ನೃತ್ಯನಾಟಕಗಳ ರೂಪದಲ್ಲಿ, ರಾಜಮಹಾರಾಜರ ಓಲಗಗಳಲ್ಲಿ, ಸಂಗೀತ ಕಚೇರಿಗಳು ನಡೆಯುತ್ತಿರ ಬಹುದಾದ ಸಂಭವವನ್ನು ಎಲ್ಲರೂ ಒಪ್ಪಿಕೊಳ್ಳುವಂತಿದೆ. ಖ್ಯಾತ ಕಾದಂಬರಿಕಾರ ಡಾ. ಭೈರಪ್ಪನವರು ಇಂತಹ ಒಂದು ರೂಪಕವನ್ನು ಅವರ ಕಾದಂಬರಿ 'ಸಾರ್ಥ'ದಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಈಗಲೂ, 21ನೇ ಶತಮಾನದಲ್ಲಿ ಜಯದೇವನ ಅಷ್ಟಪದಿ ಕರ್ನಾಟಕ ಸಂಗೀತ/ಭರತನಾಟ್ಯ ಪ್ರಕಾರದಲ್ಲಿ, ಒಡಿಸ್ಸಿ ನೃತ್ಯ-ಸಂಗೀತದಲ್ಲಿ, ಇಷ್ಟೇ ಏಕೆ, ಈಶಾನ್ಯ ದಿಕ್ಕಿನಲ್ಲಿಯ ಸೆರೈಕಲ್ಲಾದ ಮುಖವಾಡ ಧರಿಸಿ ನರ್ತಿಸುವ ಛಾವೋ ನೃತ್ಯದಲ್ಲಿ ಕೂಡ ಅಷ್ಟಪದಿಗಳನ್ನು ಹಾಡಿದ್ದನ್ನು, ಕುಣಿದದ್ದನ್ನು ನಾನು ನೋಡಿದ್ದೇನೆ. ಹೀಗೆ ಗೋಪಾಲನಾಯಕನ ಹಾಡುಗಾರಿಕೆ ಅವನಿಗೆ ಗೊತ್ತಾಗದಂತೆ ಅಮೀರ್ ಖುಸ್ರೋ ಲಕ್ಷ್ಯಪೂರ್ವಕವಾಗಿ ಕೇಳಿ ಅದರಲ್ಲಿನ ಸಂಸ್ಕೃತ ಶಬ್ದಗಳನ್ನು ಅರ್ಥೈಸಲಾಗದೇ, ಶಬ್ದಗಳಿಗೆ ಪೂರಕವಾಗುವಂತಹ ವ್ಯಂಜನಗಳನ್ನು ಉಪಯೋಗಿಸಿ, ತನ್ನದೇ ಆದ ವಿಶಿಷ್ಟ ಪ್ರಕಾರದ 'ತರಾನಾ' ಪ್ರಕಾರ ಬಳಕೆಯಲ್ಲಿ ತಂದಿರಲೂ ಸಾಕು. ಕೊನೆಗೆ ಅಮೀರ ಖುಸ್ರೋ ಗೋಪಾಲನಾಯಕನನ್ನು ಸೋಲಿಸಿದನಂತೆ. ಕನ್ನಡದಲ್ಲಿಯ ಖ್ಯಾತ ತರಾಸು ಅವರ 'ಹಂಸಗೀತೆ' ಕಾದಂಬರಿಯ ಆಧಾರಿತ ಹಿಂದಿ ಚಲನಚಿತ್ರವಾದ ಬಸಂತ್ ಬಹಾರದಲ್ಲಿ, ಪಂ. ಭೀಮಸೇನ ಜೋಶಿಯವರ ಹಿಂದೂಸ್ತಾನಿ ಖ್ಯಾಲ್ ಹಾಡುಗಾರಿಕೆಯಲ್ಲಿ. ಹಂಸಗೀತೆಯ ನಾಯಕ ಭಾರತಭೂಷಣ (ಮನ್ನಾಡೇ) ಜೋಶಿಯವರನ್ನು ಸೋಲಿಸಿದ್ದನ್ನು ಕಣ್ಮುಂದೆ ತಂದರೆ, ಈ ದಂತಕತೆಯ ಸತ್ಯ-ಅಸತ್ಯದ ಅರಿವು ಆಗಬಹುದು. ಈ ದಂತಕತೆಯಲ್ಲಿಯೇ ಈಗಿನ ಹಿಂದುಸ್ತಾನೀ ಸಂಗೀತ ಪ್ರಕಾರದ, ಅದರೊಂದಿಗೆ ಸೂಫೀ ಪ್ರಣಾಲಿಯ ಹುಟ್ಟು ಅಡಗಿದೆ ಅಂದರೆ ಅತಿಶಯೋಕ್ತಿಯಾಗಲಾರದು.

ಇಸ್ಲಾಂ ಧರ್ಮದ ಸಹಿಷ್ಣುತೆಯ ಮುಖವಾಡವೆಂದರೆ 'ಸೂಫಿ ಪ್ರಣಾಲಿ' ಎಂದು ಸ್ವಲ್ಪದರಲ್ಲಿ ಹೇಳಬಹುದು. ಇದರ ಉಗಮ ಕೂಡ ಪರ್ಶಿಯಾದಲ್ಲಿಯೇ. ವಿಶ್ವದಲ್ಲಿ ಖಡ್ಗ, ಬಾಣಗಳ ಸಹಾಯದಿಂದ ಧರ್ಮಪ್ರಚಾರ ಇಸ್ಲಾಂ ಧರ್ಮದಲ್ಲಿ ಮತ್ತು ಕ್ರಿಶ್ಚಿಯನ್ ಧರ್ಮದಲ್ಲಿ ಸಾಕಷ್ಟು ಆದದ್ದು ಇತಿಹಾಸದ ಪುಟಗಳಲ್ಲಿ 'ಸಾವಿರ ವರ್ಷದ ಯುದ್ಧ'ಗಳಲ್ಲಿ ಸ್ಪಷ್ಟವಿದೆ. ಹಿಂಸಾಚಾರದಿಂದ ಉತ್ಪನ್ನವಾದ ಧರ್ಮಪ್ರಸಾರದ ಬಳಿಕ ಸಮಾಜದಲ್ಲಿಯ ಏರುಪೇರುಗಳಲ್ಲಿಯ 'ಗಾಯ'ಗಳಿಗೆ ತಾತ್ಪೂರ್ತಿಕ ರೀತಿಯಲ್ಲಿ ಅನುಲೇಪಕ್ಕಾಗಿ ಬೇಕಾದ 'ಮುಲಾಮ' ಅಂದರೆ 'ಸೂಫಿ' ಸಂಸ್ಕೃತಿಯ ಆಧಾರ ಎಂದು ಹೇಳಬಹುದು. ಇರಾನ, ಪರ್ಶಿಯಾ, ತುರ್ಕಸ್ತಾನ್ ಇಂತಹ ಭೌಗೋಲಿಕ ಪ್ರದೇಶಗಳಲ್ಲಿಯೇ ಸೂಫಿ ಸಂಪ್ರದಾಯ ಬೆಳೆಯಿತು. ಇದೇ ಮುಂದೆ ಉಜಬೇಕಿಸ್ತಾನ್, ಕಂದಹಾರ್ ಮಾರ್ಗದಿಂದ ಸಿಂಧೂ ನದಿಯನ್ನು ದಾಟಿ ಭಾರತದಲ್ಲಿಯೂ, ಕಾಶ್ಮೀರದಲ್ಲಿ (ಸೂಫಿಯಾನಾ ಮೌಸಿಕೀ-ಸೂಫೀ ಸಂಗೀತ), ಸಿಂಧ್, ಪಂಜಾಬ್‌ದಲ್ಲಿ ವಿಸ್ತಾರವಾಗಿ ಹರಡಿತು. ಸಾಧಾರಣ ಅದೇ ಸುಮಾರಿಗೆ ಅಂದರೆ 11, 12ನೇ ಶತಮಾನದಲ್ಲಿಯೇ ಉತ್ತರ ಹಿಂದುಸ್ತಾನದಲ್ಲಿ ಭಕ್ತಿ ಪಂಥದ ನಾಂದಿಯಾಯಿತು. ಹಿಂದುಸ್ತಾನೀ ಸಂಗೀತದ ಪ್ರಭಾವ ಈ ಭಕ್ತಿಸಂಗೀತದಲ್ಲಿಯೂ ಆಗಲಿಕ್ಕೆ ಪ್ರಾರಂಭವಾಯಿತು. ಗಜನೀ ಮಹಮೂದನ

ಅನೇಕ ಹಿಂಸಾತ್ಮಕ ದಾಳಿಗಳಿಂದ ಜರ್ಝರಿತವಾದ 'ಹಿಂದವೀ' ರಾಜ್ಯದಲ್ಲಿ ಇಸ್ಲಾಂ ಧರ್ಮದ ಪ್ರಸಾರ ಅವಿರತವಾಗಿ, ಉತ್ತರ ಭಾರತದಲ್ಲಿ ಆಯಿತು. ಅದರದೇ 'ಭಕ್ತಿ' ಮಾರ್ಗದ ಸೂಫಿ ಪ್ರಣಾಲಿಯು ಜನಸಾಮಾನ್ಯರಿಗೆ ಇಷ್ಟವಾಯಿತಷ್ಟೆ ಅಲ್ಲ, ಚಿಶ್ತಿ ಮನೆತನದ 'ಗುರು' ಖ್ವಾಜಾ ಮೊಯ್ನುದ್ದೀನನು ರಾಜಾಸ್ಥಾನದ ಅಜಮೇರ್ ತನ್ನ ಪ್ರಣಾಲಿಯನ್ನು ಪ್ರಾರಂಭಿಸಿದ. ಈಶಾನ್ಯದಲ್ಲಿ ಸುಹ್ರವರ್ದಿ ಮನೆತನ ಸೂಫೀ ಪ್ರಭಾವವನ್ನು ಬೀರಿತು.

ದಕ್ಷಿಣ ಭಾರತದ ಕೇರಳ, ದಕ್ಷಿಣ ಕನ್ನಡ ಜಿಲ್ಲೆ, ಕನ್ಯಾಕುಮಾರಿಯವರೆಗೂ ಸಮುದ್ರ ಮಾರ್ಗವಾಗಿ, ಮೇಲ್ಕಾಣಿಸಿದ ಪ್ರದೇಶಗಳೊಡನೆ ಅವಿರತ ವ್ಯಾಪಾರ ನಡೆಯಿತು. ಅರಬಸ್ತಾನದ ವ್ಯಾಪಾರಿಗಳ ಮುಖಾಂತರ ಇಸ್ಲಾಂ ಧರ್ಮ, ಉತ್ತರ ಕನ್ನಡ ಜಿಲ್ಲೆಯ ಭಟಕಳದಿಂದ, ಒಳನಾಡಿನ ಹೊನ್ನಾವರ, ದಕ್ಷಿಣಕ್ಕಿದ್ದ ಮಲ್ಪೆ, ಮಂಗಳೂರು, ಕೊಚಿನ್ ಮಾರ್ಗವಾಗಿ ದಕ್ಷಿಣದಲ್ಲಿ ಹರಡಿತು. ಸರಕುಗಳ ಆಯಾತ-ನಿರ್ಯಾತದೊಂದಿಗೆ ಧಾರ್ಮಿಕ ಭಾವನೆಗಳ, ಸಾಂಸ್ಕೃತಿಕ ವಿಷಯಗಳ, ಮತ್ತು ಭಾಷೆಗೆ ಸಂಬಂಧಿಸಿದ ಶಬ್ದ, ನಿರೂಪಣೆ, ವಿವೇಚನೆ ಇವುಗಳ ಆದಾನ-ಪ್ರದಾನ ಮುಂದಿನ ಶತಮಾನಗಳಲ್ಲಿ ಸಾವಕಾಶವಾಗಿ ನಡೆಯಿತು. ನಮ್ಮ ಕರ್ನಾಟಕ ರಾಜ್ಯ ಕೂಡ ಇದಕ್ಕೆ ಅಪವಾದವಲ್ಲ.

ದಿಲ್ಲಿಯಿಂದ ದಕ್ಷಿಣದ ದೇವಗಿರಿಗೆ (ದೌಲತಾಬಾದ) ಬಂದ ಖ್ವಾಜಾ ಬಂದೇ ನವಾಜ ಮೊದಲು ಬಹಮನಿ ರಾಜ್ಯದ ರಾಜಧಾನಿಯಾದ ಗುಲಬರ್ಗಾದಲ್ಲಿ ನೆಲೆಸಿದ್ದ. ಅಲ್ಲಿ ಮತ್ತು ಕರ್ನಾಟಕದ ಇತರ ಜಿಲ್ಲೆಗಳಲ್ಲಿ ಸೂಫೀ ಪ್ರಣಾಲಿ ಪ್ರಚಲಿತವಾಗಲಿಕ್ಕೆ ಕಾರಣೀಭೂತನಾದ. ಮುಂದೆ ಬಹಮನಿ ರಾಜ್ಯ ವಿಭಾಗವಾಗಿ ಇತರ ಮುಸಲ್ಮಾನ ರಾಜ್ಯಗಳಲ್ಲಿ ಬಿಜಾಪುರದ ಆದಿಲ್ ಶಾಹಿ, ಬೀದರದ ಬರೀದ್ ಶಾಹಿ, ಗೋಲಕೊಂಡಾದ ಕುತುಬ್ ಶಾಹಿ, ಅಹಮದನಗರದ ನಿಝಾಮಶಾಹಿ, ಇತ್ಯಾದಿ ರಾಜ್ಯಗಳ ಸುಲ್ತಾನರೂ, ಸೂಫೀ ಪಂಥದ ಅನುಯಾಯಿಗಳಾಗಿದ್ದರಿಂದಲೇ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಸೂಫೀ ಸಂಗೀತ/ಸೂಫೀ ತತ್ತ್ವಜ್ಞಾನಗಳು ನೆಲೆಗೊಂಡವು.

ಬಿಜಾಪುರದ ಇಬ್ರಾಹಿಂ ಆದಿಲ್ ಶಾಹನ ಸಂಗೀತ ಪ್ರೇಮ, ಅವನ ಸರಸ್ವತೀ ದೇವಿಯ ಆರಾಧನೆ ಎಲ್ಲರಿಗೂ ಗೊತ್ತಿದ್ದ ವಿಷಯವಾಗಿದ್ದು, ದಕ್ಷಿಣ ಭಾರತದಲ್ಲಿ ಹಿಂದೂಸ್ತಾನೀ ಸೂಫೀ ಸಂಗೀತದ ಬೀಜ ಇವನ ಕಾಲದಲ್ಲಿಯೇ ಬಿತ್ತಲಾಗಿತ್ತು ಎಂದು ನಿರ್ವಿವಾದವಾಗಿ ಹೇಳಬಹುದು. ಮುಸಲ್ಮಾನರ ಏಕೇಶ್ವರವಾದ, ಶೈವ ಧರ್ಮದ ಪ್ರಾಬಲ್ಯವಿದ್ದ ಪ್ರದೇಶಗಳಲ್ಲಿ ಆಗಲೇ ಆಳಿದ ವಿಜಯನಗರ ಸಾಮ್ರಾಜ್ಯದ ಧರ್ಮ-ಸಹಿಷ್ಣುತೆಯ ವಾತಾವರಣದಲ್ಲಿ ಒಂದೆರಡು ಶತಮಾನಗಳಲ್ಲಿ ಹುಲುಸಾಗಿ ಬೆಳೆಯಿತು. ಅಂತೆಯೇ ಸೂಫೀ ಸಂಗೀತ ಸಂಸ್ಕೃತಿ ಕೂಡ ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದ ವೀರಶೈವಧರ್ಮಕ್ಕೂ, ಸೂಫೀ ಪಂಥಕ್ಕೂ ಅನೇಕ ಸಮಾನ ಗುಣಧರ್ಮಗಳಿದ್ದ ಅಂಶಗಳನ್ನು ಖ್ಯಾತ ವಿಮರ್ಶಕರಾದ ಡಾ. ರಂಜಾನ್ ದರ್ಗಾ ಆಗಾಗ ತಮ್ಮ ಲೇಖನಗಳ ಮೂಲಕ ಗಮನಕ್ಕೆ ತರುತ್ತಲೇ ಇದ್ದಾರೆ.

ಅತ್ಯಂತ ಕುಶಲ ತಬಲಾವಾದಕ ಡಾ. ಅನೀಶ ಪ್ರಧಾನ್ ನನ್ನ ಸಂಗೀತಪ್ರಿಯ ಮಿತ್ರರಲ್ಲಿ ಒಬ್ಬರಾಗಿದ್ದು, ಸಂಗೀತ ಇತಿಹಾಸದಲ್ಲಿಯೇ ಸಂಶೋಧನೆ ಮಾಡಿದ್ದಾರೆ. ಇದೇ ವಿಷಯದ ಬಗ್ಗೆ ಫೋನಿಸಿದಾಗ ಅವರು ಕೂಡಲೇ ಅಂತರ್ಜಾಲದ ಮೂಲಕ ಒಂದು ಧ್ವನಿಮುದ್ರಣವನ್ನು ಕಳಿಸಿಕೊಟ್ಟರು. ಇದರಲ್ಲಿ ತಮಿಳುನಾಡಿನಲ್ಲಿ ಪ್ರಚಲಿತವಿರುವ ಹಿಂದೂಸ್ತಾನಿ ಸೂಫೀ ಸಂಗೀತದ ಮಾದರಿಯಿದೆ. ಕೇರಳದ ಮಲಬಾರ್ ಪ್ರದೇಶದ ಸಮುದ್ರ ದಂಡೆಯ ಊರುಗಳಲ್ಲಿ ಹಿಂದುಸ್ತಾನೀ ಸೂಫಿ ಸಂಗೀತವು ಮಲೆಯಾಳೀ ಭಾಷೆಯಲ್ಲಿದೆ, ಇದರಂತೆ ಅಸ್ಸಾಮೀ ಭಾಷೆಯಲ್ಲಿ ಅಜಮೇರದ (ರಾಜಸ್ಥಾನ) ಖ್ವಾಜಾ ಮೋಯಿನುದ್ದೀನರ ಸ್ತುತಿಯನ್ನು ಹಿಂದುಸ್ತಾನೀ ಸಂಗೀತ ಪದ್ಧತಿಯಲ್ಲಿ ಇದ್ದುದನ್ನು ಕಾಣುತ್ತೇವೆ. ಇದರ ಬಂಗಾಲಿ ಭಾಷೆಯ ಅನುವಾದದ ಒಂದು ಪದ್ಯ ಚೈತನ್ಯ ಮಹಾಪ್ರಭುವಿನ ಕೀರ್ತನ್ನ್ಯ ಪರಂಪರೆಯಲ್ಲಿ ಇದ್ದು, ಅರೆ ಪ್ರಜ್ಞಾವಸ್ಥೆಯಲ್ಲಿ ಕುಣಿದಾಡುತ್ತಾ ಹಾಡಿದ 'ಕೀರ್ತನೆ'ಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಇದೆಲ್ಲ ಸೂಫೀ ಪ್ರಣಾಲಿಯ ಸಂಗೀತ ರೂಪವು ಭಾರತದ ದಕ್ಷಿಣೋತ್ತರವಾಗಿ ಪ್ರವಾಸ ಮಾಡಿದ ನಿದರ್ಶನವಾಗಿದೆ. ಇಸ್ಲಾಂ ಧರ್ಮದ ಪೈಗಂಬರನಿಗೆ ಅರ್ಪಿತವಾದುವು ಎಂದು ಬೇರೆ ಹೇಳಬೇಕಾಗಿಲ್ಲ. ಅಮೀರ್ ಖುಸ್ರೋ ಪರ್ಶಿಯನ್ ಭಾಷೆಯಲ್ಲಿಯೂ, ಮುಂದೆ 'ಉರ್ದು' ಎಂದು ಹಿಂದುಸ್ತಾನದಲ್ಲಿ ಹುಟ್ಟಿದ 'ಹಿಂದವೀ' ಭಾಷೆಯಲ್ಲಿಯೂ ಕಟ್ಟಿದ ಅನೇಕ ಕೃತಿಗಳು ಈಗಲೂ ಹಿಂದುಸ್ತಾನೀ ಪದ್ಧತಿಯ ಗಾಯಕ, ಗಾಯಕಿಯರು ಹಾಡುತ್ತಿರುತ್ತಾರೆ. ಜಯಪುರ ಪದ್ಧತಿಯಲ್ಲಿ ಶಿಕ್ಷಣ ಪಡೆದ ಕರ್ನಾಟಕದ ಸ್ಮಿತಾ ಬೇಲೂರು ಇಂತಹ ಸೂಫೀ ಸಂಪ್ರದಾಯದ ಹಾಡುಗಳನ್ನು ಹಾಡಿ ತುಂಬಾ ಖ್ಯಾತಿ ಪಡೆದದ್ದು ಸ್ತುತ್ಯ. ಅತ್ಯಂತ ಉಚ್ಚ ಪದವಿಯನ್ನು ಐಐಟಿ –ತಾಂತ್ರಿಕ ವಿಷಯದಲ್ಲಿ ಪಡೆದರೂ ಹಿಂದುಸ್ತಾನೀ ಗಾಯನದಲ್ಲಿಯೇ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಮನ ಕುಂಥಮೌಲಾ'* ಮತ್ತು 'ಚಾಪ ತಿಲಕ'** ಇವೆರಡನ್ನೂ ಅತ್ಯಂತ ಸುಂದರವಾಗಿ ಪ್ರಸ್ತುತಿಸುತ್ತಾರೆ. ಇವರಂತೆ ಮತ್ತೊಬ್ಬ ಕನ್ನಡಿತಿ ರಾಧಿಕಾ ನಾಯಕ (ಇವರೂ ಸುಶೀಲಾ ರಾಣೀ ಪಟೇಲರ ಶಿಷ್ಯೆ) ಮುಂಬಯಿಯಲ್ಲಿ ಆದ ಕಬೀರ ಫೆಸ್ಟಿವಲ್‌ದಲ್ಲಿ ಸೂಫಿ ಸಂಗೀತವನ್ನು ಪ್ರಸ್ತುತಿಸಿದ್ದರು.

ಹಿಂದುಸ್ತಾನೀ ಸಂಗೀತದ ಉಗಮ ಮತ್ತು ಬೆಳವಣಿಗೆ ಕೂಡ ಇಸ್ಲಾಂ ಮತದ ಸೂಫೀ ಪಂಥದಿಂದಲೇ ಆಯಿತು ಎಂಬುದನ್ನು ನಿರ್ವಿವಾದವಾಗಿ ಹೇಳಬಹುದು. ಮುಸಲ್ಮಾನ ಗವಯಿಗಳ ಅನೇಕ ಚೀಝುಗಳು (ಬಂದಿಶ್ –ನಾಲ್ಕು ಸಾಲಿನ ಸ್ಥಾಯಿ+ ಅಂತರಾಗಳಿದ್ದ ಸಾಹಿತ್ಯ) ಬೇರೆ ಬೇರೆ ರಾಗಗಳಲ್ಲಿ ಕಟ್ಟಿದ್ದು ಈಗಲೂ ಕೇಳಸಿಗುತ್ತವೆ. ಅಸ್ಲಾಂ ಖಾನರ ದೇವಕೌಂಸ್ ರಾಗದಲ್ಲಿ 'ದೇವರ ದೇವ ಮಹಾದೇವ' 16 ಮಾತ್ರೆಯ ತ್ರಿತಾಳದಲ್ಲಿ ಕಟ್ಟಿದ್ದು ಶಿವನನ್ನು ಹೊಗಳಿ ಬರೆದದ್ದು ಒಂದು ಮಾದರಿಯಾದರೆ, ಮತ್ತೊಂದು ಪಂ. ಸಿ.ಆರ್. ವ್ಯಾಸ್ (ಇವರು ಬೆಳಗಾವಿಯ ಜಗನ್ನಾಥ ಪುರೋಹಿತ ಅವರ ಶಿಷ್ಯರು), 'ಖ್ವಾಜಾ ದೀನ್ ದುನಿಯಾ ಮೆ' ಈ ಹಾಡು 10 ಮಾತ್ರೆಗಳ ಝುಪತಾಳದಲ್ಲಿ ಕಟ್ಟಿದ್ದು ಸೂಫೀ ಹಾಡುಗಾರರ ಮತ್ತೊಂದು ಮಾದರಿ. ಇದು ಶುದ್ಧ ಸಾರಂಗ ರಾಗದಲ್ಲಿದೆ.

ಹಿಂದುಸ್ತಾನೀ ಸಂಗೀತದಲ್ಲಿ 'ಕಲಮೀ' ಸಂಗೀತಕ್ಕೂ ಪ್ರಾಧಾನ್ಯವಿದೆ. ಉರ್ದು, ಪರ್ಶಿಯನ್, ಬ್ರಜ್ ಭಾಷೆ, ಮೈಥಿಲಿ ಈ ಬರೆಹ–ಭಾಷೆ ಮತ್ತು ಆಡುಭಾಷೆಗಳ ಶಬ್ದ ಪ್ರಯೋಗ ನಾವು ನೂರಾರು ಬಂದಿಶ್‌ಗಳಲ್ಲಿ ಕಾಣಬಹುದು. ಪ್ರತಿಯೊಬ್ಬ ಸಂಗೀತಕಾರ ತನಗೆ ಅನಿಸಿದಂತೆ ಖ್ಯಾಲ್ ಗಾಯನದ ಪ್ರಸ್ತುತಿಯಲ್ಲಿ ಬದಲಾವಣೆ ಮಾಡುತ್ತಲೇ ಇರುತ್ತಾನೆ. ಸಂಗೀತ ಮತ್ತು ಸಾಹಿತ್ಯ ಇವೆರಡರ ಒಡನಾಟದಿಂದಲೇ ಸಂದೇಶವು ಕೇಳುವವರ ಮೈ–ಮನಗಳಲ್ಲಿ ಸೇರುತ್ತದೆ ಎಂಬುದಕ್ಕೆ ಈ ಮುಸಲ್ಮಾನ ಸಂಗೀತಕಾರರು ಬರೆದು ಹಾಡಿದ ಅನೇಕ ಬಂದಿಶ್‌ಗಳನ್ನು ಉದಾಹರಣೆ ಎಂದು ಕೊಡಬಹುದು. 'ಗೋಕುಲ ಗಾಂವಕಾ ಛೋರಾ' ಅಂದರೆ ಕೃಷ್ಣ, 'ಬರಸಾನೇ ಕಿ ನಾರ' ಅಂದರೆ ರಾಧಾ, (ಇವೆರಡೂ ಊರುಗಳು 2–3 ಕಿ.ಮಿ. ಅಂತರದಲ್ಲಿಯೇ ಇವೆ!). 'ಇನ್ ದೋನೋ ನೆ ಮೊಹ್ ಲಿಯೊ ಹೈ, ರಹೆ ನಿಹಾರ್ ಕೆ – ಇದೊಂದು ಮುಲ್ತಾನಿ ರಾಗದಲ್ಲಿ ಮುಸಲ್ಮಾನ ಕವಿ 'ಸದಾರಂಗ' 16 ಶಬ್ದಗಳಲ್ಲಿ ಕಟ್ಟಿದ ಸ್ಥಾಯಿ ಮತ್ತು ಅಂತರಾ. ಪಂ. ಭೀಮಸೇನ ಜೋಶಿಯವರ ಒಂದು ತಾಸಿನ ಹಾಡಿನಲ್ಲಿ ಈ 16 ಶಬ್ದಗಳಲ್ಲಿ ಅಡಗಿದ ಭಾವನೆಯನ್ನು ವ್ಯಕ್ತಪಡಿಸಿದ್ದುದನ್ನು ನಾನು ಕೇಳಿ ಆನಂದಿಸಿದ್ದೇನೆ. ಈ 16 ಶಬ್ದಗಳಲ್ಲಿನ ಸುಪ್ತ ಸಂಗೀತ ಪ್ರಜ್ಞೆಯ ಸಾಮರ್ಥ್ಯಕ್ಕೆ ಮೇರೆ ಇಲ್ಲ. ಇದೇ ರೀತಿ ಮೇಲೆ ಬರೆದ ಅಮೀರ ಖುಸ್ರೋರವರ 'ಕುಂಥಮೌಲಾ' ಸಂತ ಕಬೀರನಾಗಲಿ ಅಥವಾ ಕೃಷ್ಣನನ್ನು ಒಲಿಸಲು ಹಾಡುತ್ತಾ ಅಲೆಯುವ ಮೀರಾಬಾಯಿ ಆಗಲಿ, 'ಮೌಲಾ, ಮೌಲಾ, ಅಲಿ–ಅಲಿ' ಎಂದು ಕರುಣೆಯ ಆರ್ತಸ್ವರದಿಂದ 'ಪುಕಾರ' ಮಾಡುವ ಮತ್ತೊಬ್ಬ ಹಿಂದವಿ ಕವಿ ಬುಲ್ಲಾಶಾ. ಇರಲಿ, ಅಸ್ಸಾಂ ಪ್ರದೇಶದ ಝಿಕ್ರಿಯ ವೈಷ್ಣವ ಭಜನೆಯ ರೂಪದಲ್ಲಿ 'ಶಂಕರ್ ದೇವ್, ಮಾಧವ್ ದೇವ್, ಗೋಪಾಲ್ ದೇವ್' ಇವರೆಲ್ಲರನ್ನೂ ಹೊಗಳಿ ಅರೆ ಪ್ರಜ್ಞೆಯಲ್ಲಿ ಕುಣಿದಾಡುತ್ತಾ 'ಅಲ್ಲಾಹೂ ಅಕ್ಬರ್' ಎಂದು ಅತ್ಯಂತ ತನ್ಮಯತೆಯಿಂದ ಬಾವುಲ್ ಪದ್ಧತಿಯಲ್ಲಿ ಹಾಡುವ ಜಾನಪದ ಕಲಾವಿದರಿರಲಿ ಅಥವಾ ಕರ್ನಾಟಕದಲ್ಲಿ ಹುಟ್ಟಿ, ಮುಂಬಯಿಯಲ್ಲಿ ಬೆಳೆದು, ಮಧ್ಯಪ್ರದೇಶದ ದೇವಾಸದಲ್ಲಿ ಮನೆ ಮಾಡಿ ಕಬೀರ, ತುಳಸೀ ದಾಸ, ಮೀರಾಬಾಯಿ, ತುಕಾರಾಮ ಇತ್ಯಾದಿಗಳ ತತ್ತ್ವಜ್ಞಾನವನ್ನು ತನ್ನದೇ ಆದ 'ಕುಮಾರ' ಶೈಲಿಯಲ್ಲಿ ಹಾಡಿ ಮೈಮರೆತ/ಮರೆಸಿದ ಕುಮಾರ ಗಂಧರ್ವರಾಗಲಿ, ಇವರೆಲ್ಲರ ಹಾಡುಗಾರಿಕೆ ಅನುಭಾವ ಪ್ರಜ್ಞೆಯನ್ನು ಬೀರುತ್ತದೆ. ಸೂಫಿ ಕಾವ್ಯಗಳಲ್ಲಿ ಇತರ ಧರ್ಮಗಳ ಭಾವನೆಗಳನ್ನು ಒಂದು ವಿಶೇಷ ರೂಪದಲ್ಲಿ ಆದರದಿಂದ, ಅಷ್ಟೆ ಗೌರವದಿಂದ ಕಾಣುತ್ತಿದ್ದುದನ್ನು ಓದುಗರು ಗಮನಿಸಬೇಕು.

ಉತ್ತರ ಭಾರತದ ಬಹುತೇಕ ಸೂಫಿ ಛಾಯೆಯುಳ್ಳ ಕವಿಗಳ ರಚನೆಗಳನ್ನೂ ಹಿಂದುಸ್ತಾನಿ ಸಂಗೀತ ಪ್ರಕಾರದಲ್ಲಿ ಹಾಡುತ್ತಾರೆ, ಬಾರಿಸುತ್ತಾರೆ. ಪಂ. ರವಿಶಂಕರ ಮತ್ತು ಉಸ್ತಾದ್ ಅಲಿ ಅಕಬರ್ ಖಾನರು ಸಿತಾರ್ ಮತ್ತು ಸರೋದ್ ವಾದಕರಾಗಿದ್ದರೂ ಕೂಡ, ಅನೇಕ ಜಾನಪದ ರಚನೆಗಳನ್ನು ಹಿಂದುಸ್ತಾನೀ ಸಂಗೀತದಲ್ಲಿ ಬಳಕೆಯಲ್ಲಿ ತಂದರು. ವಿಶೇಷ ರೂಪದಲ್ಲಿ ಬಂಗಾಲೀ ಕೀರ್ತನೆಗಳನ್ನು, ಗಂಗಾತೀರದ ಅಂಬಿಗರು ಹಾಡುವ 'ಭಟಿಯಾಳೀ' ರಚನೆಗಳನ್ನೂ, ಉತ್ತರದ ಗುಡ್ಡಗಾಡು ಪ್ರದೇಶದ ಪಹಾಡೀ ರಚನೆಗಳನ್ನೂ ಪ್ರಸಿದ್ಧಿಗೆ ತಂದರು.

ದೇವಾಸದ ಕುಮಾರಗಂಧರ್ವ, ಜಾನಪದ ಹಾಡುಗಾರ ಪ್ರಲ್ಹಾದ ಟಿಪನಿಯಾ, ರಾಜಸ್ಥಾನದ ಜಾನಪದ ಹಾಡುಗಾರರು, ಬಿಕಾನೇರದ ಅಲ್ಲಾಹ ಜಿಲ್ಲಾಬಾಯಿ ಇವರೆಲ್ಲಾ ಸೂಫಿ ಪಂಥದ ಹಾಡುಗಳನ್ನು, ಕವ್ವಾಲಿಗಳನ್ನೂ ಹಾಡಿ ರಂಜಿಸಿದರು. ಹೀಗೆ, ತರಾನಾದಿಂದ ಪ್ರಾರಂಭವಾದ, ಅಮೀರ್ ಖುಸ್ರೋವಿನಿಂದ ಪ್ರೇರಣೆ ಪಡೆದ ಕವ್ವಾಲಿ ಪ್ರಕಾರ, ಬಾಲಿವುಡ್ ಚಲನಚಿತ್ರವನ್ನು ಸೇರಿಕೊಂಡಿತು. ಇತ್ತೀಚೆಗೆ, ಆವಶ್ಯಕತೆ ಇರಲಿ, ಬಿಡಲಿ ಒಂದಾದರೂ ಕವ್ವಾಲಿ ಹಾಡು ಹಿಂದೀ ಚಲನಚಿತ್ರದಲ್ಲಿ ಬೇಕೇಬೇಕು. ನುಸರತ್ ಫತ್ತೆ ಅಲಿ, ಅಮೀನಾ ಖಾತೂನ ಮತ್ತಿತರ ಅನೇಕ ಪಾಕಿಸ್ತಾನಿ/ಹಿಂದುಸ್ತಾನಿ ಗಾಯಕರು ಇಡಿ ವರ್ಷ ಕವ್ವಾಲಿ ಹಾಡುತ್ತಲೇ ಇರುತ್ತಾರೆ. ಕವ್ವಾಲಿ ಹಾಡುವ ಖ್ಯಾತ ಶಂಕರ್, ಶಂಭು ಜೋಡಿಯನ್ನು ಮರೆಯುವ ಹಾಗೆ ಇಲ್ಲ.

ಕವ್ವಾಲಿಯ ಜೊತೆಗೆ ಗಝಲ್ ಗಾಯನ, ಠುಮ್ರಿ ಗಾಯನ ಕೂಡ ಸೂಫಿ ಪ್ರಣಾಲಿಯೊಂದಿಗೆ ಹಿಂದುಸ್ತಾನಿ ಸಂಗೀತದ ಅವಿಭಾಜ್ಯ ಅಂಗಗಳಾದವು. ಇಟಗಿ ಈರಣ್ಣನಂತಹವರು ಕನ್ನಡದಲ್ಲಿಯೂ, ಸುರೇಶ ಭಟ್ಟ, ಸುಧೀರ ಮೋಘೆ ಅಂತಹವರು ಮರಾಠಿಯಲ್ಲಿಯೂ ಗಝಲ್ ಬರೆದು ಭಲೇ! ಎಂದೆನಿಸಿಕೊಂಡರು. ಗಾನತಪಸ್ವಿ ಪುಟ್ಟರಾಜ ಗವಯಿಗಳ ಶಿಷ್ಯ ರವೀಂದ್ರ ಹಂದಿಗನೂರು ಕನ್ನಡದಲ್ಲಿ ಗಝಲ್ ಗಾಯನ ಹಾಡಿ 'ಕನ್ನಡ ಗಝಲ್ ಗಾರುಡಿಗ' ಎಂದು ಮನ್ನಣೆ ಪಡೆದು ಲಿಂಗೈಕ್ಯರಾದರು. ಗಝಲ್ ಗಾಯನದಲ್ಲಿ ಶಬ್ದ ಸಾಹಿತ್ಯಕ್ಕೆ ಹೆಚ್ಚು ಪ್ರಾಧಾನ್ಯ. ಇವುಗಳ ಸ್ಥಾಯಿ ಮತ್ತು ಅಂತರಾ ಇವೆರಡೂ ಅತ್ಯಂತ ಅರ್ಥಪೂರ್ಣವಾಗಿದ್ದು, ಭಾವವನ್ನು ಪ್ರಕಟಿಸಿ ಕೊನೆಗೆ ಅತ್ಯಂತ ಚಮತ್ಕೃತಿಪೂರ್ಣವಾಗಿ 'ಶಾಯರಿ'ಯ ಎರಡನೇ ಭಾಗ ಮುಕ್ತಾಯಗೊಳ್ಳುತ್ತದೆ. ಪ್ರತಿಯೊಬ್ಬ ಕವಿಯ ಸಾಮರ್ಥ್ಯವನ್ನು ಈ ಗಝಲ್ ತುಂಬಾ ಅವಲಂಬಿಸಿರುತ್ತದೆ. 4–6 ಸಾಲಿನ ಗಝಲ್ ಓದಿ, ಕೇಳಿ, ಅರ್ಥೈಸಿ ಆನಂದ ಪಡೆಯಬೇಕು.

ಗಝಲ್ ಪ್ರಕಾರದಲ್ಲಿಯೂ ಅಮೀರ ಖುಸ್ರೋ ತನ್ನ ಮುದ್ರೆಯನ್ನು ಒತ್ತಿದ್ದು, ಗಝ್ಝಲ್ ಗಾಯನ ಕೂಡ ಹಿಂದುಸ್ತಾನಿ ಸಂಗೀತದ ಒಂದು ಅವಿಭಾಜ್ಯ ಅಂಗವಾಗಿ ಈಗಲೂ ತನ್ನ ಕಂಪನ್ನು ಎಲ್ಲ ಕಡೆಯಲ್ಲಿಯೂ ಬೀರುತ್ತಿದೆ. ಖುಸ್ರೋ ಆರಂಭದಲ್ಲಿ ಫಾರೀಸಿ ಮತ್ತು ಹಿಂದವೀ ಭಾಷೆಯಲ್ಲಿ ಗಝಲ್ ಬರೆದು ತನ್ನ ನಿರೂಪಣೆಯಲ್ಲಿ ಆತ ಹಿಂದುಸ್ತಾನಿ ಸಂಗೀತದ ಹರಕತ್, ಮುರಕಿ, ಸ್ವರಾಲಂಕಾರಗಳನ್ನು ಬಳಸಿರುವುದುನ್ಹಾಗೂ ಅವನ ಗಝಲ್‌ಗಳ ಪಾಕಿಸ್ತಾನಿ ಗಾಯಕರ ಹಾಡುಗಾರಿಕೆಯಲ್ಲಿ ಕಾಣಿಸುತ್ತದೆ. ಇವುಗಳನ್ನು ಆ ಕಾಲದ ಖಯಾಲ್ ಗಾಯನದ ಪ್ರವರ್ತಕರೂ ಯಥೋಚಿತವಾಗಿ ಬಳಕೆಯಲ್ಲಿ ತಂದರು. ಹಿಂದುಸ್ತಾನಿ ಸಂಗೀತ ಕ್ರಮೇಣ ಬೆಳೆಯುತ್ತಿದ್ದಾಗ ಈ ಗಝಲ್ ಕೂಡ ಠುಮ್ರಿ, ಖಯಾಲ್ ಗಾಯನದಂತೆ ಬನಾರಸೀ ಗಝಲ್, ದಿಲ್ಲಿ ಗಝಲ್ ಮತ್ತು ಲಖನೌ ಗಝಲ್ ಎಂಬ ಮೂರು ಪ್ರವಾಹಗಳಲ್ಲಿ ವಿಭಜನೆ ಆದದ್ದನ್ನು ನಾವು ಕಾಣುತ್ತೇವೆ. ಪಂಜಾಬ್‌ದ ಬರಕತ್ ಅಲಿ (ಬಡೇ ಗುಲಾಮ ಅಲಿ ಖಾನರ ಸಹೋದರ) ತಮ್ಮದೇ ಆದ ಒಂದು ವಿಶಿಷ್ಟ ಪದ್ಧತಿಯನ್ನು ಬಳಕೆಯಲ್ಲಿ ತಂದರು. ಠುಮರಿ ಪ್ರಕಾರದಲ್ಲಿಯೂ ಈ ವಿಭಜನೆ ಹಿಂದುಸ್ತಾನಿ ಸಂಗೀತದಲ್ಲಿಯೂ ಎದ್ದು ಕಾಣುತ್ತದೆ. ಪಂಜಾಬ್ ಪ್ರಕಾರದಲ್ಲಿ ಬಡೆ ಗುಲಾಮ್ ಅಲಿ, ಬರಕತ್ ಅಲಿ ಮರೆಯಲಾರದ

ಹೆಸರುಗಳಾದರೆ, ಲಖನೌ ಪ್ರಕಾರದಲ್ಲಿ ಬೇಗಮ್ ಅಖ್ತರ್, ಬನಾರಸ್ ಪ್ರಕಾರದಲ್ಲಿ ಬಿಂದಾದಿನ ಮಹಾರಾಜ, ಸಿದ್ಧೇಶ್ವರಿ ದೇವಿ, ಗಿರಿಜಾ ದೇವಿ –ಈ ಹೆಸರುಗಳು ಕಣ್ಮುಂದೆ ಬರುತ್ತವೆ.

1947ರಲ್ಲಿ ಹಿಂದುಸ್ತಾನದ ಉಪಖಂಡ ಎರಡು ಹೋಳಾದರೂ ಸಂಗೀತದ ಮಟ್ಟಿಗೆ ಹೇಳುವುದಾದರೆ ಶಾಸ್ತ್ರೀಯ ಹಿಂದುಸ್ತಾನಿ ಗಾನಪ್ರಕಾರದಲ್ಲಿ ಪಾಕಿಸ್ತಾನ ಹಿಂದೆ ಬಿದ್ದರೂ, ಗಜ಼ಲ್ ಮತ್ತು ಕವ್ವಾಲಿ ಗಾನ ಪ್ರಕಾರದಲ್ಲಿ ಮೆಹದಿ ಹಸನ, ಗುಲಾಮ ಅಲಿ ಇತ್ಯಾದಿ ಗಾಯಕರಿಂದ ಒಂದು ಒಳ್ಳೆಯ ಮಟ್ಟಕ್ಕೆ ಏರಿದೆ ಎಂದು ಹೇಳಬಹುದು.

ಹೀಗೆ ನಮ್ಮ ಭಾರತದ 'ಸರ್ವಧರ್ಮ ಸಮಭಾವ' ಎಂಬುದೆ ಸೂಫೀ ಪ್ರಣಾಲಿಯ ಬೀಜಮಂತ್ರ. 1988ರಲ್ಲಿ ನಾನು ಅಜಮೇರಕ್ಕೆ ಹೋದಾಗ ಮೋಯಿನುದ್ದೀನ್ ಚಿಶ್ತಿಯ ದರ್ಗಾಕ್ಕೆ ಭೆಟ್ಟಿ ನೀಡಿದ್ದೆ. ಅಲ್ಲಿಯ 'ಪಾರುಪತ್ಯಗಾರ'ರು ಹೇಳಿದ ಮಾತು ಈಗಲೂ ನೆನಪಿನಲ್ಲಿದೆ. "ನಮ್ಮ ಪೀರ್ (ಗುರು) ಮೊಟ್ಟಮೊದಲು ಇಲ್ಲಿ ಬಂದಾಗ, ಇಲ್ಲಿ ಹಿಂದೂ ಧರ್ಮದವರು ಆವೇಶದಲ್ಲಿ ಮೀರಾಬಾಯಿ, ಕಬೀರರ ಭಜನೆ ಹಾಡಿದ್ದು ಕೇಳಿ, ನಾವೂ ಇದೇ ಪ್ರಕಾರ ಹಾಡಿ ಅಲ್ಲಾನನ್ನೂ ಸ್ಮರಿಸಬೇಕು' ಎಂದುಕೊಂಡರಂತೆ. ಇದೇ ಸೂಫಿ ಪ್ರಣಾಲಿಯ ಬೀಜಮಂತ್ರ. ಇದಕ್ಕೆ ಪೂರಕವಾದದ್ದು ಹಿಂದುಸ್ತಾನಿ ಸಂಗೀತ.

* ಮನ ಕುಂಥಮೌಲಾ – ಅಮೀರ ಖುಸ್ರೊ ಅಂತರ್ಜಾಲದಲ್ಲಿ ಯು–ಟ್ಯೂಬಿನಲ್ಲಿ ಇದೆ

** ಚಾಪತಿಲಕ – ಅಮೀರ ಖುಸ್ರೋ – ಇದನ್ನೂ ಕೂಡ ಯು–ಟ್ಯೂಬಿನಲ್ಲಿ ವೀಕ್ಷಿಸಬಹುದು. ಇವೆರಡನ್ನೂ ಸ್ಮಿತಾ ಬೇಲೂರ, ತಸನೀಮ, ಅರಿಫ್ ಹಾಡಿದ್ದು ಯು–ಟ್ಯೂಬಿನಲ್ಲಿದೆ.

ಪರಿಶಿಷ್ಟ – 1

ಅಮೀರ್ ಖುಸ್ರೋ: (1253–1325) ಇವನ ಪೂರ್ಣ ಹೆಸರು ಅಬುಲ್ ಹಸನ್ ಮಯಿನುದ್ದೀನ್ ಖುಸ್ರೊ. ಇವನ ತಂದೆ ತುರ್ಕಸ್ಥಾನದಿಂದ ಬಂದವ, ಲಚಿನ್ ಎಂಬ ಪಂಗಡಕ್ಕೆ ಸೇರಿದವ, ಹೆಸರು ಅಮೀರ್ ಶೈಫುದ್ದೀನ್ ಮಹಮೂದ್. ತಾಯಿ ಇಲ್ಲಿಯ ರಾಜಪೂತ ಸ್ತ್ರೀ. ಅಮೀರ್ ಬಾಲ್ಯದಲ್ಲಿಯೇ ಪರ್ಶಿಯನ್ ಭಾಷೆಯಲ್ಲಿ ಕವಿತೆ ಕಟ್ಟುತ್ತಿದ್ದ. ಮುಂದೆ ಆಡುಭಾಷೆಯಾದ ಬ್ರಿಜ್ ಭಾಷೆಯಲ್ಲಿಯೂ ಕವನಗಳನ್ನು ರಚಿಸಿ ಹಾಡಿ ತೋರಿಸುತ್ತಿದ್ದ. 'ಹಿಂದವಿ' ಭಾಷೆಯ (ಅಂದರೆ ಸಾಕಷ್ಟು ಅರಬ್ಬಿ, ತುರ್ಕ್, ಫಾರಿಸಿ ಶಬ್ದ ಬಳಸಿ ತಮ್ಮದೆ ಆದ, ಮುಂದೆ 'ಉರ್ದು' ಭಾಷೆಯೆಂದು ಹಿಂದುಸ್ಥಾನದ ಭೂಖಂಡದಲ್ಲಿ ಮೆರೆದ ಭಾಷೆಯ) ಪುರಸ್ಕರ್ತನಾದ. ಇವನು. ದಿಲ್ಲಿಯ ಏಳು ಸುಲ್ತಾನರ ಆಳಿಕೆ ಕಂಡವ ಚಿಶ್ತಿ ನಿಜಾಮುದ್ದೀನ ಔಲಿಯಾ ಇವನ 'ಪೀರ್' ಅಂದರೆ ಗುರು, ಶಿಷ್ಯ ಅಂದರೆ 'ಮುರೀದ್'. ಅವನ ಕವ್ವಾಲಿ, ಗಜ಼ಲ್ ಮತ್ತಿತರ ಸೂಫಿ ರಚನೆಗಳೆಲ್ಲ ನಿಜಾಮುದ್ದೀನ ಔಲಿಯಾ ಇವರಿಗೇ ಸಮರ್ಪಿತ. ಅಮೀರ್ ಖುಸ್ರು ಭಾಷಾಪ್ರಭು, ಸಂಗೀತವಿಶಾರದ, ಸಿತಾರ್, ತಬಲಾ ಇಂತಹ ವಾದಕಗಳ ಜನ್ಮದಾತ ಎಂದು ಅನೇಕ ದಂತಕತೆಗಳು ಹಿಂದುಸ್ತಾನೀ ಸಂಗೀತದಲ್ಲಿ ಇವೆ. ಇವನ ಕಾಲಕ್ಕೆ ಮತ್ತು ನಂತರ ಅನೇಕ ಸೂಫೀ ಕವಿಗಳು ತಮ್ಮ ಕಾವ್ಯ ಸೃಷ್ಟಿಸಿ ಹಿಂದುಸ್ತಾನಿ

ಸಂಗೀತವನ್ನು ಪರಿಪೂರ್ಣಗೊಳಿಸಿದರೂ ಈತನ ಸ್ಥಾನ ಅಚಲವಾಗಿದೆ. ಬುಲ್ಲೇ ಶಾ, ಕಬೀರ ಜೊತೆಗೆ ಅನೇಕ ಖ್ಯಾಲ್ ಗಾಯಕರೂ ಕಾಲಕಾಲಕ್ಕೆ ತಮ್ಮ ಕವಿತೆಗಳನ್ನು ರಚಿಸಿದ್ದಾರೆ.

ಪರಿಶಿಷ್ಟ – 2

ಮನ ಕುಂಥೋ ಮೌಲಾ: ಇದು ಅಮೀರ ಖುಸ್ರೋ ರಚಿಸಿದ ಒಂದು ಕವ್ವಾಲಿ. ಮಹಮ್ಮದ ಪೈಗಂಬರರ ಒಂದು ಹೇಳಿಕೆಯ (ಹದಿತ್) ಮೇಲೆ ಇದನ್ನು ರಚಿಸಿದ್ದಾನೆ. ಈ ಕವನದಲ್ಲಿ ಫಾರ್ಸಿ ಶಬ್ದಗಳು ಬೇಕಾದಷ್ಟಿವೆ. ಇದು ಮಹಮ್ಮದ್ ಪೈಗಂಬರರ ಶಿಷ್ಯ ಅಲಿ ಇಬ್ನ್ ಅಬಿ ತಾಲೀಬಿ ಎಂಬುವನನ್ನು ಹೊಗಳಿ ಬರೆಯಲಾಗಿದೆ. ಇದರ ಎರಡು ಸಾಲುಗಳು ಹೀಗಿವೆ:

ಮನಕುಂಥೋ ಮೌಲಾ, ಅಲಿಯನ್ ಮೌಲಾ
ನಾನು ಗುರುವಿದ್ದವರಿಗೆ ಅಲಿ ಸಹ ಗುರುವೇ.

ಇದರ ಕೊನೆಯ ಸಾಲುಗಳು ಅರ್ಥಪೂರ್ಣವಾಗಿದ್ದರೂ ಸಿತಾರ್ ಬೋಲಿನಂತೆ ಇರುವುದನ್ನು ಓದುಗರು ಗಮನಿಸಬೇಕು.

"ದಾದಾಽ ದಿಲ್ ದಾರಾಽ ದಿಲ್ ದಾರ್–ಏ–ದಾನಿಽ"
"ತುಮ್ ತುಮ್ ತಾನಾಽ, ನಾಽ ನಾಽ ನಾನಾಽ ನಾನಾಽ ರೆಽ"/

ಚಾಪತಿಲಕ: ಇದು ಅಮೀರ್ ಖುಸ್ರೋ ಬರೆದ ಬ್ರಜ್ ಭಾಷೆಯಲ್ಲಿಯ ಪದ್ಯ. ತನ್ನ ಗುರುವಿಗೆ ಉದ್ದೇಶಿಸಿ ಬರೆದ ಕವಿತೆ, ವೈಷ್ಣವ ಧರ್ಮದ ಕೃಷ್ಣ (ಗುರು), ರಾಧಾ (ಶಿಷ್ಯ) ರೂಪಕದಂತೆ ಇದೆ.

ಚಾಪತಿಲಕ ಸಬ್ ಛೀ ನೀಶೇ ಮೋಸೆ ನೈನಾ ಮಿಲಾಯಿಕೆ
(ನಿನ್ನ) ಒಂದು ನೋಟದಿಂದಲೇ ನನ್ನ ಲಾವಣ್ಯ, ಅಸ್ತಿತ್ವ ಅಳಿಸಿ ಹೋಯಿತು!

ಇವೆರಡೂ ಯು ಟ್ಯೂಬಿನಲ್ಲಿವೆ. ಸ್ಮಿತಾ ಬೇಲೂರು, ಅರೀಫ್ ಮತ್ತು ತಸನೀಮ ಅವರು ಹಾಡಿದ್ದನ್ನು ಕೇಳಬಹುದು.

*****

6.18

ಹಿಂದುಸ್ತಾನಿ ಅಥವಾ ಉತ್ತರಾದಿ ಸಂಗೀತಕ್ಕೆ ಧಾರವಾಡ ಜಿಲ್ಲೆಯ ಕೊಡುಗೆ

ಕರ್ನಾಟಕ ಎಂದರೆ ಒಂದು ರಾಜ್ಯ. ಕರ್ನಾಟಕ ಪ್ರದೇಶವನ್ನೊಳಗೊಂಡು, ದಕ್ಷಿಣಕ್ಕೆ ಕನ್ಯಾಕುಮಾರಿಯ ತನಕ ಅಂದರೆ ಕರ್ನಾಟಕ, ಆಂಧ್ರಪ್ರದೇಶ, ಒರಿಸ್ಸಾದ ಕೆಲಭಾಗ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಪ್ರಚಲಿತವಾದ ದಕ್ಷಿಣಾದಿ ಸಂಗೀತ ಪದ್ಧತಿಗೆ ರಸಿಕ ಜನರೆಲ್ಲ,'ಕರ್ನಾಟಕ' ಪದ್ಧತಿಯೆಂದೇ ಗುರುತಿಸುವ ರೂಢಿ ಬಳಕೆಯಲ್ಲಿರುವದು ಎಲ್ಲರಿಗೂ ಗೊತ್ತು. ಆದರೂ ಕೂಡ ಕರ್ನಾಟಕ ರಾಜ್ಯದ ಉತ್ತರದಲ್ಲಿರುವ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯ ಹಿಂದುಸ್ತಾನಿ ಪರಂಪರೆಗೆ ವಿಶೇಷವಾಗಿ ಕಂಠ ಸಂಗೀತಕ್ಕೆ ಕೊಟ್ಟ ಕೊಡುಗೆಗಳು, ಇಡೀ ಭಾರತವರ್ಷದಲ್ಲಿ ಅಷ್ಟೇ ಅಲ್ಲ, ಇಡೀ ವಿಶ್ವದಲ್ಲಿ ಪ್ರಚಾರ ಮತ್ತು ಪ್ರಸಾರವಾದ ಕಾರಣ - ಮೀಮಾಂಸೆ ಈ ಲೇಖನದ ಮುಖ್ಯ ವಿಷಯ. ಇದರ ಗುಟ್ಟು ಏನಿರಬಹುದು?

ಕರ್ನಾಟಕ ಶಬ್ದದಲ್ಲಿ ನಾಟಕ ಅಡಗಿದಂತೆ, ಇದರ ರಹಸ್ಯ ಕೂಡ ನಾಟಕದಲ್ಲಿಯೇ ಇದೆ. ಪೂರ್ವಿಕರು ಆಚರಣೆಗೆ ತಂದ ಪದ್ಧತಿಯಲ್ಲಿ,ಸಾಧಾರಣವಾಗಿ ಹೊಸ ಭಾವನೆಗಳು ಹಸನವಾಗಿ ಹೊಕ್ಕಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾದದ್ದು ಕಳೆದ ಶತಮಾನದಲ್ಲಿಯೇ. ಮಹಾರಾಷ್ಟ್ರದಲ್ಲಿ ಮನೆಮನೆಗಳಲ್ಲಿ ಸಂಗೀತ ನಾಟಕ ತಲುಪಿಸುವ ಯುಗಪುರುಷನೆಂದು ಎನಿಸಿಕೊಳ್ಳುವ, "ಸಂಗೀತಸೌಭದ್ರ" ರಚಿಸಿದ ಅಣ್ಣಾಸಾಹೇಬ ಕಿರ್ಲೋಸ್ಕರರು ಹುಟ್ಟಿದ್ದು 1842, ಮಾರ್ಚ್ 21ನೇ ತಾರೀಖಿನಂದು ಬೆಳಗಾವಿಯ ಗುರ್ಲಹೋಸುರಿನಲ್ಲಿ. ಈತ ಉಪಾಯವಾಗಿ ಕರ್ನಾಟಕೀ ರಾಗಗಳನ್ನು ತನ್ನ ನಾಟಕಗಳಲ್ಲಿ, 'ಸಾಕೀ' ಮತ್ತು 'ದಿಂಡ'ಗಳಿಗೆ ಸಮಯಸೂಚಕತೆಯಿಂದ ಅಳವಡಿಸಿಕೊಂಡರು. ಗಂಡು ಪಾತ್ರಗಳು ವೀರಾನ್ವೇಷಕ್ಕೆ ಅನುಸರಿಸಿ ತಾಲಬದ್ಧವಾದ ಕೆಲ ವೀರರಸ ಹೊಮ್ಮುವ ಕರ್ನಾಟಕ ರಾಗಗಳನ್ನು ಬಳಸಿ ಸ್ತ್ರೀ ಪಾತ್ರಗಳಿಗೆ ಮೃದುವಾದ ಆಲಾಪನೆಯುಳ್ಳ ಕೆಲ ಉತ್ತರಾದಿ ರಾಗಗಳ ಶೈಲಿಯನ್ನು ಚಾಣಾಕ್ಷತೆಯಿಂದ ಉಪಯೋಗಿಸಿಕೊಂಡ ಮಹಾಪುರುಷ.

ಅಣ್ಣಾಸಾಹೇಬರು ಹುಟ್ಟಿದ ಒಂದು ವರ್ಷದ ಮೊದಲು, ಮಹಾರಾಷ್ಟ್ರದ ಸಾಂಸ್ಕೃತಿಕ ಕೇಂದ್ರವೆಂದೆನಿಸಲ್ಪಟ್ಟ ಸಾಂಗಲಿಯಲ್ಲಿ ಮಹಾರಾಜ ಪಟವರ್ಧನರ ಹೇರಂಭ

ಮಹಲಿನಲ್ಲಿ ಮತ್ತೊಂದು ನಾಟಕದ ಉಗಮವಾಗುತ್ತಿತ್ತು. ಉತ್ತರಕನ್ನಡ ಜಿಲ್ಲೆಯ ಕರ್ಕಿ ಗ್ರಾಮದ ಹಾಸ್ಯಗಾರರ ಯಕ್ಷಗಾನ ಮೇಳಕ್ಕೆ ಅಂದಿನ ಪಟವರ್ಧನರು, 'ಸೀತಾಸ್ವಯಂವರ' ಪ್ರಸಂಗ ಆಡಲು ಅಪ್ಪಣಿಸಿದ್ದರು. ಮರಾಠಿ ನಾಟಕಗಳ ಜನಕನೆಂದೆನಿಸಿಕೊಳ್ಳುವ ವಿಷ್ಣುದಾಸ ಭಾವೆಯವರಿಗೆ ಮಹಾರಾಜರು, ಅದನ್ನೇ ಮರಾಠಿಯಲ್ಲಿ ಭಾಷಾಂತರಿಸಲು ಆಜ್ಞೆಯಿತ್ತರು. ಇಷ್ಟೇ ಅಲ್ಲ ಹಾಸ್ಯಗಾರ ಮಂಡಳಿಯ ವೇಷಭೂಷಗಳೊಂದಿಗೆ ಇದೇ ನಾಟಕವನ್ನು ಮರಾಠಿಯಲ್ಲಿ ಆಡಿಸಿದರು. ಯಕ್ಷಗಾನ ಅವರಿಗೆ ಅಷ್ಟೊಂದು ಇಷ್ಟವಾಗಿತ್ತು! ಈ ನಾಟಕದಲ್ಲಿ ಕೂಡ, ಕೆಲವೊಂದು ಪದ್ಯಗಳು ಉತ್ತರಾದಿ ಸಂಗೀತಕ್ಕೆ ಅಳವಡಿಸಿಕೊಳ್ಳಲಾಗಿತ್ತು. ಪರಭಾಷೆಯನ್ನು ದೂಷಿಸುವ ಕಾಲದ ಮುನ್ಸೂಚನೆ ಅವರಿಗಾಗ ಇರಲಿಲ್ಲ! ಬೇರೆಬೇರೆ ಭಾಷೆಗಳಲ್ಲಿಯ ಅರಿಯತಕ್ಕ ಸಂಗತಿಗಳನ್ನು ಹೊಸಹೊಸ ಸಂಗೀತದ ಅವಿಷ್ಕಾರಗಳನ್ನು ತಿಳಿದುಕೊಂಡು, ಅದರ ಅರಿವನ್ನು ವಿಸ್ತಾರಗೊಳಿಸುವ ಹೃದಯಸಂಪನ್ನತೆಯ ಕಾಲವದು.

ಉತ್ತರಾದಿ ಸಂಗೀತ ಧಾರವಾಡ ಕ್ಷೇತ್ರದಲ್ಲಿ (ಜಿಲ್ಲೆಗಳ ಮೇರೆಯನ್ನು ಸಡಿಲಿಸಿ, ಈ 'ಕ್ಷೇತ್ರ'ವೆಂಬ ಶಬ್ದವನ್ನು ಬಳಸಿದ್ದೇನೆ) ಪ್ರಸಾರವಾಗುವದಕ್ಕೆ ಎರಡನೇ ಕಾರಣವೆಂದರೆ, ಜಯಪುರ ಘರಾಣೆಯ ಶಿಷ್ಯೋತ್ತಮನೆಂದು ಹೆಸರಾದ ಭಾಸ್ಕರಬುವಾ ಬಖಲೆ ಅವರು ಶಿಕ್ಷಕರೆಂದು ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಿಗೆ ವರ್ಗವಾಗಿ ಬಂದದ್ದು. ಅತ್ಯಂತ ಸಮ್ಮೋಹಕ ವ್ಯಕ್ತಿತ್ವದ, ರೂಪಗುಣಸಂಪನ್ನರಾದ ದೊಡ್ಡ ಸಂಗೀತಜ್ಞರೂ ಮತ್ತು ಪ್ರತಿಭಾವಂತ ಹಾಡುಗಾರರೂ ಆಗಿದ್ದರು. ಅವರ ಗೆಳೆಯರ ಗುಂಪು ಕೂಡ ಅಷ್ಟೇ ದೊಡ್ಡದು. ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಪ್ರವೃತ್ತಿಯಿಂದಲೂ, ಕೆಲ ಪ್ರಸಿದ್ಧ ಮರಾಠಿ ನಾಟಕ ಕಂಪನಿಗಳ ಮಾಲಿಕರು ಅವರ ಶಿಷ್ಯರಾಗಿದ್ದರಿಂದಲೂ ಅವರ ಕೀರ್ತಿ ಧಾರವಾಡ, ಬೆಳಗಾವಿ ಮತ್ತು ಕನ್ನಡಜಿಲ್ಲೆಗಳಲ್ಲಿ ಪಸರಿಸಿತ್ತು. ಧಾರವಾಡ, ಉತ್ತರ ಕರ್ನಾಟಕದ ಶಿಕ್ಷಣ ಕ್ಷೇತ್ರದ ಮಧ್ಯಬಿಂದುವಾಗಿದ್ದರಿಂದ, ಎಲ್ಲ ಕ್ಷೇತ್ರಗಳಿಂದ ಸುವಿದ್ಯ ತರುಣ ವಿದ್ಯಾರ್ಥಿವೃಂದ ಅವರ ಸಂಗೀತಕ್ಕೆ ಮಾರು ಹೋದದ್ದು ವಿಶೇಷವೇನಲ್ಲ.

ಕಿರಾನಾ ಅಥವಾ ಕೈರಾನಾ, ಇದು ಈಗಿನ ಹರಿಯಾಣಾದ ಪಾನಿಪತದ ಪಕ್ಕದ ಊರು, ಅಲ್ಲಿಯ ಸಾರಂಗಿ ವಿದ್ವಾನ್ ಅಥವಾ ಉಸ್ತಾದ್‌ರ ಮನೆತನದಲ್ಲಿ ಹುಟ್ಟಿದ ಅಬ್ದುಲ್ ಕರೀಂ ಖಾನರ ಸೃಜನಶೀಲ ಹಾಡುಗಾರಿಕೆಯ ಪ್ರಭಾವ ಈ ಕ್ಷೇತ್ರದಲ್ಲಿ ತುಂಬಾ ಆಗಿತ್ತು ಎಂಬ ಮಾತನ್ನು ಯಾರೂ ಅಲ್ಲಗಳಿಯಲಾರರು. ಬರೋಡಾ ಸಂಸ್ಥಾನದಿಂದ ಓಡಿಬಂದು ಬ್ರಿಟಿಷ ಇಂಡಿಯಾದಲ್ಲಿ ಮೊರೆಹೊಕ್ಕ ಈ ಖಾನರು ಆ ಕಾಲದ ಒಬ್ಬ ರೊಮ್ಯಾಂಟಿಕ್ ಹಾಡುಗಾರರು. 1920ರಲ್ಲಿಯೇ ಮದ್ರಾಸಿಗೆ ಹೋಗಿ ಅಲ್ಲಿ ಕಚೇರಿ ನಡೆಸಿದ ಧೀರ. ಒಬ್ಬ ಮರಾಠಾ ಸರದಾರನ ಹೆಂಡತಿ, ತಾರಾಬಾಯಿ ಮಾನೆ ಇವರ ಸಂಗೀತಕ್ಕೆ ಮಾರುಹೋಗಿದ್ದರಿಂದ ಮತ್ತು ಶಾರೀರಿಕ ಸಂಬಂಧದಿಂದ ಸರದಾರನ ರೋಷಕ್ಕೆ ಧೈರ್ಯಗುಂದಿ ತಮ್ಮ ಈ ಸಪತ್ನಿಕ ಮಕ್ಕಳ ಪರಿವಾರದೊಂದಿಗೆ (ಹೀರಾಬಾಯಿ, ಸುರೇಶಬಾಬು ಮಾನೆ, ಸರಸ್ವತಿ ಮಾನೆ. ಈ ಸರಸ್ವತಿ ಮಾನೆ ಈಗಲೂ ಪುಣೆಯಲ್ಲಿ ಇದ್ದಾರೆ. ಈ ಲೇಖ ಬರೆದದ್ದು 31/5/1997

ಸಾಪ್ತಾಹಿಕ ಸಂಜೆಯಲ್ಲಿ) ಮಿರಜ್ ಸಂಸ್ಥಾನ, ಹುಬ್ಬಳ್ಳಿ-ಧಾರವಾಡದಲ್ಲಿ ಆಗಿಂದಾಗ ಬಂದು ವಾಸ್ತವ್ಯಮಾಡುತ್ತಿದ್ದರು. "ಆರ್ಯ ಸಂಗೀತ ಪ್ರಸಾರಕ ಮಂಡಲಿ" ಊರೂರಲ್ಲಿ ಸ್ಥಾಪಿಸಿದ್ದು ಇವರೇ. ಬಹಳ ಕಚೇರಿಗಳನ್ನು ಮಾಡಿ ರಾಜಾಶ್ರಯದಲ್ಲಿಂದ ಲೋಕಾಶ್ರಯದೆಡೆ ಸಂಗೀತವನ್ನು ತಲುಪಿಸಿದ ಶ್ರೇಯ ಅಬ್ದುಲ್ ಕರೀಂಖಾನರಿಗೆ ಸಲ್ಲುತ್ತದೆ. ಅವರ ಮಕ್ಕಳೆಲ್ಲ ಬಾಲ್ಯಾವಸ್ಥೆಯಲ್ಲಿದ್ದಾಗ ಅವರು ಕಾರ್ಯಕ್ರಮಗಳನ್ನು ಟಿಕೆಟ್ಟು ಹಚ್ಚಿ ನಡೆಸುತ್ತಿದ್ದರು. ಅವರ ಬಾಲಿಕೆ ಹೀರಾಬಾಯಿಯ ಮೋಹಕ ನೃತ್ಯದಿಂದ ಪ್ರಾರಂಭವಾಗಿ ಈ ಮನೋರಂಜನೆಯ ಕಾರ್ಯಕ್ರಮದಲ್ಲಿ ಬಾಲಕ ಸುರೇಶನ ಗಾಯನ ಮತ್ತು ಕೊನೆಗೆ ಸ್ವತಃ ಅಬ್ದುಲ್ ಕರೀಂಖಾನರು ತಮ್ಮ ಸಹೋದರ ಮತ್ತು ಇತರ ಸರಂಜಾಮದೊಡನೆ ಕಚೇರಿ ನಡೆಸುತ್ತಿದ್ದರು! ಅಂದಿನ ಟಿಕೆಟಿನ ದರ ನಾಲ್ಕು ಆಣೆ. ಚಿತ್ರಮಂದಿರಗಳಲ್ಲಿ ಭಾನುವಾರ ಮತ್ತು ರಜಾದಿನಗಳಲ್ಲಿ ಮುಂಜಾನೆ ಅವರ ಕಾರ್ಯಕ್ರಮ ನಡೆಯುತ್ತಿತ್ತು. ಅವರ ಅನೇಕ ಶಿಷ್ಯರು ಹುಬ್ಬಳ್ಳಿ ಧಾರವಾಡದವರು. ಹೀಗಾಗಿ ಅಬ್ದುಲ್ ಕರೀಂರ ಕಿರಾಣಾ ಘರಾಣೆಯ ಟೊಂಗೆ ಬೆಳೆದು ದೊಡ್ಡ ಮರವಾಗಿದ್ದು ಈ ಕ್ಷೇತ್ರದಲ್ಲಿಯೇ. "ಪೈದಾಯಿಶಿ ಯುಪಿ ಮೇ, ಪಾಲಾ ಕರ್ನಾಟಕ್‌ನೇ ಔರ್ ಪೋಸಾ ಮಹಾರಾಷ್ಟ್ರ್‌ನೇ" ಎಂದು ಇತ್ತೀಚೆಗೆ ಪೈಗಂಬರವಾಸಿಯಾದ ಆಗ್ರಾ ಘರಾಣೆಯ ಖಲೀಫ್ (ಮುಖ್ಯಸ್ಥ) ಖಾದೀಮ್ ಹುಸೇನ್ ಖಾನರು ನನಗೆ ಕೊಟ್ಟ ಸಂದರ್ಶನದಲ್ಲಿ ಹೇಳಿದ ಮಾತು ವಸ್ತುಸ್ಥಿತಿಗೆ ಅನುಸರಿಸಿದ್ದುದು ಎಂದು ಇಲ್ಲಿ ನೆನಪಿಸುತ್ತೇನೆ.

ಹಾವೇರಿ ಜಿಲ್ಲೆಯ ಹಾನಗಲ್ಲಿನಲ್ಲಿ ವೀರಶೈವ ಕುಟುಂಬದಲ್ಲಿ ಹುಟ್ಟಿದ, 'ಬೆಳೆಯ ಸಿರಿಯನ್ನು ಮೊಳಕೆಯಲ್ಲಿ ನೋಡಿ' ಎಂಬ ಮಾತಿಗನುಸರಿಸಿ ಹುಟ್ಟಿನಿಂದಲೆ ಅಂಧನಾಗಿದ್ದ ಗದಿಗಯ್ಯನ ಹಾಡುಗಾರಿಕೆಯಲ್ಲಿ ಮತ್ತು ವಿವಿಧ ಪ್ರಕಾರಗಳ ವಾದನ ಬಾರಿಸುವ ಕಲೆ ಮತ್ತು ಒಂದು ಸಲ ಕಲಿತದ್ದನ್ನು ತಪ್ಪದೇ ಒಪ್ಪಿಸುವ ಕುಶಾಗ್ರತೆಯುಳ್ಳ ಈ ಹುಡುಗನನ್ನು ಗದುಗಿನ ಕುಮಾರಸ್ವಾಮಿಯವರು ತಮ್ಮಲಿಟ್ಟು ಆ ಕಾಲೀನ ವೈಣಿಕಶ್ರೇಷ್ಠ ವೀಣೆ ಶೇಷಣ್ಣನವರಿಂದ ವೀಣೆ ಮತ್ತು ಹಾಡುಗಾರಿಕೆ ಕಲಿಸುವ ವ್ಯವಸ್ಥೆ ಮಾಡಿದ್ದರು. ಇದೇ ಹುಡುಗನಿಗೆ 1908ರಂದು ವೀರಶೈವ ಸಮ್ಮೇಳನದಲ್ಲಿ "ಪಂಚಾಕ್ಷರಿ ಗವಯಿ" ಎಂದು ಗೌರವಿಸಲಾಗಿತ್ತು. ಇಂದಿಗೂ ಅವರ ಅಪರಿಮಿತ ಶಿಷ್ಯವೃಂದ ಇಡೀ ಕರ್ನಾಟಕದಲ್ಲಿ ಪಸರಿಸಿದೆ.

ಕರ್ನಾಟಕ ಪದ್ಧತಿಯಲ್ಲಿ ಪ್ರವೀಣರಾದರೂ ಪಂಚಾಕ್ಷರಿಯವರಿಗೆ ಉತ್ತರಾದಿ ಸಂಗೀತದ ವೈಯಕ್ತಿಕತೆ ತುಂಬ ಹಿಡಿಸಿದ್ದರಿಂದ ಮತ್ತು ತಮ್ಮ ಸೃಜನಶೀಲತೆಗೆ ಇದೇ ಪದ್ಧತಿಯಲ್ಲಿ ಅವಕಾಶವಿದೆಯೆಂದು ಮನಗಾಣಿಸಿ ತಮ್ಮ ಸ್ವಾಮಿಯವರಲ್ಲಿ ಈ ಬಗ್ಗೆ ವಿಚಾರಿಸಿ ಕೊನೆಗೆ ಸ್ವಾಮಿಯವರ ಅಪ್ಪಣೆಯಂತೆ ಲಾಹೋರಿನ ಅಬ್ದುಲ್ ವಹೀದ್ ಖಾನರ ಶಿಕ್ಷಣ ಪಡೆದೂ, ಗ್ವಾಲಿಯರ್ ಪರಂಪರೆಯ ನೀಲಕಂಠ ಆಲೂರಮಠ (ಮಿರಜ್ಕರ್) ಇವರ ಹತ್ತಿರ ಕಲಿತು, ಮೊಟ್ಟಮೊದಲು, 'ಉಭಯಗಾನಯೋಗಿ' ಎಂದೆನಿಸಿಕೊಂಡರು.

ಕಪಿಲೇಶ್ವರಿಯವರ "ಅಬ್ದುಲ್ ಕರೀಂಖಾನರ ಜೀವನ ಚರಿತ್ರೆ" ಮರಾಠಿಯಲ್ಲಿ 1933ರಲ್ಲಿ ಎಚೆಮ್ವಿಯವರಿಂದ ಕರೆ ಬಂದಾಗ ಅಚ್ಚಕನ್ನಡಿಗರಾದ ಅವರು, 'ಕನ್ನಡ

ಬಿಟ್ಟು ಯಾವ ಭಾಷೆಯಲ್ಲಿಯೂ ಹಾಡುವುದಿಲ್ಲ' ಎಂದು ಹೇಳಿ ಸಂಗೀತ ಪ್ರಚಾರವೇ ತನ್ನ ಸೇವೆಯೆಂದು ಅಲ್ಲಲ್ಲಿ ಆಶ್ರಮ ಸ್ಥಾಪಿಸಿ ಗುರುಕುಲ ಪದ್ಧತಿಯನ್ನು ಆರಂಭಿಸಿದ್ದು ಇವರೇ. ಪುಟ್ಟರಾಜ ಗವಯಿ, ಬಸವರಾಜ ರಾಜಗುರು, ಸಿದ್ಧರಾಮಮ ಜಂಬಲದಿನ್ನಿ, ಪಂಚಾಕ್ಷರಿ ಮತ್ತಿಗೆಟ್ಟಿ, (ಕೊನೆಯ ಇಬ್ಬರು ಮುಂದೆ ಮಲ್ಲಿಕಾರ್ಜುನ ಮನ್ಸೂರರ ಶಿಷ್ಯರಾದರು) ಅರ್ಜುನ ಸಾ. ನಾಕೋಡ, ಚಂದ್ರಶೇಖರ ಪುರಾಣಿಕ, ಬಸವರಾಜ್ ಪುರಾಣಿಕ ಮಠ ಮತ್ತೆ ತರಬೇತಿ ಪಡೆದ ನೂರಾರು ಜನ ಇಡೀ ಕರ್ನಾಟಕದಲ್ಲಿ ಇದ್ದಾರೆ. ಶಿಷ್ಯೋತ್ತಮರಲ್ಲಿ ಪುಟ್ಟರಾಜ ಗವಯಿ ಮತ್ತು ಬಸವರಾಜ ರಾಜಗುರು ತಮ್ಮ ಗುರುಪರಂಪರೆಯನ್ನು ಮುಂದೆ ನಡೆಸಿದ್ದುದು ಒಂದು ವೈಶಿಷ್ಟ್ಯ. ಇದರಿಂದ ಮುಂಬರುವ ಕಲಾವಿದರಿಗೆ ಪ್ರೋತ್ಸಾಹ ಸಿಕ್ಕಿತಷ್ಟೇ ಅಲ್ಲ, ಒಂದು ಗುರುಕುಲಪರಂಪರೆ ನಡೆಸಿಕೊಂಡು ಬಂದದ್ದು ಒಂದು ವಿಶೇಷ ಮಾತು. ಶಿವಾನಂದ ಪಾಟಿಲ, ವೆಂಕಟೇಶಕುಮಾರ, ಸೋಮನಾಥ ಮರ್ಡೂರ, ಪೂರ್ಣಿಮಾ ಕುಲಕರ್ಣಿ, ಪರಮೇಶ್ವರ ಹೆಗಡೆ, ಶ್ರೀಪತಿ ಹೆಗಡೆ, ಗಣಪತಿ ಭಟ್ಟ ಮುಖ್ಯವಾಗಿ ಈ ಪರಂಪರೆಯ ಈಗಿನ ಸಂತಾನ. ಜಯತೀರ್ಥ ಮೇವುಂಡಿ ಕೂಡ ಈ ಆಶ್ರಮದಿಂದ ಹೊರಬಂದ ಕಲಾವಿದ.

ಸಂಗಮೇಶ್ವರ ಗುರವ್ ಮತ್ತು ಸೂಳೆಭಾವಿಯಲ್ಲಿ ಜನಿಸಿದ ಶಿವಪುತ್ರ ಕೋಮಕಳಿ (ಕುಮಾರ ಗಂಧರ್ವ) ಸಮವಯಸ್ಕರು. ಅವರಿಬ್ಬರ ಶಾರೀರದಲ್ಲಿಯೂ ಇರುವ ಒಂದು ಪ್ರಕಾರದ ಸಾಮ್ಯತೆಯನ್ನು ಈಗಲೂ ರಸಿಕರು ಕಾಣಬಹುದು. ಗುರವ್ ಧಾರವಾಡ–ಬೆಳಗಾವಿಯಲ್ಲಿದ್ದು ಕಿರಾಣಾ ಪರಂಪರೆಯಲ್ಲಿ ಹೆಸರು ಗಳಿಸಿದರೆ, ತನ್ನ ಐದನೆಯ ವಯಸ್ಸಿನಲ್ಲಿಯೇ ಕಚೇರಿ ಮಾಡುತ್ತ ಮುಂಬಯಿಗೆ ಬಂದ ಶಿವಪುತ್ರನ ಪ್ರತಿಭೆಗೆ ಇನ್ನಷ್ಟು ಹೊಳಪು ಕೊಟ್ಟು ಝಗಝುಗಿಸಿದವರು ಮುಂಬಯಿಯ ಬಿ.ಆರ್. ದೇವಧರ ಸಾಹೇಬರು. "ಅವನು ಬೆಳಗಾಂವ ಧಾರವಾಡದಲ್ಲಿ ಇದ್ದಿದ್ದರೆ ಒಂದೇ ಘರಾಣೆಯ ಗಾಯಕನಾಗುತ್ತಿದ್ದ; ಸ್ವತಂತ್ರ ಪ್ರತಿಭೆಯ (ಗಾ)ನಾಯಕನಾಗುತ್ತಿರಲಿಲ್ಲ" ಎಂಬುದು ದೇವಧರ ಮಾಸ್ತರರ ಹೇಳಿಕೆ. ನವನವೋನ್ಮೇಷ ಕಲಾಕುಸುಮವನ್ನು ಅರಳಿಸಿದ ಮಹಾವಿಭೂತಿ ಕುಮಾರ ತನ್ನ ತಾರುಣ್ಯದಲ್ಲಿಯೇ ಕ್ಷಯರೋಗಕ್ಕೆ ತುತ್ತಾಗಿ ಪುಪ್ಪುಸವನ್ನೇ ಕಳೆದುಕೊಂಡರೂ ಪುನರ್ಜನ್ಮ ಪಡೆದ ಹಾಗೆ ತನ್ನ ಹೊಸ ಗಾಯನಶೈಲಿ ತನ್ನ ಪ್ರಕೃತಿಗೆ ಸಾಧ್ಯವಾದಂತೆ ಅಳವಡಿಸಿಕೊಂಡು ಸಂಗೀತದಲ್ಲಿಯೇ ಕ್ರಾಂತಿ ಮಾಡಿದ ಇಪ್ಪತ್ತನೆಯ ಶತಮಾನದ ವಾಗ್ಗೇಯಕಾರನೆಂದರೆ ಅತಿಶಯೋಕ್ತಿಯಾಗಲಾರದು. ನಾಟ್ಯ ಶಾಸ್ತ್ರೀಯ ಮತ್ತು ಲೋಕ ಸಂಗೀತಗಳಲ್ಲಿ ಅತ್ಯಂತ ಪರಿಶ್ರಮಪೂರಕವಾಗಿ ಸಂಶೋಧನೆ ಮಾಡಿದ ಕುಮಾರ ಕನ್ನಡದಲ್ಲಿ 2ನೆಯ ಇಯತ್ತೆ ಕಲಿತಿಲ್ಲವೆಂಬುದು ಓದುಗರಿಗೆ ತಿಳಿದರೆ ಬೆರಗಾಗದೇ ಇರಲಾರರು. ಕುಮಾರ ಗಂಧರ್ವ ಘರಾಣೆಯ ಆದಿ ಮತ್ತು ಅಂತ್ಯ ಕುಮಾರರೇ!

ಖ್ಯಾತ ಸಂಗೀತಕಾರ ಪಂ. ಮಲ್ಲಿಕಾರ್ಜುನರು ಹುಟ್ಟಿದ್ದು ಧಾರವಾಡದ ಮನ್ಸೂರಲ್ಲಿ, ತಿಥಿ ಅಮವಾಸ್ಯೆ, 21ನೇ ತಾರೀಖು 1910ರಂದು. ಅವರಣ್ಣ ಬಸವರಾಜರು ಅದಾಗಲೇ ಮನೆಯಿಂದ ಓಡಿಹೋಗಿ ವಾಮನರಾವ್ ಮಾಸ್ತರರ ಕಂಪನಿಯಲ್ಲಿ ಸಂಗೀತ ನಟನಾಗಿದ್ದವರು ಮಲ್ಲಿಕಾರ್ಜುನರ ಮೊದಲನೇ ಗುರು. ಅಣ್ಣನಂತೆ ತಮ್ಮ ಕೂಡ ಓಡಿಹೋಗಿ ನಟನಾದ. ಆಲೂರಮಠ ನೀಲಕಂಠರಾಯರು ಶ್ರದ್ಧೆ ಮತ್ತು ವಿಶ್ವಾಸದಿಂದ

ಚಿಕ್ಕ ಮಲ್ಲಿಕಾರ್ಜುನನನ್ನು ತಮ್ಮಲ್ಲೇ ಇಟ್ಟುಕೊಂಡು ಆರು ವರ್ಷಗಳಲ್ಲಿ ನಾಲವತ್ತು ರಾಗಗಳನ್ನು ಕಲಿಸಿದರು. ಶಿಷ್ಯ ಕೂಡ ಅಷ್ಟೇ ಶ್ರದ್ಧೆ ಭಕ್ತಿ-ಭಾವದಿಂದ ಕಲಿತು ಮುಂದೆ ಮಂಜಿ ಮತ್ತು ಬುರ್ಜಿಖಾನರೆಡೆ (ಅಲ್ಲಾದಿಯಾಖಾನರ ಮಕ್ಕಳು) ಕಲಿತು ಸಂಗೀತದಲ್ಲಿ ಒಂದು ಇತಿಹಾಸವನ್ನೇ ರಚಿಸಿದರು. ಕೇಂದ್ರೀಯ, ರಾಜ್ಯ ಸರಕಾರದ ಮತ್ತು ಮಧ್ಯಪ್ರದೇಶದ ಅನೇಕ ಪ್ರಶಸ್ತಿ, ಬಹುಮಾನಗಳು ಇವರ ಪಾಲಿಗೆ ತಂತಾನೇ ಬಂದವು. ಅವರ ಮಗ ರಾಜಶೇಖರ ಮತ್ತು ಶಿಷ್ಯ ಪಂಚಾಕ್ಷರಿ, ಮತ್ತವರ ಶಿಷ್ಯೆ ಗೀತಾ ಜಾವಡೇಕರ್ ಮನ್ಸೂರ ಪ್ರಣಾಲಿಯನ್ನು ಮುಂದೆ ನಡೆಸುತ್ತಿದ್ದಾರೆ.

ಧಾರವಾಡದ ಮತ್ತೊಬ್ಬ ಸಂಗೀತದಲ್ಲಿಯ ಪದ್ಮಭೂಷಣ ವಿಜೇತರೆಂದರೆ ಬಸವರಾಜ ರಾಜಗುರು. ಇವರು ಕೂಡ ಕುಂದಗೋಳದ ಯೆಲಿಹಾಳದವರು. ಸಂಗೀತದ ಗೀಳು ಹಿಡಿದವ ಬಾಲ್ಯಾವಸ್ಥೆಯಲ್ಲಿ ಓಡಿಹೋಗಿ ವಾಮನರಾವ್ ಮಾಸ್ತರರ ಕಂಪನಿಯನ್ನು ಸೇರಿ ಬಾಲನಟನಾದರು. ಕೊನೆಗೆ ಗಾನಯೋಗಿಯವರ ಆಶ್ರಮದಲ್ಲಿ ಸ್ಥಿರವಾಗಿ ಅವರ ಪಟ್ಟಶಿಷ್ಯರಾದರು. ಯಾವಾಗಲೂ ವಿದ್ಯೆಯಲ್ಲಿ ಅತೃಪ್ತರಾದ ಬಸವರಾಜರು ಒಟ್ಟಾರೆ 11 ಗುರುಗಳಿಂದ ವಿದ್ಯೆ ಕಲಿತದ್ದೂ ಒಂದು ವಿಕ್ರಮವೇ! "ಕನ್ನಡ ಬಿಟ್ಟು ಯಾವ ಭಾಷೆಯಲ್ಲಿಯೂ ಹಾಡುವದಿಲ್ಲ" ಎಂಬ ಭೀಷ್ಮಪ್ರತಿಜ್ಞೆ ಮಾಡಿದ ಗಾನಯೋಗಿ ತನ್ನ ಈ ಇಂಪಾದ ಶಾರೀರದ ಹುಡುಗನನ್ನು ಮುಂಬಯಿಗೆ ಕರೆದುಕೊಂಡು ಹೋಗಿ ಎಚ್‌ಎಮ್‌ವಿಯವರ, ಆಕಾಶವಾಣಿಯವರನ್ನು ಸಂಪರ್ಕಿಸಿ 26 ಆರ್‌ಪಿಎಮ್ ರಿಕಾರ್ಡುಗಳನ್ನು ಮಾಡಿಸಿದ್ದರು. ಇಡೀ ಹಿಂದುಸ್ತಾನದಲ್ಲಿ ಜಯಭೇರಿ ಹೊಡೆದ ಬಸವರಾಜರ ಸಂಪತ್ತೆಂದರೆ ಅವರ ಅನೇಕ ಶಿಷ್ಯೋತ್ತಮರು. 1991ರಲ್ಲಿ ಇವರು ದೈವಾಧೀನರಾದರೆ, ಮೂರನೇ ವರ್ಷವೇ ಕುಮಾರ ಗಂಧರ್ವ ಮತ್ತು ಮಲ್ಲಿಕಾರ್ಜುನ ಮನ್ಸೂರ ತೀರಿಕೊಂಡದ್ದು. ಕರ್ನಾಟಕದಲ್ಲಿಯ ಈ ಮೂವರು ಮಹಾನುಭಾವರನ್ನು ಎರಡೇ ವರ್ಷಗಳಲ್ಲಿ ಕಳಕೊಂಡಿದ್ದು ದೈವದ ದುರ್ವಿಲಾಸ.

ಡಾ. ಗಂಗೂಬಾಯಿಯವರ ಹೆಸರು ಯಾರು ಕೇಳಿಲ್ಲ? ಹಾನಗಲ್ಲು ಮೂಲ ಊರಾದರೂ ಅವರ ಅಜ್ಜ ಮತ್ತು ತಾಯೀ ಅಂಬಾಬಾಯಿ ಅಂದಿನ ಕಾಲದ ಕರ್ನಾಟಕ ಸಂಗೀತ ಮತ್ತು ನೃತ್ಯಕಲೆಯಲ್ಲಿ ಪ್ರಾವಿಣ್ಯ ಪಡೆದಿದ್ದರು. ಅಂಬಾ ಬಾಯಿಯವರು ಇದನ್ನೇ ಕಸಬಾಗಿಟ್ಟುಕೊಂಡು ತಮ್ಮ ಮಗಳಿಗೂ ಪಾಠ ಹೇಳಿ ಕೊಡುತ್ತಿದ್ದರು. ಅದಾಗಲೇ ಮುಂಬಯಿ-ಕರ್ನಾಟಕದಲ್ಲಿ ಉತ್ತರಾದಿ ಸಂಗೀತದ ಪ್ರಚಾರ ಆರಂಭವಾದುದರಿಂದ ಅಂಬಾಬಾಯಿಯವರು ದೂರದೃಷ್ಟಿಯಿಂದ ತಮ್ಮ ಮಗಳಿಗೆ ಹುಯಿಲಗೋಳ ಕೃಷ್ಣಾಚಾರ್ಯರಲ್ಲಿ ಈ 'ಹೊಸ' ಸಂಗೀತದ ಪಾಠ ಕಲಿಸಲಿಕ್ಕೆಂದು ಗೊತ್ತು ಮಾಡಿದರು. ಮುಂದೆ ಅವರು ಸವಾಯಿ ಗಂಧರ್ವರ ಶಿಷ್ಯೆಯಾಗಿ ಕರ್ನಾಟಕಕ್ಕೆ ಕೀರ್ತಿ ತಂದದ್ದು ಎಲ್ಲ ಕನ್ನಡಿಗರ ಮನೆ ಮಾತಾಗಿ ಬಿಟ್ಟಿದೆ.ತನ್ನ 11 ನೇ ವರ್ಷದಲ್ಲಿಯೇ ಅಂದಿನ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ರಾಷ್ಟ್ರಗೀತೆ ಹಾಡಿದ (1924) ಗಂಗೂಬಾಯಿ, ಇಂದೂ - 85ರ ವಯಸ್ಸಿನಲ್ಲಿ ಕೂಡ - ಅದೇ ಉತ್ಸಾಹದಿಂದ ಕಚೇರಿ ನಡೆಸುತ್ತಾರೆ ಎಂಬುದೇ ಈ ಶತಮಾನದ ಒಂದು ಹೊಸ ಆಖ್ಯಾಯಿಕೆ! ಇವರಿಗೆ 23 ವರ್ಷಗಳ ಹಿಂದೆ ಪದ್ಮಭೂಷಣ ಸಿಕ್ಕಿದ್ದು ಪ್ರತ್ಯೇಕವಾಗಿ

ಹೇಳುವ ಅಗತ್ಯವಿಲ್ಲ. ಸರಿ ಗಂಗೂಬಾಯಿಯವರ ಹೆಸರು ತೆಗೆದುಕೊಂಡರೆ, ಅದೇ ಶ್ವಾಸದಲ್ಲಿ ಈ ಶತಮಾನದ ಅತ್ಯಂತ ಜನಪ್ರಿಯ ಗಾಯಕರಾದ ಇತ್ತೀಚೆಗೆ ಮುಂಬಯಿಯ ರಾಷ್ಟ್ರೀಯ ಸಂಗೀತ ಕೇಂದ್ರದ ಪರವಾಗಿ 'ಲಿವಿಂಗ್ ಲಿಜೆಂಡ್' ಎಂದು ಸನ್ಮಾಸಿಲ್ಪಟ್ಟ 75 ಮಳೆಗಾಲಗಳನ್ನು ಕಳೆದ (ಲೇಖನ ಬರೆದದ್ದು 1997ರಲ್ಲಿ) ಪಂ. ಭೀಮಸೇನ ಜೋಶಿಯವರನ್ನು ಮರೆಯಲು ಸಾಧ್ಯವೇ? ಈ ಅಕ್ಕ-ತಮ್ಮರ ಜೋಡಿ ಕಳೆದ 50 ವರ್ಷಗಳಿಂದ ತಮ್ಮ ಅಸಂಖ್ಯಾತ ಕಚೇರಿಗಳಿಂದ ರಸಿಕ ವಿಶ್ವಾಸರ್ಹತೆ ಪಡೆದುದಷ್ಟೇ ಅಲ್ಲ, ಕುಂದಗೋಳದಲ್ಲಿ ಗಂಗೂಬಾಯಿಯವರ ನೇತೃತ್ವದಲ್ಲಿ, ಗಾನಯೋಗಿ ಪಂಚಾಕ್ಷರಿ ಗವಯಿ ಮತ್ತು ಪುಣೆಯಲ್ಲಿ ಭೀಮಸೇನರ ನೇತೃತ್ವದಲ್ಲಿ ಸವಾಯಿ ಗಂಧರ್ವರ ಉತ್ಸವವನ್ನು ಪುಣ್ಯತಿಥಿಯ ರೂಪದಲ್ಲಿ ಆಚರಿಸಿ ಕಳೆದ 45ವರ್ಷಗಳಲ್ಲಿ ಹೊಸ ಕಲಾವಿದರನ್ನು ಮುಂದೆ ತರುವ ಪುಣ್ಯದ ಕೆಲಸ ಮಾಡುತ್ತಿದ್ದಾರೆ ಎಂಬುದು ವಿಶೇಷ. ಸವಾಯಿ ಗಂಧರ್ವರನ್ನು ಅಮರರನ್ನಾಗಿ ಮಾಡಿದ್ದ ಶ್ರೇಯ ಅವರಿಬ್ಬರ ಈ ಹಿರಿಯ ಶಿಷ್ಯರಿಗೆ ಸಲ್ಲುತ್ತದೆ.. ಧಾರವಾಡದಲ್ಲಿಯೇ ಹುಟ್ಟಿ, ಬೆಳೆದು, ಅಲ್ಲಿಯೇ ದೇಹವಿಟ್ಟ ಗುರುರಾವ ದೇಶಪಾಂಡೆಯವರಿಗೆ (ಗ್ವಾಲಿಯರ್) ವಿದ್ವತ್ತು ಇದ್ದರೂ ಕೂಡ ಜನಪ್ರಿಯತೆ ಸಿಗದೇ ಮೂಲೆಗುಂಪಾದ ಗುರುರಾಯರನ್ನು ಪುನಃ ಸ್ಮರಿಸುವ ಪುಣ್ಯದ ಕೆಲಸ ಅವರ ಪಟ್ಟ ಶಿಷ್ಯ ವಿನಾಯಕ ತೊರವಿ ಬೆಂಗಳೂರಿನಲ್ಲಿ ಮಾಡುತ್ತಿರುತ್ತಾರೆ. ಹಾಗೆಯೇ ಪರಮೇಶ್ವರ ಹೆಗಡೆ ಬೆಂಗಳೂರಿನಲ್ಲಿ ಮತ್ತು ಕರ್ನಾಟಕ ಸಂಘ ಮುಂಬಯಿಯಲ್ಲಿ ಬಸವರಾಜ ರಾಜಗುರು ಮತ್ತು ಮಲ್ಲಿಕಾರ್ಜುನ ಸ್ಮೃತಿ ಸಮಾರೋಪ ತಪ್ಪದೇ ನಡೆಸುತ್ತಾರೆ ಎಂಬುದನ್ನು ಇಲ್ಲಿ ನಮೂದಿಸಬಹುದು. (ಈ ಲೇಖನ ಬರೆದದ್ದು ಜುಲೈ1997ರಲ್ಲಿ).

ಧಾರವಾಡ ಶಿಕ್ಷಣ ಕ್ಷೇತ್ರದ ಮಧ್ಯ ಬಿಂದು ಆಗಿತ್ತು ಎಂದು ಈಗಾಗಲೇ ಹೇಳಲಾಗಿದೆ. ಭೌಗೋಳಿಕವಾಗಿಯೂ, ಉತ್ತರದಿಂದ ಮೈಸೂರು, ಸಂಸ್ಥಾನದೆಡೆ ಪ್ರಸ್ಥಾನ ಮಾಡುವವರಿಗೆ ಕೂಡ ಇದು ಮಧ್ಯಭಾಗವೇ. ಮುಮ್ಮಡಿಯವರ ಕಾಲದಿಂದ ಇತ್ತೀಚೆಯ ಜಯಚಾಮರಾಜೇಂದ್ರ ಒಡೆಯರ್ ಆಳ್ವಿಕೆ ಮತ್ತು ಅವರು ಮೈಸೂರಿನ ರಾಜಪ್ರಮುಖರಾಗಿರುವತನಕ ಉತ್ತರ ಮತ್ತು ದಕ್ಷಿಣ ಸಂಸ್ಥಾನಗಳ ನಡುವೆ ಸಾಂಸ್ಕೃತಿಕ ಆದಾನ-ಪ್ರದಾನ ನಡೆದೇ ಇತ್ತು. ಕ್ಷಾತ್ರತೇಜದಿಂದ ಮಿನುಗುವ ರಾಜ-ಮಹಾರಾಜರುಗಳ ಕೌಟುಂಬಿಕ ಸಂಬಂಧ, ಲಗ್ನಾದಿ ಸಂಸ್ಕಾರಗಳಿಂದ ಭಾಷೆಯ ಭೇದಭಾವ ಕಡೆಗಣಿಸಿ ವಿವಾಹಗಳನ್ನು ಮಾಡಿದ್ದರಿಂದ ಮತ್ತು ಮಾಡಿಕೊಂಡಿದ್ದರಿಂದ ಈ ಬಗೆಯ ಸಾಂಸ್ಕೃತಿಕ ವಿನಿಮಯ ಅರಮನೆಗಳಲ್ಲಿಯೂ ನಡೆಯಿತು. ಮೈಸೂರಿನ ದಸರಾ ಮಹೋತ್ಸವದಲ್ಲಿ ಭಾಗವಹಿಸಲು ಇಡೀ ಭಾರತವರ್ಷದಿಂದ ಕಲಾವಿದರು ಬರುತ್ತಿದ್ದರು. ಉತ್ತರದಿಂದ ಬರುವ ಹಿಂದೂ, ಮುಸಲ್ಮಾನ ಕಲಾವಿದರ ತಂಡಗಳು ಒಂದೆರಡು ತಿಂಗಳು ಮೊದಲೇ ತಮ್ಮ ಪ್ರವಾಸವನ್ನು ಆರಂಭಿಸಿ ಗಾಡಿಗಳಲ್ಲೋ, ದಮಣಿಗಳಲ್ಲೋ ಸಂಚರಿಸುತ್ತ ಧಾರವಾಡದಲ್ಲಿ ಕೆಲದಿನ ಬಿಡಾರ ಹೂಡುವ ಪದ್ಧತಿ ಇಟ್ಟುಕೊಂಡಿದ್ದರು. ಫಲವತ್ತಾದ ಐಸುಪೈಸಾದ ಜಮೀನು, ಹಾಲು ಹೈನುಗಳಿಗೆ ಕೊರತೆ ಇಲ್ಲದ ಪ್ರದೇಶ. ಗೋದಿ ಮತ್ತು ಜೋಳದ ಕೊನೆಯ ಪ್ರದೇಶವೆಂದರೆ ಇದೆ. ಮುಂದೆ ಅಕ್ಕಿಯ ಉತ್ಪಾದನೆಯೇ ಜಾಸ್ತಿ! ಹೀಗಾಗಿ ಕೆಲವರು ಕೆಲವೇ ದಿನ, ಹಲವರು ಹಲವುದಿನ ಮತ್ತೆರಡು ಕುಟುಂಬಗಳು

ಖಾಯಂ ವಾಸ್ತವ್ಯಕ್ಕಾಗಿ ಅವರ ಪುನರ್ಗಮನದ ವೇಳೆಯಲ್ಲಿ ಬೀಡು ಬಿಟ್ಟಿದ್ದು ಆಶ್ಚರ್ಯವೇನಿಲ್ಲ.

ಇದೇ ಸುಮಾರಿಗೆ ಮತ್ತೊಬ್ಬ ಬ್ರಾಹ್ಮಣ ಗ್ವಾಲಿಯರ್, ಆಗ್ರಾದಲ್ಲಿಯ, 'ಸಂಗೀತ ತಮ್ಮದೇ ಸೊತ್ತು' ಎಂದು ತಿಳಿದುಕೊಂಡ ಸಂಗೀತ ಬಿಟ್ಟು ಬೇರೇನೂ ಬಾರದ ನಿರಕ್ಷರಕುಕ್ಷಿ ಮತ್ತು ಸದಾ ಅಫೀಮ್, ಗಾಂಜಾ, ಮದ್ಯಸೇವನೆಯ ಚಟ ಹತ್ತಿದ ಕೆಲ ಉಸ್ತಾದ್‌ರ ಅಡಿಯಲ್ಲಿ ಘನತಪಶ್ಚರ್ಯದಿಂದ ಖಯಾಲ್ ಗಾಯನ ಕಲಿತು ಅದರಲ್ಲಿ ಪಾರಂಗತರಾಗಿ ಕರ್ನಾಟಕದ ಗಡಿ ಪ್ರದೇಶದಲ್ಲಿ ನೆಲೆಸಿದ ಬಾಳಕೃಷ್ಣ ಇಚಲಕರಂಜಿಕರರ ವಾಸ್ತವ್ಯ ಮಗದೊಂದು ಕಾರಣ. ಪೇಶ್ವೆಗಳ ಅಳಿಗಾಲದ ನಂತರ ಮತ್ತು ಬ್ರಿಟಿಷರ ಅಭಿವೃದ್ಧಿಯ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿಯ ಬಹುತೇಕ ಸಣ್ಣ ದೊಡ್ಡ ಜಾಗೀರದಾರರೂ, ಪಾಳೆಯಗಾರರೂ ಮತ್ತು ಸರಂಜಾಮಶಾಹಿಯ ಚೌಥಾಯಿ ಪಡೆಯುವ ದೇಸಾಯಿಯವರೂ, ಪ್ರಾಮುಖ್ಯವಾಗಿ ಮರಾಠಿಗರಿದ್ದ ಕಾರಣ ಈ ಉತ್ತರಾದಿ ಸಂಗೀತಕ್ಕೆ ತಕ್ಕಮಟ್ಟಿಗೆ ರಾಜಾಶ್ರಯ ಸಿಕ್ಕಿತ್ತು. ಎರಡನೇ ಬಾಜೀರಾಯನ ಸಂಗೀತದ ಹುಟ್ಟು ಉತ್ತರದಲ್ಲಿ, ಆಗಿನ ಕಾಲದ ಲಖನೌ ಮತ್ತು ಔಂಧ ಸಂಸ್ಥಾನದ ವಾಜೀದಾಲಿ ಶಾಹನನ್ನು ಮೀರಿಸಿದ್ದು ಅತಿಶಯೋಕ್ತಿಯೇನಲ್ಲ. ಅವನ ಲಾವಣಿ-ತಮಾಷಾದ ಬಗ್ಗೆ ಮರಾಠಿಯಲ್ಲಿ ಹಲವು ಸಾಹಿತ್ಯವು ಲಭ್ಯವಿದೆ. ಅವರ ಸಂಗಡಿಗರೂ, ಮಾಂಡಲಿಕರೂ ಮತ್ತು ಸಣ್ಣಪುಟ್ಟ ಜಾಗೀರದಾರರೂ ಯಥಾರಾಜಾ-ತಥಾಪ್ರಜಾ ಎಂಬ ತತ್ವವನ್ನು ಅನುಸರಿಸಿದ್ದು ಈ ಪ್ರಕಾರದ ಸಂಗೀತ ಪ್ರಸಾರಕ್ಕೆ ಪುಟಕೊಟ್ಟಂತಾಯಿತು.

ಭಾರತದ ಯಾವ ಮೂಲೆಯಲ್ಲಿಯೂ ಈ ತರಹದ ಮೂರು ಉತ್ತರಾದಿ ಘರಾಣೆಗಳ ಪ್ರಭಾವ ಒಂದೇ ಪ್ರದೇಶದಲ್ಲಿ ಆದದ್ದು ಇಲ್ಲ ಎಂಬುದು ಇತಿಹಾಸದ ದಾಖಲೆ. ಇದಕ್ಕೆ ಅಪವಾದವೆಂದರೆ ಧಾರವಾಡ ಪ್ರದೇಶ. ಕಿರಾಣಾ, ಗ್ವಾಲಿಯರ್ ಮತ್ತು ಆಗ್ರಾ (ಇವು ಮೂರು ಮೂಲ ಘರಾಣೆಗಳು, ಇನ್ನೂ ಭೇಂಡಿ ಬಜಾರ, ಇಂದೂರ್, ಇಟ್ವಾವಾ ಮತ್ತು ಮೇವಾತಿ ಎಂಬ ಸಣ್ಣ ದೊಡ್ಡ ಸಂಗೀತದ ಮನೆತನಗಳು ಇವೆ). ಇವು ಬೇರು ಬಿಟ್ಟದ್ದು ನಮ್ಮ ಪ್ರದೇಶದಲ್ಲಿಯೇ ಎಂಬುದು ನಮಗೆಲ್ಲ ಅಭಿಮಾನದ ಸಂಗತಿ. ಈ ಪ್ರದೇಶಕ್ಕೆ ಉತ್ತರಾದಿ ಸಂಗೀತದ, 'ತ್ರಿವೇಣಿ ಸಂಗಮ' ಎಂದು ಹೊಸ ನಾಮಕರಣವನ್ನು ಕೂಡ ಮಾಡಬಹುದು.

ಉಸ್ತಾದ್ ಅಬ್ದುಲ್ ಕರೀಂಖಾನರ ಕಿರಾಣಾ ಘರಾಣೆಯ ಪ್ರತಿಷ್ಠಾಪನೆ ಕರ್ನಾಟಕದಲ್ಲಿ ಮಾಡಿದ್ದು ಅವರೇ. ಆಗಿಂದಾಗ್ಗೆ ಕುಂದಗೋಳಕ್ಕೆ ಬರುತ್ತಿದ್ದ ಖಾನರಿಗೆ ವಿಶೇಷ ಆಕರ್ಷಣೆಯೆಂದರೆ ನಾಡಿಗೇರ ಮನೆತನದ ಚಿಕ್ಕ ರಾಮಚಂದ್ರ, ಕರೀಂಖಾನರ ಲಕ್ಷ್ಯವನ್ನು ತನ್ನೆಡೆ ಸೆಳೆಯಲು ಈ 10-12 ವರ್ಷದ ಚಿಕ್ಕ ಹುಡುಗ ಖಾನಸಾಹೇಬರ ಅತ್ಯಂತ ಜನಪ್ರಿಯವಾದ, 'ಜಮುನಾಕೆ ತೀರ್' ಅವರದೇ ಶೈಲಿಯಲ್ಲಿ ಹಾಡುತ್ತ ಒಂದು ದಿನ ತನ್ನ ಪ್ರಯತ್ನದಲ್ಲಿ ಸಫಲನಾದ. ಅಚ್ಚ ಕನ್ನಡಿಗರಾದರೂ ಇವರೇ ಮುಂದೆ ಸವಾಯಿ ಗಂಧರ್ವರೆಂದು, ಮರಾಠಿ ನಾಟಕಗಳಲ್ಲಿ ಬಾಲಗಂಧರ್ವರಂತಹ ಸಂಗೀತ ನಟರೊಂದಿಗೆ ಭುಜಕ್ಕೆ ಭುಜ ತಾಕಿಸಿದ್ದರು. ಅತ್ಯಂತ ಜನಪ್ರಿಯರಾದ ರಾಮಭಾವೋ ಕುಂದಗೋಳಕರರು ಡಾ. ಗಂಗೂಬಾಯಿ, ಪಂ. ಭೀಮಸೇನ ಜೋಶಿ,

ಕಪಿಲೇಶ್ವರಿ, ಫೀರೋಜ್ ದಸ್ತುರ್, ಸಂಗಮೇಶ್ವರ ಗುರವರಂತಹ ದಿಗ್ಗಜರ ಗುರುಗಳು. ತಮ್ಮ ಉಸ್ತಾದ್‌ರನ್ನು ಕೇಳದೇ ಓಡಿ ಹೋಗಿ ನಾಟಕ ಕಂಪನಿ ಸೇರಿಕೊಂಡ, ರಾಮಭಾವು ಮುಂದೆ ಕರೀಂಖಾನರ ರೋಷಕ್ಕೆ ತುತ್ತಾಗಿ ಕೊನೆ ಕೊನೆಗೆ ಗುರುಗಳ ಆಶಿರ್ವಾದವಿರಲಿ, ಅವರ ಕೊನೆಯತನಕ (1926) ಮಾತುಕತೆ ಕೂಡ ಮಾಡಲಿಲ್ಲ. ಆದರೆ ಸ್ವಯಂಭೂ ಪ್ರತಿಭೆಯ ಸವಾಯಿ ಗಂಧರ್ವರು ಎರಡು ವರ್ಷಗಳಲ್ಲಿ, ತೋಡಿ, ಮುಲ್ತಾನಿ ಮತ್ತು ಪೂರಿಯಾ ಇಷ್ಟೇ ಕಲಿತಿದ್ದುದು. ನಾಟಕ ಕಂಪನಿಯ ಗೀಳು ಹಿಡಿದ ರಾಮಭಾವು ಅಲ್ಲಿ ತಮ್ಮ ಸಂಗೀತ ಶಿಕ್ಷಣ ಗ್ವಾಲಿಯರ್ ಪರಂಪರೆಯ ನಿಸ್ಸಾರ್ ಹುಸ್ಸೈನ್, ರಾಮಕೃಷ್ಣ ವಜೆ, ಮತ್ತು ಭೂಗಂಧರ್ವರೆಂದು ಹೆಸರುವಾಸಿಯಾದ ಫಕೀರ ರೆಹಮತ್ ಖಾನ್ ಮತ್ತು ಕೆಲಕಾಲ ಭಾಸ್ಕರ ಬುವಾ ಬಖಲೆಯವರಿಂದಲೂ ಶಿಕ್ಷಣ ಪಡೆಯಲು ಹಿಂದೆ ಮುಂದೆ ನೋಡಲಿಲ್ಲ! ಪುಣೆಯಲ್ಲಿ 1952 ಸೆಪ್ಟೆಂಬರ್ 12ರಂದು ಅಸು ನೀಗಿದಾಗ ಅವರ ವಯಸ್ಸು 66 ಅಷ್ಟೇ!

*****

6.19

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಚಾರ ಮತ್ತು ಪ್ರಸಾರದಲ್ಲಿ ಕರಾವಳಿಯ ಕೊಡುಗೆ

ಹಿಂದುಸ್ತಾನಿ ಸಂಗೀತ ಎಂದಾಕ್ಷಣ ನಮ್ಮ ಕಣ್ಣೆದುರಿಗೆ ಹೊಳೆಯುವದು ಖಯಾಲ್ ಗಾಯನ. ಆದರೆ ಭಾರತದ ಉತ್ತರ ಭಾಗದಲ್ಲಿ ಖಯಾಲ್ ಹಾಡುಗಾರಿಕೆಯ ಪೂರ್ವರೂಪವಾದ, ಧ್ರುಪದ ಗಾಯಕಿಗೆ ಮೊದಲಿನ ಸ್ಥಾನ ಸಲ್ಲುತ್ತದೆ. ಹೆಚ್ಚಿನ ವಿಭಜನೆಗೆ ಹೋಗದೇ ಹೇಳುವದಾದರೆ ಖಯಾಲ್ ಗಾಯನ ಪದ್ಧತಿಯು 18-19ನೇ ಶತಮಾನಗಳಲ್ಲಿ ಉತ್ತರ ಭಾರತದಲ್ಲಿ ಪ್ರಚಲಿತವಿತ್ತು. ಸಾವಕಾಶವಾಗಿ ದಕ್ಷಿಣಕ್ಕೆ ಅಡಿ ಇಡುತ್ತ ಮೊದಲು ಮುಂಬಯಿಯಲ್ಲಿ ಕಾಣಿಸಿಕೊಂಡಿತು. ಮುಂದೆ ಪುಣೆಯಲ್ಲಿ, ಆ ಬಳಿಕ ಧಾರವಾಡದಲ್ಲಿ ಮತ್ತು ಇತರ ನಗರಗಳಲ್ಲಿ ಹೆಜ್ಜೆ ಇಟ್ಟಿತು. ಈ ಪ್ರದೇಶವೆಲ್ಲ ಆ ದಿನಗಳಲ್ಲಿ 'ಸದರ್ನ ಮರಾಠಾ ಕಂಟ್ರಿ' (Southern Maratha Country) ಎಂದೇ ಕರೆಯಲ್ಪಡುತ್ತಿತ್ತು. ಇಡೀ ಪಶ್ಚಿಮ ಕರಾವಳಿಯಲ್ಲಿ ಹಿಂದುಸ್ತಾನಿ ಪದ್ಧತಿಯ ಹಾಡುಗಾರಿಕೆ ಹೇಗೆ ಪ್ರಚಾರಕ್ಕೆ ಬಂದಿತು ಎನ್ನುವದನ್ನು ತಿಳಿಸಿ ಹೇಳುವದು ಈ ಲೇಖನದ ಉದ್ದೇಶ.

ಸಂಗೀತಜ್ಞ ಡಾ ಅಶೋಕ ದ ರಾನಡೆಯವರ ಅಭಿಪ್ರಾಯದಂತೆ, "ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವೆಂದರೆ ಅದು ಸಂಗೀತ ಕಲೆಯೇ" ಏಕೆಂದರೆ ಒಬ್ಬ ಗಾಯಕನು ಒಂದೇ ರಾಗವನ್ನು ಆಯ್ಕೆಮಾಡಿ ಪ್ರತಿಸಲ ಹಾಡಿದಾಗಲೂ ಹೊಸ ಕಲಾಪ್ರಕಾರವನ್ನೇ ಸೃಷ್ಟಿಸುತ್ತಿರುತ್ತಾನೆ. ಅವರ ವಿಶ್ಲೇಷಣೆಯಂತೆ ಆರು ಪ್ರಕಾರದ ಸಂಗೀತ ವಿಭಾಗಗಳಿವೆ. ಮೊದಲನೆಯದು, **ಆದಿಮ ಸಂಗೀತ**, ಅದಕ್ಕೆ ಒಂದೆರಡು ಸ್ವರಗಳಿದ್ದು, ಸರಳ ತಾಲವಿರುತ್ತದೆ. ವ್ಯಂಜನೆಗಳು ಇರಬಹುದು, ಇಲ್ಲದಿರಬಹುದು. ಕೆಲವೊಂದು ಧಾಟಿಗಳಿಗೆ ನೃತ್ಯದ ತಾಳಗಳು ಇರಬಹುದು. ಎರಡನೆಯದು, **ಜಾನಪದ ಸಂಗೀತ**. ಭಾರತವು ಈ ಪ್ರಕಾರದ ಸಂಗೀತದಲ್ಲಿ ಅತ್ಯಂತ ಶ್ರೀಮಂತವಾಗಿದೆ. ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹರಿದುಹೋಗುವ ಹಲವಾರು ನದಿಗಳಿಗೆ ಸೇತುವೆಗಳಾಗುವ ಮುನ್ನ ಬೇರೆ ಬೇರೆ ವಾಹನಗಳನ್ನು, ಸರಕುಗಳನ್ನು ಮತ್ತು ಜನರನ್ನು ದಾಟಿಸುತ್ತಿದ್ದ ಅಂಬಿಗರು ತಮ್ಮವೇ ಹಾಡುಗಳನ್ನು ಹಾಡುತ್ತಿದ್ದುದನ್ನು ಹಳಬರು ಇಂದಿಗೂ ನೆನೆಸಿಕೊಳ್ಳುತ್ತಾರೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಹಸ್ರಾರು ಪ್ರಕಾರಗಳ ಜಾನಪದ ಸಂಗೀತ

ಗೋಚರಿಸುತ್ತವೆ. ಇವುಗಳಲ್ಲಿ ಕೆಲವನ್ನು, ಪಂ. ರವಿಶಂಕರ, ಉಸ್ತಾದ್ ಅಲಿ ಅಕಬರ್‌ಖಾನ್ ಮತ್ತು ಉಸ್ತಾದ್ ವಿಲಾಯತ್ ಖಾನರು (ಭಟಿಯಾಲಿ ಧುನ್) ಜನಪ್ರಿಯಗೊಳಿಸಿದ್ದಾರೆ. ಕನ್ನಡಿಗರೇ ಆದ ಕುಮಾರ ಗಂಧರ್ವರು ಮಧ್ಯಪ್ರದೇಶದ ದೇವಾಸದಲ್ಲಿ ನೆಲೆಸಿದ್ದರಿಂದ ಅನೇಕ ಮಾಳವಾ ಧುನ್‌ಗಳನ್ನು ಆಕರ್ಷಕವಾಗಿ ಶ್ರುತಪಡಿಸಿದರು.

ಮೂರನೆಯದಾಗಿ **ಧಾರ್ಮಿಕ ಸಂಗೀತದ** ಸ್ಥಾನ ಬರುತ್ತದೆ. ಇದರಲ್ಲಿ ದೇವಸ್ಥಾನಗಳಲ್ಲಿ ಹಾಡುವ, ಭಜನೆ, ಕೀರ್ತನೆ, ಕವ್ವಾಲಿಗಳು, ಸನ್ಮತಿ ಗೀತೆಗಳು (Psalms) ಇತರ ಭಕ್ತಿಗೀತೆಗಳು ಬರುತ್ತವೆ. ನಾಲ್ಕನೆಯದಾಗಿ ಕಲಾ ಸಂಗೀತ (Art Music) ಬರುತ್ತದೆ. ಇದರಲ್ಲಿ ಕರ್ನಾಟಕ ಮತ್ತು ಹಿಂದುಸ್ತಾನಿ ಪ್ರಕಾರಗಳಲ್ಲದೇ ಭಾರತದ ಪೂರ್ವೋತ್ತರ ಭಾಗಗಳಲ್ಲಿ ಚೀನಿ-ಬರ್ಮಿ ಪ್ರಭಾವದ ಸಂಗೀತ ಕೇಳಿಬರುತ್ತದೆ. ಆ ಬಳಿಕ ಬರುವದು **ಸಮ್ಮಿಶ್ರ ಸಂಗೀತ** ಇದಕ್ಕೆ 'ಸಂಗಮ ಸಂಗೀತ'ವೆಂದೂ ಕರೆಯುವದುಂಟು. ಅಲ್ಲದೇ ಈ ಸಮ್ಮಿಶ್ರ ಪ್ರಕಾರದಲ್ಲಿ ಚಿತ್ರ ಸಂಗೀತ, ರಂಗಸಂಗೀತ ಅಥವಾ ಭಾವಗೀತೆ ಪ್ರಕಾರವೂ ಒಳಗೊಂಡಿರುತ್ತದೆ. ಹಲವಾರು ವರ್ಷಗಳಲ್ಲಿ ಜನರ ಬೇಡಿಕೆಯನ್ನು ಅನುಲಕ್ಷಿಸಿಯೋ, ಬೇಕೆಂದೊ ಅಥವಾ ವೈವಿಧ್ಯವನ್ನು ತರಲೆಂದೊ ಸ್ವರಸಂಯೋಜಕರು ಈ ಎಲ್ಲ ಪ್ರಕಾರಗಳ ಸಮ್ಮಿಶ್ರಣ ಮಾಡುವದುಂಟು.

ಏನಿದ್ದರೂ ಕರ್ನಾಟಕ ಪ್ರದೇಶವನ್ನು ಗಮನಿಸಿದರೇ ಇತರ ರಾಜ್ಯಗಳಿಗಿಂತಲೂ ಹಿಂದುಸ್ತಾನಿ ಮತ್ತು ಕರ್ನಾಟಕ ಪ್ರಕಾರಗಳೆರಡೂ ಪ್ರಚಲಿತವಿರುವದರಿಂದ ಈ ಸಮ್ಮಿಶ್ರಣ ಹೆಚ್ಚು ಸ್ಫುಟವಾಗಿದೆ. ಜಾನಪದ ಪ್ರಕಾರಗಳಲ್ಲಿ ಯಕ್ಷಗಾನ, ಗುಮ್ಮಟೆ ಪಾನಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ, ಯಕ್ಷಗಾನ ಬಡಗ ತಿಟ್ಟು ಮತ್ತು ತೆಂಕು ತಿಟ್ಟುಗಳಲ್ಲಿ ಬೆಳೆದು ಬಂದು ಡಾ ಶಿವರಾಮ ಕಾರಂತ ಮತ್ತು ಹಾಸ್ಯಗಾರ ಕುಟುಂಬದಿಂದಾಗಿ ಯಕ್ಷಗಾನ ಪ್ರಕಾರವು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜನಪ್ರಿಯವಿದ್ದರೂ ಹಿಂದುಸ್ತಾನಿ ಸಂಗಿತದ ಪ್ರಭಾವ ಭಾಗವತರ ಹಾಡುಗಾರಿಕೆಯಲ್ಲಿ ಈ 50-60 ವರ್ಷಗಳಲ್ಲಿ ಹೆಚ್ಚು ಸ್ಫುಟವಾಗಿ ರೂಪಗೊಂಡಿದೆ. ಪುರಂದರ ದಾಸರ ಹಾಡುಗಳು ಚಲಚಿತ್ರಗಳಲ್ಲಿ ಕಾಣಿಸಿಕೊಂಡು ಜನಪ್ರಿಯ ಸಂಗೀತದ ಭಾಗವಾಗಿ ಹೋದವು. ಹೀಗಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾದ ಬಡುಗು ತಿಟ್ಟು ಯಕ್ಷಗಾನ ಪ್ರಕಾರದಲ್ಲಿ ಇಂತಹ ಹಾಡುಗಳು ಕಾಣಿಸಿಕೊಂಡು ಸೀಮಾತೀತವಾಗಿದ್ದು ಕಂಡುಬರುತ್ತದೆ.

ಉತ್ತರ ಮತ್ತು ದಕ್ಷಿಣ ಕನ್ನಡದ ಸಮುದ್ರ ಕಿನಾರೆಯು, 'ಕರಾವಳಿ' ಎಂದು ಗುರುತಿಸಲ್ಪಡುತ್ತದೆ. ಸಂಗೀತ ಕ್ಷೇತ್ರದಲ್ಲಿದ್ದವರಿಗೆ ಸಂಗೀತದ ಕುರಿತಾದ ಭೌಗೋಳಿಕ ಸೀಮೆಗಳಿಲ್ಲ ಎಂಬುದು ಚೆನ್ನಾಗಿ ಗೊತ್ತು. ಉದಾಹರಣೆಗೆ ಭಾರತದ ಉದ್ದಗಲಕ್ಕೂ ಮತ್ತು ವಿದೇಶಗಳಲ್ಲಿ ಕಂಡು ಬರುವ ಸಂಗೀತಜ್ಞರು, ಗದುಗಿನ ವೀರಾಶ್ರಮ ಪುಣ್ಯಾಶ್ರಮದಲ್ಲಾಗಲೀ ಅಥವಾ ಮುಂಬಯಿ ಕೋಲಕತ್ತಾಗಳಲ್ಲಾಗಲೀ (ಐಟಿಸಿ, ಎಸ್‌ಆರ್‌ಎ) ತರಬೇತು ಪಡೆದವರೇ ಆಗಿದ್ದಾರೆ. ಇವರಲ್ಲಿ ಕೆಲವರು ಚೆನ್ನೈನವರೂ ಕಂಡು ಬರುತ್ತಾರೆ. ಹೀಗಾಗಿ ಈ ಪ್ರಬಂಧದಲ್ಲಿ ಕಂಡು ಬರುವ ಸಂಗೀತದ ಬೆಳವಣಿಗೆಯ ಅಂಶಗಳು ಎಲ್ಲ ಪ್ರದೇಶಗಳ ಸಂಗೀತ ಪ್ರಕಾರಗಳನ್ನು ಒಳಗೊಂಡಿದ್ದರೆ ಅದರಲ್ಲೂ ಮುಂಬಯಿಯ ಮಹಾನಗರದ ವರ್ಚಸ್ಸು ಎದ್ದು ಕಂಡರೆ ಅದು ಸ್ವಾಭಾವಿಕ.

18–19 ನೇ ಶತಮಾನಗಳಲ್ಲಿ ಹತ್ತಿಯ ವ್ಯಾಪಾರದಿಂದಾಗಿ ಮುಂಬಯಿ ಬಂದರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಇತರ ಪ್ರದೇಶಗಳ ವರ್ತಕರು ಕಂಡುಬಂದರು. ಆ ಸಮಯಕ್ಕಾಗಲೇ ವಿದ್ಯಾನಗರಿಯೆಂದು ಹೆಸರಾದ ಮುಂಬಯಿ, ಇತರ ಕಲಾಕಾರರನ್ನು ಆಕರ್ಷಿಸಿತು. ಸಂಗೀತವು ಅಪವಾದವಾಗಿರಲಿಲ್ಲ. ಹೀಗಾಗಿ ಉತರಪ್ರದೇಶದ ಆಗ್ರಾ, ಅತ್ರೋಲಿ, ಖುರ್ಜಾ ಕೈರಾನಾ, ಊರುಗಳಿಂದ ಮುಂಬಯಿಗೆ ಉದರನಿರ್ವಹಣೆಗೆಂದು ಸಂಗೀತದ ಉಸ್ತಾದ್‌ರು ಬರಲಾರಂಭಿಸಿದರು. ಅವರಲ್ಲಿ ಮೊದಲಿಗರು **ಭೇಂಡಿ ಬಜ಼ಾರ್** ಘರಾಣಾದವರೆಂದು ಗುರುತಿಸಲ್ಪಟ್ಟ ಮೂವರು ಸೋದರರು (ಛಜ್ಜುಖಾನ್, ನಜ಼ೀರ್ ಖಾನ್, ಖದೀಮ್ ಹುಸೇನ್ ಖಾನ್) ಇತರ ಘರಾಣೆಯವರೂ ಹಿಂಬಾಲಿಸಿದರು. ಮುಂಬಯಿಯ ಆರ್ಥಿಕಸಂಪನ್ನತೆಯಿಂದಾಗಿ ಗೋವಾದ ಕರಾವಳಿಯಿಂದ ದೇವದಾಸಿಯರು ಇಲ್ಲಿಗೆ ಬರುವಂತೆ ಆಯಿತು. ಗೋವಾ ಆಗ ಪೋರ್ಚುಗೀಸರ ಆಡಳಿತಕ್ಕೆ ಒಳಪಟ್ಟಿತ್ತು. ಒಂದು ವಿಧದಲ್ಲಿ ಇಲ್ಲಿಯ ದೇವದಾಸಿಯರು ಲಖನೌ ಅಥವಾ ಆಗ್ರಾದ ತವಾಯಫರಂತಿದ್ದರು. ನೃತ್ಯ ಮತ್ತು ಸಂಗೀತದಲ್ಲಿ ಉತ್ತಮ ಸಂಸ್ಕಾರವುಳ್ಳ ಈ ಮಹಿಳೆಯರು ಆಗ ಮುಂಬಯಿ ಪ್ರದೇಶವನ್ನು ಆಕ್ರಮಿಸಿದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಆಕರ್ಷಿಸಲ್ಪಟ್ಟರು. ಇದರಲ್ಲಿಯ ಹಾಡುಗಾರಿಕೆಯ ಸ್ವಾತಂತ್ರ್ಯ ಅವರನ್ನು ತಟ್ಟಿತು. ಅವರೆಲ್ಲ ಅಲ್ಲಿ ನೆಲೆಸಿದ ಉಸ್ತಾದ್‌ರ ಬಳಿ ಸಂಗೀತ ತರಬೇತಿ ಪಡೆಯಲು ಆರಂಭಿಸಿದರು. ಇವರಲ್ಲಿ ಮೊದಲಿಗಳು ಅಂಜನಿಬಾಯಿ ಮಾಲ್ಪೇಕರ್. ಆಕೆ ಕಲಿತದ್ದು ಭೇಂಡಿ ಬಜ಼ಾರವಾಲಾ ಅವರಿಂದ. ಅವಳ ಹೆಸರು ಮತ್ತು ಹಾಡುಗಾರಿಕೆಯ ಪ್ರಸಿದ್ಧಿ ಭಾರತದಾದ್ಯಂತ ಹರಡಿತು. ಕೇಸರಬಾಯಿ ಕೇರಕರ್, ಮೋಗುಬಾಯಿ ಕುರ್ಡಿಕರ್, ಮೇನಕಾಬಾಯಿ ಶೀರೋಡಕರ್ ಇನ್ನೂ ಅನೇಕ ಕಲಾವಂತ ಮಹಿಳೆಯರು ಬೇರೆ ಬೇರೆ ಘರಾಣೆಯ ಉಸ್ತಾದ್‌ರಿಂದ ಸಂಗೀತವನ್ನು ಕಲಿತರು.

ಗೋವಾದ ಬೋರಿ ಎಂಬ ಸಣ್ಣ ಊರಿನಿಂದ ರಾಮಕೃಷ್ಣ ಬುವಾ ವಜ಼ೆಯವರು ಮುಂಬಯಿಗೆ ಬಂದು ಅತ್ಯಂತ ಪರಿಶ್ರಮದಿಂದ **ಗ್ವಾಲಿಯರ್ ಘರಾಣಾ**ದ ನಿಸ್ಸಾರ ಹುಸೇನ್ ಖಾನರಿಂದ ಸಂಗೀತ ಕಲಿತರು. ರಾಮಕೃಷ್ಣ ಬುವಾ ಇಚಲಕರಂಜೀಕರರು ವಜ಼ೆ ಬುವಾಗಿಂತ 50 ವರ್ಷ ಮೊದಲೇ ಇಲ್ಲಿ ತಲುಪಿದ್ದರು. ಕರಾವಳಿಯ ಸಾರಸ್ವತರಲ್ಲಿ ಹಿಂದುಸ್ತಾನಿ ಸಂಗೀತದ ಆಕರ್ಷಣೆ ಎಷ್ಟು ಹರಡಿತ್ತೆಂದರೆ ಶಿರಾಲಿ, ಗೋಕರ್ಣ ಮುಂತಾದ ಚಿಕ್ಕ ಗ್ರಾಮಗಳ ದೇವಸ್ಥಾನಗಳ ಪುರೋಹಿತ ವರ್ಗದವರು ಕೂಡ ಮುಂಬಯಿಗೆ ಬಂದು ಸಂಗೀತ ಕಲಿಯಲಾರಂಭಿಸಿದರು. ಸಂಪ್ರದಾಯಶರಣರಲ್ಲದ ಉದಾರಮತಸ್ಥರಾದ ಆನಂದಾಶ್ರಮ ಸ್ವಾಮೀಜಿಯವರಂತಹ ಚಿತ್ರಾಪುರ ಮಠಾಧೀಶರು ಸಂಗೀತ ಕಲಿಯಲೆಂದೇ ಮಠದಿಂದ ಪುರೋಹಿತರನ್ನು ಕಳುಹಿಸಿದ್ದುಂಟು!

ಹೊನ್ನಾವರದ ದಂತವಕ್ರ ಭಟ್ ಅಥವಾ ಹೊನ್ನಾವರ ಕೃಷ್ಣ ಭಟ್(1874–1942) ಅವರ ಕೊಡುಗೆಯನ್ನು ಮರೆಯುವಂತಿಲ್ಲ. ಮೂಲತ: ಗೋಕರ್ಣ ಭಂಡಿಕೇರಿ ಮಠಕ್ಕೆ ಸೇರಿದವರಾದ ಕೃಷ್ಣ ಭಟ್ಟರು ಉಸ್ತಾದ್ ಬಡೆ ಗುಲಾಮ ಅಲಿಯವರ ಚಿಕ್ಕಪ್ಪರಾದ ಉಸ್ತಾದ್ ಕಾಲೇಖಾನರ ಬಳಿ ಕಲಿತರು. ಇದೇ ಸಮಯದಲ್ಲಿ ಗೋಕರ್ಣದ ವಿಘ್ನೇಶ್ವರ ಶಾಸ್ತ್ರಿಗಳೆಂಬವರು ಕರ್ನಾಟಕ ಪದ್ಧತಿಯಲ್ಲಿ ವಯೊಲಿನ್‌ನಲ್ಲಿ ಪ್ರಾವಿಣ್ಯ ಪಡೆದಿದ್ದರೂ ಹಿಂದುಸ್ತಾನಿ ಸಂಗೀತವನ್ನು ಕಲಿತು ಪ್ರಾಚಾರ್ಯ ಬಿ.ಆರ್. ದೇವಧರರ ಮುಂಬಯಿಯಲ್ಲಿಯ 'ಸ್ಕೂಲ ಆಫ್ ಇಂಡಿಯನ್ ಮ್ಯೂಸಿಕ'ದಲ್ಲಿ ವಾಯೋಲಿನ್ ಶಿಕ್ಷಕರಾಗಿ ನೇಮಿಸಲ್ಪಟ್ಟಿದ್ದರು. ಮುಂದೆ ಗಜಾನನ ಕಾರ್ನಾಡ್, ವಿ.ಜಿ. ಜೋಗ್, ಡಿ.ಕೆ.

ದಾತಾರ್ ಅವರಂತಹ ಪ್ರತಿಭಾವಂತರಿಗೆ ವಯೊಲಿನ್ ಗುರುಗಳಾದರು. ಇವರು ಸುಮಾರು 100 ವರ್ಷ ಬದುಕಿದ್ದರು. ಅವರ ಮಗ ನಾರಾಯಣ ಪಂಡಿತರು ಹೊನ್ನಾವರ ಪಕ್ಕದ ಕಾಸರಗೋಡಿನ ಸ್ನೇಹಕುಂಜದಲ್ಲಿ ಈಗ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ. ಇವರು ದೇವಧರರ ಈ ಸಂಗೀತ ಶಾಲೆಯಲ್ಲಿಯೇ, ಕುಮಾರ ಗಂಧರ್ವರೊಡನೆ ಹಲವು ವರ್ಷಗಳ ಒಡನಾಡಿಯಾಗಿದ್ದರು. ಇವರು ಕೂಡ ಉತ್ತಮ ಪಿಟೀಲು ವಾದಕರು.

ಅತ್ಯುತ್ತಮ ಸಂಗೀತ ಸಂಯೋಜಕರೆಂದು ಖ್ಯಾತಿ ಪಡೆದ ಪಂ. ರತನಜನಕರರು ಹೊನ್ನಾವರ ಕೃಷ್ಣ ಭಟ್ಟರ (ದಂತ ವಕ್ರ ಭಟ್) ಶಿಷ್ಯರಾಗಿದ್ದರು. ಅವರು ಮುಂದೆ ಉಸ್ತಾದ್ ಫಯ್ಯಾಜ಼್ ಖಾನರಿಂದ ಕೂಡ ತರಬೇತಿ ಪಡೆದರು. ಕರಾವಳಿಯಿಂದ ಬಂದ ಎಸ್.ಸಿ.ಆರ್. ಭಟ್, ಕೆ.ಜಿ. ಗಿಂಡೆ (ಕೆ.ಜಿ ಗಿಂಡೆ) ದಿನಕರ ಕಾಯ್ಕಿಣಿ, ಮತ್ತು ಚಿದಾನಂದ ನಗರ್‌ಕರ್ ಇವರೆಲ್ಲ ರತನಜನಕರ್ ಇವರ ಶಿಷ್ಯ ಸಂಪತ್ತಾಗಿದ್ದರು.

ಭೂಮಿ ಮಾಲಕರಾಗಿರುವ ಹವ್ಯಕ ಸಮಾಜದವರು ಕೃಷಿಕರಿದ್ದರೂ ಕೂಡ ಆಗಲೂ ಮತ್ತು ಈಗಲೂ ಕೂಡ ಯಕ್ಷಗಾನದ ಪೋಷಕರಾಗಿದ್ದರೆಂಬುದುದನ್ನು ಮರೆಯುವಹಾಗಿಲ್ಲ. ಹಾಗೆಯೇ ಸಾರಸ್ವತರು ಮೂಲತಃ ಗೌಡ ಸಾರಸ್ವತ ಪಂಗಡಕ್ಕೆ ಸೇರಿದವರು ಕೂಡ ಅನಾದಿ ಕಾಲದಿಂದ ಭೂಮಾಲಿಕರಾಗಿದ್ದರು. ಕಮಲಾದೇವಿ ಚಟ್ಟೋಪಾಧ್ಯಾಯರ ಆತ್ಮ ಚರಿತ್ರೆಯಲ್ಲಿ ತಾವು ಉಸ್ತಾದ್ ಅಬ್ದುಲ್ ಕರೀಂ ಖಾನರ ಶಿಷ್ಯರ ಬಳಿ ಸಂಗೀತ ತರಬೇತಿ ಪಡೆಯುತ್ತಿದ್ದರೆಂಬ ಬಗ್ಗೆ ಉಲ್ಲೇಖಿಸುತ್ತಾರೆ. ಅವರು ಭಾರತದ ಸಂಪತ್ತಾದ ಕರಕುಶಲ ಕೈಗಾರಿಕೆಯನ್ನು ಮನಶ್ಚೇತನಗೊಳಿಸಿದ ಮತ್ತು ಸ್ವಾತಂತ್ರ್ಯ ಯೋಧರೆಂದು ದೇಶ-ವಿದೇಶಗಳಲ್ಲಿ ಪರಿಚಿತರಾಗಿದ್ದಾರೆ.

ಗ್ವಾಲಿಯರ್ ಘರಾಣೆಯ ಹದ್ದುಖಾನರ ಮಗ ಮುಂದೆ ಭೂಗಂಧರ್ವರೆಂದು ಪ್ರಸಿದ್ಧರಾದ ಉಸ್ತಾದ್ ರಹಮತ್ ಖಾನರು. ಇವರು ಅಫೀಮಿನ ದಾಸರಾಗಿದ್ದರೂ ಅಪರೂಪದ ಗಾಯಕರಾಗಿದ್ದರು. ಚತ್ತೆ ಸರ್ಕಸ್ ಕಂಪನಿಯ ಮಾಲಕ ವಿಷ್ಣು ಪಂತರು ಈ ರಹಮತ ಖಾನರ ಶಿಷ್ಯರಾಗಿದ್ದರು. ಶಿವರಾತ್ರಿಕಾಲದಲ್ಲಿ ಗೋಕರ್ಣದಲ್ಲಿ ಕ್ಯಾಂಪ್ ಮಾಡಿ, ಮುಂದೆ, ಮಂಜೇಶ್ವರ, ಮಂಗಳೂರು, ಉಡುಪಿಯಲ್ಲಿ ಸಂಚರಿಸುತ್ತ, ಸಂಗೀತದ ಪ್ರಚಾರಕ್ಕೆ ಕಾರಣರಾದರು.

ಇದೇ ದಿನಗಳಲ್ಲಿ ಕೊಲಂಬಿಯಾ ಭಾರತಕ್ಕೂ ಆಗಮಿಸಿತು. ಇವರು 78 ಆರ್‌ಪಿಎಮ್ ರೆಕಾರ್ಡುಗಳನ್ನು ಹೊರತಂದರು. ಗೋಹರಜಾನರು ಧ್ವನಿಮುದ್ರಿಕೆಗಳಿಗೆ ಹಾಡಿದ್ದು 1903ರಲ್ಲಿ. ಮುಂದೆ ಹಲವಾರು ಕಲಾವಿದರ ಧ್ವನಿಮುದ್ರಿಕೆಗಳು ಬಂದವು. ಅನುಕೂಲವಂತ ಭೂಮಾಲಿಕರ ಮನೆಯಲ್ಲೆಲ್ಲ ಈ ಗ್ರಾಮೊಫೋನ್ ರೆಕಾರ್ಡುಗಳಿಂದ ಹಿಂದುಸ್ತಾನಿ ಸಂಗೀತ ಬಲು ಬೇಗ ಜನಪ್ರಿಯವಾಗಿ ತರುಣ ಜನಾಂಗದ ಮನದ ಮೇಲೆ ಬಲವಾದ ಮುದ್ರೆ ಒತ್ತಿಬಿಟ್ಟಿತು. ಖಯಾಲ್ ಹಾಡುಗಾರಿಕೆಯ ವಿಶಾಲ ಕ್ಷೇತ್ರ ಹಾಡುಗಾರರಿಗೆ ಹೆಚ್ಚಿನ ವೈಯಕ್ತಿಕ ಸ್ವಾತಂತ್ರ್ಯವನ್ನು ಕೊಟ್ಟಿತ್ತು. ಹೀಗಾಗಿ ಇತರ ಪ್ರಕಾರದ ಸಂಗೀತದ ಮೇಲ್ಮಟ್ಟವನ್ನು ಸಾಧಿಸಿತು.

ಪರ್ಶಿಯನ್ ಮತ್ತು ಅರೆಬಿಕ್ ಭಾಷೆಯಲ್ಲಿ 'ಖಯಾಲ್' ಎಂದರೆ 'ಒಂದು ವಿಚಾರ', 'ಒಂದು ಕಲ್ಪನಾ ಲಹರಿ' ಎಂದು ಅರ್ಥವಾಗುತ್ತದೆ. ಹೀಗಾಗಿ ವೈಯಕ್ತಿಕ

ಅಭಿವ್ಯಕ್ತಿಗೆ ಈ ಸಂಗೀತದ ಪ್ರಕಾರ ಹೆಚ್ಚಿನ ಅವಕಾಶ ಕಲ್ಪಿಸುತ್ತದೆ. ಕರಾವಳಿಯ ಕೃಷ್ಣ ಭಟ್ಟರ (ದಂತವಕ್ರ ಭಟ್) ಪ್ರಭಾವದಿಂದಾಗಿ ಚಿತ್ರಾಪುರ ಮಠದಲ್ಲಿ ಮತ್ತು ಅಲ್ಲಿಯ ಇತರ ದೇವಸ್ಥಾನಗಳಲ್ಲಿ ನಡೆದು ಬಂದಿದ್ದ ಕರ್ನಾಟಕ ಸಂಗೀತದ ಪ್ರಭಾವ ಕ್ರಮೇಣ ಹಿಂದೆ ಸರಿಯಿತು. ಚಿತ್ರಾಪುರ ಮಠದ ಸಾಯಂಕಾಲದ ಮಹಾಪೂಜೆಯಲ್ಲಿ ಕೆರೆಕಟ್ಟೆ ನಾಗೇಶರಾವ್ ಮತ್ತು ಇತರ ಅರ್ಚಕರು ಸಾಯಂಕಾಲದ ಭಜನೆಗಳಿಗೆ ಹಿಂದುಸ್ತಾನಿ ರಾಗಗಳನ್ನು ಬಳಸಿದರು. ಇಂದಿಗೂ ಸಾಯಂಪ್ರಾರ್ಥನೆಗಳಲ್ಲಿ ಪ್ರತಿದಿನವೂ ಮಠದಲ್ಲಿ ಹಾಡುವ ಭಜನೆಗಳಲ್ಲಿ ಪ್ರತಿ ದಿನವೂ ರಾಗಗಳಲ್ಲಿ ಬದಲಾವಣೆ ಆಗುತ್ತದೆ. ಮಂಗಳಾರತಿ ಹಾಡುಗಳು ಮಾತ್ರ ಇವತ್ತಿಗೂ ಕರ್ನಾಟಕ ಸಂಗೀತದ ರಾಗಗಳಲ್ಲಿಯೇ ಹಾಡಲ್ಪಡುತ್ತವೆ.

ಮುಗಿಸುವ ಮುನ್ನ ಎರಡು ಮಹತ್ವದ ಅಂಶಗಳತ್ತ ಗಮನ ಸೆಳೆಯಲು ಬಯಸುವೆ. ಮೊದಲನೆಯದಾಗಿ ಹಿಂದುಸ್ತಾನಿ ಸಂಗೀತದ ಬಗ್ಗೆ ಇದಾಗಲೇ ಸಾಕಷ್ಟು ಪ್ರೀತಿಯನ್ನು ಬೆಳೆಸಿಕೊಂಡ ಪ್ರೇಕ್ಷಕಗಣದಿಂದಾಗಿ ಮರಾಠಿ ನಾಟಕಗಳಲ್ಲಿ ಹಿಂದುಸ್ತಾನಿ ಸಂಗೀತದ ಅನೇಕ ಪ್ರಕಾರಗಳು ಸೇರ್ಪಡೆಯಾದವು. ಆದರೆ, ಹೊನ್ನಾವರದ ಹಾಸ್ಯಗಾರರ ಯಕ್ಷಗಾನವಾಗಿದ್ದ, 'ಪುತ್ರಕಾಮೇಷ್ಟಿ' ಸಾಂಗಲಿ ದರಬಾರದಲ್ಲಿ ಪ್ರದರ್ಶಿತಗೊಂಡಾಗಲೇ ಆಧುನಿಕ ಮರಾಠಿ ಸಂಗೀತ ನಾಟಕ ಪ್ರಕಾರ ರೂಪಗೊಂಡಿತು ಎಂಬ ತಥ್ಯಾಂಶವನ್ನು ಅಲ್ಲಗಳೆಯುವ ಹಾಗಿಲ್ಲ. ಸಾಂಗಲಿಯ ರಾಜರು ತಮ್ಮ ಮಂತ್ರಿಯ ಸಲಹೆಯಂತೆ ಯಕ್ಷಗಾನವನ್ನು ರಾಜಧಾನಿಯಲ್ಲಿ ಏರ್ಪಡಿಸಿ ಮಗನನ್ನು ಪಡೆದದ್ದು ಕಾಕತಾಳೀಯಪ್ರಸಂಗವೇ ಆಗಿ ಪರಿಣಮಿಸಿರಬಹುದು! ಆಮೇಲೆ ವಿಷ್ಣುದಾಸ ಭಾವೆಯವರನ್ನು (ಈಗಿನ ಉಭಯಗಾನ ವಿಶಾರದೆ ಶ್ಯಾಮಲಾ ಭಾವೆಯವರ ಮುತ್ತಜ್ಜ) 'ಸೀತಾ ಸ್ವಯಂವರವೆಂಬ' ಸಂಗೀತ ನಾಟಕವನ್ನು ಪ್ರಯೋಗಿಸಲು ಸಾಂಗಲಿ ಮಹಾರಾಜರು ಕೇಳಿಕೊಂಡರು. ಈ ನಾಟಕ ಮರಾಠಿಯಲ್ಲಿ ಮೊದಲ ಸಂಗೀತ ಪ್ರಯೋಗ ನಾಟಕವಾಗಿತ್ತು. ಈ ನಾಟಕ ಬಳಗವು ಹಾಸ್ಯಗಾರರ ಸಾಧನ ಸಂಪತ್ತನ್ನೇ ಬಳಸಿದ್ದು ಮೊಟ್ಟಮೊದಲ ಸಂಗೀತ ನಾಟಕಕ್ಕೆ ಎಂಬುದು ವಿಶೇಷ.

ಎರಡನೆಯದಾಗಿ ಮಂಗಳೂರಿನ ಗುಲವಾಡಿ ಕುಟುಂಬ ಮಹಾರಾಷ್ಟ್ರದ ಕೀರ್ತನೆ ಪರಂಪರೆಯ ರೀತಿಯಲ್ಲಿಯೇ ಕರಾವಳಿಯಲ್ಲಿ ಕೀರ್ತನೆಯ ಪ್ರಯೋಗಗಳನ್ನು ಪ್ರಾರಂಭಿಸಿತು. ಬಳಿಕ ಭದ್ರಗಿರಿ ಕುಟುಂಬದ ಅಚ್ಯುತದಾಸ್, ಕೇಶವದಾಸ್ ಮತ್ತು ಇತರ ಕೀರ್ತನಕಾರರು, ಹಿಂದುಸ್ತಾನಿ ರಾಗಗಳನ್ನು ಹೆಚ್ಚುಹೆಚ್ಚಾಗಿ ತಮ್ಮ ಕೀರ್ತನ ಪ್ರಕಾರದಲ್ಲಿ ಬಳಸಲಾರಂಭಿಸಿದರು.

ಸಂತ ಭಟ್ಕಳ್ ಅಪ್ಪಯ್ಯ (17ನೇ ಶತಮಾನ) ಬಂಕಿಕೊಡ್ಲದ ಶಿವರಾಮ್ ಸ್ವಾಮಿ (1850–1943) ಸಂತ ನಾಡಗರ್ ಶಾಂತಾಬಾಯಿ (1861– 1927) ಇವರೆಲ್ಲ ಕನ್ನಡದಲ್ಲಿ, ಕೊಂಕಣಿ ಮತ್ತು ಮರಾಠಿಯಲ್ಲಿ ಭಕ್ತಿ ಗೀತೆಗಳನ್ನು ಬರೆದು, ಹಿಂದುಸ್ತಾನಿ ರಾಗಗಳನ್ನು ಹಚ್ಚಿ ಹಾಡಿದರು. ಈ ಪ್ರಬಂಧದಲ್ಲಿ ವಾದ್ಯ–ವಾದನಗಳಾದ ಪಖಾವಜ್, ತಬಲಾವಾದಕರ ಹೆಸರು ಸೇರ್ಪಡೆಯಾಗಿಲ್ಲ. ಸರಿಯಾದ ಸಂಶೋಧನೆ ಕೈಕೊಂಡಲ್ಲಿ, ಕರಾವಳಿಯಲ್ಲಿ ಹಿಂದುಸ್ತಾನಿ ಪದ್ಧತಿಯ ಸಂಗೀತ ನೆಲೆಯೂರಿ, ವ್ಯಾಪಕವಾಗಿ ಬೆಳೆದು ಬಂದ ಬಗೆಯನ್ನು ಅರಿಯಬಹುದಾಗಿದೆ.

*****

6.20

ಕರ್ನಾಟಕದ ಹಿಂದುಸ್ತಾನಿ ಸಂಗೀತದ ವಾಗ್ಗೇಯಕಾರರು

ಎಲ್ಲ ಲಲಿತ ಕಲೆಗಳಲ್ಲಿ ಸಂಗೀತ ಕಲೆ ಸರ್ವಶ್ರೇಷ್ಠವಾದುದು ಎಂಬ ನಂಬಿಕೆ ಇದೆ. ಸಂಗೀತ ಕಲೆಯ ಉಪಾಸನೆ ಅಥವಾ ಆರಾಧನೆಯಿಂದಲೇ ಸಂಗೀತ ಸಾಧಕರು ಪರಬ್ರಹ್ಮನ ಪ್ರಾಪ್ತಿಗಾಗಿ ಪರಿತಪಿಸುತ್ತಿರುತ್ತಾರೆ. ಗುರುಮುಖಿ ಪರಂಪರೆಯಿಂದ ಕಲಿತವರೂ ಅಥವಾ ಗಾಂಧರ್ವ ಮಹಾವಿದ್ಯಾಲಯದಿಂದ ಶಿಕ್ಷಣ ಪಡೆದು ಮುಂದೆ ಹೆಸರು ಮಾಡಿದ ಕರ್ನಾಟಕದ ಕಲೋಪಾಸಕರಲ್ಲಿ ಕೆಲವರು ಉಭಯಗಾನ ವಿಶಾರದರು ಅಂದರೆ ಕರ್ನಾಟಕ ಮತ್ತು ಹಿಂದುಸ್ತಾನಿ ಪದ್ಧತಿಯಲ್ಲಿ ಪರಿಣಿತಿ ಪಡೆದವರು ಇದ್ದರೆ, ಶೇಕಡಾ 50ಕ್ಕೂ ಮಿಕ್ಕಿ ಹಿಂದುಸ್ತಾನಿ ಪದ್ಧತಿಯಲ್ಲಿ ಕಚೇರಿ ನಡೆಸುವ ಕಲಾವಿದರೂ ಇದ್ದಾರೆ. ಇವರಲ್ಲಿ ದೇಶ ವಿದೇಶಗಳಲ್ಲಿ ಹೆಸರು ಮಾಡಿದ ಕರ್ನಾಟಕದ ಕಲಾವಿದರು ಮಧ್ಯಪ್ರದೇಶ ಸರಕಾರದಿಂದ ಅತ್ಯುಚ್ಚ ತಾನಸೇನ ಸಮ್ಮಾನ ಪಡೆದ ರಾಮರಾವ್ ನಾಯಕ, ಎಸ್.ಸಿ.ಆರ್. ಭಟ್ ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ್, ದಿನಕರ ಕಾಯ್ಕಿಣಿ, ಕುಮಾರ ಗಂಧರ್ವ ಮೊದಲಾದವರು ಇದ್ದಾರೆ. ಭಾರತ ಸರಕಾರದ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಪಡೆದು ಕರ್ನಾಟಕದ ಕಲಾವಿದರು ಹಿಂದುಸ್ತಾನಿ ಸಂಗೀತವನ್ನು ತುತ್ತತುದಿಯವರೆಗೆ ಮುಟ್ಟಿಸಿದವರಿದ್ದಾರೆ. ಕೇವಲ ನೂರು ವರ್ಷಗಳ ಹಿಂದೆ ಹಿಂದುಸ್ತಾನಿ ಸಂಗೀತದ ಲವಲೇಶವಿಲ್ಲದ ಒಂದು ಪ್ರದೇಶ, ಇಷ್ಟು ಮುಂದೆ ಬರುತ್ತಿದ್ದಾಗ ಮತ್ತು ಹೊಸಹೊಸ ಗಾಯಕರು ಕರ್ನಾಟಕದಲ್ಲಿ ಜಯಭೇರಿ ಹೊಡೆಯುತ್ತಿರುವಾಗ, ಹಿಂದುಸ್ತಾನಿ ಪದ್ಧತಿಯ ವಾಗ್ಗೇಯಕಾರರು ಎಷ್ಟು ಜನ ಎಂಬ ಪ್ರಶ್ನೆ ಬಂದಾಗ ಈ ಐವತ್ತರ ಸೂಚಿ ಇಳಿದು ಐದಕ್ಕೆ ಬಂದರೆ ಆಶ್ಚರ್ಯವೇನಿಲ್ಲ.

ಒಮ್ಮೆ ಪಂ. ಭೀಮಸೇನ ಜೋಶಿಯವರನ್ನು ಹೊಸರಾಗ ಮತ್ತು ಹೊಸ ಕೃತಿಗಳ ಬಗ್ಗೆ ಕೇಳಿದಾಗ ಪಂಡಿತರು ತಮ್ಮ ವಿಶಿಷ್ಟ ಶೈಲಿಯಲ್ಲಿ ಮಾರ್ಮಿಕವಾಗಿ ಉತ್ತರಿಸಿದ್ದು ಹೀಗೆ, "ನಮ್ಮದು 'ಕಿರಾಣಾ' ದುಕಾನರೀ, ಬೇರೆಬೇರೆ ಘರಾಣೆ ಸಾಮಾನು ಚೋರಿ ಮಾಡಿ ನಮ್ಮ ದುಕಾನ ನಡಸ್ತೇವಿ! ಹೊಸಾ ಮಾಲ ಬೇಕಾದ್ರ ಕುಮಾರಗ ಕೇಳ್ರಿ!" ಅಂದರಂತೆ. ಮತ್ತೊಮ್ಮೆ, ಕಿರಾನಾ ಮನೆತನದ ಅಧ್ವರ್ಯು ಉಸ್ತಾದ್ ಅಬ್ದುಲ್ ಕರೀಂ ಖಾನರ ಸಂಗೀತದ ಬಗ್ಗೆ ಕೇಳಿದಾಗ ಪಂ. ಫೀರೋಜ್ ದಸ್ತೂರರೆಡೆ ಬೊಟ್ಟು ತೋರಿಸಿದರಂತೆ! ಅಂದರೆ ಇದರರ್ಥ ಇಷ್ಟೇ. ಕಚೇರಿ ಮಾಡಿ

ಕಲಾಪ್ರಸಾರ ಮಾಡಿದವರು ಬಹಳಷ್ಟು ಇದ್ದರೂ ತಮ್ಮದೇ ಒಂದು ಸ್ಥಾನ ಶ್ರೇಷ್ಠ ಸಂಗೀತಜ್ಞ, ವಾಗ್ಗೆಯಕಾರರೆಂದು ಹೆಸರು ಮಾಡಿದವರಲ್ಲಿ ಕುಮಾರ ಗಂಧರ್ವ ಉರ್ಫ ಶಿವಪುತ್ರ ಕೋಮಕಾಳಿ ಹಾಗೂ ಪಂ. ಪುಟ್ಟರಾಜ ಗವಯಿಗಳ ಹೆಸರುಗಳು ಈ ಸೂಚಿಯಲ್ಲಿ ಮೇಲಿನವು. ಪುಟ್ಟರಾಜಯ್ಯರ ಗುರುಗಳಾದ ಉಭಯಗಾನ ವಿಶಾರದ ಪಂಚಾಕ್ಷರಿ ಗವಯಿಗಳು ಮತ್ತು ಮಲ್ಲಿಕಾರ್ಜುನ ಮನ್ಸೂರ, ಚಂದ್ರಶೇಖರ ಪುರಾಣಿಕಮಠ ಇವರ ಗುರುಗಳಾದ ಅಥಣಿಯ ನೀಲಕಂಠ ಬುವಾ ಮಿರಜ್‌ಕರ್ ಇವರು ಕೂಡ ಸಂಗೀತ ಪ್ರಸಾರಕ್ಕೆ ಕಾರಣರಾಗಿದ್ದರು. ಆದರೆ ಅವರ ಸಂಗೀತದಲ್ಲಿಯ ಕೃತಿಗಳ ಬಗ್ಗೆ ಅಥವಾ ಹೊಸ ರಾಗಗಳ ಉತ್ಪತ್ತಿಯ ಬಗ್ಗೆ ಹೆಚ್ಚು ವಿವರಗಳು ಇಲ್ಲದ್ದರಿಂದ ಈ ಲೇಖನ ಕೇವಲ ಪುಟ್ಟರಾಜ ಗವಯಿ ಮತ್ತು ಕುಮಾರ ಗಂಧರ್ವರಿಗೆ ಮೀಸಲಾಗಿದೆ. ವಾದನದಲ್ಲಿ ಹಟ್ಟಂಗಡಿ ತಾರಾನಾಥ ರಾಯರು (ತಬಲಾ) ಸ್ವಾಮಿ ದತ್ತಾತ್ರೇಯ ಪರ್ವತಕರ್ (ವೀಣೆ) ಹಾಗೂ ವಿಠಲರಾವ್ ಕೋರಗಾಂವಕರ್ (ಹಾರ್ಮೋನಿಯಮ್, ಧ್ವನಿಮುದ್ರಣ) ಇವರ ಕಾಣಿಕೆಗಳಿಂದ ಹಿಂದುಸ್ತಾನಿ ಸಂಗೀತ ಸಮೃದ್ಧವಾಗಿದೆ.

ಹುಟ್ಟಿನಿಂದ ಅಂಧರಾಗಿದ್ದರೂ, ಶ್ರದ್ಧೆಯಲ್ಲಿ ವಿಶಿಷ್ಟ ದೃಷ್ಟಿಪಡೆದ ಪುಟ್ಟರಾಜ ಗವಯಿಗಳು ತಮ್ಮ ಕೃತಿಗಳಲ್ಲಿ ನಾದಬ್ರಹ್ಮ, ಶಿವನ ವರ್ಣನೆ, ಅತ್ಯಂತ ಸುಂದರವಾಗಿ ಮಾಡಿದ್ದಾರೆ. ಅದಾರಂಗ, ಸದಾರಂಗ, ಮನರಂಗ ಪ್ರೇಮಪಿಯಾ ಗುಣಿದಾಸ ಈ ಎಲ್ಲ ವಾಗ್ಗೇಯಕಾರರು ನಾರಿಯ ಅಂಗಾಂಗಳ ನಿರೂಪಣೆ ಅಥವಾ ಶೃಂಗಾರರಸವನ್ನು ವಿವೇಚಿಸಿದರೆ ಪುಟ್ಟರಾಜಯ್ಯನವರ ಕೃತಿಗಳಲ್ಲಿ ಭಕ್ತಿರಸ ತುಂಬಿ ತುಳುಕುತ್ತದೆ. ಸಂತ ಕಬೀರನ ದೋಹೆಗಳ ಉಪಮೆ ಇವರ ಬಂದಿಶ್‌ಗಳಿಗೆ ಕೊಡಬಹುದು. ತಿಲಕ್ ಕಾಮೋದ ರಾಗದ ಈ ಧೃತ್ ಏಕತಾಳದಲ್ಲಿಯ ಕೃತಿ ನೋಡಿ:

ಮೋರಿ ಬಿನತಿ ಅರಜ ಸುನತ, ಭಾಗರಥ ಆವೋಜಯೋ ॥ಸ್ಥಾಯಿ ॥
ಗುರುದೇವ ಮಹಾದೇವ ಪಂಚಾಕ್ಷರ ಕಹೇ ಜಿಯಾ ॥ ಅಂತರಾ॥

ಪುಟ್ಟರಾಜ ಗವಯಿಗಳ ಅಂಕಿತನಾಮ, 'ಪಂಚಾಕ್ಷರ' ತಮ್ಮ ಗುರುಗಳ ಹೆಸರನ್ನೇ ಅಂಕಿತವೆಂದು ಇಟ್ಟುಕೊಂಡವರು. ಇದನ್ನೂ ಮತ್ತು ಕೆಲವು ಬಂದಿಶ್‌ಗಳನ್ನೂ ಇವರ ಶಿಷ್ಯರಾದ ಬಸವರಾಜ ರಾಜಗುರು, ಕುಮಾರದಾಸ, ಎಮ್. ವೆಂಕಟೇಶ ಕುಮಾರ್, ಪರಮೇಶ್ವರ ಹೆಗಡೆ, ಪಂಚಾಕ್ಷರ ಮತ್ತಿಗಟ್ಟಿ ಇವರೆಲ್ಲ ಹಾಡಿರುವವರು, ಹಾಡುತ್ತಿರುವವರು. ಅಂಧತ್ವಕ್ಕೆ ಒಂದು ದೂರದೃಷ್ಟಿ ಕೊಟ್ಟ ಶ್ರೇಷ್ಠ ಕವಿ, ನಾಟಕಕಾರ, ಉಭಯಗಾನವಿಶಾರದ ಪುಣ್ಯಾತ್ಮರೆಂದರೆ ಪುಟ್ಟರಾಜ ಗವಯಿಗಳು.

1935ರಲ್ಲಿ ಕೇವಲ 11 ವರ್ಷದ ಬಾಲಕ, ಕಲಕತ್ತೆಯ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಕಲಾವೇದಿಕೆಯನ್ನೇರಿ ಕಾಫೀ ರಾಗವನ್ನು ಉಸ್ತಾದ್‌ರ ಠೀವಿಯಲ್ಲಿ ಹಾಡಿದಾಗ, ನೆರೆದ ಜನಜಂಗುಳಿ ಕಿವಿಗಡಚಿಕ್ಕುವ ಚಪ್ಪಾಳೆ ತಟ್ಟಿದ ಸನ್ನಿವೇಶ. ಈ ಬಾಲಕನೇ ಕುಮಾರ ಗಂಧರ್ವ. ತಂದೆ ಸಿದ್ಧರಾಮಯ್ಯನವರಿಗೆ ಸಂಗೀತದಲ್ಲಿ ರುಚಿ ಇದ್ದರೂ, ಮಗನಿಗೆ ಸಂಗೀತ ಕಲಿಸುವಷ್ಟು ಅರ್ಥಪ್ರಾಪ್ತಿ ಇರಲಿಲ್ಲ. ಮುಂದೆ

ಮುಂಬಯಿಯ ಬಿ.ಆರ್. ದೇವಧರರ ಬಳಿಯಲ್ಲಿ ಕಲಿತು, ಕ್ಷಯರೋಗಕ್ಕೆ ತುತ್ತಾದ ಮೇಲೆ ಹಾಡುವುದಕ್ಕೆ ನಿಷೇಧವಿದ್ದರೂ ಸೃಜನಶೀಲತೆಗೆ ನಿಷೇಧವೆಲ್ಲಿ? ಮಧ್ಯಪ್ರದೇಶದ ಮಾಳವಾ ಲೋಕಸಂಗೀತದ ಅಭ್ಯಾಸಮಾಡಿ ಕುಮಾರ ಗಂಧರ್ವರು ಸಂಗೀತದಲ್ಲಿ ತಮ್ಮದೇ ಹೊಸ ಹಾದಿ ತುಳಿದರು. ಹೊಸ ಪರಂಪರೆಯನ್ನೇ ಸ್ಥಾಪಿಸಿದರು. ಅನೇಕ ರಚನೆಗಳನ್ನೇ ಕೊಟ್ಟರು. ಹೊಸ ಹೊಸ ರಾಗಗಳ ನಿರ್ಮಿತಿ ಮಾಡಿದರು. 1965 ರಲ್ಲಿ 'ಅನೂಪರಾಗವಿಲಾಸ'ವೆಂಬ ಪುಸ್ತಕವನ್ನು ಪ್ರಕಟಿಸಿದರು. ಒಟ್ಟು 136 ಕೃತಿಗಳ ಈ ಪುಸ್ತಕ ಹಿಂದುಸ್ತಾನಿ ಸಂಗೀತದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿತು. ಈ ಒಂದೇ ಪುಸ್ತಕದಿಂದ ಕುಮಾರ ಗಂಧರ್ವರು ಅಮರರಾದರು. ಅಲ್ಲಾದಿಯಾ, ರತನಜನಕರ, ಗುಣಿದಾಸರ ಪಂಕ್ತಿಯಲ್ಲಿ ಸೇರಿದರು.

'ಸಹೇಲಿ ತೋಡಿ' ಮತ್ತು 'ಬಿಹಡ ಭೈರವ' ಇವೆರಡು ರಾಗಗಳು ಕುಮಾರ ಗಂಧರ್ವರು ನಿರ್ಮಿಸಿದ್ದು, ಅರ್ಥಾತ್ ಕೃತಿಗಳೂ ಕೂಡ ಅವರದೇ. 'ಮಧ ಸುರಜಾ' ಮತ್ತೊಂದು. ಈ ಮಧ ಸುರಜಾದಲ್ಲಿಯ ತ್ರಿತಾಳದಲ್ಲಿಯ ಒಂದು ಕೃತಿ ಹೃದಯವನ್ನೇ ಹಿಂಡುವ ಆರ್ತಸ್ವರಗಳಲ್ಲಿ ಪೋಣಿಸಿದ್ದುದು ಹೀಗಿದೆ. ಕುಮಾರ ಗಂಧರ್ವರು ದೇವಾಸದಲ್ಲಿ, ಜನರು ಒಂದು ಹೆಣ್ಣು ಕುರಿಯನ್ನು ಬಲಿಯ ಸಲುವಾಗಿ ಒಯ್ಯುತ್ತಿದ್ದಾಗ ಕಂಡು ಪ್ರೇರಿತರಾಗಿ ಬರೆದದ್ದು.

'ಬಚಾಲೆ ಮೊರಿ ಮಾ
ಮಾತಾರೀ ಘರಮಾ ಲಲುವಾ ಅಕಿಲೋ ಬಿನಮೋಹೆ
ಅರಜ್ ಯಹೀ ತೊರೇ ದಾಸ ಮೇರೊ ಯೊಹೈ ॥
ಘರಮೇ ಲಲುವಾ ಅಕೆಲೋ ಬಿನಮೋಹೆ ॥

2004 ಡಿಸೆಂಬರ 26ರಂದು ಕುಮಾರ ಗಂಧರ್ವರ ಶಿಷ್ಯ ಸತ್ಯಶೀಲ ಇದನ್ನು ರವಿವಾರ ಮುಂಜಾನೆ ಹಾಡುತ್ತಿದ್ದಾಗ ಯೋಗಾಯೋಗವೆಂಬಂತೆ, ಸುನಾಮಿಯ ಭೋರ್ಗರೆಯುವ ಅಲೆಗಳು ಹಾಹಾಕಾರವನ್ನೆಬ್ಬಿಸಿದ್ದವು! ಮಗುವಿನ ರೋದನ ತಾಳಲಾರದ ತಾಯಿಯ ಕರೆ ಮೇಲಿನ ಕೃತಿಯಲ್ಲಿ ಬಿಂಬಿಸಲಾಗಿದೆ.

*****

6.21

ಹಿಂದುಸ್ತಾನಿ ಖಯಾಲ್‌ದಲ್ಲಿಯ ಸಾಹಿತ್ಯ

ಹಿಂದುಸ್ತಾನಿ ಸಂಗೀತದಲ್ಲಿ ಅನೇಕ ಪ್ರಕಾರಗಳಿವೆ. ಧ್ರುಪದ್ ಶೈಲಿ ಅತ್ಯಂತ ಪುರಾತನದ್ದಾದರೆ, ಖಯಾಲ್ ಸಂಗೀತ ಪ್ರಾರಂಭವಾದದ್ದು ಸಾಧಾರಣ 17ನೇ ಶತಮಾನದ ಕೊನೆಗೆ. ಠುಮರಿ, ಟಪ್ಪಾ, ಟಪ್ಪ ಖ್ಯಾಲ, ಕಜರಿ, ಚೈತಿ ಇವೆಲ್ಲ ಕರ್ನಾಟಕ ಸಂಗೀತದ ಜಾವಳಿ ಅಥವಾ ಮಹಾರಾಷ್ಟ್ರದ ಲಾವಣಿಗಳಂತೆ. ತಾನಸೇನನ ಕಾಲದ ಧ್ರುಪದ್‌ಗಳು ಇಂದಿಗೂ ಪ್ರಚಲಿತವಿದ್ದು ಪ್ರಬಂಧ ಗಾಯನವೆಂದು ಪ್ರಸಿದ್ಧಿ ಪಡೆದಿವೆ. ಖಯಾಲ್‌ದಲ್ಲಿ ಬಂದಿಶಗಳು ಎಂದರೆ ಕೃತಿಗಳನ್ನು ವಿಸ್ತಾರವಾಗಿ ಹಾಡುವ ಪದ್ಧತಿ. ಈ ಕೃತಿಗಳಿಗೆ ಬಂದಿಶ ಎಂದು ಹೆಸರು. ಬಂದಿಸ್ತ ಎಂದರೆ ಸ್ವರ ವ್ಯಂಜನೆಗಳಿಗೆ ಅನುಗುಣವಾಗಿ ಕಟ್ಟಿದ 4, 6,8 ಸಾಲಿನ ಕವನ, ಗೇಯ ಸಾಹಿತ್ಯ. ಉತ್ತರಪ್ರದೇಶದ ಈ ಹಿಂದುಸ್ತಾನಿ ಗಾಯನ ಪದ್ಧತಿ ಮಧ್ಯಪ್ರದೇಶದ ಮಾರ್ಗವಾಗಿ ಮಹಾರಾಷ್ಟ್ರ, ಕರ್ನಾಟಕಕ್ಕೆ ತಲುಪುವುದಕ್ಕೆ ಸುಮಾರು 150 ವರ್ಷಗಳು ಬೇಕಾದವು. ಪರಂಪರೆಯಿಂದ ಬಂದ ಈ ಕೃತಿಗಳನ್ನು (ಇವನ್ನು ಚೀಜ್ ಎನ್ನುವ ವಾಡಿಕೆಯಿದೆ) ಹಿಂದಿನ ಗಾಯಕರು ಸಂಕಲನ ಮಾಡಿದ್ದನ್ನು, 19 ಮತ್ತು 20ನೇ ಶತಮಾನದ ಗಾಯಕರು ಮೊಟ್ಟಮೊದಲು ಮರಾಠಿಯಲ್ಲಿ ಪ್ರಕಟಿಸಿದರು. ವಿಷ್ಣು ನಾರಾಯಣ ಭಾತಖಂಡೆ, ರಾಮಕೃಷ್ಣ ಬುವಾ ವಝೆ, ವಿನಾಯಕ ಪಟವರ್ಧನ, ವಿಷ್ಣು ದಿಗಂಬರ ಪಲುಸ್ಕರ, ಬಿ.ಆರ್ ದೇವಧರ್ ಇವರೆಲ್ಲ ತಮಗೆ ಗೊತ್ತಿದ್ದ ಬಂದಿಶ್‌ಗಳನ್ನು ಸ್ವರಲಿಪಿಗಳೊಂದಿಗೆ ಪುಸ್ತಕ ರೂಪದಲ್ಲಿ ತಂದರು. ಇವುಗಳೆಲ್ಲ ಮೇಲೆ ಹೇಳಿದಂತೆ ಸಂಕಲನ ರೂಪದಲ್ಲಿದ್ದು ತಮ್ಮ ಉಸ್ತಾದ್/ಗುರುಗಳ ಮೌಖಿಕ ರೂಪದಲ್ಲಿ ಕಲಿಸಿದ್ದನ್ನು ಪರಿಷ್ಕರಣೆ ಮಾಡದೆ ಪ್ರಕಟಿಸಿದ್ದಾಗಿದೆ. ಈ ಎಲ್ಲ ಹಿಂದಿ ರಚನೆಗಳು ಉತ್ತರಪ್ರದೇಶದ 'ಬೋಲಿ' ಅಂದರೆ ಆಡು ಭಾಷೆಗಳಲ್ಲಿವೆ. ಮೈಥಿಲಿ, ಅವಧಿ, ಬ್ರಿಜ್, ಬಿಹಾರಿ, ಝಾರಖಂಡಿ ಇತ್ಯಾದಿ. ಕೆಲವು ಗಾಯಕರು ಹಿಂದಿ ಅಥವಾ ಶುದ್ಧ ಹಿಂದುಸ್ತಾನಿಯಲ್ಲಿ (ಉರ್ದುಮಿಶ್ರಿತ) ಹಾಡುಗಳನ್ನು ಹಾಡುತ್ತಿದ್ದರೂ ಅವುಗಳಿಗೆ ಅಷ್ಟು ಲೋಕಮಾನ್ಯತೆ ಸಿಗಲಿಲ್ಲ. ಆಗ್ರಾ ಘರಾಣೆಯ (ಇದಕ್ಕೆ ಪರಂಪರೆ ಅನ್ನೋಣ) ಮುಸ್ಲಿಂ ಸಮಾಜದ ಹಾಡುಗಾರರ ಜನಾನಾ (ಸ್ತ್ರೀ) ಕುಟುಂಬದವರ ರತಜಗಾ = ರಾತಜಗಾ = ರಾತಜಾಗ ಪದ್ಯಗಳನ್ನು ಭಾರತದಲ್ಲಿಯೇ ಮೊಟ್ಟಮೊದಲು ಬಾರಿ ನಮ್ಮ ಪ್ರೇರಣೆಯಿಂದ ಪದ್ಮಜಾ ಮುಂಡೆ ಕಲಾಭಾರತಿಯಲ್ಲಿ ಪ್ರಸ್ತುತ ಪಡಿಸಿದರು. ಈ ಪೂರ್ವಪೀಠಿಕೆಗೆ ಕಾರಣವೂ ಇದೆ.

ಈ ಸಂದರ್ಭದಲ್ಲಿ ಡಾ. ಶ್ರೀರಂಗ ಸಂಗೋರಾಮರನ್ನು ನೆನೆಯದೇ ಮುಂದೆ ಸಾಗುವಂತಿಲ್ಲ. ಹಿಂದಿ ಮತ್ತು ಮರಾಠಿಯಲ್ಲಿ ಬಹಳಷ್ಟು ಬರೆದಿರುವ ಸಂಗೋರಾಮರಿಗೆ

2004ರಲ್ಲಿ ಸಂಗೀತ ರಿಸರ್ಚ್ ಅಕಾಡಮಿಯ ಪ್ರಶಸ್ತಿ ಸಿಕ್ಕಿತ್ತು. ನಾನು ಬರೆದ ಒಂದು ಲೇಖನವನ್ನು ಅಭ್ಯಾಸ ಮಾಡಿ ಪರದೆಯ ಹಿಂದೆ ಅಡಗಿದ ಉಸ್ತಾದ್ ಮನೆತನದ ಮಹಿಳೆಯರ 'ರತಜಗಾ' ಪದ್ಯಗಳ ಕುರಿತು ಉತ್ಸಾಹ ತೋರಿ ಅದನ್ನೇ ವಿಷಯವಾಗಿರಿಸಿಕೊಂಡು ಸಂಶೋಧನೆ ಮಾಡಲು ನನ್ನನ್ನು ಪ್ರೇರೆಪಿಸಿದ್ದರು. ಶಾಸ್ತ್ರೀಯ ಸಂಗೀತದಲ್ಲಿ ಹಾಡಲಾಗುವಂತಹ ರಚನೆಗಳನ್ನು ಸಾಹಿತ್ಯ ದೃಷ್ಟಿಯಿಂದ ಅಭ್ಯಸಿಸುವ ಸಲುವಾಗಿ ಉತ್ತರಪ್ರದೇಶದ ಅವಧಿ, ಮೈಥಿಲಿ, ಬ್ರಿಜ್ ಭಾಷೆಗಳನ್ನು ಕಲಿತು ತಪ್ಪುತಪ್ಪಾಗಿ ಹಾಡಲಾಗುವ, ಹಾಡಲ್ಪಟ್ಟಿರುವ ಅನೇಕ ರಚನೆಗಳನ್ನು ಸುಧಾರಿಸುವ ಕಾರ್ಯವನ್ನು ಕಳೆದ 30/40 ವರ್ಷಗಳಿಂದ ಮಾಡುತ್ತಿದ್ದ ಸಂಗೋರಾಮರು ಪುಣೆ ವಿಶ್ವವಿದ್ಯಾಲಯದ ಹಿಂದಿ ವಿಷಯದಲ್ಲಿ ಡಾಕ್ಟರೇಟ್‌ಮಾಡುವವರಿಗೆ ಮಾರ್ಗದರ್ಶಿಗಳಾಗಿದ್ದಾರಷ್ಟೇ ಅಲ್ಲದೆ, ಭೀಮಸೇನ ಜೋಶಿ ಕೇಂದ್ರದ (ಇದು ಪುಣೆ ವಿಶ್ವವಿದ್ಯಾಲಯದ ಲಲಿತಕಲೆಯ ಅಭ್ಯಾಸ ಕೇಂದ್ರ) ಮಾರ್ಗದರ್ಶಿಗಳೂ ಆಗಿದ್ದದ್ದರಿಂದ ಅವರ ಮಾತು ತಳ್ಳಿ ಹಾಕುವಂತಿರಲಿಲ್ಲ. ನನ್ನಂತಹ ಸೋಮಾರಿಗೆ ಒಂದು ಹೆಜ್ಜೆ ಮುಂದೆ ಹೋಗಿ ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ಲರಂತಹ ದಿಗ್ಗಜರು ಯಾವಾಗಲೂ ಹಾಡುವ ಪೂರಿಯಾ ಕಲ್ಯಾಣ ಬಂದಿಶ್‌ನ್ನು, 'ರತಜಗಾ' ವಿಭಾಗದಲ್ಲಿ ಹೇಗೆ ಬರುತ್ತದೆ ಎಂದು ತಿಳಿಸಿದ ಪತ್ರ ನನ್ನ ಬಳಿ ಇದೆ. ಈ ಗ್ವಾಲಿಯರ್ ಪರಂಪರೆಯ ಚೀಜು ಉಸ್ತಾದ್‌ರ ಸ್ವತ್ತಾದರೂ ಅಬ್ದುಲ್ ಕರೀಂ ಖಾನರು ತಮ್ಮ ಶಿಷ್ಯರಿಗೆ ಮಹಾರಾಷ್ಟ್ರ–ಕರ್ನಾಟಕದಲ್ಲಿ ಕಲಿಸಿದ್ದರಿಂದ ಇದಕ್ಕೆ ತುಂಬಾ ಪ್ರಸಿದ್ಧಿಸಿಕ್ಕಿತು. ಇದರ ಮೂಲ ಘರಾಣೆಯಲ್ಲಿ ಇದು ನಿರಕ್ಷರಿ ಮಹಿಳೆಯರ ಮದುವೆಯ ಮುನ್ನಾದಿನ ಹಾಡುವ ಹಾಡು:

ಆಜ್ ಸೋ ಬನಾ ಬನ್ ಆಯಿತಾ
ಲಾಡ ಲಡಾವನದೇ॥ ಸ್ಥಾಯಿ
ಬನರೀಕೇ ಶಿರ್ ಸೆಹೆರಾ
ಮೋತಿಯಾ ಬಿರಾಜೆ
ಬನರಿ ಬನಾಕೆ ಮನ್ ಭಾಯೇ॥ ಅಂತರಾ

ಮದುವೆಯ ಹೊತ್ತಿಗೆ, 'ಸಾಜ ಸಿಂಗಾರಸೆ ಸಜಾಂಯಾ ಗಂಯಾ' ಬನರಾ=ವನರಾ=ಬನಾ= ಮರಾಠಿ ನವರಿ, ಕನ್ನಡ ಮದುಮಗಳು. ಈ ಜೋಡಿಯ ಸಂಭ್ರಮವೇ ಈ ರಚನೆಯ ವಸ್ತುವಾಗಿದೆ. ಕನ್ನಡದಲ್ಲಿ ಇದರ ಸ್ಥೂಲ ಅರ್ಥ ಹೀಗಿದೆ,' ಇಂದಾ ಅಂವಾ ಮದುಮಗಾ ಸಿಂಗರಿಸಿ ಬಂದಾನ (ಬನ ಆಯಿಲಾ) ಅವನ ಕೌತುಕ ಮಾಡ್ರಿ .... ಈ ಮದುಮಗಳ ತಲಿ ಮ್ಯಾಲೆ ಮುತ್ತಿನ ಬಾಸಿಂಗಾ ಶೋಭಸ್ತದ. ಮದುಮಗಳ (ಈ ಮೂರ್ತಿ) ಮದುಮಗನ ಮನಸ್ಸಿನಾಗ ನೆಟ್ಟದ'

ಇದನ್ನು ಒಂದೆರಡು ಸಲ ನೋಡಿದರೆ ಇದರಲ್ಲಿಯ ಕಾವ್ಯ ಭೂತಕನ್ನಡಿಯಿಂದ ನೋಡಿದರೂ ಸಿಗುವಂತಿಲ್ಲ. ಇದ್ದರೂ ಅದು ತುಂಬ ಪ್ರಾಥಮಿಕ ದರ್ಜೆಯದು. ಇಲ್ಲಿ ಕಾವ್ಯಾರ್ಥಕ್ಕೆ ಮಹತ್ವವಿಲ್ಲ, ನಾದ ಸೌಂದರ್ಯವೇ ಇಲ್ಲಿ ಸರ್ವಸ್ವ

ಈ ಹಾಡಿನ ವಸ್ತುವನ್ನು ಗಮನಿಸಿದರೆ ಮದುವೆಯ ಮೊದಲ ರಾತ್ರಿಯದು ಎಂದು ಸಂಗೋರಾಮರು ಬರೆದದ್ದು ನಿಜ ಎಂದೆನಿಸುತ್ತದೆ. ಸಂಗೀತದ ದೃಷ್ಟಿಯಿಂದ

ನೋಡಿದರೆ ಇದೊಂದು ಅಭೂತಪೂರ್ವ ಕೃತಿಯೆಂದು ನಮ್ಮಂತಹ ಕಾನಸೇನರಿಗೆ ಗೋಚರಿಸುವದು ಸಹಜ. ಒಂದು ಒಂದುವರೆ ತಾಸು ಇದನ್ನೇ ಭೀಮಸೇನ ಜೋಶಿ ಹಾಡುವಾಗ ಬಿಡಿಸಿಬಿಡಿಸಿ, ಸ ರಿ ಗ ಮ ಸಾ ತನಕ ಮೆಟ್ಟಿಲು ಮೆಟ್ಟಿಲು ದಾಟಿ ಹಾಡುವಾಗ ಇದೊಂದು ಅತ್ಯಂತ ಸುಂದರ ಭಾವನಾತ್ಮಕ ಕೃತಿಯೆಂದು ಅನಿಸದೇ ಇರುವದಿಲ್ಲ. ಇದೊಂದು ವಿರೋಧಾಭಾಸದ ವಿವೇಚನೆಯಾದರೂ ಇದನ್ನು ಸಂಗೀತದ ವಿಚಾರದಿಂದ ಸ್ವಲ್ಪ ಗಂಭೀರವಾಗಿ ಆಲೋಚಿಸಬೇಕು. ಹಾಡುವಾತ ಕೂಡ ಈ ಕೃತಿಯ ಬಗ್ಗೆ ವಿಚಾರ ಮಾಡುತ್ತ ತನ್ನ ಖಯಾಲ್‌ನ್ನು ಪ್ರಸ್ತುತಿಸುವ ಯತ್ನ ನಡೆಸುತ್ತಾನೆ. ಅವನ ಉದ್ದೇಶ ಮದುವೆಯ ಒಂದು ಸನ್ನಿವೇಶವನ್ನು ಕೇಳುಗರ ಮುಂದೆ ಚಿತ್ರಿಸುವದಾಗಿದೆ. ಅಂದರೆ ಕಾವ್ಯಾರ್ಥವನ್ನು ಬದಿಗಿಟ್ಟು ಸಂಗೀತಾರ್ಥದ ವಿವೇಚನೆ ಮಾಡುವುದೇ ಲೇಸು. ಇಲ್ಲಿ ವ್ಯಾಕರಣ, ಕಾವ್ಯ ಗೌಣವಾಗುತ್ತದೆ, ಭಾವವೇ ಆತ್ಮವಾಗುತ್ತದೆ. ಶಬ್ದಾರ್ಥ ಗೌಣವೆಂದರೆ ಗಾಯಕ ಅರ್ಥಹೀನ ಹಾಡನ್ನು ಪದೇಪದೇ ಹಾಡುವುದು ಶಕ್ಯವೇ? ಇಷ್ಟೇ ಅಲ್ಲ, ಇನ್ನೂರು ವರ್ಷಗಳಿಂದ ಈ 'ಅರ್ಥಹೀನ' ಹಾಡಿಗೆ ಈಗಲೂ ನಮ್ಮಂತಹ ಕಾನಸೇನರನ್ನು ಸೆಳೆಯುವ ಶಕ್ತಿ ಇದಕ್ಕೆ ಎಲ್ಲಿಂದ ಬಂತು? ಏಕೆ ಇಂತಹ ಕೃತಿಗಳನ್ನು ಆಗ್ರಾ, ಗ್ವಾಲಿಯರ್, ಜಯಪೂರ, ಕಿರಾನಾ ಪರಂಪರೆಯವರು ಈಗಲೂ ಹಾಡುತ್ತಿರುತ್ತಾರೆ.? ಮತ್ತು ರಸಿಕರು 'ಭೇಷ್' ಎಂದು ತಲೆದೂಗುತ್ತಾರೆ?

ಆಡುಭಾಷೆಯ ಒಂದು ಮಹತ್ವವನ್ನು ಇಲ್ಲಿ ಒತ್ತಿ ಹೇಳಬೇಕು. ಬಹುಶಃ ಇದರಿಂದಲೇ ಈ ಆಡುಭಾಷೆಗಳಲ್ಲಿ ಬಂದಿಶ್‌ಗಳ ರಚನೆ ಆಗುತ್ತಿರುತ್ತವೆ. ಕುಮಾರ ಗಂಧರ್ವರಂತಹ ಅಚ್ಚ ಕನ್ನಡಿಗ ಮಧ್ಯಪ್ರದೇಶದ ದೇವಾಸ ಪ್ರಾಂತದ ಮಾಳವಾದಲ್ಲಿದ್ದು ಅಲ್ಲಿಯ ಆಡು ಭಾಷೆಗಳಲ್ಲಿ ಅನೇಕ ಬಂದಿಶ್‌ಗಳನ್ನು ಕಟ್ಟಿದರು. ಗದುಗಿನ ಪುಟ್ಟರಾಜ ಗವಯಿಗಳು ಕೂಡ ಬ್ರಜ್ ಭಾಷೆಯಲ್ಲಿಯೇ ಸುಂದರ ಬಂದಿಶ್‌ಗಳನ್ನು ಕಟ್ಟಿದರು. ಅಂದರೆ ಮೊಗಲರ ಕೊನೆಯ ಬಾದಶಾಹ ಬಹದೂರ್ ಶಾಹ್ ಜಾಫ಼ರ್‌ನ ಕಾಲದಿಂದಲೂ ಆಡು ಭಾಷೆಗಳ ರಚನೆಗಳು ಚಲಾವಣೆಯಲ್ಲಿವೆ ಎಂದರ್ಥ.

ಉತ್ತರದಿಂದ ವಿಂಧ್ಯ ಪ್ರದೇಶ ದಾಟಿ ದಕ್ಷಿಣಕ್ಕೆ ಉತ್ತರಾದಿ ಸಂಗೀತ ಬಂದಿತು. ಒಂದೇ ವಾಕ್ಯದಲ್ಲಿ ಹೇಳುವದಾದರೆ, ಈ ಹಿಂದಿ ಪ್ರದೇಶದ ಆಡು ಭಾಷೆಗಳ ಸಂಗೀತದ ಸಾಹಿತ್ಯ, ದಕ್ಷಿಣಕ್ಕೆ ಬಂದಿತು ಎಂದು ಹೇಳಬಹುದು. ಇದಕ್ಕೆ ಕಾರಣ ಮೊದಲನೆಯದಾಗಿ ಅನುನಾಸಿಕ ಶಬ್ದಗಳ ಉಚ್ಚಾರ ಸ್ವರಗಳೊಂದಿಗೆ ಸಮಪ್ರಮಾಣದ ವ್ಯಂಜನಗಳೂ ಸೇರಿ ಒಂದು ವಿಧದ ಕರ್ಣ ಮಧುರ ನಾದ ಹುಟ್ಟುವಂತಾಗುತ್ತದೆ. ಇದು ಕಿವಿಗಳಿಗೆ ಇಂಪಾಗಿ ಕೇಳಿಸುವದು ಸಹಜ. ಆಡುಭಾಷೆಗಳಲ್ಲಿಯ ಶಬ್ದಗಳನ್ನು ನಾನಾಪರಿಯಿಂದ ಹೊರಳಿಸಿ ಅವುಗಳನ್ನು ಉದ್ದ ಅಥವಾ ಚಪ್ಪಟೆ ಮಾಡಿ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸುವದು ಶಕ್ಯವಾಗುತ್ತದೆ. ಅಂದರೆ ಜಿಟಜಥುಭಟಜ ಮತ್ತು ಟಚಿಟಟಜಚಿಭಟಜ ರಬ್ಬರಿನ ಹಾಗೆ. ಗಾಯಕ ತನ್ನ ಯೋಗ್ಯ ಸ್ವರ ಸಮೂಹಗಳೊಂದಿಗೆ ಈ ಶಬ್ದಗಳನ್ನು ಉಚ್ಚರಿಸುವಾಗ 'ಅ'ಕಾರವನ್ನು 'ಆ'ಕಾರವಾಗಿ ಅಥವಾ 'ಊ' ಕಾರವಾಗಿ ಮಾಡಿ ರಂಜಿಸುವ ಪ್ರಯತ್ನ ಮಾಡುತ್ತಿರುತ್ತಾನೆ. ಉದಾಹರಣೆಗೆ ತೋಡಿಯಲ್ಲಿಯ ಈ ಬಂದಿಶ್‌ದ ಶಬ್ದಗಳಲ್ಲಿಯ, ಲಂಗರ ಕಂಕರಿಯಾ ಜಿನ ಮಾರೋ'ದಲ್ಲಿ ಕಂಕರ ಶಬ್ದ 'ಕಾಂಕರ', 'ಕಾಂಕರಿಯಾ' 'ಕಂಕರಿಯಾ' ಆಗುತ್ತಿರುತ್ತದೆ. ಮೂಲ ಶಬ್ದ, 'ಕಂಕಡ'

ಎಂದರೆ ಹರಳು, ಕಲ್ಲು, ಕಲ್ಲು ತೂರಿ. 'ನನ್ನ ಮಣ್ಣಿನ ಕೊಡ ಒಡೆಯಬೇಡ' ಎನ್ನುವ ಅರ್ಥ. ಇಂತಹ ಅನೇಕ ಶಬ್ದಗಳಿವೆ. ಹೋಳಿ, ಹೋರಿಯಾಗುತ್ತದೆ. 'ದ' ಅಕ್ಷರದ ಉಚ್ಚಾರ, 'ರ' ಆದರೆ ಆಶ್ಚರ್ಯವಿಲ್ಲ. ಧಾರವಾಡ ಮೊನ್ನೆ ಮೊನ್ನೆ ತನಕ ಧಾರವಾರ ಆಗಿರಲಿಲ್ಲವೇ? 'ದ' ಆದ ಕೂಡಲೇ ಉಚ್ಚಾರ ಇಂಪಾಗಿ ಕೇಳುತ್ತದೆ. ಶಬ್ದೋಚ್ಚಾರದ ಲಘುತ್ವ ಆಡುಭಾಷೆಗಳಲ್ಲಿ ಸುಲಭ. 'ಕಾರೆ ಕಾರೆ ಬದರಿಯಾ' ಆದಾಗ ಎಷ್ಟು ಚಂದ ಎಷ್ಟು ಮಧುರ! ಚಲನಚಿತ್ರ ಸಂಗೀತದಲ್ಲಿಯೂ, 'ಬದರವಾ ಬರಸನ ಲಾಗೆ'(ಸೂರ ಮಲ್ಹಾರದಲ್ಲಿಯ ಒಂದು ಚಿತ್ರ ಗೀತೆ) ಇಂಪಾಗಿ ಕೇಳಿಸುವದಿಲ್ಲವೇ?

ಪೊಯೆಟಿಕ್ ಫ್ರೀಡಮ್ ಆಡು ಭಾಷೆಗಳಲ್ಲಿ ಜಾಸ್ತಿ. ಪ್ರಭಾ ಅತ್ರೆ ಇತ್ತೀಚಿನವರು. ಅವರ ಸುಮಾರು 40 ವರ್ಷಗಳ ಹಿಂದಿನ ಕೃತಿ ಕಲಾವತಿ ರಾಗದಲ್ಲಿಯ 'ತನ ಮನ ಧನ ತೋಪೇವಾರೂ' ಬಂದಿಶನ್ನು ಮೂರು ಅನುನಾಸಿಕ ಶಬ್ದಗಳಿಂದ ಲಯಬದ್ಧವಾಗಿ ತ್ರಿತಾಲದಲ್ಲಿ ತಬಲಾ ಬೋಲಿನ ಜೊತೆ ಹಾಡಿದಾಗ ಕಿವಿಗಳು ನಿಮಿರುತ್ತವೆ. ಒಂದು ರೋಮಾಂಚಕ ಅನುಭವವಾಗುತ್ತದೆ. ಕಂಕರವನ್ನು ಕಾಂಕರವೆಂದು ಲಯಬಧ್ಧವಾಗಿ ಹಾಡಿದ ಗಾಯಕ, ಗಾಯಕಿಯರು ಅದೇಷ್ಟೋ.' 'ಪೊಯೆಟಿಕ್ ಫ್ರೀಡಮ್' ಬಹಳ ಸಲ 'ಮ್ಯೂಸಿಕಲ್ ಫ್ರೀಡಮ್' ಆದರೆ ಆಶ್ಚರ್ಯವಿಲ್ಲ. ನೂರಾರು ಬಂದಿಶ್‌ಗಳಲ್ಲಿ ಮತ್ತೆ ಮತ್ತೆ, 'ಘುಂಘರವಾ', 'ಝುನನ ಝುನನ' ಬರುವ ಕಾರಣ ಈ ಅನುನಾಸಿಕ ಶಬ್ದಗಳ ಲಯಬದ್ಧವಾದ ಪ್ರಯೋಗ. ತಬಲಾ ನುಡಿಸುವಾತ ಕುಶಲನಾಗಿದ್ದು ಚಾಟಿಯ ಮೇಲೆ ಲಯಬಧ್ಧವಾಗಿ ನುಡಿಸಿದರೆ, 'ಸೋನೆಪೆ ಸುಹಾಗ್' ಆದಂತೆ. ವರ್ಣ ಲಾಲಿತ್ಯವೇ ಈ ಕೃತಿಗಳನ್ನು ಬಿಗುವಾಗಿ ಇಡುತ್ತದೆ. ಈ ವಾಗ್ಗೇಯಕಾರರಿಗೆ ಹಾಡುವವ, ಕವಿತೆಯನ್ನು ಮಾಡಿ ಹಾಡುವಾಗ ಕಾವ್ಯಕ್ಕಿಂತ ಈ ಶಬ್ದಜೋಡಿಗಳಿಗೆ, ಅಕ್ಷರ ಜೋಡಿಗಳಿಗೆ ಪ್ರಾಧಾನ್ಯ ಕೊಟ್ಟಿದ್ದರಿಂದ ಕವಿತ್ವಕ್ಕೆ ದುಯ್ಯಮ ಸ್ಥಾನ. ಸ್ವರ ವ್ಯಂಜನ ವಾದಿಗಳಿಗೆ ಪ್ರಥಮ ಸ್ಥಾನ. ಇಂತಹ ಸ್ವರಬದ್ಧ ಶಬ್ದ ಸಮೂಹಗಳನ್ನು ಹುಡುಕಿದರೆ ಹೇರಳವಾಗಿ ಸಿಗಬಹುದು. ಉತ್ತರ ಪ್ರದೇಶದ ಆಡುಭಾಷೆಗಳಲ್ಲಿ ಒಂದು ಪದಕೋಶವನ್ನೇ ರಚಿಸಬಹುದು. ಕೃಷ್ಣನ ನಟಖಟ ಲೀಲೆ, ಸಾಸ ನಣದರ (ಅತ್ತೆ, ನಾದಿನಿ) ಬಗ್ಗೆ ನಾಯಕಿಯ ತಕರಾರು, ಅಭಿಸಾರಿಕೆಯ ಪ್ರೇಮಶೋಧನೆ, ಈಶ್ವರನ ಕುರಿತಾದ ಸಮರ್ಪಣ ಭಾವ, ಪ್ರಿಯಕರನ ಭೆಟ್ಟಿಗೆ ಹೋಗುವಾಗಿನ ಕಾಲಿನ ಗೆಜ್ಜೆಯ ಸಪ್ಪಳ (ಪಾಯಲಿಯಾ ಝುನಕಾರ, ಝುನನ ಝುನನ ಬಾಜೆ ಪಾಯಲಿಯಾ) ಇವುಗಳ ಮೇಲೆಯೇ ವಾಗ್ಗೇಯಕಾರರು ಅನೇಕ ರಚನೆಗಳನ್ನು ರಚಿಸಿದ್ದಾರೆ.

ನನಗೆ ಗೊತ್ತಿರುವ ಕೆಲವು ಬಂದಿಶ್‌ಗಳ ಶಬ್ದಗಳನ್ನು ಕೆಳಗೆ ಕೊಟ್ಟಿದ್ದೇನೆ. ಆಡುಭಾಷೆಗಳಲ್ಲಿಯ ಶಬ್ದಗಳ ವಿಸ್ತಾರಕ್ಷಮತೆ ಸಂಗೀತಕ್ಕೆ ಅನುಗುಣವಾಗಿ ಬಿಗು-ಸಡಿಲವಾಗುವುದನ್ನು ಸ್ಪಷ್ಟಪಡಿಸುವದಕ್ಕಾಗಿ.

ಪಿಯಾ: ಪಿಹರವಾ, ಪಿಯರವಾ

ಮಂದಿರ: ಮೌಂದರ, ಮಂದಿರವಾ, ಮಂದರವಾ, ಮೌಂದೀರವಾ ಇತ್ಯಾದಿ

ರಾತ: ರತಿಯಾ, ರಾತಿಯಾ. ರತ (ರತಿಯಾ ಬತಾವೆ ರೈನಾ ಪ್ರಸಿದ್ಧ ಚಲಚಿತ್ರದ ಹಾಡು)

ಪ್ರತಿಯೊಂದು ಶಬ್ದ, ರಾಗದ ಸ್ವರ, ವ್ಯಂಜನಕ್ಕೆ ಸರಿಯಾಗಿ ಈ ಆಡುಭಾಷೆಗಳಲ್ಲಿ ಬದಲು ಮಾಡಬಹುದು. ಇದು ಮೈಥಿಲಿಶರಣ ಗುಪ್ತರ ಹಿಂದಿಯಲ್ಲಿಯ, 'ಪಂಚವಟಿ'ಯಲ್ಲಿ ಅಥವಾ ಸುಭದ್ರಾಕುಮಾರಿ ಚವಾಣರ ವೀರಗೀತೆಗಳಲ್ಲಿ ಅಶಕ್ಯಪ್ರಾಯ. ಗೀತರಾಮಾಯಣ, ಪಂಚವಟಿ ಅಥವಾ ಕುವೆಂಪು ಅವರ ಕವಿತೆಗಳನ್ನು ಹಾಡುವುದಕ್ಕೆ ಸುಗಮಸಂಗೀತವೇ ಬೇಕು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವಲ್ಲ. ಮೋರೆ (ನವಿಲು) ಶಬ್ದದ ಮಧುರ ರೂಪ, 'ಮುರವಾ' ಆಗಬಹುದು. ಹಿಂದಿಯಲ್ಲಿ ಅಶಕ್ಯ. ಹಿಂದೆ ಕೊಟ್ಟ ಉದಾಹರಣೆ, 'ಲಂಗರ', 'ಕಂಕರಿಯಾ' ಜನ 'ಮಾರೊ' ಹೇಳಿದರೆ ಇದರಲ್ಲಿಯ ಸಂಗೀತ ಲುಪ್ತವಾಗುವುದನ್ನು ನಾವು ಕಾಣಬಹುದು. ಹಿಂದುಸ್ತಾನಿ ಸಂಗೀತದಲ್ಲಿ 'ಆ'ಕಾರಕ್ಕೆ ತುಂಬ ದೊಡ್ಡ ಸ್ಥಾನವಿದೆ. ಅಂತೆಯೇ ಎ ಐ, ಒ ಹಾಗೂ ಇ ಮತ್ತು ಈ. ಬಹುಶಃ ಕನ್ನಡ ಮನೆಮಾತಾಗಿದ್ದರಿಂದ ಕನ್ನಡದಲ್ಲಿ, ಎ,ಏ,ಐ,ಒ,ಓ,ಔ ಇದ್ದ ಕಾರಣ, ಕನ್ನಡಿಗರು ಹಿಂದುಸ್ತಾನಿ ಸಂಗೀತದಲ್ಲಿ ತುಂಬಾ ಪ್ರಭಾವ ಚೆಲ್ಲಿದ್ದಾರೆ ಎಂದು ಕೂಡ ನಾವು ಹೇಳಬಹುದಲ್ಲವೇ?

ಉಕಾರ ಮತ್ತು ಊಕಾರದ ಪ್ರಚಾರ ಹಿಂದುಸ್ತಾನಿ ಸಂಗೀತದಲ್ಲಿ ತಂದದ್ದು ಕುಮಾರ ಗಂಧರ್ವರು. ಹಾಡುವಾಗ, 'ಆ'ಕಾರದಲ್ಲಿ ಹಾಡಿದರೆ ಬಾಯಿ ದೊಡ್ಡದು ಮಾಡಿ ಶ್ವಾಸ ಬಿಟ್ಟರೆ, ಮುಖದಿಂದ ಹವೆ ಹೊರಡುವ ನಾದ, ಮುಖವನ್ನು ಸಣ್ಣದು ಗೋಲಾಕಾರ ಮಾಡಿ ಶ್ವಾಸ ಬಿಟ್ಟರೆ, ಬಾಯಿಯನ್ನು ಗೋಲಾಕಾರವಾಗಿ ಮಾಡಿದರೆ, ಶ್ವಾಸವನ್ನು ದೀರ್ಘಕಾಲ ಹಿಡಿದಿಟ್ಟುಕೊಳ್ಳಬಹುದು. ಉಕಾರವಾಗಲು ಕಷ್ಟವಿಲ್ಲ. ಕ್ಷಯರೋಗಕ್ಕೆ ತುತ್ತಾದ ಕುಮಾರರ ಒಂದು ಪುಪ್ಪುಸವೇ ಇರಲಿಲ್ಲ. ಹೀಗಾಗಿ ಅವರ ಹಾಡುಗಾರಿಕೆಯ ತಾನಗಳಲ್ಲಿ ದಮ್ ಸಾಸ್ ಕಡಿಮೆ. 'ಆ'ಕಾರಕ್ಕಿಂತ ಈ, ಏ ಮತ್ತು ಉಕಾರವೇ ಜಾಸ್ತಿ. ದುಬರ ಎಂದರೆ, 'ಸಯ್ಯಾ ಪಟದುಬರ' ಹಾಡುವಾಗ ದುಕಾರದ ನಾದ ಅವರ ತಂಬೂರಿಯ ಮೀಟಿನಲ್ಲಿ ಬೆರೆತಾಗ ನಾನು ಸ್ವರ್ಗೀಯ ಆನಂದವನ್ನು ಅನುಭವಿಸಿದ್ದೇನೆ. ಹಿಂದುಸ್ತಾನಿ ಸಂಗೀತದ ಇಡೀ ಹಾಡುಗಾರಿಕೆಯನ್ನೇ ತನ್ನ ಶಾರೀರಕ್ಕೆ ಅನುಗುಣವಾಗಿ ಬದಲಾಯಿಸಿ ಹೊಸ, 'ಕುಮಾರ' 'ಗಂಧರ್ವ ಗಾಯಕಿ' ಕೊಟ್ಟ ಕುಮಾರರು ನಿಜಕ್ಕೂ ಧನ್ಯರು! ಇದೇ ಮಾತು ಮಲ್ಲಿಕಾರ್ಜುನ ಮನ್ಸೂರರ 'ಈ' ಕಾರದಲ್ಲಿ, 'ತಾರ ಷಡ್ಜದಲ್ಲಿ', ಈ ತಂಬೂರಿಯ ಶ್ರುತಿಯಲ್ಲಿ ಬೆರೆತದ್ದನ್ನು ನಾವು ಕೇಳಬಹುದು. 'ಕ್ಯಾ ಬಾತ ಹೈ' ಎಂದು ಅಚ್ಚರಿಪಡುವದು ಎಷ್ಟೋ ಸಲ.

ನಾನು ಮೇಲೆ ಹೇಳಿದ ಮಾತನ್ನು ಇನ್ನೂ ಸ್ಪಷ್ಟವಾಗಿ 18ನೇ ಶತಮಾನದ ಮಹಮ್ಮದ್ ಶಹಾ ರಂಗೀಲನ ದರ್ಬಾರಿನಲ್ಲಿಯ ಗಾಯಕ ಅದಾರಂಗ ರಚಿಸಿದ್ದು ಮತ್ತು ನಮ್ಮ ಭೀಮಣ್ಣ ಜೋಶಿ ಹಾಗೂ ಗಂಗೂಬಾಯಿ ಹಾಡಿದ್ದು ಕೆಳಗೆ ಕೊಡುತ್ತಿದ್ದೇನೆ.

ಕರೀಮ ನಾಮ ತೇರೊ ತೂಹಿ ಸಾಹೇಬ ಸತಾರ
ದುಃಖ: ದರಿದರ ದೂರ ಕೀಯೇಜೆ (ಕೀಜಿಯೇ)
ಸುಖ ದೇಹೊ ಸಬನಕೋ
ಅದಾರಂಗ ಬಿನತಿ ಸುನೀ ಲೇ ಓ ಕರತಾರ॥

ಈ ಬಂದಿಶದಲ್ಲಿ ಮೇಲೆ ಹೇಳಿದ 'ಹೀ', 'ತೆ' ಅಂದರೆ ಈಕಾರ, ಏಕಾರ, ಓಕಾರ ಇವೆಲ್ಲ ಲಕ್ಷ್ಯದಲ್ಲಿಡುವ ಸ್ವರಸ್ಥಾನಗಳು. ಆಡು ಭಾಷೆಯ ವಿಸ್ತಾರಕ್ಷಮತೆಯಿಂದ ಅ, ಆ, ಇ, ಈ ಮೊದಲಾದವುಗಳನ್ನು, ವಿಸ್ತರಿಸಿ ಚೆನ್ನಾಗಿ ಹಾಡಬಹುದು.

ಈ ಸಂಗೀತ ಮೌಖಿಕವಾಗಿರುವದರಿಂದ (20ನೇ ಶತಮಾನದವರೆಗೆ) ಗುರುಮುಖಿ ಶಿಕ್ಷಣದಿಂದ ಈ ಕೃತಿಗಳಲ್ಲಿ ಪ್ರತಿ ದಶಮಾನದಲ್ಲಿ, ಬೇರೆಬೇರೆ ಗುರುಗಳಿಂದ ಕೇಳಿ ಕಲಿತ ಶಿಷ್ಯರು ತಪ್ಪು ತಪ್ಪಾಗಿ ಉಚ್ಚರಿಸಿ ಅರ್ಥದ ಅನರ್ಥವಾದ್ದೂ ಇದೆ. 'ಗುರೂಜೀನೆ ಐಸಾ ಸಿಖಾಯಾ' ಎಂಬ ಅರ್ಥದ ಪಲ್ಲವಿ ಆಗಾಗ ಕೇಳಿ ಬರುತ್ತದೆ. ಇಲ್ಲಿಯ ನನ್ನ ಗೆಳೆಯ ಡಾ. ಸಂಗೋರಾಮರು ಈ ಬಂದಿಶ್‌ಗಳಲ್ಲಿ ಕೆಲವನ್ನು ಸಂಪಾದಿಸಿದ್ದು ಇದೆ. ಕುಮಾರ ಗಂಧರ್ವರು ಹೊಸ ರಚನೆಗಳನ್ನು ಮಾಡಿದ್ದರಷ್ಟೇ ಅಲ್ಲ 18ನೇ ಶತಮಾನದ ಅದಾರಂಗರ ಬಂದಿಶ್‌ಗಳನ್ನು ಪರಿಶೀಲಿಸಿ ತಮ್ಮ ಶಿಷ್ಯ ಪಂಢರಿನಾಥ ಕೊಲ್ಲಾಪುರೆಯವರ ಜೊತೆ ಕುಳಿತು ಅಭ್ಯಾಸಮಾಡಿದ್ದರು. ಅವರು ತೀರಿಕೊಂಡನಂತರ ಪಂಢರಿನಾಥರು 'ಸದಾರಂಗ- ಅದಾರಂಗಕೇ ಬಂದಿಶ್' ಎಂಬ ಕಾರ್ಯಕ್ರಮವನ್ನು 199ರಲ್ಲಿ ಕಲಾಭಾರತಿಯಲ್ಲಿ ಮಾಡಿದ್ದೂ ಇದೆ.

ಅಶಿಕ್ಷಿತ ಘರಾಣೆಯ ಮುಖ್ಯಸ್ಥರಿಂದ (ಇವರನ್ನು ಖಲೀಫ ಎನ್ನುವ ವಾಡಿಕೆ) ಅನುವಂಶಿಕವಾಗಿ ಸಿಕ್ಕ ಈ ಬಂದಿಶ್‌ಗಳ ಸಂಪತ್ತನ್ನು ಸರ್ಪಗಾವಲು ಇಟ್ಟುಕೊಂಡು ಅನೇಕ ಬಂದಿಶ್‌ಗಳು ಭೂಮಿಪಾಲಾದದ್ದು ಸಂಗೀತದ ಚರಿತ್ರೆಯಲ್ಲಿದೆ. ಈ ಬಂದಿಶ್‌ಗಳನ್ನು ಕಳವು ಮಾಡಿ, ಹಾಡಿದ ಅನೇಕ ಕತೆಗಳು ಪ್ರಚಾರದಲ್ಲಿವೆ. ಮರಾಠಿಯಲ್ಲಿ ಇದೇ ವಸ್ತುವನ್ನಿಟ್ಟುಕೊಂಡು ಪುರುಷೋತ್ತಮ ದಾರವೇಕರರು, 'ಕಟ್ಯಾರ ಕಳಜಾತ ಘುಸ್ಲಿ' ನಾಟಕ ಬರೆದರು.

ಕರ್ನಾಟಕ, ಮಹಾರಾಷ್ಟ್ರದಲ್ಲಿ ಈ ಆಡುಭಾಷೆ ಸಂಗೀತದ ಭಾಷೆಯೆಂದು ಮೆರೆದದ್ದು ವಿಶೇಷ. ಕನ್ನಡದಲ್ಲಿಯೇ ಹಾಡು ಎಂದು ಅ.ನ ಕೃಷ್ಣರಾಯರು ಮಲ್ಲಿಕಾರ್ಜುನ ಮನ್ಸೂರರನ್ನು ಎಷ್ಟೇ ಹುರಿದುಂಬಿಸಿದರೂ ವಚನಗಳನ್ನು ಕಚೇರಿಯ ಕೊನೆಯಲ್ಲಿ ಹಾಡಿದರೇ ಹೊರತು ದೊಡ್ಡ ಖ್ಯಾಲಗಳನ್ನು ಹಾಡಲು ಆಡು ಭಾಷೆಗಳಿಗೆ ಶರಣುಹೋದರು. ಮಹಾರಾಷ್ಟ್ರದಲ್ಲೂ ಅದೇ ಕತೆ. ಪ್ರಲ್ಹಾದ ಕೇಶವ ಅತ್ರೆ, ರಾಮ ಗಣೇಶ ಗಡಕರಿ, ನರಸಿಂಹ ಚಿಂತಾಮಣಿ ಕೇಳಕರ್ ಇವರೆಲ್ಲ ಹಿಂದಿ ಹಾಡುಗಳನ್ನು ಬಹಿಷ್ಕರಿಸಿ ಮರಾಠಿಯಲ್ಲಿ ಹಾಡಬೇಕೆಂಬ ಪ್ರೇಮಪೂರ್ವಕ ಕಡ್ಡಾಯ ಮಾಡಿದ್ದರು. ರಾಮಕೃಷ್ಣ ಬುವಾ ವಝೆ, ಹೀರಾಬಾಯಿ ಬಡೋದೆಕರ್ ಕೊನೆಗೆ ರಾಗದಾರಿಯ ಮರಾಠಿ ನಾಟ್ಯಗೀತೆಗಳನ್ನು ಹಾಡಲು ಶುರು ಮಾಡಿದರು. ಕೊನೆಗೆ ಹೀರಾಬಾಯಿ ಪ್ರಸ್ತಾಪಿಸಿದ ವಿನ್ಯಾಸವನ್ನು ಮಾನ್ಯಮಾಡಿ, ಮೊದಲು ಬಡಾ ಖ್ಯಾಲ್ (ಆಡು ಭಾಷೆಯದು) ಮತ್ತೊಂದು ಸಣ್ಣ ಖ್ಯಾಲ್ (ಆಡು ಭಾಷೆಯದು) ಕೊನೆಗೆ ಮರಾಠಿ ನಾಟ್ಯ ಗೀತೆ ಮಧ್ಯಂತರದ ನಂತರ ಮತ್ತೊಂದು ಬಡಾ ಖ್ಯಾಲ. ಮುಕ್ತಾಯಕ್ಕೆ ಭೈರವಿಯಲ್ಲಿ ಒಂದು ಮರಾಠಿ ರಚನೆ ಹಾಡುವ ಕ್ರಮ ರೂಢಿಯಾಯಿತು. ಇದೇ ಇನ್ನೂ ರಸಿಕಮಾನ್ಯವಾಗಿ ರೂಢಿಯಲ್ಲಿದೆ.

*****

6.22

ಕಬೀರ, ಕುಮಾರ ಮತ್ತು ಕಲಾಭಾರತಿ

ಬಹುಶ: 600 ವರ್ಷಗಳ ಹಿಂದೆ ಕಬೀರ ಹುಟ್ಟಿ, ಬೆಳೆದು, 'ಸರ್ವಧರ್ಮ ಸಮಭಾವ'ದಂತಹ ಹಿಂದು ಸಂಸ್ಕೃತಿಯ ತಳಹದಿಯ ಮೇಲೆ ರಚಿಸಿದ ಸೂಫಿ ಸಂಪ್ರದಾಯಕ್ಕೆ ಸೇರಿದ ಮಹಾಪುರುಷ 120 ವರ್ಷ ಬಾಳಿ ತನ್ನ ಸಾವಿನಲ್ಲಿಯೂ ನೊವು ಹುಟ್ಟಿಸಿದವ 'ಕಬಿರ ಹಿಂದು ಥಾ ಯಾ ಮುಸಲ್ಮಾನ' (ಕಬೀರ ಹಿಂದುವಾಗಿದ್ದನೇ ಅಥವಾ ಮುಸಲ್ಮಾನನೇ?) ಎಂಬ ಪ್ರಶ್ನೆ ಎತ್ತಿ ಅವನ ಶಿಷ್ಯರು ಜಗಳಾಡಿಕೊಂಡಿದ್ದರಂತೆ! ಮಧ್ಯಪ್ರದೇಶದ ಛತ್ತೀಸಗಡ ಇಲಾಖೆಯಲ್ಲಿ ಅಮರಕಂಚಕವೆಂಬ ಒಂದು ಅತ್ಯಂತ ಸುಂದರ ಪರಿಸರದಲ್ಲಿ ತಾವು ಈಗಲೂ, 'ಕಬೀರ ಪಂಥಿ'ಗಳನ್ನು ಕಾಣಬಹುದು. ಇದರಲ್ಲಿ ಹೆಚ್ಚು ಪ್ರಮಾಣದಲ್ಲಿ ನೇಕಾರರು, ಬಡಿಗರು ಹಾಗೂ ಕೃಷಿಕರು, ಒಕ್ಕಲಿಗರು ಇದ್ದಾರೆ. ಈ ಸಹಸ್ರದ ಕೊನೆಯ ವರ್ಷ ಕಬೀರನ 600ನೇ ಜಯಂತಿ ವರ್ಷ ಎಂದು ಲೆಕ್ಕ ಹಾಕಿ ಭಾರತ ಸರಕಾರವು ಘೋಷಿಸಿದ್ದು ಜನಸಾಮಾನ್ಯರಿಗೆ ಗೊತ್ತಿದ್ದ ವಿಷಯ.*

ಕಬೀರ ರಚಿತ, 'ದೋಹೆ' ಹಾಡದ ಹಿಂದುಸ್ತಾನಿ ಪ್ರಣಾಲಿಯ ಗಾಯಕನಿಲ್ಲ. ಕಬೀರನ ಕುರಿತು ಆತ ಬೋಧಿಸಿದ ತತ್ವಜ್ಞಾನ ಅರಿಯದ ಪರಿಣಿತರಿಲ್ಲ! ಕರ್ನಾಟಕ ಸಂಗೀತದಲ್ಲಿ ಪುರಂದರದಾಸರಿಗಿರುವ ಸ್ಥಾನ ಹಿಂದಿ ಹಿಂದುಸ್ತಾನಿಯಲ್ಲಿ ಕಬೀರನದು. ಪುರಂದರದಾಸರು ಹರಿಕೀರ್ತನೆ ಹಾಡಿಕೊಂಡು ಭಕ್ತಿ ಪ್ರಚೋದನೆ ಮಾಡುತ್ತ, ಭಕ್ತಿ ವೇದಾಂತದ ತಿರುಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತಹ ಭಾಷೆಯಲ್ಲಿ ಬೋಧಿಸಿದರೆ, ಕಬೀರ ಕೂಡ ಹಾಗೆಯೇ, ಮಂದಿರ ಮಸಜಿದ ಭೇದ ಭಾವವಿಲ್ಲಿ ಬೇಡ, ಪರಮಾತ್ಮನು ಇರುವದು ಒಬ್ಬನೇ ಎಂಬ ಏಕೇಶ್ವರ ವಾದದ ತಿರುಳನ್ನು, 'ರಾಮ್ ಹೋ ಯಾ ರಹೀಮ್' ಅವನ ಸ್ಥಾನ, 'ಎನ್ನ ಹೃದಯದಲ್ಲಿ' ಎಂದು ಸುಂದರವಾಗಿ ಹೇಳಿ ಅತ್ತಿತ್ತ ಅಡ್ಡಾಡಿ ತನ್ನ ಅತಿ ದೀರ್ಘವಾದ ಜೀವಮಾನ ಕಳೆದ ಮಹಾಪುರುಷ ಈ ಕಬೀರ.

ಅಂದ ಹಾಗೆ 1999ರಲ್ಲಿ ಕುಮಾರ ಗಂಧರ್ವರ 75ನೇ ವರ್ಷ ಕೂಡ. ಅವರು ಜೀವಿತವಾಗಿ ಇದ್ದಿದ್ದರೆ ಭೀಮಸೇನ ಜೋಶಿಯಂತೆ 75 ಮಳೆಗಾಲ ದಾಟುತ್ತಿದ್ದರು. ಅವರಿಗಿಂತ ಎರಡೂ ವರ್ಷ ಕಿರಿಯರು. ಕರ್ನಾಟಕದ ಸೂಳೆಭಾವಿಯಲ್ಲಿ ಕೋಮಕಲಿಮಠವೆಂಬ ವೀರಶೈವ ಮನೆತನದಲ್ಲಿ ಹುಟ್ಟಿದ ಹುಡುಗ ಛುಟಜ ಠಿಡಿಠಿಜುಠಿಥಿ ಆಗುತ್ತಾನೆ ಎಂಬುದು ಒಂದು ವಿಲಕ್ಷಣ ಮಾತು. ಶಿವಪುತ್ರನೆಂದು ಲಿಂಗಧಾರಣೆ ಮಾಡಿದ 'ಕೂಡಲ ಸಂಗನ ಶರಣರ ಕಂಡೂ ಆಡಿ–ಹಾಡಿ' ಬದುಕಿದ

ಜೀವ ತನ್ನ 5 ನೇ ವರ್ಷದಲ್ಲಿ ಮೊಟ್ಟ ಮೊದಲಿನ ಸಂಗೀತ ಕಚೇರಿ ನಡೆಸಿದ ಪುಟ್ಟ ಗಾಯಕ! 'ಕುಮಾರ ಗಂಧರ್ವ' ಇದು ರಸಿಕರು ಕೊಟ್ಟ ಬಿರುದೇ ಮುಂದೆ ಅವರ ಹೆಸರಾಯಿತು. ತಂದೆ ತಾಯಿ ಇಟ್ಟ ಹೆಸರನ್ನು ಜನಸಾಮಾನ್ಯರು ಮರೆತರು. ಇತ್ತೀಚೆಗೆ ಅವರ ಮಗ ಮುಕುಲ ಶಿವಪುತ್ರನೆಂದು ತನ್ನನ್ನು ಸಂಬೋಧಿಸಿಕೊಂಡಾಗಷ್ಟೇ ಇದರ ನೆನಪಾದದ್ದು. ಯಾವುದೇ ಹಾಡನ್ನು ಒಂದು ಸಲ ಕೇಳಿದರೆ ಸಾಕು, ಕೇಳಿದ ಗಾಯಕನ ಧಾಟಿನಲ್ಲಿ ಅತ್ಯಂತ ಸಲೀಸಾಗಿ, ಇದ್ದ ಹಾಗೆ ಒಪ್ಪಿಸುವ ಅದ್ಭುತ ವಿಲಕ್ಷಣ ಶಕ್ತಿ ಪಡೆದ ಕುಮಾರ ಅವರ, ಆರ್ಥಿಕ ಸ್ಥಿತಿಸಾಮಾನ್ಯವಾಗಿತ್ತು. ಹೀಗಾಗಿ ತಂದೆ ತಾಯಿ ಹಣ ಗಳಿಸಲು ಕುಮಾರನನ್ನು ಕಚೇರಿ ನಡಿಸಲು ಬಿಟ್ಟದ್ದು. ಹೀಗೆ ಊರಿಂದೂರಿಗೆ ತಿರುಗಾಟ. ಕನ್ನಡ ಎರಡನೇ ಇಯತ್ತೆ ಕಲಿತ ಜಾಣ. 'ಶಿವಪ್ಪ ಸೊಲ್ಪ ಸವಾಯಿ ಗಂಧರ್ವರ ಹಾಂಗ ಹಾಡಪ್ಪಾ' ಎಂದರೆ ಅಥವಾ 'ಬಾಲಗಂಧರ್ವರದ್ದು ಒಂದು ಮರಾಠಿ ಹಾಡು ಹಾಡಿ ತೊರಸಪ್ಪಾ' ಇಲ್ಲವೇ, ಕೊನೆಗೆ, ಅಬ್ದುಲ್ ಕರೀಂ ಖಾನರ 'ಜಮುನಾ ಕೇ ತೀರ್' ಹಾಡು' ಎಂದು ಬೇಡಿಕೆ ಬಂದಾಗ ಅವರಂತೆಯೇ ಹಾಡುತ್ತಿದ್ದ. ಈ ಕುಮಾರ ಪ್ರತಿಭೆಯ ಬಗ್ಗೆ ಮುಂಬಯಿಯ ದೇವಧರ ಮಾಸ್ತರರು ಕೇಳಿ ಕುಮಾರನನ್ನು ತನ್ನಲ್ಲಿಯೇ ಇಟ್ಟುಕೊಂಡು ಅವನ ಸ್ವಯಂಭೂ ಪ್ರತಿಭೆಗೆ ಚಾಲನೆ ಕೊಟ್ಟರು. ಅವರು ಹಾಗೇ ಮಾಡದೇ ಇದ್ದಲ್ಲಿ ಕುಮಾರ, 'ಹಣ ಗಳಿಸುವ ಛುಟಜ ರಿಡಿಂಜುರಥಿ ಮಶೀನ್ ಆಗಿ ಉಲ್ಕೆಯಂತೆ ಇತರ ಪ್ರತಿಭಾಶಾಲಿ ಬಾಲಕರಂತೆ ಒಬ್ಬ ನಕಲಾಕಾರ- ಗಾಯಕನಾಗುವ ಸಂಭವವಿತ್ತು. ಆದರೆ ದೇವಧರ ಸಾಹೇಬರು ಅವರನ್ನು ಎತ್ತಿ ಹಿಡಿದರು. ಕರ್ನಾಟಕದಲ್ಲಿ ಹುಟ್ಟಿ, ಮಹಾರಾಷ್ಟ್ರದ ಅಂದಿನ ಬೊಂಬಾಯಿಯಲ್ಲಿ ಬೆಳೆದು, ಅನಾರೋಗ್ಯದ ಕಾರಣ ಒಂದು ಪುಪ್ಪುಸ ಕಳೆದುಕೊಂಡು, ಫೀನಿಕ್ಸ್ ಪಕ್ಷಿಯಂತೆ ಹತ್ತು ವರ್ಷಗಳ ನಂತರ ಪುನಃ ಪ್ರಕಟವಾದರು. ರಸಿಕರನ್ನು ತನ್ನ ಹೊಸ ಸಂಗೀತ ಪ್ರಣಾಲಿಗೆ ಪರಿವರ್ತಿಸಿದ ಈ ಮಹಾಪುರುಷನನ್ನು ಇಪ್ಪತ್ತನೆಯ ಶತಮಾನದ ಒಬ್ಬ ಶ್ರೇಷ್ಠ ವಾಗ್ಗೇಯಕಾರರೆಂದು ನಾವು ಆದರದಿಂದ ಸಂಬೊಧಿಸಬಹುದು. ದೈಹಿಕ ನ್ಯೂನತೆ, ಅಂದರೆ ಹಾಡುವವರಿಗೆ ಶ್ವಾಸೋಚ್ವಾಸ ಎಷ್ಟು ಮುಖ್ಯ ಎಂಬುದು ಎಲ್ಲರೂ ತಿಳಿದ ವಿಷಯ. ಅದರಲ್ಲಿಯು, ಕ್ಷಯ ರೋಗದಿಂದ ಬಳಲಿದವನು ಇನ್ನೂ ಹಾಡಿದರೆ ವಿನಾಶವೇ ಗತಿಯೆಂದು ಹೇಳಿದಾಗ ಈ ಕುಂದು ಕೊರತೆಯನ್ನೇ ಸಮಯೋಚಿತವಾಗಿ ಹಿಂದುಸ್ತಾನಿ ಸಂಗೀತವನ್ನೇ ತನ್ನ ಹೊಸ ಪ್ರಣಾಲಿಗೆ ಬಗ್ಗಿಸಿದ ದಿಗ್ಗಜರು ಇವರು.

ರಾಷ್ಟ್ರೀಯ ಏಕಾತ್ಮತೆ, ಸರ್ವಧರ್ಮ ಸಮಭಾವ ಇತ್ಯಾದಿ ದೊಡ್ಡ ದೊಡ್ಡ ಅಂದರೆ ನಿತ್ಯ ಪ್ರಯೋಗದ **ವಾಕ್ ಸಂಪ್ರದಾಯ** ಅಥವಾ **ಚರ್ವಿತ ಚರ್ವಣ** ಮುಕ್ತಾಫಲಗಳನ್ನು ಅತ್ತಿತ್ತ ಚೆಲ್ಲದೇ ಏಕಾಗ್ರತೆಯಿಂದ ತಮ್ಮಷ್ಟಕ್ಕೆ ಕೆಲಸ ಮಾಡಿದ ಮಹಾನುಭಾವರೆಂದರೆ ಭಕ್ತ ಕಬೀರ ಮತ್ತು ಕುಮಾರ ಗಂಧರ್ವರು. ಒಬ್ಬ ಭಕ್ತಿ ಮಾರ್ಗದ ಮೂಲಕ ರಾಮ ರಹೀಮರ ಬಗ್ಗೆ ಬೋಧಿಸಿದರೆ ಮತ್ತೊಬ್ಬ ಅದನ್ನೇ ಹಿಂದೆ ಹೇಳಿದ ಹಾಗೆ, 'ಕೂಡಲ ಸಂಗನ ಶರಣರ ಕಂಡು ಆಡಿ ಹಾಡಿ ಬದುಕು ಮನವೆ' ಎಂಬ ಬಸವೇಶ್ವರನ ಹೇಳಿಕೆಯನ್ನೇ ತನ್ನ ಹೊಸ ಸಂಗೀತದ ಮಾದರಿಯಲ್ಲಿ ಅಳವಡಿಸಿಕೊಂಡು ಮನರಂಜಿಸಿದ ಮಹಾನುಭಾವ.

ವಿಷಯಾಂತರವಾದರೂ ಇಲ್ಲಿ ಒಂದು ಮಾತು ಹೇಳಬೇಕು. ಕಬೀರನಿಗೆ ಒಬ್ಬ ಶಿಷ್ಯನಿದ್ದನಂತೆ. ಅವನ ಹೆಸರು ಗೋಪಣ್ಣ. ಲಿಂಗಣ್ಣ ಮತ್ತು ಕಾಮಮ್ಮ ಈ ದಂಪತಿಗಳ ಸುಪುತ್ರ. ಮುಂದೆ ಕನಕ, ಪುರಂದರರಂತೆ ದಾಸ ಸಾಹಿತ್ಯದಲ್ಲಿ ಹೊಸಹೊಸ ಕೃತಿಗಳನ್ನು ರಚಿಸಿ, ಕರ್ನಾಟಕ ಸಂಗೀತದಲ್ಲಿ 'ಭದ್ರಾಚಲ ರಾಮದಾಸ'ರೆಂದು ಹೆಸರು ಪಡೆದ ಈ ಕಬೀರರ ಶಿಷ್ಯ ಕರ್ನಾಟಕದವರು. ಈಗಿನ ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದವರು. ಪುರಂದರದಾಸರಂತೆ ರಾಮದಾಸರು ಕೂಡ ಕನ್ನಡಿಗರು. ಇದೊಂದು ಅಂದಿನ ರಾಷ್ಟ್ರೀಯ ಏಕಾತ್ಮತೆಯ ಕುರುಹು ಎಂದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ!

ಇನ್ನು ಕರ್ನಾಟಕ ಸಂಘದ ಕಲಾಭಾರತಿ, ಕವಿ ಸನದಿಯವರು ನುಡಿದಂತೆ, 'ನಮ್ಮ ಕಲಾಭಾರತಿ ವಿಶ್ವಕಲಾಭಾರತಿ' ಕಬೀರ, ಕುಮಾರ ಮತ್ತು ಕಲಾಭಾರತಿಯಲ್ಲಿ 'ಕ' 'ಕು' 'ರಾ' ದೇಶದ ಮೂಲಾಕ್ಷರ ಈ ಮೂರು ಶಬ್ದಗಳಲ್ಲಿ ಬಂದದ್ದೂ, ಇದರಲ್ಲಿಯೇ ಭಾರತೀಯ ಕಲಾ ಸಂಸ್ಕೃತಿಯ ಏಕಾತ್ಮತೆಯ ವಿಚಾರ ಅಡಗಿದೆ ಎಂದರೆ ತಪ್ಪಾಗಲಾರದು.

ಮುಂಬಯಿಯ ಕುಪ್ರಸಿದ್ಧ ಬಾಂಬು ಸ್ಫೋಟಗಳ ನಂತರವೇ, 'ಕಲಾಭಾರತಿ' ಈ ಕಲಾವೇದಿಕೆಗೆ ಪ್ರೋತ್ಸಾಹನೆ ಕೊಟ್ಟವರು ಅಂದಿನ ಅಧ್ಯಕ್ಷರಾದ ಶ್ರೀ ಸದಾನಂದ ಶೆಟ್ಟಿಯವರು, ನಾಮಕರಣ ಮಾಡಿದ ಶ್ರೇಯ ಶ್ರೀ ವ್ಯಾಸರಾಯ ಬಲ್ಲಾಳರದು, ಅಂದಿನ ಕಾರ್ಯಾಧ್ಯಕ್ಷ ಶ್ರೀ ಬಿ.ಎ ಸನದಿ ಮತ್ತು ಕಾರ್ಯದರ್ಶಿಗಳಾಗಿದ್ದ ಶ್ರೀ ಜಯರಾಮ ಆಳ್ವರಿಗೆ ಸಲ್ಲುತ್ತದೆ. ಕಲಾಭಾರತಿಯ ಮೊಟ್ಟಮೊದಲ ನಿಮಂತ್ರಕರಾದ ಡಾ. ವ್ಯಾಸರಾವ್ ನಿಂಜೂರವರು ಕಲಾಭಾರತಿಗೆ ಭದ್ರ ತಳಹದಿ ಹಾಕಿದರು. ಚಂದ್ರಮೌಳಿಯವರಂತಹ ಕುಶಲ ಸಂಘಟಕರು ಆಧಾರಕೊಟ್ಟಿದ್ದನ್ನು ನಾವು ಇಲ್ಲಿ ಸ್ಮರಿಸಬೇಕು. ಇವರೆಲ್ಲರ ಮೂಲಕ ಕರ್ನಾಟಕ ಸಂಘದ ಕಲಾವೇದಿಕೆಯ ಸಾಂಸ್ಕೃತಿಕ ಚಳುವಳಿ ಪ್ರಾರಂಭವಾಯಿತು. ಫೆಬ್ರುವರಿ 26, 1993ರಿಂದ ಪ್ರತಿ ಭಾನುವಾರ ಸಂಗೀತ-ನೃತ್ಯ-ನಾಟಕಗಳ ರಸದೌತಣ ಬಡಿಸಲು ಆರಂಭವಾಯಿತು. ಸ್ನೇಹ ಸಂಬಂಧದ ಓದುಗರಿಗೆ ಇದೆಲ್ಲ ಅಪರಿಚಿತವಲ್ಲ. ಆದರೂ ಕೂಡ ಮೊದಲು ಕನ್ನಡಿಗರಾಗಿದ್ದವರು ಇತ್ತೀಚಿಗೆ ಕರ್ನಾಟಕ ಸಂಘದಲ್ಲಿ ಕನ್ನಡ, ಮನೆಯಲ್ಲಿ ಮರಾಠಿ ತತ್ವವನ್ನು ಅನುಸರಿಸುವ ಹಲವಾರು ಉತ್ತರ ಕರ್ನಾಟಕದವರು ಇಂತಹ ಕಾರ್ಯಕ್ರಮಗಳಿಗೆ ಬರುತ್ತಿರುತ್ತಾರೆ. ಇಲ್ಲಿ ಬರುವವರಿಗೆ ಕಲಾಸಕ್ತಿಯೇ ಮುಖ್ಯ, ಭಾಷೆಗಳ ಬಂಧನಗಳಿಲ್ಲ, ಅಭಿಮಾನವಿದ್ದರೂ ಕೂಡ ಧರ್ಮಕರ್ಮಗಳ ಸಂಕುಚಿತ ಭಾವನೆಗಳಿಲ್ಲ ಇಲ್ಲಿ.

ಮೊನ್ನೆ ಕರ್ನಾಟಕ ಸಂಘಕ್ಕೆ ಬಂದ ಹಿಂದಿಯ ಖ್ಯಾತ ಲೇಖಕರಾದ ಶ್ರೀ ಮದನಲಾಲ ವ್ಯಾಸರು ಅಲ್ಲಿ ಬಂದ ಸುಪ್ರಸಿದ್ಧ ಮರಾಠಿ ಲೇಖಕರಾದ ಚಂದ್ರಕಾಂತ ವಾಂದಿವಾಡಕರ್‌ರವರಿಗೆ ಹೇಳಿದಂತೆ, "ವಸುಂಧರಾ-ಕಲಾಪಿನಿನೆ ಗಾಯಾ, ಕುಮಾರಜೀನೇ ಸಂಗೀತ ಬಧ್ಧ ಕಿಯಾ ಕಬೀರಕೆ ದೋಹೆ. ಹಮನೆ ಯಹಿಂ ಕಲಾಭಾರತಿ ಮೆಂ ಸುನಾ." (ವಸುಂಧರಾ- ಕಲಾಪಿನಿಯವರು, ಕುಮಾರರು ಸಂಗೀತ ನಿರ್ದೇಶಿಸಿದ ಕಬೀರರ ದೋಹೆಗಳನ್ನು ಹಾಡಿದ್ದನ್ನು ನಾವು ಇಲ್ಲಿ ಕಲಾಭಾರತಿಯಲ್ಲೇ ಕೇಳಿದ್ದೇವೆ). ಈ ಹಿರಿಯ ಲೇಖಕರ ಸಂಭಾಷಣೆ ಕೇಳಿ ನನಗೆ ರೋಮಾಂಚನವಾಯಿತು!

ಅಕ್ಟೋಬರ 3, ಮುಂಜಾನೆಯ ಹತ್ತು ಗಂಟೆ ನಮ್ಮ ವಾತಾನುಕೂಲಿತ ಸಭಾಗೃಹದಲ್ಲಿ ಕಿಕ್ಕಿರಿದ ಜನಸಮುದಾಯ. ವಾತಾನುಕೂಲಿತ ಚಾಲಕ ಯಂತ್ರ ಧಡಾರ್ ಎಂದು ಶ್ವಾಸಬಿಟ್ಟು 12 ತಾಸುಗಳಾಗಿದ್ದವು. ಆಮೇಲೆ ಶತಪ್ರಯತ್ನ ಮಾಡಿ ಹೃದಯಕ್ರಿಯೆ ಬಂದಾದರೂ ರೆಸ್ಪಿರೇಟರ್ ಮೂಲಕ ಕೃತ್ರಿಮತೆಯಿಂದ ಶುರು ಮಾಡಿದ ಯಂತ್ರದ ಪ್ರಾಣ ಪುನಃ ಬಂದದ್ದು ಅರ್ಧ ಗಂಟೆಯ ಮೇಲೆ. ಯಾರೂ, 'ಪಟ್' ಎಂದು ತಕರಾರು ಮಾಡದೇ ಬಾಗಿಲುಗಳನ್ನು ತೆಗೆದು ಹೊರಗೆ ನಾಲ್ಕೂ ಕಡೆಯಲ್ಲಿ ಜನರು ಚಕ್ಕಳುಮುಕ್ಕಳು ಹಾಕಿಕೊಂಡು ಕುಮಾರರ ಪ್ರಣಾಲಿಯಲ್ಲಿ ಅವರ ಹೆಂಡತಿ ವಸುಂಧರಾ ಮತ್ತು ಮಗಳು ಕಲಾಪಿನಿಯವರು ಹಾಡಿದ್ದು ಕೇಳಿ ತಣಿದರು. ಹಾಡಿದ ಸಮಯ ಒಟ್ಟಾರೆ ಎರಡುವರೆ ಗಂಟೆ. ಕಬೀರನ 4 ದೋಹೆಗಳು, ತುಳಸಿದಾಸನ ಮೂರು, ಮತ್ತೆರಡು ಮಾಲವಿ ಕೃತಿಗಳು ಅಂದರೆ ನಮ್ಮ ಕಡೆಯ ಬೀಸೋಕಲ್ಲಿನ ಹಾಡಿನ ಪ್ರಕಾರಗಳು. ಲೋಕ ಸಂಗೀತದಲ್ಲಿ ಕುಮಾರ ಗಂಧರ್ವರ ರಚನೆಗಳು ಕೊನೆಗೊಂದು, 'ಜೋಗಿಯಾ ಮತ್ತು ಭೈರವಿ ರಾಗಗಳ ಆಯ್ಕೆ ಮತ್ತು ಸಂಯೋಜನೆ ಕುಮಾರರದೇ ಇದ್ದ ಕಾರಣದಿಂದ ಇಡೀ ಕಾರ್ಯಕ್ರಮಕ್ಕೆ ಒಂದು ವೈವಿಧ್ಯ, ನಾವಿನ್ಯ ಇತ್ತು. ಯಮನ್ ಕಲ್ಯಾಣ, ಭಿನ್ನಷಡ್ಜ, ಕೇದಾರ್, ಶಂಕರಾ ಅಂತಹ ಪಾರಂಪಾರಿಕ ರಾಗಗಳೊಂದಿಗೆ ಲೋಕ ಸಂಗೀತದ ಪ್ರೇರಣೆಯಿಂದ ಕೆಲ 'ಧುನ್'(ಶ್ರುತಿ) ಉಗಮ ರಾಗಗಳನ್ನು ಕುಮಾರರು ಸಂಯೋಜಿಸಿದ್ದು ತಾರಸಪ್ತಕದಲ್ಲಿ ಹಾಡಿ ವಸುಂಧರಾ ಮತ್ತು ಕಲಾಪಿನಿಯವರು ಜನರ ಮನಸ್ಸನ್ನು ಗೆದ್ದರು

*ಈ ಲೇಖನವು 1999 ನವೆಂಬರಲ್ಲಿ ಸ್ನೇಹ ಸಂಬಂಧದಲ್ಲಿ ಪ್ರಕಟವಾಗಿತ್ತು.

*****

ಅಧ್ಯಾಯ 7

ಗಾಯಕರು ಮತ್ತು ಗಾಯಕಿಯರು

7.1

ಉಸ್ತಾದ್ ಅಲ್ಲಾಉದ್ದೀನ ಖಾನ್ ಮತ್ತು ಮೈಹರ್ ಘರಾಣಾ- (1862-1972)

"ಸಂಗೀತಾಕಾಶದಲ್ಲಿ ಅರ್ಧ ಶತಮಾನಕ್ಕಿಂತಲೂ ಮಿಗಿಲಾಗಿ ಬೆಳಗಿದ ದಿವ್ಯಜ್ಯೋತಿಗಳು ತುಂಬ ವಿರಳರು, ಅವರಲ್ಲಿ ಉಸ್ತಾದ್ ಅಲ್ಲಾ ಉದ್ದೀನ್ ಖಾನ್‌ರು ಒಬ್ಬರು" ಎಂದು ಬರೆದವರು ಹೆಸರಾಂತ ಸಂಗೀತ ವಿಮರ್ಶಕರು, ಸಂಗೀತಜ್ಞರು ಮತ್ತು ಅನೇಕ ಪುಸ್ತಕಗಳನ್ನು ಇಂಗ್ಲೀಷಿನಲ್ಲಿ ಬರೆದು ಖ್ಯಾತರಾದ ಮೋಹನ ನಾಡಕರ್ಣಿಯವರು. ಈ ಉಸ್ತಾದ್‌ರು 110ನೆಯ ವರ್ಷದ ಹರೆಯದಲ್ಲಿ ಗತಿಸಿದಾಗ ಅವರಿಗೆ ನೀಡಿದ ಶ್ರದ್ಧಾಂಜಲಿಯಲ್ಲಿ ಬರೆದ ಶಬ್ದಗಳಿವು.

ಉಸ್ತಾದ್ ಅಲ್ಲಾ ಉದ್ದೀನ್ ಖಾನರು, "ಬಾಬಾ" ಎಂದೇ ಜನಪ್ರಿಯರಾಗಿದ್ದ ಈ ಗುರುಗಳು ಮಧ್ಯಪ್ರದೇಶದ ಸಾತ್ನಾದ ಬಳಿಯ ಮೈಹರ್ ಎಂಬ ಹಿಂದಿನ ಪುಟ್ಟ ಸಂಸ್ಥಾನವೊಂದರಲ್ಲಿ ನೆಲೆಸಿದ್ದರು. ಇವರು ಕೇವಲ ಸಂಗೀತ ಪ್ರತಿಭಾನ್ವಿತರಷ್ಟೇ ಆಗಿರದೇ, "ಶತಮಾನಗಳಲ್ಲೊಮ್ಮೆ ಬೆಳಗುವ ದಾರ್ಶನಿಕರಾಗಿದ್ದರು" ಎಂದು ಉದ್ಗರಿಸಿದವರು ಸಂಗೀತ ಜಗತ್ತಿನ ವಿರಾಟ್ ಪುರುಷರಾಗಿದ್ದ ಪ್ರೊ. ಬಿ.ಆರ್. ದೇವಧರ್ ಅವರು. ಹಿಂದುಸ್ತಾನಿ ಸಂಗೀತ ಜಗತ್ತಿನಲ್ಲಿ ಪಾರಂಪರಿಕ ಹಾಡುಗಾರಿಕೆಯೊಂದಿಗೆ ಹೊಸ ಹೊಸ ಪ್ರಯೋಗಗಳನ್ನು ಮೇಳೈಸಿದ ಅತ್ಯಂತ ಯಶಸ್ವಿ ವಿರಳರಲ್ಲಿ ಉಸ್ತಾದ್ ಅಲ್ಲಾ ಉದ್ದೀನ್ ಖಾನರು ಒಬ್ಬರು.

1977ರಲ್ಲಿ ನಾನು ಸಾತ್ನಾದಲ್ಲಿದ್ದೆ. ಬಹುರಾಷ್ಟ್ರೀಯ ಔಷಧಿ ಕಂಪನಿಯೊಂದರಲ್ಲಿ ಸೇಲ್ಸ್ ಮ್ಯಾನೇಜರನಾಗಿದ್ದೆ. ನನ್ನಲ್ಲಿಯ ಸಂಗೀತ ಪ್ರೀತಿ ಮತ್ತು ಕುತೂಹಲಗಳು ಮೈಹರ್‌ನತ್ತ ಸೆಳೆದವು. ಮೈಹರ್ ಊರು ಸಾತ್ನಾದಿಂದ 60 ಕಿ.ಮೀ. ದೂರದಲ್ಲಿದೆ. ವಿಸ್ತಾರವಾದ ಮಧ್ಯಪ್ರದೇಶದ ಇತರ ಊರುಗಳಂತೆ ಇದೂ ಕೂಡ ಧೂಳಿಮಯವಾದದ್ದೆ! ಒಂದೇ ವೈಶಿಷ್ಟ್ಯವೆಂದರೆ ಊರ ಹೊರಗಡೆಯ ಬೆಟ್ಟವೊಂದರಲ್ಲಿ ಇರುವ ಇತಿಹಾಸ ಪ್ರಸಿದ್ಧ

ಸರಸ್ವತಿಯ ಮಂದಿರ ಮತ್ತು ಆರವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ವಾಸವಾಗಿರುವ ಉಸ್ತಾದ್ ಅಲ್ಲಾ ಉದ್ದೀನ್ ಖಾನರ ಮನೆತನ. ಈಗಲೂ ಕೆಲವೇ ಕೊಠಡಿಗಳಿಂದ ವಾಸಯೋಗ್ಯವಾಗಿರುವ ದೊಡ್ಡ ವಾಡೆಯೊಂದನ್ನು ಈ ಮನೆತನ ಇಲ್ಲಿ ಹೊಂದಿದೆ.

ಒಂದು ನಸುಕು, ಮೈಹರ್‌ದಲ್ಲಿರುವ ಒಂದೇ ಒಂದು ಮಾಧ್ಯಮಿಕ ಶಾಲೆಯ ಪ್ರಾರ್ಥನಾ ಪದದ ರಾಗವು ಪ್ರಸಿದ್ಧ ಚಿತ್ರಗೀತವಾದ, 'ಅಲ್ಲಾ ತೆರೊ ನಾಮ, ಈಶ್ವರ ತೆರೊ ನಾಮ'ಕ್ಕೆ ಹೋಲುತ್ತದೆ. ಆಗ ಕೇಳುಗರಿಗೆ ಈ ಧ್ವನಿಯ ಸಂಯೋಜಕರು ಬೇರಾರೂ ಆಗಿರದೇ ಉಸ್ತಾದ್ ಅಲ್ಲಾ ಉದ್ದೀನರೇ ಎಂಬುದು ಮನವರಿಕೆಯಾಗುತ್ತದೆ. 'ಹಮದೋನೋ' ಹಿಂದಿ ಚಲಚಿತ್ರದಿಂದ ಜನಪ್ರಿಯವಾಗಿರುವ ಈ ಹಾಡಿಗೆ ಧ್ವನಿ ಸಂಯೋಜನ ನೀಡಿದವರು ಉಸ್ತಾದ್‌ರ ಸುಪುತ್ರ ಉಸ್ತಾದ್ ಅಲಿ ಅಕಬರ್ ಖಾನರ ನೇರ ಶಿಷ್ಯರಾಗಿದ್ದ ಜಯದೇವರು ಅಂದರೆ ಅಚ್ಚರಿಯ ಮಾತೇನಲ್ಲ! ಹಿಂದು-ಮುಸ್ಲಿಮ್ ಒಗ್ಗಟ್ಟಿಗೆ ದುಡಿದ ಉಸ್ತಾದ್ ಅಲ್ಲಾಉದ್ದೀನ ಖಾನರಂತಹ ಮಹನೀಯರು ಆಧುನಿಕ ಯುಗದಲ್ಲಿ ಇನ್ನೊಬ್ಬರಿಲ್ಲ. ಹಿಂದು ಸಂತ ಅಥವಾ ಬೋಧಕರೆಂದು ಗುರುತಿಸಲ್ಪಡುವ, 'ಆಚಾರ್ಯ' ಎಂಬ ಅತ್ಯುನ್ನತ ಪದವಿಯೇ ಅವರಿಗೆ ಯೋಗ್ಯವಾಗಿ ಶೋಭಿಸುತ್ತದೆ.

ಶಾರದಾ ದೇವಿಯ ಭಕ್ತರಾಗಿದ್ದ ಉಸ್ತಾದ್‌ರು ಮೈಹರ್‌ದ ಆಕೆಯ ದೇವಸ್ಥಾನದ ಪುನಾರಚನೆಯಲ್ಲಿ ಮಹತ್ವದ ಪಾತ್ರವಹಿಸಿದ್ದರು. ಅವರ ನಿಧನಕ್ಕೆ ಕೆಲವೇ ತಿಂಗಳ ಮೊದಲಿನವರೆಗೂ ಮೈಹರ್‌ನ ಬೆಟ್ಟದ ಮೇಲಿನ ಮೆಟ್ಟಲುಗಳನ್ನು ಅವರು ಹತ್ತಿ ಇಳಿಯುತ್ತಿದ್ದರು ಎಂಬ ವರದಿಯಲ್ಲಿ ಅತಿಶಯೋಕ್ತಿ ಇಲ್ಲ. ಅಲ್ಲಾ ಉದ್ದೀನರ ತರುಣ ಶಿಷ್ಯ ಮತ್ತು ಮೈಹರ್‌ನ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದ ರಮೇಶಚಂದ್ರ ತಿವಾರಿಯವರನ್ನು ನಾನು ಭೇಟಿಯಾದೆ. ನಿಖಿಲ್ ಬ್ಯಾನರ್ಜಿ ಅಥವಾ ರವಿಶಂಕರರಷ್ಟು ಪ್ರಸಿದ್ಧರಲ್ಲದಿದ್ದರೂ ಒಳ್ಳೆಯ ಸಿತಾರ್‌ವಾದಕರೆಂದು ಹೆಸರು ಗಳಿಸಿದ್ದರು. ಅವರು ನನ್ನನ್ನು ಮೈಹರ್‌ದತ್ತ ಕರೆದುಕೊಂಡು ಹೋದರು. ಉಸ್ತಾದ್‌ರು ಆಗಾಗ್ಗೆ ಸಂದರ್ಶಿಸುತ್ತಿದ್ದ ಸ್ಥಳಗಳನ್ನು ತೋರಿಸಿದರು. ಬಿ.ಆರ್ ದೇವಧರ್‌ರ Pillars of Hindustani Music ಪುಸ್ತಕದಲ್ಲಿ ಬರೆದಂತೆ, ಯಾರೂ ಎತ್ತರದ ಅಂತಸ್ತಿನಲ್ಲಿ ನಿಂತು 'ನಾನು ಭಾರತೀಯ ಮುಸ್ಲಿಮ' ಎಂದು ಸಾರಿ ಹೇಳಬೇಕಾಗಿಲ್ಲ, ಆ ರೀತಿ ಬಾಳಿ ತೋರಿಸಿದವರು ಉಸ್ತಾದ್‌ರು. ಅದರಂತೆ ಅವರ ಇಡೀ ಕುಟುಂಬದವರು ಹಾಗೆಯೇ ಬಾಳಿದ್ದಾರೆ.

"ಒಮ್ಮೆ ನನ್ನ ಅಲಹಾಬಾದ್ ಯಾತ್ರೆಯಲ್ಲಿ (1936) ಒಂದು ದಿನ ನಾನು ಒಬ್ಬ ಬ್ರಾಹ್ಮಣನು ಮಡಿಚಿದ ಧೋತರವನ್ನು ಹೆಗಲ ಮೇಲೆ ಹೊತ್ತು ಬರುತ್ತಿದ್ದುದನ್ನು ಕಂಡೆ. ಸಮೀಪ ಬರುತ್ತಿದ್ದಂತೆ ಅವರು ನನ್ನ ಇತ್ತೀಚಿಗೆ ಪರಿಚಿತರಾದ ಮಹನೀಯರು ಎಂದು ಗೊತ್ತಾಯಿತು. ಅವರೇ ಉಸ್ತಾದ್ ಅಲ್ಲಾ ಉದ್ದೀನ್ ಖಾನ್! ನಾನು ವಿನಯಪೂರ್ವಕವಾಗಿ ಬಳಿಗೆ ಹೋಗಿ ವಂದಿಸಿದೆ. 'ಉಸ್ತಾದ್‌ರೇ, ಈ ಬೆಳಗಿನ ಕಠಿಣ ಚಳಿಯಲ್ಲಿ ಎಲ್ಲಿಗೆ ಹೋಗುತ್ತಿದ್ದೀರಿ' ಎಂದು ಕೇಳಿದೆ. ಅವರೆಂದರು, 'ಇವತ್ತು ಏಕಾದಶಿಯಲ್ಲವೇ? ಇವತ್ತೇ ಪ್ರಯಾಗದಲ್ಲಿರುವದು ನನ್ನ ಪುಣ್ಯ, ಆದ್ದರಿಂದ ಗಂಗಾ ನದಿಯ ಪವಿತ್ರ ಸ್ನಾನಕ್ಕೆ ಹೊರಟಿದ್ದೇನೆ'." ಮುಂದೆ ಪ್ರೊಫೆಸರ್ ದೇವಧರ್ ಅವರು ಬರೆಯುತ್ತಾರೆ, "ಸ್ವತಃ ಹಿಂದು ಬ್ರಾಹ್ಮಣನಾದ ನನಗೆ ಈ ವಿಚಾರ ಹೊಳೆಯಲೇ ಇಲ್ಲವಲ್ಲ ಎಂದು ತುಂಬ ನಾಚಿಕೆಯಾಯಿತು."

ಆಚಾರ್ಯ ಅಲ್ಲಾ ಉದ್ದೀನ್ ಖಾನ್‌ರು ಕೇವಲ ಹಿಂದು-ಮುಸ್ಲಿಮ್ ಬಾಂಧವ್ಯದ ಪ್ರತೀಕವಾಗಿ ಉಳಿಯಲಿಲ್ಲ, ಅವರ ಸಂಗೀತ ಪದ್ಧತಿಯೂ ಐತಿಹಾಸಿಕ ಮಹತ್ವದ್ದಾಗಿ ಪರಿಣಮಿಸಿತು. ತಂತಿವಾದ್ಯ ಆಧಾರಿತ ಹಾಡುಗಾರಿಕೆ, ತಂತಕಾರಿ (ತಂತುವಾದ್ಯಕ್ಕೆ ಸಂಬಂಧಿಸಿದ್ದು) ಮತ್ತು ಲಯಕಾರಿ ಇವುಗಳಲ್ಲಿ ಪ್ರಧಾನವಾದವು, ಸಿತಾರ್, ಸರೋದ್ ಹಾಗೂ ಬಾನ್ಸುರಿಗಳಿಗೆ ಈ ಹಾಡುಗಾರಿಕೆ ಆಧಾರವಾಗಿತ್ತು. ಅವರು ತರಬೇತುಗೊಳಿಸಿದ ಪ್ರಸಿದ್ಧ ಶಿಷ್ಯರಿಂದಲೇ ಪ್ರತಿಯೊಂದು ರಾಗ ರಾಗಿಣಿಯ ಸ್ವರೂಪ, ವೈಭವ, ಹೊಳವುಗಳನ್ನು ಹೊರತರಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟರು.

ಸ್ವತಃ ಉಸ್ತಾದ್‌ರು 30ಕ್ಕಿಂತಲೂ ಹೆಚ್ಚು ತಂತಿವಾದ್ಯಗಳು ಮತ್ತು ತಾಲವಾದ್ಯಗಳನ್ನು ನುಡಿಸುವದರಲ್ಲಿ ಅತ್ಯಂತ ನಿಷ್ಣಾತರಿದ್ದರು. ಅಷ್ಟೇ ಅಲ್ಲ ಅವರೊಬ್ಬ ಆದರ್ಶ ಶಿಕ್ಷಕರಾಗಿದ್ದರು. ಜೊತೆಗೆ ಉತ್ತಮ ಸ್ವರ-ಸಂಯೋಜಕರೂ, ವಾದ್ಯವೃಂದದ ನಿರ್ದೇಶಕರೂ ಮತ್ತು ಧ್ರುಪದ್-ಧಮಾರ್ ಹಾಡುಗಾರಿಕೆಯ ಪ್ರಾಚಾರ್ಯರೂ ಆಗಿದ್ದರು.

ಮೊದಲ ವರ್ಷಗಳಲ್ಲಿ ಆಚಾರ್ಯರು ಪಾಶ್ಚಾತ್ಯ ಸಂಗೀತವೂ ಸೇರಿದಂತೆ ಹಲವು ಗುರುಗಳಿಂದ ಸಂಗೀತ ಕಲಿತಿದ್ದರು. ಮೈಹರ್ ಬ್ಯಾಂಡ್ ಇದು ಆಚಾರ್ಯರ ಸೃಜನಾತ್ಮಕ ಪ್ರತಿಭೆಗೆ ಉತ್ತಮ ಉದಾಹರಣೆಯಾಗಿದೆ. 1977ರ ತನಕವೂ ಪ್ರಚಲಿತವಿದ್ದ ಈ ಬ್ಯಾಂಡ್ ಭಾರತೀಯ ವಾದ್ಯಗಳ ಪ್ರಪ್ರಥಮ ವಾದ್ಯವೃಂದದ (ಆರ್ಕೆಸ್ಟ್ರಾ) ನಿದರ್ಶನವಾಗಿದೆ. ಆಚಾರ್ಯರ ಸಂಗೀತ ಮಾದರಿಗಳು, ಅವರ ಶ್ರೇಷ್ಠ ಶಿಷ್ಯರು ಮತ್ತು ಅವರ ಶಿಷ್ಯ ಪರಂಪರೆಯ ಮುಖಾಂತರ ಪ್ರಚಲಿತವಿರುವ ಜೀವಂತ ಉದಾಹರಣೆಯಾಗಿವೆ.

ಬಾಬಾ ಅಲ್ಲಾಉದ್ದೀನ್ ಖಾನರ ಪ್ರತಿಭಾವಂತ ಶಿಷ್ಯರ ಶ್ರೇಣಿಯಲ್ಲಿ ಶ್ರೇಷ್ಠ ಸರೋದ್‌ವಾದಕರಾದ ಮಗ ಅಲಿ ಅಕಬರ್ ಖಾನರು, ಮಗಳು ಸುರ್‌ಬಹಾರ್‌ದ ಅನ್ನಪೂರ್ಣಾದೇವಿ, ಅಳಿಯ ಸಿತಾರ್‌ವಾದಕ ರವಿಶಂಕರರು, ಬಾನ್ಸುರಿಯ ಪನ್ನಾಲಾಲ್ ಘೋಷರು, ಸರೋದ್‌ವಾದಕರಾದ ಬಹಾದೂರ್ ಖಾನ್, ಶ್ಯಾಮ ಗಂಗೂಲಿ ಮತ್ತು ಶರಣರಾಣಿ ಮಾಥೂರ್ (ಸರೊದ್), ನಿಖಿಲ ಬ್ಯಾನರ್ಜಿ (ಸಿತಾರ್) ಅತ್ಯಂತ ಪ್ರಸಿದ್ಧರು. ಸಂಗೀತ ನಿರ್ದೇಶಕರಲ್ಲಿ ವಿಷ್ಣುದಾಸ ಶಿರಾಲಿ, ಸಚಿನ್ ಡಿ. ಬರ್ಮನ್, ರಾಹುಲ ದೇವ್ ಬರ್ಮನ್, ಜಯದೇವ, ರೋಶನ್, ಮತ್ತು ತಿಮಿರ್ ಬರನ್ ಮೊದಲಾದವರೆಲ್ಲ ತಮ್ಮ ತಮ್ಮ ತರಬೇತಿಯ ಮೊದಲ ದಿನಗಳಲ್ಲಿ ಆಚಾರ್ಯರ ನಿಕಟ ಸಹವಾಸದಿಂದ ಲಾಭ ಪಡೆದವರೇ!

ಆಚಾರ್ಯ ಅಲ್ಲಾ ಉದ್ದೀನ್ ಖಾನ್‌ರ ಸಂಗೀತದಲ್ಲಿ ಪ್ರಕೃತಿಯ ಶುದ್ಧತೆಯೊಂದಿಗೆ ದೈವಿಕ ಅಂಶವೂ ಒಳಗೊಂಡದ್ದು ಭಾಸವಾಗುತ್ತದೆ. ಇಂತಹ ಸಂಗೀತದ ಪವಿತ್ರ ಸಂಬಂಧವನ್ನು ಪುರಂದರದಾಸರು, ಸ್ವಾಮಿ ಹರಿದಾಸರು, ತ್ಯಾಗರಾಜರು, ಶ್ಯಾಮಾಶಾಸ್ತ್ರಿಗಳು, ಮುತ್ತುಸ್ವಾಮಿ ದಿಕ್ಷೀತರು, ವಿಷ್ಣು ದಿಗಂಬರ್ ಪಲುಸ್ಕರರು ಮೊದಲಾದ ಸಂತರು, ಸಂಗೀತಕಾರರು ಶ್ರೀಮಂತಗೊಳಿಸಿದರು. ಆಚಾರ್ಯ ಅಲ್ಲಾ ಉದ್ದೀನರು

ಈ ಪರಂಪರೆಯ ಸಂತ ಸಂಗೀತಕಾರರಲ್ಲಿ ಒಬ್ಬರಾಗಿದ್ದಲ್ಲದೇ ಕೊನೆಯವರೂ ಆಗಿದ್ದಾರೆ ಎಂದೆನಿಸುತ್ತದೆ.

ತ್ರಿಪುರಾದಲ್ಲಿ ಹುಟ್ಟಿದ ಈ ಆಚಾರ್ಯರ ಮೈಹರ್ ಘರಾಣಾದ ಸಂಗೀತ ಪರಂಪರೆ ಇಂದಿಗೂ ಮುಂಬಯಿಯಲ್ಲಿ ಅವರ ಮಗಳು ಗುರುಮಾ ಅನ್ನಪೂರ್ಣಾದೇವಿಯವರ ಮೂಲಕ ಮುಂದುವರಿದಿದೆ. ತಂದೆಯಂತೆಯೇ ಈಕೆಯೂ ಶಿಷ್ಯ ಸ್ವೀಕಾರಕ್ಕೆ ಒಂದು ಶರತ್ತು ಹಾಕುತ್ತಾರೆ. ಜ್ಞಾನವು ದಾನವಾಗಬಹುದೇ ಹೊರತು ಮಾರಾಟದ ವಸ್ತು ಆಗದು. ಶಿಷ್ಯನಾದವನು ಕಲಿಸುವಿಕೆಯ ಶಿಸ್ತಿಗೆ ಚಾಚೂ ತಪ್ಪದೇ ಒಳಪಡಬೇಕು. ಈ ತರಬೇತಿಯ ಕ್ರಮ ಪ್ರತಿ ರಾತ್ರಿಯಲ್ಲಿ ಪ್ರಾರಂಭವಾಗಿ ಮರುದಿನ ನಸುಕಿನಲ್ಲಿ ಕೊನೆಗೊಳ್ಳುತ್ತದೆ!

ಪದ್ಮಭೂಷಣವೂ ಸೇರಿದಂತೆ ಪ್ರಶಸ್ತಿಗಳು, ಪುರಸ್ಕಾರಗಳು, ಗೌರವ, ಸನ್ಮಾನಗಳು ಆಚಾರ್ಯರನ್ನು ಅರಸಿಕೊಂಡು ಬಂದವು. ಅವರ ಶಿಷ್ಯಂದಿರಲ್ಲಿ ಹೆಚ್ಚಿನವರಿಗೆ ಪದ್ಮ ಪುರಸ್ಕಾರಗಳು ಪ್ರಾಪ್ತವಾಗಿವೆ. ಒಬ್ಬರಿಗಂತೂ ಭಾರತರತ್ನವೇ ಸಂದಾಯವಾಗಿದೆ, ಆದರೆ ಮೈಹರ್‌ನ ನಿಜವಾದ ಸಂಗೀತ ಪರಂಪರೆಯ ಮುಂದುವರಿಕೆಯ ಶ್ರೇಯಸ್ಸು ಆಚಾರ್ಯರ ಮಗಳಾದ ಅನ್ನಪೂರ್ಣಾದೇವಿಯವರಿಗೇ ಸಲ್ಲುತ್ತದೆ.

*****

7.2

ಪಂಚಾಕ್ಷರಿ ಗವಯಿಗಳು (1892-1944)

ಕುಮಾರವ್ಯಾಸನ ಗದಗ, ಉಭಯಗಾನ ವಿಶಾರದ ಪಂಚಾಕ್ಷರಿ ಗವಯಿಗಳ ಪುಣ್ಯಕ್ಷೇತ್ರವೂ ಅಹುದು, ಸ್ವರಾಧಿರಾಜ ಪಂ. ಭೀಮಸೇನ ಜೋಶಿಯವರ ಹುಟ್ಟಿದೂರು ಅಹುದು. ಸಮೀಪದ ಹಾನಗಲ ಡಾ. ಗಂಗೂಬಾಯಿಯವರ ಅಜ್ಜಿಯ ಊರಾದರೆ ಪಂಚಾಕ್ಷರಿ ಗವಯಿಗಳ ಗುರುಗಳಾದ ಸ್ವಾಮಿ ಕುಮಾರಸ್ವಾಮಿಯವರ ಊರೂ ಅಹುದು! ನನಗೂ ಗದುಗಿಗೂ ಮತ್ತು ಪಂಚಾಕ್ಷರಿ ಗವಯಿಗಳಿಗೂ ಒಂದು ಅನ್ಯೋನ್ಯ ಸಂಬಂಧವಿದೆ. 75 ವರ್ಷಗಳ ಹಿಂದೆ ಅಂಚೆ ಖಾತೆಯಲ್ಲಿದ್ದ ನಮ್ಮ ತಂದೆ ಗಣೇಶರಾಯರಿಗೆ ಗದುಗಿಗೆ ವರ್ಗವಾಗಿತ್ತು. ನನ್ನ ತಂದೆ ತಾಯಿ ತಮಗಾದ ಎರಡು ಹೆಣ್ಣು ಮಕ್ಕಳ ನಂತರ ನನ್ನ ಬರವಿನ ಹಾದಿ ನೋಡುತ್ತ, ನನ್ನನ್ನು ಹೊಟ್ಟೆಯಲ್ಲಿ ಹೊತ್ತುಕೊಂಡು ಗದುಗಿಗೆ ಬಂದರು. ಆಗಿನ್ನೂ ವೀರೇಶ್ವರ-ಪುಣ್ಯಾಶ್ರಮ ಸ್ಥಾಪಿಸುವ ಮೊದಲಿನ ಕಾಲ. ಪಂಚಾಕ್ಷರಿಗಳ ಸಂಚಾರಿ-ಸಂಗೀತಾಲಯದ ಕಾಲ. ನನ್ನ ತಾಯಿ ಶಾರದಾಬಾಯಿ ಹಾಗೂ ಗದುಗಿನ ಸರಕಾರಿ ಆಸ್ಪತ್ರೆಯ ಡಾಕ್ಟರ್ ಮುಲ್ಕೀ ಅವರ ಮದುವೆಯಾಗದ ಇಬ್ಬರು ಹೆಣ್ಣುಮಕ್ಕಳು ಲಲಿತಾ, ಮೀರಾ, ಈ ತ್ರಿಕೂಟ ಕೆಲ ಕಾಲ ಪಂಚಾಕ್ಷರಿ ಗವಯಿಗಳಲ್ಲಿ ಹಿಂದುಸ್ತಾನಿ ಸಂಗೀತ ಕಲಿಯಲು ಹೋಗುತ್ತಿದ್ದರಂತೆ! ಇಡೀ ಗದುಗಿನಲ್ಲಿ ಅದೊಂದು ದೊಡ್ಡ ಘಟನೆಯಾಗಿತ್ತಂತೆ. ಮನೆಯ ಹೊಸ್ತಿಲು ದಾಟದ, 'ಕುಲೀನ' ಲಿಂಗಾಯತ-ಬ್ರಾಹ್ಮಣರ ವಸತಿ ಇದ್ದ ಊರಿನಲ್ಲಿ, 'ಪ್ರಗತಿಪರ', 'ಸುಧಾರಕ' ಸಾರಸ್ವತ ಕುಟುಂಬದ ಪ್ರಾಯದ ಹೆಣ್ಣು ಮಕ್ಕಳು (ಅವರಲ್ಲಿ ಒಬ್ಬರು ಎರಡು ಹೆಣ್ಣುಮಕ್ಕಳ ತಾಯಿ ಇನ್ನೊಬ್ಬ ಹುಟ್ಟುವದರಲ್ಲಿದ್ದ) ಪಂಚಾಕ್ಷರಿ ಗವಯಿಗಳಲ್ಲಿ, 'ಸಾರೆಗಮ' ಕಲಿಯಲು ಹೋಗುವುದೇ ಒಂದು ದೊಡ್ಡ ಸಂಗತಿಯಾಗಿತ್ತಂತೆ! ನನ್ನಜ್ಜಿ ಲಲಿತಮ್ಮ, 'ಪರವಾಗಿಲ್ಲ, ಹೇಗಿದ್ದರೂ ಸ್ವಾಮಿಗಳು, ಕಣ್ಣಿಲ್ಲದವರು' ಎಂದು ಹುಸ್ಸೆಂದು ಸುಮ್ಮನಿದ್ದರಂತೆ. ಡಾ. ಮುಲ್ಕಿಯವರೂ ಸ್ವಾಮಿಗಳಿಗೆ ಬೇಕಾದವರು. ಅವರ ಮತ್ತು ಅವರ ಶಿಷ್ಯ ಸಂಪತ್ತಿಯ ಆರೋಗ್ಯ ನೋಡಿಕೊಳ್ಳುವವರು. ಹೀಗಾಗಿ ನಾನು ಹುಟ್ಟುವ ತನಕ ಈ ಮೂವರ ಸಂಗೀತದ ಅಭ್ಯಾಸ ಸರಾಗವಾಗಿ ನಡೆಯಿತಂತೆ. ಇದೆಲ್ಲ ನಮ್ಮ ತಂದೆಯವರು ಹೇಳಿದ್ದು.

ಪಂ. ಪಂಚಾಕ್ಷರಿ ಗವಯಿಗಳು ಅಪ್ರತಿಮ ಪ್ರತಿಭೆಯ ಗಾನಯೋಗಿಗಳು. ಅವರು 1892ರ ಫೆಬ್ರವರಿ 2 ರಂದು ಜನಿಸಿದರು. ಹುಟ್ಟಿದಾಗಿನ ಹೆಸರು ಗದಿಗಯ್ಯ. ಅಣ್ಣ ಗುರು ಬಸಯ್ಯನಂತೆ, ಇವರೂ ಜನ್ಮತಃ ಅಂಧರಾಗಿಯೇ ಬಂದವರು. ಗದಿಗಯ್ಯನ ಪ್ರತಿಭಾ ವಿಕಾಸಕ್ಕೆ ಅವಕಾಶ ಕಲ್ಪಿಸಿದವರು ಶ್ರೀ ಕುಮಾರಸ್ವಾಮಿ ಶಿವಯೋಗಿಗಳು.

ಪ್ರಥಮತಃ ಕರ್ನಾಟಕ ಸಂಗೀತವನ್ನು ಮೈಸೂರಿನಲ್ಲಿ ಕಲಿತು ವಿವಿಧ ವಾದ್ಯಗಳ ಮೇಲೆ ಪ್ರಾವಿಣ್ಯವನ್ನು ಗಳಿಸಿ ಹಾನಗಲ್ಲಿನ ಕುಮಾರಸ್ವಾಮಿಗಳ ಅಪ್ಪಣೆ ಪಡೆದು ಅಥಣಿಯ ನೀಲಕಂಠ ಬುವಾ ಮಿರಜಕರ್ ಉರ್ಫ ಆಲೂರಮಠದವರಲ್ಲಿ ಗ್ವಾಲಿಯರ್ ಪರಂಪರೆಯ ಹಿಂದುಸ್ತಾನಿ ಸಂಗೀತದ ವಿದ್ಯಾಭ್ಯಾಸ ನಡೆಸಿದರು. ಹಾನಗಲ್ ಕುಮಾರ ಸ್ವಾಮಿ ಯೋಗಿಗಳೇ ಇವರಿಗೆ ಸಂಗೀತ ಸಾಕ್ಷಾತ್ಕಾರದ ಬಳಿಕ 'ಪಂಚಾಕ್ಷರಿ' ಎಂದು ಅಭಿದಾನ ದಯಪಾಲಿಸಿದವರು.

ಪಂಚಾಕ್ಷರಿ ಗವಯಿಗಳದ್ದು ಉದ್ದಕ್ಕೂ ಹೋರಾಟದ ಬದುಕು. ಹಿಂದುಸ್ತಾನಿ ಸಂಗೀತದ ಮೊಟ್ಟಮೊದಲಿನ, 'ಸಂಚಾರಿ ಸಂಗೀತಾಲಯ' ಸ್ಥಾಪಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ. ನೂರಾರು ಕಲಾಭ್ಯಾಸಿಗಳನ್ನು ಕಲೆ ಹಾಕಿ ಅವರ ಅನ್ನ ಬಟ್ಟೆಗಳ ಸಲುವಾಗಿ ಭಿಕ್ಷೆ ಬೇಡಿ, ಸಂಜೆ ಬಿಡಾರ ಮಾಡಿದಲ್ಲಿ ಸಂಗೀತ ಹೇಳಿಕೊಡುತ್ತಿದ್ದರು. ಕಿರಾನಾ ಘರಾಣೆಯ ವಹೀದ್ ಖಾನರಲ್ಲಿ ಕೂಡ ಪಂಚಾಕ್ಷರಿಗಳು ಕೆಲ ಕಾಲ ಅಭ್ಯಾಸ ಮಾಡಿದ್ದರಿಂದ ಇವರ ಪರಂಪರೆ ಗ್ವಾಲಿಯರ್-ಕಿರಾನಾ ಎಂದು ಅನ್ನಬಹುದು. ಪಂ. ಬಸವರಾಜ ರಾಜಗುರು, ಸಿದ್ದರಾಮ ಜಂಬಲದಿನ್ನಿ, ಪಂಚಾಕ್ಷರಿ ಮತ್ತಿಗಟ್ಟಿ, ಅರ್ಜುನ ಸಾ ನಾಕೋಡ ಮತ್ತಿತರ ಹಲವಾರು ವಿದ್ಯಾರ್ಥಿಗಳಿಗೆ ತರಬೇತಿ ಕೊಟ್ಟ ಪಂಚಾಕ್ಷರಿಗಳು ಮುಂದೆ ತಮ್ಮ ಪಟ್ಟಶಿಷ್ಯ ಪುಟ್ಟರಾಜ ಗವಯಿರೊಂದಿಗೆ 1940ರಲ್ಲಿ ಸಂಚಾರಿ ಸಂಗೀತಶಾಲೆಯನ್ನು ಗದುಗಿನಲ್ಲಿ ಸ್ಥಾಪಿಸಿ ಅದಕ್ಕೆ ಮುಂದೆ 'ವೀರೇಶ್ವರ ಪುಣ್ಯಾಶ್ರಮ'ವೆಂದು ನಾಮಕರಣ ಮಾಡಿದರು. ಅರ್ಥವ್ಯವಸ್ಥೆಗಾಗಿ ಒಂದು ನಾಟಕ ಮಂಡಳಿಯನ್ನೂ ಸ್ಥಾಪಿಸಿದರು. ಈ ಆಶ್ರಮದಿಂದ ಸಾವಿರಾರು ವಿದ್ಯಾರ್ಥಿಗಳು ಸಂಗೀತ ಮತ್ತು ವಿವಿಧ ಕಲೆಗಳನ್ನು ಕಲಿತು ಸಂಗೀತದ ಪ್ರಸಾರವನ್ನು ಕರ್ನಾಟಕದಲ್ಲಿ ಇಂದಿಗೂ ನಡೆಸುತ್ತಿದ್ದಾರೆ. ಪಂಚಾಕ್ಷರಿ ಜಯಂತಿ ಉತ್ಸವ ಪ್ರತಿ ವರ್ಷ ಗದುಗಿನಲ್ಲಿ ನಡೆಯುತ್ತಿದ್ದು, ಒಂದು ಬಾರಿ ಹೊರನಾಡಿನಲ್ಲಿ ಆಚರಿಸಲಾಯಿತು. 1944ರಲ್ಲಿ ಪಂಚಾಕ್ಷರಿ ಗವಾಯಿಗಳು ವೀರೇಶ್ವರ ಪುಣ್ಯಾಶ್ರಮದ ಭಾರವನ್ನು ಪುಟ್ಟರಾಜ ಗವಯಿಗಳಿಗೆ ಒಪ್ಪಿಸಿ ಲಿಂಗೈಕ್ಯರಾದರು.

ಪಂಚಾಕ್ಷರಿ ಗವಾಯಿಗಳಿಗೆ ಕನ್ನಡದ ಅಭಿಮಾನ ಎಷ್ಟು ಇತ್ತು ಎನ್ನುವದಕ್ಕೆ ಈ ಕೆಳಗೆ ಕೊಟ್ಟಿರುವ ನಿದರ್ಶನ ಸಾಕು. ಸಾಧಾರಣ 1933–35ರ ಕಾಲ. ಮುಂಬಯಿಯ ಎಚ್‌ಎಮ್‌ವಿ ಕಂಪನಿಯವರು ಅದಾಗಲೇ ಪಂಚಾಕ್ಷರಿಯವರ ಸಂಗೀತದ ಪ್ರೌಢಿಮೆಯನ್ನು ಅರಿತಿದ್ದರು. ಸರಿ, ರೆಕಾರ್ಡು ಮಾಡಲು ಆಮಂತ್ರಣ ಗದುಗಿಗೆ ಹೋಯಿತು. ಕೂಡಲೇ ತಮ್ಮ ಪಟ್ಟ ಶಿಷ್ಯ ಬಸವರಾಜ ರಾಜಗುರು ಅವರನ್ನು, ಒಬ್ಬ ಅಡಿಗೆಯವರನ್ನು, ನೀರು ತರುವವರನ್ನು ಕರೆದುಕೊಂಡು ಮುಂಬಯಿಗೆ ಪ್ರಯಾಣ ಬೆಳೆಸಿದರು.

ಶಾಸ್ತ್ರೀಯ ಸಂಗೀತದ ಜೊತೆ ಒಂದೆರಡು ಕನ್ನಡ ಹಾಡುಗಳನ್ನೂ ರೆಕಾರ್ಡು ಮಾಡಬೇಕೆಂಬ ಇಚ್ಛೆ ಇಟ್ಟುಕೊಂಡಿದ್ದ ಪಂಚಾಕ್ಷರಿಯವರು ಒಂದು ವಾರದ ನಂತರ ಎಚ್‌ಎಮ್‌ವಿಯವರನ್ನು ಕರೆಸಿ, 'ನೀವು ಬಸವರಾಜರ ಶಾಸ್ತ್ರೀಯ ಸಂಗೀತ ರೆಕಾರ್ಡ್ ಮಾಡಿ' ಎಂದು ಹೇಳಿ, 'ತಮ್ಮದಾದರೆ ಕನ್ನಡ ಹಾಡುಗಳನ್ನು ಮಾಡುವದಾದರೇ ಮಾತ್ರ ಶಾಸ್ತ್ರೀಯ ಸಂಗೀತ ಹಾಡುತ್ತೇವೆ" ಎಂದರು. ಕೊನೆಗೆ ಬೇರೆ ದಾರಿ ಕಾಣದೇ ಗವಯಿಗಳ ಕನ್ನಡ ಪದಗಳನ್ನೂ ರೆಕಾರ್ಡ್ ಮಾಡಲು ಎಚ್‌ಎಮ್‌ವಿಯವರು ಒಪ್ಪಿಕೊಂಡರು.

ಈ ಮೇಲಿನ ಘಟನೆಯಿಂದ ಕನ್ನಡದ ಬಗೆಗಿದ್ದ ಪಂಚಾಕ್ಷರಿ ಗವಯಿಗಳ ಕಟ್ಟಾ ಅಭಿಮಾನ ಗೊತ್ತಾಗುತ್ತದೆ. ವಿಷಾದದ ಸಂಗತಿ ಎಂದರೆ ಬಸವರಾಜ ರಾಜಗುರು ಅವರ ನಾಲ್ಕು ಹಾಡುಗಳು, 'ಮಡಕೆಯ.ಮಾಡುವರೆ..' ಇದ್ದರೂ ಧಾರವಾಡ, ಬೆಳಗಾವಿ, ಬೆಂಗಳೂರಿನಲ್ಲಿಯ ಪಂಚಾಕ್ಷರಿ ಗವಯಿಗಳ ರೆಕಾರ್ಡುಗಳನ್ನು ಹುಡುಕುವ ನಮ್ಮ ಪ್ರಯತ್ನಕ್ಕೆ ಇನ್ನೂ ಫಲವೇ ಸಿಕ್ಕಿಲ್ಲ. ಪಂಚಾಕ್ಷರಿ ಗವಯಿಗಳು 'ಖಮಾಜ್' ರಾಗದಲ್ಲಿ , ನಜಗುಣ ಶಿವಯೋಗಿಗಳ, 'ನೋಡಲಾಗದೇ ದೇವಾ....' ಮತ್ತು ಪಟದೀಪ ರಾಗದಲ್ಲಿ, 'ಮಾಡಲಿಲ್ಲವೇ ತಪವ...' ಕೊಟ್ಟಿದ್ದು ಪಂಚಾಕ್ಷರಿಯವರ ಚರಿತ್ರದಲ್ಲಿದೆ. ಆಶ್ಚರ್ಯದ ಮಾತೆಂದರೆ ಎಚ್‌ಎಮ್‌ವಿಯವರು ಪಂಚಾಕ್ಷರಿಯವರ ಕರ್ನಾಟಕ ಪದ್ಧತಿಯಲ್ಲಿ 'ದರ್ಬಾರ್' ರಾಗದಲ್ಲಿ ಹಾಡಿದ ತ್ಯಾಗರಾಜ ಸ್ವಾಮಿಗಳ ತೆಲುಗು ಕೃತಿ, ಮುತ್ತುಸ್ವಾಮಿ ದಿಕ್ಷಿತರ 'ಬೇಗಡಾ' ರಾಗದಲ್ಲಿಯ ಕೃತಿ 'ತ್ಯಾಗರಾಜಾಯ ನಮಸ್ತೆ' ಮುದ್ರಿಸಿಕೊಂಡಿದ್ದುದು ಅವರ ಚರಿತ್ರೆಯಲ್ಲಿದೆ. ಅವರು ನಿಜಕ್ಕೂ ಉಭಯಗಾನ ವಿಶಾರದರಾಗಿದ್ದರು.

ಗದುಗಿನಲ್ಲಿ ಪ್ರತಿ ವರ್ಷ ಆಚರಿಸುವ ಪಂಚಾಕ್ಷರಿ ಗವಯಿಗಳ ಜಯಂತಿಯನ್ನು 2006ರ ಮೇ 6 ಮತ್ತು 7ರಂದು ಮೈಸೂರು ಅಸೋಸಿಯೇಶನ್ ಮತ್ತು ಮುಂಬಯಿ ಕರ್ನಾಟಕ ಸಂಘದವರು ಜಂಟಿಯಾಗಿ ಮುಂಬಯಿನಲ್ಲಿ ಆಚರಿಸುವದೆಂದು ನಿರ್ಧರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ಭಾರತ ಯಾತ್ರಾ ಕೇಂದ್ರದ ಸಾರಥ್ಯದಲ್ಲಿ, ಶರಣ ಸಮಿತಿಯ ನೇತೃತ್ವದಲ್ಲಿ ಜಯಂತ್ಯುತ್ಸವ ಅದ್ದೂರಿಯಾಗಿ ನಡೆಯಿತು. ಗದುಗಿನಂತೆ ಇಲ್ಲಿಯೂ ರಸಿಕರು ಮೇಜವಾನಿ ಮತ್ತು ಸಂಗೀತದ ರಸದೌತಣದಿಂದ ತೃಪ್ತರಾಗಿ, 'ವಾಹವ್ವಾ! ತುಂಬಾ ಹುಮ್ಮಸ್ಸಿನದಿತ್ತು' ಎಂದು ಅಂದರು. ಕವಿ ಶಾಂತರಸರು, ಗುರು ಪಂಚಾಕ್ಷರಿ ಗವಯಿಯವರನ್ನು ವರ್ಣಿಸಿದ್ದು ಹೀಗೆ-

"ಸೋಲರಿಯದ ನಗೆಮೊಗದ ಚೆಲುವಾ
ವೀರವೃತ್ತಿ ಪಂಚಾಕ್ಷರಿ ದೇವಾ
ಸಂಗೀತ ಶಾರದೆಗೆ ಕಣ್ಣೆತ್ತು ಹುಟ್ಟಿದೆ
ನೀ ಕುರುಡನಾಗಿ"

ಕರ್ನಾಟಕದಲ್ಲಿ ಹಿಂದುಸ್ತಾನಿ ಸಂಗೀತದ ಪ್ರಸಾರ ಮಾಡಿದವರಲ್ಲಿ ಸವಾಯಿ ಗಂಧರ್ವರನ್ನು ಬಿಟ್ಟರೆ, ನೀಲಕಂಠ ಬುವಾ ಮಿರಜಕರ್ ಅಥವಾ ಆಲೂರಮಠ ಮತ್ತು ಪಂಚಾಕ್ಷರಿ ಗವಯಿಗಳ ಹೆಸರನ್ನು ಜನರು ಕ್ರಮೇಣ ಮರೆತದ್ದು ಇದೆ. ನೀಲಕಂಠ ಬುವಾ ಅಥಣಿಯವರಲ್ಲಿ ಪಂಚಾಕ್ಷರಿ ಗವಾಯಿಗಳು ಕರ್ನಾಟಕ ಸಂಗೀತ ಕಲಿತ ನಂತರ, ಕುಮಾರಸ್ವಾಮಿಗಳ ಪ್ರೇರಣೆಯಿಂದ ಹಿಂದುಸ್ತಾನಿ ಸಂಗೀತ ಕಲಿತು ಉತ್ತಮೋತ್ತಮ ಹಾಡುಗಾರರನ್ನು ತರಬೇತಿಗೊಳಿಸಿದರು. ಪಂಚಾಕ್ಷರಿ ಗವಯಿಗಳನ್ನು ಈ ಎರಡು ದಿವಸಗಳ ನಾಲ್ಕು ಸಮಾವೇಶದಲ್ಲಿ ಅವರ ಶಿಷ್ಯ ಮತ್ತು ಪ್ರಶಿಷ್ಯರಿಂದ ಮರಳಿ ಪರಿಚಯಿಸುವ ಸೌಭಾಗ್ಯ ನಮ್ಮದಾಯಿತು. ಕರ್ನಾಟಕದಲ್ಲಿಯ ಹೊಸ ಪೀಳಿಗೆಯ ಗಾಯಕರು ಮಹಾರಾಷ್ಟ್ರದ ನಿಷ್ಣಾತ ಗಾಯಕರಿಗಿಂತ ಬಹಳ ಎತ್ತರ ಬೆಳೆದದ್ದು ಇಲ್ಲಿಯ ಜನಸಮುದಾಯ ನೋಡಿ, ಆಲಿಸಿ ಸಂತೋಷಿಸಿದರು.

*****

7.3

ಲಕ್ಷ್ಮೀಬಾಯಿ ಜಾಧವ – ಕೊಲ್ಹಾಪುರದ ರಾಜಗಾಯಕಿ (1878–1960)

ಲಕ್ಷ್ಮೀಬಾಯಿ ಜಾಧವಳು ಕೇಸರಬಾಯಿ ಕೇರಕರ, ಮೋಗುಬಾಯಿ ಕುರ್ಡಿಕರರ ಸರಿಸಾಟಿಯಲ್ಲಿದ್ದ ಜೈಪುರ್–ಅತ್ರೋಳಿ ಪರಂಪರೆಗೆ ಸೇರಿದ ಗಾಯಕಿಯಷ್ಟೇ ಅಲ್ಲ, 'ರಾಜ'ಗಾಯಕಿ ಕೂಡ! ಇವಳು ನಮ್ಮನ್ನೆಲ್ಲಾ ಅಗಲಿ ಬಹಳ ವರ್ಷಗಳು (1960) ಸಂದಿವೆ. ಆದರೂ ಅವಳು ಹಾಡಿದ, ನನ್ನಲ್ಲಿದ್ದ ಒಂದೇ ಒಂದು ಮುದ್ರಿತ ತಟ್ಟೆ ಆಗಿಂದಾಗ ಕೇಳಿದಾಗ ಅವಳ ಧ್ವನಿಯ ಮಾರ್ದವತೆ, ಇಂಪು, ನನ್ನನ್ನು ಕಣ್ಣುಮುಚಿ ಮೈಮರೆಯುವಂತೆ ಮಾಡುತ್ತವೆ. ಲಕ್ಷ್ಮಿಬಾಯಿಯನ್ನು ಹಾಡಿಸಲು ನಮ್ಮಲ್ಲಿ ತುಂಬಾ ಸರ್ಕಸ್ಸು ಮಾಡಬೇಕಾಗುತ್ತದೆ. ಎಚ್‌ಎಮ್‌ವಿಯವರ ಫೋನೋ, ಮೇಲಿಂದ ಕೆಳಗೆ ಇಳಿಸಿ, ಸಾಫ್–ಸಫಾಯಿ ಮಾಡಿ ಕಿವಿಯಲ್ಲಿ ಎಣ್ಣೆಹಾಕಿ, ಹ್ಯಾಂಡಲ್ ತೂತಿನಲ್ಲಿ ನುಗ್ಗಿಸಿ, ಜಗ್ಗಿ ಹೊಡೆದು ತಟ್ಟೆಯನ್ನು ಚಿಮಣಿ ಎಣ್ಣೆಯಲ್ಲಿ ಅದ್ದಿದ ಹತ್ತಿಯಿಂದ ಚೆನ್ನಾಗಿ ಒರೆಸಿ, ಪಿನ್ನು ಬದಲಾಯಿಸಿ ತಿರುಗುವ ತಟ್ಟೆಯ ಮೇಲೆ ಪಿನ್ನು ಸರಿಯಾಗಿ ಇಟ್ಟು ಹಾಡನ್ನು ಕೇಳಬೇಕಾಗುತ್ತದೆ. ಹಳೆಯ ಗ್ರಾಮೋಫೋನಿನಲ್ಲಿ ವಾಲ್ಯೂಮ್ ಕಂಟ್ರೋಲ್ ಇಲ್ಲ. ಮಶೀನಿನ ಒಳಭಾಗದಲ್ಲಿ ಬೆಡಶೀಟ ತುರುಕಿ ಧ್ವನಿನಿಯಂತ್ರಣ ಮಾಡಬೇಕಾಗುತ್ತದೆ. ಇಷ್ಟೆಲ್ಲಾ ಆದ ಮೇಲೆ ಲಕ್ಷ್ಮಿಬಾಯಿಯ ಇಂಪಾದ 'ಷಡ್ಜ' ತಂಪನ್ನು ನೀಡುತ್ತದೆ. ಇಷ್ಟೆಲ್ಲ ಕಷ್ಟಪಟ್ಟಿದ್ದು ಸಾರ್ಥಕ ಎಂದೆನಿಸುತ್ತದೆ. ಅವಳ ಯಮನ್, ಕೇವಲ 3 ನಿಮಿಷದ್ದಾದರೂ ಮುದ ನೀಡುತ್ತದೆ. ಯಾರೀಕೆ ಲಕ್ಷ್ಮೀಬಾಯಿ?

ಇತ್ತೀಚೆಗೆ ಮುಂಬಯಿಯಲ್ಲಿದ್ದ ಖ್ಯಾತ ಗಾಯಕಿ ಧೊಂಡುತಾಯಿ ಕುಲಕರ್ಣಿ ತೀರಿಕೊಂಡ ಸುದ್ದಿ ಓದಿದ ಮೇಲೆ ನನಗೆ ಮರಳಿ ಲಕ್ಷ್ಮೀಬಾಯಿ ಜಾಧವಳ ನೆನಪಾಯಿತು. ಅವಳ ಏಕಮೇವ ಶಿಷ್ಯೆ ಅಂದರೆ ಧೊಂಡುತಾಯಿ. ಕೇಸರಬಾಯಿ ತನ್ನ ನಿವೃತ್ತಿ ಜಾಹೀರು ಮಾಡುವ ಮೊದಲೇ ಧೊಂಡುತಾಯಿ, ತನ್ನ ಗುರು ಲಕ್ಷ್ಮೀಬಾಯಿ ಹೇಳಿದಂತೆ ಮುಂಬಯಿಗೆ ಬಂದು ಕೇಸರಬಾಯಿ ಕೇರಕರರ ಶಿಷ್ಯತ್ವವನ್ನು ಪಡೆದು ಕೊನೆಯ ತನಕ ಕೇಸರಬಾಯಿಯ ಮನೆಯಲ್ಲಿಯೇ ಇದ್ದು ಕಲಿತು ಹೆಸರು ಗಳಿಸಿದ್ದಿದೆ.

ಅಲ್ಲಾದಿಯಾ ಖಾನ್, ಹೈದರಖಾನ್ (ಅವರ ತಮ್ಮ) ಅಥವಾ ಕೇಸರಬಾಯಿ, ಮೋಗುಬಾಯಿಯವರ ಮೇಲೆ ಮಾಹಿತಿಯು ಇದ್ದ ಯಾವುದೇ ಪುಸ್ತಕದಲ್ಲಿಯೂ ಲಕ್ಷ್ಮೀಬಾಯಿ ಜಾಧವಳ ಬಗ್ಗೆ ಬರೆದದ್ದಿಲ್ಲ. ಅಲ್ಲಾದಿಯ ಖಾನರ ಮೊಮ್ಮಗ, ಇತ್ತೀಚೆಗೆ

ಕೊಲ್ಲಾಪುರದಲ್ಲಿ ತೀರಿಕೊಂಡ ಅಝೀಝುದ್ದೀನ ಖಾನರು ಲಕ್ಷ್ಮೀಬಾಯಿಯ ಬಗ್ಗೆ ಧೊಂಡೂತಾಯಿಯ ಬೊರಿವಿಲಿ ಮನೆಯಲ್ಲಿ ('ನನ್ನ ಆಶ್ರಮ' ಎಂದು ಧೊಂಡುತಾಯಿ ಉವಾಚ!) ಉಲ್ಲೇಖಿಸಿದ ಮಾಹಿತಿಯನ್ನು ನನಗೆ ನೀಡಿದ್ದರು. ಅದೆಂದರೆ ಲಕ್ಷ್ಮೀಬಾಯಿ ಜಾಧವ, ಬರೋಡಾದ ಸಯಾಜಿ ಗಾಯಕವಾಡ ರಾಜಾಸಾಹೇಬರ 'ರಾಜಗಾಯಕಿ' ಆಗಿದ್ದಳಂತೆ. ಅವಳಿಗೆ ಈ ರಾಜಗಾಯಕಿ ಪಟ್ಟ ಸಿಕ್ಕಿದ್ದ ಕತೆ ಮನೋರಂಜಕವಾಗಿದೆ. ಕೊಲ್ಹಾಪುರದ ಲಕ್ಷ್ಮೀಬಾಯಿ, ಬರೋಡಾ ಸಂಸ್ಥಾನ ಸೇರಿದ್ದಾದರೂ ಹೇಗೆ? ಕೊಲ್ಹಾಪುರ ಮಹಾರಾಜರು ಭೋಸಲೆ ಕುಲೋತ್ಪನ್ನರಾದರೆ, ಬರೋಡಾದವರು ಗಾಯಕವಾಡ ವಂಶಕ್ಕೆ ಸೇರಿದವರು.

ಬರೋಡಾ ಸಂಸ್ಥಾನ, ನಿಜಾಮರ ಹೈದರಾಬಾದ, ಮೈಸೂರು, ಜಮ್ಮು-ಕಾಶ್ಮೀರದ ನಂತರದ 21 ಗನ್ ಸೆಲ್ಯೂಟಿನ ನಾಲ್ಕನೆಯದು. ಬ್ರಿಟಿಶರ ಆಳಿಕೆಯಲ್ಲಿ ಬರೋಡಾ ಸಂಸ್ಥಾನದ ಉತ್ಕರ್ಷವಾದುದು ಕೇವಲ ಸಯಾಜಿರಾವ್ ಗಾಯಕವಾಡರಿಂದಲೇ ಎಂದು ಹೇಳಬಹುದು. ಕೃಷಿಕೆಲಸ ಮಾಡುತ್ತಿದ್ದ ಮನೆತನದಲ್ಲಿ ಹುಟ್ಟಿದ ಸಯಾಜಿ ತುಂಬಾ ಅದೃಷ್ಟವಂತ. ರಾಜಾ ಖಂಡೇರಾಯರಿಗೆ ಗಂಡುಮಗ ಬಾಳಲಿಲ್ಲವೆಂದು ತಮ್ಮನ ಮಗ ಮಲ್ಹಾರ ರಾಯನಿಗೆ ಪಟ್ಟಕಟ್ಟಿದರು, ಫೈರ್ ಎಂಬ ರೆಸಿಡೆಂಟನ ಶಿಫಾರಸಿನಿಂದಲೇ ಪಟ್ಟಕ್ಕೇರಿದ ಮಲ್ಹಾರಿ, ಎರಡೇ ವರ್ಷಗಳಲ್ಲಿ ಸಿಕ್ಕಾಪಟ್ಟೆ ಖರ್ಚುಮಾಡಿ ಬೊಕ್ಕಸವನ್ನು ಬರಿದುಮಾಡಿದ. ಫೈರನೇ ಮುಂದೆ ತನಗೆ ವಿಷಪ್ರಯೋಗ ಮಾಡಿದನೆಂದು ಮಲ್ಹಾರನನ್ನು ಕೋರ್ಟಿಗೆ ಎಳೆದ. ಬ್ರಿಟಿಶ್ ನ್ಯಾಯವ್ಯವಸ್ಥೆಯ ಈ ಮೊಕದ್ದಮೆ ತುಂಬಾ ಖ್ಯಾತಿ ಪಡೆಯಿತು (1882). ಖಂಡೇರಾಯನ ವಿಧವೆ ಜಮನಾಬಾಯಿಯ ಇಚ್ಛೆಯಂತೆ ಸಯಾಜಿರಾವ್‌ನಿಗೆ ಪಟ್ಟಕಟ್ಟಲಾಯಿತು ಮತ್ತು ಅದೇಹೊತ್ತಿಗೆ ಫೈರ್ ರೆಸಿಡೆಂಟನನ್ನೂ 'ಮನೆ'ಗೆ ಕಳಿಸಲಾಯಿತು (1883).

ಸ್ವತಂತ್ರವೃತ್ತಿಯ ಸಯಾಜಿರಾವ್ ತನ್ನ ಶಿಕ್ಷಣವನ್ನು ಪೂರ್ಣಮಾಡಿ, ಅತ್ಯಂತ ಕುಶಲತೆಯಿಂದ 63 ವರ್ಷ ಬರೋಡಾ ಸಂಸ್ಥಾನವನ್ನು ಆಳಿದ, ಬರಿದಾದ ಬೊಕ್ಕಸ ತುಂಬಿ ತುಳುಕುವಂತೆ ಮಾಡಿದ, ಇಷ್ಟೆ ಅಲ್ಲ ಮೈಸೂರು ರಾಜ್ಯವನ್ನು ಆದರ್ಶವಾಗಿ ಇಟ್ಟುಕೊಂಡು ಒಳ್ಳೆಯ ದಿವಾನರನ್ನು ನೇಮಿಸಿ ಶಿಕ್ಷಣದಲ್ಲಿಯೂ ಕಲಾಕ್ಷೇತ್ರದಲ್ಲಿಯೂ ಪ್ರಗತಿಪರ ಸಂಸ್ಥಾನವನ್ನಾಗಿ ಮಾಡಿದ. ಪಂಚಮ ಜಾರ್ಜ್ ಭಾರತಕ್ಕೆ ಬಂದಾಗ, ಸಂಸ್ಥಾನಿಕರ ಶ್ರೇಣಿಯಲ್ಲಿ ನಾಲ್ಕನೆಯವನಾದ ಸಯಾಜಿ, 'ಭಾರತ ಭೂಪತಿ, ಪಂಚಮ ಜಾರ್ಜ್ ನೃಪತಿ'ಗೆ ಸರಿಯಾಗಿ ಬಾಗಿ 'ಕುರ್ನಿಸಾತ್' ಮಾಡದೇ ಇದ್ದುದರಿಂದ ದೆಹಲಿಯ ಸರ್ವಾಧಿಕಾರಿಗಳ ರೋಷಕ್ಕೆ ಬಲಿಯಾದ. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸು ಸ್ಥಾಪನೆಯಲ್ಲಿಯೂ, ಅನಂತರವೂ ಅದಕ್ಕೆ ಸಯಾಜಿರಾವ್ ಕಾಲಕಾಲಕ್ಕೆ ಸಹಾಯಮಾಡುತ್ತಲೇ ಇದ್ದ.

ಇವನ ಮೊದಲ ಹೆಂಡತಿ, ತಂಜಾವಜ್ರಿನ ಭೋಸಲೆ ಕುಟುಂಬದ ರಾಜಕುಮಾರಿ ಚಿಮಣಾಬಾಯಿ. ವರದಕ್ಷಿಣೆಯಲ್ಲಿ ಈಕೆ ತಂದದ್ದು ಅನೇಕ ಭರತನಾಟ್ಯ ಕಲಾವಿದರನ್ನೂ, ನಟುವರನ್ನೂ ಮತ್ತು ಅನೇಕ ಕರ್ನಾಟಕ ಸಂಗೀತಕಾರರನ್ನು. ರಾಣಿ ಚಿಮಣಾಬಾಯಿ ಕೂಡ ಲಕ್ಷಣವಂತೆ. ಭರತನೃತ್ಯಪ್ರವೀಣೆ. ತಂಜಾವೂರಿನ ಕಲಾರಸಿಕತೆ, ಬರೋಡಾ

ಸಂಸ್ಥಾನದಲ್ಲಿ ಬೇರು ಬಿಡಲು ಚಿಮಣಾಬಾಯಿ ಮತ್ತು ತಂಜಾವೂರಿನಿಂದ ವಲಸೆ ಬಂದ ಅನೇಕ ಮರಾಠಿ ಕುಟುಂಬದವರು ಕಾರಣೀಭೂತರಾದರು. ಇಂತಹ ಚಿಮಣಾಬಾಯಿ ಮದುವೆಯಾದ ಕೆಲವೇ ವರ್ಷಗಳಲ್ಲಿ ಅಸಾಧ್ಯ ಬೇನೆಗೆ ತುತ್ತಾಗಿ ಸತ್ತ ಆಘಾತವನ್ನು ಸಯಾಜಿ ತಾಳಲಾರದಾದ. ದಿನವಿಡೀ ರಾಜ್ಯದ ಕಾರುಭಾರ ನಡೆಸಿ ರಾತ್ರಿ ಪವಡಿಸಿದರೆ ನಿದ್ರಾನಾಶ. ಅನೇಕ ವೈದ್ಯ, ಡಾಕ್ಟರರ ಚಿಕಿತ್ಸೆಯಿಂದ ಬೇಸರಪಟ್ಟು ಕೊನೆಗೆ ಕೊಲ್ಹಾಪುರದಿಂದ ಬಂದ, ಚಿಮಣಾಬಾಯಿಯ ಸೇವೆಗಿದ್ದ, ಲಕ್ಷ್ಮೀಬಾಯಿಯನ್ನು ರಾಜಗಾಯಕ ಹೈದರಖಾನರ ಸೂಚನೆಯಂತೆ ಮಲಗುವ ಮೊದಲು ಮಲಗುವ ಕೋಣೆಯಲ್ಲಿಯೇ ಹಾಡಲು ಅಪ್ಪಣೆಮಾಡಿದ. ಅದೇನು ಮಹದಾಶ್ಚರ್ಯ? ಬಳಲುತ್ತಿದ್ದ ಸಯಾಜಿಯ ನಿದ್ರಾನಾಶಕ್ಕೆ ಕೊನೆಗೂ ಮದ್ದು ಸಿಕ್ಕಿತು. ಇದೇ ಔಷಧ ಕೊನೆಯವರೆಗೂ ಅಂದರೆ ಸಯಾಜಿಗಾಯಕವಾಡರ ಮೃತ್ಯುವಿನ ತನಕ (1939) ನಡೆದಿರಬೇಕೆಂಬುದು ನಮ್ಮ ಊಹೆ. ಒಂದೆರಡು ವರ್ಷಗಳಲ್ಲಿಯೇ ಸಯಾಜಿ ಮತ್ತೊಮ್ಮೆ ಮದುವೆಯಾದ, ಈ ಎರಡನೇ ಹೆಂಡತಿ ಲಕ್ಷ್ಮೀಬಾಯಿ, ದೇವಾಸ ಸಂಸ್ಥಾನದ ರಾಜಕುಮಾರಿ. ಇವಳೂ ಚಿಮಣಾಬಾಯಿಯಂತೆಯೇ ಪ್ರಗತಶೀಲ ವಿಚಾರವಂತೆ, ಗಂಡನ ಜತೆ ಸಮಾಜಕಲ್ಯಾಣದ ಕೆಲಸಗಳನ್ನು ಬರೋಡಾ ಸಂಸ್ಥಾನದಲ್ಲಿ ಮಾಡಿದ ಅನೇಕ ಉದಾಹರಣೆಗಳಿವೆ. ಇವರಿಬ್ಬರ ಮಗಳು ಇಂದಿರಾ,

ಲಕ್ಷ್ಮೀಬಾಯಿ ಜಾಧವ್ ಮೋಗುಬಾಯಿ ಕುರ್ಡಿಕರಳ ಗುರುಭಗಿನಿ. ಅಂದರೆ ಇಬ್ಬರೂ ಕಲಿತದ್ದು ಅಲ್ಲಾದಿಯಾ ಖಾನರ ತಮ್ಮ ಹೈದರಖಾನರ ಬಳಿಯಲ್ಲಿ. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಹಸುಳೆ, ಲಕ್ಷ್ಮೀಬಾಯಿ ನೋಡಲು ಮುದ್ದುಮುದ್ದಾದ ಮಗುವಾಗಿದ್ದರೂ, ಅವಳಿಗೆ ದಮ್ಮಿನ ವಿಕಾರ ಬಾಲ್ಯದಲ್ಲಿಯೇ ಜಡಿದಿತ್ತು. ಸೋದರತ್ತೆ ಒಳ್ಳೆಯ ಪಾಲನೆ, ಪೋಷಣೆ ಮಾಡಿ ಹೈದರಖಾನರ ಬಳಿ ಸಂಗೀತದ ಅಭ್ಯಾಸ ಮಾಡಿಸಿದಳು. ಟಾನ್ಸಿಲ್ ತೆಗೆದರೆ ಅವಳ ಆರೋಗ್ಯ ಸುಧಾರಿಸಬಹುದು ಎಂದುಕೊಂಡು ಮಾಡಿಸಿದ ಶಸ್ತ್ರಕ್ರಿಯೆಯ ನಂತರ ಲಕ್ಷ್ಮೀಬಾಯಿಯ ಧ್ವನಿಯಲ್ಲಿ ಮಾರ್ಪಾಟಾದದ್ದು ಅತ್ತೆಯ ಲಕ್ಷ್ಯಕ್ಕೆ ಬಂತು. ಹಾಡುವಾಗ ಪ್ರತಿಯೊಂದು ಸ್ವರ ಸ್ಫುಟವಾಗಿದ್ದುದೂ, ಸ್ವರದಲ್ಲಿ ಮಾರ್ದವತೆಯಲ್ಲಿ ಬದಲಾವಣೆ ಗುರುಗಳಿಗೆ ಕಾಣಿಸಿತು. ದಿನಕ್ಕೆ 8 ತಾಸು ಸಂಗೀತದ ಪಾಠ ಸ್ವಲ್ಪ ಕಡಿಮೆ ಮಾಡಿ ಎರಡು ಪ್ರಹರಗಳಲ್ಲಿ ವಿಭಾಗಿಸಲ್ಪಟ್ಟ ಲಕ್ಷ್ಮಿಯ ಸಂಗೀತ ಶಿಕ್ಷಣವು ಕೊಲ್ಲಾಪುರದಲ್ಲಿ ಮುಂದುವರಿಯಿತು.

ಕೊಲ್ಲಾಪುರದಲ್ಲಿ ಹುಟ್ಟಿ, ಅಲ್ಲಿಯೇ ಸಂಗೀತ ಶಿಕ್ಷಣ ಪಡೆದ ಲಕ್ಷ್ಮೀಬಾಯಿ, ಬರೋಡಾ ಸಂಸ್ಥಾನಕ್ಕೆ ಹೋಗಿ ಅಲ್ಲಿ ತಂಜಾವೂರಿನಿಂದ ಆಗಮಿಸಿದ್ದ ಚಿಮಣಾಬಾಯಿ ಸೇವೆಗೆ ಇದ್ದದ್ದು ಹೇಗೆ ಎಂಬ ನನ್ನ ಪ್ರಶ್ನೆಗೆ ಅಝಿಝುದ್ದೀನ ಖಾನರಿಂದ ಸರಿಯಾದ ಉತ್ತರ ದೊರಕಲಿಲ್ಲ. ಅಲ್ಲಾದಿಯಾ ಖಾನರು ಕೊಲ್ಲಾಪುರ ಸಂಸ್ಥಾನದ ಸೇವೆಗಿದ್ದರೆ, ತಮ್ಮ ಹೈದರಖಾನರು ಬರೋಡಾದೊಂದಿಗೆ ನಿಕಟ ಸಂಬಂಧ ಇಟ್ಟುಕೊಂಡಿದ್ದರು. ಆಗಾಗ ಕೊಲ್ಲಾಪುರದಲ್ಲಿಯೂ, ಬರೋಡಾದಲ್ಲಿಯೂ ಕಚೇರಿಗಳನ್ನು ನಡೆಸುತ್ತಿದ್ದ ಹೈದರಖಾನರ ಜತೆಗೆ ಲಕ್ಷ್ಮೀಬಾಯಿ ಬರೋಡಾ ಸೇರಿರಬೇಕು. ಸಯಾಜಿ ಮಹಾರಾಜರ ಸಂಗೀತ ಶುಶ್ರೂಷೆಯಲ್ಲಿ ಹೈದರಖಾನರೂ ಭಾಗವಹಿಸಿದ್ದರು, ಅವರೇ ಮಹಾರಾಜರ ನಿದ್ರಾನಾಶಕ್ಕೆ ಸರಿಯಾದ 'ಲಕ್ಷ್ಮೀಬಾಯಿ ಗುಳಿಗೆ'ಯನ್ನು ಕೊಟ್ಟು ಅವರ ಆರೋಗ್ಯ ಕಾಪಾಡಿದ್ದು ಸತ್ಯ. ಗುರುವಿನಿಂದ ಆಗಲಾರದ ಸಾಮರ್ಥ್ಯ ಶಿಷ್ಯಳಲ್ಲಿತ್ತು, ಎಂದುಕೊಂಡು ನಾವು ಮುಂದೆ ಸಾಗುವ.

ಮಹಾರಾಜರಿಗೆ 'ಜೋಗುಳ' ಹಾಡಿ ಮಲಗಿಸುವ ಲಕ್ಷ್ಮೀಬಾಯಿ ಕೆಲವೇ ದಿನಗಳಲ್ಲಿ 'ರಾಜಗಾಯಕಿ' ಆದಳು. ಮಹಾರಾಜರ ಅಂತಸ್ತಿಗೆ ಸರಿಕಾಣುವಂತಹ ಅವಳ ಪೋಷಾಕು, ಆಭರಣಗಳೂ ಬದಲಾದವು. 20–25ರ ಹರೆಯದಲ್ಲಿಯೇ ಅವಳ ಕೀರ್ತಿ ಇಡೀ ದೇಶದಲ್ಲಿ ಹಬ್ಬಿತು. ಮಹಾರಾಜರ ಆರೋಗ್ಯ ಸುಧಾರಿಸಿದ್ದರಿಂದ ಲಕ್ಷ್ಮೀಬಾಯಿ ಬೇರೆ ಬೇರೆ ಊರುಗಳಲ್ಲಿ ಸಂಗೀತ ಕಚೇರಿಗಳನ್ನು ನಡೆಸಿ, ಬರೋಡಾ ಸಂಸ್ಥಾನಕ್ಕೂ ಅಪರೋಕ್ಷ ರೀತಿಯಲ್ಲಿ ಪ್ರಸಿದ್ಧಿ, ಕೀರ್ತಿಗಳನ್ನು ತಂದುಕೊಟ್ಟಳು. ಸಾಧಾರಣ 1925–30ರ ಸುಮಾರಿಗೆ ಲಕ್ಷ್ಮೀಬಾಯಿ, ಸಯಾಜಿ ಮಹಾರಾಜರ ಅಪ್ಪಣೆ ಪಡೆದು ಮರಳಿ ಕೊಲ್ಲಾಪುರಕ್ಕೆ ಬಂದಳು. ಕಾರಣ, ಸೋದರತ್ತೆಯ ಏಕಮೇವ ಮಗ, ಕ್ಷಯರೋಗಕ್ಕೆ ತುತ್ತಾಗಿ ನರಳಿ ತೀರಿಹೋದ ನಂತರ ಅತ್ತೆಗೆ ಆಧಾರವಾಗಬೇಕೆಂಬ ಆಕೆಯ ದೃಷ್ಟಿ.

ಕೊಲ್ಲಾಪುರಕ್ಕೆ ಬಂದಮೇಲೆ ಲಕ್ಷ್ಮೀಬಾಯಿ ಅನೇಕ ಶಿಷ್ಯರಿಗೆ ತರಬೇತಿ ನೀಡಲು ಪ್ರಾರಂಭಿಸಿದಳು. ಬರೋಡಾದಲ್ಲಿದ್ದಾಗ ಇವಳು ಅನೇಕ ಧ್ವನಿತಟ್ಟೆಗಳನ್ನು ನೀಡಿದ್ದಳು. ಇದರಲ್ಲಿ 'ಬಹಾರ' (ಬಸಂತ ಕೀ ಧೂಮ ಮಚಿss) ಹಾಗೂ 'ಭೀಮಪಲಾಸ'ದಲ್ಲಿಯ ಮರಾಠಿಯ ಹಾಡುಗಳು (ಸಖೆ, ಮೀ ಮುರಾರಿ ವನಾತ ಪಾಹಿಲಾ) ಇವೆ. ಈ ರಿಕಾರ್ಡುಗಳನ್ನು ಯು ಟ್ಯೂಬಿನಲ್ಲಿ ಕೇಳಬಹುದು. ಕೊಲ್ಲಾಪುರಕ್ಕೆ ಹೋದ ನಂತರ ಕೂಡ ಬಡಾಖ್ಯಾಲ್ ರಾಗ 'ಬಸಂತಿ ಕೇದಾರ', 'ನಾಯಕಿ ಕಾನಡಾ', 'ನಚಿಕಾಮೋದ' ಇವೆಲ್ಲಾ ತುಂಬಾ ಚೆನ್ನಾಗಿ ಮೂಡಿವೆ.

'ಗೋಹರಜಾನ್ ಆಫ್ ಕಲಕತ್ತಾ' ಎಂದು 'ಗೋಹರಬಾಯಿ ಆಫ್ ಬಿಜಾಪುರ್' ಎಂದು 78 ಆರ್‌ಪಿಎಮ್ ಸ್ಪೀಡಿನ 3 ನಿಮಿಷದ ಧ್ವನಿತಟ್ಟೆಗಳಲ್ಲಿ ಹಾಡುಗಾರ್ತಿಯ ಹೆಸರು ಲೇಬಲ್ಲಿನಲ್ಲಿ ಇದ್ದರೆ, ಲಕ್ಷ್ಮೀಬಾಯಿ ಜಾಧವ್ ಇವಳ ಧ್ವನಿತಟ್ಟೆಗಳು 'ಲಕ್ಷ್ಮೀಬಾಯಿ ಆಫ್ ಬರೋಡಾ' ಎಂದೂ ಮತ್ತು 'ಲಕ್ಷ್ಮೀಬಾಯಿ ಜಾಧವ ಆಫ್ ಕೊಲ್ಲಾಪುರ' ಎಂದೂ ಮಾರುಕಟ್ಟೆಯಲ್ಲಿ ಬಂದದ್ದನ್ನು ಇಲ್ಲಿ ನಮೂದಿಸಬಹುದು.

ಸಾಧಾರಣ 1955–60ರ ಮಧ್ಯೆ ತೀರಿಕೊಂಡ ಲಕ್ಷ್ಮೀಬಾಯಿಯ ಬಗ್ಗೆ ಯಾವುದೇ ತರಹದ ಮಾಹಿತಿ ಇಲ್ಲದಿರುವುದು ಅತ್ಯಂತ ವಿಷಾದದ ಸಂಗತಿ. ಭಾರತೀಯರಿಗೆ ಇತಿಹಾಸದ ಬಗ್ಗೆ ಇರುವ ತಾತ್ಸಾರ, ಉಪೇಕ್ಷೆ ಇಂತಹ ವಿಷಯಗಳಲ್ಲಿ ಅಧೋರೇಖಿತವಾದದ್ದು ಕಂಡುಬರುತ್ತದೆ. ಕೊಲ್ಲಾಪುರದ ವಿಶ್ವವಿದ್ಯಾಲಯದಲ್ಲಿ ಸಂಗೀತ ಕಲಿಸುತ್ತಿದ್ದ ಭಾರತೀ ವೈಶಂಪಾಯನರು ಒಮ್ಮೆ ಹೇಳಿದಂತೆ "ಲಕ್ಷ್ಮೀಬಾಯಿ ತನ್ನಲ್ಲಿದ್ದ ಸಂಪತ್ತನ್ನು ಉದಾರ ಮನಸ್ಸಿನಿಂದ ಶಿವಾಜಿ ವಿಶ್ವವಿದ್ಯಾಲಯದ ಸಂಗೀತ ವಿಭಾಗಕ್ಕೆ, ಕೊಲ್ಲಾಪುರದ ನಗರಸಭೆಯ ಆಸ್ಪತ್ರೆ ಹಾಗೂ ಮಕ್ಕಳಿಗಾಗಿ ಆಟಪಾಠದ ಸಲುವಾಗಿ ಕೊಟ್ಟಿದ್ದಾರೆ". ಡಾ. ಭಾರತಿ ವೈಶಂಪಾಯನರು ಲಕ್ಷ್ಮೀಬಾಯಿಯವರ ನೆನಪಿಗಾಗಿ ಕೊಲ್ಲಾಪುರದಲ್ಲಿ ಏರ್ಪಡಿಸಿದ್ದ ಲಕ್ಷ್ಮೀಬಾಯಿ ಉತ್ಸವದಲ್ಲಿ ಅವಳ ಏಕಮೇವ ಶಿಷ್ಯೆ ಧೊಂಡುತಾಯಿಯ ಕಚೇರಿಯನ್ನು ಇಟ್ಟಾಗ ಉದ್ಗರಿಸಿದ ಈ ಮಾತುಗಳನ್ನು ಇಲ್ಲಿ ನೆನಪಿಸಿದ್ದೇನೆ.

*****

7.4

ಬಡೇ ಗುಲಾಮ ಅಲಿಖಾನ್ (1902–1968)

ಸುಮಾರು 1945ರ ಮಾತು. ಬಡೇ ಗುಲಾಮ ಅಲಿ (ಖಾನ್ ಸಾಹೇಬ್)ಮತ್ತು ಅವರ ಮುಂಬಯಿ ಸ್ನೇಹಿತ ದೇವಧರ ಸಾಹೇಬರು ಮುಂಬಯಿ ಚೌಪಾಟಿಯ ಕಡಲತೀರದ ಮರಳಿನಲ್ಲಿ ಕುಳಿತಿದ್ದ ಸಂಜೆ ಸಮಯ. "ದೇವಧರಜಿ, ಇದು ಸಂಜೆಯ ಸಮಯ. ಪಶ್ಚಿಮದಲ್ಲಿ ಸೂರ್ಯ ಕೆಂಪಾಗಿ ಮುಳಗುತ್ತಿರುವಾಗ ತಂತಾನೇ ಮಾರವಾ ರಾಗದ ಸರಗಮ್ ನೆನಪಾಗುತ್ತದೆ. ಸಂಗೀತದಲ್ಲಿ ನಮ್ಮ ಪೂರ್ವಜರು ಎಷ್ಟು ಆಳವಾಗಿ ಅಭ್ಯಾಸ ಮಾಡಿದ್ದರು ನೋಡಿ. ಕಣ್ಮುಚ್ಚಿ ಕುಳಿತಾಗ ಮಾರವಾ ರಾಗದ ಋಷಭ ಮತ್ತು ಧೈವತ ಸ್ವರಗಳು ಚುಚ್ಚುತ್ತಾ ಇವೆ! ನೋಡಿ ಸುರಾವಟಿಯಲ್ಲಿಯ ಅದ್ಭುತ ಪಂಚಮ ಇದರಲ್ಲಿ ಇಲ್ಲವೇ ಇಲ್ಲ. ಮುಂಜಾನೆ ಮನೆ ಬಿಟ್ಟು ಹೊಲಕ್ಕೆ ಹೋದ ಮನೆಯ ಯಜಮಾನ. ಈ ಗೋಧೂಳಿ ಸಮಯದಲ್ಲಿ ತನ್ನ ಜಾನುವಾರಗಳೊಂದಿಗೆ ಮನೆಗೆ ಮರಳುವ ಸಮಯ. ಅಂದರೆ ಪ್ರೇಮಿಗಳ ಮಿಲನ! ಸೂರ್ಯ ಮುಳುಗುವ ಮುನ್ನ ತನ್ನ ಗಂಡ ಬರದೇ ಇದ್ದರೆ? ಮರಳದೇ ಇದ್ದರೆ? ಮುಂದೇನು? ಈ ಕಾಳಜಿ, ಈ ಆತಂಕಮಿಶ್ರಿತ ವ್ಯಾಕುಲತೆ ವ್ಯಕ್ತ ಮಾಡುವ ರಾಗವೇ ಮಾರವಾ. ಈ ರಾಗದ ಆಲಾಪನೆಯಲ್ಲಿ ಅದೇ ಕಳಕಳಿ ಉತ್ಪನ್ನವಾಗಬೇಕು. ಇದು ಧೃತ ಗತಿಯಲ್ಲಿ ಹಾಡುವ ಕೃತಿಯಲ್ಲಿ ಸಾವಕಾಶವಾಗಿ ಮಾಯವಾಗಬೇಕು. 'ದೇಖೋ ಪಿಯಾ ಮೋರೆ ಆನತ' ಇದು ವಿಲಂಬಿತ ಕೃತಿ ಧೃತಗತಿಯಲಿ ಅಥವಾ ಮಧ್ಯಲಯದ ನಡಿಗೆಯಲ್ಲಿ ಆನಂದ ಸೂಸುವ, "ಸುನ್ ಸುನ್ ಬತಿಯಾಂ" ಆಗುತ್ತದೆ! ನನ್ನ ಪ್ರಿಯಕರ ಬಂದ, ಎಂಬ ಆನಂದ ತೋರಿಸುವ ರೀತಿ ಬಂದಿರಬೇಕು." ಎಂದರು.

"ಆ ದಿನದ ಮಾರವಾದ ಪ್ರಾತ್ಯಕ್ಷಿಕೆ ಅಲ್ಲಿಯ ಮರಳಿನಲ್ಲಿಯೇ ನಡೆಯಿತು. ನನ್ನ ಪೂರ್ವಗ್ರಹಪೀಡಿತ ಧೋರಣೆಯು ಆ ದಿನ ದಿಕ್ಕಾಪಾಲಾಯಿತು. ಮಾರವಾ ಅಂದರೆ ಜೀವವಿಲ್ಲದ ಸಣ್ಣರಾಗ, ಸಪ್ಪೆರಾಗ (ಇದರಲ್ಲಿ ಪಂಚಮ ಸ್ವರ, ಕವಿಕಲ್ಪನೆಯ ಕೋಕಿಲ ಸ್ವರ ಇಲ್ಲ!) ಎಂದು ತಿಳಿದುಕೊಂಡ ನನ್ನ ವಿಚಾರ ಆ ದಿನ ಬದಲಾಯಿತು." (ಬಿ.ಆರ್ ದೇವಧರ)

ಅಜಾನುಬಾಹು ಶರೀರ ಪೈಲವಾನನ ಮೈಕಟ್ಟಿನ ಆರಡಿ ಪಠಾಣ! ಹುಲುಸಾದ ದೊಡ್ಡ ಮೀಸೆಯ ಬಡೇ ಗುಲಾಮ ಅಲಿಯವರನ್ನು ಕಂಡರೆ ಹಾಡುಗಾರನಿಗೆ ಸಲ್ಲದು ಅನ್ನುವಂತಹ ವ್ಯಕ್ತಿತ್ವ. ಅತ್ಯಂತ ತನ್ಮಯತೆಯಿಂದ ಹಾಡುವಾಗ ಕೈಯಲ್ಲಿ

ಸುರಮಂಡಲ ಹಿಡಿದು ಮೃದುವಾಗಿ ಕೈಯಾಡಿಸುವ, ಗಂಟಲಿನಿಂದ ಅತ್ಯಂತ ಸೂಕ್ಷ್ಮ ಸ್ವರ ಹೊರಡಿಸುವವರು ಇವರೇ ಎಂದು ಆಶ್ಚರ್ಯವಾಗುತ್ತದೆ. ಕೈಯಲ್ಲಿ ಸುರಮಂಡಲ ಹಿಡಿದು ಹಾಡುವ ರೂಢಿ ಪ್ರಾರಂಭ ಮಾಡಿದ್ದು ಅವರೇ, ನಂತರ ಜಸರಾಜರು, ಕಿಶೋರಿ ಅಮೋಣಕರ್ ಮುಂತಾದವರು ಅದನ್ನು ಮುಂದುವರಿಸಿದರು.

ಆಗಿನ ಸಂಗೀತದ 'ಮಕ್ಕಾ' ಎನಿಸಿಕೊಂಡಿದ್ದ ಮುಂಬಯಿಗೆ 1944ರಿಂದಲೇ ಖಾನ್‌ಸಾಹೇಬರು ಲಾಹೋರಿನಿಂದ ಕಾರ್ಯಕ್ರಮ ನೀಡಲು ಆಗಾಗ ಬರುತ್ತಿದ್ದರು. ಮುಂದೆ ಮುಂಬಯಿಯನ್ನೇ ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡರು. ಇದು 'ಕುಮಾರ' ಎಂಬುವರು ಮುಂದೆ ಸಂಗೀತದಲ್ಲಿ ಒಂದು ದೊಡ್ಡ ಬಿರುಗಾಳಿ ಎಬ್ಬಿಸಿದ ವ್ಯಕ್ತಿ ಕರ್ನಾಟಕದ ಕುಲರಸಿಕ, ಇದೇ ದೇವಧರರ ಶಿಷ್ಯತ್ವ ಪಡೆದು ಮುಂಬಯಿಯಲ್ಲಿ ಸಂಗೀತದ ಅಲೆಗಳನ್ನು ಎಬ್ಬಿಸುತ್ತಿದ್ದ ಕಾಲ. ಆಗ ತಾನೇ 18ರ ಹೊಸ್ತಿಲ ದಾಟಿದ ಕುಮಾರ (ಶಿವಪುತ್ರ ಕೋಮಕಾಳಿ) ಮತ್ತು ಖಾನ್‌ಸಾಹೇಬರ ಗಂಟುಬಿದ್ದದ್ದು ದೇವಧರರ ಶಾಲೆಯಲ್ಲಿಯೇ. ಕುಮಾರ ಗಂಧರ್ವರ ಸ್ವಯಂಭೂ ಪ್ರತಿಭೆಗೆ ಚಾಲನೆ ಕೊಟ್ಟವರಲ್ಲಿ ಖಾನ್ ಸಾಹೇಬರೂ ಒಬ್ಬರು. ದೇವಧರ್ ಸಾಹೇಬರು ಕುಮಾರರ ಗುರುಗಳಾಗಿದ್ದರೂ ಅಂದಿನ ಗುರುಗಳ ಹಾಗೆ ಸಂಕುಚಿತ ಪ್ರಕೃತಿಯವರಾಗಿರಲಿಲ್ಲ. ಗುರು ಶಿಷ್ಯ ಬೇರೆ ಬೇರೆಯಾಗಿ ಖಾನ್ ಸಾಹೇಬರ ಬಳಿ ಣಡಿಚುಟುಟಿಂ ಪಡೆದದ್ದು ಇದೆ!

ನಿರಕ್ಷರಿಗಳಾದರೂ ಖಾನ್ ಸಾಹೇಬರು ಸಂಗೀತದಲ್ಲಿ ತುಂಬಾ ಚಿಂತನೆ-ಮನನ ಮಾಡಿದವರು. ಅವರ ಸಂಗೀತ ಸ್ವಯಂಪ್ರೇರಿತವಾದರೂ ಅದರಲ್ಲಿ ಒಂದು ವಿಚಾರಧಾರೆ ಇತ್ತು. ಅವರು ರಿಯಾಝು ಮಾಡುವ ರೀತಿ ಮತ್ತು ಅಕಾರ, ಉಕಾರದ ಅಭ್ಯಾಸ ಹಾಗೂ ಧ್ವನಿಯ ಕ್ಷೇಪಣೆ(voice culture) ಅದ್ಭುತವಾಗಿತ್ತು.

ದೇವಧರರನ್ನು ಒಂದು ದಿನ ಖಾನಸಾಹೇಬರು, "ನೀವು ಮಾಡುವ ರಿಯಾಝ್ ಪದ್ಧತಿ ಬೇರೆ ಇದೆ. ನೀವು ಕಾರ್ಯಕ್ರಮದಲ್ಲಿ ಹಾಡಿದ ಹಾಗೆ ಹಾಡುತ್ತ ಹೋಗುತ್ತೀರಿ" ಎಂದು ಹೇಳಿ, "ಬನ್ನಿ, ನಮ್ಮ ರಿಯಾಝು ತೋರಿಸುತ್ತೇನೆ". ಕೈ ಹಿಡಿದು ಒಂದು ಕ್ಲಾಸ್ ರೂಮಿನಲ್ಲಿ ಅವರನ್ನು ನೂಕಿ ಬಾಗಿಲು ಕಿಟಕಿಗಳನ್ನು ಮುಚ್ಚಿ ತಮ್ಮ ಪದ್ಧತಿಯನ್ನು ತೋರಿಸಿದರು. "ನನ್ನ ರಿಯಾಝು ಇಡೀ ದಿನ ನಡೆಯುತ್ತೆ. ನಾನು ಹೇಳಿದ ಹಾಗೆ ರಿಯಾಝು ಮಾಡಿದರೆ ನಿಮಗೆ ಅರ್ಧ ಗಂಟೆ ಸಾಕು! ಇಡೀ ದಿನ ಒಂದೇ ರಾಗದ ವಿಷಯ. ವೇಳೆ ಸಿಕ್ಕಾಗ, ಬಸ್ ಸ್ಟಾಪಿನಲ್ಲಿ ನಿಂತಾಗ, ಮುಂಜಾನೆ ಈ ಬಾಲ್ಕನಿಯಿಂದ ಇಣುಕಿ ನೋಡುವಾಗ ಕೂಡ ನನ್ನ ರಿಯಾಝು ನಡದೇ ಇರುತ್ತದೆ. ನಾನು ಹೇಳಿದ ಅರ್ಧ ಗಂಟೆ "ಗಲಾ ಸಾಫ್ ಕರ್ನೆಕೆ ಲಿಯೆ, ಬಸ್" ಎಂದರು.

"ರೂಮಿನಲ್ಲಿ ಒಂದು ಜಮಖಾನೆ ಹಾಸಿ ಕುಳಿತು ನನ್ನನ್ನು ಪಕ್ಕದಲ್ಲಿ ಕೂಡಿಸಿದರು. ನನ್ನನ್ನು ಒತ್ತಾಯದಿಂದ ಸಾರೆಗಮ ಹಾಡಿಸಿದರು. ನಾಭಿಯಿಂದ ಸ್ವರ ಹೊರಡಬೇಕಲ್ಲ? ಬಾಯಿಯನ್ನು ದೊಡ್ಡದು ಮಾಡಿ ಧ್ವನಿಕ್ಷೇಪಣೆ ಹೆಚ್ಚಿಸಲು ಹೇಳಿ, ತಾವೂ ಸ್ವರ ಸೇರಿಸಿದರು. ಹೀಗೆ ಹತ್ತು ನಿಮಿಷದ ನಂತರ ಪ್ರತಿಯೊಂದು ಸ್ವರದ ಜೊತೆ ಮುಂಬರುವ ಸ್ವರದ ಕಣಸ್ವರ ಸೇರಿಸಿದರು. 'ಸಾ' ಹಾಡುವಾಗ ಋಷಭದ ಅಂದರೆ 'ರೆ'ಯ ಕಣಸ್ವರ

ಸೇರಿಸಿ ಹಾಗೆ 'ರೆ' ಉಚ್ಚರಿಸುವಾಗ ಗಾಂಧಾರದ ಕಣ ಸೇರಿಸಿ ಸಪ್ತ ಸ್ವರಗಳ ಆರಾಧನೆ ಮಾಡಿಸಿದರು! ಮೇಲಿನ ಷಡ್ಜ ಹಚ್ಚುವಾಗ ನಿಷಾದದ ಕಣಸ್ವರದ ಲೈನಿಂಗ್ ಕೊಡುವಾಗ ಕಷ್ಟವೆನಿಸಿತು. ಹೀಗೆ ನಮ್ಮ ಸ್ವರಗಳ ಸರ್ಕಸ್ಸು ನಡೆಯಿತು." ಖ್ಯಾತ ಸಂಸ್ಥೆಯ ಚಾಲಕರು ಹಾಗೂ ಕುಮಾರ ಗಂಧರ್ವರ ಗುರುಗಳಾಗಿದ್ದ ದೇವಧರರೆಲ್ಲಿ? ಲಾಹೋರದಿಂದ ಬಂದಿದ್ದ ಬಡೇ ಗುಲಾಮ್‌ಅಲಿಯವರ ಶಿಷ್ಯ ಎಲ್ಲಿ? ದೇವಧರರ ಮಹತಿ ಅಂದರೆ ಎಳ್ಳಷ್ಟೂ 'ಇಗೋ' ಇಲ್ಲದೇ ತಾವೂ ಕುಳಿತು ಪ್ರಾಕ್ಟೀಸು ಮಾಡಿ ಅದರ ಬಗ್ಗೆ ವಿಶೇಷವಾಗಿ ಬರೆದಿಟ್ಟಿದ್ದು! ಒಂದು ಸ್ವರದಿಂದ ಮತ್ತೊಂದಕ್ಕೆ ಜಾರುವದು ಸುಲಭ, ಆದರೆ ಖಾನ್ ಸಾಹೇಬರ ರಿಯಾಝು ಪದ್ಧತಿಯಿಂದ, ಮೀಂಡ ಗಾಯನಕ್ಕೆ ತುಂಬಾ ಸಹಾಯವಾಯಿತು ಎಂದು ದೇವಧರರು ಮುಂದೆ ಬರೆದಿಟ್ಟಿದ್ದಾರೆ.

ಸ್ವಾತಂತ್ರ್ಯಪೂರ್ವಕಾಲದ ಲಾಹೋರದಲ್ಲಿದ್ದ ಬಡೆಗುಲಾಮ ಅಲಿ ಮತ್ತು ಬರಖತ್ ಅಲಿ ಇಬ್ಬರೂ ಅಣ್ಣ-ತಮ್ಮಂದಿರು. ತಂದೆ ಅಲಿ ಬಕ್ಷ್ ಸಾರಂಗಿಯನ್ನು ಚೆನ್ನಾಗಿ ನುಡಿಸುತ್ತಿದ್ದರಂತೆ. ಹಾಡುಗಾರರೂ ಅಹುದು. ಚಿಕ್ಕಪ್ಪ ಕಾಲೇಖಾನ್, ಪಟಿಯಾಲಾ ಘರಾಣೆ ಎಂದು ಮುಂದೆ ಖ್ಯಾತಿ ಪಡೆದ ಮನೆತನದವರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳಕೊಂಡ ಗುಲಾಮ್ ಅಲಿ ಮತ್ತು ಬರಖತ್ ಅಲಿ ಕಾಲೇ ಖಾನರಿಂದ ತಾಲೀಮು ಪಡೆದರು. ಕಾಲೇ ಖಾನರೂ ಮುಂಬಯಿಗೆ ಆಗಿಂದಾಗ ಕಚೇರಿ ಕೊಡಲು ಬರುತ್ತಿದ್ದರು. ಅವರೊಂದಿಗೆ ಬಡೆ ಗುಲಾಮ್ ಅಲಿ ಮತ್ತು ಬರಖತ್ ಅಲಿ ಸಾಥಿಗೆ ಕೂಡುತ್ತಿದ್ದರು. ಈ ಅಲಿ ಬಂಧುಗಳು ಹಣದ ಸಲುವಾಗಿ ಕೆಲವೊಮ್ಮೆ ಸಾರಂಗಿ ಕೂಡ ಬಾರಿಸುತ್ತಿದ್ದರಂತೆ. ಮುಂದೆ ಲಾಹೋರಿನಲ್ಲಿಯೇ ಇವರು ನೆಲೆಸಿದರು. ಹೊಟ್ಟೆಪಾಡಿಗಾಗಿ ಎಳೆಯ ವಯಸ್ಸಿನಲ್ಲಿಯೇ ಮೆಹಫಿಲ್ ಜಮಾಯಿಸಲು ಕಲಿತರು. ರಾಜ, ಮಹಾರಾಜ, ನವಾಬ, ಜಾಗೀರದಾರರ ಕಾಲ! ಮಧ್ಯಪ್ರದೇಶದ ಟೋಂಕ್ ಮತ್ತು ಇಲ್ಲಿಯ ಸಣ್ಣ ಪುಟ್ಟ ಪ್ರಾಂತಗಳ ಆಶ್ರಯ ಪಡೆದರು. ಆಕಾಶವಾಣಿಯಲ್ಲೂ ಕಾರ್ಯಕ್ರಮಗಳನ್ನು ಕೊಟ್ಟರು.

ಮೊರಾರ್ಜಿ ದೇಸಾಯಿಯವರು ಮುಂಬಯಿ ಪ್ರಾಂತದ ಮುಖ್ಯಮಂತ್ರಿ ಆದಾಗ, ದೇವಧರರ ಗೆಳೆತನದಿಂದ ಅವರ ಮನೆಯಲ್ಲೂ ಬಡೆ ಗುಲಾಮ್ ಅಲಿಯವರನ್ನು ಕರೆಸಿ ಹಾಡಿಸಿದರಂತೆ. ಸ್ವಾತಂತ್ರ್ಯ ಸಿಕ್ಕ ಮೇಲೆ ಲಾಹೋರಿನಿಂದ ಮುಂಬಯಿಗೆ ಬಂದು ಇಲ್ಲೇ ನೆಲೆಸಿದರು. ಬರಖತ್ ಅಲಿ ಮತ್ತು ಕುಟುಂಬದವರು ಪಾಕಿಸ್ತಾನದಲ್ಲಿಯೇ ನೆಲೆಸಿದರು. ಬಡೆ ಗುಲಾಮ್ ಅಲಿಯವರಿಗೆ ಭಾರತೀಯ ನಾಗರಿಕತ್ವ ದೊರೆಯಲು ತುಂಬ ತೊಂದರೆ ಆಯಿತಂತೆ. ಕೊನೆಗೆ ಮೊರಾರ್ಜಿಯವರ ಕೃಪೆಯಿಂದ ಭಾರತದ ನಾಗರಿಕರೂ ಆದರು. ವಾಸಿಸಲು ಮಲಬಾರ್ ಹಿಲ್ಸ್‌ನಲ್ಲಿ ಒಂದು ದೊಡ್ಡ ಬಂಗಲೆ ಕೂಡ ದೊರೆಯಿತು. ಮುಸ್ಲಿಮರ ಪಾಕಿಸ್ತಾನದಿಂದ ಹಿಂದುಗಳ ಹಿಂದುಸ್ತಾನಕ್ಕೆ ವಲಸೆ ಬಂದು ಅಲ್ಲಿಯವರ ವಿರೋಧಕ್ಕೂ ತುತ್ತಾದರು. ಆದರೆ ಇಲ್ಲಿ ಮುಂದೆ 'ಪದ್ಮಭೂಷಣ' ಪ್ರಶಸ್ತಿಗೂ ಭಾಜನರಾದರು. 1961ರಲ್ಲೇ ಅವರು ಪಕ್ಷವಾತಕ್ಕೆ ತುತ್ತಾದರು. ನಾನು ಅವರ ಮೊದಲ ಕಚೇರಿ ಕೇಳಿದ್ದು ಅವರನ್ನು ಹೊತ್ತು ತಂದು ವೇದಿಕೆಯಲ್ಲಿ ಕುಳ್ಳಿರಿಸಿದ ಸಂದರ್ಭದಲ್ಲಿ (1964). 1961 ರಿಂದ 63ರ ತನಕ ಅವರ ಆರೋಗ್ಯ ಸರಿ

ಇರಲಿಲ್ಲ. ಆದರೆ, ಅವರ ತಾಲೀಮು ನಡೆದೇ ಇತ್ತು. ನಂತರ ಸ್ವಲ್ಪ ಸುಧಾರಿಸಿದ ಮೇಲೆ ಅನೇಕ ಕಾರ್ಯಕ್ರಮಗಳು ನಡೆದವು. ಮುಂಬಯಿ ಸರಕಾರ ಮತ್ತು ಅನಂತರದ ಮಹಾರಾಷ್ಟ್ರ ಸರಕಾರ ಅವರಿಗೆ ತಿಂಗಳಿಗೆ 5000 ರೂಪಾಯಿಗಳ ಧನ ಸಹಾಯವನ್ನು ಮಾಡುತ್ತಲೇ ಇತ್ತು. ಅವರ ಹಾಡುಗಾರಿಕೆಗೆ ಮಗ ಮುನ್ವರ ಅಲಿಖಾನ್ ಸಾಥ್ ಕೊಡುತ್ತಿದ್ದರು. ಮುನ್ವರ್ ಅಲಿ ಅಪ್ಪನಷ್ಟೇ ಪ್ರಾವಿಣ್ಯ ಪಡೆದವರು. ಆದರೆ ಲಾಹೋರಿನಿಂದ ಬಂದ ಕಾರಣ ಸರಕಾರ ಮಾನ್ಯತೆ ಮತ್ತು ಲೋಕಾಶ್ರಯಗಳು ತಂದೆಗೆ ಸಿಕ್ಕಷ್ಟು ಇವರಿಗೆ ಸಿಗಲಿಲ್ಲ. ಬಡೆ ಗುಲಾಮ್ ಅಲಿ ಕಚೇರಿ ಕೊಡಲು ಹೈದ್ರಾಬಾದಿಗೆ ಹೋದಾಗ ಅಲ್ಲಿ ಬೇನೆ ಉಲ್ಬಣಿಸಿ ಅಲ್ಲಿಯೇ ತೀರಿಕೊಂಡರು (ಎಪ್ರಿಲ್ 23, 1968). ಅವರ ಹೆಸರಿನಲ್ಲಿ ಈಗಲೂ ಒಂದು 'ಗುಲಾವಮ್ ಅಲಿ ಯಾದ್‌ಗಾರ್ ಸಭಾ' ಕಾರ್ಯನಿರತವಾಗಿದ್ದು ಬಡ ಕಲಾವಿದರಿಗೆ ಆರ್ಥಿಕ ನೆರವು ನೀಡುತ್ತಿದೆ.

*****

7.5

ಪಂ. ಮಲ್ಲಿಕಾರ್ಜುನ ಮನ್ಸೂರ – ಹಿಂದುಸ್ತಾನಿ ಸಂಗೀತದ 'ಷಡ್ಜ' (1910–1992)

ಧಾರವಾಡದಿಂದ ಪಶ್ಚಿಮಕ್ಕೆ ಕೇವಲ 6–8 ಕಿ.ಮೀ, ದೂರದಲ್ಲಿ ಮನ್ಸೂರ ಎಂಬ ಹಳ್ಳಿ ಇದೆ. 160–175 ವರ್ಷಗಳ ಹಿಂದೆ ಪಾದಾಪುರದಿಂದ ಮನ್ಸೂರರ ಮುತ್ತಾತಂದಿರು ಮನ್ಸೂರಿಗೆ ಸ್ಥಳಾಂತರವಾದರು. 'ಹರಿಹೆಕ್ಕಲ' ಅಡ್ಡ ಹೆಸರು ಕ್ರಮೇಣ 'ಮನ್ಸೂರ' ಆಯಿತು. ತಂದೆ ಭೀಮರಾಯಪ್ಪ, ಅಜ್ಜ ಬಸಪ್ಪ, ತಾಯಿಯ ಹೆಸರು ನೀಲಮ್ಮ. ಇವರ ಬಗ್ಗೆ ಮನ್ಸೂರರು ತುಂಬಾ ರಸವತ್ತಾಗಿ ತಮ್ಮ 'ರಸಯಾತ್ರೆ'ಯಲ್ಲಿ ಬರೆದಿಟ್ಟಿದ್ದಾರೆ.

'ನಾ, ಅಮಾಶಿಗೆ ಹುಟ್ಟಿದಂಪ್ರಿ' ಎಂದು ಗಹಗಹಿಸಿ ನಗುತ್ತಾ ತಾಳಿ ಸಲುವಾಗಿ (ಚಪ್ಪಾಳೆ) ಕೈ ಚಾಚುವದೂ ಒಂದು ಮನ್ಸೂರರ ಪ್ಯಾಟರ್ನ್ ಆಗಿತ್ತು! ಡಿಸೆಂಬರ್ 31, 1910ರ ರಾತ್ರಿ ಮಲ್ಲೇಶಪ್ಪ ಹುಟ್ಟಿದ! ಅವನಿಗೆ ಈಗಾಗಲೇ ಬಸವರಾಜ ಮತ್ತು ಪಾರ್ವತಮ್ಮ ಎಂಬ ಅಣ್ಣ ಮತ್ತು ಅಕ್ಕ ಇದ್ದರು. ಅಜ್ಜ ಪಂಚಾಂಗ ನೋಡಿ ಅಮವಾಸ್ಯೆ ಎಂದು ಖಾತ್ರಿ ಮಾಡಿ ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಶಿಶು ತಾಯಿ–ತಂದೆಗೆ ಅಪಾಯವಿದೆಯೆಂದು ಕೂಡಲೇ ಮಠಕ್ಕೆ ದತ್ತಕ ಕೊಡಲು ನಿರ್ಧರಿಸಿದರು. ತಾಯಿ ನೀಲಮ್ಮರಿಗೆ ಇದೊಂದು ಕಟುಕಷಾಯದ ಕುಡಿಯಲಾಗದ ಗುಟುಕು! ಸ್ವಾಮಿಗಳು ಸಮಾಧಾನ ಮಾಡಿ, 'ಒಂದೆರಡು ವರ್ಷಗಳಲ್ಲಿ ತಿರುಗಿ ತರತೇನವ್ವ' ಎಂದು ಹೇಳಿ ಮಗುವನ್ನು ತಮ್ಮ ಮಠಕ್ಕೆ ರವಾನಿಸಿದರು. ಮುಂದೆ ನೀಲಮ್ಮರವರಿಗೆ, ಮಲ್ಲಿಕಾರ್ಜುನರ ಸಹವಾಸ 27 ವರ್ಷಗಳ ವರೆಗೆ ನಿರಂತರವಾಗಿ ಸಿಕ್ಕಿತು! ತಂದೆಯವರದು ಕೂಡ, 55 ವರ್ಷ!.

ಆಗಿನ ದಿನಗಳೆಂದರೆ ಕನ್ನಡ–ಮರಾಠಿ ನಾಟಕಗಳ ಸುಗ್ಗಿಯ ದಿನಗಳು. ಅಪ್ಪ ಭೀಮರಾಯಪ್ಪರಿಗೆ ದೊಡ್ಡಾಟ, ನಾಟಕ, ಸಂಗೀತವೆಂದರೆ ತುಂಬಾ ಇಷ್ಟ! ಹುಬ್ಬಳ್ಳಿಯ ತನಕ ಯಾವುದೇ ಪ್ರಯೋಗವಿದ್ದರೆ ಮನೆಯ ಎತ್ತಿನ ಗಾಡಿ ಹೂಡಿ ಹೊರಟೇಬಿಡುವ ಅಭ್ಯಾಸ! ಬಸವರಾಜ ಮತ್ತು ಪುಟ್ಟ ಮಲ್ಲೇಶಿ ಅವರ ಬಾಲದಂತೆ ಹಿಂಬಾಲಿಸುತ್ತಿದ್ದರು. ದೊಡ್ಡಣ್ಣ ದೊಡ್ಡಾಟದ ಪಾತ್ರಗಳ ಅಭಿನಯವನ್ನು ರಸವತ್ತಾಗಿ ಮಾಡಿದರೆ, ಮಲ್ಲೇಶಿ ಹಾಡುಗಳನ್ನು ಗುಣಗುಣಿಸುತ್ತ ಮನೆಯಲ್ಲಿ ತಾಯಿಗೆ ಹಾಡಿ ತೋರಿಸುತ್ತಿದ್ದ.

ನೀಲಮ್ಮರವರ ಕಂಠ ಮಧುರವಾಗಿತ್ತು. ಬೀಸುವ ಹಾಡುಗಳ ಇಂಪಾದ ಶ್ರವಣ ಪ್ರತಿದಿನ ಮುಂಜಾನೆ ಮನೆಯವರಿಗೆಲ್ಲ ಕೇಳಿಸುತ್ತಿತ್ತು.

ಮಲ್ಲೇಶಿಗೆ ಐದು ತುಂಬಿದ ಕೂಡಲೇ ಹಳ್ಳಿಯ ಶಾಲೆಗೆ ಹಾಕಿದರು. ಮರುವರ್ಷ ಬಸವರಾಜ ಧಾರವಾಡಕ್ಕೆ 'ಮುಂದಿನ ವಿದ್ಯಾಭ್ಯಾಸ' ಅಂದರೆ 2ನೇ ಇಯತ್ತೆಗೆ ಹೋದಾಗ ಮಲ್ಲೇಶಿ ಅತ್ಯಂತ ಪ್ರಯಾಸದಿಂದ ಊರಿನ ಖಾಸಗಿ ಶಾಲೆಗೆ 2ನೇ ಇಯತ್ತೆಯಲ್ಲಿ ಪ್ರವೇಶಿಸಿದ. ಅದೇ ಹೊತ್ತಿಗೆ ಭೀಮರಾಯಪ್ಪನಿಗೆ ಅಪ್ಪಯ್ಯಸ್ವಾಮಿ ಎಂಬ ನಾಟಕದಲ್ಲಿಯ ಪಾತ್ರಧಾರಿಯ ಪರಿಚಯವಾಗಿ ನಾಟಕ ಕಂಪನಿಯ ಸುಟ್ಟಿ ದಿನಗಳಲ್ಲಿ ಆತನನ್ನು ಮನೆಗೆ ಕರೆತಂದರು. ಅವರು ಹಿಂದುಸ್ತಾನಿ ಮತ್ತು ಕರ್ನಾಟಕ ಪದ್ಧತಿಯ ಅಭ್ಯಾಸ ಮಾಡಿದ್ದರಷ್ಟೆ ಅಲ್ಲ, ವಯೊಲಿನ್ ಕೂಡ ಚೆನ್ನಾಗಿ ಬಾರಿಸುತ್ತಿದ್ದರು. ಇವರ ಪ್ರಭಾವ ಮಲ್ಲೇಶಿಯ ಮನಸ್ಸಿನಲ್ಲಿ ಆಗದೆ ಇರುತ್ತದೆಯೇ? ಶಾಲೆಗೆ 'ಶರಣು' ಎಂದ ಮಲ್ಲೇಶಿಗೆ ಧಾರವಾಡಕ್ಕೆ 'ಮುಂದೆ ಸರಿಯಾಗಿ ಕಲಿಯಲು' ರವಾನಿಸಲಾಯಿತು. ಆದರೆ ನಾಟಕ-ಸಂಗೀತದ ಗೀಳು ಬಿಡುತ್ತದೆಯೇ? 7ನೇ ವರ್ಷಕ್ಕೆ ಅಣ್ಣ ಸೇರಿದ 'ವಿಶ್ವಗುಣಾದರ್ಶ' ನಾಟಕ ಕಂಪನಿಯ 'ಬಾಗಿಲಲ್ಲಿ ಕೈ ಮುಗಿದು' ನಿಂತ ಪುಟ್ಟ ಮಲ್ಲೇಶಿ! ನಾನಾ ರೀತಿಯಲ್ಲಿ ಬಸವರಾಜ ಹೇಳಿದರೂ ಮಲ್ಲೇಶಿ, 'ನಾ ಒಲ್ಲೆ' ಎಂದು ಅಣ್ಣನ ಛಾಯಛತ್ರದಲ್ಲಿಯೇ ಉಳಿದ ಹಠದಿಂದ! ಮರಾಠಿ ನಾಟಕ ಕಂಪನಿ ಮಾಲಿಕರೆಂದರೆ ವಾಮನರಾವ್ ಮಾಸ್ತರರು! ಮರಾಠಿ ನಾಟಕ ಕಂಪನಿಯ ಧಾಟಿಯಲ್ಲಿಯೇ ವಾಮನರಾವ್ ಮಾಸ್ತರರ ಕಂಪನಿ ಕನ್ನಡದಲ್ಲಿಯೂ ಹೆಸರು ಮಾಡಿತ್ತು. ಆದರೆ ಭೀಮರಾಯಪ್ಪನಿಗೆ 'ಮಗಾ, ಚಲೋ ಕಲ್ತು ದೊಡ್ಡ ಮನಶ್ಯಾ' ಆಗಬೇಕೆಂಬ ಇಚ್ಛೆ! ಎರಡು ಸಲ ಮನೆಗೆ ಕರಕೊಂಡು ಬಂದರೂ ಮಲ್ಲೇಶಿ ವಾಪಸ್ಸು ನಾಟಕ ಕಂಪನಿಯಲ್ಲಿ! ವಿಶ್ವಗುಣಾದರ್ಶ ಕಂಪನಿ ಅಥಣಿಯಲ್ಲಿ ಕ್ಯಾಂಪು ಹೂಡಿದಾಗ ಅಲ್ಲಿ ನಾಟಕ ನೋಡಲು ಬಂದ ನೀಲಕಂಠ ಬುವಾ ಆಲೂರಮಠ ಊರ್ಫ ಮಿರಜ್‌ಕರ್ ಮಲ್ಲೇಶಿಯ 'ಪ್ರಲ್ಹಾದ' ನೋಡಿ ಅವನ ಗಾಯನ ಕೇಳಿ ಸ್ತಂಭಿತರಾದರು. ಮರುದಿನ ಅಲ್ಲಿಯ ನಾಟಕ ಕಂಪನಿಯ ಬೀಡು ಬಿಟ್ಟಲ್ಲಿ ಹೋಗಿ ಮಠಾಧೀಶರೂ ಮತ್ತು ಮಿರಜ್‌ಕರ್ ಬುವಾ ಅವರೂ ಬಸವರಾಜನನ್ನು ಭೇಟಿಯಾಗಿ ಇಬ್ಬರನ್ನೂ ಹರಸಿದರು. ಶಿವಯೋಗಿ ಸ್ವಾಮಿಯವರು ಮಲ್ಲಿಕಾರ್ಜುನನ್ನು ಕರೆಸಿ 'ನೀನು ಕೆಲವೇ ವರ್ಷಗಳಲ್ಲಿ ದೊಡ್ಡ ಗವಯಿ ಆಗುವೆ' ಎಂದು ಆಶೀರ್ವದಿಸಿ ಭವಿಷ್ಯ ಉಚ್ಚರಿಸಿದರು. ಇದೇ ಸಮಯ ಸಾಧಿಸಿ ಪಿತೃತುಲ್ಯ ವಾಮನಮಾಸ್ತರರೂ ತಮ್ಮ ಈ ಬಾಲನಟಶ್ರೇಷ್ಠನನ್ನೂ ನೀಲಕಂಠ ಬುವಾ ಇವರ ಉಡಿಯಲ್ಲಿ ಹಾಕಿದರು.

ನೀಲಕಂಠ ಬುವಾ ಅಸಾಮಾನ್ಯ ಗುರುಗಳಾಗಿದ್ದರು. ಅವರು ಖ್ಯಾತ ಗ್ವಾಲಿಯರ್ ಪರಂಪರೆಗೆ ಸೇರಿದವರು. ಬಾಳಕೃಷ್ಣ ಬುವಾ ಈಚಲಕರಂಜಿಕರ, ಪಂಚಾಕ್ಷರಿ ಬುವಾ ಮತ್ತು ಬಸವರಾಜ ರಾಜಗುರು ಇವರೆಲ್ಲ ನೀಲಕಂಠಬುವಾ ಅವರ ಶಿಷ್ಯರು. ಕರ್ನಾಟಕದಲ್ಲಿ ಹಿಂದುಸ್ತಾನಿ ಸಂಗೀತವನ್ನು ಜನಸಾಮಾನ್ಯರಿಗೆ ಮುಟ್ಟಿಸಿದ ಶ್ರೇಯ ಈ ನೀಲಕಂಠ ಬುವಾ ಆಲೂರಮಠ ಊರ್ಫ ಮಿರಜ್‌ಕರ್ ಅವರಿಗೆ ಹೋಗುತ್ತದೆ. ವಯಸ್ಸಿನ 11ನೇ ವರ್ಷಕ್ಕೆ 5 ವರ್ಷದ ನೀಲವ್ವನೊಂದಿಗೆ ಅದೇ ತಾನೇ ಮದುವೆ

ಮಾಡಿಕೊಂಡ ಮದುಮಗ ಮಲ್ಲೇಶಿ ದೇಹಕ್ಕೆ ಹಚ್ಚಿದ ಅರಿಶಿನದೊಂದಿಗೆ ಗುರುಗೃಹ ಸೇರಿದನೆಂದರೆ ಆ ಗುರುಗಳ ಚುಂಬಕಶಕ್ತಿ ಹೇಗಿರಬೇಕು? ಗುರುಗಳಿಗೂ ಸಂತತಿ ಇಲ್ಲದ್ದರಿಂದ ಮಲ್ಲಿಕಾರ್ಜುನರೇ ಸರ್ವಸ್ವರಾದರು. ಕೆಲವೇ ದಿನಗಳಲ್ಲಿ ವಾಯಲಿನ್ ಮತ್ತು ಹಾರ್ಮೋನಿಯಂ ಜೊತೆ ಬಾಲಕ ಮಲ್ಲಿಕಾರ್ಜುನ ಕಚೇರಿಗಳಲ್ಲಿ ಹಾಡಲಾರಂಭಿಸಿದ. ಅರ್ಥಾತ್ ಇದಕ್ಕಿಂತ ಮೊದಲು ಷಡ್ಜ ಹಚ್ಚುವ ಅಭ್ಯಾಸ, ಅಲಂಕಾರಗಳ ತಾಲೀಮು ಎರಡೆರಡು ತಾಸು. ಬಳಿಕ ಛೋಟಾ ಖಯಾಲ್, ತದನಂತರ ಧೃತ್‌ಲಯವಿದ್ದ ಒಂದು ಕೃತಿ. ಆಲಾಪಿಯಲ್ಲಿ ಸಾವಕಾಶವಾಗಿ ಮುಂದೆ ಸಾಗುವದು, ವಿಸ್ತಾರದ ಕ್ರಮ, ತಾಲ್ ಕೃತಿಯಲ್ಲಿ ಕಟ್ಟಿದ ವಿವಿಧ ರೂಪಗಳ ಪೋಣಿಸುವಿಕೆ. ವಿಲಂಬಿತದಲ್ಲಿಯ ತಾನಗಳು, 'ಮುಖಬಂದ' (ತುಟಿಗಳನ್ನು ಮುಚ್ಚಿ, ಮೂಗಿನಿಂದ ಹಾಡುವ ತಾನ್ ಪ್ರಕಾರ) ಇವೆಲ್ಲ ತಾವೇ ಹಾಡಿ ತೋರಿಸಿ ಮಲ್ಲಿಕಾರ್ಜುನರಿಂದ ಹಾಡಿಸುತ್ತಿದ್ದರು. ಮಲ್ಲಿಕಾರ್ಜುನರು ಕೂಡಾ ನಾನು ಆ ಬಳಿಕ ನೋಡಿದ ಮೀರಾ ಖಿರವಾಡ್‌ಕರ್ ಅವರಿಗೆ ಕಲಿಸುವಂತೆ ಕಲಿಸುತಿದ್ದಿರಬೇಕು. ಮಲ್ಲಿಕಾರ್ಜುನರ 'ಯಮನ ಕಲ್ಯಾಣ' ಕೇಳಿದವರು, ಅವರ ಹಾಡುಗಾರಿಕೆಯಲ್ಲಿಯ ಗ್ವಾಲಿಯರ ಪರಂಪರೆಯ ಲಕ್ಷಣಗಳನ್ನೆಲ್ಲ ಕಾಣಬಹುದು. ರಹಿಮತ್ ಖಾನ್ ಮತ್ತು ಬಾಳಕೃಷ್ಣ ಬುವಾರ ಕಡೆಯಿಂದ ಕಲಿತ, ಗಮಕ, ಮೀಂಡ, (ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಜಾರುವ ಪ್ರಕ್ರಿಯೆ) ಮುರಕಿ (ನಾಜೂಕಾಗಿ ಮತ್ತು ರಭಸವಾಗಿ ಬರುವ ಚಿಕ್ಕ ಸ್ವರ ವಿಸ್ತಾರ) ಇವುಗಳ ಸೌಂದರ್ಯವು ಓತಪ್ರೋತವಾಗಿ ತುಂಬಿದ ಸ್ಥಾಯಿಯನ್ನು (ಹಾಡಿನ ಮೊದಲ ಭಾಗ) ಮಲ್ಲಿಕಾರ್ಜುನರು ಹಾಡುವಾಗ ಅರಿವಾಗುತ್ತದೆ.

ಮಲ್ಲಿಕಾರ್ಜುನರು ಹೀಗೆ ಗುರುಗಳಲ್ಲಿಯೇ ವಾಸ್ತವ್ಯಕ್ಕಿದ್ದು ಕಲಿಯುತ್ತಿದ್ದಾಗ, ಗಣೇಶೋತ್ಸವದ ಕಾಲದಲ್ಲಿ ಪಕ್ಕದಲ್ಲಿಯೇ ಇದ್ದ ಸಾಂಗಲಿಯ ವೈದ್ಯ ಸಾಂಬಾರೆಯವರ ಮನೆಯಲ್ಲಿ ಉಸ್ತಾದ್ ಅಲ್ಲಾದಿಯಾ ಖಾನಸಾಹೇಬರ ಕಚೇರಿಯ ಸುದ್ದಿ ಕೇಳಿ ಗುರುಗಳ ಅನುಮತಿ ಪಡೆದು ಸಾಂಗಲಿಗೆ ಹೋದರು. ಅಲ್ಲಾದಿಯಾ ಅವರ ಜಯಪುರ ಶೈಲಿಯ ಗಾಯನ ಅವರಿಗೆ ತುಂಬಾ ಹಿಡಿಸಿತು. ಗುರುಗಳ ಆಜ್ಞೆ ಪಡೆದು ಮನ್ಸೂರರು ಸ್ವತಂತ್ರ ಕಚೇರಿಗಳನ್ನು 1935ರಲ್ಲಿ ಪ್ರಾರಂಭಿಸಿದರು. ಉತ್ತರದ ಶಿಕಾರಪುರದ ಸಮ್ಮೇಳನದಲ್ಲಿ ಭಾಗವಹಿಸಲು ಹೊರಟಾಗ ಬಂಧು ಬಸವರಾಜರು ಮುಂಬಯಿಯಲ್ಲಿಯೇ ಇದ್ದ ಕಾರಣದಿಂದ, ಕೆಲವು ತಿಂಗಳು ಮುಂಬಯಿಯ ಗಿರಗಾಂವಿನ ಒಂದು ಕೋಣೆಯಲ್ಲಿ ಮಲ್ಲಿಕಾರ್ಜುನರು ಇದ್ದರು. ಬಸವರಾಜರು ಶಾರದಾ ಫಿಲ್ಮ್ ಕಂಪನಿಯ ಸಂಗೀತ ದಿಗ್ದರ್ಶಕರಾಗಿದ್ದರು. ಅಲ್ಲಿ 'ತುಕಾರಾಮ್' ಮರಾಠಿ ಚಿತ್ರದಲ್ಲಿ ತುಕಾರಾಮನ ಪಾತ್ರ ವಹಿಸಿದ ವಿಷ್ಣುಪಂತ ಪಾಗನೀಸರ ಸಂಗೀತ ವಾದ್ಯಗಳ ಅಂಗಡಿಯಿತ್ತು. ಅಲ್ಲಿಯೇ ಅಲ್ಲಾದಿಯಾ ಖಾನರ ಮಗ ಮಂಜೀಖಾನರ ಮೊಟ್ಟ ಮೊದಲಿನ ಭೆಟ್ಟಿಯಾಯಿತು. ಈವರೆಗೆ ಮನ್ಸೂರರ ಹೆಸರು ಭಾರತದಲ್ಲಿ ಎಲ್ಲಕಡೆಯಲ್ಲಿಯೂ ಖ್ಯಾತವಾಗಿತ್ತು. ಎಚ್.ಎಮ್.ವಿ. ಮತ್ತು ಒಡಿಯೊನ್ ಕಂಪನಿಗಳು ಅವರ ಅನೇಕ ಧ್ವನಿಮುದ್ರಿಕೆಗಳನ್ನು ಬಿಡುಗಡೆ ಮಾಡಿದ್ದವು. ಇಷ್ಟು ಖ್ಯಾತಿ ಪಡೆದರೂ ಮಲ್ಲಿಕಾರ್ಜುನರಿಗೆ ಇನ್ನೂ ಕಲಿಯುವ ದಾಹವಿತ್ತು. ಪಾಗನೀಸರ ಮಧ್ಯಸ್ತಿಕೆಯಿಂದ ಮಂಜೀಖಾನರು ಮಲ್ಲಿಕಾರ್ಜುನರನ್ನು ಶಿಷ್ಯನೆಂದು ಸ್ವೀಕರಿಸಿದರು. ಆಗ ಅವರ

ವಯಸ್ಸು 25. ಹೀಗೆ 12-13 ವರ್ಷಗಳ ಗ್ವಾಲಿಯರ ಪರಂಪರೆಯಲ್ಲಿ ಪಳಗಿದ ಮಲ್ಲಿಕಾರ್ಜುನರು ಜಯಪುರ-ಅತ್ರೋಲಿ ಪರಂಪರೆಯ ಮಂಜಿಖಾನರ ಶಿಷ್ಯರಾದರು.

ಅಲ್ಲಾದಿಯಾ ಖಾನ್ ಸಾಹೇಬರ ಮಕ್ಕಳಲ್ಲಿ ಮಂಜಿ ಮತ್ತು ಬುರ್ಜಿ ಇವರಿಬ್ಬರೂ ಆ ಕಾಲದಲ್ಲಿ ಉತ್ತಮ ಗಾಯಕರೆಂದು ಹೆಸರು ಮಾಡಿದ್ದರು. ಅದರಲ್ಲಿಯೂ ರಸವತ್ತಾದ ಹಾಡುಗಾರಿಕೆಯಲ್ಲಿ ಮಂಜೀಖಾನರದು ಎತ್ತಿದ ಕೈ! ಮೊದಲೇ ಅತ್ಯಂತ ಪರಿಪಕ್ವತೆ ಪಡೆದ ಮಲ್ಲಿಕಾರ್ಜುನರ ಕಂಠಶ್ರೀ ಮಂಜೀಖಾನರಲ್ಲಿ ಅತ್ಯಂತ ಸಮೃದ್ಧಿಯನ್ನು ಪಡೆಯಿತು. ತಾನದಲ್ಲಿಯೇ ರಾಗ ಸ್ವರ ತೋರಿಸುವ, ಆರೋಹಿ (ಸ್ವರಗಳನ್ನು ಏರಿಸುವ ಪ್ರಕ್ರಿಯೆ), ಅವರೋಹಿ (ಸ್ವರಗಳನ್ನು ಇಳಿಸುವ ಪ್ರಕ್ರಿಯೆ), ತಾನಗಳ ಸುರಿಮಳೆ, ಸಿಡಿಲಿನಂತೆ ಯಾವುದೇ ಸ್ವರದಿಂದ ಹಠತ್ತಾಗಿ ಸಮ್ಮಿಗೆ ಮೊದಲ ಆವೃತ್ತಿಯ (ಬೀಟ್-ಹೊಡೆತ) ಎರಗುವ ಕ್ರಿಯೆಗಳಲ್ಲಿ ಮನ್ಸೂರರು ಪ್ರವೀಣರಾದರು. ಕಂಠದಲ್ಲಿಯೇ ಷಡ್ಜ ಮನೆ ಮಾಡಿದ ಮನ್ಸೂರರು ಅತ್ಯಂತ ರಭಸದಿಂದ ಪೂರ್ಣತ್ವದೆಡೆ ಹೆಜ್ಜೆ ಹಾಕುತ್ತಿದ್ದಾಲೇ ಒಮ್ಮೆಲೆ ಮಂಜೀಖಾನ್ ಮತ್ತು ಕೆಲವೇ ದಿನಗಳ ಅಂತರದಲ್ಲಿ ಆದಿ ಗುರು ಆಲೂರಕರರು ಈ ತಮ್ಮ ಶಿಷ್ಯೋತ್ತಮನನ್ನು ಅಗಲಿ ಹೋದರು.

ಮೂರನೇ ಪ್ರಹಾರವೆಂದರೆ ತಾಯಿಯ ಅಗಲಿಕೆ. ಅತ್ಯಂತ ವಿಷಣ್ಣ ಮನಸ್ಥಿತಿಯಲ್ಲಿ ಮಲ್ಲಿಕಾರ್ಜುನ ಮನ್ಸೂರರು ಅಲ್ಲಾದಿಯಾರನ್ನು ಭೆಟ್ಟಿವಾಡಿ ತನ್ನ ದುಃಖ ತೋಡಿಕೊಂಡು, ಈ ಪರಿಸ್ಥಿತಿಯಲ್ಲಿ ತನ್ನ ಗುರುವಾಗಿ ಮಾರ್ಗದರ್ಶನ ಮಾಡಿಕೊಳ್ಳಲು ವಿನಂತಿಸಿದರು. ವೃದ್ಧಾಪ್ಯದೆಡೆ ಹೆಜ್ಜೆಹಾಕಿದ ಉಸ್ತಾದ್‌ರು ತಮ್ಮ ಮಗ ಭುರ್ಜಿಖಾನರೆಡೆ ಬೊಟ್ಟು ತೋರಿಸಿದರು. ಒಂದೈದು ವರ್ಷ 1950ರ ತನಕ ಮಲ್ಲಿಕಾರ್ಜುನರಿಗೆ ಬುರ್ಜಿಖಾನರು ಮಾರ್ಗತೋರಿಸಿದರು. ಅಲ್ಲಾದಿಯಾರಿಗೆ ಮತ್ತೊಬ್ಬ ಮಗನನ್ನು ಕಳೆದುಕೊಳ್ಳುವ ದುರ್ಧರ ಪ್ರಸಂಗ. ಮಲ್ಲಿಕಾರ್ಜುನರ ಮೂರನೇ ಗುರುಗಳು ಕೂಡ ಪೈಗಂಬರವಾಸಿಗಳಾದರು. ಏತನ್ಮಧ್ಯೆ, ಮಲ್ಲಿಕಾರ್ಜುನರಿಗೆ ಸತತವಾಗಿ ಕಚೇರಿಗಳ ಆಮಂತ್ರಣ ದೊರಕುತ್ತಾ ಇತ್ತು. ಆದರೆ ಆಕಾಶವಾಣಿಯಲ್ಲಿನ ಹಾಡುಗಾರಿಕೆಗೆ ತಕ್ಕುದಾದ ಸಂಭಾವನೆ, ಸರಿಯಾಗಿ ಸಿಗುತ್ತಿರಲಿಲ್ಲ. ಒಂದು ತರಹದ 'ಜಾತಿಭೇದ' ಪದ್ಧತಿ ಅಲ್ಲಿ ರೂಢಿಯಲ್ಲಿತ್ತು. ಕೆಲವರಿಗೆ 250/- ರಿಂದ 500/- ರೂಪಾಯಿ ತನಕ ಉಡಿಚೆಜಚೆಣುಂಟ ಇರುತ್ತಿತ್ತು. ನಾನು ಮೊದಲು ಬರೆದ ಕೇಸಕರ್ ಮಂತ್ರಿಯಾದ ಮೇಲೆ ಶ್ರೀಕೃಷ್ಣ ರತನಜನಕರ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. 'ಆಗ್ರಾ ಪರಂಪರೆ'ಯ ರತನಜನಕರರು ಜಯಪುರ್ ಪರಂಪರೆ ಅಥವಾ ಗಂಗೂಬಾಯಿಯವರ ಕಿರಾನಾ ಪರಂಪರೆಯ ಮೌಲ್ಯಮಾಪನೆ ಹೇಗೆ ಮಾಡಬಲ್ಲರು?' ಎಂಬ ಮಲ್ಲಿಕಾರ್ಜುನ ಮತ್ತು ಗಂಗೂಬಾಯಿಯವರ ಪ್ರಶ್ನೆಗೆ ಕೇಸಕರರ ಬಳಿ ಉತ್ತರವಿರಲಿಲ್ಲ. ಧಾರವಾಡ ಆಕಾಶವಾಣಿ ಪ್ರಾರಂಭವಾಗುವ ಮೊದಲು ಇವರೆಲ್ಲ 'ಮುಂಬಯಿ ಆಕಾಶವಾಣಿ'ಯಲ್ಲಿ ಹಾಡುತ್ತಿದ್ದರು. ಹೊಸ ದೆಹಲಿಯ ಸರಕಾರದ ಪ್ರಸಾರಣ ರೀತಿಗೆ ವಿರುದ್ಧವಾಗಿ ಇಲ್ಲಿ ಕಲಾಕಾರ ಮಂಡಳದ ಸ್ಥಾಪನೆಯಾಯಿತು. ಆಗ್ರಾ ಪರಂಪರೆಯ ಗಾಯಕರನ್ನು ಬಿಟ್ಟು ಬೇರೆ ಪರಂಪರೆಯವರೆಲ್ಲ ಸತ್ಯಾಗ್ರಹ ಹೂಡಿದರು. ಈ ವಿರೋಧಾತ್ಮಕ ಧೋರಣೆಯಿಂದ ಮನ್ಸೂರರಿಗೆ ಆರ್ಥಿಕವಾಗಿ ಬಹಳ ನಷ್ಟವಾಯಿತು. ಕೇವಲ ಸಂಗೀತ

ಕಲಿಸುವದಷ್ಟೆ ಉಳಿದಿತ್ತು. ಅಣ್ಣ ಫಿಲ್ಮಂ ಕಂಪನಿಯಲ್ಲಿ ಕೈ ಸುಟ್ಟುಕೊಂಡು ಅರ್ಧ ಆಯುಷ್ಯ ಕಳೆದ ಮೇಲೆ ಗಾಂಧರ್ವ ವಿದ್ಯಾಲಯದ ಪರೀಕ್ಷೆ ಕೊಟ್ಟು ಪಾಸಾಗಿ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದರು! ಮಲ್ಲಿಕಾರ್ಜುನರ ಆರ್ಥಿಕ ಪರಿಸ್ಥಿತಿ ಕೂಡಾ ಅಷ್ಟಕಷ್ಟೆ.

ಮುಂದೆ 1957ರ ನಂತರ ಅವರ ಮತ್ತು ಆಕಾಶವಾಣಿಯ ಸಂಬಂಧ ಮರಳಿ ಸುಧಾರಿಸಿದ ನಂತರ ಮನ್ಸೂರರು ಹಿಂದೆ ನೋಡಲಿಲ್ಲ. ಇದೇ ಹೊತ್ತಿಗೆ ನಾನು ಕಾಲೇಜಿನಲ್ಲಿದ್ದಾಗ ಮನ್ಸೂರರ ಮನೆಗೆ ಆಗಾಗ ಹೋಗುತ್ತಿದ್ದೆ.

ಜಯಪುರ ಅತ್ರೋಳಿ ಪರಂಪರೆಯ 'ಲಲಿತಾ ಗೌರಿ' ರಾಗದ ಉದಾಹರಣೆ ತೆಗೆದುಕೊಂಡರೆ ಓದುಗರು ಮನ್ಸೂರರ ಅಸಾಧಾರಣ ಗಾಯನ ಕೌಶಲ್ಯದ ಕಲ್ಪನೆ ಮಾಡಿಕೊಳ್ಳಬಲ್ಲರು. ಇದರ 'ಪ್ರೀತಮ ಸೈಂಯ್ಯಾ' ಕೃತಿ ಎಲ್ಲರೂ ಹಾಡುತ್ತಿರುತ್ತಾರೆ. ಆದರೆ ಇದರ ಆಶಯ ಅರ್ಥಮಾಡಿಕೊಂಡು ರಸಿಕರನ್ನು ರಸವತ್ತಾಗಿ ತಣಿಸುವ ಹಾಡುಗಾರರು ಎಷ್ಟು? ಮತ್ತು ಯಾಂತ್ರಿಕ ರೀತಿಯಲ್ಲಿ ಹಾಡಿ ತಣಿಸುವವರು ಎಷ್ಟು? ಎಂಬ ಪ್ರಶ್ನೆಗೆ ಇದೇ ಕೃತಿಯನ್ನು ಎಲ್ಲ ಹಾಡುಗಾರರ ಸಿಡಿ ಕೇಳಿದ ಮೇಲೆಯೇ ನಿಮಗೆ ಇದರ ಉತ್ತರ ಸಿಗುತ್ತದೆ.

1968–69ರಲ್ಲಿ ನಾನು ಮುಂಬಯಿಗೆ ವರ್ಗವಾಗಿ ಬಂದ ನಂತರ, ಖ್ಯಾತ ವಿಮರ್ಶಕ ಮೋಹನ್ ನಾಡಕರ್ಣಿಯವರ ವರಳಿಯಲ್ಲಿಯ ಮನೆಗೆ ಮನ್ಸೂರವರನ್ನು ಕರೆತಂದಾಗ ಭೆಟ್ಟಿಯಾಗಿದ್ದೆ. ಒತ್ತಾಯಕ್ಕೆ ಮಧ್ಯಾಹ್ನದ ಊಟ ಅಲ್ಲಿಯೇ ಆಯಿತು. ಊಟದ ಮೊದಲು 4 ಬೀಯರ್ ಬಾಟಲ್ಲುಗಳನ್ನು 'ಅತಿಥಿ ಸತ್ಕಾರ'ದ ಸಲುವಾಗಿ ನಾನು ಹೊತ್ತುಕೊಂಡು ಬಂದಿದ್ದೆ. ಪಂಡಿತರು ಅತ್ಯಂತ ಖುಷಿಯಾದರು. 'ನನಗ ಥಂಢ ಬೀಯರ್ ಬ್ಯಾಡ್ರಪ್ಪ, ವೈನೀ, ಜರಾ ಪಾತೇಲಾತ ಗರಂ ಕರೂನ ದ್ಯಾ ಬಾ. ಸಂಜಿಪುಢೆ (ಸಂಜಿ ಮುಂದ) ಪ್ರೊಗ್ರಾಮ್ ಅಹೇ. ಘಸಾ...' (ಬಿಯರನ್ನು ಬಿಸಿ ಮಾಡಿ ಕೊಡಿ) ಎಂದು ಕಣ್ಣು ಮಿಟುಕಿಸುತ್ತಾ ಸುಲೋಚನಾ ಮಾಮಿಯವರ (ಮೋಹನರಾಯರ ಪತ್ನಿ) ಕಡೆ ದೃಷ್ಟಿ ಹಾಯಿಸುತ್ತಾ ಗಹಗಹಿಸಿ ನಿರ್ಮಲವಾಗಿ ನಕ್ಕಿದ್ದು ಈಗಲೂ ನೆನಪಾಗುತ್ತದೆ. ಬಿಯರ್ ಬಿಸಿ ಮಾಡಿ ಕುಡಿದದ್ದು, ಅವರೊಂದಿಗೆ ಅದೇ ಮೊದಲ ಸಲ! ಕೊನೆಯ ಸಲ! ಬೇಸರ ಪಡದೇ ಇಡೀ 'ಮತ್ಯುಂಜಯ ಸುಪ್ರಭಾತ'ವನ್ನು ನನಗೆ ಡಿಕ್ಟೇಟುಮಾಡಿ ನಾನು ಅದನ್ನು ಮಾಮಿಯವರಿಗೆ ಕೊಟ್ಟಿದ್ದೂ ಇದೆ. ಒಟ್ಟು 24 ಸಾಲುಗಳ ದೊಡ್ಡ ಕಾವ್ಯ! ಆವಾಗಲೇ ನಾನು ಖಯಾಲ್‌ದೆಡೆ ಮಲ್ಲಿಕಾರ್ಜುನರ ಸೌಂದರ್ಯ ದೃಷ್ಟಿಯ ವಿಹಂಗಮ ನೋಟ ನೋಡಿದ್ದು.

ಸಾಯಂಕಾಲ ವಿಲೇಪಾರ್ಲೆಯಲ್ಲಿ ಭೀಮಪಲಾಸದಿಂದ ಕಚೇರಿಯ ಆರಂಭ. ಕೂಡಲೇ ಶ್ರೀ, ಮಾರವಾ, ನಟ, ಸೋರಟ, ಮಾಲವೀ "ಹೀ ರಾತ ಸವತ ಬಾಯೀ"ಯನ್ನು (ಮರಾಠೀ ಹಾಡು) ಮಾರವಾದಲ್ಲಿ ಹಾಡುತ್ತಿದ್ದಾಗ ಒಂದು ಮೋಜಿನ ಮಾತೆಂದರೆ ಗಾಂಧಾರ ಮತ್ತು ಧೈವತ ಶುದ್ಧವಿದ್ದರೂ ಕೋಮಲ ಹಚ್ಚಿದ್ದರಿಂದ, ಮೊದಲಿನಿಂದ ಕೊನೆಯವರೆಗೂ ಪಂಡಿತರು ಕೊಮಲ ಶ್ರುತಿಗಳನ್ನು ಇದ್ದ ಹಾಗೇ ಸಂಭಾಳಿಸಿಕೊಂಡು

ಹಾಡಿದರು! ಅಂದರೆ ಹಾಡಿದ್ದು 'ಮಾರವಾ' ಇದ್ದರೂ ಮಾರವಾದಂತೆ ಇರಲಿಲ್ಲ. ಕೊನೆಯುವರೆಗೂ ಹಾಗೆಂಯೇ ಹಿಡಿತದಲ್ಲಿಟ್ಟುಕೊಳ್ಳುವದಕ್ಕೆ ಅಸಾಮಾನ್ಯ ಪ್ರಭುತ್ವಬೇಕಾಗುತ್ತದೆ. ಈ ರೀತಿ ಮನ್ಸೂರರದ್ದು ಅಸಾಮಾನ್ಯ ಪ್ರತಿಭೆಗೆ ನಾನೊಬ್ಬ ಸಾಕ್ಷಿದಾರ! (ಇದರ ವ್ಯತ್ಯಾಸ ನನಗೆ ತಿಳಿದದ್ದು ಕಛೇರಿ ನಂತರವೇ ನಾಡಕರ್ಣಿಯವರ ಪ್ರಶ್ನೆಗೆ ಮಲ್ಲಿಕಾರ್ಜುನರು ನಿರ್ಗಳ ಹಾಸ್ಯದೊಂದಿಗೆ ಹೇಳಿದ್ದ ಮಾತು!) 'ಶ್ರೀ' ರಾಗದಲ್ಲಿಯ ಕೋಮಲ ಧೈವತ ಹಚ್ಚಿದಾಗಿನ ಆನಂದ ಹಾರ್ಮೋನಿಯಂ ಬಾರಿಸುತ್ತಿದ್ದ ಗೋವಿಂದ ಪಟವರ್ಧನರು ತುಂಬಾ ಖುಷಿಯಿಂದ ಅದನ್ನೇ ಎತ್ತಿ ಹಿಡಿದರು! ಆ ಆನಂದದಲ್ಲಿ ಹೊಸದೊಂದು ರಾಗ ಹುಟ್ಟಿಕೊಂಡಿತು. ಅತ್ಯಂತ ಸಹಜತೆಯಿಂದ ಈ ಪ್ರಕ್ರಿಯೆ ನಡೆದಿದ್ದಷ್ಟೆ ಅಲ್ಲ, ಬೇರೆ ಯಾರಾದರೂ ಆ ಸ್ಥಾನದಲ್ಲಿದ್ದರೆ 'ನಾನೇ ಹೊಸ ರಾಗ ಸೃಷ್ಟಿಸಿದೆ' ಎಂಬುದಾಗಿ ಜಂಬದ ಮಾತು ಹೇಳದೇ ಇರುತ್ತಿರಲಿಲ್ಲ! ಮನ್ಸೂರರು ಇಂತಹ ಮಾನವೀಯ ಲಕ್ಷಣಗಳನ್ನೆಲ್ಲ ಹಿಂದೆ ಬಿಟ್ಟು ಅದಾಗಲೇ ದೈವೀ ರೂಪದಲ್ಲಿ ಸೇರಿದ್ದರು!

ಸರಿ, ಆ ದಿನ ಎಲ್ಲರೂ ಆಗ್ರಹ ಮಾಡಿದ್ದರಿಂದ ಮನ್ಸೂರರು ಒಂದು ನಾಟ್ಯಗೀತೆ ಮರಾಠಿಯಲ್ಲಿ 'ದೇಹಾತಾ ಶರಣಾಗತಾ' ಹಾಡಿದ್ದರು. ನನ್ನ ಬಳಿ ಹೀರಾಬಾಯಿ, ಬಾಲಗಂಧರ್ವ, ಛೋಟಾಗಂಧರ್ವ ಹಾಡಿದ ಈ ಹಾಡಿನ ರಿಕಾರ್ಡುಗಳಿವೆ, ಧ್ವನಿ ಸುರುಳಿಗಳೂ ಇವೆ. ಮಾನಾಪಮಾನ ನಾಟಕದಲ್ಲಿಯ ಈ ಹಾಡು ಮನ್ಸೂರರ ಕನ್ನಡ ಕಂಠದಲ್ಲಿ 'ಮರಾಠೀ' ಅವತಾರ ಪಡೆದು. ವಿರಾಟದರ್ಶನದಂತೆ ತುಂಬಾ ವ್ಯಾಪಕವಾಗಿತ್ತು. ಈ 'ಶರಣಾಗತಾ' ಒಂದೇ ಪದವನ್ನು ನಾನಾ ರೀತಿಯ ಸ್ವರಗಳಿಂದ ಪೋಣಿಸಿದ್ದರಿಂದ ಒಂದರ ಹಾಗೆ ಇನ್ನೊಂದು ಕಾಣುತ್ತಿರಲಿಲ್ಲ! ನಾಜೂಕಾದ ತಾನಗಳಿಂದ ಸುಶೋಭಿಸಿದ ಈ ನಾಟ್ಯಪದ ತುಂಬಾ ಮನೋಹಾರಿಯಾಗಿತ್ತು.

ಮೆಹಫಿಲ್ಲಿನಲ್ಲಿ ಹಾಡುವ ಮನ್ಸೂರರು ಮೆಹಫಿಲ್ಲಿನ ಮೊದಲು ಮತ್ತು ಅನಂತರದ ಮನ್ಸೂರರ ರೂಪ ಸ್ವತಂತ್ರವಾಗಿ ಬೇರೆ ಬೇರೆಯಾಗಿರುತ್ತಿತ್ತು. ಮೆಹಫಿಲ್ಲಿನ ಮೊದಲು ನರರ್ಗಳವಾಗಿ, ಹಾಸ್ಯ ಬೀರುವ ಮನ್ಸೂರರು ಒಮ್ಮೆಲೇ ಅಂತರ್ಮುಖರಾಗುತ್ತಿದ್ದರು. ಹಾಡುವ ಮನ್ಸೂರರೇ ಬೇರೆ, ಮೆಹಫಿಲ್ಲಿನ, ನಂತರ ಮರಳಿ ಮಾನವೀ ರೂಪದಲ್ಲಿ ಗಹಗಹಿಸಿ ನಗುವ ರೂಪವೇ ಬೇರೆ. ಮನ್ಸೂರರ ವಚನ ಹಾಡುವ ಭಂಗಿಯಂತೂ ವಿಲಕ್ಷಣ. ಶಿವಶರಣರ ವಚಗಳನ್ನು ಹಾಡಲು ಅನಕ್ಕೃ ಪ್ರೇರೇಪಿಸಿದ ವಿಷಯ ಎಲ್ಲರಿಗೂ ಗೊತ್ತಿದ್ದದ್ದು. ಆದರೆ ಹಾಡುವಾಗ ಅಕ್ಷರಶಃ ಅವರು ಶರಣರಂತೆ ಕಾಣಿಸುತ್ತಿದ್ದುದು ನಿರ್ವಿವಾದದ ವಿಷಯ! 1945–47ರಲ್ಲಿ 'ಸುಭದ್ರಾ' ಮತ್ತು 'ಚಂದ್ರಹಾಸ' ಚಿತ್ರಗಳ ಸಂಗೀತ ದಿಗ್ದರ್ಶನ ಅವರು ಮಾಡಿದ್ದರು ಎಂಬ ವಿಷಯ ನನಗೆ ಮುಂಬಯಿಗೆ ಬಂದ ನಂತರ ಗೊತ್ತಾಯಿತು. ಬಸವರಾಜ ಮತ್ತು ಮಲ್ಲಿಕಾರ್ಜುನರಿಬ್ಬರೂ ಕನ್ನಡ ನಾಟಕಗಳಲ್ಲಿ ಅಭಿನಯಿಸಿ, ನಂತರ ಹೊಟ್ಟೆಪಾಡಿಗಾಗಿ ಮುಂಬಯಿಯ ಫಿಲ್ಮ್‌ಲೈನಿನಲ್ಲಿ ಕೂಡ ಕೆಲಕಾಲ ಕೆಲಸ ಮಾಡಿದ್ದಾರೆ. ಮಲ್ಲಿಕಾರ್ಜುನರು ಹೆಸರಾಂತ ಗಾಯಕರೆಂದು 1945ರಲ್ಲಿಯೇ ಖ್ಯಾತಿ ಪಟ್ಟರೆ, ಬಸವರಾಜರು 5–10 ಸಿನೇಮಾಗಳಿಗೆ ಸಂಗೀತಕೊಟ್ಟು ಅವ್ಯಾವಹಾರಿಕತನದಿಂದ ಸೋತು ಮುಂದೆ ಸಂಗೀತಶಿಕ್ಷಕರಾದರು.

ಶಿಶುನಾಳ ಶರೀಫರ 'ತೇರನೆಳೆಯುತಾರ ತಂಗಿ', ಬಸವಣ್ಣನವರ ಯಮನದಲ್ಲಿಯ 'ನೀನೊಲಿದರೆ ಕೊರಡು ಕೊನರುವುದಯ್ಯಾ', 'ಕಳಬೇಡ, ಕೊಲಬೇಡ' ಈ ಚಂದ್ರಕೌಂಸನಲ್ಲಿ ಕಟ್ಟಿದ ವಚನಗಳನ್ನು ಯಾರು ಮರೆತಾರು? ಪಹಾಡಿರಾಗದಲ್ಲಿ ಕಟ್ಟಿದ ಅಕ್ಕಮಹಾದೇವಿಯ ವಚನ 'ಅಕ್ಕಾ, ಕೇಳವ್ವಾ ನಾ ಒಂದ ಕನಸ ಕಂಡೆ' ಒಂದು ಅದ್ವಿತೀಯ ಸಂಗೀತ ಕೃತಿ. ಮೇಲೆ ಹೇಳಿದಂತೆ ಮನ್ಸೂರರ ಆಧ್ಯಾತ್ಮಿಕ ರೂಪ ಕಾಣಲು ಸಿಗುವದು ಅವರು ವಚನ ಹಾಡುವಾಗ ಮಾತ್ರವೇ.

1957ರಲ್ಲಿ ನಮ್ಮ ತಂದೆ ಬುರ್ಡೆ ಗಣೇಶರಾಯರಿಗೆ ಧಾರವಾಡಕ್ಕೆ ವರ್ಗವಾಯಿತು. ಅದಕ್ಕಿಂತ ಮೊದಲು ಭಟ್ಕಳದಲ್ಲಿ ಅಂಚೆ ಮಾಸ್ತರರಾಗಿದ್ದ ಅವರು ಅಖಿಲ ಭಾರತ ಅಂಚೆ ಕಚೇರಿಯ ಸಂಪಿನಲ್ಲಿ ಭಾಗವಹಿಸಿದ್ದುದರಿಂದ ಅವರಿಗೆ 'ಶಿಕ್ಷೆ'ಯೆಂದು ಪೋಸ್ಟ್‌ಮಾಸ್ಟರ ಪೋಸ್ಟ್‌ನಿಂದ ಕೆಳಗೆ ಇಳಿಸಿ 'ಸೂಪರ್‌ವೈಜರ್' ಎಂದು ಬದಲಿ ಸ್ಥಾನವನ್ನು ಕೊಟ್ಟಿದ್ದರು! ನಮ್ಮ ಬಾಡಿಗೆ ಮನೆ, ಭಾವಸಾರ ಕ್ಷತ್ರಿಯ ಚಾಳಿನಲ್ಲಿ. ಕರ್ನಾಟಕ ಕಾಲೇಜಿಗೆ ಹೋಗುವಾಗ, ನನಗೆ ಧಾರವಾಡ ಜಿಮಖಾನಾ, ಆಕಾಶವಾಣಿ ದಾಟಿ ಕಾಲೇಜು ಸೇರಬೇಕಾಗಿತ್ತು. ಆಕಾಶವಾಣಿಯ ಎದುರಿಗೆ ಮಲ್ಲೇಶಣ್ಣರ ಮನೆ, 'ಮೃತ್ಯುಂಜಯ' ಭಕ್ತಿಪೂರ್ವಕವಾಗಿ ಮನ್ಸೂರರು ಇಟ್ಟ ಹೆಸರು. ಆಗಷ್ಟೇ ಅವರು ಬಾಡಿಗೆಯ ಮನೆಯಿಂದ 'ಮೃತ್ಯುಂಜಯ'ಕ್ಕೆ ಸ್ಥಳಾಂತರಿಸಿದ್ದರು. ಮನೆಯ ಕೆಲಸ ಇನ್ನೂ ಅಪೂರ್ಣವಾಗಿತ್ತು.

ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ನನ್ನ ಮಿತ್ರ ವಸಂತ ಹಳದೀಪೂರನ ಬಂಗಲೆಯ ಔಟ್‌ಹೌಸಿನಲ್ಲಿ ಬಾಡಿಗೆಗೆ ಇದ್ದರು. ಅವರೂ ಮಲ್ಲಿಕಾರ್ಜುನರ ಬಳಿ ಕಲಿಯುತ್ತಿದ್ದುದರಿಂದ ಮತ್ತು ನನ್ನ ಸಂಗೀತಾಭ್ಯಾಸದ ಮೂಲಾಕ್ಷರಗಳನ್ನೂ ತಿದ್ದುವ ಕೆಲಸ ಖುದ್ದಾಗಿ ಮತ್ತಿಗಟ್ಟಿಯವರೇ ಮಾಡುತ್ತಿದ್ದುದರಿಂದ ನನ್ನ ಬರು-ಹೋಗುವಿಕೆ ಮನ್ಸೂರರಲ್ಲಿ ವಾರಕ್ಕೆರಡು ಸಲ ಆಗಿಯೇ ಆಗುತ್ತಿತ್ತು. 1957ರಿಂದ 1959ರವರೆಗೆ ಅನೇಕ ಸಲ ಅವರ ಮನೆಯಲ್ಲಿಯೇ ಅವರ ಹಾಡುಗಾರಿಕೆ ಕೇಳಿದ ಭಾಗ್ಯವಂತ ನಾನು.

ಮುಂದೆ ಕೆಲಸ ಹುಡುಕಲೆಂದು ಬಿ.ಎಸ್ಸಿ ಪದವಿ ಸಿಕ್ಕಿದ ಮೇಲೆ ಮುಂಬಯಿಗೆ ಬಂದು ಕೊನೆಗೆ ಎರಡು ವರ್ಷ ಪುಣೆಯ ಹಿಂದುಸ್ತಾನ್ ಅಂಟಿಬಯೋಟಿಕ್ಸದಲ್ಲಿ ಕೆಲಸಕ್ಕಿದ್ದೆ. ಬಳಿಕ 1963ರಲ್ಲಿ ಗ್ಲಾಕ್ಸೊ ಕಂಪನಯಲ್ಲಿ ಮೆಡಿಕಲ್ ರಿಪ್ರೆಸ್‌ಂಟೇಟಿವ್ಹ್ ಎಂದು ಭೋಪಾಳ, ಇಂದೋರ ಇತ್ಯಾದಿ ಮಧ್ಯಪ್ರದೇಶದಲ್ಲಿ ಕೆಲಸಕ್ಕಿದ್ದಾಗ 1964ರಲ್ಲಿ ನಮ್ಮ All India Conference ದೆಹಲಿಯಲ್ಲಿಡಲಾಗಿತ್ತು. ಅದೇ ಸುಮಾರಿಗೆ ಪಂ. ಮನ್ಸೂರರು ಆಕಾಶವಾಣಿಯಲ್ಲಿಯ ಕೆಲಸಕ್ಕಾಗಿ ದೆಹಲಿಗೆ ಬಂದಿದ್ದರು. ದೆಹಲಿಯಲ್ಲಿ ಅವರು ತಂಗಿದ್ದು ಆಗ ವಾರ್ತಾ ಪ್ರಸಾರ ಮಂತ್ರಿಯಾದ ಡಾ.ಬಿ.ವ್ಹಿ ಕೇಸಕರ್ ಅವರ ಮನೆಯಲ್ಲಿ. ನಮಗೆಲ್ಲ ಅಂಬ್ಯಾಸೆಡರ್ ಹೊಟೆಲ್ಲಿನಲ್ಲಿ ತಂಗುವ ವ್ಯವಸ್ಥೆ ಮಾಡಲಾಗಿತ್ತು. ಮುಂಜಾನೆಯ 7 ಗಂಟೆಗೆ ನಾವೆಲ್ಲ ತಿರುಗಾಡಲು ಹೋದಾಗ, ಮುಂಬದಿಯಿಂದ ಮನ್ಸೂರರು ಮಫ್ಲರ್ ಸುತ್ತಿಕೊಂಡು ಧೋತರದ ಮೇಲೆ 'ಬಂದಗಲಾ' ಹಾಕಿ ಮೇಲಿಟುಂದ ಶಾಲು ಹೊದೆದು ಭೆಟ್ಟಿಯಾದರು. ನನ್ನ ಮಿತ್ರರ ಜತೆ ಇದ್ದ ನಾನು

ಅತ್ಯಂತ ಖುಷಿಯಿಂದ ರಸ್ತೆಯ ಪಕ್ಕದಲ್ಲಿಯೇ ಕಾಲು ಮುಟ್ಟಿ ನಮಸ್ಕಾರ ಮಾಡಿದೆ. 'ಏನಪಾ, ನೀನೆಲ್ಲಿ ಇಲ್ಲಿ?' ಎಂದು ಅತ್ಯಂತ ಆನಂದ ಸೂಚಿಸುತ್ತಾ ನನ್ನನ್ನು ಮೇಲೆ ಎಳೆದರು. "ಇಲ್ಲೆ, ಕಾನ್ಫರನ್ಸಿಗೆ ಬಂದಿದ್ದೆ, ಇನ್ನೆರಡು ದಿನ ಇಲ್ಲೆ ಇದೀನಿ, ನೀವು ಗುರುಗಳೇ?" ಎಂದೆ.

"ನಾನೂ ಇಲ್ಲೆ, ಕೇಸಕರ್ ಸಾಹೇಬರ ಮನೀಗ ಬಂದೇನಿ. ಅದೋ ಅಲ್ಲಿ" ಕೈಚಾಚಿ ಬೊಟ್ಟು ತೋರಿಸಿ, ಬಂಗಲೆಯತ್ತ ಕಾಲು ಹಾಕುತ್ತಾ 'ಸಂಜಿ ಮುಂದ ಬಾ ನಮ್ಮ ಭಾಷೆ ಆಡೋರು ಯಾರೂ ಇಲ್ಲಾ' ಎಂದು ನಗುತ್ತ ಮುಂದೆ ಸಾಗಿದರು.

'ಸಂಜಿ ಮುಂದ', ನಾನೊಬ್ಬನೇ ಹೋಟೆಲಿನಿಂದ ಕೇಸಕರರ ಮನೆಗೆ ಹೋದೆ. ಈಗಿನ ಹಾಗೆ ಆ ಕಾಲದಲ್ಲಿ ಲೋಕ ಪ್ರತಿನಿಧಿಗಳಿಗೆ, ಮಂತ್ರಿಗಳಿಗೆ ನಮ್ಮಂತಹ ಸಾಮಾನ್ಯರಿಂದ ಏನೂ ತಾಪತ್ರಯ ತೊಂದರೆ ಇರಲಿಲ್ಲ! ವಾಚ್‌ಮನ್‌ಗೆ ಹೇಳಿ ಆವಾರದೊಳಕ್ಕೆ ನುಗ್ಗಿದೆ. ಮನ್ಸೂರರು ಕೇಸಕರ ಅವರ ಸೋದರ ಮಗಳು ಮೀರಾ ಖಿರವಾಡಕರರಿಗೆ 'ಮಾರವಾ' ಕಲಿಸುತ್ತಿದ್ದರು. ನನ್ನ ಬಳಿ ಕಟಾಕ್ಷ ಬೀರಿ, ಕಣ್ಸನ್ನೆಯಿಂದಲೇ ಕುಳಿತುಕೊಳ್ಳುವಂತೆ ಹೇಳಿ ತಮ್ಮ ಪಾಠ ಮುಂದುವರಿಸಿದರು.

ಮನ್ಸೂರವರಿಗೆ ಪಾಠ ಹೇಳುವ ಕೃತಿಯಲ್ಲಿಯೂ ಗಡಿಬಿಡಿ! ಮಾರವಾ ಹೇಳಿಕೊಡುವಾಗ ತಮ್ಮಷ್ಟಕ್ಕೆ ತಾವೇ ರಾಗದಲ್ಲಿ ನುಸುಳಿ ಕಲಿಸುವದನ್ನೇ ಮರೆತು ತಾವೇ ಹಾಡುತ್ತಿದ್ದರು. ಒಮ್ಮೆಲೆ ನೆನಪಾಗಿ 'ಬೋಲ್ ಮೀರಾ, ತೂ ಗಾ' ಎಂದು ಹೇಳಿ ತನಗೆ ಹಾಡಿದ್ದು ಸರಿ ತೋಚದೇ ಇದ್ದರೆ ತಾವೇ ಮುಂದೆ ಸಾಗುತ್ತಿದ್ದರು. ನಾನು ಒಂದರ್ಧ ತಾಸು ಕುಳಿತು ಒಂದೆರಡು ಮಾತು ಆಡಿ ಬಳಿಕ ಪಕ್ಕದಲ್ಲಿದ್ದ ಅಂಬ್ಯಾಸಡರ್ ಹೊಟೇಲು ಸೇರಿದೆ.

'ನನ್ನ ರಸಯಾತ್ರೆ' ಬರೆದ ಮನ್ಸೂರವರು ಕನ್ನಡ ಭಾಷೆಯ ಅತ್ಯಂತ ಅಭಿಮಾನಿಗಳಾಗಿದ್ದರು. ಶಿಶುಸಹಜ ಪ್ರವೃತ್ತಿ ಮತ್ತು ಅವರ ನಿರರ್ಗಳ ಹಾಸ್ಯ ಅತ್ಯಂತ ಮನೋಹರವಾಗಿತ್ತು. ಯಾವಾಗಲೂ ಗಡಿಬಿಡಿಯಲ್ಲಿದ್ದ ಅವರ ದೇಹಭಂಗಿ, ಊಟ ಮಾಡುವ ಗಡಿಬಿಡಿ, ಬೀಡಿ ಸೇದುವಾಗ ಗಡಿಬಿಡಿ, ಅದೇಕೆ ಕಚೇರಿಯಲ್ಲಿ ಹಾಡು ಪ್ರಾರಂಭಿಸುವದಕ್ಕೂ ಗಡಿಬಿಡಿ. ಒಂದು ಸಲ ಮುಂಬಯಿಯ ರಾಷ್ಟ್ರೀಯ ಕಲಾಕೇಂದ್ರದಲ್ಲಿಯ ದೊಡ್ಡ ಸಭಾಗೃಹದಲ್ಲಿ ಅವರ ಕಚೇರಿಯನ್ನು ಏರ್ಪಡಿಸಲಾಗಿತ್ತು. ತುಳಸೀದಾಸ್ ಬೋರಕರ್ ಹಾರ್ಮೋನಿಯಂ ಬಾರಿಸಲು ಕುಳಿತಿದ್ದರು. ಬಾಳಕೃಷ್ಣ ಅಯ್ಯರ್ ತಬಲಾ. ರಾಜಶೇಖರ ಮನ್ಸೂರರೊಂದಿಗೆ ಅವರ ಹೆಗಲ ಮೇಲೆ ಕೈಯಿಟ್ಟು ಪ್ರವೇಶಿಸಿದ ಮಲ್ಲಿಕಾರ್ಜುನ ಮನ್ಸೂರ ಅವರು ತಂಬೂರಿಗಳ ಶ್ರುತಿ ನೋಡುವ ಮೊದಲೇ 'ಯಮನ ಕಲ್ಯಾಣ' ಪ್ರಾರಂಭಿಸಿ ನಂತರ ಕಲಾವೇದಿಕೆಯ ಮೇಲೆ ಸ್ಥಾನಾಪನ್ನರಾದರು! ಪ್ರೇಕ್ಷಕ ವರ್ಗದ ಚಪ್ಪಾಳೆ, ಧ್ವನಿಯಂತ್ರದ ಮುಂದೆ ನಿಂತ ನಿವೇದಕಿ ಇವರೆಲ್ಲ ಸ್ತಂಭಿತರಾದರು! ಕ್ಷಣದಲ್ಲಿಯೇ ಅವರ ಶಾರೀರ ಎರಡು ತಂಬೂರಿಯ ಮೀಟುವ ಷಡ್ಜ ಪಂಚಮಗಳಲ್ಲಿ ವಿಲೀನವಾಗಿತ್ತು. ಒಂದು ರಾಗ ಮುಗಿಸಿ ಮತ್ತೊಂದು ರಾಗದಲ್ಲಿ ನುಗ್ಗುವುದರಲ್ಲಿ ಕೂಡ ಗಡಿಬಿಡಿ! ರಾಗ ವಿಸ್ತಾರ ಮಾಡುವಾಗ ಹಾರ್ಮೋನಿಯಂ ಬಾರಿಸುವವರಿಗೆ ಕೂಡ ಮನ್ಸೂರರು ಅವಕಾಶ ಕೊಡುತ್ತಿದ್ದಿಲ್ಲ. ಅಷ್ಟು ಗಡಿಬಿಡಿ.

ಆಕಾಶವಾಣಿಯ ಧಾರವಾಡ, ಪುಣೆ, ಹೈದರಾಬಾದ್ ಮತ್ತು ಬೆಂಗಳೂರು ಸ್ಟೇಶನ್ನುಗಳಿಗೆ ವಿಶೇಷ ಸಲಹೆಗಾರರೆಂದು ಮನ್ಸೂರರನ್ನು ಬಿ.ವ್ಹಿ. ಕೇಸಕರರು ನೇಮಿಸಿದ್ದರು. 1960 ರಿಂದ 1969ರ ವರೆಗೆ 9 ವರ್ಷ ದುಡಿದರು. ಪ್ರವಾಸ ಭತ್ತೆ ಮತ್ತು ಮೊದಲನೇ ತರಗತಿಯ ರೈಲ್ವೆ ಸೌಕರ್ಯ ತಿಂಗಳಿಗೆ 500/– ಮಾನಧನ! ಮೇಲಾಗಿ ತಿಂಗಳಿಗೊಮ್ಮೆ ಪ್ರತಿಯೊಂದು ಕೇಂದ್ರದಲ್ಲಿ ಹಾಡುಗಾರಿಕೆ! ಶನಿವಾರದ ರಾಷ್ಟ್ರೀಯ ಕಾರ್ಯಕ್ರಮ ಬಿ.ವ್ಹಿ ಕೇಸಕರರು ಪ್ರಾರಂಭಿಸಿದ್ದು ಈಗಲೂ ಅವ್ಯಾಹತವಾಗಿ ನಡೆದು ಬಂದಿದೆ. ಮನ್ಸೂರರು ಪುಣೆ, ಹೈದರಾಬಾದ್, ಬೆಂಗಳೂರು ಮತ್ತು ಧಾರವಾಡದ ಆಕಾಶವಾಣಿಯಲ್ಲಿ ಪ್ರತಿ ಮಂಗಳವಾರ ಒಂದು ತಾಸಿನ ಶಾಸ್ತ್ರೀಯ ಸಂಗೀತ ಸಭೆ ಪ್ರಾರಂಭಿಸಿದರು. ಇದನ್ನೇ ಮುಂದೆ ಮುಂಬಯಿ ಆಕಾಶವಾಣಿಯವರೂ ಬಿತ್ತರಿಸಲು ಪ್ರಾರಂಭಿಸಿದರು. ಈ 9 ವರ್ಷಗಳು ಪಂಡಿತರ ಆಯುಸ್ಸಿನ ಅತ್ಯಂತ ಸಂತೋಷಕೊಡುವ ವರ್ಷಗಳಾಗಿದ್ದವು. ಆ ಕಾಲದ ಆಕಾಶವಾಣಿ ಪ್ರತಿಯೊಬ್ಬ ಭಾರತೀಯನ ಸಾಂಸ್ಕೃತಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು. ಮುಂಜಾನೆಯ 5.55ಕ್ಕೆ ಪ್ರಾರಂಭವಾಗುತ್ತಿದ್ದ ಆಕಾಶವಾಣಿ ರಾತ್ರಿಯ ಶಾಸ್ತ್ರೀಯ ಸಂಗೀತದ ತನಕ 'ಬಹುಜನ ಹಿತಾಯ, ಬಹುಜನ ಸುಖಾಯ' ದುಡಿಯುತ್ತಾ ಇತ್ತು. ಮನ್ಸೂರರು ಆಕಾಶವಾಣಿಯ ಈ ಸಾಂಸ್ಕೃತಿಕ ಮಟ್ಟವನ್ನು ಅನೇಕ ರೀತಿಯಲ್ಲಿ ಏರಿಸಿದರು. ಆಕಾಶವಾಣಿಗಾಗಿ ಅವರ ಬಹಳಷ್ಟು ಅಪ್ರಚಲಿತ ರಾಗಗಳ ಸಂಪತ್ತಿಯನ್ನೂ ಕೇವಲ ಆಕಾಶವಾಣಿಯ ಮೇಲೆ ಇದ್ದ ಮೋಹದಿಂದ ಕೊಟ್ಟಿದ್ದೂ ಇದೆ.

"ಗಾಣ್ಯಾತ ರಾಹಣಾರಾ ಮಾಣೂಸ" ಇದು ಮರಾಠಿಯಲ್ಲಿಯ ಖ್ಯಾತ ಲೇಖಕ, ಪು.ಲ. ದೇಶಪಾಂಡೆ ಮನ್ಸೂರರಿಗೆ ಕೊಟ್ಟ ಬಿರುದು. ಇದರ ವರ್ಣನೆ ನನಗೆ ಸಿಕ್ಕಿದ್ದು 1992ರ ಏಪ್ರಿಲ್ ತಿಂಗಳಲ್ಲಿ ಧಾರವಾಡಕ್ಕೆ ಹೋದಾಗ. ಮುಂಬಯಿ ಖ್ಯಾತ ಗಾಯಕಿ ಜಯಪುರ ಅತ್ರೋಲಿ ಪರಂಪರೆಯ ಗೀತಾ ಜಾವಡೇಕರ್ ಇವರ ತವರೂರು ಧಾರವಾಡ. ಕರ್ಮಧರ್ಮ ಸಂಯೋಗದಿಂದ ನಾನೂ ಧಾರವಾಡ ಮಾರ್ಗವಾಗಿ ಬೆಂಗಳೂರಿನಿಂದ ಮುಂಬಯಿಗೆ ಹೊರಟಿದ್ದೆ. ನಮ್ಮ ಮನ್ಸೂರ ಅವರು ಅದೇ ತಾನೇ, ಅತ್ಯಂತ ಅಸಾಧ್ಯ ರೋಗದ ಉಪಚಾರಕ್ಕಾಗಿ ಒಂದು ತಿಂಗಳ ಮೊದಲು ಬೆಂಗಳೂರಿಗೆ ಹೋದವರು ಧಾರವಾಡಕ್ಕೆ ಮರಳಿದ್ದಾರೆ ಎಂಬ ಮಾತು ನನಗೆ ಬೆಂಗಳೂರಿನಲ್ಲಿಯೇ ತಿಳಿದಿತ್ತು. ಸರಿ, ಹುಬ್ಬಳ್ಳಿಯಿಂದ ಕ್ರಿಕೆಟ್ ಜೋಶಿಯವರಿಗೆ (ಗೀತಾ ಜಾವಡೇಕ ಅವರ ತಂದೆ) ಫೋನಿಸಿ ತತ್‌ಕ್ಷಣ ಮನ್ಸೂರರ ನಿವಾಸ "ಮೃತ್ಯುಂಜಯ"ಕ್ಕೆ ಹೋಗುವುದೆಂದು ನಿಶ್ಚಯಿಸಿದೆವು. ಮಾರನೇ ದಿನ ಮುಂಜಾನೆ ನಾನು ಧಾರವಾಡಕ್ಕೆ ಬಂದು ಹಳೇ ಧಾರವಾಡ, ಅಂದರೆ ಕಾಮನಕಟ್ಟೆಗೂ ಮುಂದೆ ಹೋಗಿ ಅಲ್ಲಿಂದ ರಿಕ್ಷಾ ಗೊತ್ತುಮಾಡಿಕೊಂಡು "ಮೃತ್ಯುಂಜಯ"ಕ್ಕೆ ತೆರಳಿದೆವು.

1992 ಏಪ್ರಿಲ್ 21ರ ಮುಂಜಾನೆಯ ಒಂಬತ್ತುವರೆ ಗಂಟೆ, ಗೀತಾ ಮತ್ತು ನಾನು ಸ್ವಲ್ಪ ಅಳುಕುತ್ತಲೇ ಮೃತ್ಯುಂಜಯದ ಹೆಬ್ಬಾಗಿಲು ದಾಟಿದೆವು. ಮನ್ಸೂರರ ಮಗಳು ಗಿರಿಜಾ ಮುಗುಳುನಗೆಯಿಂದ ಸ್ವಾಗತಿಸಿದರು.

"ಅಣ್ಣಾ ಹ್ಯಾಂಗಿದ್ದಾರರೀ, ನಾ ಮುಂಬಯಿಯಿಂದ ಬಂದೀನಿ. ಹೋಗೋ ಮೊದ್ಲು ಸ್ವಲ್ಪ ಭೇಟಿ ಮಾಡಿ ಹೋಗಬೇಕೆಂತದರಿ, ನನ್ಮನಿ ಶಾಸ್ತ್ರಿ ಚಾಳದಾಗ ಇತ್ತರಿ. ಅಣ್ಣಾವ್ರಿಗೆ ಮೊದಲು ರಗ್ಗಡ 'ಸಲ ಭೆಟ್ಟಿ ಮಾಡೇನ್ರಿ".

ಬಲಭಾಗದ ಒಂದು ಕೋಣೆಯಿಂದ ಅಣ್ಣಾವರ ಮಧ್ಯಸಪ್ತಕದಲ್ಲಿಯ ಧ್ವನಿ..

"ಅಕ್ಕಾ, ಯಾರ ಬಂದಾರ ?"

"ಗೀತಾ ಜೋಶಿ-ಕ್ರಿಕೆಟ್ ಜೋಶಿ ಮಗಳು ಮತ್ತು ಮುಂಬಯಿ ಕಡೆಯವರು ಬುರ್ಡೆ ಸಾಹೇಬರು".

"ಒಳಗೆ ಕಳಿಸವ್ವಾ"

ಕೃಶವಾದ ಜರ್ಜರಿತ ಶರೀರ, ಮಾತಾಡುವ ಶಾರೀರ ಮೊದಲಿನಂತೆಯೇ, ಕನ್ನಡಕವಿಲ್ಲದ ಕಣ್ಣುಗಳ ಹೊಳಪು ಕೊಂಚ ಮಂದವಾದದ್ದು ಅಸಾಧ್ಯ ರೋಗದ (ರಿನಲ್ ಫೇಲ್ಯೂರ್) ಪೀಡೆಯಿಂದ. ಅದೇ ತಾನೇ ಸ್ವಲ್ಪ ವಾಸಿಯಾದುದರಿಂದ ತಲೆದಿಂಬಿನ ಆಧಾರದಿಂದ ಗೋಡೆಗೆ ತಾಗಿ ಕುಳಿತು ಹಾಡುವ ಭಂಗಿಯಲ್ಲಿ ಪದ್ಮಾಸನದಲ್ಲಿ ಆಸೀನವಾದ ಮೂರ್ತಿ ಇನ್ನೂ ನನ್ನ ಕಣ್ಮುಂದೆ ಇದೆ. ಬಲ ಬೆರಳಲ್ಲಿ ತಾಳಹಿಡಿದದ್ದೂ "ಮುಖಬಂದ" ತಾನ್‌ದ ಸಾಧನೆ ನಡೆದಿದ್ದೂ ನಮಗೆಲ್ಲ ಗೋಚರಿಸಿತ್ತು.

ನಾವಿಬ್ಬರು ಕಾಲು ಮುಟ್ಟಿ ನಮಸ್ಕಾರ ಮಾಡಿದೆವು. ಗೀತಾ ಅಲ್ಲಿಯೇ ಜಮಖಾನದ ಮೇಲೆ ಅಸನಸ್ಥಳಾದಳು. ನಾನು ಮಂಚದ ಮೇಲೆ ಕಾಲಿನ ಬದಿಗೆ.

"ಅಣ್ಣಾವ್ರೆ, ಏನ ಹಾಡ್ತಿದ್ರಿ ?"

ಮಲ್ಲಿಕಾರ್ಜುನ ಮನ್ಸೂರರು ನಕ್ಕರು.

"ಅಣ್ಣಾ ಏನ ಹಾಡ್ತಾರು, 'ದುಃಖ ದೂರ ಕರೋ ಮುರಾರಿ' ಇರಬೇಕು". ಗಿರಿಜಾ ಹಾಡಿಯೇ ತೋರಿಸಿದರು ನಗುನಗುತ್ತ.

'ಅಹಿರ್ ಭೈರವ್ ಇರಬೇಕಲ್ರಿ' ಗೀತಾ ಕೇಳಿದರು,

"ಬುರ್ಡೆಯವರೇ, ಇದೊಂದು ದೊಡ್ಡ ರಾಮಾಯಣ ಐತಿ ಬಿಡ್ರಿ" ಗಹಗಹಿಸುವ ತಮ್ಮ ಭೋರ್ಗರೆಯುವ ನಿರ್ಮಲ ನಗೆನಗುತ್ತ ನಾಲಿಗೆ ಚಾಚಿ ತಾಳಿಯ (ಚಪ್ಪಾಳೆ) ಸಲುವಾಗಿ ತಮ್ಮ ಬಲಗೈ ಮುಂದೆ ಮಾಡಿದರು.

"ಗಿರಿಜಾ, ಹೇಳವ್ವಾ ತಂಗೀ"

ಗಿರಿಜಾ ಹೇಳಿದ ಕತೆ ಮುಂದುವರಿಸುವ ಮೊದಲು ಒಂದು ಮಾತು. ಒಂದು ವರ್ಷದ ಮೊದಲು, ಕಿಡ್ನಿ ವೈಫಲ್ಯದಿಂದ ಬಳಲಿದ "ಇಂದೋ ನಾಳೆಯೋ" ಅನಕೋತ ಗುಣಪಡೆದು 1990ರಲ್ಲಿ ವಿಲೆಪಾರ್ಲೆಯ ಪು.ಲ. ದೇಶಪಾಂಡೆ ಸಭಾಗೃಹದಲ್ಲಿ ಪಂ,

ರವಿಶಂಕರ, ಪಂ. ಭೀಮಸೇನ ಜೋಶಿ ಹಾಗೂ ಅಜಯ ಚಕ್ರವರ್ತಿಯವರ ಉಪಸ್ಥಿತಿಯಲ್ಲಿ ಮನ್ಸೂರರ "ಪುನರಾಗಮನ"ವಾಗಿತ್ತು. ಕಿಕ್ಕಿರಿದು ತುಂಬಿದ ಸಭಾಗೃಹದಲ್ಲಿ ಪಂಚಾಕ್ಷರಿ ಮತ್ತಿಗಟ್ಟಿ ಹಾಗೂ ರಾಜಶೇಖರರ ಸಹಾಯದಿಂದ ಒಂದು ಗಂಟೆ ಅದ್ಭುತವಾಗಿ ಹಾಡಿ ಅನಂತರ ಧಾರವಾಡಕ್ಕೆ ಮರಳುವ ಮೊದಲು ಅನೇಕ ಕಛೇರಿಗಳನ್ನು ನಡೆಸಿದ್ದೂ ಇದೆ !

ಕೊನೆಗೆ ಮಾರ್ಚ್ ತಿಂಗಳಲ್ಲಿ ಮನ್ಸೂರರ ಎಚ್ಚರ ತಪ್ಪಿತು. ಕೂಡಲೇ ಬೆಂಗಳೂರಿನ ಪ್ರಸಿದ್ಧ ಯುರೋಲಾಜಿಸ್ಟ್ ಡಾ। ತಳವಲ್ಕರ್ ಅವರಿಗೂ ಫೋನಿಸಿ ಅವರ ಸಲಹೆಯ ಪ್ರಕಾರ ಎಚ್ಚರ ತಪ್ಪಿದ ಅವಸ್ಥೆಯಲ್ಲಿಯೇ ಮನ್ಸೂರ ಅವರನ್ನು ಬೆಂಗಳೂರಿಗೆ ರುಗ್ಣವಾಹನದಲ್ಲಿ ಒಯ್ಯಲಾಯಿತು. ಮನ್ಸೂರರ ಇಬ್ಬರು ಹೆಣ್ಣು ಮಕ್ಕಳು ಮತ್ತು ಮಗ ರಾಜಶೇಖರ ಅವರು ಜೊತೆಯಲ್ಲಿ ಇದ್ದರು.

ಗಿರಿಜಾ ಮತ್ತು ನೀಲವ್ವ ಮುಂದುವರಿಸಿದ ಕತೆ ಹೀಗಿದೆ. ಆಸ್ಪತ್ರೆಯಲ್ಲಿ ಮಲಗಿದಾಗ, ಬಲಗೈಗೆ ನಳಿಗೆ. ಮೂಗಿನ ಸೊಳ್ಳೆಯಲ್ಲಿ ಒಂದು ಟ್ಯೂಬು. ಇಂತಹ ಎಚ್ಚರ ತಪ್ಪಿದ ಅವಸ್ಥೆಯಲ್ಲಿಯೇ ಮನ್ಸೂರರು ಒಮ್ಮಿಂದೊಮ್ಮೆ ಹಾಡಲಾರಂಭಿಸಿದರು! ಮಧ್ಯೆ ಮಧ್ಯೆ "ತಮ್ಮಾ ಹಾಡು ಹೇಳೋ" ಎಂದು ಮಲಗಿದ ರಾಜಶೇಖರರನ್ನೂ ಎಬ್ಬಿಸಿ ಅವನಿಗೂ ತನ್ನೊಂದಿಗೆ ಹಾಡು ಹಾಡುವಂತೆ ಅಪ್ಪಣೆ ಮಾಡಿದರು !

"ತಮ್ಮಾ ನಿನ್ನ 'ದಮ್‌ಸಾಸ್' (ಶ್ವಾಸವನ್ನು ನಿಯಂತ್ರಣದಲ್ಲಿ ಇಡುವ ಪ್ರಕ್ರಿಯೆ) ಇನ್ನೂ ಸುಧಾರಿಸಬೇಕು' ಎಂದು ನಿದ್ರಾವಸ್ಥೆಯಲ್ಲಿಯೇ ತೋರಿಸಿದರು. ಅದೇ ಹಾಡು. ಅದೇ ಬಂದಿಶ್, ಅಹಿರ್ ಭೈರವ್‌ನಲ್ಲಿಯದು. "ದುಃಖ ದೂರ ಕರೋ ಮುರಾರಿ" ಮುಂದುವರಿಸಿದರು. ನೀಲವ್ವಾ, ಗಿರಿಜಾ ಲಕ್ಷ್ಯಪೂರ್ವಕವಾಗಿ ನೋಡಿದರು. ನಳಿಕೆಯ ಪ್ರತಿಯೊಂದು ಹನಿಯ ಮಿಡಿತದಲ್ಲಿಯೇ ಹಾಡು ನಡೆದದ್ದು ಗಮನಿಸಿದರು. ಏನಿದು ಅದ್ಭುತ ಪ್ರಕಾರ? ಹದಿನೆಂಟು ತಾಸು ಅಖಂಡ ಸಂಗೀತಯಜ್ಞ ನಡೆದೇ ಇತ್ತು, ಎಚ್ಚರ ಬರುವ ತನಕ... ಅದಕ್ಕೇ ಗಿರಿಜಾ ನಕ್ಕಿದ್ದು, ಮನ್ಸೂರ ಅವರು ಗಹಗಹಿಸಿದ್ದು!

"ಅಣ್ಣಾ, ನಿಮಗೇನೂ ನೆನಪು ಐತೋ ಇಲ್ಲೋ" ಎಂದದಕ್ಕೆ ಮತ್ತೆ ಅದೇ ನಿರ್ಮಲ ಭೋರ್ಗರೆಯುವ ಜಲಪಾತದ ಹಾಸ್ಯ.

"ಇಲ್ಲಪ್ಪಾ ಇಲ್ಲ. ಇವರೇನಂತಾರ ಅಷ್ಟೇ".

ಅವರ ಶ್ರದ್ಧೆಯ ಸ್ಥಳವೆಂದರೆ ಮೃತ್ಯುಂಜಯ ಸ್ವಾಮಿಗಳು ಮತ್ತು ಅವರ ಮಠ. ತೀರಿಕೊಳ್ಳುವ 15 ದಿನಗಳ ಮೊದಲು ಅವರ ಇಚ್ಛೆಯಂತೆ ಅವರನ್ನು ಮೃತ್ಯುಂಜಯ ಸ್ವಾಮಿಗಳ ಮಠಕ್ಕೆ ರಾಜಶೇಖರ ಕರೆದುಕೊಂಡು ಹೋಗಿದ್ದರು. ಒಂದರ್ಧ ತಾಸು ಹಾಡಿ ಮರಳಿದರು. 1992ರ ಡಿಸೆಂಬರ್ 12ರಂದು ಪಂಡಿತ ಮಲ್ಲಿಕಾರ್ಜುನ ಮನ್ಸೂರರು ಲಿಂಗೈಕ್ಯರಾದರು.

ಮನ್ಸೂರರ ನಿಧನದ ಅನಂತರ 'ಮೃತ್ಯುಂಜಯ' ಬದಲಾಗಿದೆ. ಕರ್ನಾಟಕ ಸರಕಾರದ ಆಡಳಿತದಲ್ಲಿ ಇದನ್ನು ಕಲಾ ಕೇಂದ್ರ ಹಾಗೂ ವಸ್ತು ಸಂಗ್ರಹಾಲಯವನ್ನಾಗಿ ಮಾಡಿದ್ದಾರೆ. ಇದ್ದ ಮನೆಯನ್ನೇ ಸರಿಪಡಿಸಿದ್ದಾರೆ. ಕಾಂಪೌಂಡ್‌ನಲ್ಲಿಯೇ ಮಲ್ಲಿಕಾರ್ಜುನ ಮನ್ಸೂರ ಹಾಗೂ ಅವರ ಸಹಧರ್ಮಿಣಿಯ ಸಮಾಧಿ ಇದೆ. ಪ್ರತಿವರ್ಷ ಡಿಸೆಂಬರ್ 12ಕ್ಕೆ ಅಲ್ಲಿ ಸಂಸ್ಕೃತಿ ಇಲಾಖೆಯ ಪರವಾಗಿ ಶ್ರದ್ಧಾಂಜಲಿ ಅರ್ಪಿಸಲಾಗುತ್ತದೆ.

ಇಂತಹ "ಗಾಣ್ಯಾತ ರಾಹಣಾರ ಮಾಣೂಸ"ದ ಹತ್ತನೇ ಪುಣ್ಯಸ್ಮರಣೆ 2002ರಂದು ಮುಂಬಯಿ ಕರ್ನಾಟಕ ಸಂಘದ ಕಲಾಭಾರತಿಯಲ್ಲಿ ಅವರಿಗೆ ಭಾವಪೂರ್ಣ ರೀತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಒಬ್ಬ ಅಜ್ಞಾತ ವ್ಯಕ್ತಿಯ ದತ್ತಿ! ಮುಂಬಯಿಯಲ್ಲಿ ಎಂದೂ ಹಾಡದ ಆದರೆ ಮಲ್ಲಿಕಾರ್ಜುನ ಮನ್ಸೂರರೆಡೆ ಏಕಲವ್ಯ ಪದ್ಧತಿಯಿಂದ ಶಾಸ್ತ್ರೀಯ ಸಂಗೀತವನ್ನು ಕಲಿತ ಘಾಂಗ್ರೇಕರ ಬುವಾ, ಕೃಷ್ಣರಾವ್ ಫುಲಂಬ್ರಿಕರ ಮತ್ತು ವಝೆ ಬುವಾ ಬಳಿ ಕಲಿತ ಮೋಹನ ಕರ್ವೆ ಮತ್ತು ಅವರ ಮಗಳಾದ ಖ್ಯಾತ ಗಾಯಕಿ ಮಂಜಿರಿ ಅಲೆಗಾಂವಕರ ಅವರ ಕಚೇರಿ ಅದ್ದೂರಿಯಾಗಿ ನಡೆಯಿತು. ಇಬ್ಬರ ಸಂಗೀತವೂ ಅಮೋಘವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಕಳೆದ ಒಂಬತ್ತು ವರ್ಷಗಳಿಂದ ಪ್ರತಿವರ್ಷ ಕರ್ನಾಟಕ ಸಂಘವು, ಕರ್ನಾಟಕದ ಹಿರಿಯ ಕಲಾಕಾರರನ್ನು, ಸಂಗೀತದಲ್ಲಿಯೇ ಬಾಳಿ ಬದುಕಿ, ಅಸುನೀಗಿದ ಮಹಾತ್ಮರನ್ನು ನೆನಪಿಸುತ್ತದೆ. 'ಇದು ಮನ್ಸೂರರಿಗೆ ತಕ್ಕ ಶ್ರದ್ಧಾಂಜಲಿ' ಎಂದು ಹೇಳಿದವರು ಖ್ಯಾತ ಗಾಯಕಿ ಅಶ್ವಿನಿ ಭಿಡೆ ದಂಪತಿ ಮತ್ತು ಖ್ಯಾತ ಸಂಗೀತ ದಂಪತಿ ಆರತಿ ಟಿಕೇಕರ್ ಅವರು.

*****

7.6

ಗಂಗೂಬಾಯಿ ಹಾನಗಲ್: ಮುಸ್ಸಂಜೆ ಇನ್ನೂ ಬಂದಿಲ್ಲ

"ಇವತ್ತು ನಾನು 88 ವರ್ಷದವಳಾದೆ. ಆಯುಷ್ಯದ ಮುಸ್ಸಂಜೆ ನಿಮಗೆ ಹೇಗೆನಿಸುತ್ತದೆ ಎಂದು ಜನರು ನನಗೆ ಆಗೊಮ್ಮೆ ಈಗೊಮ್ಮೆ ಕೇಳುತ್ತಿರುತ್ತಾರೆ. ಇಂತಹ ಪ್ರಶ್ನೆಗಳನ್ನು ಕೇಳಿ ನನಗೆ ಒಮ್ಮೊಮ್ಮೆ ಸಿಟ್ಟು ಬರುತ್ತದೆ. ಹಾಡು ನನ್ನ ಹೃದಯದಲ್ಲಿದೆ, ಸಂಗೀತವೇ ನನ್ನ ಚೈತನ್ಯ. ಯಾವ ದಿವಸ ನನ್ನ ಹಾಡು ನಿಲ್ಲುತ್ತದೆಯೋ ಆ ದಿನ ನನ್ನ ಆಯುಷ್ಯದ ಸಾಯಂಕಾಲ ಆಗಬಹುದು. ನಾನು ಆ ಸಾಯಂಕಾಲದ ವಿಚಾರವನ್ನೇ ಮಾಡುವುದಿಲ್ಲ. ನನ್ನ ಇಡೀ ಆಯುಷ್ಯವು ಸಂಗೀತಕ್ಕೆ ಮುಡುಪಾಗಿದೆ. ಹದಿಮೂರನೇ ವಯಸ್ಸಿನಿಂದ ನಾನು ಹಾಡುತ್ತಿದ್ದೇನೆ. ನನ್ನ ಸಂಗೀತದ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಹತ್ತು ಹದಿನೈದು ದಿವಸ ಮನೆ ಬಿಟ್ಟು ನಾನು ಎಲ್ಲೂ ಹೋಗಿಲ್ಲ ಅನ್ನೊ ಹಾಗಿಲ್ಲ. ಉದ್ಘಾಟನೆಗಾಗಿ, ಪ್ರಮುಖ ಅತಿಥಿಯೆಂದು, ಇಲ್ಲವೇ ಹಾಡಲು ನನಗೆ, ಸತತವಾಗಿ ಆಮಂತ್ರಣಗಳು ಬರುತ್ತಿರುತ್ತವೆ. ನಾನು ಸಾಮಾನ್ಯವಾಗಿ ಆಮಂತ್ರಣಗಳನ್ನು ನಿರಾಕರಿಸುವದಿಲ್ಲ, ಏಕೆಂದರೆ ಸಂಗೀತವೇ ನನ್ನ ಜೀವನ.

ನಾವು ಮೂಲತ: ಧಾರವಾಡ ಜಿಲ್ಲೆಯ ಹಾನಗಲ್ಲದವರು. 1857ರ ಸ್ವಾತಂತ್ರ್ಯ ಯುದ್ಧದ ಕಾಲ. ಹಾವೇರಿ ಹತ್ತಿರ ಒಬ್ಬ ಬಿಳಿಯ, ಕುದುರೆ ಸವಾರ ಫೌಜದಾರನು ನನ್ನ ಅಜ್ಜಿಯನ್ನು ಅಟ್ಟಿಸಿಕೊಂಡು ಹೋದ. ನನ್ನ ಅಜ್ಜಿಯ ಹೆಸರು ಕೂಡ ಗಂಗೂಬಾಯಿ. ಅವನ ಕಣ್ಣು ತಪ್ಪಿಸಿ ಹುಬ್ಬಳ್ಳಿ ಸೇರಿದರು. ಅವರು ಕೂಡ ಉತ್ತಮವಾಗಿ ಹಾಡುತ್ತಿದ್ದರು. ನಾವು ಜಾತಿಯಿಂದ ಅಂಬಿಗರು. ಮೀನು ತಿನ್ನುವವರು ಬೇರೆ ಮತ್ತು ದೋಣಿ ನಡೆಸುವವರು ಬೇರೆ. ನಮ್ಮ ತಂದೆ ಬ್ರಾಹ್ಮಣ ನಾಡಿಗೇರ್, ಹೀಗಾಗಿ ಬ್ರಾಹ್ಮಣರ ಸಂಸ್ಕಾರಗಳು ನಮ್ಮ ಮೇಲೆ ಬಿದ್ದಿದ್ದವು. ಧಾರವಾಡದ ಶುಕ್ರವಾರ ಪೇಠೆಯಲ್ಲಿ ನಾವು ವಾಸಿಸುತ್ತಿದ್ದೆವು. ಚಿಕ್ಕವರಿದ್ದಾಗ ನಾವು ಎಲೆಹಚ್ಚುವದು, ಮುರಬ್ಬಾ ಹಾಕೋದು, ಉಪ್ಪಿನಕಾಯಿ ಮತ್ತು ಹಪ್ಪಳ ಸಂಡಿಗೆ ಮಾಡಿದ್ದು ಈಗಲೂ ನೆನಪಾಗುತ್ತದೆ. ನನ್ನ ತಾಯಿ ಅಂಬಾಬಾಯಿ ತುಂಬ ಚೆನ್ನಾಗಿ ಹಾಡುತ್ತಿದ್ದರು, ಸ್ಪಷ್ಟ ಉಚ್ಚಾರ, ಸುಮಧುರ ಕಂಠ, ದೇವರ ದೇಣಿಗೆಯೇ ಆಗಿತ್ತು ಅವರಿಗೆ. ಅವರು ಕರ್ನಾಟಕಿ ಪದ್ಧತಿಯಲ್ಲಿ ಹಾಡುತ್ತಿದ್ದರು. ಹರಪನಹಳ್ಳಿಯ ಇಮಾಮ ಸಾಹೇಬರಿಂದ ಅವರು ಸಂಗೀತ ಕಲಿತಿದ್ದರು. ನನ್ನತಾಯಿ, 'ಜಾವಳಿ'ಗಳನ್ನು ತುಂಬ ಚೆನ್ನಾಗಿ ಹಾಡುತ್ತಿದ್ದರು.ಅವರ ಹಸ್ತಾಕ್ಷರ ಕೂಡ ಸುಂದರವಾಗಿತ್ತು. ಅವರ ಹಸ್ತಾಕ್ಷರದ ಪುಸ್ತಕಗಳನ್ನು ನಾನು ಸುರಕ್ಷಿತವಾಗಿ ಬಚ್ಚಿಟ್ಟಿದ್ದೇನೆ.

ನನ್ನ ಅಜ್ಜಿಯ ಮತ್ತು ಅಮ್ಮನ ನೆನಹುಗಳು ನನ್ನನ್ನು ಸದಾ ಕಾಡುತ್ತಿರುತ್ತವೆ. ನನ್ನ ಅಮ್ಮ ತನ್ನ 34 ನೇ ವಯಸ್ಸಿಗೆ ತೀರಿಕೊಂಡರು. ನನ್ನ ಅಮ್ಮನ ಗುರು ಇಮಾಮ ಸಾಹೇಬರು ಅಮ್ಮನಿಗೆ ಕಲಿಸಲು ಮನೆಗೇ ಬರುತ್ತಿದ್ದರು. ಆಗ ನನಗೆ ಬರೀ 5 ವರ್ಷ. ಜಲಸಾದ (ಮೆಹಫಿಲ್, ಸಂಗೀತ ಕಾರ್ಯಕ್ರಮ) ವೇಳೆಯಲ್ಲಿ ಗುರೂಜೀ ನಮ್ಮ ಮನೆಯಲ್ಲಿಯೇ ಊಟ ಮಾಡುತ್ತಿದ್ದರು. ಅವರಿಗೆ ಮನೆಯ ಹೊರಗೆ ಊಟ ಬಡಿಸುತ್ತಿದ್ದರು ಮತ್ತು ನಾವೆಲ್ಲ ಒಳಗೆ ಅಡಿಗೆ ಮನೆಯಲ್ಲಿ ಕುಳಿತು ಊಟ ಮಾಡುತ್ತಿದ್ದೆವು. ನನಗೆ ಇದೆಲ್ಲ ಹಿಡಿಸುತ್ತಿರಲಿಲ್ಲ. ಅವರು ಗುರುಗಳಾದರೂ ಅವರಿಗೆ ಈ ತರಹದ ವರ್ತನೆ ಏಕೆ? ಆದರೆ ಅದಕ್ಕೆ ಮನೆಯವರಿಂದ ಉತ್ತರ ಸಿಕ್ಕಿದ್ದು, 'ನಾವು ಉಚ್ಚ ಮನೆತನದವರು' ಎಂದು. ಆಗ ಅಂತಹ ಸಾಮಾಜಿಕ ವಾತಾವರಣವಿತ್ತು. ಈಗ ಕಾಲ ಬದಲಾಗಿದೆ. ಆದರೆ ಆಗ ನನಗೆ ಈ ವಿಷಯದಿಂದ ಬಹಳ ಬೇಜಾರಾಗುತ್ತಿತ್ತು. ನಮ್ಮ ಕಿರಾಣಾ ಘರಾಣೆಯ (ಕುಟುಂಬದ) ಮೂಲ ಪ್ರವರ್ತಕರಾದ ಖಾನಸಾಹೇಬ ಅಬ್ದುಲ್ ಕರೀಂಖಾನರಿಗೆ ನನ್ನ ಅಮ್ಮನ ಹಾಡುಗಳು ತುಂಬ ಸೇರುತ್ತಿದ್ದವು. ಚಿಕ್ಕವರಿದ್ದಾಗಿನ ಒಂದು ಪ್ರಸಂಗ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ. ನನ್ನ ಅಮ್ಮ ನನ್ನನ್ನು ಗುರುಗಳ ಎದುರು ಕೂರಿಸಿ ಹಾಡಲು ಹೇಳಿದರು. ಆಗ ನಾನು ತುಂಬ ಚಿಕ್ಕವಳೇ, ಆದರೂ ಯಾವ ಭಯಭೀತಿ ಇಲ್ಲದೇ ಹಾಡಿ ತೋರಿಸಿದೆ. ನನ್ನ ಹಾಡು ಕೇಳಿ ನನಗೆ ಅವರು ಹೇಳಿದರು, "ನಿನ್ನ ಕಂಠ ಚೆನ್ನಾಗಿದೆ. ತುಂಬ ಹಾಡು, ತುಂಬ ತಿನ್ನು". ನಾನು ಆಗ ತುಂಬ ಅಶಕ್ತಳಾಗಿದ್ದೆ.

ನನ್ನ ಆಯುಷ್ಯದ ಮೊದಲ ಕಾರ್ಯಕ್ರಮ ನನಗೆ ಈಗಲೂ ನೆನಪಿನಲ್ಲಿದೆ. 1924 ರಂದು ಬೆಳಗಾವಿನಲ್ಲಿ ಕಾಂಗ್ರೆಸ್ ಅಧಿವೇಶನವಿತ್ತು. ನಾನಾಗ 11 ವರ್ಷದವಳಿರಬೇಕು. ಆ ಅಧಿವೇಶನದಲ್ಲಿ ನಾನು ಸ್ವಾಗತಗೀತೆ ಹಾಡಿದೆ. ಅಮ್ಮನ ನಂತರ ನಾನು ಹುಲಗೂರ ಕೃಷ್ಣಾಚಾರ್‌ವರಲ್ಲಿ ಸಂಗೀತ ಕಲಿತೆ. ನನ್ನಮ್ಮ ಕಲಿಸಿದ ಕೆಲವು ಕರ್ನಾಟಕಿ ರಾಗಗಳನ್ನು ನಾನು ಯುಗಲಗೀತೆಗಳಲ್ಲಿ ಉಪಯೋಗಿಸಿದ್ದೇನೆ. ಜಿ.ಎನ್ ಜೋಶಿಯವರೊಂದಿಗೆ* ಈ ಯುಗಲಗೀತೆಗಳನ್ನು ನಾನು ಹಾಡಿದ್ದೇನೆ. ಹುಲಗೂರ ಗುರೂಜಿಗಳ ತರುವಾಯ ದತ್ತೋಪಂತ ದೇಸಾಯಿಯವರು ನನಗೆ ಎರಡು ವರ್ಷಗಳಲ್ಲಿ 60 ಚೀಸ್ (ಹಾಡು) ಮತ್ತು 15 ರಾಗಗಳನ್ನು ಕಲಿಸಿದರು! ದತ್ತೋಪಂತರೇ ನನಗೆ ಮುಂದೆ ರಾಮಭಾವು ಕುಂದಗೋಳಕರ ಉರ್ಫ ಸವಾಯಿ ಗಂಧರ್ವರಲ್ಲಿ ಕಲಿಯಲು ಪ್ರೋತ್ಸಾಹಿಸಿದರು. ಅಷ್ಟರಲ್ಲಿ ನಾನು ಗಾಯಿಕೆಯೆಂದು ಹೆಸರು ಗಳಿಸಿದ್ದೆ. ಸವಾಯಿ ಗಂಧರ್ವರ ಶಿಷ್ಯೆಯೆಂದಲ್ಲ! ಒಂದು ಸಲ ಅವರ ಶಿಷ್ಯತ್ವ ಪಡೆದ ನಂತರ ನನಗೆ ಪ್ರಸಿದ್ಧಿ ಸಿಗುವ ತನಕ ನಾನು ಹಲವು ಸಲ ಲಘುಸಂಗೀತವನ್ನು ಹಾಡಿದ್ದೇನೆ. ಭಜನೆಗಳನ್ನು ಕೂಡ ಹಾಡಿದ್ದೇನೆ. ಒಮ್ಮೊಮ್ಮೆ ನನಗೆ ಠುಮರಿ ಹಾಡಲು ಇಲ್ಲವೇ ಭಜನ ಹಾಡಲು ಬೇಡಿಕೆಗಳು ಬರುತ್ತವೆ. ಆದರೆ ಮೋಜಿನ ಮಾತೆಂದರೆ, ನನ್ನ ಆದ್ಯತೆ ಖಯಾಲ್‌ನ್ನೇ ಹಾಡುವದು. ನಿಜ ಹೇಳಬೇಕೆಂದರೆ, ಭಜನೆ ಅಥವಾ ಠುಮರಿ ನನಗೆ ಪ್ರೇರಣೆ ಕೊಡುವದಿಲ್ಲ. ಪ್ರತಿದಿನ ಸೋದರತ್ತೆಯ ಜೊತೆ ಕುಂದಗೋಳಕ್ಕೆ ಕಲಿಯಲು ಬರುತ್ತಿದ್ದೆ. ಪೂರಿಯಾ ರಾಗವನ್ನು ಒಂದು ವರ್ಷದ ತನಕ ನಾನು ಕಲಿತೆ. ಅದು ಒಂದು ತಪಶ್ಚರ್ಯವೇ ಸರಿ. ಖಯಾಲ್‌ದ ಅಭ್ಯಾಸಕ್ಕೆ ಅಡಿಗಲ್ಲು ಹಾಕುವ ಕಾಲವಾಗಿತ್ತದು.

ಮುಂದೆ ಯಮನ, ಭೈರವ, ಮಲ್ಹಾರ, ತೋಡಿ ಇತ್ಯಾದಿ ರಾಗಗಳನ್ನು ಹಾಡಲು ಕಲಿತೆ. ಗುರೂಜಿಯವರಿಂದ ಕಲಿಯುವ ಮುಂಚೆ ನಾನು ರೇಡಿಯೋ ಸ್ಟಾರ್ ಆಗಿದ್ದೆ. ನನ್ನ ಮೊದಲ ಕಾರ್ಯಕ್ರಮದ ನೆನಪು ಬಹಳ ಮೋಜಿನದಿದೆ. ಒಂದು ಸಲ ಹೀರಾಬಾಯಿ ಬಡೋದೆಕರ ರೇಡಿಯೊನಲ್ಲಿ ಹಾಡುವವರಿದ್ದರು. ಆದರೆ ಯಾವುದೋ ಕಾರಣಕ್ಕಾಗಿ ಅವರಿಗೆ ಬರಲು ಆಗಲಿಲ್ಲ. ಅವರ ಬದಲಾಗಿ ಅದು ನನ್ನ ಕಾರ್ಯಕ್ರಮವಾಯಿತು. ಹೋಗಿ ಬರುವ ಖರ್ಚು ಕೂಡಿ ನನಗೆ 75ರೂ.ಸಿಕ್ಕಿತು. ಅದೇ ವೇಳೆಗೆ ನರಗೀಸ ಅವರ ತಾಯಿ ಜದ್ದನಬಾಯಿ ಮತ್ತು ಬೋರಾಲ್ ಸಾಹೇಬರು ನನಗೆ ಕಲಕತ್ತಾ ಸಂಗೀತ ಸಭೆಗೆ ಬರಲು ಒತ್ತಾಯಿಸಿದರು. ನಾನು ಹೊಸಬಳಾಗಿದ್ದೆ, ಆದರೂ ಕಲಕತ್ತೆಗೆ ಹೋದೆ. ನನಗೆ ಕೊಟ್ಟಿರುವ ವೇಳೆ ಬರೀ 15 ನಿಮಿಷ ಅಷ್ಟೇ. ಆದರೆ ನಾನು 30 ನಿಮಿಷ ಹಾಡಿದೆ. ತ್ರಿಪುರಾದ ರಾಜರ ಕಡೆಯಿಂದ ನನಗೆ ಒಂದು ಸುವರ್ಣಪದಕ ಬಹುಮಾನ ಸಿಕ್ಕಿತು. ಆ ದಿನ ಅಮ್ಮನ ನೆನಪಾಗಿ ನಾನು ಅಳುತ್ತಲೇ ಇದ್ದೆ. ಮತ್ತು ಅದೇ ಹೊತ್ತಿಗೆ 'ನಿನ್ನ ಧ್ವನಿ ತುಂಬ ಲಯಬದ್ಧವಾಗಿದೆ, ಹಾಡು ಬಹಳ ಸುಂದರವಾಗಿ ಹಾಡಿದ್ದಿಯಾ' ಎಂದು ಕೆ.ಎಲ್ ಸೈಗಲ್ ನನಗೆ ಹೇಳುವದನ್ನೂ ಕೇಳುತ್ತಲೇ ಇದ್ದೆ. ಅವರು ನನನ್ನು ಪ್ರಶಂಸೆ ಮಾಡುತ್ತಲೇ ಇದ್ದರು.

ಹಾಡಲು ನಾನು ಎಲ್ಲೆಲ್ಲಿ ಹೇಗೆಹೇಗೆ ಪರದಾಡಿದೆ ಎಂಬುದನ್ನು ನೆನೆಸಿಕೊಂಡರೆ ನನಗೇ ಆಶ್ಚರ್ಯವಾಗುತ್ತದೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ನನ್ನ ಸಂಗೀತದ ಕಾರ್ಯಕ್ರಮಗಳು ಪೇಶಾವರ, ಲಾಹೋರ, ಜಲಂಧರ ಈ ಎಲ್ಲ ಪಟ್ಟಣಗಳಲ್ಲಿ ಆಗುತ್ತಿದ್ದವು. ಭಾರತದಲ್ಲಿ ಎಲ್ಲೆಲ್ಲಿ ಕಾರ್ಯಕ್ರಮಗಳು ಆಗುತ್ತವೆಯೋ ಅಲ್ಲೆಲ್ಲ ನಾನು ಹೋಗಿ ಬಂದಿದ್ದೇನೆ. ನನ್ನ ಸಂಗಡ ಓಂಕಾರನಾಥ ಠಾಕೂರ್, ಫಯ್ಯಾಜ್ ಖಾನ್ ಇತ್ಯಾದಿ ಶ್ರೇಷ್ಠ ಕಲಾವಿದರು ಇರುತ್ತಿದ್ದರು. ಅವರೊಂದಿಗೆ ಫ್ರಾನ್ಸ್, ಅಮೇರಿಕಾ, ಕೆನಡಾ ಈ ಎಲ್ಲ ದೇಶಗಳಲ್ಲಿ ನನ್ನ ಅನೇಕ ಕಾರ್ಯಕ್ರಮಗಳು ಆದವು. ಹೀಗೆ ಸಂಗೀತದಿಂದ ನನ್ನ ಆಯುಷ್ಯ ಸಮೃದ್ಧವಾಯಿತು.

ಗುರೂಜಿಯವರು (ಸವಾಯಿ ಗಂಧರ್ವರು) ನನಗೆ ಮೂರು ದಿನಗಳಲ್ಲೇ ಮಾರುಬಿಹಾಗ ರಾಗವನ್ನು ಕಲಿಸಿದರು. ಅವರಿಗೆ ಅರ್ಧಾಂಗವಾಯೂ ಹೊಡೆದಿತ್ತು, ಆದರೂ ನಾನು ಅವರಿಂದ ಕಲಿಯಲು ಹೋಗುತ್ತಿದ್ದೆ. ಆ ಅವಸ್ಥೆಯಲ್ಲಿಯೂ ಕೂಡ ಅವರು ನನಗೆ ರಾಗ ಕಲಿಸಿದರು. ಮೂರನೇ ದಿನ ನಾನು ಹೋದಾಗ ಗುರೂಜಿ ಹೊರಗೆ ಬರಲೇ ಇಲ್ಲ. ಒಂದೆರಡು ತಾಸಿನನಂತರ ಗುರುಮಾಯಿ (ಅವರ ಹೆಂಡತಿ) ಅವರಿಗೆ ನಾನು ಬಂದದ್ದು ನೆನಪಿಸಿದರು. ಆಗ ಅವರು ಒಳಗಿನಿಂದಲೇ ಕೂಗಿ ಹೇಳಿದರು, "ಅವಳಿಗೆ ಮಾರುಬಿಹಾಗ ರಾಗ ಬರುತ್ತದೆ. ಮುಂದೆ ಕಲಿಸುವ ಅವಶ್ಯಕತೆ ಇಲ್ಲ." ನಮ್ಮ ಗುರುಗಳಿಗೆ ಮಾತು ಕಡಿಮೆ. ಕೆಲವೇ ತಿಂಗಳಲ್ಲಿ ಅವರು ತೀರಿಕೊಂಡರು. ನನಗೆ ಅವರಷ್ಟು ಎತ್ತರಕ್ಕೆ ಏರಲು ಸಾಧ್ಯವಾಯಿತೋ ಇಲ್ಲವೋ ಗೊತ್ತಿಲ್ಲ. ಈ ವಯಸ್ಸಿನಲ್ಲಿಯೂ ನಾನು ಗುರುಸೇವೆಯನ್ನು ಬಿಟ್ಟುಕೊಟ್ಟಿಲ್ಲ. ಕುಂದಗೋಳದಲ್ಲಿ ಅವರ 'ಸ್ಮೃತಿದಿನ' ಕಾರ್ಯಕ್ರಮವನ್ನು ನಾವು ಮಾಡುತ್ತೇವೆ. ಮಹಾರಾಷ್ಟ್ರ ಮತ್ತು ಕರ್ನಾಟಕದಿಂದ ಅನೇಕ ನವೋದಿತ ಹಾಗೂ ಹೆಸರು ಗಳಿಸಿದ ಕಲಾವಿದರು ಮತ್ತು ವಾದಕರು ಇಲ್ಲಿ ಭಾಗವಹಿಸುತ್ತಾರೆ. ಮೆಹಫಿಲ್ಲು ರಾತ್ರಿ ಶುರುವಾಗಿ ಮಾರನೇ ದಿನ

ಮಧ್ಯಾಹ್ನದ ತನಕ ನಡೆಯುತ್ತದೆ. ಪಕ್ಕದ ಹಳ್ಳಿಪಳ್ಳಿಗಳಿಂದ ಜನರು ಸಂಗೀತ ಕೇಳಲು ಕಿಕ್ಕಿರಿದು ಬರುತ್ತಾರೆ.

ಹಣದ ಅಗತ್ಯ ಎನಿಸಿದಾಗ ಮುಂಬಯಿಗೆ ಗಣೇಶೋತ್ಸವದ ನಿಮಿತ್ತ ಹೋಗುತ್ತಿದ್ದೆವು. ಮುಂಬಯಿಯಲ್ಲಿ ನಾನು ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದೇನೆ. ಒಂದು ಕಾರ್ಯಕ್ರಮದಲ್ಲಿ ಸವಾಯಿ ಗಂಧರ್ವರು ಹಾಡುವರಿದ್ದರು. ತಮ್ಮ ಪ್ರಕೃತಿ ಚೆನ್ನಾಗಿರದಿದ್ದ ಕಾರಣ ಅವರು ನನಗೆ ಹಾಡಲು ಹೇಳಿದರು. ನಾನಾಗ ಹೊಸಬಳಾಗಿದ್ದೆ, ಹೀಗಾಗಿ ತಯಾರಿ ಆಗಿರಲಿಲ್ಲ. ಸಂಯೋಜಕರು ಬೇಗಿಗ್ಗೆ 'ಸವಾಯಿ ಗಂಧರ್ವರು ಹಾಡುವುದಿಲ್ಲ ಮತ್ತು ಗಂಗೂಬಾಯಿ ಹಾಡುತ್ತಾರೆ' ಎಂದು ಪ್ರಕಟಿಸಿ ಬಿಟ್ಟರು. ನಾನು 'ಮಿಯಾಕಿ ತೋಡಿ' ರಾಗವನ್ನು ಹಾಡಿದೆ. ಹಾಡು ಮುಗಿಯುವಾಗ ನನಗೆ ಗುರೂಜಿ ಕಂಡರು. ಅವರಿಗೆ ನಾನು ಹಾಡಿದ್ದು ಸೇರಿತು ಎಂದು ಅನಿಸಿತು. ಗುರುಗಳ ಬದಲಿಗೆ ನಾನು ಹಾಡಿದ್ದರಿಂದ ನಾನು ಸಂಯೋಜಕರಿಂದ ಹಣ ತೆಗೆದುಕೊಳ್ಳಲಿಲ್ಲ. ಒಂದು ಸಲ ನಾನು ಆಲ್ ಇಂಡಿಯಾ ರೇಡಿಯೋದಲ್ಲಿ ರಾಗ 'ಭಿಭಾಸ್' ಹಾಡಿದೆ, ಮತ್ತು ಮಾರನೇ ದಿನ ಕಲಿಯಲು ಗುರೂಜಿಯಲ್ಲಿ ಹೋದಾಗ ಅವರು ಕೇಳಿದರು "ನೀನು ರೇಡಿಯೊದಲ್ಲಿ ಹಾಡುತ್ತಿ ಎಂದು ನನಗೇಕೆ ಹೇಳಲಿಲ್ಲ? ನೀನು ತಪ್ಪು ಸ್ವರ ಹಿಡಿದೆ. ಭಿಭಾಸದಲ್ಲಿ ಶುದ್ಧ ಧೈವತ್ ಹಚ್ಚುವುದಿಲ್ಲ ತೀವ್ರ ಧೈವತ್ ಹಚ್ಚುತ್ತಾರೆ. ಈಗ ಶ್ರೋತೃಗಳು, 'ಗುರೂಜಿಯವರು ನಿನಗೆ ಸರಿಯಾಗಿ ಕಲಿಸಲಿಲ್ಲ' ಎಂದು ಅಂದಾರು" ಎಂದರು.

ನನ್ನ ಗುರುಗಳು 'ಪೂರಿಯಾ' ರಾಗವನ್ನು ಒಂದು ಗಂಟೆಗಿಂತ ಹೆಚ್ಚು ಹಾಡುತ್ತಾರೆ ಎಂಬ ನೆನಪು ನನಗೆ. ಅದೇ ತರಹ ಬಡೆ ಗುಲಾಮ್ ಅಲಿ ಖಾನ್ ಸಾಹೇಬರ ಮುಂಬಯಿಯಲ್ಲಿಯ ಲಕ್ಷ್ಮೀಬಾಗದ ಮೆಹಫಿಲ್ಲು ಕೂಡ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿದೆ. 1938–39ರ ಸಂಗತಿ ನಾನು ಮುಂಬಯಿಗೆ ಒಂದು ಕಾರ್ಯಕ್ರಮಕ್ಕೋಸ್ಕರ ಗುರೂಜಿಯವರೊಂದಿಗೆ ಬಂದಿದ್ದೆ. ಫಯ್ಯಾಜ್ ಖಾನ್ ಸಾಹೇಬರ ಕಚೇರಿ ಕೇಳಲು ಗುರುಜೀ ನನ್ನನ್ನು ಕಳಿಸಿದರು. ತಿರುಗಿ ಬಂದಮೇಲೆ ನನಗೆ ಗುರೂಜಿ, ಫಯ್ಯಾಝ್ ಖಾನ್ ಸಾಹೇಬರ ಹಾಡುಗಾರಿಕೆ ಹೇಗಿತ್ತು? ಎಂದು ಕೇಳಿದರು. ನನಗೆ ಅಷ್ಟು ಹಿಡಿಸಲಿಲ್ಲವೆಂದು ಹೇಳಿದೆ. ಏಕೆ ಎಂದು ನನ್ನ ಮೇಲೆ ಸಿಟ್ಟಾದರು. ನಾನೆಂದೆ, ಅವರು ಹಾಡುವಾಗ ಸಿಗರೆಟ್ಟು ಸೇದುತ್ತ ಹಾಡುತ್ತಾರೆ. ಅಷ್ಟೇ ಅಲ್ಲ ಒಂದು ತಾನು ಆದ ಮೇಲೆ ಆ ಸಿಗರೇಟನ್ನು ಶಿಷ್ಯರಿಗೆ ಕೊಟ್ಟು, ಮತ್ತೆ ಹಾಡುವದು. ಇದು ಸತತವಾಗಿ ನಡೆಯುತ್ತಿತ್ತು. ನನಗದು ಸೇರಲಿಲ್ಲವೆಂದೆ. ಆಗ ನನಗೆ ಗುರುಗಳು ಹೇಳಿದರು, "ಹಾಡಿನ ಕಡೆಗೆ ಲಕ್ಷವಿರಬೇಕು. ಅದು ಮಹತ್ವದ್ದು!"

ನನ್ನ ಆಯುಷ್ಯವು ಮೆಹಫಿಲ್ಲುಗಳಲ್ಲೇ (ಸಂಗೀತ ಕಾರ್ಯಕ್ರಮಗಳಲ್ಲೇ)ಕಳೆದು ಹೋಯಿತು. ರಾತ್ರಿ ಆದ ಕ್ಷಣ ನಮ್ಮ ದಿನ ಪ್ರಾರಂಭವಾಗುತ್ತದೆ. ಅನೇಕ ಮೆಹಫಿಲ್ಲುಗಳು ರಂಗೇರಿದ್ದವು. ಈ ರಂಗೇರಿದ ಮೆಹಫಿಲ್ಲುಗಳಿಂದ ನನ್ನ ಜೀವನದ ಕೆಲವು ಕ್ಷಣಗಳು ಆನಂದದಿಂದ ಕಳೆದವು. ಒಮ್ಮೆ ನನ್ನಮ್ಮನ ಹತ್ತಿರ ಕುಳಿತು ನಾನು ಒಂದುವರೆ ಗಂಟೆ ಹಾಡಿದೆ. ಅವರಿಗೆ ಬಹಳ ಆನಂದವಾಯಿತು. ಅವರ ಮುಖದಮೇಲಿನ ಆನಂದ

ನನಗೆ ಇವತ್ತಿಗೂ ಕಾಣುತ್ತದೆ. ಅಮ್ಮ ನನಗೆ ಹೇಳಿದರು. 'ನೀನು ಹೀಗೆಯೇ ಹಾಡುತ್ತಾ ಇರು. "ನನಗೋಸ್ಕರ ನೀನು ಹಾಡು" ಬಹುಶ: ನಾನು ಭಾವಸಮಾಧಿಯಲ್ಲಿ ಹಾಡುತ್ತಿದ್ದಿರಬೇಕು. ಮುಂಬಯಿಯಲ್ಲಿಯ ಒಂದು ಮೆಹಫಿಲಿ ನೆನಸಿದರೆ ಈಗಲೂ ಅದು ನನ್ನನ್ನು ಅಸ್ವಸ್ಥಮಾಡುತ್ತದೆ. ನನ್ನ ಪತಿಯ ಆರೋಗ್ಯ ಅತ್ಯಂತ ಕೆಟ್ಟಿತ್ತು. ಅವರ ವ್ಯವಸಾಯ ನಿಂತು ಹೋಗಿತ್ತು. ಆರ್ಥಿಕ ಅಡಚಣೆಗಳು ಸತತವಾಗಿ ಬರತೊಡಗಿದವು. ಮುಂಬಯಿಯಿಂದ ನನಗೆ ಮೆಹಫಿಲಿಯ ಆಮಂತ್ರಣ ಬಂದಿತ್ತು. ನಾನು ಕೃಷ್ಣಾ (ಮಗಳು) ಮತ್ತು ಶೇಷಣ್ಣನವರನ್ನು ಕರೆದುಕೊಂಡು ಹೋದೆ. ಆ ದಿವಸ ಹಾಡಿದ ನನ್ನ ಗಾಯನಕ್ಕೆ ಬಹಳ ಪ್ರಶಂಸೆ ಸಿಕ್ಕಿತು. ನಾನು ಹಾಡುತ್ತಿರುವಾಗಲೇ ನನ್ನ ಪತಿ ತೀರಿಕೊಂಡ ತಾರು ಮುಂಬಯಿಗೆ ಸೇರಿತ್ತು. ಆದರೆ ಯಾರೂ ನನಗೆ ಆ ಸುದ್ದಿಯನ್ನು ತಿಳಿಸಲಿಲ್ಲ. ಪ್ರವಾಸದಲ್ಲಿ ನಾನು ಅಳುತ್ತ ಹೋಗುವೆನೆಂದು ಯಾರೂ ಬಾಯಿಬಿಡಲಿಲ್ಲ. ಹುಬ್ಬಳಿಗೆ ಬೆಳಿಗ್ಗೆ ಹೋಗಿ ಮುಟ್ಟಿದೆ. ನನ್ನ ಮಗ ಬಾಬು ಎಲ್ಲೂ ಕಾಣಿಸಲಿಲ್ಲ, ಆಗಲೇ ನನಗೆ ಅನಿಸಿತು 'ಎಲ್ಲ ಮುಗಿದು ಹೋಯಿತು' ಎಂದು. ನನಗೆ ಎಲೆ ತಿನ್ನುವ ಮತ್ತು ಹೂ ಮುಡಿದುಕೊಳ್ಳುವ ಭಾರಿ ಚಟವಿತ್ತು. ಆ ದಿನದಿಂದ ಎಲೆ ಅಡಿಕೆ ಮತ್ತು ಹೂ ಮುಡಿಯುವದನ್ನು ಬಿಟ್ಟುಬಿಟ್ಟೆ. ಅದೇ ವೇಳೆಗೆ ರೇಡಿಯೋ ಕಾರ್ಯಕ್ರಮದ ನಿಮಂತ್ರಣ ಬಂದಿತು. ನಾನು ಕಾರ್ಯಕ್ರಮ ಬಿಟ್ಟುಬಿಡುವವಳಿದ್ದೆ. ಆದರೆ ನಾನು ಮುಂದೇನು ಮಾಡುವದು? ಎಂಬ ವಿಚಾರ ಮನದಲ್ಲಿ ಸುಳಿಯತೊಡಗಿತು. ಹಾಡನ್ನು ಬಿಟ್ಟರೆ ಇನ್ನೇನು ಮಾಡುವವಳಿದ್ದೆ? ನನ್ನ ದುಃಖ ಮನಸ್ಸಿನಲ್ಲಿಯೇ ಇಟ್ಟುಕೊಂಡು ನಾನು ಆ ಕಾರ್ಯಕ್ರಮಕ್ಕೆ ಹೋದೆ.

ಕುಂದಗೋಳದ ಉತ್ಸವದಲ್ಲಿ ನಾನು ಆರಾರು ಗಂಟೆ ಇತರರು ಹಾಡಿದ ಹಾಡು ಕೇಳುತ್ತೇನೆ. ನನ್ನ ಹಾಡನ್ನು ಕೂಡ ಕೇಳುತ್ತೇನೆ. ಕುಂದಗೋಳದಲ್ಲಿ ಮಳೆ ಇಲ್ಲವೆಂದು ಊರಿನ ಜನರು ಶಿವನ ಗುಡಿಯಲ್ಲಿಯ ಶಿವಲಿಂಗವು ಮುಳುಗುವವರೆಗೂ ನೀರನ್ನು ಹುಯ್ಯುವದು ಎಂದು ಸಂಕಲ್ಪ ಮಾಡಿಕೊಂಡಿದ್ದರು. ಅವರ ಶ್ರದ್ಧೆಯ ಪ್ರಕಾರ ಶಿವಲಿಂಗವು ನೀರಲ್ಲಿ ಮುಳುಗಿದ ಕೂಡಲೇ ಮಳೆ ಬರುತ್ತದೆ! ಎಂದು. ಆ ರಾತ್ರಿ ಸವಾಯಿ ಗಂಧರ್ವ ಉತ್ಸವದಲ್ಲಿ ನಾನು ರಾಗ ಮಲ್ಹಾರ ಹಾಡಿದೆ. ಹಾಡು ಮುಗಿದ ತಕ್ಷಣ ಗುಡಿಗೆ ಹೋಗಿ ಶಿವಲಿಂಗದ ಮೇಲೆ ಒಂದು ಬಿಂದಿಗೆ ನೀರು ಸುರಿದೆ. ಜನರಿಗೆ ಬಹಳ ಸಮಾಧಾನ ಎನಿಸಿತು. ಕಲಾವಿದರಿಗೆ ಅವರದೇ ಆದ ಸ್ವಂತದ ಒಂದು ವಿಶ್ವವಿರುತ್ತದೆ. ದುಡ್ಡಿನ ತಾಪತ್ರಯಗಳು, ಅರೋಗ್ಯದ ತಕರಾರುಗಳು, ದಿನನತ್ಯದ ಸಾಂಸಾರಿಕ ಕಿಟಿಕಿಟಿಗಳು ಇದ್ದೇ ಇರುತ್ತವೆ. ಆದರೆ ಈ ಎಲ್ಲ ಕಷ್ಟಗಳ ಮೇಲೆ ವಿಜಯ ಪ್ರಾಪ್ತಮಾಡಿ ನಮಗೆ ಹಾಡುವದಿರುತ್ತದೆ. ರಾತ್ರಿ ಇಡೀ ಹಾಡುತ್ತಿರುವಾಗ ಯಾವ ಚಿಂತೆಗಳು ನಮ್ಮನ್ನು ಬಾಧಿಸುವದಿಲ್ಲ. ಕಂಠದಲ್ಲಿನ ಸ್ವರ ಮಾತ್ರ ಕಾಣಿಸುತ್ತಿರುತ್ತದ*.

* 2001ರ ಋತುರಂಗದ ಮರಾಠಿ ದೀಪಾವಳಿ ಅಂಕದಲ್ಲಿ ಪ್ರಕಟವಾದ ಲೇಖದ ಅನುವಾದ.

*****

7.7

ಗಾನ ಸರಸ್ವತಿ ಗಂಗೂಬಾಯಿ 1913–2009

2009 ಜುಲೈ 21ರಂದು ಪದ್ಮವಿಭೂಷಣ ಡಾ. ಗಂಗೂಬಾಯಿ ಹಾನಗಲ್ ತೀರಿಕೊಂಡ ಸಮಾಚಾರ ನನಗೆ ತಿಳಿಸಿದವರು ಮರಾಠಿಯ ಪತ್ರಕರ್ತ, ಸುದ್ದಿಗಾರ ಮುಕುಂದ. ಹಿಂದೆ ಗಂಗೂಬಾಯಿಯವರ 83ನೇ ಹುಟ್ಟುಹಬ್ಬವನ್ನು ಮುಂಬಯಿಯಲ್ಲಿ ಆಚರಿಸಿದಾಗ ನಮ್ಮಲ್ಲಿ ಬಂದು ಅವರ ಸಂದರ್ಶನವನ್ನು ಮುಕುಂದರು ಮಾಡಿದ್ದರು. ನಾನು ಎರಡು ವಾರದಿಂದ ಹಾಸಿಗೆ ಹಿಡಿದಿದ್ದುದರಿಂದ ಮಲಗಿದ್ದಲ್ಲಿಯೇ ಟಿವಿ ಸುದ್ದಿ ಚಾನೆಲ್ ನೋಡುತ್ತಿದ್ದೆ. ನನ್ನ ನೆನಪಿನ ಬುತ್ತಿ ತಂತಾನೆ ಬಿಚ್ಚಿಕೊಂಡಿತು.

ನನ್ನಕ್ಕ ಜ್ಯೋತ್ಸ್ನಾ ಕಾಮತ್ ಮೈಸೂರು ಆಕಾಶವಾಣಿಯ ನಿರ್ದೇಶಕಿಯಾಗಿದ್ದಾಗ ನನ್ನ ಮಗನಿಗೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ದೊರಕಿಸುವ ಉದ್ದೇಶದಿಂದ ಮೈಸೂರಿಗೆ ಹೋಗಿದ್ದೆ. (1984) ಗಂಗೂಬಾಯಿಯವರೂ ಬೆಂಗಳೂರಿನಲ್ಲಿ ಕಚೇರಿ ಮುಗಿಸಿ ಮೈಸೂರಿಗೆ ಬಂದಿದ್ದರು. "ಗಂಗೂಬಾಯಿ ಇಲ್ಲಿ ಇದ್ದಾರ ಭೆಟ್ಟಿಯಾಗ್ತಿ ಏನು? " ಅಕ್ಕ ಕೇಳಿದಳು. ನಾನು "ಆಗದೇ ಏನು? ಬಿಡ್ತೀನೇನು? ಅವರ ಕಚೇರಿ ಎಲ್ಲಿ?" "ಅದೇ ದುರ್ದೈವ. ಇಲ್ಲಿ ಕಚೇರಿ ಕೊನೆ ಕ್ಷಣಕ್ಕೆ ಆಗೂ ಹಾಂಗ ಇಲ್ಲ. ಇದು ಕರ್ನಾಟಕ ಸಂಗೀತದ ಕೇಂದ್ರ, ಇಲ್ಲಿ ಹಿಂದುಸ್ತಾನಿ ಸಂಗೀತದಲ್ಲಿಯ ಎಪ್ರೂವ್ಡ್ ಪಕ್ಕವಾದ್ಯದವರನ್ನು ಬೆಂಗಳೂರಿನಿಂದ ಕರೆಸಬೇಕು. ಆಕಾಶವಾಣಿಯಲ್ಲಿ ಅನೇಕ ನಿಯಮಾವಳಿಗಳು ಇರ್ತಾವ. ಈಗ ಅದಕ್ಕೆಲ್ಲ ವೇಳೆ ಇಲ್ಲಾ." ಅಕ್ಕ ಬೇಸರ ವ್ಯಕ್ತಪಡಿಸಿದಳು. ಒಂದೇ ಉಪಾಯವೆಂದರೆ ಆಕಾಶವಾಣಿಯಲ್ಲಿ ಅವರ ಸಂದರ್ಶನಮಾಡುವುದು. ಕೊನೆಗೆ ಜ್ಯೋತ್ಸ್ನಾ ಕಾಮತರು ಗಂಗೂಬಾಯಿಯವರನ್ನು ಸಂದರ್ಶನಕ್ಕೆ ಒಪ್ಪಿಸಿದರು. ಒಂದಿಪ್ಪತ್ತು ನಮಿಷದ್ದು. "ನೀನು ಸಂದರ್ಶನ ತೊಗೊತಿಯಾ. ನಿನಗ ಅಕ್ಕಾವ್ರು ಭಲೋ ಗುರ್ತಿದ್ದಾರ, ಸಂಗೀತದ ಬಗ್ಗೆ ನನಗಿಂತ ನಿನಗ ಜಾಸ್ತಿ ಗೊತ್ತದ, ಮಾಡಬಿಡಲ್ಲ ಒಂದು ಇಂಟರವ್ಯೂ" ಎಂದಳು ಅಕ್ಕ.

ಹೆಸರಿಗಷ್ಟೇ ಕನ್ನಡಿಗನಾಗಿದ್ದ ನಾನು 1984ರಲ್ಲಿ ಕನ್ನಡದಲ್ಲಿನ ಮಾತುಕತೆ, ಬರೆಯುವಿಕೆ ಎಲ್ಲವನ್ನೂ ಬಿಟ್ಟು 25 ವರ್ಷಗಳ ಮೇಲಾಗಿತ್ತು. ನಾನು ಬಹಳ ನರ್ವಸ್ ಆಗಿ ಹೇಳಿದೆ. "ನಾನು ಒಲ್ಲೆ ಅಕ್ಕಾ ನೀನೇ ಮಾಡು." ಸರಿ, ಜ್ಯೋತ್ಸ್ನಾ ಮಾಡಿದ ಸಂದರ್ಶನದ ರೆಕಾರ್ಡಿಂಗ್ ನಾನು ನಿರ್ದೇಶಕರ ಆಫೀಸಿನಲ್ಲಿ ಕುಳಿತು ಕೇಳಿದೆ. ಅದೊಂದು ಮೈಸೂರು ಆಕಾಶವಾಣಿಯ ಅಪರೂಪದ ಘಟನೆಯಾಗಿತ್ತು.

ಆಗ 13 ವರ್ಷ ಮೊದಲೇ ಪದ್ಮಭೂಷಣ (1971) ಸನ್ಮಾನದಿಂದ ಗೌರವಿಸಲ್ಪಟ್ಟ ಡಾ. ಗಂಗೂಬಾಯಿ ಹಾನಗಲ್ ತಮ್ಮ ಧಾರವಾಡದ ಗಂಡು ಕನ್ನಡದಲ್ಲಿ, ತಮ್ಮ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ, ಹುರುಪಿನ ಮಾತುಗಳಿಂದ ತಮ್ಮ ಹಾಡಿನಂತೆಯೇ, ಸಂದರ್ಶನವನ್ನು ಸಜೀವಗೊಳಿಸಿದರು.

ಆ ದಿನ ಗಂಗೂಬಾಯಿಯವರು ಚಿತ್ರಿಸಿದ, 'ಕ್ಯಾನವಾಸ್' ಅದ್ಭುತವಾಗಿತ್ತು. 1924ರ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಿದ, 'ವಂದೇ ಮಾತರಂ' ಹಾಡಿನಿಂದ ಹಿಡಿದು, ತಾಯಿ ಅಂಬಾಬಾಯಿಯವರಿಂದ ಕಲಿತ ಕರ್ನಾಟಕ ಸಂಗೀತ, ಬಳಿಕ ತಾನು ಕಲಿತ ನೃತ್ಯ, ಅಂಬಾಬಾಯಿಯವರಿಂದ ಅಬ್ದುಲ್ ಕರೀಂಖಾನರು ಅವರ ಕರ್ನಾಟಕ ಸಂಗೀತದ ಹಾಡುಗಳನ್ನು ಕೇಳಿದ್ದನ್ನು ನೆನಪಿಸಿಕೊಂಡರು. ಪೇಶಾವರಕ್ಕೆ ಹೋದಾಗಿನ ತಮ್ಮ ಕೆಲ ನೆನಪುಗಳನ್ನೂ ಅವರು ಮೆಲುಕು ಹಾಕಿದರು.

ಪೇಶಾವರಕ್ಕೆ ಗಂಗೂಬಾಯಿಯವರು ಲಾಹೋರಿನಿಂದ ಹೋಗಿದ್ದರು. ಆಕಾಶವಾಣಿಯ 'ಚೇನ್ ಬುಕಿಂಗ'ನಲ್ಲಿ , ಮುಂಬಯಿ, ದೆಹಲಿ, ಲಾಹೋರ ಮುಗಿಸಿ ಪೇಶಾವರಕ್ಕೆ ರಾತ್ರಿ ತಲುಪಿದ್ದರು. ಅಲ್ಲಿಯ ಆಕಾಶವಾಣಿ ಅಧಿಕಾರಿಗಳ ಮನೆಯ ಮಹಡಿಯ ಮೇಲೆ ಈ ಮಹತ್ವದ ಅತಿಥಿಗೆ ವ್ಯವಸ್ಥೆ ಮಾಡಿದ್ದರು. ಗಂಗೂಬಾಯಿಯವರು ತಮ್ಮ ಕಚೇರಿ ಇದ್ದ ದಿನ ಬೇಗನೇ ಎದ್ದು ತಲೆಸ್ನಾನ ಮಾಡುವ ರೂಢಿ. ಪೇಶಾವರದ ಥಂಡಿಯಲ್ಲಿ ಸ್ನಾನ ಮುಗಿಸಿ, ತಲೆಗೂದಲನ್ನು ಹರಡಿ ಮೇಲ್ಗಡೆಯ ಮಹಡಿಯ ಗ್ಯಾಲರಿಯಲ್ಲಿ ಬಿಸಿಲು ಕಾಯಿಸಲು ನಿಂತರು. ಕೇಶಸಾಂಭಾರ ಒಣಗಬೇಕಲ್ಲ? ಕೆಲವೇ ನಿಮಿಷಗಳಲ್ಲಿ ಇಬ್ಬರು ಪಶ್ತೂನಿ ಪಠಾಣ ಧಾಂಡಿಗ ಪೊಲೀಸರು ಮನೆಯಲ್ಲಿ ನುಗ್ಗಿದ್ದು ಮೇಲಿನಿಂದಲೇ ನೋಡಿದರು.

ಮನೆಯ ಯಜಮಾನತಿ ಮೇಲೆ ಬಂದು ಸ್ವಲ್ಪ ಸಂಕೋಚದಿಂದಲೇ ಗಂಗೂಬಾಯಿಯವರಿಗೆ ಹೇಳಿದರಂತೆ, "ಬಹನಜೀ, ಆಪ್ ಉಪರಕಾ ದರವಾಝಾ ಬಂದ ಕರ್‌ಲೀಜಿಯೇ! ಯಹಾಂ ಕೋಯಿ ಔರತ ನಂಗೇ ಕೇಶ ಧೂಪ್ ಮೆಂ ನಹೀ ಸುಖಾತೆ. (ಅಕ್ಕಾ, ಒಳಗೆ ಬನ್ನಿ ಇಲ್ಲಿ ಯಾರೂ ಕೂದಲು ಬಿಟ್ಟು ಜನರಿಗೆ ಕಾಣಿಸಿಕೊಳ್ಳುವದಿಲ್ಲ.) ನಮ್ಮ ಹಾಗೆ ಬಿಸಿ ಬಿಸಿ ಕೆಂಡದ ಮೇಲೆ ಲೋಬಾನ ಹಾಕಿ ಹೊಗೆಯಲ್ಲಿ ಒಣಗಿಸಿಕೊಳ್ಳಿ".

ಸರಿ, ಮಧ್ಯಾಹ್ನ ಅವರ ಕಾರ್ಯಕ್ರಮವಿತ್ತು. ಆ ಕಾಲದಲ್ಲಿ ಎಲ್ಲ ಕಾರ್ಯಕ್ರಮಗಳು ನೇರ ಪ್ರಸಾರವಾಗಿರುತ್ತಿದ್ದವು. ಹೋಗುವಾಗ ಯಜಮಾನರ ಮಗಳಿಗೆ ಹೇಳಿದರಂತೆ, "10 ಗಂಟೆಗೆ ರೇಡಿಯೋ ಹಚ್ಚು, ನನ್ನ ಹಾಡು ಕೇಳು" ಎಂದು.

ಊಟಕ್ಕೆ ಮನೆಗೆ ಬಂದಾಗ ಗಂಗೂಬಾಯಿಯವರು ಕೇಳಿದರಂತೆ. "ನನ್ನ ಹಾಡು ಕೇಳಿದೆಯಾ ಮಗು"? "ನೀವೆಲ್ಲಿ ಹಾಡಿದ್ರಿ? ನಾನು ನೀವಂದಂತೆ ಹತ್ತು ಗಂಟೆಗೆ ರೇಡೀಯೋ ಹಚ್ಚಿದೆ. ಯಾರೋ ಒಬ್ಬ ಗಂಡಸು ಉಸ್ತಾದ್‌ರು ಹಾಡುತ್ತಿದ್ದರು. ನಾನು ಬಂದ ಮಾಡಿಬಿಟ್ಟೆ." "ಅಯ್ಯೋ, ಅದು ನಂದ ಆವಾಜು ಇತ್ತು!"ಎಂದು ನಗುತ್ತ ಹೇಳಿದರಂತೆ ಗಂಗೂಬಾಯಿಯವರು.

ಸಂದರ್ಶನ ಮುಗಿದ ಮೇಲೆ ಜ್ಯೋತ್ಸ್ನಾ ಮತ್ತು ಗಂಗೂಬಾಯಿಯವರು ಆಫೀಸಿನೊಳಗೆ ಬರುವಾಗ ಬಾಗಿಲ ಬಳಿ ಒಬ್ಬರು ಕೈ ಮುಗಿದು ನಿಂತಿದ್ದು ಗಂಗೂಬಾಯಿ ಅವರಿಗೆ ಕಾಣಿಸಿತು. ಜ್ಯೋತ್ಸ್ನ ಅವರಿಗೆ ಕೈಮುಗಿದು, ಗಂಗೂಬಾಯಿಯವರನ್ನು ಗಡಿಬಿಡಿಯಿಂದ ಒಳಗೆ ಕರೆದು ತಂದದ್ದನ್ನು ನಾನು ಕುಳಿತಲ್ಲಿಂದ ನೋಡಿದೆ.

ಜ್ಯೋತ್ಸ್ನ ಗಂಗೂಬಾಯಿಯವರಿಗೆ ವಸ್ತುಸ್ಥಿತಿಯನ್ನು ವಿವರಿಸುತ್ತ, "ಅಕ್ಕಾವರೆ, ಅವರು ಎಸ್.ಬಿ ಹುನಗುಂದ ಎಂಬವರು. ಮೊದಲು ಬೊಂಬಾಯಿಯಲ್ಲಿದ್ದರು. ಈಗ ಮೈಸೂರಿಗೆ ಬಂದಿದ್ದಾರೆ. ಅವರಿಗೆ ಹಾರ್ಮೋನಿಯಮ್ ಆಡಿಶನ್ ಕೊಡಬೇಕಾಗಿದೆ. ಆದರೆ ತಮಗೆ ಗೊತ್ತಲ್ಲ ಇದು ಕರ್ನಾಟಕ ಸಂಗೀತದ ಕೇಂದ್ರ, ಇಲ್ಲಿ ಹಿಂದುಸ್ತಾನಿ ಹಾಡುವವರು, ರೇಡೀಯೋ ಎಪ್ರೂವ್ಡ್ ಯಾರೂ ಇಲ್ಲ. ಬಹಳ ಪೇಚಾಡ್ತಾ ಇದ್ದೇನೆ" ಎಂದಳು. "ಪಾಪ, ಹಿಂಗೇನು? ಅವರಿಗೆ ಒಳಗ ಕರೆಸವ್ವಾ" ಅಂದರು ಗಂಗೂಬಾಯಿ. ಸರಿ, ಹುನಗುಂದರಿಗೆ ಕರೆ ಹೋಯಿತು. ಹುನಗುಂದರು ಒಳಗೆ ಬರುತ್ತಲೇ, ಕೂಡಲೇ ಗಂಗೂಬಾಯಿಯವರು ಜ್ಯೋತ್ಸ್ನ ಮತ್ತು ಹುನಗುಂದರಿಗೆ ಕೇಳಿದರು, "ನನ್ನ ಹಾಡುಗಾರಿಕೆಗೆ ಇವರು ಸಾಥ್ ಕೊಟ್ರ ನಿಮಗೇನೂ ತ್ರಾಸು ಇಲ್ಲವಲ್ಲಾ?"

ಅಂತರಾಷ್ಟ್ರೀಯ ಕೀರ್ತಿಯ ಗಾಯಕಿ ಒಬ್ಬ ಮಾಮೂಲಿ ಪೇಟಿ ಬಾರಿಸುವವರಿಗೆ ಹಾಡುವದೆಂದರೆ, ಅದೂ ಕೂಡ ಆಡಿಶನ್ನಿಗಾಗಿ! ಇದೊಂದು, 'ನ ಭೂತೋ ನ ಭವಿಷ್ಯತಿ' ಘಟನೆ ಆಕಾಶವಾಣಿಯ ರೆಕಾರ್ಡಿನಲ್ಲಿ!

ಆಕಾಶವಾಣಿಯವರು ರೆಕಾರ್ಡಿಂಗ್ ವ್ಯವಸ್ಥೆ ಮಾಡಿದರು, ಗಂಗೂಬಾಯಿಯವರು ಹಾಡಿದರು. ಹುನಗುಂದ್ ಅವರು ಹಾರ್ಮೋನಿಯಮ್ ಸಾಥ್ ಕೊಟ್ಟರು. ದೆಹಲಿಗೆ ಕಳಿಸಿದ ಆಡಿಶನ್ ಕೆಲವೇ ದಿನಗಳಲ್ಲಿ ಅಪ್ರೂವ್‌ಆಗಿ (ಒಪ್ಪಿಗೆ) ಬಂದಿತ್ತು ಎಂದು ಜ್ಯೋತ್ಸ್ನ ಫೋನಿನಲ್ಲಿ ತಿಳಿಸಿದಳು.

ಆ ದಿನದಿಂದ ಗಂಗೂಬಾಯಿಯವರು ನನ್ನ ದೃಷ್ಟಿಯಲ್ಲಿ 'ದೇವಿ'ಯಂತೆ ಕಂಡರು. ಹಾಡಿದ್ದಕ್ಕೆ ಪ್ರತಿಫಲ ಇರಲಿಲ್ಲ. (ಆಕಾಶವಾಣಿಯಲ್ಲಿ ನಿಯಮಾವಳಿ ಜಾಸ್ತಿ) "ಪಾಪ ಸಂಗೀತದ ಸೇವೆ ಅಂದುಕೊಂಡು ಮಾಡಿದೆ ಅಷ್ಟೇ!" ಅಂದರಂತೆ. ಮಾನವೀಯ ಮೌಲ್ಯಗಳನ್ನು ಕೊನೆಯ ತನಕ ರಕ್ಷಿಸಿಕೊಂಡ ಗಂಗೂಬಾಯಿ ನಿಜಕ್ಕೂ ಮಹನೀಯರು, ಪ್ರಾತಃಸ್ಮರಣೀಯರು.

ಗಂಗೂಬಾಯಿಯವರು ಹಾಡುಗಾರಿಕೆಯಲ್ಲಿ ತಮ್ಮ ಘರಾಣೆಯ ಎಲ್ಲ ವೈಶಿಷ್ಟ್ಯಗಳನ್ನು ತರಲು ಹವಣಿಸುತ್ತಿದ್ದರು. ಅದನ್ನು ಸಾಧಿಸುತ್ತಿದ್ದರು. ಅಂದರೆ, ವಿಲಂಬಿತ್ ನಡಿಗೆಯಲ್ಲಿ ಅತ್ಯಂತ ಅಭ್ಯಾಸಪೂರ್ಣ ಏರುವಿಕೆ, ಪ್ರತಿಯೊಂದು ಸ್ವರದ ಸ್ವಚ್ಛ ನಿರೂಪಣೆ, ಸ್ಪಷ್ಟ ಶಬ್ದೋಚ್ಚಾರ ಮತ್ತು ಗಮಕಯುಕ್ತ ಶಬ್ದ-ಸ್ವರಗಳ ಜೋಡಿಸುವಿಕೆ, ರಭಸದ ಆಲಂಕಾರಿಕ ತಾನುಗಳು. ಕಳೆದ ಇಪ್ಪತ್ತು ವರ್ಷಗಳಲ್ಲಿ ಅವರ ಹಾಡುಗಾರಿಕೆ, ಮಗಳು ಕೃಷ್ಣಾಬಾಯಿಯವರೊಂದಿಗೆ ಯುಗಲ ಗಾಯನದಲ್ಲಿ ಪುಷ್ಟಿ ಕೊಡುತ್ತಿತ್ತು. ಬೈಠಕ್ಕಿನಲ್ಲಿ ಪ್ರಕಟವಾಗದ ಅನೇಕ ವಿನೂತನ ಭಾವಗಳು, ವಿಶಿಷ್ಟವಾಗಿ ಅಂತರಾ

ಅಂದರೆ ಪದ್ಯದ ಉತ್ತರ ಭಾಗದಲ್ಲಿ ಕೃಷ್ಣಾಬಾಯಿಯವರೊಂದಿಗೆ ಹಾಡುವಾಗ ಪಕ್ರಟವಾಗುತ್ತಿದ್ದವು. ಶಾರೀರ ಬೇರೆಬೇರೆ ಪ್ರಕಾರದ್ದು ಇದ್ದರೂ ಹಾಡುಗಾರಿಕೆಯ ಮನೋಧರ್ಮದಲ್ಲಿ ಏಕರೂಪತೆ ಕಾಣಿಸುತ್ತಿತ್ತು.

ಕರ್ನಾಟಕ ಸಂಘದಲ್ಲಿ ಗಂಗೂಬಾಯಿಯವರ ಸತ್ಕಾರ ಮತ್ತು ಅವರ 83ನೇ ಹುಟ್ಟುಹಬ್ಬವನ್ನು 1996ರಲ್ಲಿ ಆಚರಿಸಿದಾಗ ಅವರು ನಮ್ಮಲ್ಲಿಯೇ ಉಳಿದುಕೊಂಡಿದ್ದರು. ದೆಹಲಿಯಿಂದ ಬಂದ ಕೃಷ್ಣಾಬಾಯಿ ಮತ್ತು ಗಂಗೂಬಾಯಿಯವರನ್ನು ಕರೆ ತರಲು ಮುಂಬಯಿ ಸೆಂಟ್ರಲ್ ಸ್ಟೇಶನ್‌ಗೆ ಹೋಗಿದ್ದೆ. ಟ್ಯಾಕ್ಸಿ ಮಾಡಿಕೊಂಡು ಮನೆಗೆ ಬಂದ ಕೂಡಲೇ ನಮ್ಮ ಮನೆಯವರಾದರು. ನನ್ನ ಸೊಸೆ ಮತ್ತು ಮಗಳೊಂದಿಗೆ ಕೃಷ್ಣಾಬಾಯಿ ನಮ್ಮ ಮನೆ ಪಕ್ಕದಲ್ಲಿದ್ದ ಗ್ರಾಂಟರೋಡ ಮಾರ್ಕೆಟ್ಟಿಗೆ ಹೋಗಿ ಷಾಪಿಂಗ್ ಮಾಡಿದರು. ನನಗೆ ಜೋಳದ ಭಕ್ರಿ ಇಷ್ಟವೆಂದು ಗೊತ್ತಾದ ಕ್ಷಣ ಕೃಷ್ಣಾಬಾಯಿ ಅಡುಗೆಮನೆ ಚಾರ್ಜ್‌ವಹಿಸಿಕೊಂಡು, ಬದನೆಕಾಯಿ ಪಲ್ಯ ಮತ್ತು ಬಿಸಿಬಿಸಿ ಜೋಳದ ರೊಟ್ಟಿ ಮಾಡಿದರು. ಟಿವಿ ಸೀರಿಯಲ್ಲನ್ನು ಹಾಡುವ ತನ್ಮಯತೆಯಿಂದ ನೋಡಿ ಸಂತೋಷಪಟ್ಟರು.

ತಮ್ಮ ರೂಢಿಯಂತೆ ಗಂಗೂಬಾಯಿಯವರು ಮುಂಜಾನೆ ಬೇಗ ಎದ್ದು, ಒಂದು ಕಪ್ಪು ಚಹ ಕುಡಿದು ತಲೆ ಸ್ನಾನ ಮಾಡಿ ಕಚೇರಿಗೆ ಹೋಗಲು ತಯಾರಾದರು. ಎಲ್ಲರೊಂದಿಗೆ ಹಾಸ್ಯ–ವಿನೋದ ಮಾಡುತ್ತಿದ್ದವರು, ಒಮ್ಮೆಲೇ ತಮ್ಮೊಳಗೇ ಸೇರಿಕೊಂಡ ಹಾಗೆ ನಮಗೆ ಭಾಸವಾಯಿತು. ನಮ್ಮ ಪ್ರಶ್ನೆಗೆ, ಬರೀ, 'ಹೌದು', 'ಇಲ್ಲ' ಇಷ್ಟೇ. ಅವರಿಗಾಗಿ ಫ್ಲಾಸ್ಕಿನಲ್ಲಿ ಚಹ ತುಂಬಿಸಿ, ಸಿದ್ಧಿವಿನಾಯಕ ಮಾರ್ಗವಾಗಿ ಕರ್ನಾಟಕ ಸಂಘಕ್ಕೆ ಹೋಗುವ ಮೊದಲು, ಸಿದ್ಧಿವಿನಾಯಕನಿಗೆ ರಸ್ತೆ ಅಂಚಿನಲ್ಲಿ ನಿಂತು ನಮಸ್ಕರಿಸಿ ಮುಂದೆ ಸಾಗಿದೆವು.

ಭಾವಸಮಾಧಿಯಲ್ಲಿದ್ದ ಗಂಗೂಬಾಯಿ ಕಾರ್ಯಕ್ರಮ ಪ್ರಾರಂಭವಾಗುವ ತನಕ ಯಾರೊಂದಿಗೂ ಮಾತನಾಡಲಿಲ್ಲ. ಅರ್ಣಭ್ ಭಟ್ಟಾಚಾರ್ಯ ಮತ್ತು ಸುನಿಲ್ ಶಾನಭಾಗ್ (ಖ್ಯಾತ ಟಿವಿ ಸಿರಿಯಲ್ ನಿರ್ಮಾಪಕರು ಮತ್ತು ರಂಗಕರ್ಮಿ) ಇವರು ಗಂಗೂಬಾಯಿಯವರ ಮೇಲೆ ಲಘು ಚಿತ್ರ ಮಾಡುವವರಿದ್ದರು. ಅವರಿಗೆ ಕಾರ್ಯಕ್ರಮ ಮುಗಿದ ಮೇಲೆ 'ಶೂಟ್' ಮಾಡಲು ಪರ್ಮಿಶನ್ ಕೊಡಲಾಯಿತು. ಪಂ. ಫಿರೋಜ್ ದಸ್ತೂರ ಮತ್ತು ಸುಧಾ ದಿವೇಕರ್ ಇವರು ತಂಬೂರಿ ಸಾಥ್ ಕೊಡುವವರಿದ್ದರು. ಇಬ್ಬರೂ ಗಂಗೂಬಾಯಿಯವರಿಗೆ ನಮಸ್ಕರಿಸಿ ತಂಬೂರಿ ಶ್ರುತಿ ಮಾಡಿದರು. ಗಂಗೂಬಾಯಿಯವರು ವೇದಿಕೆಯ ಮೇಲೆ ಕಣ್ಮುಚ್ಚಿ ಷಡ್ಜದ ಆರಾಧನೆ ನಡೆಸಿದ್ದರು. ತಂಬೂರಿ ಜೋಡಿಯ 'ಸಾಪಸಾ' ಮೀಟಿದಾಗ ಗಂಗೂಬಾಯಿ ಎಡಗೈ ಕಿವಿಯ ಮೇಲಿಟ್ಟು ಅಂತರಮನದಲ್ಲಿ ಆತ್ಮ, ಜೀವ ಒಂದಾಗಿ ಸ್ವರ ಪ್ರವಾಹ ಪ್ರಾರಂಭವಾದ ಕೂಡಲೇ ಕೇಳುವವರ ಕಿವಿ ನಿಮಿರಿ ರೋಮಾಂಚನದ ಅನುಭವವಾಯಿತು. ಆ ದಿನ ಅವರು ಹಾಡಿದ್ದು 'ಮೀಯಾಕಿ ತೋಡಿ'. ಸಾವಕಾಶವಾಗಿ ಒಂದೊಂದೇ ಸ್ವರ ಎತ್ತಿ ಹಿಡಿದು ಅದರಲ್ಲಿ ಲೀನರಾಗಿ, ಮೆಟ್ಟಿಲು ಮೆಟ್ಟಿಲು ದಾಟಿ, ಆರೋಹಣೆ ಮಾಡಿದಾಗ ಸ್ವರಗಂಗೆ ಸ್ವರ್ಗದ ಬಾಗಿಲು ತೆರೆದಂತೆ ಭಾಸವಾಗುತ್ತಿತ್ತು. ಗಗನಭೇದಿ ಗುಡುಗು, ಮಿಂಚಿನ ತಾನಪ್ರವಾಹಗಳಿಂದ ಅಲಂಕರಿಸಲ್ಪಟ್ಟ ಈ ತೋಡಿಯಿಂದ ಶ್ರೋತೃವೃಂದ

ಪುಳಕಿತವಾದದ್ದು, ಕಣ್ಣಂಚಿನಲ್ಲಿ ನೀರು ತೊಟಕಿದ್ದುದನ್ನು ನಾನು ಅನುಭವಿಸಿದ್ದೇನೆ. ತಾಯಿ, ಮಗಳು ಕೃಷ್ಣಾಬಾಯಿ ಇವರಿರ್ವರ ತಾನಿನ ಸುರಿಮಳೆಯಲ್ಲಿ ಶ್ರೋತೃಗಳು ಕೊಚ್ಚಿ ಹೋದದ್ದು ಅಂದಿನ ಅನುಭವ!

45 ನಿಮಿಷಗಳ ತೋಡಿ ಹಾಡಿದ ಮೇಲೆ 'ಭೂಲೋಕ'ಕ್ಕೆ ಇಳಿದು ಬಂದರು ತಾಯಿ ಗಂಗಾಮಾಯಿ! ಮುಗುಳುನಗೆ ಸೂಸುತ್ತಾ ಸಭಾಗೃಹದಲ್ಲಿಯ ಜನಸ್ತೋಮಕ್ಕೆ ಅದರಲ್ಲೂ ತಾತ್ಯಾ ಬಾಕ್ರೆಗೆ (ಲೋಕಸತ್ತಾ ಮರಾಠಿ ದೈನಂದಿನದ ಪ್ರತಿನಿಧಿ. ಅವರಿಗೆ ಆಗ 80 ವರ್ಷ) "ಇದು ನನ್ನ ಮುದಿತನದಲ್ಲಿ ಹಾಡಿದ ಹಾಡು. ಇಷ್ಟವಾಯಿತೇ?" ಎಂದು ಮರಾಠಿಯಲ್ಲಿ ಕೇಳಿದರು. ತಾತ್ಯಾ ಅಷ್ಟೇ ಉತ್ಸಾಹದಿಂದ, "ಬಾಯಿ, ತುಮ್ಹಿ, ತೋಡಿಚಾ ಮಹಲ್ ಉಭಾ ಕೆಲಾ, ಆತಾ, ಸಾರಂಗಾಚಾ ಸೋನೇರಿ ಕಳಸ ಚಡವಾ" (ನೀವು ತೋಡಿಯ ಅರಮನೆಯನ್ನೇ ನಿಲ್ಲಿಸಿದಿರಿ, ಈಗ ಸಾರಂಗ ರಾಗದ ಚಿನ್ನದ ಕಳಶವನ್ನು ಏರಿಸಿಬಿಡಿ) ಅಂದರು.

ಸರಿ, ಎಡಗೈ ಮತ್ತೇ ಕಿವಿಯ ಮೇಲೆ, ಮುಚ್ಚಿದ ಕಣ್ಣು. ಶುದ್ಧ ಸಾರಂಗದ ಆರಾಧನೆ ಇಪ್ಪತ್ತು ನಮಿಷ. ಎಂತಹ ತನ್ಮಯತೆ! ಶ್ರೋತೃಗಣ ಆ ತನ್ಮಯತೆಯಲ್ಲಿ ಮುಳುಗಿ ಹೋಯಿತು. ಮುಗಿದ ತಕ್ಷಣ, ಧಾರವಾಡ ಕನ್ನಡದಲ್ಲಿ ನನ್ನನ್ನು ಉದ್ದೇಶಿಸಿ, "ಸರಿ ಆಯತ್ರಪ್ಪಾ, ಇನ್ನೂ ಭಜನೆ, ದಾಸರ ಪದ ಹಾಡಲಿಕ್ಕೆ ಹೇಳಬ್ಯಾಡ್ರಿ. ಭಜನೆ ಅಂದ ಕೂಡ್ಲೆ ನಾನು 'ಜೋಗಿಯಾ' ಶುರು ಮಾಡಿಬಿಡ್ತೀನಿ" ಎಂದು 'ಹರಿಕಾ ಭೇದನ ಪಾಯೋ' ಎಂದು ಪ್ರಾರಂಭಿಸಿಯೇ ಬಿಟ್ಟರು!

1984ರಲ್ಲಿ ಪುಣೆಯ, ಸವಾಯಿ ಗಂಧರ್ವ ಉತ್ಸವದಲ್ಲಿ ಗಂಗೂಬಾಯಿಯವರು ನನ್ನ ಕೋರಿಕೆಯಂತೆ 'ಪ್ರಭಾತ ಭೈರವ್' ಹಾಡಿದ್ದನ್ನು ಕೇಳಿದ್ದೆ. ಮತ್ತೆರಡು ವರ್ಷ ಆ ರಾಗವನ್ನೇ ರಿಪೀಟ್ ಮಾಡಿದ್ದು ಈ ಹೊತ್ತಿಗೆ ನೆನಪಾಗಿ, ಎಷ್ಟು ಹೃದಯಸಂಪನ್ನರು ನಮ್ಮ ಗಂಗೂಬಾಯಿ ಎಂದೆನಿಸಿತು.

*****

7.8

ಪಂಡಿತ್ ಫಿರೋಜ್ ದಸ್ತೂರ್ ಇವರ ಸ್ಮರಣೆ
(1919–2008)

ಮರಹೂಮ್ ಉಸ್ತಾದ್ ಅಬ್ದುಲ್ ಕರೀಂಖಾನರ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿಯ ವಾಸ್ತವ್ಯದಿಂದ ಈ ಪ್ರದೇಶದಲ್ಲಿ ಕಿರಾನಾ ಘರಾಣೆ ಬಹಳ ಚೆನ್ನಾಗಿ ಬೇರೂರಿತು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಅವರ ಕಚೇರಿಯೆಂದರೆ ಅದೊಂದು ಉತ್ತರ ಭಾರತದ ಧೀರ ಗಂಭೀರ ಧ್ರುಪದ್ ಗಾಯನ ಹಾಗೂ ಸಾರಂಗಿ ಬಾರಿಸುವವರ ಅತ್ಯಂತ ಸ್ವರಪ್ರಧಾನ ಕೃತಿಗಳ ಸುಂದರ ಮಿಶ್ರಣವಾಗಿತ್ತು. ಅವರ ಈ ನೂತನ ಹಾಡುಗಾರಿಕೆಗೆ, ಅವರ ಕೌಟುಂಬಿಕ ಪರಿಸ್ಥಿತಿಯಿಂದ, ರಾಜಾಶ್ರಯದ ಛತ್ರವಿಲ್ಲದೇ ಇದ್ದುದರಿಂದ, ಲೋಕಾಶ್ರಯ ಪಡೆಯುವ ಪರಿಸ್ಥಿತಿ ಉದ್ಭವಿಸಿತು. ಹೀಗಾಗಿ ಎಲ್ಲೆಲ್ಲೂ ಅವರ ಕಚೇರಿಗಳು ಟಿಕೆಟುಗಳೊಂದಿಗೆ ನಡೆಯುತ್ತಿದ್ದವು. ಅವರ ಪರಂಪರೆ ಈ ಪ್ರದೇಶದಲ್ಲಿ ತುಂಬಾ ರೂಢಿಯಾಯಿತು. ಅವರ ಸಂಗೀತದ ಬಿರುಗಾಳಿಯಲ್ಲಿ ಸಿಕ್ಕವರಲ್ಲಿ ಫೀರೋಜ್ ದಸ್ತೂರ್ ಕೂಡಾ ಇದ್ದರು!

ಮೋಹಕ ರೂಪ ಪಡೆದ, ಸುಲಲಿತ ಶಾರೀರದ ಅತ್ಯಂತ ಸುಸಂಸ್ಕೃತ ಪಾರ್ಸಿ ಮನೆತನದಲ್ಲಿ ಹುಟ್ಟಿದ ಬಾಲಕ, ಫಿರೋಜ್ 12ನೇ ವಯಸ್ಸಿನಲ್ಲಿಯೇ ಚಲನಚಿತ್ರಗಳಲ್ಲಿ ನಟಿಸಿ ಖ್ಯಾತಿ ಹೊಂದಿದ್ದವರು, ಮುಂಬಯಿಯ ರಜತ ಪರದೆಯ ವ್ಯಾಮೋಹವನ್ನು ಬದಿಗೆ ಸರಿಸಿ, ತಮ್ಮ 8 ದಶಕಗಳ ಆಯುಸ್ಸನ್ನು ಉತ್ತರಾದಿ ಶಾಸ್ತ್ರೀಯ ಸಂಗೀತಕ್ಕಾಗಿಯೇ ಮುಡುಪಾಗಿ ಇಟ್ಟವರು. ಅವರ ಬಾಲ್ಯದ ಕಾಲದಲ್ಲಿ, ಸ್ಟುಡಿಬೇಕರದಂತಹ ಕಾರಿನಲ್ಲಿ ಮುಂಬಯಿ ಶಹರದಲ್ಲಿ ಅತ್ತಿತ್ತ ಅಲೆದಾಡುವ ಮುಂಬಯಿಯ ಪಾರ್ಸಿ ಜನರು ಆಗರ್ಭ ಸಿರಿವಂತರಷ್ಟೇ ಅಲ್ಲ, ಅವರಲ್ಲಿ ಬಹಳ ಸಾಹಸಿಗರೂ ಚಲನಚಿತ್ರ ಮಾಧ್ಯಮದಲ್ಲಿ ಹೆಸರು ಮಾಡಿದವರು ಎಷ್ಟೋ ಜನರಿದ್ದರು. ಫಿರೋಜ್ ದಸ್ತೂರ್, ಮನಸ್ಸು ಮಾಡಿದ್ದರೆ, ಅವರಿಗೆ ಸಹಾಯ ಮಾಡಲು ಪಾರ್ಸಿ ಕುಟುಂಬದ ಒಂದು ಪಡೆಯೇ, ಆಗ ಮುಂಬಯಿಯಲ್ಲಿತ್ತು. ಆದರೆ, ಇದೆಲ್ಲವನ್ನು ತ್ಯಜಿಸಿ ಕುಂದಗೋಳದಂತಹ ಕುಗ್ರಾಮದ, 'ಸವಾಯಿ ಗಂಧರ್ವ' ಎಂದು ಇಡೀ ದೇಶದಲ್ಲಿ ಖ್ಯಾತರಾದ ಪಂ. ರಾಮಭಾವು ಕುಂದಗೋಳಕರ ಅವರ ಶಿಷ್ಯತ್ವ ಸ್ವೀಕರಿಸಿದ ಮಹಾನುಭಾವರು ಇವರು. ಮುಂದೆ ಭಾರತದಲ್ಲಿ ಸವಾಯಿ ಗಂಧರ್ವರ ಶಿಷ್ಯ ಪರಂಪರೆಯಲ್ಲಿಯ ತ್ರಿಮೂರ್ತಿಗಳಲ್ಲಿ ಒಬ್ಬರಾದರು.

ಫಿರೋಜ್ ದಸ್ತೂರರ ವಾಸ್ತವ್ಯ ಮುಂಬಯಿಯಲ್ಲಿಯ ಜನನಿಬಿಡ ಗ್ರಾಂಟ್ ರೋಡ್ ವಿಭಾಗದಲ್ಲಿ. ಆ ಕಾಲದ ಮುಂಬಯಿ ಈಗಿನ ದಾದರ್‌ತನಕ ಮಾತ್ರ ಸೀಮಿತವಾಗಿತ್ತು. ಹೀರಾಬಾಯಿ ಬಡೋದೆಕರ್, ರೋಶನಾರಾ ಬೇಗಮ್, ಕಪೀಲೇಶ್ವರಿ ಬುವಾ, ಗಣಪತ್ ಬುವಾ ಬೆಹರೆ, ಸುರೇಶಬಾಬು ಮಾನೆ, ಈ ಶಿಷ್ಯ ಪರಂಪರೆ ಅದಾಗಲೇ ರಸಿಕರ ಮಾನ್ಯತೆ ಪಡೆದಿತ್ತು. ಗಣಪತಿ ಉತ್ಸವಕ್ಕಾಗಿ ಆಗಾಗ ಹೊರನಾಡಿನ, ಸವಾಯಿ ಗಂಧರ್ವ, ಮಾ. ಕೃಷ್ಣರಾವ್ ಫುಲಂಬ್ರಿಕರ್, ಮಲ್ಲಿಕಾರ್ಜುನ ಮನ್ಸೂರ ಇವರ ವಾಸ್ತವ್ಯ ಕೂಡ ಮುಂಬಯಿಯಲ್ಲಿ ಕೆಲದಿನಗಳ ಮಟ್ಟಿಗೆ ಇರುತ್ತಿತ್ತು. ಇಂತಹದೇ ಒಂದು ಪ್ರಸಂಗದಲ್ಲಿ ಫಿರೋಜ್ ದಸ್ತೂರರು ಸವಾಯಿ ಗಂಧರ್ವರ, 'ಗಂಡಾಬಂಧ ಶಾಗಿರ್ದ್' ಆದರು. ಅವರಿಗೆ ಶಾಸ್ತ್ರೋಕ್ತ ಪದ್ಧತಿಯಲ್ಲಿ ಕಿರಾನಾ ಪರಂಪರೆಯ ಮುದ್ರಾಧಾರಣವಾಯಿತು.

ಗಂಗೂಬಾಯಿಯವರ ಹಾಗೂ ಪಂ. ಭೀಮಸೇನ ಜೋಶಿಯವರ ಹಾಡುಗಾರಿಕೆಯಲ್ಲಿ ಸವಾಯಿ ಗಂಧರ್ವರ ಹಾಡುಗಾರಿಕೆಯ ಪ್ರಭಾವ ಇದ್ದರೂ, ಪಂ. ಫಿರೋಜ್ ದಸ್ತೂರರ ಗಾಯನದಲ್ಲಿ ಇದರ ಹೊರತಾಗಿ ಬೇರೆ ಮಿಶ್ರಣವನ್ನೂ ಕಾಣಬಹುದಾಗಿತ್ತು. ಅವರು ವಾಸಿಸುತ್ತಿದ್ದ ಗ್ರಾಂಟ್ ರೋಡ್ ವಿಭಾಗದಲ್ಲಿಯೇ ಇದ್ದ ಅಬ್ದುಲ್ ಕರೀಂ ಖಾನರ ಮತ್ತೊಬ್ಬ ಶಿಷ್ಯ ಕಪೀಲೇಶ್ವರಿ ಬುವಾ ಅವರಲ್ಲಿಯೂ ಮತ್ತು ಇದೇ ಘರಾಣೆಯ ಪಂ ಕೆ.ಡಿ. ಜಾವಕರರಲ್ಲಿಯೂ ಶಿಕ್ಷಣ ದೊರೆತದ್ದರಿಂದ ಮತ್ತು ಮುಂಬಯಿ ವಾಸ್ತವ್ಯದಲ್ಲಿದ್ದೇ ಅವರು ಹೆಚ್ಚು ಶ್ರಮಿಸಿದ್ದರಿಂದ ಅವರ ಗಾಯಕಿಯಲ್ಲಿ ಒಂದು ವಿಶಿಷ್ಟ ಪ್ರಕಾರದ ಮೆರಗನ್ನು ಕಾಣಬಹುದಾಗಿತ್ತು.

ಕಿರಾನಾ ಪರಂಪರೆಯಲ್ಲಿ ಸ್ವರಗಳ ಶುದ್ಧತೆ ಮತ್ತು ವಿಲಂಬಿತ ಗತಿಯ ಆಲಾಪನೆಗೆ ಮಹತ್ವ ಕೊಟ್ಟಿದ್ದರಿಂದ ಈ ಗಾಯಕಿಯ ಮಾಧುರ್ಯ ಅಧೋರೇಖಿತವಾಗುತ್ತದೆ. ಪಂ. ಫಿರೋಜ್ ದಸ್ತೂರರು ಗಾಯನದ ಚಿಂತನೆ ಮತ್ತು ಮನನ ಮಾಡಿ ಖಾಸ ತಮ್ಮದೇ ಒಂದು ಸ್ಥಾನ ಪಡೆದುಕೊಂಡಿದ್ದರು. ಪ್ರತಿಯೊಂದು ಬಂದಿಶ್‌ನ್ನು ಅತ್ಯಂತ ಶಾಸ್ತ್ರ ಶುದ್ಧರೀತಿಯಲ್ಲಿ ಬೆಳೆಸಿ, ಮುಂದೆ ವಿಸ್ತಾರ ಮಾಡುವ ಪದ್ಧತಿಯನ್ನು ತಮ್ಮದಾಗಿ ಮಾಡಿಕೊಂಡಿದ್ದರು. ವಿಲಂಬಿತ ಮತ್ತು ಧ್ರುತ್ ತಾನ್‌ಗಳ ಸುರಿಮಳೆ, ಆಲಂಕಾರಿಕ ರೀತಿಯಲ್ಲಿ ಹೊಮ್ಮುತ್ತಿತ್ತು. ಹೀಗೆ ಮಾಡುವಾಗ ರಾಗದ ಭಾವಕ್ಕೆ ಅಷ್ಟೇ ಪ್ರಾಧಾನ್ಯ ಕೊಡುತ್ತಿದ್ದುದರಿಂದ ಅವರ ಹಾಡುಗಾರಿಕೆ ಸ್ವಲ್ಪ ಉಸ್ತಾದ್ ಅಬ್ದುಲ್ ಕರೀಂಖಾನರ ಹಾಡುಗಾರಿಕೆಯಂತೆ ಅನಿಸುತ್ತಿತ್ತು.

ಕುಂದಗೋಳದ ಸವಾಯಿ ಗಂಧರ್ವ ಮಹೋತ್ಸವದಲ್ಲಿ ದಸ್ತೂರ್ ಸಾಹೇಬರು ಅನೇಕ ವರ್ಷ ಕಚೇರಿ ಮಾಡುವುದು ರೂಢಿಯಾಗಿತ್ತು. ಹಿರಿಯಕ್ಕ ಗಂಗೂಬಾಯಿಯ ಸಾರಥ್ಯದಲ್ಲಿ, ಇಡೀ ರಾತ್ರಿ ವಿಜೃಂಭಣೆಯಿಂದ ಈ ಸವಾಯಿ ಗಂಧರ್ವರ ಮೂರೂ ಶಿಷ್ಯೋತ್ತಮರು ಅತ್ಯಂತ ವಿನಮ್ರಭಾವದಿಂದ ಪಾಲುಗೊಳ್ಳುತ್ತಿದ್ದರು. ಕ್ರಮೇಣ ಮೂವರಲ್ಲೂ ವಯಸ್ಸಿನ ಪ್ರಭಾವ ಕಂಡು ಬರಲಾರಂಭಿಸಿತು. ಪಂ. ಭೀಮಸೇನ ಜೋಶಿಯವರ ಅನಾರೋಗ್ಯದಿಂದ ಅವರ ಆಗಮನವೂ ಕಡಿಮೆಯಾಗಿತ್ತು.

ಮುಂಬಯಿ ವಿಶ್ವವಿದ್ಯಾಲಯದಲ್ಲಿ ಎಂಬತ್ತರ ವಯಸ್ಸಿನಲ್ಲಿಯೂ ದಸ್ತೂರರು ಸಂಗೀತ ಕಲಿಸುತ್ತಿದ್ದರು. ಅಲ್ಲಿಯ ಯುವಕ ಯುವತಿಯರಲ್ಲಿ ಕಿರಾನಾ ಘರಾಣೆಯ ಸಂಗೀತ ಶಿಕ್ಷಣವನ್ನು ಜನಪ್ರಿಯ ಮಾಡಿದ ಶ್ರೇಯ ಅವರದೇ. ಅವರ ಇಪ್ಪತ್ತಕ್ಕಿಂತ ಹೆಚ್ಚು ಶಿಷ್ಯರು ಮುಂಬಯಿ ಮತ್ತು ಪುಣೆಯಲ್ಲಿ ಆಗಾಗ ಕಾರ್ಯಕ್ರಮ ನೀಡುತ್ತಿರುತ್ತಾರೆ.

ಕೊನೆಯವರೆಗೂ ವಿವಾಹವಾಗದೇ ಇದ್ದ ಫಿರೋಜ್ ಸಾಹೇಬರು ಒಬ್ಬ ಮಾನವ್ಯ ಕಲಾವಿದರು. ನನ್ನ ವಾಸ್ತವ್ಯ ಕಳೆದ 50 ವರ್ಷಗಳಲ್ಲಿ ಮುಂಬಯಿಯಲ್ಲಿ ಇದ್ದುದರಿಂದ ನಾನು ಅನೇಕ ಬಾರಿ ವಿದ್ಯಾಲಯದಲ್ಲಿ ಕಲಿಸುತ್ತಿದ್ದಾಗ ಅವರನ್ನು ನೋಡಿದ್ದೇನೆ. ಶಿಷ್ಯರಿಗೆ ಅತಿ ವಾತ್ಸಲ್ಯದಿಂದ ಹೇಳಿಕೊಟ್ಟದ್ದನ್ನು ಕಣ್ಣಾರೆ ಕಂಡಿದ್ದೇನೆ. ಅನೇಕ ಸಲ, ಗ್ರಾಂಟರೋಡಿನಲ್ಲಿದ್ದ ಅವರ ಮನೆಗೆ ಹೋಗಿ ಅವರ ಆತಿಥ್ಯವನ್ನು ಕೂಡ ಪಡೆದಿದ್ದೇನೆ.

ದಸ್ತೂರರು 2008ರ ಮೇ 9ರಂದು ತೀರಿಕೊಂಡರು. ಪಾರ್ಸಿಗಳಾದ ಅವರ ಅಗ್ನಿಸಂಸ್ಕಾರವನ್ನು ಪುತ್ರಸಮಾನರಾದ ಅವರ ಶಿಷ್ಯ ಗಿರೀಶ ಸಂಜ್ಞಗಿರಿ ಮಾಡಿದರು.

*****

7.9

ಸುಶೀಲಾರಾಣಿ ಪಟೇಲ್ (1918–2014)

ಮುಂಬರುವ ಗುರುಪೂರ್ಣಿಮೆಯ ಸಮಾರಂಭದ ಎಲ್ಲ ತಯ್ಯಾರಿ ಮಾಡಿ, ಆಮಂತ್ರಣಗಳನ್ನು ಕೂಡ ಕಳಿಸಿದ ಸುಶೀಲಾರಾಣಿ ಪಟೇಲರು 2014ರ ಜುಲೈ2 4ರಂದು ತೀರಿಕೊಂಡರು. ತಮ್ಮ 96ನೇ ವಯಸ್ಸಿನಲ್ಲಿಯೂ ಚುರುಕಾಗಿದ್ದ ಸುಶೀಲಾರಾಣಿಯವರು ತಮ್ಮ 'ಶಿವ ಸಂಗೀತಾಂಜಲಿ' ಸಂಸ್ಥೆಯ ಮೂಲಕ ಹಿಂದುಸ್ತಾನಿ ಸಂಗೀತವನ್ನು ಪ್ರಚಾರ ಮತ್ತು ಪ್ರಸಾರ ಮಾಡುತಿದ್ದರು. ಹೊಸ ಕಲಾವಿದರನ್ನು ಪ್ರೋತ್ಸಾಹಿಸುವದು ಅವರ ಉದ್ದೇಶವಾಗಿತ್ತು. ಹೀಗೆ ಮುಂದೆ ಬಂದ ಅನೇಕ ಕಲಾವಿದರು ಅವರ ಮಾರ್ಗದರ್ಶನದಲ್ಲಿ, ಅವರ ಸಂಗೀತ ಮೆಹಫಿಲ್‌ಗಳಲ್ಲಿ, ಭಾಗವಹಿಸಿ ಯಶಸ್ವಿಯಾಗಿದ್ದಾರೆ. ಅವರ ಶಿಷ್ಯರಲ್ಲಿ ರಾಧಿಕಾ ಸೂದ್ ನಾಯಕ, ರಂಜನಾ ರಾಮಜಿ ಅಯ್ಯರ್, ಅಲವೀರಾ ಖಾನ್, ಕಿರಣರಾವ್, ಉಸ್ತಾದ್ ಅಲೀಮ್ ಖಾನ್ ಮುಂತಾದವರು ಮುಖ್ಯರು.

1919ರಲ್ಲಿ ಕೊಂಕಣಿ ಮನೆತನದಲ್ಲಿ ಹುಟ್ಟಿದ ಸುಶೀಲಾರಾಣಿ ತೊಂಬತ್ ಅವರು ಮಂಗಳೂರಿನವರು. ಶಿಕ್ಷಣದಲ್ಲಿ ಅತಿ ಹೆಚ್ಚು ರುಚಿ ಇಟ್ಟುಕೊಂಡ ಇವರು ಸತತವಾಗಿ ಮೊದಲ ದರ್ಜೆಯಲ್ಲಿ ಬಂದವರು. ಮೆಟ್ರಿಕ್‌ನಲ್ಲಿ ಚಿನ್ನದ ಪದಕ ಪಡೆದು, ಮುಂದೆ ಮದ್ರಾಸ್ ವಿಶ್ವವಿದ್ಯಾಲಯದಿಂದ ಬಿ.ಎ.ಯಲ್ಲಿ ಕೂಡ ಅತ್ಯುತ್ತಮ ಗುಣಗಳನ್ನು ಪಡೆದವರು. ತಮ್ಮ 60ನೆಯ ವಯಸ್ಸಿನಲ್ಲಿ ಕೂಡ ಮುಂಬಯಿ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಎಮ್‌ದಲ್ಲಿ ಮೊದಲನೇ ರ್‍ಯಾಂಕ್ ಗಿಟ್ಟಿಸಿ ಬಾಂಬೆ ಹೈಕೋರ್ಟಿನಲ್ಲಿ ವಕೀಲೆಯಾಗಿದ್ದರು.

1942ರಲ್ಲಿ ಶಿಕ್ಷಣದ ಆತ್ಮವಿಶ್ವಾಸ ಮತ್ತು ಸೌಂದರ್ಯದ ಕಾಂತಿಯುಳ್ಳ ಈ ತರುಣಿ ಕೆಲಸ ಹುಡುಕಿಕೊಂಡು ಮುಂಬಯಿಗೆ ಬಂದರು. ಆ ಕಾಲಿನ ಬಾಲಿವುಡ್ಡಿನ ಸುಪ್ರಸಿದ್ಧ, ಮೊಟ್ಟಮೊದಲ ಟ್ರೇಡ್ ಜರ್ನಲ್ 'ಫಿಲ್ಮ್ ಇಂಡಿಯಾ'ವನ್ನು ನಡೆಸುತ್ತಿದ್ದ ಮತ್ತು ಸಂಗೀತ ಪ್ರೇಮಿಯಾದ ಬಾಬುರಾವ್ ಪಟೇಲರ ಕಣ್ಣಿಗೆ ಬಿದ್ದರು. ಎಚ್‌ಎಮ್‌ವಿ ಮ್ಯೂಸಿಕ್ ಕಂಪನಿಯಿಂದ ಸುಶೀಲಾರಾಣಿಯವರಿಗೆ ಒಂದು ಹಾಡು ಹಾಡಲು ಕಾಂಟ್ರಾಕ್ಟ್ ಮಾಡಿಸಲು ಬಾಬುರಾವರು ಸಹಾಯಮಾಡಿದರು. ಆ ಹಾಡು ಬಹಳ ಜನಪ್ರಿಯವಾಯಿತು. ಶಿಕ್ಷಣದಲ್ಲಿ ಆಸಕ್ತಿಯಿದ್ದ ಸುಶೀಲಾರಾಣಿಯವರು ಮುಂದೆ ಶಿಕ್ಷಕಿಯಾಗಲು ಬಯಸಿ ಉದಯಪುರಕ್ಕೆ ಇನ್ನೇನು ಹೊರಡುವವರಿದ್ದರು, ಅಷ್ಟರಲ್ಲಿ

ಅವರ ಅದೃಷ್ಟ ಬದಲಾಯಿಸಿತು. ಬಾಬುರಾವರು ಅವರನ್ನು ಮದುವೆ ಮಾಡಿಕೊಂಡರು ಮತ್ತು ಅವರಿಗೆ ತಮ್ಮ ದ್ವಿತೀಯ ಪತ್ನಿಯ ಪಟ್ಟಕಟ್ಟಿದರು. ಬಾಬುರಾವರು ಎರಡು ಚಲನಚಿತ್ರವನ್ನು ನಿರ್ಮಿಸಿದರು, ಒಂದು 'ಗ್ವಾಲನ್' ಮತ್ತೊಂದು 'ದ್ರೌಪದಿ'. ಈ ಎರಡರಲ್ಲೂ ಸುಶೀಲಾರಾಣಿಯವರು ಮುಖ್ಯ ಪಾತ್ರಗಳಲ್ಲಿ ಇದ್ದರು, ಆದರೆ ಈ ಚಿತ್ರಗಳು ನಡೆಯಲಿಲ್ಲ. ಅಗಿನ ಅಕೆಯ ದ್ರೌಪದಿಯ ವೇಷದಲ್ಲಿಯ ಚಿತ್ರವನ್ನು, ನೆವಿಲ್ ಟುಲಿಯವರ 'ಒಸಿಯನ್' ಆರ್ಕೈವಿನಲ್ಲಿಯ ಪ್ರದರ್ಶನದಲ್ಲಿ ಇಟ್ಟದ್ದನ್ನು ನಾನು ನೋಡಿದ್ದೇನೆ. ಅವರು ಹಾಡಿದ ಹಾಡುಗಳು ಮಾತ್ರ ಜನಪ್ರಿಯವಾದವು. ಮುಂದೆ ಅವರಿಗೆ ಪತಿಯು ಒತ್ತಡದಿಂದ ಸಿನೆಮಾರಂಗದಿಂದ ಸನ್ಯಾಸ ಪಡೆಯಬೇಕಾಯಿತು. ಆದರೆ ಅವರಿಗೆ ಒಳ್ಳೆಯ ಸಂಗೀತಾಚಾರ್ಯರಿಂದ ಹಾಡು ಕಲಿಸಲು ಬಾಬುರಾವರು ಹಿಂದೆ ಮುಂದೆ ನೋಡಲಿಲ್ಲ. ಜಯಪುರ್-ಅತ್ರೋಲಿ ಪರಂಪರೆಯ ಅಲ್ಲಾದಿಯಾಖಾನ್, ಮೋಗುಬಾಯಿ ಕುರ್ಡಿಕರ್ ಅವರಿಂದ ತಾಲೀಮು ಕೊಡಿಸಿದರು. ಇಷ್ಟೇ ಅಲ್ಲದೇ ಖ್ಯಾತ ಲಾವಣಿ, ಠುಮ್ರಿ ಸಾಮ್ರಾಜ್ಞಿ ಎಂದೆನೆಸಿಕೊಂಡ ಸುಂದರಾಬಾಯಿ ಅವರಿಂದಲೂ ಕಲಿಯುವ ವ್ಯವಸ್ಥೆ ಮಾಡಿದರು.

ಬಾಬುರಾವರ ದುರಾಗ್ರಹದಿಂದ ಸುಶೀಲಾರಾಣಿಯವರಿಗೆ ತಾರುಣ್ಯದಲ್ಲಿ ಮೆಹಫಿಲ್ಲು ಮಾಡಲಿಕ್ಕೆ ಅಪ್ಪಣೆ ಇರಲಿಲ್ಲ. ಶಿಕ್ಷಿತರಿದ್ದುದರಿಂದ ಅವರು 'ಫಿಲ್ಮ್ ಇಂಡಿಯಾ'ದ ಎಡಿಟಿಂಗ್ ಮಾಡುತ್ತಿದ್ದರು ಮತ್ತು ಕೆಲ ಅಂಕಣಗಳನ್ನು ಬರೆಯುತ್ತಿದ್ದರು. ಬಾಬುರಾವರ ಮರಣದ ನಂತರ, ತಮ್ಮ 65ನೇ ವಯಸ್ಸಿನಲ್ಲಿ ಪತಿಯ ಫಿಲ್ಮ್ ಇಂಡಿಯಾ (ಆಮೇಲೆ ಮದರ್ ಇಂಡಿಯಾ ಆಯಿತು), ಅವರ ಹೊಮಿಯೋಪತಿ ಕ್ಲಿನಿಕ್ ಮತ್ತು ಕಚೇರಿಗಳನ್ನು ಸುಶೀಲಾರಾಣಿಯವರು ಸಂಭಾಳಿಸಿದರು. ಇದು ಸಂಗೀತಕಾರರಿಗೆ ನಿವೃತ್ತಿಯ ವಯಸ್ಸು, ಆದರೆ ಸುಶೀಲಾ ರಾಣಿಯವರು ಯಾವ ಒತ್ತಡವಿಲ್ಲದೇ ಸ್ವತಂತ್ರವಾಗಿ ಮೆಹಫಿಲ್ಲುಗಳನ್ನು ಮಾಡಲು ಪ್ರಾರಂಭಿಸಿದರು. ತಮಗೆ ಗೊತ್ತಿದ್ದನ್ನೆಲ್ಲ ತಮ್ಮ ಶಿಷ್ಯರಿಗೆ ಧಾರಾಳವಾಗಿ ನೀಡಿದರು. ಗಂಡ ಹೆಂಡತಿ ಕೂಡಿ ಪ್ರಾರಂಭಿಸಿದ, 'ಶಿವಸಂಗೀತಾಂಜಲಿ'ಯನ್ನು ಪುನಃಶ್ಚೇತನಗೊಳಿಸಿದರು. ಆ ಇಳಿ ವಯಸ್ಸಿನಲ್ಲಿಯೂ ಸುಮಾರು 35 ಪ್ರಶಸ್ತಿಗಳನ್ನು ಅವರು ಗಿಟ್ಟಿಸುತ್ತಾ ಹೋದರು! ಅದರಲ್ಲಿ ಮುಖ್ಯವಾದುದು ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಮತ್ತು ಮಹಾರಾಷ್ಟ್ರ ಪ್ರಶಸ್ತಿ. ಅವರು ಆಕಾಶವಾಣಿಯ ಆಡಿಶನ್ ಬೋರ್ಡಿನಲ್ಲಿ ಬಹಳ ವರ್ಷಗಳ ಕಾಲ ಇದ್ದರು.

ಸಾಯುವವರೆಗೆ ಹಿಂದುಸ್ತಾನಿ ಸಂಗೀತದ ಪ್ರಚಾರ ಮತ್ತು ಪ್ರಸಾರಕ್ಕಾಗಿ ದುಡಿದರು. ಅದೆಷ್ಟೋ ಹೊಸ ಮತ್ತು ಪ್ರತಿಭಾನ್ವಿತ ಕಲಾವಿದರಿಗೆ ಅವರು ಆಶ್ರಯದಾತೆಯಾಗಿದ್ದರು. ಅವರ ಇಬ್ಬರು ಶಿಷ್ಯೆಯರಾದ ರಾಧಿಕಾ ಮತ್ತು ರಂಜನಾ ಕೊನೆಯ ಕಾಲದಲ್ಲಿ ಅವರ ಸೇವೆ ಮಾಡಿಕೊಂಡಿದ್ದರು.

*****

7.10

ಖಯಾಲಿನಲ್ಲಿ ನಾಟ್ಯ ಸಂಗೀತ
ಪಂ. ವಸಂತರಾವ್ ದೇಶಪಾಂಡೆ (1920–1983)

ಪುಣೆಯ ಪಂ. ವಸಂತರಾವ್ ದೇಶಪಾಂಡೆಯವರ ಮೇಲೆ ಈ ಲೇಖನ ಬರೆಯುವಾಗ ನನಗೆ ನನ್ನ ಪುಣೆ ವಾಸ್ತವ್ಯದ ಅನೇಕ ಹಳೆಯ ನೆನಪುಗಳು ಬಾಧಿಸತೊಡಗಿದವು. ಅದರೊಂದಿಗೆ ಟೈಮ್ಸ್‌ನಲ್ಲಿ ಬರೆಯುವ ದಿನಗಳ ನೆನಪು, ಕಲಾಭಾರತಿ, ಕರ್ನಾಟಕ ಸಂಘದ ಸ್ಥಾಪನೆ ಆದಾಗಿನ ದಿನಗಳ ಸ್ಮೃತಿಚಿತ್ರಗಳು ಒಂದೊಂದಾಗಿ ನನ್ನ ಮನಸ್ಸಿನಲ್ಲಿ ಹಾಯತೊಡಗಿದವು. ನಾನು ಪುಣೆಯಲ್ಲಿದ್ದುದು 1976–77ರಲ್ಲಿ ಗ್ಲಾಕ್ಸೊ ಕಂಪನಿಯ ಏರಿಯಾ ಮ್ಯಾನೇಜರ್ ಎಂದು ತಿಂಗಳಲ್ಲಿ 10 ದಿನ ಪುಣೆಯಲ್ಲಿ ಮತ್ತು ಬಾಕಿ ನನ್ನ ಪ್ರವಾಸಮಾಡಿ ಪ್ರತಿಯೊಂದು ಊರಲ್ಲಿದ್ದ ಔಷಧ ಪ್ರತಿನಿಧಿಯೊಂದಿಗೆ ಕೆಲಸ ಮಾಡಿ ಮರಳಿ ಪುಣೆಗೆ ಬರುತ್ತಿದ್ದೆ. ಪುಣೆಯ ಶ್ರೀ ಫಡಣೀಸ ಎಂಬ ಪ್ರತಿನಿಧಿ 20 ವರ್ಷ ಹೈದ್ರಾಬಾದಿನಲ್ಲಿದ್ದು ಅವರ ವರ್ಗಾವಣೆ ಪುಣೆಗೆ ಮಾಡಬೇಕೆಂಬ ನನ್ನ ಪ್ರಯತ್ನ ಸಫಲವಾಯಿತು. ಪುಣೆಯ ಡೆಕ್ಕನ್ ಜಿಮಖಾನಾದಲ್ಲಿ ಅವರ ಬಂಗಲೆ. ಅದರ ಪಕ್ಕದಲ್ಲಿ ಸವಾಯಿ ಗಂಧರ್ವರ ಮೊಮ್ಮಗ ಶ್ರೀಕಾಂತ ದೇಶಪಾಂಡೆ ಅವರ ಬಂಗಲೆ! ಆ ದಿನಗಳಲ್ಲಿ ಪುಣೆಯ ಜನರಿಗೆ, 'ಮನೆ'ಗಳು ಇರಲಿಲ್ಲ, ಬಂಗಲೆಗಳಿದ್ದವು.! ಕೊನೆಗೊಮ್ಮೆ ಟ್ರಾನ್ಸಫರ್ ಆಯಿತು ಎಂಬ ಉತ್ಸಾಹದಲ್ಲಿ ಫಡನೀಸರು ಒಂದು ಪ್ರೀತಿ ಭೋಜನ ಅವರ ಬಂಗಲೆಯಲ್ಲಿ ಇಟ್ಟುಕೊಂಡರು. ಊಟದ ಮೊದಲು ಸಂಗೀತದ ಬೈಠಕ, ಹಾಡುವವರು ವಸಂತರಾವ ದೇಶಪಾಂಡೆ ಅಂದರೆ ಫಡನೀಸರ ಷಡ್ಕ. ಸಂಗೀತದ ಗೀಳು ಇದ್ದ ನನಗೆ ತುಂಬಾ ಖುಶಿಯಾಯಿತು. ಬೈಠಕ್ಕಿನ ಮೊದಲು ಸೋಮರಸ ಆಸ್ವಾದದ ಬೈಠಕ್ಕು ಇತ್ತು!

ಆ ದಿನ ವಸಂತರಾವರು ತಮಗೆ ಅತ್ಯಂತ ಪ್ರಿಯವಾದ ರಾಗ ಪ್ರಸ್ತುತಪಡಿಸಿದರು. ಹೆಸರು 'ಜಯತ್'. ಈ ರಾಗದ ಬಗ್ಗೆ ನನಗೆ ಏನೂ ಗೊತ್ತಿರಲಿಲ್ಲ. ಮನ್ಸೂರರ ಜೈತ ಕಲ್ಯಾಣ ಕೇಳಿದ್ದೆ. ಆದರೆ ಕೇವಲ ಜಯತ್? ಈ ರಾಗವನ್ನು ಏಕೆ ಆಯ್ಕೆ ಮಾಡಿದೆ ಎಂದು ಅವರು ಹೇಳಿದರು. "ಈ ರಾಗದಲ್ಲಿ ನನಗೆ ಷಡ್ಜ, ಪಂಚಮ ತಾರಷಡ್ಜ ಬೇಕಾದ ಹಾಗೆ ಹೋಗುವ ಸ್ವಾತಂತ್ರ್ಯವಿದೆ ನೋಡಿ." ಎಂದು ಹಾರ್ಮೋನಿಯಮ್ ವಾದಕರ 'ಪೇಟಿ'(ಹಾರ್ಮೋನಿಯಮ್) ಎಳೆದು ಕೆಲವು ನಿಮಿಷ ಮೂರೂ ಸಪ್ತಕಗಳಲ್ಲಿ ಹಾಡಿ ತೋರಿಸಿದರು. ನಂತರ ರಾಗ ರಾಜಕಲ್ಯಾಣ್, ಒಂದಿಪ್ಪತ್ತು ನಿಮಿಷ ಗಝಲ್, ನಂತರ ಒಂದು ನಾಟ್ಯ ಸಂಗೀತ ಹಾಡಿ ತಮ್ಮ ಬೈಠಕ್ ಮುಗಿಸಿದರು.

1920 ಮೇ 3 ರಂದು ವಿಧರ್ಭದ ಮೂರ್ತೀಜಾಪುರದಲ್ಲಿ ಹುಟ್ಟಿದ ವಸಂತ ದೇಶಪಾಂಡೆ 1983 ಜುಲೈ 30 ರಂದು ತಮ್ಮ ಇಹಲೋಕಯಾತ್ರೆಯನ್ನು ವಯಸ್ಸಿನ 63ಕ್ಕೇ ಮುಗಿಸಿಬಿಟ್ಟರು. ಅದರಲ್ಲಿಯೂ ವಯಸ್ಸಿನ 50ರ ತನಕ ಮಿಲಿಟರಿ ಅಕೌಂಟ್ಸ್ ಆಫೀಸಿನಲ್ಲಿ ಲೆಕ್ಕ ಬರೆಯುವ ಕಾರಕೂನಿಕೆ ಕೆಲಸ ಮಾಡಿದ ಮಹಾನುಭಾವರು ಇವರು. ನಾನು ಮೊದಲು ಬಾರಿ ಭೆಟ್ಟಿಯಾದಾಗ ಅವರು ಅದಾಗಲೇ ತಮ್ಮ ಕ್ಲಾರ್ಕ್‌ಗಿರಿಯಿಂದ ನಿವೃತ್ತಿಪಡೆದು ಮರಾಠಿ ಸಂಗೀತನಾಟಕಗಳಲ್ಲಿ ಮುಖ್ಯ ಪಾತ್ರ ವಹಿಸಿ ಇಡೀ ಮಹಾರಾಷ್ಟ್ರದಲ್ಲಿ ಪ್ರಸಿದ್ಧಿಪಡೆದವರು. ಮಾತುಗಾರಿಕೆಯಲ್ಲಿ ಅತ್ಯಂತ ಚಪಲರು. ಮಾತು ಮಾತಿಗೆ ಉರ್ದು ಶಾಯಿರಿ ಹೇಳಿ ನಮ್ಮಂತಹ, 'ಜ್ಞ'ರಿಗೆ ಅದರ ಅರ್ಥ ಹೇಳಿ ಹೊಟ್ಟೆ ಬಿರಿಯುವಂತೆ ನಗಿಸುತ್ತಿದ್ದರು. ಸೋಮರಸಪಾನದ ಅನಂತರ ಅವರ ನಾನ್ವೆಜಿಟೇರಿಯನ್ ಜೋಕ್ಸ್‌ಗಳು ಅಥವಾ ಉತ್ತರ ಪ್ರದೇಶ ಮತ್ತು ಬಿಹಾರದ ಸ್ತ್ರೀಲೋಲುಪ ನವಾಬರ ಕತೆ ಹೇಳಿ, 'ಛಪ್ಪನ್ ಛೂರಿವಾಲಿ ಇಲ್ಲವೇ ಮಲಕಾಜಾನ್ ಇವರು ಕೆಲಸಕ್ಕೆ ಬಾರದ ನವಾಬರನ್ನು ಮರಳು ಮಾಡಿ ಹಾಡಿದ ಕತೆಗಳನ್ನು ಸಾಭಿನಯ ಮಾಡಿ ತೋರಿಸುತ್ತಿದ್ದರು. ಆ ದಿನಗಳಲ್ಲಿ ನನಗೆ ಅಕ್ಷರಶಃ ವಸಂತ ದೇಶಪಾಂಡೆಯವರ 'ವಿರಾಡ್ದರ್ಶನ'ವಾಯಿತು.

ನನಗೂ, ವಸಂತರಾವ್ ದೇಶಪಾಂಡೆಯವರ ಸಂಗೀತಕ್ಕೂ ಮರಾಠಿಯಲ್ಲಿ ಹೇಳಿದ ಹಾಗೆ , 'ಛತ್ತಿಸಾವಾ ಆಕಡಾ' ಅಂದರೆ '36' ಸಂಖ್ಯೆ ಎಂದು! ಅವರ ನಾಟ್ಯ ಸಂಗೀತ ನನಗೆ ತುಂಬಾ ಸೇರುತ್ತಿದ್ದರೂ ಅವರ ಸ್ವರಗಳ ಇಳಿಜಾರಿನ ಅಸ್ಥಿರತೆ ನನ್ನಲ್ಲಿ ರಸಭಂಗ ಹುಟ್ಟಿಸುತ್ತಿತ್ತು. ಮೆಹಫಲ್ಲಿನ ಪ್ರತಿಯೊಂದು ಸಿದ್ಧರಾಗದಲ್ಲಿಯೂ ಅವರಲ್ಲಿಯ, 'ಸುಪ್ತ ದಿನಾನಾಥ್ ಮಂಗೇಶಕರ್' ಎಚ್ಚರವಾಗಿ ಒಂದು ಸ್ವರದಿಂದ ಮತ್ತೊಂದರ ಮೇಲೆ ಕಾಲು ಜಾರಿದಂತೆ ಹೋಗಿ ಕೆಲವು ರಸಿಕರಿಂದ ಚಪ್ಪಾಳೆ ಕೂಡ ಗಿಟ್ಟಿಸುತ್ತಿದ್ದರು. 'ವಾಹ್! ದಿನಾನಾಥಾ ಸಾರಖಾ ಗಾತೊ, ಕ್ಯಾ ಬಾತ ಹೈ' (ದಿನಾನಾಥರ ತರಹ ಹಾಡುತ್ತಾನೆ) ಎಂದು ನನ್ನ ಪಕ್ಕದಲ್ಲಿ ಕುಳಿತ ಮರಾಠಿಯಲ್ಲಿ ಖ್ಯಾತಿ ಹೊಂದಿದ ವಿಮರ್ಶಕ ತಾತ್ಯಾ ಬಾಕ್ರೆ ನನ್ನತ್ತ ತೀಕ್ಷ್ಣ ನೋಟ ಬೀರಿ ತಲೆ ಅಲ್ಲಾಡಿಸಿದ್ದು ನನಗೆ ಈಗಲೂ ನೆನಪಾಗುತ್ತದೆ. ರಾಗಧಾರಿಯಲ್ಲಿ ಅಥವಾ ಗಂಭೀರ ಖಯಾಲ್ ಪ್ರಸ್ತುತಿಯಲ್ಲಿ ಇಂತಹ ಸ್ವಾತಂತ್ರ್ಯ ನಿಷಿದ್ಧವಾದುದು! ಆದರೂ ವಸಂತ ದೇಶಪಾಂಡೆಯವರ ಹಾಡುಗಾರಿಕೆ ಮಹಾರಾಷ್ಟ್ರದಲ್ಲಿ ಅತ್ಯಂತ ಪ್ರಸಿದ್ಧಿಹೊಂದಿತ್ತು. "ನೀನು ಹೇಳಿದ ಹಾಗೆ ವಸಂತ ದೇಶಪಾಂಡೆಯವರಲ್ಲಿ ಪೂರ್ಣ ಖಯಾಲಿಯಾ ಇಲ್ಲದಿದ್ದರೂ ಹಾಡುವಾಗ ಪ್ರತಿಯೊಂದು ರಾಗದ ಅರ್ಥಪೂರ್ಣ ವಿವೇಚನೆ ಅವರ ಹಾಡಿನಲ್ಲಿ ಸಿಗುತ್ತದೆ." ಎಂದು ತಮ್ಮ ಅಭಿಮಾನಿಯ ಹಾಡುಗಾರಿಕೆಯ ಸಮರ್ಥನೆ ಮಾಡಿದ್ದರು ತಾತ್ಯಾ ಬಾಕ್ರೆ.

ನನಗೆ ಪುಣೆಗೆ ವರ್ಗವಾಗುವ ಮೊದಲು 1974-75ರಲ್ಲಿ ನಾಗಪುರಿನಲ್ಲಿದ್ದೆ. ಒಂದು ಶನಿವಾರ ಪಂ. ಭೀಮಸೇನ ಜೋಶಿ ಹಾಗೂ ರವಿವಾರ ವಸಂತ ದೇಶಪಾಂಡೆಯವರ ಹಾಡುಗಾರಿಕೆ ಇಟ್ಟುಕೊಂಡಿದ್ದರು. ಸ್ಥಳ ಧನವಟೆ ರಂಗಮಂದಿರ, ಶನಿವಾರ ಬೆಂಗಳೂರಿನ ಲಲಿತಾ ರಾವ್ ಅವರ ಗಾಯನ ನಂತರ ಪಂ. ಭೀಮಸೇನ ಜೋಶಿಯವರದು. ದೇಶ ವಿದೇಶಗಳಲ್ಲಿ ಪ್ರಖ್ಯಾತರಾದ ಪಂಡಿತರ ಕಚೇರಿಗೆ 400-

450 ಜನ ಅಂದರೆ ಹಾಲು ಮುಕ್ಕಾಲು ತುಂಬಿತ್ತು! ಆದರೆ ಮಾರನೇ ದಿನ ವಸಂತ ದೇಶಪಾಂಡೆಯವರ ಖಯಾಲ್ ಗಾಯನಕ್ಕೆ ಒಳಗೆ ನುಗ್ಗಲು ಸ್ಥಳವಿರಲಿಲ್ಲ! ಅಂದರೆ ಭಾರತರತ್ನ ಪಂ. ಭೀಮಸೇನ ಜೋಶಿಯುವರಿಗಿಂತ ಪಂ ವಸಂತರಾವ ದೇಶಪಾಂಡೆಯವರ ,'ತೂಕ' ನಾಗಪುರಿನಲ್ಲಿ ಹೆಚ್ಚಿನದು ಇತ್ತು!

ವಸಂತ ದೇಶಪಾಂಡೆಯವರಿಗೆ ಪ್ರಸಿದ್ಧಿ ಸಿಗಲು ಮತ್ತೊಂದು ಕಾರಣವೆಂದರೆ ಮರಾಠಿಯ ಹಾಸ್ಯ ಲೇಖಕ, ಮಹಾರಾಷ್ಟ್ರದವರ ಕಣ್ಮಣಿ ಪು.ಲ ದೇಶಪಾಂಡೆಯವರ ಸ್ನೇಹ! ಪು.ಲ ಚಿಕ್ಕವಯುಸ್ಸಿನಿಂದಲೇ ಬಾಲಗಂಧರ್ವರ ಹಾಡುಗಾರಿಕೆಗೆ ಹಾರ್ಮೋನಿಯಮ್ ಬಾರಿಸಿ, 'ವಾಹವ್ವಾ' ಗಿಟ್ಟಿಸಿದ್ದು ಮರಾಠಿಯೊಳಗಿನ ಒಂದು ಆಖ್ಯಾಯಿಕೆ. ಅಂತೆಯೇ ಅವರ ಮತ್ತು ದೇಶಪಾಂಡೆಯವರ ಇಂಡಿಯನ್ ಮರ್ಚಂಟ್ ಚೇಂಬರ್ಸಿನಲ್ಲಿ ಜುಗಲಬಂದಿ! ಮುಂದೆ ಪು.ಲ ಮುಖ್ಯ ಪಾತ್ರ ವಹಿಸಿದ್ದ 'ವಾರ್ಯಾ ವರಚಿ ವರಾತ' ಬೀದಿ ನಾಟಕದ ಮುಖ್ಯ ಪಾತ್ರದಲ್ಲಿ ಹಾಡುಗಾರಿಕೆ ಇದ್ದುದರಿಂದ ವಸಂತರಾವರಿಗೆ ಆ ಭೂಮಿಕೆಯ ಶಿಫಾರಸ್ ಬಂದಿತ್ತು. ತಬಲಾ ವಾದನದಲ್ಲಿಯೂ ಹಾರ್ಮೋನಿಯಮ್ ಬಾರಿಸುವದರಲ್ಲಿಯೂ ತುಂಬಾ ಪರಿಶ್ರಮ ಮಾಡಿದ್ದರಿಂದ ಕೆಲವೇ ತಿಂಗಳಲ್ಲಿ ತಮ್ಮ ಇಳಿ ವಯಸ್ಸಿನಲ್ಲಿ 'ವಸಂತಾ', ಡಾ. ಪಂ. ವಸಂತರಾವ್ ದೇಶಪಾಂಡೆ ಆದರು! ಮಹಾರಾಷ್ಟ್ರದ ಸಂಗೀತ ಪರಂಪರೆಯಲ್ಲಿ ಒಬ್ಬ ಶ್ರೇಷ್ಠ ಗಾಯಕ-ನಟರೆಂದು ಹೆಸರು ಗಳಿಸಿದರು.

30 ವರ್ಷ ಒಂದು ಮಿಲಿಟರಿ ಅಕೌಂಟ್ಸ್ ಕಚೇರಿಯಲ್ಲಿ ಕೆಲಸಕ್ಕಿದ್ದ ಈ ಖ್ಯಾತ ನಟ-ಹಾಡುಗಾರ ಇಷ್ಟೆಲ್ಲ ಹೇಗೆ ಸಾಧಿಸಿದ?

ತಂದೆ ತಬಲಾ ನುಡಿಸುತ್ತಿದ್ದರು. ಅಜ್ಜ ಹಾಡುತ್ತಿದ್ದರು. ಹೀಗೆ ಪರಂಪರೆಯಿಂದಲೇ ಸಂಗೀತದ ಬಾಲಾಮೃತ ಪುಟ್ಟ ವಸಂತನಿಗೆ ಸಿಕ್ಕಿತ್ತು. ವಸಂತನ ತಾಯಿಗೆ ಎಲ್ಲ ಆರತಿ ಪದಗಳು, ಬೀಸುವ ಕಲ್ಲಿನ ಮರಾಠಿ ಹಾಡುಗಳು ಬಾಯಿಪಾಠವಾಗಿತ್ತು. ಇಂಪಾದ ಶಾರೀರ, ವಸಂತ ಕ್ರಮೇಣ ಇವೆಲ್ಲ ಕಲಿತ. ಒಂದು ದಿನ ಗಮ್ಮತ್ತಿಗೆ ತಾಯಿ 'ಮೃಚ್ಛಕಟಿಕಾ' ನಾಟಕದ ಹಾಡು ಕಲಿಸಿದಳು. ಈತ ಕೂಡಲೇ ಹಾಡಿ ಇದ್ದಕಿದ್ದಂತೆ ಒಪ್ಪಿಸಿದ. ಇದು ಇಷ್ಟಕ್ಕೆ ನಿಲ್ಲಲಿಲ್ಲ. ಒಂದು ದಿನ ತಾಯಿ ಉಪ್ಪು ಮೆಣಸು ತರಲು ಅಂಗಡಿಗೆ ಅಟ್ಟಿದಾಗ, ಮಳೆ ಬಂತೆಂದು ಪಕ್ಕದಲ್ಲಿದ್ದ ಅಟ್ಟಕ್ಕೆ ಹೋಗುವ ಮಾಳಿಗೆಯ ಮೇಲೆ ತನ್ನಷ್ಟಕ್ಕೆ ಹಾಡುತ್ತ ಕುಳಿತಾಗ ಒಬ್ಬ ಧೋತರ ಶರ್ಟು ಟೊಪ್ಪಿಗೆ ಹಾಕಿದ ವ್ಯಕ್ತಿ ಮಾಳಿಗೆ ಇಳಿದು ಬಂದರು. ಸ್ವಲ್ಪ ಬಿರಬಿರನೆ ನೋಡುತ್ತ ವಸಂತನಿಗೆ ಕೇಳಿದರು.

"ಯಾವ ಕ್ಲಾಸಿನಲ್ಲಿ ಓದುತ್ತಿದ್ದಿಯಾ?

"ನಾನು ಯಾವುದೇ ಶಾಲೆಗೆ ಹೋಗುವುದಿಲ್ಲಾ" ವಸಂತ ಹೇಳಿದ

"ನಿನಗೆ ಈ ಹಾಡು ಯಾರು ಕಲಿಸಿದರು?"

"ಅಮ್ಮ ಹಾಡಿದ್ದನ್ನು ಕೇಳಿ ಕೇಳಿ ಬಾಯಿಪಾಠವಾಗಿದೆ."

ಈ ಮಾತು ಕೇಳಿ ಮಾಳಿಗೆ ಮೇಲಿನ ಸಂಗೀತ ಮಾಸ್ತರ ಶಂಕರರಾವ್ ಸಪ್ರೆ (ಗ್ವಾಲಿಯರ್ ಘರಾಣಾದವರು) ಈ ಬಾಲಕನನ್ನು ತನ್ನ ಕೊಡೆಯಲ್ಲಿ ಸಮಾವಿಷ್ಠಮಾಡಿ ವಸಂತ ದೇಶಪಾಂಡೆಯವರ ಮನೆಗೆ ಬಂದರು.

"ತಾಯೀ, ನಿಮ್ಮ ಮಗನಿಗೆ ಕಂಠದಲ್ಲಿಯೇ ಷಡ್ಜವಿದೆ. ಒಳ್ಳೆಯ 'ಸಮಝ್' ಇದೆ (ಜ್ಞಾನ, ತಿಳುವಳಿಕೆ) ನಮ್ಮ ಶಾಲೆಯಲ್ಲಿ ಕಲಿಯಲಿ, ಫೀ ಕೊಡಬೇಕಾಗಿಲ್ಲಾ".

ಆರ್ಥಿಕ ಪರಿಸ್ಥಿತಿ ಅಷ್ಟಕ್ಕಷ್ಟೇ ಇದ್ದ ವಸಂತನ ತಾಯಿ, 'ಸರಿ' ಅಂದರು. ಹೀಗೆ ಸಪ್ರೆ ಗುರೂಜಿಗಳು ವಸಂತನ ಮೊದಲನೇ ಗುರು ಆದರು. ಆಗಿನ ಕಾಲದ ಅವರ ಸಂಗಡಿಗರು ಯಾರು ಗೊತ್ತೇ? ಮುಂದೆ ಅತ್ಯಂತ ಪ್ರಸಿದ್ಧ ಸಂಗೀತ ದಿಗ್ದರ್ಶಕರೆಂದು ಖ್ಯಾತಿವೆತ್ತ ರಾಮ್ ಚಿತಳಕರ್ (ಸಿ. ರಾಮಚಂದ್ರ)!

ಇದೆಲ್ಲ ನಡೆದದ್ದು ನಾಗಪುರದಲ್ಲಿ, ಇಬ್ಬರೂ ಸಂಗೀತ ಶಾಲೆಯ ಮತ್ತು ನಗರಪಾಲಿಕೆಯ ಶಾಲೆಯಲ್ಲಿ ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಹೀಗೆ ಜನಜಂಗುಳಿಯ ಮಧ್ಯೆ ಹೆದರದೆ ಅಭಿನಯ, ಹಾಡುಗಾರಿಕೆ ಇದೆಲ್ಲದರ ಅಭ್ಯಾಸವಾಯಿತು. ಸಪ್ರೆ ಮಾಸ್ತರರು ಕೂಡ ನಾಗಪುರದಲ್ಲಿ ಯಾವುದೇ ನಾಟಕ ಮಂಡಳಿ ಬಂದರೆ ತಪ್ಪದೇ ಇವರಿಬ್ಬರನ್ನು ಕರೆದುಕೊಂಡು ಹೋಗುತ್ತಿದ್ದರು. ಒಂದು ದಿನ ಸಪ್ರೆ ಮಾಸ್ತರರು ಆಗ್ರಹ ಮಾಡಿ ಮಾಸ್ಟರ್ ದೀನಾನಾಥರ ಎದುರು ಅವರದೇ ನಾಟಕದ ಹಾಡನ್ನು ಹಾಡಿಸಿದರು.

"ಈ ಹುಡುಗನಲ್ಲಿ ಏನೋ ಒಂದು ಅದ್ಭುತ ಶಕ್ತಿ ಇದೆ. ಸರಿ ನಾನೇ ನಿನಗೆ 5–6 ಹಾಡುಗಳನ್ನು ಕಲಿಸುವೆ." ಎಂದು ಮಾಸ್ಟರ್ ದೀನಾನಾಥರು ತಮ್ಮ ನಾಗಪುರದ ಮುಕ್ಕಾಮಿನಲ್ಲಿ ಇರುವ ತನಕ ಸಂಗೀತ ಹೇಳಿಕೊಟ್ಟರು. ಹೀಗೆ ದೀನಾನಾಥರು ವಸಂತ ದೇಶಪಾಂಡೆಯವರ ಎರಡನೆಯ ಗುರು. ಈ ಎರಡನೆಯ ಗುರುವಿನ ತಾಲೀಮು ವಸಂತ ಕೊನೆಯವರೆಗೆ ಮರೆಯಲಿಲ್ಲ. ಅಷ್ಟೇ ಅಲ್ಲ ತನ್ನ ಹಾಡುಗಾರಿಕೆಯಲ್ಲಿ 'ದೀನಾನಾಥ್ ಪ್ಯಾಟರ್ನ್' ಸೇರಿಸಿಕೊಂಡುಬಿಟ್ಟರು!

ಚಿಕ್ಕ ವಯಸ್ಸಿನಲ್ಲಿಯೇ ತಂದೆಯ ಅಗಲುವಿಕೆ ಮತ್ತು ನಾಟಕಪ್ರಿಯ ರೈಲ್ವೆಯಲ್ಲಿದ್ದ ಸೋದರಮಾವನ (ಮಾಮಾ) ಪೋಷಣೆ ವಸಂತ ಅವರ ಮೇಲೆ ಅಚ್ಚಳಿಯದೇ ಮುದ್ರೆ ಹಾಕಿತು. ಮಾವ ರೈಲ್ವೆಯಲ್ಲಿದ್ದ ಕಾರಣ ಅವರ ಜೊತೆ ಲಾಹೋರಿಗೆ ವಸಂತ ಹೋದರು. ನಾಗಪುರ, ಭಾರತದ ಮಧ್ಯ ಭಾಗದಲ್ಲಿದ್ದ ಕಾರಣ ಉತ್ತರ, ದಕ್ಷಿಣ, ಪೂರ್ವ ಈ ಎಲ್ಲ ದಿಕ್ಕುಗಳ ಮುಖ್ಯ ರೈಲ್ವೆ ಕೇಂದ್ರವಾಗಿತ್ತು. ಹೀಗಾಗಿ ಮರಾಠಿಗರು ಕೂಡ ಈಗಲೂ ಹಿಂದಿಯಲ್ಲಿ ಮಾತುಕತೆ ನಡೆಸುತ್ತಾರೆ. ಮೇಲಾಗಿ ಒಂದಾನೊಂದು ಕಾಲದಲ್ಲಿ ನಾಗಪುರ, ಮಹಾಕೋಸಲ ಮತ್ತು ಮಧ್ಯ ಭಾರತದ ರಾಜಧಾನಿಯೆಂದು ಮೆರೆದಿತ್ತು. ಹೀಗೆ ವಸಂತಾ ನಾಗಪುರ, ಲಾಹೋರ ಈ ಶಹರಗಳಲ್ಲಿ ಉರ್ದು ಕೂಡ ಕಲಿತರು.

ಒಮ್ಮೆ ಬಾಲ ಗಂಧರ್ವರ ಗಾಯನ ಶ್ರೇಷ್ಠವೋ ಅಥವಾ ದೀನಾನಾಥರದೋ ಎಂಬ ಪ್ರಶ್ನೆಗೆ ವಸಂತರಾವ್ ದೇಶಪಾಂಡೆಯವರು ವಿಸ್ತಾರವಾಗಿ ಹೀಗೆ ಉತ್ತರಿಸಿದ್ದುಂಟು.

“ಬಾಲ ಗಂಧರ್ವರ ಹಾಡುಗಾರಿಕೆ ಎಂದರೆ ಅತ್ಯಂತ ನಾಜೂಕಾಗಿದ್ದು ಅವರ ಕೇಳುವವರಿಗೆ ಸ್ವರಾಮೃತ ಕುಡಿಸಿದ ಹಾಗೇ ಇರುತ್ತದೆ. ತಾಯಿ ಮಗುವಿಗೆ ಉಣಿಸಿದಂತೆ! ದೀನಾನಾಥರು ಹಾಗಲ್ಲ, ಅವರ ಹಾಡಿನಲ್ಲಿ ಮಿಂಚಿನ ಫ್ಲಾಶ್ ಇತ್ತು! ಅದುಒಮ್ಮೇಲೆ ‘ಲಖ್’ ಎಂದು ಪ್ರಕಾಶ ಬೀಳುವಂತಹದು, ಚಮತ್ಕೃತಿಪೂರ್ಣವಾದುದು!

ಮಾವನೊಂದಿಗೆ ಲಾಹೋರಿಗೆ ಹೋದ ವಸಂತಾ, ಅಲ್ಲಿ ತುಂಬಾ ಸಂಗೀತ ಕೇಳಿದ, ಕಲಿತ, ಹಾಡಿದ. ಹೀರಾಬಾಯಿ ಬಡೋದೆಕರ್ ಅವರ ಗುರು ವಹೀದ್ ಖಾನ್, ಬಡೇ ಗುಲಾಮ್ ಅಲಿ ಖಾನ್‌ರಂತೂ ಲಾಹೋರಿನವರೇ. ಪಲುಸ್ಕರರು ಸ್ಥಾಪಿಸಿದ ಗಾಂಧರ್ವ ಮಹಾವಿದ್ಯಾಲಯದ ಆಪಟೆ ಗುರೂಜಿ ಇವರೆಲ್ಲರಿಂದ ಕಲಿತ ರಾಗ ಜ್ಞಾನಕ್ಕೆ ಒಂದು ಶಿಸ್ತು, ಕ್ರಮ, ರಾಗ, ನಿಯಮ ಇತ್ಯಾದಿಗಳ ಬಂಧ ಬಂದಿತು.

ನಾಗಪುರದಲ್ಲಿದ್ದಾಗ ಅವರು ಒಂದೆರಡು ಮರಾಠಿ ಚಲಚಿತ್ರಗಳಲ್ಲಿ, ‘ಬಾಲ ಕಲಾವಿದ’ನೆಂದು ಕೃಷ್ಣನ ಪಾತ್ರ, ‘ಕಾಲಿಯಾ ಮರ್ದನ’ದಲ್ಲಿ ಮಾಡಿದ್ದೂ ಇದೆ. ಅದೇ ಸುಮಾರಿಗೆ ಚಿತಳಕರ್ ಕೂಡ, ‘ನಾಗಾನಂದ’ ಎಂಬ ಚಲನಚಿತ್ರದಲ್ಲಿ ‘ಹೀರೋ’ ಎಂದು ಮೆರೆದು ಕೊನೆಗೆ ಮುಂಬಯಿಯಲ್ಲಿಯೇ ಸ್ಥಾಯಿಕನಾದ.

18 ವರ್ಷದವನಿದ್ದಾಗ ವಸಂತ ಲಾಹೋರಿಗೆ ಹೋದ. ನೌಕರಿಯ ಪ್ರಯತ್ನ ನಡೆದಿತ್ತು. ಆದರೆ ಸಂಗೀತ ಕಲಿಯುವ ಗೀಳು ಬೆನ್ನುಹತ್ತಿತ್ತು. ಲಾಹೋರ್, ಆ ಕಾಲದ ಹಿಂದುಸ್ತಾನಿ ಸಂಗೀತದ ಕೇಂದ್ರವಾಗಿತ್ತು. ಅನೇಕ ಮುಸಲ್ಮಾನ ಗವಯಿಗಳು, ‘ಚರಸ–ಅಫು ಭಕ್ತರಾಗಿ,’ ಫಕೀರರಾಗಿ ಜಹಾಂಗೀರನ ಕಬ್ರಸ್ಥಾನದಲ್ಲಿ ವಾಸಿಸುತ್ತಿದ್ದರು. ಈ ವಸಂತನ ಸವಾರಿ ಅತ್ತ ಕಡೆ ತಿರುಗಿತು. ಅಲ್ಲಿಯ ಒಬ್ಬ ಹಿರಿಯ ಫಕೀರನಿಗೆ ಹಾಡಿ ತೋರಿಸಿದ ಮತ್ತು ಮಾವ ಹೇಳಿದಂತೆ ಒಂದೆರಡಾಣೆ ಕಾಲಬಳಿ ಇಟ್ಟು ನಮಸ್ಕಾರ ಮಾಡಿದ. ಈ ಉಸ್ತಾದ್‌ರು ಅತ್ಯಂತ ಖುಷಿಯಿಂದ ವಸಂತಾನಿಗೆ ಸಂಗೀತದ ಭಂಡಾರವನ್ನೇ ಕೊಟ್ಟರು. ಮುಂದೆ ವಸಂತ ಅಲ್ಲಿದ್ದ ನಾಲ್ಕೂ ಗುರುಗಳಿಗೆ ‘ಚರಸ್’ ಕೊಟ್ಟು ಮಾಮಾ ಹೇಳಿದಂತೆ ಒಂದು ಪುಡಿಯಲ್ಲಿ ದ್ರಾಕ್ಷಿ, ಅಂಜೀರ, ‘ಖುರಾಕ್’ ಮತ್ತು ಹಾರಗಳನ್ನು ಅರ್ಪಿಸಿದ. ಹಿರಿಯ ಮುದುಕ ಮತ್ತೀರ್ವರು ವಸಂತಾನಿಗೆ, ‘ಮಾರವಾ’ ಹೇಳಿಕೊಟ್ಟರು. “ಆಜ ಯೇ ಅಸದ್ ಅಲಿ ಬಹುತ ಖುಶ್ ಹುವಾ’ ಎಂದು ಹಿರಿಯ ಮುದುಕರು ಹೇಳಿದರಂತೆ! ಅಂದರೆ ಈತ ಅತ್ಯಂತ ಪ್ರಖ್ಯಾತವಾದ ಗ್ವಾಲಿಯರ್ ಪರಂಪರೆಯ ಕವ್ವಾಲ್ ಬಚ್ಚೆ ಘರಾಣೆಗೆ ಸೇರಿದವರಾಗಿದ್ದರು! “ಬೇಟಾ ಯಹ್ ಏಕ್ ರಾಗ್ ಆಗಯಾ ತೋ ಸಬ್ ಆಗಯಾ, ಏಕ್ ಸಾಧೆ ತೊ ಸಬ್ ಸಾಧೆ, ಸಬ್ ಸಾಧೆ ತೊ ಕುಚ್ ನಹಿ ಸಾಧೆ’ (ಒಂದನ್ನು ಸಾಧಿಸಿದರೆ ಎಲ್ಲವನ್ನು ಸಾಧಿಸಿದಂತೆಯೇ, ಎಲ್ಲವನ್ನು ಒಂದೇ ಬಾರಿಗೆ ಸಾಧಿಸಲು ಹೊರಟರೆ ಏನೂ ಸಾಧ್ಯವಾಗಲಾರದು) ಎಂಬ ಕಿವಿ ಮಂತ್ರ ಕೂಡ ಕೊಟ್ಟರು.

ಕ್ರಮೇಣ ವಸಂತರಾವ್ ಅವರು ನಾಗಪುರದಿಂದ ಲಾಹೋರ್, ಲಾಹೋರದಿಂದ ಪುಣೆಗೆ ಗುರುವಿನ ಶೋಧದಲ್ಲಿ ಪ್ರಯಾಣ ಬೆಳೆಸಿದರು. 1942 ರಿಂದ 1952ರವರೆಗೆ ವಸಂತ ಅವರ ಸಂಗೀತ ತರಬೇತಿ ಅಸದ್ ಅಲಿಯವರಿಂದ (ಪಟಿಯಾಲಾ ಘರಾಣಾ),

ಸುರೇಶಬಾಬು ಮಾನೆ (ಕಿರಾನಾ) ಮತ್ತು ಅಮಾನ ಅಲಿ, (ಭೆಂಡಿ ಬಝಾರ್) ಈ ಶ್ರೇಷ್ಠ ಗುರುಗಳಿಂದ ಪಡೆಯುತ್ತಾ ಹೋದರು ಮತ್ತು ಅವರ ಶ್ರೀಕಂಠದ ಸಿರಿವಂತಿಕೆ ಬೆಳೆಯುತ್ತಲೇ ಹೋಯಿತು. ಹೀಗೆ ಸಂಗೀತದಲ್ಲಿಯ ಕೊಡು-ಕೊಳ್ಳುವಿಕೆ ಪುಣೆಗೆ ಬಂದ ನಂತರವೂ ನಡೆದೇ ಇತ್ತು.

1941 ರಿಂದ 1965ರವರೆಗೆ ಅವರ ಅರ್ಥಾರ್ಜನೆ ಮಾಮೂಲಿ ಮಿಲಿಟರಿ ಗುಮಾಸ್ತನ ಸಂಬಳದಲ್ಲಿ ಎಲ್ಲಾ ನಿಭಾಯಿಸಬೇಕಾಗುತ್ತಿತ್ತು. ಒಂದು ದಿನ ಕೆಲಸಕ್ಕೆ ಸಲಾಮು ಹೊಡೆಯಲು ಗಝಲ್ ಸಾಮ್ರಾಜ್ಞಿ ಬೇಗಮ್ ಅಖ್ತರ್ ಕಾರಣರಾದರು ಎನ್ನುತ್ತಾರೆ ವಸಂತ್ ಅವರು. ತಾತ್ಯಾ ಬಾಕ್ರೆಯವರು, 'ಬೇಗಂ ಅಖ್ತರ್ ಮತ್ತು ವಸಂತರಾವ್ ಅವರ ಗುರು-ಶಿಷ್ಯ ಸಂಬಂಧದ ಬಗ್ಗೆ ಬಹಳ ಚೆನ್ನಾಗಿ, 'ಬುಝುರ್ಗ್' ಪುಸ್ತಕದಲ್ಲಿ ಒಂದು ಅಧ್ಯಾಯವನ್ನೇ ಮೀಸಲಿಟ್ಟಿದ್ದಾರೆ. 1963ರಲ್ಲಿ ಚೀನವು ಭಾರತದ ಮೇಲೇರಿ ಬಂದಾಗ ನಮ್ಮ ವಸಂತರಾವ್ ಅವರಿಗೆ ಪುಣೆಯಿಂದ ನೇಫಾ ಬಾರ್ಡರಿಗೆ ಆಫೀಸು ಕೆಲಸಕ್ಕೆ ಕಳಿಸಲಾಗಿತ್ತು. ಒಂದೆರಡು ರಾತ್ರಿ ಕಳೆದು ಲಖನೌ ತಲುಪಿದಾಗ ಬೇಗಮ್ ಅಖ್ತರ್ ಮತ್ತು ಅವರ ಪತಿರಾಯರು ವಸಂತರಾಯರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಮುಂದೆ ವಸಂತರಾವ್ ಅವರು ನೇಫಾ ಗಡಿ ತಲುಪಿದರು. ಒಂದೆರಡು ತಿಂಗಳು ಕಳೆದವು. 'ಸಿಕ್ ಲೀವ್' ಮೇಲೆ ಪುಣೆಗೆ ಮರಳುವಾಗ ಲಖನೌನಲ್ಲಿ ಇಳಿದು ಬೇಗಂ ಅಖ್ತರ್ ಅವರ ಮನೆಯಿಂದಲೇ ರಾಜೀನಾಮೆಯ ತಾರು ಕೊಟ್ಟು ಕಳಿಸಲಾಯಿತು. ಈ ಖುಷಿ ಖಬರನ್ನು ಕೇಳಿ ಬೇಗಂ ಒಂದು ಮೆಹಫಿಲನ್ನು ತಮ್ಮ ಮನೆಯಲ್ಲಿ ಆಯೋಜಿಸಿದರು. ಬೇಗಂಗೆ ತಬಲಾ ಸಾಥ ಕೊಟ್ಟದ್ದು ವಸಂತರಾವ್ ಅವರೇ. ನೌಕರಿಯಿಂದ ಬಿಡುಗಡೆ ಮಾಡಿಸಿದ ಮೇಲೆ ಒಮ್ಮೆ ಬೇಗಮ್ ಅಖ್ತರ್ ಸವಾಯಿ ಗಂಧರ್ವ' ಕಾರ್ಯಕ್ರಮದಲ್ಲಿ ಹಾಡಲು ಪುಣೆಗೆ ಬಂದಿದ್ದರು. ವಸಂತರಾವ್ ಅವರನ್ನು ಅವರ ಬಂಗಲೆಯಲ್ಲಿ ಭೇಟಿಮಾಡಿ, "ದೇಖಿಯೇ ಜನಾಬ್, ಆಪ್ ತೋ ಅಬ್ ಪೂರೇ ಗವಯ್ಯೆ ಹೋಗಯೇ" (ನೋಡಿ ಸಾಹೇಬರೇ, ಈಗ ನೀವು ಪೂರ್ತಿ ಗಾಯಕರಾಗಿ ಬಿಟ್ಟಿದ್ದಿರಾ') ಎಂದು ಹೇಳಿ ಅವರಿಂದ ಒಂದೆರಡು ಠುಮ್ರಿಗಳನ್ನು ಹಾಡಿಸಿದರಂತೆ!

1961ರಿಂದಲೇ ನಾಟಕದಲ್ಲಿ ಪಾತ್ರವಹಿಸುತ್ತಿದ್ದ ವಸಂತಾ ಅವರು ಕ್ರಮೇಣ ಪುಣೆ ಮುಂಬಯಿಯಲ್ಲಿ ಹೆಸರು, ಅರ್ಥಪ್ರಾಪ್ತಿ ಕೂಡ ಮಾಡಿದರು. 1953ರಿಂದ-1982ರತನಕ ಒಂದೆರಡು ವರ್ಷ ಬಿಟ್ಟು ಪ್ರತಿಯೊಂದು 'ಸವಾಯಿ ಗಂಧರ್ವ' ಮಹೋತ್ಸವದಲ್ಲಿ ಭಾಗವಹಿಸಿದರು. ಪು.ಲ. ಅವರ ಕೃಪೆಯಿಂದ ಅವರ ಪ್ರತಿಯೊಂದು ಚಲನಚಿತ್ರದಲ್ಲಿ ವಸಂತರಾವ್ ಹಾಡಿದ ಒಂದೆರಡು ಹಾಡುಗಳು ಇದ್ದೇ ಇರುತ್ತಿದ್ದವು.

ಇನ್ನೊಂದು ಮಾತು. ವಸಂತರಾವರ ಅಲೇಮಾರಿ ಜೀವನದಿಂದಲೋ ಏನೋ, ಅವರಿಗೆ ಸಂಗೀತದಲ್ಲಿ ಡಾಕ್ಟರೇಟ ಸಿಕ್ಕಿದ್ದರೂ ಕೊನೆಯ ತನಕ ಆಕಾಶವಾಣಿಯ , 'ಎ' ಅಥವಾ 'ಬಿ' ಗ್ರೇಡಿನಲ್ಲಿ ಕೂಡ ಅವರ ಹೆಸರು ಇರಲಿಲ್ಲ. ಇರದೇ ಇದ್ದುದು ಆಕಾಶವಾಣಿಯ ತಪ್ಪಲ್ಲ! ಕೇಸಕರ್ ಅವರು ಬಾನುಲಿಯ ಮಂತ್ರಿಯಾಗಿದ್ದಾಗ, ಆ ಕಾಲದ ಎಲ್ಲ ಅಂದರೆ 1950 ರ ಉಸ್ತಾದ್/ಪಂಡಿತರಿಗೆ ದರ್ಜೆಕೊಟ್ಟಾಗಿತ್ತು. ಮುಂದೆ

ಹಾಡುವವರಿಗೂ ಕೂಡ ಒಂದು ಪ್ರೋಸಿಜರ್ ಮಾಡಿದ್ದರು. ಅದರಂತೆ ಹಾಡುವವರು ಲೋಕಲ್ ಬಾನುಲಿ ಸ್ಟೇಶನ್ನನಲ್ಲಿ ಹಾಡಿದ ಧ್ವನಿ ಸುರುಳಿಯನ್ನು ದಿಲ್ಲಿಗೆ ಕಳಿಸಿ ಪ್ರತಿಯೊಬ್ಬರಿಗೂ ಗ್ರೇಡ್ ಕೊಡಲಾಗುತ್ತಿತ್ತು. ಈಗಲೂ ಕೂಡ ಇದೇ ಸಿಸ್ಟೆಮ್ ಜಾರಿಯಲ್ಲಿದೆ. ವಸಂತರಾವರಿಗೂ ಇದು ಅನ್ವಯಿಸುತ್ತಿತ್ತು. ಇಷ್ಟೆಲ್ಲ ಬರೆಯುವ ಕಾರಣವೆಂದರೆ, ತಾತ್ಯಾ ಬಾಕ್ರೆ ಮತ್ತು ನನ್ನ ಸಹಕಾರಿ ದತ್ತಾ ಮಾರೂಳಕರ್ ಇವರು ವಸಂತರಾವರಿಗೆ ಯಾವುದೇ ಗ್ರೇಡ ಕೊಡದೆ ಇರುವುದಕ್ಕೆ ತಮ್ಮ ಪುಸ್ತಕದಲ್ಲಿ ಆಕಾಶವಾಣಿಗೆ ಬಹಳ ಬೈದಿದ್ದಾರೆ. ಪು.ಲ ಅವರಂತೂ ತಮ್ಮದೇ ಸ್ಟೈಲನಲ್ಲಿ, 'ಬೆಳಗಾವಿ ಮಹಾರಾಷ್ಟ್ರಕ್ಕೆ ಬಂದಾಗಲೇ ಬಹುಶಃ ವಸಂತರಾವರು ಆಕಾಶವಾಣಿ ಕಲಾವಿದರು ಆಗಬಹುದೇನೋ' ಎನ್ನುವಂತಹ ಉಪಹಾಸ್ಯಾತ್ಮಕ ಮಾತು ಬರೆದು, ಆಡಿದ ಸಂದರ್ಭಗಳಿವೆ. ಕೊನೆಗೂ ವಸಂತರಾವ್ ಅವರಿಗೆ 'ಬಿ–ಹೈ' ಗ್ರೇಡ್ ಕೊಡಲಾಯಿತು!

ಪು.ಲ. ದೇಶಪಾಂಡೆಯವರು ದೂರದರ್ಶನ, ಆಕಾಶವಾಣಿಯಲ್ಲಿ ಇದ್ದವರು. ಹೊಸದಾಗಿ ದೂರದರ್ಶನ ಭಾರತದಲ್ಲಿ ಬಂದ ದಿನಗಳಲ್ಲಿ ಅವರನ್ನು ಸರಕಾರಿ ಖರ್ಚಿನಲ್ಲಿ ಲಂಡನ್ನಿಗೆ ಕಳಿಸಲಾಗಿತ್ತು. ಆಕಾಶವಾಣಿಯಲ್ಲಿ ಕೆ.ಡಿ ದಿಕ್ಷೀತ್ ಎಂಬವರು ಉನ್ನತ ಅಧಿಕಾರಿಯೂ ಕೂಡ ವಸಂತ ದೇಶಪಾಂಡೆಯವರ ಸ್ನೇಹಿತರೇ, ಆದರೂ ಅವರ ಗ್ರೇಡೇಶನ್ ಸಲುವಾಗಿ ಯಾರೂ ಪ್ರಯತ್ನಿಸಲಿಲ್ಲವೆಂದರೆ ಆಗಿನ ಕಾಲದಲ್ಲಿ ಇಂತಹ ಪ್ರಭಾವಕ್ಕೆ ಬೆಲೆ ಇರಲಿಲ್ಲ ಎಂಬುದು ನಿರ್ವಿವಾದ!

ವಸಂತರಾವ್ ಅವರ ಉತ್ಥಾನದ ದಿನಗಳಲ್ಲಿ ಅವರ ಗೆಳೆತನ ಪಂ. ರಾಮಕೃಷ್ಣ ಬುವಾ ವಝೆಯವರೊಂದಿಗೆ ಕೂಡ ಇತ್ತು. ಪೈಲವಾನ ಜಟ್ಟಿಯಂತಿದ್ದ ವಸಂತರಾವ್ ಮತ್ತು ಅವರ ಅಜ್ಜನಂತಿದ್ದ ರಾಮಕೃಷ್ಣ ವಝೆಯವರು ಪುಣೆಯ ಶನವಾರದಲ್ಲಿ ಪ್ರತಿದಿನ ಮುಂಜಾನೆ ಅರ್ಧಸೇರು ಜಿಲೇಬಿ ತಿನ್ನಲು ಬರುತ್ತಿದ್ದರಂತೆ. ಬಳಿಕ ಅರ್ಧ ಸೇರು ಹಾಲು ಸೇವಿಸಿ ತಮ್ಮ ಈ ಕಚೇರಿಯನ್ನು ಮುಕ್ತಾಯಗೊಳಿಸುತ್ತಿದ್ದರಂತೆ. ವಸಂತರಾವ್ ಅವರು ಕೊನೆಯತನಕ ಬಾಕ್ರೆ ಅವರ ಶಿಷ್ಯರಾಗಿ ಉಳಿದರು. ಅವರು ಬೇಗಂ ಅಖ್ತರ್, ಅಸದ್ ಅಲಿ, ರಾಮಕೃಷ್ಣ ಬುವಾ ವಝೆ, ಫತ್ತೆ ಅಲಿ ಕೊನೆಗೆ ಜಿತೇಂದ್ರ ಅಭಿಷೇಕಿಯವರಲ್ಲಿಯೂ ಸಂಗೀತವನ್ನು ಕಲಿಯಲು ಹಿಂದೆ ಮುಂದೆ ನೋಡಲಿಲ್ಲ! ಹೀಗಿದ್ದರು ಡಾ. ಪಂ. ವಸಂತರಾವ್ ದೇಶಪಾಂಡೆ.

ಇತ್ತೀಚೆಗೆ ಅವರ ಮೊಮ್ಮಗ ರಾಹುಲ್ ದೇಶಪಾಂಡೆ ಇವರನ್ನು ಕಲಾಭಾರತಿ, ಕರ್ನಾಟಕ ಸಂಘದಲ್ಲಿ ಕರೆಸಿ ಅವರ ಹಾಡುಗಾರಿಕೆಯನ್ನು ಇಟ್ಟುಕೊಂಡಿದ್ದೆವು. ಆದರೆ ವಸಂತರಾವ್ ಅವರ ಗಾಯನದ ಕೌಶಲ್ಯವೇ ಬೇರೆ, ಅದು ಚಮತ್ಕೃತಿಪೂರ್ಣವಾಗಿರುತ್ತಿತ್ತು!

ಮೇಲೆ ಕೊಟ್ಟ ಈ ವಿವರಗಳೆಲ್ಲ ವಿಮರ್ಶಕ ಬಾಳಕೃಷ್ಣ ತಾತ್ಯಾ ಬಾಕ್ರೆ ಹೇಳಿದ್ದು. ಕಲಾಭಾರತಿ ಹೊಸದಾಗಿ ಸ್ಥಾಪನೆಯಾದಾಗ ಈ ಬಾಕ್ರೆ ಸಾಹೇಬರು ನಮಗೆ ತುಂಬಾ ಸಹಾಯ ಮಾಡಿದ್ದರು. ಪ್ರತಿ ರವಿವಾರ ಮಹಾರಾಷ್ಟ ಟೈಮ್ಸ್‌ನಲ್ಲಿ ಅವರ ಅಂಕಣವಿರುತ್ತಿತ್ತು. ಪ್ರತಿ ರವಿವಾರ ನಮ್ಮ ಭೆಟ್ಟಿ! ವಸಂತರಾವ್ ಅವರ, ಆ ದಿನದ,

ರಾಗ 'ಜಯತ್' ನೆನಪಾಯಿತು. ಮತ್ತು ಅವರು ಹೇಳಿದ ಮಾತುಗಳು ಕೂಡ "ಈ ರಾಗದಲ್ಲಿ ನನಗೆ ಷಡ್ಜ, ಪಂಚಮ ತಾರಷಡ್ಜಗಳಿಗೆ ಬೇಕಾದ ಹಾಗೆ ಹೋಗುವ ಸ್ವಾತಂತ್ರ್ಯವಿದೆ ನೋಡಿ." ಇದು 30–32 ವರ್ಷಗಳ ಹಿಂದಿನ ಮಾತು. ಅವರು ಪೇಳಿದ ಮಾತು ಎಲ್ಲ ರಾಗಗಳಿಗೂ ಅನ್ವಯಿಸುತ್ತದೆ ಅಲ್ಲವೇ? ಸ್ವರಗಳನ್ನು ರಾಗದ ವ್ಯಾಕರಣದಂತೆ ಹಚ್ಚಿ ಆಲಾಪನೆ ಮಾಡಿ, ಧೀರ ಗಂಭೀರ ನಡಿಗೆಯಲ್ಲಿ ಮುಂದೆ ಸಾಗುವ ಈ ಕ್ರಮ ಎಲ್ಲ ರಾಗಗಳಿಗೂ ಅನ್ವಯಿಸುತ್ತದೆ.

ಸ್ವತಂತ್ರ ಹಾಡುಗಾರರೂ ತಮ್ಮ ಕಂಠದ ಯೋಗ್ಯತೆ ನೋಡಿ ಬೇರೆ ಬೇರೆ ಸಪ್ತಕಗಳಲ್ಲಿ ಕ್ರಮೇಣ ಕೂಚು ಮಾಡುವದಷ್ಟೇ. ಇದು ಸ್ಟಾಂಡರ್ಡ್ ಪದ್ಧತಿ. ಇದನ್ನು, 'ಗಾಳಿ ಬಂದ ಕಡೆ ತೂರಿಕೋ' ಎಂದುಕೊಂಡು ಪ್ರತಿಯೊಂದು ಖಯಾಲ್‌ದ ರಾಗಗಳಿಗೆ ಅನ್ವಯಿಸಿದರೆ ಅದು ಹಾಸ್ಯಾಸ್ಪದ ಎನಿಸಬಹುದು. ಇಂತಹ ಸ್ವಾತಂತ್ರ್ಯ ಕೇವಲ ನಾಟ್ಯ ಸಂಗೀತದಂತೆ ಹಾಡಿದರೆ ವಿಮರ್ಶಕರು, ಸಂಗಿತಜ್ಞರು ಮತ್ತು ರಸಿಕ, 'ಮಾ–ಬಾಪರು' ಬಿಟ್ಟಾರೆಯೆ?

*****

7.11

ಭಾರತರತ್ನ ಪಂ. ಭೀಮಸೇನ ಜೋಶಿಯವರ ಭ್ರಮಣ ಗಾಥೆ (1922–2011)

ಪಂ. ಭೀಮಸೇನ ಜೋಶಿಯವರು ನಿಜಕ್ಕೂ ವಜ್ರದೇಹಿ. ಅವರ ವಜ್ರ ಮಹೋತ್ಸವವನ್ನು 1998ರಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. 'ವಜ್ರದೇಹಿ' ಜೋಶಿ ಕುಟುಂಬದವರೆಂದು ಹೆಸರು ಮಾಡಿದ ಪಂ. ಭೀಮಸೇನ ಜೋಶಿ ಸಾವಿರ ಸಂಖ್ಯೆಯಲ್ಲಿ ಬೈಠಕ್ಕು ಹೊಡೆದಿದ್ದರು ಎಂಬ ಆಖ್ಯಾಯಿಕೆ, ಅವರ ವಜ್ರಮಹೋತ್ಸವದ ನಿಮಿತ್ತ ಪ್ರಕಟಿಸಿದ 'ಸ್ವರಾಧಿರಾಜ' ಪುಸ್ತಕದಲ್ಲಿ ಸಿಗುತ್ತದೆ. ತಮ್ಮ ಮಿತಿಮೀರಿದ ಕುಡಿತ, ತಂಬಾಕು ಸೇವನೆ ಇವೆಲ್ಲವನ್ನೂ ಜೀರ್ಣಿಸಿಕೊಂಡ ಭೀಮಸೇನ ಜೋಶಿಯವರು 1998ರಲ್ಲಿ ಚೆನ್ನೈಗೆ ಹೋದರು. ಜನವರಿ 4ಕ್ಕೆ ಅಲ್ಲಿ ಹಾಡುಗಾರಿಕೆ. ಮರಳಿ ಬಂದವರೇ ಕಾಲು ಜಾರಿ ಬಿದ್ದದ್ದು ನೆಪವಾಯಿತು. ಎರಡೂ ಮೊಣಕಾಲು ಊದಿಕೊಂಡು ಎರಡೂ ಕಾಲುಗಳು ಪ್ಲಾಸ್ಟರಿನಲ್ಲಿದ್ದವು. ಅವರಿಗೆ ವರದರಾಜ ಆದ್ಯ ಪ್ರಶಸ್ತಿಯನ್ನು 1998ರಲ್ಲಿ ಕೊಡುವಾಗ ಕರ್ನಾಟಕ ಸಂಘದ ಪದಾಧಿಕಾರಿಗಳಿಗೆ ನಾನೇ ಮಾರ್ಗದರ್ಶಿಯಾಗಿದ್ದೆ.

ನಾನೀಗ ನೆನಪಿಸಿಕೊಳ್ಳುವದು ಈ ಘಟನೆಗೂ ಮೊದಲಿನ ಪುಣೆಯ ಭೇಟಿಯ ಬಗ್ಗೆ. ಇದು ಅವರಿಗಾದ 2–3 ತಿಂಗಳ ವಿಸ್ಮೃತಿ ಎಲ್ಲರಿಗೂ ಆಗುವಂತಹ ಮತ್ತಿತರ ಸುಖ􀀀ದುಃಖಗಳನ್ನು ನಾನೇ ಕಂಡಿದ್ದ, ಕೇಳಿದ್ದ ವೃತ್ತಾಂತಗಳನ್ನು ಕುರಿತದ್ದು. ಅವರ ಹೆಂಡತಿ ವತ್ಸಲಾ ಜೋಶಿಯವರಿಗೂ ಅದೇ ಸುಮಾರಿಗೆ ಪಾರ್ಶ್ವವಾಯು ಆಘಾತ. ಶುಭದಾ ಮುಳಗುಂದ, ಭೀಮಸೇನ ಜೋಶಿಯವರ ಅಕ್ಕರೆಯ ಮಗಳು. ತಂದೆ ತಾಯಿಯ ಆರೈಕೆಗೋಸ್ಕರ ಮುಂಬಯಿಯಿಂದ ಪುಣೆಗೆ ಬಂದಿದ್ದಳು. ಅವಳ ಮುಂಬಯಿಯಲ್ಲಿಯ ಮನೆ ನಮ್ಮ ಮನೆಯಿದ್ದ ತಾಡದೇವದಲ್ಲಿಯ ಎರಕಂಡಿಶನ್ ಮಾರ್ಕೆಟ್ ಎದುರಿನ 'ಮಿಲನ್' ಸಂಕೀರ್ಣದಲ್ಲಿತ್ತು.

ಜೋಶಿ ಕುಟುಂಬದಲ್ಲಿ ಕನ್ನಡ ಮಾತನಾಡುವವರು ಭೀಮಸೇನ ಜೋಶಿಯವರು ಒಬ್ಬರೇ! ಮನೆಯಲ್ಲಿ ಶಿಷ್ಯರ ಜೊತೆ, ಸವಾಯಿ ಗಂಧರ್ವರ ಗ್ರೀನ್‌ರೂಮಿನಲ್ಲಿ ಆತ್ಮೀಯತೆಯಿಂದ ಕನ್ನಡ–ಮರಾಠಿ ಮಾತಾಡಿದ್ದು ನಾನು ಕಂಡಿದ್ದೇನೆ. ಎಲ್ಲರಿಗೂ ಕನ್ನಡ ಬರುತ್ತಿದ್ದರೂ, ಶುಭದಾ, 'ಯಾ, ಬಸಾ' ಎಂದು ನನ್ನನ್ನು ಮತ್ತು ನನ್ನೊಂದಿಗೆ ಬಂದ ಸಂಗೋರಾಮರನ್ನು* ಸ್ವಾಗತಿಸಿದರು.

ಪಂಡಿತಜಿ ತಮ್ಮ 'ಕಲಾಶ್ರೀ' ಬಂಗಲೆಯಲ್ಲಿಯ ಮಹಡಿಯ ರೂಮಿನಲ್ಲಿ ಮಲಗಿದ್ದರು. ಮುಂಜಾನೆಯ 9 ಗಂಟೆ. ನಾವಿಬ್ಬರು ಫೋನ್ ಮಾಡಿಯೇ ಹೋಗಿದ್ದವರು. ಚೆನ್ನೈದಿಂಗ ಬಂದ ಮೂರನೇ ದಿನವೇ ಭೀಮಣ್ಣ ಕನವರಿಸ ತೊಡಗಿದರಂತೆ. ಡಾಕ್ಟರ್ ಸ್ಕ್ಯಾನಿಂಗ್ ಮಾಡಿದರು, ಮಂಡಿಯೊಳಗಿನ ಹುಣ್ಣು ಒಡೆದಿತ್ತು. ಆಯುರ್ಮಾನಕ್ಕೆ ಅನುಸಾರವಾಗಿ ಶರೀರದ ಇತರ ಕ್ರಿಯೆಗಳು ನಿಧಾನವಾಗತೊಡಗಿದವು. ಕೂಡಲೇ ಎಮರ್ಜೆನ್ಸಿ ಆಪರೇಶನ್ ಮಾಡಿದರು. ತಾಯಿ ವತ್ಸಲಾಬಾಯಿ ಕೂಡ ಹಾಸಿಗೆ ಹಿಡಿದ ಪ್ರಸಂಗ. ನಾಲ್ಕು ಗಂಟೆಗೆ ಶಸ್ತ್ರಕ್ರಿಯೆ ಆದನಂತರ ಎಚ್ಚರ ತಪ್ಪಿದ್ದು, ಕಣ್ಣು ತೆರೆದರೂ ನೆನಪಿನ ಶಕ್ತಿ ಹೋಗಿಬಿಟ್ಟಿತ್ತು. ಡಾ. ಚಾರುದತ್ತ ಆಪ್ಟೆ, 'ಸರ್ಜಿಕಲ್ ಶಾಕ್' ಎಂದರು. ಒಂದು ತಿಂಗಳು ಇದೇ ಸ್ಥಿತಿಯಲ್ಲಿದ್ದರು. ಮಿದುಳಿನ ಸ್ಕ್ಯಾನಂಗ್ ಮಾಡಿದಾಗ ಎಡಬದಿಯಲ್ಲಿ ಟ್ಯುಮರ್ ಎಂದು ಗೊತ್ತಾಯಿತು. ಶರೀರದ ಎಲ್ಲ ಚಟುವಟಿಕೆ (ಮಾತಾಡುವದು, ಕೈಕಾಲು ಅಲ್ಲಾಡಿಸುವದು) ಮಿದುಳಿನ ಆ ಭಾಗವೇ ಮಾಡುತ್ತದಂತೆ. ಶಸ್ತ್ರಕ್ರಿಯೆ ಮಾಡಿದ ನಾಲ್ಕು ದಿನಗಳಲ್ಲಿ ಮನೆಗೆ ಬಂದರು. ಮೂರು ತಿಂಗಳಲ್ಲಿ ಮರೆತಿದ್ದೆಲ್ಲ ನೆನಪಾಗತೊಡಗಿತು. ಹಾಡುಗಳು ಸಹ. ಮಿದುಳಿನ ಆಪರೇಶನ್ ಆದಕೂಡಲೇ ಭರಾ ಭರಾ ಮಾತಾಡಲಿಕ್ಕೆ ಪ್ರಾರಂಭಿಸಿದ್ದರಂತೆ. ಸಂಗೋರಾಮರು ಈ ವಿಷಯವನ್ನು ಮೊದಲೇ ಹೇಳಿದ್ದನ್ನು ಮೆಲುಕು ಹಾಕುತ್ತಿರುವಾಗ, ಶುಭದಾ ತಂದೆಯವರ ಖೋಲಿಯಿಂದ ಬಂದು, "ನಿಮಗ ಒಳಗ ಕರೆದಾರ. ಹೋಗುವಾಗ ಅವರ ಚಸ್ಮಾ ಮತ್ತು 'ಸಂಬಂಧ' ಒಳಗ ತೊಗೊಂಡು ಹೋಗ್ರಿ ಅಂದಳು." 'ಅಣ್ಣಾ ಓದುತ್ತಾರೇನು' ಎಂದು ಕೇಳಿದ್ದಕ್ಕೆ, 'ಬರೀ ಅದನ್ನೇ ಓದುವದು' ಅಂದಳು. ನಮ್ಮ ಸಂಘದ 'ಸ್ನೇಹಸಂಬಂಧ' ಮುಖಪತ್ರಿಕೆ ಭೀಮಸೇನ ಜೋಶಿಯವರು ಓದುತ್ತಾರೆ ಎಂದು ನನಗೋ ಬಹಳ ಖುಶಿಯಾಯಿತು. "ಈ ಎರಡೂ ಆಪರೇಶನ್ ಯಾವಾಗ ಆಯಿತು" ನಾನು ಶುಭದಾಳಿಗೆ ಕೇಳಿದೆ.

"ಕಾಲಿನ ಆಪರೇಶನ್ 13 ಅಕ್ಟೋಬರ್ ಮತ್ತು ಮಿದುಳಿನದು 26 ನವೆಂಬರ 1998. ಬಾಬಾ ಹಾಡಬಹುದೋ ಇಲ್ಲವೋ ಎಂಬ ಸಂಶಯ, ಭಯ ಇದ್ದೇ ಇತ್ತು. ಡಾ.ಚಾರು ಆಪ್ಟೆ 2 ತಿಂಗಳಲ್ಲಿ ಹಾಡಬಹುದೆಂದಿದ್ದರು. ಬಾಬಾ ಕೇವಲ ಹತ್ತೇ ದಿನಗಳಲ್ಲಿ ಹಾಡತೊಡಗಿದರು! ತಲೆ ಬೋಳಿಸಿದ್ದರಿಂದ ಕೆಲವು ದಿನ ಕರಿ ಟೊಪ್ಪಿಗೆ ಹಾಕಿಕೊಂಡು ಹಾಡುತ್ತಿದ್ದರು. ತುಳಸಿದಾಸ ಮಾಮಾದು ಕರಿ ಟೊಪ್ಪಿಗೆ ಈಗ ಬಾಬಾದು" ಎಂದು ಶುಭದಾ ನಗುತ್ತ ಹೇಳಿದಳು. ನಾವೆಲ್ಲ, 'ಸಾಥ್' ಕೊಟ್ಟೆವು. ಇಷ್ಟರಲ್ಲಿ ಅವರ ಸೊಸೆ ಲಕ್ಷ್ಮೀ ಚಹಾ–ಚೂಡಾ ತಂದಿಟ್ಟರು. ಮಗ ಜಯಂತ ಕೂಡ ಒಳಗೆ ಬಂದರು. ಒಂದು ವರ್ಷ ಭೀಮಣ್ಣ ಹಾಡಿರಲಿಲ್ಲ. ಮೊಟ್ಟಮೊದಲಿನ ಬೈಠಕ್ಕು ಪುಣೆ ವಿಶ್ವವಿದ್ಯಾಲಯದ ಲಲಿತಕಲಾ ಕೇಂದ್ರದಲ್ಲಿ ಅಯಿತು.

ಇದರ ನಂತರ, ಟೈಮ್ಸ್ ಮ್ಯೂಜಿಕ್ ಮುಂಬಯಿ, ಕಲಕತ್ತಾ, ಎಸ್.ಆರ್.ಎ. ದೆಹಲಿ ಈ ದೊಡ್ಡ ಕಾರ್ಯಕ್ರಮಗಳು ಒಂದಾದ ನಂತರ ಇನ್ನೊಂದು. ಮತ್ತೆ ಹಾಡುಗಾರಿಕೆ ಮೊದಲಿನಂತೆ ಶುರು ಆದವು. ಅದಕ್ಕೆ ಅಂದದ್ದು, "ವಜ್ರದೇಹಿ" ಎಂದು!

ಕರ್ನಾಟಕ ಸಂಘದಲ್ಲಿ ಗಂಗೂಬಾಯಿಯುವರ ಹುಟ್ಟುಹಬ್ಬ ಶಿವರಾತ್ರಿಯ ಮುಂಜಾನೆ ಕಲಾಭಾರತಿಯಲ್ಲಿ ಆಚರಿಸಿದ್ದಾಗ ನಾನು ಭೀಮಣ್ಣವರಿಗೆ ಫೋನಸಿದ್ದೆ. "ನನಗ ಶನವಾರ ಸಂಜೆ ಐ.ಎಮ್.ಜಿ.ಯಲ್ಲಿ (Indian Music Group), ರವಿವಾರ ಮುಂಜಾನೆ ಕೊಲ್ಲಾಪುರ, ಸಂಜೆ ಸಾಂಗಲಿ ಕಾರ್ಯಕ್ರಮ ಅವ. ನನ್ನ ಹೆಸರಲ್ಲಿ ಅಕ್ಕನಗೆ ಛಲೋದು ನೋಡಿ ಒಂದು ಗುಚ್ಛ ಕೊಡ್ರಿ. ಪುಣೆಕ್ ಬಂದಾಗ ಹಣ ಕೊಡ್ತಿನಿ, ತೊಗೊರಿ" ಅಂದರು. "ಅಕ್ಕಾ ಎಲ್ಲಿದ್ದಾಳ"? ಎಂದು ಕೇಳಿದರು.

"ನಮ್ಮಲ್ಲಿ" ಅಂದೆ ನಾನು. ನಮ್ಮ ಮನೆಯ ಫೋನ ನಂಬರ ಅವರಿಗೆ ಕೊಟ್ಟೆ. ಕರ್ನಾಟಕ ಸಂಘದಿಂದ ಮನೆಗೆ ಬರುವ ತನಕ ಭೀಮಣ್ಣರ ಫೋನು, 'ಅಕ್ಕ'ಗ ಬಂದಿತ್ತು. ಹೀಗೆ ಅವರ ವ್ಯವಸಾಯಕ್ಕೆ ಸಂಬಂಧಿಸಿದ ಪ್ರವಾಸದಲ್ಲಿ ಭೀಮಸೇನ ಜೋಶಿಯವರ ಕೈ ಹಿಡಿಯುವವರು ಯಾರೂ ಇರಲಿಲ್ಲ. ಇತರ 'ನಿರುದ್ದೇಶ'ದ ಪ್ರವಾಸ ಕೂಡಾ ಆಗೀಗ ಪಂಡಿತಜೀ ಮಾಡುತ್ತಿದ್ದರು.

ಈ ಘಟನೆಯ 3-4 ವರ್ಷಗಳ ಮೊದಲು ನವೆಂಬರ್-ಡಿಸೆಂಬರ್‌ದಲ್ಲಿ ಸವಾಯಿ ಗಂಧರ್ವ ಉತ್ಸವದ ನಾಲ್ಕು ದಿನ ಮೊದಲು ಭೀಮಸೇನ ಜೋಶಿಯವರು ನಾಪತ್ತೆಯಾಗಿದ್ದು, ಕನ್ನಡ, ಇಂಗ್ಲೀಷು, ಮರಾಠಿ ಪತ್ರಿಕೆಗಳ ಮುಖ್ಯ ಸುದ್ದಿಯಾಗಿತ್ತು. ಮನೆಯಲ್ಲಿ ಹೇಳದೇ ಪುಣೆಯಿಂದ ಗಾಯಬ್ ಆದರು. ಯಾರಿಗೂ ಹೇಳದೇ ಹುಬ್ಬಳ್ಳಿಗೆ ಕಾರು ತಾವೇ ಓಡಿಸಿಕೊಂಡು ಹೋದರು.** ಕಿತ್ತೂರಿನಲ್ಲಿ ಗಾಡಿ ಬಿಟ್ಟು, ರಾತ್ರಿ ಮೂರು ಗಂಟೆಗೆ ಕಿತ್ತೂರ-ಹುಬ್ಬಳ್ಳಿ ಟ್ರಕ್ಕಿನಲ್ಲಿ ಪ್ರವಾಸ. ಶ್ರೀಪತಿ ಪಾಡಿಗಾರರಲ್ಲಿ ಮಲಗಿದ್ದು. ಪ್ರತಿ ಗಂಟೆಗೆ ಪುಣೆಯಿಂದ ಪರಿವಾರದವರು ಗಂಗೂಬಾಯಿಯವರಿಗೆ ಫೋನು ಮಾಡುತ್ತಿದ್ದರೆ, ಅವರು, "ಇನ್ನೂ ತನಕಾ ಬಂದಿಲ್ಲವ್ವಾ ಭೀಮಣ್ಣಾ" ಅಂದರೂ, ಗಂಗೂಬಾಯಿಗೆ ಸಮಾಧಾನವಿಲ್ಲ. ಮಗ ಬಾಬುರಾವರನ್ನು ಶ್ರೀಪತಿಯವರ ಬಳಿಗೆ ರವಾನಿಸಿದರು. ಭೀಮಣ್ಣವರನ್ನು ಕರೆದುಕೊಂಡು ಗಂಗೂಬಾಯಿಯವರ ಮಗ ಬಾಬು ತಮ್ಮ ನಿವಾಸವಾದ 'ಗಂಗಾಲಹರಿ'ಗೆ ಬಂದರು. "ಅಕ್ಕಾ ಹೊರಡವ್ವಾ, ಸವಾಯಿ ಗಂಧರ್ವ ಕಮಿಟಿಯ ನೀ ಪ್ರೆಸಿಡೆಂಟ್ ಇದ್ದೀ, ಪುಣೆಕ್ಕ ಹೊರಡಬೇಕು." ಎಂದರು ಭೀಮಣ್ಣ.

"ನೀ ಎಲ್ಲಿ ಹೊಂಟಿ?" ಗಂಗೂಬಾಯಿ.

"ನಾ ಮಂತ್ರಾಲಯಕ್ಕ ಹೋಗಬರ್ತಿನ."

"ನಾ ಒಲ್ಲೆ, ನಾನು ಒಬ್ಬಾಕಿ ಹೋಗು ಹಾಂಗಿಲ್ಲಾ, ನೀ ಬರ್ಲೇ ಬೇಕು. ನೀ ಬರದಿದ್ರ ನಾ ಹೋಗೂ ಹಾಂಗಿಲ್ಲಾ".

"ಗುರುದರ್ಶನಾ ಮಾಡಿ ಬರ್ತಿನವ್ವ".

"ಅವರೂ (ಸವಾಯಿ ಗಂಧರ್ವ) ನಿಂಗ ಗಾಣೆ ಕಲಸಿದ್ದ ಗುರು ಅಲ್ವೇನೂ? ಬಾಬು, ದೊಡ್ಡ ಗಾಡಿ ಬಂದೋಬಸ್ತ ಮಾಡಪ್ಪಾ." ಅಕ್ಕನ ಸುಗ್ರೀವಾಜ್ಞೆ, ತಮ್ಮ ಮಣಿಯಲೇ ಬೇಕಾಯ್ತು.

ಖಿಮಜಿ (ಕಾಕುಭಾಯಿ) ಹುಬ್ಬಳ್ಳಿಯಲ್ಲಿಯ ಫ್ಯಾಕ್ಟರಿ ಮಾಲಕರು, ಮುಂಬಯಿಯಲ್ಲಿ ಇರುವವರು. 'ಅವರ ಗಾಡಿಯಲ್ಲಿ ಕಿತ್ತೂರ ತನಕ, ಮುಂದೆ ಬೆಳಗಾವಿಯಲ್ಲಿ ಸನ್ಮಾನ್ ಹೋಟೆಲ್ಲಿನಲ್ಲಿ ಇದ್ದು, ಅಲ್ಲಿಂದ ಎರಡು ಟ್ಯಾಕ್ಸಿ ಮಾಡಿದರು. ಒಂದರಲ್ಲಿ ಬಾಬು, ಉಪೇಂದ್ರ. ಹಿಂಭಾಗದಲ್ಲಿ ನಿದ್ದೆ ಬರುತ್ತದೆ ಎಂದು ಭೀಮಸೇನರು ಮಲಗಿದರು. ಬಾಕಿ ನಾಲ್ಕು ಜನರು ಇನ್ನೊಂದರಲ್ಲಿ. ಭೀಮಣ್ಣ ಇಲ್ಲದ ವೇಳೆಯಲ್ಲಿ ಗಂಗೂಬಾಯಿ ಅವರು ವತ್ಸಲಾಬಾಯಿಗೆ ಭೀಮಣ್ಣವರ ಕುಶಲತೆಯ ಬಗ್ಗೆ ಫೋನ್ ಮಾಡಿದರು. ಸರಿ ಕಾಗಾಲತನಕ ಪ್ರವಾಸ ಸುಗಮವಾಯಿತು. ಕೊಲ್ಲಾಪುರದಲ್ಲಿ ಭೀಮಸೇನ ಮತ್ತು ಬಾಬುರಾಯರು ಇದ್ದ ಟ್ಯಾಕ್ಸಿ ಅಸಹಕಾರ ಹೂಡಿತು. ಗಂಗೂಬಾಯಿ ಮತ್ತು ಇನ್ನಿತರರು ಪುಣೆ ಮುಟ್ಟಿದ್ದರು. ಆದರೆ, ರಾತ್ರಿ ಆದರೂ ಪಂಡಿತಜೀಯವರ ಪತ್ತೆ ಇಲ್ಲವೆಂದು ಮರಳಿ ಕಾಳಜಿ ಮುತ್ತಿಕೊಂಡಿತ್ತು.

ಭೀಮಸೇನ ಜೋಶಿಯವರ ಪಾರ್ಟಿ ಮಧ್ಯಾಹ್ನ ಮುಟ್ಟಿತು. ಗಂಗೂಬಾಯಿಯವರ ಮಗ ಆದದ್ದನ್ನೆಲ್ಲ ವರದಿ ಮಾಡಿದರು. "ಕಾಗಾಲ ಮುಂದ ಬಿಘಾಡ ಆಯ್ತು. ದೀಡ ತಾಸ ರೀಪೆರಿ ಮಾಡಿ ಮಾಡಿ ಹಣ್ಣ ಆದ್ವಿ, ಒಂದು ಟ್ರಕ್ ಸಿಕ್ತು. ಭೀಮಣ್ಣಂಗ ಎಲ್ಲಿ ಹೋದ್ರು ಗುರ್ತರಿ. ನಮಗ ಕೊಲ್ಲಾಪೂರ ತನಕ ಮುಂಜಾನೆ ನಾಲ್ಕೂವರಿಗೆ ಡ್ರಾಪ್ ಕೊಟ್ಟರು. ಏಸಿ ಗಾಡ್ಯಾಗ ಹೋಗೋಣು ಅಂದ ಭೀಮಣ್ಣ. ಭಲೋ ಎಸ್ ಟಿ ಸಿಗತ್ತಿತ್ತು. ಆದ್ರ ಭೀಮಣ್ಣ ವೊಲ್ಲೆ ಅಂದ. ತಿರಗೀ ತಿರಗೀ ಅಲ್ಲಿಂದ ಘಾಟಗೆಯವರ ಮನೀ ಮುಂಜಾನೆ ಐದಕ್ಕ ಸಿಕ್ತು. ಮುಂಜಾನಿ ಪೇಪರೊಳಗ ಫ್ರಂಟ ಪೇಜ್ ನ್ಯೂಸರಿ! ಕರಾಡದಿಂದ ನಾವು ಪತ್ತೇ ಸಿಕ್ಕಿದ್ದ ಮೆಸೆಜ್ ಅವರೇ ತಿಳಿಸ್ಯಾರ. ಹೋಗುವಾಗ ದಾರಿಲಿ ಸಾತಾರಾ ಸೈನಿಕ ಸ್ಕೂಲಗೆ ಹೋಗಿ ಹರೀ ಹರೀ ಅನಕೋತ ಒಂದು ಗಂಟೆಗೆ ಕಲಾಶ್ರೀಗೆ ಬಂದ ಮುಟ್ಟಿವ್ರಿ".

ಗಂಗೂಬಾಯಿ ನಗುತ್ತ, "ಇಷ್ಟೆಲ್ಲ ಆದಮ್ಯಾಲೆ, ಭೀಮಣ್ಣ ಏನಂತಾರ ಗೊತ್ತದೆನ್? ಅಕ್ಕಾ ನೋಡವ್ವ, ನಿನ್ನ ಮಗನ್ನ ಸುಖವಾಗಿ ಕರಕೊಂಡ ಬಂದೇನಿ. ಕಾಳಜಿ ತೊಗೊ, ಮತ್ತೆಲ್ಲಾದ್ರು ಓಡಿ ಹೋಗ್ತಾನ ಏನೋ".

ಇದೆಲ್ಲ ಕಂಡಿದ್ದು, ಕೇಳಿದ್ದು, ಅಲೆಮಾರಿತನ ಮತ್ತು ತುಂಟತನ ಪಂಡಿತರ ಸ್ವಭಾವದಲ್ಲಿಯೇ ಇದೆ. ಅದಕ್ಕೇ ಹೇಳಿದ್ದು, 'ಇಂದು ಇಲ್ಲೆಲ್ಲೋ, ನಾಳೆ ಎಲ್ಲೆಲ್ಲೊ!'

2004ರಲ್ಲಿ ಐ.ಟಿ.ಸಿ ಎಸ್.ಆರ್.ಎ (Indian Tobacco Company, Sangita Research Academy) ಕೊಲಕತ್ತಾದವರು, ಮುಂಬಯಿಯ ರಾಷ್ಟ್ರೀಯ ಕಲಾಕೇಂದ್ರದಲ್ಲಿ ಅವರ ಕೊನೆಯ ಮೆಹಫಿಲ್ಲು ನೆನೆಸಿಕೊಂಡಾಗ ಈಗಲೂ ಕಣ್ಣು ತೇವವಾಗುತ್ತವೆ. ಭೀಮಣ್ಣ ಇಬ್ಬರ ಆಧಾರದಿಂದ ವೇದಿಕೆ ಹತ್ತಿದ್ದರು. ಆಗ ನನಗೆ 40–50 ವರ್ಷಗಳ ಅವರ ಕಚೇರಿಯ ನೆನಪಾಯಿತು. ಚೆಂಡಿನಂತೆ ಕೂತಲ್ಲೇ ಜಿಗಿದಾಡುವ ಭೀಮಣ್ಣ, ಕಾಲು ಕೆದರಿ ತಬಲಾ ಬಾರಿಸುವವನಿಗೆ ಸನ್ನೆ ಮಾಡಿ, ಲಯಕಾರಿಯಲ್ಲಿ ಪೈಪೋಟಿ ನಡೆಸುವ ಭೀಮಣ್ಣ, ಹಾರ್ಮೋನಿಯಮ್ ಬಾರಿಸುವ ಠಾಕೂರದಾಸರಿಗೆ ಹುಬ್ಬಿನಿಂದಲೇ ಕೆಣಕುತ್ತಾ, 'ಬಾ, ನೀನು ಬಾರಿಸಿ ತೋರಿಸು, ನಾ

ಹಾಡಿದ್ದನ್ನು', ಸಂಜ್ಞೆಯಿಂದಲೇ ತಿಳಿಸಿ ಅವನಿಗಿಂತ ಮುಂದೆ ಸಾಗಿ ತನ್ನ ಇಡೀ ಶರೀರವನ್ನು 90° ಗೆ ಬಗ್ಗಿಸಿ, ಮಣಿಸಿದ ಬಿಲ್ಲಿನಂತೆ ಮರಳಿ ಅದೇ ಭಂಗಿಯಲ್ಲಿ ಕುಳಿತದ್ದು, ದೃಕ್-ಶ್ರಾವ್ಯ ಮನಃಪಟಲದಲ್ಲಿ ಹಾದುಹೋಯಿತು. ಕಾರಿನಲ್ಲಿ ಇಡೀ ಭಾರತ ಪರಿಭ್ರಮಣ ಮಾಡಿ ದಿನಕ್ಕೆ ಎರಡು ಮೂರು ಕಚೇರಿ ಕೊಟ್ಟ ಭೀಮಣ್ಣರ ಈ ರೂಪ, ಕಣ್ಣಲ್ಲಿ ನೀರು ತಂದಿತ್ತು.

ವೇದಿಕೆಯ ಮೇಲೆ ಬಂದು ಕುಳಿತ ಭೀಮಣ್ಣರ ಕಾಲ ಮೇಲೆ ಉಪೇಂದ್ರ ಭಟ್ ಶಾಲು ಹೊದೆಸಿದ. ಮತ್ತೊಬ್ಬ ಶಿಷ್ಯ ವಿನಾಯಕ ಗ್ಲಾಸು ಎತ್ತಿ ನೀರು ಕುಡಿಸಿದ. ನನ್ನ ಪಕ್ಕದಲ್ಲಿ ಕುಳಿತವರು ನನ್ನ ಕಿವಿಯಲ್ಲಿ ಉಸುರಿದರು. "ಇನಕೋ ಗಾನೇಕೊ ಹೋಗಾ ಕ್ಯಾ? ಅಸಂಭವ ಲಗತಾ ಹೈ ಗಿಲಾಸ ಭೀ ಉಠಾ ನಹಿಂ ಪಾತೆ, ಸ್ವರ.... " (ಇವರಿಗೆ ಹಾಡಲು ಆಗುತ್ತಾ? ಶಕ್ಯವಿಲ್ಲ ಅನಿಸುತ್ತದೆ, ಲೋಟ ಕೂಡ ಎತ್ತಲು ಆಗುವದಿಲ್ಲ. ಸ್ವರ...)

ನಮಗೆಲ್ಲ ದುಗುಡ, ತಳಮಳ. ನಾನು ಮನ್ಸೂರರ ಕೊನೆಯ ಕಚೇರಿ, ಬಡೆಗುಲಾಮರನ್ನು ಹೊತ್ತುಕೊಂಡು ವೇದಿಕೆಯ ಮೇಲೆ ಕುಳ್ಳಿರಿಸಿದ ಕಚೇರಿ. ಬಾಲಗಂಧರ್ವರ ಕಾಲುಗಳು ನಿಶ್ಚೇತನವಾದ ಬಳಿಕದ ರೇಡಿಯೋ ಹಾಡುಗಳು, ಇವೆಲ್ಲ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೇಳಿದ್ದೇನೆ. ಮೊದಲಿನ ಷಡ್ಜ ಹಾಡುಗಾರನಿಗೆ ತನಗೆ ಬೇಕಾದಂತೆಯೇ ಸ್ಪರ್ಶವಾದರೆ ಮಾತ್ರ, ಒಂದು ತರಹದ ನವಚೇತನ ದೊರೆಯುತ್ತದೆ ಎಂಬ ಮಾತು ಆ ದಿನ ಮನದಟ್ಟಾಯಿತು. ಕೈ ಕಾಲುಗಳನ್ನು ಅಲ್ಲಾಡಿಸದೇ ಕುಳಿತ ಭೀಮಣ್ಣ 'ಯಮನ ಕಲ್ಯಾಣ' ಆರಂಭಿಸಿ ಕೆಲವೇ ನಿಮಿಷಗಳಲ್ಲಿ ತಮ್ಮ ಅಭೂತಪೂರ್ವ ಶ್ರೀಕಂಠದ ಚಳಕ ತೋರಿಸಿದರು. 12 ನಿಮಿಷಗಳಲ್ಲಿ ಅವರ ಕೈಗಳು ಸ್ವರಗಳ ಏರಿಳಿತಗಳಂತೆ ಅಲುಗಾಡಲು ಆರಂಭಿಸಿದವು. ಇಷ್ಟೇ ಅಲ್ಲ, ವಿಳಂಬಿತ ಕ್ರಿಯೆ ಮುಗಿದ ಮೇಲೆ ದ್ರುತ್‌ಕೃತಿ ಹಾಡುವಾಗ ತಾವೇ ಬದಿಗಿದ್ದ ಲೋಟವನ್ನು ಎತ್ತಿ ನೀರು ಕುಡಿದದ್ದು, ಅದೇ ಹೊತ್ತಿಗೆ ನಾನು ನನ್ನ ಮಗಳು ಇಷ್ಟು ಹೊತ್ತು ಅದುಮಿ ಇಟ್ಟ ಕಣ್ಣೀರಿಗೆ ಹಾದಿ ಮಾಡಿಕೊಟ್ಟಿದ್ದೂ ಒಂದು ಅತ್ಯಂತ ಸಂಸ್ಮರಣೀಯ ಅನುಭವವಾಗಿತ್ತು. ಆ ಎರಡು ತಾಸಿನ ಹಾಡುಗಾರಿಕೆಯಲ್ಲಿ ಅವರ 40-50 ವರ್ಷಗಳ ಹಿಂದಿನ ಚಮತ್ಕೃತಿಗಳು ಇರದಿದ್ದರೂ ಅವರ ಅತ್ಯಂತ ಶಿಸ್ತಿನ ತಾನಬಾಜಿ, ತಾರಸಪ್ತಕದಲ್ಲಿಯ ಕ್ರಿಯೆ ಮತ್ತು ಅನೇಕ ಭೀಮಸೇನ ಛಾಪು, ಸವಾಯಿ ಗಂಧರ್ವ ಛಾಪು ಅವರ ಗಾಯಕಿಯಲ್ಲಿತ್ತು ಮತ್ತು ಸಂಪೂರ್ಣವಾಗಿತ್ತು. ಇದನ್ನೇ ಐಟಿಸಿ ಸಂಗೀತ ರಿಸರ್ಚ್ ಅಕಾಡೆಮಿಯವರು 2008ರತನಕ ತಮ್ಮ ಅಂತರ್ಜಾಲದ ಸೈಟಿನಲ್ಲಿ ಬಿತ್ತರಿಸುತ್ತಿದ್ದರು. ಇದನ್ನು ಇಲ್ಲಿ ಕೊಡುವ ಕಾರಣ, ಅಂದು ಕೂಡ ಅವರ ಹಾಡುಗಾರಿಕೆ ಯಾವ ಮಟ್ಟದ್ದಿತ್ತು ಎಂದು ಓದುಗರಿಗೆ ತಿಳಿಸುವದಕ್ಕಾಗಿ.

ನನ್ನ ಪಕ್ಕದಲ್ಲಿ ಕುಳಿತವರಿಗೆ ಕಚೇರಿ ಮುಗಿದ ಕೂಡಲೇ ಕೇಳಿದೆ, "ಹಾಡು ಹೇಗನಿಸಿತು?" "ಗಾನಾ ಭೀಕರ ಥಾ" ಎಂದು ಕಣ್ಣೊರಿಸುತ್ತಾ ಹೇಳಿದ ಮಹಾಶಯ ಬಹುಶಃ ಬಂಗಾಲಿ ಇರಬೇಕು!

ಅವರಿಗೆ ಎಷ್ಟೇ ಪದವಿ–ಪುರಸ್ಕಾರಗಳು ಸಿಕ್ಕರೂ ನಮಗೆಲ್ಲ ಪಂ. ಭೀಮಸೇನ ಜೋಶಿಯವರು ನಮ್ಮ ಅಕ್ಕರೆಯ ಭೀಮಣ್ಣನವರೇ! 'ಮಹಾರಾಷ್ಟ್ರಭೂಷಣ' ಎಂಬ ಪ್ರಶಸ್ತಿಯೊಂದಿಗೆ 5 ಲಕ್ಷ ರೂ. ಸರಕಾರದಿಂದ ಪಡೆದರೂ, ಎರಡನೆಯ ಹೆಂಡತಿ, ವತ್ಸಲಾ ಮುಧೋಳಕರ ಮರಾಠಿ ಮಾತಿನವರಾಗಿದ್ದರೂ, ಅವರ ವಾಸ್ತವ್ಯ ಪುಣೆಯ, 'ಕಲಾಶ್ರೀ'ಯಾಗಿದ್ದರೂ ಭೀಮಣ್ಣನವರು ಕೊನೆಯವರೆಗೂ, 2011ರ ಜನವರಿ 24ರಂದು ಕೊನೆಯ ಉಸಿರು ಎಳೆಯುವವರೆಗೂ ಕುಮಾರವ್ಯಾಸನ, ಗದುಗಿನ ವೀರನಾರಾಯಣನ ಕನ್ನಡಿಗನಾಗಿಯೇ ಇದ್ದದ್ದು ಕನ್ನಡಿಗರಿಗೊಂದು ಅತ್ಯಂತ ಅಭಿಮಾನದ ಸಂಗತಿ.

ಆದರೆ, ಅಂದಿನ ಎಲ್ಲ ಸುದ್ದಿ ಚಾನೆಲ್‌ಗಳಲ್ಲಿ, ಇಂಗ್ಲೀಷ್, ಮರಾಠಿ, ಇತ್ಯಾದಿ ಈ ಖ್ಯಾತ ಗಾಯಕರ ಸಂಗೀತ ಜ್ಞಾನವನ್ನು ಕಂತು ಕಂತುಗಳಲ್ಲಿ ಕಾಣಿಸಿದರೂ ಖಯಾಲ್ ಗಾಯಕಿಯಲ್ಲಿ, ಭಜನೆಗಳಲ್ಲಿ, ಮರಾಠಿ ನಾಟ್ಯ ಸಂಗೀತದಲ್ಲಿಯೂ ಭೀಮಣ್ಣನವರಿಗೆ ಗೌರವ ಸೂಚಿಸಿದರೂ ಎಲ್ಲರೂ ಅವರ ಕರ್ನಾಟಕದ/ಕನ್ನಡದ ಬೇರುಗಳನ್ನು, ಮೌಲ್ಯಗಳನ್ನು ಮರೆತದ್ದು ದುರ್ದೈವದ ಸಂಗತಿ ಎಂದೆನಿಸಿತು. ಸಂದರ್ಶನಗಳಲ್ಲಿ ಭಾರತರತ್ನ ಲತಾ ಮಂಗೇಶಕರವರ ಭಾವಪೂರ್ಣ ಶ್ರದ್ಧಾಂಜಲಿ ಅತ್ಯಂತ ಸಮರ್ಪಕವೆನಿಸಿತ್ತು. ಆಗ ತಾನೇ ಸಹಸ್ರ ಚಂದ್ರದರ್ಶನ ಮುಗಿಸಿದ ಲತಾ ದೀದಿ ಭೀಮಣ್ಣನವರಿಗೆ , 'ತಂದೆಯಂತೆ' ಎಂದು ಹೇಳಿದ್ದು ಸರಿಗಾಣಿಸಲಿಲ್ಲ.(ಭೀಮಣ್ಣನವರಿಗಿಂತ ಅವರು ಕೇವಲ 7 ವರ್ಷ ಚಿಕ್ಕವರು) ಅವರ ಸರಳ ಸ್ವಭಾವ, ಅವರು ಕಚೇರಿ ಮುಗಿಸಿ ಕಾರಿನಲ್ಲಿ ಬಂದು, ಹೊರಗೆ ಇದ್ದ ನಲ್ಲಿಗೆ ತಲೆ ತೋಯಿಸಿಕೊಂಡು ರೂಮಾಲಿನಿಂದ ಒರೆಸಿಕೊಂಡು, ಅದ್ಭುತವಾಗಿ ಹಾಡಿ, ಮರಳಿ ಮತ್ತೊಂದೆಡೆ ಕಚೇರಿಗೆ ಹೋದದ್ದನ್ನು ಇಲ್ಲಿ ನೆನಪಿಸಬಹುದು. ಮತ್ತೊಂದು ಸಲ ಫೋನು ಮಾಡಿ, "ನಾನು ಊಟಕ್ಕೆ ಬರ್ತೇನೆ, ಶ್ರೀಖಂಡ ಪೂರಿ, ಭಾತ್ ಮಾಡಿಸಿ" ಎಂದು ಭೀಮಸೇನರು ಹೇಳಿದ್ದು, ಅವರೆಷ್ಟು , 'ಸಾದಾ ಮಾಣೂಸ' (ಸಾದಾ ಮನುಷ್ಯರೆ)ಎಂದು ವರ್ಣಿಸಿದ್ದು ಕೂಡ ಸ್ತುತ್ಯ.

ಭೀಮಣ್ಣ ಕೊನೆಯವರೆಗೂ ಕನ್ನಡದ ಕಂಪು ಉಳಿಸಿಕೊಂಡದ್ದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಅವರ ಗುರು ಸವಾಯಿ ಗಂಧರ್ವರಂತೆ ರೂಪ, ಚಹರೆ ಇದ್ದರೂ ಗುರುಗಳಂತೆ ಮರಾಠಿ ನಾಟಕಗಳಲ್ಲಿ ಸಂಗೀತ–ನಟ ಎಂದು ಭೀಮಣ್ಣ ಎಂದೂ ಮೆರೆಯಲಿಲ್ಲ. ಅವಿಭಾಜ್ಯ ಬಾಂಬೆ ಪ್ರೆಸಿಡೆನ್ಸಿಯಲ್ಲಿ (1946–56) ಸಂಗೀತ ನಾಟಕಗಳ ಅವನತಿ ಪ್ರಾರಂಭವಾದರೂ ಮರಾಠಿ ನಾಟಕಗಳು ಮೋ.ಗ. ರಾಂಗಣೇಕರ್ ಅವರ ನೇತೃತ್ವದಲ್ಲಿ 2–3 ತಾಸಿನ ಚಿಕ್ಕ ಚೊಕ್ಕ ನಾಟಕಗಳು ತುಂಬಾ ಪ್ರಸಿದ್ಧಿಪಡೆದಿದ್ದವು. ಆದರೆ ಭೀಮಣ್ಣ ಕೇವಲ ಕನ್ನಡ ನಾಟಕಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದರು. ಬೇಂದ್ರೆ ಲಕ್ಷ್ಮಣರಾಯರ 'ಪರಿತ್ಯಕ್ತೆ' ಮತ್ತು 'ಭಾಗ್ಯಶ್ರೀ' ಇವೇ ಆ ನಾಟಕಗಳು. ಅವರ ಚಿಕ್ಕಪ್ಪ ಜಡಭರತ ಅಂದರೆ ಮನೋಹರ ಗ್ರಂಥಮಾಲೆಯ, ಜಿ.ಬಿ. ಜೋಶಿಯವರ ನಾಟಕದಲ್ಲಿಯೂ ನಟಿಸಿದ್ದಾರೆ ಮತ್ತು ಹಾಡಿದ್ದಾರೆ. ಅಂಬಿಕಾತನಯದತ್ತರ "ಉತ್ತರ ಧ್ರುವದಿಂ ದಕ್ಷಿಣ ಧ್ರುವಕೆ ಚುಂಬಕ ಗಾಳಿಯು ಬೀಸುತಿದೆ" ಇದು ಆ ನಾಟಕದಲ್ಲಿಯ ಹಾಡು. ಖ್ಯಾತಿ ಸಿಕ್ಕ ಹಾಡು. ಇವುಗಳಲ್ಲಿಯ

ನಟಿ ವತ್ಸಲಾ ಮುಧೋಳಕರ. ಇವರೇ ಮುಂದೆ ಭೀಮಣ್ಣರ ಜೀವನ ಸಂಗಾತಿಯಾದರು. ಪುಣೆಯಲ್ಲಿ ಇದ್ದು ಏಕ ಕಾಲಕ್ಕೆ ಎರಡು ಮನೆ ಮಾಡಿದರು. ವತ್ಸಲಾಬಾಯಿಯವರಿಗೆ ಎರಡು ಗಂಡು ಒಂದು ಹೆಣ್ಣು ಮಗು (ಜಯಂತ, ಶುಭದಾ ಮತ್ತು ಕಿರಿಮಗ ಶ್ರೀನಿವಾಸ) ಮೊದಲ ಹೆಂಡತಿ ಸುನಂದಾಬಾಯಿಯವರಿಗೆ ಎರಡು ಹೆಣ್ಣು ಎರಡು ಗಂಡು. ಇವರು ಉತ್ತಮ ವಿದ್ಯಾವಂತರು. ಮದುವೆಯಾಗಿ ಬೇರೆ ಬೇರೆ ಊರುಗಳಲ್ಲಿ ಈಗ ನೆಲೆಸಿದ್ದಾರೆ. ಈಗ ಸುನಂದಾಬಾಯಿ ಇಲ್ಲ. ವತ್ಸಲಾಬಾಯಿಯವರೂ ಕೂಡ ಒಂದೆರಡು ವರ್ಷಗಳ ಮೊದಲು ತೀರಿಕೊಂಡರು.***

ಭೀಮಸೇನರ ಕನ್ನಡ ದಾಸವಾಣಿಯ ಅನೇಕ 78 ಆರ್‌ಪಿಎಮ್ ಧ್ವನಿಮುದ್ರಿಕೆಗಳು ಮಾರುಕಟ್ಟೆಯಲ್ಲಿ ಮೊದಲೇ ಬಂದಿವೆ. ಆಮೇಲೆಯೇ ಅವರ ಸಂತವಾಣಿ–ಮರಾಠಿ ಕಾರ್ಯಕ್ರಮ ಪ್ರಾರಂಭವಾದದ್ದು. ಮನಸ್ಸು ಮುದುಡಿಕೊಂಡಾಗ, ಅವರ, 'ಕರುಣಿಸೋ ರಂಗಾ ಕರುಣಿಸೋ' ಈ ಹೃದಯಸ್ಪರ್ಶಿ ಹಾಡು ಕೇಳಿದರೆ ಮನಸ್ಸು ಸ್ತಿಮಿತದಲ್ಲಿ ಬರುತ್ತದೆ. ಅದಕ್ಕೆ ಆ ಶಕ್ತಿ ಉಂಟು. 1985ರಲ್ಲಿ ಎನ್‌ಸಿಪಿಎಯಲ್ಲಿ (National Centre for the Performing Arts) ಅವರ ಕನ್ನಡ ದಾಸರ ಕೀರ್ತನೆಗಳನ್ನು ಮೊದಲಬಾರಿಗೆ ಕೇಳಿದ ಭಾಗ್ಯವಂತ ನಾನು!

ಮನೆಯಲ್ಲಿ ಅಕ್ಕ–ತಾಯಿ ಮಾತಾಡುವ ಭಾಷೆಯೇ ಮನೆಮಾತಾಗುತ್ತದೆ. ತಾಯಿ ವತ್ಸಲಾ ಮುಧೋಳಕರರು ಮೂಲತಃ ಧಾರವಾಡದವರಾಗಿದ್ದರೂ, ಔರಂಗಾಬಾದಿನಲ್ಲಿ ಹುಟ್ಟಿ, ಬೆಳೆದಿದ್ದುದರಿಂದ ಮರಾಠಿಯೇ ಮನೆಮಾತಾಗಿತ್ತು. ಸುಸಂಸ್ಕೃತ ವಿದ್ಯಾವಿಭೂಷಿತ ಕುಟುಂಬ ಮುಧೋಳಕರ್ ಅವರದು. ವತ್ಸಲಾಬಾಯಿಯ ಅಜ್ಜ ಶ್ರೀನಿವಾಸ ನರಸಿಂಹ ಮುಧೋಳಕರರು ಧಾರವಾಡದ ಖ್ಯಾತ ನ್ಯಾಯವಾದಿಗಳಾಗಿದ್ದರು. ಭಾರತದ ಸೇನಾಪತಿ ಆಗಿದ್ದ ಜನರಲ್ ಗೋಪಾಳ ಬೇವೂರ ಇವರು ವತ್ಸಲಾಬಾಯಿಯವರ ಅತ್ತಿಗೆಯ ಮಗ, ಅತ್ತಿಗೆಯ ಗಂಡ ಆ ಕಾಲದಲ್ಲಿ ಐಸಿಎಸ್ ಆದ ಗುರುನಾಥ ಬೇವೂರ! ಇದೆಲ್ಲ ಮಾಹಿತಿ ಕೊಡುವ ಕಾರಣ ಮೂಲತಃ ಕನ್ನಡದವರೇ ಆದರೂ ಅದನ್ನು ಮರೆತ ಪ್ರತಿಷ್ಠಿತ ಮನೆತನ. ಆದರೆ ನಮ್ಮ ಭೀಮಣ್ಣ ಅವರಿಗೆ ಕನ್ನಡದ ಮೇಲೆ ತುಂಬ ಅಭಿಮಾನ. ಶುಭದಾಳ ಲಗ್ನ ಮರಾಠಿ ದೇಶಸ್ತ ಕುಟುಂಬದಲ್ಲಿ ಮಾಡಬೇಕೆಂಬ ಹೆಂಡತಿಯ ಹಠವನ್ನು ಭೀಮಣ್ಣ ಪೂರೈಸಲಿಲ್ಲ. ಶುಭದಾ ಕೊನೆಗೂ ಮುಳಗುಂದ ಆದಳು ತಂದೆಯ ಇಚ್ಛೆಯಂತೆ!

* ಡಾ.ಸಂಗೋರಾಮರು ಖ್ಯಾತ ವಿಮರ್ಶಕರು, ಗಾಯಕರು, ಆಡು ಭಾಷೆಯಲ್ಲಿ (ಮೈಥಿಲಿ, ಬ್ರಜ್ ಇತ್ಯಾದಿ) ಪರಿಣಿತರು

** ತುಳಸಿದಾಸ ಬೋರಕರ ಇವರು ಖ್ಯಾತ ಹಾರ್ಮೋನಿಯಮ್ ಬಾರಿಸುವವರು.

*** ಮಗಳು ಶುಭದಾಳನ್ನು ಕನ್ನಡ ದೇಶಸ್ಥ ಮುಳಗುಂದ ಕುಟುಂಬದಲ್ಲಿ ಕೊಡಲು ಹೆಂಡತಿ ವತ್ಸಲಾಬಾಯಿಯವರೊಡನೆ ಮತಭೇದ. ತಲೆ ಬಿಸಿಯಾಗಿ ಮನೆ ಬಿಟ್ಟು ಮರ್ಕ ಗಾಡಿಯಲ್ಲಿ ಗಾಯಬ್ ಆದದ್ದು. ಕೊನೆಗೆ ಗಂಗೂಬಾಯಿ ಮಧ್ಯಸ್ಥಿಕೆಯಿಂದ ಮರಳಿ ಬಂದದ್ದು.

*****

7.12

ಪಂಡಿತ ದೇವೇಂದ್ರ ಮುರ್ಡೇಶ್ವರ (1923–2011)

ಅರವತ್ತು ವರ್ಷಗಳ ಹಿಂದಿನ ಮಾತು. ಅಂದಿನ ಕೂಡ್ಲಬೈಲು, ಭೀಮಕೊಂಡ, ಹನೇಹಳ್ಳಿ, ಬಂಕಿಕೊಡ್ಲು, ಕಾರವಾರದ ಸಮೀಪದ ಗುಡ್ಡೇಹಳ್ಳಿ ಊರುಗಳೆಲ್ಲ ಚಳಿಗಾಲದಲ್ಲಿ ಬೆಚ್ಚನೆಯ ಹಸಿರು ಕಾಡುಗಳ ಹೊದಿಕೆ ಹೊತ್ತುಕೊಂಡಂತೆ ತೋರುತ್ತಿದ್ದವು. ಎಲ್ಲಿ ನೋಡಿದರಲ್ಲಿ ಬಾಳೆ, ತೆಂಗು, ಅಡಿಕೆ, ಮಾವು, ಹಲಸು, ಗೇರುಗಳ ತೋಪುಗಳು ಮತ್ತು ಏನತ್ಮಧ್ಯೆ ದಟ್ಟ ಕಾಡಿನ ಸುತ್ತು ಹಾಕಿ ನಾಲ್ಕು ಗುಡ್ಡಗಳ ಮಧ್ಯೆ ಒಂದೆರಡು ಹವ್ಯಕ ಬ್ರಾಹ್ಮಣರ ಮನೆಗಳಿದ್ದರೆ ಇಳಿಜಾರಿನಲ್ಲಿ ಸಣ್ಣ ಊರೆಂದು ಕಾಣಿಸುವ ತಾಣದಲ್ಲಿ ಹಾಲಕ್ಕಿ ಗೌಡ ಒಕ್ಕಲಿಗರ ಗುಡಿಸಲುಗಳು. ಸ್ವಂತ ಕಾಲುಗಳೇ ವಾಹನ. ಶಿವರಾಮ ಕಾರಂತರು 'ಬೆಟ್ಟದ ಜೀವ'ದಲ್ಲಿ ಚಿತ್ರಿಸಿದಂತಹ ದಟ್ಟ ಬಿದಿರಿನ ಮೆಳೆಗಳು, ತಾಣಗಳು, ಅವೆಷ್ಟೋ!

ಇವೆಲ್ಲ ಊರುಗಳ ನೆನಪು ಮರುಕಳಿಸಿದ್ದು ಪಂ. ದೇವೇಂದ್ರ ಮುರ್ಡೇಶ್ವರ ತೀರಿಕೊಂಡ ಸುದ್ದಿಯನ್ನು ಅವರ ಶಿಷ್ಯ ನಿತ್ಯಾನಂದ ಹಳದೀಪೂರರು ದೂರಧ್ವನಿಯ ಮೂಲಕ ತಿಳಿಸಿದಾಗ. ಅರವತ್ತು ವರ್ಷಗಳ ಹಿಂದೆ ಅವರು ನಮ್ಮ ಮನೆಯ ಪಕ್ಕದಲ್ಲಿ ಕೆಲದಿನ ವಾಸವಾಗಿದ್ದಾಗಿನ ಚಿತ್ರಗಳು ನನ್ನ ಸ್ಮೃತಿ ಪಟಲದ ಮುಂದೆ ಹಾದುಹೋದವು. ಆಗ ನನ್ನ ವಯಸ್ಸು ಹನ್ನೆರಡು. ಗೋಕರ್ಣದ ಭದ್ರಕಾಳಿ ಹೈಸ್ಕೂಲು ಅದೇ ತಾನೇ ಸ್ಥಾಪಿಸಲ್ಪಟ್ಟಿತ್ತು. ನಮ್ಮ ನೆರೆಮನೆಯ ಕೇಳಕರ್ ಸಂಜೀವರಾಯರು ಈ ಹೈಸ್ಕೂಲಿನಲ್ಲಿ ಸೈನ್ಸ್ ಕಲಿಸುತ್ತಿದ್ದರು. ಅವರಿಗೆ ಹಾಡುಗಾರಿಕೆ, ಕೊಳಲುವಾದನ, ತಬಲಾ ಶೋಕು ಕೂಡ ಇತ್ತು. ಮಕ್ಕಳಿಂದ ಸಂಗೀತ ನಾಟಕಗಳನ್ನು ಮಾಡಿಸುವ ಗೀಳು ಬೇರೆ. ಅವರ ಸಂಗೀತ ಜ್ಞಾನ ಆಳವಾಗಿತ್ತು. "ಸೈನ್ಸ್‌ಗಿಂತ ಸಂಗೀತ ಕಲಿಸುತ್ತೀರಾ" ಎಂಬ ಆಪಾದನೆಯನ್ನು ವಿಶ್ವಸ್ತ ಮಂಡಲಿ ಮಾಡಿದ ಕೂಡಲೇ ಸಂಜೀವರಾಯರು ಹೆಂಡತಿ ಮಕ್ಕಳೊಂದಿಗೆ ಸೇರಿದ್ದು ಈಗಿನ ಉತ್ತರಾಂಚಲದ ಮಸ್ಸೂರಿಯ ಸ್ಕೂಲು. ಅಲ್ಲಿಂದ ಮುಂದೆ ನಿವೃತ್ತಿ ಪಡೆದು ಖ್ಯಾತ ರುಕ್ಮಿಣಿ ಅರುಂಡೇಲರ ಸಂಸ್ಥೆಯಾದ ಕಲಾಕ್ಷೇತ್ರದಲ್ಲಿ ಸಂಗೀತವನ್ನು ಕಲಿಸಲಾರಂಭಿಸಿದರು.

ಗೋಕರ್ಣದ ಪಕ್ಕದ ಬಂಕಿಕೊಡ್ಲದ ಥಾಟೇ ಬೇರೆ. ಅಲ್ಲಿಯ ಆನಂದಾಶ್ರಮ ಸ್ಕೂಲಿನಲ್ಲಿ ತರುಣ ಕವಿ ಸು.ರಂ. ಎಕ್ಕುಂಡಿ, ತರುಣ ಗಾಯಕ ರಮೇಶ ನಾಡಕರ್ಣಿ, ತರುಣ ಸಾಹಿತಿ ಗೌರೀಶ ಕಾಯ್ಕಿಣಿ ಇವರೆಲ್ಲ ಕನ್ನಡ, ಗಣಿತ, ಇಂಗ್ಲಿಷು ಇತ್ಯಾದಿಗಳನ್ನು

ಕಲಿಸುತ್ತಿದ್ದರು. ಇವರೆಲ್ಲ ವಾರಕ್ಕೆರಡು ಸಲ ಸೇರುವ ತಾಣವೆಂದರೆ ನಮ್ಮ ಸಂಜೀವರಾಯರ ವಿಶಾಲವಾದ ಮನೆ. ನಾನು ದೇವೇಂದ್ರ ಮುರ್ಡೇಶ್ವರರನ್ನು ಮೊದಲು ಕಂಡಿದ್ದು ಹಾಗೂ ಅವರ ಬಾನ್ಸುರಿ ಕೇಳಿದ್ದು ಅಲ್ಲಿಯೇ. ಇಪ್ಪತ್ತೈದು-ಇಪ್ಪತ್ತಾರು ವರ್ಷ ವಯಸ್ಸಿನ ಸ್ಫುರದ್ರೂಪ ಮುರ್ಡೇಶ್ವರರು, ನಾಲ್ಕೈದು ದಿನಗಳ ಮಟ್ಟಿಗೆ ಸಂಜೀವರಾಯರ ಅತಿಥಿಗಳಾಗಿದ್ದರು. ತಂಗಿದ ಕಾರಣ ಚೆನ್ನಾದ ಬಿದಿರುಗಳನ್ನು ನೋಡಿ ಪರೀಕ್ಷಿಸಿ ಕೊಳಲುಗಳನ್ನು ಮಾಡುವ ಆಸೆಯಿಂದ ಬಂದಿದ್ದರು. ಸಂಜೀವರಾಯರು ಮತ್ತು ರಮೇಶ ನಾಡಕರ್ಣಿಯವರಂತಹ ಶ್ರೇಷ್ಠ ಸಂಗೀತಕಾರರು ಊರಿನಲ್ಲಿದ್ದ ಮೇಲೆ ಗೋಕರ್ಣದಲ್ಲಿ ರಸಿಕ ಶ್ರೋತೃವೃಂದಕ್ಕೇನು ಕಡಿಮೆಯೇ? ಎಕ್ಬರ್ ಜೋಶಿ, ಕನ್ನಡ ಸಂಗೀತ ನಾಟಕಗಳಲ್ಲಿ ಹೆಸರುಮಾಡಿದ ಪಾತ್ರಧಾರಿ ಪನ್ನಿ ಕೃಷ್ಣ ಭಟ್ಟರು, ಬರವಣಿ ಮಾಸ್ತರರು, ದಿವಾಕರ ಕಾರಂತರು, ಬೈಲೂರ, ಬಯಂದೂರರಂತಹ ರಸಿಕ ಸಮುದಾಯ ದಿನನಿತ್ಯ ಅಂದರೆ ದೇವೇಂದ್ರರು ಅಲ್ಲಿರುವ ತನಕ ಸೇರುತ್ತಿದ್ದರು. ಸಾರಸ್ವತರ ಮನೆ-ಊಟ ನಮ್ಮಲ್ಲಿ. ಸಂಗೀತದ ಸಮಾರಾಧನೆ ಸಂಜೀವರಾಯರಲ್ಲಿ. ದಿನವಿಡೀ ಬಿದಿರಿನ ಶೋಧ ನಡೆಸಿ ನಾಲ್ಕೈದು ಗಳಗಳನ್ನು ತಂದು ಕಾದಿರಿಸಿ, ಕತ್ತರಿಸಿ ಹದಗೊಳಿಸುತ್ತಿದ್ದರು(seasoning). ನನ್ನದು ಇಡಿಡಿಚಿಟಿಜ ಳಿಂಥಿ ಅಂತಾರಲ್ಲ ಅಂತಹ ಕೆಲಸ. ಬಿದಿರಿನ ಶೋಧಕ್ಕೆ ಕಾಡಿನಲ್ಲಿ ಸುತ್ತುವುದಕ್ಕೆ ನನ್ನನ್ನು ನಾನೇ ಮಾರ್ಗದರ್ಶಿ ಎಂದು ನೇಮಿಸಿಕೊಂಡ ನೆನಪು. ಮುಂಜಾನೆ ಎದ್ದು ಪ್ರಾತಃರ್ವಿಧಿ ಮುಗಿಸಿ ಬಿಸಿಬಿಸಿ ದೋಸೆ ತಿಂದು ನಾವೆಲ್ಲ ನಮ್ಮ ತೋಟದಲ್ಲಿ ಕೆಲಸ ಮಾಡುವ ಮಾಂಕಾಳಿ ಎಂಬ ಹಾಲಕ್ಕಿ ಗೌಡನೊಂದಿಗೆ ಮನೆ ಬಿಟ್ಟರೆ ಬರುವುದಕ್ಕೆ ಇಳಿ ಮಧ್ಯಾಹ್ನವಾಗುತ್ತಿತ್ತು. ಊಟ ವಿಶ್ರಾಂತಿಯ ನಂತರ ದಣಿವು ಆರಿಸಿ, ಮತ್ತೆ ನಮ್ಮೆಲ್ಲರ ಗಡಿಬಿಡಿ ರಾತ್ರಿಯ ಕಚೇರಿಯ ತಯ್ಯಾರಿಯ ತನಕ.

ಹೀಗೆ ರಮೇಶರಾಯರಿಂದ ಗಣಿತ ಮತ್ತು ಸಂಜೀವರಾಯರಿಂದ ವಿಜ್ಞಾನವನ್ನು ಕಲಿಯದಿದ್ದರೂ ನಾಟಕ, ಸಂಗೀತ ಮನಸೋಕ್ತ ಆಲಿಸಿದ್ದೂ ವಿರಾಮ ಕಾಲದಲ್ಲಿ. ಸಂಜೀವರಾಯರು ನನಗೆ ಆದರ್ಶ ವ್ಯಕ್ತಿಯಾಗಿದ್ದರು. ದೇವೇಂದ್ರ ಮುರ್ಡೇಶ್ವರರಂತೂ ನಾನು ಮೆಚ್ಚಿಕೊಂಡ ಪುರುಷೋತ್ತಮರು. ಆಗಿನ್ನೂ ಅವರು ಪಂಡಿತ್ ಪನ್ನಾಲಾಲರ ಶಿಷ್ಯತ್ವವನ್ನು ಪಡೆದಿದ್ದರೂ ಅಳಿಯನಾಗಿರಲಿಲ್ಲ. ಬಹುಶಃ ತಂದೆ ತಾಯಿಯರಿಂದ ಮದುವೆಗೆ ಸಮ್ಮತಿ ಪಡೆಯಲು ಅವರು ಮುಂಬಯಿಯಿಂದ ಬಂದಿದ್ದ ಹಾಗೆ ತೋರುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಮಾಸೂರು ದೇವೇಂದ್ರರ ಊರು. ತಂದೆ ಶಂಕರರರಾಯರು ತಬಲಾ ಮತ್ತು ವಯೊಲಿನ್ ನುಡಿಸುತ್ತಿದ್ದರು. ಕೊಳಲು ಅಂದಿನ ಪದ್ಧತಿಯಲ್ಲಿ ಇದಿರು ಇಟ್ಟುಕೊಂಡು ಬಾರಿಸುತ್ತಿದ್ದರು, ಅಡ್ಡ ಅಲ್ಲ. ಹಾಡುಗಾರಿಕೆಯಲ್ಲಿ ಕೂಡ ಸಾಕಷ್ಟು ಪರಿಶ್ರಮವಿತ್ತು. ತಬಲಾ ಕೂಡ ಬಡಿದದ್ದು ಇದೆ ಮತ್ತು ಕೊಳಲು ಬಾರಿಸಲು ಶ್ರಮಪಟ್ಟಿದ್ದೂ ಇದೆ. ಇದೆಲ್ಲ 1941ರಲ್ಲಿ ಮುಂಬಯಿಗೆ ನೌಕರಿಯ ಸಲುವಾಗಿ ಹೋಗುವ ತನಕ ನಡೆದೇ ಇತ್ತು. ಇಲ್ಲಿ ಅವರಿಗೆ ಸಂಗೀತ ದಿಗ್ಗಜರ ಪರಿಚಯವಾಗಿ ಅಂದಿನ ಕಾಲದ ಖ್ಯಾತ ತಬಲಾವಾದಕ ಉಸ್ತಾದ್ ಅಮೀರ ಹುಸೇನ್

ಖಾನರ ಶಿಷ್ಯತ್ವವನ್ನು ಪಡೆದು ಅದರಲ್ಲಿ ಅದ್ಭುತ ಪ್ರಾವೀಣ್ಯವನ್ನು ಪಡೆದರು. ಮಾಸ್ಟರ್ ನವರಂಗ ಶೋಲಾಪುರಕರ್ ಬಳಿ ಕಂಠಸಂಗೀತ ಸಾಧನೆ, ಜೊತೆಗೆ ಚಿತ್ರಕಲೆಯ ಅಭ್ಯಾಸ-ಹವ್ಯಾಸ ಇಟ್ಟುಕೊಂಡು ಅದನ್ನೂ ಬೆಳೆಸಿಕೊಂಡರು. ಇದೇ ಸುಮಾರಿಗೆ ಅಲ್ಲಾವುದ್ದೀನ್ (ಅಂದರೆ ಖ್ಯಾತ ಪಂಡಿತ ರವಿಶಂಕರ ಗುರು ಮತ್ತು ಮಾವ, ಅನ್ನಪೂರ್ಣಾದೇವಿ ಹಾಗೂ ಅಲಿ ಅಕ್ಬರ್ ಖಾನರ ತಂದೆ ಮತ್ತು ಗುರು) ಅವರ ಬಳಿ ಕಲಿತು ಪ್ರಭಾವಶಾಲಿ ಕೊಳಲು ವಾದಕರೆಂದು ಖ್ಯಾತಿ ಪಡೆದ ಪಂಡಿತ ಪನ್ನಾಲಾಲ ಘೋಷರ ಬಹಳ ಬೇಗ ಈ ಕಲೆಯಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರಷ್ಟೇ ಅಲ್ಲದೆ, ಪನ್ನಾಲಾಲರ ಮಗಳು ಸುಧಾ ಅವರನ್ನು ಮದುವೆಯಾದರು. 1947ರಿಂದ ಪನ್ನಾಲಾಲ್ ಘೋಷರು ಸ್ವರ್ಗಸ್ಥರಾಗುವತನಕ ಅಂದರೆ 1960ರವರೆಗೆ 13 ವರ್ಷ ಕಾಲ ಅವಿರತ ಪರಿಶ್ರಮಪಟ್ಟು ಮೈಹರ್ ಘರಾಣೆಯ ಗುರು ಮಂತ್ರವನ್ನು ಪಂಡಿತ ದೇವೇಂದ್ರ ಮುರ್ಡೇಶ್ವರರು ಆತ್ಮಸಾತ್ ಮಾಡಿದರು. ಅಡ್ಡಬಾರಿಸುವ ಕೊಳಲು ಅಂದರೆ, ದೊಡ್ಡ ಗಾತ್ರದ ಎರಡು-ಎರಡೂವರೆ ಅಡಿಯ ಬಾನ್ಸುರಿಯನ್ನು ಮೊಟ್ಟ ಮೊದಲು ಉತ್ತರಾದಿ ಪ್ರಣಾಲಿಯಲ್ಲಿ ಸ್ವತಂತ್ರವಾಗಿ ಬಾರಿಸುವ -ಅಂದರೆ ಪಕ್ಕವಾದ್ಯದಂತೆ ಅಲ್ಲ -ಒಂದು ಸ್ವತಂತ್ರ ವಾದ್ಯವೆಂದು ರಸಿಕ ಮಾನ್ಯರ ಮನ್ನಣೆ ಪ್ರಾಪ್ತಿಯನ್ನು ಮಾಡಿಸಿದವರು ಪನ್ನಾಲಾಲ ಘೋಷರೇ ಅಂದರೆ ತಪ್ಪಾಗಲಿಕ್ಕಿಲ್ಲ. ಹೀಗಾಗಿ ಪನ್ನಾಬಾಬುರವರ ಮೃತ್ಯುವಿನಿಂದ ಖಾಲಿಯಾದ ಘರಾಣೆಯ ಪಟ್ಟ ತಂತಾನೆ ಪಂಡಿತ ದೇವೇಂದ್ರ ಮುರ್ಡೇಶ್ವರರ ಕಡೆ ಬಂದಿತು. ಆಕಾಶವಾಣಿಯವರು ಪನ್ನಾಲಾಲರ ಮರಣದ ನಂತರ ವಾದ್ಯವೃಂದದ ಮುಖ್ಯಸ್ಥರೆಂದು ಪಂಡಿತ ರವಿಶಂಕರರೊಂದಿಗೆ ದೇವೇಂದ್ರರನ್ನೂ, ದೆಹಲಿಯಲ್ಲಿ ನೇಮಿಸಿದರು. ಅವರು ಹತ್ತು ವರ್ಷ ದುಡಿದು ಬಳಿಕ ಮುಂಬಯಿಗೆ ವರ್ಗವಾಗಿ ಇಲ್ಲಿಯೇ ನೆಲೆಸಿದರು.

ಗಾಯಕನೆಂದು ಕಚೇರಿಯನ್ನು ನಡೆಸದಿದ್ದರೂ ದೇವೇಂದ್ರರ ಖಾಸಿಯತ್ತು ಅಂದರೆ, ಹಾಡುವ ಹಿಂದೂಸ್ತಾನಿ ಕೃತಿಗಳನ್ನು ರಾಗದಾರಿಯಲ್ಲಿ ಅಳವಡಿಸಿಕೊಂಡು ಗಾಯಕೀ ಥಾಟಿನಲ್ಲಿ ಕೊಳಲು ನುಡಿಸುವುದು. ಇದೇ ಪನ್ನಾಬಾಬು ಪ್ರಣಾಲಿಯೆಂದು ಉತ್ತರಾದಿ ಪದ್ಧತಿಯಲ್ಲಿ ಖ್ಯಾತಿಗಳಿಸಿದೆ. ಇದನ್ನು ಮುಂದುವರಿಸಿದ ಶ್ರೇಯ ಮುರ್ಡೇಶ್ವರರದು. ಹೊರ ದೇಶಗಳಲ್ಲಿ ಹಾಗೂ ನಾಡಿನಲ್ಲಿ ಅಸಂಖ್ಯ ಕಚೇರಿಗಳನ್ನು ನಡೆಸಿದರೂ ದೇವೇಂದ್ರರಿಗೆ ರಾಜ್ಯಮಾನ್ಯತೆಯಾಗಲೀ, ಲೋಕಮಾನ್ಯತೆಯಾಗಲೀ ಅವರ ಯೋಗ್ಯತೆಗೆ ತಕ್ಕಂತೆ ಸಿಗಲಿಲ್ಲ ಎಂಬುದು ಒಂದು ವಿಷಾದದ ಸಂಗತಿ. ದೇವೇಂದ್ರರು ಕೆಲವು ಪರಂಪರೆಗೆ ಅನುಸರಿಸಿಕೊಂಡುಬಂದ ಮೌಲ್ಯಗಳನ್ನು ಪ್ರಾಣಕ್ಕಿಂತ ಅತ್ಯಂತ ಪ್ರಿಯವೆಂದು ಜಪಿಸಿ, ಜನಸಮುದಾಯವನ್ನು ಅಗ್ಗದ ಶಾಬ್ಬಾಸಕಿಯಿಂದ ಝುಂಜಟಿರಿ ಝುಡುಟಟಟ ಅಂದರೆ ಚಪ್ಪಾಳೆ ಗಿಟ್ಟಿಸಲು ಚಮತ್ಕೃತಿಪೂರ್ಣ ವೈವಿಧ್ಯವನ್ನು ಅಳವಡಿಸಿ ತಬಲಾದೊಂದಿಗೆ ಸವಾಲು-ಜವಾಬು ಅಥವಾ ತಬಲಾ-ಪಖಾವಜಗಳನ್ನು ಒಟ್ಟಿಗೆ ಸೇರಿಸಿ ಒಂದು ದೊಡ್ಡ ಕೂಟವನ್ನೇ ರಂಗಮಂಚದ ಮೇಲೆ ಸೇರಿಸಿ ದೊಡ್ಡಸ್ತಿಕೆಯ ಪ್ರದರ್ಶನವನ್ನು ಎಂದಿಗೂ ಮಾಡಲಿಲ್ಲ. ರಮೇಶ ನಾಡಕರ್ಣಿಯವರಂತೆ ದೇವೇಂದ್ರರೂ ಸ್ವಲ್ಪ publicity shy ಇದ್ದರು. ಇಂದು ಕೆಲವೇ ದೊಡ್ಡ ಕಲಾವಿದರ ಹೆಸರು ಇಂಗ್ಲಿಷ್ ಪತ್ರಿಕೆಗಳಲ್ಲಿ, ಸಮಯ ಸಮಯಕ್ಕೆ ದೊಡ್ಡ ಚಿತ್ರಗಳೊಂದಿಗೆ ಸಣ್ಣ ಸುದ್ದಿಯನ್ನು

ಪ್ರಕಟಿಸುವುದು, ತನ್ನ ಶಿಷ್ಯ ವೃಂದವನ್ನೇ ಕಣಾಭಟುಭಿ ಂಂಜಟಣ ಆಗಿ ನೇಮಿಸಿ ಊರಿಂದೂರಿನಲ್ಲಿ ಫ್ಯಾನ್ ಕ್ಲಬ್‌ಗಳನ್ನು ಸ್ಥಾಪಿಸಿ ಉಧೋ ಉಧೋ ಮಾಡುವ ಗೋಜಿಗೆ ದೇವೇಂದ್ರ ಎಂದೂ ಹೋಗಲಿಲ್ಲ. ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿಯವರಂತಹ ಸರಳ ಸ್ವಭಾವದ ದೇವೇಂದ್ರ, ಸ್ವಲ್ಪ ದುಡುಕಿನ ಸ್ವಭಾವದವರಾದರೂ ಈ ಎಲ್ಲರ ಹಾಗೆ ಅವರಿಗೆ ತಮ್ಮ ಪ್ರತಿಭೆಯಲ್ಲಿ ತುಂಬಾ ವಿಶ್ವಾಸವಿತ್ತು.

1999ರ ಸೆಪ್ಟೆಂಬರ್ 19ರಂದು ಪಂಡಿತ ದೇವೇಂದ್ರ ಮುರ್ಡೇಶ್ವರರು 76ನೆಯ ವರ್ಷದ ಹೊಸ್ತಿಲನ್ನು ದಾಟಿದರು. ಅಂದೇ ಅವರೊಂದಿಗೆ ದೂರಧ್ವನಿಯಲ್ಲಿ ನಮ್ಮ ಶುಭಾಶಯಗಳನ್ನು ತಿಳಿಸಿ ನಮ್ಮ ಕಲಾಭಾರತಿಯಲ್ಲಿ ಒಂದು ಸತ್ಕಾರ ಅಥವಾ ಕರ್ನಾಟಕ ಸಂಘದ ಪರವಾಗಿ ಒಂದು ಕಾರ್ಯಕ್ರಮವನ್ನು ಆಯೋಜಿಸುವ ವಿಚಾರವಿತ್ತು. ಕೊಂಕಣಿಗರಾದರೂ ಕೊನೆಯ ತನಕ ತಮ್ಮ ಕನ್ನಡತ್ವವನ್ನು ಕಾಪಾಡಿಕೊಂಡ ಅವರ ಸತ್ಕಾರ ಕೂಟ, ಪಕ್ಕದ ದಾದರ-ಮಾಟುಂಗಾ ಕಲ್ಚರಲ್ ಕ್ಲಬ್ಬಿನಲ್ಲಿ ಇಡೀ ದಿನದ ಕಾರ್ಯಕ್ರಮವಿತ್ತು. ಕರ್ನಾಟಕ ಸಂಘದ ಪರವಾಗಿ ಅವರಿಗೆ ಹೂಮಾಲೆಯನ್ನು ಹಾಕಿ ಸತ್ಕರಿಸುವ ಭಾಗ್ಯ ನನಗೆ ಸಿಕ್ಕಿತು ಅವರ ಶಿಷ್ಯ ಅಮೆರಿಕೆಯ ಲಿಯೋನ್ ಲಾಯಫರ್ ಅವರ ಬಾನ್ಸುರಿ ವಾದನ ಆಗಸ್ಟಿನಲ್ಲಿ ಕಲಾಭಾರತಿಯಲ್ಲಿ ಇಟ್ಟಾಗ ನಮ್ಮ ಭೇಟಿಯಾಗಿತ್ತು. ಶ್ರೋತೃವೃಂದ ಅಷ್ಟಿರದಿದ್ದರೂ ಕಚೇರಿ ಅದ್ಭುತವಾಗಿತ್ತು

ಜನವರಿ 2000ದಲ್ಲಿ ಕಾಯಿಲೆ ಬಿದ್ದ ದೇವೇಂದ್ರರನ್ನು ತೀವ್ರ ನಿಗಾ ವಿಭಾಗದಲ್ಲಿ ಸೇರಿಸಲಾಗಿತ್ತು. ಅವರು 28ನೆಯ ತಾರೀಖಿನ ರಾತ್ರಿ ಕೊನೆಯ ಶ್ವಾಸವನ್ನು ಎಳೆದರು. ದೇವೇಂದ್ರ ತೀರಿಕೊಂಡ ಮಾರನೆಯ ದಿನವೇ ಉಸ್ತಾದ್ ಅಲ್ಲಾ ರಖಾ ಖುರೇಶಿ ಅಂದರೆ 'ವಾಹ್ ಉಸ್ತಾದ್' ಪ್ರಸಿದ್ಧಿಯ ಝುಕೀರ್ ಹುಸೇನ್‌ರ ತಂದೆ, ಮಗಳ ಮೃತ್ಯುವಿನ ಶೋಕವನ್ನು ತಾಳಲಾರದೇ ತೀರಿಕೊಂಡರು. ಕಲಾಭಾರತಿಯ 30ನೇ ತಾರೀಖಿನ ಸಂಗೀತ ಸಭೆಯಲ್ಲಿ ಹಾಗೂ ಫೆಬ್ರುವರಿ 6ರಂದು ಈ ಇಬ್ಬರೂ ಹಿರಿಯ ಕಲಾವಿದರನ್ನು ನೆನಪಿಸಿಕೊಂಡು ಒಂದು ನಿಮಿಷದ ಆದರಾಂಜಲಿಯನ್ನು ಅರ್ಪಿಸಲಾಯಿತು.

*****

7.13

ಪಂಡಿತ ಕುಮಾರ ಗಂಧರ್ವ (1924–1992)

ಈ ತನಕ ಕುಮಾರ ಗಂಧರ್ವರ ಮೇಲೆ, ನನಗೆ ಗೊತ್ತಿರುವ ಪ್ರಕಾರ, ಮರಾಠಿಯಲ್ಲಿ ಐದು, ಹಿಂದಿಯಲ್ಲಿ ಎರಡು, ಇಂಗ್ಲೀಷಿನಲ್ಲಿ ಒಂದು ಪುಸ್ತಕಗಳು ಪ್ರಕಟಣೆಗೊಂಡಿವೆ. ಅನೇಕ ಲೇಖನಗಳು, ಅವರ ಘರಾಣೆಯ ಬಗ್ಗೆ ನಡೆದ ಮೂರು ಚರ್ಚಾಕೂಟಗಳು, ಗಾಂಧರ್ವ ಮಹಾವಿದ್ಯಾಲಯದ ಅವರಿಗೇ ಮುಡುಪಾಗಿಟ್ಟ ಒಂದು ಪುಸ್ತಕ (1993) ಇಷ್ಟೆಲ್ಲ ಕಡಿಮೆಯೇ ಎನಿಸುವಂತೆ ವಸಂತ ಪೊದ್ದಾರರ ಒಂದು ಪಾತ್ರ ಪ್ರಯೋಗ, 'ಕುಮಾರ'. ಬಿಡಿ ಲೇಖನಗಳು ಲೆಕ್ಕವಿಲ್ಲದಷ್ಟು ಇವೆ.

ಕುಮಾರ ತೀರಿಕೊಂಡು 22 ವರ್ಷಗಳಾದರೂ* ಈಗಲೂ ಅವರ ಬಗ್ಗೆ ಬರೆಯುವ ವ್ಯಾಮೋಹ ದಿನಂಪ್ರತಿ ಹೆಚ್ಚಾಗುತ್ತಾ ಬರುತ್ತಿದೆ. ಇದಕ್ಕೆ ಕಾರಣ ಇಲ್ಲದಿಲ್ಲ. ಕನ್ನಡಿಗರಾದರೂ ಕನ್ನಡದಲ್ಲಿ ಕುಮಾರ ಗಂಧರ್ವ ಊರ್ಫ ಶಿವಪುತ್ರ ಸಿದ್ಧರಾಮಯ್ಯ ಕೋಮಕಾಳಿ ಅವರ ಬಗ್ಗೆ ಈ ತನಕ ಒಂದೂ ಪುಸ್ತಕ ಬಂದಿಲ್ಲ! ಸಂಗೀತ ವಿಷಯದ ಬಗ್ಗೆ, ಅದೂ ಉತ್ತರಾದಿ ಅಥವಾ ಹಿಂದುಸ್ತಾನಿ ಸಂಗೀತ ಪದ್ಧತಿಯ ಮೇಲೆಯೂ ಅತಿ ವಿರಳ ಗ್ರಂಥಗಳಿವೆ. ಪಂಢರಿನಾಥ ಕೊಲ್ಹಾಪುರಿಯವರು ಮರಾಠಿಯಲ್ಲಿ ಒಂದು ಪುಸ್ತಕ, ತನ್ನ ಗೆಳೆಯ–ಗುರುವಿನ ಬಗ್ಗೆ 'ಗಾನ–ಯೋಗಿ ಶಿವಪುತ್ರ'ವನ್ನು ಬರೆದಿದ್ದಾರೆ. ಅದರ ಹಿಂದಿ ಆವೃತ್ತಿಯೂ ಬಂದಿದೆ. ನಾನು ಈ ಪುಸ್ತಕದ ಕನ್ನಡ ಅನುವಾದ ಪ್ರಾರಂಭಿಸಿ ಇದಾಗಲೇ ಐದು ವರ್ಷಗಳಾದವು. ನಲವತ್ತು ಪುಟಕ್ಕೆ ನನ್ನ ಲೇಖನಿ ತಂತಾನೆ ನಿಂತುಬಿಟ್ಟಿತು!

ಹನ್ನೊಂದನೇ ವರ್ಷಕ್ಕೆ ಶಿವಪುತ್ರ ತನ್ನ ತಂದೆಯವರೊಂದಿಗೆ ಮುಂಬಯಿಗೆ ಬಂದವನು ಮರಳಿ ಸೂಳೆಭಾವಿಗೆ (ಅವನ ಹುಟ್ಟೂರು, ಬೆಳಗಾವಿ ಜಿಲ್ಲೆ) ಆಗಿಂದಾಗ ಹೋಗುತ್ತಿದ್ದನೆ? ಮೊದಲನೇ ಮದುವೆಯಾದ ಮೇಲೆ ಭಾನುಮತಿಯೊಡನೆ ಬಂಧುಬಳಗದವರನ್ನು ಭೆಟ್ಟಿಯಾಗಲು ಹೋಗಿದ್ದನೆ? ಅವರ ಸಂಬಂಧ ಮನೆಯವರೊಡನೆ ಹೇಗಿತ್ತು? ಕುಮಾರ ಗಂಧರ್ವರ ಹೆಸರಿನಲ್ಲಿ ಬೆಳಗಾವಿಯಲ್ಲಿ ಒಂದು ಸಭಾಗೃಹದ ಉದ್ಘಾಟನೆ 1994ರಲ್ಲಿ ಆಯಿತು. ಪಂ. ಭೀಮಸೇನ ಜೋಶಿ, ಪಂಡಿತಾ ಗಂಗೂಬಾಯಿ, ಪಂ.ಶಿವಕುಮಾರ ಶರ್ಮಾ ಮತ್ತಿತರ ಗಾಯಕ–ವಾದಕರು ಈ ಕಟ್ಟಡದ ನಿಧಿಗೆ ತಮ್ಮ ಸಂಗೀತ ಸಭೆಗಳನ್ನು ಆಗಾಗ ನಡೆಸಿಕೊಟ್ಟು ಆರ್ಥಿಕ ಆಧಾರ ಕೊಟ್ಟಿದ್ದ ಬಗ್ಗೆ ಓದಿದ್ದೇನೆ. ಅವರು ತೀರಿಕೊಂಡ ವರ್ಷ 1992 ಡಿಸೆಂಬರ್‌ದಲ್ಲಿ.

ಮುನ್ಸೂಚನೆಯೋ ಎಂಬಂತೆ ಪುಣೆಯ 'ಸವಾಯಿ ಗಂಧರ್ವ'ದಲ್ಲಿ ಹಾಡುವ ಮೊದಲು ಸಪತ್ನಿಕ (ವಸುಂಧರಾ) ಸಹಕುಟುಂಬ ಊರಿಗೆ ಹೋಗಿ ಬಂದ ಸಂದರ್ಭ ಅವರ ಪುಸ್ತಕದಲ್ಲಿ ಸಿಗುತ್ತದೆ. ಆದರೆ ಯಾವುದೇ ಲೇಖನದಲ್ಲಿ ತನ್ನ ತಾಯಿ-ತಂದೆ, ಸಹೋದರರು, ಸೂಳೆಭಾವಿಯ ಮನೆ, ಮದುವೆಯ (1946-47) ನಂತರ ಅವರ ಕುಟುಂಬದ ಬಗ್ಗೆ, ಅವರ ಶಸ್ತ್ರಕ್ರಿಯೆಯ ನಂತರದ ಕಾಲದ ಬಗ್ಗೆ ಎಲ್ಲೆಲ್ಲೂ ಬರೆದದ್ದು ಇಲ್ಲ. ಇದೊಂದು ವಿಷಾದದ ವಿಷಯ. ಕರ್ನಾಟಕದ ಮೂಲೆ ಮೂಲೆಯಲ್ಲಿ ಕುಮಾರರ ಕಚೇರಿಗಳಾಗಿದ್ದು ಮೈಸೂರಿನಲ್ಲಿದ್ದ ಟೀ ಎಸ್ಟೇಟಿನ ಮಾಲಕರಾದ ಬಾಳಾಸಾಹೇಬ ಬಾಕ್ರೆಯವರ ಮನೆಯಲ್ಲಿ ಕುಮಾರರ 4 ಜಲಸಾಗಳು ಆದದ್ದನ್ನು ಬಾಳಾಸಾಹೇಬರೇ ನನಗೆ ಸ್ವತಃ ಹೇಳಿದ್ದುಂಟು. ಎರಡು ಜಲಸಾಗಳಿಗೆ ಖ್ಯಾತ ಲೇಖಕ ಎಸ್.ಎಲ್. ಭೈರಪ್ಪನವರು ಹಾಜರಿದ್ದರೆಂದು ಅವರೇ ಹೇಳಿದ್ದರು. ಕೋಮಕಾಳಿಮಠದ ಸಮುದಾಯಕ್ಕೆ ಸೇರಿದ ಶಿವಪುತ್ರರ ಬಗ್ಗೆ ಎಲ್ಲೆಲ್ಲಿಯೂ ಉಲ್ಲೇಖವಿಲ್ಲ. ಅವರ ಸಂಗೀತದ ಪರಾಮರ್ಶೆಇಲ್ಲ. ಇದೊಂದು ಅಚ್ಚರಿಪಡುವಂತಹ ಸಂಗತಿ. ಈ ಯುಗಪ್ರವರ್ತಕ ಸಂಗೀತಕಾರನ ಬಗ್ಗೆ ಕರ್ನಾಟಕ ಜನತೆಗೆ, ಲೇಖಕರಿಗೆ ಅದೇಕೆ ಇಷ್ಟು ಅನಾಸ್ಥೆ?

40 ಪುಟದ ಅನುವಾದದ ನಂತರ ಈ ಪ್ರಶ್ನೆಗಳು ನನ್ನನ್ನು ಕಾಡಿದವು. ಬರೆಯುವದಾದರೆ ಒಂದು ಸ್ವತಂತ್ರ ಪುಸ್ತಕವನ್ನೇ ಕನ್ನಡದಲ್ಲಿ ಬರೆಯಬೇಕು. ಈ ತನಕ ನಾನು ಓದಿದ ಲೇಖನಗಳಲ್ಲಿ, ಪುಸ್ತಕಗಳಲ್ಲಿ ಕುಮಾರರು ಮಹಾರಾಷ್ಟ್ರದವರಾಗಿದ್ದು ನಂತರ ಮಧ್ಯಪ್ರದೇಶದ ದೇವಾಸ ಸಂಸ್ಥಾನದಲ್ಲಿ ನೆಲೆಸಿದ್ದರಿಂದ ಅವರ ವ್ಯಕ್ತಿಚಿತ್ರದಲ್ಲಿ ಅವರ ಕರ್ನಾಟಕದ ಮೂಲವನ್ನು ಎಲ್ಲರೂ ಮರೆತಂತೆ ಕಂಡದ್ದರಿಂದಲೂ, ಅವರ ವೀರಶೈವ ಪಂಥದ ಭಸ್ಮಧಾರಣೆ, ಲಿಂಗಧಾರಣೆಯ ಬಗ್ಗೆ 1955ರಲ್ಲಿ ಉಲ್ಲೇಖವಿದ್ದರೂ, ನನಗೆ ಅವರನ್ನು ಕರ್ನಾಟಕದ ಕಲಾವಿದನೆಂದು ಹೊಸದಾಗಿ ಪರಿಚಯಿಸಬೇಕೆಂದೆನಿಸಿತು.

ಸೂಳೆಭಾವಿಯಲ್ಲಿದ್ದ, ಬೆಳಗಾವಿಯಲ್ಲಿ ನೆಲೆಸಿದ್ದ ಕುಮಾರ ಗಂಧರ್ವರ ನೆಂಟಸ್ತರನ್ನೂ, ಗೆಳೆಯರನ್ನೂ, ಅವರೊಂದಿಗೆ ಮುಂಬಯಿಯಲ್ಲಿದ್ದ ವಯೊಲಿನ್‌ವಾದಕರಾದ ಪಂ. ಡಿ.ಕೆ. ದಾತಾರ್, ವಿ.ಜಿ ಜೋಗ್ ಅವರಂತಹ ಅಂತಾರಾಷ್ಟ್ರೀಯ ಕೀರ್ತಿಯ ಕಲಾವಿದರ ಗುರು, ಗೋಕರ್ಣದ ಪಂ. ವಿಘ್ನೇಶ್ವರ ಶಾಸ್ತ್ರಿಯವರ ಮಗ ಪಂ. ನಾರಾಯಣ ಪಂಡಿತರೊಡನೆ ಕುಮಾರರ ಬಗ್ಗೆ ವಿಚಾರಿಸಬೇಕೆಂಬ ಹಂಬಲ ದಿನೇ ದಿನೇ ಹೆಚ್ಚುತ್ತಿತ್ತು. ಈಗ ನಾರಾಯಣ ಪಂಡಿತರು ಹೊನ್ನಾವರ ಪಕ್ಕದ ಕಾಸರಗೋಡಿನ 'ಸ್ನೇಹಕುಂಜ'ದಲ್ಲಿ ವಿಶ್ರಮಿಸುತ್ತಿದ್ದಾರೆ. ಆದರೆ ಹೊಸತಾಗಿ ಬರೆಯಲು ಸಂದರ್ಶನಕ್ಕೆ ಪರ ಊರುಗಳಿಗೆ ಹೋಗಬೇಕು, ಸೂಳೆಭಾವಿ, ಬೆಳಗಾವಿ, ಬೆಂಗಳೂರು, ಹೊನ್ನಾವರ... ಈ ಎಲ್ಲ ಕೆಲಸದ ಹೊರೆ ಹೊರಲು ಅನಾರೋಗ್ಯದ ಕಾರಣ ನನಗೆ ಸಾಧ್ಯವೇ? ಎಂಬ ಮಾತು ಕೊರೆಯುತ್ತಿತ್ತು.

1963ರಲ್ಲಿ ಗ್ಲಾಕ್ಸೋ ಕಂಪನಿ ಸೇರಿಕೊಂಡಾಗ ಭೋಪಾಲ ನನ್ನ ಮೊಟ್ಟಮೊದಲಿನ ಹೆಡ್ ಕ್ವಾರ್ಟರ್ ಆಗಿತ್ತು. ಆಗ ನವಾಬರ ಪ್ರಭಾವ ಇಡೀ ಊರಿನಲ್ಲಿತ್ತು. ಐದಾರು ಕೆರೆಗಳ ಊರು, ತಂಪಾದ, ಹಿತಕರವಾದ ಹವಾಮಾನ. ಅಲ್ಲಿ ಹೋದ ಮೂರನೇ ತಿಂಗಳಿಗೆ ಹೊಸದಾಗಿ ಬಂದ ಮರ್ಫಿ ಟ್ರಾನ್ಸಿಸ್ಟರ್ ಖರೀದಿಸಿದೆ. ಕುಮಾರ ಗಂಧರ್ವ

ಬಾಲ್ಯದಲ್ಲಿ ಹಾಡಿದ ದುರ್ಗಾ, ಭೀಮಪಲಾಸ ರೆಕಾರ್ಡುಗಳನ್ನು ಭೋಪಾಳ ಆಕಾಶವಾಣಿ ಆಗಾಗ ಬಿತ್ತರಿಸುತ್ತಿತ್ತು. ನನ್ನ ಮತ್ತು ಕುಮಾರರ ನೆಂಟು ಹೀಗೆ ಆಕಾಶವಾಣಿ ಸಂಗೀತದಿಂದಲೇ ಆಯಿತು. ಅಲ್ಲಿಯ ತನಕ ನಾನು ಕುಮಾರ ಗಂಧರ್ವರ ಹಾಡುಗಳನ್ನು ಕೇಳಿರಲಿಲ್ಲ! ಬಳಿಕ, ಅಂದರೆ 1965ರಲ್ಲಿ, ಒಂದು ಸಲ ಇಂದೋರಿನಲ್ಲಿ ಅವರ ಗಾಯನ ಕೇಳಿ ತುಂಬಾ ಪ್ರಭಾವಿತನಾದೆ. ನನಗೆ ಅದೇ ವರ್ಷ ಮುಂಬಯಿಗೆ ವರ್ಗವಾಯಿತು. ನಂತರದ ಅವರ ಯಾವುದೇ ಕಚೇರಿಗಳನ್ನೂ ನಾನು ಬಿಡಲಿಲ್ಲ.

1924 ಎಪ್ರಿಲ್ ತಿಂಗಳಲ್ಲಿ ಸೂಳೆಭಾವಿಯಲ್ಲಿ ಹುಟ್ಟಿದ ಶಿವಪುತ್ರ, ಅಪ್ಪ ಸಿದ್ಧರಾಮಯ್ಯ ಕೋಮಕಾಳಿಯವರ ಎರಡನೆಯ ಮಗ. ಹಿರಿಯವನು ಶಿವರುದ್ರಯ್ಯ. ಸಿದ್ಧರಾಮಯ್ಯ ಗದುಗಿನ ಪಂಚಾಕ್ಷರಿ ಗವಯಿಗಳಲ್ಲಿ ಸಂಗೀತ ಕಲಿತು, ಮುಂದೆ ದೊಡ್ಡ ಮಗ ಶಿವರುದ್ರಯ್ಯನಿಗೂ ಪರಿಶ್ರಮ ಮಾಡಿಸಿದರು. 1928–34ರಲ್ಲಿ ಉತ್ತರ ಕರ್ನಾಟಕದ ಆ ಭಾಗದಲ್ಲಿ ಕಿರಾನಾ ಪರಂಪರೆಯ ಸಂಗೀತ, ಬಿರುಗಾಳಿಯಂತೆ ಹಬ್ಬುತ್ತಿತ್ತು. ವಯಸ್ಸಿನ ಆರುವರ್ಷದ ತನಕ ಶಿವಪುತ್ರ ಹಾಡುವದಕ್ಕಾಗಲೀ, ಮನೆಯಲ್ಲಿದ್ದ ಪೇಟಿ (ಹಾರ್ಮೋನಿಯಮ್), ತಬಲಾದೆಡೆ ನೋಡಿ ಬಾಯಿ ತೆರೆಯಲಿಲ್ಲ ಅಥವಾ ದೃಷ್ಟಿ ಹಾಯಿಸಿರಲಿಲ್ಲ. ಅಪ್ಪ ಮತ್ತು ದೊಡ್ಡಣ್ಣ, ದಿನಂಪ್ರತಿ ಹಾಡಿನಲ್ಲಿಯೇ ಮುಳುಗಿರುತ್ತಿದ್ದರು. ಅಬ್ದುಲ್ ಕರೀಂಖಾನರ ಒಂದು ರೆಕಾರ್ಡು ಪದೇಪದೇ ಕೇಳಿ ಅಪ್ಪ ಮತ್ತು ಮಗ ತಬಲಾದೊಂದಿಗೆ ಕಸರತ್ತು ಮಾಡಿ, ಅದೇ ಹಾಡನ್ನು ಹಾಡಲು ಪ್ರಯತ್ನಿಸುತ್ತಿದ್ದಾಗ, ಪುತ್ರ ಶಿವಪುತ್ರ ಒಮ್ಮೆಲೇ ಬಾಯಿ ತೆರೆದು ಸ್ವರಹಚ್ಚಿದ, ಅಷ್ಟೇ ಅಲ್ಲ ಅಬ್ದುಲ್ ಕರೀಂ ಖಾನರಂತೆಯೇ ತಾನುಗಳ ಸಹಿತ ಹಾಡಲಾರಂಭಿಸಿದ! ಅಪ್ಪನಿಗೆ ಆಶ್ಚರ್ಯ! ದೊಡ್ಡಣ್ಣ ಶಿವರುದ್ರಪ್ಪ ತೆರೆದ ಬಾಯಿ ಮುಚ್ಚಿಬಿಟ್ಟ, ಕೊನೆಯತನಕ ಅಪ್ಪ, ಅಣ್ಣ ಕುಮಾರನೆದುರು ಬಾಯಿ ತೆರೆಯಲಿಲ್ಲ! ಯಾವುದೇ ತರಹದ ಸಂಗೀತ ಶಿಕ್ಷಣವಿಲ್ಲ, ಪೂರ್ವ ಸಂಕೇತವಿಲ್ಲ, "ಈಟ ಉದ್ದದ ಹುಡ್ಗಾ ಹಾಡ್ತಾನ ಅಂದ್ರ, ವಸ್ತಾದ ಅದಾನ!" ಎಂದು ಕಾಡ್ಗಿಚ್ಚಿನಂತೆ ಈ ಸುದ್ದಿ ಬೆಳಗಾವಿ, ಧಾರವಾಡದಲ್ಲಿ ಹರಡಿತು. ಒಂದು ದಿನ ವೀರಶೈವ ಸಂಪ್ರದಾಯದ ಗುರುಮಠದ ಸ್ವಾಮಿಗಳ ಎದುರಿಗೆ ರೆಕಾರ್ಡಿನಲ್ಲಿದ್ದ ಹಾಗೆಯೇ, ಶಿವಪುತ್ರ ಹಾಡಿದ, ಒಂದಲ್ಲ, ನಾಲ್ಕು ಹಾಡುಗಳು! ಅಪ್ಪ ಮತ್ತು ದೊಡ್ಡಣ್ಣ ಅತ್ಯಂತ ವಿನಯದಿಂದ ತಂಬೂರಿ ಸಾಥ್ ಕೊಡಲು ಕುಳಿತಿದ್ದರು. ಗುರುಗಳು, "ಎನಪ್ಪಾ ಹುಡುಗಾ, ಮ್ಯಾಲಿಂದ ಗಂಧರ್ವ ಇಳಿದು ಬಂದಾಂಗ ಕಾಣಿಸತೈತಿ. ಗಂಧರ್ವ ಕುಮಾರಾ! ನೀನು ಇವತ್ತಿಂದ ಕುಮಾರ ಗಂಧರ್ವ ಆಗಿಯಪ್ಪಾ" ಎಂದು ಬಾಯಿತುಂಬ ಹರಸಿದರು. ಇದೇ ಹೆಸರು ಮುಂದೆ ರೂಢಿಯಾಯಿತು.

ಕುಮಾರರ ಅಪ್ಪ, ಅಣ್ಣ ಸರಾಫರ ಅಂಗಡಿ ನಡೆಸುತ್ತಿದ್ದರು. ಉತ್ಪನ್ನವಿದ್ದುದು ಅಷ್ಟಕ್ಕಷ್ಟೇ. ಇಲ್ಲಿಂದ ಪ್ರಾರಂಭವಾಯಿತು, 'ಕುಮಾರ ಗಂಧರ್ವ ಮತ್ತು ಪಾರ್ಟಿ'ಯ ಮೇಳ. 1931–34ರವರೆಗೆ ಉತ್ತರ ಕರ್ನಾಟಕದ ಮೂಲೆಮೂಲೆಗಳಲ್ಲಿ ಸಂಗೀತದ ಕಾರ್ಯಕ್ರಮ! 1935ರಿಂದ ಹೊರ ಊರಿನ ಆಮಂತ್ರಣಗಳು ಬಂದಿದ್ದರಿಂದ ಸಿದ್ಧರಾಮಯ್ಯನವರು, ಸಿಂಧ್, ಪಂಜಾಬ್, ಉತ್ತರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಅಂದರೆ ಆಗಿನ ಮುಂಬಯಿ ಪ್ರಾಂತದಲ್ಲಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿದರು. ಮಹಾರಾಷ್ಟ್ರದ ಸಾವಂತವಾಡಿ ಆ ಕಾಲದ ಒಂದು ಪುಟ್ಟ

ಸಂಸ್ಥಾನ, ಇಲ್ಲಿ ಘಟಿಸಿದ ಒಂದು ವಿಚಿತ್ರ ಅನುಭವವನ್ನು ಓದುಗರಿಗೆ ಹೇಳಬೇಕು.

ಇಲ್ಲಿಯ ಸಂಸ್ಥಾನಿಕರು ಸಂಗೀತದ ಆರಾಧಕರು ಆದರೆ ಅವರಿಗೆಲ್ಲ ಏನೋ ಸಂಶಯ. ಈ ಹತ್ತು ವರ್ಷದ ಬಾಲಕ ಎಲ್ಲ ರೆಕಾರ್ಡುಗಳನ್ನು ಬಾಯಿಪಾಠ ಮಾಡಿ ಹಾಡುತ್ತಿರಬೇಕು ಎಂದು. ಅದೇ ತಾನೇ ಭೂಗಂಧರ್ವ ರಹಿಮತ್ ಖಾನರ ಒಂದು ರೆಕಾರ್ಡು ಮಾರುಕಟ್ಟೆಯಲ್ಲಿ ಬಂದಿತ್ತು. ಮಹಾರಾಜರು ಸಿದ್ಧರಾಮಯ್ಯನವರಿಗೆ ಕೇಳಿದರು, "ಈ ಹುಡುಗ ಒಂದು ಸಲ ಕೇಳಿ ರೆಕಾರ್ಡಿನಂತೆ ಹಾಡುತ್ತಾನಂತೆ ಹೌದೇ?"

"ಹೌದು ಮಹಾರಾಜರೆ!

"ನಾನು ನಿನ್ನೆ ಭೈರವಿ ರಾಗದ ಹೊಸ ರೆಕಾರ್ಡು ತರಿಸಿದ್ದೇನೆ. ಅದನ್ನು ಕೇಳಿ, ಬಳಿಕ ಕುಮಾರನಿಗೆ ಹಾಡಲು ಹೇಳು" ಎಂದು ಮಹಾರಾಜರು ಅಪ್ಪಣೆ ಮಾಡಿದರು.

"ಆಯಿತು ಮಹಾರಾಜರೆ"

ಸರಿ, ತಬಲಾ, ಪೇಟಿ ವ್ಯವಸ್ಥೆ ಆಯಿತು. ವೇದಿಕೆಯ ಮೇಲೆ ಫೋನೋ ಇಡಲಾಯಿತು. ದೊಡ್ಡ ತುತೂರಿಯ ಫೋನೋ. ಕುಮಾರ ಹಾಡನ್ನು ಕೇಳಿದ್ದು ಒಂದೇ ಸಲ. ವೇದಿಕೆಯನ್ನು ಏರಿ, ಆರು ನಿಮಿಷ ಕೇಳಿದ್ದನ್ನೇ ತನ್ನ ಕೋಮಲ ಶಾರೀರದಲ್ಲಿ ಹಾಡಿ ತೋರಿಸಿದ. ಭೂಗಂಧರ್ವರ ಹಾಡಿನ ವೈಶಿಷ್ಟ್ಯವೆಂದರೆ ಅವರು ತಾನಪ್ರಕಾರದಲ್ಲಿಯೂ ರಾಗದ ವಿಶೇಷ ಗುಣಗಳನ್ನು ಹಾಡಿ ತೋರಿಸುತ್ತಿದ್ದರು. 'ಭೇಡೋನಾ' ಈ ಭೈರವಿಯೊಳಗಿನ ಎಲ್ಲ ಅಂಗಗಳಿಂದ ಹಾಡಿ, ಉತ್ತಮ 'ಅದಾಕಾರಿ' ಮಾಡಿ ತೋರಿಸಿದ! ಇದ್ದಕ್ಕಿದ್ದಂತೆ ಅದರಲ್ಲಿ ಪ್ರಣಯೋತ್ಕಟವಾಗಿದ್ದ 'ಭೇಡೋನಾ' ಈ ಶಬ್ದ ಸ್ವಲ್ಪ ಕನ್ನಡದ ಧಾಟಿಯಲ್ಲಿ ಹಾಡಿದ್ದರಿಂದ ಒಂದು ತರಹದ ವಿಶಿಷ್ಟ ಮೆರುಗು ಬಂದಿತ್ತು. ಮಹಾರಾಜರು ಈ ಹುಡುಗನಿಗೆ ಸನ್ಮಾನ ಮಾಡದೇ ಇರುತ್ತಾರೆಯೇ? ವಯಸ್ಸಿನ ಆರನೇ ವರ್ಷದ ತನಕ ಪಿಟ್ಟೆಂದು ಬಾಯಿ ಬಿಡದ ಹುಡುಗ, ಒಂದೇ ಒಂದು ಸಲ ಹಾಡನ್ನು ಕೇಳಿ, ಅದರಂತೆಯೇ ಹಾಡುವ ಕಲೆಗೆ, 'ಕುಮಾರ ಗಂಧರ್ವ' ಹೆಸರು ತಕ್ಕುದಾದುದು ಎಂದು ಅವನನ್ನು , 'ಕುಮಾರ' ಎಂದೇ ಸಂಬೋಧಿಸತೊಡಗಿದರು. ಕುಮಾರ ತಂದೆಯ ಸರಾಫಿ ಅಂಗಡಿಗಿಂತ ಹೆಚ್ಚು ಹಣವನ್ನು ಸಂಪಾದಿಸತೊಡಗಿದ! ವಯಸ್ಸಿನ 9 ವರ್ಷ ತುಂಬುವದರೊಳಗೆ ಎಚ್.ಎಮ್.ವಿಯವರ, 'ದುರ್ಗಾ' ರಾಗದಲ್ಲಿಯ , 'ಸಖೀ ಮೋರಿ ರುನ ಝುನ' ಮತ್ತು, 'ಶ್ಯಾಮಸುಂದರ ಮದನ ಮೋಹನ' ಎಂಬ ಕೃತಿ ಭೈರವಿ ರಾಗದಲ್ಲಿ ಮಾರುಕಟ್ಟೆಗೆ ಬಂದಿತ್ತು. ಆಗಿನ ಕಾಲದಲ್ಲಿ ಕುಮಾರನ ಸಂಪಾದನೆ ತಿಂಗಳಿಗೆ 1500-1800 ರೂ ತನಕ ಇತ್ತು! ಈ ಹಣಗಳಿಸುವ ಪ್ರವಾಸವು ಅವಿರತವಾಗಿ 1935ರ ತನಕ ನಡೆಯಿತು. 1935ರಲ್ಲಿ ಅಲಾಹಾಬಾದ (ಪ್ರಯಾಗ ಸಂಗೀತ ಸಮಿತಿ) ಕಲಕತ್ತಾ ಮತ್ತು ಮುಂಬಯಿಯಲ್ಲಿ ಅಸಂಖ್ಯ ಕಚೇರಿಗಳಾದವು. ಈ ಸಲದ ಮುಂಬಯಿ ವಾಸ್ತವ್ಯದಲ್ಲಿ ಸಿದ್ಧರಾಮಯ್ಯನವರಿಗೆ ದೇವಧರ ಸಾಹೇಬರು ಭೆಟ್ಟಿಯಾದರು.

ಕುಮಾರನ ಸ್ವಯಂಭೂ ಪ್ರತಿಭೆಯನ್ನು ಮೆಚ್ಚಿಕೊಂಡ ದೇವಧರರು ಅದಾಗಲೇ ಅವನನ್ನು ತಮ್ಮ ಶಾಲೆಗೆ ಸೇರಿಸಿಕೊಂಡಿದ್ದರು. ತಂದೆಯವರಿಗೆ ಬುದ್ಧಿ ಹೇಳುತ್ತಾ, "ನೋಡಿ ನಿಮ್ಮ ಮಗ ಕೇವಲ ನಕಲಾ ಮಾಡೋಕ್ಕಿಂತ್ ಹೆಚ್ಚಿನ ಪ್ರತಿಭಾವಂತ ಆದಾನ. ನಾಳೆ ದೊಡ್ಡ ಗವಯಿ ಆಗ್ತಾನ. ನನ್ನ ಕಡೆನ ಇರಲಿ. ಮನ್ಯಾಗ ನನಗೂ

ಮಕ್ಕಳ ಮರಿ ಇಲ್ಲಾ. ನಾನ ಎಲ್ಲಾ ಕಲಿಸ್ತೀನಿ" ಅಂದರು. ಬಂಗಾರದ ತತ್ತಿ ಕೊಡುತ್ತಿದ್ದ ಕೋಳಿ! ಆದರೂ ಮಗನ ಉಜ್ವಲ ಭವಿಷ್ಯ ತಂದೆಗೆ ಕಂಡಿರಬೇಕು. 'ಹೂಂ' ಅಂದರು. ಕುಮಾರ ಗಂಧರ್ವ ಪಾರ್ಟಿ ಕೊನೆಯ ಬಾರಿಗೆ ಕಲಕತ್ತಾ, ಅಲಾಹಾಬಾದಿಗೆ ಹೋಗಿ ಬಂದಿತು. ಅವರ ಜೊತೆಗೆ ಕುಮಾರನ ವಯಸ್ಸಿನ ಬೋಂದ್ರೆ ಮತ್ತು ಅವನಿಗಿಂತ ಹಿರಿಯನಾದ ಬಾಬು ರೇಳೆ" ಹಾಗೂ ಗುರು ದೇವಧರ್ ಮಾಸ್ತರರು. ಪ್ರಯಾಗ ಸಂಗೀತ ಸಮಿತಿಯಲ್ಲಿ ಫಯ್ಯಾಜ್ ಖಾನ್, ಆಗಿನ ಖ್ಯಾತ ನಟಗಾಯಕ ಕುಂದನಲಾಲ್ ಸೆಹೆಗಲ್ ಇವರೆಲ್ಲ ಕುಮಾರನ ಪ್ರತಿಭೆಯನ್ನು ಕಂಡು ವಿಸ್ಮಯಪಟ್ಟರು. ಆ ಕಾರ್ಯಕ್ರಮದಲ್ಲಿ ರಾಮಕೃಷ್ಣ ಬೋಂದ್ರೆ ಮತ್ತು ಕುಮಾರನ ತಂದೆ ಸಿದ್ಧರಾಮಯ್ಯನವರು ತಂಬೂರಿ ಬಾರಿಸಿದರು ಮತ್ತು ಕುಮಾರ ಅಬ್ದುಲ್ ಕರೀಂ ಖಾನರ, 'ಸರ ಪರದಾ'ಹಾಡಿದ. ಹಾಡು ಮುಗಿದ ಕೂಡಲೇ ಫಯ್ಯಾಜ್ ಖಾನ್‌ರು ಎದ್ದು ಕುಮಾರನ ಬೆನ್ನು ಚಪ್ಪರಿಸಿ, "ಮೆರೆ ಪಾಸ್ ರಿಯಾಸತ್ ಹೋತಾ ತೋ ಆಜ್ ಮೈಂ ವಹ್ ತುಝೆ ದೇ ದೇತಾ" (ನನ್ನ ಬಳಿ ಆಸ್ತಿ ಇದ್ದಿದ್ದರೆ ನಾನು ನಿನಗೆ ಕೊಟ್ಟುಬಿಡುತ್ತಿದ್ದೆ) ಅಂದರು. ಕುಮಾರನಿಗೆ ಅವರು ಮಾತಾಡಿದ್ದು ಏನೂ ಅರ್ಥವಾಗಲಿಲ್ಲ. ಕನ್ನಡ ಭಾಷೆ ಬಿಟ್ಟರೆ ಏನೂ ಅರಿಯದ ಮುಗ್ಧ!

ಮುಂದೆ ಕಲಕತ್ತೆಯಲ್ಲೂ 1935ರ ಲಾಲಬಾಬು ಸಂಗೀತ ಸಮ್ಮೇಳನದಲ್ಲಿ ಇದೇ ತರಹ ರಸಿಕ ಶ್ರೋತೃಗಳಿಂದ, 'ವಾಹ್ ವಾಹ್' ಗಳಿಸಿದ ಕುಮಾರ. ಅವನಿಗೆ ತಬಲಾ ಸಾಥ ಕೊಟ್ಟವರು ಖ್ಯಾತ ತಬಲಾಪಟು ಮೆಹಬೂಬ್ ಖಾನ್. ಪುಟ್ಟ ಬಾಯಿಯಿಂದ ಸ್ಥಿರವಾದ ಷಡ್ಜ ಹೊರಗೆ ಬಂದದ್ದು ಕೇಳಿ ಜನ ಸ್ಥಂಭಿತರಾದರು. 'ಪೀಯಾ ಬಿನ ನಾಹಿ ಆವತ ಚೈನ' ಈ ಝಿಂಝೋಟಿ ರಾಗದಲ್ಲಿಯ ಬಂದಿಶ ಪ್ರಾರಂಭಿಸಿದ ಕೂಡಲೇ ಎಲ್ಲೆಲ್ಲಿಯೂ ಸ್ಥಬ್ದತೆ. ಆ ದಿನದ ಮೆಹಫಿಲ್ಲಿನಲ್ಲಿ ಜನಸಮುದಾಯ ಈ ಎಳೆ ಬಾಲಕನನ್ನು ಕೊಂಡಾಡಿದ್ದು ಒಂದು ಅಭೂತಪೂರ್ವ ಘಟನೆಯಾಗಿತ್ತು.

ಮುಂದೆ ಒಂದು ದೂರದರ್ಶನದ ಸಂದರ್ಶನದಲ್ಲಿ ಕುಮಾರರಿಗೆ ಈ ಬಗ್ಗೆ ಕೇಳಿದಾಗ ಅವರು ಕೊಟ್ಟ ಉತ್ತರ ಅಮೃತಸಿಂಚನದಂತಿತ್ತು. ಅತ್ಯಂತ ಮಾರ್ಮಿಕವಾಗಿ, "ನಾನು ಹಾಡಲು ಕೂತರೆ ನನಗೆ ಇಡೀ ರಾಗ, ಅದರ ಸ್ವರಸಮೂಹ, ತಾನಪಲ್ಟೆ, ಇಡೀ ಬಂದಿಶ್ ಸಾಕ್ಷಾತ್ ಕಣ್ಣುಮುಂದೆ ಕಾಣಿಸುತ್ತದೆ. ಎಲ್ಲ ಚಿತ್ರಗಳಲ್ಲಿ. ಓದಲು ಬರುತ್ತಿರಲಿಲ್ಲ ರಾಗವೇ ಮೂರ್ತಿಮಂತವಾಗಿ ಕಾಣಿಸುತ್ತಿತ್ತು".

ಹನ್ನೆರಡು ವರ್ಷ ಅಂದರೆ ವಯಸ್ಸಿನ 23-24 ವರ್ಷಗಳ ತನಕ ಕುಮಾರರು ದೇವಧರ ಮಾಸ್ತರರ (ಇವರದು ಗ್ವಾಲಿಯರ್ ಘರಾಣಾ) ಮನೆಯಲ್ಲಿದ್ದು ಕಲಿತರು. ಅದೇ ವರ್ಷ ಅಂದರೆ 1943ರಲ್ಲಿ ಪುಣೆಯಿಂದ ದೇವಧರ ಮಾಸ್ತರರಿಗೆ ಒಂದು ಒಕ್ಕಣೆ ಬಂದಿತು, "ನಮಗೆಲ್ಲ ನನ್ನ ಮಗಳು ಭಾನುಮತಿ ಸಂಗೀತ ಕಲಿಯಬೇಕೆಂಬ ಇಚ್ಛೆ, ಅವಳಿಗೆ ಕುಮಾರರ ಹತ್ತಿರ ಕಲಿಯುವ ಆಸೆ. ನಾವು ಬರಬಹುದೇ?" ಭಾನುಮತಿಯ ಅಪ್ಪ ಕೌಶಿಕ್ ಕರಾಚಿಯಲ್ಲಿ ಎಣ್ಣೆ ಕಂಪನಿಯಲ್ಲಿ ದೊಡ್ಡ ಹುದ್ದೆಯ ಮೇಲೆ ಇದ್ದವರು. ಭಾರತ ಪಾಕಿಸ್ತಾನ ಪಾರ್ಟಿಷನ್‌ಗಿಂತ ಮೊದಲೇ ಭಾರತಕ್ಕೆ ಸ್ಥಳಾಂತರವಾಗಿದ್ದರು. ಮೂವರು ಹೆಣ್ಣುಮಕ್ಕಳು, ಒಬ್ಬ ಮಗ. ಕೊಂಕಣಿ ಸಾರಸ್ವತ ಕುಟುಂಬ. ಸಂಗೀತ ಮನೆಯಲ್ಲಿಯೇ ಇತ್ತು. ಭಾನುಮತಿ ಸುಶಿಕ್ಷಿತ ಯುವತಿ.

ಎಮ್.ಎ. ಬಿಟಿ ಮಾಡಿದ್ದಳಾಕೆ. ಖ್ಯಾತ ಸಂಗೀತ ದಿಗ್ದರ್ಶಕ ಕೇಶವರಾವ್ ಭೋಳೆ ಅವರಲ್ಲಿ ಸಂಗೀತ ಕಲಿತು ಒಂದೆರಡು ಹಾಡುಗಳ ರೆಕಾರ್ಡು ಕೂಡ ಹೊರ ಬಂದಿದ್ದವು. ಕುಮಾರ ಕಲಿಸಲು ಒಪ್ಪಲಿಲ್ಲ. "ನಾನು ವಿದ್ಯಾರ್ಥಿ ನಾನು ಯಾರಿಗೂ ಕಲಿಸುವದಿಲ್ಲ". ಆದರೆ ದೇವಧರರು ಕಲಿಸಲು ಒಪ್ಪಿಕೊಂಡರು.

ದೇವಧರರಲ್ಲಿ ಕಲಿಯುವಾಗ ಇಬ್ಬರ ಪ್ರೇಮ ಅಂಕುರಿಸಿತು, ತಂತಿಗಳು ಚೆನ್ನಾಗಿಯೇ ಸ್ವರಬದ್ಧವಾದವು! ಎಪ್ರಿಲ್ 17 1947ರಲ್ಲಿ ರಿಜಿಸ್ಟರ್ ಪದ್ಧತಿಯಲ್ಲಿ ಇಬ್ಬರೂ ಮದುವೆಯಾದರು. ಲಗ್ನಕ್ಕೆ ವಿರೋಧವಿದ್ದರೂ ಮನಸ್ಸಿಲ್ಲದೇ ಅನುಮತಿ ಕೊಟ್ಟು ಸಾಕ್ಷಿದಾರರಾದರು ದೇವಧರ ಸಾಹೇಬರು. ಆ ರಾತ್ರಿ ದೊಡ್ಡ ಸಂಗೀತ ಸಮಾರಾಧನೆಯೇ ಆಯಿತು. ಮೊದಲು ವಿ.ಜಿ ಜೋಗ್ ಅವರ ವಯೊಲಿನ್ ವಾದನ, ಬಳಿಕ ವಿದುಷಿ ಗಂಗೂಬಾಯಿಯವರ ಹಾಡುಗಾರಿಕೆ, ನಂತರ ಆಗ್ರಾ ಘರಾಣೆಯ ಅಧ್ವರ್ಯು ಉಸ್ತಾದ್ ವಿಲಾಯತ ಹುಸೈನ್ ಹಾಡಿದರು. 'ಶಾದಿ' ಈ ವಿಷಯದ ಮೇಲೆ ಮೂರು ಕೃತಿಗಳನ್ನು ರಚಿಸಿ ಹಾಡಿದರಂತೆ. ಕುಮಾರ ಕೂಡ ಜಗನ್ನಾಥ ಪುರೋಹಿತರವರು ರಚಿಸಿದ 'ಕೈಶಿ' ಹಾಡಿದರು. (ಇದು ಮುಂದೆ ಜೋಗಕೌಂಸ ಎಂದು ಪ್ರಸಿದ್ಧಿ ಪಡೆಯಿತು). ಕುಮಾರ ನವವಧುವಿನೊಂದಿಗೆ ದಾದರ್‌ನ ಶಿವಾಜಿ ಪಾರ್ಕದಲ್ಲಿ ಮನೆ ಮಾಡಿದರು.

ಕುಮಾರರು ಕನ್ನಡ ಕಲಿತದ್ದು ಒಂದು ಅಥವಾ ಎರಡು ಪುಸ್ತಕಗಳು ಮಾತ್ರ! ಸಂಗೀತದ್ದೇ ಧ್ಯಾನ. ಹೆಂಡತಿ ಎಮ್.ಎ. ಬಿಟಿ ಪರೀಕ್ಷೆ ಪಾಸಾಗಿದ್ದಳು. ಈಗಿನಂತೆ ಆಗ ಸಂಗೀತಕ್ಕೆ ಫೈವ್ (5) ಸ್ಟಾರ್ ಕಲ್ಚರ್ ಬಂದಿರಲಿಲ್ಲ. ಅತಿ ಶ್ರೀಮಂತಿಕೆಯಲ್ಲಿ ದಿನ ಕಳೆದ ಭಾನುಮತಿ ಪಿಟ್ಟೆನ್ನಲಿಲ್ಲ. ಕೆಲವು ಸಂಗೀತ ಪಾಠಗಳು, ತಿಂಗಳಿಗೊಂದು ಕಚೇರಿ ಹೀಗೆ, 'ದೇವರ ದಯೆಯೊಂದಿರಲಿ' ಎಂದು ಸಂಸಾರದಲ್ಲಿ ಏಕರೂಪಳಾದಳು.

ವಿಷ್ಣು ದಿಗಂಬರ ಪಲೂಸ್ಕರರ ಪುಣ್ಯತಿಥಿಗೆ (ಆಗಸ್ಟ 1947) ಸಾಮಾನ್ಯವಾಗಿ ಬೇರೆ ಬೇರೆ ಪರಂಪರೆಯ ಗಾಯಕರನ್ನು ಕರೆಸಿ ಏನಾದರೊಂದು ಹೊಸತನ್ನು ಹಾಡಿಸುವ ಪದ್ಧತಿ. ಕುಮಾರರು ಆ ದಿನ ಪರಂಪರೆಯಿಂದ ಕಲಿತ ರಾಗ 'ತೋಡಿ' ಹಾಡಿದರು ಕೊನೆಗೆ ತಾವೇ ಕಟ್ಟಿದ ಧೃತ್ ಲಯದಲ್ಲಿ 'ತರಾನಾ' ಹಾಡಿದರು. ಇದೊಂದು ಅಭೂತಪೂರ್ವ ಕಚೇರಿಯಾಗಿತ್ತು ಎಂದು ಪಂಢರಿನಾಥ್ ಕೊಲ್ಲಾಪುರಿಯವರು ಬರೆದಿಟ್ಟಿದ್ದಾರೆ.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಪ್ರತಿ ವರ್ಷದ ಚಳಿಗಾಲದಲ್ಲಿ ಲಾಲ್ ಬಾಬು ಕಲಕತ್ತಾದಲ್ಲಿ ಸಂಗೀತ ಸಮ್ಮೇಳನ ನಡೆಸುತ್ತಿದ್ದರು. 1935ರ ಪುಟ್ಟ ಕುಮಾರರ ಕಚೇರಿ ಅನುಭವಿಸಿದವರು ಈ ವರ್ಷವೂ ಕಿಕ್ಕಿರಿದು ಸೇರಿದ್ದರು. ಹಾಡುವಾಗ ಮೊದಲನೇ ಸಲ ಕುಮಾರರಿಗೆ ದಣಿವಾದುದು ಅರಿವಾಯಿತು. ಅರ್ಧಕ್ಕೆ ಮುಕ್ತಾಯುಗೊಳಿಸಬೇಕಾಯಿತು. ಮುಂಬಯಿಗೆ ಬಂದ ಕೂಡಲೇ ರೋಗ ನಿಧಾನವಾಯಿತು. ಕುಮಾರರಿಗೆ ಕ್ಷಯರೋಗದ ಬಾಧೆ ಅಂಟಿಕೊಂಡಿತ್ತು.

ಆಗಷ್ಟೇ ಆಂಟಿಬಯೋಟಿಕ್ಸ್ ಯುಗ ಪ್ರಾರಂಭವಾಗಿತ್ತು, ಆದರೆ ಕ್ಷಯರೋಗಕ್ಕೆ ಔಷಧವಿರಲಿಲ್ಲ. ಹವೆ ಬದಲಾವಣೆ ಅಷ್ಟೇ. ಬೆಳಗಾವಿ ಧಾರವಾಡದ ರಸ್ತೆಯಲ್ಲಿ

ಘಟಪ್ರಭಾ ಎಂಬ ಸ್ಟೇಶನ್ ಇದೆ, ಅಲ್ಲಿ ಡಾ. ನಾ.ಸು. ಹರ್ಡಿಕರರ ಪ್ರಯತ್ನದಿಂದ ಒಂದು ದೊಡ್ಡ ಸ್ಯಾನಟೋರಿಯಮ್ 1943ರಲ್ಲಿಯೇ ಸ್ಥಾಪನೆಯಾಗಿತ್ತು. ಮತ್ತೊಂದರ ಅಡಿಗಲ್ಲು ಕೂಡ ಹಾಕಲಾಗಿತ್ತು. ಆದರೆ, ಭಾನುಮತಿಯ ಅಣ್ಣ ಮತ್ತು ದೇವಧರ್ ಸಾಹೇಬರು ಇಂದೂರಿನ ಪಕ್ಕದ ದೇವಾಸ ಸಂಸ್ಥಾನವನ್ನು ಬದಲಾವಣೆಯ ಸಲುವಾಗಿ ಗೊತ್ತುಮಾಡಿದರು. ತಮ್ಮ ಹುಟ್ಟೂರಿಂದ ತುಂಬ ದೂರ ಅವರನ್ನು ರವಾನಿಸಿದರು. 1948 ಜನವರಿ 30ರಂದು ಕುಮಾರ, ಭಾನುಮತಿ, ಕೃಷ್ಣನ್ ನಂಬಿಯಾರ್ (ಕಣ್ಣಾಮಾಮಾ) ಖಾಂಡವಾ ಮಾರ್ಗದಿಂದ ಇಂದೂರು ತಲುಪಿದರು. ಅದೇ ದಿನ ಸಂಜೆ ರೇಡಿಯೋದಲ್ಲಿ ಮಹಾತ್ಮಾ ಗಾಂಧಿಜಿಯವರ ಹತ್ಯೆ ಆದ ಸುದ್ದಿ ಬಿತ್ತರಿಸಲಾಯಿತು.

ಇಂದೂರಿನ ಪ್ರತಿಷ್ಠಿತರು ಕೂಡಿ ಕುಮಾರ ಕುಟುಂಬಕ್ಕೆ ಈ ತಂಪಾದ ಸ್ಥಳದಲ್ಲಿ ಇರಲು ಮನೆಯ ಮತ್ತು ಭಾನುಮತಿಗೆ ಹುಡುಗಿಯರ ಶಾಲೆಯಲ್ಲಿ ಶಿಕ್ಷಕಿಯ ಕೆಲಸದ ಏರ್ಪಾಡು ಮಾಡಿದರು. ಡಾ. ಮುಖರ್ಜಿ ಕುಮಾರರಿಗೆ ಹಾಡಲೇಬಾರದೆಂದು ಅಪ್ಪಣೆ ಕೊಟ್ಟರು! ಒಂದು ವರ್ಷ ಹೀಗೆಯೇ ಕಳೆಯಿತು. ಕುಮಾರರಿಗೆ ಮಾತಾಡುವದಕ್ಕೂ ಆಗುತ್ತಿರಲಿಲ್ಲ. ಕಣ್ಣಾಮಾಮಾ ಕಣ್ಣಲ್ಲಿ ಎಣ್ಣೆ ಹಾಕಿ ಶುಶ್ರೂಷೆ ಮಾಡುತ್ತಿದ್ದರು. 1950 ರಲ್ಲಿ ವರಾಂಡಾದಲ್ಲಿ ಅಡ್ಡಾಡಲು ಅನುಮತಿ ಸಿಕ್ಕಿತು.

ಕುಮಾರರು ಈ ಎರಡು–ಮೂರು ವರ್ಷ ತಮ್ಮ ಅನಾರೋಗ್ಯದಲ್ಲಿದ್ದಾಗ ಹಿಂದಿ, ಬ್ರಜ್ ಭಾಷೆಗಳನ್ನು ಭಾನುಮತಿಯವರೊಂದಿಗೆ ಅಭ್ಯಸಿಸಿದರು. ಅವರ ವಿಚಾರಶಕ್ತಿ ಅದ್ಭುತವಾಗಿತ್ತು. ಮಲಗಿದ್ದಲ್ಲೇ ಮುಂಜಾನೆ ಹೊಲಕ್ಕೆ ಹೋಗುವ ಹೆಂಗಸರ ಹಾಡುಗಳನ್ನು ಕೇಳುತ್ತಿದ್ದರು. ಸುಗ್ಗಿಯ ಕಾಲಕ್ಕೆ, 'ಶಾಬೆ ಮಾಲವಾ' ಅಂದರೆ ರಾತ್ರಿ ಇಡೀ ಸಂಗೀತ ನೃತ್ಯಗಳ ಸಮಾರಾಧನೆಯ ರುಚಿಯನ್ನು ಮಲಗಿದ್ದಲ್ಲೇ ಸವಿಯುತ್ತಿದ್ದರು. ಹೀಗೆ ಪ್ರಾರಂಭವಾಯಿತು ಕುಮಾರ ಗಂಧರ್ವರ ಮಾಲವೀ ಗೀತೆಗಳ ಅಭ್ಯಾಸ, ಕವಿತೆಗಳ ರಚನೆ, ಮತ್ತು ಸಂಗೀತದ ಸಂಯೋಜನೆ. 'ಮಾಲವಾಕೆ ಲೋಕ ಗೀತ' ರೂಪುಗೊಳ್ಳುತ್ತಿತ್ತು. ಕನ್ನಡ ಎರಡನೆಯ ತರಗತಿ ಓದಿದ ಕುಮಾರ, ದೇವಧರರ ಹೆಂಡತಿಯಿಂದ ಅದಾಗಲೇ ಮರಾಠಿ, ಹಿಂದಿ ಭಾಷೆ ಕಲಿತುಕೊಂಡಿದ್ದರು. ಮಲಗಿದ್ದಲ್ಲಿಯೇ ಕಬೀರ, ತುಳಸಿದಾಸ, ಸಗುಣ, ನಿರ್ಗುಣ ಭಜನೆಗಳ ಆರಾಧನೆ ಅಂದರೆ ಸಮಗ್ರ ಓದುವಿಕೆ ಪ್ರಾರಂಭವಾಯಿತು.

ಅವರ ಅನಾರೋಗ್ಯದ ಹಣೆಬರಹ ಇಲ್ಲಿಯೇ ನಿಲ್ಲಲಿಲ್ಲ. ಮತ್ತೊಮ್ಮೆ ಮುಂಬಯಿಗೆ ಹೋಗಬೇಕಾಯಿತು. ದೊಡ್ಡ ಶಸ್ತ್ರಕ್ರಿಯೆಯಿಂದ ಪುಪ್ಪುಸದ ಒಂದು ಭಾಗವನ್ನೇ ಅತ್ಯಂತ ಸೂಕ್ಷ್ಮ ರೀತಿಯಲ್ಲಿ ಚಾಣಾಕ್ಷತೆಯಿಂದ ಕಿತ್ತು ಹಾಕಲಾಯಿತು. ಕಂಠಸಂಗೀತದಲ್ಲಿ ಶ್ವಾಸನಿರೋಧ ಮಾಡಿ ಸೂಕ್ಷ್ಮ ರೀತಿಯಲ್ಲಿ ಹಾಡುವಾಗ, ವಿಶೇಷವಾಗಿ ತಾನ್‌ಪಲಟೆಯಲ್ಲಿ, 'ದಮ್‌ಶಾಸ್'ದ ಮಹತ್ವ ಎಲ್ಲರಿಗೂ ಗೊತ್ತಿದೆ. ಮಲ್ಲಿಕಾರ್ಜುನ ಮನ್ಸೂರ, ಭೀಮಸೇನ ಜೋಶಿಯವರ, 'ದಮ್ ಶಾಸ್' ಎಂದರೆ, ಶ್ವಾಸವನ್ನು ಪುಪ್ಪುಸದಲ್ಲಿ ತುಂಬಿಕೊಂಡು ಸಾವಕಾಶವಾಗಿ ಇಲ್ಲವೇ ರಭಸದಿಂದ ಹಾಡುವಾಗ 40 ಸೆಕಂಡುಗಳ ತನಕ ಕೆಳಗಿನ ಸಪ್ತಕದಿಂದ ತಾರಸಪ್ತಕದ ತನಕ ಪಲಟೆ ತಾನ್ ಹೊಡೆಯುವ ಕ್ರಮವನ್ನು ಅವರ ಕಚೇರಿ ಕೇಳಿದ ರಸಿಕರೆಲ್ಲರೂ ಬಲ್ಲರು. ಇದೊಂದು ಹಾಡುಗಾರಿಕೆಗೆ ಅತ್ಯಂತ ಅವಶ್ಯವಾದ

ಘಟಕ. ಬಾಲ್ಯದಲ್ಲಿ, ಆಗ್ರಾ ಘರಾಣೆಯ ಫಯ್ಯಾಜ್ ಖಾನ್, ಕಿರಾನಾ ಘರಾಣಾದ ಅಬ್ದುಲ್ ಕರೀಂ ಖಾನ್ ಇವರೆಲ್ಲರ ನಕಲು ಮಾಡುವ ಕುಮಾರರಿಗೆ ಈ 'ದಮ್ ಶಾಸ್'ದ ಸಾಧ್ಯತೆಯನ್ನು ಅವರ ತಾರುಣ್ಯದಲ್ಲಿಯೇ ದೈವ ಹೀರಿಕೊಂಡಿತು.

ಕುಮಾರರ ಸ್ವಯಂಭೂ ಪ್ರತಿಭೆಯ ಆವಿಷ್ಕಾರ ಈ ನ್ಯೂನತೆಯಿಂದಲೇ ಉದ್ಭವಿಸಿತು. ಪರಂಪರೆಯಿಂದ ಮೂಲಭೂತ ತತ್ವಗಳಲ್ಲಿ, ಒಂದಾದ ಈ ಶ್ವಾಸಕ್ರಿಯೆಯ ರೀತಿಯನ್ನೇ ತನ್ನ ಈ 'ಏಕಲಂಗೀ' (ಒಂದು ಪುಪ್ಪುಸ) ಅವಸ್ಥೆಗೆ ಸರಿಯಾಗಿ ಅನ್ವಯಿಸುವಂತೆ ತಮ್ಮ ಹಾಡುಗಾರಿಕೆಯನ್ನು ಅಳವಡಿಸಿಕೊಂಡರು. ಕೇವಲ 10–15 ಸೆಕೆಂಡುಗಳ ಚಿಕ್ಕ ಚಿಕ್ಕ ತಾನ್ ಪ್ರಕಾರಗಳನ್ನು 'ಆ'ಕಾರದಲ್ಲಿ ಶ್ವಾಸ ಜೋರಾಗಿ ಹೊರಗೆ ಹೋಗುವುದಕ್ಕೆ ಸ್ವಲ್ಪ ತಡೆ ಹಾಕಿ. 'ಆ'ಕಾರದ ಬದಲಾಗಿ, 'ಏ' ಕಾರವನ್ನು , 'ಊ'ಕಾರವನ್ನು ಬಳಕೆಯಲ್ಲಿ ತಂದರು. ಹೀಗೆ ತಮ್ಮದೇ ವಿಶಿಷ್ಟ ಪ್ರಕಾರದ ಪರಂಪರೆಯನ್ನು ಪ್ರಾರಂಭ ಮಾಡಿದರು. ಓದುವದು, ಬರೆಯುವದು, ಚಿಂತನೆ ಮತ್ತು ಮನನದಲ್ಲಿ ಭಾನುಮತಿಯವರೂ ಬಿಡುವಿದ್ದಾಗ ಭಾಗವಹಿಸುತ್ತಿದ್ದರು. ಡಾಕ್ಟರರು ಹಾಡುವುದಕ್ಕೆ ಅನುಮತಿ ಕೊಡದಿದ್ದರೂ ಕ್ರಮೇಣ 1952ರ ನಂತರ ತಿರುಗಾಡಲು ಅಡ್ಡಾಡಲು ಅಡ್ಡಿ ತೆಗೆದುಹಾಕಿದ್ದರು. ಮೊದಲು ವರಾಂಡದಲ್ಲಿ ಕುಳಿತು ಹೊಲಕ್ಕೆ ಕೆಲಸಕ್ಕೆ ಹೊಗುತ್ತಿದ್ದ ಹೆಂಗಸರ ಹಾಡುಗಳನ್ನು ಆಲಿಸುತ್ತ, ಕ್ರಮೇಣ ಈ ಹಾಡುಗಳ ಜಾಡನ್ನು ಹುಡುಕಲು, ಹಿಂಬಾಲಿಸಲು ಅವರು ಪ್ರಾರಂಭಿಸಿದರು. ಭಾನುಮತಿ ತನ್ನ ಪೆನ್ನು ಮತ್ತು ನೋಟ್‌ಬುಕ್‌ದೊಂದಿಗೆ ಹಾಡಿನ ನೊಟೇಶನ್‌ಗಳನ್ನು ಬರೆದುಕೊಳ್ಳುತ್ತಾ ಮುಂದೆ ಸಾಗುತ್ತಿದ್ದರು, ಇದೇ ಮುಂದೆ 'ಮಾಲವಾಕೆ ಗೀತ' ಕ್ಕೆ ನಾಂದಿಯಾಯಿತು. ಕುಮಾರ ಗಂಧರ್ವರ ರಾಗದಾರೀ ಸಂಗಿತದ ವೈವಿಧ್ಯಪೂರ್ಣ ಕೃತಿಗಳಿಗೂ ಸ್ಫೂರ್ತಿ ದೊರಕಿತು. 'ಸಹೇಲಿ ತೋಡಿ' ಎಂಬ ರಾಗದ ಜನ್ಮ ಕಥೆ ಆರಂಭವಾದದ್ದು ಆಗಲೇ. ಪ್ರತಿಯೊಂದು ರಾಗದ ಚೌಕಟ್ಟಿನ ಸಂಪೂರ್ಣ ವಿಚಾರವನ್ನು ಆಳವಾಗಿ ಅಭ್ಯಸಿಸಿದರು. ತೀವ್ರ ಮಧ್ಯಮಗಳಲ್ಲಿದ್ದ ರಾಗಗಳೆಲ್ಲ ಸಂಜೆಗೆ ಹಾಡುವಂತಹವು ಅಥವಾ ಬಾರಿಸುವಂತಹವು. ಮಧ್ಯ ಮತ್ತು ಉತ್ತರ ರಾತ್ರಿಯಲ್ಲಿ ಹಾಡುವಂತಹ ಲಲಿತ ರಾಗಗಳಲ್ಲಿಯೂ ತೀವ್ರ ಮಧ್ಯಮ ಬಳಸುತ್ತಾರೆ. ಮುಂಜಾನೆ ಹಾಡುವ 'ರಾಮಕಲಿ'ಯಲ್ಲಿಯೂ ಈ ಸ್ವರ ಇಣುಕುತ್ತಿರುತ್ತದೆ. ಒಂದು ದಿನ ಯಾವಾಗಲೂ ಮುಂಜಾನೆ ಹಾಡುವ ತೋಡಿರಾಗ ಮಧ್ಯಾಹ್ನದ ನಾಲ್ಕು ಗಂಟೆಯ ಉಪರಾಂತ ಹಾಡಿ ಕುಮಾರರು ಒಂದು ವಿನೂತನ ಆವಿಷ್ಕಾರ ಮಾಡಿದರು. 'ತೀವ್ರ ಮಧ್ಯಮ' ತಂತಾನೇ ಕರೆಯದೇ ಒಳಗೆ ನುಗ್ಗುತ್ತಿದೆಯಲ್ಲ ಎಂದು ಈ ಸ್ವರವನ್ನೇ ಬದಿಯಲ್ಲಿಟ್ಟು ಶುದ್ಧ ಮಧ್ಯಮವನ್ನು ಕೂಡ ಸ್ಪರ್ಶ ಮಾಡದೇ, 'ಸಹೇಲಿ ತೋಡಿ' ರಾಗ ನಿರ್ಮಿಸಿದರು.

ಕುಮಾರ ಮತ್ತು ಭಾನು ಮಾಳವೀ ಗೀತೆಗಳನ್ನು ಒಟ್ಟು ಹಾಕಲು ಮುಂಜಾನೆ ಎದ್ದು ಹೋಗುತ್ತಿದ್ದರಲ್ಲವೇ? ಒಂದು ದಿನ ಕುಮಾರ ಎದ್ದರೂ ಭಾನು ಇನ್ನೂ ಮಲಗಿಯೇ ಇದ್ದರು. ಕುಮಾರ ಎಬ್ಬಿಸುವ ಪ್ರಯತ್ನದಲ್ಲಿದ್ದಾಗ, ಜಂಪರು ನಿದ್ದೆಯಲ್ಲಿದ್ದ ಭಾನುಮತಿ ಮಾಳವಿ ಭಾಷೆಯಲ್ಲಿಯೇ, 'ಕಾಹೇಕೋ ಜಗಾವಾದೇ' ಎಂದರು. ಸರೀ, ಸಹೇಲಿ ತೋಡಿಯ ಮುಖಡಾ ತಯಾರಾಯಿತು. ಇದರ ಪೂರ್ಣ ಬಂದಿಶ್ ಹೀಗಿದೆ.

"ಕಾಹೇರೆ ಜಗಾವಾಂ ದೇ ಸೋನೇ ದೆ, ಸೋನೆದೇರೆ
ಆಜ ಘರ ತೋರೆ ಕಲಪರ ಘರ ಉಡಿ ಜೈಂ ಹೈಂ ರೆ
ಬತೈ ಬತಾಯೇ ದೇ ಹೋರಿ ಮಾಕಾಹೆ
ಉಡಿ ಜೈಂ ಹೈಂ, ಕೈಸೆ ಸಮುಝಾವೂ , ಜೈಂ ಹೈಂ ರೆ, ಜೈಂ ಹೈಂ ರೆ"

ಕುಮಾರರು ತುಲಸಿದಾಸ, ಕಬೀರ, ನಾನಕ ಇವರ ಕೃತಿಗಳನ್ನು ಓದಿ, ಜ್ಞಾನೇಶ್ವರಿಯನ್ನು ಅರ್ಥಮಾಡಿಕೊಂಡು ಸಗುಣ, ನಿರ್ಗುಣ ಭಜನೆಗಳನ್ನು ಹಾಡಿ ರಸಿಕರಿಗೆ ಬೇಕಾದಂತೆ ಹೊಸ ಹೊಸ ನಿರ್ಮಿತಿಮಾಡಿ ಓರ್ವ ಸಂಗೀತಜ್ಞ ತನ್ನ ಆಯುಷ್ಯದ ಕಾರ್ಯಖಂಡದಲ್ಲಿ ಎಷ್ಟೆಲ್ಲ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು. ಧುನ್ ಉಗಮರಾಗಗಳ ನಿರ್ಮಿತಿ, ಇದು ಸಂಗೀತ ಕ್ಷೇತ್ರದಲ್ಲಿಯ ಕುಮಾರ ಗಂಧರ್ವರ ಒಂದು ಅಭೂತಪೂರ್ವ ಘಟನೆ ಎಂದೇ ಹೇಳಬೇಕು. ಇದರ ಪ್ರಾರಂಭ ಮಾಲವತಿ ರಾಗದಿಂದ ಆಯಿತು. 'ನಿಂದಿಯಾರಿ', 'ಸಾಂಜರಿ', 'ರಾಹಿ' ಹೀಗೆ ಅನೇಕ ರಾಗಗಳ ಉತ್ಪತ್ತಿ ಆಯಿತು. ಮಾಲವತಿ ರಾಗಕ್ಕೆ ಖಾಸ್ ಮಾಳವಾ ಪ್ರಾಂತದ ಮಣ್ಣಿನ ವಾಸನೆ ಇದೆ. ನಾನು 2–3 ವರ್ಷ ಆ ಪ್ರಾಂತದಲ್ಲಿ ಇದ್ದುದರಿಂದ ಈ ಮಣ್ಣಿನ ವಾಸನೆ ಚೆನ್ನಾಗಿ ಪರಿಚಯದ್ದು. ಹೀಗೆಯೇ ರೇವಾ ಅಂದರೆ (ರಾಯಪೂರ, ರೇವಾ, ಸತನಾ) ಮಧ್ಯಪ್ರದೇಶದ ಈಗಿನ ಛತ್ತೀಸಗಡ ವಿಭಾಗದಲ್ಲಿಯ ಎರಡು ಬಿಹಡ ಮತ್ತು ಬಿಚ್ಚಿಯಾ ನದಿಗಳ ಸಂಗಮ. ಕುಮಾರರು ಇವುಗಳ ದರ್ಶನ ಮಾಡಿ ದೇವಾಸಕ್ಕೆ ಬಂದ ನಂತರ, 'ಬಿಹಡ ಭೈರವ' ರಾಗದ ಪ್ರಕ್ರಿಯೆ ಪ್ರಾರಂಭವಾಯಿತು. ಬಿಹಡ ಇದರ ಅರ್ಥ ಬಿಕ್ಕಟ್ಟು, ಬಿಕ್ಕಟ್ಟಿನ ಭೈರವವೇ ಅದು! ***

'ಯೇ ಹೊರೇ ಶ್ಯಾಮ, ಭೂಲಗ್ಯೋ ಕಾಹೇ ಬ್ರಿಜಧಾಮ
ಯಾದ ಕರೆ ತೊರೆ, ಬಾಲ ಸಖಾರೆ
ತರಸ ದರಸ ಬಿನ, ಬಿಕಲ, ಭಯೇ ಸಬ ಬ್ರಿಜಧಾಮ.'

ಇದು 1954ರಲ್ಲಿ ರಚಿಸಿದ್ದು ಭಾನುಮತಿ ಮತ್ತು ಕಣ್ಣಾಮಾಮಾ ಇವರ ಶುಶ್ರೂಷೆಯಿಂದ ಕುಮಾರರು ಪುನರ್ಜನ್ಮ ಪಡೆದ ನಂತರದಲ್ಲಿ ಎಂದು ಜೊತೆಗಿದ್ದ ಬಾಲಸಖ ಪಂಢರಿಗೆ ಉದ್ದೇಶಿಸಿ ಹೇಳಿದ್ದು.

ಇದರ ಮೊದಲು ಮಾಲವತಿ ರಾಗದ ಬಗ್ಗೆ ಅಂದರೆ ಮೂಲ ಮಾಳವಾ ಮಣ್ಣಿನ ವಾಸನೆಯ ರಾಗದ ಬಗ್ಗೆ ಬರೆದಿದ್ದೆ. ಇದು ಕುಮಾರರ ಈಪಿ (Extended Play 45 rpm) ನಲ್ಲಿದೆ. ಮತ್ತೊಂದು ಬದಿಗೆ ಸೋಹನಿ ಭಟಿಯಾರ. ಈ ಮಾಲವತಿಯ ಗಮ್ಮತ್ತು ನೋಡಿ. ಒಬ್ಬ ಮಾಳವಾದಲ್ಲಿಯ ಒಕ್ಕಲಿಗ ಹೊಲಕ್ಕೆ ಹೋಗುವಾಗ ತವರೂರಿಗೆ ಹೋದ ಹೆಂಡತಿಯ ನೆನಪಾಗಿ ಅವನ ಮನಸ್ಸು ಚಂಚಲವಾಗುತ್ತದೆ. ಅವನು ಕಾಲಿದಾಸನಂತೆ ಮೋಡಗಳನ್ನು ಉದ್ದೇಶಿಸಿ, "ಬದರಾ (ಮೋಡವೇ) ನನ್ನ ಮಾವನ ಮನೆಗೆ ಹೋಗಿ, 'ಗಡಗಡಾಟ' ಮಾಡು, ನಿನ್ನ ಗರ್ಜನೆಗೆ ನನ್ನಾಕೆ (ಸಾವಳಿ) ಹೊರಬಂದ ಕೂಡಲೇ ಹೇಳು, ನನಗೆ ಹೊಲದಲ್ಲಿ ಮನಸ್ಸು ನಾಟುವುದಿಲ್ಲ". ಇದು ಠಾಯಿ ಅಂದರೆ ವಿಲಂಬಿತ ಲಯದಲ್ಲಿದ್ದು, ಇದರ ಜೋಡಿಗೆ ಮಧ್ಯಲಯದ ಬಂದಿಶ್ ಅತ್ಯಂತ ಕಾವ್ಯಮಯವಾಗಿದೆ.

'ಇಂದಿನ ಮಂಗಲ ದಿನದ ಸುದಿನ ವರ ಬಂದಾ ಆನಂದ ತಂದಾ
ವರನನ್ನು ನೋಡಲು ನನ್ನ ಸಖಿಗಳೆಲ್ಲ ಬಂದಾರ, ನಾ ಇಲ್ಲಿ ಹಾಡತಾ ಕೂತಿನಿ'

ಇದೊಂದು ಅಪ್ರತಿಮ ಕಾವ್ಯಮಯ ರಚನೆ. ಒಂದೇ ರಾಗದಲ್ಲಿ ವಿರಹ, ವ್ಯಥೆ ವಿಲಂಬಿತದಲ್ಲಿ; ಮತ್ತು ಆನಂದ ಮಧ್ಯಲಯದಲ್ಲಿ ಕೇಳಿದಾಗ ಮನಸ್ಸು ತೃಪ್ತವಾಗುತ್ತದೆ. ಇವುಗಳ ಎರಡು ರಚನೆಗಳನ್ನು ಓದುಗರಿಗೆ ಕೊಡುತ್ತಿದ್ದೇನೆ:

ಮಾಲವತಿ ಏಕತಾಲದ ಠಾಯಿ ಲಯದಲ್ಲಿ

'ಚಲಾ ರೆ, ಚಲಾ ಜಾರೆ ಬದರಾ ತೂ
ಜಾಯ ಸಸೂರಿಯಾ ಘರ, ಭಾಯ ಗರಜರಿ ಹ್ಯೋರೆ
ಗರಜ ಸುಣ್(ಸುನ್) ಆಂವ್ಹಾ
ಸಾಂವರಿಹೋ ಥನ್ ಮಾರೀ
ಕೀ ದೇ ಊಕೆ ಮನ್ ಮ್ಹಾರಾ. ಖೇತಾ ಪೆ (ಹೊಲದಲ್ಲಿ)
ನೀ ಲಾಗ್ಯೋ ರೆ'

ಮಧ್ಯಲಯ ತ್ರಿತಾಲ

'ಮಂಗಲ ದಿನ್ ಆಜ್, ಬನಾಘರ್ ಆಯೋ, ಆನಂದ್ ಮನ್
ಭರಾಯ ಬಾವರೀ ಭರಿ ಮೈ ತೋ
ಬನರಾ ಮುಖ್ ದೇಖಿನ ಸಹೇಲ್ಯಾ ಮಿಲ ಆಯೋ ಗಾವನ ಲಗೀ ಗೀತ
ಬಾವರೀ ಭಯಿ ಮೈತೊ ಮಂಗಲ್ ದಿನ್ ಆಜ'

ಕುಮಾರರ ರಚನೆಗಳನ್ನು ಮೂರು ವಿಭಾಗದಲ್ಲಿ ವಿಂಗಡಿಸಲಾಗಿದೆ. ಹಳೆಯ ರಾಗಗಳು ಮತ್ತು ಹೊಸ ಸಂಯೋಜನೆ, ಹೊಸ ರಾಗಗಳು ಮತ್ತು ಹೊಸ ಸಂಯೋಜನೆ (ಲಗನ ಗಾಂಧಾರ), ಹೊಸ ರಾಗಗಳ ಮಿಶ್ರಣ ಮತ್ತು ಹೊಸ ಸಂಯೋಜನೆ.

ಕುಮಾರರು ದೇವಧರ ಬಳಿ ಕಲಿಯುತ್ತಿದ್ದಾಗ ಅವರ ಜೊತೆಗೆ ಭಾನುಮತಿ ಮತ್ತು ಇನ್ನೊಬ್ಬ ಹುಡುಗಿ ವಸುಂಧರಾ ಶ್ರೀಖಂಡೆ ಕೂಡ ಇದ್ದರು. ಇವಳು ಕೂಡ ಅತ್ಯಂತ ಪರಿಶ್ರಮ ಮಾಡುತ್ತಿದ್ದ ಗಾಯಕಿಯಾಗಿದ್ದರು. ಭಾನುಮತಿಯಷ್ಟು ಸ್ವೂರದ್ರೂಪಿ ಅಲ್ಲದಿದ್ದರೂ ಕುಮಾರರ ಮೇಲೆ ಮನಸ್ಸಿಟ್ಟ ತರುಣಿ. 1961ರಲ್ಲಿ ಮುಕುಲನ ಜನ್ಮದ ನಂತರ 5 ವರ್ಷದ ಮೇಲೆ ಮತ್ತೊಮ್ಮೆ ಭಾನುಮತಿ ಗರ್ಭಿಣಿಯಾಗಿ, 'ಯಶೋವರ್ಧನ'ನಿಗೆ ಜನ್ಮವಿತ್ತು ಪರಲೋಕವಾಸಿಯಾದರು. ಇದರ ಮುನ್ಸೂಚನೆಯೋ ಎಂಬಂತೆ ವಸುಂಧರೆಯನ್ನು ಕರೆತರಿಸಿ ಅವರ ಕೈಯಲ್ಲಿ ಕುಮಾರರ ಕೈಯನ್ನು ಇಟ್ಟು, 'ನನ್ನ ನಂತರ ಮುಕುಲ, ಯಶೋವರ್ಧನ ಮತ್ತು ಕುಮಾರರನ್ನು ಸಂಭಾಳಿಸುವದು ನೀನೇ' ಎಂದು ಕೊನೆಯ ಉಸಿರು ಎಳೆದರು. ಇಲ್ಲಿಯೇ ಕುಮಾರ ಹೊಸದಾಗಿ ಕಟ್ಟಿಸಿದ 'ಭಾನುಕುಲ'ದಲ್ಲಿ ಅವರ ಆಯುಷ್ಯದ ಭಾನುಪರ್ವ ಕೊನೆಗೊಂಡಿತು. ಎಂಟು ತಿಂಗಳ ನಂತರ ವಸುಂಧರಾ ಶ್ರೀಖಂಡೆ ವಸುಂಧರಾ ಕೋಮಕಾಳಿ ಆದರು. ಮುಕುಲ ಶಿವಪುತ್ರನ ಮಲತಾಯಿಯಾದರು. ಕಲಾಪಿನಿಗೆ

ಜನ್ಮವಿತ್ತರು. ಮುಂದೆ ಕುಮಾರರಿಗೆ ಸಹಗಾಯನದಲ್ಲಿ ಉತ್ತಮ ಸಹಕಾರ ನೀಡಿದರು. 1992 ಜನವರಿ 12ರತನಕ ಕುಮಾರರ ಸಂಗೀತ-ಸಂಸಾರ ಅವ್ಯಾಹತವಾಗಿ ನಡೆಯಿತು.

ಕುಮಾರರ ನಿಧನದ ಎರಡು ವರ್ಷಗಳ ನಂತರ ನಮ್ಮ ಕರೆಗೆ ಓಗೊಟ್ಟು ವಸುಂಧರಾ ಕೋಮಕಾಳಿ ಕರ್ನಾಟಕ ಸಂಘದಲ್ಲಿ, 'ಮಾಲವಾಕೆ ಲೋಕ್ ಗೀತ್' 1994ರಲ್ಲಿ ಮತ್ತು ಕುಮಾರರದೇ, 'ಗೀತಾವರ್ಷಾ'ಗಳನ್ನು 1996ರಲ್ಲಿ ಪ್ರಸ್ತುತಪಡಿಸಿದರು. ಇವರ ಹೊರತಾಗಿ ಕರ್ನಾಟಕ ಸಂಘದ, 'ಕಲಾಭಾರತಿ'ಯಲ್ಲಿ ಅವರ ಮಗಳು ಕಲಾಪಿನಿಯ ಕಚೇರಿಯನ್ನು ಎರಡು ಸಲ, ಮೊಮ್ಮಗ ಅಂದರೆ ಮುಕುಲ ಶಿವಪುತ್ರನ ಮಗ ಭುವನ್ ಕೋಮಕಾಳಿಯ ಕಚೇರಿಯನ್ನು ಒಮ್ಮೆ 2007ರಲ್ಲಿ ಏರ್ಪಡಿಸಲಾಗಿತ್ತು.

ಕುಮಾರ ಗಂಧರ್ವರಿಗೆ ಎಲ್ಲ ಸ್ವರಗಳ ಮೇಲೆ ಪ್ರೀತಿ ಇದ್ದರೂ ಅತ್ಯಂತ ವಿಶ್ವಾಸದ ಸ್ವರವೆಂದರೆ, ಗಾಂಧಾರ. ತಾನಪೂರಾ ಶ್ರುತಿಗೊಳಿಸುವಾಗ ಷಡ್ಜ ಪಂಚಮ ಸ್ವರಗಳನ್ನು ನುಡಿಸುವಾಗ ಗಾಂಧಾರದ ಕಂಪನ ಹುಟ್ಟುತ್ತದೆ. ಇದಕ್ಕೆ ಸ್ವಯಂಭೂ ಎಂದು ಕರೆಯುವ ವಾಡಿಕೆ. ಈ ಗಾಂಧಾರ ಸ್ವರದ ಮೋಹಿನಿಯಿಂದ ಸ್ಫೂರ್ತಿ ಪಡೆದು ಕುಮಾರರು ಇನ್ನೊಂದು ಧುನ್ ಉಗಮ ರಾಗವನ್ನು ನಿರ್ಮಿಸಿದರು. ಇದರ ಹೆಸರು 'ಲಗನ ಗಾಂಧಾರ' ಎಂದು ಇಟ್ಟರು. ಇದರಲ್ಲಿ ಎರಡು ಕೋಮಲ ಮತ್ತು ಶುದ್ಧ ಗಾಂಧಾರ ಒಂದರ ನಂತರ ಮತ್ತೊಂದು ಹಚ್ಚಬಹುದು. ಈ ರಾಗದಲ್ಲಿ ಮಧ್ಯಮ ಸ್ವರ ವರ್ಜಿತ. ಈ ಕವಿತೆಯ ಕೊನೆಯ ಸಾಲು 'ಯಾದ್ ಜಬ್ ಜಬ್ ಉಠತ ಮನಮೆಂ' ಎಂದಿದೆ. ನಮಗೂ 'ಯಾದ್ ಜಬ್ ಜಬ್ ಉಠತ' (ನಮಗೂ ನೆನಪಾದಾಗಲೆಲ್ಲ) ನಾವೂ ಲೇಖನಿಯನ್ನೆತ್ತಿ ಕುಮಾರರ ಮೇಲೆ ಬರೆಯಲು ಮುಕ್ತರು!

*   ಈ ಲೇಖನ ಬರೆದು ಪ್ರಕಟಿಸಿದ್ದುದು ಮಾರ್ಚ 2009 'ಸ್ನೇಹ ಸಂಬಂಧದಲ್ಲಿ.

** ಸಿ.ಪಿ ರೇಳೆ ಅವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕಾರರು. ಕುಮಾರರ ಮೇಲೆ ಮರಾಠಿಯಲ್ಲಿ 'ಕುಮಾರ ಮಾಝಾ ಸಖಾ' ಬರೆದವರು.

*** ಸಮಕಾಲೀನರಾದ ಭೀಮಸೇನ ಜೋಶಿಯವರು ಕುಮಾರರ ಬಗ್ಗೆ ಅವರಿಗಿದ್ದ ಕೆಲ ಅಭಿಪ್ರಾಯಗಳನ್ನು ವಸಂತ ಪೋತದಾರರ ಪುಸ್ತಕದಿಂದ ಆಯ್ದು ಈ ಕೆಳಗೆ ಕೊಡಲಾಗಿದೆ. "ರೋಗಕ್ಕೆ ತುತ್ತಾಗುವ ಮೊದಲಿನ ಮತ್ತು ನಂತರದ ಆತನ ಹಾಡುಗಾರಿಕೆಗಳಲ್ಲಿ ತುಂಬಾ ವ್ಯತ್ಯಾಸವಿತ್ತು. ಮೊದಲು ವಿಲಂಬಿತಕ್ಕೆ ಪ್ರಾಧಾನ್ಯ ಕೊಡುತ್ತಿದ್ದ. ನಂತರದ ಹಾಡುಗಾರಿಕೆ ಮಧ್ಯಲಯದಲ್ಲಿ ಮಾಡಿ ರಾಗದ ಅವಧಿಯನ್ನು ಕಡಿಮೆಮಾಡಿ ಚಿಕ್ಕದಾಗಿ ಚೊಕ್ಕದಾಗಿ ಮಾಡಿದ. ಸಂಗೀತದಲ್ಲಿಯ ಒಬ್ಬ ಕ್ರಾಂತಿಕಾರಿ ಅವನು. ಚಿಕಿತ್ಸಕ ಬುದ್ಧಿಯನ್ನು ಹೊಂದಿದ್ದವ. ಹೀಗಾಗಿ ಹೊಸಹೊಸ ರಾಗಗಳ ಅನ್ವೇಷಣೆ ನಡೆಸಿದ. ಸಂಕರಾ ಗೌಡ, ಮಲ್ಹಾರದಂತಹ ಪುರಾತನ ರಾಗಗಳನ್ನು ಪ್ರಚಲಿತಪಡಿಸಿದ, ಹೊಸ ಕೃತಿಗಳ ಮೂಲಕ ಹೊಸಹೊಸ ಪ್ರಯೋಗ ನಡೆಸಿದ. ಉತ್ತಮ ಕೆಲಸ ಮಾಡಿದ್ದೆಂದರೆ ಖ್ಯಾಲ್ ಸಂಗೀತದಲ್ಲಿ ಭಜನೆಗಳನ್ನು ಬೆರಸಲಿಲ್ಲ. ಭಜನೆಗಳನ್ನು ಕ್ರಮಬದ್ಧವಾಗಿ ಹಾಡಿ ಪ್ರಸ್ತಾಪಿಸಿದ. ಹೊಸ ರಾಗಗಳ ಉತ್ಪತ್ತಿ ಮಾಡಿದರೂ ಆತ ಎಲ್ಲ ಮೆಹಫಿಲ್‌ನ ಶುರುವಾತುಗಳನ್ನು ಭೂಪ್, ಕೇದಾರ್, ಹಮೀರ್ ಮೊದಲಾದ ಸಿದ್ಧರಾಗಗಳಿಂದಲೇ ಮಾಡುತ್ತಿದ್ದ.

"   ಕುಮಾರನ ಗಾಯನ ನಿಶ್ಚಿತವಾಗಿ ನಮ್ಮೆಲ್ಲರ ಗಾಯನಕ್ಕಿಂತ ಭಿನ್ನವಾಗಿತ್ತು. ಅವನು ಒಂದೇ ಪರಂಪರೆ ಅನುಸರಿಸಲಿಲ್ಲ. ಆದರೆ ಒಂದು ಮಾತು, ಆತನ ಘರಾಣೆಯ ಮುದ್ರೆ ಅವನ ಜೋಡಿಯ ಕಲಾವಿದರಿಗಷ್ಟೇ ಅರ್ಥವಾಗುತ್ತಿತ್ತು. ಅನೇಕ ಗುರುಗಳಿಂದ ಕಲಿತು, ತನ್ನಷ್ಟಕ್ಕೆ ತಾನೇ ಪರಿಶ್ರಮಿಸಿ ಸಂಗೀತಕ್ಕೇ ಒಂದು ಹೊಸ ಆಯಾಮವನ್ನು ಸೃಷ್ಟಿಸಿದ. ಇದೆಲ್ಲವನ್ನೂ ಸಂಗೀತದ ವ್ಯಾಕರಣದ ಚೌಕಟ್ಟಿನಲ್ಲಿಯೇ ಮಾಡಿದ. ಅವನ ಶಿಷ್ಯರೆಲ್ಲ ನಕಲು ಮಾಡದೇ ಆತನ ಗಾಯಕಿಯ ಅಭ್ಯಾಸ ಮಾಡಿ ತಮ್ಮದೇ ಆದ ಶೈಲಿಯಲ್ಲಿ ಹಾಡಿದರೆ ಅವನ ಪರಂಪರೆ ಮುಂದೆ ನಡೆಯುವದು ಸಾಧ್ಯ. ಸಂಗೀತವನ್ನು ಆತ ಒಂದು ಮಿಷನ್ ಎಂದು ತಿಳಿದುಕೊಂಡಿದ್ದ. ಅದು ಸಂಗೀತದಲ್ಲಿಯ ಹಳೆಯ ಕೊಳಚೆ ತೊಳೆದು ನಿರ್ಮಲ ಮಾಡುವ ಮಿಷನ್. ಸಂಗೀತದಲ್ಲಿ ಒಂದು ಕ್ರಾಂತಿ ಮಾಡಿ ಶಾಸ್ತ್ರೀಯವಾದದ್ದನ್ನೆಲ್ಲ ಹೊರತಂದ. ರಾಗಗಳ ಚೌಕಟ್ಟು ಮಾಡಿದ. ಲೋಕರಂಜನೆಯಲ್ಲಿ ಎಲ್ಲವೂ ಕ್ಷಮ್ಯವೆಂದು ಶಾಸ್ತ್ರವೇ ಹೇಳಿದಾಗ, ಕುಮಾರ ಮಾಡಿದ್ದು ಅಶಾಸ್ತ್ರೀಯವೆಂದು ಯಾರು ನಂಬಿಯಾರು?"

"   ಗಾಯಕ ಸಾಹಿತ್ಯದೆಡೆ ಹೆಜ್ಜೆ ಇಟ್ಟಾಗ ನಾವು ಅವರನ್ನು, 'ನಾಯಕ'ನೆಂದು ಸಂಬೋಧಿಸುತ್ತೇವೆ. ಕುಮಾರ ಗಂಧರ್ವ ಗಾಯಕನಷ್ಟೆ ಅಲ್ಲ, 'ನಾಯಕ'ನೂ ಆಗಿದ್ದ."

ಇದು ಕರ್ನಾಟಕದ ಒಬ್ಬ ಶ್ರೇಷ್ಠ ಕಲಾವಿದನು (ಭೀಮಸೇನ ಜೋಶಿ) ಇನ್ನೊಬ್ಬ ಅಪರೂಪದ ಕಲಾವಿದನಿಗೆ (ಕುಮಾರ ಗಂಧರ್ವ) ಇತ್ತ ಅಪೂರ್ವ ಶ್ರದ್ಧಾಂಜಲಿ, ಅದೂ ಮರಾಠಿಯಲ್ಲಿ!

*****

7.14

ಶೋಭಾಗುರ್ಟು ಊರ್ಫ ಭಾನುಮತಿ ಶಿರೋಡ್ಕರ್ (1925–2004)

ಸಾಧಾರಣ 1999–2000 ಇಸವಿಯ ಮಾತು. ಸ್ಟೇಟ್ ಬ್ಯಾಂಕ್‌ನಲ್ಲಿ ಕೆಲಸಕ್ಕಿದ್ದ ಎಸ್.ಜಿ. ದೇಶಪಾಂಡೆ ಎಂಬವರ ಪರಿಚಯ ಮುಂಬೈ ಕರ್ನಾಟಕ ಸಂಘದ ಕಲಾಭಾರತಿ ಪ್ರಾರಂಭವಾದಾಗಿನಿಂದಲೇ ಇತ್ತು. ಅವರ ತಮ್ಮ ಶ್ರೀಕಾಂತ ಉದಯೋನ್ಮುಖ ಗಾಯಕ, ಅಕಸ್ಮಾತ್ ಕಾರ್ ಆಕ್ಸಿಡೆಂಟಿನಲ್ಲಿ ತೀರಿಕೊಂಡ ನಂತರ ಪ್ರತಿವರ್ಷ ಅವರ ಹೆಸರಿನಲ್ಲಿ 2008ರ ತನಕ ದೇಶಪಾಂಡೆ ಒಳ್ಳೆಯ ಕಲಾವಿದನನ್ನು ಕರೆಸಿ ಕಲಾಭಾರತಿಯಲ್ಲಿ ವರ್ಷಕ್ಕೊಮ್ಮೆ ಹಾಡಿಸುತ್ತಿದ್ದರು. ವೀಣಾ ಸಹಸ್ರಬುದ್ಧೆ, ಉಲ್ಲಾಸ್ ಕಶಾಳಕರ್, ಎಲ್.ಕೆ. ಪಂಡಿತ್, ವೆಂಕಟೇಶ ಕುಮಾರ್ –ಇವು ಕೆಲವು ಹೆಸರುಗಳು. ಸಾಧಾರಣ 20–25 ಸಾವಿರ ರೂ.ಗಳನ್ನು ಪ್ರತಿ ವರ್ಷ ಈ ಕಾರ್ಯಕ್ರಮಕ್ಕೆ ಮುಡುಪಾಗಿ ಇಡುತ್ತಿದ್ದರು. ಹೆಸರಾಂತ ಕಲಾವಿದರನ್ನು ಕರೆಸಿ ಹಾಡಿಸುವುದಕ್ಕೆ ಇದು ಕಡಿಮೆಯೇ.

1999ರಲ್ಲಿ, ದೇಶಪಾಂಡೆ ಫೋನಿಸಿದರು. 'ಬುರ್ಡೆಯವರೆ, ವಿರಾರಕ್ಕೆ ಬರ್ತೀರಾ? ನನಗೊಂದು ಊಟದ ಡಬ್ಬಾ ವ್ಯವಸ್ಥೆ ಮಾಡುವದಿದೆ. ನಿಮಗೆ ವೇಳೆ ಇದ್ದರೆ ಹೋಗಿ ಬರುವ. ನಿಮಗೊಬ್ಬರನ್ನು ಪರಿಚಯ ಮಾಡಿಕೊಡುತ್ತೇನೆ". ಆ ವ್ಯಕ್ತಿಯ ಹೆಸರು ಹೇಳದೇ ನನ್ನನ್ನು ವಿರಾರಕ್ಕೆ ಕರೆದುಕೊಂಡು ಹೋದರು.

ವಿರಾರ (ಪೂ) ಜೀವದಾನಿ ಹತ್ತಿರ ಒಂದು ಚಾಳ ಇದೆ. ಭೈರೀ ಚಾಳ. ಒಂದು ರೂಮು, ಅಡಿಗೆಮನೆ, ಸಣ್ಣ ವೆರಾಂಡಾ. ಸಾಧಾರಣ 85 ವರ್ಷದ ಲಕ್ಷಣವಂತೆ ಹೆಂಗಸು. ಆರಾಮ ಖುರ್ಚಿಯಲ್ಲಿ ಕುಳಿತದ್ದು ಕಾಣಿಸಿತು. ದೇಶಪಾಂಡೆ ಮತ್ತು ನನ್ನನ್ನು ನೋಡಿ ಕೊಂಕಣಿಯಲ್ಲಿ 'ಪುತಾ (ಮಗಳೇ) ಕೋಣ ಆಯ್ಲಾ ಪಳೇ' ಎಂದಳು ಆ ವ್ಯಕ್ತಿ. ಒಳಗಿನಿಂದ ಮಧ್ಯವಯಸ್ಸಿನ ಕೆದರಿದ ಕೂದಲಿನ ಹೆಂಗಸು ಹೊರಗೆ ಬಂದಳು. ದೇಶಪಾಂಡೆ ಖುರ್ಚಿಯಲ್ಲಿ ಕುಳಿತವಳಿಗೆ ಆದರಪೂರ್ವಕ ನಮಸ್ಕಾರ ಮಾಡಿ ನನ್ನ ಪರಿಚಯವನ್ನು ಮರಾಠಿಯಲ್ಲಿ ಮಾಡಿಕೊಟ್ಟರು. ಅವರೇ ಮೇನಕಾ ಶಿರೋಡ್ಕರ, ಶೋಭಾ ಗುರ್ಟು ಅವರ ತಾಯಿ. ಒಂದಾನೊಂದು ಕಾಲದಲ್ಲಿ ಕಥಕ ನೃತ್ಯ–ಸಂಗೀತ ಪ್ರವೀಣೆ. 30–40ರ ಮುಂಬಯಿಯ ಮುಜರಾ ವ್ಯವಸಾಯದಲ್ಲಿದ್ದ ಅಗ್ರಗಣ್ಯ ಮಹಿಳೆ. 'ಪೃಥ್ವಿವಲ್ಲಭ', ಇತ್ಯಾದಿ ಅನೇಕ ಸೊಹರಾಬ ಮೋದಿ ಚಲನಚಿತ್ರಗಳಲ್ಲಿ

ನೃತ್ಯ ಮಾಡಿದ, ಹಾಡು ಹೇಳಿದ ನಟಿ. ಇಂದಿನ ಜನತೆ ಮರೆತ ಮಹಾಗಾಯಕಿ. ಈಗ ದೇಶಪಾಂಡೆ ಅಂಥವರ ಹಾದಿ ನೋಡುತ್ತಾ ಮುಂದಿನ ದಿನಗಳ ಚಿಂತೆಯನ್ನು ಹೊತ್ತ ಮುದುಕಿ. ಅದೇ ತಿಂಗಳು, ದೇಶಪಾಂಡೆಯವರ ಪರಿಚಯದ, ಖ್ಯಾತ ಮರಾಠಿ ಪತ್ರಿಕೆ ಲೋಕಸತ್ತಾದ ಸಂಪಾದಕರಾದ ಮಾಧವ ಗಡಕರಿಯವರ ಒಂದೆರಡು ಲೇಖನಗಳಿಂದ ಪ್ರಭಾವಿತರಾದ ಆಗಿನ ಗೋವಾ ಮುಖ್ಯಮಂತ್ರಿ ರಾಣೆಯವರು ಈ 'ಗೋವಾದ ಮಣ್ಣಿನ ಮಗಳನ್ನು' ಅತ್ಯಂತ ಆದರದಿಂದ ಕರೆಸಿ ಪಣಜಿಯಲ್ಲಿ ಮೇನಕಾಬಾಯಿಯವರಿಗೆ ವಾಸದ ವ್ಯವಸ್ಥೆಯನ್ನು ಮಾಡಿಕೊಡಿಸಿದ್ದೂ, ಕೊನೆಗೆ ಅಲ್ಲಿಯೇ ಮೇನಕಾ ಅಸು ನೀಗಿದ್ದು , ಒಂದು ವರ್ಷದಲ್ಲಿಯೇ ನಡೆದ ಘಟನೆಗಳು. ಅಂದಿನ 'ಬಿಸಿಬಿಸಿ' ಸುದ್ದಿಯಾಗಿದ್ದವು.

ಭಾನುಮತಿ ಶಿರೋಡ್ಕರ್ ಊರ್ಫ ಶೋಭಾ ಗುರ್ಟು ಮೇನಕಾಬಾಯಿಯವರ ಮಗಳು. ಇವರು ಕಾಶ್ಮೀರೀ ಸಾರಸ್ವತ ಪಂಡಿತರಾಗಿದ್ದ ನಾರಾಯಣನಾಥ ಗುರ್ಟು ಅವರ ಸೊಸೆ, ಆದದ್ದು ಕೂಡ ಆಗಿನ ಕಾಲದ (1942) ಮತ್ತೊಂದು 'ಬಿಸಿಬಿಸಿ' ಸುದ್ದಿಯಾಗಿತ್ತು.

ನಾರಾಣನಾಥ ಗುರ್ಟು ಬ್ರಿಟಿಶರ ಕಾಲದಲ್ಲಿಯೇ ಪೊಲಿಸ್ ಐಜಿಪಿ ಆಗಿದ್ದವರು. ಹುಬ್ಬಳ್ಳಿ-ಧಾರವಾಡ, ಬೆಳಗಾವಿಯಲ್ಲಿಯೇ ಪೊಲಿಸು ಸುಪರಿಂಟೆಂಡೆಂಟ್ ಆದವರು, ಬೆಳಗಾವಿಯಲ್ಲಿಯೇ ದೊಡ್ಡ ಮನೆ ಕಟ್ಟಿಸಿ ವಿಶ್ರಾಂತರಾಗಿದ್ದರು. ಸಂಗೀತದಲ್ಲಿ ರುಚಿ ಇಟ್ಟುಕೊಂಡವರು. ಸಿತಾರ್ ವಾದನದಲ್ಲಿ ಸಾಕಷ್ಟು ಪ್ರಾವೀಣ್ಯ ಕೂಡ ಗಳಿಸಿದ್ದರು. ಗೋವಾ, ಪೋರ್ಚುಗೀಸರ ಆಡಳಿತದಲ್ಲಿದ್ದರೂ, ಬೆಳಗಾವಿ ಎರಡೇ ತಾಸಿನ ಮಾರ್ಗವಿದ್ದ ಕಾರಣ, ಜನಸಾಮಾನ್ಯರ ಕೊಡುಕೊಳ್ಳುವಿಕೆ ಸತತವಾಗಿ ನಡೆದೇ ಇತ್ತು. ಮೇನಕಾ ಶಿರೋಡ್ಕರ ಕೂಡ ಮೊದಲು ಬೆಳಗಾವಿಯಲ್ಲಿದ್ದು, ಬಳಿಕ ಮುಂಬಯಿ ನಾನಾ ಚೌಕದಲ್ಲಿ ಈಶ್ವರದಾಸ ಮ್ಯಾನ್ಷನ್‌ದಲ್ಲಿ ಬಿಡಾರ ಹೂಡಿದವರು. ಮೇನಕಾಬಾಯಿಯ ಮಗಳು ಭಾನುಮತಿಯನ್ನು, ನಾರಾಯಣ ಗುರ್ಟು ಅವರು, ತಮ್ಮ ಮಗ ವಿಶ್ವನಾಥ ಗುರ್ಟು ಜೊತೆ ವಿವಾಹ ಮಾಡಿಸಿದರು. ಮದುವೆ ಮೊದಲೇ ಭಾನುಮತಿಗೆ ಒಳ್ಳೆಯ ಕಂಠಸಂಗೀತದ ಶಿಕ್ಷಣ, ಸ್ವತಃ ನೃತ್ಯ ಕಲಿಸಿ ಪರಿಪೂರ್ಣ ಕಲಾವಿದೆಯನ್ನಾಗಿ ಮಾಡಿಸಿದ್ದಳು ಮೇನಕಾ. ತಾಯಿ, ಮಗಳು, ಇಬ್ಬರೂ ಜಯಪುರ್-ಅತ್ರೋಳಿ ಪರಂಪರೆಯ ಅಧ್ವರ್ಯು ಅಲ್ಲಾದಿಯಾ ಖಾನ ಸಾಹೇಬರ ಮಗ ಭುರ್ಜಿಖಾನರ (ನಮ್ಮ ಪಂ. ಮಲ್ಲಿಕಾರ್ಜುನ ಮನ್ಸೂರರ ಗುರು) ಶಿಷ್ಯತ್ವವನ್ನು ಪಡೆದು ಬೆಳಗಾವಿಯಿಂದ ಕೊಲ್ಹಾಪುರಕ್ಕೆ ಸಂಗೀತ ಕಲಿಯಲು ಹೋಗುತ್ತಿದ್ದರು. ಮುಂಬಯಿಗೆ ಸ್ಥಳಾಂತರವಾದರೂ ಈ ಶಿಕ್ಷಣ ನಡೆದೇ ಇತ್ತು. ಮದುವೆಯಾದ ಮೇಲೆ ಭಾನುಮತಿ ಶೋಭಾಗುರ್ಟು ಆದಳು. ಅವಳ ನೃತ್ಯ ಶಿಕ್ಷಣ ಬೆಳಗಾವಿಯಲ್ಲಿಯೇ ನಿಂತುಬಿಟ್ಟಿತ್ತು.

ವಾಜಿದ ಅಲಿ ಬಗ್ಗೆ ಈ ಮೊದಲೇ ನೀವು ಓದಿದ್ದೀರಾ. ಅವನ ಮರಾಠೀ ಪ್ರತಿಕೃತಿ ಅಂದರೆ 2ನೇ ಬಾಜಿರಾವ್ ಪೇಶವೆ. 19ನೇ ಶತಮಾನದ ಪೂರ್ವಾರ್ಧದಲ್ಲಿ ಈತ ತನ್ನ ತಂದೆ ರಘುನಾಥ್ ಅಥವಾ ರಾಘೋದಾದಾನ ರಸಿಕ ಪ್ರವೃತ್ತಿಯನ್ನು ಸಾಕಷ್ಟು ಪ್ರಮಾಣದಲ್ಲಿ ಆನುವಂಶಿಕತೆಯಿಂದ ಪಡೆದಿದ್ದರಿಂದ 'ಲಾವಣಿ ಬೈಠಕೀಚಿ',

'ತಮಾಷಾ' ಇವುಗಳ ಪುರಸ್ಕೃತನಾಗಿದ್ದ. ಉತ್ತರ ಹಿಂದುಸ್ಥಾನದ ಠುಮರಿ, ಟಪ್ಪಾ ಮರಾಠಿಯಲ್ಲಿಯ ಲಾವಣಿಗಳಲ್ಲಿ, ರಂಗಗೀತೆ ಗಳಲ್ಲಿಯೂ ತಂತಾನೆ ರೀತಿಯಲ್ಲಿ ಹಾಸುಹೊಕ್ಕಿದ್ದುದನ್ನು ನಾವು ಕಾಣುತ್ತೇವೆ. ಆದರೆ, ಠುಮರಿ, ಚೈತಿ, ದಾದರಾದ ವಿವಿಧ ಪ್ರಕಾರಗಳು, ಝೂಲಾ, ಸಾವನ್ ಈ ಎಲ್ಲ ಪ್ರಕಾರಗಳನ್ನು 20ನೇ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಪ್ರಸಿದ್ಧಿಗೆ ತಂದವರಲ್ಲಿ ಸುಂದ್ರಾಬಾಯಿ ಜಾಧವ, ನಂತರ ಶೋಭಾ ಗುರ್ಟು ಅಗ್ರಗಣ್ಯರು. ಅತ್ಯಂತ ವಿಚಾರಪೂರ್ವಕವಾಗಿ ಹಿಂದುಸ್ತಾನಿ ಸಂಗೀತ ಪದ್ಧತಿಯಲ್ಲಿಯ 'ಆಶ್ರಯ' ಅಂದರೆ ಮುಖ್ಯ ರಾಗಗಳ ಜೊತೆಗೆ ಅತ್ಯಂತ ಚಾಣಾಕ್ಷ ರೀತಿಯಲ್ಲಿ ಮಿಶ್ರಣ ಮಾಡಿ ರಂಜಿಸುವ ಕಲೆಯನ್ನು ಇವರು ಪೂರ್ಣತಃ ಹೊಂದಿದ್ದರು. ಮತ್ತೊಂದು ವಿಷಯ, ಮಹಾರಾಷ್ಟ್ರ-ಕರ್ನಾಟಕದಲ್ಲಿ ಸಂಗೀತ ರಸಿಕರ ಮೇಲೆ ಕಿರಾನಾ ಪರಂಪರೆಯ ತುಂಬಾ ಪ್ರಭಾವ ಇತ್ತು. ಶೋಭಾ, ಅಲ್ಲಾದಿಯಾ ಪರಂಪರೆಯಲ್ಲಿ ಪಳಗಿದವರಾಗಿ ಅದೇ ಜೈಪುರ್-ಅತ್ರೋಲಿ ಪರಂಪರೆಯ ಖಯಾಲ್ ಹಾಡುಗಾರಿಕೆಯನ್ನು ತಮ್ಮ ಠುಮರಿ ಪ್ರಕಾರದಲ್ಲಿ ಅಳವಡಿಸಿಕೊಂಡು ತಮ್ಮ ಕಚೇರಿಗಳಲ್ಲಿ ಪ್ರಸ್ತುತಿಸುತ್ತಿದ್ದುದನ್ನು ಗಮನಿಸಬೇಕು. ಹೀರಾಬಾಯಿ, ಮಾಣಿಕವರ್ಮಾ, ಜ್ಯೋತ್ಸ್ನಾ ಭೋಳೆ ಇಂತಹ ಖ್ಯಾತ ಗಾಯಕಿಯರು ಆ ಕಾಲದಲ್ಲಿ ಇದ್ದರೂ ಶೋಭಾಗುರ್ಟು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದರು.

ನಾನು 1966ರಿಂದ 2000ದ ತನಕ ಶೋಭಾ ಗುರ್ಟುರವರ ಅನೇಕ ಕಚೇರಿಗಳನ್ನು ಕೇಳಿದ್ದೇನೆ. ಟೈಮ್ಸ್ ಪತ್ರಿಕೆಯಲ್ಲಿ 3-4 ಕಚೇರಿಗಳ ವಿಮರ್ಶೆಯನ್ನೂ ಬರೆದಿದ್ದೇನೆ. ಆ ಕಾಲದ ಖ್ಯಾತ ಸಂಘಟಕರಲ್ಲಿ ಒಬ್ಬರಾದ ಬ್ರಿಜ್ ನಾರಾಯಣ್ ನಾರುಲಾ ತಮ್ಮ 'ಸುರ ಸಿಂಗಾರ ಸಂಪದ'ದ ಪರವಾಗಿ ಏರ್ಪಡಿಸಿದ ಒಂದು ಜುಗಲ್‌ಬಂದಿ ಕಾರ್ಯಕ್ರಮದ ನನ್ನ ವಿಶ್ಲೇಷಣೆ ಆ ಕಾಲದಲ್ಲಿ (1988-89) 'ನಿಂದಾಸೂಚಕ'ವೆಂದು ಹೆಸರುವಾಸಿಯಾಗಿತ್ತು. ಶೋಭಾ ಗುರ್ಟು ಮತ್ತು ಮಾಣಿಕ ವರ್ಮಾ ಹಾಗೂ ಮಾಣಿಕವರ್ಮಾ ಮತ್ತು ಗಿರಿಜಾದೇವಿ ಈ ಗಾಯಕರ 'ಜುಗಲ್‌ಬಂದಿ' ಕಾರ್ಯಕ್ರಮದಲ್ಲಿ ಕೇವಲ ಒಬ್ಬರೊಂದಿಗೆ ಮತ್ತೊಬ್ಬರ ಕಲೆಯ ಪೈಪೋಟಿ ಸರಿಯಲ್ಲ. ಸಮ ವಿಚಾರದ, ಸಾಮ್ಯತೆ ಇದ್ದರೇನೇ ಜುಗಲ್‌ಬಂದಿ ಯಶಸ್ಸು ಪಡೆಯುತ್ತದೆಯೇ ವಿನಹ ಇಂತಹ ಕಚೇರಿಗಳು ವ್ಯಂಗ್ಯ ಕಾರ್ಟೂನಿನಂತೆ ಕಾಣಿಸುತ್ತವೆಯಲ್ಲದೆ ಒಂದು ಅಪ್ರತಿಮ ಚಿತ್ರದಂತೆ (ಪೈಂಟಿಂಗ್) ಕಾಣಿಸುವುದಿಲ್ಲ ಎಂದು ಬರೆದುದಕ್ಕೆ ಬ್ರಿಜ್ ನಾರಾಯಣರು ಮತ್ತು ಇಬ್ಬರು ಓದುಗರು ಟೈಮ್ಸ್‌ನ ಪ್ರತಿಕ್ರಿಯೆಯಲ್ಲಿ ಸ್ಪಂದಿಸಿದ್ದ ನೆನಪು. ಬ್ರಿಜ್ ನಾರಾಯಣರು ಬೆಂಕಿ ಕಾರಿದ್ದರು.

ಶೋಭಾಗುರ್ಟು ಅವರ 1966ರಲ್ಲಿ ಛಭಿಲದಾಸ ಸ್ಕೂಲಿನ ಹಾಲಿನಲ್ಲಿ ಪಂ. ಶರದ್‌ಚಂದ್ರ ಆರೋಳಕರ್ ಷಷ್ಟ್ಯಬ್ಧಿಪೂರ್ತಿಸಮಾರಂಭದಲ್ಲಿ ಹಾಡಿದ್ದೂ ಈಗಲೂ 48 ವರ್ಷಗಳ ನಂತರವೂ ಅಚ್ಚಳಿಯದೇ ನೆನಪಿನಲ್ಲಿ ನಿಂತಿದೆ. ಅವರು ಹಾಡಿದ ದಾದರಾ 'ರಂಗ ಸಾರಿ ಗುಲಾಬಿ ಚುನರಿಯಾ' ಅದ್ಭುತವಾಗಿತ್ತು. ಬೇಗಂ ಅಖ್ತರ್‌ರಿಗೆ ತಬಲಾ ಸಾಥ್ ಕೊಡುತ್ತಿದ್ದ ನಿಜಾಮುದ್ದೀನ ಸಾಹೇಬರ ತಬಲಾ ವಾದನದೊಂದಿಗೆ ಶೋಭಾ ಗುರ್ಟು ಹಾಡಿದ್ದು ಒಂದು ಅಪೂರ್ವ ರಸಾನುಭವವಾಗಿತ್ತು.

ಮತ್ತೊಂದು ವಿಲೆಪಾರ್ಲೆಯ ದೀನಾನಾಥ್ ಹಾಲ್‌ನಲ್ಲಿ ಪಂ. ಜಿತೇಂದ್ರ ಅಭಿಷೇಕಿಯವರ ಸ್ಮರಣಾರ್ಥ ಏರ್ಪಡಿಸಿದ 1999ರ ಕಚೇರಿ. 1998ರಲ್ಲಿ ಅಭಿಷೇಕಿ ತೀರಿಕೊಂಡ ಒಂದು ವರ್ಷದ ನಂತರದ್ದು. ಆ ದಿನ ಕೇವಲ ಶೋಭಾಗುರ್ಟು ಅವರದ್ದೆ ಹಾಡುಗಾರಿಕೆ ಇತ್ತು. ಒಂದರ್ಧ ಘಂಟೆ ಗಂಭೀರವಾದ 'ಶ್ರೀ' ರಾಗವನ್ನು ಹಾಡಿ ನಂತರ ಅಭಿಷೇಕಿಯವರಿಗೆ ಇಷ್ಟವಾದ ಒಂದು ಮರಾಠೀ ಲಾವಣಿಯನ್ನು ಕೂಡ ಶೋಭಾ ಹಾಡಿದ್ದರು. 'ಪಿಕಲ್ಯಾ ಪಾನಾಚಿ ದೇಟ ಕಾ ಹಿರವಾ'. ಕನ್ನಡದಲ್ಲಿ 'ಮುದಿಯೆಲೆಯ ದಂಟು ಹಸಿರು ಏಕೆ?' ಎಂಬರ್ಥ. ಜಿತೇಂದ್ರರಿಗೆ ಶೋಭಾ ಹಾಡುತ್ತಿದ್ದ 'ಆಜ ಬಿರಜಮೇ ಹೋರಿ' ಈ ರಸಿಯಾ ಹಾಡು ತುಂಬಾ ಸೇರುತ್ತಿತ್ತು ಮತ್ತು 'ಮ್ಹಾರೋ ಪ್ರಣಾಮ' ಆರ್ತತೆಯಿಂದ ಹಾಡಿ ಶೋಭಾ ಕಣ್ಣೀರು ಹಾಕಿ ಅಭಿಷೇಕಿಯವರನ್ನು ನೆನೆಸಿದ್ದುದನ್ನು ಮರೆಯುವ ಹಾಗೆಯೇ ಇಲ್ಲ.

ತಾಯಿ ಮೇನಕಾ ಅವರಿಗೆ ಈ ಮಗಳು ಅವರ ಮುದಿತನದಲ್ಲಿ ಏನೂ ಸಹಾಯ ಮಾಡದ ಕಾರಣ ತಿಳಿದುಬಂದದ್ದು ಶೋಭಾ ಗುರ್ಟು ಅವರು ತೀರಿಕೊಂಡ ಮೇಲೆಯೇ! ತಿಂಗಳಿಗೆ 5 ಸಾವಿರ ರೂಪಾಯಿ ಸಿಗುವಂತೆ ವ್ಯವಸ್ಥೆಯನ್ನು ಮಾಡಿದ್ದರೂ ಅವರ ತಂಗಿಯ ಯಜಮಾನ ಅದೆಲ್ಲ ದೋಚಿಕೊಂಡು ಪರಾರಿಯಾಗಿದ್ದೂ ಬಳಿಕ ಆ ತಂಗಿಯೇ ನಾನು ದೇಶಪಾಂಡೆಯವರ ಜೊತೆಗೆ ವಿರಾರಕ್ಕೆ ಹೋದಾಗ ತಾಯಿಯೊಂದಿಗೆ ಕಾಣಿಸಿಕೊಂಡದ್ದೂ... ಇವೆಲ್ಲಾ ನನಗೆ ನಂತರ ತಿಳಿದುಬಂದ ವಿಷಯಗಳು. ಇಂತಹ ಸಂಸಾರ ತಾಪತ್ರಯ ಎಲ್ಲರಿಗೂ ಇರುತ್ತದೆ ಎಂದು ನನ್ನ ಮನಸ್ಸಿಗೆ ನಾನೇ ಸಮಾಧಾನಮಾಡಿಕೊಂಡದ್ದು ಇದೆ.

*****

7.15

ಗಾನಕೋಕಿಲೆ ಮಾಣಿಕ ವರ್ಮಾ (1926–1994)

1926ರ ಮೇ 16, ಇದು ಮಾಣಿಕ ದಾದರ್‌ಕರ್ ವರ್ಮಾ ಅವರ ಜನ್ಮ ದಿನ. ಅವರ ತಾಯಿ ಹೀರಾಬಾಯಿ ಒಳ್ಳೆಯ ಹಾಡುಗಾರ್ತಿ ಆಗಿದ್ದರೂ, ಆಕೆ ಪುಟಾಣಿ ಮಾಣಿಕಳನ್ನು ಪುಣೆಯಲ್ಲಿ ಪಕ್ಕದಲ್ಲಿದ್ದ ಅಪ್ಪಾಸಾಹೇಬ ಭೋಪೆ ಇವರಲ್ಲಿ ಸಂಗೀತ ಕಲಿಯಲು ಮತ್ತು ಬಳಿಯಲ್ಲಿಯೇ ಇದ್ದ ಮರಾಠಿ ಶಾಲೆಯಲ್ಲಿ ಹೆಸರು ಹಚ್ಚಿಸಿದ್ದರು. ಸ್ವತಃ ಹೀರಾಬಾಯಿ, ಬಶೀರ ಖಾನರಲ್ಲಿ ಕಲಿಯುತ್ತಿದ್ದುದರಿಂದ ದಿನರಾತ್ರಿ ಮಾಣಿಕ ಸಂಗೀತ ಗೊತ್ತಿಲ್ಲದೇ ಕಲಿಯುತ್ತಾ ಇದ್ದಳು. ಒಂದು ದಿನ ಭೋಪೆ ಮಾಸ್ತರರಿದ್ದಲ್ಲಿ ಬಾಲಗಂಧರ್ವರು ಬಂದಿದ್ದರಂತೆ. ಭೋಪೆ ಮಾಸ್ತರರು ಚಿಕ್ಕ ಮಾಣಿಕಳಿಗೆ 'ನಿನಗೆ ಗೊತ್ತಿದ್ದ ಹಾಡು ಹಾಡಿ ತೋರಿಸು' ಎಂದರಂತೆ. 'ಗಮತೇ ಸದಾ' ಎಂಬ ಬಾಲಗಂಧರ್ವರೇ ಹಾಡಿದ್ದ ಹಾಡನ್ನು ಹಾಡಿ ತೋರಿಸಿದಳಂತೆ. ಗಂಧರ್ವರು ಖುಶಿಯಿಂದ ಒಂದು ಬೆಳ್ಳಿ ನಾಣ್ಯವನ್ನು ಇನಾಮು ಕೊಟ್ಟರಂತೆ. ಸಂಜೆ ಹೀರಾಬಾಯಿಗೆ ಗೊತ್ತಾದಾಗ, "ಅಗ ಹುಚ್ಚಿ, ನೀನು ಯಾರ ಮುಂದೆ ಹಾಡಿದ್ದೀ ಗೊತ್ತದಯೇನು? ಸಾಕ್ಷಾತ ರಂಗದೇವತೆ ಮುಂದ" ಎಂದು ಮಗಳ ದೃಷ್ಟಿ ತೆಗೆದರಂತೆ.

ಆ ಕಾಲದ ಪುಣೆಯಲ್ಲಿ ಕಿರಾನಾ ಪರಂಪರೆಯು ತುಂಬಾ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಹೀರಾಬಾಯಿ ಬಡೋದೇಕರ್ ಮತ್ತು ಅವರ ತಮ್ಮ ಸುರೇಶಬಾಬು ಮಾನೆ ಇವರಲ್ಲಿ ಮುಂದಿನ ಶಿಕ್ಷಣಕ್ಕಾಗಿ ಮಾಣಿಕ ದಾದರ್‌ಕರ್ ಹೋಗಲಾರಂಭಿಸಿದರು. ಸಂಗೀತದಲ್ಲಿ ಕ್ರಮೇಣ ಬದಲಾವಣೆ ಆಗುತ್ತಿದ್ದ ಒಂದು ವಿಷಯವನ್ನು ಓದುಗರ ಮುಂದೆ ಇಲ್ಲಿ ಪ್ರಸ್ತಾಪಿಸಲೇ ಬೇಕು. ಶಾಸ್ತ್ರೀಯ ಸಂಗೀತದಲ್ಲಿ ಸಾಮಾನ್ಯ ಜನರು, ಮಹಾಜನರು ರುಚಿ ಇಟ್ಟುಕೊಂಡಿದ್ದರೂ ಸುಗಮ ಸಂಗೀತದ ಅರುಣೋದಯ ಆಗಲೇ ಆದುದರಿಂದ ಮತ್ತು ಚಿತ್ರ ಸಂಗೀತ ಕೂಡ ಶಾಸ್ತ್ರೀಯ ಸಂಗೀತದಿಂದಲೇ ಹುಟ್ಟಿದರೂ ಗುಂಯಗುಟ್ಟಲು, ಒಳ ದನಿಯಲ್ಲಿ ಗುಣಗುಣಿಸಲು ಸುಲಭವಾಗುತ್ತಿತ್ತು. ಹೀಗಾಗಿ ಇಂತಹ ತ್ರಿಶಂಕು ಕಾಲದಲ್ಲಿ, ಮಾಣಿಕ ದಾದರ್‌ಕರ ಸಂಗೀತ ಕ್ಷೇತ್ರದಲ್ಲಿ ಕಾಲಿಟ್ಟಿದ್ದರಿಂದ ಅವರ ಹೆಸರು ಸುಗಮ ಸಂಗೀತದಲ್ಲಿಯೂ, ನಾಟ್ಯ ಸಂಗೀತದಲ್ಲಿಯೂ ಮತ್ತು ಶಾಸ್ತ್ರೀಯ ಸಂಗೀತದಲ್ಲಿಯೂ ಅಷ್ಟೇ ಚುರುಕಾಗಿ ಮುಂದೆ ಬಂದಿತು.

ಹನ್ನೆರಡನೆಯ ವಯಸ್ಸಿನಲ್ಲಿಯೇ, ಮಾಣಿಕ್, ಪ್ರಭಾತ ಕಂಪನಿಯವರ ಒಂದು ಸ್ಪರ್ಧೆಯಲ್ಲಿ ಶಾಂತಾ ಆಪ್ಟೆ ಹಾಡಿದ "ವಂಚಿತ ರಾಧಾಬಾಲಾ" ಹಾಡಿ (ಗೋಪಾಲ ಕೃಷ್ಣ

ಚಿತ್ರಪಟದ್ದು) 1938ರಲ್ಲಿಯೇ ಅಂದರೆ 70 ವರ್ಷಗಳ ಹಿಂದೆಯೇ, ಮೊದಲನೇ ಬಹುಮಾನ ಗಿಟ್ಟಿಸಿದರು. ಆಮೇಲೆ ಎರಡೇ ವರ್ಷಗಳ ನಂತರ ದತ್ತಾ ಜಾವಡೇಕರ್ ಅವರ ದಿಗ್ದರ್ಶನದಲ್ಲಿ ಎರಡು ಹಾಡುಗಳನ್ನೂ ಹಾಡಿದರು. ಅಲ್ಲಿಯೇ ಕುಳಿತಿದ್ದ ಗಜಾನನ್ ವಾಟವೆ ಕೂಡಲೇ ಈ ಹುಡುಗಿಯಿಂದ ನಾಲ್ಕಾರು ಹಾಡುಗಳನ್ನೂ ಹಾಡಿಸಿಕೊಂಡರು. ಇವೆಲ್ಲ ಆಗಿನ ಕಾಲದ ಅತ್ಯಂತ ಜನಪ್ರಿಯ ಹಾಡುಗಳಾಗಿದ್ದವು ಎಂದು ಬೇರೆ ಹೇಳಬೇಕಾಗಿಲ್ಲ.

ಮಾಣಿಕ್ ದಾದರಕರ್ ಅವರ ಹಾಡುಗಾರಿಕೆಯನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಬಹುದು. ಮೊದಲನೆಯದಾಗಿ ಭಾವಗೀತೆ, ಸುಗಮ ಸಂಗೀತ ಇತ್ಯಾದಿ, ಎರಡನೆಯದಾಗಿ ರಂಗಗೀತೆ ಮತ್ತು ಠುಮರಿ, ಉಪಶಾಸ್ತ್ರೀಯ ಪ್ರಕಾರಗಳ ಸಂಗೀತ ಇತ್ಯಾದಿ, ಮೂರನೆಯದಾಗಿ ಶಾಸ್ತ್ರೀಯ ಸಂಗೀತ. ಭಾವಗೀತೆ. ಸುಗಮ ಸಂಗೀತದಲ್ಲಿ ಅತ್ಯುಚ್ಚ ಸ್ಥಾನಕ್ಕೆ ಸೇರಿದ್ದ ಮಾಣಿಕ ಅವರು ಶಾಸ್ತ್ರೀಯ ಸಂಗೀತದಲ್ಲಿಯೂ ಅದೇ ಮಟ್ಟವನ್ನು ಉಳಿಸಿಕೊಂಡದ್ದು ವಿಶೇಷ.

ಅವರ ಬಾಲ್ಯ ಮತ್ತು ತಾರುಣ್ಯ ಪುಣೆಯಂತಹ ಸಾಂಸ್ಕೃತಿಕ ಶಹರದಲ್ಲಿ ಕಳೆದುದರಿಂದ ಬಾಲಗಂಧರ್ವ, ಮಾಸ್ಟರ್ ಕೃಷ್ಣರಾವ್ ಮತ್ತು ಹೀರಾಬಾಯಿ ಬಡೋದೇಕರ್ ಅವರ ಗಾಯನ ಕೇಳಿಕೇಳಿ ತನ್ನ ಗಾನ ಭಂಡಾರವನ್ನು ಹಿಗ್ಗಿಸಿಕೊಂಡರು. ಈ ಶ್ರವಣ ಭಕ್ತಿಯನ್ನು ಕೊನೆಯವರೆಗೂ ಅವರು ಉಳಿಸಿಕೊಂಡಿದ್ದರು. ದಾದರ್-ಮಾಟುಂಗಾ, ಹರಿನಾರಾಯಣ ವೈದ್ಯ ಹಾಲ್, ವಿಲೆಪಾರ್ಲೆಯಲ್ಲಿಯ ಟಿಳಕ ಮಂದಿರ್ ಇತ್ಯಾದಿ ಸಭಾಗೃಹಗಳಲ್ಲಿ ಮಾಣಿಕಬಾಯಿಯವರ ಗಾಯನವನ್ನು ಅಸಂಖ್ಯ ಸಲ ನೋಡಿದ್ದೇನೆ, ಕೇಳಿದ್ದೇನೆ, ಅವರನ್ನು ಮಾತನಾಡಿಸಿದ್ದೇನೆ. ಮಧ್ಯದಲ್ಲಿ ಸಾಧಾರಣ 1978-80ರಲ್ಲಿ ಅವರಿಗೆ ಪಕ್ಷಘಾತದ ಹಠಾತ್ ಹೊಡೆತ ಬಿದ್ದು ಪುನಃ ಸುಸ್ಥಿತಿಗೆ ಮರಳಿದ್ದರೂ, ಮತ್ತೆ ಸುಖಾಸನ ಹಾಸಿಕೊಂಡು ಕಚೇರಿ ನೀಡುವಂತಹ ಸ್ಥಿತಿ ಬರಲೇ ಇಲ್ಲ. ಅವರ ಸಲುವಾಗಿ ಬೇರೆಯೇ ಖುರ್ಚಿಯ ವ್ಯವಸ್ಥೆ ಮಾಡಲಾಗುತ್ತಿತ್ತು ಅಥವಾ ವೇದಿಕೆಯ ಮೇಲೆ ಎರಡು ಕಾಲುಗಳನ್ನು ತುದಿಯಲ್ಲಿ ಇಳಿಬಿಟ್ಟು ಹಾಡುತ್ತಿದ್ದರು. ಇದೇ ಸ್ಥಿತಿಯಲ್ಲಿ ಬಂದು ಹಾಡಿದ ರೀತಿಯಲ್ಲಿ ಮುಂದೆ ಗಿರಿಜಾದೇವಿ, ಪಂ. ದಿನಕರ ಕಾಯ್ಕಿಣಿ, ಪಂ ಭೀಮಸೇನ ಜೋಶಿ ಮತ್ತು ಗಂಗೂಬಾಯಿ ಹಾನಗಲ್ ಅವರ ಕಚೇರಿಗಳನ್ನು ಕೇಳಿದ್ದೇನೆ.

ಪಂ. ಮಲ್ಲಿಕಾರ್ಜುನ ಮನ್ಸೂರ ಅವರ ಅನಾರೋಗ್ಯದ ನಂತರ ಅವರು ಪುನಃ ಚೇತರಿಸಿಕೊಂಡು ಬಂದು 1992ರಲ್ಲಿ ವಿಲೇಪಾರ್ಲೆಯಲ್ಲಿ ರಾಘವೇಂದ್ರ ಬೆಂಗೇರಿಯವರು ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಮಾಣಿಕವರ್ಮಾ ಅವರು ನಡೆದಾಡಲು ತೊಂದರೆ ಆಗುತ್ತಿದ್ದರೂ ಮಗಳು ಭಾರತಿಯೊಂದಿಗೆ ಬಂದು ನಮ್ಮೆಲ್ಲರೊಂದಿಗೆ ಕುಳಿತು ಕಚೇರಿಯನ್ನು ಕೇಳಿ ಆನಂದಿಸಿದ್ದನ್ನು ನಾವೆಂದೂ ಮರೆಯಲಾರೆವು.

ಶಾಸ್ತ್ರೀಯ ಸಂಗೀತದಲ್ಲಿ ಪರಿಣಿತಿ ಹೊಂದಿದ್ದರೂ, 1930-40ರ ಕಾಲಖಂಡದಲ್ಲಿ ಮಾಣಿಕವರ್ಮಾ, ಹೀರಾಬಾಯಿ ಬಡೋದೇಕರ್, ಗಜಾನನ ವಾಟವೆ, ಜಿ.ಎನ್ ಜೋಶಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ್ (ಹೀ ರಾತ ಸವತಬಾಯಿ) ಇವರೆಲ್ಲ ಸುಗಮ ಸಂಗೀತ, ಭಾವಗೀತೆ, ನಾಟ್ಯಗೀತೆ ಹಾಡುತ್ತಿದ್ದರಷ್ಟೇ ಅಲ್ಲ ಅವರು ಅವುಗಳನ್ನು ಕಚೇರಿಯಲ್ಲಿ ಹಾಡುವಂತೆ ರಸಿಕರು ಫರ್ಮಾಯಿಶ್ (ಕೋರಿಕೆ) ಕೂಡ

ಮಾಡುತ್ತಿದ್ದರು. ಮಹಾರಾಷ್ಟ್ರದ ಆ ಕಾಲದ ಸಂಗೀತದ ಬೆಳವಣಿಗೆ ಹೀಗಿತ್ತು. ಇದೇ ರೀತಿ ಬಹುಶಃ ಕರ್ನಾಟಕದಲ್ಲಿ ಕೂಡ ಈ ಗಾಳಿ ಬೀಸಿರಬೇಕು. ದ.ರಾ. ಬೇಂದ್ರೆಯವರ ಅನೇಕ ಹಾಡುಗಳು (ಉದಾ: ಉತ್ತರಧ್ರುವದಿಂ ದಕ್ಷಿಣ ಧ್ರುವಕೆ) ಭೀಮಸೇನ ಜೋಶಿ, ನಿನ್ನ ಹರಣ ನನಗೆ ಶರಣ, ಉದಯವಾಗಲಿ ನಮ್ಮ ಕನ್ನಡ ನಾಡು ಈ ಹಾಡುಗಳನ್ನು ಭೀಮಸೇನ ಮತ್ತು ಕೃಷ್ಣಾ ಹಾನಗಲ್ ಅವರು (1948) ಹಾಡಿದ್ದು ಅವು ಖ್ಯಾತಿಯನ್ನು ಗಳಿಸಿದವು. ಶಾಸ್ತ್ರೀಯ–ಉಪ ಶಾಸ್ತ್ರೀಯ ಈ ಪ್ರಕಾರಗಳ ಭೇದ ಈಗಿದ್ದಂತೆ ಆಗಿರಲಿಲ್ಲ. ಅಪರಿಚಿತ ಹಾಡು ಹಾಡುವಾಗ ಮಲ್ಲಿಕಾರ್ಜುನ ಮನ್ಸೂರ ಅವರಿಗೆ, 'ಹೀ ರಾತ್ ಸವತಬಾಯಿ' ಈ ಹಾಡು ಹಾಡಲು ಜನರು ಆಗ್ರಹಿಸಿದ್ದುದನ್ನು ನಾನು ಕಂಡಿದ್ದೇನೆ. ಮಾಣಿಕ ತಾಯಿಯವರ ಬಾಬತ್ತಿನಲ್ಲಿ ಕೂಡ ಅದೇ. ಆದರೆ 1968ರ ನಂತರ ಒಂದು ಕಚೇರಿಯಲ್ಲಿ ಅವರಿಗೆ, 'ಸಾವಳಾಂಚೆ ರಂಗ ತುಝಾ' ಹಾಡಲು ಪ್ರೇಕ್ಷಕರು ಕೇಳಿಕೊಂಡಾಗ ಆ ವಿನಂತಿಯನ್ನು ವಿನಮ್ರತೆಯಿಂದ ತಳ್ಳಿ ಹಾಕಿ "ನೀವು ನನ್ನ ಈ ಭಾವಗೀತೆಗಳ ಇನ್ನೊಂದು ಕಾರ್ಯಕ್ರಮವನ್ನು ಆಯೋಜಿಸಿದರೆ ಎಲ್ಲ ತಯಾರಿಯಿಂದ ಹಾಡುವೆ' ಎಂದು ಹೇಳಿ ಮುಂದಿನ ರಾಗದ ಆಲಾಪನೆ ಪ್ರಾರಂಭಿಸಿದ್ದು ಇದೆ.

ಸಂಗೀತದಲ್ಲಿಯ ಸಾತ್ವಿಕತೆಯ ಮೂರ್ತಿಮಂತ ಉದಾಹರಣೆ ಎಂದರೆ ಮಾಣಿಕ ವರ್ಮಾ. ಅವರ ಕಂಠಶ್ರೀ ಸ್ವಲ್ಪ ಅನುನಾಸಿಕ ಕಂಪನವುಳ್ಳದ್ದು, ನೈಸರ್ಗಿಕವಾದದ್ದು, ಸ್ವಲ್ಪ ತಗ್ಗಿದ ದನಿ, ಸುಲಲಿತ ಉಚ್ಚಾರ, ಆದರೆ ರೇಂಜು ಸ್ವಲ್ಪ ಕಡಿಮೆಯೇ. ಮಂದ್ರ ಮತ್ತು ಮಧ್ಯ ಸಪ್ತಕದಲ್ಲಿಯೇ ಪರಮಾನಂದ ಕೊಡುವ ವಿಧಾನ, ತಾರ ಸಪ್ತಕದ ಬಳಕೆ ಕೇವಲ ಶಾಸ್ತ್ರೀಯ ಸಂಗೀತ ಹಾಡಲು ಉಪಯೋಗಿಸುವ ಕ್ರಮ. ಇಡೀ ಕೃತಿಯಲ್ಲಿ ಒಂದು ಅಥವಾ ಎರಡೇ ಸಲ ತಾರ ಷಡ್ಜದೆಡೆ ಕೂಚು, ಆದರೆ ಮನೋನಿಗ್ರಹವೂ ಅಷ್ಟೇ. ಮೇಲೇರುವ ಇಚ್ಛೆಯನ್ನು ತರುಬಿ ಮಧ್ಯ ಮಂದ್ರಗಳಲ್ಲಿಯ ಸ್ವರಾರಾಧನೆ ಶ್ರವಣಕ್ಕೆ ಇಂಪಾಗಿ ಕೇಳಿಸುತ್ತಿತ್ತು.

ಮಾಣಿಕತಾಯಿಯವರ ಅಭಿಜಾತ ಸಂಗೀತವಾಗಲೀ, ನಾಟ್ಯ ಸಂಗಿತವಾಗಲೀ, ಒಂದೆರಡು ಭಕ್ತಿ ಸಂಗಿತದ ಭಜನೆಗಳಾಗಲೀ ಆಲಿಸಲು ಅತ್ಯಂತ ವಿಲಕ್ಷಣವಾದದ್ದು. ಠುಮರಿ ಪ್ರಕಾರವನ್ನು ನಾನು ನಿರ್ದಿಷ್ಟ ಉದ್ದೇಶದಿಂದ ಈ ಪಟ್ಟಿಯಲ್ಲಿ ಸೇರಿಸಿಲ್ಲ. ಠುಮರಿ ಪ್ರಕಾರಕ್ಕೆ ಬೇಕಾದ ಮಾದಕ ಸೌಂದರ್ಯ ಅವರ ಕಂಠದಲ್ಲಿ ಇರಲಿಲ್ಲ. 'ಅದಾಕಾರಿ' ಒಂದು ಕಿ.ಮಿ ದೂರವೇ! ಇನ್ನು ಶಬ್ದಗಳ ಉಚ್ಚಾರಗಳು. ಉರ್ದು, ಫಾರ್ಸಿ, ಶಬ್ದಗಳ ಉಚ್ಚಾರ ಮರಾಠಿಯಂತೆ ಮಾಡಿದರೆ ಕೇಳಲು ಅಸಹನೀಯವಾಗುತ್ತದೆ. ಒಂದು ಸಲ ಸುರಸಿಂಗಾರ ಸಂಸದದ ಸಂಸ್ಥಾಪಕ ಬ್ರಜ್ ನಾರಾಯಣ್ ನಾರೂಲಾ ಅವರು, ಸ್ವಾಮಿ ಹರಿದಾಸ ಉತ್ಸವದಲ್ಲಿ ಗಿರಿಜಾದೇವಿ (ಉತ್ತರಪ್ರದೇಶ) ಹಾಗೂ ಮಾಣಿಕ ವರ್ಮಾ ಇವರ ಜುಗಲ್‌ಬಂದಿ ಏರ್ಪಡಿಸಿದ್ದರು. ಸ್ಥಳ ಚೌಪಾಟಿಯ ಭವನ್ಸ್ ಅವರ ವಾತಾನುಕೂಲಿತ ಸಭಾಗೃಹ. ಇಬ್ಬರೂ ಕೂಡಿ ಅಂದರೆ ಮಾಣಿಕರು ಮತ್ತು ಗಿರಿಜಾದೇವಿ ಮೊದಲನೇ ಕೃತಿ ಜೋಗಕೌಂಸ ಪ್ರಾರಂಭಿಸಿದರು. ಇದು ಮಾಣಿಕರ ಅತ್ಯಂತ ಪ್ರಿಯ ರಾಗ. 'ಸುಗರ್ ಘರ್ ಆಯೋ' ಆಕೆಯ ಗುರು ಜಗನ್ನಾಥ ಬುವಾ ಪುರೋಹಿತ ಅವರು ಕಲಿಸಿದ್ದು. ಇಬ್ಬರ ಗಾಯನ ದ್ವಂದ್ವದಂತಾಗದೇ ಪೂರಕವಾಗಿತ್ತು. ಗಿರಿಜಾದೇವಿಯವರ ಶಾರೀರ ಸಂಪೂರ್ಣವಾದುದು. ತಾರ ಸಪ್ತಕದಲ್ಲಿ

ಸಲೀಸಾಗಿ ಏರುವಂತಹುದು. ಇದಕ್ಕೆ ಪ್ರತಿಯಾಗಿ, ಮೇಲೆ ಹೇಳಿದ ಹಾಗೆ, ಮಾಣಿಕರವರ ಮಂದ್ರ ಮತ್ತು ಮಧ್ಯಸಪ್ತಕದಲ್ಲಿಯ ಕರಾಮತ್ತು. ಆದರೆ ಗಿರಿಜಾದೇವಿಯವರ ಹಾಡುಗಾರಿಕೆಯಲ್ಲಿಯ ಭಾವಪ್ರದರ್ಶನ ಅಪರೂಪದ್ದಾಗಿತ್ತು. ಈ ಜುಗಲಬಂದಿಯ ಮೊದಲನೇ ಸುತ್ತು ಮಾಣಿಕರು ಗೆದ್ದದ್ದು ನಿಶ್ಚಿತವಾಗಿ ಕಾಣಿಸುತ್ತಿತ್ತು. ಮುಂದಿನ ಎಲ್ಲ ಠುಮರಿ, ಚೈತಿ ಮುಂತಾದ ಗಾನಪ್ರಕಾರಗಳಲ್ಲಿ ಗಿರಿಜಾದೇವಿಯವರ ಅದಾಕಾರಿ, ಹಾಡುಗಾರಿಕೆ, ಕಾಫಿ, ಸಿಂಧೂಕಾ ಮತ್ತು ಬರವಾ ಈ ರಾಗಗಳಲ್ಲಿಯ ಕೃತಿಗಳು ಉಚ್ಚ ಸ್ವರದಾಗಿದ್ದು, ಇದೊಂದು ಬಾಂಗ್ಲಾ ದೇಶದ ಮತ್ತು ಆಸ್ಟ್ರೇಲಿಯಾದ ಒಂದು ದಿನದ ಮ್ಯಾಚಿನಂತೆ ಕಾಣಿಸುತ್ತಿತ್ತು. ಎಲ್ಲಿ ಗಿರಿಜಾದೇವಿ, ಎಲ್ಲಿ ಮಾಣಿಕ್ ದಾದರಕರ್, ನನಗಂತೂ ಆ ದಿನದಿಂದ ಈ ಜುಗಲಬಂದಿ ಪ್ರಕಾರದ ಬಗ್ಗೆ ಒಂದು ತರಹದ ಜಿಗುಪ್ಸೆ ಉಂಟಾಯಿತು. ಸಂಗೀತದಲ್ಲಿ ಪೈಪೋಟಿಯೇ ಅದೇನು ಕುಸ್ತಿಯ ಅಖಾಡವೇ ಎಂಬ ಭಾವನೆ ಉತ್ಪನ್ನವಾಯಿತು. ಕಿವಿಗೆ ಕೇಳಿಸುವ ಈ ಅದೃಶ್ಯ ಸ್ಪಂದನೆಯಲ್ಲಿ ಇಂತಹ ಮಾರಾಮಾರಿ, ಹಣಾಹಣಿ ಸಲ್ಲದು ಎಂಬ ನಿರ್ಣಾಯಕ ಅವಸ್ಥೆಗೆ ಮುಟ್ಟಿ, ಒಂದು ತರಹದ ವೇದನೆಯಿಂದ ನಾನು ಮಧ್ಯದಲ್ಲಿಯೇ ಹೊರಟು ಹೋದೆ. ಮರುದಿನ ಬ್ರಜ್ ನಾರಯಣರಲ್ಲಿ ಇದರ ಬಗ್ಗೆ ಮಾತನಾಡಿದಾಗ, ಸಂಗೀತದ ಬಗ್ಗೆ ಏನೂ ಗೊತ್ತಿರದ ಮಹಾನುಭಾವ, ತಾನೊಂದು ಅಪರೂಪದ ಸಂಶೋಧನೆಯಲ್ಲಿ ನಿರತನಾಗಿದ್ದ ಜಂಬದ ಕೋಳಿಯ ತರಹ ನನ್ನನ್ನು ಕೆಣಕಿ ನಂತರ ನಾನು ಅವರ ಈ ಪ್ರಕಾರದ, 'unmusical music concert' ಎಂಬ ವಿಮರ್ಶೆಯನ್ನು ಟೈಮ್ಸ್‌ನಲ್ಲಿ ಬರೆದ ಕೂಡಲೇ ಒಂದು ಬಿರುಗಾಳಿಯೇ ಎದ್ದಿತು! ಪುಣ್ಯಕ್ಕೆ ನನ್ನ ವಿಮರ್ಶೆ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟದ್ದಾಗಿರದೇ, ವಿಷಯಕ್ಕೆ ಸಂಬಂಧಿಸಿದ್ದು ಎಂದು ಅರಿತ ನಮ್ಮ ಸಂಪಾದಕರು (ಗಿರಿಲಾಲ ಜೈನ್) ಮುಂದಿನ ವಿಚಾರವಿನಿಮಯಕ್ಕೆ ಪೂರ್ಣವಿರಾಮ ಹಾಕಿಬಿಟ್ಟರು. ಆದರೆ ಬ್ರಜ್ ನಾರಾಯಣರು ಇಷ್ಟಕ್ಕೆ ಸುಮ್ಮನಾಗಲಿಲ್ಲ. 'ಕಲ್ ಕೆ ಕಲಾಕಾರ್' ಎಂಬ ಆರು ತಿಂಗಳದ ನಂತರದ ಕಾರ್ಯಕ್ರಮದಲ್ಲಿ ಈ 'ಜುಗಲ್‌ಬಂದಿ' ವಿಷಯ ಪ್ರಸ್ತಾಪಿಸಿ, ವೀಣಾ ವಿದ್ವಾನ್ ಬಾಲಚಂದರ್ ಅವರು ನೀಡಿದ್ದ ನನ್ನ ವಿರುದ್ಧದ ಹೇಳಿಕೆಯನ್ನು ಮುದ್ರಿಸಿ ಬಂದವರಿಗೆಲ್ಲ ಹಂಚಿದರು. ನಾನೂ ಸಹ ಅತ್ಯಂತ ಖುಲ್ಲಾ ಮನಸ್ಸಿನಿಂದ ಆ ಮುದ್ರಿತ ಹಾಳೆಯನ್ನು ಪಡೆದುಕೊಂಡೆ. ಮುಂದೆ ಬ್ರಜ್ ನಾರಾಯಣರು ತೀರುವ ಮುಂಚೆ, ಅವರನ್ನು 'ಉಚ್ಚ ಸಂಘಟಕ'ರೆಂದು 1994ರಲ್ಲಿ ಕರ್ನಾಟಕ ಸಂಘದ ಪರವಾಗಿ ಗೌರವಿಸುವ ವ್ಯವಸ್ಥೆ ಮಾಡಿದೆ.

ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಭಾವಗೀತೆ ಹಾಡಿ ಕೆಲವು 78 ಆರ್.ಪಿ.ಎಮ್ ತಟ್ಟೆಗಳನ್ನು ಕೊಟ್ಟ ಶ್ರೇಯ ಮಾಣಿಕ್ ಅವರದು. ಅವರ ಧ್ವನಿ ಮಾಧುರ್ಯವನ್ನು ಸ್ವರ ಸಂಯೋಜಕರು ಮತ್ತು ಉತ್ತಮ ಹಾಡುಗಾರರು ಆಗಿದ್ದ ಸುಧೀರ ಫಡಕೆ ಚೆನ್ನಾಗಿ ಅರಿತುಕೊಂಡಿದ್ದರು. ಇದಾದದ್ದು 1946ರಲ್ಲಿ. ಬಿ.ಎ. ಕೂಡ ಪಾಸು ಮಾಡಿದ್ದರಿಂದ, ಈ ಮುಂದಿನ ರೆಕಾರ್ಡುಗಳಲ್ಲಿ ಮಿಸ್ ಮಾಣಿಕ್ ದಾದರಕರ್, ಬಿ.ಎ ಎಂಬ ಅಂಕಿತವಿದೆ. 1940–46ರ ರೆಕಾರ್ಡುಗಳಲ್ಲಿ ಅಂಕಿತ ಕೇವಲ ಮಾಣಿಕ ದಾದರಕರ್ ಎಂದು ಇದೆ. ಆ ಕಾಲದ ರೇಡಿಯೊ ಒಂದು ಮುಖ್ಯ ಆಕರ್ಷಣೆಯ ವಿಷಯವಾಗಿತ್ತು. ಮತ್ತು ಮಾಣಿಕ ದಾದರಕರ್ ಸುಗಮ ಸಂಗೀತ ಹಾಡುಗಾರಿಕೆಯಲ್ಲಿ ಮುಂಚೂಣಿಯಲ್ಲಿ ಬಂದು ನಿಂತುಬಿಟ್ಟರು. ಶಾಸ್ತ್ರೀಯ ಸಂಗೀತದಿಂದ ಸುಗಮ

ಸಂಗೀತ, ಭಕ್ತಿ ಸಂಗೀತ ಹಾಡಿದವರು ಹಲವರು. ಆದರೆ ಮರಾಠಿಯಲ್ಲಿ ಆ ಕಾಲದಲ್ಲಿ ಉಚ್ಚಸ್ಥಾನದಲ್ಲಿ ಮೆರೆಯುತ್ತಿದ್ದ ಮಾಣಿಕರು ಕ್ರಮೇಣ ಶಾಸ್ತ್ರೀಯ ಸಂಗೀತದೆಡೆ ಹೊರಳಿದರು ಮತ್ತು ಇಲ್ಲಿಯೂ ಹೆಸರು ಗಳಿಸಿದರು.

ಮಾಣಿಕ್ ಅವರ ಭಾವಿ ಪತಿ ಅಮರ ವರ್ಮಾ ಅವರು, ಮಾಣಿಕರನ್ನು ಭೇಟಿಯಾದದ್ದು ಪ್ರಭಾತ ಫಿಲ್ಮ ಕಂಪನಿಯಲ್ಲಿ. 'ಸೀತಾ ಸ್ವಯಂವರ' ಹಿಂದಿ ಆವೃತ್ತಿಯ ಕಥಾಲೇಖನ, ಸಂಭಾಷಣೆ ಮತ್ತು ಹಾಡುಗಳ ಹೊಣೆ ಅಮರ ವರ್ಮಾ ಅವರದಾಗಿತ್ತು. ಮಹಿಳೆಯರ ಪಾರ್ಶ್ವ ಗಾಯನ ಮಾಣಿಕರೇ ಹಾಡಬೇಕಾಗಿತ್ತು. ಮರಾಠಿ ಆವೃತ್ತಿ ಆಗಲೇ ಬಿಡುಗಡೆ ಆಗುವದರಲ್ಲಿತ್ತು. ಮಾಣಿಕರ ಹಿಂದಿ ಉಚ್ಚಾರಗಳು ಮರಾಠಿಯಂತೆ! ಸರಿ ಅಮರ ವರ್ಮಾ ಅವರು ಮಾಣಿಕರ ಹಿಂದಿ ಉಚ್ಚಾರ ತಿದ್ದಲು ಆರಂಭಿಸಿದರು. ಭಾಷೆ, ಕಾವ್ಯ, ಸಂಭಾಷಣೆ ತಿದ್ದುತ್ತ ವರ್ಮಾ ಮರಾಠಿಗರಾದರು! ಮಾಣಿಕ ದಾದರಕರ್, ವರ್ಮಾ ಆದರು.!

ಮರಾಠಿ ಜನ ಮಾಣಿಕವರ್ಮಾ ಹಾಡಿದ ಠುಮರಿಗಳನ್ನು ಅಥವಾ ಹಿಂದಿ ಭಾವಗೀತೆಗಳನ್ನು ಉಚ್ಚಾರ ದೋಷದ ಕಾರಣ ಎತ್ತಿ ಹಿಡಿಯಲಿಲ್ಲ. 'ಲಕ್ಷ್ಮೀವ್ರತ'ದ ಹಾಡುಗಳಲ್ಲಿಯ ಅವರ ಕನ್ನಡ ಉಚ್ಚಾರ ಕೂಡ ಬೇಸರ ತರುವಂತಹದು. ಈ ಮಾತು ಲತಾ ಮಂಗೇಶಕರ ಅವರಿಗೆ ಅನ್ವಯಿಸುವದಿಲ್ಲ.

ಉತ್ತರಪ್ರದೇಶದ ಫುಲಪುರ್ ಪ್ರಸಿದ್ಧವಾದುದು ಪಂ. ನೆಹರೂ ಅವರಿಂದ. ಅಲಹಾಬಾದ ಫುಲಪುರ್ ಮತದಾರ ಸಂಘ ಅವರದಾಗಿತ್ತು. ಈ ಅಮರ ವರ್ಮಾ ಫುಲಪುರ್‌ದವರು. ಉರ್ದು ಸಾಹಿತ್ಯದಲ್ಲಿ ಪದವೀಧರರು. ಮತ್ತು ಕಲಾರಸಿಕರು. ಪುಣೆಯ ಪ್ರಭಾತದಲ್ಲಿ ಕೆಲಸಕ್ಕಿದ್ದರು. 1948ರಲ್ಲಿ ಮಾಣಿಕ ದಾದರಕರ್ ಜೊತೆ ವಿವಾಹಬದ್ಧರಾದರು. ಮಾಹೀಮದಲ್ಲಿ ಮನೆ. ಮುಂಬಯಿಯಂತೂ ಹಿಂದಿ ಸಿನೇಮಾದ ಕೇಂದ್ರವೇ ಆಗಿದ್ದರಿಂದ ಬಹಳ ಬೇಗ ಅಮರ ವರ್ಮಾ ಯಶಸ್ವಿಯಾದರು. ಕ್ರಮೇಣ ಮಾಣಿಕ್ ವರ್ಮಾರಿಗೆ ಭಾರತಿ, ವಂದನಾ, ಅರುಣಾ, ರಾಣಿ ಹುಟ್ಟಿದರು.

ಮಾಣಿಕ ವರ್ಮಾರವರು ಮುಂಬಯಿಯಲ್ಲಿದ್ದಾಗ ಕೆಲ ಕಾಲ ಅಜಮತ್ ಹುಸೈನ್ ಖಾನ್‌ರ ಬಳಿ ಕಲಿತರು. ಅಜಮತ್ ಅವರ ಹಾಡುಗಾರಿಕೆ ಮರ್ದಾನಿ. ಆಗ್ರಾ ಅತ್ರೌಳಿ ಘರಾಣೆಯಲ್ಲಿ ಪಳಗಿದ ಮಾಣಿಕರ ಶಾರೀರ ಸ್ವಲ್ಪ ಒತ್ತಡ ಹಾಕಿ ಹಾಡಿದರಿಂದಲೋ ಏನೋ ಜಡವಾದಂತೆ ಕಾಣಿಸುತ್ತಿತ್ತು. ಅವರ ಸಂಗಡಿಗರೆಲ್ಲ ತರಬೇತಿ ಪಡೆಯಲು ಜಗನ್ನಾಥ ಬುವಾ ಪುರೋಹಿತರ ಹೆಸರು ಸೂಚಿಸಿದರು. ಒಂದೆರಡು ವರ್ಷಗಳಲ್ಲಿಯೇ ಅವರು ಸಂಗೀತ ಕಾರ್ಯಕ್ರಮಗಳನ್ನು ಕೊಡಲು ಆರಂಭಿಸಿದರು. ಜಗನ್ನಾಥ ಬುವಾ ಪುರೋಹಿತರ ತಾಲೀಮಿನ ನಂತರ, ಮಾಣಿಕ ವರ್ಮಾ, ಓಂಕಾರನಾಥ ಠಾಕೂರರ ಶಿಷ್ಯರಾದ ಸಂಗೀತಜ್ಞ ಭೋಲಾನಾಥ ಭಟ್ಟರಿಂದ ಠುಮರಿ ಗಾಯನದ ಉಚ್ಚಾರಗಳನ್ನು ತಿದ್ದಿಕೊಂಡರು.

1946ರಲ್ಲಿ ಓಂಕಾರನಾಥ ಠಾಕೂರ ಮತ್ತು ವಿನಾಯಕರಾವ್ ಪಟವರ್ಧನ್ ಇವರೊಂದಿಗೆ ಸೂರತ್‌ನಲ್ಲಿಯ ಕಾರ್ಯಕ್ರಮಕ್ಕೆ ಹೊರಟು ನಿಂತಾಗ, ಮಾಣಿಕರು ಸುಗಮ ಸಂಗೀತದಲ್ಲಿ ಹೆಸರು ಮಾಡಿದ್ದರೂ ಅವರಿಗೆ ಇನ್ನೂ ಶಾಸ್ತ್ರೀಯ ಸಂಗೀತದಲ್ಲಿ

ಪರಿಣಿತಿ ಇರಲಿಲ್ಲ. ಕಾರ್ಯಕ್ರಮದ ಮೊದಲು ಸಂಘಟಕರು, "ಮಾಣಿಕ ತಾಯಿ ನೀವು ಯಾವ ರಾಗ ಹಾಡುತ್ತೀರಿ?" ಎಂದಾಗ "ಪೂರಿಯಾ, ತಾಲ್ ಝುಮರಾದಲ್ಲಿ ಹಾಡುವೆ" ಎಂದರು. ಅವರ ಎಳೆ ವಯಸ್ಸು ನೋಡಿ, ಸಂಘಟಕರು, "ಪೂರಿಯಾ ಬೇಡ. ಬೇರೆ ಯಾವುದಾದರೂ ಸಣ್ಣ ಜೀವದ ಛೋಟೆ ಖ್ಯಾಲ್ ಹಾಡಿರಿ" ಎಂದರಂತೆ. ಆದರೆ ಮಾಣಿಕ ವರ್ಮಾ ಪಟ್ಟು ಹಿಡಿದು, ಅದನ್ನೇ ಹಾಡಿದರು. ಆದರೆ, ಕಾರ್ಯಕ್ರಮದ ಮೊದಲು ಓಂಕಾರನಾಥರ ಆಶೀರ್ವಾದ ಬೇಡಲು ಹೋದಾಗ ಈ ಮಾತು ಅವರ ಕಿವಿಯಲ್ಲಿ ಉಸುರಲು ಮರೆಯಲಿಲ್ಲ. ದುರ್ವಾಸ ಮುನಿಯೆಂದು ಖ್ಯಾತಿವೆತ್ತ ಓಂಕಾರನಾಥರು ಕೂಡಲೇ ಆ ಕಾರ್ಯದರ್ಶಿಯನ್ನು ಕರೆದು ಚೆನ್ನಾಗಿ ಸಿಟ್ಟುಮಾಡಿದರು. ಒಂದು ತಾಸಿನ ನಂತರ ಪೂರಿಯಾ ಅವರಿಗೆ ಎಷ್ಟು ಹಿಡಿಸಿತೆಂದರೆ ಮತ್ತೊಂದು ಹಾಡು ಹೇಳಲು ಅಪ್ಪಣೆಕೊಟ್ಟರು. ಮಾಣಿಕ ತಾಯಿ ಒಂದು ಪಂಜಾಬಿ ಥಾಟಿನ ಠುಮರಿ ಹಾಡಿ ತಮ್ಮ ಕಚೇರಿ ಮುಗಿಸಿದರು. ಇದೇ ಮುಂದೆ ಅವರ ಶಾಸ್ತ್ರೀಯ ಗಾಯನಕ್ಕೆ ನಾಂದಿಯಾಯಿತು.

ಮೆಹಫಿಲ್ಲಿನಲ್ಲಿ ಮತ್ತು ನಿಜ ಜೀವನದಲ್ಲಿಯ ಮಾಣಿಕ್ ವರ್ಮಾರ ಆದರ್ಶ ಹೀರಾಬಾಯಿ ಬಡೋದೆಕರ್ ಆಗಿದ್ದರು. ಅತ್ಯಂತ ಸಾತ್ವಿಕ ಸರಳ ಸ್ವಭಾವ, 'ತನ್ನಂತೆ ಪರರು' ಎಂಬ ಭಾವನೆ ಅವರಲ್ಲಿ ಯಾವಾಗಲೂ ಇತ್ತು. ನನ್ನ ಮತ್ತು ಶ್ರೀಕಾಂತ ದಾದರ್‌ಕರ್ ಅಂದರೆ ಮಾಣಿಕ ವರ್ಮಾರ ಚಿಕ್ಕ ಸಹೋದರ ಇವರ ಗೆಳೆತನದಿಂದಾಗಿ ಶ್ರೀಕಾಂತ ಏರ್ಪಡಿಸುತ್ತಿದ್ದ ತನ್ನ ತಾಯಿಯ ಪುಣ್ಯತಿಥಿಯ ಕಾರ್ಯಕ್ರಮಕ್ಕೆ ನಾನು ತಪ್ಪದೇ ಹಾಜರು ಇರುತ್ತಿದ್ದೆ ಮತ್ತು ಕೊನೆಯ ಹಾಡುಗಾರಿಕೆ ಮಾಣಿಕ ವರ್ಮಾ ಅವರದಾಗಿರುತ್ತಿತ್ತು.

ನಾನು ಮಾಣಿಕ ವರ್ಮಾರ ಕಚೇರಿಗಳನ್ನು ಅಸಂಖ್ಯ ಕೇಳಿದ್ದರೂ, ಕೇವಲ 44 ವಯಸ್ಸಿಗೆ ಅಂದರೆ ಸೆಪ್ಟೆಂಬರ್ 7ರಂದು ಪಕ್ಷಘಾತ ಅಟ್ಯಾಕ್ ಆಗಿ 2-3 ವರ್ಷ ಹಾಸಿಗೆ ಹಿಡಿದು, ಮತ್ತೆ ಚೇತರಿಸಿಕೊಂಡ ಮೇಲೆ ಕೇಳಿದ ಮಾಣಿಕವರ್ಮಾ ಸಂಪೂರ್ಣ ಗಾಯಕಿಯತ್ತ ನಡೆದದ್ದು ಮತ್ತು ನಮ್ಮಂತಹ, 'ಹುಳುಕು ಹುಡುಕುವ' ರಸಿಕರಿಗೂ ಆಪ್ಯಾಯಮಾನವಾಗುವಂತೆ ಹಾಡುಗಾರಿಕೆಯನ್ನು ಸಮೃದ್ಧ ಮಾಡಿಕೊಂಡದ್ದು ಒಂದು ಸೋಜಿಗದ ಮಾತು. 1970ರ ಮೊದಲಿನ ಮಾಣಿಕವರ್ಮಾ ಅವರ ಸಂಗೀತ ಸುಗಮ ಸಂಗೀತದ ಛಾಯೆ ಇದ್ದ ಕಾರಣದಿಂದಲೋ ಏನೋ ಗಾಯಕ-ಗಾಯಕಿಯವರ ಮೊದಲಿನ ಸಾಲಿನಲ್ಲಿ ಅವರು ಎಂದೂ ಇದ್ದಿದ್ದಿಲ್ಲ. ಆದರೆ ಅದೇ 1984-86ರಲ್ಲಿ ಕ್ರಮೇಣ ಕಾಲುಗಳಲ್ಲಿ ಶಕ್ತಿ ಇರದಿದ್ದರೂ ಹಾಡಲು ಆಮಂತ್ರಣ ಸಿಕ್ಕುತ್ತಾ ಹೋದ ಹಾಗೆ ಅವರು ಪ್ರಥಮ ಸಾಲಿನ ಗಾಯಕಿ (ಜಿಡಿಂಟಿಣಟುಟಿಜ ೨ಟಿರಜಡಿ) ಎಂದು ಪ್ರಸಿದ್ಧರಾದರು.

ಮಾಣಿಕ ವರ್ಮಾ 1994ರ ನರಕ ಚತುರ್ದಶಿಯಂದು ತೀರಿಕೊಂಡರು. ಅವರ ಕರ್ನಾಟಕ ಸಂಘದ ಪ್ರೀತಿಯ ಮೂಲಕ ಅವರ ಮಕ್ಕಳು ಭಾರತಿ ಅಚ್ರೇಕರ್ ಮತ್ತು ರಾಣಿ ಶಶಾಂಕ ನಮ್ಮಲ್ಲೇ, 'ಮಾಣಿಕ ವರ್ಮಾ ಮಹೋತ್ಸವ' ಆಚರಿಸಿದ್ದರು. ವರ್ಷದಲ್ಲಿ ಒಂದೆರಡು ಕಾರ್ಯಕ್ರಮಗಳು ಸಂಘದಲ್ಲಿ ನಡೆಯುತ್ತಲೇ ಇರುತ್ತಿದ್ದವು.

*****

7.16

ನಿರ್ಮಲಾದೇವಿ (1927–1996)

ನಿರ್ಮಲಾದೇವಿ ಅರುಣ ಅಹುಜಾ ಸಿನೇ ಸ್ಟಾರ್ ಗೋವಿಂದಾ ಇವರ ತಾಯಿ, ನನಗೆ ಅತ್ಯಂತ ಪ್ರಿಯವಾದ ಠುಮರಿ ಗಾಯಕಿಯರಲ್ಲಿ ಒಬ್ಬಳು. ಇವಳ ಚರಿತ್ರೆ ಹುಡುಕಾಡಿದೆ ಅಂತರ್ಜಾಲದಲ್ಲಿ ಹುಡುಕಾಡಿದೆ, ಸಿನೇ ಮ್ಯಾಗಜೀನಗಳನ್ನು ತಿರುವಿ ಹಾಕಿದೆ. ಇವರ ಪೂರ್ವಾಶ್ರಮದ ಹೆಚ್ಚು ಮಾಹಿತಿ ಸಿಗಲಿಲ್ಲ. ನಿರ್ಮಲಾದೇವಿ, ಸಿದ್ಧೇಶ್ವರೀ ದೇವಿ ಮತ್ತು ರಾಜೇಶ್ವರೀ ದೇವಿಯಂತೆ ವಾರಣಾಸಿಯವಳು, ಅವಳ ಮತ್ತೊಂದು ಹೆಸರು ನಜ್ಹೀಮ್ ಎಂದು ಇದ್ದು ತವಾಯಫ್ ಪದ್ಧತಿಯಂತೆ ಹಿಂದು-ಮುಸ್ಲಿಮ್/ಸೂಫಿ ಪದ್ಧತಿಯಂತೆ (ಜದ್ದನ್–ನರ್ಗೀಸ್‌ರಂತೆ) ಎರಡೂ ಧರ್ಮಗಳನ್ನು ಅನುಸರಿಸುತ್ತಿದ್ದಳು ಎಂಬ ಮಾಹಿತಿ ಸಿಕ್ಕಿತು. ವಾರಣಾಸಿ ಅಂದರೆ ಬನಾರಸ್ ಪದ್ಧತಿಯ (ಪೂರಬ್ ಅಂಗಕೀ ಠುಮರಿ, ಲಖನೌದ ಪೂರ್ವಕ್ಕೆ ಬನಾರಸ್ ಇದೆ) ಠುಮರಿ ಗಾಯನದ 'ಪೇಶ್‌ಕಶ್' (ಪ್ರಸ್ತುತಿ) ಅವರಿಗೆ ರೂಢಿಯಾಯಿತು.

ನಾನು 1973–74ರಲ್ಲಿ ಲಕ್ಷ್ಮೀಶಂಕರ್ ಹಾಗೂ ನಿರ್ಮಲಾದೇವಿ ಇವರಿಬ್ಬರ ಠುಮರಿ ಜುಗಲಬಂದಿ ಕಾರ್ಯಕ್ರಮ ಮುಂಬಯಿಯ ಬಿರ್ಲಾ ಹಾಲ್‌ನಲ್ಲಿ (ಮರೀನ್ ಲೈನ್ಸ್) ಪ್ರತ್ಯಕ್ಷ ಕೇಳಿದ್ದೇನೆ. ಈ ಜುಗಲಬಂದಿಯಲ್ಲಿ ಲಕ್ಷ್ಮೀಶಂಕರ್ ಒಂದು ಠುಮರಿಯನ್ನು, ನಂತರ ನಿರ್ಮಲಾದೇವಿ ಮತ್ತೊಂದು ಠುಮರಿಯನ್ನು ಹಾಡಿ ಕೊನೆಗೆ ಇಬ್ಬರೂ ಕೂಡಿ 'ಸಾವನ ಬೀತಾ ಜಾಯೇ' ಹಾಡಿದ ನೆನಪು. ಅವರಿಬ್ಬರ ಗುರುಗಳು/ಉಸ್ತಾದ್ ಪಂಜಾಬ್ ಘರಾಣೆಯವರಾಗಿದ್ದರಿಂದ, ಅಂದರೆ ಒಂದೇ ಪ್ರಕಾರದ ಹಾಡುಗಾರಿಕೆ ಇದ್ದುದರಿಂದ ಅದು ಬಹಳಮಟ್ಟಿಗೆ ಯಶಸ್ವಿಯಾಗಿತ್ತು. ಲಕ್ಷ್ಮೀಶಂಕರ್ ಹಾಡುವಾಗ ವಿನಯಪೂರ್ವಕ ಗೃಹಿಣಿಯಂತೆ ಹಾಡುತ್ತಿದ್ದರೆ, ನಿರ್ಮಲಾದೇವಿಯ ಹಾಡುಗಾರಿಕೆಯಲ್ಲಿ 'ಕೋಠಿ' ಸಂಸ್ಕೃತಿಯ 'ಅದಾಕಾರಿ' ಇತ್ತು. ಬಹುಶಃ ಅವರಿಗೆ ವಾರಣಾಸಿಯ ಉಸ್ತಾದ್ ಆತ್ತಾ ಹುಸೇನ್ ಖಾನರು 'ಅದಾಕಾರಿ'ಯನ್ನು (ಪ್ರೇಕ್ಷಕರೊಂದಿಗೆ ಹಾವಭಾವದಿಂದ ಹುಬ್ಬು ಹಾರಿಸುತ್ತ, ನಟಿಸುತ್ತಾ, ಹಾಡು ಹೇಳುವ ಪ್ರಕಾರವನ್ನು) ಕಲಿಸಿದ್ದಿರಲೂಬಹುದು.

ಅರುಣ ಅಹುಜಾ ಎಂದರೆ ಗೋವಿಂದಾನ ಅಪ್ಪ ಹುಟ್ಟಿದ್ದು 1917ರಲ್ಲಿ. ಪಂಜಾಬ್‌ದ ಈಗಿನ ಪಾಕಿಸ್ತಾನ ಗುಜರಾನವಾಲಾ ಎಂಬಲ್ಲಿ. ಸರಾಫೀ ಮನೆತನ. ಈತ 1938–39ರಲ್ಲಿ ಬೊಂಬಾಯಿಗೆ ಬಂದ. ಮುಖದ ಮೇಲೆ ರಾಜಕಳೆ ಕಂಗೊಳಿಸುತ್ತಿದ್ದ

ಸ್ಪುರದ್ರೂಪಿ ಪಂಜಾಬಿ ಯುವಕ. ಬಂದವನೇ ಸಿನೇಮಾದ ಹೀರೋ ಆದ! 1942ರತನಕ ಈತ ಸಾಕಷ್ಟು ಪ್ರಸಿದ್ಧಿ ಪಡೆದ, ಕಿಸೆ ತುಂಬಿದ ಸಿನೆಸ್ಟಾರ್ ಆಗಿದ್ದರಿಂದ ಬಾಂದ್ರಾ ಪಾಲಿಹಿಲ್ ಏರಿಯಾದಲ್ಲಿ ಒಂದು ದೊಡ್ಡ ಬಂಗಲೆಯ ಮಾಲಕನಾದ. ಇದೇ ಹೊತ್ತಿಗೆ ನಿರ್ಮಲಾದೇವಿ ಬಹುಶಃ 8–10 ವರ್ಷ ಕಿರಿಯಳು, ಒಳ್ಳೇ ಸುಶ್ರಾವ್ಯ ಕಂಠಸಿರಿಯ ಹರೆಯದ ಸುಂದರ ಹುಡುಗಿ. ಇವರಿಬ್ಬರ ಜೋಡಿ, ಹೀರೋ, ಹೀರೋಯಿನ್ ಆಗಿ 'ಸವೇರಾ' (1942), 'ಚಾಲೀಸ ಕರೋಡ' (1945), 'ಶಾರದಾ', 'ಗಾಲಿ', 'ಕಾನೂನ್', 'ಘುಂಘಟ್', 'ಮಹಾಲಕ್ಷ್ಮಿ' –ಹೀಗೆ ಅನೇಕ ಚಿತ್ರಪಟಗಳಲ್ಲಿ ಕಾಣಿಸಿಕೊಂಡಿತು. ಮುಂದೆ ಇಬ್ಬರೂ ಮದುವೆ ಮಾಡಿಕೊಂಡು ಹಾಯಾಗಿದ್ದರು. ಆದರೆ–

ಅರುಣ್ ಅಹುಜಾನ ಮಹತ್ವಾಕಾಂಕ್ಷೆ ಎಂದರೆ ಸಿನೇಮಾವನ್ನು ಸ್ವತಃ ಮಾಡಿ ಹಣಗಳಿಸುವ ಹೆಬ್ಬಯಕೆ. ಇದರಲ್ಲಿಯೇ ಕೈಸುಟ್ಟುಕೊಂಡ. ಇದ್ದ ಬಂಗಲೆ ಹೋಯಿತು. ಸಾಲ ಬೇರೆ. 1950ರಲ್ಲಿಯೇ ವಿರಾರದ ಒಂದು ಚಾಳಿನಲ್ಲಿ ಮನೆಮಾಡಿದ. ನಿರ್ಮಲಾದೇವಿ ಸಂಗೀತ ಕಚೇರಿಗಳನ್ನೂ ಮಾಡಿಯೂ, ತನ್ನ ಧ್ವನಿಯನ್ನು ಎರವಲು ಕೊಟ್ಟೂ, ರಿಕಾರ್ಡುಗಳ ಮುದ್ರಣ ಮಾಡಿಸಿಯೂ ಸಂಸಾರ ನಡೆಸಿದಳು. ಇಬ್ಬರು ಗಂಡು ಮಕ್ಕಳು, ನಾಲ್ಕು ಹೆಣ್ಣು. ಎಲ್ಲರಲ್ಲಿ ಚಿಕ್ಕವ ಚೀಚಿ –ಅಂದರೆ ಗೋವಿಂದಾ. ಅರುಣ ಅಹುಜಾ ಹಾಸಿಗೆ ಹಿಡಿದ, ನಿರ್ಮಲಾದೇವಿ ಅತ್ಯಂತ ಚಾಣಾಕ್ಷತನದಿಂದ ಮಕ್ಕಳನ್ನು ಬೆಳೆಸಿದಳು. ಗೋವಿಂದ ಅಹುಜಾ ಹೀರೋ ಆದರೆ, ಕೀರ್ತಿಕುಮಾರ ದಿಗ್ದರ್ಶಕನಾದ. ಹೆಣ್ಣುಮಕ್ಕಳೆಲ್ಲ ಮದುವೆ–ಗಿದುವೆ ಮಾಡಿಕೊಂಡು ತಮ್ಮ ತಮ್ಮ ಸಂಸಾರಗಳನ್ನು ಚೊಕ್ಕವಾಗಿ ನಡೆಸಿದರು. ನಿರ್ಮಲಾದೇವಿ ಕೂಡ ಕೊನೆ–ಕೊನೆಗೆ ಹಾಡುಗಾರಿಕೆ ಬಿಟ್ಟುಕೊಟ್ಟು ಪೂರ್ಣತಃ ದೇವರಪೂಜೆ ಇತ್ಯಾದಿ ಮಾಡಿಕೊಂಡಿದ್ದಳು. 1996ರಲ್ಲಿ ನಿಧನಳಾದಳು.

ನಿರ್ಮಲಾದೇವಿಯ ಶಾರೀರ ಅತ್ಯಂತ ಮಧುರವಾಗಿತ್ತು. ಸ್ವಲ್ಪ ತೆಳ್ಳಗಿನ ಪ್ರಕಾರದ್ದು. ಸಿನೆ ಸಂಗೀತ ಕೇಳುವವರು, ಅವಳು 'ರಾಮ ತೇರಿ ಗಂಗಾ ಮೈಲಿ' ಅಥವಾ ಬಾವರ್ಚಿಯಲ್ಲಿಯ 'ಕಾಹೆಂ ಕಾನಾ ಕರತ ಬರಜೋರಿ' ಅತ್ಯಂತ ಮಧುರವಾಗಿ ಹಾಡಿದ್ದಾಳೆ ಎಂಬುದನ್ನು ಕೇಳಿರಬಹುದು.

ವಾರಣಾಸಿಯಲ್ಲಿದ್ದಾಗ ನಿರ್ಮಲಾದೇವಿ ಆತ್ತಾ ಹುಸೇನ್ ಖಾನರಿಂದ ಸಂಗೀತ ಶಿಕ್ಷಣ ಪಡೆದಿದ್ದಳಂತೆ. ಪೂರಬ ಅಂಗದ ಶಿಕ್ಷಣ ಪಡೆದಿದ್ದರೂ ನಂತರ ಪಟಿಯಾಲಾ ಘರಾಣೆಯ ರೆಹಮಾನ್ ಖಾನರ ಬಳಿ ಕಲಿತು ಮುಂದೆ ಇದೇ ಶೈಲಿಯಲ್ಲಿ ಹಾಡುಗಾರಿಕೆ ನಡೆಸಿದ್ದುದನ್ನು ನಾವು ಕಾಣಬಹುದು. 6 ನಿಮಿಷದ ಈ ಠುಮರಿಯ ಲಾವಣ್ಯವನ್ನು ಏನೆಂದು ಬಣ್ಣಿಸಲಿ?

'ರೋ ರೋಕೆ ಆಂಖಽ ಗವಾಽಯೇಂ ಸಜನಾ ನಹೀಂ ಆಯೇಂ' ಇದೊಂದು ಅಪೂರ್ವವಾದ ಠುಮರಿ, ಶಿವರಂಜನಿ ರಾಗದಲ್ಲಿ ಕಟ್ಟಿದ್ದು, ಮತ್ತೊಂದು ಚೈತಿ (ಉತ್ತರ ಪ್ರದೇಶದ ಜಾನಪದ ಪ್ರಕಾರ ಪೂರಬ್ ಅಂಗದಲ್ಲಿ) ಹಾಡಿದ್ದು 7 ನಿಮಿಷದ ಹಾಡು –ಇವನ್ನು ನೀವು ಯು ಟ್ಯೂಬಿನಲ್ಲಿ ಕೇಳಬಹುದು. ಇದರ ಮೊದಲ ಶಬ್ದ ಅಂದರೆ ಮುಖಡಾ ಹೀಗಿದೆ:

'ಯಹೀಂ ಥೈಂಯ್ಯಾ ಮೋತಿಯಾs ಹಿರಾಯೇ ಗೈಲೀ ರಾಮಾ', ಅಂದರೆ, 'ನನ್ನ ಮೂಗುತಿ ಕಾಣೆಯಾಗಿದೆ ರಾಮಾs' ಎಂಬ ಹಾಡು. ಸ್ವಚ್ಛ ಶಬ್ದೋಚ್ಚಾರದಿಂದ ಈ ಠುಮರಿ ಕಂಗೊಳಿಸುತ್ತದೆ. ಪಕ್ಕವಾದ್ಯದವರೂ ಅತ್ಯಂತ ಚೆನ್ನಾಗಿ ಸಾಥ್ ಕೊಟ್ಟಿದ್ದಾರೆ.

ಇವಳ ಮೂರು ಎಲ್.ಪಿ.ಗಳನ್ನು (ಲಾಂಗ್ ಪ್ಲೇಯಿಂಗ್) ಎಚ್‌ಎಮ್‌ವಿ ರಿಲೀಸು ಮಾಡಿದೆ. ಅವು "ಮೈ ಗುನಗಾವೂಂ", ಲಕ್ಷ್ಮೀಶಂಕರರೊಂದಿಗೆ "ಸಾವನ ಬೀತಾ ಜಾಯ್" ಹಾಗೂ ಒಂದು "ನಿರ್ಮಲಾದೇವೀಕಿ ಠುಮರಿಯಾಂ".

ಒಟ್ಟು 13 ಸಿನೆಮಾಗಳಲ್ಲಿ ನಟಿಸಿ 60ಕ್ಕಿಂತ ಮಿಕ್ಕಿದ ಸಿನೇ ಹಾಡುಗಳನ್ನು ಹಾಡಿ, ಅನೇಕ ಜಲಸಾಗಳಲ್ಲಿ ಮತ್ತು ರೇಡಿಯೋದಲ್ಲಿ ಹಾಡಿದ ನಿರ್ಮಲಾದೇವಿ ಗಝಲ್‌ಗಳನ್ನೂ ಹಾಡಿದ್ದಾಳೆ.

ಗೋವಿಂದಾ ಸ್ಟಾರ್ ಆದ ನಂತರ ಓರ್ವ ಪತ್ರಕರ್ತ ನಿರ್ಮಲಾದೇವಿಯ ಸಂದರ್ಶನ ಮಾಡಲು ಹೋಗಿದ್ದನಂತೆ. ಅತ್ಯಂತ ವಿಶಾಲವಾದ ಡ್ರಾಯಿಂಗ್ ರೂಮ್‌ನಲ್ಲಿ ಅವನನ್ನು ಕೂಡಿಸಿ ನಂತರ ಅರ್ಧಗಂಟೆಯ ನಂತರ ಶುಭ್ರವಸ್ತ್ರಾನ್ವಿತ ನಿರ್ಮಲಾದೇವಿ ದೇವರ ಕೋಣೆಯಿಂದ ಹೊರಗೆ ಬಂದು ಪ್ರಸಾದಕೊಟ್ಟು ಸಂದರ್ಶನ ನೀಡಿದಳಂತೆ. ಈ ಸಂದರ್ಶನದಲ್ಲಿ ಈಕೆಯ ನಂತರದ ಜೀವನದ ಹಾಗೂ ಗೋವಿಂದಾ ಮತ್ತು ಕೀರ್ತಿಕುಮಾರರ ಏಳಿಗೆಯ ಮಾತುಕತೆ ಆಗಿದೆ ವಿನಾ ಅವಳ ಮೊದಲಿನ ಕಾಲಖಂಡ ತೆರೆಯ ಮರೆಯಲ್ಲಿಯೇ ಉಳಿದುಕೊಂಡದ್ದು ಒಂದು ಸತ್ಯ ಸಂಗತಿ.

*****

7.17

ಏಕಮೇವಾದ್ವಿತೀಯೆ ಅನ್ನಪೂರ್ಣಾದೇವಿ (1927–...)

ಈ ಲೇಖನಕ್ಕೆ ಪೂರ್ವಭಾವಿಯಾಗಿ ಹಿಂದೆ ನಾನು 1992ರಲ್ಲಿ ಇಂಗ್ಲಿಷ್ 'ಎಕನಾಮಿಕ್ ಟೈಮ್ಸ್'ನಲ್ಲಿ ಬರೆದ ಲೇಖ ಹುಡುಕಾಡಿದೆ. ಸಂಪಾದಕರ ಸೂಚನೆಯಂತೆ, ಅನ್ನಪೂರ್ಣಾದೇವಿಯವರಿಗೆ ಸಂಗೀತ ನಾಟಕ ಅಕಾಡೆಮಿಯ ಫೆಲೋಶಿಪ್ ಸಿಕ್ಕ ಮರುದಿನ ಈ ಲೇಖ ಪ್ರಕಟವಾಗಿತ್ತು. 'Enigma of a Musical Genius' ಎಂಬ ಶೀರ್ಷಿಕೆಯನ್ನು ಸಂಪಾದಕ ಮಹಾಶಯರೇ ದಯಪಾಲಿಸಿದ್ದರು. ರವಿಶಂಕರ ಮತ್ತು ಅನ್ನಪೂರ್ಣಾದೇವಿಯುವರ ಒಬ್ಬನೇ ಮಗ ಶುಭೇಂದ್ರ ಶಂಕರ. ಆತನ ಸಿತಾರ್‌ವಾದನವನ್ನು, ರವಿಶಂಕರರ ಜ್ಯೇಷ್ಠ ಶಿಷ್ಯ ಶಮೀಮ್ ಅಹಮ್ಮದ್ ಮತ್ತು ನಾನು ಕೂಡಿಯೇ ನೇಪಿಯನ್‌ಸೀ ರಸ್ತೆಯಲ್ಲಿದ್ದ ಒಂದು ಶಾಲೆಯಲ್ಲಿ ಏರ್ಪಡಿಸಿದ್ದೆವು. ನನ್ನ ಉದ್ದೇಶ, ಅನ್ನಪೂರ್ಣಾದೇವಿಯವರನ್ನು ನೋಡಬೇಕೆಂಬುದಷ್ಟೆ ಆಗಿತ್ತು. ದುರ್ದೈವ, ಅವರು ಬರಲಿಲ್ಲ. ಶುಭೇಂದ್ರಶಂಕರನ ಸಿತಾರ್‌ವಾದನ ಹೇಳಿಕೊಳ್ಳುವಂತಹ ಮಟ್ಟದ್ದು ಆಗಿರಲಿಲ್ಲ. ಈ ವಿಷಯ ನನ್ನ ಸನ್ಮಿತ್ರ ಮದನಲಾಲ ವ್ಯಾಸರು ಅನ್ನಪೂರ್ಣಾದೇವಿಯವರಿಗೆ ಮುಟ್ಟಿಸಿದ್ದರಿಂದಲೋ ಏನೋ, ನನಗೆ ಅವರ ದರ್ಶನದ ಭಾಗ್ಯ ಸಿಗಲೇ ಇಲ್ಲ! ಅದೇ ವರ್ಷ ಸೆಪ್ಟೆಂಬರ್‌ನಲ್ಲಿ ಶುಭೇಂದ್ರ ತೀರಿಹೋದ ವಿಷಯ ಪತ್ರಿಕೆಗಳಲ್ಲಿ ಬಂತು. ಶುಭೋ ಸಾಯುವಾಗ, ಅವನ ವಯಸ್ಸು 50 ಮತ್ತು ಹೆಂಡತಿ, ಇಬ್ಬರು ಮಕ್ಕಳು ಕಾವೇರಿ, ಸೋಮನಾಥ. ಅಮೇರಿಕೆಯಲ್ಲಿ ನೆಲೆಸಿದ್ದ ಸಂಸಾರವನ್ನು ನಡೆಸಲು ಈತ ಒಂದು ವೈನ್ ಸ್ಟೋರಿನಲ್ಲಿ ಮ್ಯಾನೇಜರ್ ಆಗಿದ್ದನಂತೆ.

ಈ ಘಟನೆಗೆ ಸುಮಾರು ಕಾಲು ಶತಮಾನವೇ ಸಂದಿದೆ. ಈ ಮಧ್ಯೆ ಅಲಿಪ್ತತೆಯಿಂದಲೇ ಒಂಟಿ ಜೀವನ ನಡೆಸುತ್ತಿದ್ದ ಅನ್ನಪೂರ್ಣಾದೇವಿಯ ಬಗ್ಗೆ ಬರೆಯಲು ಕುಳಿತಾಗ 'ಲೇಖನೀ ಸ್ರಂಸತೆ ಹಸ್ತಾತ್' (ಲೇಖನಿಯು ಕೈಯಿಂದ ಜಾರುತ್ತಿದೆ) ಎಂಬ ಭಾವನೆಯಿಂದ ನಡುಕ ಉಂಟಾಗುತ್ತದೆ. ಇದೇ ಭಾವನೆ ಹಲವು ವರ್ಷಗಳ ಹಿಂದೆ ಅವರ ಬಗ್ಗೆ ಬರೆಯುವ ನಿಶ್ಚಯ ಮಾಡಿದ್ದಾಗಲೂ ಹುಟ್ಟಿತ್ತು. ಪ್ರತ್ಯಕ್ಷ ನೋಡದೇ ಇದ್ದ ವ್ಯಕ್ತಿಯ, ಒಂದೂ ಕಚೇರಿ ಕೇಳದೇ, ಒಂದು ಚೂರೂ ಮುದ್ರಿತ ತಟ್ಟೆ, ಟೇಪು, ಸಿ.ಡಿ. ಇರದೇ ಇದ್ದ ವ್ಯಕ್ತಿಯ ಬಗ್ಗೆ, ಅವರ ಸಂಗೀತದ ಬಗ್ಗೆ ಬರೆಯುವ ಪ್ರಸಂಗ ಬಂದಾಗ, ಇಂತಹ ಅವ್ಯಕ್ತ ಭೀತಿ ನೈಸರ್ಗಿಕವಾದುದು ಎಂದೆನಿಸುತ್ತದೆ.

ಅನ್ನಪೂರ್ಣಾದೇವಿಯವರ ಶಿಷ್ಯವೃಂದ ಅಪಾರ. ಬಹುತೇಕ ಅವರೆಲ್ಲರನ್ನೂ ನಾನು ಕೇಳಿ ಆನಂದಿಸಿದ್ದೇನೆ. ಅವರ ಬಗ್ಗೆ ಬರೆದದ್ದೂ ಇದೆ. ರವಿಶಂಕರರ ಹೆಗಲಿಗೆ ಹೆಗಲು ಹಚ್ಚಿ ಬಾರಿಸುವಂತಹ ಜಾಗತಿಕ ಕೀರ್ತಿಯ ನಿಖಿಲ್ ಬ್ಯಾನರ್ಜಿ, ಅನ್ನಪೂರ್ಣಾದೇವಿಯ ಅಂತರಾಷ್ಟ್ರೀಯ ಕೀರ್ತಿಯ ಕೊಳಲುವಾದಕ ಹರಿಪ್ರಸಾದ್ ಚೌರಾಸಿಯಾ ಇವರ ಶಿಷ್ಯಂದಿರು. ಸಂಧ್ಯಾ ಆಪ್ಟೆ, ಸುಧೀರ ಫಡಕೆ (ಸಿತಾರ್), ಬಸಂತ ಕಾಬ್ರಾ (ಸರೋದ್), ನಿತ್ಯಾನಂದ ಹಳದಿಪೂರ (ಕೊಳಲು), ಡ್ಯಾನಿಯಲ್ ಬ್ರಾಡ್ವೆ (ಸಿತಾರ್) ಹೀಗೆ ಅನೇಕ ಹಿಂದೂಸ್ತಾನಿ ಸಂಗೀತದ ದಿಗ್ಗಜಗಳು ಇವರ ಶಿಷ್ಯರು. ಪ್ರಾಚೀನ ಕಾಲದ ಋಷಿ–ಮುನಿಗಳಂತೆ 'ಸಂಗೀತ ಕಲಿಸುವುದೇ ಒಂದು ವ್ರತ' ಎಂಬ ಭಾವನೆಯಿಂದ ಕಳೆದ 54 ವರ್ಷಗಳಿಂದ ಜನಸಾಮಾನ್ಯ ರಸಿಕರ ಕಣ್ಣಿಗೆ ಬೀಳದೆ, ಒಂದೂ ಸಂಗೀತ ಕಚೇರಿಯನ್ನು ನಡೆಸದೇ ಇರುವ ಏಕಮೇವ ವ್ಯಕ್ತಿ ಅಂದರೆ ಮಾ ಅನ್ನಪೂರ್ಣಾದೇವಿ ಊರ್ಫ್ ರೋಶನಾರಾ ಖಾನ್! ದೇಶ ವಿದೇಶದ ಸಂಗೀತ ರಸಿಕರಲ್ಲಿ, ಸಂಗೀತಜ್ಞರಲ್ಲಿ ಕುತೂಹಲ ಮಿಶ್ರಿತ ಪ್ರಜ್ಞೆಯನ್ನು ಉಂಟುಮಾಡುವಂತಹ ಅದ್ಭುತ ಋಷಿತುಲ್ಯ ವ್ಯಕ್ತಿ ಅನ್ನಪೂರ್ಣಾದೇವಿ.

ಖ್ಯಾತ ನರ್ತಕ ಅಣ್ಣ ಉದಯಶಂಕರರೊಂದಿಗೆ ಚಿಕ್ಕಂದಿನಲ್ಲಿಯೇ ವೇದಿಕೆಯ ಮೇಲೆ ನೃತ್ಯ ಮಾಡುತ್ತಿದ್ದ ರವಿಶಂಕರರಿಗೆ ಸಿತಾರ್‌ದಲ್ಲಿ ಆಸಕ್ತಿ ಹುಟ್ಟಿತು. 1935ರಲ್ಲಿ ಉದಯಶಂಕರ ತಮ್ಮ ಗ್ರೂಪಿನ ಸಂಗೀತದ ಭಾರ ಹೊತ್ತ ಬಾಬಾ ಅಲ್ಲಾವುದ್ದೀನ ಖಾನರನ್ನು ಸಂಪರ್ಕಿಸಿ ರವಿಶಂಕರರನ್ನು ಮಧ್ಯಪ್ರದೇಶದ ಮೈಹರ್ ಸಂಸ್ಥಾನಕ್ಕೆ ಸಿತಾರ್ ಕಲಿಯಲು ಕಳಿಸಿಕೊಟ್ಟರು. ಆಗ ಅನ್ನಪೂರ್ಣೆಗೆ 9ವರ್ಷ. ರವಿ ಆರು ವರ್ಷ ದೊಡ್ಡವ. ಅಲ್ಲಾ ಉದ್ದೀನರ ಮಗ ಅಕಬರ್‌ನ ಪ್ರಾಯವೂ ಅಷ್ಟೇ. ಶಹನಾಯಿ, ವಯೊಲಿನ್, ಸರೋದ್, ಸಿತಾರ್ ಇಂತಹ ವಾದ್ಯಗಳನ್ನು ಲೀಲಾಜಾಲವಾಗಿ ನುಡಿಸುತ್ತಿದ್ದ ಅಲ್ಲಾ ಉದ್ದೀನ್ ಬಾಬಾರ ಬಳಿ ಬಿಸ್ಮಿಲ್ಲಾ, ಪನ್ನಾಲಾಲ್ ಘೋಷ್ ಇವರೂ ತಮ್ಮ ತಮ್ಮ ವಾದ್ಯ ಕಲಿಯಲು ಬರುತ್ತಿದ್ದರು. ಮೈಹರ್ ಸಂಸ್ಥಾನ ಹಿಂದುಸ್ತಾನೀ ಸಂಗೀತದ ಶ್ರದ್ಧಾಸ್ಥಾನವಾದುದು ಬಾಬಾರಿಂದಲೇ.

ಅವರ ಕೊನೆಯ ಶಿಷ್ಯ ತಿವಾರಿ ಸಿತಾರ್ ಹೊತ್ತುಕೊಂಡು ಸತನಾ ಊರಿಗೆ ಬಂದು ಒಂದು ತಾಸು ಸಿತಾರ್ ನುಡಿಸಿದ್ದೂ ಕೇಳಿದ್ದೇನೆ. ಅನ್ನಪೂರ್ಣೆ ರವಿಶಂಕರರನ್ನು ವರಿಸಿದಾಗ ಆಕೆಗೆ 15; ಅವರಿಗೆ 21. 'ಅನ್ನಪೂರ್ಣೆ, ಸದಾಪೂರ್ಣೆ 'ರವಿ'ಶಂಕರ ಪ್ರಾಣವಲ್ಲಭೆ, ಆದ ವರ್ಷದಲ್ಲಿಯೇ ಶುಭೇಂದ್ರ ಹುಟ್ಟಿದ. ಚಿಕ್ಕದಾದ ಚೊಕ್ಕ ಸಂಸಾರ ಮೈಹರಿನಲ್ಲಿಯೇ ತಳ ಊರಿತು. ಅನ್ನಪೂರ್ಣೆ, ರವಿ ಹಾಗೂ ಅಲಿ ಅಕಬರ್ ಅವರ ಪರಿಶ್ರಮ, ಅದ್ವಿತೀಯತೆ ಮತ್ತು ಪ್ರತಿಭೆ ಮೈಹರ್ ಊರಿನ ನಾಲ್ಕೂ ದಿಕ್ಕಿಗೆ ಹರಡಿತು. 1942ರಿಂದ ಸಾಧಾರಣ 10–15 ವರ್ಷ ರವಿಶಂಕರ ಮತ್ತು ಅನ್ನಪೂರ್ಣೆಯರು ಸಿತಾರ್ ಹಾಗೂ ಸುರಬಹಾರ ವಾದ್ಯಗಳ 'ಜುಗಲಬಂದಿ' ಕಾರ್ಯಕ್ರಮಗಳನ್ನು ಢಾಕಾ, ಕಲಕತ್ತೆ, ಬರದ್ವಾನ್, ಪಾಟಣಾದಲ್ಲಿ ಮಾಡಿದರು. 1950–52ರಲ್ಲಿ ಮುಂಬಯಿ, ದೆಹಲಿ, ಪುಣೆಯಲ್ಲಿಯೂ ಕಾರ್ಯಕ್ರಮಗಳಾದವು. ಇವುಗಳೆಲ್ಲ ರಸಿಕರನ್ನು ಮಂತ್ರಮುಗ್ಧ ಮಾಡಿದ್ದರೆ ಆಶ್ಚರ್ಯವಿಲ್ಲ.

ಅನ್ನಪೂರ್ಣಾದೇವಿಯವರು ಪರಿಣತಿಗೊಳಿಸಿದ ಸುರಬಹಾರ ಕಾಣಲು ಸಿತಾರ್‌ದಂತೆಯೇ ಇದ್ದರೂ, ಇದರ ಗಾತ್ರ ದೊಡ್ಡದು. ನುಡಿಸುವ ಬಗೆ ಕೂಡ ಸಿತಾರ್ ದಂತೆಯೇ. ಅದರ ನಡಿಗೆ ಸ್ವಲ್ಪ ಧೀರ ಗಂಭೀರ. ಮಂದ್ರ ಸಪ್ತಕದಲ್ಲಿಯ ಆಲಾಪದ ಝೇಂಕಾರ ಅಲೆ-ಅಲೆಗಳನ್ನು ಹುಟ್ಟಿಸುತ್ತದೆ ಮತ್ತು ತಂತಿ ಎಳೆದು ಮೀಟಿದಾಗ ಉತ್ಪನ್ನವಾದ ಧ್ವನಿಯ ಚೆಲುವೇ ಭಿನ್ನ. ಸರಿಗಮ, ಸುರಬಹಾರದ ಮೇಲೆ ನುಡಿಸಿ ತ್ವರಿತವಾಗಿ ಸಿತಾರ್‌ದಲ್ಲಿಯೂ ಅದೇ ಪ್ರಕಾರದ, ಅದೇ ಶ್ರುತಿಯ ಸರಿಗಮ ನುಡಿಸಿದರೆ, ಎರಡು ಭಿನ್ನ ಧ್ವನಿಗಳು ಜೋಡಿಯಲ್ಲಿ ಹಾಡಿದ ಆಭಾಸ ನಿರ್ಮಾಣವಾಗುತ್ತದೆ. ಬಾಬಾ ಅಲ್ಲಾವುದ್ದೀನರ ಪ್ರಯೋಗಶೀಲತೆಯಲ್ಲಿ, ವಾದ್ಯಗಳು ಹುಟ್ಟಿಸಿದ ಧ್ವನಿಗಳ ಗುಣಗ್ರಾಹಕತೆ, ಒಂದು ಅದ್ವಿತೀಯ ಸ್ವರಮೇಳದ ರಚನೆಯಲ್ಲಿ ಪೂರ್ಣತೆ ಹೊಂದಿದ್ದನ್ನು ಕಾಣುತ್ತೇವೆ. ಮತ್ತೊಂದು ದೃಶ್ಯವನ್ನು ಕಣ್ಮುಂದೆ ತನ್ನಿ! ಧೀರ ಗಂಭೀರ ಸ್ವರಗಳ ವಿನ್ಯಾಸ ಮೂಡುವುದು ಓರ್ವ ಯುವತಿಯ ಸುರಬಹಾರ ನುಡಿಸುವ ಪ್ರಕ್ರಿಯೆಯಿಂದ. ಇದಕ್ಕೆ ಪೂರಕವಾಗಿ ಮತ್ತೊಬ್ಬ ಯುವಕನ ಸ್ವಲ್ಪ ಮೃದುವಾದ, ಸ್ತ್ರೀ ಸಹಜ ಆಹ್ಲಾದಕರ ಸ್ವರವಿನ್ಯಾಸ! ಸಿತಾರ್‌ದಲ್ಲಿ, ಓಹ್! ಸೋನೆಪೆ ಸುಹಾಗಾ!

ವಿಮರ್ಶಕರ ಪ್ರತಿಕ್ರಿಯೆ, ರಸಿಕಶ್ರೋತೃಗಳ ಚಪ್ಪಾಳೆ ಮಿಶ್ರಿತ ಸ್ವೀಕೃತಿ, ಇವೆಲ್ಲ ಕ್ರಮೇಣ ಅನ್ನಪೂರ್ಣೆಯ ವಾದನದತ್ತ ಮಣಿದದ್ದು, ಬಾಗಿದ್ದು, ಪ್ರಸಿದ್ಧಿಪ್ರಿಯ ರವಿಶಂಕರರಿಗೆ ಸೇರದೇ ಇದ್ದಿರಬಹುದು. 1991ರಲ್ಲಿ ಗಾಂಧಿವಾದೀ ಪತ್ರಕರ್ತ, ಸಂಗೀತಜ್ಞ, ರಾಜೀವ ವೋರಾ ಹೇಳಿದ ಮಾತನ್ನು ಇಲ್ಲಿ ನೆನಪಿಸುತ್ತೇನೆ: 'ಟೆಲಿಗ್ರಾಫ್ ಪತ್ರಿಕೆಯಲ್ಲಿ ಅನ್ನಪೂರ್ಣಾದೇವಿಗೆ 10 ಸಾಲು ಮೀಸಲಾಗಿದ್ದರೆ, ರವಿಜಿಗೆ ಕೇವಲ ಎರಡು ..' ಇಲ್ಲಿಯೇ ಅನ್ನಪೂರ್ಣಾದೇವಿ ಮತ್ತು ರವಿಶಂಕರ್ ಇವರ ಜುಗಲ್‌ಬಂದಿ ಕಚೇರಿ ಕೇಳಿದವರ ಮಾತುಗಳನ್ನು ಉದ್ಧರಿಸುತ್ತೇನೆ. ಇಂದೂರ್ ಪರಂಪರೆಯ ಖ್ಯಾತ ಗಾಯಕ ಉಸ್ತಾದ್ ಅಮೀರ್ ಖಾನರು 'ರವಿಶಂಕರರಲ್ಲಿ ಬಾಬಾ 40% ಇದ್ದರೆ, ಅಲಿ ಅಕಬರ್ ಖಾನರಲ್ಲಿ 60% ಮತ್ತು ಅನ್ನಪೂರ್ಣೆಯಲ್ಲಿ 80% ಇದ್ದಾರೆ'. ಖುದ್ದ ಅಣ್ಣ ಅಲಿ ಅಕಬರ್ ಒಮ್ಮೆ ಹೇಳಿದ ಮಾತು, ಪ್ರೆಸ್ಸಿನ ಜನ ಬಹುತೇಕವಾಗಿ ಉಲ್ಲೇಖಿಸುವ ಮಾತು: 'ನನ್ನನ್ನು ಮತ್ತು ರವಿಯನ್ನು ಒಂದೆಡೆ ಹಾಕಿ ತಂಗಿ ಅನ್ನಪೂರ್ಣೆ ಮತ್ತೊಂದೆಡೆ ಹಾಕಿ ತೂಕಮಾಡಿದರೆ, ಅವಳದೇ ತೂಕ ಜಾಸ್ತಿ'. ಮತ್ತೇನು ಬೇಕು ಹೇಳಿ!

ಮತ್ತೊಂದು ವಿಷಯ ಇಲ್ಲಿ ಬರೆಯಲೇ ಬೇಕು. ರವಿಶಂಕರರ ಆತ್ಮಚರಿತ್ರೆ ಓದಿದವರಿಗೆ ಈ ವಿಷಯ ಹೊಸದು ಅಲ್ಲ. ಸ್ವಯಂಭೂ ಪ್ರತಿಭೆಯ ರವಿಶಂಕರರಲ್ಲಿ ವಿಷಯಲೋಲುಪತೆ, ಲಂಪಟತೆಯೂ ಚೆನ್ನಾಗಿ ಹಾಸುಹೊಕ್ಕಿದ್ದವು. ಮದುವೆಯಾದ ಎರಡೇ ವರ್ಷಗಳಲ್ಲಿ ಅನ್ನಪೂರ್ಣೆಗೆ ತನ್ನ ಗಂಡ, ರಾಜೇಂದ್ರಶಂಕರನ ಹೆಂಡತಿ ಲಕ್ಷ್ಮೀಶಂಕರಳ (ಈಕೆ ಉಭಯಗಾನ ವಿಶಾರದೆ) ಭಗಿನಿ, ಕಮಲಾಳಲ್ಲಿ ಆಸಕ್ತಿ ಹೊಂದಿದ್ದು ಕಾಣಿಸಿತು. ಆಗ ತಾನೆ ಜುಗಲಬಂದಿ ಕಾರ್ಯಕ್ರಮಗಳಿಗೆ ಪೂರ್ಣವಿರಾಮ ಹಾಕಿದ ಶಂಕರ ದಂಪತಿಗಳು ಮುಂಬಯಿಯ ಸೋಲಿ ಬಾಟ್ಲಿವಾಲಾ ಎಂಬ ಪಾರ್ಸಿ ಉದ್ಯೋಗಸ್ಥರ ಮಧ್ಯಸ್ಥಿಕೆಯಿಂದ ವಾರ್ಡೆನ್ ರೋಡ್‌ನಲ್ಲಿಯ ಎಂಟು ಅಂತಸ್ತಿನ

ಕಟ್ಟಡದಲ್ಲಿ ಆರನೇ ಅಂತಸ್ತಿನಲ್ಲಿಯ ಫ್ಲ್ಯಾಟ್‌ದಲ್ಲಿ ಬಿಡಾರ ಹೂಡಿದರು (1961). ಜೊತೆಗೆ ಕಮಲಾ! ಆಗ ಶುಭೇಂದ್ರ ಶಂಕರ್ 20ರ ಯುವಕ. ಆತನದು ಸಿತಾರ್‌ದಲ್ಲಿ ಅದ್ಭುತ ಪ್ರಗತಿಯಾಗಿತ್ತು. ಆದರೆ ತಾಯಿ ಹಾಕಿಕೊಟ್ಟ ಲಕ್ಷ್ಮಣರೇಖೆಯ ಉಲ್ಲಂಘನೆ ಇನ್ನೂ ಆಗಿರಲಿಲ್ಲ. ಅಂದರೆ ಮೆಹಫಿಲ್ಲು ರೂಡಿಸಿರಲಿಲ್ಲ. ರವಿಶಂಕರರು ಮುಂಬಯಿ, ದೆಹಲಿ ರೇಡಿಯೋದಲ್ಲಿ ಸಂಯೋಜಕರೆಂದೂ, ಅತ್ಯಂತ ಕುಶಲ ಸಿತಾರ್‌ವಾದಕರೆಂದೂ, ಅನ್ನಪೂರ್ಣಾ, ಅಲಿ ಅಕಬರ್‌ರೊಡನೆಯ ಜುಗಲಬಂದಿಯ ಸಮರ್ಥ ಜೊತೆಗಾರರೆಂದು ಪ್ರಸಿದ್ಧಿವಲಯದಲ್ಲಿದ್ದರು. ಸಮುದ್ರದಾಚೆಯಿಂದ ಆಗಿಂದಾಗ ಕೇಳಬರುವ ಕರೆಗೆ 'ಓ'ಗೊಟ್ಟು ಅಲಿ ಅಕಬರ್ ಖಾನ್, ರವಿಶಂಕರ ಕ್ರಮಶಃ ಪಶ್ಚಿಮದೇಶಗಳಿಗೆ ಸ್ಥಳಾಂತರಿಸಿದರು. ರವಿಶಂಕರರ ಜೊತೆಗೆ 'ಬೇಡ, ಬೇಡ'ವೆಂದರೂ ಕೇಳದ ಮಗ ಶುಭೋಶಂಕರ್ ಹಾಗೂ ಅನೇಕರ ತರುಣಿವೃಂದವೂ ಹೊರಟಿತು? ರವಿಶಂಕರ್ ಮತ್ತು ಅನ್ನಪೂರ್ಣಾದೇವಿಯವರ ವಿವಾಹ ವಿಚ್ಛೇದನವಾದುದೂ ಅದೇ ಸಮಯದಲ್ಲಿ. ಅನ್ನಪೂರ್ಣೆ ಕ್ರಮಶಃ ಏಕಾಂತವಾಸ ಪ್ರವೇಶಿಸಿದರು. ಆದರೆ ವಿದ್ಯಾದಾನ ನಡೆದೇ ಇತ್ತು. ವಾಸ್ತವ್ಯ, ಅದೇ ವಾರ್ಡೆನ್ ರೋಡ್‌ನ 'ಜಲದರ್ಶನ'ದ ಆರನೇ ಅಂತಸ್ತು. ಕಲಿಸುವ ವೇಳೆ ರಾತ್ರಿ 10ರಿಂದ ಮುಂಜಾನೆ 3 ಗಂಟೆಯ ತನಕ. ಇಬ್ಬರು ಶಿಷ್ಯರಿಗೆ ವಾಸ್ತವ್ಯ ಅಲ್ಲಿಯೇ. ಇನ್ನಿಬ್ಬರು ರೂಮ್ ಮಾಡಿಕೊಂಡು ರಾತ್ರಿಯ ಎಂಟರೊಳಗೆ ಹಾಜರಿರಬೇಕು. ಅನೇಕ ವರ್ಷಗಳ ಬಳಿಕ ಅವರಿಗಿಂತ 13 ವರ್ಷ ಕಿರಿಯನಾದ ಋಷಿಕುಮಾರ ಎಂಬ ಶಿಷ್ಯನನ್ನೇ ಅನ್ನಪೂರ್ಣಾದೇವಿ ವಿವಾಹ ಮಾಡಿಕೊಂಡರು. ಅಲಿ ಅಕಬರ್ ಮತ್ತು ರವಿಶಂಕರ ಪಶ್ಚಿಮಕ್ಕೆ ಹೋದನಂತರ ಬಾಬಾರ 'ಸಂಗೀತ ಕಲಿಸುವವರು ಹಿಂದಿನ ಕಾಲದ ಋಷಿಮುನಿಗಳಂತೆ ಪ್ರಸಿದ್ಧಿ ಪ್ರಸಿದ್ಧಿವಿಮುಖರಾಗಿರಬೇಕು' ಎಂಬ ಅವರ ಹೇಳಿಕೆಯನ್ನು ಬಂಗಾಲೀ ಭಾಷೆಯ ಪತ್ರಿಕೆ 'ದಿನಮಾನ'ದ ಸಂದರ್ಶನದಲ್ಲಿ ಪ್ರಕಟಿಸಿತು. ಈ ಮಾತನ್ನು ಗುರು ಅನ್ನಪೂರ್ಣಾದೇವಿ ಅಕ್ಷರಶಃ ಪಾಲಿಸುತ್ತಿದ್ದದ್ದು ಹಿಂದುಸ್ತಾನೀ ಸಂಗೀತದ ಚರಿತ್ರೆಯ ಅಭ್ಯಾಸಕರಿಗೆ ಗೊತ್ತಿದ್ದ ವಿಷಯವೇ!

ಅನ್ನಪೂರ್ಣಾದೇವಿಯವರ ಜೀವಮಾನದಲ್ಲಿ ಅನೇಕ ಆಘಾತಗಳು ಬಂದವು. ಮೊದಲನೆಯದು, ಪ್ರಿಯಶಿಷ್ಯ ನಿಖಿಲ ಬ್ಯಾನರ್ಜಿಯವರ ಸಾವು (1986). ಬಾಬಾರವರೇ ಅನ್ನಪೂರ್ಣಾದೇವಿಗೆ ನಿಖಿಲ ಬ್ಯಾನರ್ಜಿಯನ್ನು ಶಿಷ್ಯ ಸ್ವೀಕಾರಕ್ಕೆ ಒಪ್ಪಿಸಿದ್ದು (1955). ಎರಡನೆಯದು ರವಿಶಂಕರರ ಎರಡು ಆತ್ಮಕತೆಗಳ ಪ್ರಕಟಣೆ 1969ರಲ್ಲಿ 'My life; My music' ಮತ್ತು 30 ವರ್ಷಗಳ ನಂತರ (1994ರಲ್ಲಿ) ಮತ್ತೊಂದು 'Ragamala'. ಮೂರನೆಯ ಆಘಾತ ಪಂ. ರವಿಶಂಕರರ ಸಾವು (2012) ಹಾಗೂ ಕೊನೆಯದು, ದೇವಿಯವರ ಎರಡನೇ ಪತಿ ಋಷಿಕುಮಾರ ಪಂಡ್ಯ ಅವರ ಅಗಲಿಕೆ (2014). ಇವುಗಳಲ್ಲಿ ನಾನು ಮಗ ಶುಭೇಂದ್ರನ ಸಾವು ಎಣಿಸಲಿಲ್ಲ, ಕಾರಣ, ಮೊದಲೇ ಶುಭೇಂದ್ರ ತಾಯಿ ಹೇಳಿದ್ದನ್ನು ಕೇಳದೇ ಊರೂರು ತಿರುಗುವ ರವಿಶಂಕರ ಎಂಬ 'ಮೃಗಜಲ'ದ ಹಿಂದೆ ಓಡಿಹೋದದ್ದು. ತನ್ನ ಡೈವೋರ್ಸ್ ವಿಷಯದ ಕುರಿತು ರವಿಶಂಕರರು ತಮ್ಮ ಆತ್ಮಕತೆಯಲ್ಲಿ ಬರೆದ ವರ್ಣರಂಜಿತ ಮಾಹಿತಿಯನ್ನು ಸರಿಪಡಿಸಲು 'Unheard Melody: Annapurna Devi' ಎಂಬ ಪುಸ್ತಕವನ್ನು ಸ್ವಪನಕುಮಾರ್

ಬಂಡೊಪಾಧ್ಯಾಯ್ ಅವರು ದೇವಿಯವರ ಶಿಷ್ಯರಿಂದ ಮಾಹಿತಿ ಕಲೆ ಹಾಕಿ ಬರೆದು 2005ರಲ್ಲಿ ಪ್ರಕಟಿಸಿದರು. ಇದರಿಂದ ಅನ್ನಪೂರ್ಣೆಯವರಿಗೆ ತಾಪತ್ರಯ ಇನ್ನೂ ಹೆಚ್ಚಾಯಿತು ಎಂದು ಅವರ ಶಿಷ್ಯರೊಬ್ಬರು ನನ್ನಲ್ಲಿ ಹೇಳಿದ್ದುಂಟು. ಋಷಿಕುಮಾರರ ಅಗಲಿಕೆಯ ನಂತರ ಈಗ ಅನ್ನಪೂರ್ಣಾದೇವಿ ಹಾಸಿಗೆ ಹಿಡಿದಿದ್ದಾರೆ. ರಾತ್ರಿಯ ಸಲುವಾಗಿ ಸ್ಪೆಷಲ್ ನರ್ಸ ಇಟ್ಟಿದ್ದಾರೆ. ಸೋಮವಾರದಿಂದ ಶುಕ್ರವಾರದ ತನಕ ಬಾನ್ಸುರಿ ವಾದಕ ನಿತ್ಯಾನಂದ ಹಳದಿಪೂರ, ಉಳಿದ ದಿನ ಸುರೇಶ ವ್ಯಾಸ ನೋಡಿಕೊಳ್ಳುತ್ತಾರೆ.

ಬಾಬಾ ಅಲ್ಲಾವುದ್ದೀನರ 42ನೆಯ ಸಂಸ್ಮರಣೆ ಕರ್ನಾಟಕ ಸಂಘದಲ್ಲಿ ಜೂನ್ ತಿಂಗಳ ಮೊದಲನೇ ಶನಿವಾರ ಜರುಗಿತು. ಎಂದಿನಂತೆ ಈ ವರ್ಷವೂ ದೇವಿ ಬರಲಿಲ್ಲ. ಈ ತನಕ ಪದ್ಮವಿಭೂಷಣ ದೇಶಿಕೋತ್ತಮ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಹೀಗೆ ಅನೇಕ ಪ್ರಶಸ್ತಿಗಳು ಅವರನ್ನೇ ಅರಸಿಕೊಂಡು ಬಂದಿವೆ. ಎಂದಿನಂತೆ ಈಗಲೂ ಅನ್ನಪೂರ್ಣಾದೇವಿ ಸ್ಥಿತಪ್ರಜ್ಞೆ! ಅಲೌಕಿಕ ವ್ಯಕ್ತಿಮತ್ವದ ಅನ್ನಪೂರ್ಣಾದೇವಿ! ಸುರಬಹಾರ ವಾದ್ಯ ನುಡಿಸುವ ಏಕವೇಮಾದ್ವಿತೀಯ ಕಲಾವಿದೆ!

*****

7.18

ಭಾಗ್ಯದ ಲಕ್ಷ್ಮೀಯ ಜಯವಂತಿ ಹಿರೇಬೆಟ್(1927 ...)

ಆ ವರ್ಷ ಗಣೇಶ ಚತುರ್ಥಿಗೆ ಕುಮಟೆಗೆ ಹೋಗಲಿಲ್ಲ. ಪ್ರತಿ ವರ್ಷ ನಮ್ಮ ಬುರ್ಡೆ ಕುಟುಂಬದ ಗಣಪತಿ ಊರಿನ ಮನೆಯಲ್ಲಿ ವಿರಾಜಮಾನನಾಗುತ್ತಿದ್ದರೂ, 'ಬೆಕ್ಕಿನ ಬಿಡಾರ ಬೇರೆ' ಎಂಬ ತತ್ವಕ್ಕೆ ಅನುಸರಿಸಿ, ಪುಣೆಯಲ್ಲಿದ್ದ ಮಗ ಸೊಸೆ ಕಳೆದ 15 ವರ್ಷಗಳಿಂದ ಗಣಪತಿ ತಂದು, ಪ್ರತಿಷ್ಠಾಪನೆ ಮಾಡಿಸಿ ಪೂಜಿಸುತ್ತಾರೆ, ಆ ಕಾರಣ ಸಪತ್ನೀಕವಾಗಿ ಪುಣೆಗೆ ಹೋದೆವು. ಮತ್ತೊಂದು ಮುಖ್ಯ ಕಾರಣವೆಂದರೆ, ಪುಣೆಯಲ್ಲಿಯ 'ಅಥಶ್ರೀ' ಎಂಬ ವೃದ್ಧಾಶ್ರಮದಲ್ಲಿ ವಾಸಿಸುತ್ತಿರುವ 'ಭಾಗ್ಯದ ಲಕ್ಷ್ಮೀ ಬಾರಮ್ಮ' ಹಾಡಿದ ಪ್ರಸಿದ್ಧ ಗಾಯಕಿ ಜಯವಂತಿ ಹಿರೇಬೆಟ್ ಅವರನ್ನು ಸಂದರ್ಶಿಸುವದು.

ಪುಣೆ ತಲುಪಿದ ಮಾರನೇ ದಿನವೇ ನಾನು ಜಯವಂತಿಯವರಿಗೆ ಫೋನಿಸಿದ್ದೆ. "ಖಂಡಿತಾ ಬನ್ನಿ! ನನ್ನೊಂದಿಗೆ ಕ್ಯಾಂಟಿನಿನಲ್ಲಿ ಊಟಕ್ಕೆ ಕಂಪನಿ ಕೊಡಬೇಕು. ಹಾಗಾದರೆ ನಾಲ್ಕು ತಾಸು ಪ್ರಶಾಂತವಾಗಿ ಕಳೆಯಬಹುದಲ್ಲವೇ?" ಅಂದರು.

"ನನ್ನ ಜೊತೆ ನನ್ನ ಮಗಳಿದ್ದಾಳೆ. ಮತ್ತೊಬ್ಬರು ನಿಮ್ಮ ಪುತ್ತೂರಿನವರೇ! ಹೀಗಾಗಿ ಊಟ ಗೀಟ ಬೇಡ. ನಾವು ಭೆಟ್ಟಿ ಮಾಡಿ ಹಾಗೇ ಹೋಗ್ತೇವೆ." ಎಂದೆ.

"ಹಾಗಿದ್ದ ಪಕ್ಷಕ್ಕೆ ನೀವು ಬರಬೇಡಿ! ಊಟಕ್ಕೆ ನಿಲ್ಲುವದಾದರೆ ನಿಮಗೆ ಒಳಗೆ ಬರಲು ಪರ್ಮಿಶನ್!" ಎಂದರು ನಗುತ್ತ. ಮಾತು ಮಾತಿಗೆ ನಗಿಸುವ ಕಲೆ ಅವರ ತಂದೆಯಿಂದಲೇ ಬಂದಿರಬೇಕು ಎಂದು ಅನಿಸಿತ್ತು.

ಜಯವಂತಿದೇವಿ ದಿನಕರ ಹಿರೇಬೆಟ್ ಅವರ ಪೂರ್ವಾಶ್ರಮದ ಹೆಸರು ಜಯವಂತಿ ದೇವಿ ರಮಾನಂದ ಪಡುಕೋಣೆ. ಹುಟ್ಟಿ ಬೆಳೆದದ್ದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ. ಅಚ್ಚ ಕನ್ನಡತಿ, ತಂದೆ ಪಡುಕೋಣೆ ರಮಾನಂದರಾಯರು, ಕನ್ನಡ ಭಾಷೆಯಲ್ಲಿ ಹಾಸ್ಯ ಪ್ರಬಂಧ ಪದ್ಧತಿಯನ್ನು ಪ್ರಾರಂಭಿಸಿದವರು. ಜಯವಂತಿಯವರ ಚಿಕ್ಕಪ್ಪ ಪ್ರಭಾಕರರಾಯರು ಒಳ್ಳೆಯ ಹಾಡುಗಾರರು, ತಬಲಾಪಟು. ಅವರ ಮನೆಯಲ್ಲಿ ಸಾಹಿತ್ಯ, ಸಂಗೀತ, ನೃತ್ಯದ ಬಾಲಾಮೃತ ಚಿಕ್ಕಂದಿನಿಂದ ಜಯವಂತಿಯವರಿಗೆ ಲಭಿಸಿತ್ತು. "ಚಿಕ್ಕಪ್ಪನಿಂದಲೇ ನಾನು ಹಾಡುಗಾರ್ತಿಯಾದೆ" ಅನ್ನುತ್ತಾರೆ ಜಯವಂತಿಯವರು ಮುಗುಳ್ನಗೆಯೊಂದಿಗೆ.

ಸಂಗೀತ ಕಲಿತದ್ದು ತಾಯಿ ಸೀತಾದೇವಿಯವರಿಂದ. ಬಳಿಕ ಮದ್ರಾಸಿನಲ್ಲಿ ಬಿ.ಜಿ ರಾಮನಾಥ ಅವರಿಂದ ಕರ್ನಾಟಕಿ ಪದ್ಧತಿಯ ಶಿಕ್ಷಣ. ದಿನಕರರಾಯರೊಂದಿಗೆ ಮದುವೆಯ ನಂತರ ಮಹಾರಾಷ್ಟ್ರದ ಮುಂಬಯಿ ಪುಣೆಯಲ್ಲಿ ಅವರ ವಾಸ್ತವ್ಯ. ಮುಂಬಯಿ ಕರ್ನಾಟಕ ಸಂಘಕ್ಕೆ ಮುಂಜಾನೆಯ ಕಲಾಭಾರತಿಯ ಸಂಗೀತ ಕಾರ್ಯಕ್ರಮಕ್ಕೆ ಬರುತ್ತಿದ್ದ ಖ್ಯಾತ ಸುಗಮ ಸಂಗೀತ ದಿಗ್ದರ್ಶಕ ಯಶವಂತ ದೇವ್ ಅವರಲ್ಲಿ ಮರಾಠಿ ಮತ್ತು ಹಿಂದಿ ಸುಗಮ ಸಂಗೀತದ ಅಭ್ಯಾಸವನ್ನು 1950–60ರಲ್ಲಿ ಮಾಡುತ್ತಿದ್ದರು. ಬಾಬನರಾವ್ ನಾವಡಿಕರ್ ಎಂಬ ಖ್ಯಾತ ಸಂಗೀತ ದಿಗ್ದರ್ಶಕರಲ್ಲಿಯೂ ಪಾಠ ಗೀಚಿದ್ದು ಇದೆ. ಇಷ್ಟೇ ಅಲ್ಲ, ಅವರು ಕಲಿಸಿದ ಮತ್ತು ಗೀತ ರಾಮಾಯಣ ಖ್ಯಾತಿಯ ಗ.ದಿ. ಮಾಡಗೂಳಕರ್ ಬರೆದ 'ಸಾಂಗ್ ಲಕ್ಷ್ಮಣ ಸಾಂಗ್' ಹಾಡನ್ನು ಜಯವಂತಿಯವರು ಹಾಡಿ ತೋರಿಸಿದರು.

"ಈ ಹಾಡು ಗೀತಾದತ್ ಹಾಡಿದ್ದಾರೆ" ನನ್ನ ಮಗಳು ಅಪರ್ಣ ಅಂದಳು. "ಹೌದಮ್ಮಾ, ಅದು ನಿಜ. ನನ್ನೊಟ್ಟಿಗೆ ಗೀತಾ ದತ್ ಪಡುಕೋಣೆಯವರು ಎಳ್ಳಷ್ಟೂ 'ಈಗೋ' ಇಲ್ಲದೇ ಬಬನರಾವರಲ್ಲಿ ಮರಾಠಿ ಹಾಡು ಕಲಿಯಲು ಬರುತ್ತಿದ್ದರು. ಆಗೆಲ್ಲ ಹಾಡು ನಾನೇ ಹಾಡುತ್ತಿದ್ದೆ. ಎಲ್ಲಾ ರಿಹರ್ಸಲ್ ಮತ್ತು ಸಂಗೀತ ನಿಯೋಜನೆ ಆದ ಮೇಲೆ ಎಚ್‌ಎಮ್‌ವಿಯವರು ಗೀತಾ ಅವರನ್ನು ಬಬನರಾವ್ ಜೊತೆ ನೋಡಿದ ಕೂಡಲೇ, ನನಗೆಂದೇ ನಿಶ್ಚಿತವಾದ ಆ ಹಾಡನ್ನು ಅವರಿಂದಲೇ ಹಾಡಿಸಿದರು! ಗೀತಾ ದತ್ತರ 'ಸ್ಟಾರ್ ವ್ಯಾಲ್ಯು' ಗೊತ್ತಿತ್ತಲ್ಲ ಅವರಿಗೆ, ಅವರಿಂದಲೇ ಹಾಡಿಸಿದರು! ಗೀತಾ ಕೊನೆಯವರೆಗೂ 'ಈ ಹಾಡು ಜಯವಂತಿಯದು. ನಾನು ಹಾಡಲ್ಲ' ಎಂದೇ ಹೇಳುತ್ತಿದ್ದರಂತೆ. ಕೊನೆಗೆ ರೆಕಾರ್ಡಿಂಗ್ ಮುಗಿಸಿ ಬಂದ ಮೇಲೆ ನನ್ನೊಂದಿಗೆ ಒಂದು ತರದ ಪಶ್ಚಾತ್ತಾಪದ ಕಣ್ಣೀರು ಹಾಕಿದ್ದೂ ಉಂಟು. ತುಂಬಾ ಹೃದಯವಂತೆ.

"ನಿಮಗೆ ಬೇಸರವಾಗಲಿಲ್ಲವೇ?

"ಆಗದೇ ಇರುತ್ತದೆಯೇ? ಆದರೂ ಹಿನ್ನೆಲೆಯ ಗಾಯಕಿಯರಿಗೆ ಇದೊಂದು ಶಾಪ! ಹಾಡಿನ ರಿಹರ್ಸಲ್ ಕೊನೆಯವರೆಗೂ ಒಬ್ಬರಿಂದ. ರೆಕಾರ್ಡಿಂಗ್ ಹೊತ್ತಿಗೆ ಹೆಸರಾಂತ ಲತಾ ಮಂಗೇಶಕರ್, ಆಶಾ ಇವರೆಲ್ಲ ಬಂದು ಫೈನಲ್ ಹಾಡುತ್ತಾರೆ. ನಿನಗೆ ಅನುಪಮಾ ದೇಶಪಾಂಡೆ ಗೊತ್ತಲ್ಲ, ಅವಳು ನನಗೆ ಗೊತ್ತಿದ್ದ ಮಟ್ಟಿಗೆ 50–60 ಹಾಡುಗಳಿಗೆ ಕೊನೆಯ ತನಕ ಸಂಗೀತ ದಿಗ್ದರ್ಶಕರ ಅನುಕೂಲತೆಗಾಗಿ ಹಾಡುತ್ತಿದ್ದುದೂ ಇದೆ! ಒಂದೇ ಒಂದು ಹಾಡು ಅವಳ ಹೆಸರಿನಲ್ಲಿ ಮುದ್ರಿತವಾಯಿತು. ಅದೂ ಆಶಾ ಭೋಸಲೆಯವರ ಕೃಪೆಯಿಂದ. ಈ ಪ್ರಕಾರ ಆಗಲೂ ಇತ್ತು. ಈಗಂತೂ ಮ್ಯೂಸಿಕ್ ಕಂಪೋಸ್ ಮಾಡಿಟ್ಟಿದ್ದ ಮೇಲೆ ಮೈಕನಲ್ಲಿ ಧ್ವನಿ ಇಳಿಸುವದಷ್ಟೆ"ಎಂದರು ಜಯವಂತಿ ನಗುತ್ತಾ.

ಅಥಶ್ರೀ ಪರಿಸರ ಅತ್ಯಂತ ಆಹ್ಲಾದಕರವಾಗಿತು. ಮಳೆಗಾಲದ ನಿಸರ್ಗ ಸಿರಿ ಹಸಿರನ್ನು ಹೊಂದಿತ್ತು. ವಿಶಾಲವಾದ ಕೋಣೆಗಳು, ಪ್ರತ್ಯೇಕ ಫ್ಲಾಟನಲ್ಲಿ ವಯಸ್ಸಾದವರಿಗೆ, ಅಂಗವಿಕಲರಿಗೆ ಬೇಕಾಗುವ ಎಲ್ಲ ಅತ್ಯಾವಶ್ಯಕ ಗ್ಯಾಜೆಟ್ಟುಗಳು (ಉಪರಣಗಳು) ಅಲ್ಲಿದ್ದವು. ಇತ್ತೀಚೆಗೆ ನಿರ್ನಾಮವಾಗುತ್ತಿರುವ ಗುಬ್ಬಚ್ಚಿ, ಮೈನಾ, ಹಸಿರು ಬಣ್ಣದ ಗಿಳಿಗಳ ಪಡೆ ಅತ್ತಿತ್ತ ಗ್ಯಾಲರಿಯನ್ನು ವ್ಯಾಪಿಸಿ ಹಿರಿಯ ನಾಗರಿಕರೊಂದಿಗೆ ಸ್ನೇಹದ ಪುಕ್ಕ ಚಾಚುತ್ತವೆಯೋ ಎನ್ನುವ ಹಾಗೆ ಹಾರಾಡುತ್ತಿದ್ದವು. ಹಾಗೆಯೇ

ಜಯವಂತಿಯವರು ಮೈನಾಗಳ ಜೊತೆ ಕೊಂಕಣಿಯಲ್ಲಿ, ಕ್ಷೇಮ ಸಮಾಚಾರ ವಿಚಾರಿಸಿ, ಮಾತನಾಡಿಸಿ ಬಂದು ಕುಳಿತಾಗ ನಾವೆಲ್ಲ ಕೆಲ ನಿಮಿಷ ಅವುಗಳ, ಕಿಲಬಿಲ ಶಬ್ದಗಳನ್ನು ಆಲಿಸುತ್ತ ಮೈಮರೆತು ಕುಳಿತದ್ದೂ ಉಂಟು!

“ಮಗು ಸ್ವಲ್ಪ ಈ ಡಿವಿಡಿ ಹಾಕಮ್ಮ. ಇಂತಹ ಕೆಲಸಕ್ಕೆ ನಾವು ರಿಸೆಪ್ಷನ್‌ಗೆ ಫೋನ್ ಮಾಡಬೇಕು. ನಮ್ಮವರೇ ಕೂತಾಗ ಬೇರೆಯವರು ಯಾಕೆ?” ಜಯವಂತಿಯವರು ನನ್ನ ಮಗಳಿಗೆ ಹೇಳಿದ ಕೂಡಲೇ ನನಗೆ ಥಟ್ಟನೇ ನೆನಪಾಯಿತು.

ಸುಮಾರು 2007–08ರಲ್ಲಿ ನಾನು ಬೆಂಗಳೂರಿಗೆ ಹೋದಾಗ ನನ್ನಕ್ಕ ಜ್ಯೋತ್ಸ್ನಾ ಕಾಮತರಲ್ಲಿ ಇಳಿದುಕೊಂಡಿದ್ದೆ. ಅವರು ಆಕಾಶವಾಣಿಯ ಬೆಂಗಳೂರು ಕೇಂದ್ರದ ನಿವೃತ್ತ ಡೈರೆಕ್ಟರರಾಗಿದ್ದರು. ಜಯವಂತಿಯವರಿಗೆ ಶಿಶುನಾಳ ಷರೀಫರ ಪ್ರಶಸ್ತಿ ಕಳೆದ ವರ್ಷ ಸಿಕ್ಕಿತ್ತು. ಅವರ ಬಗ್ಗೆ ಅಕ್ಕನ ಅಭಿಪ್ರಾಯ ರೆಕಾರ್ಡು ಮಾಡಲು ಬೆಂಗಳೂರು ಆಕಾಶವಾಣಿಯವರು ಬರುವವರಿದ್ದರು. ಅಕ್ಕ ಜ್ಯೊತ್ಸ್ನಾ ತಮ್ಮ ವೃತ್ತಿ ಜೀವನದಲ್ಲಿ ಧಾರವಾಡ, ಮೈಸೂರು, ಮುಂಬಯಿ, ಜೈಪೂರ್, ಕಲಕತ್ತಾ, ಬೆಂಗಳೂರು ಆಕಾಶವಾಣಿಯಲ್ಲಿ ಕಳೆದಿದ್ದರಿಂದ ಅವರಿಗೆ ಕನ್ನಡ ಸುಗಮ ಸಂಗೀತ ಹಾಡುತ್ತಿದ್ದ ಜಯವಂತಿ ಹಿರೇಬೆಟ್ ಅವರು ಪರಿಚಿತರಿದ್ದರು. “ಅವರು ಹಾಡಿದ ಟೇಪ್‌ಗಳು ಧಾರವಾಡ, ಬೆಂಗಳೂರು ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದವು. ಮುಂಬಯಿ ಆಕಾಶವಾಣಿಯಲ್ಲಿಯೂ ಅವರ ಹಿಂದಿ, ಮರಾಠಿಯಲ್ಲಿಯ ಧ್ವನಿಮುದ್ರಿಕೆಗಳು, ಧಾರವಾಡದ ಆಕಾಶವಾಣಿ ಪ್ರಾರಂಭವಾಗುವ ಮೊದಲು, ಧ್ವನಿಮುದ್ರಣ ಪದ್ಧತಿ ಬರುವ ಮೊದಲು, ‘ನೇರ ಪ್ರಸಾರ’ದ (ಲೈವ್ ಬ್ರಾಡ್‌ಕಾಸ್ಟ್) ಪದ್ಧತಿ ಇತ್ತು. ಹೆಚ್ಚಿನ ಹಾಡುಗಳೆಲ್ಲ ಈಗ ಉಳಿದಿಲ್ಲ.” ಎಂದು ರೆಕಾರ್ಡಿಂಗಿಗೆ ಆಕಾಶವಾಣಿಯ ಸಿಬ್ಬಂದಿ ಬಂದಾಗ ಅಕ್ಕ ಹೇಳಿದಳು. “ನನಗೆ ಜಯವಂತಿಯವರು ಗೊತ್ತಿದ್ದರೂ ನಿನಗೆ ಸಂಗೀತದ ಬಗ್ಗೆ ಹೆಚ್ಚು ಗೊತ್ತು ನೀನೆ ಅವರ ಬಗ್ಗೆ ಹೇಳು” ಎಂದು ಒತ್ತಾಯಿಸಿದಳು. ಸರಿ, ನನ್ನ ಹಸಿರು ಬಣ್ಣದ ಬ್ರ್ಯಾಂಡ್ ಕುರ್ತಾ ಹಾಕಿ ದಿಗ್ದರ್ಶಕರು ತೋರಿಸಿದ ಖುರ್ಚಿಯಲ್ಲಿ ವಿರಾಜಮಾನನಾದೆ.

ಪುಣ್ಯಕ್ಕೆ ಜಯವಂತಿಯವರ ದುರ್ಗಾರಾಗದಲ್ಲಿ ಹಾಡಿದ, ‘ಭಾಗ್ಯದ ಲಕ್ಷ್ಮೀ ಬಾರಮ್ಮಾ’, ‘ತಲ್ಲಣಿಸಿದರೋ’ ಮತ್ತು ‘ಹೂವ ತರುವರ ಮನೆಗೆ ಹುಲ್ಲ ತರುವ’ ಈ ಧ್ವನಿ ಮುದ್ರಿಕೆಗಳು ನನ್ನಲ್ಲಿದ್ದವು. ನನ್ನ ಮೊಮ್ಮಗನು ಎರಡು ವರ್ಷದವ ಐದು ವರ್ಷದವನಾಗುವ ತನಕ, ‘ಭಾಗ್ಯದ ಲಕ್ಷ್ಮೀ’ ಹಾಡನ್ನು ತುಂಬ ಆಸೆಯಿಂದ ಕೇಳುತ್ತಿದ್ದ. ಭೀಮಸೇನರವರ, ‘ಭಾಗ್ಯಲಕ್ಷ್ಮೀ’ ಹಾಕಿದರೆ ಅಳುತ್ತಿದ್ದ! ಹೀಗಾಗಿ ನೂರಾರು ಸಲ ಈ ಹಾಡನ್ನು ನಾನು ಕೇಳಿದ್ದೆ. ಈ ಮಾತು ಮತ್ತು ಅವರ ಬಗ್ಗೆ ಗೊತ್ತಿದ್ದ ಇತರ ವಿಷಯಗಳ ಮೇಲೆ ಆ ದಿನ ಜಯವಂತಿಯವರ ಮೇಲಿನ ಸಾಕ್ಷಚಿತ್ರದಲ್ಲಿ ಸಹಭಾಗಿಯಾಗುವ ಪುಣ್ಯ ನನಗೆ ದೊರಕಿತ್ತು. ಮೊದಲನೆಯ ಸಲವೇ ನನಗೆ ಪುಣೆಯ ಅಥಶ್ರೀಯಲ್ಲಿ ಕುಳಿತು ಈ ಸಾಕ್ಷ್ಯಚಿತ್ರ ನೋಡುವ ಸುಯೋಗ ಒದಗಿತು.

“ನನ್ನ ಯಜಮಾನರು ಆಗಷ್ಟೇ ತೀರಿಕೊಂಡಿದ್ದರು, ನನ್ನ ಆರೋಗ್ಯ ಕೂಡ ಚೆನ್ನಾಗಿರಲಿಲ್ಲ. ನಾನು ಬೇಡವೆಂದರೂ ನಯವಾಗಿ ಸಾಕ್ಷ್ಯಚಿತ್ರಕ್ಕೆ ಒಪ್ಪಿಸಿಬಿಟ್ಟಿದ್ದರಲ್ಲ ಅವರು. ಒಂದೇ ದಿನದಲ್ಲಿ ಶೂಟಿಂಗ್ ಮುಗಿಸಿದ್ದರು” ಜಯವಂತಿಯವರು ಸಾಕ್ಷಚಿತ್ರದ ಬಗ್ಗೆ ಹೇಳುತ್ತಿದ್ದರು.

ಸಾಧಾರಣ 40 ನಿಮಿಷದ ಸಾಕ್ಷಚಿತ್ರ. ಶಿವಾಜಿಯ ಮಲತಮ್ಮ ವೆಂಕೋಜಿಯ ಮನೆತನದ ತಂಜಾವೂರಿನ ರಾಜಾ ಸರ್ಫರೋಜಿ ಮೇಲೆ ಚಿತ್ತೂರು ವಿ ನಾಗಯ್ಯ ಚೆನ್ನಾಗಿ ದಿಗ್ದರ್ಶಿಸಿದ 1944ರಲ್ಲಿಯ ಚಿತ್ರಪಟ. ಅದರಲ್ಲಿ ಜಯವಂತಿಯವರು ಒಬ್ಬ ಹಾಡುಗಾರಿಕೆಯ ಪಾತ್ರವನ್ನು ನಿಭಾಯಿಸಿದ 'ತ್ಯಾಗಯ್ಯ' ಚಿತ್ರಪಟ. ಇದರಲ್ಲಿ ಅವರು ಹಾಡಿದ ಗಝಲ್ ಇದೆ! ಆಗ ಅವರಿಗೆ ಕೇವಲ 17ವರ್ಷ!

"ಮುಂದೆ ನಾನು ಸಂಗೀತ ಕಲಿಯುವದಕ್ಕೆ ಮನೆಯಲ್ಲಿ ವಿರೋಧವಿತ್ತು. ಚಿಕ್ಕಪ್ಪ ನನ್ನ ತಂದೆಗೆ ಪುಸಲಾಯಿಸಿದರು 'ನನ್ನ ಜವಾಬ್ದಾರಿಯ ಮೇಲೆ ಅವಳನ್ನು ಬಿಡು. ಕಾಳಜಿ ಬೇಡ' ಎಂದು ಹೇಳಿ ನನ್ನ ಸಲುವಾಗಿಯೇ ದಿಲ್‌ರೂಬಾ ಬಾರಿಸಲು ಕುಳಿತದ್ದುಂಟು. ನೋಡಿ ಅವರೇ! ಎಂದು ಸಾಕ್ಷ ಚಿತ್ರದಲ್ಲಿಯ ಚಿಕ್ಕಪ್ಪನನ್ನು ತೋರಿಸಿದರು. ನನ್ನ ಗಮನ ಅವರು ದಿಲರುಬಾ ಬಾರಿಸುವ ಕಡೆ ಇತ್ತು. ನುರಿತ ಕಲಾವಿದರಂತೆ ಅವರು ಬಾರಿಸಿದ್ದನ್ನು ನೋಡಿ ನಾನು ಬೆರಗಾದೆ. ಈ ಚಿತ್ರದ ನಿರ್ಮಾಪಕರು ವಿ. ನಾಗಯ್ಯ ಎಂಬವರು. "ನಾಗಯ್ಯನವರೇ ನನ್ನಿಂದ ಎಲ್ಲ ಹಾಡುಗಳನ್ನು ಹಾಡಿಸಿದರು. ಬಳಿಕ ಬೆಂಗಳೂರು, ಮೈಸೂರು, ಧಾರವಾಡ, ಮುಂಬಯಿ, ಪುಣೆ ಆಕಾಶವಾಣಿಯಲ್ಲಿ ಹಾಡುತ್ತಲೇ ಇದ್ದೆ." ಹೀಗೆ ಮಾತು ನಡೆದಾಗ ಮಧ್ಯಾಹ್ನದ ಊಟದ ಸಮಯ ಮೀರಿತ್ತು. "ಹೋಗುವ ಕೆಳಗೆ" ಎಂದು ನಮ್ಮನ್ನೆಲ್ಲ ಕರೆದುಕೊಂಡು ಬೇಸ್‌ಮೆಂಟಿನಲ್ಲಿಯ ಕ್ಯಾಂಟಿನಿಗೆ ಕರೆದುಕೊಂಡು ಹೋದರು. ಊಟಕ್ಕೆ ಎರಡು ಕಾಯಿಪಲ್ಯ, ಚಪಾತಿ ಅನ್ನ, ಸಾರು, ಹಪ್ಪಳ, ಉಪ್ಪಿನಕಾಯಿ ಮೊಸರು ಇದ್ದವು. ಮತ್ತು ಜಯವಂತಿಯವರು ನಮ್ಮ ಸಲುವಾಗಿ ಜಿಲೇಬಿ ತರೆಸಿದ್ದರು.

ನಾನು ಅವರಿಗೆ ಮುಂಬಯಿಯ ಕೆನರಾ ಸಾರಸ್ವತ ಅಸೋಸಿಯೇಷನದ ಶತಾಬ್ದಿಯ ಸಲುವಾಗಿ ಮಾಡಿದ ದೃಕ್ ಶ್ರಾವ್ಯ ಕಾರ್ಯಕ್ರಮದ ಬಗ್ಗೆ ಮಾತಾಡುತ್ತಿದ್ದಾಗ,* ವಿಷ್ಣುದಾಸ ಶಿರಾಲಿಯವರು ಸಂಗೀತ ಕೊಟ್ಟ ಉದಯಶಂಕರರ 'ಕಲ್ಪನಾ' ಚಿತ್ರಪಟದೆಡೆಗೆ ಮಾತು ತಿರುಗಿತು. ದೇವಿಲಾಲ್ ಸಮರ್ ಹಾಡಿದ ಹಾಡು ಎಂದು ನನ್ನ ಮಾತು ಪೂರ್ತಿಯಾಗುವ ಮೊದಲೇ ಜಯವಂತಿ ಹಾಡಲು ಪ್ರಾರಂಭಿಸಿದರು. 'ಸದಿಯೊಂಕೆ ಹೋಷ್‌ಮೆಂ' ನನಗೆ ಆಶ್ಚರ್ಯದ ಮೃದುವಾದ ಏಟು! ದೇವಿಲಾಲ್ ಸಮರ್‌ರೊಂದಿಗೆ ಹಾಡಿದ ಸ್ತ್ರೀ ಧ್ವನಿ ಯಾರದು? ಎಂದು ಎರಡು ವರ್ಷಗಳಿಂದ ಸಂಶೋಧನೆ ನಡೆಸಿದ್ದೆ. ಉತ್ತರ ಈಗ ಸಿಕ್ಕಿತು. ನಾನು ನನ್ನ ಮಗಳು ಮತ್ತು ಜಯವಂತಿಯವರು ಇಡೀ ಹಾಡು ಕೇಳುತ್ತಲೇ ಊಟ ಮಾಡಿ ಮುಗಿಸಿದೆವು. ಕೌಂಟರ ಮೇಲೆ ಕೂತ ಪಟವರ್ಧನವರು ತನ್ನ ಟೇಬಲ್ ಮೇಲೆ ತಾಳ ಹಿಡಿದಿದ್ದರು. ಊಟ ಮುಗಿಸಿ ಹೊರ ಬರುವಾಗ, ಪಟವರ್ಧನರು ಕೇಳಿದರು, "ನಿಮ್ಮಲ್ಲಿ ಅಂತರಾದಲ್ಲಿ 'ತಾನ್' ಸೇರಿಸಿದವರಾರೂ? ತುಂಬಚೆನ್ನಾಗಿತ್ತು! ಎಂದ ಕೂಡಲೇ ಜಯವಂತಿಯವರ ಮುಖ ಸಂತೋಷದಿಂದ ಕೆಂಪೇರಿತ್ತು!

ಅವರ ಡೊಕ್ಯೂಮೆಂಟರಿ, ಹಾಡುಗಾರಿಕೆಯ ಕೆಲ ಹಾಡುಗಳು ಮತ್ತು 'ತ್ಯಾಗಯ್ಯ'ದ ಕಾಪಿ ಹೊತ್ತುಕೊಂಡು ಜಯವಂತಿಯವರನ್ನು ಹೃತ್ಪೂರ್ವಕವಾಗಿ ಬೀಳ್ಕೊಟ್ಟೆವು.

* ಮಾನವಂದನಾ 1 ಮತ್ತು 2 ಇವು ಪ್ರಕಾಶರ 'ಮರೆತು ಹೋದ ಚಿತ್ರಾಪುರ ಸಾರಸ್ವತ ಸಂಗೀತಕಾರರ-ವಾದಕರ' ಮೇಲೆ ಮಾಡಿದ ಡಾಕ್ಯುಮೆಂಟರಿ

*****

7.19

ಪಂ. ಜಿತೇಂದ್ರ ಅಭಿಷೇಕಿ (1930–1998)

ನನ್ನ ಮತ್ತು ಗುಜರಾತಿ ಲೆಕ್ಕ ಪರೀಕ್ಷಕ ದೇವಿದಾಸ್ ದತ್ತಾಣಿ ಅವರ ಗೆಳೆತನ 40 ವರ್ಷಕ್ಕೂ ಹಳೆಯದು. ಈ ಗೆಳೆತನ ಕೇವಲ ಸಂಗೀತವನ್ನು ಆಲಿಸುವುದಕ್ಕಷ್ಟೇ ಸೀಮಿತವಾದುದು. ಅವರು ಕನ್ನಡದ ಗಂಧ-ಗಾಳಿ ಇಲ್ಲದ ಗುಜರಾತಿ ಮಿತ್ರ. 20–30 ವರ್ಷಗಳ ಹಿಂದೆ ನಾವು ಕೂಡಿಯೇ ಡೊಂಬಿವಲಿ ಇರಲಿ, ವಾಳಕೇಶ್ವರದ ವಿಮಲಾ ಪಾಟೀಲ್ (ಫೆಮಿನಾದ ಮಾಜಿ ಸಂಪಾದಕರು) ಅವರ ಮನೆ ಇರಲಿ, ಪೋಲಿಸ್ ನಿರೀಕ್ಷಕ ಡಿ.ಕೆ. ಸೋಮಣ್ಣ ಅವರ ಮನೆ ಇರಲಿ, ಗೇಟ್‌ಕ್ರ್ಯಾಷ್ ಮಾಡಿಕೊಂಡು ಮನೆಯ ಸಂಗೀತ ಕೂಟಕ್ಕೆ ಹೋಗುವದು, ಜೊತೆಗೆ ಇದ್ದು, ಕಾಫಿ, ತಿಂಡಿ, ಹೈಟೀಯನ್ನು ಸೇವಿಸುವುದು ರೂಢಿ. ತಿಂಗಳಿಗೊಮ್ಮೆ ಅಲ್ಟಾಮೌಂಟ್ ರಸ್ತೆಯ ಮೇಲಿದ್ದ ಮುನಿಸಿಪಲ್ ಕಮೀಶನರ್ ಅವರ ಮನೆಯಲ್ಲಿ ಆಯೋಜಿಸುತ್ತಿದ್ದ ಮೆಹಫಿಲ್ಲುಗಳಂತೂ ಸಮಾರಾಧನೆಯ ರುಚಿ ನೋಡುವ ತಾಣದಂತೆ ಇರುತ್ತಿದ್ದವು. ತಿನಯಕರ್ ಸಾಹೇಬರು, ಸುಖಠಣಕರ್ ಮತ್ತು ಕರುಣಾ ಶ್ರೀವಾತ್ಸವ ಇವರೆಲ್ಲ ನಮ್ಮನ್ನು ಹೆಸರಿನಿಂದ ಗುರುತಿಸಿ, ಒಬ್ಬರು ಬಂದರೆ 'ಇನ್ನೊಬ್ಬರು ಏಕೇ ಬರಲಿಲ್ಲ?' ಎಂದು ಕೇಳಿ ನಮ್ಮನ್ನು ಸ್ವಾಗತಿಸುತ್ತಿದ್ದರು.

ಪಂ. ಜಿತೇಂದ್ರ ಅಭಿಷೇಕಿಯವರ ಬಗ್ಗೆ ಬರೆಯುವ ಸಂದರ್ಭ ಬಂದಾಗ ನನಗೆ ನೆನಪಾಗುವುದು ಗೆಳೆಯ ದೇವಿದಾಸ್ ಮತ್ತು ಜಿತೇಂದ್ರ ಅಭಿಷೇಕಿಯವರ ಅಸಂಖ್ಯ ಮೆಹಫಿಲ್ಲುಗಳಿಗೆ ನಮ್ಮಿಬ್ಬರ ಹಾಜರಿ. 1998ರ ನವೆಂಬರ್ ತಿಂಗಳ 7ನೇ ತಾರೀಖಿನಂದು ಈ ಬುದ್ಧಿವಾದಿ ಗಾಯಕನ ಮೃತ್ಯುವಿನ ಸಮಾಚಾರವು ನಮಗೆ ಬಂದಾಗ ನಾವಿಬ್ಬರೂ ನೆಹರೂ ಸೆಂಟರಿನಲ್ಲಿಯ ಅಜಯ ಚಕ್ರವರ್ತಿಯವರ ಕಚೇರಿಯನ್ನು ಅರ್ಧಕ್ಕೆ ಬಿಟ್ಟುಕೊಟ್ಟು, ಅಲ್ಲಿಯ ಮೈದಾನಿನ ಮೇಲೆ ಕುಳಿತು ಹಳಹಳಿಸಿದೆವು. ನನಗಿಂತ ಕೇವಲ 8 ವರ್ಷ ಹಿರಿಯರಾಗಿದ್ದ ಜಿತೇಂದ್ರರು ನಾನು ಮುಂಬಯಿಗೆ ಬಂದಾಗ ಆಗಷ್ಟೇ ಜ್ಸೇವಿಯರ್ ಕಾಲೇಜಿನಿಂದ ಡಿಗ್ರಿಯನ್ನು ಪಡೆದು ಆಕಾಶವಾಣಿಯ ಕೊಂಕಣಿ ವಿಭಾಗದಲ್ಲಿ ಕೆಲಸಕ್ಕಿದ್ದರು. ನನ್ನ ಮತ್ತೊಬ್ಬ ಮಿತ್ರ ಗ್ಲಾಕ್ಸೋ ಕಂಪನಿಯಲ್ಲಿದ್ದ ಅರವಿಂದ ಸುಖಟಣ್‌ಕರ್ ಮತ್ತು ಇಂದಿನ ಖ್ಯಾತ ಚಿತ್ರಕಾರ್ತಿ ಪ್ರಫುಲ್ಲಾ ಡಹಾಣುಕರ್ ಅವರಿಂದ ಜಿತೇಂದ್ರರ ಕಾಲೇಜಿನಲ್ಲಿಯ 'ಧಮಾಲ್' (ಮಸ್ತ ಪೈಕಿ) ಜೀವನದ ಬಗ್ಗೆ ನಾನು ಸಾಕಷ್ಟು ತಿಳಿದುಕೊಂಡಿದ್ದೆ.

ಜಿತೇಂದ್ರ ಅಭಿಷೇಕಿ ಗೋವಾದವರು, ಕರ್ಹಾಡ ಬ್ರಾಹ್ಮಣರು. ಮನೆಮಾತು ಮರಾಠಿ. ಆದರೆ ಶತಮಾನಗಳಿಂದ ಅಭಿಷೇಕಿ ಕುಟುಂಬ ಸಾರಸ್ವತರ ಕುಲದೇವರಾದ ಶ್ರೀ ಮಂಗೇಶದೇವಾಲಯದ ಅರ್ಚಕರು, ಅರ್ಥಾತ್ ನಮ್ಮ ಬುರ್ಡೆ ಕುಟುಂಬದ ಅರ್ಚಕರು ಕೂಡ! ಪೋರ್ಚುಗೀಸರ ಆಳಿಕೆಯಲ್ಲಿ ಗೋವಾ ಇದ್ದುದರಿಂದಲೋ ಏನೋ ಚಿಕ್ಕಂದಿನಲ್ಲಿ ಅಥವಾ ಈಗಲೂ ಗೋವಾಕ್ಕೆ ಹೋದರೆ, ಕಾಲಿಟ್ಟ ಕ್ಷಣಕ್ಕೆ ಮಂಗೇಶಿಯಲ್ಲಿದ್ದ ಮಂಗೇಶನ 'ಧೂಳಿ ಭೇಟ್, ಅಂದರೆ (ಸ್ನಾನವನ್ನು ಮಾಡದೆ) ಕೈಕಾಲುಗಳನ್ನು ಮಾತ್ರ ತೊಳೆದು ದೇವರ ದರ್ಶನ ಮಾಡುವ ಹಕ್ಕು ಈ ಕುಟುಂಬಕ್ಕಿದೆ. ನಂತರ ನಮ್ಮ ಮುಂದಿನ 'ಕಾರ್ಯಾವಳಿ'ಯನ್ನು ಹೊಂದಿಸಿಕೊಳ್ಳುವುದು.

ಈ ಅಭಿಷೇಕಿ ಕುಟುಂಬದ ಮೂಲ ಅಡ್ಡ ಹೆಸರು ನವಾಥೆ. ತಂದೆ ಬಾಳೂ ಬುವಾ ನವಾಥೆಯವರು ಅಭಿಷೇಕ ಮಾಡುವ ಹೆಸರನ್ನೇ ಅಭಿಷೇಕಿಯೆಂದು ಇಟ್ಟುಕೊಂಡವರು. ಮುಂದೆ ಅದೇ ರೂಢಿಯಾಯಿತು. ಕರ್ನಾಟಕದ ಭೀಮಸೇನರಾಗಲಿ, ವಿನಾಯಕ ತೊರವಿಯವರಾಗಲೀ ಅಥವಾ ಇನ್ನಿತರ ಖ್ಯಾತ ಸಂಗೀತಕಾರರ ಮೂಲ ಇರುವುದೇ ಕೀರ್ತನೆ ಮಾಡುವ ಹರಿಭಕ್ತಪರಾಯಣ ಕುಟುಂಬದಲ್ಲಿಯೇ. ಬಾಳೂಬುವಾ ಅವರು ಉತ್ತಮವಾಗಿ ಹರಿಕಥೆಯನ್ನು ಮಾಡುತ್ತಿದ್ದರು. ಅವರ ಎರಡನೆಯ ಮಗ ಜಿತೇಂದ್ರ. ತೊಟ್ಟಿಲ ಹೆಸರು ಗಣೇಶ ಭಿಕಾಜಿ ಅಭಿಷೇಕಿ. ಮುದ್ದಿನ ಹೆಸರು ಗಂಪು. ತೀಕ್ಷ್ಣಬುದ್ಧಿಯ ಹುಡುಗನಿಗೆ ಮಂಗೇಶಿಯ ಪರಿಸರದ ಪೋರ್ಚುಗೀಸ್ ಶಿಕ್ಷಣ ಸೇರದ್ದಾಯಿತು. ಆಗಿನ ರೂಢಿಯಂತೆ 1943ರಲ್ಲಿ ಈ ಗಂಪು ಊರುಬಿಟ್ಟು 'ಜ್ಞಾನಾರ್ಜನೆ'ಗಾಗಿ ಓಡಿಹೋಗಿ ಪುಣೆ ಸೇರಿದ. ಗವಯಿ ಆಗುವ ಇಚ್ಛೆ ಮತ್ತು ಛಲವಿತ್ತು. ಆಗ ಗಂಪೂಗೆ 13ನೇ ವರ್ಷ. ಸಂಗೀತ ಕಲಿಯಬೇಕೆಂಬ ಹಂಬಲದಿಂದ ಹೊಟ್ಟೆ ತುಂಬುವುದಿಲ್ಲ. ವಿದ್ಯಾರ್ಜನೆಗಾಗಿ ವಾರಾನ್ನ ಹಚ್ಚುವ ರೂಢಿ ಇನ್ನೂ ಅಸ್ತಿತ್ವದಲ್ಲಿತ್ತು. ಪುಣೆಯಲ್ಲಿ ಕರ್ಹಾಡೆ ಬ್ರಾಹ್ಮಣ ಗೃಹಸ್ಥರಿಗೇನೂ ಬರಗಾಲ ಇಲ್ಲವಲ್ಲ? ಮುಂಜಾನೆಯ ಭಿಕ್ಷಾನ್ನ ಸಂಜೆಯ ತನಕ ಸಾಕಾಗುತ್ತಿತ್ತು. ಅಲ್ಲಿಯ ಗೃಹಿಣಿಯರ ಒಂದೇ ಒಂದು ತಕರಾರು ಅಂದರೆ, ಗಂಪು ಮಾತನಾಡುವುದು ಅತ್ಯಂತ ಸೌಮ್ಯ ಸ್ವರದಲ್ಲಿ, ಮರಾಠಿಯಾದರೂ ಮರಾಠಿ 'ಯೇತ ನಾಹೀ ಎಂಬುದು! (ಮರಾಠಿ ಬರುವದಿಲ್ಲ) ಕಲಿತದ್ದು ಪೋರ್ಚುಗೀಸ್ ಭಾಷೆ, ಕೊಂಕಣಿ ಭಾಷೆ ವಹಿವಾಟು ಭಾಷೆಯಾಗಿದ್ದುದರಿಂದ ಮಾತನಾಡುವುದನ್ನೇ ಕಡಿಮೆಮಾಡಿಬಿಟ್ಟರು. ನಮ್ಮೊಂದಿಗೆ ಮಾತನಾಡುವಾಗ ಕೂಡ ಕೊನೆಯವರೆಗೂ ಮೃದುಸ್ವರವೇ.

ಪುಣೆಯ ಕರ್ಹಾಡೆ ವಸತಿಗೃಹದಲ್ಲಿ ಬೀಡುಬಿಟ್ಟು ನರಹರ ಬುವಾ ಪಾಟಣಕರರ ಬಳಿ ಸಂಗೀತ ಕಲಿಯಲು ಪ್ರಾರಂಭಿಸಿದರು. ವೇದಶಾಲೆಯಲ್ಲಿ ಮರಾಠೆಯವರಲ್ಲಿ ಸಂಸ್ಕೃತ ಕಲಿಯಲು ಸುರುಮಾಡಿದರು. ಜತೆಗೆ ಶಾಲೆ ಇದ್ದೇ ಇತ್ತು. ಮಾಧ್ಯಮಿಕ ಶಾಲೆ ಮುಗಿಸಿ ಕಾಲೇಜಿಗಾಗಿ ಗೋವಾ ಪಕ್ಕದಲ್ಲಿಯೇ ಇದ್ದ ಬೆಳಗಾವಿ ಸೇರಿದರು. ಅಲ್ಲಿ ಶಿವರಾಮ ಬುವಾ ವಝೆ ಅಂದರೆ ರಾಮಕೃಷ್ಣ ಬವಾ ವಝೆ ಅವರ ಮಗ ಗವಯಿ ಎಂದು ಖ್ಯಾತರಾಗಿದ್ದರು. ಆದರೆ ಅನಾರೋಗ್ಯದ ಮೂಲಕ ಜಿತೇಂದ್ರರು ಮರಳಿ ಗೋವಾ ಸೇರಬೇಕಾಯಿತು. ಆಗ್ರಾ ಪರಂಪರೆಯ ಹಾಡುಗಾರಿಕೆ ಜಿತೇಂದ್ರರಿಗೆ

ತುಂಬಾ ಇಷ್ಟವಾಗಿತ್ತು. ಕಲಿಸುವವರು ಯಾರು?

ಅದಾಗಲೇ ಎಸ್.ಎಸ್.ಸಿ ಮುಗಿಸಿದ ಜಿತೇಂದ್ರ ಮುಂಬಯಿ ಸೇರಿದರು. ಇದು 1952ರಲ್ಲಿ. ವಾಸಿಸಲು ದೊಡ್ಡಣ್ಣನ ಮನೆಯಿತ್ತು. ಸುದೈವದಿಂದ ಅವರಿಗೆ ಮುಂಬಯಿ ಆಕಾಶವಾಣಿಯ ಕೊಂಕಣಿ ವಿಭಾಗದಲ್ಲಿ ಕೆಲಸ ಸಿಕ್ಕಿತು. ಮುಂಜಾನೆ ಕಾಲೇಜು ಶಿಕ್ಷಣವೂ ಆರಂಭವಾಯಿತು. 'ಗುಣಿದಾಸ' ಜಗನ್ನಾಥ ಬುವಾ ಪುರೋಹಿತ ಅಂದರೆ ಆಗ್ರಾ ಘರಾಣೆಯ ವಿಲಾಯತ್ ಹುಸೇನ್‌ರ ಶಿಷ್ಯರಲ್ಲಿ ಸಂಗೀತ ಸಾಧನೆಯನ್ನು ಆರಂಭಿಸಿದರು.

ಜ್ಞಾನಾರ್ಜನೆಗೆ ಇನ್ನೇನು ಬೇಕು? ಸಮರ್ಥ ಗುರು, ಕಾಲೇಜು ಶಿಕ್ಷಣ, ಆಕಾಶವಾಣಿಯಲ್ಲಿ ಅವರ ಪ್ರತಿಭಾಶಕ್ತಿಗೆ ಚಾಲನೆ ಕೊಡುವ ನೌಕರಿ ಇವುಗಳೆಲ್ಲರ ಸಂಗಮವಾಯಿತು. ಪ್ರತಿ ದಿನವೂ ಸಂಗೀತಕ್ಕಾಗಿ 4–6 ತಾಸಿನ ಪರಿಶ್ರಮ. 1950–60ರ ದಶಕದಲ್ಲಿ ಇಂತಹ ಜ್ಞಾನಾರ್ಜನೆ ಸಂಗೀತ ಕ್ಷೇತ್ರದಲ್ಲಿ ಅತ್ಯಂತ ಅಪರೂಪದ ಉದಾಹರಣೆಯಾಗಿತ್ತು. 'ನನ್ನ ಹಾಗೆಯೇ ನನ್ನ ಶಿಷ್ಯ ರಿಯಾಜು ಮಾಡುತ್ತಾನೆ' ಎಂದು ಗುಣಿದಾಸರೂ ಪ್ರಸನ್ನರಾಗಿದ್ದರು. ನೌಕರಿ ಸಿಗುವ ಮೊದಲು ಒಂದೆರಡು ವರ್ಷ ಜಿತೇಂದ್ರರಿಗೆ ಸಂಗೀತ ನಾಟಕ ಅಕಾಡೆಮಿಯವರ ತಿಂಗಳಿಗೆ 250 ರೂ.ಗಳ ಶಿಷ್ಯವೃತ್ತಿಯೂ ಸಿಕ್ಕಿತ್ತು. ಮುಂದೆ ಗಾಯನವನ್ನೇ ವೃತ್ತಿಯಾಗಿ ಇರಿಸಿಕೊಳ್ಳುವ ಉದ್ದೇಶದಿಂದ, ಇದ್ದ ಆಕಾಶವಾಣಿ ಕೆಲಸಕ್ಕೆ ಸಲಾಮು ಹೊಡೆದದ್ದರಿಂದ ಮತ್ತು ಕಚೇರಿಗಳ ಆಮಂತ್ರಣಗಳು ನಿರೀಕ್ಷೆಗಿಂತ ಕಡಿಮೆ ಇದ್ದುದರಿಂದ ಮರಳಿ ಮುಂಬಯಿಯ ತಾಪತ್ರಯಗಳು ಪ್ರಾರಂಭವಾದವು. ಪ್ರಫುಲ್ಲಾ ಬಾಂದೋಡಕರ (ಈಗಿನ ಡಹಾಣುಕರ್) ಮತ್ತು ಅವರ ತಾಯಿ ಇವರಿಗೆ ತುಂಬಾ ನೆರವಾದರು.

ಅಭಿಷೇಕಿಯವರು ಆಕಾಶವಾಣಿಯಲ್ಲಿದ್ದಾಗ ಕೊಂಕಣಿ ಹಾಡುಗಳಿಗೆ ಸ್ವರರಚನೆ ಮಾಡಿ ಅನೇಕ ಕಲಾವಿದರಿಂದ ಹಾಡಿಸಿದರು. ಮರಾಠಿಯಲ್ಲಿ ಬರೆಯುತ್ತಿದ್ದ ದೊಡ್ಡ ದೊಡ್ಡ ಕವಿಗಳನ್ನು ಕೊಂಕಣಿಯಲ್ಲಿ ಬರೆಯಲು ಪ್ರೋತ್ಸಾಹಿಸಿದರು. ಗೋವಾದವರಾಗಿದ್ದುದರಿಂದ ಪಾಶ್ಚಿಮಾತ್ಯ ಸಂಗೀತದಲ್ಲಿ ಕೂಡ ಅಭಿರುಚಿಯನ್ನು ಇಟ್ಟುಕೊಂಡಿದ್ದರು. ಮುಂಬಯಿಯಲ್ಲಿಯ ಆಕಾಶವಾಣಿಯಲ್ಲಿ ಅವರು ಸಂಗೀತ ನೀಡಿದ ಹಾಡುಗಳನ್ನು ಈಗಲೂ ಪ್ರಸಾರಮಾಡುತ್ತಿರುತ್ತಾರೆ (ಹೊಸಬರು ಸಿಗಬೇಕಲ್ಲ?).

ವಾರ ಹಚ್ಚಿಕೊಂಡು ಕಲಿಯುವ ಹುಡುಗರಿಗೆ 'ಮಧುಕರಿ' ಎಂಬ ಸುಂದರವಾದ ಶಬ್ದ ಮರಾಠಿಯಲ್ಲಿದೆ. ಈ ಮಧುಕರಿ' ವೃತ್ತಿ ಜ್ಞಾನಪಿಪಾಸು ಜಿತೇಂದ್ರರ ಸಂಗೀತದಲ್ಲಿಯೂ ಇತ್ತು! ಅಭಿಷೇಕಿಯವರು ಮುಂಬಯಿಯಲ್ಲಿದ್ದಾಗ ಗೋವಾದ ಪಂ. ರತ್ನಕಾಂತ್ ರಾಮನಾಥಕರ್, ಖುರ್ಜಾ ಘರಾಣೆಯ ಅಜಮತ್ ಹುಸೇನ್, ಭೇಂಡಿ ಬಝಾರ್ ಘರಾಣೆಯ ಮಾ. ನವರಂಗ್ ಇವರಿಂದೆಲ್ಲ ಬೇಡಿ ಬೇಡಿ ವಿದ್ಯಾರ್ಜನೆ ಮಾಡಿದರು. 25–30 ವರ್ಷವರಾಗಿದ್ದಾಗಲೇ ಈತ ಗುರುಪಟ್ಟಕ್ಕೆ ಏರಿಬಿಟ್ಟರು! ಮುಂಬಯಿಯಂತಹ ಮಹಾನಗರದಲ್ಲಿ ಒಟ್ಟಾರೆ ಎರಡು ಅಥವಾ ಮೂರೇ ಮೆಹಫಿಲ್ಲುಗಳು ವರ್ಷದಲ್ಲಿ ಜರುಗುತ್ತಿದ್ದವು. ಆದರೆ ಪ್ರತಿಯೊಂದು ಮೆಹಫಿಲ್ಲು

ಅಂದರೆ ಪ್ರಗಲ್ಭ ಜ್ಞಾನದ ನಮೂನೆಯಾಗಿತ್ತು. ಜತೆಗೆ ಸ್ವಂತ ಪ್ರತಿಭೆಯ ಆವಿಷ್ಕಾರದಿಂದ ಪ್ರತಿಸಲವೂ ಹೊಸ ಹೊಸ ರಾಗಗಳ ಲಕ್ಷಣಗಳಿಂದ ಈ ಗಂಪು– ಜಿತೇಂದ್ರ 'ಪಂಡಿತ ಜಿತೇಂದ್ರ ಅಭಿಷೇಕಿ' ಎಂದು ರಸಿಕಮಾನ್ಯರಾದರು. ಹಾಡುವಾಗ ತಮಗಿಂತ ಕಡಿಮೆ ವಯಸ್ಸಿನ ರಾಜಾ ಕಾಳೆ, ಪ್ರಭಾಕರ ಕಾರೇಕರ, ಅಜಿತ ಕಡಕಡೆಯಂತಹ ಮುಂದೆ ಹೆಸರು ಮಾಡಿದ ಶಿಷ್ಯರನ್ನು ಜತೆ ಹಾಕಿಕೊಂಡು ಎರಡೆರಡು, ಮೂರು ಮೂರು ಜನರನ್ನು ವೇದಿಕೆಯ ಮೇಲೆ ಒಟ್ಟುಹಾಕಿ ಭರ್ಜರಿಯಿಂದ ಮೆಹಫಿಲ್ಲುಗಳನ್ನು ಉಸ್ತಾದ್‌ರ ಠೀವಿಯಲ್ಲಿ ನಡೆಸುತ್ತಿದ್ದರು. ಪಂಡಿತ ವಸಂತರಾವ್ ದೇಶಪಾಂಡೆಯವರಂತಹ ತನಗಿಂತ ಹತ್ತಿಪ್ಪತ್ತು ವರ್ಷಗಳಿಂದ ಹಿರಿಯವರಿಂದಲೂ ಮಾನ್ಯತೆ ಪಡೆದರು. ಕಾರಣವೆಂದರೆ ಅವರ ಅನನ್ಯ ಶೋಧಕ ವೃತ್ತಿ. ಮುಂದೆ ಪದ್ಮಭೂಷಣರೆಂದು ಗೌರವಿಸಲ್ಪಟ್ಟ ಪಂ. ಚಿಂತಾಮಣಿ ವ್ಯಾಸರಂತಹ ಗುರುಬಂಧುಗಳಿಂದ ಕೂಡ ಕಲಿಯಲು ಜಿತೇಂದ್ರ ಹಿಂದೆಮುಂದೆ ನೋಡಲಿಲ್ಲ.

ಇಂತಹ ಬುದ್ಧಿವಾದಿ ಗಾಯಕನ ಮೆಹಫಿಲ್ಲುಗಳ ಪ್ರಾರಂಭ ಕೊಲ್ಲಾಪುರದ 'ದೇವಲ್' ಕ್ಲಬ್ಬಿನಿಂದ ಪ್ರಾರಂಭವಾಯಿತು. ಇದು ಅಲ್ಲಾದಿಯಾ ಖಾನ್ ಸಾಹೇಬರು ತಮ್ಮ ಶಿಷ್ಯರಿಂದ ಹಾಡಿಸಲೆಂದು ಪ್ರಾರಂಭಿಸಿದ ವೇದಿಕೆಯಾಗಿತ್ತು. ಅವರ ಕಚೇರಿಯೆಂದರೆ ರಸಿಕರಿಗೆಲ್ಲ ಒಂದು ಅನನ್ಯ ಔತಣದಂತೆ, ಸಮಾರಾಧನೆಯಂತೆ ಕಾಣಿಸುತ್ತಿತ್ತು. ಒಂದು ಬಗೆಯ ಉತ್ಸುಕತೆ, ಪ್ರತಿಯೊಂದು ಕಚೇರಿಯಲ್ಲಿ ಏನಾದರೊಂದು ನಾವೀನ್ಯ ಪೂರ್ಣ ವಿಷಯವನ್ನು ಎತ್ತಿಕೊಂಡು ಅತ್ಯಂತ ಆತ್ಮವಿಶ್ವಾಸದಿಂದ ರಸಿಕರೆದುರಿಗೆ ಇಡುತ್ತಿದ್ದರು. ಒಂದು ಹೊಸರಾಗದ ಕಲ್ಪನೆ, ಅಥವಾ ಗೊತ್ತಿದ್ದೇ ಶುದ್ಧರಾಗದಲ್ಲಿಯ ಅತ್ಯಂತ ಹಳೆಯ ಪರಂಪರೆಯಿಂದ ಮಾಸಿಹೋದ ಅರ್ಥಮಾಡಿಕೊಳ್ಳದೇ ಹಾಡುತ್ತಿದ್ದಂತಹ ಕೃತಿಗಳನ್ನು ತನ್ನ ಜಾದುಸ್ಪರ್ಶದಿಂದ 'ರಿಪೇರಿ'ಮಾಡಿ ಮಂಡಿಸುತ್ತಿದ್ದರು. ಹಳೆಯ ಮರಾಠೀ ನಾಟಕಗಳಲ್ಲಿಯ ಮರೆತುಹೋದ ನಾಟ್ಯಪದಗಳನ್ನು (ರಂಗಗೀತೆಗಳನ್ನು) ಸರಿಯಾಗಿ ಅರ್ಥಮಾಡಿಕೊಂಡು ಹಾಡುತ್ತಿದ್ದರು. ಭಜನೆಗಳು, ಭಾವಗೀತೆ, ಖಯಾಲ್, ಠುಮರಿ –ಅವರು ಮುಟ್ಟದ ಸಂಗೀತ ಪ್ರಕಾರಗಳಿರಲಿಲ್ಲ. ಕಣ್ಮುಚ್ಚಿ ಇಂತಹ ಗಾಯಕರ ಬಗ್ಗೆ ಯೋಚಿಸಿದರೆ ಕಣ್ಣಿನ ಮುಂದೆ ಬರುವ ಹೆಸರುಗಳೆಂದರೆ ಕೇವಲ ಎರಡು –ಒಂದು, ಅಭಿಷೇಕಿ, ಮತ್ತೊಂದು ಕುಮಾರ ಗಂಧರ್ವರದು. ಸಂಗೀತ 'ಉನ್ಮಾದ'ದ ಸರಿಯಾದ ಅನುಭವ ಸಿಗುವುದು ಕೇವಲ ಇಂತಹ ಕಚೇರಿಗಳಿಂದಲೇ. ಎಲ್ಲ ಗಾಯಕರು ಸ್ವರ–ಉಚ್ಚಾರಗಳನ್ನು ರಾಗದ ವ್ಯಾಕರಣದಂತೆ ಪ್ರಯೋಗಿಸಿದರೂ ಸ್ವರಗಳೊಂದಿಗೆ ಪೋಣಿಸಿದ ಶಬ್ದಗಳ ಉಚ್ಚಾರ ಸ್ಪಷ್ಟವಾಗಿ ಇರುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಸಂಸ್ಕೃತ ಪಂಡಿತರಾದ ಜಿತೇಂದ್ರ ಶಬ್ದಗಳನ್ನೂ ಅರ್ಥಮಾಡಿಕೊಂಡು ಸರಿಯಾಗಿ ಉಚ್ಚರಿಸುತ್ತಿದ್ದರು. ಅವರ ಅನೇಕ ಶಿಷ್ಯರಲ್ಲಿ ಕೂಡ ಈ ಗುಣವಿಶೇಷವನ್ನು ಕಾಣಬಹುದು. ಶೌನಕ ಅಭಿಷೇಕಿ, ದೇವಕಿ ಪಂಡಿತ, ಪ್ರಭಾಕರ ಕಾರೇಕರ, ರಾಜಾಕಾಳೆ, ಹೇಮಂತ ಪೆಡಸೆ ಮತ್ತಿತರ ಅನೇಕರು ತಮ್ಮ ಗುರುಗಳ ಈ ಶಬ್ದಗಳ ಮೋಹಜಾಲವನ್ನು ಅಪ್ಪಿಕೊಂಡು ಗುರುಗಳಂತೆಯೇ ತಮ್ಮ ಕಚೇರಿಗಳನ್ನು ಪ್ರಸ್ತುತಿಪಡಿಸುತ್ತಾರೆ. ಈ ಉಚ್ಚಾರ ಮಹತ್ವವು ಸಂಗೀತ ಮತ್ತು ನಾಟಕದಲ್ಲಿಯೂ ಇದೆ ಎಂಬುದನ್ನು ಮರೆಯಬಾರದು.

ನಾನು 'ಟೈಮ್ಸ್ ಆಫ್ ಇಂಡಿಯಾ'ನಲ್ಲಿ ವಿಮರ್ಶೆ ಮಾಡುತ್ತಿದ್ದಾಗ, ಮೊದಲಿನ ಮೂರು ವರ್ಷ ಗ್ಲಾಕ್ಸೊ ಕಂಪನಿಯಲ್ಲಿ ಮೆನೇಜರ್ ಹುದ್ದೆಯಲ್ಲಿ ಇದ್ದ ಕಾರಣದಿಂದ ನನ್ನ ಹೆಸರನ್ನು ಹಾಕುವಂತಿರಲಿಲ್ಲ. ಆಗ 'Our Music Critic' ಎಂದು ಮಾತ್ರ ಬೈಲೈನ್ ಬರುತ್ತಿತ್ತು. ಕ್ರಮೇಣ 1988ರಿಂದ ನನ್ನ ಹೆಸರಿನಲ್ಲಿಯೇ ವಿಮರ್ಶೆ ಬರಲು ಪ್ರಾರಂಭವಾಯಿತು. ಪಂ. ಜಿತೇಂದ್ರ ಅಭಿಷೇಕಿಯವರ ಮೊಟ್ಟ ಮೊದಲಿನ ವಿಮರ್ಶೆ ನನ್ನ ಹೆಸರಿನಲ್ಲಿ ಬಂದಾಗ ಅವರ ಗಾಯನದ ಬಗ್ಗೆ ಪ್ರಜ್ಞಾಶಕ್ತಿಯ ಅಥವಾ ಬೌದ್ಧಿಕ ಹಾಡುಗಾರಿಕೆಯ (Intellectual Singing) ಕೆಲವೇ ಗಾಯಕರಲ್ಲಿ ಪಂ. ಜಿತೇಂದ್ರ ಅಭಿಷೇಕಿಯುವರು ಒಬ್ಬರು ಎಂದು ಬರೆದಿದ್ದೆ. ಆಗ ಕುಮಾರ ಗಂಧರ್ವರ ಅಭಿಮಾನಿಗಳಾದ ಕೆ.ಬಿ. ಡಾಬಕೆ ಎಂಬವರು ಈ ಮಾತನ್ನು ವಿಪರಿತವಾಗಿ ಅರ್ಥೈಸಿ ಅದೇ ಪೇಪರಿನಲ್ಲಿ ಸಿಟ್ಟಿನಿಂದ 'ಓದುಗರ ಓಲೆ'ಯಲ್ಲಿ ಪ್ರತಿಕ್ರಿಯೆಸಿದ್ದರು. ಆಗಿನ ಟೈಮ್ಸ್‌ನ ಕಲಾ ಸಂಪಾದಕರಾಗಿದ್ದ ಶಾಂತಾ ಗೋಖಲೆಯವರು ನನ್ನ ವಿಮರ್ಶೆಯ ಸಮರ್ಥನೆ ಮಾಡುವಾಗ ರಾಗ ವಿಸ್ತಾರದಲ್ಲಿ ಪರಂಪರೆಯನ್ನು ಅನುಸರಿಸಿಯೂ ಹೊಸತನವನ್ನು ಜಿತೇಂದ್ರರು ಪ್ರದರ್ಶಿಸಿದ್ದನ್ನು renaissance is evident in his intellectual singing' ಎಂದು ಉಲ್ಲೇಖಿಸಿದ್ದರು. ಆ ಬಳಿಕ ಮನೆಗೂ ಬಂದು ಅಭಿಷೇಕಿಯ ಗಾನ ವಿಮರ್ಶೆಯ ಹೊಸ ಆಯಾಮಕ್ಕಾಗಿ ಶಾಂತಾ ಅವರು ಅಭಿನಂದಿಸಿದ್ದರು ಕೂಡ .ಮುಂದೆ ಡಾಬಕೆ ನನ್ನ ಮಿತ್ರ ಪರಿವಾರದಲ್ಲಿ ಒಬ್ಬರಾದರು.

ಸಂಗೀತದಲ್ಲಿಯ ಈ Intellectual appealಗೆ ಉದಾಹರಣೆಯನ್ನು ಕೊಡುವುದಾದರೆ ನಾವೆಲ್ಲ ವಿರಾರದಲ್ಲಿ 1973 ಫೆಬ್ರವರಿ ತಿಂಗಳಿನಲ್ಲಿ ಜರುಗಿದ ಒಂದು ಸಂಗೀತ ಕಚೇರಿಯೆಡೆ ದೃಷ್ಟಿಯನ್ನು ಹಾಯಿಸೋಣ. ರಸಿಕರು ಮತ್ತು ಕಲಾವಿದರು ಹಿಂದೆ ಬರೆದ 'ಉನ್ಮಾದಾವಸ್ಥೆಯಲ್ಲಿ ಏಕರೂಪವಾಗುವುದೆಂದರೇನು? ಆ ದಿನ ಜಿತೇಂದ್ರ ಪ್ರಾರಂಭಕ್ಕೇನೇ 'ಶುದ್ಧ ಕಲ್ಯಾಣ'ದ (ಇದು ಹೆಚ್ಚಾಗಿ ಕಚೇರಿಯ ಎರಡನೆಯ ಭಾಗದಲ್ಲಿ ಹಾಡುವ ಭರ್ಜರಿ ರಾಗ) 'ಏರಿ ಮಾಯೀ ಪಿಯಾ' ಕೃತಿಯನ್ನು ವಿಲಂಬಿತ ಏಕತಾಲದಲ್ಲಿ ಹಾಡಲು ಎತ್ತಿಕೊಂಡಿದ್ದರು. ಈ ರಾಗ ಮಂದ್ರಸಪ್ತಕದಲ್ಲಿ ಚೆನ್ನಾಗಿ ಅರಳುತ್ತದೆ. ಅತ್ಯಂತ ಜಾಗ್ರತೆಯಿಂದ ಮೊದಲನೆಯ ಆವರ್ತನ ಮುಗಿಸಿ ಸಮ್ಮಿಗೆ ಬರುವಾಗಲೇ ಶುದ್ಧಕಲ್ಯಾಣ ರಾಗವು ಇಡೀ ಸಭಾಗೃಹದಲ್ಲಿ ತುಂಬಿಕೊಂಡಿತ್ತು. ಇದಕ್ಕೇನೇ ನಾನು ಕಲಾವಿದ ಮತ್ತು ರಸಿಕ ಜನರು ಒಟ್ಟಿಗೆ ಅನುಭವಿಸುವ 'ಉನ್ಮಾದಾವಸ್ಥೆ' ಎನ್ನುತ್ತೇನೆ. ಪ್ರತಿಯೊಂದು ಸಲ ಸಮ್ಮಿಗೆ ಬರುವ ರೀತಿಯೇ ವೈವಿಧ್ಯಪೂರ್ಣವಾಗಿತ್ತು. ಪ್ರತಿಯೊಂದು ನಿಲ್ಲುವ ಎಡೆ, ಅಂದರೆ 'ಠೆಹರಾವ್' ಕೂಡ ರಾಗಾಲಾಪದ ಅವಿಭಾಜ್ಯ ಅಂಗ ಹೇಗೆ? ಎಂಬುದನ್ನು ಜಿತೇಂದ್ರ ತೋರಿಸಿಕೊಟ್ಟರು. 'ನೀಂದನ ಆವತ' ಈ ಧ್ರುತಕೃತಿಯನ್ನು ಅನೇಕ ರೀತಿಯಲ್ಲಿ ತೀವ್ರಮಧ್ಯಮ, ಗಾಂಧಾರ ಮತ್ತು ಧೈವತ ಈ ಸ್ವರಗಳ ಮಹತ್ವವನ್ನು ಎತ್ತಿ ತೋರಿಸುತ್ತಾ ಜಿತೇಂದ್ರರು ಮುಂದೆ ಸಾಗಿದರು. ಒಂದು ಮಾತನ್ನು ಇಲ್ಲಿಯೇ ಹೇಳಬೇಕು. ಅಭಿಷೇಕಿಯವರ ಶಾರೀರ ಭೀಮಸೇನ ಜೋಶಿಯವರ ಅಥವಾ ಜಸರಾಜರ ಶಾರೀರದಂತೆ ಇರಲಿಲ್ಲ. ಅವರದು ಸ್ವಲ್ಪ ಜಡತರವಾದ ಕಂಠ. ಅಭ್ಯಾಸಬಲದಿಂದ ನುಣುಪುಮಾಡಿದ್ದು, ಸವಾಯಿ ಗಂಧರ್ವ ಟೈಪಿನ ಧ್ವನಿ. ಆದರೆ, ಅವರ ನಿರಂತರ

ಅಭ್ಯಾಸ, ಆಳವಾಗಿ ಅರ್ಥಮಾಡಿಕೊಂಡು ಮಂಡಿಸುವ ರೀತಿ ಮತ್ತು ಹಾಡುವಾಗಲೇ ಜೊತೆಗೆ ಕುಳಿತವರನ್ನು ಚುಂಬಕ ಶಕ್ತಿಯಿಂದ ಎಳೆದು ರಾಗದ ಸ್ವರವ್ಯಂಜನಗಳಲ್ಲಿ ಮುಳುಗಿಸಿ, ಸ್ವತಃ ಪರಮಾನಂದ ಪಡೆಯುವ ರೀತಿಯೇ ಅಮೋಘವಾಗಿತ್ತು. 'ತುಮಸೆ ವಚನ ದೇಕೆ ಹಾರಿ, ಮೈ ಬಾಲಮಾ' ಇದು ಮಿಶ್ರರಾಗದಲ್ಲಿ ದಾದರಾದಲ್ಲಿಯ ಕೃತಿ. ಆ ದಿನ ಗಾಯನ ಪ್ರಕಾರದಲ್ಲಿ ಅಂದರೆ ದಾದರಾ, ಠುಮರಿ, ಗಜಲ್ ಇಂತಹ ಹಾಡುಗಳಲ್ಲಿ ಪ್ರಾವೀಣ್ಯಗಳಿಸಿದ ನಿರ್ಮಲಾದೇವಿ ಅರುಣ (ಅಂದರೆ ಸಿನೆ ನಟ ಗೋವಿಂದಾ ಅವರ ತಾಯಿ) ಎದುರಿಗೆ ಕುಳಿತು ತಲೆ ಅಲ್ಲಾಡಿಸುತ್ತಾ 'ವಾಹ್, ಕ್ಯಾ ಬಾತ್‌ಹೈ' ಎಂದು ಪ್ರತಿಕ್ಷಣಕ್ಕೂ 'ದಾದ' ಕೊಟ್ಟಿದ್ದು ಈಗಲೂ ಸ್ಮರಣೆಯಲ್ಲಿದೆ.

ಠುಮರಿ ಪ್ರಕಾರ ಅಂದರೆ ಕರ್ನಾಟಕ ಸಂಗೀತದಲ್ಲಿಯ ಜಾವಳಿಯ ಪ್ರಕಾರದಂತೆ. ಕವಿತೆಯ ಪ್ರತಿಯೊಂದು ಸಾಲೂ ಕಾವ್ಯಮಯವಾದದ್ದು, ಅರ್ಥಪೂರ್ಣ ಶೃಂಗಾರ, ವಿರಹ ರಸಗಳಿಂದ ತುಂಬಿ ತುಳುಕುವ ಪಂಕ್ತಿಗಳು. ಜಿತೇಂದ್ರರ ಶಬ್ದೋಚ್ಚಾರಗಳ ಬಗ್ಗೆ ನಾನು ಮೊದಲೇ ಬರೆದಿದ್ದೇನೆ. ಈ ಹಾಡಿನ ನಂತರ ಅವರೇ ಸಂಗೀತವನ್ನು ನೀಡಿದ್ದ 'ಕಟ್ಯಾರ ಕಾಳಜಾತ ಘುಸಲಿ' ಮರಾಠಿ ಸಂಗೀತ ನಾಟಕದಲ್ಲಿಯ ಒಂದು ರಂಗಗೀತೆ 'ಯಾ ಭುವನಾತೀಲ ಗೀತ ಪುರಾಣೆ' ಈಗಲೂ ಕಿವಿಯಲ್ಲಿ ಗುಂಯ್‌ಗುಟ್ಟುತ್ತದೆ. ಕಾರಣ ಅದರ ಸ್ವರರಚನೆಯಲ್ಲಿ, ಜಿತೇಂದ್ರ ಅಭಿಷೇಕಿ, ನಾಲ್ಕು ರಾಗಗಳನ್ನು ಜೋಡಿಸಿ ಈ ಹಾಡನ್ನು ಹೆರಳಿನಂತೆ ಪೋಣಿಸಿದ್ದಾರೆ. ನಾಲ್ಕು ರಾಗಗಳು, ಅಂದರೆ, ನಂದ್, ಕಾಮೋದ್, ಬಿಹಾಗಡ್ ಮತ್ತು ಛಾಯಾನಟ್ ಇವೆಲ್ಲಾ ಪ್ರತ್ಯೇಕವಾಗಿಯೂ ಅತ್ಯಂತ ಸುಂದರವಾದ ರಾಗಗಳು. ಇವುಗಳ ಮಿಶ್ರಣವೇ ಅಲೌಕಿಕ ಸ್ವರೂಪದ್ದು.

ಈಗ ರಂಗಗೀತೆಗಳ ಮಾತು ಬಂದಿದ್ದರಿಂದ ಸ್ವಲ್ಪ ವಿಷಯಾಂತರವಾದರೂ ಹೇಳಲೇಬೇಕಾದುದು. ಗ್ಲ್ಯಾಕ್ಸೋ ಕಂಪನಿಯಲ್ಲಿದ್ದಾಗ ನನಗೆ ನಾಗಪುರ್, ಜಬಲಪುರ್, ಇಂದೂರ್ ಮೊದಲಾದ ಪಟ್ಟಣಗಳಿಗೆ ಆಗಾಗ ಹೋಗಬೇಕಾಗುತ್ತಿತ್ತು. ನಾಗಪುರದಲ್ಲಿಯ ಪ್ರತಿನಿಧಿ ಸೋಯಾಬೀನನ್ನು ಮೊಟ್ಟ ಮೊದಲು ಬಿತ್ತಿ ಒಳ್ಳೆಯ ಕೃಷಿ ಮಾಡಿದ್ದರು. ಅದು ಪ್ರೋಟೀನುಗಳ ಮತ್ತೊಂದು ಆಕರವಾಗಿದ್ದು, ಅದರ ಬಗ್ಗೆ ಜಿಜ್ಞಾಸೆ ಉಂಟಾಗಿದ್ದರಿಂದ ನಾವೆಲ್ಲ ಅವರ ಕೃಷಿಯನ್ನು ನೋಡಿ ತುಂಬಾ ಖುಷಿಯಾಗಿ, ಅವರ ಕಂಪನಿಯ ಮುಂಬಯಿಯ ವಿತರಕನೆಂದು ಪಾರ್ಟ್‌ಟೈಮ್ ಕೆಲಸದ ಭಾರವನ್ನು ನಾನು ಹೊತ್ತುಕೊಂಡಿದ್ದೆ. ಅದರ ಉದ್ಘಾಟನೆಗೆ ಜಿತೇಂದ್ರ ಅಭಿಷೇಕಿ, ರಾಮದಾಸ್ ಕಾಮತ್, ಫೈಯ್ಯಾಜ್ ಮತ್ತು ವಸಂತರಾವ್ ದೇಶಪಾಂಡೆ ಇವರ ರಂಗಗೀತೆಗಳ ಆಯೋಜನೆಯನ್ನು ನಾವು ಹಾಕಿಕೊಂಡಿದ್ದೆವು. ಎಲ್ಲ ರಂಗಗೀತೆಗಳಿಗೆ (ಹೊಸ ನಾಟಕಗಳು) ಜಿತೇಂದ್ರ ಅವರೇ ಸಂಗೀತವನ್ನು ನೀಡಿದ್ದರು. ಸೂತ್ರಧಾರರು ಅವರೇ. ಆಗಿನ್ನೂ ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಕಾಂಪ್ಲೆಕ್ಸ್ ಅಸ್ತಿತ್ವದಲ್ಲಿ ಇರಲಿಲ್ಲ. ರವೀಂದ್ರ ನಾಟ್ಯ ಮಂದಿರವೇ ಇಂತಹ ಕಲೆಗಳಿಗೆ ತಾಣವಾಗಿತ್ತು. ಜಿತೇಂದ್ರರಿಗಿಂತ ವಸಂತರಾವ ದೇಶಪಾಂಡೆಯವರು ವಯೋಮಾನದಲ್ಲಿಯೂ, ಅನುಭವದಲ್ಲಿಯೂ ಹಿರಿಯರಾಗಿದ್ದರೂ ಅವರು ಜಿತೇಂದ್ರ ಅಭಿಷೇಕಿಯವರ ಶಿಷ್ಯರೇ ಆಗಿದ್ದರು. ರಾಮದಾಸ್ ಕಾಮತ್ ಮತ್ತು ಫೈಯಾಜ್ ಸಂಗೀತವನ್ನು ಕಲಿತದ್ದೇ ಜಿತೇಂದ್ರರಲ್ಲಿ.

ಆಗ ಜಿತೇಂದ್ರ ಅವರು ನನ್ನನ್ನು ಪಕ್ಕದಲ್ಲಿ ಕರೆದು, 'ನೀವು ನನ್ನನ್ನು ಇಂದಿನ ಕೊನೆಯ ಹಾಡುಗಾರನೆಂದು ಹೇಳಿದ್ದೀರಾ.! ಆ ಮಾನ ನಿಜಕ್ಕೂ ದೇಶಪಾಂಡೆಯವರದು. ನಾನು ಮೊದಲೇ ಹಾಡಿ ಮುಗಿಸುತ್ತೇನೆ. ಕೊನೆಯ ಕಲಾವಿದ ದೇಶಪಾಂಡೆಯವರು ಇರಲಿ' ಎಂದರು. ಹಾಗಾದರೆ, ನಿಮ್ಮ ಪ್ರಾರ್ಥನೆ 'ಸರ್ವಾತ್ಮಕಾ ಸರ್ವೇಶ್ವರಾ'ದೊಂದಿಗೆ ಮುಕ್ತಾಯ ಮಾಡಬೇಕೆಂದಿತ್ತು. 'ಈಗೇನು ಮಾಡೋಣ?' ಎಂದು ಕೇಳಿದೆ. 'ನಾನು ಈ ಹಾಡಿನ ಶಬ್ದಗಳನ್ನು ದೇಶಪಾಂಡೆಯವರಿಗೆ ಹೇಳಿಕೊಡುತ್ತೇನೆ. ನಾಟಕದಲ್ಲಿ ಈ ಹಾಡು ರಾಮದಾಸ ಕಾಮತ್ ಅವರದು. ಈ ಪ್ರಾಬ್ಲಮ್‌ನ್ನು ನನಗೆ ಬಿಟ್ಟುಬಿಡಿ" ಎಂದು ಅವರು ಹೇಳಿದರು. ಆ ದಿನದ ಕಾರ್ಯಕ್ರಮದ ಕೊನೆಗೆ ವಸಂತರಾವ್ ದೇಶಪಾಂಡೆಯವರು 'ಶಿಷ್ಯ'ನ ತತ್ಪರತೆಯಿಂದ ಹಾಡಿದ್ದು ಅಮೋಘವಾಗಿತ್ತು. ವಸಂತರಾವ್ ಅವರು ಅದನ್ನು ಮತ್ತೆಂದೂ ಅಂದರೆ ಅವರ ಮೃತ್ಯುವಿನ ತನಕ (1983) ಹಾಡಲಿಲ್ಲ. ದೇಶಪಾಂಡೆಯವರು ಈ ಅತ್ಯಂತ ಜನಪ್ರಿಯ ಹಾಡನ್ನು ಹಾಡಿದುದು ಒಂದೇ ಸಲ. ಅದೂ ಜಿತೇಂದ್ರ ಅಭಿಷೇಕಿಯವರ ಇಚ್ಛೆಯ ಮೇರೆಗೆ. ಹೀಗಿತ್ತು ಅವರ ಠೀವಿ.

ಈಗ ಮರಳಿ ವಿರಾರದ ಸಂಗೀತ ಕಚೇರಿಯ ಕಡೆಗೆ ಹೋಗೋಣ.

ಮಧ್ಯಂತರ ಕಾಫಿ-ತಿಂಡಿಯ ನಂತರ ಜಿತೇಂದ್ರರು 'ಜೋಗಕೌಂಸ' ರಾಗವನ್ನು ಎತ್ತಿಕೊಂಡರು. ವಿಲಂಬಿತದಲ್ಲಿಯ ರಚನೆ 'ಸುಧರ ಘರ ಪಾಯೋ' ಕೃತಿಯನ್ನು ಒಂದು ತಾಸು ಹಾಡಿ ತಣಿಸಿದರು. ರಾಗದ ವ್ಯಾಕರಣ ಎಲ್ಲಾ ರಾಗಗಳಲ್ಲಿ ವ್ಯವಸ್ಥಿತವಾಗಿದ್ದರೂ ಅದನ್ನು ಸುಂದರವಾಗಿ ಅರಳಿಸುವ, ಮೂಡಿಸುವ ಶಕ್ತಿ ಒಬ್ಬ ಗಾಯಕನ ಹಾಗೆ ಇನ್ನೊಬ್ಬನದು ಇರುವುದಿಲ್ಲ. ಈ ರಾಗವನ್ನು ನಾನು ಜಿತೇಂದ್ರರ ಗುರುಗಳಾಗಿದ್ದ ಗುಣಿದಾಸ್, ಮಾಣಿಕ ವರ್ಮಾ, ಪ್ರಭಾಕರ ಕಾರೇಕರ್ ಮೊದಲಾದ ಗವಯಿಗಳಿಂದ ಕೇಳಿದ್ದೇನೆ. ಆದರೆ ಜಿತೇಂದ್ರರು ಸ್ವರ ಹಚ್ಚುವ ಸ್ಟೈಲೇ ಬೇರೆ. ಅದಕ್ಕೆ 'ಅಭಿಷೇಕಿ ಪ್ಯಾಟರ್ನ್' ಎಂದು ಹೇಳಬಹುದು. ಉದಾಹರಣೆಗೆ 'ಧನಿಸಾ' 'ಧಸಾ' ಇವೆಲ್ಲ ಚಿಕ್ಕ ಚಿಕ್ಕ ಸ್ವರ ಸಮೂಹಗಳು ಒಂದರ ನಂತರ ಮತ್ತೊಂದು ಬರಲೇಬೇಕು. ವೈಶಿಷ್ಟ್ಯವೇನೆಂದರೆ, ಕೋಮಲ ಧೈವತ ಸ್ವರ ಹಚ್ಚಿದ ಕೂಡಲೇ 'ಮೀಂಡ' ತೆಗೆದುಕೊಂಡು ಜಾರಿ ಬರುವ ರೀತಿಯೇ ರೋಮಾಂಚಕಾರಿಯಗಿತ್ತು. 'ಪೀರ ಪರಾಯಿ' ಆ ದಿನದ 'ಜೋಗ್‌ಕೌಂಸ' ಅವಿಸ್ಮರಣೀಯವಾಗಿತ್ತು. 33 ವರ್ಷಗಳ ಹಿಂದೆ ಕೇಳಿದ ಆ ಸಂಗೀತ ಜಲಸೆಯ ನೆನಪಿನಿಂದಲೇ ನನಗೆ ಇಂದೂ ರೋಮಾಂಚವಾಗುತ್ತದೆ.

ನನ್ನ ಮಟ್ಟಿಗೆ ಜಿತೇಂದ್ರರ ವ್ಯಕ್ತಿತ್ವದ ನಾಲ್ಕು ಅವಿಭಾಜ್ಯ ಅಂಗಗಳೆಂದರೆ ಮೊದಲನೆಯದಾಗಿ ಅತ್ಯಂತ ಉಚ್ಚಕೋಟಿಯ ಗುಣಗ್ರಾಹಕ ವಿದ್ಯಾರ್ಥಿ ಅವರು. ಎರಡನೆಯದಾಗಿ, ಅವರು ಶ್ರೇಷ್ಠ ಮಟ್ಟದ ಖಯಾಲ್ ಗಾಯಕರು. ಮೂರನೆಯದಾಗಿ, ಅವರು ಅತ್ಯಂತ ಸುಮಧುರ ಸಂಗೀತದ ಸಂಯೋಜಕರು ಮತ್ತು ನಾಲ್ಕನೆಯದೆಂದರೆ ಅಸಾಮಾನ್ಯ ಗುರುಗಳು. ಇವೆಲ್ಲವನ್ನು ಆತ ತನ್ನ 28ನೆಯ ವಯಸ್ಸಿಗೇ ತೋರಿಸಿಕೊಟ್ಟ ಮಹಾನುಭಾವ!

68ನೆಯ ವರ್ಷಕ್ಕೇ ನಮಗೆಲ್ಲಾ 'ಅಲ್‌ವಿದಾ' ಎಂದು ಹೇಳಿ ಮರಳಿ ಬರಲಾಗದ ಸ್ಥಳಕ್ಕೆ ಹೋದ ಜಿತೇಂದ್ರ 17 ನಾಟಕಗಳಿಗೆ ಸಂಗೀತವನ್ನು ನೀಡಿದ್ದಾರೆ. 1964ರಿಂದ 1982-83ರ ವರೆಗೆ ಸಂಗೀತ ದಿಗ್ದರ್ಶನವನ್ನು ಮಾಡಿದ್ದಾರೆ. 13 ವರ್ಷದ ವನವಾಸದ ನಂತರ ಅವರ ನೆನಪು ಮರಾಠಿ ನಿರ್ಮಾಪಕರಿಗೆ ಆದದ್ದು ಒಂದು ಆಶ್ಚರ್ಯದ ಮಾತೇ! 1995ರಲ್ಲಿ ವಸಂತ ಕಾನೇಟಕರ್ ಅವರ 'ತೂ ತರ್ ಚಾಫೇಕಳಿ' ನಾಟಕಕ್ಕೆ ಸಂಗೀತವನ್ನು ನೀಡಿದರು. 1998ರಲ್ಲಿ ಜಿತೇಂದ್ರ ಅಭಿಷೇಕಿ ಅವರು ತೀರಿಕೊಂಡರೂ ಅಭಿಷೇಕಿಯವರ ರಂಗಸಂಗೀತದ ಬಗ್ಗೆ ಈಗಾಗಲೇ ಪುಣೆ ವಿಶ್ವವಿದ್ಯಾಲಯದವರು ಎರಡು ಡಾಕ್ಟರೇಟುಗಳನ್ನು ದಯಪಾಲಿಸಿದ್ದಾರೆ ಎಂಬುದೇ ಒಂದು ದಾಖಲೆ. ಯಮನ್ ಕಲ್ಯಾಣ್‌ದಂತಹ ರಾಗದಲ್ಲಿ ಜನರಿಗೆ ಹಿಡಿಸುವ ಸ್ವರಸಂಯೋಜನೆ ಮಾಡುವುದು ಅಷ್ಟು ಸುಲಭವಲ್ಲದಿದ್ದರೂ ಅಪರಿಚಿತ ರಾಗಗಳಲ್ಲಿ ಅದರ ಮಿಶ್ರಣದಿಂದ ತಯಾರು ಮಾಡಿದ ರಚನೆಗಳು ಮರಾಠಿ ಸಂಗೀತ ರಂಗಭೂಮಿಯಲ್ಲಿ ಕ್ರಾಂತಿಯನ್ನೇ ಎಬ್ಬಿಸಿದವು. 'ಅಮೃತವರ್ಷಿಣಿ', 'ಚಾರುಕೇಶಿ'ಯಂತಹ ದಕ್ಷಿಣಾದಿ ರಾಗಗಲ್ಲಿ ಕಟ್ಟಿದ ರಚನೆಗಳು ತುಂಬಾ ಜನಪ್ರಿಯವಾದವು. ಇದರ ಹೊರತಾಗಿ 'ಸೂರ್ಯಕೌಂಸ, ಭಿನ್ನಷಡ್ಜ, ಶ್ರೀ, ಸಾಲಗವರಾಳಿ (ಇದೂ ಕೂಡ ಕರ್ನಾಟಕೀ ರಾಗ) ದೇವತಾಭೈರವ ಇತ್ಯಾದಿ, ರಾಗಗಳ ರಚನೆಗಳಿವೆ. ನಾನು ಒಂದು ಸಲ ಅವರಿಗೆ ಕೇಳಿದೆ: "ನೀವು ಇಷ್ಟೆಲ್ಲಾ ನಾಟಕಗಳಿಗೆ ಸಂಗೀತ ಕೊಟ್ಟಿದ್ದೀರ. ಕೆಲವು ಹೆಣ್ಣು ಪಾತ್ರಗಳಿಗೆ ಭಾವಗೀತೆಯ ತರಹದ ರಾಗದ ಸಂಯೋಜನೆ ಇದೆ. ಮತ್ಸ್ಯಗಂಧಾ ನಾಟಕದಲ್ಲಿಯ ಸತ್ಯವತಿ ಪಾತ್ರಕ್ಕೆ 'ಅರ್ಥಶೂನ್ಯ ಭಾಸೇ ಮಜಲಾ' ಈ ಹಾಡಿನ ಸಂಗೀತ ಭಾವಗೀತೆಯಲ್ಲವೇ?"

ಅಭಿಷೇಕಿ ಮುಗುಳು ನಗೆ ಸೂಸಿ, 'ಅದರ ರಾಗದ ಹೆಸರು ಹೇಳಿ' ಎಂದರು. 'ಗೊತ್ತಿಲ್ಲವಲ್ಲ! ಮುಂಜಾನೆಯ ಯಾವುದೋ ರಾಗಗಳ ಮಿಶ್ರಣವೇ' ಎಂದು ಕೇಳಿದೆ, ಸ್ವಲ್ಪ ಸಂಶಯದಿಂದ. 'ಇಲ್ಲ, ಅದು ಒಂದೇ ರಾಗ, ಭಟಿಯಾರ. ಆದರೆ ನೋಡಿ, ಆಶಾಲತಾ ಈ ರೋಲ್ ಮಾಡ್ತಿದ್ರು. ಧ್ವನಿ ಇಂಪಾದರೂ ಪರಿಶ್ರಮವಿರಲಿಲ್ಲ. ಮೇಲಾಗಿ ನಾಟಕದಲ್ಲಿಯ ಸಂಗೀತಕ್ಕೆ ನೀಡಿದ ಹಾಗೆಯೇ ಶಬ್ದಗಳಿಗೆ ಕೂಡ ಪ್ರಾಧಾನ್ಯವನ್ನು ಕೊಡಲೇಬೇಕು. ವ್ಯಕ್ತಿ ರೇಖೆಯನ್ನು (characterization) ನೋಡಿ ಸಂಗೀತ ಸಂಯೋಜನೆ ಮಾಡಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಪುರುಷರೇ ಸ್ತ್ರೀ ಪಾತ್ರಗಳನ್ನು ವಹಿಸುತ್ತಿದ್ದುದರಿಂದ ಆ ಪಾತ್ರಗಳಿಗೆ ತಕ್ಕುದಾದ ಸಂಗೀತವನ್ನು ಕೊಡದೇ ಹಾಡುಗಾರ ನಟನನ್ನು ಎದುರಿಗೆ ಇಟ್ಟುಕೊಂಡು ಅವರ ಸಲುವಾಗಿಯೇ ನಾಟಕಗಳನ್ನೂ, ಸಂಗೀತವನ್ನೂ ಕೊಟ್ಟಿದ್ದುಂಟು' (ಉದಾ. ಮಾನಾಪಮಾನ, ಏಕಚಪ್ಯಾಲಾ. ನಟಿ ಸ್ತ್ರೀ ಪಾತ್ರಿ ಬಾಲಗಂಧರ್ವ). 'ಆದರೆ ಈಗ ಹಾಗಿಲ್ಲ ನೋಡಿ, ನೀವು ಹೇಳೋದು ಸರಿ, 'ತವಭಾಸ ಅಂತ ಝೂಲಾ' ಇದಕ್ಕೆ ಭಾವಗೀತೆಯಂತೆ ಸ್ವರಸಂಯೋಜನೆ ಮಾಡಿದ್ದೇನೆ. ಇವೆರಡೂ ಹಾಡುಗಳಲ್ಲಿ ತಾನ ಪ್ರಕಾರಗಳಿಗೆ ಸ್ಕೋಪ್ ಕೊಡಲಿಲ್ಲ. ಅದೇ ಪರಾಶರ ಯತಿ (ರಾಮದಾಸ್ ಕಾಮತ್) ಅವರಿಗೆ 'ಸಾದ ದೇತಿ ಹಿಮ ಶಿಖರೆ' ಇದಕ್ಕೆ ಬೃಂದಾವನಿ ಸಾರಂಗವನ್ನು ಉಪಯೋಗಿಸಿದೆ. ತಾನಕ್ರಿಯೆಯಿಂದ ರಾಮದಾಸ್ ಇದನ್ನು ತುಂಬಾ ಚೆನ್ನಾಗಿ ಹಾಡುತ್ತಾನೆ. 'ದೇವಾಗರಃಚೆ ಜ್ಞಾತ ಕುಣಾಲಾ..." ಎಂದು ಹೇಳಿದ ಕೂಡಲೇ ನಾನು 'ಯಮನ್' ಎಂದೆ. ಅವರು ಖುಷಿಯಿಂದ ತಲೆ ಅಲ್ಲಾಡಿಸಿದರು.

"ಮತ್ತೊಂದು ಮಾತು ನಿನಗೆ ಹೇಳಬೇಕು (ಕೊಂಕಣಿಯಲ್ಲಿ ಬಹುವಚನವಿಲ್ಲ) ಸುಗಮ ಸಂಗೀತ, ಭಾವಗೀತೆ ಇವೆಲ್ಲಾ ಪ್ರಕಾರಗಳು ನಾಟಕಗಳಲ್ಲಿ ಬರಬಹುದಲ್ಲ? ನಿಮ್ಮಂತಹವರೇ ಇಂತಹ ಪ್ರಕಾರಗಳಿಗೆ ಲೇಬಲ್ಲನ್ನು ಹಚ್ಚುತ್ತಿರುತ್ತಾರೆ. ನಾಟ್ಯಾರ್ಥಕ್ಕೆ ನ್ಯಾಯವನ್ನು ನೀಡಬೇಕಾದರೆ ಇವೆಲ್ಲವನ್ನೂ ಮಾಡಬೇಕಾಗುತ್ತದೆ. ಹಿಂದಿನ ಕಾಲದ ಸಂಯೋಜಕರು ಕೂಡ ಈ ದೃಷ್ಟಿಯಲ್ಲಿ ವಿಚಾರಮಾಡಿದ್ದಾರೆ. ಮೋ.ಗ. ರಾಂಗಣೇಕರರ ಎಲ್ಲಾ ನಾಟಕಗಳಲ್ಲಿ, ಅತ್ರೆಯವರ ನಾಟಕಗಳಲ್ಲಿ ಇಂತಹುದೇ ಸಂಗೀತ ಇದೆಯಲ್ಲ?" ನಾನು ಸಕಾರಾತ್ಮಕವಾಗಿ ತಲೆ ಅಲ್ಲಾಡಿಸಿದೆ.

"ನೀನು ಲೇಕುರೆ ಉದಂಡ ಝಾಲಿ ನೋಡಿದೆಯಾ?"

"ಇಲ್ಲ"

"ನೀನು ನೋಡಲೇ ಬೇಕು. My Fair Lady ಪ್ರಕಾರದ ಆಪೆರಾ ನಾಟಕದಲ್ಲಿಯ ಕಾವ್ಯ ಮುಕ್ತ ಛಂದಸ್ಸಿನದು. ಗದ್ಯ-ಪದ್ಯ ಪ್ರಕಾರಗಳ ಭೇದಭಾವ ಈ ನಾಟಕದಲ್ಲಿಲ್ಲ. ಸಂಭಾಷಣೆ ಮಾಡುತ್ತಲೇ ಶ್ರೀಕಾಂತ (ಶ್ರೀಕಾಂತ ಮೋಘೆ ಖ್ಯಾತ ಮರಾಠಿ ನಟರು) ಹಾಡು ಪ್ರಾರಂಭಿಸುತ್ತಾನೆ. ಇತರರು ಕೋರಸ್ಸಿನಲ್ಲಿ ಹಾಡುತ್ತಾರೆ. ಇದೊಂದು ಆಪೆರಾ ಆಗಿದ್ದುದರಿಂದ ಇದರ ಸಂಗೀತ ಗೋವಾದಲ್ಲಿಯ ತ್ರಿಯಾತ್ರದಂತೆ. ಲೋಕ ಸಂಗೀತ ಪ್ರಕಾರ ತ್ರಿಯಾತ್ರ ಅಂದರೆ ಪೋರ್ಚುಗೀಸ್ ಭಾಷೆಯಲ್ಲಿ 'ಥಿಯೇಟರ್' ಕೊಂಕಣಿ ಭಾಷೆಯ ಗೋವಾ ಕ್ರಿಶ್ಚಿಯನ್ನರ ಸಂಗೀತ ಪ್ರಕಾರದಲ್ಲಿ ಈ ರೀತಿಯ ಸಂಗೀತ ಇದೆ. ಗೋವಾ ಕ್ರಿಶ್ಚಿಯನ್ನರ ಸಂಗೀತ ನಾಟಕ ನೋಡಿರುವೆಯಾ?"

"ಇಲ್ಲವಲ್ಲ" ಎಂದೆ ನಾನು.

ಆ ನಾಟಕ ಪ್ರಕಾರಗಳಲ್ಲಿ ತ್ರಿಯಾತ್ರ ಸಂಗೀತವಿದೆ. ಪಾಶ್ಚಿಮಾತ್ಯ ಹಾರ್ಮೋನಿಕ್ ವಾದ್ಯಗಳನ್ನು ಬಳಸುತ್ತಾರೆ. ಅದರಲ್ಲಿಯ ಸಂಗೀತವೆಲ್ಲ ಈ ಧಾಟಿಯದೇ."

ಸುಗಮ ಸಂಗೀತದ ಲಯ, ವನ್, ಟು, ಥ್ರೀ ಅಥವಾ ಒನ್, ಟು, ಥ್ರೀ ಫೋರ್ ಎಂದು ಲೆಕ್ಕ ಹಾಕಿ ಅದೇ ಲಯದಲ್ಲಿ ಸಂಗೀತ ಮುರದೆ ಸಾಗುತ್ತದೆ. ಸಂಪೂರ್ಣ ಸಂಗೀತದಲ್ಲಿ ವೈಯಲಿನ್‌ಗಳನ್ನು ಉಪಯೋಗಿಸಲಾಗಿದೆ. ಕೊಂಗೋ, ಬೋಂಗೋಗಳನ್ನು ಕೂಡ. ಮರಾಠಿ ನಾಟಕಗಳಲ್ಲಿ ಸೌಂಡ್ ಟ್ರಾಕ್ ಬಳಕೆಯಲ್ಲಿ ಬಂದದ್ದು ಈ ನಾಟಕದಿಂದಲೇ.

ಜಿತೇಂದ್ರ ಅಭಿಷೇಕಿ ಇರುವತನಕ ಸಂಗೀತವನ್ನೇ ಉಸಿರಾಡುತ್ತಿದ್ದರು. ನಾಟ್ಯ ಸಂಗೀತ ಅವರ ಜೀವಾಳವಾಗಿತ್ತು. ಮರಾಠಿ ಸಂಗೀತ ನಾಟಕದ ಮೂಲ, ಕನ್ನಡ ಯಕ್ಷಗಾನವಾದರೂ, ಶಾಕುಂತಲ ನಾಟಕದಲ್ಲಿಯ (ಅಣ್ಣಾಸಾಹೇಬ ಕಿರ್ಲೋಸ್ಕರ ಮರಾಠಿಯಲ್ಲಿ, ಗಂಗಾಧರ ಚೂರಮರಿ ಕನ್ನಡದಲ್ಲಿ) ಅನೇಕ ಹಳೆ ಹಾಡುಗಳಿಗೆ ಪುನಶ್ಚೇತನವಿತ್ತ ಶ್ರೇಯ ಅಭಿಷೇಕಿಯವರದು. ಅಂತೆಯೇ, ಅನೇಕ ನಾಮಶೇಷವಾದ ಸಂಗೀತ ನಾಟಕಗಳ ನಾಟ್ಯ ಪದಗಳನ್ನು ಮೊದಲಿನ ಧಾಟಿಗಳಲ್ಲಿಯೇ ತಮ್ಮ ಕಚೇರಿಗಳಲ್ಲಿ

ಹಾಡಲಾರಂಭಿಸಿದರು. ಈಗ ಅವರ ಅಸಂಖ್ಯ ಶಿಷ್ಯರೂ ಕೂಡ ಜಿತೇಂದ್ರ ಅಭಿಷೇಕಿ ಹಾಡಿದ ಹಾಡುಗಳನ್ನು ತಮ್ಮ ವೈಯಕ್ತಿಕ ಕಚೇರಿಗಳಲ್ಲಿ ಹಾಡುತ್ತಿರುತ್ತಾರೆ.

ಅವರ ಮದುವೆಯಾದದ್ದು 1969ರಲ್ಲಿ. ಅಂದರೆ ಅವರದು ಲೇಟ್ ಮ್ಯಾರೇಜು. ಅವರಿಗೆ ಆಗ 39ವರ್ಷ. ಹೆಂಡತಿ ವಿದ್ಯಾ ಗೋಡಸೆ. ಮಗ ಶೌನಕ್ ತಂದೆಯಂತೆ ಒಳ್ಳೆಯ ಹಾಡುಗಾರನಾಗಿದ್ದಾನೆ. ಮೇಖಲಾ ಮಗಳು. 28ನೇ ವರ್ಷಕ್ಕೆ ಗುರುಪದಕ್ಕೆ ಮುಟ್ಟಿದ ಜಿತೇಂದ್ರ ಅಭಿಷೇಕಿಯವರ ಹೆಂಡತಿ 'ಗುರುಮಾತಾ' ಪಟ್ಟಕ್ಕೆ ಆರಾಮವಾಗಿ ಏರಿದರು.

ಜಿತೇಂದ್ರ ಅಭಿಷೇಕಿಯವರಿಗೆ ತಮ್ಮದೇ ಒಂದು ಗುರುಕುಲವನ್ನು ಆರಂಭಿಸುವ ಯೋಚನೆಯಿತ್ತು. ಅದಕ್ಕಾಗಿ, ರವಿ ಪರಾಂಜಪೆ ಅಂದರೆ ಖ್ಯಾತ ಆರ್ಕಿಟೆಕ್ಟ್. ಅವರಿಂದ ಜಿತೇಂದ್ರ ಬ್ಲೂಪ್ರಿಂಟ್ಸನ್ನು ತಯಾರು ಮಾಡಿಸಿದ್ದರು. ಆದರೆ ವಿಧಿಲಿಖಿತ ಬೇರೆಯೇ ಇತ್ತು. 1998ರ ನವೆಂಬರ್ ತಿಂಗಳಿನಲ್ಲಿ ಅವರು ತೀರಿಕೊಂಡರು. ಕಲಾಭಾರತಿಯಲ್ಲಿ 2006ರತನಕ ಪ್ರತಿವರ್ಷ ಅವರ ಸ್ಮೃತಿದಿನವನ್ನು ಆಚರಿಸಲಾಗುತ್ತಿತ್ತು.

*****

7.20

ಪಂ. ವಸಂತ ಕನಕಾಪುರ್ ಇನ್ನು ಕೇವಲ ನೆನಪು ಮಾತ್ರ (1933–2013)

ನಾನು ಹೈಸ್ಕೂಲಿನಲ್ಲಿರುವಾಗ ಕನ್ನಡದ ಖ್ಯಾತ ಲೇಖಕ, ಅ.ನ ಕೃಷ್ಣರಾಯರ, 'ಕರ್ನಾಟಕದ ಕಲಾವಿದರು' ಎಂಬ ಪುಸ್ತಕದಲ್ಲಿ ವಸಂತ ಕನಕಾಪುರ ಒಬ್ಬ ಪ್ರತಿಭಾವಂತ ಹುಡುಗ ಎಂದು ಬರೆದದ್ದುದನ್ನು ಓದಿದ ನೆನಪು. ನನ್ನ ಕುತೂಹಲ ಕೆರಳಿ ನಾನು ಕರ್ನಾಟಕ ಕಾಲೇಜಿನಲ್ಲಿ ಅವರ ಸಂಗೀತದ ಕಚೇರಿಯಲ್ಲಿ ಹಾರ್ಮೋನಿಯಮ್ ನುಡಿಸುವದನ್ನು ಕೇಳಲು ಹೋದೆ. ಅದೇ ನನ್ನ ಮೊಟ್ಟಮೊದಲಿನ ವಸಂತ ಕನಕಾಪುರರ ಪರಿಚಯ.

1957ರಲ್ಲಿ ನಾನು ಧಾರವಾಡಕ್ಕೆ ಹೋದಾಗ ಮೊಟ್ಟ ಮೊದಲು ವಸಂತ ಕನಕಾಪುರ ಅವರನ್ನು ಭೇಟಿಯಾದೆ. ಅವರು ಆಗ ಮುಂಬಯಿನಲ್ಲಿ ಕೆಲಸಕ್ಕೆ ಇದ್ದರು, ವಾರ್ಷಿಕ ರಜಾದಿನಗಳಲ್ಲಿ ಹುಟ್ಟೂರಾದ ಧಾರವಾಡಕ್ಕೆ ಬಂದಿದ್ದರು.

ಬಳಿಕ 1960ರಲ್ಲಿ ನಾನು ಮುಂಬಯಿಯಲ್ಲಿ ವಾಸ್ತವ್ಯ ಮಾಡಿದ ಮೇಲೆ ಪಂ. ಬಸವರಾಜ ರಾಜಗುರು ಅವರ ಮೈಸೂರು ಅಸೋಸಿಯೆಶನ್‌ದ ಕಚೇರಿಯಲ್ಲಿ ಇವರು ಪಕ್ಕವಾದ್ಯಕಲಾವಿದರಾಗಿ ಹಾರ್ಮೋನಿಯಮ್ ನುಡಿಸಿದ್ದುದು ನೆನಪು. ಅದೊಂದು ಅವಿಸ್ಮರಣೀಯ ಸಂಗೀತ ಕಚೇರಿಯಾಗಿತ್ತು.

ಅ.ನ ಕೃಷ್ಣರಾಯರು ಕರ್ನಾಟಕದ ಶ್ರೇಷ್ಠ ಶಾಸ್ತ್ರೀಯ ಸಂಗೀತದ ಕಲಾವಿದರಾದ ಗಂಗುಬಾಯಿ ಹಾನಗಲ್, ಪಂ.ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ ಇವರ ಜೊತೆ 7 ವರ್ಷದ ಬಾಲ ಕಲಾವಿದ ವಸಂತ ಕನಕಾಪುರರನ್ನು ಸೇರಿಸಿದ್ದು ಅವರ ಪ್ರತಿಭೆಗೆ ಸಾಕ್ಷಿಯಾಗಿತ್ತು.

"ಬುರ್ಡೆಯವರೇ ನಾನು 11 ವರ್ಷದವನಿದ್ದಾಗ ಮುಂಬಯಿಯ ಆಗಿನ ಕಾಲದ ಖ್ಯಾತ ಸಂಗೀತ ಸಾಮ್ರಾಜ್ಞಿ ಶ್ರೀಮತಿ ಕೇಸರಬಾಯಿ ಕೇರಕರ್ ಅವರ ಸಂಗೀತ ಕಚೇರಿಯಲ್ಲಿ ಪೇಟಿಯನ್ನು ಬಾರಿಸಲು ನನ್ನನ್ನು ಕೇಳಿದಾಗ ನನಗೆ ತುಂಬಾ ಆಶ್ಚರ್ಯವಾಗಿತ್ತು. ಕಾರಣ ನನ್ನ ಗುರುಗಳಾದ ಹನುಮಂತರಾವ್ ವಾಳವೇಕರ್ ಹಾಗೂ ದೇಸಾಯಿ ಸಾಹೇಬರು ಆಗ ಕಚೇರಿಯಲ್ಲಿ ಹಾಜರಿದ್ದರು. ಆದರೂ

ಪಕ್ಕವಾದಕನಾಗಿ ಸಹಕರಿಸಲು ನನ್ನನ್ನು ಆಮಂತ್ರಿಸಿದಾಗ ದಿಗ್ಭ್ರಮೆಯಾಗಿತ್ತು. ಎರಡೂವರೆ ಗಂಟೆಯ ಸಂಗೀತ ಕಚೇರಿ ಮುಗಿದ ನಂತರ ಕೇಸರಬಾಯಿಯವರು ನನ್ನ ಬೆನ್ನು ಚಪ್ಪರಿಸಿದ್ದು ಇಂದೂ ನೆನಪಾಗುತ್ತದೆ". ಕೇಸರಬಾಯಿಯವರು ತುಂಬಾ ಸಿಡುಕಿನ ಸ್ವಭಾವದವರಾಗಿದ್ದ ಕಾರಣ ಅವರ ಗೋಜಿಗೆ ಹೆಚ್ಚಾಗಿ ಯಾರೂ ಹೋಗುತ್ತಿರಲಿಲ್ಲ. ಅಂತಹ ಶ್ರೇಷ್ಠ ಗಾಯಕಿ ವಸಂತ ಕನಕಾಪುರರನ್ನು ಮೆಚ್ಚಬೇಕಾದರೆ ಅವರೆಷ್ಟು ಪ್ರತಿಭಾವಂತರು ಎಂದು ಬೇರೆ ಹೇಳಬೇಕಾಗಿಲ್ಲ. ಇವರು ಸಂಗೀತ ಸಂಯೋಜನೆ ಮಾಡಿದ ಕನ್ನಡ ಸುಗಮ ಸಂಗೀತ ಕರ್ನಾಟಕದಲ್ಲಿ ಬಹಳ ಪ್ರಸಿದ್ಧಿಪಡೆದಿದೆ. ನವೆಂಬರ 22, 2013ರಂದು ಮುಂಜಾನೆ ಖ್ಯಾತ ಲೇಖಕ ಸದಾನಂದ ಕನವಳ್ಳಿಯವರು ವಸಂತ ಕನಕಾಪುರ ಅವರು ಹಿಂದಿನ ರಾತ್ರಿ ಹೃದಯಾಘಾತದಿಂದ ನಿಧನರಾದರು ಎಂದು ಫೋನ್ ಮಾಡಿ ತಿಳಿಸಿದರು. 80 ವರ್ಷದ ಪ್ರತಿಭಾವಂತ ಪಂ. ವಸಂತ ಕನಕಾಪುರ ಇನ್ನು ನೆನಪು ಮಾತ್ರ, ಅವರಿಗೆ ಮುಂಬಯಿ ಕನ್ನಡಿಗರ ಪತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ.

*****

7.21

ಡಾ. ರಾಜಶೇಖರ ಮನ್ಸೂರವರ 'ಕರ್ನಾಟಕೀ ಕಶೀದಾ'

ಮಲ್ಲಿಕಾರ್ಜುನ ಮನ್ಸೂರರ ಜನ್ಮ ಶತಾಬ್ದಿಯ ಅಂಗವಾಗಿ ಅಯ್ಯರ್ ಫೌಂಡೇಶನ್ನವರು ಎರಡು ಹಂತಗಳ ಕಾರ್ಯಕ್ರಮ ಏರ್ಪಡಿಸಿದ್ದರು. 2010ರ ಅಕ್ಟೊಬರ್ 19ರಂದು ಮುಂಜಾನೆ ಮಲ್ಲಿಕಾರ್ಜುನ ಮನ್ಸೂರವರ 'ರಸಯಾತ್ರೆ'ಯ ಮೇಲಿನ ಚರ್ಚಾಸತ್ರ, ಸಾಯಂಕಾಲ ವಿಜಯಾ ಗಟ್ಲೇವಾರ್ ಹಾಗೂ ಶ್ರುತಿ ಸಡೋಲಿಕರ್‌ವರ ಗಾಯನ. ರವಿವಾರ ಮುಂಜಾನೆ ಅಶ್ವಿನಿ ದೇಶಪಾಂಡೆ ಹಾಗೂ ರಾಜಶೇಖರ ಮನ್ಸೂರವರ ಗಾಯನವಿತ್ತು.

ಮನ್ಸೂರರ ಸಂಗೀತ ಕ್ಷೇತ್ರದಲ್ಲಿಯ ಕೊಡುಗೆಯ ಬಗ್ಗೆ ಸೂತ್ರ ಸಂಚಾಲನೆಯನ್ನು ಪ್ರಸ್ತುತ ಲೇಖಕ ಮಾಡಿದ. ಈ ಸತ್ರದಲ್ಲಿ ಮನ್ಸೂರರ ಚಿರಂಜೀವ ರಾಜಶೇಖರ್ ಹಾಗೂ ಅವರೊಂದಿಗೆ 10 ವರ್ಷ ಕಾಲ ತಬಲಾ ಸಾಥ್ ಕೊಟ್ಟ ಅಯ್ಯರ್ ಫೌಂಡೇಶನ್ನಿನ ಬಾಲಕೃಷ್ಣ ಅಯ್ಯರ್ ಹಾಗೂ ಶಹರದಲ್ಲಿಯ ಅನೇಕ ಗಣ್ಯ ಗಾಯಕರೂ, ರಸಿಕರೂ ಸೇರಿದ್ದರು. ಮಲ್ಲಿಕಾರ್ಜುನ ಮನ್ಸೂರರು ಹಾಡಿದ, 'ದು:ಖ ದೂರ ಕರೋ ಮುರಾರಿ' ಎಂಬ ಭೈರವ ರಾಗದಿಂದ ಪ್ರಾರಂಭವಾದ ಈ ಚರ್ಚಾಸತ್ರ ಅವಿರತವಾಗಿ ಎರಡು ತಾಸು ನಡೆಯಿತು. ಇದರಲ್ಲಿ, ಮನ್ಸೂರರವರು ಹಾಡಿದ ಅನೇಕ ಮರಾಠಿ ಮತ್ತು ಕನ್ನಡ ನಾಟಕಗಳ ಹಾಡುಗಳನ್ನು ಧ್ವನಿಮುದ್ರಿಕೆಗಳೊಂದಿಗೆ ಇತರ ಪರಂಪರೆಯ ಅಂದರೆ ಉಸ್ತಾದ್ ಖಾದೀಮ ಹುಸೈನ್‌ಖಾನ್ (ಜಯಪುರ- ಅತ್ರೋಲಿ), ಫೈಯಾಜ್ ಖಾನ್ (ಆಗ್ರಾ) ಹಾಗೂ ಕೇಸರಬಾಯಿ ಕೇರಕರ್‌ರವರ (ಜಯಪುರ-ಅತ್ರೋಲಿ) ಇವರ ಹಾಡುಗಳೊಂದಿಗೆ ಕೇವಲ ಗುಣಗಳನ್ನು ಅವಲೋಕಿಸಿ, ಅವುಗಳೊಂದಿಗೆ ಮನ್ಸೂರರ ಹಾಡುಗಳನ್ನು ತುಲನಾತ್ಮಕ ವಿಶ್ಲೇಷಣೆ ಮಾಡಿದುದು ತುಂಬ ಕುತೂಹಲಕಾರಕವಾಗಿತ್ತು.

ಡಾ. ರಾಜಶೇಖರ ಮನ್ಸೂರರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷಿನ ಅಧ್ಯಾಪಕರಾಗಿ ನಾಲ್ಕು ವರ್ಷಗಳ ಹಿಂದೆ ನಿವೃತ್ತರಾಗಿ ಇತ್ತೀಚೆಗೆ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ಧಾರವಾಡದಲ್ಲಿ ಹುಟ್ಟಿ ಬೆಳೆದುದರಿಂದ ಮತ್ತು ಪಂ. ಮಲ್ಲಿಕಾರ್ಜುನ ಮನ್ಸೂರರ ಇಳಿ ವಯಸ್ಸಿನಲ್ಲಿ ಅವರಿಗೆ ವ್ಯವಸ್ಥಿತವಾಗಿ ಸ್ವರ ಸಾಥ್ ಕೊಡುತ್ತಿದ್ದುದರಿಂದ ಮತ್ತು ಕ್ರಮಬದ್ಧ ರಿಯಾಝು ಮಾಡಿದ್ದರಿಂದಲೂ ಅವರ ಆ ದಿನದ ಹಾಡುಗಾರಿಕೆ ಧಾರವಾಡದ ಜನಪ್ರಿಯ ಕಸೂತಿಯಂತೆ ಎದ್ದು ಕಾಣಿಸುತ್ತಿತ್ತು. 'ಕಶಿದಾ' ಅಂದರೆ

ಮರಾಠಿಯಲ್ಲಿ ಕಸೂತಿ. ಧಾರವಾಡದ ಬಾಬುಸಿಂಗರ ಫೇಡೆಯಂತೆ, ಧಾರವಾಡದ ಕಸೂತಿಗೂ ಮಹಾರಾಷ್ಟ್ರದಲ್ಲಿ ಮನ್ನಣೆ ಇದೆ. ಅಂತೆಯೇ ಹೇಳಿದ್ದು, ರಾಜಶೇಖರವರ 'ಕಶೀದಾ' ಎಂದು!

ಮಲ್ಲಿಕಾರ್ಜುನರ, ಸವಾಯಿ ಗಂಧರ್ವ, ಗಂಗೂಬಾಯಿ ಅವರ ಹಾಡುಗಾರಿಕೆ, ಅಷ್ಟೇ ಏಕೆ, ಇತ್ತೀಚಿನ ವೆಂಕಟೇಶಕುಮಾರರ ಹಾಡುಗಾರಿಕೆಯಲ್ಲಿ ಕೂಡ ಸ್ವಲ್ಪ ಕರ್ನಾಟಕಿಯ 'ಟಚ್' ಎದ್ದು ಕಾಣಿಸುತ್ತದೆ! ವಿಶೇಷವಾಗಿ ಸ್ವರ ಹಚ್ಚುವಾಗ, ಮುಂದೆ 'ಬೋಲ್' ಆಲಾಪಿಯಲ್ಲಿಯೂ ಒಮ್ಮೊಮ್ಮೆ ಕಂಡು ಬರುತ್ತದೆ, ಈ ಕರ್ನಾಟಕೀ ಬಿನ್ನಾಣ! ನೋಡಿ ಇದು ರುಚಿಕಟ್ಟಾದ ಮೊಸರಿಗೆ ಸ್ವಲ್ಪ ಸಕ್ಕರೆ ಸೇರಿಸಿದಂತೆ!

ಆ ದಿನ ರಾಜಶೇಖರ ಅವರು, ವಿಖ್ಯಾತ ಗಾಯಕಿ ಅಶ್ವಿನಿ ದೇಶಪಾಂಡೆಯವರ 'ರಾಮಕಲಿ' ರಾಗದ ಹಾಡುಗಾರಿಕೆಯ ನಂತರ, ತಂದೆಯವರಂತೆಯೇ ಅತ್ಯಂತ ವಿನಮ್ರತೆಯಿಂದ ವೇದಿಕೆಗೆ ಬಂದು ಎಲ್ಲರಿಗೂ ಅಭಿವಾದನೆ ಮಾಡಿ ತಂದೆಯವರ ಜನ್ಮ ಶತಾಬ್ದಿಗೆ ಕಾರ್ಯಕ್ರಮ ಏರ್ಪಡಿಸಿದ್ದಕ್ಕೆ ಧನ್ಯವಾದ ಅರ್ಪಿಸಿ ತಮ್ಮ ಕಂಠ ಸಂಗೀತ ಆರಂಭಿಸಿದರು. ಪಕ್ಕವಾದ್ಯಕ್ಕೆ ತಬಲಾ ನುಡಿಸಿದವರು ನಮ್ಮವರೇ ಆದ ಓಂಕಾರ ಗುಲವಾಡಿ ಹಾಗೂ ಹಾರ್ಮೋನಿಯಮ್‌ಗೆ ನಿರಂಜನ ಲೇಲೆ ಇದ್ದರು.

ಮಲ್ಲಿಕಾರ್ಜುನ ಮನ್ಸೂರರಂತೆ ಒಂದೆರಡು ಪ್ರಚಲಿತ ರಾಗಗಳನ್ನು ಎಡಬಿಡದೇ ಒಂದರ ನಂತರ ಇನ್ನೊಂದು ಹಾಡಿದರು. ರಾಗವ್ಯಾಕರಣ ಗೊತ್ತಿದ್ದ ವೈಯಾಕರಣಿಗಳಿಗೂ, ರಾಜಶೇಖರರು ಆ ದಿನ, 'ರಾಮಸಾಖ' ರಾಗ ಪ್ರಸ್ತುತಿಸಿದ್ದದ್ದು ಒಂದು ಸಮಸ್ಯಾಪೂರ್ತಿಯ ಪರೀಕ್ಷೆಯೇ ಆಗಿತ್ತು! ತಂದೆಯಂತೆಯೇ ಮಗ. 'ಸಾಖ್' ಎಂಬ ಈ ಪ್ರಕಾರದಲ್ಲಿ 'ರಾಮಸಾಖ್' ಮತ್ತು 'ಲಚ್ಚಾಸಾಖ್' ಎಂಬ ಎರಡು ಪ್ರಕಾರಗಳಿವೆ. ಇವುಗಳಲ್ಲಿ ಲಕ್ಷ್ಮಣ ಹೆಸರಿನ 'ಲಚ್ಚಾಸಾಖ' ಎಂದು ಅಪ್ರಚಲಿತ ರಾಗವನ್ನು ಕೆಲವು ಬುಜುರ್ಗ (ಹಿರಿಯ) ಗಾಯಕರಾದ ಪಂ. ರತ್ನಾಕರ ರಾಮನಾಥಕರ್ ಮತ್ತು ಪಂ. ಕೃಷ್ಣರಾವ್ ಚೋಣಕ್ ಅವರಿಂದ ನಾನು ಕೇಳಿದ್ದೇನೆ. ಪಂ. ಮಲ್ಲಿಕಾರ್ಜುನರು ಈ 'ಲಚ್ಚಾಸಾಖ್'ರಾಗವನ್ನು ಹಾಡುತ್ತಿದ್ದರು. ಈ 'ಲಚ್ಚಾಸಾಖ್' ಸಂಗೀತ ಕೇಳುವ ರಸಿಕರಿಗೆ, ಅಂದರೆ ರಾಗ ವ್ಯಾಕರಣದಲ್ಲಿ ಶೂನ್ಯ ಪರಿಶ್ರಮವಿದ್ದ ನನ್ನಂಥವರಿಗೆ, ಈ ರಾಗ ಗೌಡ ಸಾರಂಗ ಮತ್ತು ಅಲಯಾ ಬಿಲಾವಲದ ಮಿಶ್ರಣದಂತೆ ಕೇಳಿಸುತ್ತಿತ್ತು. ಆ ದಿನ ರಾಜಶೇಖರ ಹಾಡಿದ 'ರಾಮಸಾಖ್ , ಅವರ್ಣನೀಯವಾಗಿತ್ತು. ಇದೊಂದು ಬಿಲಾವಲ್, ಖಮಾಜ್ ಹಾಗೂ ಕೆಲವು ಜಿಂಝೋಟ ರಾಗದ ಸಮೂಹಗಳಿಂದ ಸುಶೋಭಿತಗೊಳಿಸಿದಂತೆ ಅನಿಸುತ್ತಿತ್ತು. ಕೆಲವೊಮ್ಮೆ ಕೇದಾರ ರಾಗದ ಅಂಶವೂ ಇತ್ತು!

ನಂತರ ಪ್ರಸ್ತುತ ಪಡಿಸಿದ ರಾಗ ನಾನು ಗುರುತಿಸಲಾರದಾದೆ! ಅದು ಮುಂಜಾನೆ ಹಾಡುವ 'ಕಾನಡಾ' ಪ್ರಕಾರದಂತೆ ಇತ್ತು. 'ತೀವ್ರ ಧೈವತ್' ('ಧ' ಸ್ವರ) ಉಪಯೋಗಿಸಿ ಹಾಡಿದ್ದರಿಂದಲೋ ಏನೋ, 'ಹುಸೈನಿ ಕಾನಡಾ'ದ ನೆನಪು ಪದೇ ಪದೇ ಆದರೂ 'ಸಾರಂಗದ' ನೆನಪು ಕೂಡ ಮರುಕಳಿಸುತ್ತಿತ್ತು. ಹದಿನೈದು ನಿಮಿಷ ಹಾಡಿದ ಕೂಡಲೇ

ರಾಜಶೇಖರ ತಂದೆಯವರಂತೆಯೇ' ಪಕ್ಕವಾದ್ಯದವರಿಗೆ ಸನ್ನೆ ಮಾಡಿ, ಆ ರಾಗ ಮುಗಿಸಿದ ಕೂಡಲೇ ಶುದ್ಧ ಸಾರಂಗ ಎತ್ತಿಕೊಂಡರು. ಬಹುಶ: ಮೊದಲಿನ ರಾಗದ ಸಾರಂಗ ಅಂಶ ಅವರನ್ನು ಪೀಡಿಸುತ್ತಿದ್ದಿರಬಹುದು.

ಇತ್ತೀಚಿಗೆ, 'ಶುದ್ಧ ಸಾರಂಗ' ಕಚೇರಿಗಳಲ್ಲಿ ಹಾಡುವದು ಬಹಳ ಕಡಿಮೆ. ಹೀಗಾಗಿ ರಸಿಕರಿಗೆ ರಾಜಶೇಖರ ಮನ್ಸೂರರ ಕಚೇರಿ ಸಮಾರಾಧನೆಯಂತೆ ಅನಿಸಿದರೆ ಆಶ್ಚರ್ಯವಿಲ್ಲ. ಕೊನೆಗೆ 'ಭೈರವಿ' ರಾಗದ ಒತ್ತಾಯ ರಸಿಕರಿಂದ ಆದರೂ ಮನ್ಸೂರರು ಮತ್ತೊಂದು ಅಪ್ರಚಲಿತ, 'ಗೋಧೂಳಿ ಗೌರಿ' ರಾಗದಿಂದ ತಮ್ಮ ಈ ವೈವಿಧ್ಯಪೂರ್ಣ ಕಚೇರಿಗೆ ಮಂಗಳ ಹಾಡಿದರು.

ತಂದೆಯವರ, 'ದಮ್ ಸಾಸ್' ಇರದಿದ್ದರೂ, ತಂದೆಯವರ ಪರಿಶ್ರಮದ 'ಫಿರತ್' ಕಂಠದಲ್ಲಿ ಇರದಿದ್ದರೂ ಆ ದಿನದ ರಾಜಶೇಖರ ಮನ್ಸೂರರ ಗಾಯನ ಅತ್ಯಂತ ಸುಂದರವಾಗಿತು. ನಾಲ್ಕಾರು ವರ್ಷಗಳ ಮೊದಲು ಅವರ ಕಚೇರಿಗಳನ್ನು ಕೇಳಿದ ನನಗೆ ಇದೊಂದು ರಾಜಶೇಖರ ಮನ್ಸೂರರ , 'ಟಾಪ್' ಕಚೇರಿಯಾಗಿತ್ತು ಎಂದು ಈಗ ಅನಿಸುತ್ತದೆ. ಇದರರ್ಥ ಪಂ. ರಾಜಶೇಖರರು ತಮ್ಮಷ್ಟಕ್ಕೆ ಪರಿಶ್ರಮಮಾಡುತ್ತಲೆ ಇದ್ದಾರೆ ಎಂಬುದು ಖಚಿತ.

ಒಂದೇ ಒಂದು ಮಾತು ಇಲ್ಲಿ ಹೇಳಬೇಕಾಗಿದೆ. ಈ ಉತ್ತರಾಧಿಕಾರಿಯಿಂದ ಮನ್ಸೂರ ಘರಾಣೆಯ ವಿರಳ ಪ್ರಕಾರದ ಹಾಡುಗಾರಿಕೆಯನ್ನು ಮುಂದರಿಸಲು ಶಿಷ್ಯರು ಇದ್ದಾರೆಯೇ? ರಾಜಶೇಖರರು ಅವರನ್ನು ತಯಾರು ಮಾಡುತ್ತಿದ್ದಾರೆಯೇ? ಎಂಬ ಪ್ರಶ್ನೆಗೆ ಅವರೇ ಉತ್ತರ ಕೊಡಬೇಕು.

*****

7.22

ಪಂ. ಭೀಮಸೇನ ಜೋಶಿ
– ಹೈದರಾಬಾದಿನಲ್ಲಿ –1989ರ ಕಚೇರಿ

ಹೈದರಾಬಾದಿನ 'ಚಾರ್‌ಮಿನಾರ್' ಜಗತ್ಪ್ರಸಿದ್ಧ. ಹಾಗೇಯೇ ವಝೀರ್ ಸುಲ್ತಾನ್ ಟೊಬ್ಯಾಕೊ ಕಂಪನಿಯವರ ಸಿಗರೇಟು ಕೂಡ. ಕೋಲ್ಕತ್ತ ಐಟಿಸಿಯ ಸಂಗೀತ ರೀಸರ್ಚ್ ಅಕಾಡೆಮಿಯವರು ವರ್ಷಕ್ಕೆ 4–6 ಸಂಗೀತ ಕಚೇರಿಗಳನ್ನು ಭಾರತದ ವಿವಿಧ ಶಹರಗಳಲ್ಲಿ ಏರ್ಪಡಿಸಿದರೆ, ವಝೀರ್ ಸುಲ್ತಾನ್ ಕಂಪನಿಯು ಕೂಡ ಹೈದರಾಬಾದ್, ಮುಂಬಯಿಗಳಲ್ಲಿ 'ಸ್ಪಿರಿಟ್ ಆಫ್ ಫ್ರೀಡಮ್' ಕಚೇರಿಗಳನ್ನು ಸಮಾರಂಭಗಳಂತೆ ಏರ್ಪಡಿಸುತ್ತಿತ್ತು, 1988–1989ರಲ್ಲಿ. ಇದರ ಸೂತ್ರಗಳೆಲ್ಲ ಮೋಹನ ಹೆಮ್ಮಾಡಿಯವರ ಕೈಯಲ್ಲಿದ್ದವು. ಇಂತಹ ಒಂದು ಕಚೇರಿಗೆ ನಾನು ಹೈದರಾಬಾದಿಗೆ ಹೋದಾಗ ಯಾವ ತೊಂದರೆ–ತಾಪತ್ರಯವೂ ಇಲ್ಲದೆ ಅವಕಾಶ ಸಿಕ್ಕಿತ್ತು. ನನ್ನ ವಾಸ್ತವ್ಯ ಸಿಕಂದರಾಬಾದಿನ ತಾಜಮಹಲ್ ಹೊಟೆಲಿನಲ್ಲಿತ್ತು. ಇದು ಮಂಗಳೂರಿನ ತಾಜಮಹಲಿನಂತೆಯೇ ಮಿಡ್ಲ್‌ಕ್ಲಾಸ್ ಹೊಟೆಲ್! ಊಟ, ವಸತಿ ನಮ್ಮಲ್ಲಿದ್ದಂತೆಯೇ. ಅವು ಮಳೆಗಾಲದ ದಿನಗಳು. 1989ರ ಆಗಸ್ಟ್ ತಿಂಗಳು. ಶನಿವಾರದ ಕೆಲಸ ಮುಗಿಸಿ ಬಂದರೆ ಹೊಟೆಲ್ಲಿನ ಸ್ವಾಗತ ಕಕ್ಷೆ ಸಮಾರಂಭಕ್ಕೆಂದು ಅಲಂಕೃತಗೊಂಡಂತೆ ಭರ್ಜರಿಯಾಗಿ ಕಾಣಿಸುತ್ತಿತ್ತು. ಎದುರಿನ ಕೋಚಿನಲ್ಲಿ ಪಂ. ಭೀಮಸೇನ ಜೋಶಿ, ಪಕ್ಕದ ಖುರ್ಚಿಯ ಮೇಲೆ ವಿರಾಜಮಾನರಾಗಿದ್ದವರು ಮಾಧವ ಗುಡಿ ಹಾಗೂ ಶ್ರೀಕಾಂತ*. ಇವರ ತಂಡ ಮರುದಿನ ಅಂದರೆ ರವಿವಾರ ಮುಂಜಾನೆ ಸುರಮಂಡಳದ ಪರವಾಗಿ ಪಿಎಸ್‌ಟಿ (ವಝೀರ್ ಸುಲ್ತಾನ್ ಟೊಬ್ಯಾಕೋ) ಅವರು ಏರ್ಪಡಿಸಿದ ಕಚೇರಿಯಲ್ಲಿ ಭಾಗವಹಿಸುವವರಿದ್ದರು. ಭೀಮಣ್ಣನವರನ್ನು ಸಿಕಂದರಾಬಾದಿನಲ್ಲಿ ನೋಡಿ ನನಗೆ ತುಂಬಾ ಖುಷಿಯಾಗಿತ್ತು. ಮಾಧವ ಗುಡಿಯೊಂದಿಗೆ ಮೊದಲಿಗೆ ಮಾತುಕತೆಯನ್ನು ನಡೆಸಿ ಕಚೇರಿಯ ಸಂಪೂರ್ಣ ಮಾಹಿತಿ ಪಡೆದುಕೊಂಡು, ಭೀಮಣ್ಣನವರೊಂದಿಗೆ ಔಪಚಾರಿಕ ಮಾತು ಆಡಿ, ರವಿವಾರ ಅದೇ ಹೋಟೆಲಿನಲ್ಲಿಯ ಕಾಟೇಜಿನಲ್ಲಿ ಭೆಟ್ಟಿಯಾಗುವುದೆಂದು ನಿಶ್ಚಯಿಸಿದೆ. ಕಚೇರಿ ಮುಗಿದ ಮೇಲೆ ಸಿಕಂದರಾಬಾದಿನಲ್ಲಿಯ ತಾಜಮಹಲ್‌ನಲ್ಲಿ ಭೀಮಣ್ಣನವರೊಂದಿಗಿನ ಸಂದರ್ಶನವನ್ನು ಅದೇ ತಿಂಗಳ 27ರ ಟೈಮ್ಸ್‌ನಲ್ಲಿ ಬರೆದೆ. ಅದು, ದಪ್ಪ ಅಕ್ಷರಗಳಲ್ಲಿ 'I AM A MUSIC THIEF' ಎಂಬುದು ಭೀಮಣ್ಣನವರು ಹೇಳಿದ ಹಾಗೆ, ಅವರ ದೊಡ್ಡ ಹಾಡುವ ಭಂಗಿಯ

ಚಿತ್ರದೊಂದಿಗೆ ಪ್ರಕಟವಾಯಿತು. ಆಗಿನ್ನೂ ಟಾಯಿಮ್ಸ್, ಬಾಂಬೆ ಟಾಯಿಮ್ಸ್ ಆಗಿತ್ತು. ಹೀಗಾಗಿ, ನಾನು ಮಾಡಿದ ನಾಗಪುರ, ಹೈದರಬಾದ್, ಪುಣೆಯಲ್ಲಿಯ ಕಚೇರಿಗಳ ವಿಮರ್ಶೆಗಳನ್ನು ಆಯಾ ಆವೃತ್ತಿಗಳಲ್ಲಿ ತಪ್ಪದೆ ಹಾಕುತ್ತಿದ್ದರು. ಅಲ್ಲಿಯ ಓದುಗರ ಪ್ರತಿನಿಧಿತ್ವ ಟಾಯಿಮ್ಸ್‌ಗೆ ಬೇಕಿತ್ತು. ಈ ಲೇಖನದ ಮಾಹಿತಿ ನನ್ನ ಕಡತಗಳಲ್ಲಿ ಸಿಕ್ಕಿತು. ಆ ಕಚೇರಿ ಹಾಗೂ ಭೀಮಣ್ಣನವರ ಅಪರೂಪದ ಸಂದರ್ಶನದ ವಿವರಗಳು ಇಲ್ಲಿವೆ.

ಪಂ. ಜಸರಾಜರೇ ಪಂ. ಭೀಮಸೇನ ಜೋಶಿಯವರನ್ನು 'ಇಪ್ಪತ್ತನೇ ಶತಮಾನದ ತಾನ್‌ಸೇನ್' ಎಂದು ಗೌರವಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮೊಟ್ಟಮೊದಲಿನ ಷಡ್ಜದಿಂದಲೇ ಪಂಡಿತರು ಯಾವ ರಾಗ ಆಯ್ಕೆ ಮಾಡಿದ್ದಾರೆ ಎಂದು ರಾಗಜ್ಞಾನವುಳ್ಳ ರಸಿಕರು ಕಂಡುಕೊಳ್ಳುವ ಶಕ್ಯತೆ ಅವರ ಕಚೇರಿ ಆಲಿಸುವವರಿಗೆ ಇರುತ್ತಿತ್ತು. ಇಂತಹ (ಆಧಾರರಹಿತ!) ನಂಬಿಕೆ ಕೇವಲ ತಾನ್‌ಸೇನ್ ಹಾಡುವಾಗ ಆಗುತ್ತಿತ್ತಂತೆ.

ಇಂತಹ ಆಖ್ಯಾಯಿಕೆಗಳು ಪಂ. ಭೀಮಸೇನ ಜೋಶಿಯವರ ಹಾಡುಗಾರಿಕೆಯ ಬಗ್ಗೆ ಅನೇಕವಿವೆ. ಹಿಂದೂಸ್ತಾನಿ ಸಂಗೀತದ ಹಾಡುಗಾರಿಕೆಯ ಪೂರ್ಣತ್ವ ಎಂದರೆ ಪಂ. ಭೀಮಸೇನ ಜೋಶಿ. 68ನೆಯ ವಯಸ್ಸಿನಲ್ಲಿ ಕೂಡ (ಸಂದರ್ಶನ ಮಾಡಿದಾಗ) ಯುವಗಾಯಕರಿಗೆ ಸಾಧ್ಯವಾಗದಂತಹ, ದಿನಕ್ಕೆ ಎರಡು ಕಚೇರಿಮಾಡುವ ಹುಮ್ಮಸ್ಸಿದ್ದ ಏಕಮೇವಾದ್ವಿತೀಯ ಹೆಸರು ಅಂದರೆ ಪಂ. ಭೀಮಸೇನ ಜೋಶಿಯವರದು. ಸಂಗೀತ ಕಲೆಯ ಅಭ್ಯಾಸಕ್ಕಾಗಿ ಅವರು ಮಾಡಿದ ಪರಿಶ್ರಮ, ಅವರ ಕುಂದಗೋಳದಲ್ಲಿಯ ವಾಸ್ತವ್ಯ, ಅವರು ಮುಂದೆ ಸಾಗಿದ ದಾರಿ ಇವೆಲ್ಲ ಈಗಿನ ಓದುಗರಿಗೆ, ಅವರ ಸಂಗೀತದ ಖಾಯಮ್ ಕೇಳುಗರಿಗೆ ಚರ್ವಿತಚರ್ವಣದ ಎಂದು ಅನಿಸಬಹುದು. ಇವುಗಳಲ್ಲಿ ಕಾಲವ್ಯಯವನ್ನು ಮಾಡದೆ, ಹೈದರಾಬಾದ್-ಸಿಕಂದರಾಬಾದ್ ಸರೋವರ ಹೊಟೆಲಿನ ಭೀಮಸೇನ ಜೋಶಿಯವರ ಕಚೇರಿಯತ್ತ ಕೂಚುಮಾಡೋಣ.

ಎರಡು ತಿಂಗಳ ಮೊದಲು ಇದೇ ಆವರಣದಲ್ಲಿ 'ಸ್ಪಿರಿಟ್ ಆಫ್ ಫ್ರೀಡಮ್' ಸರಣಿಯಲ್ಲಿ ಪಂ. ರವಿಶಂಕರ್ ಅವರು 90 ನಿಮಿಷ ಭೈರವ ರಾಗವನ್ನು ನುಡಿಸಿದ್ದರು. ಜೊತೆಗೆ ಕೋಲ್ಕತ್ತದ ಕುಮಾರ ಬೋಸ್ ತಬಲಾ ಸಾಥ್ ಕೊಟ್ಟಿದ್ದರು. ಈ ಕಚೇರಿ ಕೂಡ ಮೋಹನ ಹೆಮ್ಮಾಡಿಯವರ 'ಸುರಮಂಡಳ'ದ ವ್ಯವಸ್ಥಾಪನೆ ಹಾಗೂ ವಿಎಸ್‌ಟಿಯವರ ಪ್ರಾಯೋಜಕತೆಯಿಂದಲೇ ಸುಶೋಭಿಸಿದ್ದು.

ನನಗಿಂತ ಎರಡು ವರ್ಷಕ್ಕೆ ಹಿರಿಯರಾದ ಹೆಮ್ಮಾಡಿ ಮೋಹನರಾಯರು ಧಾರವಾಡದವರೇ. ಧಾರವಾಡದವರಿಗೆ ಸಂಗೀತ ಬಿಟ್ಟರೆ ಬೇರೆ ಚಟಗಳೇ ಇಲ್ಲ. ಮುಂದೆ ಕರ್ನಾಟಕ ಕಾಲೇಜಿನಲ್ಲಿ ಕಲಿತು ಬಳಿಕ ಅವಳಿ ಸಿಟಿಯಲ್ಲಿಯೇ ಜಾಹೀರಾತುದಾರರಾಗಿ ಮಿಂಚಿದರು. ವಿಎಸ್‌ಟಿಯವರ ಪ್ರಾಯೋಜಕತೆ ಪಡೆದು ದೇಶದ ಪ್ರಮುಖ ಸಂಗೀತದ ವ್ಯವಸ್ಥಾಪಕ ಸಂಯೋಜಕರೆಂದು ಹೆಸರು ಮಾಡಿದರು.

ಮುಂಜಾನೆ ಒಂಬತ್ತಕ್ಕೆ ಪ್ರಾರಂಭವಾದ ಕಚೇರಿ ಮಧ್ಯಾಹ್ನದ ಒಂದು ಗಂಟೆಗೆ ಮುಗಿಯಿತು. ಪ್ರಾರಂಭಕ್ಕೆ ಮಿಯಾಕಿ ತೋಡಿ (70 ನಿಮಿಷ), ಬಳಿಕ ಬೃಂದಾವನೀ

ಸಾರಂಗ (75 ನಿಮಿಷ), ಒಂದು ಕನ್ನಡ ಭಜನೆ (15 ನಿಮಿಷ), ಕೊನೆಗೆ ಭೈರವಿಯಲ್ಲಿಯ 'ಜೋ ಭಜೆ ಹರೀಕೊ ಸದಾ' – ಬ್ರಹ್ಮಾನಂದ ಸ್ವಾಮಿಯವರ ಹಾಡಿನಿಂದ ಮುಕ್ತಾಯ. ಮೊದಲಿನ ತೋಡಿ ಮುಗಿದ ಕೂಡಲೇ ಮಧ್ಯಂತರ.

ಮುಂಬಯಿಯಲ್ಲಿಯ ಭೀಮಣ್ಣನವರ ಎಲ್ಲಾ ಕಚೇರಿಗಳ ವಿಮರ್ಶೆಯನ್ನು, ಅವರ ಚರಿತ್ರೆಯನ್ನು ಬರೆದ ಮೋಹನ ನಾಡಕರ್ಣಿಯವರೇ ಮಾಡಬೇಕು! ಎಂಬುದು ಟೈಮ್ಸ್ ಸಂಪಾದಕರ ಸುಗ್ರೀವಾಜ್ಞೆ. ಹೀಗಾಗಿ ಏನೂ ಮಾನಸಿಕ ಒತ್ತಡ ಇಲ್ಲದೇ ನಾವೆಲ್ಲಾ (ದಿವಾನ್‌ಜಿ, ಸವೂರ, ಕಾರ್ನಾಡ) ಅವರ ಕಚೇರಿಗಳ ಸಂಪೂರ್ಣ ಆಸ್ವಾದವನ್ನು ಹೀರುತ್ತಿದ್ದೆವು. ಭೀಮಣ್ಣನವರ ಕಚೇರಿ ಅಂದರೆ ನಮಗೆಲ್ಲ ಸಮಾರಾಧನೆಯೇ. 1953ರಿಂದ 2008ರ ಅಕ್ಟೋಬರ್‌ನಲ್ಲಿ ರಾಷ್ಟ್ರೀಯ ಕಲಾಸಂಸ್ಥೆಯಲ್ಲಿ (ಎನ್‌ಸಿಪಿಐನಲ್ಲಿ) ಅವರ ಕೊನೆಯ ಕಚೇರಿಯವರೆಗೆ ಅವರ ಹಲವು ಕಚೇರಿಗಳನ್ನು ನಮ್ಮ ಇಡೀ ಕುಟುಂಬ ತುಂಬಾ ಆಸ್ಥೆಯಿಂದ ಆಲಿಸಿದೆ. ಪ್ರತಿಯೊಬ್ಬರ ಕಣ್ಣಲ್ಲಿ ನೀರು ಮಿನುಗಿದ್ದು, ಭಾವೋತ್ಕಟತೆಯ ಪರಮ ಸೀಮೆಗೆ ಭೀಮಣ್ಣನವರು ನಮ್ಮನ್ನೆಲ್ಲ ತಲುಪಿಸಿದ್ದನ್ನು ಇಲ್ಲಿ ಹೇಳಲೇಬೇಕು. ಕಳೆದ 56 ವರ್ಷಗಳಿಂದ ಅಂದರೆ 1953ರಿಂದ 2008ರ ತನಕ ನಾವೆಲ್ಲಾ ಭೀಮಣ್ಣ, ಗಂಗೂಬಾಯಿ, ರಾಜಗುರು, 1957ರಿಂದ ಅರ್ಜುನ ಸಾ ನಾಕೋಡ, ಗುರುರಾವ್ ದೇಶಪಾಂಡೆಯವರ ಸಂಗೀತವನ್ನು ಕೇಳುತ್ತಲೇ ಬಾಲ್ಯದಿಂದ ವೃದ್ಧಾವಸ್ಥೆಗೆ ಮುಟ್ಟಿದ್ದು! ಅಂದರೆ ನನ್ನ 15ನೇ ವರ್ಷಕ್ಕೆ ಮುಂಬಯಿಯ ಬಿರ್ಲಾ ಮಾತೋಶ್ರೀ ಸಭಾಗೃಹ ಮರೀನ ಲೈನ್ಸ್‌ನಲ್ಲಿ ಕೇಳಿದ ಭೀಮಣ್ಣನವರ ಮೊದಲನೆಯದಾದರೆ ಕೊನೆಯದು 2008ರಲ್ಲಿ. 1984ರಿಂದ 1994ರ ವರೆಗೆ ಹತ್ತು ವರ್ಷಗಳಲ್ಲಿ ಕೇವಲ ಎರಡು ಸಲ ನಾನು ಭೀಮಣ್ಣನವರ ಕಚೇರಿಯ ವಿಮರ್ಶೆಯನ್ನು ಟೈಮ್ಸ್‌ನಲ್ಲಿ ಮಾಡಿದ್ದೇನೆ. ಎರಡೂ ಒಂದೇ ವರ್ಷದಲ್ಲಿ ನಡೆದದ್ದು. ಮೊದಲನೆಯದು ಹೈದರಾಬಾದಿನದು, ಮತ್ತೊಂದು ಟೈಮ್ಸ್ ಪೇಪರಿನ 150ನೇ ವರ್ಷದ ಸಂಭ್ರಮದ ಸಮಾರಾಧನೆಗೆ ಬ್ರೆಬೋರ್ನ್ ಸ್ಟೇಡಿಯಮ್‌ನಲ್ಲಿ ಏರ್ಪಡಿಸಿದ ಅಭೂತಪೂರ್ವ ಕಚೇರಿ. ಅದರ ಬಗ್ಗೆ ಮತ್ತು ಯಾವಾಗಲೂ ಕರ್ನಾಟಕದ ಹಿಂದೂಸ್ತಾನೀ ಸಂಗೀತದ ದಿಗ್ಗಜಗಳ ಒಂದು ಮುಖ್ಯ ಗುಣಮಟ್ಟವನ್ನು ಇಲ್ಲಿ ಒತ್ತಿ ಅಧೋರೇಖಿತ ಮಾಡಬೇಕೆಂದು ನನಗೆ ಎನಿಸುತ್ತಿದೆ. ಮನ್ಸೂರರಾಗಲಿ, ಗಂಗೂಬಾಯಿಯವರಾಗಲಿ, ರಾಜಗುರು ಮತ್ತು ನಮ್ಮ ಭೀಮಣ್ಣನವರಾಗಲೀ, ಕಚೇರಿ ಪ್ರಾರಂಭವಾಗುವ ಮುನ್ನ, ಒಂದರ್ಧ ನಿಮಿಷದಲ್ಲಿಯೇ ತಂಬೂರಿಯ(ಗಳ) ಶ್ರುತಿಯನ್ನು ಆಲಿಸಿ ಪಕ್ಕದಲ್ಲಿ ಕುಳಿತ ಪೇಟಿ, ತಬಲಾ ನುಡಿಸುವವರ ಕಡೆ ದೃಷ್ಟಿಯನ್ನು ಬೀರುತ್ತಾ ಕಚೇರಿಯನ್ನು ಪ್ರಾರಂಭಿಸಿಯೇ ಬಿಡುತ್ತಾರೆ. ಇತರ ಗಾಯಕ–ವಾದಕರ ಮಾತೇ ಬೇರೆ. ಮೈಕಿನ ಫೀಡ್ ಬ್ಯಾಕ್, ತಬಲಾ ದಾಯಾ, ಬಾಯಾ (ಬಲ, ಎಡ) ಪ್ರತಿಧ್ವನಿ, ತಂಬೂರಿಗಳ (ಕೆಲವು ಸಲ ನಾಲ್ಕು), ಶ್ರುತಿಯನ್ನು ಸರಿಪಡಿಸುವಿಕೆ, ಪೇಟಿವಾದಕನ ಹೇಳಿಕೆ, ಇವುಗಳ ಪರಿಸಂವಾದ ಮೈಕಿನೊಡನೆ ಸುಮಾರು 15 ನಿಮಿಷ ನಡೆಸಿ ಕಚೇರಿ ಪ್ರಾರಂಭಿಸುವ ಪರಿಪಾಠ. ಇದರಲ್ಲಿ ಮುಂಚೂಣಿಯಲ್ಲಿದ್ದವರು ಯಾರು ಎಂಬುದಕ್ಕೆ ಮಹತ್ವವಿಲ್ಲ. ಆದರೆ ಇಗಾಗಲೇ ಹೆಸರಿಸಿದವರು ವೇಳೆಗೆ ಸರಿಯಾಗಿ ಬಂದು ರಸಿಕರ ವೇಳೆಗೆ ಮಹತ್ವವನ್ನು ನೀಡಿ ಕಚೇರಿಯನ್ನು ಪ್ರಾರಂಭಿಸಿಯೇ ಬಿಡುತ್ತಾರೆ. ಯಾಂತ್ರಿಕತೆಯ ಲವಲೇಶವೂ ಇಲ್ಲದ ಸುರಮ್ಯ ಕಚೇರಿ.

ಹೈದರಾಬಾದಿನ ಭೀಮಣ್ಣನವರ ಕಚೇರಿ ಎಂದಿನಂತೆ, ಸ್ವರಗಳ ಅನುಕ್ರಮ ಜೋಡಣೆ, ತಾನುಗಳ ವೇಗ, ಆರೋಹ ಹಾಗೂ ಅವರೋಹ ತಾನುಗಳ ರಭಸ ಕೇಳುಗರಲ್ಲಿ ವಿದ್ಯುತ್ ಸಂಚಾರವನ್ನು ಪದೇ ಪದೇ ಉಂಟುಮಾಡುತ್ತಿತ್ತು. ಮೊದಲಿನ ರಾಗ ಮಿಯಾಂಕೀ ತೋಡಿ. ಭೀಮಣ್ಣ ಮೈಮರೆತು ಹಾಡಿದರು. ನಂತರದ್ದು ಬೃಂದಾವನಿಸಾರಂಗ. ಅದೂ ಕೂಡ ಭೀಮಣ್ಣ ಅತ್ಯಂತ ಭಾವಪೂರ್ಣರೀತಿಯಲ್ಲಿ ಪ್ರಸ್ತುತಿಸಿದ್ದು ಈಗಲೂ ನೆನಪಿನಲ್ಲಿದೆ. ರಾಗಾಲಾಪನೆ ಪ್ರಾರಂಭವಾದಾಗಲೇ ಸೂರ್ಯ ಸಾವಕಾಶವಾಗಿ ನೆತ್ತಿಗೇರುತ್ತಿದ್ದ. ವಿಲಂಬಿತ 'ತುಮ್ ರಬ್ ತುಮ್ ಸಾಹೇಬ್' ಉತ್ಕಟತೆಯಿಂದ ಹಾಡುವಾಗ ವೇಳೆ ಸರಿದದ್ದೇ ಅರಿವಾಗಲಿಲ್ಲ. ಭೀಮಣ್ಣ ಧ್ರುತ್ ಬಂದಿಶ್ ಮುಗಿಸಿ 5 ನಿಮಿಷದಲ್ಲಿಯೇ ಜಲದ್ ತಾನುಗಳನ್ನು ವೇಗದಿಂದ ಪಾರುಮಾಡಿ ಚಪ್ಪಾಳೆ ಧ್ವನಿ ಒಂದು ನಿಮಿಷ ಕೇಳಿ, ಕೂಡಲೇ ಕನ್ನಡ 'ದೇವ ಬಂದಾ ನಮ್ಮ ಸ್ವಾಮಿ ಬಂದಾನೋ, ದೇವರ ದೇವ ಶಿಖಾಮಣಿ ಬಂದಾನೋ' ಪ್ರಾರಂಭಿಸಿದಾಗ ಮಗದೊಮ್ಮೆ ಚಪ್ಪಾಳೆಗಳ ಸುರಿಮಳೆ. ಹೈದರಾಬಾದಿನಲ್ಲಿ ಗಾಯಕರು ಕನ್ನಡ, ತಮಿಳು, ತೆಲುಗು, ಹಾಡುಗಳನ್ನು ಹಾಡುತ್ತಲೇ ಇರುತ್ತಾರೆ, ಚಪ್ಪಾಳೆ ಇಕ್ಕುವವರು ಇಕ್ಕುತ್ತಲೇ ಸಂತೋಷಪಡುತ್ತಾರೆ. ಭೈರವಿಯಲ್ಲಿ 'ಜೋ ಬಜೇ' ಹಾಡಿ 15 ನಿಮಿಷದಲ್ಲಿಯೇ ಅತ್ಯಂತ ಶಿಸ್ತಿನಿಂದ ಭೀಮಣ್ಣ ತಮ್ಮ ಮುಂಜಾನೆಯ ಮೆಹಫಿಲ್ಲು ಮುಗಿಸಿದರು.

ಮಧ್ಯಾಹ್ನದ ಊಟ ಮುಗಿಸಿ ಕಚೇರಿಯ ಅಮಲಿನಲ್ಲಿಯೇ ವಾಮಕುಕ್ಷಿ ಮುಗಿಸಿ ಎದ್ದಾಗ ಸಂಜೆಯ ಐದು. ನಾಲ್ಕಕ್ಕೇ ಭೀಮಣ್ಣನವರ ರೂಮಿಗೆ ಹೋಗಬೇಕಿತ್ತು. ಅವಸರದಿಂದ ಜುಬ್ಬಾ ಪಾಯಜಾಮದಲ್ಲಿಯೇ ಪೆನ್ನು, ಪ್ಯಾಡು ಸಹಿತ ಪಕ್ಕದ ಕಾಟೇಜಿಗೆ ಹೋದೆ. ಭೀಮಣ್ಣ ಚಹ ಮುಗಿಸಿ 'ವೀಳ್ಯ' ಹಚ್ಚುವ ಸಮಾರಂಭದಲ್ಲಿ ತೊಡಗಿದ್ದರು. ತಾವೇ ವೀಳ್ಯ ಹಚ್ಚಿ ಶಿಷ್ಯರಿಗೂ, ಬಂದವರಿಗೂ ಕೊಟ್ಟು ಉಪಚರಿಸುವದು ಅವರ ಪರಿಪಾಠ. ಪಕ್ಕದಲ್ಲಿ ರತ್ನಾ, ಏಕ್‌ಸೌಬೀಸಿನ ಜರ್ದಾ ಡಬ್ಬಿಗಳು! ಬೇಕೆಂದೆನಿಸುತ್ತಿದ್ದರೆ ಕೈಯಾಡಿಸಬಹುದು. ವೀಳ್ಯದೆಲೆಗೆ ನವರತ್ನ ಕಿಮಾಮ್‌ದ ಲೇಪ.

'ತೊಗೋರಿ' ಮಂದ್ರ ಸಪ್ತಕದಲ್ಲಿ ಭೀಮಣ್ಣ.

ಒಂದು ಚಮಚೆ ಏಕ್‌ಸೌಬೀಸ್ ಎತ್ತಿ ಅವರೇ ಮಡಿಚಿಕೊಟ್ಟದ್ದು ಬೀಡಾ ಬಾಯಲ್ಲಿಟ್ಟೆ.

'ಈಗs ಹೊಂಟೆವ್ರಿ, ತಿರುಪತಿ ಮುಟ್ಟಬೇಕ್ರಿ, ಬ್ರಾಹ್ಮಿ ಮುಹೂರ್ತಕ್ಕ ಭೀಮಣ್ಣ, ಹಾಡೋ ನೇಮ ಇಟ್ಟಾರs. ನಿಮ್ಗ ಲೇಟ್ ಆತು' –ಮಾಧವ ಗುಡಿ.

ಇಲ್ಲಿಂದ ಅಂದರೆ ಹೈದರಾಬಾದಿನಿಂದ ತಿರುಪತಿ, ರಸ್ತೆ ಚೆನ್ನಾಗಿದ್ದರೂ 500 ಕಿ.ಮೀ. ದೂರ!

ಬ್ರಾಹ್ಮೀ ಅಂದರೆ ಸೂರ್ಯೋದಯದ ಮೊದಲು ಎಂದಷ್ಟೇ ಗೊತ್ತಿತ್ತು. ಮುಂಜಾನೆ 4ರಿಂದ ಸೂರ್ಯೋದಯದ ತನಕವಂತೆ! ಅಂದರೆ ರಾತ್ರಿ ಇಡೀ ಡ್ರೈವ್ ಮಾಡಿ ಮುಂಜಾನೆ ಹಾಡುಗಾರಿಕೆ! ನನ್ನ ಮುಖದಲ್ಲಿ ಹೆದರಿಕೆ ಮಿಶ್ರಿತ ಪ್ರಶ್ನಾರ್ಥಕ ಭಾವ ಮೂಡಿದ್ದು ನೋಡಿ ಶ್ರೀಕಾಂತ ನಕ್ಕುಬಿಟ್ಟ.

ಶ್ರೀಕಾಂತ ದೇಶಪಾಂಡೆ ಸವಾಯಿ ಗಂಧರ್ವರ ಮೊಮ್ಮಗ –ಮಗಳ ಮಗ. ಮನೆ ಮಾತು ಮರಾಠಿ. ಕನ್ನಡ ಬೈಗಳು ಸಹಿತ ಎಲ್ಲ ಅರ್ಥವಾಗುತ್ತೆ. ಆದರೆ ಕನ್ನಡ ಮಾತನಾಡುತ್ತಿರಲಿಲ್ಲ.

'ಅಣ್ಣಾ, ಗಾಡಿ ತೆಗಿತಾರ. ತುಫಾನ್ಽನಂತೆ ನಡಸತಾರ್! ನಾನು ಸ್ಪೆಷ್ನಿ ಹಂಗಽ! ಕರ್ನೂಲಿನಲ್ಲಿ ಊಟ, ನನ್ನ ಡ್ರಾಯ್‌ವ್ಹಿಂಗ್ ಕಡಪಾ ತನಕ. ಹೆಮ್ಮಾಡಿ ಡ್ರೈವರ್ ಕೊಡ್ತೀನಿ ಅಂತ ಹೇಳ್ಯಾರ. ನಾವೈದು ಮಂದಿ ಪೇಟಿ, ತಬಲಾ ಜೋಡಿ, ಒಂದು ಬ್ಯಾಗು ಎರಡು ಚೀಲಾ! ಡ್ರೈವರ್ ಬಂದ್ರ ಸ್ವಲ್ಪ ಅಡಚಣೀನಽ, ನೋಡೋಣ'

'ಮುಂಜಾನಿ ಪ್ರೋಗ್ರಾಮು ಮಸ್ತ್ ಆತು'! ನಾನು. 'ಹೌಸ್ ಫುಲ್ ಆಗಿತ್ರಪ್ಪಽ'

'ನಿಮ್ಗ ಏನು ಕೇಳೋದಽದ ಕೇಳ್ರಿ' ಭೀಮಣ್ಣನವರ ಮಂದ್ರ ಸಪ್ತಕದ ಮಾತು ನನ್ನನ್ನು ಉದ್ದೇಶಿಸಿ.

'ನೀವೀಷ್ಟರಾಗ ಫಾರಿನ್‌ದಿಂದ ಬಂದ್ರಿ. ಅಲ್ಲಿಯೂ ಹೀಂಗ ಎನ್ರೀ?'

'ಅಲ್ಲಿ ಎಲ್ಲ ಶಿಸ್ತಿನ ಮಂದಿ. 30–40 ವರ್ಷದ ಮೊದಲು ಒಂದೆರಡು ಕಾರ್ಯಕ್ರಮಗಳಿಗೆ ಮಾತ್ರ ಹೋಗ್ತಿದ್ದೆ. ಈಗ ಒಂದು ಟೂರೇ ಪ್ಲಾನ್ ಮಾಡಿ ಹೋಗ್ತೀವಿ. ನಮ್ಮದು ನಾಲ್ಕೈದು ಜನರದ್ದು ತಂಡ. ಶುಭದಾ (ಮಗಳು) ಬರ್ತಾಳ, ಇವಳೂ ಇರ್ತಾಳ ಒಮ್ಮೊಮ್ಮೆ. ಶ್ರೀಕಾಂತ ಆಥವಾ ಮಾಧ್ಯಾ (ಮಾಧವ ಗುಡಿ) ಇರ್ತಾರ್. ಅವರದೂ ಸ್ವತಂತ್ರ ಕಾರ್ಯಕ್ರಮ ಇರ್ತಾವ. ಹ್ಯಾಟು ತಿರುಗಿಸಿ ರೊಕ್ಕ ಕಲೆಕ್ಟ್ ಮಾಡಿಕೊಡೋ ಸಿಸ್ಟಮ್ ಅದಽ ಅಲ್ಲೆ. ಇಂಥಾ ಪ್ರೋಗ್ರಾಮ್ಸು ನಾನು ಕೊಡುದಿಲ್ಲಾ. ಫಾರೀನ್ ವಿಸಿಟ್ಟು 3–4 ವರ್ಷಕ್ಕೆ ಒಂದ್ಸಲ. ಅದೂ ಪ್ಲಾನ್ ಮಾಡಾಕ 8–10 ತಿಂಗಳ ಬೇಕು. ಹುಂ! ಅಲ್ಲೂ ಕೂಡ ಗರ್ದಿ ಹೀಂಗ ಇರತಽದ. ಆಕ್ಸ್‌ಫರ್ಡ್‌ದ ಒಬ್ಬ ಗೋರಾ, ಇಂಗ್ಲಂಡದಾಗ ನನ್ದೆ ಎಲ್ಲಾ ಮೆಹಫಿಲ್ಲಿಗೆ ಹಾಜರ್ ಇದ್ದಾ. ನಾಲ್ಕ ವರ್ಷ ಇಲ್ಲೇ ಕೃಷ್ಣರಾವ್ ಕಡೆ ಕಲೀತಿದ್ದನಂತ (ಕೃಷ್ಣರಾವ್ ಶಂಕರ್ ಪಂಡಿತ – ಗ್ವಾಲಿಯರ್ ಪರಂಪರೆ) ಹಾಡೋ ಕ್ವಾಲಿಟೀ ಬೇಕು, ಪವರ್ ಬೇಕು..."

'ಭಾಳ ಕಷ್ಟಪಟ್ಟು ಕಲಿತದ್ದು ಸಾರ್ಥಕ, ಅಲ್ರೀ ಸರ್' – ನಾನು.

'ಕಲಿತದ್ದಷ್ಟೇ ಸಾಕಲ್ಲಪ್ಪಾ, ವಿಚಾರ ಬೇಕು, ಚಿಂತನ–ಮನನ ಮಾಡ್ತಾ ಇರಬೇಕು. ಮುಂಜಾನೆ ತೋಡಿ ಹಾಡ್ತಾ ಇದ್ದಾಗ ಒಂದು ಹತ್ತು ಮಿನೀಟು ಪಂಚಮ ಆರೋಹದಾಗ ಸ್ವಲ್ಪ ವೀಕ್ ಹಚ್ಚಿದೆ. ಮಾಧ್ಯಾ (ಮಾಧವ ಗುಡಿ) ಬರಾಬರಿ ಹಚ್ಚಿದಾ. ಅಂದರೆ ಒಂದು ಪ್ರಯೋಗ ಇತ್ತು ನೋಡ್ರಿ ಅದು. ಆರೋಹದಾಗ, ತೋಡಿಯಲ್ಲೇ ಪಂಚಮ ವರ್ಜ್ಯ ಇಲ್ಲಾ! ಬಿಜಲಿ ಹೊಡ್ದಾಂಗ ಆತು! ನಿಮಗಽ ತಿಳೀತೋ ಇಲ್ಲೋ?'

ಭೀಮಣ್ಣ ಯಾವಾಗಲೂ ಒಂದು ಗೂಗಲಿ ಹಾಕ್ತಾ ಇರ್ತಾರೆ!

'ನನ್ನ ಬದೀಗ ಕೂತವ್ರು 'ಕ್ಯಾ ಬಾತ್ ಹೈ' ಅಂದ್ರು. ನಾನೂ ಪಾವತಿಕೊಟ್ಟೆ' – ನಾನು ನಗುತ್ತ ಹೇಳಿದೆ. ನನಗೆ ಕಾರ್ಪೊರೇಟ್ ಸ್ಪಾನ್ಸರ್‌ಶಿಪ್ ಬಗ್ಗೆ ಅವರ ಅಭಿಪ್ರಾಯ ಕೇಳೋದಿತ್ತು.

'ಯುವ ಕಲಾವಿದರ ಕುರಿತು, ಅವರಿಗೇನಾದರೂ ಸ್ಕಾಲರ್‌ಶಿಪ್ ಗೀಲರ್‌ಶಿಪ್?'

'ಕಲಿಯೋ ಹುಡುಗರಿಗೆ ಹಣ ಕೊಡೋದು, ಅವರಿಗೆ ಕಲಿಸೋವ್ರಿಗೆ ಸಂಬಳಾ ಕೊಡೋದು, ನನ್ನ ದೃಷ್ಟಿಯಲ್ಲಿ ಸರಿ ಕಾಣಿಸೋದಿಲ್ಲಾ. ನನ್ನಂಥವನಿಗೆ ಅದು ಒಂದು ಬಂಧನ ಅನಿಸ್ತದ. ಗುರುಗಳಿಗೆ ಅದೊಂದು ಪೆನ್ಷನ್ ಹಂಗ ಕಾಣಸ್ತದs! ಹಾಡಾಂವಗ ಶುರುವಾತಿಲೆ ಹಣ ಕೊಟ್ರ ಅಂವ ಏನ ಕಲೀತಾನ ಮಣ್ಣೂ? ನಾನು ಕಚೇರಿ ಶುರು ಮಾಡ್ದಾಗ 50, 100, ಸಿಕ್ಕಿದಷ್ಟು ಪುಣ್ಯ ಅನಕೋತ ಹಾಡ್ತಾ ಇರ್ತಿದ್ದೆ, ಕಲೀತಿದ್ದೆ. ನನಗೆ 5000 ಕೊಟ್ರ ನಾನು 10,000 ದಷ್ಟು ವಾಪಸ್ ಕೊಡ್ತೀನಿ'.

'ನಿಮಗ ಪ್ರಯೋಗಶೀಲತಾ ಸೇರ್ತದ ಏನ್ರೀ?"

ಭೀಮಣ್ಣ ಸ್ವಲ್ಪ ಗಂಭೀರರಾಗಿ ಒಂದೆರಡು ಕ್ಷಣ ಸ್ತಬ್ಧರಾಗಿ ಹೇಳಿದ್ದು ಇದು – 'ಪ್ರತಿಯೊಬ್ಬ ಗಾಯಕ ತನ್ನ ಪ್ರಸ್ತುತಿಯಲ್ಲಿ ಪ್ರಯೋಗ ಮಾಡ್ತಾನ ಇರ್ತಾನ. ಹಿಂದೂಸ್ತಾನೀ ಸಂಗೀತ ಪ್ರಕಾರದೊಳಗ ಪ್ರಯೋಗಶೀಲತಾ ಹಾಸು ಹೊಕ್ಕಾಗೆದ. ನನ್ನ ಮಟ್ಟಿಗೆ ಹೇಳುವುದಾದ್ರ, ಕುಂದಗೋಳ ಬಿಟ್ಟ ಮ್ಯಾಲೆ, ಹಾಡ ಹಾಡತಾ ಕ್ರಮಶಃ ಬದಲಾಗ್ತಾ ಇತ್ತು ಇಗಲೂ ಅದ. ನಮ್ಮದೇನಪ್ಪಾ ಹೇಳಿ ಕೇಳಿ ಕಿರಾಣಿ ಅಂಗಡಿ! ಕಿರಾಣಾದ್ದು! ಇಲ್ಲಿಂದ, ಅಲ್ಲಿಂದ ಸ್ವಲ್ಪ ಸ್ವಲ್ಪ ಮಾಲು ತರ್ತೀವಿ, ಮಾರ್ತೀವಿ. ನನಗ ಉಸ್ತಾದ್ ಅಮೀರಖಾನರ ಹಾಡುಗಾರಿಕೆ ಭಾಳ ಸೇರ್ತಿತ್ತು. ಜತೆಗೆ ನಿಖಿಲ ಬ್ಯಾನರ್ಜಿ (ಅಲ್ಲಾವುದ್ದೀನ ಹಾಗೂ ಅನ್ನಪೂರ್ಣಾದೇವಿಯವರ ಶಿಷ್ಯ –ಸಿತಾರ್!) ಅವರ ಸಂಗೀತ ಕೂಡ ನನ್ನಲ್ಲಿದೆ. ಹೊಸ ಹೊಸ ವಿಚಾರಗಳು ಕ್ರಮಶಃ ನನ್ನ ಪ್ರಸ್ತುತಿಯಲ್ಲಿ ಕಾಣಿಸತಾವ ಅಂತ ಹೇಳ್ತಾರ, ಹೌದು... ನಿಮ್ಮ ನಾಡಕರ್ಣಿ ಅವರೂ ಹೇಳ್ತಾರ?'

'ಯಾರು ಮೋಹನರಾಯರೇನು? –ಮೋಹನ ನಾಡಕರ್ಣಿ ನಿಮ್ಮ ಚರಿತ್ರೆ ಬರೆದವ್ರು?'

'ಅಲ್ಲ, ಅವರ ಅಣ್ಣನ ಮಗ*. ಅವ್ರು ನನ್ನ ಪೂರಿಯಾ ರಾಗದ, ವಿವಿಧ ಕಚೇರಿಗಳ ಅಭ್ಯಾಸಮಾಡಿ ಒಂದು ಕ್ಯಾಸೆಟ್ ಕೊಟ್ಟಿದ್ರು. ಅದರಲ್ಲಿ ಮೊದಲು ನಮ್ಮ ಗುರುಗಳದ್ದು ಪೂರಿಯಾ, ನಂತರ ನನ್ನದು 1945ರಲ್ಲಿ ಮಾಡಿದ್ದು – ಧ್ವನಿಮುದ್ರಿಕೆಯದು. ನಂತರ ಅದೇ ಸಾಧಾರಣ, 1959–60ರ ರೇಡಿಯೋ ನ್ಯಾಶನಲ್ ಪ್ರೋಗ್ರಾಮ್‌ದಲ್ಲಿ ಹಾಡಿದ್ದು, ನಂತರ ಇತ್ತೀಚಿನದು. ನಿಮಗೆ ಭೀಮಸೇನ ಜೋಶಿ –ಎಲ್ಲಿಂದ ಏನು ಇಸಕೊಂಡಾರ, ಕದ್ದಾರ ಕಾಣಿಸ್ತದ – ನಾನು ಒಬ್ಬ ಕಳ್ಳ –ಥೀಫ್. ನನ್ನ ಮಟ್ಟಿಗೆ ಇದೇ ಕ್ರಿಯೇಟಿವಿಟಿ ..'

'ಸಾರ್. ನಿಮ್ಮ ಮೇಲೆ ಒಂದು ಕಂಪ್ಲೇಂಟು. ನೀವು ಕೇವಲ ಹತ್ತಿಪ್ಪತ್ತು ರಾಗಾನೇ ಹಾಡ್ತಿರ್ತೀರಿ'

'ಹೌದು. ಅದು ಬರೋಬರಿ. ಕೇಸರ ಬಾಯಿ ಕೂಡ ಹಂಗs ಹಾಡ್ತಿದ್ರು. ನಾನೂ ಒಂದೆರಡು ರಾಗಾ ಮಾಡ್ಯೇನಿ. ನಿಮ್ಮ ಭೋಭೆ – ಗೋಪಾಲಕೃಷ್ಣ ಭೋಭೆ. ಅದ್ಭುತ ಮನುಷ್ಯಾ. ತಾನ್‌ಸೇನನ ಮೇಲೆ ನಾಟಕಾ ಬರೆದು, ಮ್ಯುಸಿಕ್ ಕೊಡ್ರಿ ಅಂತ

ನನ್ನ ಕಡೆ ಬಂದಾ. ನಾನು ಮ್ಯುಸಿಕ್ ಕೊಟ್ಟೇನಿ. 'ಧನ್ಯತೀ ಗಾಯನೀ ಕಲಾ' ತಾನಸೇನನ ಮೇಲಿನ ಮರಾಠಿ ನಾಟಕಾ. ಅದರಾಗ ಕಲಾಶ್ರೀ (ಕಲಾವತಿ+ಶ್ರೀ) ರಾಗ ಮಾಡಿ ಹಾಕ್ಯೇನಿ ಯಾವಾಗಾದ್ರೂ ಮೆಹಫಿಲ್ಲಿನಾಗ ಹಾಡ್ತಿರ್ತೀನಿ. ನಾಟಕ ಅಷ್ಟೇನೂ ಜಬರ್ದಸ್ತ ನಡೀಲಿಲ್ಲ. ಭೋಭೆನೂ ಒಂದೆರಡು ವರ್ಷದಲ್ಲಿ ಹೋದಾ'.

'ದೊಡ್ಡ ದೊಡ್ಡ ಪ್ರಾಯೋಜಕರ ಬಗ್ಗೆ ಹೇಳ್ತಿರಾ?... ನೋಡಿ ಇವತ್ತಿಂದು ವಿಎಸ್‌ಟಿದು, ಮುಂಬಯಿಯಲ್ಲಿ ಕ್ಸೇವಿಯರ್ಸ್ ಕಾಲೇಜಿನಾಗ ಬ್ರಿಟಾನಿಯಾ, ಆಮೇಲೆ ಐಟಿಸಿ...' ನಾನೆಂದೆ.

'ಸ್ಪಾನ್ಸರ್ಸ್ ಇದ್ರ ಕಲಾವಿದರಿಗೆ ಛಲೋ. 20 ವರ್ಷಗಳಿಂದ ಬ್ರಿಟಾನಿಯಾ ಪ್ರಾಯೋಜಕರ ಸಹಾಯ ಪಡೆದು ಕ್ಸೇವಿಯರ್ಸ್ ಕಾಲೇಜಿನ ಮ್ಯುಸಿಕ್ ಗ್ರೂಪ್‌ನವರು ಪ್ರತಿ ಜನವರಿಯೊಳಗ ಕಾರ್ಯಕ್ರಮಾ ಮಾಡತಿರ್ತಾರ. ಅಕ್ಕಾ, ನಾನು, ಎಂ.ಎಸ್ ಕೂಡ ಹಾಡೆವಿ ಅಲ್ಲೆ. ಪ್ರತಿ ವರ್ಷ ನಾನೇ ಕೊನೆಗೆ ಹಾಡಾಂವಾ. ಮೊದಲೇ ನನಗ ಹಾಡಲಿಕ್ಕೆ ಹೇಳಿದ್ರ ಛಲೋ ಇರ್ತಿತ್ತು. ಆದರೆ ಸಂಯೋಜಕರು 'ಎಂಡ್ ಪಂ. ಭೀಮಸೇನ ಜೋಶಿ' ಅಂತ ಜಾಹಿರಾತು ಕೊಡ್ತಾರ. ಪಾರ್ಲ್ಯಾಗ ಪ್ರಭಾ ಅತ್ರೆ, ಸುರೇಶ್ ಮಾನೆ ಉತ್ಸವ ಮಾಡ್ತಾರ. ಅಲ್ಲಿ, ಕ್ಸೇವಿಯರ್ಸ್‌ನಲ್ಲಿ ನಾನೇ ಕೊನೆಗೆ ಹಾಡಾಂವಾ' –ಭೀಮಣ್ಣ ತಮ್ಮ ವ್ಯವಹಾರ, ತಮ್ಮ ಗಾಯನವನ್ನು ಕುರಿತು ಭಾಷ್ಯ ಮುಂದುವರಿಸಿದರು.

'ನೋಡ್ರಪ್ಪಾ. ಹಾಡೋ ಮೊದಲು ಶಾಸ್ತ್ರ ಬೇಕು. ನಿಮ್ಮ ಹಾಡುಗಾರಿಕೆಯಲ್ಲಿ ಖಚಿತತೆ ಇರಲೇ ಬೇಕು. ಆಮೇಲೆ ಹಾಡಿಗೆ ಹೊಳಪು, ರಮ್ಯತೆ ಬರ್ತದ. ಈ ಜಗತ್ತೆಲ್ಲಾ ವ್ಯವಹಾರದ್ರಪ್ಪಾ. ಅವಸರದ ಜಗತ್ತು! ಉಸಿರು ಹಿಡ್ಕೊಂಡು ಓಡಾಡಬೇಕಾಗತದ್. ಯಾವ ಗುರಿ ಇಟ್ಟುಕೊಂಡ್ರೂ, ಅದು ಮುಟ್ಟಲಿಕ್ಕೆ ತುರ್ತು ಫಾಸ್ಟ್ ಹೋಗಬೇಕು. ಅದ್ರಾಗೂ ತನ್ನತನ ಕಾಯ್ಕೊಂಡೇ ಇರಬೇಕು'. ಒಂದೇ ವಾಕ್ಯದಲ್ಲಿ ಭೀಮಣ್ಣ ಪ್ರಾಯೋಜಕತೆ, ವ್ಯವಹಾರದ ಮಾತು ಮತ್ತು ಬದಲಾಗುತ್ತಿರುವ ಮೌಲ್ಯಗಳ ಬಗ್ಗೆ ವಿವೇಚನೆ ನೀಡಿದರು.

'ಕೊನೆಗೆ ಒಂದೇ ಒಂದು ಪ್ರಶ್ನೆ ಸಾರ್ –ಗಾಯಕ–ವಾದಕರ ಸಿಡುಕು, ಮುನಿಸು (ಟ್ಯಾಂಟ್ರಮ್ಸ್) ಸ್ವಲ್ಪ ಹೆಚ್ಚಾಗ್ತಾ ಇದೆ. ಮ್ಯುಸಿಕ್ ಸರ್ಕಲ್ಲುಗಳು ಕಡಿಮೆ ಆದಾಗ, ಸಂಯೋಜಕರಿಗೆ ತುಂಬಾ ಕಷ್ಟ. ನಿಮಗೇನು ಅನಿಸ್ತದ?'

'ನೋಡ್ರಿ, ಫಾರೇನ್‌ದಾಗ ಎರಡು ತಾಸು ಮೊದಲು ಕಲಾವಿದರು ಹಾಲಿನಲ್ಲಿ ಇರಬೇಕು. ಟ್ಯೂನಿಂಗ್, ಮೈಕ್ ಟೆಸ್ಟ್ ಎಲ್ಲಾ ಮೊದಲೇ ಫಿನಿಶ್. ನಮ್ಮಕಡೆ ಕಲಾವಿದರು ಸ್ವಲ್ಪ ಪ್ಯಾಂಪರ್ಡು. ಗರಜು ಇಲ್ದೆ, ಆಡಿಯನ್ಸಿಗೆ ವೇಟ್ ಮಾಡಲಿಕ್ಕ ಹಚ್ಚತಾರ. ಆರ್ಗನೈಸರ್ಸ್ ಸ್ವಲ್ಪ ಟಫ್ ಆಗಬೇಕ್ರಿ. ಆಡಿಯನ್ಸ್ ಕೂಡ ಹಂಗ, ಆರ್ಟಿಸ್ಟ್ ಜೋಡಿ ಕೂಡ. ಒಂದ್ಸಲ ಖಾತ್ರಿ ಆತೋ ಎರಡನೇ ಸಲ ಯಾರು ಸಿಡುಕು/ಮುನಿಸು ತೋರಿಸೊದಿಲ್ಲ. ನೀವು ಕೇಳೋ ಮೊದಲೇ ಒಂದು ಮಾತು ಹೇಳ್ತೇನಿ. 1964ರೊಳಗ ಕಲಕತ್ತಾ ರೇಡಿಯೋದಾಗ ನನ್ನ ನ್ಯಾಶನಲ್ ಕಾರ್ಯಕ್ರಮ. ಅವರ ರೂಲ್ ಪ್ರಕಾರ

'ನೋ ಹಾರ್ಮೋನಿಯಮ್' ಅಂದ್ರು, ನಾನೂ 'ನೋ ಪ್ರೋಗ್ರಾಮ್' ಅಂದೆ.** 1943ರಿಂದಲೇ ರೇಡಿಯೋದಾಗ ಹಾಡಾಂವ ನಾನು! ಆದರೂ ಹೇಳಿದೆ. ಕಾರ್ಯಕ್ರಮ ನಡಿತು. ಕೊನೆಗೆ ಇಡೀ ಭಾರತಕ್ಕೆ ರಿಲೇ ಮಾಡಿದ್ರು. ಆವ್ಯಾಲೆ ಎಲ್ಲರೂ 'ಹಾರ್ಮೋನಿಯಮ್ ಬೇಕು' ಅಂದರು. ಇದು ನನ್ನ ಕೊಡುಗೆ'

ಇದೆಲ್ಲಾ ಆದದ್ದು 1989ರಲ್ಲಿ. ಇದು ಕನ್ನಡದಲ್ಲಿ ಮಾಡಿದ ಮೂರನೇ ಸಂದರ್ಶನವಾಗಿತ್ತು. ಬಳಿಕ ಇಂಗ್ಲಿಷ್‌ನಲ್ಲಿ ಪ್ರಕಟವಾಯಿತು. ಪಂಡಿತ ಭೀಮಸೇನ ಜೋಶಿಯವರ ಭೆಟ್ಟಿ ಪುನಃ ಆದದ್ದು ಅವರ 'ಕಲಾಶ್ರೀ' ಬಂಗಲೆಯಲ್ಲಿ. ಅವರ ಕಾಲು ಪ್ಲಾಸ್ಟರಿನಲ್ಲಿದ್ದಾಗ. ನಾವೆಲ್ಲ, ಅಂದರೆ ಜಯರಾಮ್ ಆಳ್ವ, ಭರತಕುಮಾರ, ಶ್ರೀನಿವಾಸ ಜೋಕಟ್ಟೆ, ಜಿ.ಡಿ.ಜೋಶಿ, ಮತ್ತು ನಾನು, ಅವರನ್ನು ಭೆಟ್ಟಿಮಾಡಿದ್ದೆವು. ನಾನೇ ಮಾರ್ಗದರ್ಶಕನಾಗಿದ್ದೆ. ನಾವೆಲ್ಲಾ, ಕರ್ನಾಟಕ ಸಂಘದ 'ವರದರಾಜ ಆದ್ಯ ಪ್ರಶಸ್ತಿ'ಯನ್ನು ಪ್ರದಾನಮಾಡಲು ಪುಣೆಗೆ ಹೋದಾಗಿನ ಮಾತು ಇದು. ಇವೆಲ್ಲಾ ಈಗ ನಿವೃತ್ತ ಜೀವನದಲ್ಲಿ ಮರಳಿ ಮರಳಿ ನೆನಪಾಗುವ ಉತ್ಕಟ ಕ್ಷಣಗಳು.

* ಜಿ.ಬಿ ನಾಡಕರ್ಣಿ(1927-2012)BARC ನಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ಸಂಗೀತ ಆರಾಧಕರು.

** ಶ್ರೀಕಾಂತ ದೇಶಪಾಂಡೆ – ಸವಾಯಿ ಗಂಧರ್ವರ ಮೊಮ್ಮಗ (ಮಗಳ ಮಗ). ಈಗ ಮಾಧವಗುಡಿ ಹಾಗೂ ಶ್ರೀಕಾಂತ ಇಬ್ಬರೂ ಇಲ್ಲ.

*** ಆ ತನಕ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಹಿಮ್ಮೇಳಕ್ಕೆ ಹಾರ್ಮೋನಿಯಮ್ ನಿಷೇಧಿಸಲಾಗಿತ್ತು.

*****

7.23

ಇಂದುಬಾಲ (1899–1984) ಮತ್ತು ಅಂಗೂರಬಾಲಾ (1896–1984)

1898–99ರ ಮಾತು. ಪಂಜಾಬ್‌ದ ಅಮೃತಸರದಲ್ಲಿ ಬಂಗಾಲದಿಂದ ಬಂದ 'ಮೋತಿಲಾಲ ಗ್ರ್ಯಾಂಡ್ ಸರ್ಕಸ್' ಅಮೃತಸರ ಸ್ಟೇಶನ್‌ದಿಂದ ಒಂದು ಮೈಲು ದೂರದಲ್ಲಿದ್ದ ಗುರು ನಾನಕ ಮೈದಾನದಲ್ಲಿ ಢೇರೆ ಹೂಡಿತ್ತು. ಇದರ ಯಜಮಾನ ಮೋತಿಲಾಲ್ ಬೋಸ್. ಹೆಂಡತಿ ರಾಜಬಾಲಾ. ತವಾಯಿಫ್ ಹುಡುಗಿಯನ್ನು ಮೋಹಿಸಿ ಮದುವೆಮಾಡಿಕೊಂಡಿದ್ದ ಬಹಾದ್ದುರ್! ಈತ ಟ್ರೆಪಿಝ್ ಆರ್ಟಿಸ್ಟ್, ಎತ್ತರದಲ್ಲಿ ತೂಗುಹಾಕಿದ ಜೋಕಾಲಿಗಳ ಮೇಲೆ ಒಂದರಿಂದ ಇನ್ನೊಂದಕ್ಕೆ ಹಾರಿ ಮನೋರಂಜನೆ ಮಾಡುವ ಕಲಾವಿದ. ಹಾಡಿ ಕುಣಿಯುತ್ತಿದ್ದ ಹೆಂಡತಿಗೂ ಈ ಕಲೆಯಲ್ಲಿಯೇ ಪ್ರಶಿಕ್ಷಣ ಕೊಟ್ಟ. ನಂತರ ಇಬ್ಬರೂ ಜೋಡಿಯಲ್ಲಿಯೇ ಮನರಂಜಿಸುತ್ತಿದ್ದರು. ಅಮೃತಸರದಲ್ಲಿ ಸರ್ಕಸ್ ತಂಬೂ ಹಾಕಿದಾಗಲೇ ರಾಜಬಾಲಾ 5 ತಿಂಗಳ ಗರ್ಭಿಣಿ. ಮೋತಿ ಮತ್ತೊಬ್ಬ ಹಾರಾಡುವ ಹುಡುಗಿಯನ್ನು ತಯಾರು ಮಾಡಿ ಹಾರಾಡಿಸುವಾಗಲೇ ರಾಜಬಾಲಾ ಹೆಣ್ಣುಕೂಸನ್ನು ಹಡೆದಳು. ಅವಳೇ ಇಂದುಬಾಲಾ.

ಇಂದುಬಾಲಾ ಹುಟ್ಟಿದ ಎರಡು ವರ್ಷಗಳಲ್ಲಿಯೇ ತಾಯಿಗೆ 'ಮೋತಿಲಾಲಬೋಸ್ ಗ್ರ್ಯಾಂಡ್ ಸರ್ಕಸ್' ಬಿಡಬೇಕಾಯಿತು. ಮತ್ತೊಬ್ಬ ಹಾರಾಡುವ ಹುಡುಗಿ, ಚಿಮ್ಮನೇ ಹಾರಿ ಮನೆಯ ಮಂಚದ ಮೇಲೆ ವಿರಾಜಮಾನಳಾದ ಮೇಲೆ ರಾಜಬಾಲಾ ಮರಳಿ ಕಲಕತ್ತೆಯ 'ತವಾಯಿಫ್' ಸಂಸ್ಕೃತಿಯ ಮೊರೆಹೊಕ್ಕಳು, ಜತೆಗಿದ್ದವಳು ಇಂದುಬಾಲಾ. ಹಳೆಯ ರಾಮಬಾಗಾನ ಮನೆ (ಕೋಠಿ) ದುರುಸ್ತಿ ಮಾಡಿಸಿ ಮಗಳಿಗೂ ತಾನೇ ಸಂಗೀತ/ನೃತ್ಯ ಕಲಿಸಲು ಪ್ರಾರಂಭಿಸಿದಳು. ಒಂದೆರಡು ವರ್ಷಗಳ ನಂತರ ಇಂದುಬಾಲಾ ಗೌರಿಶಂಕರ್ ಮಿಶ್ರ, ಜಮೀರ್ ಉದ್ದೀನ್ ಖಾನ್, ಇಲಾಹಿ ಬಕ್ಷ್ ಎಂಬ ಪಂಡಿತ ಮತ್ತು ಉಸ್ತಾದ್‌ರಿಂದ ಸಂಗೀತ ಶಿಕ್ಷಣ ಪಡೆದಳು. ವಯಸ್ಸಿನ 13ನೇ ವರ್ಷದಿಂದ ಈಕೆ ಗೋಹರಜಾನಳಿಂದಲೂ ಹಾಡುಗಾರಿಕೆಗೆ ಹಾಗೂ ಧ್ವನಿಮುದ್ರಿಕೆಗಳಿಗೆ ಬೇಕಾದ ಕೌಶಲ್ಯವನ್ನು 8–10 ವರ್ಷಗಳಲ್ಲಿ ಸಂಪಾದಿಸಿದಳು. ಸಾಧಾರಣ ತನ್ನ 13ನೇ ವರ್ಷದಿಂದಲೇ ಇಂದುಬಾಲಾ ತನ್ನ ತಾಯಿ ಪ್ರಾರಂಭಿಸಿದ "ರಾಮಬಾಗಾನ್ ಫೀಮೇಲ್ ಥೇಟರ್' ಕಂಪನಿಯಲ್ಲಿ ಮುಖ್ಯ ಸಂಗೀತ ಪ್ರಧಾನ ಪಾತ್ರದಲ್ಲಿ ಹೆಸರು ಮಾಡಿದಳು. ಇದೊಂದು ಕೇವಲ ಸ್ಥಾನೀಯ ನಾಟ್ಯಸಂಸ್ಥೆ. ಕಲಕತ್ತೆ ಬಿಟ್ಟು ಬೇರೆ ಬೇರೆ ಊರುಗಳಲ್ಲಿ

ಆಕೆ ನಾಟಕವಾಡಿದ ಉಲ್ಲೇಖ ಎಲ್ಲಿಯೂ ಕಾಣಿಸಲಿಲ್ಲ. ಗ್ರಾಮೋಫೋನ ಸಿಲೆಬ್ರಿಟಿ ಎಂದು ಒಂದು ದಶಕ ಮೇರು ಸ್ಥಿತಿಯಲ್ಲಿ ಮೆರೆದ ಗೋಹರಜಾನಳ ಇಳಿಗಾಲ ಅದಾಗಲೇ ಪ್ರಾರಂಭವಾಗಿತ್ತು. ಖಾಲಿಯಾದ ಜಾಗದಲ್ಲಿ 'ನೆಕ್ಸ್ಟ್ ಇನ್ ಲೈನ್' ಎನ್ನುವ ಹಾಗೆ ಇಂದುಬಾಲಾ ತನ್ನ ಹೆಸರನ್ನು ನೊಂದಾಯಿಸಿದಳು.

ಇಂದುಬಾಲಾಳ ತಂದೆ ರಂಗ್‌ಬಿರಂಗೀ ಮನುಷ್ಯ. ಮೊದಲ ಮದುವೆ ಮಾಡಿಕೊಂಡಿದ್ದು ಆನಂದ ಮೋಹಿನಿ ದೇವಿಯೊಡನೆ. ಎರಡನೆಯದು, ಇಂದುಬಾಲಾಳ ತಾಯಿ ರಾಜಬಾಲಾಳೊಂದಿಗೆ, 44ನೇ ವಯಸ್ಸಿನಲ್ಲಿ ಕೇವಲ 15ರ ಹುಡುಗಿಯನ್ನು, ಅದೂ ಕೂಡ ಸರ್ಕಸ್ಸು ಮಧ್ಯಪ್ರದೇಶದ ಉಜ್ಜೈನ್ ಊರಿನಲ್ಲಿ ಡೇರಿ ಹೂಡಿದಾಗ ಮದುವೆಯಾದನು. ರಾಜಬಾಲಾಳೊಂದಿಗೆ ಅವಳ ಅಕ್ಕ ಮತಿಬಾಲಾ, ತಮ್ಮ ತಿನಕರಿಬಾಬು ಕೂಡ ಸರ್ಕಸ್ಸಿನಲ್ಲಿ ಕೆಲಸಮಾಡಲು ಕಂಪನಿ ಸೇರಿಕೊಂಡಿದ್ದರು. ರಾಜಬಾಲಾ, ಮೋತಿಲಾಲ ಸರ್ಕಸ್ಸು ಬಿಟ್ಟು ಕಲಕತ್ತೆಗೆ ಹೊರಟು ನಿಂತಾಗ ಬೇರೆ ಉಪಾಯ ಕಾಣದೇ ಮತಿಬಾಲಾ ಮತ್ತು ತಿನಕರಿ 'ಹೊಸಬ'ಳ ಆಧಿಪತ್ಯವನ್ನು ಒಪ್ಪಿಕೊಂಡು ಅಮೃತಸರ ಕ್ಯಾಂಪಿನಲ್ಲಿಯೇ ಉಳಿದುಕೊಳ್ಳಬೇಕಾಯಿತು.

ಇನ್ನೊಂದು ವಿಷಯ. ರಾಜಬಾಲಾ ಮಗಳನ್ನು 1908ರಲ್ಲಿ ಕಾನ್ವೆಂಟ್ ಶಾಲೆಗೆ ಇಂಗ್ಲಿಷು ಕಲಿಯಲೆಂದು ಹೆಸರು ಹಚ್ಚಿದಳು. ಒಂದೆರಡು ವರ್ಷ ಕಲಿತ ನಂತರ ಆಕೆ ನರ್ಸಿಂಗ್ ಕಲಿಯಬೇಕೆಂಬ ಅದಮ್ಯ ಉತ್ಸಾಹ ತಾಯಿಗೆ. ರಾಮಬಾಗಾನ 'ರೆಡ್‌ಲೈಟ್' ಏರಿಯಾ ಆಗಿದ್ದರೂ 'ಜೀವನ್ ನರ್ಸಿಂಗ್ ಹೋಮ್'ದಲ್ಲಿ ಶುಶ್ರೂಷೆಯ ಕೆಲಸ ಮಾಡಬೇಕೆಂದು ಇಂದುಬಾಲಾಳನ್ನು ಕಳಿಸಿದಳು. ಹಾಡುಗಾರಿಕೆಯಲ್ಲಿಯೇ ಲವಲವಿಕೆ ಇದ್ದ ಇಂದುಬಾಲಾಳಿಗೆ ತಾಯಿಯ ಈ 'ಜಬರದಸ್ತಿ' ಸೇರಲಿಲ್ಲ! ಓಡಿಯೇ ಹೋದಳಾಕೆ. ಕೊನೆಗೆ ನರ್ಸಿಂಗ್ ಹೋಮಿನ ಜೀಬನ್ ಕೃಷ್ಣ ಘೋಷ್ ಅವಳನ್ನು ಹುಡುಕಿ ಕರೆತಂದು ತಾಯಿಗೆ ಒಪ್ಪಿಸಿ ಹುಸ್ಸೆಂದರು. ಈ ಜೀಬನ್ ಕೃಷ್ಣ ಘೋಷನೇ ಮುಂದೆ ಇಂದುಬಾಲಾಳಿಗೆ ಸರಿಯಾದ ಮಾರ್ಗದರ್ಶಿಯಾದ, ಕೊನೆಯವರೆಗೂ.

ಹಾಡುಗಾರಿಕೆಯುಲ್ಲಿ, ಸಂಗೀತ ನಾಟಕಗಳಲ್ಲಿ ಭಾಗವಹಿಸುತ್ತಿದ್ದಾಗಲೇ ಇಂದುಬಾಲಾಳಿಗೆ ಗೋಹರಜಾನಳ ಪರಿಚಯವಾಯಿತು. ಅವಳಂತೆಯೇ ಈಕೆಯೂ ಬಾಂಗ್ಲಾ ಹಾಡುಗಾರಿಕೆಯಲ್ಲಿ ತನ್ನ ಕೌಶಲ್ಯವನ್ನು ಹೊರಸೂಸಿ ಸಾತ್ವಿಕ ಆನಂದ ಹಂಚಿಕೊಂಡಳು. ಎರಡೇ ವರ್ಷಗಳಲ್ಲಿ ಎಚ್‌ಎಮ್‌ವಿಯವರ ಸಿಲೆಬ್ರಿಟಿ ಸಿಂಗರ್ ಎಂಬ ಬಿರುದೂ ಇಂದುಬಾಲಾಳಿಗೆ ದಕ್ಕಿತು.

ಬಂಗಾಲದ ಗಾಯಕ-ಗಾಯಕಿಯರಿಗೆ ಹಿಂದೀ ಉಚ್ಚಾರದ ಶಾಪವಿದೆ. ಬೇಡವಾದಲ್ಲಿ 'ಸ' 'ಶ' ಮಾಡುವಿಕೆ, ಅಕಾರದ್ದು ಓಕಾರ ಮಾಡುವಿಕೆ, ವಕಾರವನ್ನು ಬಕಾರ ಮಾಡಿ ಅರ್ಥವನ್ನು ಬಿಗಡಾಯಿಸಿ ಅನರ್ಥಮಾಡುವ ಅನೇಕ ಸಂದರ್ಭಗಳಿವೆ. ಇವುಗಳಿಗೆಲ್ಲ ಅಪವಾದವೆಂದರೆ ಇಂದುಬಾಲಾ ಮತ್ತು ಅವಳ ಜತೆ ಮುಂದೆ ಹಾಡುಗಾರಿಕೆಯಲ್ಲಿ ಸಮಪಾಲು ಹಂಚಿಕೊಂಡ ಅಂಗೂರಬಾಲಾ.

ಅಂಗೂರಬಾಲಾ ಇಂದುಬಾಲಾಳಿಗಿಂತ ಆರುವರ್ಷ ಚಿಕ್ಕವಳು. ಇಬ್ಬರೂ ಕೆಲವೇ ವರ್ಷಗಳಲ್ಲಿ ಬಂಗಾಲದ ಜನಸಾಮಾನ್ಯರಲ್ಲಿ ತುಂಬಾ ಖ್ಯಾತಿ ಪಡೆದರು. ಇವರೊಂದಿಗೆ

ಯಶಸ್ಸು ಹಂಚಿಕೊಳ್ಳಲು ಮತ್ತೊಬ್ಬ ಪ್ರತಿಭಾವಂತ ಬಾಂಗ್ಲಾ ಕವಿ ಅದೇ ತಾನೆ ರವೀಂದ್ರನಾಥ ಟಾಗೋರರಂತೆಯೇ ಮಾನ್ಯತೆಗಳಿಸಿದ್ದ ನಝ್ರುಲ್ ಇಸ್ಲಾಂ (1899–1976) 'ಬಿದ್ರೋಹಿ ಕವಿ' ಎಂದು ತಲೆ ಎತ್ತುತ್ತಿದ್ದರು. ಅಂಗೂರಬಾಲಾ, ಇಂದುಬಾಲಾ ಹಾಗೂ ನಝ್ರುಲ್ ಇಸ್ಲಾಂ ಕೂಡಿ ಅನೇಕ 'ನಝ್ರುಲ್ ಗೀತೆ'ಗಳನ್ನು ಹಾಡಿ ಪ್ರಸಿದ್ಧಿ ಪಡೆದರು. ನಝ್ರುಲ್ ಇಸ್ಲಾಂ ರವೀಂದ್ರರಂತೆಯೇ ಸಂಗೀತದಲ್ಲಿಯೂ ಪರಿಶ್ರಮ ಮಾಡಿದವರು. ಮುಂದೆ ಇವರು ಸ್ವತಂತ್ರ ಬಾಂಗ್ಲಾದೇಶದ ಕವಿವರ್ಯರೆಂದು ಮನ್ನಣೆ ಪಡೆದರು.

ಅಂಗೂರಬಾಲಾಳ ನಿಜ ಹೆಸರು ಪ್ರಭಾಬತಿ ಬಂಡೋಪಾಧ್ಯಾಯ. ತಾಯಿ-ತಂದೆ ನಾಟಕ-ಸಿನೇಮಾದಲ್ಲಿ ಇದ್ದುದರಿಂದ ಚಿಕ್ಕವಳಿದ್ದಾಗಲೇ ಇವಳೂ ವೇದಿಕೆ ಹತ್ತಿದ್ದಳು. ಮುಂದೆ ಇಂದುಬಾಲಾಳಂತೆ ಈಕೆಯೂ ಗ್ರಾಮೋಫೋನ್ ಸಿಲೆಬ್ರಟಿ ಆದಳು. ಹಿಂದಿಯಲ್ಲಿ ಇಂದುಬಾಲಾಳಂತೆ ಅನೇಕ ಹಾಡುಗಳನ್ನು ಹಾಡದೆ ಇದ್ದರೂ, ಪಶ್ಚಿಮ ಬಂಗಾಲ, ಬಾಂಗ್ಲಾದೇಶ, ಒಡಿಸ್ಸಾ, ಬಿಹಾರದಲ್ಲಿ ಈಕೆ ತುಂಬಾ ಪ್ರಸಿದ್ಧಿಪಡೆದಳು.

ಇಂದುಬಾಲಾ, ಅಂಗೂರಬಾಲಾ ಇಬ್ಬರೂ ಅನೇಕ ಚಲಚಿತ್ರಗಳಲ್ಲಿ ಅಭಿನಯಿಸಿ, ಹಾಡಿದರು. ಇಂದುಬಾಲಾರ ಧ್ವನಿಮುದ್ರಿಕೆಗಳು ಇನ್ನೂರಕ್ಕೂ ಮಿಕ್ಕಿ ಇವೆ. ಅಂತೆಯೇ ಅಂಗೂರಬಾಲಳದ್ದು ಕೂಡ. ತವಾಯಿಫ್ ಕುಲದಲ್ಲಿ ಹುಟ್ಟಿರದಿದ್ದರೂ ಅಂಗೂರಬಾಲಾಳ ಬಗ್ಗೆ ಈ ಲೇಖನದಲ್ಲಿ ಬರೆಯಲೇಬೇಕಾಯಿತು. ಬರೆಯದೇ ಇದ್ದರೆ ಆಕೆ ವಿಸ್ಮೃತಿಯಲ್ಲಿ ಸೇರಿಹೊಗುತ್ತಿದ್ದಳು.

1927ರಲ್ಲಿ ಕಲಕತ್ತೆಯ ಆಕಾಶವಾಣಿ ಪ್ರಾರಂಭವಾಯಿತು. ಸರಿಯಾದ ದಿನಾಂಕವೆಂದರೆ 26.8.1927. ಮಾರನೇ ದಿನವೇ ಇಂದುಬಾಲಾಳ ಹಾಡುಗಾರಿಕೆಯನ್ನು ಆಕಾಶವಾಣಿ ಕಲಕತ್ತೆಯಿಂದ ಬಿತ್ತರಿಸಲಾಗಿತ್ತು. ಮುಂದೆ ಸತತವಾಗಿ 50 ವರ್ಷಗಳ ತನಕ ಇಂದುಬಾಲಾ ರೇಡಿಯೋ ಸ್ಟಾರ್ ಎಂದು ಮಿನುಗಿದಳು. 1975ರಲ್ಲಿ ಈಕೆಗೆ ದೆಹಲಿಯ ಕೇಂದ್ರ ಸರಕಾರ ಸಂಗೀತ ನಾಟಕ ಅಕಾಡಮಿಯ 'ಫೆಲೋ' ಎಂದು ಗೌರವಿಸಿತು. ಎಚ್‌ಎಮ್‌ವಿ ಪರವಾಗಿ 1976ರಲ್ಲಿ ಈಕೆಗೆ 'ಗೋಲ್ಡ್ ಡಿಸ್ಕ್'ಕೊಟ್ಟು ಕಂಪನಿಯ ಪರವಾಗಿ ಸತ್ಕರಿಸಲಾಯಿತು.

ರಸಿಕವೃಂದದಿಂದ ದೊರೆತ ಪ್ರಶಸ್ತಿ, ಸತ್ಕಾರ ಎಲ್ಲವೂ ಸಿಕ್ಕರೂ ಇಂದುಬಾಲಾ ಕೊನೆಯ ತನಕ ರಾಮಬಾಗಾನ್‌ದಲ್ಲಿಯ ತನ್ನ 'ಕೋಠಿ'ಯಲ್ಲಿಯೇ ಇದ್ದಳು. 1975ರಿಂದ 1984ರ ತನಕ ಅಂದರೆ ಸಾಯುವ ತನಕ ತಾನು ವಾಸಿಸುತ್ತಿದ್ದ ರಾಮಬಾಗಾನದಲ್ಲಿ ಮಕ್ಕಳಿಗೆ ವಿದ್ಯಾದಾನ, ಹೆಂಗಸರಿಗೆ ಶಿಕ್ಷಣ ಇತ್ಯಾದಿ ಸಮಾಜ-ಸುಧಾರಣೆಯ ಕಾರ್ಯಗಳನ್ನು ಮಾಡುತ್ತಲೇ ಇದ್ದಳು, ಇಂದುಬಾಲಾ. ಕೊನೆಗೆ ಒಂದು ವಿಷಯ. ಇದೇ ಸರಣಿಯಲ್ಲಿ 'ವಿಸ್ಮೃತಿಯಲ್ಲಿ ಅಡಗಿದ ಗಾಯಕಿಯರಲ್ಲಿ ಇಂದುಬಾಲಾ ಹಾಡಿದ 'ಮೊಹೆ ಪನಘಟ ಪೆ ನಂದಲಾಲ ಛೇಡ ಗಯೋರೆ' ಈ ಹಾಡಿನ ಬಗ್ಗೆ ಬರೆದದ್ದು ಪುನಃ ಓದುಗರಿಗೆ ನೆನಪಿಸಿ ಸದ್ಯಕ್ಕೆ ಪೂರ್ಣವಿರಾಮ ಹಾಕುತ್ತಾ ಇದ್ದೇನೆ.

ಅಂದ ಹಾಗೆ, ಅಂಗೂರಬಾಲಾ ಊರ್ಫ ಪ್ರಭಾಬತಿ ಬಂಡೋಪಾಧ್ಯಾಯಳೂ ಕೂಡ 1984ಲ್ಲಿಯೇ ತೀರಿಕೊಂಡದ್ದನ್ನು ಕೂಡ ಈ ಲೇಖನದಲ್ಲಿ ಸೇರಿಸಬಹುದು.

*****

6.24

ತಾರಾಬಾಯಿ ಮಾನೆ (1879–1946)

ಬರೋಡಾ ಸಂಸ್ಥಾನದ ಸರದಾರ ಮಾರುತಿರಾವ್ ಮಾನೆಯವರ ಮಗಳು ತಾರಾಬಾಯಿ ಸಂಗೀತ, ನೃತ್ಯದಲ್ಲಿ ಪ್ರವೀಣೆ. ಬಿರ್ಜು ಮಹಾರಾಜರ ಅಜ್ಜ, ಬಿಂದಾದಿನ್ ಮಹಾರಾಜರ (1836–1917) ಬಳಿ ಕಥಕ್ ನೃತ್ಯ ಕಲಿತ ಪುಣ್ಯವಂತೆ. ಅಬ್ದುಲ್ ಕರೀಂಖಾನರು ಬರೋಡಾ ಸಂಸ್ಥಾನದಲ್ಲಿ ಮೊಟ್ಟಮೊದಲು ಗಾಯಕನೆಂದು ಕಾಲಿಟ್ಟಾಗ ಸಂಸ್ಥಾನದಲ್ಲಿ ಆಳುವ ಮಲ್ಹರರಾವ್ ಗಾಯಕವಾಡರನ್ನು ಸಿಂಹಾಸನದಿಂದ ಇಳಿಸಿ ಜಮುನಾಬಾಯಿ ಗಾಯಕವಾಡರು ರಾಜಮಾತೆಯೆಂದು ಆಳುತ್ತಿದ್ದಾಗ ತನ್ನ ತವರುಮನೆಯ ಹುಡುಗನನ್ನು ದತ್ತಕ ತೆಗೆದುಕೊಂಡು ಸಯಾಜಿರಾವ್ ಗಾಯಕವಾಡರೆಂದು ಪಟ್ಟ ಕಟ್ಟಿದರು (1875–1939). ಅಂದರೆ, ಆಗ ಬರೋಡಾ ಸಂಸ್ಥಾನದಲ್ಲಿ ಸರದಾರರ ವರ್ಚಸ್ಸು ತುಂಬಾ ಇತ್ತು. ಸಯಾಜಿರಾವ್‌ರಿಗೆ ಸಂಗೀತ–ನೃತ್ಯ ತುಂಬ ಸೇರುತ್ತಿತ್ತು. ಅಬ್ದುಲ್ ಕರೀಂ ಬರುವ ಮೊದಲು ಬರೋಡಾದಲ್ಲಿ ಒಂದು ಗಾಯನ ಶಾಲೆಯೂ ಇತ್ತು ಮತ್ತು ಮೌಲಾ ಬಕ್ಷ್ ಎಂಬ ಬೀನ್‌ವಾದಕ–ಗಾಯಕರು ಈ ಶಾಲೆಯ ಮುಖ್ಯಸ್ಥರಾಗಿದ್ದರು. ರೆಹಮತ್ ಖಾನ್ ಮತ್ತು ಅವರ ಮಗ ಇನಾಯತ್ ಖಾನ್ ಪಠಾಣರೂ ಸಂಸ್ಥಾನದ ಸೇವೆಯಲ್ಲಿದ್ದರು. ಮುಂದೆ ಈ ಇನಾಯತ್ ಖಾನ್ ಪಠಾಣರು ಸೂಫಿ ಪಂಥದ ದೊಡ್ಡ ಭಕ್ತರೆಂದು ಅಮೇರಿಕೆಯಲ್ಲಿ ಪ್ರಸಿದ್ಧಿಪಡೆದರು.

ಹಿಂದುಸ್ತಾನಿ ಸಂಗೀತದ 20ನೇ ಶತಮಾನದ 'ಪಾಣಿನಿ' ಎಂದು ಗೌರವಿಸಲ್ಪಟ್ಟ ಪಂಡಿತ ನಾರಾಯಣ ಭಾತಖಂಡೆ ಎಂಬ ಕಲಾವಿದನ ಮೊದಲ ಕಾಲವದು. ಸಯಾಜಿರಾವ್ ಗಾಯಕವಾಡರ ಸಾರಥ್ಯದಲ್ಲಿ ಹಿಂದೂ ಸಂಗೀತ ಅಂದರೆ 'ಹಿಂದುಸ್ತಾನಿ ಸಂಗೀತ' ಬರೆದಿಡುವ ಪಾಶ್ಚಿಮಾತ್ಯ ಪದ್ಧತಿ ರೂಢಿಯನ್ನು ಮೊಟ್ಟಮೊದಲು ತಂದದ್ದು ಈ ಬರೋಡಾ ಸಂಸ್ಥಾನದಲ್ಲಿಯೇ! 1881ರಲ್ಲಿಯೇ, ಮೇಲೆ ಹೇಳಿದ ಮೌಲಾ ಬಕ್ಷ್ ಸಾಹೇಬರು ಈ ಗಾಯನ ಶಾಲೆಯ ಪರವಾಗಿ ಪ್ರಾರಂಭಿಸಿದ್ದ ಮಾಹಿತಿ, ಬರೋಡಾ ಸಂಸ್ಥಾನದ ದಾಖಲೆಗಳಲ್ಲಿದೆ. 'ನೋಟೇಶನ್' ಪದ್ಧತಿ ಒಂದು ರೀತಿಯಲ್ಲಿ ಪ್ರಾಥಮಿಕ ಬರಹ ಪ್ರಾರಂಭಿಸಿದ ಶ್ರೇಯ, ಈ ಮೌಲಾ ಬಕ್ಷರಿಗೂ ಮತ್ತು ನಂತರ ಉರ್ದು ಬಿಟ್ಟು ಯಾವುದೇ ಭಾಷೆ ಬರೆಯಲು ಬಾರದ ಈ ಅಬ್ದುಲ್ ಕರೀಂ ಖಾನ್ ಮತ್ತು ಅವರು ಹೇಳಿದ್ದನ್ನು ತನ್ನ ಸುಂದರ ಕೈ ಲಿಪಿಯಲ್ಲಿ ಬರೆದು, ಬರೆದ ಹಾಗೆ ಅವರ

ಕೈ ಬರಹದ ಪುಸ್ತಿಕೆಯನ್ನು ಪ್ರಕಟಿಸಿದ ಶ್ರೇಯ ತಾರಾಬಾಯಿಗೆ ಸಲ್ಲುತ್ತದೆ. ಈ ಪುಸ್ತಕದ ಹೆಸರು 'ಸಂಗೀತ ಸ್ವರ ಪ್ರಕಾಶ'. ಅಬ್ದುಲ್ ಕರೀಂ ಖಾನರು ಅದಾಗಲೇ ತಾರಾಬಾಯಿಗೆ ಸಂಗೀತ ಕಲಿಸಲು ಪ್ರಾರಂಭಿಸಿದ್ದರು (1898). ಆಗ ಅವರಿಗೆ 26 ವರ್ಷ! ಮೊದಲನೇ ಮದುವೆ ಅದಾಗಲೇ ಮುಗಿಸಿ, ಮೊದಲ ಹೆಂಡತಿ ಗಫೂರಾನ್‌ಳನ್ನು (1873–1973) ಕೈರಾನಾ ಊರಿನಲ್ಲಿಯೇ ತನ್ನ ತಂದೆ ತಾಯಿಯರನ್ನು, ನೋಡಿಕೊಳ್ಳಲು ಬಿಟ್ಟು, ಈ ಮಹಾಶಯ ತಾರಾಬಾಯಿಯ ಪ್ರೇಮಪಾಶದಲ್ಲಿ ಸಿಕ್ಕಿಕೊಂಡಿದ್ದರು. ಅಬ್ದುಲ್ ಕರೀಂರ ಮೊದಲ ಹೆಂಡತಿ 100 ವರ್ಷ ಬಾಳಿದ್ದರು ಎಂದು ಮೈಕೇಲ್ ಕಿನ್ನರ ತಮ್ಮ ಪುಸ್ತಕದಲ್ಲಿ ಬರೆಯುತ್ತಾರೆ. 1898ರ ಸುಮಾರಿಗೆ ತಾರಾಬಾಯಿಯ ತಾಯಿ ಹೀರಾಬಾಯಿ ತೀರಿಕೊಂಡರು. ತಂದೆ ಸರದಾರ ಮಾರುತ್ ರಾವ್ ಮಾನೆಯವರು ದುಃಖದಲ್ಲಿ ಮುಳುಗಿದಾಗ ತಾರಾಬಾಯಿ ಅಬ್ದುಲ್ ಕರೀಂರ ಪ್ರೇಮದಲ್ಲಿ ಸಿಕ್ಕಿಕೊಂಡ ಸತ್ಯ ಪರಿಸ್ಥಿತಿ ತಂದೆಗೆ ಗೊತ್ತಾಯಿತು. ಕರೀಂಖಾನರಿಗೆ ಈ ಸಮಾಚಾರ ಸಿಕ್ಕ ಕೂಡಲೇ, ಅದೇ ದಿನ ರಾತ್ರಿ ತಾರಾಬಾಯಿ ಸಹಿತ, ತನ್ನ ತಮ್ಮ ಅಬ್ದುಲ್ ಹಕ್‌ನೊಂದಿಗೆ ಬರೋಡಾದಲ್ಲಿಯ, 'ಉಜ್ವಲ' ಭವಿತವ್ಯವನ್ನು ಧಿಕ್ಕರಿಸಿ, ಮುಂಬಯಿಗೆ ಪ್ರಯಾಣ ಬೆಳೆಸಿದರು.

ಸಂಗೀತಕ್ಕೆ ಪ್ರೋತ್ಸಾಹ ಕೊಡುವ ರಾಜ, ಮಹಾರಾಜ, ನವಾಬರೇ ಅಂದರೆ ರಾಜಾಶ್ರಯ ಕೊಡುವವರೇ ಇಲ್ಲವೆಂದ ಮೇಲೆ ಅಬ್ದುಲ್ ಕರೀಂಖಾನರಿಗೆ ದ್ರವ್ಯಾರ್ಜನೆಗಾಗಿ, 'ಲೋಕಾಶ್ರಯ'ಕ್ಕೇ ಶರಣು ಹೋಗಬೇಕಾಯಿತು. ಬ್ರಿಟಿಷ್ ಇಂಡಿಯಾದಲ್ಲಿ ಎಲ್ಲಿ ಮಹಾರಾಜರು? 19ನೇ ಶತಮಾನದಲ್ಲಿ ಮೊಟ್ಟಮೊದಲು ಟಿಕೇಟ್ಟು ಹಚ್ಚಿ ಸಂಗೀತದ 'ಜಲಸಾ' ಪ್ರಾರಂಭಿಸಿದ್ದುದು ಈ ಕರೀಂಖಾನರೇ! ತಾರಾಬಾಯಿ ಕೂಡ ಇಂತಹ 'ಜಲಸಾಗಳನ್ನು ಹಣಕ್ಕೋಸ್ಕರ ಮಾಡುತ್ತಿದ್ದರು. ಮುಂಬಯಿಯ ಆ ಕಾಲದ ದೊಡ್ಡ ದೊಡ್ಡ ವ್ಯಾಪಾರಿಗಳ ಮನೆಗಳಲ್ಲಿ ಇಂತಹ ಕಚೇರಿಗಳನ್ನು ಏರ್ಪಡಿಸಿ ಮಾಲಕರು ಕೊಟ್ಟ, 'ಬಿದಾಗಿ' ಮತ್ತು ರಸಿಕ ಶ್ರೋತೃಗಳಿಂದಲೂ ಒಟ್ಟುಮಾಡಿದ ಹಣ ಹಾಡುಗಾರರಿಗೆ ಸಲ್ಲುತ್ತಿತ್ತು.

11ನೇ ವರ್ಷದಲ್ಲಿಯೇ, ಭಾರತ ಭ್ರಮಣ ಪ್ರಾರಂಭಿಸಿದ ಅಬ್ದುಲ್ ಕರೀಂರಿಗೆ ಆಗ ಹೊಸದಾಗಿ ಸ್ಥಾಪಿಸಲಾದ ಜಿಐಪಿ ರೈಲ್ವೆ ಮತ್ತು ಬಿಬಿಸಿಐ ರೈಲ್ವೇ (Great Indian Peninsula Railway, Bombay-Baroda Central Indian Railway) ಸೌಲಭ್ಯದಿಂದ ಊರೂರು ತಿರುಗಿ ಕೊನೆಗೆ ಖಾನ್ ಸಾಹೇಬರು ಮಿರಜಿನಲ್ಲಿ ಅಂದರೆ, ಸಂಸ್ಥಾನಕರ ರಾಜಾಶ್ರಯ, ನಾಟಕ ಕಂಪನಿಗಳ ಲೋಕಾಶ್ರಯ ಮತ್ತು ಕರ್ನಾಟಕ ಮಹಾರಾಷ್ಟ್ರಗಳ ಮಧ್ಯ ಬಿಂದುವಿನಂತಹ ತಾಣದಲ್ಲಿ ಅವರು ವಾಸ್ತವ್ಯವನ್ನು ಹೂಡಿದರು. ಮುಂದೇ ಇದೇ ಮಿರಜ್, ಅಬ್ದುಲ್ ಕರೀಂ ಖಾನರ ಕೃಪೆಯಿಂದ ಇಡೀ ಭಾರತದಲ್ಲಿ ತಂಬೂರಿ–ಸಿತಾರ್ ವಾದ್ಯದ ಕೇಂದ್ರವೆಂದು ಖ್ಯಾತಿ ಪಡೆಯಿತು. ಮಿರಜ್ ಕೂಡ ಆ ಕಾಲದಲ್ಲಿ, ಭಾರತದ ರೈಲು ಜಾಲದ, ದಕ್ಷಿಣ ಭಾಗದ ಮದ್ರಾಸ್ ಎಂಡ್ ಸದರ್ನ್ ಮರಾಠಾ ರೈಲ್ವೆಯ ಒಂದು ಕೊನೆಯ ಬಿಂದುವಾಗಿತ್ತು. ಅಬ್ದುಲ್ ಕರೀಂ ಖಾನರ ಬರೋಡಾ ಕನೆಕ್ಷನ್ ಇಲ್ಲಿಯೂ ಸಹಾಯ ಮಾಡಿತು. ಕಿರ್ಲೋಸ್ಕರ ನಾಟಕ ಕಂಪನಿಯ (ಕರ್ನಾಟಕದಲ್ಲಿಯೂ ಮರಾಠಿ ನಾಟಕಕಾರರೆಂದು ಖ್ಯಾತಿ ಪಡೆದ ಅಣ್ಣಾ ಸಾಹೇಬ

ಕಿರ್ಲೋಸ್ಕರರ ನಾಟಕ ಕಂಪನಿ) ಆಗಿನ ಮಾಲಕ ಭಾವು ಕೋಲ್ಹಟಕರ್ ಇವರು ಅಬ್ದುಲ್ ಕರೀಂರ ಶಿಷ್ಯರಾಗಿದ್ದುದರಿಂದ ದ್ರವ್ಯಾರ್ಜನೆಯ ಮಾರ್ಗ ಕೂಡ ಸುಲಭವಾಯಿತು. ಇವರೇ ಮುಂದೆ ಮುಂಬಯಿ, ಪುಣೆ, ಬೆಳಗಾವಿ, ಕೊಲ್ಹಾಪುರ, ಸತಾರಾ, ಸೊಲ್ಲಾಪುರ, ಹುಬ್ಬಳ್ಳಿ, ಬಾಗಲಕೋಟ, ಮಿರಜ್ ಈ ಊರುಗಳಲ್ಲಿ ಕಚೇರಿಗಳಷ್ಟೇ ಅಲ್ಲ ಅವರ, 'ಆರ್ಯ ಸಂಗೀತ ವಿದ್ಯಾಲಯಗಳ' ಅಡಿಗಲ್ಲು ಹಾಕುವ ಜವಾಬ್ದಾರಿ ವಹಿಸಿದರು. ಮುಂದೆ ಮೈಸೂರು, ಮದ್ರಾಸಗಳ ನಡುವಿನ ಓಡಾಟ ಇಲ್ಲಿಂದಲೇ ಪ್ರಾರಂಭವಾಯಿತು.

ತಾರಾಬಾಯಿ ಮಾನೆ, 'ತೆಹೆರಾ ಬೀಬಿ ಅಬ್ದುಲ್ ಕರೀಂ' ಆದದ್ದು, ಅವರ 'ನಿಕಾ' ಪ್ರಸಂಗ ಇದೆಲ್ಲ ಮೈಕೇಲ್, ಕರೀಂ ಖಾನರ ಕುರಿತ ಚರಿತ್ರೆಯಲ್ಲಿ ಇಲ್ಲ. ಕಪಿಲೇಶ್ವರಿಯವರು ತಮ್ಮ ಪುಸ್ತಕದಲ್ಲಿ ರಸವತ್ತಾಗಿ ವರ್ಣಿಸಿದ್ದಾರೆ. ಇಲ್ಲಿಯೇ ಅಬ್ದುಲ್ ಕರೀಂ ಅವರಿಗೆ ಆ ಕಾಲದ ಕಾಲರಾ ಬೇನೆ ಆಗಿ, ಮುಂದೆ ತಾರಾಬಾಯಿ ಮತ್ತು ಅಬ್ದುಲ್ ಹಕ್ ಅವರ ಶುಶ್ರೂಷೆ ಹಾಗೂ ಅವರ ಮಿರಜದಲ್ಲಿಯ ಶಮನಾಮೀರ ದರ್ಗಾದ ಶ್ರದ್ಧೆಯಿಂದ ಗುಣವಾದರು. ಮುಂದೆ ಅವರು ಸಾಯುವತನಕ ಈ ಪೀರ ಶಮನಾಮೀರ ದರ್ಗಾ ಅವರ ಕುಲದೈವವಾಗಿತ್ತು. ಈಗಲೂ ಪ್ರತಿ ವರ್ಷ ಅವರ ಬರ್ಸಿಯಂದು (ಅಂತ್ಯತಿಥಿ) ಇದೇ ದರ್ಗಾದಲ್ಲಿ ಒಂದು ದೊಡ್ಡ ಸಂಗೀತ ಸೇವೆಯನ್ನು ಏರ್ಪಡಿಸಲಾಗುತ್ತದೆ. ಕ್ರಮೇಣ ತಾರಾಬಾಯಿ ಉರ್ಫ ತೆಹೆರಾಬೀಬಿಗೆ 1902ರಲ್ಲಿ ಅಬ್ದುಲ್ ರೆಹಮಾನ್ ಉರ್ಫ ಸುರೇಶಬಾಬು ಮಾನೆ, ಬೆಳಗಾವಿಯಲ್ಲಿ, 1905ರಲ್ಲಿ ಸೊಲ್ಲಾಪುರದಲ್ಲಿ ಚಂಪುತಾಯಿ ಉರ್ಫ ಹೀರಾಬಾಯಿ ಬಡೋದೆಕರ್, 1908ರಲ್ಲಿ ಗುಲಾಬ್ ಉರ್ಫ ಕಮಲಾಬಾಯಿ ಬಡೋದೆಕರ್, ಮುಂದೆ 1910ರಲ್ಲಿ ಅಬ್ದುಲ್ ಹಮೀದ ಬೆಳಗಾವಿಯಲ್ಲಿ (ಮುಂದೆ ಇವರು ಕೃಷ್ಣರಾವ್ ಮಾನೆ ಎಂದು ಹೆಸರು ಹಚ್ಚುತ್ತಿದ್ದರು) ಕೊನೆಗೆ ಮಿರಜನಲ್ಲಿ ಸಾಕೀನಾ ಛೋಟು ಉರ್ಫ ಸರಸ್ವತಿಬಾಯಿ ರಾಣೆ 1919ರಲ್ಲಿ ಜನಿಸಿದರು. ಇಷ್ಟೆಲ್ಲ ಮಾಹಿತಿ ಇಲ್ಲಿ ಬರೆಯುವ ಕಾರಣ, ಅಬ್ದುಲ್ ಕರೀಂರ ಅಲೆಮಾರಿ ಸಂಸಾರದ ಉದಾಹರಣೆಯನ್ನು ನೀಡಲು. ಮುಂದೆ ಇದೇ ಸಂಸಾರದಲ್ಲಿ ಸ್ವಾರಸ್ಯ ಕಡಿಮೆಯಾಗುತ್ತ, 1922ರಲ್ಲಿ ಕ್ರಮೇಣ ತೆಹರಾ ಬೀಬಿ, ತಾರಾಬಾಯಿ ಮಾನೆ ಆಗಿ ಮುಂಬಯಿ, ಪುಣೆಯಲ್ಲಿ ತನ್ನ ಸ್ವತಂತ್ರ ಕಾರ್ಯಕ್ಷೇತ್ರ ಮಾಡಿಕೊಂಡದ್ದನ್ನು ಕಾಣುತ್ತೇವೆ. ಅಬ್ದುಲ್ ಕರೀಂರು ಕೂಡ ಮಿರಜ್‌ನಲ್ಲಿಯೂ ಮತ್ತು ಕರ್ನಾಟಕದ ವಿವಿಧ ಊರುಗಳಲ್ಲಿ ತಮ್ಮ ಅಲೆಮಾರಿ ಸಂಸಾರವನ್ನು ಮುಂದುವರೆಸುತ್ತ ಹೋದದ್ದು ಕೂಡ ಉಂಟು.

ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ಪ್ರದೇಶಗಳಲ್ಲಿ ಈ ಕಿರಾನಾ ಪರಂಪರೆ ಹುಲುಸಾಗಿ ಬೆಳೆದದ್ದು ಈ ಅಲೆಮಾರಿ ಜೀವನದಿಂದಲೇ. ಬರೋಡಾದ 'ಗಾಯನಶಾಲೆ', ಸೊಲ್ಲಾಪುರದ 'ಶಾಸ್ತ್ರೋಕ್ತ ಗಾಯನ ಪ್ರಸಾರಕ ಕಂಪನಿ' (1910), ಪುಣೆಯಲ್ಲಿಯ 'ಆರ್ಯ ಸಂಗೀತ ವಿದ್ಯಾಲಯ' (1909), ಬೆಳಗಾವಿಯಲ್ಲಿ ಇದೇ ಹೆಸರಿನ ಇನ್ನೊಂದು ಬ್ರಾಂಚು (1910), ಹುಬ್ಬಳ್ಳಿಯಲ್ಲಿ ಮತ್ತೊಂದು, ಪುಣೆಯಲ್ಲಿ ಕೂಡ, 'ಸರಸ್ವತಿ ಸಂಗೀತ ವಿದ್ಯಾಲಯ' ಹೀಗೆ ಒಂದು ಸಂಗೀತ ವಿದ್ಯಾಲಯಗಳ

ಮಾಲೆಯನ್ನೇ ಕರೀಂ ಖಾನ್ ದಂಪತಿಗಳು ಪೋಣಿಸಿದರು. ಇದರ ವಹಿವಾಟವನ್ನೆಲ್ಲ ನಿರ್ವಹಿಸುವ ಕೆಲಸ ತಾರಾಬಾಯಿಯವರದು. ಕೆಲ ಹಳೆಯ ವಿದ್ಯಾರ್ಥಿಗಳು, ಪೋಷಕರು, ಫೀ ವಸೂಲಿ ಇವುಗಳಿಂದ ದಿನನಿತ್ಯದ ಖರ್ಚು, ಮನೆ ಬಾಡಿಗೆ, ಊಟ-ತಿಂಡಿ ಇತ್ಯಾದಿಗಳಿಗೆ ಹಣ ಸಂದಾಯವಾಗುತ್ತಿತ್ತು.

ಎರಡನೆಯದಾಗಿ, ಕರೀಂ ಖಾನರ ಹುಟ್ಟಿನಿಂದಲೇ ಪ್ರತಿಭೆಯುಳ್ಳ ಮೇಧಾವಿ ಸಂತತಿ ಮತ್ತು ಅವರ ಸ್ವತಂತ್ರವಾಗಿ ಬೆಳೆದ ಶಿಷ್ಯ ಸಂಪತ್ತು. ತಾರಾಬಾಯಿ ಕೂಡ ಸ್ವತಂತ್ರ ಮತ್ತು ಧಾಡಸಿ ಮಹಿಳೆ, ಚಿಕ್ಕಮಗಳು ಸಾಕಿನಾ ನಾಲ್ಕು ವರ್ಷದವಳಿದ್ದಾಗಲೇ ಕರೀಂ ಖಾನರ ಸಹವಾಸ ಬಿಟ್ಟು, ಪುಣೆಯಿಂದ ಮುಂಬಯಿಗೆ ಸ್ಥಳಾಂತರಗೊಂಡು ಅಲ್ಲಿ ತಮ್ಮದೇ, 'ಆರ್ಯ ಸಂಗೀತ ಪ್ರಸಾರಕ ವಿದ್ಯಾಲಯ' ಸ್ಥಾಪಿಸಿ ಆಗಿನ ಖ್ಯಾತ ರಾಜಕೀಯ ನೇತಾರ ಎಮ್.ಆರ್. ಜಯಕರ್ ಅವರ ದೊಡ್ಡ ಮನೆಯಲ್ಲೇ ಬೀಡುಬಿಟ್ಟರು. ಅನೇಕ ಸಂಗೀತ ವಿದ್ಯಾಲಯದ ವ್ಯವಸ್ಥಾಪನೆಯ ಅನುಭವದಿಂದ ತಾರಾಬಾಯಿ ಧೈರ್ಯದಿಂದ ಒಂದು ನಾಟಕ ಕಂಪನಿಯನ್ನೂ ಸ್ಥಾಪಿಸಿದರು. ಸುರೇಶಬಾಬು ಅವರಿಗೆ ತಂದೆಯಿಂದ ತಾಲೀಮು (ತರಬೇತಿ) ಸಿಕ್ಕಿತ್ತು. ಹೀರಾಬಾಯಿ ಹಾಗೂ ಕಮಲಾಬಾಯಿಯವರಿಗೆ ತಂದೆ ಕರೀಂ ಖಾನರ ತಾಲೀಮು ಕೊಡಿಸದೇ, ಅವರ ಸೋದರಳಿಯ ಬೆಹರೆ ಅಬ್ದುಲ್ ವಹೀದಖಾನರ ತಾಲೀಮು ಕೊಡಿಸಿದರು. ಮುಂಬಯಿಯ ಜಯಕರ್ ಅವರ ಮನೆ ಕ್ರಮೇಣ ತೊರೆದು, ತಾರಾಬಾಯಿ ಮಾನೆಯವರು ಗಿರಗಾಂವನಲ್ಲಿ ಕಾಂಗ್ರೆಸ್ ಹೌಸ್ ಪಕ್ಕದಲ್ಲಿ, ತನ್ನದೇ, 'ನೂತನ ಸಂಗೀತ ವಿದ್ಯಾಲಯ' ಸ್ಥಾಪಿಸಿದರು. ಮತ್ತು ಅದೇ ಹೆಸರಿನ ನಾಟಕ ಮಂಡಳಿಯಲ್ಲಿ ಹೀರಾಬಾಯಿ, ಸುರೇಶಬಾಬು ಮತ್ತು ಇತರರು ಭಾಗವಹಿಸಲು ಪ್ರಾರಂಭಿಸಿದರು. 1924ರಲ್ಲಿ ಈ ನೂತನ ವಿದ್ಯಾಲಯವನ್ನು ಪುಣೆಗೆ ಸ್ಥಳಾಂತರಿಸಲಾಯಿತು. ಹೀರಾಬಾಯಿ, ಸುರೇಶರ ರೆಕಾರ್ಡಿಂಗ ಮಾಡಿಸಿ ಕೆಲವೇ ತಿಂಗಳುಗಳಲ್ಲಿ ಹೀರಾಬಾಯಿ ಬಡೋದೆಕರ್ ಗ್ರಾಮೊಫೋನ್ ಸಿಲೆಬ್ರಿಟಿ ಆದರು.

ತಾರಾಬಾಯಿ ಮಾನೆ ಅಂದರೆ ಆ ಕಾಲದ 'ಫೇಮಿನಿಸ್ಟ್' ಎಂದು ಹೇಳಬಹುದು. ಅಬ್ದುಲ್ ಕರೀಂ ಖಾನರನ್ನು ಪ್ರೇಮಿಸಿ ಲಗ್ನವಾಗಿ, ಐದು ಮಕ್ಕಳನ್ನು ಹೆತ್ತರೂ ಅಬ್ದುಲ್ ಕರೀಂ ಖಾನರ, 'ಹೊರಗಿನ ಚಾಳಿ' ಈಕೆ ಸಹಿಸಲಿಲ್ಲ. ಕರೀಂ ಖಾನರು ಬಾನುಬಾಯಿ ಲಾಟಕರ್ ಮತ್ತು ಆಕೆಯ ತಂಗಿಯ ಸಂಬಂಧವಿಟ್ಟುಕೊಂಡಿದ್ದೇ ನೆಪ ಮಾಡಿ ಅವರ ಶಿಷ್ಯ ಸವಾಯಿ ಗಂಧರ್ವ ಮತ್ತಿತರರ ಸಹಾಯದಿಂದ ತಮ್ಮ ನಾಟಕ ಕಂಪನಿಯನ್ನು ಊರ್ಜಿತಾವಸ್ಥೆಗೆ ತಂದರು. ಮಕ್ಕಳೆಲ್ಲ ಪ್ರತಿಭಾವಂತರಾದ್ದರಿಂದ ಚಲನಚಿತ್ರದಲ್ಲಿಯೂ, ಮೆಹಫಿಲ್‌ಗಳಲ್ಲಿಯೂ ಹೆಸರು ಮಾಡಿದರು.

ಈಕೆ 1946ರಲ್ಲಿ ಪುಣೆಯಲ್ಲಿ ತೀರಿಕೊಂಡರು. ಆಗ ಅವರಿಗೆ 67ರ ಪ್ರಾಯ. ಇವರ ಒಂದು ರೆಕಾರ್ಡು, ತಾರಾಬಾಯಿ ಗೋವೇರಿಕರ ಎಂಬ ಹೆಸರಿನಲ್ಲಿ ಕೊಟ್ಟಿದ್ದು ಈಗಲೂ ರೆಕಾರ್ಡು ಸಂಗ್ರಾಹಕರಲ್ಲಿ ಉಪಲಬ್ಧವಿದೆ.

*****

ಅಧ್ಯಾಯ 8

ವಿಸ್ಮೃತಿಯಲ್ಲಿ ಅಡಗಿದ ಕಿರಾನಾ ಪರಂಪರೆಯ ಗಾಯಕರು

8.1

ಬಂದೇ ಅಲಿ ಖಾನ್ (1824–1895)

ಕೈರಾನಾ ಪಾನಿಪತ್ತದ ಪಕ್ಕದ ಊರು. ದಿಲ್ಲಿಯ ಉತ್ತರಕ್ಕೆ ಸುಮಾರು ನಲವತ್ತು ಕಿ.ಮಿ ದೂರ. ಯಮುನಾ ನದಿಯ ತೀರದಲ್ಲಿದೆ. ಹೀಗಾಗಿ ಅಲ್ಲಿನ ಭೂಮಿ ಸಹರಣಪೂರ ಮತ್ತು ದಿಲ್ಲಿಯ ಮಧ್ಯದಲ್ಲಿನ ಫಲವತ್ತಾದ ಜಮೀನು. 1620ರ ಸುಮಾರಿಗೆ ಯಮುನಾ ನದಿಗೆ ಮಹಾಪೂರ ಬಂದಾಗ ಆಗಿನ ಮೊಗಲ್ ಬಾದಶಹಾ ಜಹಾಂಗೀರ ದಂಡೆಯ ಪಕ್ಕದ ಬಾರಾಬಸ್ತಿಯಲ್ಲಿ, ಅಂದರೆ ಹನ್ನೆರಡು ಹಳ್ಳಿಗಳಲ್ಲಿ ನಿರಾಶ್ರಿತರಿಗೆ ಉಂಬಳಿಯನ್ನು ಕೊಟ್ಟು ವಸತಿ ಮಾಡಿಸಿದನಂತೆ. ದಿಲ್ಲಿಯ ಕೃಪಾಛತ್ರ ಇರುವ ತನಕ, ಈ ಹಳ್ಳಿಗಳಿಂದ ದಿಲ್ಲಿಗೆ ವಲಸೆ ಹೋಗುವ ವಾದಕ, ಗಾಯಕರು ಮುಂದೆ ಮೊಗಲ್ ದರಬಾರದ ಪತನದ ನಂತರ, ಹಿಂದುಸ್ತಾನದ ಮೂಲೆಮೂಲೆಗಳಲ್ಲಿ ನವಾಬ-ಮಹಾರಾಜರ ಆಶ್ರಯವನ್ನು ಹುಡುಕುತ್ತ ವಲಸೆ ಹೋದರು. ಹುಟ್ಟಿದ ಊರು ಕೈರಾನ್, ಛಪರೋಳಿ, ಅಂಬೈತಾ, ಹಸನಪೂರ್-ಲೋಹಾರಿ, ಸಹರನಪೂರ ಶಾಮಲಿ ಇತ್ಯಾದಿ. ಕಳೆದ ಎರಡು ಶತಮಾನಗಳಿಂದ ಊರುಗಳ ಹೆಸರು ಬದಲಾಗಲಿಲ್ಲ. ಕೈರಾನಾದಲ್ಲಿ ಮೊಹಲ್ಲಾಗಳೂ ಇದ್ದ ಹಾಗೆ ಇವೆಯಂತೆ. "ಚೌಕಿವಾಲೆ ಮಕಾನ್" ಅಬ್ದುಲ್ ಕರೀಂಖಾನ್‌ರದಾದರೆ ಇಮಾಮ ಬಾಡಾ ಮೊಹಲ್ಲಾದಲ್ಲಿ ಬೀನ್ ವಾದಕ ಬಂದೇ ಅಲಿಖಾನ್‌ರ ಮನೆ, ಆಲಕಲ್ಲ ಮೊಹಲ್ಲಾದಲ್ಲಿ ಹೀರಾಬಾಯಿ ಬಡೋದೆಕರ್‌ರ ಮತ್ತು ಉಸ್ತಾದ್ ಅಬ್ದುಲ ವಹೀದಖಾನ್‌ರ ಮನೆ, ಕೈಸ್ತವಾಡದಲ್ಲಿ ಸಾರಂಗಿವಾದಕ ಶಕೂರ್ ಖಾನ್‌ರ ವಾಸ್ತವ್ಯ(1916–75). ರೆಹಮತ್ ಬಕ್ಷ್ ಖಾನ್‌ರೂ ಇಲ್ಲಿಯವರೇ. ಕೈರಾನಾ ಇದು ಉತ್ತರಾದಿ ಸಂಗೀತದ ಗಂಗೋತ್ರಿಯಂತೆ.

ಕೈರಾನಾ ಒಂದು ಮಧ್ಯ ಬಿಂದುವಿನಂತೆ. ಇಲ್ಲಿಂದ ವಲಸೆ ಹೋದ ಯಾವ ವಾದಕ-ಗಾಯಕರ ಗೋರಿಯೂ ಇಲ್ಲಿಯ ಸ್ಮಶಾನದಲ್ಲಿ ಇಲ್ಲ! ಬಂದೇ ಅಲಿಯವರ

ದಫನ್ ಪುಣೆಯಲ್ಲಿ ಆದರೆ, ಅಬ್ದುಲ್ ಕರೀಂ ಅವರದು ಮಿರಜಿನಲ್ಲಿ; ರೆಹಮಾನ್ ಬಕ್ಷರದು ಜಯಪೂರ್, ಅಬ್ದುಲ್ ವಹೀದ್ ಸಹರಣ್‌ಪೂರ್ ಮತ್ತು ಶಕೂರ್ ಖಾನ್ ತೀರಿಕೊಂಡದ್ದು ದಿಲ್ಲಿಯಲ್ಲಿ. ಕರ್ನಾಟಕದ ಧಾರವಾಡ-ಹುಬ್ಬಳ್ಳಿ, ಬೆಳಗಾವಿಯ ಪ್ರದೇಶ 20ನೇ ಶತಮಾನದಲ್ಲಿ ಹಿಂದುಸ್ತಾನಿ ಸಂಗೀತದ ಮಧ್ಯಬಿಂದು ಆದಂತೆ, ಕಿರಾನಾ 19ನೆಯ ಶತಮಾನದ ಕೇಂದ್ರವಾಗಿತ್ತು ಎಂದರೆ ಅತಿಶಯೋಕ್ತಿ ಆಗಲಾರದು. ಶಕೂರ್ ಖಾನ್, ವಹೀದ್ ಖಾನರ ಸಾವಿನ ನಂತರ , ಉಸ್ತಾದ್‌ರ ಮನೆತನ ದಿಲ್ಲಿ ಮತ್ತು ಇತರ ಶಹರ್‌ಗಳಿಗೆ (ಮುಂಬಯಿ, ದಿಲ್ಲಿ, ಕಲಕತ್ತೆಗಳಿಗೆ) ಸ್ಥಳಾಂತರಗೊಂಡು ಈ ಬಾರಾಬಸ್ತಿ ಊರುಗಳ ಮಹತ್ವ ಕೂಡ ಕಡಿಮೆ ಆಗುತ್ತ ಹೋಯಿತು.

ಭಾರತದ ಅಗ್ರಗಣ್ಯ ಬೀನ್ ವಾದಕರಲ್ಲಿ ಬಂದೇ ಅಲಿ ಖಾನ್‌ರ ಹೆಸರು ಮುಂಚೂಣಿಯಲ್ಲಿದೆ. ಬಂದೇ ಅಲಿ ಖಾನ್‌ರ ತಂದೆಯ ಹೆಸರು ಸಾದಿಖ್ ಅಲಿಖಾನ್ ಬೀನ್‌ಕಾರ್. ಒಂದೆರಡು ಸಂದರ್ಭಗಳಲ್ಲಿ, 'ವಾಲಿದ್ ಕಾ ನಾಮ್ ಗುಲಾಮ್ ಜಾಫರ್ ಖಾನ್-ಬೀನಕಾರ್ ಡಾಗರ್ ಬಾನಿವಾಲೆ' ಎಂದು ಬಂದಿರುವದರಿಂದ ಖ್ಯಾತ ಧ್ರುಪದ್ ಗಾಯಕ ಪುಣೆಯ ಸೈದುದ್ದೀನರನ್ನು ಕೇಳಿದ್ದೆ. "ಛೇ, ಅವರು ನಮ್ಮವರಲ್ಲ" ಎಂದು ತಳ್ಳಿಹಾಕಿ ತಮ್ಮ 20 ನೇ ತಲೆಮಾರಿನ ಕಥೆ ಪ್ರಾರಂಭಿಸಿದರು. ಅವರ ಹೇಳಿಕೆಯಂತೆ ಗುಲಾಮ್ ಜಾಫರ್ ಖಾನ್‌ರು ಮ್ಲೇಂಛರು! ತಾವು ಬ್ರಾಹ್ಮಣ ಮುಸಲ್ಮಾನರು, ಸರಸ್ವತಿ ಪೂಜಕರು ಎಂಬುದಾಗಿ ಹೇಳಿದರು! ಡಾ. ಎಸ್.ಎಲ್ ಭೈರಪ್ಪನವರೊಂದಿಗೆ ಅವರ ಪನವೇಲ್ ಆಶ್ರಮದಲ್ಲಿ ಆರಡಿ ಎತ್ತರದ ಸರಸ್ವತಿ ವಿಗ್ರಹ ನೋಡಿದ ನೆನಪು ಮರುಕಳಿಸಿತು. ತಂದೆ ಸಾದಿಖ್ ಅಲಿ 1840ರಲ್ಲಿ ತೀರಿಕೊಂಡಾಗ ಬಂದೇ ಅಲಿ 16 ವರ್ಷದವ. ತಂದೆ ಬೀನ್ ಬಾರಿಸುವದನ್ನು ಕಲಿಸಿದ್ದರೂ ಬೆಹರಾಮ್ ಖಾನ್ ಡಾಗರ್ ಬಳಿಯಲ್ಲಿ ಹಾಡುಗಾರಿಕೆ ಕಲಿತನಂತೆ. ಬೆಹರಾವ್ ಖಾನ್ ಅಂಬೈತಾದವನಾದರೂ ಜಯಪುರ ದರ್ಬಾರಿನ ಹಾಡುಗಾರನಾಗಿದ್ದ. ಹೀಗಾಗಿ ಬಂದೇ ಅಲಿ ಜಯಪುರ ಮಹಾರಾಜರ ಆಶ್ರಯ ಪಡೆದ.

ಈ ಬೆಹರಾಮ್ ಖಾನರ ಉಲ್ಲೇಖ ಜಯಪುರ ಅತ್ರೋಳಿ ಪರಂಪರೆಯ ಅಲ್ಲಾದಿಯಾ ಖಾನರ ಚರಿತ್ರೆಯಲ್ಲಿಯೂ ಬರುತ್ತದೆ. ಸಾಧಾರಣ 1886ರ ಸುಮಾರಿಗೆ ಈ ಬೆಹರಾಮ್ ಖಾನ್‌ರ ಹಾಡುವ ಗಂಟಲು ಅಸಹಕಾರ ಚಳವಳಿಯನ್ನು ಹೂಡಿತು! ಅತಿ ರಿಯಾಜ಼ಿನ ಫಲ. ಇದೊಂದು ಪ್ರತಿಯೊಬ್ಬ ಹಾಡುಗಾರ ತನ್ನ ಪ್ರಾಯದಲ್ಲಿ ಎರಡು ಸಲ ಅನುಭವಿಸಲೇಬೇಕು. ಮೊದಲ ಸಲ ಪ್ರಾಯಕ್ಕೆ ಬರುವಾಗ ಮೆಲ್ತುಟಿಯ ಮೇಲೆ ಮೀಸೆ ಚಿಗುರಿದಾಗ ಒಡೆದ ಗಂಟಲು. ಮತ್ತೊಮ್ಮೆ ನಲವತ್ತರ ಪ್ರಾಯಕ್ಕೆ. ಜಯಪುರ ಪರಂಪರೆಯ ಅಲ್ಲಾದಿಯಾ ಖಾನ್‌ರು ಈ ಬೆಹರಾಮ್ ಖಾನ್‌ರ ಗಂಟಲು ಹೋದಾಗಿನ ಪ್ರಸಂಗವನ್ನು ಬಹಳ ಚೆನ್ನಾಗಿ ತಮ್ಮ ಚರಿತ್ರೆಯಲ್ಲಿ ವರ್ಣಿಸಿದ್ದಾರೆ. ಹೀಗಾಗಿ ಜಯಪುರದಲ್ಲಿ ಬೆಹರಾಮ್ ಖಾನ್‌ರ ಬಳಿ ಕಲಿಯುತ್ತಿದ್ದ ಬಂದೇ ಅಲಿ ಜಯಪುರದ ರಾಜಗಾಯಕನಾದ (1860). ಇವನ ಹೆಂಡತಿಯ ತವರು ಮನೆ ಗ್ವಾಲಿಯರ್ (ಈಕೆ ಹದ್ದುಖಾನ್‌ರ ಮಗಳು) ಆಗಿದ್ದರಿಂದ ಅಲ್ಲಿ ಕೆಲ ಕಾಲ ದರ್ಬಾರಿನ ಗಾಯಕನೆಂದು ಮೆರೆದು, ಇಂದೂರಿನ ಹೋಳಕರ್ ಮಹಾರಾಜರ ಆಶ್ರಯ ಪಡೆದ (1886-1883).

ಬಂದೇ ಅಲಿ ಖಾನ್, ಹೋಳ್‌ಕರ್ ಶಿವಾಜಿರಾಯರ 'ಉಪಪತ್ನಿ'ಯರಿಗೆ ಹಾಡುಗಾರಿಕೆಯನ್ನೋ, ಬೀನನ್ನೋ ಕಲಿಸುತಿದ್ದನಂತೆ. ಮಹಾರಾಜರ ಅತ್ಯಂತ ಮುದ್ದಿನ ಚುನ್ನಾಬಾಯಿ ಎಂಬ ಪ್ರಿಯ ಶಿಷ್ಯೆಯ ವ್ಯಾಮೋಹದಲ್ಲಿ ಈ ಬಂದೇ ಅಲಿ ಸಿಕ್ಕಿಕೊಂಡಿದ್ದರಿಂದ ಮಧ್ಯರಾತ್ರಿಯಲ್ಲಿ ಅವಳೊಂದಿಗೆ ಪಲಾಯನ ಮಾಡಬೇಕಾಯಿತು. (ಬಂದೇಅಲಿ ಅಬ್ದುಲ್ ಕರೀಂ ಖಾನ್‌ರ ಗುರುಸ್ಥಾನದಲ್ಲಿದ್ದವ. ಮುಂದೆ ಅಬ್ದುಲ್ ಕರೀಂಖಾನ್‌ರೂ ಬಂದೇ ಅಲಿಯವರಂತೆ ತಮ್ಮ ಪ್ರೇಯಸಿ ತಾರಾಬಾಯಿಯವರೊಂದಿಗೆ ಮಧ್ಯರಾತ್ರಿ ಬರೋಡಾ ಸಂಸ್ಥಾನ ಬಿಡಬೇಕಾಯಿತು. ಯಥಾ ಗುರು ತಥಾ ಶಿಷ್ಯ ಶಿರೋಮಣಿ!)

1892ರಲ್ಲಿ ಪುಣೆಯಲ್ಲಿ ಚುನ್ನಿಬಾಯಿ ಅಲ್ಪಕಾಲದ ಕಾಹಿಲೆಯಿಂದ ತೀರಿಕೊಂಡಳು. ಪ್ರೇಯಸಿಯ ಅಗಲಿಕೆ ತಾಳಲಾರದೇ ಬಂದೇ ಅಲಿ ನಂತರ ಮೂರು ವರ್ಷ ಫಕೀರನಂತೆ ಹಜ಼ರತ್ ಹಿಸ್ಸಾದೀನರ ಗೋರಿಯ ಬಳಿ ಆಯುಷ್ಯ ಕಳೆದು ಅಲ್ಲಿಯೇ ಮುಠಾ ನದಿಯ ಪಶ್ಚಿಮ ತೀರದಲ್ಲಿ ದೇಹವಿಟ್ಟ. ಅತ್ಯಂತ ಧಾರ್ಮಿಕನಾಗಿದ್ದ ಬಂದೇಅಲಿ, ಸರಳಮಾರ್ಗಿಯೂ, ಪಾಪಭೀರುವೂ ಆಗಿದ್ದನಂತೆ. ಹೇರಳವಾಗಿ ಹಣಗಳಿಸಿದರೂ ಕೊನೆಗೆ ತುಂಬಾ ದಾರಿದ್ರ್ಯದಲ್ಲಿ ದಿನ ಕಳೆಯಬೇಕಾಯಿತಂತೆ. ಇವನ ಶಿಷ್ಯ ಸಂಪತ್ತು ಅಪಾರವಾಗಿತ್ತು. ಮುಂದೆ ಮಧ್ಯಪ್ರದೇಶದ ದೇವಾಸ ಸಂಸ್ಥಾನದ ರಾಜಗಾಯಕರಾದ ರಜಬ್ ಅಲಿ ಖಾನ್‌ರಿಗೆ ಈ ಬಂದೇ ಅಲಿ ಗಾಯನ ಮತ್ತು ಬೀನ್‌ವಾದನಗಳನ್ನು ಕಲಿಸಿದ. ಅದೇತಾನೆ ಮಾರುಕಟ್ಟೆಗೆ ಬಂದಿದ್ದ ಹಾರ್ಮೋನಿಯಂ ವಾದ್ಯವನ್ನು ತಾವು ಕಲಿತು ಇತರರಿಗೂ ಕಲಿಸಿದ. ಗಾಯನ, ಸಾರಂಗಿ ಮತ್ತು ಬೀನ ವಾದ್ಯವನ್ನು ಬಂದೇ ಅಲಿಯವರಿಂದ ಕಲಿತ ದೊಡ್ಡ ಶಿಷ್ಯವೃಂದವೇ ಇದೆ.

ಅಬ್ದುಲ್ ಕರೀಂ ಖಾನ್‌ರಿಗೂ ಬಂದೇ ಅಲಿ ಬೀನ್ ಕಲಿಸಿದರು ಎಂಬುದರ ಉಲ್ಲೇಖ ಬಾಳಕೃಷ್ಣ ಬುವಾ ಕಪಿಲೇಶ್ವರಿಯವರು ಬರೆದ ಪುಸ್ತಕದಲ್ಲಿ ಸಿಗುತ್ತದೆ. ತನ್ನ ಆಯುಸ್ಸಿನ ಉದ್ದಕ್ಕೂ ಕರೀಂ ಖಾನ್‌ರು ಬಂದೇ ಅಲಿಖಾನ್‌ರ ಆದರ್ಶವನ್ನು ಇಟ್ಟುಕೊಂಡಿದ್ದರು. ಸುಮಾರು 15 ವರ್ಷ ಅವರು ಬಾಳಿ ಬದುಕಿದಾಗ ಬಂದೇ ಅಲಿಖಾನರ ಬರ್ಸಿಯಲ್ಲಿ (ಪುಣ್ಯತಿಥಿ) ಅಬ್ದುಲ್ ಕರೀಂ ತಪ್ಪದೇ ಭಾಗವಹಿಸುತ್ತಿದ್ದರು.

ಭಾರತದ ಮುದ್ರಿತ ಧ್ವನಿ ಪಟ್ಟಿಗಳ ಇತಿಹಾಸಕಾರನಾದ ಮೈಕೇಲ್ ಕಿನ್ನರ್‌ನ ಹೇಳಿಕೆಯಂತೆ ಬಂದೇ ಅಲಿ ಖಾನ್‌ರ ವೀಣೆ (ಬೀನ್) ಈಗಲೂ ಪುಣೆಯ ರಾಜಾ ಕೇಳಕರ್ ವಸ್ತು ಸಂಗ್ರಹಾಲಯದಲ್ಲಿ ಇದೆ ಎಂದು ಓದಿದ ಮೇಲೆ, ಪುಣೆಗೆ ಹೋದಾಗ ಮೊಮ್ಮಗನೊಂದಿಗೆ ಅಲ್ಲಿ ಹೋಗಿ ನೋಡಿದೆ. ತುಂಬ ಖುಶಿಯಾಯಿತು. ಬಂದೇ ಅಲಿ ಸಾಯುವ ಸಮಯಕ್ಕೆ ಭಾರತದಲ್ಲಿ ಧ್ವನಿ-ಸಂಗೀತ ಅಚ್ಚು ಹಾಕುವ ತಂತ್ರಜ್ಞಾನ ಬಂದಿತ್ತು. ಆದರೆ ಅವರು ತಮ್ಮ ಆಯುಷ್ಯದ ಕೊನೆಯಕಾಲವನ್ನು ಫಕೀರನಂತೆ ಕಳೆದುದರಿಂದ ಈತನ ಗಾಯನವು ರಿಕಾರ್ಡು ಆಗಲಿಲ್ಲ. ರಹಿಮತ್‌ಖಾನ್ ಭೂಗಂಧರ್ವರಂತೆ ಯಾವುದಾದರೂ ಸಂಸ್ಥಾನದ ಆಶ್ರಿತರಾಗಿ ಇದ್ದಿದ್ದರೆ ಅವರ

ಸಂಗೀತ ಖಂಡಿತ ಮುದ್ರಣವಾಗುತ್ತಿತ್ತು ಎಂಬುದಾಗಿ ಮೈಕೇಲರು ಹೇಳುತ್ತಾರೆ. ಬಂದೇ ಅಲಿ ಖಾನ್, ಇನಾಯತ್ ಹುಸೇನ್ ಖಾನ್ ಮತ್ತು ಇನ್ನೆಷ್ಟೋ ಸಂಗೀತಗಾರರಿಗೆ ಧ್ವನಿಮುದ್ರಣ ಸೌಕರ್ಯ ಸಿಗದೇ ಇದ್ದುದರಿಂದ ಹಿಂದುಸ್ತಾನಿ ಸಂಗೀತಕ್ಕೆ ತುಂಬ ಹಾನಿಯಾಗಿದೆ. ಅಪವಾದ ಕೇವಲ ಅಬ್ದುಲ್ ಕರೀಂ ಖಾನ್ ಕಿರಾನೆವಾಲೇ ಅವರದು. ಕೇವಲ ಉರ್ದು ಭಾಷೆಯಲ್ಲಿ ಸಹಿಮಾಡಬಲ್ಲವರಾಗಿದ್ದ ಅವರು ಆ ಕಾಲದ ಸಂಕುಚಿತ ಮನೋಭಾವನೆ ಇಲ್ಲದ ಸಾರಸಂಗ್ರಹ ಮನೋವೃತ್ತಿವುಳ್ಳ ಸಂಗೀತಜ್ಞರಾಗಿದ್ದರಿಂದ ಮತ್ತು ಗ್ರಾಮೋಫೋನ್ ರಿಕಾರ್ಡಿಂಗಿನ ಆಕಾಲದ ಸಿಲೆಬ್ರಿಟಿ ಇದ್ದ ಕಾರಣದಿಂದ ಅವರ ಬಗ್ಗೆ ತುಂಬಾ ಮಾಹಿತಿ ಸಿಕ್ಕಿತು ಎಂದು ಕಿನ್ನರ್ ತಮ್ಮ ಪುಸ್ತಕದಲ್ಲಿ ಪದೆ ಪದೆ ಬರೆಯುತ್ತಾರೆ.

ನಾವಿಕರಿಗೆ ಅನ್ವಯಿಸುವ ಒಂದು ಮೋಜಿನ ಮಾತು ಊರಿಂದ ಊರಿಗೆ ಭ್ರಮಣ ಮಾಡುವ ಈ ಸಂಗೀತಜ್ಞರಿಗೂ ಅನ್ವಯಿಸುತ್ತದೆ. ಉಸ್ತಾದ್‌ನ ಮಗನಿಗೆ ಮೀಸೆ ಚಿಗುರಿದ ಕೂಡಲೇ ದೇಶ ಕಾಣುವ ಮೊದಲು ಊರಿನ ಮತ್ತೊಬ್ಬ ಉಸ್ತಾದ್‌ನ ಮಗಳ ಜೊತೆ 'ನಿಕಾ' ಮುಗಿಸಿ ರಾಜ, ಮಹಾರಾಜರು, ಇಲ್ಲವೇ ನವಾಬರ ಆಶ್ರಯ ಹುಡುಕುತ್ತಾ ಹೋದವರಲ್ಲಿ ಮರಳಿ ಬಂದವರು ಕಡಿಮೆಯೇ! ಊರಿನಲ್ಲಿ ನಿಕಾ ಆಗಿದ್ದರೂ ಹೋದಲ್ಲಿ ಮದುವೆ ಮಾಡಿಕೊಂಡು, 'one wife in every port' ತತ್ವವನ್ನು ಅಕ್ಷರಶಃ ಪಾಲಿಸಿದವರಲ್ಲಿ ಈ ಬಂದೇ ಅಲಿ ಮತ್ತು ಕಿರಾನಾ ಗಾಯಕರ ಅಧ್ವರ್ಯು ನಿಸ್ಸೀಮರು!

*****

8.2

ವಿಸ್ಮೃತಿಯಲ್ಲಿ ಅಡಗಿದ ಕಿರಾನಾ ಪರಂಪರೆಯ ಗಾಯಕರು

ಕಿರಾನಾ ಪರಂಪರೆಯ ಬಗ್ಗೆ ಬರೆಯುವಾಗ ಮೊಟ್ಟ ಮೊದಲಿನ ಹೆಸರು ನೆನಪಾಗುವದು ಡಾ. ಗಂಗೂಬಾಯಿ ಹಾನಗಲ್ ಅವರದು. ಇದಕ್ಕೆ ಕಾರಣ, ಅವರ ಹಾಸ್ಯ ಸ್ವಭಾವ, ಕುಳಿತಲ್ಲೇ ಬಲಗೈಯಿಂದ ಬೆನ್ನ ಮೇಲಿನ ಸೀರೆಯ ಸೆರಗು ಜಗ್ಗಿ, ಸರಿಪಡಿಸುತ್ತಾ ಮುಗುಳುನಗುತ್ತಾ ಹೇಳುವದಿತ್ತು. "ನಮ್ಮ ಘರಾಣೆ ಕಿರಾಣಾ! ನಮ್ಮ ಭೀಮಣ್ಣಾ ಏನು ಹೇಳ್ತಿದ್ದಾ ಗೊತ್ತದ ಏನು? ಅಕ್ಕಾ, ನಾನೊಂದು ಕಿರಾಣಾ ಅಂಗಡಿ ಹಾಕೇನಿ. ಎಲ್ಲಾ ಕಡಿಂದ ಮಾಲ ತರ್ತೀನಿ, ಮತ್ತ ಮಾರ್ತೀನಿ. ಸರೀಯೋ ತಪ್ಪೋ ನೀನ ಹೇಳವಾ ಅಂತಿದ್ದಾ. ಎಷ್ಟ ಖರೆ ಅದ ನೋಡು."

ಮಹಾರಾಷ್ಟ್ರ, ಕರ್ನಾಟಕ, ಗುಜರಾತ ಅಷ್ಟೇ ಏಕೆ, ವಿಂಧ್ಯ ಸಾತಪುರಾ ಪರ್ವತರಾಶಿಗಳ ಈಚೆ ಈ ಕಿರಾನಾ ಪರಂಪರೆ ಕೇವಲ ಅಬ್ದುಲ್ ಕರೀಂಖಾನರು ತಂದದ್ದು ಎಂಬ ವಿಷಯವು ಕೇವಲ ತಪ್ಪು ಕಲ್ಪನೆಯನ್ನು ಆಧರಿಸಿದೆಯೆಂಬುದು ಈಗ 70ರ ಗಡಿ ದಾಟಿದ ಮೇಲೆ ನನಗೆ ಅರಿವಾಗುತ್ತದೆ. ಬಾಳಕೃಷ್ಣಬುವಾ ಇಚಲಕರಂಜೀಕರ್ ಇವರು ಭಗೀರಥರಂತೆ ಹಿಂದುಸ್ತಾನಿ ಅಥವಾ ಉತ್ತರಾದಿ ಸಂಗೀತದ ಗಂಗೆಯನ್ನು ಈ ದಕ್ಷಿಣ ಪ್ರದೇಶದಕ್ಕೆ ತಂದರು ಎಂದು ನಾನು ಅನೇಕ ಪುಸ್ತಕಗಳ ಆಧಾರದಿಂದ ಬರೆದದ್ದು ತಪ್ಪು ಎಂದು ಈಗ ಮನವರಿಕೆಯಾಗಿದೆ. ಇದನ್ನು 25 ವರ್ಷಗಳ ಹಿಂದೆ ಬರೆದಿದ್ದೆ. ಇದೊಂದು ಒಬ್ಬ ವ್ಯಕ್ತಿಯಿಂದ ಆಗುವ ವಿಷಯವಲ್ಲ. ಇದಕ್ಕೆ ಇಂಗ್ಲೀಷಿನಲ್ಲಿ 'ಕಲ್ಟ್' ಎಂದು ಹೇಳುವಂತಹ ಒಂದು ಪ್ರಕಾರದ ಪ್ರವೃತ್ತಿಯೇ ಬೇಕು. ಯಾವುದೇ ಪರಂಪರೆ ಆ ಕ್ರಮದಿಂದಲೇ ಹುಲುಸಾಗಿ ಬೆಳೆಯುತ್ತದೆ. ಇದಕ್ಕೆ ಒಂದು ಉದಾಹರಣೆ ಕೊಟ್ಟು ಮುಂದೆ ಸಾಗುವ.

ಪೇಶವೆ ಬಾಜೀರಾಯನ ಕಾಲದಲ್ಲಿ ಪುಣೆಯಲ್ಲಿ ಮರಾಠೀ ಲಾವಣಿ, ತಮಾಷಾ ಎಂಬ ನೃತ್ಯ-ಸಂಗೀತ ಪ್ರಕಾರಗಳು ತುಂಬಾ ಪ್ರಚಾರದಲ್ಲಿದ್ದವು. ಮರಾಠಿಯ ಮ.ವಾ ಧೋಂಡ ಎಂಬ ಸಂಗೀತಜ್ಞರು ಆ ಕಾಲದಲ್ಲಿಯ ಒಂದು ಹಾಡಿನಲ್ಲಿ- 'ಲಾವಣೀತ ಆಹೆ ಖ್ಯಾಲ್ ಟಪ್ಪಾ ಲೋಕ ಮಾರೀತಿ ಉಗೀಚ ಗಪ್ಪಾ' (ಇದರರ್ಥ: ಲಾವಣಿಯಲ್ಲಿ ಖ್ಯಾಲ್ ಮತ್ತು ಟಪ್ಪಾ ಅಡಗಿದೆ ಎಂದು) ಎಂಬರ್ಥದ ಉಲ್ಲೇಖ ಕೊಡುತ್ತಾರೆ.

ಬಾಳಕೃಷ್ಣ ಬುವಾ ಇಚಲಕರಂಜೀಕರ್ (1849-1926) ಅವರು ಉತ್ತರ ಭಾರತಕ್ಕೆ ಹೋಗಿ ಈ ಸಂಗೀತ ಕಲಿತು ಬಂದದ್ದಾದರೆ, 1810ರಲ್ಲಿಯ ಆ ಲಾವಣಿಯಲ್ಲಿ 'ಖ್ಯಾಲ್ ಮತ್ತು ಟಪ್ಪಾ'ದ ಉಲ್ಲೇಖ ಆ ಕಾಲದಲ್ಲಿಯ ತಮಾಸಗೀರರ(ತಮಾಶಾ) ಹಾಡುಗಳಲ್ಲಿ ಇದ್ದುದರಿಂದ ಈ ಸಂಗೀತ ಆಗಲೇ ರೂಢಿಯಲ್ಲಿತ್ತು ಎಂಬುದು ವ್ಯಕ್ತವಾಗುತ್ತದೆ.

ಈ ಘರಾಣೆ, ಆ ಪರಂಪರೆ ಇವೆಲ್ಲ ಕೇವಲ ಹಿಂದಿನ ಶತಮಾನದ ಪೂರ್ವಾರ್ಧದಲ್ಲಿ ಆಚರಣೆಯಲ್ಲಿ ಬಂದ ವಿಷಯ ಅಷ್ಟೇ. ಶಿರಾಲಿಯ ನಮ್ಮ ಚಿತ್ರಾಪುರ ಮಠದ ಅರ್ಚಕರಾದ ಹಳದಿಪುರ ಕೃಷ್ಣ ಭಟ್ಟರು, ಫೈಯಾಜ಼್ ಖಾನರ ಶಿಷ್ಯರು. ಶಿರಾಲಿಯ ಮತ್ತೊಬ್ಬ ಅರ್ಚಕ ಮನೆತನದ ಶಿರಾಲಿ ಚಂದ್ರಶೇಖರ ಭಟ್ಟರು (ಅವರು ಪಂ. ಎಸ್.ಸಿ.ಆರ್ ಭಟ್ಟರೆಂದೇ ಖ್ಯಾತರು) ಅವರೂ ಫೈಯಾಜ಼್ ಖಾನರ ಪ್ರಶಿಷ್ಯರು. ಇವರು ಮುಂಬಯಿಯಲ್ಲಿಯ ವಲ್ಲಭ ಸಂಗೀತಾಲಯದ ಪ್ರಿನ್ಸಿಪಾಲರಾಗಿದ್ದರು. ಲಖನೌದಲ್ಲಿ ಪಂ. ರತನಜನಕರರ ಬಳಿ ಕಲಿತ ಅವರು ಕುಮಾರ ಗಂಧರ್ವರ ಹಾಡುಗಾರಿಕೆಯ ಬಗ್ಗೆ ಮಾತನಾಡುತ್ತಿದ್ದಾಗ, "ಈ ಘರಾಣೆ, ಗಿರಾಣೆ ಮಾತೆಲ್ಲ ಇತ್ತೀಚಿನದು. ಅಂವಾ ಪಟಿಯಾಲಾದವಾ, ಈತ ಕಲಕತ್ತಾದವ ಎಂದೇ ನಾವು ಗುರುತಿಸುತ್ತಿದ್ದೆವು. ಕೆಲ ಕಾಲ ನಾನು ಕಾಲೇಖಾನರ ಬಳಿ ಕಲಿತಿದ್ದೇನೆ. ಅವರು ಬಡೆಗುಲಾಮ ಅಲಿಯವರ ಚಿಕ್ಕಪ್ಪ. (ಪಟಿಯಾಲಾ ಪರಂಪರೆ ಈಗಿನ ಭಾಷೆಯಲ್ಲಿ) ಅವರಿಗೂ ಈ ಘರಾಣೆಯಲ್ಲಿ ನಂಬಿಕೆಯಿರಲಿಲ್ಲ. ಇಷ್ಟೇಕೆ? ನೀನು ನಂಬುತ್ತಿಯೋ ಇಲ್ಲವೋ ನಾವು ಕಲಿಯುತ್ತಿದ್ದಾಗ ತಾಳಕ್ಕೆ ಹೆಚ್ಚು ಬೆಲೆಯಿತ್ತು. ಕೃತಿ ಅಥವಾ ಚೀಜಿಗೆ ಮಹತ್ವ, ಗುರುಗಳು 'ಎನಪ್ಪಾ, ಚಂದೂ ತಿಲವಾಡಾ (ಇದೊಂದು 16 ಮಾತ್ರೆಯ ತಾಳ) ಗಂಟಲಲ್ಲಿ ಇಳಿತೋ ಇಲ್ಲವೋ' ಎಂದು ಕೇಳುತ್ತಿದ್ದರು. ಅಂದರೆ ಇತ್ತೀಚಿಗೆ ಕಲಿಸಿದ ರಾಗ ಗೌರಿ, ತಿಲವಾಡಾದಲ್ಲಿ ಕಟ್ಟಿದ ಬಂದಿಶ್. ಮೊದಲು ತಾಳ ನಂತರ ಕೃತಿ ಅಮೇಲೆ ರಾಗ!" ಅಂದರೆ ಒಂದೇ ರಾಗದಲ್ಲಿ ವಿವಿಧ ಪ್ರಕಾರದ ಕೃತಿಗಳನ್ನು ಅನೇಕ ತಾಳಗಳಲ್ಲಿ ಕಲಿಸುವ ಪದ್ಧತಿ ಇತ್ತು. ಮತ್ತೊಬ್ಬ ಕನ್ನಡಿಗ, ಸೂಳೆಬಾವಿ ಊರಿನ ಕೃಷ್ಣಾ ಗುಂಡೋ ಗಿಂಡೆ (ಕೆ.ಜಿ ಗಿಂಡೆ)ಎಂಬ ವಿದ್ವಾಂಸರು, ಪ್ರಸ್ತುತಪಡಿಸಿದ "ಸಾರಂಗಕೆ ಪ್ರಕಾರ" ಎಂಬ ಪ್ರಾತ್ಯಕ್ಷಿಕೆಯಲ್ಲಿ ಶುದ್ಧ ಸಾರಂಗದೊಳಗಿನ ಐದು ಬೇರೆ ಬೇರೆ ಕೃತಿಗಳನ್ನು ಧ್ರುಪದ್, ಖ್ಯಾಲಿನಲ್ಲಿ ಒಂದರ ನಂತರ ಮತ್ತೊಂದು ಹಾಡಿ ತೋರಿಸಿದ ನೆನಪಾಗುತ್ತದೆ. ಅಂತೆಯೇ ಒಮ್ಮೆ ಸುರ್ ಸಿಂಗಾರ್ ಸಂಸ್ಥೆಯ, 'ಕಲಕೆ ಕಲಾಕಾರ್' ಸಮ್ಮೇಳನದಲ್ಲಿ ಜ್ಯೂರಿ ಎಂದು ಹೋದಾಗ, ಬಿಹಾಗ ರಾಗದಲ್ಲಿಯ ಖ್ಯಾತ ಕೃತಿ, 'ನಟ್ ಉಲಝೆ ಸುಲಝಾ ಬಾಲಮಾ' ಇದನ್ನೇ ನಾಲ್ಕೈದು ಹೊಸದಾಗಿ ಹಾಡುವ ಕಲಾವಿದರು ಹಾಡಿದ್ದು ನೆನಪಾಗಿ, ಗುರುಮುಖೀ ವಿದ್ಯೆಯಿಂದ ಕ್ಲಾಸುರೂಮ ಟ್ರೈನಿಂಗ್ ಪಡೆದ ಸಂಗೀತ ಕೃಷಿಯ ಹೊಸ ಫಸಲು ಎಂದು ಕೊಂಡಿದ್ದೂ ಇದೆ! ಕಳೆದ 10 ವರ್ಷಗಳಲ್ಲಿ ಗುರುಗಳಿಂದ ಟೇಪು ಮಾಡಿಕೊಂಡಿದ್ದ, 'ಪಾಕೆಟ್ ಗುರು'ಗಳ ಪ್ರಭಾವ ಕೂಡ ಕಡಿಮೆ ಇಲ್ಲ!

ಆಧುನಿಕ ಗ್ವಾಲಿಯರ್ ಪರಂಪರೆ ಹದ್ದು-ಹಸ್ಸುಖಾನರಿಂದ ಪ್ರಾರಂಭವಾಯಿತು ಎನ್ನುತ್ತಾರೆ. ಕೈರಾನಾ ಊರಿನ ಬಂದೇ ಅಲಿ ಖಾನರ ಹೆಂಡತಿ, ಗ್ವಾಲಿಯರ್

ಪರಂಪರೆಯ ಈ ಹಡ್ಡುಖಾನರ ಮಗಳು. ಇವಳಿಗೆ ಹುಟ್ಟಿದ ವಂಶಜರು, 'ಕಿರಾನಾ'ದವರಾದರೂ ಮುಸಲ್ಮಾನರಲ್ಲಿ 'ಸಗೋತ್ರ ಸಂಬಂಧ' ಸಹಜವಾಗಿ ಆಗುತ್ತಿದ್ದರಿಂದ ಈ ಘರಾಣೆ ಗೋಡೆಗಳಿಗೆ ಮೊದಲೇ ಬಿರುಕು ಬಿಟ್ಟಂತೆ ಕಾಣಿಸಬಹುದು.

ಈ ಬೀನ್ ಬಾರಿಸುವ ಕಿರಾನಾ ಮನೆತನದ ಖ್ಯಾತ ಹಾಡುಗಾರ ಬಂದೇ ಅಲಿ. ಅಬ್ದುಲ್ ಕರೀಂಖಾನರಿಗಿಂತ 46 ವರ್ಷ ಮೊದಲು ತನ್ನ 69ನೆಯ ವಯಸ್ಸಿನಲ್ಲಿಯೇ 1895ರಲ್ಲಿ ಪುಣೆಯಲ್ಲಿ ಪೈಗಂಬರವಾಸಿಯಾದರು. ಅಬ್ದುಲ್ ಕರೀಂ ಖಾನರು ಬಂದೇ ಅಲಿ ತೀರಿಕೊಳ್ಳುವ ಮೊದಲು ಪುಣೆಗೆ ಬಂದಾಗ ಅವರ 'ಗುರು-ಶಿಷ್ಯ' ಸಂಬಂಧ ಬೆಳೆದದ್ದು. ಮೊದಲು ಸಾರಂಗಿ ಬಾರಿಸುತ್ತಿದ್ದ ಅಬ್ದುಲ್ ಕರೀಂ ಹಾಡುಗಾರಿಕೆಯಲ್ಲಿ ಪ್ರಾವಿಣ್ಯಗಳಿಸಿದ್ದರೂ ಬಂದೇ ಅಲಿಯವರಿಂದ ಬಿನ್ ಬಾರಿಸಲು ಕಲಿತಿದ್ದನ್ನು ತಿಳಿದು ವಿಸ್ಮಯವೂ ಆಯಿತು, ಖುಷಿಯೂ ಆಯಿತು. ಬೀನ್ ಎಂಬುದು ವೀಣಾ ಎಂಬ ಸಂಸ್ಕೃತ ಪದದ ಹಿಂದಿ ತದ್ಭವ! ನಾಗೀನ್ ಚಲನಚಿತ್ರದಲ್ಲಿ ಕಲ್ಯಾಣ್‌ಜೀ ಬಾರಿಸಿದ 'ಬೀನ್' ವಾದ್ಯ ಬೇರೆಯೇ.

ಮೈಕೇಲ್ ಕಿನ್ನರ್ ಬರೆದ, "Sangita Ratna –The Jewel of Music-Adul Karim Khan-A Bio-Discographyüü" ಪುಸ್ತಕದಲ್ಲಿ ಈ ವಿವರಗಳು ಬರುತ್ತವೆ. ಮೈಕೇಲ್ ಕಿನ್ನರನು ಒಬ್ಬ ಆಸ್ಟ್ರೇಲಿಯನ್ ಈತ 1945ರಲ್ಲಿ ಹುಟ್ಟಿದ ಮತ್ತು ತನ್ನ 18ನೇ ವರ್ಷಕ್ಕೆ ಸಂಗೀತ ಉದ್ದಿಮೆಯಲ್ಲಿ ಸೇರಿಕೊಂಡ. ಸಂಗೀತದ ಎಲ್ಲ ಪ್ರಕಾರಗಳ ಸೇವೆಗಳಲ್ಲಿ, ಅಂದರೆ ಧ್ವನಿಮುದ್ರಣ, ನಿರ್ಮಿತಿ, ಮಾರುಕಟ್ಟೆ, ವ್ಯವಹಾರ ಇವುಗಳ ಅಭ್ಯಾಸ ಮಾಡಿ, ಇತರ ಸಂಶೋಧನೆಗಳಲ್ಲಿ ತೊಡಗಿ ಪಾಶ್ಚಿಮಾತ್ಯ, ಪೌರ್ವಾತ್ಯ ಸಂಗೀತ ಕಾರ್ಯಕ್ರಮಗಳ ಸಂಯೋಜನೆ ಮಾಡಿ ಹೆಸರು ಗಳಿಸಿದ. ಈತ ಕಳೆದ ನಾಲ್ಕು ದಶಕಗಳಿಂದ ಏಶಿಯಾ, ಭಾರತ ಮತ್ತು ಇತರ ಮಧ್ಯಪೂರ್ವ ದೇಶಗಳ ಮುದ್ರಿತ ತಟ್ಟೆಗಳ ಸಂಶೋಧನೆ ನಡೆಸಿದ್ದಾನೆ. 1985ರಲ್ಲಿ ಈತ " A Discography of Hindustani & Carnatic Music" ಎಂಬ ಪುಸ್ತಕ ಬರೆದು ಅಮೇರಿಕೆಯ ಗ್ರೀನ್‌ವುಡ್ ಪ್ರೆಸ್‌ನ ಪರವಾಗಿ ಪ್ರಕಟಿಸಿದ. ಕಳೆದ 20 ವರ್ಷಗಳಿಂದ ಮೈಕೇಲ್ ಭಾರತದಲ್ಲಿಯ ಮುದ್ರಿತ ತಟ್ಟೆಗಳ ಸಂಶೋಧನೆ ಮಾಡಿ ಎಚ್‌ಎಮ್‌ವಿ ಕಂಪನಿಯ ಪರವಾಗಿ ಅನೇಕ ಹಳೆಯ ಮುದ್ರಿತ ತಟ್ಟೆಗಳನ್ನು 'ಚೇರಮನ್ಸ ಚಾಯಿಸ್' ಎಂದು ಹೆಸರಿಟ್ಟು ಮರಳಿ ಮಾರುಕಟ್ಟೆಗೆ ತಂದ. ಅವನ ಮಧ್ಯ ಪೂರ್ವ ಸಂಗೀತದ ಸಂಶೋಧನೆ ಈಗಲೂ ನಡೆದಿದೆ. ಮುಂಬಯಿಯ ಪಾಪ್ಯುಲರ್ ಪ್ರಕಾಶನದವರು ಇವನ 285 ಪುಟಗಳ "Gramophone Company - First Indian Recordings 1899–1908" ಪುಸ್ತಕವನ್ನು 1995ರಲ್ಲಿ ಪ್ರಕಟಿಸಿದರು. ಮೇಲೆ ಉಲ್ಲೇಖಿಸಿದ ಅಬ್ದುಲ್ ಕರೀಂ ಖಾನರ ಚರಿತ್ರೆಯನ್ನು ಅವನು ಆಸ್ಟೇಲಿಯಾದಲ್ಲಿಯೇ ಮುದ್ರಿಸಿ 2002ರಲ್ಲಿ ಪ್ರಕಟಿಸಿದ. ಇದೊಂದು ಕಿರಾನಾ ಮನೆತನದ ಕುರಿತ ಒಂದು ಅದ್ಭುತ ಪುಸ್ತಕ ಎಂದು ಹೇಳಬಹುದು.

ಮತ್ತೊಂದು ವಿಷಯ. ಈತ ಭಾರತದಲ್ಲಿಯ Society of Indian Record collections ಎಂಬ ಸಂಘಟನೆಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿ ಸಂಗೀತ ಇತಿಹಾಸದ ಬೀಜವನ್ನು ನೆಟ್ಟಿದ್ದಾನೆ. ಇಲ್ಲಿಯ ಸಂಗೀತದ ಇತಿಹಾಸಕಾರರಿಗೆ ಓರ್ವ

ಮಾರ್ಗದರ್ಶಿಯಾಗಿ ಈಗಲೂ ತನ್ನ ಸಂಶೋಧನೆ ನಡೆಸುತ್ತಿದ್ದಾನೆ. ಇವನ ಸಂಶೋಧನೆಯಿಂದಲೇ ನಮಗೆ ಕಿರಾನಾ ಪರಂಪರೆಯ ಬಗ್ಗೆ , ಅಬ್ದುಲ್ ಕರೀಂಖಾನರ ಅದ್ಭುತ ಜೀವನದ ಬಗ್ಗೆ ಮತ್ತು ಇತರ ವಿಸ್ಮೃತಿಯಲ್ಲಿ ಅಡಗಿದ ಗಾಯಕರ ಬಗ್ಗೆ ಸತ್ಯ ಮಾಹಿತಿ ಸಿಗುತ್ತಿದೆ. ಕಾರಣ, 19ನೇ ಶತಮಾನದ 'ಖಾನ್‌ದಾನಿ' ಗಾಯಕರಲ್ಲಿ ಅಬ್ದುಲ್ ಕರೀಂ ಖಾನರು ತಮ್ಮ ಖಯಾಲ್, ಠುಮ್ರಿ ರಾಗಗಳನ್ನು ಬಹಳಷ್ಟು ಧ್ವನಿಮುದ್ರಿಕೆಗಳಲ್ಲಿ ಕೊಟ್ಟಿದ್ದರಿಂದಲೇ ಅವರು ಹೆಸರುವಾಸಿಯಾಗಿದ್ದು ಮತ್ತು ಸಂಶೋಧನೆ ನಡೆಸುವವರಿಗೆ ಉತ್ತೇಜನ ಸಿಕ್ಕಿದ್ದು.

ಬಾಳಕೃಷ್ಣ ಈಚಲಕರಂಜೀಕರ, ಭೂಗಂಧರ್ವ ರಹಿಮತ್‌ಖಾನ್ ಅಥವಾ ಮೈಸೂರು ಮಹಾರಾಜರು ಗೌರವಿಸಿದ ಫೈಯಾಜ಼್ ಖಾನ್ ಅಥವಾ ವಿಲಾಯತ್ ಹುಸೇನ್ ಖಾನ್ ಇವರೆಲ್ಲರ ಬಗ್ಗೆ ಬರೆದ ಲೇಖನಗಳು, ಪುಸ್ತಕಗಳು ಇದ್ದರೂ, ವಿಶ್ವಾಸಾರ್ಹ ಪುಸ್ತಕಗಳು ಕಡಿಮೆಯೇ. ಶಿಷ್ಯರು ಬರೆದ ಚರಿತ್ರೆಗಳಲ್ಲಿ ಅತಿಶಯೋಕ್ತಿ ಭಾವ ತಂತಾನೆ ಪ್ರಕಟವಾಗುತ್ತದೆ. ಈತ ಮಾನವನಲ್ಲ, ದೈವಿ ಸಂಚಾರದ ಪ್ರತಿಕೃತಿ ಎಂಬ ಭಾವ ಉಂಟಾಗುತ್ತದೆ. ಸಾಮಾನ್ಯ ಗುಣಮಟ್ಟದ ಗಾಯಕರನ್ನೂ ಹೊಗಳುವ ಭಟ್ಟಂಗಿ ಲೇಖಕರ ಪಡೆ ನಮ್ಮಲ್ಲಿ ಕಡಿಮೆಯಿಲ್ಲ! 'ವಿಮರ್ಶಕ'ವೆಂಬ ಒಂದು ಜಾತಿಯೇ ಕಳೆದ 50 ವರ್ಷಗಳಲ್ಲಿ ಜನ್ಮ ತಾಳಿ, ಅವರೇ ಸಂಗೀತಕಾರರ ಪ್ರಸಿದ್ಧಿ ಪ್ರಮುಖರಾಗಿ ದಿನನಿತ್ಯ ಪ್ರಿಂಟ ಮಿಡಿಯಾದಲ್ಲಿ ಮೆರೆದದ್ದು, ನಾನು ಕಣ್ಣಾರೆ ಕಂಡಿದ್ದೇನೆ. ನೆರೆಹೊರೆಯ ಸಂಗೀತ ಗೊತ್ತಿದ್ದವರು, 'ಪಂಡಿತ' ಮತ್ತು 'ವಿದುಷಿ'ಗಳಾದ ಮೇಲೆ ಕೇವಲ ಪತ್ರಿಕೆಗಳಲ್ಲಿ ಬರೆಯುವವರು,' ಸಂಗೀತಜ್ಞರಾಗುವುದು ಅಚ್ಚರಿಯಲ್ಲ!

ಈ ಲೇಖನ ಮಾಲೆಯ ಬೆನ್ನೆಲುಬು ವಿಶ್ವಾಸಾರ್ಹತೆ, ಪ್ರಾಮಾಣಿಕತೆ ಮತ್ತು ದೃಢ ನಂಬಿಕೆ. ಬರೆಯುವಾಗ ವಿಶೇಷಣಗಳನ್ನು ತುಂಬಾ ಜಾಗರೂಕತೆಯಿಂದ ಉಪಯೋಗಿಸುವ ಮನೋಧರ್ಮ ಇಟ್ಟುಕೊಂಡು ಈ ಲೇಖನ ಮಾಲೆಯಲ್ಲಿ ಬರೆಯುವ ವ್ಯಕ್ತಿಚಿತ್ರಗಳನ್ನು ಕೆತ್ತಲಾಗಿದೆ.

ಪುಣೆಯ ಶನಿವಾರವಾಡೆ ಪೇಶವೆಯ ಸಮಕಾಲೀನ ಅರಮನೆ. ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಅಲ್ಲಿಯ ಅರಮನೆ, ಗುಡಿ ಗೋಪುರಗಳನ್ನು ಕಂಡ ನಮಗೆ ಈ ಶನಿವಾರವಾಡೆಯ ಮತ್ತು ಮಹಾರಾಷ್ಟ್ರದ ಇತರ ಗುಡಿಗೋಪುರಗಳು ವಾಡೆಗಳಂತೆ ಅತ್ಯಂತ ಸಾಮಾನ್ಯ ವಾಸ್ತುವಂತೆ ಕಾಣಿಸುತ್ತದೆ. ಪಕ್ಕದಲ್ಲಿಯೇ ಮುಠಾ ನದಿಯ ಪಾತ್ರ, ಅಲ್ಲಿಯೇ ಒಂದು ದೊಡ್ಡ ಬೇವಿನ ಮರದ ಅಡಿಯಲ್ಲಿ ಹಜರತ್ ಹಿಸಾದಿನ್ ಕತ್ತಲ್‌ನ ದರ್ಗಾ ಇದೆ. ಪಕ್ಕದಲ್ಲಿಯೇ ಕೈರಾನಾದ ಬಂದೇ ಅಲಿಖಾನರ ಗೋರಿ. 1950ರ ತನಕ ಈ ದರ್ಗಾ ಮಣ್ಣಿನ ಒಂದು ದಿನ್ನೆಯಂತೆ ಕಾಣಿಸುತ್ತಿತ್ತಂತೆ! ಅಬ್ದುಲ್ ಕರೀಂಖಾನರು, ತನಗೆ ಈ ಬೀನ್ ಕಲಿಸಿದ ಗುರುಗಳ ಸ್ಮರಣಾರ್ಥ ಪ್ರತಿ ವರ್ಷ ಬರ್ಸಿ (ಪುಣ್ಯತಿಥಿ) ಆಚರಿಸುತ್ತಿದ್ದರು. ಇವರ ಶಿಷ್ಯ ಬಾಳಕೃಷ್ಣ ಕಪಿಲೇಶ್ವರಿ ಅಂದರೆ ನಮ್ಮ ಗಜಾನನ ಯಾಜಿಗಳ ಗುರುಗಳು ಹಣ ಒಟ್ಟು ಮಾಡಿ ಒಂದು ಕಾಂಕ್ರೇಟಿನ ಗೋರಿಯ ಗೋಡೆ ಕಟ್ಟಿಸಿದರು. ಇದಕ್ಕೆ ಇನ್ನೂ ಧನಸಹಾಯ ಬಂದದ್ದು ರೂಬಿ ರಿಕಾರ್ಡು ಕಂಪನಿಯ ಮಾಲಿಕರ ಮನೆತನದಿಂದ, ಹೆಸರು ರುಸ್ತಮಜಿ ಸೇಠನಾ ಎಂಬ ಪಾರ್ಸಿ ಗೃಹಸ್ಥ. ಇದರ ಇತಿಹಾಸವೂ ಮನೋರಂಜಕವಾಗಿದೆ.

ಅಬ್ದುಲ್ ಕರೀಂಖಾನರು ತೀರಿಕೊಂಡಿದ್ದು 1937ರ ಅಕ್ಟೋಬರ್ ತಿಂಗಳ 27ನೇ ತಾರೀಖಿನಂದು. ಮದ್ರಾಸಿನಿಂದ ಪಾಂಡಿಚೆರಿಗೆ ಹೋಗುವ ಮೀಟರ್ ಗೇಜ್ ಟ್ರೈನಿನ ಒಂದು ಪುಟ್ಟ ಸ್ಟೇಶನ್‌ನಲ್ಲಿ. ಸ್ಟೇಶನ್ ಸಣ್ಣದಾದರೂ ಹೆಸರು ಮಾತ್ರ ಉದ್ದ. 'ಸಿಂಗ ಪೆರುಮಲ್ ಕೊಯಿಲ್' ಎಂಬುದು ಅದರ ಹೆಸರು. ಅವರ ಮೃತ ದೇಹವನ್ನು ಪುಣೆಗೆ ತಂದು ನಂತರ ಮಿರಜ್‌ಗೆ ರವಾನಿಸಿದ ಉಲ್ಲೇಖ ಅವರ ಚರಿತ್ರೆಗಳಲ್ಲಿದೆ. ಲಕ್ಷ್ಯದಲ್ಲಿಡುವ ಮಾತೆಂದರೆ ತಾವು ತೀರಿಕೊಳ್ಳುವ ಒಂದು ವರ್ಷ ಮೊದಲು ಅಬ್ದುಲ್ ಕರೀಂ ಈ ಬಂದೇ ಅಲಿ ಖಾನರ ಗೋರಿ ಕಟ್ಟಲು ತಮ್ಮ ಎರಡು ರಾಗಗಳನ್ನು ಡಿಸೆಂಬರ್ 1936ರಲ್ಲಿ ರೂಬಿ ರೆಕಾರ್ಡ್ಸ್ ಕಂಪನಿಗೆ ಕೊಟ್ಟರು. ನೋಡಿ, ಬಂದೇ ಅಲಿ ಖಾನರು ಗಾಯಕರಾಗಿದ್ದರೂ ಈ ದಕ್ಷಿಣ ಪ್ರದೇಶದಲ್ಲಿ ಬೀನ್‌ಕಾರರೆಂದೇ ಖ್ಯಾತಿ ಹೊಂದಿದ್ದರು. ಅಬ್ದುಲ್ ಕರೀಂ ಖಾನರು ಕೂಡಾ ತುಂಬ ಚಾಣಾಕ್ಷತೆಯಿಂದಲೇ ಈ ಎರಡು ರಾಗಗಳನ್ನು ಪೀಲೂ ಮತ್ತು ದರಬಾರಿ ಕಾನಡಾ ರಾಗಗಳನ್ನು ಬೀನ್‌ನ ಮೇಲೆ ಬಾರಿಸಿದ್ದನ್ನು ಆ ಕಂಪನಿಗೆ ಕೊಟ್ಟಿದ್ದರು! (SB 2257- 78rpm) ಬಹುಶಃ ಇದರ ರಾಯಲ್ಟಿ ತನಗೆ ಬೀನ ಕಲಿಸಿದ ಗುರುಗಳ ಗೋರಿಯ ಗೋಡೆ ಕಟ್ಟಲು ಉಪಯೋಗಿಸಬೇಕು ಎಂದು ಕೂಡ ಹೇಳಿರಬೇಕು! ಕಾರಣ, ಅನೇಕ ವರ್ಷಗಳಿಂದ ಈ ಮುದ್ರಿಕೆಯ ರಾಯಲ್ಟಿ ಅಬ್ದುಲ್ ಕರೀಂರ ಹಕ್ಕುದಾರರಿಗೆ ಸಿಕ್ಕಿದ್ದಿಲ್ಲ. 1951ರಲ್ಲಿ ಬಾಳಕೃಷ್ಣ ಕಪೀಲೇಶ್ವರಿಯವರಿಗೆ ಇದರ ನೆನಪಾಗಿ ಅವರು ಇದರ ರಾಯಲ್ಟಿಯನ್ನು ಪಡೆದು ಬಂದೇ ಅಲಿಯವರ ಗೋರಿಯನ್ನು ಕಟ್ಟಿಸಿದರು. ಇದರ ಮೇಲೆ ಈ ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಉರ್ದು ಮತ್ತು ಇಂಗ್ಲೀಷಿನಲ್ಲಿ ಕೆತ್ತಲಾಗಿದೆ. ಇದರ ಕನ್ನಡ ಅನುವಾದ ಹೀಗಿದೆ–

- ಈ ಹೊದಿಕೆ ಶ್ರೇಷ್ಠ ಬೀನ್‌ಕಾರರಾದ ಬಂದೇ ಅಲಿ ಖಾನ ಸಾಹೇಬರದಾಗಿದ್ದು, ಅವರು ಶ್ರೇಷ್ಠ ಸಂಗೀತಕಾರರಾಗಿದ್ದ ಅಬ್ದುಲ್ ಕರೀಂಖಾನರ ಚಿಕ್ಕಪ್ಪನವರಾಗಿದ್ದರು. ಬಾಳಕೃಷ್ಣ ಬುವಾ ಕಪೀಲೇಶ್ವರಿ ಅವರು ಇದನ್ನು 11.4.1951ರಲ್ಲಿ ಮರಳಿ ಕಟ್ಟಿಸಿದ್ದಾರೆ.' (ಬಂದೇ ಅಲಿಖಾನರು 27.7.1895ರಲ್ಲಿ ದೇಹವಿಟ್ಟರು)

*****

8.3

ಅಬ್ದುಲ್ ಲತೀಫ್, ಅಬ್ದುಲ್‌ಹಕ್-ಖಾನ್ ಬಂಧುಗಳು

ಬರೋಡಾದಲ್ಲಿ, "ಇಂಡಿಯನ್ ಮ್ಯೂಜಿಕೊಲೊಜಿಕಲ್ ಸೊಸೈಟಿ" ಎಂಬ ಇಂಗ್ಲೀಷು ಹೆಸರಿನ ಸಂಸ್ಥೆ ಇದೆ. ಇದರ ಸ್ಥಾಪನೆ ಮಾಡಿದ್ದು ಆರ್.ಸಿ ಮೆಹತಾ ಎಂಬ ಗುಜರಾತಿ ಗೃಹಸ್ಥ. ಈಗ ಅವರ ವಯಸ್ಸು 94 (ಈ ಲೇಖನವನ್ನು ಬರೆದದ್ದು ಜೂನ್ 2010ರಲ್ಲಿ) ಆದರೂ ಪ್ರತಿ ವರ್ಷ, ಅಂದರೆ ಈ 2010ರ ಜನವರಿಯಲ್ಲಿಯೂ ಐಟಿಸಿಎಸ್‌ಆರ್‌ಎ (ಇಂಡಿಯನ್ ಟೊಬ್ಯಾಕೊ ಕಂಪನಿ ಸಂಗೀತ ರಿಸರ್ಚ ಅಕಾಡೆಮಿ) ಏರ್ಪಡಿಸಿದ ಸಂಗೀತದ ಮೇಲಿನ ಸೆಮಿನಾರಿನಲ್ಲಿ ಭಾಗವಹಿಸಲು ಬಂದಿದ್ದರು, ಬರುತ್ತಿರುತ್ತಾರೆ. ನಮ್ಮ ಪರಿಚಯ ಕಳೆದ ಮೂವತ್ತು ವರ್ಷಗಳದ್ದು. ಕಿರಾನಾ ಪರಂಪರೆ ಮತ್ತು ಆಗ್ರಾ ಪರಂಪರೆಯ ಬಗ್ಗೆ ಆಗಿಂದಾಗ ನಮ್ಮಲ್ಲಿ ಮಾತುಕತೆ ನಡೆಯುತ್ತಾ ಇರುತ್ತದೆ.

'ಗುಜರಾತ್‌ನಲ್ಲಿ ಕಿರಾನಾ ಪರಂಪರೆ ಜಾಸ್ತಿ ಪಾಪ್ಯುಲರ್ ಇದೆಯೋ ಅಥವಾ ಆಗ್ರಾ ಪರಂಪರೆಯೋ?' ಎಂಬ ನನ್ನ ಪ್ರಶ್ನೆಗೆ ಅವರು ಹೇಳಿದ್ದು, 'ಅರ್ಥಾತ್ ಕಿರಾನಾ. ಇದಕ್ಕೆ ತುಂಬ ಕಾರಣಗಳಿವೆ. ಮೊದಲನೆಯದಾಗಿ, ಖಾನ ಬಂಧು-ಬಳಗ. ಅಬ್ದುಲ್ ಕರೀಂ, ಅಬ್ದುಲ್ ಲತೀಫ್ ಮತ್ತು ಅಬ್ದುಲ್ ಹಕ್ ಇವರ ವಾಸ್ತವ್ಯ ಗುಜರಾತ್‌ನಲ್ಲಿ ಇತ್ತು. ಅಂದರೆ ಮಧ್ಯಪ್ರದೇಶದಂತೆ ಗುಜರಾತದಲ್ಲಿಯೂ ಇನ್ನೂರು ಸಂಸ್ಥಾನಗಳಿದ್ದವು. ಒಂದಾನೊಂದು ಕಾಲದಲ್ಲಿ ಭಾವನಗರ, ರಾಜಕೋಟ, ನವಾನಗರ. ಮೆಹತಾ ಒಂದೇ ಉಸುರಿನಲ್ಲಿ, ಪಟಾಪಟಾ ಸಂಸ್ಥಾನಗಳ ಹೆಸರುಗಳನ್ನು ಉಸುರಿಸುತ್ತ ಹೋದರು. 'ಕಿರಾನಾ ಗಾಯಕ-ವಾದಕರು 1857ರ ನಂತರ ಒಬ್ಬೊಬ್ಬರಾಗಿ ಇಲ್ಲಿಗೆ ಬಂದು ನೆಲೆಸಿದರು. ಎರಡನೆಯದಾಗಿ, ಕಿರಾನಾ ಪರಂಪರೆಯ ಮೂವರು, ಕೈರಾನಾ ಊರಿನಿಂದ ಮತ್ತು ಅಲ್ಲಿಯ ಬಾರಾಬಸ್ತಿಯಿಂದಲೇ ಬಂದವರು, ನೆಂಟರ ಮನೆಯಲ್ಲಿಯೆ ತಮ್ಮ ತಮ್ಮ ಬಿಡಾರ ಹೂಡಿ, ಮೆಹಫಿಲ್ಲಗಳನ್ನು, ಊರೂರು, ನಗರನಗರಗಳಲ್ಲಿ ಝೂಡಿಸಿದರು. ಮೂರನೆಯದಾಗಿ ಅವರ ಅಪಾರ ಶಿಷ್ಯವೃಂದ, ಎಲ್ಲರೂ ಸಾರಂಗೀ ಮನೆತನದವರು. ಒಳ್ಳೆಯ ಶಾರೀರ, ನವ್ಯತೆಯ ಆಕರ್ಷಣೆ, ಹೀಗಾಗಿ ಕಿರಾನಾ ಮನೆತನವು ಈ ಬರೋಡಾ, ನವಾನಗರ ಮತ್ತು ಇತರ ಸಂಸ್ಥಾನಗಳಲ್ಲಿ ಮೊದಲಿನಿಂದ ನೆಲೆಸಿದ್ದ ಆಗ್ರಾ, ಗ್ವಾಲಿಯರ್ ಪರಂಪರೆಯನ್ನು ಹಿಂದೆ ಹಾಕಿ ಮುಂದುವರೆಯಿತು."

ಕೈರಾನಾ ಊರಿನಿಂದ ಬಂದ ಸಂಗೀತಕಾರರು ದಿಲ್ಲಿ ದರ್ಬಾರು ಅಳಿದ ಮೇಲೆ ಬೀದರ್ ಅಂದರೆ ನಿಜಾಮನ ಹೈದರಾಬಾದ್ ಸಂಸ್ಥಾನದ ಮಾಂಡಲೀಕರು, ಖುದ್ ಹೈದರಾಬಾದ ಮತ್ತು ಇತರ ಸಣ್ಣ-ಪುಟ್ಟ ಸಂಸ್ಥಾನಗಳಲ್ಲಿಯೂ, ಜಯಪುರ, ಗ್ವಾಲಿಯರ್, ಇಂದೂರ್ ಹಾಗೂ ದಕ್ಷಿಣದ ಮೈಸೂರಿನ ತನಕವೂ ಕೂಚು ಮಾಡಿದರು. ಉದಾಹರಣೆಗೆ ಕೈರಾನಾ ಊರಿನ ರೆಹಮತ್ ಬಕ್ಷನ ಮಗ ಜಯಪುರಿನ ರಾಜಗಾಯಕನಾಗಿದ್ದರೆ, ಆತನ ಮಗ ಬಶೀರ್ ಮತ್ತು ಬಶೀರನ ಗಂಡು ಮಕ್ಕಳು ಜಯಪುರಿನಲ್ಲಿ ಹುಟ್ಟಿ, ಮುಂದೆ ಮುಂಬಯಿಯಲ್ಲಿ ನಿಯ್ಯಾಜ಼್ ಅಹಮ್ಮದ್ ಮತ್ತು ಫೈಯಾಜ಼್ ಅಹಮದ್‌ಖಾನರೆಂದು ಹೆಸರು ಮಾಡಿದರು.

ತಂದೆ ಕಾಲೇಖಾನರ ಕಲಿಸುವಿಕೆ ಈ ಮೂವರಿಗೂ (ಅಬ್ದುಲ್ ಕರೀಂ, ಅಬ್ದುಲ್ ಹಖ್ ಮತ್ತು ಅಬ್ದುಲ್ ಲತೀಫ್) ಜೋರಿನಿಂದ ನಡಯುತ್ತಿದ್ದರೂ, ಹೈದರಾಬಾದ ಸಂಸ್ಥಾನದಲ್ಲಿಯ ರಾಜಗಾಯಕರಾದ ಅವರ ದೊಡ್ಡಪ್ಪ ನನ್ಹೇಖಾನರಿಂದಲೂ ಸಂಗೀತದ ತಾಲೀಮಿನೊಂದಿಗೆ ಉರ್ದು ಓದು-ಬರಹದ ಶಿಕ್ಷಣವೂ ದೊರೆಯಿತು. ಕಾಲೇಖಾನರಿಗೆ ಖಾತ್ರಿಯಾದ ಅನುದಾನ ಪ್ರತಿ ತಿಂಗಳೂ ಸಿಗದೇ ಇದ್ದುದರಿಂದಲೋ ಏನೋ, ಮೂವರು ಚಿಕ್ಕ ಮಕ್ಕಳೊಂದಿಗೆ ಅವರು ಬಿಹಾರದ ಮುಜಾಫರ್‌ಪುರದಿಂದ ಕೈರಾನಾ, ಕೈರಾನಾದಿಂದ ಜಯಪುರ, ಮೈಸೂರು ಮತ್ತಿತರ ದರ್ಬಾರುಗಳಲ್ಲಿ ಸಂಗೀತಸೇವೆ ಸಲ್ಲಿಸಿ, ಕೊನೆಗೆ 1890ರಲ್ಲಿ ಜುನಾಗಡ ಸಂಸ್ಥಾನವನ್ನು ತಲುಪಿದರು. ಕಾತೇವಾಡದಲ್ಲಿ ಕೈರಾನಾದವರೇ ಆದ ಹೈದರ್ ಬಕ್ಷ್ ಫರಿಸ್ಥಿವಾಲೇಯವರಲ್ಲಿ ಬಿಡಾರ ಹೂಡಿದರು. ಆಗ ಅಬ್ದುಲ್ ಲತೀಫರಿಗೆ 17 ವರ್ಷ ವಯಸ್ಸು. ಹಿರಿಯ ಮಗ ಅಬ್ದುಲ್ ಕರೀಂ ಮತ್ತು ಕಿರಿಯ ಅಬ್ದುಲ್ ಹಕ್ ಇಬ್ಬರೂ ವಾಧ್ವಾನ್ ಸಂಸ್ಥಾನಕ್ಕೆ ಹೋದರು. ಅಬ್ದುಲ್ ಲತೀಫ್ ಜುನಾಗಡದಲ್ಲಿಯೇ ಇದ್ದು ಹೈದರ್ ಬಕ್ಷರ ಮಗಳನ್ನು ಮದುವೆ ಮಾಡಿಕೊಂಡರು.

ಹೀಗೆ ಜುನಾಗಡದಲ್ಲಿ ಶರೀರ ಸಂಬಂಧ ಬೆಳೆಸಿ, ಅಬ್ದುಲ್ ಲತೀಫ್ ತಮ್ಮ ಊರಿನವರೇ ಆದ ಶೇಂಡೇಖಾನರೆಂಬ ಹಿರಿಯರನ್ನು ಭೇಟಿ ಮಾಡಲು ಭರತಪುರಕ್ಕೆ ತಂದೆಯುವರೊಂದಿಗೆ ಹೋದರು. ದುರ್ದೈವದಿಂದ ಶೇಂಡೆಖಾನರು ತೀರಿಕೊಂಡಿದ್ದರಿಂದ ಕಾಲೇಖಾನರು ಕೈರಾನಾಕ್ಕೆ ಹೋಗಿ ನೆಲೆಸಿದರು. ಇನ್ನೂ ಮದುವೆಯಾಗದ ಅಬ್ದುಲ್ ಲತೀಫ ಜಯಪುರದಲ್ಲಿ ಕೆಲ ಕಾಲ ವಾಸ್ತವ್ಯ ಮಾಡಿ ಅಲ್ಲಿ ಕಿರಾನಾ ಮನೆತನದವರೇ ಆದ ರೆಹಮತ್ ಬಕ್ಷರ ಬಳಿ ತನ್ನ ಶಾರೀರವನ್ನು ಇನ್ನಷ್ಟು ತೀಡಿ ತಿದ್ದಿ ನುಣುಪು ಮಾಡಿಕೊಂಡರು. ಹೀಗೆ 'ಜಯಪುರದ ಪ್ರಭಾವ ಅಬ್ದುಲ್ ಲತೀಫರ ಸಂಗೀತದ ಮೇಲೆ ಆಯಿತು. ರೆಹಮತ್ ಬಕ್ಷರ ಮಗಳು ನಬಿಯಾಳನ್ನು ಅಬ್ದುಲ್ ಹಕ್‌ನಿಗೆ ಕೊಟ್ಟಿದ್ದರಿಂದ ಅಬ್ದುಲ್ ಲತೀಫ ಜಯಪುರದಲ್ಲಿಯೇ ಉಳಿದು ಆ ಸಂಸ್ಥಾನದ ಸಂಗೀತ ಸೇವೆಗೈದರು. ರೆಹಮತರ ಮಗ ಬಶೀರ ಅಲ್ಲಿಯೇ ಸಾರಂಗಿ ನುಡಿಸುತ್ತಿದ್ದುದರಿಂದ ಅಬ್ದುಲ್ ಲತೀಫರು ವಿಶೇಷವಾಗಿ ಕಂಠ ಸಂಗೀತಕ್ಕೆ ಪ್ರಾಧಾನ್ಯವನ್ನು ಕೊಟ್ಟರು. ಅಬ್ದುಲ್ ಹಕ್ ಹಾಗೂ ಅಬ್ದುಲ್ ಕರೀಂ ಅವರ ವಾಕ್ಪಟುತ್ವ ಇವರಲ್ಲಿ ಇಲ್ಲದೇ ಇದ್ದುದರಿಂದ ಇವರ ಶಿಷ್ಯ-ಸಾಂಭಾರ ಸ್ವಲ್ಪ ಕಡಿಮೆಯೇ. ಆದರೆ

ಸಂತತಿ ಸಂಪತ್ತು ಚೆನ್ನಾಗಿಯೇ ಇತ್ತು. ಹೆಂಡತಿ ನಾಲ್ಕು ಹೆಣ್ಣು ಮತ್ತು ನಾಲ್ಕು ಗಂಡುಮಕ್ಕಳನ್ನು ಹೆತ್ತರು. ಈ ಅಬ್ದುಲ್ ಲತೀಫ್‌ನ ಒಬ್ಬ ಮಗ ಅಬ್ದುಲ್ ಸಮ್ಮದರನ್ನು (1915–1990) 1888ರಲ್ಲಿ ಐಟಿಸಿಎಸ್‌ಆರ್‌ಪಿ ಸೆಮಿನಾರನಲ್ಲಿ ಕಿರಾನಾ ಪರಂಪರೆಯ ಗಾಯಕನೆಂದು ಗೌರವಿಸಿದಾಗ ನಾನು ಅವರನ್ನು ಭೆಟ್ಟಿಯಾಗಿದ್ದೆ. ಮುಂದೆ ಎರಡೇ ವರ್ಷಗಳಲ್ಲಿ ಅವರು ತೀರಿಕೊಂಡರು. ಅಬ್ದುಲ್ ಲತೀಫ್ ಜಯಪುರದಿಂದ ಮುಂದೆ ಹೈದರಾಬಾದ್ ಸಂಸ್ಥಾನದಲ್ಲಿ ಕೆಲ ವರ್ಷ ಕಳೆದು ಇಂದೂರಿನ ಹೋಳಕರರ ಸಂಸ್ಥಾನದಲ್ಲಿಯೇ ಕೊನೆಯತನಕ ಇದ್ದರು. ಇಳಿಗಾಲದಲ್ಲಿ ಸ್ವಲ್ಪ ಆರೋಗ್ಯ ಕೆಟ್ಟಿದ್ದರಿಂದ ಇಂದೂರಿನಿಂದ ಹೈದರಾಬಾದಿಗೆ ಹೋಗಿ ಅಲ್ಲಿ 1944 ಜುಲೈ 7ರಂದು ಕಾಲವಶರಾದರು. 1930ರ ಅಲಹಾಬಾದ್ ಸಂಗೀತ ಸಮ್ಮೇಳನದಲ್ಲಿ ಈತ ಭಾಗವಹಿಸಿದ್ದ ಮಾಹಿತಿ ಇದೆ. ಇದೂ ಕೂಡ ಅಬ್ದುಲ್ ಕರೀಂ ಖಾನರ ಕೃಪೆ! 1937ರಲ್ಲಿ ಅಬ್ದುಲ್ ಕರೀಂರ ಸಾವು ಇವರನ್ನು ತತ್ತರಿಸುವಂತೆ ಮಾಡಿತ್ತು. ಅಬ್ದುಲ್ ಕರೀಂ ಖಾನರ ಮೊದಲನೇ ಪುಣ್ಯಸ್ಮೃತಿಯಲ್ಲಿ ನಡೆದ, ಅಂದರೆ 1938ರ ಮುಂಬಯಿಯ ಸಂಗೀತ ಸಮಾರೋಹದಲ್ಲಿ ಕಿರಾನಾ ಮನೆತನದ ಅಧ್ವರ್ಯು ಎಂದು ಅಬ್ದುಲ್ ಲತೀಫರನ್ನು ಸನ್ಮಾನಿಸಲಾಗಿತ್ತು. ಈ ಸಮಾರೋಹದಲ್ಲಿ ಗಂಗೂಬಾಯಿ ಹಾನಗಲ್, ಕಿರಾನಾ ಮನೆತನದ ಗಾಯಕಿಯೆಂದು ಭಾಗವಹಿಸಿದ ಉಲ್ಲೇಖವಿದೆ. ಆಗಿನ್ನೂ ಕಿರಾನಾ ಮನೆತನದ ಪತಾಕೆಯನ್ನು ದೇಶದಾದ್ಯಂತ ಹಾರಿಸುವ ಭೀಮಸೇನ ಜೋಶಿ ಕುಂದಗೋಳದಲ್ಲಿಯೇ ಇದ್ದರು.

ಕಾಲೇಖಾನರು ಬಹುಶಃ ಬಿಹಾರದ ಮುಝಫರಪುರದಲ್ಲಿ ವಾಸ್ತವ್ಯ ಹೂಡಿದ್ದಾಗ, 1874ರಲ್ಲಿ ಅಬ್ದುಲ್ ಹಕ್ ಅವರು ಹುಟ್ಟಿದರು. ಅಬ್ದುಲ್ ಕರೀಂ ಮತ್ತು ಅಬ್ದುಲ್ ಹಕ್ ಇವರಿಬ್ಬರೂ ಬಹುಕಾಲ ಒಟ್ಟಿಗೆ ಇದ್ದರು. ಬರೋಡಾ ಪ್ರಕರಣದವರೆಗೆ ಇವರಿಬ್ಬರ ಮೆಹಫಿಲ್ಲುಗಳು ಆಗಿಂದಾಗ ಗುಜರಾತ್ ಹಾಗೂ ಮುಂಬಯಿ–ಕರ್ನಾಟಕದಲ್ಲಿ ಆಗುತ್ತಿದ್ದವು. ಮುಂದೆ, 1902ರಲ್ಲಿ ಅಬ್ದುಲ್ ಹಕ್ ಹೈದರಾಬಾದ್ ಸಂಸ್ಥಾನಕ್ಕೆ ಹೊರಟುಹೋದರು. ಅಲ್ಲಿ ತನ್ನ ಮಾವ, ರೆಹಮತ್ ಬಕ್ಷರ ಬಳಿ ಸಂಗೀತಾರಾಧನೆ ಮುಂದುವರೆಸಿದರು. ರೆಹಮತ್ ಬಕ್ಷರ ಮಗಳು ನಾಬಿಯಾ ಇವರ ಹೆಂಡತಿ. ಇವಳು ಕೂಡ ಕೈರಾನಾ ಪಕ್ಕದ ಊರಿನವಳೇ. ಖಾನ್ ಬಂಧುಗಳ ತಾಯಿ ಜಲಾಯಿಯ ಸಹೋದರಿಯ ಮಗಳು ನಾಬಿಯಾ. ಹಿರಿಯಣ್ಣನಂತೆ ಹೋದಲ್ಲೆಲ್ಲ ಮದುವೆಯ ವ್ಯಾಮೋಹ! ನಾಟಕದಲ್ಲಿ ಅಭಿನಯಿಸುತ್ತಿದ್ದ ಪಾಟ್ನಾ ಊರಿನ ಚಂದಾ ಬೇಗಮ್ ಎಂಬುವಳೊಂದಿಗೆ ವಿವಾಹದ ಫಲಿತವೆಂದರೆ ಮುಂದೆ ಹಿಂದುಸ್ತಾನ ಮತ್ತು ಪಾಕಿಸ್ತಾನದ 'ಮಲಿಕಾ–ಮ್ಯೂಜಿಕಿ' ಎಂದು ಪ್ರಖ್ಯಾತಳಾದ ರೋಶನಾರಾಬೇಗಮ್ ಇವರ ಮಗಳು. ಅಬ್ದುಲ್ ಕರೀಂ ಅವರೊಂದಿಗೆ ಕೂಡಿ ಹಾಡುತ್ತಿದ್ದ ಅಬ್ದುಲ್ ಹಕ್, ಕೊನೆಗೆ ರೋಶನಾರಾಳ ತಂದೆ ಎಂದೇ ಖ್ಯಾತಿ ಹೊಂದಿದರು.

ಭಾರತದ ಪೂರ್ವ ದಿಶೆಯಲ್ಲಿ ಬಿಹಾರದ ದರ್ಭಾಂಗಾ, ಮುಝಫರ್‌ಪುರ್, ಪಾಟನಾ ಮತ್ತು ಬಂಗಾಲದ ಕಲಕತ್ತೆಯಲ್ಲಿ, ಕಿರಾನಾ ಪರಂಪರೆ ಬೆಳೆದ ಶ್ರೇಯ ಈ ಅಬ್ದುಲ್ ಹಕ್‌ರಿಗೆ ಸೇರುತ್ತದೆ. ಆದರೂ ಪ್ರತಿಯೊಂದು ಪರಂಪರೆಯಲ್ಲಿ ಹಿರಿಯ

ಮಗನದೇ, 'ಹೆಬ್ಬೆಟ್ಟಿನ ಗುರ್ತು' ಅಥವಾ ಅವನೇ ಕರ್ತಾಪುರುಷ, 'ಖಲೀಫಾ' ಎಂದು ಮೆರೆಯುತ್ತಿದ್ದುದರಿಂದ ಇವರು ಹೆಚ್ಚು ಯಶಸ್ಸು ಸಂಪಾದಿಸಲಾಗಲಿಲ್ಲ. ಮಗಳು ರೋಶನಾರಾ ಕಲಿತದ್ದು ಅಬ್ದುಲ್ ಕರೀಂರಿಂದಲೇ ಎಂಬ ಮಾತನ್ನು ಓದುಗರು ಗಮನಿಸಬೇಕು. ವಯಸ್ಸಿನ 51ನೇ ವರ್ಷಕ್ಕೆ 1925ರಲ್ಲಿಯೇ ಜಯಪುರ ಸಂಸ್ಥಾನದಲ್ಲಿ ಇವರ ದೇಹಾಂತವಾಯಿತು.

ಇವರ ಹಾಡುಗಾರಿಕೆಯ ಸಾಕಷ್ಟು ದಾಖಲೆಗಳು ಬಾಳಕೃಷ್ಣ ಕಪೀಲೇಶ್ವರಿಯವರ ಪುಸ್ತಕದಲ್ಲಿ ಇದ್ದರೂ ಅಬ್ದುಲ್ ಲತೀಫರಂತೆ ಇವರ ಒಂದು ಧ್ವನಿಮುದ್ರಿಕೆಯೂ ದೊರಕದಿರುವದು ನಮ್ಮ ದುರ್ದೈವ.

*****

ಪರಿಶಿಷ್ಟ – 1

ಕಲಾಭಾರತಿಯ ಸುತ್ತಮುತ್ತ

ಎಂಬತ್ತೊಂದರ ಮೈಲಿಗಲ್ಲು ದಾಟಿದ ಕರ್ನಾಟಕ ಸಂಘ ಆರಂಭದಿಂದಲೂ ಮುಂಬಯಿ ನಗರದಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಸಂಗೀತ, ನೃತ್ಯ ಮುಂತಾದ ಕಲೆಗಳ ಸಂವರ್ಧನೆಗಾಗಿ ಶ್ರಮಿಸುತ್ತಾ ಬಂದಿದೆ. ಆಲದ ಮರದಂತೆ ವಿಶಾಲವಾಗಿ ಕನ್ನಡ ಪರ ಚಟುವಟಿಕೆಗಳನ್ನು ವಿಸ್ತರಿಸುತ್ತ, ಮುಂಬಯಿಯಲ್ಲಿ ಕನ್ನಡಿಗರ ಮನಗೆದ್ದಿದೆ.

ಮುಂಬಯಿ ಕರ್ನಾಟಕ ಸಂಘವು ಕಲಾಭಾರತಿಯ ಮೂಲಕ, ವರ್ಷವಿಡೀ ವಿವಿಧ ವಿಚಾರಪ್ರಚೋದಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಕನ್ನಡ ನಾಟಕಗಳ ಪುನರುಜ್ಜೀವನದ ಕೈಂಕರ್ಯ, ಕುವೆಂಪು ನಾಟಕ ಸ್ಪರ್ಧೆಗಳ ಮೂಲಕ ರಂಗಭೂಮಿಯಲ್ಲಿ ಹೊಸ ಉತ್ಸಾಹ, ಕನ್ನಡ ವಿದ್ಯಾರ್ಥಿಗಳಿಗೆ ಸಮವಸ್ತ್ರ, ವಿದ್ಯಾರ್ಥಿವೇತನ ವಿತರಣೆ ಹೀಗೆ ಕಿರಿಯರಿಗೂ ಹಿರಿಯರಿಗೂ ದಿಕ್ಸೂಚಿಯಂತೆ ದಾರಿತೋರಿಸುತ್ತಿರುವದು ಅಭಿಮಾನದ ವಿಷಯ. ಈ ಎಂಟು ದಶಕಗಳಲ್ಲಿ ಸಂಘದ ಮುನ್ನಡೆಗೆ ಸದಸ್ಯರ ಬೆಂಬಲವೇ ಮುಖ್ಯ ಕಾರಣ.

ಪ್ರತಿ ರವಿವಾರ ಮುಂಜಾನೆ ಹತ್ತು ಗಂಟೆಗೆ ಕಲಾಭಾರತಿಯ ಕಾರ್ಯಕ್ರಮ ಸಂಘದ ವಾತಾನುಕೂಲಿತ ಸಭಾಗೃಹದಲ್ಲಿ ಇದ್ದೇ ಇರುತ್ತದೆ ಎಂಬುದು ಕನ್ನಡ ಮತ್ತು ಕನ್ನಡೇತರರ ಮನಸ್ಸಿನಲ್ಲಿ ಈಗಾಗಲೇ ನಿಂತುಬಿಟ್ಟಿದೆ. ನಮ್ಮ ಜನರ ಗೈರುಹಾಜರಿ ವಿಷಾದಕರ, ಆದರೆ, ಕಾರಣವನ್ನು ಹುಡುಕುವ ಗೋಜಿಗೆ ಹೋಗದೆ ಸಂಗೀತ ನೃತ್ಯ, ಸಾಹಿತ್ಯ ಕುರಿತು ನಮ್ಮವರ ಅಭಿರುಚಿಯೇ ಕಡಿಮೆ ಇರಬಹುದೆಂದು ಸಮಾಧಾನಪಟ್ಟುಕೊಳ್ಳುವದು ಹಿತ. ಜೊತೆಗೆ, ನಮ್ಮದೇ ಅರ್ಥಾತ್, 'ಆಮಚಾ ಕರ್ನಾಟಕ ಸಂಘ', 'ಆಮಚೀ ಕಲಾಭಾರತಿ', 'ಹಮಾರಿ ಕಲಾಭಾರತಿ', 'ಆಮ್ಗೆಲೆ ಕಲಾಭಾರತಿ' ಎಂದು ಹೇಳಿಕೊಳ್ಳುವ ಅಂತರ್‌ಭಾಷಿಕರ ಮೆಚ್ಚುಗೆಯೇ ನಮ್ಮ ಹೆಮ್ಮೆಗೆ ಕಾರಣವಾಗಿದೆ. ಸಂಗೀತವೆಂಬ ಸಾಂಸ್ಕೃತಿಕ ಕಲೆಯು, ಧರ್ಮ-ಭಾಷೆ ಮುಂತಾದ ಭೇದ ಭಾವಗಳನ್ನು ಇಲ್ಲವಾಗಿಸಿ, ಮನುಷ್ಯ ಸಂಬಂಧಗಳನ್ನು ಬೆಸೆದು ಸದೃಢಗೊಳಿಸುತ್ತದೆ, ನಿರ್ಮಲಗೊಳಿಸುತ್ತದೆ. ಈ ಬಗೆಯ ಒಂದು ಹಿತಕರ ವಾತಾವರಣವನ್ನು ನಿರ್ಮಿಸುತ್ತ ಸಾಗಿವೆ, ಕಲಾಭಾರತಿಯ ಕಾರ್ಯಕ್ರಮಗಳು.

ಎಸ್.ಎಲ್ ಭೈರಪ್ಪನವರು ಮುಂಬಯಿಗೆ ವ್ಯಾಸರಾಯ ಬಲ್ಲಾಳರಿಗೆ ಬೀಳ್ಕೊಡುವ ಸಮಾರಂಭಕ್ಕೆ ಬಂದಾಗ ಕರ್ನಾಟಕ ಸಂಘದಲ್ಲಿ (ಜುನ್-ಜುಲೈ 1997) ಅನೌಪಚಾರಿಕ ಮಾತುಕತೆ ನಡೆಯಿತು. ರವಿವಾರದ ಕಲಾಭಾರತಿ ಕಾರ್ಯಕ್ರಮಗಳು ಮುಗಿದ ಮೇಲೆ, ಸಾಯಂಕಾಲ ಕನ್ನಡ ಮತ್ತು ಮರಾಠಿ ಸಾಹಿತಿಗಳ ಚರ್ಚಾಕೂಟಕ್ಕೆ ನಾವು ಶಾಂತಾ ಗೋಖಲೆ (ನಾಟಕ), ಜೆ.ಕೆ ಪುರೋಹಿತ (ಕಾದಂಬರಿ, ಸಣ್ಣ ಕತೆ), ರಾಮದಾಸ ಭಟ್ಕಳ (ಪ್ರಕಾಶಕ), ಪ್ರಕಾಶ ಬಾತಂಭೇಕರ (ಕತೆ, ಸಾಹಿತ್ಯ, ವಿಮರ್ಶೆ) ಇವರನ್ನು ವಿಶೇಷವಾಗಿ ಭೈರಪ್ಪನವರೊಂದಿಗೆ ಚರ್ಚೆ ನಡೆಸಲು ಆಮಂತ್ರಿಸಿದ್ದೆವು.

ಇನ್ನೊಮ್ಮೆ, ಕಲಾಭಾರತಿ ಮತ್ತು ಆಚಾರ್ಯ ಶ್ರೀಕೃಷ್ಣ ರತನಜನಕರ್ ಫೌಂಡೇಶನದ ಪರವಾಗಿ ದಿವಂಗತ ಕೆ.ಜಿ ಗಿಂಡೆಯವರ ಮೂರನೆಯ ಪುಣ್ಯತಿಥಿಯನ್ನು ಅತ್ಯಂತ ಭಾವಪೂರ್ಣವಾಗಿ ಆಚರಿಸಲಾಯಿತು. ಹಾಡುಗಾರಿಕೆಯ ಹೊಣೆ ಆಗ್ರಾ ಪರಂಪರೆಯ ಉತ್ಕೃಷ್ಟ ಗಾಯಕರಾದ ಪಂ. ದಿನಕರ ಕೈಕಿಣಿಯವರ ಮತ್ತು ಕಲಕತ್ತಾದಿಂದ ಆಗಮಿಸಿದ ಗಾನಕಲಾಕೋವಿದೆ ಶ್ರೀಮತಿ ಶುಭ್ರಾ ಗುಹಾ ಹೊತ್ತರು.

ಪಂ. ಗಿಂಡೆಯವರ ಬಗ್ಗೆ, ಅವರ ಸಂಗೀತ ಸಂಪ್ರದಾಯದ ಬಗ್ಗೆ, ಆಧುನಿಕ ವಾಗ್ಗೇಯಕಾರರೆಂದು ಅನಿಸಿಕೊಳ್ಳುವ ಮೊದಲೇ ಅವರು ಅಪಮೃತ್ಯುವಿಗೆ ಈಡಾಗಿದ್ದ ವಿಷಯ, ಮೇಲಾಗಿ ಅವರ ಮತ್ತು ಕಲಾಭಾರತಿಯ ಒಂದು ವಿಶಿಷ್ಟ ಪ್ರಕಾರದ ಸ್ನೇಹ-ಸೌಹಾರ್ದ ಸಂಬಂಧದ ಬಗ್ಗೆ ಬರೆಯುವದು ಸಮಯೋಚಿತವೆಂದು ತಿಳಿದುಕೊಂಡಿದ್ದೇನೆ. ಗಿಂಡೆಯವರು ಹುಟ್ಟಿದ್ದು ಬೈಲಹೊಂಗಲದಲ್ಲಿ (1925-1994). ಅವರಣ್ಣ ಭಾರತದ ಮೊಟ್ಟ ಮೊದಲಿನ ನ್ಯೂರೋಸರ್ಜನ್ ಡಾ. ರಾಮ ಗಿಂಡೆ ಅವರೇ ಪುಟ್ಟಕೃಷ್ಣ, ಐದು ವರ್ಷದವನಾಗಿದ್ದಾಗ ಬಾಲಕನ ಸಂಗೀತದ ಗೀಳು ನೋಡಿ ಅಂದಿನ ಹಾಡುಗಾರಿಕೆಯಲ್ಲಿ, 'ನಾಯಕ'ರೆಂದೆನಿಸಿಕೊಂಡಿದ್ದ ಆಚಾರ್ಯ ರತನಜನಕರವರಿಗೆ ಈ ಬಾಲಕನ ಪಾಲಕತ್ವದ ಹೊಣೆ ಹೊರಿಸಿದ್ದು ಉತ್ತರಾದಿ ಸಂಗೀತಕ್ಕೆ ಕೊಟ್ಟ ಒಂದು ದೊಡ್ಡ ಕೊಡುಗೆ. ಮುಂದೆ ಲಖನೌದಲ್ಲಿ ವಾಸ್ತವ್ಯ. ಮುಂಬಯಿಯ ಭಾರತೀಯ ವಿದ್ಯಾಭವನದಲ್ಲಿ, ವಲ್ಲಭಿ ಸಂಗೀತಾಲಯದಲ್ಲಿ ಹಿಂದುಸ್ತಾನ ಸಂಗೀತ ಕಲಿಸುವಿಕೆ ಮತ್ತು ಪ್ರಸಾರ ಕಾರ್ಯವನ್ನು ಕೊನೆಯ ತನಕ ಪೂರೈಸಿದ ಮಹಾನುಭಾವರು. ಇದೆಲ್ಲ ಹೊಣೆಗಾರಿಕೆಯನ್ನು ಗಿಂಡೆಯವರು ಅತ್ಯಂತ ಸಲೀಸಾಗಿ ಹೊತ್ತುಕೊಂಡು ಕೊನೆಗೆ ಶುಭ್ರಾ ಗುಹಾ, ಶಶಾಂಕ ಮುಕ್ತೇದಾರರಂತಹ ಶಿಷ್ಯರಿಗೆ ತರಬೇತಿ ಕೊಡುವಾಗ ಹೃದಯಾಘಾತದಿಂದ ಅಸುನೀಗಿದ್ದನ್ನು ಇಲ್ಲಿ ನೆನೆಸಿಕೊಳ್ಳಬೇಕು.

ಪಂ. ದಿನಕರ ಕಾಯ್ಕಿಣಿಯವರು ಗಿಂಡೆಯವರ ಸ್ನೇಹಿತರು, ಅವರಿಗಿಂತ ಎರಡು ವರ್ಷಕ್ಕೆ ಕಿರಿಯರು. ಹೃದಯದ ಶಸ್ತ್ರಕ್ರಿಯೆ ಆಗಷ್ಟೇ ಆಗಿದ್ದರೂ ತನ್ನ ಹಿರಿಯ ಸ್ನೇಹಿತನ ಪುಣ್ಯಸ್ಮರಣೆಗೆ ಅವರೇ ಸೃಷ್ಟಿಸಿದ ಒಂದು ಬಂದಿಶ, 'ಜೋಗಿಯಾ' ರಾಗದಲ್ಲಿ, 'ಬಡಾಖ್ಯಾಲ' ಹಾಡಿದರು. ಹಿಂದುಸ್ತಾನಿ ಸಂಗೀತದ ಅತಿರಥ-ಮಹಾರಥರು ಕರ್ನಾಟಕ ಸಂಘದಲ್ಲಿ ಅಂದು ಹಾಜರು ಇದ್ದದ್ದು ಸೋಜಿಗದ ವಿಷಯವಲ್ಲ.

ಕರ್ನಾಟಕ ಸಂಘದ ಕಲಾಭಾರತಿ ಕಳೆದ 17 ವರ್ಷಗಳಿಂದ* ನಿರಂತರವಾಗಿ ಸಂಗೀತ, ನೃತ್ಯ, ದೃಕ್-ಶ್ರಾವ್ಯ, ಚರ್ಚೆ, ನಾಟಕ ಇವೆಲ್ಲದರ ರಸದೌತಣ ಪ್ರತೀ ಭಾನುವಾರ ಸಿಕ್ಕೇ ಸಿಗುತ್ತದೆ. ಈಗ ಐಪಿಎಲ್ ಗಾಳಿ ಇಡೀ ದೇಶದಲ್ಲಿ ಬೀಸುತ್ತಿರುವಾಗ ಕರ್ನಾಟಕ ಸಂಘ ಅದಕ್ಕೆ ಅಪವಾದವಾಗಲಾರದು. ಎಪ್ಪತ್ತರ ಹರೆಯದಲ್ಲಿ ಕಾಲಿಡುತ್ತಿರುವ ಪದ್ಮಾಕರ್ ಶಿವಲ್ಕರ್ ಒಳ್ಳೆಯ ಸುಗಮ ಸಂಗೀತ ಹಾಡುವ ಗಾಯಕರು. ಆದರೆ ಅವರ ಹಾಡುಗಾರಿಕೆ ಕೇವಲ ಸೀನೆ ಸಂಗೀತಕ್ಕಷ್ಟೇ ಮೀಸಲಾಗಿದ್ದುದು ನಮಗೆ ಗೊತ್ತಿತ್ತು.

ರಣಜೀ ಟ್ರೋಫಿಯ, 'ವಿಕ್ರಮ'ನೆಂದು, ಎಡಗೈ 'ಸ್ಪಿನ್ನರ್'ಎಂದು ಹೆಸರು ಮಾಡಿದ್ದ ಪದ್ಮಾಕರ್, 'ಯಹ್ ಹೈ ಜೀವನ್ ಏಕ್ ಕ್ರಿಕೆಟ್' ಎಂಬ ತಮ್ಮ ಕ್ರಿಕೆಟ್ ಪ್ರವಾಸವನ್ನು ಹೈಸ್ಕೂಲಿನಿಂದ ಈಗಿನವರೆಗೂ ಇಪ್ಪತ್ತು ಹಾಡುಗಳಿಂದ ಪೋಣಿಸಿ ತಮ್ಮ ಆತ್ಮ ಕಥೆಯನ್ನು ಅಮೀನ್ ಸಯಾನಿ ಸ್ಟೈಲಿನಲ್ಲಿ ಹಾಡಿ, ನಲ್ವತ್ತು ವರ್ಷಗಳ ಹಾಡುಗಳಿಗೆ ಕಲಾವೇದಿಕೆಯಲ್ಲಿ ಜೀವತುಂಬಿದರು. ಸಭಾಗೃಹ ಕಿಕ್ಕಿರಿದು ತುಂಬಿತ್ತು.

ನಮ್ಮ ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಹಾಲ್‌ನಲ್ಲಿ ಚಮತ್ಕಾರಕ್ಕೆ ಅಂತ್ಯವೇ ಇಲ್ಲ ಎನಿಸುತ್ತದೆ. ಪಂ. ಗುಲಾಮ ಬಿರಜ್‌ದಾರ್ ಅವರು ವಿಶ್ವಸಂಸ್ಕೃತ ಪ್ರತಿಷ್ಠಾನದ ಉಪಾಧ್ಯಕ್ಷರು. ಕರ್ನಾಟಕ ಸಂಘವು ಆ ದಿನ 'ಅಂತರ್‌ಭಾರತಿ ಕವಿ ಸಮ್ಮೇಲನ' – ಬಹುಭಾಷಾ ಕವಿಗೋಷ್ಠಿಯನ್ನು ಆಯೋಜಿಸಿತ್ತು. ಅಂದು ಒಟ್ಟು 11 ಕವಿಗಳು 8 ಭಾಷೆಯಲ್ಲಿ ತಮ್ಮ ಗೀತೆಗಳನ್ನು ಹಾಡಿ ತೋರಿಸಿದರು. ಪಂ. ಗುಲಾಮ ಬಿರಜ್‌ದಾರ್ ಅವರು, 'ವಸುಧೈವ ಕುಟುಂಬಕಮ್' ಈ ವಿಷಯದ ಮೇಲೆ ಒಂದು ಆವರ್ತಕ ಗೀತೆಯನ್ನು (ಣುಜಟಜ, ಠಟಿರ) ಪ್ರಸ್ತುತಪಡಿಸಿ ಕವಿತೆಯ ತಿರುಳಾದ ವಿಶ್ವಭಾತೃತ್ವವನ್ನು ಪ್ರಶಂಸಿಸಿದರು. ಪ್ರೇಕ್ಷಕರು ಪಿಟ್ಟೆನ್ನದೇ ಗಮನವಿಟ್ಟು ಕೌತುಕದಿಂದ ಮುಸ್ಲಿಮ್ ಪಂಡಿತರು ತಾವೇ ಬರೆದ ಸಂಸ್ಕೃತ ಕವಿತೆಯನ್ನು ಕೇಳುತ್ತ ಕುಳಿತದ್ದೇ ಮಹದಾಶ್ಚರ್ಯ!

* ಈ ಲೇಖ ಬರೆದು ಸ್ನೇಹಸಂಬಂಧದಲ್ಲಿ ಪ್ರಕಟಿಸಿದ್ದು ಮೇ 2010ರಲ್ಲಿ.

*****

ಪರಿಶಿಷ್ಟ – 2

ಮಾನವಂದನಾ

ನನ್ನ ಅಣ್ಣ ಪ್ರಕಾಶ ಬುರ್ಡೆಯವರನ್ನು 'ದಾದಾ' ಎಂದು ಕರೆಯುವದು ರೂಢಿಯಾಗಿತ್ತು. ಆತನ ಅಪರಿಮಿತ ಸಂಗೀತ ಸಾಂಗತ್ಯವನ್ನು ಕೇವಲ ಕನ್ನಡ ಬರಹಗಳಿಂದ ಅಳೆದರೆ ಅವನಗೆ ಅನ್ಯಾಯಮಾಡಿದಂತೆ ಆಗುತ್ತದೆ ಎಂದೆನಿಸುತ್ತದೆ. ಆತನಿಗೆ ಕನ್ನಡ ಭಾಷೆಯ ಬಗ್ಗೆ ಅಪರಿಮಿತ ಪ್ರೀತಿ ಮತ್ತು ಅಭಿಮಾನವಿತ್ತು. ಆದರೆ ಅವನ ಅನ್ಯ ಭಾಷೆಗಳಲ್ಲಿಯ ಪ್ರಾವಿಣ್ಯವು ಕನ್ನಡಕ್ಕಿಂತ ಹೆಚ್ಚಾಗಿತ್ತು ಎನ್ನುವದಕ್ಕೆ ಅವನ ಇಂಗ್ಲೀಷು, ಮರಾಠಿ ಭಾಷೆಗಳಲ್ಲಿಯ ಲೇಖನಗಳು, ಮತ್ತು ಹಿಂದಿಯನ್ನೂ ಒಳಗೊಂಡಂತೆ ಆ ಭಾಷೆಗಳಲ್ಲಿ ಅವನಿಗಿದ್ದ ವಾಕ್ಚಾತುರ್ಯಗಳು ನಿದರ್ಶನವನ್ನು ಕೊಡುತ್ತವೆ. ಮುಂಬಯಿಯಲ್ಲಿದ್ದು, ಕನ್ನಡೇತರರ ಜೊತೆ ಮನೆಯಲ್ಲಿ ಮತ್ತು ಮನೆಯ ಹೊರಗೆ ಹೆಚ್ಚು ಒಡನಾಟ ಇದ್ದುದರಿಂದ ಕನ್ನಡದ ಬರವಣಿಗಾಗಿ ಸ್ವಯಿಚ್ಛೆಯಿಂದಲೇ ಅವನು ಪರಿಶ್ರಮಪಟ್ಟು ರೂಡಿಸಿಕೊಂಡಿರಬೇಕು. ಸ್ವತಃ ಸಂಗೀತ ವಿಷಯದ 'ಜ್ಞಾನ ಭಂಡಾರಿ' ಆಗಿದ್ದ ಅವನು ಯಾವ ಪೂರ್ವ ಸಿದ್ಧತೆಯಿಲ್ಲದೇ, ಬಹುಭಾಷೆಯಲ್ಲಿ, ಮಾತಾಡುವ ಚಾತುರ್ಯವನ್ನು ಹೊಂದಿದ್ದ. ತಾನು ಸಂಯೋಜಿಸಿದ ದೃಕ್–ಶ್ರಾವ್ಯ ಕಾರ್ಯಕ್ರಮಗಳಿಗೆ ತಾನೇ ನಿವೇದಕನಾಗಿರುತ್ತಿದ್ದ, ವಿನೋದ ಸ್ವಭಾವದವನಾಗಿದ್ದರಿಂದ, ಸಂಗೀತ ಕ್ಷೇತ್ರದಲ್ಲಿಯ ಇಲ್ಲವೇ ಸಂಗೀತಗಾರರ ಕುರಿತ ಅನೇಕ ಚಿಕ್ಕ–ಪುಟ್ಟ ರಸಪ್ರಸಂಗಗಳನ್ನು ತನ್ನ ಅನುಭವ ಭಂಡಾರದಿಂದ ಆರಿಸಿ ಹಾಸ್ಯ ಚಟಾಕಿಗಳ ಒಗ್ಗರಣೆ ಹಾಕಿ ಪ್ರೇಕ್ಷಕರನ್ನು ರಂಜಿಸುತ್ತಿದ್ದ.

1993ರ ಬಾಂಬ್ ಸ್ಫೋಟದ ದುರ್ಘಟನೆಯ ನಂತರ ಮುಂಬಯಿಕರರನ್ನು ಸಂತೈಸಲು ಸಂಗೀತೋಪಚಾರವೊಂದೇ ರಾಮಬಾಣವೆಂದು ಮನಗಂಡ ದಾದಾ ಮುಂಬಯಿ ಮಹಾನಗರದ ಕರ್ನಾಟಕ ಸಂಘ ಮತ್ತು ಅನೇಕ ಗಣ್ಯ ಸಂಘಟನೆಗಳ ಜೊತೆಗೂಡಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ. ಅವು ಈವರೆಗೂ ಮುಂದುವರಿದು ಬಂದಿರುವುದು ವಿಶೇಷ. ಈ ಸಮಯದಲ್ಲಿಯೇ ದಾದಾನಿಗೆ ಭಾರತೀಯ ರೆಕಾರ್ಡು ಸಂಗ್ರಹಾಲಯದ ಕಾರ್ಯದರ್ಶಿಗಳಾದ ಡಾ. ಸುರೇಶ ಚಾಂದವಣಕರ್, ಅಧ್ಯಕ್ಷರಾದ ಶ್ರೀ ನಾರಾಯಣ ಮುಲಾನಿ, ಲಘು ಸಂಗೀತ ಮತ್ತು ಚಲನಚಿತ್ರ ಸಂಗೀತದ ರೆಕಾರ್ಡುಗಳ ಸಂಗ್ರಾಹಕ ಭಾಸ್ಕರರಾವ್ ಕೊಡಂಗೆ ಇವರ ಪರಿಚಯವಾಗಿ ಇವರೆಲ್ಲರ ಸಹಾಯದಿಂದ ಅನೇಕ ಮರೆತುಹೋದ ಕಲಾವಿದರ ಹಾಡುಗಳನ್ನು ಕೇಳುವ ಯೋಗ ಬಂದಿತು.

ಚಿಕಿತ್ಸಕ ಬುದ್ಧಿಯ ದಾದಾ ಅಷ್ಟಕ್ಕೇ ತೃಪ್ತನಾಗಲಿಲ್ಲ. ಅವನು ಈ ರೆಕಾರ್ಡ್ ಸಂಗ್ರಹಾಲಯದ ಪ್ರಯೋಜನವನ್ನು ಪಡೆದು, ತನ್ನ ಗೆಳೆಯರ ಸಹಾಯದಿಂದ ಆಗಿನ ಪ್ರಸಿದ್ಧ ಕಲಾವಿದರಾದ ಹೀರಾಬಾಯಿ ಬಡೊದೇಕರ್, ಬಡೀ ಮೋತಿಬಾಯಿ, ಭೀಮಸೇನ್ ಜೋಶಿ, ಮಲ್ಲಿಕಾರ್ಜುನ ಮನ್ಸೂರ, ಶಾಂತಾ ಆಪ್ಟೆ, ಸಲೀಲ ಚೌಧರಿ, ಆರ್.ಡಿ ಬರ್ಮನ್ ಇವರ ತೀರ ಹಳೆಯ ರೆಕಾರ್ಡುಗಳ ಮುದ್ರಿಕೆಗಳನ್ನು ತರಿಸಿ, ಕೆನರಾ ಸಾರಸ್ವತ ಅಸೋಸಿಯೇಶನ್‌ನಲ್ಲಿ ಸಂಗೀತ ರಸಿಕರಿಗಾಗಿ 'ಶ್ರವಣ ಕೂಟ'ವನ್ನು ಆಯೋಜಿಸಿದ್ದ. ಇವರೆಲ್ಲರ ರೆಕಾರ್ಡುಗಳನ್ನು ಕೇಳುತ್ತಿರುವಾಗ ಅವನಿಗೆ ತನ್ನ ಸಾರಸ್ವತ ಸಮುದಾಯದಲ್ಲಿ ಅದೆಷ್ಟೋ ಪ್ರತಿಭಾವಂತ ಕಲಾವಿದರಿದ್ದಾರೆ ಮತ್ತು ಆಗಿಹೋಗಿದ್ದಾರೆ, ಆದರೆ ಅವರಲ್ಲಿ ಒಬ್ಬರ ಧ್ವನಿಮುದ್ರಿಕೆಗಳು ಕೂಡ ಈ ಸಂಗ್ರಹಾಲಯದಲ್ಲಿ ಇಲ್ಲವಲ್ಲ ಎಂದೆನಿಸಿತು. ಸಾರಸ್ವತ ಸಮುದಾಯದ ಮರೆತುಹೋದ ಕಲಾವಿದರನ್ನು ಬೆಳಕಿಗೆ ತರಬೇಕೆಂಬುದನ್ನು ಆಗಲೇ ಅವನು ನಿಶ್ಚಯಿಸಿದ್ದು. ಅವನ ಕಲ್ಪನೆಯ 'ಮಾನವಂದನಾ' ರೂಪತಾಳಿತು.

ಅನೇಕ ಸಂಗೀತ ಕಾರ್ಯಕ್ರಮಗಳನ್ನು ನಿಯೋಜಿಸುವದರಲ್ಲಿ ದಾದಾ ವಿಶೇಷ ಆಸಕ್ತಿಯನ್ನು ಹೊಂದಿದ್ದ. ಆತನು ಸಂಘಟಿಸಿದ ಕಾರ್ಯಕ್ರಮಗಳ ಪಟ್ಟಿ ಸಾಕಷ್ಟು ಉದ್ದವಿದೆ. ಅದರಲ್ಲಿಯ 'ಮಾನವಂದನಾ' ದೃಕ್ ಶ್ರಾವ್ಯ ಕಾರ್ಯಕ್ರಮವನ್ನು ಆರಿಸಿ ವಾಚಕರ ಗಮನಕ್ಕೆ ತರಬೇಕೆಂದು ಎನಿಸಿತು. ಇದು ಅವನ ಮಾದರಿ ಸಂಘಟನೆಯೆಂದು ಹೇಳಬಹುದು. ಏಕೆಂದರೆ, ಇದೊಂದು ಅಳಿದುಳಿಯುತ್ತಿರುವ ಸಾರಸ್ವತ ಸಮುದಾಯದ ಸಂಗೀತ ಕ್ಷೇತ್ರದಲ್ಲಿಯ ಮರೆತುಹೋದ ಹಿರಿಯ ಗಾಯಕರ ಮತ್ತು ವಾದಕರ ಸ್ಮೃತಿಗೆ ಮೀಸಲಾದ ಒಂದು ಅಮೋಘ ಹಾಗು ವಿಶಿಷ್ಟ ದೃಶ್ಯಾವಳಿ ಆಗಿತ್ತು. ಸ್ವತಃ ಚಿತ್ರಾಪುರ ಸಾರಸ್ವತನಾಗಿದ್ದುದರಿಂದ (ಚಿತ್ರಾಪುರ ಸಾರಸ್ವತ), ವಾಚಕರಿಗೆ ಇದು ಸಾರಸ್ವತ ಸಮುದಾಯಕ್ಕಷ್ಟೇ ಸೀಮಿತವಾದ ಕಾರ್ಯಕ್ರಮವೆಂದು ಎನಿಸಬಹುದು. ಆದರೆ, ಅದು ಮುಂಬಯಿ ಮಹಾನಗರದಲ್ಲಿ ನೆಲೆಯೂರಿ ಕಟ್ಟಿದ ಸಾರಸ್ವತರ ಸಾಂಸ್ಕೃತಿಕ ಸಂಸ್ಥೆಯಾದ , ಕ್ಯಾನರಾ ಸಾರಸ್ವತ ಅಸೋಸಿಯೇಶನ್‌ದ ಶತಮಾನೋತ್ಸವ ನಿಮಿತ್ತ (2011) ಆಯೋಜಿಸಲ್ಪಟ್ಟಿತ್ತು. ಈ ಸಂಧರ್ಭದಲ್ಲಿ ಅವನು ತನ್ನ ಜೀವನದ ವಿಶಾಲವಾದ ಸಂಗೀತ ಸಾಗರದಲ್ಲಿ ಈಜಾಡಿ ಮುಳುಗಿ ಅಮೂಲ್ಯ ರತ್ನಗಳನ್ನು ಆರಿಸಿದನಷ್ಟೆ ಅಲ್ಲ, ಇನ್ನೂ ಆಳಕ್ಕಿಳಿದು ಅಪರೂಪದ ಮುತ್ತುಗಳನ್ನು ತರಲೂ ಮರೆಯಲಿಲ್ಲವೆಂಬುದನ್ನು ನಾವು ಮರೆಯಬಾರದು.

ಅವನ ಈ ಉದ್ದೇಶ 2006ರಿಂದ ಹಂತಹಂತವಾಗಿ ಫಲಪ್ರದವಾಗತೊಡಗಿತು. ಅದಕ್ಕೆ ಮೊದಲು ಅವನು ಅಮ್ಮೆಂಬಳ ದಿನಕರರಾವ್* (ಡಿಎಮೆಲ್) ಅವರ ಮೇಲೆ ಒಂದು ದೃಕ್-ಶ್ರಾವ್ಯ ಕಾರ್ಯಕ್ರಮವನ್ನು ಆಯೋಜಿಸಿದ. ಅದೇ ವರ್ಷ ಕೆನರಾ ಸಾರಸ್ವತ ಅಸೋಸಿಯೇಶನ್ನಿನವರು (ಕೆ.ಎಸ್.ಎ) 'Directory of Chitrapur ±ĄgĄøĄévḷ Musicians and Dancers' ಪುಸ್ತಕವನ್ನು ಬೆಳಕಿಗೆ ತಂದರು. (ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಒಳಗೊಂಡು) ಕೇವಲ 21,800 ಜನಸಂಖ್ಯೆ ಇದ್ದ, ಕರ್ನಾಟಕದ ಈ ಅಲ್ಪಸಂಖ್ಯಾತ ಸಮುದಾಯದಲ್ಲಿ 322 ಕಲಾವಿದರಿದ್ದಾರೆ, ನಿಜಕ್ಕೂ ಇದು ಒಳ್ಳೆಯ ಶೇಕಡಾವಾರು! ಅದಕ್ಕೆ ಅಪರ್ಣಾ ಶಿರೂರ ಅವರು ಬರೆದ

ಒಂದು ಸಂಶೋಧನಾ ಲೇಖ ತನಗೆ ದೃಕ್-ಶ್ರಾವ್ಯ ಮಾಡಲು ಹುರುಪು ಕೊಟ್ಟಿತು ಎಂದು ಅವನು ಹೇಳಿದ್ದಾನೆ. 2011 ಕೆನರಾ ಸಾರಸ್ವತ ಅಸೋಸಿಯೇಶನ್ನಿನ ಶತಮಾನೋತ್ಸವದ ವರುಷ. ಚಿತ್ರಾಪುರ ಸಾರಸ್ವತ ಸಮುದಾಯದ 'ವಿಸ್ಮೃತಿಯಲ್ಲಿ ಅಡಗಿದ' ಕಲಾವಿದರನ್ನು ಗೌರವಿಸಲು ಇದರಷ್ಟು ಒಳ್ಳೆಯ ಸುಸಂಧಿ ಬೇರೆ ಇಲ್ಲವೆಂದು ಭಾವಿಸಿದ ನನ್ನ ದಾದಾ ತಕ್ಷಣ ಕಾರ್ಯರತನಾದನು.

ಸಾರಸ್ವತ ಸಮುದಾಯದ ಗಾಯಕರ ಪಟ್ಟಿ ದೊಡ್ಡದಾಗುತ್ತ ಹೋದಹಾಗೆ ಕಾರ್ಯಕ್ರಮವನ್ನು ಮೂರು ಭಾಗಗಳಲ್ಲಿ ಅಥವಾ ಸರಣಿಯಲ್ಲಿ ಹೊಂದಿಸಬೇಕಾಯಿತು. ಅವುಗಳಲ್ಲಿ ಬದುಕಿರುವ ಮತ್ತು ಸದ್ಯಕ್ಕೆ ಕಚೇರಿ ನಡೆಸುತ್ತಿರುವ ಕಲಾವಿದರನ್ನು ಬಿಟ್ಟು, ಅಗಲಿದ, ಮರೆತುಹೋದ ನಮ್ಮ ಹಿರಿಯ ಸಂಗೀತಗಾರರನ್ನು ಸ್ಮರಿಸಿ ಗೌರವವನ್ನು ಅರ್ಪಣೆ ಮಾಡಲು ಈ ಸದವಕಾಶವನ್ನು ಉಪಯೋಗಿಸಿಕೊಂಡು ಅದನ್ನು ಯಶಸ್ವಿಯಾಗಿ ಮಾಡಿ ತೋರಿಸಿದ.

ಈ ಸಂಗೀತ ದೃಶ್ಯಾವಳಿಯ ಮೊದಲನೆಯ ಸರಣಿಯಲ್ಲಿ ಬೀಸುವಕಲ್ಲಿನ ಹಾಡುಗಳು, ಮದುವೆಯ ಓವೀ, (ನಾಲ್ಕು ಸಾಲಿನ ಪದಗಳು) ಹಬ್ಬ ಹರಿದಿನಗಳಲ್ಲಿ ಹಾಡುವ ಪದಗಳು, 'ಮ್ಹಣತಿ'ಗಳು (ಕೃಷ್ಣನ ಮೇಲೆ ಬರೆದ ಸಾಂಪ್ರದಾಯಿಕ ಗೀತೆಗಳು)* ಗುರು ಪರಂಪರೆಯ ದೇವರ ನಾಮಗಳು, ಭಜನೆಗಳು ಇತ್ಯಾದಿಯಿಂದ ಪ್ರಾರಂಭವಾಗಿ ದಿನಕರ ಕಾಯ್ಕಿಣಿಯವರೆಗಿನ ಸಂಗೀತ ಪ್ರವಾಸವು ಒಳಗೊಂಡಿದೆ. ಎರಡನೆಯ ಸರಣಿಯಲ್ಲಿ ವಾದಕರಾದ ವಿಷ್ಣುದಾಸ ಶಿರಾಲಿಯಿಂದ ಹಿಡಿದು, ಭಾಸ್ಕರ ಚಂದಾವರ್‌ಕರ್‌ವರೆಗಿನ ಸಂಗೀತಪ್ರವಾಸ ಸೇರಿದೆ. ಮೂರನೆಯದು, ಸುಗಮಸಂಗೀತದ ಸರಣಿ. ಇದರಲ್ಲಿ ಜಯವಂತಿ ಹಿರೇಬೆಟ್‌ರಿಂದ, ಸುಶೀಲಾರಾಣಿ ಪಟೇಲ್, ಮತ್ತು ಸೀತಾ ಹಿರೇಬೆಟ್...... ಅವರವರೆಗಿನ ಚಿತ್ರಣವಿದೆ.

ಚಿತ್ರಾಪುರ ಸಾರಸ್ವತರು ಮೂಲತಃ ಗೋವಾ ನಿವಾಸಿಗರು. ಪೋರ್ಚುಗೀಸರ ಬಲಾತ್ಕಾರದ ಮತಾಂತರ ತಪ್ಪಿಸಿಕೊಳ್ಳಲು ನೆರೆ ಜಿಲ್ಲೆಗಳಾದ ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಬಂದು ನೆಲೆಸಿದರು. ಕೆಳದಿ, ಸೋಂದಾ, ಬಿಳಗಿ ಮುಂತಾದವುಗಳ ಕನ್ನಡ ನಾಯಕರ ಆಶ್ರಯದಲ್ಲಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದರು. ಅವರ ಮೂಲ ಮಠ ಗೋಕರ್ಣದಲ್ಲಿದ್ದು, ಈಗ ಭಟ್ಕಳ ಹತ್ತಿರದ ಶಿರಾಲಿ ಎಂಬ ಚಿಕ್ಕ ಗ್ರಾಮದಲ್ಲಿ ಕೇಂದ್ರ ಮಠವಿದೆ. ಹೆಚ್ಚಿನ ಶಿಕ್ಷಣ ಮತ್ತು ಹೊಟ್ಟೆಪಾಡಿಗಾಗಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಜನರು ಉದ್ಯೋಗಗಳನ್ನು ಅರಿಸುತ್ತ, ಬೊಂಬಾಯಿ ಮತ್ತು ಅನ್ಯ ರಾಜ್ಯಗಳಿಗೆ ವಲಸೆ ಹೋದರು. ವಾಸಿಸಲು ಮನೆಗಳ ಅಗತ್ಯ ಉಂಟಾದುದರಿಂದ ಬೊಂಬಾಯಿಯಲ್ಲಿ ಮತ್ತು ಬೆಂಗಳೂರಿನಲ್ಲಿ ಸಹಕಾರಿ ವಸತಿ ನಿರ್ಮಾಣ, ಅದಕ್ಕೋಸ್ಕರ ಹಣದ ಆವಶ್ಯಕತೆ ಬಂದ ಕಾರಣ ಜನರಿಗೆ ತಮ್ಮ ತಮ್ಮ ಸಂಬಳದಲ್ಲಿಯೇ ಉಳಿತಾಯ ಮಾಡಿ, ಮನೆ ಕಟ್ಟಲು ವಸತಿ-ಸಾಲದ ಸೌಕರ್ಯ ಒದಗಿಸಲು ಸಹಕಾರಿ ಬ್ಯಾಂಕಿಂಗ್ ಮತ್ತು ಉದ್ಯಮಶೀಲ ಚಟುವಟಿಕೆಗೋಸ್ಕರ ಸಹಕಾರ ತತ್ವಗಳನ್ನು ಈ ಮೊದಲೇ ಅವರು ಬಳಸಿದ್ದರು (1911). ಅದನ್ನು ಸಂಗೀತ ಮತ್ತು ಇತರ ಸಂಸ್ಕೃತಿಗಳ ಸಂವರ್ಧನೆಗೆ ಕೂಡ ಪ್ರಯೋಗಿಸಿದರು.

ಚಿತ್ರಾಪುರ ಸಾರಸ್ವತರ ಈಗಿನ ಮಠವು ಕರ್ನಾಟಕದ, ಉತ್ತರಕನ್ನಡ ಜಿಲ್ಲೆಯಲ್ಲಿಯ ಶಿರಾಲಿ ಎಂಬ ಗ್ರಾಮದಲ್ಲಿ 1757ರಿಂದ ಇದೆ. ಸಂಗೀತದ ಪೋಷಣೆ ಇಲ್ಲಿಯ ಗುರು ಪರಂಪರೆಯ ಒಂದು ಅವಿಭಾಜ್ಯ ಅಂಗ ಎಂಬುದು ದಾದಾನ ಅಭಿಪ್ರಾಯವಾಗಿತ್ತು; ಹೆಚ್ಚಾಗಿ ಎಲ್ಲ ಮಠಾಧಿಪತಿಗಳು ಸಂಗೀತದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಿದ್ದನ್ನು ಅವನು ಗಮನಿಸಿದ್ದಾನೆ. ಶಂಕರ ನಾರಾಯಣ ಪ್ರಾರಂಭಿಕ ಸ್ತುತಿ ಗೀತೆಯನ್ನು ಮೊದಲು, 'ಕರ್ನಾಟಕ' ಶೈಲಿಯಲ್ಲಿ ಹಾಡುತ್ತಿದ್ದವರು ನಂತರ ಹಿಂದುಸ್ತಾನಿ ಪದ್ಧತಿಯನ್ನು ಅನುಸರಿಸತೊಡಗಿದರು. ಈಗಿನ ಮಠಾಧಿಪತಿಗಳಾದ ಪರಮ ಪೂಜ್ಯ ಶ್ರೀ ಶಂಕರಾಶ್ರಮ ಸದ್ಯೋಜಾತ ಸ್ವಾಮಿಗಳು ಸ್ವತಃ ತುಂಬ ಚೆನ್ನಾಗಿ ಹಾಡುತ್ತಾರೆ ಮತ್ತು ಭಜನೆಗಳನ್ನು ಭಕ್ತವೃಂದಕ್ಕೆ ಕಲಿಸುತ್ತಾರೆ, ಹಾಡಿಸುತ್ತಾರೆ. ಸಮೂಹ ಭಜನೆ, ಸಮೂಹ ಪೂಜೆಗಳ ರೂಢಿಯನ್ನು ಜನಸಾಮಾನ್ಯರಲ್ಲಿ ನೆಟ್ಟಿಬಿಟ್ಟಿದ್ದಾರೆ. ಹೀಗಾಗಿ ಚಿತ್ರಾಪುರ ಮಠದಲ್ಲಿ ಮೊದಲಿನಿಂದಲೂ ಇದ್ದ ಸಂಗೀತ ಪರಂಪರೆ ಈಗ ಮುಂದುವರಿದು ಬಂದು ತನ್ನ ಉತ್ತುಂಗದಲ್ಲಿದೆ ಅಂದರೆ ಅತಿಶಯೋಕ್ತಿಯಾಗಲಾರದು!

ಚಿತ್ರಾಪುರ ಸಾರಸ್ವತರ ಮಠದ ಅರ್ಚಕರಾದ ಕೃಷ್ಣಭಟ್ಟ ಶಿರಾಲಿಯವರು (1906–1984) ಕೀರ್ತನಕಾರ ಮನೆತನದವರು. ಇವರನ್ನು 'ದಂತವಕ್ರ' ಭಟ್ಟರೆಂದೂ ಕರೆಯುತ್ತಿದ್ದರು. ಸಂಗೀತ ಕ್ಷೇತ್ರದ ಆದ್ಯಪ್ರವರ್ತಕರೆಂದು ಪರಿಗಣಿಸಲ್ಪಟ್ಟ ಪಂ. ರತನಜನಕರರವರು ಇವರಿಗೆ, 'ವಿಷ್ಣುದಾಸ'ರೆಂದು ಹೊಸದಾಗಿ ನಾಮಕರಣ ಮಾಡಿದರು. ಇವರು ಉಸ್ತಾದ್ ಬಡೆ ಗುಲಾಮ ಅಲಿಖಾನರ ಚಿಕ್ಕಪ್ಪರಾದ ಕಾಲೇಖಾನರಿಂದ (ಕಸೂರ–ಪಟಿಯಾಲ ಪರಂಪರೆಯವರು) ಮತ್ತು ಮೈಹರ್‌ನ ಅಲ್ಲಾ ಉದ್ದೀನ್ ಖಾನ್ ಸಾಹೇಬರಿಂದ ಸಂಗೀತ ಶಿಕ್ಷಣ ಪಡೆದರು. ವಿಷ್ಣುದಾಸ ಶಿರಾಲಿಯವರು ಮುಂದೆ ರವಿಶಂಕರರ ತಂಡದ ಜೊತೆ ವಿದೇಶಕ್ಕೂ ಹೋಗಿಬಂದರು. ಸಂಪ್ರದಾಯ ಮತ್ತು ಅಸ್ಪೃಶ್ಯತೆಯಿಂದ ಕೂಡಿದ ಆ ಕಾಲದ ಸಮಾಜದಲ್ಲಿ ಹೀಗೆ ಮಠಾಧೀಶರೊಬ್ಬರು ಮಠದ ಅರ್ಚಕರನ್ನು ಮುಸಲ್ಮಾನ ಉಸ್ತಾದ್‌ರ ಬಳಿ ಸಂಗೀತ ಕಲಿಯಲು ಮತ್ತು ವಿದೇಶ ಪರ್ಯಟಣಕ್ಕೆ ಕಳುಹಿಸಿದ್ದು, ಕೇಳಿ ಅರಿಯದ ಸಂಗತಿಗಳು. ಅಂತಾರಾಷ್ಟ್ರೀಯ ಖ್ಯಾತಿ ಪಡೆದ ನಟವರ ಉದಯಶಂಕರವರ (ರವಿಶಂಕರವರ ಸಹೋದರ) 'ಕಲ್ಪನಾ' ನೃತ್ಯ–ನಾಟಿಕೆಗೆ ಅನೇಕ ಪ್ರಕಾರದ ವಾದ್ಯಗಳನ್ನು ಬಳಸಿ ರಾಗ ಸಂಯೋಜನೆ ಮಾಡಿದವರೇ ವಿಷ್ಣುದಾಸರು. ಸ್ವತಃ ಬಹುಮುಖ ಪ್ರತಿಭೆಯುಳ್ಳ ಇವರು ಡ್ರಮ್, (ಈಗ ಬಳಕೆಯಲ್ಲಿ ಇಲ್ಲದ) ಮಂದ್ರ ಬಹಾರ ಸಿತಾರ್, ತಬಲಾ, ತಬಲಾ ಸಾರಂಗ, ಜಲತರಂಗ, ತಾಳವಾದ್ಯ ಮುಂತಾದ ವಾದ್ಯಗಳನ್ನು ಬಾರಿಸುವದರಲ್ಲಿ ಪ್ರಾವಿಣ್ಯವನ್ನು ಪಡೆದಿದ್ದರು. ಅವರು ಸಂಗೀತ ನಾಟಕ ಅಕಾಡೆಮಿಯ ಪುರಸ್ಕೃತರು ಕೂಡ.

ಮಠದಲ್ಲಿಯ ಸಂಗೀತದಲ್ಲಿ ಆಸಕ್ತರಿದ್ದ ಅನೇಕ ಪೂಜಾರಿಗಳು ಕೃಷ್ಣ (ವಿಷ್ಣುದಾಸ) ಭಟ್ಟರ ಶಿಷ್ಯರಾಗಿದ್ದರು. ಅವರಲ್ಲಿ ಎಸ್‌ಸಿಆರ್ ಭಟ್ಟ (ಶುಕ್ಲ ಚಂದ್ರಶೇಖರ ಭಟ್ಟ, ಇವರು ನಂದಮಾಮ ಎಂದು ಕರೆಯಲ್ಪಡುತ್ತಿದ್ದರು) ಅವರು ಸಂಗೀತ ಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ಗಳಿಸಿದರು. ಕಾಲೇಖಾನರ ಇನ್ನೊಬ್ಬ ಶಿಷ್ಯರು ಎಸ್. ಎನ್ ರತನಜನಕರ. ಇವರ ಶಿಷ್ಯ ಮಂಡಳಿಯಲ್ಲಿ ಪ್ರಖ್ಯಾತರಾದ ಚಿದಾನಂದ ನಗರಕರ

(1919–1971) ಮತ್ತು ಕೆ.ಜಿ ಗಿಂಡೆ (1925–1994) ಇವರಿಬ್ಬರೂ ಕರ್ನಾಟಕದವರು, ಧ್ರುಪದ್ ಧಮಾರ್ ಮತ್ತು ಖಯಾಲ್ ಎರಡರಲ್ಲಿಯೂ ಪ್ರಾವಿಣ್ಯ ಪಡೆದಿದ್ದರು. ಗಿಂಡೆಯವರು ಸಂಗೀತದ 'ವಿಶ್ವಕೋಶ'ವೆಂಬ ಹೆಸರನ್ನು ಗಳಿಸಿದ್ದರು.

ದಿನಕರ ಕಾಯ್ಕಿಣಿ (1927–2010) ಗ್ವಾಲಿಂಯರ್ ಮತ್ತು ಆಗ್ರಾ ಘರಾಣೆಯವರಿಂದ ಸಂಗೀತ ಕಲಿತರು. ಉಸ್ತಾದ್ ಫಯ್ಯಾಜ್ ಖಾನರ ಶಿಷ್ಯರು. ಅವರು ಸಂಗೀತಗಾರರಷ್ಟೇ ಅಲ್ಲ, ಸಂಗೀತ ಸಂಯೋಜಕರೂ ಆಗಿದ್ದರು. ಅವರ ಹಾಡಿಕೆಯನ್ನು 'ರಂಗೀಲಾ ಹಾಡುಗಾರಿಕೆ' ಎಂದು ಕರೆಯುತ್ತಾರೆ. 'ಗುಣರಂಜನಿ' ಮತ್ತು 'ಭೂಪಾವಲಿ, 'ಗಗನವಿಹಾಗ', 'ಶ್ಯಾಮ ಧವನಿ' – ಇವು ಅವರೇ ಸಂಯೋಜಿಸಿದ ರಾಗಗಳು. ಬಹಳ ವರ್ಷ ಭಾರತೀಯ ವಿದ್ಯಾಭವನದ ಸಂಗೀತ ಮತ್ತು ನೃತ್ಯ ಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಅವರು ಆಕಾಶವಾಣಿಯಲ್ಲಿ ಸಂಗೀತ ಸಂಯೊಜಕರಾಗಿ ಕೊನೆಗೆ ಮಾಹಿತಿ ಮತ್ತು ಪ್ರಸಾರ ಮಂತ್ರಾಲಯದ ಉಪ ನಿರ್ದೇಶಕರಾಗಿ ಕೂಡ ಸೇವೆ ಸಲ್ಲಿಸಿದ್ದರು.

ದಿನಕರ ಅಮ್ಮೆಂಬಳ ಇವರು ಕೂಡ ಪ್ರತಿಭಾನ್ವಿತ ಕಲಾವಿದರು. ಆಕಾಶವಾಣಿಯ 'ಅಂಕಿತರಾಗ' (signature tune) ವನ್ನು ರಚಿಸಿದವರು ಇವರೇ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ 'ಆರ್ಕೆಸ್ಟ್ರಾದ ಜನಕ' ಎಂದು ಇವರನ್ನು ಕರೆಯುತ್ತಾರೆ. ಅವರು ರಚಿಸಿದ ಆಕಾಶವಾಣಿಯ 'ವನಿತಾ ಮಂಡಳ'ದ ಸಿಗ್ನೇಚರ್ ಟ್ಯೂನ್ ಎಂಟು ದಶಕಗಳಿಂದ ಪ್ರಚಲಿತವಿದೆ. ಅವರು ಸಂಗೀತಗಾರರು, ಹಾರ್ಮೋನಿಯಮ್ ನುಡಿಸುತ್ತಿದ್ದರು ಮತ್ತು ಭಾರತೀಯ ಸಮಗ್ರ ಸಂಗೀತದ ನಿರ್ವಾಹಕರು (conductor of Indian ensemble) ಕೂಡ ಆಗಿದ್ದರು. ಅವರನ್ನು, 'ಭಾರತದ ಬೆಥೊವಿನ್'ಎಂದು ಗೌರವಿಸಿದ್ದಾರೆ. ಅವರ ಶಾಸ್ತ್ರೀಯ ಸಂಕೇತಗಳನ್ನು (classical notes) ಸಂಗೀತ ಸ್ವರಚಿಹ್ನೆಗಳಲ್ಲಿ ಅರವಿಂದ ಪಾರೇಖರು ಪರಿವರ್ತಿಸಿದರು. ಇವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಹಾಡುಗಾರರಷ್ಟೇ ಅಲ್ಲದೇ ಉತ್ತಮ ಸಿತಾರ್‌ವಾದಕರೂ ಆಗಿದ್ದಾರೆ.

ಗಜಾನನ ಕಾರ್ನಾಡರು (1923–1995) ಅತ್ಯುತ್ತಮ ಪಿಟೀಲು ವಾದಕರು. ಚಲನಚಿತ್ರ ಕ್ಷೇತ್ರದಲ್ಲಿ ಲತಾ, ಮಹಮ್ಮದ ರಫಿ, ಮನ್ನಾಡೆ, ಭೀಮಸೇನ ಜೋಶಿಯವರಿಗೆಲ್ಲ ಸಹಾಯಕರಾಗಿ 'ಸಾಥ್' ಕೊಡುತ್ತಿದ್ದರು. 'ದೋ ಆಂಖೆ ಬಾರಾ ಹಾಥ್' ಎಂಬ ವಣಕುದ್ರೆ ಶಾಂತಾರಾಮರ (ವಿ.ಶಾಂತಾರಾಮ, ಇವರು ಕರ್ನಾಟಕದವರು) ಹಿಂದಿ ಚಲನಚಿತ್ರದಲ್ಲಿಂಯ ಹಾಡುಗಳು ಇವರ ಪಿಟೀಲು ವಾದನದಿಂದಲೇ ಜನಪ್ರಿಯವಾಗಿದ್ದವು.

ಪಂ. ತಾರಾನಾಥ ರಾವ್ (1915–1910) ಇವರು ಮಂಗಳೂರಿನವರು, ಮೃದಂಗ, ಹಾರ್ಮೋನಿಯಮ್, ತಬಲಾ, ಪರ್ಕಶನ್ ಈ ವಾದ್ಯಗಳನ್ನು ಅಪ್ರತಿಮವಾಗಿ ನುಡಿಸುತ್ತಿದ್ದರು. ಬಹಳ ವರ್ಷಗಳ ಕಾಲ ಅನೇಕ ಗುರುಗಳ ಕೈಕೆಳಗೆ ಕಲಿತು ಅನುಭವಿ ಕಲಾಕಾರರಾಗಿದ್ದರು. ಆಕಾಶವಾಣಿಯಲ್ಲಿ ಅವರು ಅಧಿಕಾರದ ಸ್ಥಾನದಲ್ಲಿದ್ದರು.

ಅಲ್ಲಾ ಉದ್ದೀನಖಾನರು ಇವರಿಗೆ ಗುರುಸಮಾನರು. ಇವರು ರವಿಶಂಕರ ಮತ್ತು ಪನ್ನಾಲಾಲ್ ಘೋಷರ ಒಡನಾಡಿಯಾಗಿದ್ದರು. ಇವರ ಶಿಷ್ಯವೃಂದದಲ್ಲಿ ರವಿ ಮತ್ತು ಶಶಿ ಬೆಳ್ಳಾರೆ, ಸದಾನಂದ ನಯಂಪಳ್ಳಿ, ಓಂಕಾರ ಗುಲವಾಡಿ, (ಇವರೆಲ್ಲ ಮೂಲತಃ ಕರ್ನಾಟಕದವರು) ಶಾಂತಾ ಗೋಖಲೆ ಮತ್ತು ಅನೇಕ ವಿದೇಶಿ ಕಲಾವಿದರೂ ಒಳಗೊಂಡಿದ್ದಾರೆ.

ಭಾಸ್ಕರ್ ಚಂದಾವರಕರ್ (1936–2009) ಕೂಡ ಮೂಲತಃ ಕರ್ನಾಟಕದವರು. ರವಿಶಂಕರರ ಶಿಷ್ಯರು, ಶ್ರೇಷ್ಠ ಸಿತಾರ್‌ವಾದಕರು, ಚಲನಚಿತ್ರ, ನಾಟ್ಯ-ರಂಗದಲ್ಲಿ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಬಹಳ ಹೆಸರನ್ನು ಗಳಿಸಿದ್ದರು. ಇವರು ತಮ್ಮ ಸಮಕಾಲೀನ ಚಲನಚಿತ್ರ ನಿರ್ಮಾಪಕರಾದ ಮೃಣಾಲ್ ಸೇನ್, ಗಿರೀಶ್ ಕಾರ್ನಾಡ್, ಅಪರ್ಣಾ ಸೇನ್, ಮೊದಲಾದವರ ಚಿತ್ರಗಳಿಗೆ ಸಂಗೀತ ಕೊಟ್ಟಿದ್ದರು ಮತ್ತು ಮರಾಠಿ, ಹಿಂದಿ, ಕನ್ನಡ, ಮಲಯಾಳಮ್, ಬಂಗಾಲಿ, ಒರಿಯಾ ಇತ್ಯಾದಿ ಇನ್ನೂ ಅನೇಕ ಭಾಷೆಗಳಲ್ಲಿಯ ಚಲನಚಿತ್ರಗಳಿಗೆ ಭಾರತೀಯ ಮತ್ತು ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದ ಮಿಶ್ರಣಗಳನ್ನೂ ಸಂಯೋಜಿಸಿದ್ದರು. ಇವರು ಸುಮಾರು ನಲವತ್ತು ಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಫಿಲ್ಮ್ ಅಂಡ್ ಟೆಲಿವಿಜನ್ ಇನ್ಸಿಟ್ಯೂಟಿನಲ್ಲಿ ಕೂಡ ಬಹಳ ವರ್ಷ ಸೇವೆ ಸಲ್ಲಿಸಿದ್ದಾರೆ. ಅವರು ಸಂಗೀತ ಸಂಯೋಜನೆ ಮಾಡಿದ 'ವಂಶವೃಕ್ಷ'(1971), 'ಒಂದಾನೊಂದು ಕಾಲದಲ್ಲಿ'(1979), ಹಾಗೂ ಮರಾಠಿ ಚಿತ್ರ, 'ಶ್ವಾಸ' (2004) ಕನ್ನಡ ಚಿತ್ರಗಳಿಗೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ದೊರೆತಿವೆ. ವಿಜಯ್ ತೆಂಡೂಲ್ಕರ್ ಅವರು ಬರೆದ 'ಘಾಶಿರಾಮ ಕೊತವಾಲ್', ಪು.ಲ. ದೇಶಪಾಂಡೆಯವರ 'ತೀನ ಪೈಶಾಂಚಾ ತಮಾಶಾ' ಮರಾಠಿ ನಾಟಕಗಳಿಗೂ ಸಂಗೀತ ಕೊಟ್ಟಿದ್ದಾರೆ. 1980ರಲ್ಲಿ ಅವರಿಗೆ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ದೊರಕಿತು ಮತ್ತು 2002ರಲ್ಲಿ 'ಚೈತ್ರ' ಎಂಬ ಮರಾಠಿ ಚಲನಚಿತ್ರಕ್ಕೆ 'ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ' ದೊರಕಿತ್ತು.

* ರಮಾವಲ್ಲಭ ದಾಸ ಮತ್ತು ರಾಘವದಾಸರು ಸೊಲ್ಲಾಪುರ, ಗಾಣಗಾಪುರ ಮತ್ತು ಪಂಢರಪುರ ಪಾದಯಾತ್ರೆ ಮಾಡುತ್ತ ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ 'ಶಿರಾಲಿ'ಯಲ್ಲಿ ಬಂದಿಳಿದರು. ಅವರು ಭಾಗವತದ ಗದ್ಯದಲ್ಲಿದ್ದ 12ಸ್ಕಂದಗಳನ್ನು ಪದ್ಯ ರೂಪದಲ್ಲಿ ರಚಿಸಿದರು. ಅವರ ಇಬ್ಬರ ಸಮಾಧಿಗಳು ಶಿರಾಲಿ ಮಠದ ಆವರಣದಲ್ಲಿವೆ. ಈ ಪದ್ಯಗಳನ್ನು 'ಮ್ಹಣತಿ' ಎನ್ನುತ್ತಾರೆ. ಕೃಷ್ಣನ ದೇವಸ್ಥಾನಗಳಲ್ಲಿ, ವಿಠೋಬನ ದೇವುಳಗಳಲ್ಲಿ ಇವುಗಳನ್ನು ಗೋಕುಲಾಷ್ಟಮಿಯ ಹೊತ್ತಿಗೆ ಹಾಡುವ ರೂಢಿ ಇದೆ. ಮರಾಠಿಯಲ್ಲಿ ಬರೆದ ಈ ಪದಗಳನ್ನು ಪಾರಂಪಾರಿಕ ರಾಗದಲ್ಲಿ ಹಾಡುತ್ತಾರೆ. 'ಗೋಂಧಳ ಮ್ಹಣತಿ', ದೀವಟಿಗೆ ಪ್ರಜ್ವಲಿಸಿ ಹಾಡುವ ಮ್ಹಣತಿ, ಕೃಷ್ಣ, ಬಲರಾಮರ ಮೂರ್ತಿಗಳನ್ನು ಪೂಜಿಸಿ ಉಯ್ಯಾಲೆಯಲ್ಲಿ ತೂಗುತ್ತ 'ಝೋಲಾರಾ ಮ್ಹಣತಿ' ಯನ್ನು ಹಾಡುತ್ತಾರೆ. ಈ ರೂಢಿ ಅನೇಕ ಸಾರಸ್ವತ ಕೃಷ್ಣನ ಗುಡಿಗಳಲ್ಲಿ ಮತ್ತು ಮಠಗಳಲ್ಲಿ ಇನ್ನೂ ತನಕ ಮುಂದುವರೆದಿದೆ.

*****

ಪರಿಶಿಷ್ಟ – 3

ಹಿಂದೂಸ್ಥಾನಿ ಸಂಗೀತ ನಡೆದು ಬಂದ ದಾರಿ

1	ಸಹರನಪುರ್ (ಕಿರಾನಾ ಘರಾಣೆಯ ಉಗಮ)	ಉ.ಪ್ರ
2	ಕೈರಾನಾ	ಉ ಪ್ರ
3	ರಾಮಪುರ್	ಉ.ಪ್ರ
4	ಸಿಕಂದರಪುರ್	ಹರ್ಯಾಣಾ
5	ಬರೋಡಾ	ಗುಜ್
6	ನವಾನಗರ	ಗುಜ್
7	ರಾಜಕೋಟ್	ಗುಜ್
8	ಮುಂಬಯಿ (ಭೆಂಡಿ ಬಜಾರ್ ಘರಾಣೆ)	ಮಹಾ
9	ಪುಣೆ	ಮಹಾ
10	ಸಾತಾರಾ	ಮಹಾ
11	ಮಿರಜ್	ಮಹಾ
12	ಸಾಂಗ್ಲಿ	ಮಹಾ
13	ಕೊಲ್ಹಾಪುರ್	ಮಹಾ
14	ಬೆಳಗಾಂ/	ಕ
15	ಸುಳೆಭಾವಿ	ಕ
16	ಧಾರವಾಡ್	ಕ
17	ಗದಗ	ಕ
18	ಕುಂದಗೋಳ್	ಕ
19	ಮನ್ಸೂರ್	ಕ
20	ಸಾವಂತವಾಡಿ	ಮಹಾರಾಷ್ಟ್ರ
21	ಮಾರ್ದೋಶ	ಗೋವಾ
22	ಕುರ್ಡಿ	ಗೋವಾ
23	ಜಾಂಬೋಲಿ	ಗೋವಾ
24	ಕಾರವಾರ್	ಕ
25	ಕುಮಟಾ	ಕ
26	ಗೋಕರ್ಣ	ಕ
27	ಶಿರಾಲಿ/ಭಟಕಲ್	ಕ
28	ಮಂಗಳೂರು	ಕ
29	ಬೆಂಗಳೂರು	ಕ
30	ಮೈಸೂರು	ಕ
31	ಹೈದ್ರಾಬಾದ್	ಆಂಧ್ರ
32	ಕಸೂರ್ (ಕಸೂರ್-ಪಟಿಯಾಲಾ ಘರಾಣೆಯ ಉಗಮ)	ಪಾಕ್
33	ಜಲಂಧರ್	ಪಂ
34	ಪಟಿಯಾಲಾ	ಪಂ ಕಸೂರ್-ಪಟಿಯಾಲಾ ಘರಾಣೆಯ ಉಗಮ)
35	ಜಯಪುರ್ (ಜಯಪುರ್-ಅತ್ರೌಲಿ ಘರಾಣೆಯ ಉಗಮ)	ರಾಜ್
36	ಆಗ್ರಾ (ಆಗ್ರಾ ಘರಾಣೆಯ ಉಗಮ)	ಉ.ಪ್ರ
37	ಲಖನೌ	ಉ.ಪ್ರ
38	ಬನಾರಸ್	ಉ.ಪ್ರ
39	ಗ್ವಾಲಿಯರ್ (ಗ್ವಾಲಿಯರ್ ಘರಾಣೆಯ ಉಗಮ)	ಮ.ಪ್ರ
40	ದೇವಾಸ್	ಮ.ಪ್ರ
41	ಇಂದೋರ್	ಮ.ಪ್ರ
42	ರೇವಾ	ಮ.ಪ್ರ
43	ಸತನಾ	ಮ.ಪ್ರ
44	ಮೈಹರ್ (ಮೈಹರ್ ಘರಾಣೆಯ ಉಗಮ)	ಮ.ಪ್ರ

ಪರಿಶಿಷ್ಟ–4

ಲೇಖಕರ ಪರಿಚಯ

1. ಡಾ. ಎಸ್.ಎಲ್ ಭೈರಪ್ಪ– (1934) ವಿಶ್ವವಿಖ್ಯಾತ ಕಾದಂಬರಿಕಾರರು.ಹಿಂದುಸ್ಥಾನಿ ಸಂಗೀತದಲ್ಲಿ ಅಭಿರುಚಿ ಇಟ್ಟುಕೊಂಡವರು. ಅವರ 'ಮಂದ್ರ' ಕಾದಂಬರಿಯ ಜಿವಾಳ ಸಂಗೀತವೇ. ವಿಳಾಸ:1007,ತೊಣಟಿಕೊಪ್ಪಲು ಬಡಾವಣೆ, ಮೈಸೂರು–570009

2. ಡಾ.ರಹಮತ್ ತರಿಕೆರೆ–(1959)ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರು, ಸಾಹಿತಿಗಳು, ವಿಮರ್ಶಕರು. ವಿಳಾಸ: 'ಸೂಫಿ', ಎಮ್.ಪಿ ಪ್ರಕಾಶನಗರ, ಹೊಸಪೇಟೆ–58320

3. ಡಾ. ವ್ಯಾಸರಾವ್ ನಿಂಜೂರ್– (1940) ಭಾಭಾ ಪರಮಾಣು ಸಂಶೋಧನಾ ಕೇಂದ್ರ(ಬಿಎಆರ್‌ಸಿ)ದ ನಿವೃತ್ತ ವಿಜ್ಞಾನಿಗಳು. ಕರ್ನಾಟಕ ಸಂಘದ ಪದಾಧಿಕಾರಿಗಳು, ಗೋಕುಲವಾಣಿಯ ಸಂಪಾದಕರು ವಿಳಾಸ: 22, ಸಂಧ್ಯೋದಯ, ಉದಯಗಿರಿ ಕೊ–ಆಪರೇಟಿವ್ ಸೊಸೈಟಿ , ದೇವನಾರ್, ಮುಂಬಯಿ–88

4. ವೆಂಕಟರಾಜ ರಾವ್– ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಅಭಿರುಚಿ ಇರುವವರು. ಸಾಹಿತಿಗಳು. ವಿಳಾಸ: 401,ಆಶಿಯಾನಾ–21, ಸೇಂಟ್ ಪಾಲ್ ರಸ್ತೆ, ಬಾಂದ್ರಾ (ಪ) ಮುಂಬಯಿ 400050

5. ಕೆ. ಚಂದ್ರಮೌಳಿ– ಇಂಗ್ಲಿಶ್ ಮತ್ತು ಕನ್ನಡ ಬರಹಗಾರರು.ಅವರ "Luminous Kashi to Vibrant Banaras" ಅವರ ಪ್ರಸಿದ್ಧ ಕೃತಿ. ವಿಳಾಸ: 16–ಒವಿಎಚ್ ರಸ್ತೆ, ಬಸವನಗುಡಿ, ಬೆಂಗಳೂರು 560004

6. ಡಾ. ಸುರೇಶ ಚಾಂದವಣಕರ್–(1950) ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಸೇವೆ ಸಲ್ಲಿಸಿದ ವಿಜ್ಞಾನಿಗಳು. ಸಂಗೀತಾಸಕ್ತರು; ಗ್ರಾಮೊಫೋನ್ ರೆಕಾರ್ಡುಗಳ ಸಂಗ್ರಹಣೆಯಲ್ಲಿ ಅತ್ಯಾಸಕ್ತಿ ಇರುವವರು. ವಿಳಾಸ: 97,ಮನೆ ನಂ–201, ಮಾನ್ಯತಾ ಕೊ– ಆಪರೇಟಿವ್ ಸೊಸೈಟಿ, ಟಿಲಕನಗರ, ಚೆಂಬೂರ್ (ಪ) ಮುಂಬಯಿ 89

7. ವಿಠಲ್. ಸಿ ನಾಡಕರ್ಣಿ –ಟೈಮ್ಸ್ ಆಫ್ ಇಂಡಿಯಾ ಮತ್ತು ಇಕೊನೊಮಿಕ್ ಟೈಮ್ಸ್‌ನಲ್ಲಿ ಹಿರಿಯ ಸಲಹಾಗಾರರು, ಕಲೆ ಮತ್ತು ವಿಜ್ಞಾನ ಬರವಣಿಗೆಯಲ್ಲಿ ಅಂಕಣಕಾರರು ವಿಳಾಸ: ಟೈಮ್ಸ್ ಆಫ್ ಇಂಡಿಯಾ, ಮುಂಬಯಿ

8. ವಿಲಾಸ ಗೋಡಬೋಲೆ–(1943) ಮುಂಬಯಿ ನಿವಾಸಿ. ಕ್ರಿಕೆಟ್‌ಪಟು, ಸಂಗೀತ ಪ್ರೇಮಿ, ಮರಾಠಿ ಮತ್ತು ಇಂಗ್ಲಿಶ್ ಕೃತಿಗಳನ್ನು ಬರೆದವರು. ವಿಳಾಸ:

9. ಡಾ. ಸುನೀತಾ ಶೆಟ್ಟಿ– (1932) ನಿವೃತ್ತ ಕನ್ನಡ ಪ್ರಾಧ್ಯಾಪಕಿ ಮುಂಬಯಿ. ಖ್ಯಾತ ತುಳು ಮತ್ತು ಕನ್ನಡ ಸಾಹಿತಿ. ಅತ್ತಿಮಬ್ಬೆ ಪ್ರಶಸ್ತಿ ವಿಜೇತೆ. ವಿಳಾಸ: ಬಿ–28, ಸರ್ವೋದಯ ಸೊಸೈಟಿ, ಶಿವ–ಸೃಷ್ಟಿ, ಕುರ್ಲಾ (ಪೂ) ಮುಂಬಯಿ–400024.

10. ಸುಮೇಧಾ ರಾಯಕರ್ ಮ್ಹಾತ್ರೆ –ಮುಂಬಯಿಯ ಮಿಡ್ಡೆ ಮತ್ತು ಮುಂಬಯಿ ಮಿರರ್‌ದ ಸಾಂಸ್ಕೃತಿಕ ಅಂಕಣಕಾರರು, ಹಿರಿಯ ಪತ್ರಕರ್ತೆ ವಿಳಾಸ: ಮುಂಬಯಿ ಟೈಮ್ಸ್ ಆಫ್ ಇಂಡಿಯಾ.

11. ಶ್ರೀನಿವಾಸ ಜೋಕಟ್ಟೆ– ತುಳು ಮತ್ತು ಕನ್ನಡ ಸಾಹಿತಿ, ಕರ್ನಾಟಕ ಸಂಘದ ಮುಖವಾಹಿನಿ, 'ಸ್ನೇಹ ಸಂಬಂಧ'ದ ಸಂಪಾದಕರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು (2015) ವಿಳಾಸ: ಸಂಪಾದಕರು– ಸ್ನೇಹ ಸಂಬಂಧ, ಕರ್ನಾಟಕ ಸಂಘ, ಮುಂಬಯಿ 400016

12. ಆನಂದ ಪಿಳಗಾಂವಕರ್– ಉತ್ತಮ ಗಾಯಕರು ಮತ್ತು ಮರಾಠಿ ರಂಗನಟರು, ಪ್ರಕಾಶರ ಸನ್ಮಿತ್ರರು. ವಿಳಾಸ: ತಾಡದೇವ್, ಮುಂಬಯಿ

13. ಡಾ. ಬಿ. ಎ ಸನದಿ – (1933) ಪಂಪ ಪ್ರಶಸ್ತಿ ಪಡೆದ ಖ್ಯಾತ ಕನ್ನಡ ಸಾಹಿತಿ. ಆಕಾಶವಾಣಿಯ ಅಧಿಕಾರಿಗಳಾಗಿ ನಿವೃತ್ತ. ವಿಳಾಸ: ಹೆರವಟ್ಟಾ, ಕುಮಟಾ ಉತ್ತರಕನ್ನಡ, 581341

14. ಡಾ. ಸುಷಮಾ ಆರೂರ್–(1953) ಮಾಜಿ ಉಪನ್ಯಾಸಕಿ, ಪ್ರಕಾಶರ ಸಹೋದರಿ. ವಿಳಾಸ: 303, ಹೆರಿಟೇಜ್ ರಾಯಲ್, ಇಂಟರನ್ಯಾಶನಲ್ ಸೆಂಟರ್ ಪಕ್ಕ, ಲಾ ಒಶಿಯಾನಾ, ಫೇಜ್ 2, ಡೊನಾಪಾವ್ಲಾ, ಗೋವಾ–403004

Concert

Music Forum - Media Award 2005

Shri Prakash Ganesh Burde

The Music Forum on behalf of
International Foundation
for Fine Arts is pleased
to honour you for your
life-long and dedicated services
to Indian Classical Music,
in appreciation of which
we have the privilege of
presenting you this citation

Arvind Parikh
Convenor

January 13, 2006

ಕರ್ನಾಟಕ ಸಂಘ, ಮುಂಬಯಿ ಇದರ ನೂತನ ಅಧ್ಯಕ್ಷರಾಗಿ ಶ್ರೀ ಪ್ರಕಾಶ್ ಜಿ. ಬುರ್ಡೆ ಆಯ್ಕೆ

ಕರ್ನಾಟಕ ಸಂಘ,ಮುಂಬಯಿ ಇದರ 79ನೇ ವಾರ್ಷಿಕ ಮಹಾಸಭೆಯು ಸಮರಸ ಭವನದಲ್ಲಿ ಡಾ. ಜಿ.ಡಿ. ಜೋಶಿ ಅವರ ಅಧ್ಯಕ್ಷತೆಯಲ್ಲಿ ಜೂನ್ 30ರಂದು ಜರಗಿತು. ಈ ಸಂದರ್ಭದಲ್ಲಿ ನಿರ್ಗಮನ ಅಧ್ಯಕ್ಷ ಡಾ. ಜಿ.ಡಿ. ಜೋಶಿಯವರು ನೂತನ ಅಧ್ಯಕ್ಷ ಶ್ರೀ ಪ್ರಕಾಶ್ ಜಿ. ಬುರ್ಡೆಯವರಿಗೆ ಹೂ ಗುಚ್ಛ ನೀಡಿ ಗೌರವಿಸಿ ಸ್ವಾಗತಿಸಿದರು.

ಮಾಟುಂಗ: ಕನಕಾಂಗಿ ಕಲ್ಯಾಣ ಯಕ್ಷಗಾನ ಪ್ರದರ್ಶನ

ಮಹಮ್ಮದ್ ಗೌಸ್ ಅವರನ್ನು ಸಮ್ಮಾನಿಸಲಾಯಿತು.

ಮಹಾರಾಷ್ಟ್ರ ಸರಕಾರದ ಸಂಸ್ಕೃತಿ ಇಲಾಖೆಯಿಂದ ಅನುದಾನ ವಿತರಣೆ ಸಮಾರಂಭ
ಮಹಾರಾಷ್ಟ್ರದ ಸಾಂಸ್ಕೃತಿಕ ಚಳುವಳಿಗೆ ಪರಂಪರೆ ಇದೆ : ಸಂಜಯ್ ದೇವಸ್ಥಳೆ

ಬೇಗಂ ಅಖ್ತರ್

ಶೋಭ ಗುರ್ಟು

ಗಿರಿಜಾದೇವಿ

ಪ್ರಗತಿಯ ಹಾದಿಯಲ್ಲಿ

1. ಮಲೆಯ ಸಂತ	– ಬಿಳುಮನೆ ರಾಮದಾಸ್	2006	ರೂ. 180
2. ದೇವರುಗಳ ರಾಜ್ಯದಲ್ಲಿ	– ಬೊಳುವಾರು ಮಹಮದ್ ಕುಂಞ	2006	ರೂ. 80
3. ನಾತಿಚರಾಮಿ	– ಎಂ.ಎ. ಇಂದಿರ	2006	ರೂ. 45
4. ಭಾವ ಬಂಧನ	– ಎಂ.ಎ. ಇಂದಿರ	2006	ರೂ. 50
5. ಸುಪ್ತ ಸಾಗರ	– ಎಂ.ಎ. ಇಂದಿರ	2006	ರೂ. 70
6. ತಮ್ಮ ತೊಟ್ಟಿಲುಗಳ ತಾವೇ ಜೀಕಿ...	– ಎನ್.ಸಿ. ಮಹೇಶ್	2006	ರೂ. 80
7. ಒಂದು ಕೈಫಿಯತ್	–ಚಂದ್ರಕಾಂತ ಕುಸನೂರ	2007	ರೂ. 075
8. ಬೇಲಿಮ್ಯಾಲಿನ ಹೂವು	–ಡಾ. ನಿಜಲಿಂಗಪ್ಪ ಮಟ್ಟಿಹಾಳ	2007	ರೂ. 80
9. ತಲ್ಲಣದ ಆ ಕ್ಷಣ	– ಕಂನಾಡಿಗಾ ನಾರಾಯಣ	2007	ರೂ. 60
10. ಕಾಲನೌಕೆ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 50
11. ಬೆನ್‌ಹರ್	– ಡಾ. ಕೆ. ಪುಟ್ಟಸ್ವಾಮಿ	2007	ರೂ. 60
12. ಮಾತಾಹರಿ	– ಡಾ. ಜೆ. ಬಾಲಕೃಷ್ಣ	2007	ರೂ. 25
13. ಪುಟ್ಟರಾಜಕುಮಾರ	– ಡಾ. ಜೆ. ಬಾಲಕೃಷ್ಣ	2007	ರೂ. 40
14. ಬೊಕಾಷಿಯೋನ ರಸಿಕತೆಗಳು	– ಡಾ. ಜೆ. ಬಾಲಕೃಷ್ಣ	2007	ರೂ. 45
15. ಮಾಯಾ ಮನುಷ್ಯ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 90
16. ಭೂ ಮಧ್ಯಕ್ಕೆ ಒಂದು ಪಯಣ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 80
17. Sociology for pre law students	- Adinarayanappa	2007	Rs.125
18. ಕುವೆಂಪು ಸಾಹಿತ್ಯ ದರ್ಶನ	– ಡಿ.ಎಸ್. ನಾಗಭೂಷಣ	2007	ರೂ. 50
19. ಇಳೆಯ ಬೆಳಗು	– ಪ್ರೊ. ಬಿ.ಎ. ಶ್ರೀಧರ	2007	ರೂ. 175
20. ಪಲ್ಲಟ ಪರ್ವ	– ಪ್ರೊ. ಬಿ.ಎ. ಶ್ರೀಧರ	2007	ರೂ. 200
21. ಗೀತಾಂಜಲಿ	– ನವೀನ್ ಹಳೆಮನೆ	2007	ರೂ. 100
22. ಸಾಹಿತ್ಯ ಸಂಭ್ರಮ	– ಸಂ. ಎಂ. ಬೈರೇಗೌಡ	2007	ರೂ. 100
23. ಬಹುಜನ ಚಿಂತನ	– ಡಾ. ಕುಂಸಿ ಉಮೇಶ್	2007	ರೂ. 60
25. ತರುಣಿ ಮಾ (ಹಿಂದಿ)	– ಪಿಂಟು ನಂಗಾವತ್	2008	ರೂ. 40
26. ದೇವರುಗಳ ರಾಜ್ಯದಲ್ಲಿ	– ಬೊಳುವಾರು ಮ. ಕುಂಞ	2008	ರೂ. 80
27. ಉತ್ಪಾತ	– ಡಾ. ಲಕ್ಷ್ಮಣಕೌಂಟೆ	2008	ರೂ. 110

28. ಕಣ್ಣ ಕಣಿವೆ	– ರೇಣುಕಾ ನಿಡಗುಂದಿ	2008	ರೂ. 50
29. 80 ದಿನಗಳಲ್ಲಿ ಭೂ ಪ್ರದಕ್ಷಿಣೆ	– ಡಾ. ಕೆ. ಪುಟ್ಟಸ್ವಾಮಿ	2008	ರೂ. 120
30. ಮಾಳಸುತ್ತಿನ ಮೂಲಿಕೆ ವೈದ್ಯ	– ಡಾ. ಸ.ನಾ.ಭಟ್	2008	ರೂ. 125
31. ಕನ್ನಡ ಸಾಹಿತ್ಯ–ಸಂಸ್ಕೃತಿ:....	– ಡಾ. ಡೊಮಿನಿಕ್	2008	ರೂ. 150
32. ಡೊಂಕು ಬಾಲದ ನಾಯಕರು	– ಡಾ.ಎಲ್. ಬಸವರಾಜು	2008	ರೂ. 100
33. ಯುಗ ಪುರುಷ	– ಡಾ. ಲಕ್ಷ್ಮಣ ಕೌಂಟೆ	2008	ರೂ. 250
34. ಹಿಂದಣ ಹೆಜ್ಜೆಯನರಿಯದೆ	– ಡಾ. ಕುಮಾರ ಚಲ್ಯ	2008	ರೂ.250
35. ನಾನು ಅವನಲ್ಲ... ಅವಳು...	– ಕನ್ನಡಕ್ಕೆ: ಡಾ. ತಮಿಳ್ ಸೆಲ್ವಿ	2008	ರೂ. 150
36. ಹುಚ್ಚು ದಾಳಿಂಬೆ ಗಿಡ	–ಡಾ. ವಿಜಯಾ ಗುತ್ತಲಾ, ಡಾ. ವಿ.ವಿಸಾಜಿ	2008	ರೂ. 70
37. ಪದ್ಯದ ಮರ	– ಕೃಷ್ಣಮೂರ್ತಿ ಬಿಳಿಗೆರೆ	2008	ರೂ. 75
38. ಜೋಳಿಗೆಯಲ್ಲೊಂದು ಅಗುಳು	– ಕೃಷ್ಣ ರಾಯಚೂರ್	2008	ರೂ. 80
39. ನದಿಯ ತೀರದ ನಡಿಗೆ	– ಡಾ. ರಂಗನಾಥ ಕಂಟನಕುಂಟೆ	2008	ರೂ. 50
40. ಅಸ್ತಿತ್ವ	– ಎಚ್.ಆರ್. ಶಿವಕುಮಾರ್	2008	ರೂ. 045
41. ಯಕ್ಷರಂಗ	– ರವಿ ರಾ. ಅಂಚನ್	2009	ರೂ. 80
42. ಅರಿವೆಂಬ ಮಾಯೆ	– ರವಿ ರಾ. ಅಂಚನ್	2009	ರೂ. 150
43. ಮಳೆ ಕೋಗಿಲೆ	(ಸಂ)–ಡಾ.ಎಂ. ಬೈರೇಗೌಡ	2009	ರೂ. 150
44. ಮಲೆಯ ಪ್ರಬಂಧಗಳು	–ಬಿಳುಮನೆ ರಾಮದಾಸ್	2009	ರೂ. 100
45. ನೀರದೀವಿಗೆ	– ಡಾ. ಕೆ.ವೈ. ನಾರಾಯಣಸ್ವಾಮಿ	2009	ರೂ. 150
46. ಮಹಿಳೆ: ಅಸ್ತಿತ್ವದ ಸಂಕಥನ	– ಡಾ. ಕವಿತಾ ರೈ	2009	ರೂ. 250
47. ಶಿಷ್ಯಗಾಥೆ	– ಶ್ರೀಧರ ಕೋಟೆಕಾರ್	2009	ರೂ. 200
48. The Ballad of Sikhs	- Sridhar Kotekar	2009	Rs.250
49. ರಾಗೌ ಕಾವ್ಯ ವಿಮರ್ಶೆ	– ಸಂ. ಡಾ. ಬೆಳ್ಳೂರು ವೆಂಕಟಪ್ಪ	2009	ರೂ. 100
50. ಕವನ ಕೂಡಲಸಂಗಮ	– ಡಾ. ಎಲ್. ಬಸವರಾಜು	2009	ರೂ. 350
51. ಬೆಳಕು–ಬೆರಗು	– ಪ್ರೊ. ಲಿಂಗದೇವರು ಹಳೆಮನೆ	2009	ರೂ. 100
52. ಯಮನ ಕೋಣವು...	– ಪ್ರೊ. ಎಸ್. ತಮ್ಮಾಜಿರಾವ್ ನಂಗ್ಲಿ	2009	ರೂ. 100
53. ಡಾರ್ವಿನ್ ಕಂಡ ಗಲಪಗಾಸ್ ದ್ವೀಪ	– ಟಿ.ಆರ್. ಅನಂತರಾಮು	2009	ರೂ. 40
54. ಭಕ್ತಿಪಂಥದಲ್ಲಿ ಸ.ಕಾ. ಬೇರುಗಳು,	– ಡಾ. ಎಚ್.ಎಂ. ಮರುಳಸಿದ್ಧಯ್ಯ	2009	ರೂ. 125
55. ದೂರದರ್ಶಕ ಕಂಡ ವಿಶ್ವರೂಪ	– ಟಿ.ಆರ್. ಅನಂತರಾಮು	2009	ರೂ. 150
56. ಪ್ರಕ್ಷುಬ್ಧ ಕಣಿವೆ	– ನ. ರಮೇಶ್, ವಿ.ಎಸ್. ಶ್ರೀಧರ	2009	ರೂ. 150
57. ಪೂರ್ವ ಪಶ್ಚಿಮ ಅಪೂರ್ವರು	– ಪುಸ್ತಕಮನೆ ಹರಿಹರಪ್ರಿಯ	2009	ರೂ. 150
58. ದೊಡ್ಡವರೆಲ್ಲ ಜಾಣರಲ್ಲಾ...!	–ಸ್ನೇಹಪ್ರಿಯ ನಾಗರಾಜ್	2009	ರೂ. 125
59. ಬಾಧೆಯ ವೃಕ್ಷದಲ್ಲಿ ಬೋಧಿಯ ಪರಿಮಳ	–ಜಂಬಣ್ಣ ಅಮರಚಿಂತ	2009	ರೂ. 100

60. ಟ್ರ್ಯಾಕುಗಳ ಮೇಲೆ ಹುಣ್ಣಿಮೆ -ಬಿ.ಎನ್. ಮಲ್ಲೇಶ್ 2009 ರೂ. 45
61. ಬ್ರೇಕಿಂಗ್ ನ್ಯೂಸ್ -ಬಿ.ಎನ್. ಮಲ್ಲೇಶ್ 2009 ರೂ. 200
62. ಪಳಯನ್ನರು ಮತ್ತು ದ್ರೌಪದಿ -ವೇಣುಗೋಪಾಲ 2010 ರೂ. 150
63. ಅಲ್ಲಮನು ಮೈಮೇಲೆ ಬಂದಾಗ... – ಡಾ. ಎಲ್. ಬಸವರಾಜು 2010 ರೂ. 150
64. Mevaric Forester - H.A. Purushothama Rao 2010 ರೂ. 150
65. ಮಕ್ಕಳ ಆರೋಗ್ಯ -ಡಾ. ಪಿ.ಎಸ್. ಶಂಕರ್ 2010 ರೂ. 250
66. ಆರೋಗ್ಯ ಪಥದಲ್ಲಿ ಮುನ್ನಡೆ -ಡಾ. ಪಿ.ಎಸ್. ಶಂಕರ್ 2010 ರೂ. 100
67. ಚಿತ್ರಗುಪ್ತ ಚಂಪೂ – ಡಾ. ಎಲ್. ಬಸವರಾಜು 2010 ರೂ. 100
68. ಪಾಶ್ಚಾತ್ಯ ಚಿಂತಕರ ದೃಷ್ಟಿಯಲ್ಲಿ ಭಾ. ಸಮಾಜ–ಡಾ. ಎಚ್.ಎಂ.ಎಂ.2010 ರೂ. 100
69. Objective Plant Nemotology -B. Manjunath 2010 Rs. 150
70. ಚರಿತ್ರೆಯ ಐಸಿರಿ -ಡಾ. ಕೆ. ಸಾವಿತ್ರಿ 2010 ರೂ. 150
71. ಅನಾವರಣ -ಬಿಳುಮನೆ ರಾಮದಾಸ್ 2010 ರೂ. 225
72. ದಿಗ್ಭ್ರಾಂತ ಸಮಾಜಕ್ಕೆ .... ಸಂ.1 – ಎಚ್.ಎಂ.ಎಂ. 2010 ರೂ. 450
73. ದಿಗ್ಭ್ರಾಂತ ಸಮಾಜಕ್ಕೆ .... ಸಂ.2 – ಎಚ್.ಎಂ.ಎಂ. 2010 ರೂ. 450
74. Tv Tolls for Teens -Dr. Rnld. Anil Fernandiz 2010 Rs.. 250
75. ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ–ಡಾ. ಆರ್. ಚಲಪತಿ 2010 ರೂ. 150
76. Computer Aplication in Business -Suresh Palimat 2010 Rs. 150
77. Computer Business Aplication -Suresh Palimat 2010 Rs. 150
78. ಕಥಾಕಥನ – ಡಾ. ಎಲ್. ಹನುಮಂತಯ್ಯ 2010 ರೂ. 125
79. ಲೋಹಿಯಾವಾದಿ ಡಾ.ಎಂ.ನಾಗಪ್ಪ –ಡಾ. ಎನ್.ಡಿ. ತಿಪ್ಪೇಸ್ವಾಮಿ 2010 ರೂ. 300
80. ಮಣ್ಣ ಬಳೆನಾದ –ಡಾ. ಸಿ.ಎಸ್. ದ್ವಾರಕಾನಾಥ್ 2010 ರೂ. 150
81. ಹೆಣ್ಣುತನ ಎಂಬ ಕಣ್ಕಟ್ಟು – ಎಚ್.ಎಸ್. ಶ್ರೀಮತಿ 2010 ರೂ. 300
82. ಜಾಹೀರಾತುಗಳಲ್ಲಿ ಮಹಿಳಾ ಪ್ರಾತಿನಿಧೀಕರಣ–ಡಾ. ಕಲಾವತಿ ಬಿ.ಜಿ2010 ರೂ. 250
83. ಹೆಣ್ಣುಬರೆಹದ ಒಳಬಂಡಾಯ –ಎಚ್.ಎಸ್. ಶ್ರೀಮತಿ 2010 ರೂ. 125
84. Maverick Forester -Vijayaraghavan 2010 Rs. 150
85. ಬ್ಲಾಗಿಲನು ತೆರೆದು – ಬಿ.ಎ. ವಿವೇಕ ರೈ 2011 ರೂ. 80
86. ತುಳಿಯುವ ಕಾಲಿಗೆ ಬಿದ್ದೀರ –ಡಾ. ಎಲ್. ಬಸವರಾಜು 2011 ರೂ. 50
87. ಅಳಿದುಳಿದವರು –ಬೋಲ ಚಿತ್ತರಂಜನದಾಸ್ ಶೆಟ್ಟಿ 2011 ರೂ. 250
88. ಸಂಸ್ಕೃತಿ ವಿನ್ಯಾಸ – ಪ್ರೊ. ಶಿವರಾಮಯ್ಯ 2011 ರೂ. 200
89. ಕಾಮರಸಾಯನ –ರಾಹು 2011 ರೂ. 450
90. SOUTH INDIA: An Expedition....- Dr. Srinivasa Havanur 2011 Rs. 550
91. ಕ್ಲಿಕ್ [ಅ]ಸ್ಥಿರ ಚಿತ್ರಗಳು –ಡಿ.ಜಿ. ಮಲ್ಲಿಕಾರ್ಜುನ 2011 ರೂ. 450

92. ಸಮಾಜಕಾರ್ಯದ ಕಣಸುಗಾರ ಎಚ್.ಎಂ.ಎಂ. 2011 ರೂ. 125

93. ಹಂಪೆಯ ಹರಿಹರ ಕಂಡರಿಸಿದ ಭಕ್ತಿ–ಜ್ಞಾನ–ವೈರಾಗ್ಯದ
ನುಡಿ ಶಿಲ್ಪಗಳು –ಡಾ. ಎಲ್. ಬಸವರಾಜು 2011 ರೂ. 30

94. ಒಂದು ಬುಡಕಟ್ಟಿನ ಲೋಕದೃಷ್ಟಿ –ಹಿ.ಚಿ. ಬೋರಲಿಂಗಯ್ಯ 2011 ರೂ. 150

95. ಗೋಡೆಯ ಚಿತ್ರ –ಡಾ. ರಂಗನಾಥ ಕಂಟನಕುಂಟೆ 2011 ರೂ. 120

96. Infact... SHE -Dr. Kavitha K 2011 Rs. 300

97. ಕನ್ನಡ ಆಡು ನುಡಿಯ ಸೊಲ್ಲರಿಮೆ:1 ಕೆ.ವಿ. ನಾರಾಯಣ 2011 ರೂ. 50

98. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ–1 ಡಾ. ಎಚ್.ಎಸ್. ಶ್ರೀಮತಿ 2011 ರೂ. 300

100. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ–2 ಡಾ. ಎಚ್.ಎಸ್. ಶ್ರೀಮತಿ 2011 ರೂ. 250

101. ಪ್ರಾಚೀನ ಭಾರತದ ಚರಿತ್ರೆ –ಡಾ. ಎಚ್.ಎಸ್. ಶ್ರೀಮತಿ 2012 ರೂ. 150

102. ಆಧುನಿಕ ಭಾರತದಲ್ಲಿ ಮಹಿಳೆ –ಡಾ. ಎಚ್.ಎಸ್. ಶ್ರೀಮತಿ 2012 ರೂ. 260

103. ನಾನು ಅವನಲ್ಲ... ಅವಳು...! –ಡಾ. ತಮಿಳ್ ಸೆಲ್ವಿ 2012 ರೂ. 200

104. BUSINESS AND ACCOUNTING DICTIONARY-Nagaraju 2012 Rs.300

105. A Historical Discorse -Dr. H.B. Ramesh 2012 Rs. 200

106. ನಿಮ್ಮನೀಗೆ ಗುಡ್ಡದಯ್ಯ –ಎಂ.ಎನ್. ವೆಂಕಟೇಶ 2012 ರೂ. 150

107. ಸ್ತ್ರೀವಾದ: ತಾತ್ತ್ವಿಕತೆ – ಎಚ್.ಎಸ್. ಶ್ರೀಮತಿ 2012 ರೂ. 350

108. ಸ್ತ್ರೀವಾದ : ಅನ್ವಯಿಕತೆ –ಎಚ್.ಎಸ್. ಶ್ರೀಮತಿ 2012 ರೂ. 300

109. ಕುರ್ಚಿ –ಡಾ. ಆರ್. ಶಿವಪ್ಪ 2012 ರೂ. 50

110. ಪಶು–ಪಕ್ಷಿ ಪ್ರಪಂಚ –ಡಾ. ಕೃಷ್ಣಾನಂದ ಕಾಮತ್ 2012 ರೂ. 125

111. ಕೀಟ ಜಗತ್ತು –ಡಾ. ಕೃಷ್ಣಾನಂದ ಕಾಮತ್ 2012 ರೂ. 125

112. ಕಾವಿ ಕಲೆ –ಡಾ. ಕೃಷ್ಣಾನಂದ ಕಾಮತ್ 2012 ರೂ. 100

113. ಕಾಮತರ ಕುಂಚ ಪ್ರಪಂಚ –ಡಾ. ಕೃಷ್ಣಾನಂದ ಕಾಮರ್ 2012 ರೂ. 220

114. ಕಲ್ಪಶೋಧ –ಡಾ. ಡಿ.ಎನ್. ಯೋಗೀಶ್ವರಪ್ಪ 2012 ರೂ. 400

115. Business education in India ISSUES AND IMPERATIVES
Dr. B. Shekhar 2012 Rs. 500

116. Business education in India DIRECTIONS FOR DEVELOPMENT
Dr. B. Shekhar 2012 Rs. 500

117. MACRO DYNAMICS OF BUSINESS EDUCATION
Dr. B. Shekhar 2012 Rs. 500

118. ಕಟಕಟೆಯಲ್ಲಿ ಮಿಡಿದ ಹೃದಯಗಳು –ಸುಚೇತನಾ ನಾಯ್ಕ 2013 ರೊ. 125

119. MANGALORE MATTERS -Ronald Anil Fernondes 2013 Rs. 150

120. ಪ್ರಹಸನ ಪರಾಮರ್ಶೆ –ಎಸ್.ಎಲ್.ಎನ್. ಸ್ವಾಮಿ		2013	ರೂ. 80
121. ಮ. ರಂಗನಾಥನ್ ಕಥೆಗಳು –ಡಾ. ತಮಿಳ್ ಸೆಲ್ವಿ		2013	ರೂ. 100
122. ಜಂಗಲ್ ತಂತ್ರಂ –ಅನು: ಡಾ. ಎನ್. ದೇವರಾಜ್		2013	ರೂ. 100
123 ಇಂಗ್ಲಿಷ್–ಕನ್ನಡ ಉಭಯಭಾಷಿ – ಕೆ.ಟಿ. ಗಟ್ಟಿ		2013	ರೂ. 200
124. ದಡ್ಡ ಬುರುಡೆ ಪ್ರೇತ ಇತರ ಕತೆಗಳು –ಡಿ.ಎಸ್. ನಾಯ್ಕ		2013	ರೂ. 100
125. ಬದುಕು ಜಟಕಾ ಬಂಡಿ –ಎನ್ ಅರ್ಜುನದೇವ		2013	ರೂ. 40
126. ಹೆಣ್ಣೆಂದರೆ –ಡಾ. ಶಿವರಾಮ ಅಸುಂಡಿ		2013	ರೂ. 100
127. ನಾಟಕ ಸಂಗಮ –ಶಿವಮೂರ್ತಿ ನಂದನ ಹೊಸೂರು		2013	ರೂ. 150
128. ಬೋಧಿಯ ಬೆಳಕಿನಲ್ಲಿ –ಡಾ. ಮಲ್ಲಿಕಾರ್ಜುನ ಅಮ್ಮೆ		2013	ರೂ. 150
129. ಆಧುನಿಕ ಬೆಂಗಳೂರು –ವೇಮಗಲ್ ಸೋಮಶೇಖರ್		2013	ರೂ. 200
130. ಎನ್.ಆರ್. ನಾಯಕ ಬದುಕು ಬರಹ –ಡಾ. ಜ್ಯೋತಿನಾಯಕ		2013	ರೂ. 400
131. ಎಣ್ಯಾಗ ಬತ್ತಿ ಉರಿದ್ಹಾಂಗ –ಡಾ. ಜಿ.ಆರ್. ತಿಪ್ಪೇಸ್ವಾಮಿ		2013	ರೂ. 200
132. ದ್ರಾವಿಡ ನೆಲದ ಜಾನಪದ: ಪರದೇಶೀ ಸಿದ್ಧಾಂತಗಳ ಮಿತಿಗಳು	–ಡಾ. ಎಂ.ಎನ್. ವೆಂಕಟೇಶ	2013	ರೂ. 150
133. ಎಲ್ಲರ ಜಾಗತಿಕರಣ: ನಮ್ಮ ಜಾನಪದ	–ಡಾ. ಎಂ.ಎನ್. ವೆಂಕಟೇಶ	2013	ರೂ. 100
134. ದೇವರು ರುಜು ಮಾಡಿದನು –ಡಾ. ಸತ್ಯನಾರಾಣ ಭಟ್ ಪಿ		2013	ರೂ. 200
135. ಮಾರ್ಗಾದರ್ಶ –ಡಾ. ಹೆಚ್. ನಟರಾಜ್		2014	ರೂ. 200
136. ತೇಜಸ್ವಿಯನ್ನು ಹುಡುಕುತ್ತಾ... ಪರಮೇಶ್ವರ ಕೆ.		2014	ರೂ. 300
137. ಆದಿಮ ಜಾನಪದ –ಡಾ. ಮೊಗಳ್ಳಿ ಗಣೇಶ್		2014	ರೂ. 200
138. ಸೋರೇಬುರುಡೆ –ಡಾ. ಎಂ. ಬೈರೇಗೌಡ		2014	ರೂ. 100
139. ದೇವನಾಂಪ್ರಿಯ ಅಶೋಕ –ಡಾ. ಎಂ. ಬೈರೇಗೌಡ		2014	ರೂ. 150
140. ಸಮಗ್ರ ಹರಿದಾಸ ವಾಙ್ಮಯ ಕೋಶ –ಡಾ. ಶ್ರೀನಿವಾಸ ಹಾವನೂರ		2014	ರೂ. 600
141. ಎಲ್ಲರೂ ಸಹೋದರರೆ ! –ಕನ್ನಂಬಾಡಿ ಶಿವಶಂಕರ		2014	ರೂ. 80
142. ಅಮ್ಮಾ... ಕೊಲ್ಬ್ಯಾಡ!? ಡಾ. ಶಿವರಾಮ ಅಸುಂಡಿ		2014	ರೂ. 100
143. ಕ್ರಾಂತಿಕಾರಿ ಸಮಾಜ ಪರಿವರ್ತಕ ಸಂತ ಗಾಡಗೆ ಮಹಾರಾಜ	ಹಿಂದಿ ಮೂಲ: ಸತನಾಮಸಿಂಹ, ಕನ್ನಡಕ್ಕೆ :ಡಾ. ಸೂರ್ಯಕಾಂತ ಎಸ್. ಸುಜ್ಯಾತ್	2014	ರೂ. 120

144. ಕನ್ನಡ ಚಲನಚಿತ್ರ; ಭಾಷೆ –ಡಾ. ಪ್ರೇಮಪಲ್ಲವಿ ಸಿ.ಬಿ. 2014 ರೂ. 150

145. ಬಿಸಿಲನಾಡಿನ ಮಹಿಳಾ ಕಾವ್ಯ –ಡಾ. ಪ್ರೇಮ ಆರ್.ಜಿ 2014 ರೂ 150

146. On the wings of the peaceful Dragon
-D.G. Mallikarjuna 2015 Rs. 250

147. ಉದರದೊಳು ಹಸಿರುಕ್ಕಿ –ಡಾ. ರಾಜೇಗೌಡ ಹೊಸಹಳ್ಳಿ 2015 ರೂ 300

148. ಅರಣ್ಯದಂಚಿನ ಬದುಕು –ಡಾ. ಯು.ಎಂ. ರವಿ 2015 ರೂ. 250

149. ಅಂತರಾಳ –ರತ್ನ ಕೆ 2015 ರೂ. 100

150. ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡ ಪದಗಳು
ಡಾ. ಕೆ.ವಿ. ನಾರಾಯಣ 2015 ರೂ. 150

151. ಕಳೆಯುವ ಮುನ್ನ –ಶಾಂತರಾಜ್ ಆರ್. 2015 ರೂ. 200

152. ಗುಂಡು–ತುಂಡೇಶ್ವರ ಶತಕಗಳು
–ಕುಡುದರಹಾಳು ಡಾ. ಶಿವಕುಮಾರತಾತ 2015 ರೂ. 90

153. ಈಶ್ವರ ಅಲ್ಲಾ ತೇರೋ ನಾಮ್ –ಡಾ. ಮಹೇಶ್ ಕುಮಾರ್ ಸಿ.ಎಸ್ 2015 ರೂ. 200

154. ಅಮರ ಮಧುರ ಪ್ರೇಮ –ವೇಣುಗೋಪಾಲ್ ಕೆ. 2015 ರೂ. 80

155. ವಿಭೂತಿ ಗುಂಡಪ್ಪನವರ ಸಾಮಾಜಿಕ ಹಗಲು ವೇಷದ ರೂಪಕಗಳು
ಡಾ. ಎನ್.ಡಿ. ತಿಪ್ಪೇಸ್ವಾಮಿ 2015 ರೂ. 125

156. ವಿಭೂತಿ ಗುಂಡಪ್ಪನವರ ಪೌರಾಣಿಕ ಹಗಲು ವೇಷದ ರೂಪಕಗಳು
ಡಾ. ಎನ್.ಡಿ. ತಿಪ್ಪೇಸ್ವಾಮಿ 2015 ರೂ. 125

157. ಕಾನ್ಮನೆಯ ಕತೆಗಳು –ಶಿವಾನಂದ ಕಳವೆ 2015 ರೂ. 150

158. Indian and South East Asian Themes in Traditional Theatre
Ghulam-Sarwar Yousof 2015 Rs. 300

159. ನಾನು ಅಮೇರಿಕೆಗೆ ಹೋಗಿದ್ದೆ –ಡಾ. ಕೃಷ್ಣಾನಂದ ಕಾಮತ 2016 ರೂ. 125

160. ಅಕ್ಕ ಬಿಕ್ಕುತ್ತಾಳೆ –ಎಚ್.ಸಿ. ಭುವನೇಶ್ವರಿ 2016 ರೂ. 80

161. ಎರಡೂವರೆ ಅಕ್ಷರ –ಎಚ್.ಸಿ. ಭುವನೇಶ್ವರಿ 2016 ರೂ. 100

162. ದೆವ್ವ ಬಂತ್ ದೆವ್ವ –ಡಾ. ಶಿವರಾಮ ಅಸುಂಡಿ 2016 ರೂ. 125

163. ಮೌಖಿಕ ಕಥನಗಳ ಮಂಥನ –ಸಂ: ಡಾ. ಎಂ.ಎನ್. ವೆಂಕಟೇಶ 2016 ರೂ. 200

164. ಪ್ರಜಾಬಪ್ರಭುತ್ವದ ಚಿಂತನೆಗಳು –ಡಾ. ಕೆ.ಎಲ್. ನಾಗೇಶ್ 2016 ರೂ. 150

165. ಸಾಹಿತ್ಯ ನಿಧಿ –ರಾಜಕುಮಾರ ಎಸ್ ಮಾಳಗೆ,
ಬಸವರಾಜ ಎಸ್ ಮೋಘ 2016 ರೂ. 125

166. ಉಳಿತಾಯವೇ ಆಡಿಪಾಯ – ಜೆ.ಸಿ. ಜಾಧವ್ 2016 ರೂ. 125

167. ಕ್ಷಾಮ ಡಂಗುರ –ಶಿವಾನಂದ ಕಳವೆ 2016 ರೂ. 125

168. ಬಾ... ಚನ್ನೆ ಧರಿಸು ಬಾರಾ... ಲಕ್ಷ್ಮಣ ಬಾರಿಕೇರ 2016 ರೂ. 60

169. ಕನ್ನಡ ದಲಿತ ಸಾಹಿತ್ಯದ ವಿಭಿನ್ನ ಪ್ರಕಾರಗಳು
ಡಾ. ಜಿ.ಆರ್. ತಿಪ್ಪೇಸ್ವಾಮಿ 2016 ರೂ. 200

170. ಸಂಗೀತ ಸರಸಿ –ಡಾ. ಜ್ಯೋತ್ಸ್ನಾ ಕೃಷ್ಣಾನಂದ ಕಾಮತ
ಡಾ. ಸುಷಮಾ ಅಶೋಕ ಆರೂರ್ 2016 ರೂ. 400



ಸಂಗೀತ ಸರಸಿ

ಸಂಗೀತ ಸರಸಿ ಇದೊಂದು ವಿಶಿಷ್ಟ ಕೃತಿ. ಇತ್ತೀಚೆಗಷ್ಟೇ ನಮ್ಮನ್ನಗಲಿದ ಸಂಗೀತದ ಆರಾಧಕ, ಸಂಗೀತ ವಿಮರ್ಶಕ, ಅದ್ಭುತ ಸಂಘಟಕ ಮರಾಠಿಗರ ನಡುವೆ ನೆಲೆನಿಂತು ಕನ್ನಡದ ಕಂಪನ್ನು ಮಹಾರಾಷ್ಟ್ರದಾದ್ಯಂತ ಪ್ರಸರಿಸಿದ ಪ್ರಕಾಶ್ ಬುರ್ಡೆ ಅವರನ್ನು ಕುರಿತ ಆತ್ಮೀಯ ನುಡಿನಮನ ಈ ಕೃತಿಯಲ್ಲಿದೆ. ಆ ಮೂಲಕ ಪ್ರಕಾಶ್ ಬುರ್ಡೆಯವರಂತಹ ಮಹಾನ್ ಚೇತನದ ಜೀವನ ವಿವರಗಳು ತೆರೆದುಕೊಳ್ಳುತ್ತವೆ.

ಕನ್ನಡ, ಮರಾಠಿ, ಗುಜರಾತಿ, ಬೆಂಗಾಲಿ ಮುಂತಾದ ಭಾರತೀಯ ರಂಗಭೂಮಿ, ರಂಗಗೀತೆಗಳನ್ನು ಕುರಿತ ಬರೆಹದ ಮೂಲಕ ಬುರ್ಡೆ ಅವರ ರಂಗಾನುಭವದ ದರ್ಶನವಾಗುತ್ತದೆ. ಸಂಗೀತ ಸಾಮ್ರಾಜ್ಞಿಯರಾದ ಆಗ್ರೇವಾಲಿ ಜೋಹರಾಬಾಯಿ, ಪುಣೆಯ ಸುಂದ್ರಾಬಾಯಿ ಜಾಧವ, 'ಛಪ್ಪನ್ ಚೂರೀ ಜಾನಕೀಬಾಯಿ', ಜದ್ದನ್ ಬಾಯಿ, ಸುರಶ್ರೀ ದಶಸಹಸ್ರೇಷು, ರಸೂಲನಬಾಯಿ, ಮೊಗೂಬಾಯಿ ಕುರ್ಡಿಕರ, ಸಿದ್ಧೇಶ್ವರೀ ದೇವಿ, ಗೌಹರ ಮಾಮಾಜಿವಾಲಾ, "ಯಾದೇ ಬೇಗಮ್ ಅಖ್ತರಕೀ", ಸರದಾರ್ ಅಖ್ತರ್, ಅಂಜನೀಬಾಯಿ ಮಾಲಪೇಕರ ಕಂಠಶ್ರೀಯ ವಿವಿಧ ಮಜಲುಗಳ ವಿವರಗಳನ್ನು ಕಟ್ಟಿಕೊಟ್ಟಿದ್ದಾರೆ.

ಅಪರೂಪದಲ್ಲಿ ಅಪರೂಪವೆನಿಸುವ ಅನೇಕ ಧ್ವನಿಸುರುಳಿಗಳ ಬಗ್ಗೆ ಬುರ್ಡೆ ಬರೆಹಗಳು ಗಮನ ಸೆಳೆಯುತ್ತವೆ. ಸಂಗೀತ ಹಾಗೂ ಹಲವು ರಾಗಗಳ ಹುಟ್ಟು ಬೆಳವಣಿಗೆ, ಗಾಯಕ–ಗಾಯಕಿಯರ ಕುರಿತ ವಿಭಿನ್ನ ಬರೆಹಗಳು ಈ ಗ್ರಂಥದಲ್ಲಿ ಅಡಕಗೊಂಡಿವೆ. ಆ ಮೂಲಕ ಪ್ರಕಾಶ ಬುರ್ಡೆ ಅವರ ಸಂಗೀತದ ಜ್ಞಾನದ ವಿರಾಟ್ ದರ್ಶನವಾಗುತ್ತದೆ.

ಪ್ರಕಾಶಕ

170

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು

PRAGATI GRAPHICS

ISBN 938144182-0

ರೂ. 400/-